ನೋಂ No. M. 1550.
If not delivered please return to
"KODAGU" OFFICE MERCARA.

# ಕೊಡಗು.

ಸಂಪಾದಕ-ಪಂದ್ಯಂಡ ಐ. ಬೆಳ್ಳಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಮಡಿಕೇರಿ, ೧೯೨೮ನೇ ಇಸವಿ ಅಗೊಸ್ತು ತಾರೀಕು ೩ನೇ ಶುಕ್ರವಾರ [ಸಂಚಿಕೆ ೧೦

## ESTATE REQUISITES

| | | | |
|---|---|---|---|
| 5 lbs Yates hammer headed mamooties | Rs 3 0 0 Each | Feeding forks @ | Rs 1 4 0 Each |
| 4½ " " " " | " 2 14 0 " | Garden trowels " | Rs 1 4 0 " |
| 4 " " " " | " 1 ? 0 " | Block axes " | Rs 1 8 0 " |
| Felling axes at Rs 3 0 0 & | " 3 4 0 " | Bill hooks " | Rs 3 14 0 " |
| Grubbing mattocks at | " 3 4 0 " | Digging forks " | Rs 4 0 0 " |

## MONSOON EQUIPMENT.

| | | | |
|---|---|---|---|
| Planter boots | Rs 16 8 0 | Dales' dubbin per tin | Rs 0 8 0 |
| Marrs' oil (water proof) per tin | Rs 2 0 0 | Umbrellas | Rs 4 8 0 |

52—27

**SPENCER & CO. LTD.** General Merchants **MERCARA.**

# V. SUBRAMANIA IYER

*Manufacturing,*

# JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423,
TRIPLICANE, MADRAS

Catalogue Free
to Boanfide Enquirers

Nose-screws. Claver. Drops. hodu. Brooch

Manufacture of
HIGH CLASS
GEMSET JEWELS
a speciality

The special features
of my productions are —
1 Best QUALITY
2 Latest novel designs
3 Promptest attention
4 Neat & artistic finish
5 Most moderate prices

GOLD
or
SILVERWARE
of all descriptions
neatly executed

52—17



Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, Shooting Requisites, &c.

*CATALOGUE of 1927-28 on application*

**The Bombay Armoury**

*331, Abdul Rehman Street*

*Bombay*

34—23

# ಶೀರ

ಎನ್ ಗ್ಯಮಿ ಕ್ ಸ್ಟರ್

ಹೆಂಗಸರ ಇನ್ನೂ ಹೆಚ್ಚು ಮುಂತಾದ ಸಮಸ್ತವ್ಯಾ ಧಿಗಳ ಮೇಲೆ ಇದನ್ನು ಉಪಯೋಗಿಸುವದರಿಂದ ಮಲ ಶುದ್ಧಿಯಾಗಿ ಬೇಗ ಗುಣವಾಗುವದು. ಬೆಲೆ ೧ ಬಾಟ್ಲಿಗೆ ಆಣೆ ೧೪. ಅಂಚೆ ವೆಚ್ಚ ಬೇರೆ.

ಸಾರ ಸಾ ಪರಿ ಲಾ.

ಕೆಟ್ಟ ರಕ್ತವನ್ನು ಶುದ್ಧಮಾಡುವದಕ್ಕೆ ಇದು ಖಾತ್ರಿಯಾದ ಔಷಧ ಬೆಲೆ ೧ ಬಾಟ್ಲಿಗೆ ರೂ ೧—೦—೦ ಟಪ್ಪಾಲು ವೆಚ್ಚ ಬೇರೆ.

ಶರ್ಮಾ ಬ್ರದರ್ಸ್,
ದುಬಾಶ್ ಲೇನ್,
ಗಿರಗಾಂವ, ಮುಂಬಾಯಿ.

12—6

# ಕೊಡಗು.

ಸ. ೧೯೨೮ ನೇ ಇಸವಿ

ಆಗೊಸ್ತು ತಾ. ೩ ನೇ ಶುಕ್ರವಾರ.


## ಖಾದಿ ಪ್ರಚಾರ.

ಈ ಸಂಚಿಕೆಯ ಇನ್ನೊಂದು ಕಡೆ ಖಾದಿ ನೂಲುವವರ ಸಂಘವು ಖಾದಿ ಬಟ್ಟೆಯನ್ನು ತಯಾರಿಸಿ, ತಯಾರಿಸದೆ ಇರುವ ಸ್ಥಳಗಳಲ್ಲಿ ಖಾದಿಯನ್ನು ಪ್ರಚಾರ ಪಡಿಸಿದ ವಿವರವನ್ನೂ, ಅದರಿಂದ ಉತ್ಪತ್ತಿಯಾದ ಹಣವನ್ನೂ ವಿಶದವಾಗಿ ಪ್ರಕಟಿಸಿದೆ. ಕರ್ನಾಟಕದ ಅನೇಕ ಭಾಗಗಳಲ್ಲಿ ಖಾದಿಯು ಬಿಕ್ರಿಯಾಗಿರುವ ಸ್ಥಳಗಳು ನಮೂದಿಸಲ್ಪಟ್ಟಿದೆ, ಆದರೆ ಕರ್ನಾಟಕದ ಅಂಗವಾದ ಕೊಡಗು ದೇಶದ ಹೆಸರು ಹುಡುಕಿದರೆಲ್ಲಿಯೂ ಕಾಣುವುದೇ ಇಲ್ಲ. ಇಲ್ಲಿ ಹೀಗೆ ಕೊಡಗಿನ ಹೆಸರು ಕಾಣದೆ ಇರಲು ಕೊಡಗಿನಲ್ಲಿ ಅಖಿಲಭಾರತ ನೂಲುವವರ ಸಂಘದ ಶಾಖೆಯು ಇಲ್ಲದಿರುವದೇ ಕಾರಣವಾಗಿದೆ. ಜಮೀನ್ದಾರರ ಸಂಘದ ಅಮ್ಮತ್ತಿ ಮಹಾಸಭೆಯಲ್ಲಿ ನೇಮಿತವಾದ ಉಪಕಮಿಟಿಯವರು ಕಣಿವೆ ಹೋಬಳಿಯ ತೊರೆನೂರು, ಶಿರಂಗಾಲ ಗ್ರಾಮಗಳಲ್ಲಿ ಪುರಾತನ ಕಾಲದಿಂದಲೂ ನಡೆದುಬಂದ ಕೈನೂಲು ಕಸಬಿಗೆ ಪ್ರೋತ್ಸಾಹ ಕೊಡಲು ಅಲ್ಪ ಸ್ವಲ್ಪ ಪ್ರಯತ್ನಿಸಿದರು. ಆ ಉಪಕಮಿಟಿಯವರು ಸ್ವತಃ ಕೈನೂಲು ಕಸಬಿನಲ್ಲಿ ನಿಪುಣರಲ್ಲದ್ದರಿಂದಲೂ, ಹೆಚ್ಚು ಸಮಯ ಈ ಕೆಲಸಕ್ಕೆ ಕೊಡಲು ಅನುಕೂಲವುಳ್ಳವರಲ್ಲದ್ದರಿಂದಲೂ ಈ ಬಾಬಿನಲ್ಲಿ ಆಗಬೇಕಾದಷ್ಟು ಕೆಲಸವಾಗಲಿಲ್ಲ. ತಮ್ಮ ಅಶಕ್ತಿಯನ್ನು ತಿಳಿದೇ ಈ ಉಪಕಮಿಟಿಯವರು ಶ್ರೀಯುತ ದೇಶಪಾಂಡೆ ಗಂಗಾಧರ ರಾಯರಿಗೂ, ಶ್ರೀಯುತ ರಾಜಗೋಪಾಲಾಚಾರ್ಯರಿಗೂ ಆಮಂತ್ರಣಗಳನ್ನು ಮೇಲಿಂದ ಮೇಲೆ ಕೊಟ್ಟರು. ಶ್ರೀ ರಾಜಗೋಪಾಲಾಚಾರ್ಯರು ಬರಲಿಕ್ಕೆ ಸಮಯವಿಲ್ಲವೆಂತ ತಿಳಿಸಿದರು. ಶ್ರೀ ಗಂಗಾಧರ ರಾಯರು ಬರುತ್ತೇನೆಂತ ತಿಳಿಸಿದರೂ ಬರಲಿಲ್ಲ.

ಶ್ರೀ ರಾಜಗೋಪಾಲಾಚಾರ್ಯರು ತಮಿಳು ನಾಡಿನ ಶಾಖೆಯ ಮುಖ್ಯಸ್ಥರಾಗಿದ್ದಾರೆ. ಶ್ರೀ ಗಂಗಾಧರರಾಯರು ಕರ್ನಾಟಕ ಶಾಖೆಯ ಮುಖಂಡರಾಗಿದ್ದಾರೆ. ಇವರಿಬ್ಬರಿಗೂ ಅವರವರ ಸ್ಥಳದಲ್ಲೇ ತುಂಬಾ ಕೆಲಸವಿರುವದರಿಂದ ಅವರನ್ನು ನಿರೀಕ್ಷಿಸಿ ಕೂತರೆ ನಮ್ಮ ದೇಶದಲ್ಲಿ ಖಾದಿ ಕೇಂದ್ರಸ್ಥಾನವು ಶೀಘ್ರದಲ್ಲೇ ಸ್ಥಾಪಿಸಲ್ಪಡಲಾರದು. ಆದ್ದರಿಂದ ಜಮೀನ್‌ದಾರರ ಸಂಘದವರಾಗಲೀ, ಇತರ ಖಾದಿ ಪ್ರೇಮಿಗಳಾಗಲೀ ಸ್ಥಳೀಯ ಯುವಕರನ್ನು ಖಾದಿ ಕೆಲಸದ ಎಲ್ಲಾ ಶಾಖೆಗಳಲ್ಲೂ ತರಬೇತು ಮಾಡಿಸಲು ಕೂಡಲೇ ಏರ್ಪಾಡು ಮಾಡಬೇಕು. ಮಹಾತ್ಮ ಗಾಂಧಿಯವರ ಬಲಗೈಯಾಗಿರುವ ಕೇಲ್ಕರರವರನ್ನು ಮದ್ರಾಸು ಕಾಂಗ್ರೆಸ್ಸಿನ ಸಮಯದಲ್ಲಿ ನಮ್ಮ ದೇಶದ ಒಬ್ಬರಿಬ್ಬರು ಕಂಡಾಗಲೂ ಪರಸ್ಥಳದವರನ್ನು ನಿರೀಕ್ಷಿಸಿ ಕೂರದೆ ಸ್ಥಳೀಯ ಯುವಕರನ್ನೇ ತರಬೇತು ಮಾಡಬೇಕೆಂತ ಹೇಳಿದರು. ಈ ಸಿದ್ಧಾಂತವನ್ನು ಅಂಗೀಕರಿಸಬೇಕಾದ ಆವಶ್ಯಕತೆಯು ಜಮೀನ್‌ದಾರರ ಸಂಘದ ಉಪಕಮಿಟಿಯ ಅನುಭವಕ್ಕೆ ಈಗಾಗಲೇ ಬಂದಿದೆ.

ಖಾದಿ ಹುಟ್ಟುವಳಿಯ ಕೇಂದ್ರಸ್ಥಾನವು ನಮ್ಮ ದೇಶದಲ್ಲಿ ಇಲ್ಲದಿದ್ದರೂ ತಿರುಪ್ಪೂರು ಮುಂತಾದ ಸ್ಥಳಗಳ ಖಾದಿಯು ನಮ್ಮ ದೇಶದಲ್ಲಿ ಸಾಧಾರಣ ತೃಪ್ತಿಕರವಾಗಿಯೇ ಉಪಯೋಗಕ್ಕೆ ಬಂದಿದೆ. ಈ ಖಾದಿ ಪ್ರಚಾರದ ಕೆಲಸದಲ್ಲಿ ವೀರರಾಜಪೇಟೆಯಲ್ಲಿ ಇದ್ದ ಖಾದಿ ಭಂಡಾರವು ಒಹು ಮುಖ್ಯ ಭಾಗವನ್ನು ವಹಿಸಿತ್ತು. ಈಚೆಗೆ ಈ ಭಂಡಾರವು ಮುಚ್ಚುವ ಸ್ಥಿತಿಗೆ ಬಂದಿದೆಯೆಂತ ತಿಳಿಯಲು ತುಂಬಾ ವಿಷಾದಿಸುತ್ತೇವೆ. ರಾಜಕೀಯ ವಿಷಯಗಳಲ್ಲಿ ತುಂಬಾ ಉಪನ್ಯಾಸಗಳನ್ನು ಕೊಡುವದಕ್ಕಿಂತ ಇಂಥಾ ಭಂಡಾರವೊಂದನ್ನು ನಡಿಸುವದು ಮೇಲು ಎಂತ ನಮ್ಮ ಅಭಿಪ್ರಾಯವಾಗಿದೆ. ಈ ಖಾದಿ ಭಂಡಾರವನ್ನು ಸ್ಥಾಪಿಸಿದವರಿಗೂ ಅನಂತರ ನಡಿಸಿದವರಿಗೂ ಸಾಧ್ಯವಿಲ್ಲದಿದ್ದರೂ ಈ ಭಂಡಾರದ ಈಗಿನ ಮಾಲೀಕರು ನಿಜ ಖಾದಿ ಪ್ರೇಮಿಗಳಾದ್ದರಿಂದ ಅವರು ಈ ಕಾರ್ಯವನ್ನು ಅರ್ಧದಲ್ಲಿ ಕೈ ಬಿಡದೆ ಮುಂದರಿಸಬೇಕೆಂತ ಕೇಳಿಕೊಳ್ಳುತ್ತೇವೆ. ಅವರಿಗೆ ಅನಾನುಕೂಲಗಳಿದ್ದರೂ ಇತರ ಯಾರಾದರೂ ವೀರರಾಜಪೇಟೆಯಲ್ಲಿ ಖಾದಿ ಭಂಡಾರವನ್ನು ನಡಿಸಬೇಕೆಂತ ಅಭಿಪ್ರಾಯಪಡುತ್ತೇವೆ.

ವೀರರಾಜಪೇಟೆಯಲ್ಲಿ ಅಲ್ಲದೆ ಪೊನ್ನಂಪೇಟೆಯಲ್ಲಿಯೂ, ಕೊಡ್ಲಿಪೇಟೆಯಲ್ಲಿಯೂ ಖಾದಿ ಭಂಡಾರಗಳಿವೆ. ಮಡಿಕೇರಿಯಲ್ಲಿಯು ಅಲ್ಪಸ್ವಲ್ಪ ಖಾದಿ ಮಾರಾಟವಾಗುತ್ತಲಿದೆ. ಕೊಡಗಿನ ಎಲ್ಲಾ ವ್ಯಾಪಾರ ಸ್ಥಳಗಳಲ್ಲಿಯೂ ಅಪೇಕ್ಷಿಸುವವರಿಗೆ ಖಾದಿ ದೊರಕುವಂತೆ ಮಾಡುವದು ದೇಶ ಹಿತೈಷಿಗಳ ಕರ್ತವ್ಯವಾಗಿದೆ. ಖಾದಿಯನ್ನು ಒದಗಿಸಿಕೊಟ್ಟರೆ ಉಪಯೋಗಿಸುವರು ತುಂಬಾ ಜನರಿದ್ದಾರೆ. ಹೀಗಿರುವಾಗ ತಾವಾಗಿಯೇ ಖಾದಿಯನ್ನು ಹಾರೈಸಿಕೊಂಡು ಬರುವವರಿಗೆ ಖಾದಿಯನ್ನು ಒದಗಿಸಿಕೊಡದಿದ್ದರೆ ದೇಶಸೇವಕರ ಮೇಲೆ ದೊಡ್ಡ ತಪ್ಪಾಗುತ್ತದೆ.

ಸ್ವತಂತ್ರವನ್ನು ಹಾರೈಸುವುದಾದರೆ, ನಮ್ಮ ದೇಶೀಯರು ತಮಗೆ ಆವಶ್ಯಕವಾದ ಪದಾರ್ಥಗಳನ್ನು ನಮ್ಮ ದೇಶದಲ್ಲಿ ಸಂಗ್ರಹಿಸಿಕೊಂಡು ಇತರರ ಮೇಲೆ ಭರವಸೆ ಇಡದೆ ಇರಬೇಕು. ಎಲ್ಲದಕ್ಕಿಂತಲೂ, ಅವಶ್ಯವಾದ ಉಡುವ ಬಟ್ಟೆಗಳು ನಮ್ಮ ದೇಶದಲ್ಲಿಯೇ ತಯಾರಾಗುವಾಗ ಅವುಗಳನ್ನು ಉಪಯೋಗಿಸ ಹೋದರೆ ಇತರರ ಪ್ರಯಾಸದಿಂದ ಸ್ವಾತಂತ್ರ್ಯವು ಲಭಿಸಿದರೂ, ಅದನ್ನು ಅನುಭವಿಸುವುದು ಅದಕ್ಕಾಗಿ ಹೋರಾಡದ ಮತ್ತು ಪ್ರೋತ್ಸಾಹ ಕೊಡದ ಜನರಿಗೆ ಲಜ್ಜಾಸ್ಪದವು. ನೆರೆಯಾರಾದ ಮೈಸೂರು ದೇಶವೂ ಕೂಡ ಎಷ್ಟೋ ಉತ್ತೇಜನವನ್ನು ಈ ಖಾದಿ ಬಟ್ಟೆಗೆ ಕೊಡುತ್ತಿರುವಾಗ ನಮ್ಮ ದೇಶವು ಸ್ವದೇಶ ಪ್ರೀತಿಯಿಂದ ಖಾದಿ ಬಟ್ಟೆಯನ್ನು ಧರಿಸಿ, ಬಡರಾದವರು ಶ್ರಮೆಯಿಂದಲೂ, ದೇಶಾಭಿಮಾನದಿಂದಲೂ ಮಾಡುತ್ತಿರುವ ಕೆಲಸಕ್ಕೆ ಸಹಾಯವನ್ನು ಮಾಡಬೇಕಾದದು, ಪ್ರತಿಯೊಬ್ಬ ದೇಶೀಯನ ಕರ್ತವ್ಯವೇ ಆಗಿದೆ.

---

## ವಿಷಾದ.

ಕಳೆದ ವಾರ ಸಂಚಿಕೆಯಲ್ಲಿ ಕೊಡಗು ಭಾಷೆಯ ಒಂದು ಬಾತ್ಮಿಯು ಪ್ರಕಟವಾದದ್ದರಲ್ಲಿ ಕೆಲವು ಕೋಮಿನವರಿಗೆ ನೋವಾಗುವಂಥ 'ರವಣೆ'ಗಳಿವೆ. ಒಂದು ಕೋಮಿನವರು ತಮ್ಮ ಮೇಲ್ಮೆಗಾಗಿ ಕೆಲವು ಸುಧಾರಣೆಗಳನ್ನು ಮಾಡಿಕೊಳ್ಳಬೇಕೆಂಬ ಬಾತ್ಮಿಯ ಉದ್ದೇಶವಾದ್ದರಿಂದ ಆ ಉದ್ದೇಶದ ಮೇಲೆ ಮಾತ್ರ ದೃಷ್ಟಿಯಿಟ್ಟು ಬಾತ್ಮಿಯು ಪ್ರಕಟಿಸಲ್ಪಟ್ಟಿತು. ಅದರಲ್ಲಿ ಕೆಲವು ಕೋಮಿನವರಿಗೆ ನೋವಾಗುವ ಮಾತುಗಳು ಇದ್ದದ್ದು ನಮ್ಮ ಗೋಚರಕ್ಕೆ ಬರದೆ ಹೋಯಿತು. ಹೀಗೆ ನೋವನ್ನುಂಟುಮಾಡಬಹುದಾದ ಮಾತುಗಳು ಪ್ರಕಟವಾದದ್ದಕ್ಕೆ ನಾವು ಮನಃಪೂರ್ವಕವಾಗಿ ವಿಷಾದಿಸುತ್ತೇವೆ.

---

## ಹಿಂದೀ ಭಾಷೆ.

(ಹಿಂದೀಭಾಷಾ ಪ್ರಚಾರಕ ಸಂಘದ ಸೆಕ್ರೆಟರಿಯವರು ಕಳುಹಿಸಿದ ಲೇಖನದ ಸಾರಾಂಶ.)

ಹಿಂದೀಭಾಷೆಯನ್ನು ಇನ್ನು ಮುಂದೆ ಅಖಿಲ ಭಾರತ ಮಾತೃಭಾಷೆಯನ್ನಾಗಿ ಸ್ಥಾಪಿಸಲೋಸುಗ ಬಹಳ ಪ್ರಯತ್ನಗಳು ನಡೆಯುತ್ತಿವೆ. ಈ ಪ್ರಯತ್ನದಲ್ಲೇ ಮಗ್ನವಾಗಿರುವ ಹಿಂದೀ ಪ್ರಚಾರಕ ಸಮಾಜವು ಅನೇಕ ಪ್ರಾಂತ್ಯಗಳಲ್ಲಿ ಹಿಂದೀಭಾಷೆಯನ್ನು ಪ್ರಚಾರಪಡಿಸಿ ತನ್ನ ದೃಷ್ಟಿಯನ್ನು ದಕ್ಷಿಣ ಹಿಂದೂಸ್ಥಾನದ ಕಡೆಗೆ ತಿರುಗಿಸಿದೆ.

ಆದರೆ ದಕ್ಷಿಣ ಹಿಂದೂಸ್ಥಾನದಲ್ಲಿ ಹಿಂದೀಭಾಷೆಯನ್ನು ಪ್ರಚುರಪಡಿಸಲು ಅನೇಕ ಎಡರುಗಳಿದ್ದರೂ, ಪರಭಾಷೆಯೆಂದೂ, ಕಲಿಯಲು ಬಹಳ ಕಠಿಣವೆಂದೂ ಭಾವಿಸಿರುವ ತಪ್ಪಭಿಪ್ರಾಯವೇ ಬಹಳ ಮೇಲಾಗಿದೆ. ಅಲ್ಲದೆ ಎಲ್ಲಾ ಹೊಸ ಚಳವಳಿಗಳನ್ನೂ ಸಂದೇಹಪೂರ್ವಕ ದೃಷ್ಟಿಯಿಂದ ನೋಡುವ ದಕ್ಷಿಣ ಹಿಂದೂಸ್ಥಾನದಲ್ಲಿ ಈ ಹಿಂದೀಭಾಷಾ ಪ್ರಚಾರಕ್ಕೆ ಅದೇಗತಿ. ಪರೀಕ್ಷಿಸಿದರೆ ನಿಜವಾಗಿಯೂ ಇದು ಪರಭಾಷೆಯೂ ಅಲ್ಲ ಕಲಿಯಲು ಕಠಿಣವೂ ಅಲ್ಲ. ಈ ಭಾಷೆಯಲ್ಲಿ ಅನೇಕ ಸಂಸ್ಕೃತ ಶಬ್ದಗಳು ಮಿಶ್ರವಾಗಿ, ವ್ಯಾಕರಣವೂ ಕೂಡ ಈಗ ಮಾತನಾಡುತ್ತಿರುವ ಭಾಷೆಗಳಿಗನುಸಾರವಾಗಿಯೇ ಇದೆ

ದಕ್ಷಿಣ ಹಿಂದೂಸ್ಥಾನದಿಂದ ಉತ್ತರಕ್ಕೆ ವ್ಯಾಪಾರಕೋಸ್ಕರ ಹೋಗುವವರು, ಬಹಳ ಶೀಘ್ರದಲ್ಲಿಯೇ ಮುಖ್ಯವಾಗಿ ತಮಗೆ ಬೇಕಾದ ಹಿಂದೀ ಶಬ್ದಗಳನ್ನು ಸುಲಭದಲ್ಲಿಯೇ ಕಲಿತುಕೊಳ್ಳುವುದು ಸಾಮಾನ್ಯವಾಗಿದೆ.

ಆದಕಾರಣ ಓದು ಬರಹ ಗೊತ್ತಿರುವ ದಕ್ಷಿಣ ದೇಶದ ಯಾವನಿಗೇ ಆಗಲಿ ಹಿಂದೀಭಾಷೆಯನ್ನು ಕಲಿಯಲು ಬರೇ ಮೂರು ತಿಂಗಳು ಸಾಕು. ಈ ಸಮಯದಲ್ಲಿ ದಿವಸಕ್ಕೆ 1 ಗಂಟೆ ಹಿಂದೀಭಾಷೆಯನ್ನು ಸರಿಸಿದರೆ, 3 ತಿಂಗಳಲ್ಲಿ ಓದಲು ಬರೆಯಲು ಚೆನ್ನಾಗಿ ಗೊತ್ತಾಗುವುದು.

ಶೀಘ್ರದಲ್ಲಿಯೇ ಹಿಂದೀಯನ್ನು ಕಲಿಯಲು ಹಿಂದೀ ಪ್ರಚಾರ ಸಭೆಯ ಮದ್ರಾಸಿನ ಶಾಖೆಯು ಹಿಂದೀಭಾಷಾ ಪ್ರೇಮಿಗಳ ಅನುಕೂಲಕ್ಕಾಗಿ, ತಾವಾಗಿಯೇ ಕಲಿಯಲು ಸುಲಭವಾದ ಚಿಕ್ಕ ಪುಟ್ಟ ಪುಸ್ತಕಗಳನ್ನು ಶಾಸ್ತ್ರೀಯ ರೀತಿಯಲ್ಲಿ ಮುದ್ರಿಸಿ ಪ್ರಕಟಿಸಿರುವರು. ಇಂಥಾ ಪುಸ್ತಕಗಳಲ್ಲಿ ದಕ್ಷಿಣ ಹಿಂದೂಸ್ಥಾನದ ವಾಡಿಕೆಯಾದ ಭಾಷೆಗಳ ಮೂಲಕ ಹಿಂದೀಭಾಷೆಯನ್ನು ಪರಿಸುವ ಸೌಕರ್ಯ ದೊರೆಯುವುದರಿಂದ ತಂತಮ್ಮ ಸ್ವಭಾಷೆಗಳ ಮೂಲಕ, ಜಾಗ್ರತೆಯಾಗಿ ಆ ಭಾಷೆಯು ಮನದಟ್ಟಾಗುವುದು. ಈ ಸೂತ್ರವನ್ನು ತಿಳಿದುಕೊಂಡಿರುವ ಹಿಂದೀಭಾಷಾ ಪ್ರಚಾರಕರು ಈ ಪುಸ್ತಕಗಳನ್ನು ಬಹಳ ಕಮ್ಮಿ ಬೆಲೆಯಿಂದ ವಿಕ್ರಯಿಸುತ್ತಿರುವರು. 3 ತಿಂಗಳೊಳಗೆ ಹಿಂದೀಭಾಷೆಯನ್ನು ಕಲಿಯಲು ಪುಸ್ತಕಗಳನ್ನು 5 ವಿಭಾಗಗಳಾಗಿ ಮಾಡಿರುವರು. ಈ 5 ಪುಸ್ತಕಗಳ ಒಟ್ಟಿಗೆ ರೂ. 1—11—6 ಆಗುವುದು. ಈ ಬೆಲೆಗೆ ಅಂಚೆ ವೆಚ್ಚ ಸೇರಿ ರೂ. 2—1—0 ಆಗುವುದೆಂದು ಮೊದಲಾಗಿ ಮದ್ರಾಸ ಹಿಂದೀ ಪ್ರಚಾರಕ ಸಂಘದ ಕಾರ್ಯದರ್ಶಿಗಳೇ ತಿಳಿಸುತ್ತಾರೆ.

---

## ಗ್ರಾಮಗಳ ಪುನರುದ್ಧಾರ.

(ಬರೆದು ಬಂದದ್ದು.)

(ಕಳೆದ ವಾರದಿಂದ ಮುಂದುವರಿದದ್ದು.)

ಈ ವಿಷಯಗಳೆಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು ಗ್ರಾಮಸ್ಥಿತಿಯನ್ನವಲೋಕಿಸಿದರೆ, ಹಿಂದೂಸ್ಥಾನದಲ್ಲಿ ಅನಾದಿಕಾಲದಿಂದಲೂ ಕೃಷಿಯೇ ಮುಖ್ಯವಾಗಿದ್ದರೂ, ದೇಶದಲ್ಲಿ ಅದಕ್ಕೆ ತಕ್ಕ ಸೌಕರ್ಯಗಳು ವಿಶೇಷವಾಗಿರುವುದಾದರೂ ರೈತರ ದುರವಸ್ಥೆಯನ್ನು ನೋಡಿದರೆ ಅವರು ಇರತಕ್ಕ ಅನುಕೂಲತೆಗಳನ್ನು ದುರುಪಯೋಗಪಡಿಸುತ್ತಿರುವಂತೆಯೇ ಬೋಧೆಯಾಗುತ್ತದೆ. ಆದರೆ ಬಾಹ್ಯವು ಪ್ರಥಮದಲ್ಲಿ ಹೀಗೆ ಕಂಡುಬಂದರೂ, ಪರಾಂಬರಿಸಿ ನೋಡಿದಲ್ಲಿ ನಮ್ಮ ರೈತ ಸಹೋದರರಿಗೆ ವಿದ್ಯೆ ಇಲ್ಲದಿರುವುದೇ ಇವರ ಎಲ್ಲಾ ಆಪತ್ತುಗಳಿಗೆ ಮೂಲ ಕಾರಣವೆಂಬುದು ವಿದಿತವಾಗುವುದು.

ಪರದೇಶಿಯರು ಹಿಂದೂಸ್ಥಾನಕ್ಕೆ ಬಂದು ನೆಲೆಗೊಂಡಿರುವುದರಿಂದ ಬೆಟ್ಟ ಗುಡ್ಡಗಳಿದ್ದ ಕಡೆಯೆಲ್ಲಾ ನಗರಗಳಾಗುತ್ತಿರುವುದು ತಿಳಿಯದ ಸಂಗತಿಯಲ್ಲ. ಪರದೇಶ ನಿವಾಸಿಗಳು ಇಲ್ಲಿಯೇ ನೆಲೆಗೊಂಡಿರುವ ಕಾರಣ ಪೂರ್ವ ಕಾಲದಿಂದಲೂ ಕೃಷೀವಲರಾಗಿದ್ದವರೇ ಇಂದೂ ಆ ನಗರ ನಿವಾಸಿಗಳಿಗೆ ಧಾನ್ಯವನ್ನು, ಹಸೀಪದಾರ್ಥಗಳನ್ನೂ ಒದಗಿಸಿಕೊಡುತ್ತಿರುವರು. ಪಟ್ಟಣದಲ್ಲಿ ಎಷ್ಟೇ ಜನರು ಬಂದು ನೆಲಗೊಳ್ಳಲಿ, ಅವರಿಗೆಲ್ಲಾ ಗ್ರಾಮದ ರೈತನು ಪೂರ್ವಿಕರು ಸಜ್ಜು ಮಾಡಿದ್ದ ಜಮೀನನ್ನು ಪ್ರಾಚೀನ ಕ್ರಮದಿಂದಲೇ ಈಗಲೂ ಉತ್ತು, ಬಿತ್ತಿ ಸರಬರಾಯಿ ಮಾಡಬೇಕಾಗಿರುವದರಿಂದ, ಉತ್ಪತ್ತಿಯು ದಿನೇ ದಿನೇ ಕಡಿಮೆಯಾಗುತ್ತ ಬರುತ್ತಿದೆ. ಎಷ್ಟೇ ಲಾಭ ಬರುವ ಹಾಗಿದ್ದರೂ ರೈತನಿಗೆ ಜಮೀನನ್ನು ನವೀನ ಶಾಸ್ತ್ರರೀತಿಯಾದ ಉಳುಮೆ ಮಾಡಿ, ಮಿತವಾಗಿ ಗೊಬ್ಬರವನ್ನು ಹಾಕಿ ಹೆಚ್ಚಾದ ಬೆಳೆಯನ್ನು ಪಡೆಯುವ ಗೋಷ್ಠಿಯೇ ಇಲ್ಲ.

ಸಾಲದುದಕ್ಕೆ ಅನೇಕ ವಿಧವಾದ ಹೊಸತೆರಿಗೆಗಳೂ ರೈತನನ್ನು ಪೀಡಿಸುತ್ತವೆ. ಇದೆಲ್ಲವನ್ನು ಕಳೆದ ಮೇಲೆ ನವನಾಗರಿಕತೆಗೆ ಯೋಗ್ಯವಾದ ಉಡುಪುಗಳಿಗೆಲ್ಲಾ ರೈತನು ಮೊದಲಿಗಿಂತ ಹೆಚ್ಚಾಗಿಯೇ ವ್ಯಯಮಾಡಬೇಕಾಗಿರುವ ಕಾರಣ ಬರುವ ಅಲ್ಪ ಉತ್ಪತ್ತಿಯಿಂದ ಈ ಮೇಲಿನ ಖರ್ಚೆಲ್ಲವನ್ನೂ ಕಳೆದು ವಿದ್ಯಾವಂತನಾಗಲು ಹಣವನ್ನೆಲ್ಲಿಂದ ತಂದಾನು? ಆದ್ದರಿಂದ ಈಗಿನ ರೈತನು ಪೂರ್ವದಲ್ಲಿದ್ದಂತೆಯೇ, ವಿದ್ಯಾವಿಹೀನನಾಗಿ ಪ್ರಾಚೀನ ಪದ್ಧತಿಗಳನ್ನೇ ವ್ಯವಸಾಯದಲ್ಲಿ ಅನುಸರಿಸಿಕೊಂಡು ಗ್ರಾಮದಲ್ಲಿಯೇ ಮೌಢ್ಯದಿಂದ ತನ್ನ ಜೀವಮಾನವನ್ನು ಕಳೆಯುತ್ತಾನೆ. ಇದೇ ಗ್ರಾಮದ ಹೀನಸ್ಥಿತಿಗೆ ಎರಡನೇ ಕಾರಣ.

ಮೂರನೆ ಕಾರಣವಾವುದೆಂದರೆ, ಭೂವ್ಯವಸಾಯವು ಗ್ರಾಮನಿವಾಸಿಗೆ ಎಷ್ಟು ಅವಶ್ಯಕವೋ ಅಷ್ಟೇ ಪಟ್ಟಣವಾಸಿಗೂ ಮತ್ತು ಇತರ ಜನರಿಗೂ, ಅವಶ್ಯವಾಗಿಯೂ, ಅನುಕೂಲವಾಗಿಯೂ ಇರುವುದು. ಹೀಗಿದ್ದರೂ, ಗ್ರಾಮದಲ್ಲಿಯೇ ಇದ್ದು ವಿದ್ಯೆಯನ್ನು ಕಲಿತು, ಜೀವಿಸಿ, ಅನಂತರ ಪಟ್ಟಣವಾಸಿಗಳಾದ ಮಾನವರು ಅದನ್ನು ಉಪೇಕ್ಷಿಸುವರು; ಅಷ್ಟೇ ಅಲ್ಲ ಅದನ್ನು ಎಡೆಬಿಡದೆ ಅವಲಂಬಿಸುತ್ತಿರುವ ರೈತನನ್ನೂ ತುಚ್ಛೀಕರಿಸುವರು ಈ ರೀತಿ ವಿದ್ಯಾಸ್ಪೃಶ್ಯವನ್ನು ಹೊಂದಿ ಗ್ರಾಮದಲ್ಲಿಯ ರೈತನಿಗೆ ಋಣಿಗಳಾಗಿರುವ ಮನುಷ್ಯರು ರೈತನ ಗ್ರಾಮವಾಸವನ್ನೂ, ಅವನ ಸರಳಜೀವನವನ್ನೂ ಹೀಯಾಳಿಸಿದರೆ ಗ್ರಾಮಗಳು ಹೀನಾವಸ್ಥೆಯನ್ನು ಹೊಂದುವುದರಲ್ಲಿ ಸಂದೇಹವೇನು ?

### ಗ್ರಾಮಗಳ ಪುನರುದ್ಧಾರ ಸಾಧನಗಳು.

ಗ್ರಾಮದ ದುಸ್ಥಿತಿಗೆ ಇನ್ನೂ ಅನೇಕ ಕಾರಣಗಳಿವೆ. ಆದರೆ ಮೇಲೆ ಹೇಳಿದ ಮುಖ್ಯಕಾರಣಗಳಿಂದಲೇ ಗ್ರಾಮದ ಸ್ಥಿತಿಯು ಬಹಳ ದುರ್ದೆಶೆಗೆ ಬಂದಿರುವ ಸಂಗತಿಯು ಎಲ್ಲರನ್ನೂ ವಿಸ್ಮಯಗೊಳಿಸಿ ಅಲ್ಲಲ್ಲಿ ದೇಶಹಿತೈಷಿಗಳೂ ಗ್ರಾಮ ಪ್ರಮುಖರೂ, ಪಟ್ಟಣವಾಸಿಗಳ ಮುಂದಾಳುಗಳೂ ಅವರ ಭಾಷಣಗಳಲ್ಲಿಯೂ, ಉದ್ಗಾರಗಳಲ್ಲಿಯೂ, ಹಿಂದೂಸ್ಥಾನದ ಆರ್ಥಿಕ ಸಂಪತ್ತಿಗೆ ಗ್ರಾಮೋದ್ಧಾರ (Village Reconstruction, Rural Re-organisation) ವೇ ಪ್ರಥಮ ಸೋಪಾನವೆಂದು ಪದೇ ಪದೇ ಹೇಳುತ್ತಿರುವುದನ್ನು ಕೇಳುತ್ತಿರುವುದರಿಂದ, ಈಗಾಗಲೇ ಗ್ರಾಮನಿವಾಸಿಗಳ ದುರ್ದೆಶೆಯು, ಪಟ್ಟಣಿಗರ ಮತ್ತು ದೇಶಕಾರ್ಯ ಧುರೀಣರ ಮನಸ್ಸಿಗೆ ಗೋಚರವಾಗಿದೆಯೆಂದು ವೇದ್ಯವಾಗುತ್ತದೆ. ಆದುದರಿಂದ ಗ್ರಾಮವನ್ನು ಉಳಿಸಲು ಯಾವ ಯಾವ ಸಾಧನಗಳು ಅತ್ಯಾವಶ್ಯಕವಾದುವುಗಳೆಂದೂ, ಕಾರ್ಯತಃ ಪ್ರಯೋಜನಕಾರಿಗಳಾಗಿ ಫಲಪ್ರದಾಯಕಗಳಾಗುವುವೆಂದೂ ವಿಚಾರಮಾಡುವುದು ನಮ್ಮ ಕರ್ತವ್ಯವಾಗಿದೆ. ಸಶೇಷ.

## ಮಹಾತ್ಮಗಾಂಧಿಯವರ ಸ್ವಚರಿತ್ರೆ

### ೪ ನೇ ಭಾಗದಲ್ಲಿ ೪೭ನೇ ಪ್ರಕರಣ

### ಕಕ್ಷಿಗಾರನನ್ನು ರಕ್ಷಿಸಿದುದು

ಇದು ವರೆಗೆ ವಾಚಕರಿಗೆ ಪಾರ್ಸೀ ರುಸ್ತುಂಜಿಯವರ ಹೆಸರಿನ ಪರಿಚಯವು ಚೆನ್ನಾಗಿ ಉಂಟಾಗಿರುತ್ತದೆ. ಒಮ್ಮೆಯೇ ನನ್ನ ಸಹಯೋಗಿಗಳೂ ಕಕ್ಷಿಗಾರರೂ ಆದವರು. ಅಥವಾ ಅವರು ಮೊದಲು ನನ್ನ ಸಹಯೋಗಿಗಳಾಗಿ ಆ ಮೇಲೆ ಕಕ್ಷಿಗಾರರಾದರೆಂದು ಹೇಳಿದರೆ ಹೆಚ್ಚು ಸತ್ಯವಾದೀತು. ಅವರ ವಿಶ್ವಾಸವನ್ನು ನಾನು ಎಷ್ಟು ಮಟ್ಟಿಗೆ ಸಂಪಾದಿಸಿದ್ದೆನೆಂದರೆ ಅವರು ತಮ್ಮ ಸ್ವಂತ ಕುಟುಂಬದ ವಿಷಯಗಳಲ್ಲಿಯೂ ನನ್ನ ಸಲಹೆಯನ್ನು ಕೇಳಿ ಅನುಸರಿಸುತ್ತಿದ್ದರು. ಅವರು ಕಾಯಿಲೆ ಬಿದ್ದಾಗ ಕೂಡ ನನ್ನ ಸಹಾಯವನ್ನು ಬೇಡಿ ನಮ್ಮಿಬ್ಬರ ಜೀವನದ ರೀತಿಗೆ ಹೆಚ್ಚು ಅಂತರವಿದ್ದರೂ ಅವರ ನನ್ನ ಕುಂಟು ವೈದ್ಯದ ಚಿಕಿತ್ಸೆಯನ್ನು ಸ್ವೀಕರಿಸಲು ಹಿಂತೆಗೆಯುತ್ತಿರಲಿಲ್ಲ.

ಒಂದು ಸಲ ಈ ಮಿತ್ರರು ದೊಡ್ಡ ಆಪತ್ತಿಗೆ ಸಿಕ್ಕಿದರು. ಅವರು ತಮ್ಮ ವ್ಯವಹಾರಗಳಲ್ಲಿ ಹೆಚ್ಚು ಕಡಿಮೆ ಎಲ್ಲವನ್ನೂ ನನಗೆ ತಿಳಿಸುತ್ತಿದ್ದರಾದರೂ ಒಂದು ವಿಷಯವನ್ನು ಮಾತ್ರ ಉದ್ದೇಶಪೂರ್ವಕವಾಗಿ ನನ್ನಿಂದ ಮುಚ್ಚಿಟ್ಟಿದ್ದರು. ಅವರು ಮುಂಬಯಿಯಿಂದಲೂ ಕಲಕತ್ತೆಯಿಂದಲೂ ಬಹು ಬೆಲೆ ಬಾಳುವ ವ್ಯಾಪಾರದ ಸರಕುಗಳನ್ನು ತರಿಸುತ್ತಿದ್ದರು. ಹೀಗೆ ಮಾಡುವಾಗ ಎಷ್ಟೋ ಬಾರಿ ಸುಂಕವನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಕಳ್ಳತನದಿಂದ ಸರಕನ್ನು ಒಯ್ಯುತ್ತಿದ್ದರು. ಆದರೆ ಅವರಿಗೂ ಸುಂಕದ ಅಧಿಕಾರಿಗಳಿಗೂ ಸ್ನೇಹವಿದ್ದುದರಿಂದ ಯಾರೂ ಅವರ ಮೇಲೆ ಸಂಶಯಪಡುತ್ತಿರಲಿಲ್ಲ. ಅಧಿಕಾರಿಗಳು ರುಸ್ತುಂಜಿಯವರ ಪಟ್ಟಿಯನ್ನೇ ನಂಬಿ ಸುಂಕವನ್ನು ಲೆಕ್ಕ ಹಾಕುತ್ತಿದ್ದರು. ಇನಿವಲ್ಲ ಕೆಲವರು ಈ ಒಳಸಂಚಿಗೆ ಸೇರಿದ್ದರೂ ಸೇರಿದ್ದಿರಬಹುದು.

ಆದರೆ ಗುಜರಾತೀ ಕವಿಯಾದ ಅಖಾನು ಹೇಳಿರುವಂತೆ ಪಾದರಸವನ್ನು ನುಂಗುವುದೂ ಕದ್ದ ಹಣವನ್ನು ದಕ್ಕಿಸಿಕೊಳ್ಳುವುದೂ ಒಂದೇ—ಎರಡೂ ಹೊರಗೆ ಬಿದ್ದೇ ಬೀಳುತ್ತದೆ. ಪಾರ್ಸೀ ರುಸ್ತುಂಜಿಯವರ ಕಳ್ಳತನವು ಈ ಗಾದೆಯ ನಿಯಮವನ್ನು ಮೀರಲಿಲ್ಲ. ಅದು ಬಯಲಾಯಿತು. ಅವರು ನನ್ನ ಬಳಿಗೆ ಓಡಿ ಬಂದರು. ಅವರ ಕಣ್ಣುಗಳಿಂದ ನೀರು ಸುರಿಯುತ್ತಿದ್ದಿತು. 'ಬಾಯಿ (ಅಣ್ಣಾ) ನಾನು ನಿಮಗೆ ಮೋಸಪಡಿಸಿದ್ದೇನೆ. ನನ್ನ ತಪ್ಪು ಇಂದು ಬಯಲಾಗಿದೆ. ನಾನು ಸುಂಕ ಕೊಡದೆ ಕಳ್ಳತನದಿಂದ ಸರಕನ್ನು ಒಯ್ದಿದ್ದೇನೆ. ನನಗೆ ದಂಡನೆಯಾಗುವುದು ಖಂಡಿತ. ನಾನು ಸೆರೆಮನೆಗೆ ಹೋಗಬೇಕು. ಸರ್ವನಾಶವಾಗುತ್ತದೆ. ಈ ಸಂಕಟದಿಂದ ನನ್ನನ್ನು ಪಾರು ಮಾಡಲು ನಿಮ್ಮೊಬ್ಬರಿಗೇ ಸಾಧ್ಯ. ನಿಮ್ಮಿಂದ ಇನ್ನೇನನ್ನೂ ನಾನು ಮರೆ ಮಾಚಿಲ್ಲ. ವ್ಯಾಪಾರಕ್ಕೆ ಸಂಬಂಧಪಟ್ಟ ಇಂತಹ ವಿಷಯಗಳನ್ನು ನಿಮಗೆ ಹೇಳಬೇಕಾದ ಅವಶ್ಯಕತೆಯಿಲ್ಲವೆಂದು ನಾನು ಈ ವಿಚಾರವಾಗಿ ನಿಮಗೆ ಏನನ್ನೂ ಹೇಳಿರಲಿಲ್ಲ. ಆದರೆ ಈಗ ನನ್ನ ಪಶ್ಚಾತ್ತಾಪವು ಎಷ್ಟೆಂದು ಕೇಳಿ!' ' ಎಂದು ಹೇಳಿದರವರು.

ನಾನು ಅವರನ್ನು ಸಮಾಧಾನ ಪಡಿಸಿ "ನಿಮ್ಮನ್ನು ರಕ್ಷಿಸುವುದೂ ಬಿಡುವುದೂ ದೇವರ ಕೈಯಲ್ಲಿದೆ. ನನ್ನ ರೀತಿಯಂತೂ ನಿಮಗೆ ಗೊತ್ತೇ ಇದೆ. ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವುದರ ಮೂಲಕ ಮಾತ್ರ ನಾನು ನಿಮ್ಮನ್ನು ರಕ್ಷಿಸಲು ಪ್ರಯತ್ನ ಪಡಬಲ್ಲೆನು" ಎಂದೆನು.

ಇದನ್ನು ಕೇಳಿ, ಪಾಪ, ಪಾರ್ಸಿಯವರ ಪ್ರಾಣವೇ ಹಾರಿ ಹೋದಂತಾಯಿತು.

"ನಾನು ನಿಮ್ಮೆದುರಿಗೆ ಒಪ್ಪಿಕೊಂಡಿರುವುದೇ ಸಾಲದೇ?" ಎಂದು ಅವರು ಕೇಳಿದರು.

ನಾನು ಮೆಲ್ಲಗೆ 'ನೀವು ಹಾನಿ ಮಾಡಿರುವುದು ನನಗಲ್ಲ ಸರಕಾರಕ್ಕೆ. ನನ್ನ ಮುಂದೆ ಒಪ್ಪಿಕೊಂಡುದರಿಂದ ನಿಮಗೇನು ಲಾಭ?" ಎಂದೆನು.

"ಕಡೆಗೆ ನಾನು ಮಾಡುವುದೇನೋ ನೀವು ಹೇಳಿದ ಹಾಗೇ ಸರಿ. ಆದರೆ ನೀವು ನನ್ನ ಹಳೆಯ ವಕೀಲರಾದ ಮ.....ರ ಸಲಹೆಯನ್ನು ಕೇಳುವುದಿಲ್ಲವೇ? ಅವರೂ ನನ್ನ ಮಿತ್ರರೇ," ಎಂದು ಪಾರ್ಸೀ ರುಸ್ತುಂಜಿಯವರು ಹೇಳಿದರು.

ವಿಚಾರ ಮಾಡಿ ನೋಡಲು ಈ ಸುಂಕದ ಮೋಸವು ಬಹುದಿನದಿಂದ ನಡೆಯುತ್ತಿದ್ದುದಾಗಿ ತಿಳಿದುಬಂದಿತು. ಈಗ ಕಂಡು ಹಿಡಿದಿದ್ದ ಮೋಸವು ಬಹು ಸ್ವಲ್ಪ ಮೊಕ್ಕದ್ದಮೆಯಾಗಿದ್ದಿತು. ನಾವು ಅವರ ವಕೀಲರ ಬಳಿಗೆ ಹೋದೆವು. ಅವರು ಇದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಓದಿಕೊಂಡು "ಈ ಮೊಕದ್ದಮೆಯನ್ನು ನ್ಯಾಯಾಧೀಶರೊಡನೆ ಪಂಚಾಯಿತರೂ ತೀರ್ಮಾನ ಮಾಡುತ್ತಾರೆ. ನೆಟಾಲಿನ ಪಂಚಾಯಿತರು ಭಾರತೀಯನನ್ನು ಬಿಟ್ಟುಬಿಡುವುದು ಅಸಂಭವ. ಆದರೆ ನಾನು ಆಸೆಯನ್ನು ಬಿಡುವುದಿಲ್ಲ" ಎಂದರು.

ನನಗೆ ಈ ವಕೀಲರ ಗಾಢ ಪರಿಚಯವಿರಲಿಲ್ಲ. ಪಾರ್ಸೀ ರುಸ್ತುಂಜಿಯವರು "ತಾವು ಉಪಕಾರ ಮಾಡಿದಂತಾಯಿತು. ಆದರೆ ಈ ಮೊಕದ್ದಮೆಯಲ್ಲಿ ಗಾಂಧಿಯವರ ಸಲಹೆಯಂತೆ ನಡೆಯಬೇಕೆಂದು ನಾನು ಇಷ್ಟಪಡುತ್ತೇನೆ. ಅವರು ನನ್ನನ್ನು ಚೆನ್ನಾಗಿ ಬಲ್ಲರು. ಅವಶ್ಯಕವಿದ್ದಲ್ಲೆಲ್ಲಾ ತಾವು ಅವರಿಗೆ ಸಲಹೆಯನ್ನು ಕೊಡಬೇಕಾದ್ದೇನೋ ಸರಿ" ಎಂದು ಉತ್ತರವಿತ್ತರು.

ಈ ರೀತಿಯಾಗಿ ವಕೀಲರ ಪ್ರಶ್ನೆ ಮುಗಿದ ಬಳಿಕ ನಾವು ಪಾರ್ಸೀ ರುಸ್ತುಂಜಿಯವರ ಅಂಗಡಿಗೆ ಹೋದೆವು.

ಈಗ ನನ್ನ ಅಭಿಪ್ರಾಯವನ್ನು ಅವರಿಗೆ ವಿವರಿಸುತ್ತಾ ನಾನು 'ಈ ಮೊಕದ್ದಮೆಯನ್ನು ನ್ಯಾಯಸ್ಥಾನಕ್ಕೆ ತೆಗೆದುಕೊಂಡು ಹೋಗಗೊಡಬಾರದು. ನಿಮ್ಮ ಮೇಲೆ ಕಟ್ಲೆಯನ್ನು ನಡೆಸುವುದು ಬಿಡುವುದು ಸುಂಕದ ಅಧಿಕಾರಿಯ ಕೈಯಲ್ಲಿದೆ. ಆತನು ಕೂಡ ಸರಕಾರದ ವಕೀಲರ ಸಲಹೆಯಂತೆ ನಡೆದುಕೊಳ್ಳಬೇಕು. ನಾನು ಅವರಿಬ್ಬರನ್ನೂ ಭೇಟಿ ಮಾಡಲು ಸಿದ್ಧನಾಗಿದ್ದೇನೆ. ಅವರು ಗೊತ್ತು ಮಾಡುವ ದಂಡವನ್ನು ನೀವು ತೆರಲೊಪ್ಪಬೇಕೆಂದು ನನ್ನ ಸೂಚನೆ. ಅವರು ಇದಕ್ಕೊಪ್ಪುವರೆಂಬುದೇ ಹೆಚ್ಚು ಸಂಭವ. ಆದರೆ ಅವರು ಒಪ್ಪದಿದ್ದರೆ ನೀವು ಕಾರಾಗೃಹಕ್ಕೆ ತೆರಳಲು ಸಿದ್ಧರಾಗಿರಬೇಕು. ಸೆರೆಮನೆಗೆ ಹೋಗುವುದಕ್ಕಿಂತಲೂ ತಪ್ಪು ಮಾಡುವುದೇ ಹೆಚ್ಚು ಲಜ್ಜಾಸ್ಪದವೆಂದು ನಾನು ತಿಳಿಯುತ್ತೇನೆ. ಅವಮಾನದ ಕೆಲಸವಂತೂ ಮಾಡಿದುದಾಗಿ ಹೋಗಿದೆ. ಕಾರಾಗೃಹವಾಸವನ್ನು ನೀವು ಪ್ರಾಯಶ್ಚಿತ್ತವೆಂದೆಣಿಸಬೇಕು. ಇನ್ನೊಂದು ಕಳ್ಳತನದಿಂದ ಸುಂಕವನ್ನು ತಪ್ಪಿಸಿಕೊಳ್ಳುವದಿಲ್ಲವೆಂದು ಮನಸ್ಸಿನ ನಿರ್ಧಾರವನ್ನು ಮಾಡುವುದೇ ನಿಜವಾದ ಪ್ರಾಯಶ್ಚಿತ್ತ' ಎಂದು ಹೇಳಿದನು.

ಇದೆಲ್ಲವೂ ಪಾರ್ಸೀ ರುಸ್ತುಂಜಿಯವರಿಗೆ ರುಚಿಸಿತೆಂದು ನಾನು ಹೇಳಲಾರೆನು. ಅವರು ಸ್ವಭಾವತಃ ಧೀರರಾಗಿದ್ದರು. ಆದರೆ ಈ ಬಾರಿ ಅವರ ಧೈರ್ಯವು ಕುಂದಿ ಹೋಗಿದ್ದಿತು. ಅವರ ಮಾನ ಕೀರ್ತಿಗಳೆಲ್ಲವೂ ಗಂಡಾಂತರಕ್ಕೆ ಸಿಕ್ಕಿದುವು. ತಾವು ಅಷ್ಟು ಜಾಗರೂಕತೆಯಿಂದ, ಅಷ್ಟು ಶ್ರಮದಿಂದ ಕಟ್ಟಿದ್ದ ಕಟ್ಟಡವು ಬಿದ್ದು ಹೋದರೆ ಅವರ ಗತಿಯೇನು?

ಅವರು "ನಾನು ನಿಮ್ಮ ಕೈಯಲ್ಲಿದ್ದೇನೆಂದು ಆಗಲೇ ಹೇಳಿದ್ದೆ. ನೀವು ನಿಮಗೆ ಇಷ್ಟ ಬಂದಂತೆ ಮಾಡಿರಿ" ಎಂದರು.

ನಾನು ಈ ಮೊಕದ್ದಮೆಯಲ್ಲಿ ನನ್ನ ಪ್ರೇರಕಶಕ್ತಿಯನ್ನೆಲ್ಲಾ ಉಪಯೋಗಿಸಿದೆನು. ನಾನು ಸುಂಕದ ಅಧಿಕಾರಿಯನ್ನು ಕಂಡು ಅವರಿಗೆ ಎಲ್ಲಾ ವಿಷಯವನ್ನೂ ನಿರ್ಭಯವಾಗಿ ತಿಳಿಸಿದೆನು. ಲೆಕ್ಕದ ಪುಸ್ತಕಗಳನ್ನೆಲ್ಲಾ ಅವರ ವಶಕ್ಕೆ ಒಪ್ಪಿಸುವುದಾಗಿ ಮಾತು ಕೊಟ್ಟು ಪಾರ್ಸೀ ರುಸ್ತುಂಜಿಯವರು ಎಷ್ಟು ಪಶ್ಚಾತ್ತಾಪ ಪಡುತ್ತಿದ್ದರೆಂಬುದನ್ನೂ ಅವರಿಗೆ ಹೇಳಿದೆನು.

ಸುಂಕದ ಅಧಿಕಾರಿಯು 'ಈ ಪಾರ್ಸೀ ಮುದುಕನನ್ನು ಕಂಡರೆ ನನಗೆ ಇಷ್ಟ. ಅವರ ಬುದ್ಧಿಗೇಡಿತನಕ್ಕಾಗಿ ನಾನು ವಿಷಾದಿಸುತ್ತೇನೆ. ನನ್ನ ಕರ್ತವ್ಯವೇನೆಂಬುದು ನಿಮಗೆ ತಿಳಿದೇ ಇದೆ. ಸರಕಾರದ ವಕೀಲರ ಸಲಹೆಯನ್ನು ನಾನು ಅನುಸರಿಸಬೇಕು. ಆದುದರಿಂದ ನೀವು ಅವರನ್ನು ಒಡಂಬಡಿಸಲು ನಿಮ್ಮ ಪ್ರಯತ್ನವನ್ನೆಲ್ಲಾ ಮಾಡಬೇಕೆಂದು ಸೂಚಿಸುತ್ತೇನೆ' ಎಂದರು.

"ನೀವು ರುಸ್ತುಂಜಿಯನ್ನು ನ್ಯಾಯಸ್ಥಾನಕ್ಕೆ ಎಳೆಯಲು ಆಗ್ರಹ ಮಾಡದಿದ್ದರೆ ನನಗೆ ಬಹು ಸಂತೋಷ" ಎಂದೆನು.

ಆತನಿಂದ ಈ ಅಭಯ ವಚನವನ್ನು ಪಡೆದು ಸರಕಾರದ ವಕೀಲರೊಡನೆ ಪತ್ರವ್ಯವಹಾರ ಬೆಳೆಸಿದೆನು. ಅವರನ್ನೂ ಕಂಡೆನು. ನಾನು ಏನನ್ನೂ ಮರೆಮಾಚದಿದ್ದುದನ್ನು ಅವರು ಶ್ಲಾಘಿಸಿದರೆಂದೂ ನಾನು ಮುಚ್ಚಿಟ್ಟಂತಹ ಸಂಗತಿಯೊಂದೂ ಇಲ್ಲವೆಂದೂ ಅವರಲ್ಲಿ ದೃಢ ನಂಬಿಕೆ ಹುಟ್ಟಿತೆಂದೂ ಹೇಳಲು ನನಗೆ ಸಂತೋಷವಾಗುತ್ತದೆ.

ಈ ಸಂದರ್ಭದಲ್ಲಿಯೋ ಅಥವಾ ಬೇರೆ ಪ್ರಸಂಗದಲ್ಲಿಯೋ ನನಗೆ ನೆನಪಿಲ್ಲ. ನನ್ನ ಸ್ಥಿರಪ್ರಯತ್ನವೂ ನಿಷ್ಕಾಪಟ್ಯವೂ ಅವರಿಂದ 'ನೀವು ಎಂದಿಗೂ 'ಇಲ್ಲ' ಎನ್ನಿಸಿಕೊಂಡು ಹೋಗುವವರಲ್ಲ.' ಎಂದು ಸರ್ಟಿಫಿಕೇಟನ್ನು ನನಗೆ ಸಂಪಾದಿಸಿಕೊಟ್ಟವು.

ಪಾರ್ಸೀ ರುಸ್ತುಂಜಿಯವರ ಮೇಲಿನ ಮೊಕದ್ದಮೆಯು ರಾಜಿಯಾಯಿತು. ಅವರು ಎಷ್ಟು ಹಣವನ್ನು ಕೊಡದೆ ಮೋಸ ಮಾಡಿದರೆಂದು ಒಪ್ಪಿಕೊಂಡಿದ್ದರೋ ಅದರ ಎರಡರಷ್ಟು ಹಣವನ್ನು ದಂಡವಾಗಿ ಕೊಡಬೇಕೆಂದು ನಿರ್ಧಾರವಾಯಿತು. ಈ ಮೊಕದ್ದಮೆಯ ವಿಷಯಗಳನ್ನೆಲ್ಲಾ ಬರೆಸಿ ಆ ಕಾಗದಕ್ಕೆ ಕಟ್ಟು ಹಾಕಿಸಿ ಅದು ತನಗೂ ತಮ್ಮ ಉತ್ತರಾಧಿಕಾರಿಗಳಿಗೂ ತಮ್ಮ ಜೊತೆಯ ವರ್ತಕರಿಗೂ ನಿತ್ಯವೂ ಮಾರ್ಗದರ್ಶಿಯಾಗಿರುವಂತೆ ಅದನ್ನು ನಮ್ಮ ಕಚೇರಿಯಲ್ಲಿ ತಗಲು ಹಾಕಿಸಿದರು.

ಈ ಕ್ಷಣಿಕ ಪಶ್ಚಾತ್ತಾಪವಿಂದ ನಾನು ಮರುಳಾಗಕೂಡದೆಂದು ಪಾರ್ಸೀ ರುಸ್ತುಂಜಿಯವರ ಮಿತ್ರರು ನನಗೆ ಎಚ್ಚರಿಕೆ ಕೊಟ್ಟರು. ಈ ವಿಷಯವನ್ನು ನಾನು ರುಸ್ತುಂಜಿಯವರಿಗೆ ತಿಳಿಸಲು ಅವರು "ನಾನು ನಿಮಗೆ ಮೋಸ ಮಾಡಿದರೆ ನನ್ನ ಗತಿಯೇನು?" ಎಂದರು.

---

## ಯುವಕರೂ ವೃದ್ಧರೂ.

(ಬರೆದು ಬಂದದ್ದು)

ವೇಳೆಯನ್ನು ವ್ಯರ್ಥವಾಗಿ ಕಳೆಯದೆ ಇರುವ ಮನುಷ್ಯನು ಒಂದುವೇಳೆ ಪ್ರಾಯದಲ್ಲಿ ಚಿಕ್ಕವನಾದರೂ ಬುದ್ಧಿಯಿಂದ ವೃದ್ಧರಿಗೆ ಸರಿಯಾಗಬಹುದು. ಆದರೆ ಅಂಥಾ ಬುದ್ಧಿಯು ಉದ್ಯೋಗಿಗಳಾದ ತರುಣರು ತೋರಿಸುವುದು ಬಹಳ ಅಪರೂಪ. ಅದರಲ್ಲೂ ನಮ್ಮ ದೇಶದಲ್ಲಿ ಉದ್ಯೋಗವೆಂದರೆ ಸರಕಾರಿ ಚಾಕರಿ ಒಂದೇ ಎಂದು ತಿಳಿದುಕೊಂಡಿರುವದರಿಂದ, ಇತರ ಕೆಲಸಗಳಲ್ಲಿ ನಿಪುಣರಾಗಿರುವವರು ಉದ್ಯೋಗಸ್ಥರಲ್ಲವೆಂದೇ ಸಾಧಾರಣವಾದ ಭಾವನೆ. ಆದಾಗ್ಯೂ ಉದ್ಯೋಗದಲ್ಲಿ ಆಸಕ್ತಿಯುಳ್ಳ ಯುವಕರಿದ್ದರೂ, ಅವರು ಇತರ ವೃದ್ಧರ ಮನೋಭಾವಕ್ಕೆ ಸರಿಹೋಗದ ಕಾರಣ ಅವರ ಗೋಚರಕ್ಕೆ ಬೀಳುವುದೂ ಇಲ್ಲ. ಸಾಧಾರಣವಾಗಿ ತರುಣರಲ್ಲಿ ವೃದ್ಧರಿಗಿಂತ ಶೋಧಕ ಬುದ್ಧಿಯೂ, ಕಲ್ಪನಾಶಕ್ತಿಯೂ ಪ್ರಬಲವಾಗಿರುವುವು. ಆದರೆ ಚಂಚಲ ವೃತ್ತಿಯೂ ಹೆಚ್ಚಾಗಿರುವುದು. ತಿಂಡಿ ಪೋತರು ಊಟಕ್ಕೆ ಆರಂಭಮಾಡುವಾಗ ಬಹಳ ಅಬ್ಬರ ಮಾಡುವಂತೆ ತಮ್ಮ ಕಾರ್ಯಾರಂಭದಲ್ಲಿ ಬಹು ಶೌರ್ಯವನ್ನು ತೋರಿಸುವರು. ಆದರೆ ಸ್ವಲ್ಪ ದಿವಸಗಳಲ್ಲಿ ಅವರ ಉತ್ಸಾಹವು ಮಂಗಮಾಗಿ ಅವರು ತಾವು ಹಿಡಿದ ಕೆಲಸವನ್ನು ಸಂಪೂರ್ಣ ಮಾಡದೆ ಅರ್ಧಕ್ಕೇ ಬಿಟ್ಟು ಬಿಡುವರು. ಅವರು ಸಾರಾಸಾರ ವಿಚಾರ ಮಾಡದೆ ತಮ್ಮ ಶಕ್ತಿಗೆ ಮೀರಿದ ಕೆಲಸಗಳಲ್ಲಿ ಕೈಹಾಕಿ ಮೋಸಹೋಗುವುದು ಅನೇಕ ಸಾರಿ ನಿದರ್ಶನಕ್ಕೆ ಬಂದಿರುತ್ತದೆ. ತಾರುಣ್ಯದಲ್ಲಿ ಶರೀರದಲ್ಲಿ ಚಟುವಟಿಕೆಯೂ ಉತ್ಸಾಹವೂ ಇದ್ದರೂ ತರುಣರು ಚೆನ್ನಾಗಿ ವಿಚಾರಮಾಡಿ ತಮಗಿಂತಲೂ ಅನುಭವಿಕರಾದ ವೃದ್ಧರ ಉಪದೇಶವನ್ನು ಕೇಳಿಕೊಂಡು ಜಾಗ್ರತೆಯಾಗಿ ನಡೆಯತಕ್ಕದ್ದು. ಎಲ್ಲಾ ಕಾರ್ಯನಿರ್ವಹಣೆಗಳಲ್ಲಿಯೂ ಒಳ್ಳೆಯದು.

ವೃದ್ಧರಿಗೆ ಸಾಧಾರಣವಾಗಿ ಉದ್ಯೋಗ ಪ್ರೀತಿಯೂ ಉತ್ಸಾಹವೂ ಕಡಿಮೆಯಾಗಿರುವುವು. ಆದರಿಂದ ಯಾವುದೊಂದು ಹೊಸ ಕೆಲಸವನ್ನು ಕೈಕೊಳ್ಳುವುದಕ್ಕೆ ಅವರಿಗೆ ಧೈರ್ಯವಾಗುವುದಿಲ್ಲ. ಆದರೆ ವೃದ್ಧರು ಅತಿಕ ಕಡೆ ಉ... ವ ಮೇಲು ಬಹಳ ಚತುರರಾಗಿರುವರು.

ಕೆಲವು ವೃದ್ಧರು ಪ್ರತಿಯೊಂದು ... ತೋರಿಸುವರು. ... ಬಹಳ ... ತೆಗೆದುಕೊಳ್ಳುವರು. ಆದರಿಂದ ಧೈರ್ಯದ ಕೆಲಸವು ಯಾವುದೂ ಆಗುವುದಿಲ್ಲ. ಯಾವುದೊಂದು ಕೆಲಸವನ್ನು ಮಾಡುವಾಗಲೂ ಸ್ವಲ್ಪ ತೊಂದರೆಯುಂಟಾದ ಮಾತ್ರಕ್ಕೆ ಅವರು ಪಶ್ಚಾತ್ತಾಪ ಪಡಲಾರಂಭಿಸುವರು. ಒಂದುವೇಳೆ ತಾವು ಹಿಡಿದ ಕೆಲಸದಲ್ಲಿ ಸ್ವಲ್ಪ ಯಶಸ್ಸು ಪ್ರಾಪ್ತವಾದರೆ ಅವರು ಎಲ್ಲರವರೆಂದೂ ತಮ್ಮ ಸಾವಧಾನವನ್ನೂ ಸಾಹಸವನ್ನೂ ತಾವೇ ಹೊಗಳಿಕೊಳ್ಳುವರು. ಇವೆಲ್ಲಾ ವೃದ್ಧಾವಸ್ಥೆಯ ದೌರ್ಬಲ್ಯಗಳು. ತರುಣರಲ್ಲಿ ಒಂದು ವಿಧವಾದ ದೌರ್ಬಲ್ಯಗಳಿದ್ದರೆ ವೃದ್ಧರಲ್ಲಿ ಇನ್ನೊಂದು ವಿಧವಾದ ದುರ್ಗುಣಗಳಿರುತ್ತವೆ. ತರುಣರು ತಮ್ಮ ಶೋಧಕ ಬುದ್ಧಿಯಿಂದಲೂ ಸಾಹಸದಿಂದಲೂ ಅಸಾಧಾರಣ ಕಾರ್ಯಗಳನ್ನು ಮಾಡುವರು. ವೃದ್ಧರು ಕೇವಲ ಸ್ವಪ್ನ ಸುಖದಲ್ಲಿ ಮುಳುಗುವರು. ವೃದ್ಧರಿಗೆ ಅನುಭವವೆಂಬ ಮದ್ಯಪಾನದಿಂದ ಕೆಲವು ವೇಳೆ ಬುದ್ಧಿಭ್ರಂಶವಾಗುವುದು. ಆದ್ದರಿಂದ ಅವರು ತರುಣರನ್ನು ಧಿಕ್ಕರಿಸುವರು. ಈ ನ್ಯೂನತೆಗಳೆಲ್ಲಾ ಬದ್ಧರಲ್ಲಿರುವುದರಿಂದ ವೃದ್ಧರನ್ನು ಕಂಡು ತರುಣರು ಹಾಸ್ಯಮಾಡದೆ ಮತ್ತು ತರುಣರನ್ನು ವೃದ್ಧರು ತಿರಸ್ಕಾರ ಮಾಡದೆ ಉಭಯ ಕಡೆಯವರೂ ... ಉದ್ಯೋಗ ಮಾಡಿದರೆ ದೇಶ ಹಿತದ ಸುಮ್ಮ ... ಹಿತದ ಕೆಲಸಗಳು ನಿರಾಯಾಸವಾಗಿ ಜರಗುವುವು. ಇದರ ... ಈ ಲೋಕಿಯ ಸಹಕಾರದಿಂದಲೇ ಮುಂದರಿಯುತ್ತಿರುವವೆಂಬುದನ್ನು ಎಲ್ಲರೂ ಮನಸ್ಸಿನಲ್ಲಿಟ್ಟು ಕಾರ್ಯವನ್ನು ಕೈಕೊಂಡು ಸಮಾಜದ ಏಳಿಗೆಗೆ ಕೆಲಸವನ್ನು ಮಾಡಬೇಕು.

---


**ಅಪೂರ್ವ ಸಂದರ್ಭ.**

ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸಬೇಕಾದರೆ ಇದೀಗ ಅಪೂರ್ವ ಸಂದರ್ಭ

**ಆತಂಕನಿಗ್ರಹ ಮಾತ್ರೆಗಳು**

ಮೆದುಳಿನ ಆಯಾಸ, ಮಲಬದ್ಧತೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಮಾಡುವುವು,
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ! ಧರ್ಮಾರ್ಥ!!

**ಕಾಮಶಾಸ್ತ್ರ**

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ:—

ಆತಂಕನಿಗ್ರಹ ಔಷಧಾಲಯ,
52—1 ಚಿಕ್ಕಪೇಟೆ, ಬೆಂಗಳೂರು ಸಿಟಿ

## ಸಿಕ್ಕಿದ ಸ್ಥಳಗಳಲ್ಲಿ ಮಲವಿಸರ್ಜನೆ ಮಾಡುವುದರ ಹಾನಿ.

ಮಾರ್ಗಗಳ ಬದಿಗಳಲ್ಲಿಯೂ, ಎಲ್ಲಾ ಬೈಲು ಪ್ರದೇಶಗಳಲ್ಲಿಯೂ ಜನರು ಮಲಮೂತ್ರ ವಿಸರ್ಜನೆ ಮಾಡುವುದು ಅನೇಕ ಪಟ್ಟಣಗಳಲ್ಲಿಯೂ ಹಳ್ಳಿಗಳಲ್ಲಿಯೂ, ನಾವು ಸಾಧಾರಣವಾಗಿ ನೋಡಬಹುದಾದ ವಿಷಯವಾಗಿರುತ್ತದೆ. ಮನೆಗಳಲ್ಲಿ ಇರುವ ಚೆನ್ನಾಗಿ ಕಟ್ಟಿಸಿದ ಪಾಯಖಾನೆ ಮನೆಗಳನ್ನು ಬಿಟ್ಟು ಯಾವದಾದರೂ ಸಣ್ಣ ಬಯಲು ಪ್ರದೇಶಗಳಲ್ಲಿ ಅಥವಾ ವೈದಾನದಲ್ಲಿ ಆತುರದಿಂದ ಮಲವಿಸರ್ಜನೆ ಮಾಡುತ್ತಾರೆ. ನೀರಿನ ಆಶ್ರಯ ಇರುವ ಸ್ಥಳಗಳ ಹತ್ತಿರ ಹೆಚ್ಚಾಗಿ ಈ ಉದ್ದೇಶಕ್ಕಾಗಿ ಹೋಗುತ್ತಾರೆ. ಕೆರೆಗಳ ಮತ್ತು ನದಿಗಳ ದಡಗಳಲ್ಲಿಯೂ ನೀರಿನ ಹೊಂಡಗಳ ಮತ್ತು ಕಾಲುವೆಗಳ ಹತ್ತಿರವೂ ಈ ರೀತಿಯಿಂದ ಹೆಚ್ಚಾಗಿ ಹೊಲಸು ಮಾಡುತ್ತಾರೆ.

ಅನೇಕ ಜನರಿಗೆ ಇದರಿಂದ ಉಂಟಾಗುವ ಅಮಿತ ಅಪಾಯವು ಇನ್ನು ಗೊತ್ತಿಲ್ಲ. ಈ ಅತೀ ಹೊಲಸು ಅಭ್ಯಾಸಕ್ಕಿಂತ ಕೆಡಕು ಉಳ್ಳದ್ದು ಬೇರೆ ಯಾವದು ಇಲ್ಲ. ನಾವು ಕುಡಿಯುವ ನೀರನ್ನು ಹೊಲಸು ಮಾಡಲಿಕ್ಕೆ ಅದೇ ಮುಖ್ಯ ಕಾರಣವಾಗಿರುತ್ತದೆ.

ಯಾವದಾದರೂ ಕರುಳು ರೋಗದಿಂದ ಪೀಡಿತನಾಗಿರುವ ಪ್ರತಿ ಒಬ್ಬನ ಕರುಳುಗಳಲ್ಲಿ ಅನಾರೋಗ್ಯಕ್ಕೆ ಕಾರಣಭೂತವಾದ ಕ್ರಿಮಿಗಳು ಲಕ್ಷಗಟ್ಲೆಯಿಂದ ಇರುತ್ತವೆ. ಪ್ರತಿಸಾರಿ ಅವನು ಮಲವಿಸರ್ಜನ ಮಾಡುವಾಗ ಇಂಥಾ ಅನೇಕ ಕ್ರಿಮಿಗಳನ್ನು ಮಲದಲ್ಲಿ ವಿಸರ್ಜಿಸುತ್ತಾನೆ. ಇಂಥಾ ರೋಗಗಳಲ್ಲಿ ರೋಗಿಯು ರೋಗದಿಂದ ಗುಣ ಹೊಂದಿದನಂತರವೂ ತನ್ನ ಕರುಳುಗಳಲ್ಲಿ ಈ ಕ್ರಿಮಿಗಳಿಗೆ ಆಶ್ರಯ ಕೊಡುತ್ತಾನೆ. ಇಂಥಾ ರೋಗಗಳಲ್ಲಿ ವಾಂತಿಭೇದಿ, ಸನ್ನಿಪಾತ ಜ್ವರ ಮತ್ತು ಅತಿಸಾರ ಅತಿ ಅಪಾಯಕರವಾದವುಗಳಾಗಿರುತ್ತವೆ. ಅನೇಕರಿಗೆ ಕರುಳುಗಳಲ್ಲಿ ಕೊಕ್ಕೆಯ ಹುಳ ಮುಂತಾದ ಹುಳಗಳು ಇರುತ್ತವೆ. ಈ ಹುಳಗಳ ಮೊಟ್ಟೆಗಳು ಕೂಡ ಇಂಥಾ ಮನುಷ್ಯರ ಮಲದಲ್ಲಿ ಸಾವಿರಗಟ್ಲೆಯಿಂದ ವಿಸರ್ಜಿಸಲ್ಪಡುತ್ತವೆ.

ಇಂಥಾ ಕ್ರಿಮಿಗಳು ಬಹಳ ವಿಧಗಳಿಂದ ಆರೋಗ್ಯದಿಂದ ಇರುವವರ ದೇಹದಲ್ಲಿ ಪ್ರವೇಶಿಸುತ್ತವೆ. ಬಯಲು ಪ್ರದೇಶಗಳಲ್ಲಿ ಮಲವಿಸರ್ಜನೆ ಮಾಡಲಿಕ್ಕೆ ಹೋಗುವವರಿಗೆ ತಮ್ಮ ಕಾಲುಗಳಲ್ಲಿಯೂ, ಶರೀರಗಳಲ್ಲಿಯೂ ಈ ಕ್ರಿಮಿಗಳ ಸೋಂಕು ತಗಲಬಹುದು. ಕ್ರಿಮಿಗಳು ಧೂಳಿನಲ್ಲಿ ಸೇರಿ ಗಾಳಿ ಬೀಸುವಾಗ ನಮ್ಮ ಆಹಾರದಲ್ಲಿಯೂ ಪಾನೀಯದಲ್ಲಿಯೂ ಪ್ರವೇಶಿಸಿ ಅಪಾಯವನ್ನು ಉಂಟುಮಾಡಬಹುದು. ಸ್ವಲ್ಪ ಮಳೆ ಬಂದರೆ ಎಲ್ಲಾ ಕ್ರಿಮಿಗಳು ಹತ್ತಿರ ಇರುವ ನದಿ, ಕೆರೆ ಅಥವಾ ಭಾವಿಯಲ್ಲಿ ಬಿಸ್ಸಲ್ಪಟ್ಟು ನೀರನ್ನು ಬಹಳ ಅಪಾಯಕರವಾದದ್ದಾಗಿ ಮಾಡಬಹುದು. ಈ ಕೊಳೆಯನ್ನೂ, ಆಹಾರವನ್ನೂ ಬಹಳ ಪ್ರೀತಿಸುವ ಎಲ್ಲೆಲ್ಲಿಯೂ ಇರುವ ನೊಣವು ಎರಡರಲ್ಲಿಯೂ ಕೂತು ಕ್ರಿಮಿಗಳನ್ನು ಕೊಳೆಯಿಂದ ಆಹಾರಕ್ಕೆ ಒಯ್ಯುತ್ತದೆ.

ಪ್ರತಿ ಮನೆಗೆ ತಕ್ಕದಾದ ಪಾಯಖಾನೆ ಮನೆಗಳನ್ನು ಕಟ್ಟಿಸಿರಿ. ಅವುಗಳನ್ನು ಪ್ರತಿ ದಿನವೂ ಚೊಕ್ಕಮಾಡಲಿಕ್ಕೆ ಏರ್ಪಾಡು ಮಾಡಿರಿ. ತಮಗೆ ಸ್ವಂತ ಪಾಯಖಾನೆ ಮನೆಗಳನ್ನು ಕಟ್ಟಿಸಲಿಕ್ಕೆ ಆಗದ ಬಡ ಜನರಿರುವ ಸ್ಥಳಗಳಲ್ಲಿ ತಾಲೋಕು ಬೋರ್ಡು, ಮುನಿಸಿಪಾಲಿಟಿ ಮುಂತಾದ ಸ್ಥಳೀಯ ಸಂಸ್ಥೆಗಳು ಸರಕಾರಿ ಪಾಯಖಾನೆಗಳನ್ನು ತಪ್ಪದೆ ಕಟ್ಟಿಸುವ ಹಾಗೆ ಮಾಡಿರಿ. ಮೈದಾನ ಸ್ಥಳಗಳಲ್ಲಿಯೂ ಎಲ್ಲಾ ಜನರು ತಿರುಗಾಡುವ ಬಯಲು ಪ್ರದೇಶ, ಬೀದಿ ಮುಂತಾದ ಸ್ಥಳಗಳಲ್ಲಿಯೂ ಎಂದೆಂದಿಗೂ ಮಲವಿಸರ್ಜನೆ ಮಾಡಬೇಡಿರಿ. ನಿಮ್ಮ ಸ್ನೇಹಿತರಿಗೆ ಈ ಕೆಟ್ಟ ಅಭ್ಯಾಸದ ಅಪಾಯಗಳನ್ನು ವಿವರಿಸಿ ಹೇಳಿರಿ ಮತ್ತು ಅವರು ಕೂಡ ಮೇಲೆ ಹೇಳಿದಂತೆಯೇ ವರ್ತಿಸುವ ಹಾಗೆ ಉಪದೇಶಿಸಿರಿ. (ರೆಡ್‌ಕ್ರಾಸ್ ಸಂಘದಿಂದ)

## ಕೆನರಾ ಹೈಸ್ಕೂಲ್ ಸೋಡ್ತಿ.

ಮಂಗಳೂರಲ್ಲಿರುವ ಕೆನರಾ ಹೈಸ್ಕೂಲಿನ ಮತ್ತು ಕೆನರಾ ಬಾಲಿಕೆಯರ ಸ್ಕೂಲಿನ ಸಹಾಯಾರ್ಥವಾಗಿ ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರ ಅಪ್ಪಣೆ ಪಡೆದು ಒಂದು ಮಹತ್ವದ ಒಂದು ಸೋಡ್ತಿಯನ್ನು ತೆಗೆಯಲು ನಿಶ್ಚೈಸಿಯದೆ, ಇದರ ಆಡಳಿತೆಯನ್ನು ಜವಾಬ್ದಾರಿಯುಳ್ಳ ಪ್ರಮುಖ ಗೃಹಸ್ಥರು ನಡಿಸುವರು.

ಜುಮ್ಲಾ ಟಿಕೇಟಿನ ಮೌಲ್ಯ ಒಂದುಲಕ್ಷ ರೂಪಾಯಿ. ಈ ಪೈಕಿ ರೂಪಾಯಿ 15,000 ಖರ್ಚಿನ ಬಗ್ಗೆ ವಜಾ ಮಾಡೋಣಾಗುವದು. ರೂಪಾಯಿ 40,000 ಶಾಲೆಗಳ ಉಪಯೋಗದ ಬಗ್ಗೆ ವಿನಿಯೋಗಿಸಲ್ಪಡುವದು ಮತ್ತು 45,000 ರೂಪಾಯಿಗಳನ್ನು 3013 ಸೋಡ್ತಿ ಬಹುಮಾನಗಳಾಗಿ ಹಂಚಲಾಗುವದು. ಈ ಬಹುಮಾನಗಳ ತಪಶೀಲು ಕೆಳಗೆ ಕಾಣಿಸಿಯದೆ.

1ನೇ ಬಹುಮಾನ ರೂಪಾಯಿ 12500. 2ನೇ ಬಹುಮಾನ ರೂಪಾಯಿ 5000. ರೂಪಾಯಿ 1000ದರದ 2 ಬಹುಮಾನಗಳು. ರೂಪಾಯಿ 500 ದರದ 3 ಬಹುಮಾನಗಳು. ರೂಪಾಯಿ 250 ದರದ 6 ಬಹುಮಾನಗಳು. ರೂಪಾಯಿ 100 ದರದ 10 ಬಹುಮಾನಗಳು. ರೂಪಾಯಿ 50 ದರದ 20 ಬಹುಮಾನಗಳು. ರೂಪಾಯಿ 20 ದರದ 100 ಬಹುಮಾನಗಳು. ರೂಪಾಯಿ 10 ದರದ 800 ಬಹುಮಾನಗಳು. ರೂಪಾಯಿ 5 ದರದ 2100 ಬಹುಮಾನಗಳು.

ಟಿಕೇಟು ಮಾರಾಟವು ತಾ. 4—1—29ಕ್ಕೆ ಮುಗಿಯುವದು ಮತ್ತು ಸೋಡ್ತಿಯು ತಾ. 26—1—29ರಲ್ಲಿ ತೆಗೆಯೋಣಾಗುವದು.

ಪ್ರತಿ ಒಂದು ಟಿಕೇಟಿನ ಬೆಲೆಯು ಬರೇ ಒಂದು ರೂಪಾಯಿ ಆಗಿರುತ್ತದೆ. 21 ಟಿಕೇಟುಗಳು ಮಾರಿದವರಿಗೆ ಪ್ರತಿಫಲವಾಗಿ ಒಂದು ಟಿಕೇಟು ಜಾಸ್ತಿ ಸಿಕ್ಕುವದಲ್ಲದೆ ಹೆಚ್ಚು ಟಿಕೇಟುಗಳು ಮಾರಿದವರಿಗೆ ವಿಶೇಷ ಬಹುಮಾನಗಳು ದೊರೆಯುವವು. ಈ ಶಿವಾಯಿ ಯೋಗ್ಯವಾದ ಎರಡು ಸಂಸ್ಥೆಗಳಿಗೆ ಮುಖ್ಯವಾಗಿ ಕೆನರಾ ಹೈಸ್ಕೂಲಿನ ಸಂಬಂಧವಾಗಿ ಈಗ ತೆರೆಯೋಣಾಗಬೇಕಾಗಿ ನಿಶ್ಚೈಸಿದ ಕೈಗಾರಿಕಾ ಶಾಲೆಗೆ ಕೂಡ ಅವರು ಸಹಾಯ ಮಾಡಿದಂತಾಗುವದು. ಅಪೇಕ್ಷೆಯುಳ್ಳ ಏಜೆಂಟರು ಸೋಡ್ತಿ ಕಮಿಟಿಯ ಹಾನರರಿ ಸೆಕ್ರೆಟರಿಯವರಿಗೆ ಕೆಳಗೆ ಕಾಣಿಸಿದ ವಿಳಾಸಕ್ಕೆ ಬರೆಯಬಹುದು. ಏಜಂಟರು ಎಲ್ಲಾ ಕಡೆಗಳಲ್ಲಿಯೂ ಕಮಿಟಿಯವರಿಗೆ ಬೇಕಾಗಿರುವರು.

ಬಿ. ಮಂಜುನಾಥ ಬಾಳಿಗ,
ತಾ. 16—3—28. ಹಾನರರಿ ಸೆಕ್ರೆಟರಿ
ಕೆನರಾ ಹೈಸ್ಕೂಲ್ ಸೋಡ್ತಿ ಕಮಿಟಿ
ಬ್ರಿಟೀಷ ಗಲ್ಲಿ, ಫಳ್ನೀರ,
6—4 ಮಂಗಳೂರು.

## ಶರೀರ ಮರ್ಮಶಾಸ್ತ್ರ ಎಂಬ ಕಾಮ ಶಾಸ್ತ್ರದ ಪುಸ್ತಕ.

ಮೊದಲು ಈ ಪುಸ್ತಕವು ಹಿಂದುಸ್ತಾನಿ, ಫ್ರೆಂಚ್ ಇಂಗ್ಲೀಷ್ ಮುಂತಾದ ಭಾಷೆಗಳಲ್ಲಿ ಇತ್ತು. ಇದನ್ನು ಈಗ ಕನ್ನಡಕ್ಕೆ ತರ್ಜುಮೆಮಾಡಿ ಚಿತ್ರಪಟಗಳ ಸಹಿತ ಪ್ರಿಂಟು ಮಾಡಿದೆ.

ಇದರಲ್ಲಿ ಸ್ತ್ರೀ ಪುರುಷರ ಎಲ್ಲಾ ಮರ್ಮ ವಿಷಯಗಳು ಶಿಶು ಉತ್ಪತ್ತಿ, ಗರ್ಭ ಉತ್ಪತ್ತಿ, ಸ್ತ್ರೀಯರ ಲಕ್ಷಣಗಳು, ಸ್ತ್ರೀ ಪುರುಷರು ಅನ್ಯೋನ್ಯವಾಗಿರುವಿಕೆ ಮುಂತಾದ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ವಿಷಯಗಳು ಚಿತ್ರಪಟಗಳ ಸಹಿತ ಪ್ರಿಂಟಾಗಿದೆ. ಕ್ರಯ ಪುಸ್ತಕ 1ಕ್ಕೆ ರೂ. 1—0—0

ವಿಳಾಸ:— ಕೆ. ಎನ್. ರಾಧಾಕೃಷ್ಣ ಬ್ರದರ್ಸ್,
109. ಜೈನಾ ಬಜಾರ್ ರೋಡ್,
52—11 ಮದರಾಸು.

## ನೋಟೀಸು.

ಕಾಂತೂರು ಗ್ರಾಮದ ವಕ್ಕಲಿಗರ ಕೆ. ರಾಮೈಯ್ಯನು ಈ ಮೂಲಕ ಪ್ರಕಟಿಸುವುದೇನೆಂದರೆ.—ಕಾಂತೂರು ಗ್ರಾಮದ ವಕ್ಕಲಿಗರ ಪವುತಿ ತಮ್ಮಣ್ಣನ ತಂಗಿ ಕಾವಮ್ಮನು ಮಾರಾಟಕ್ಕೆ 3 ಯೇಕರೆ ಅಂದರೆ 100 ಬಟ್ಟಿ ಭೂಮಿ 3 ಯೇಕರೆ ಬಾಣೆ, ಹಿತ್ಲು, ಮನೆ (ಹಂಚು ಹುಲ್ಲು ಹಾಕಿದ್ದು) ಇದೆಯಾಗಿ ಪ್ರಕಟಣೆಮಾಡಿರುವ ಸೊತ್ತುಗಳು ಮತ್ತು ಬೇರೆ ಸೊತ್ತುಗಳು ಸಹ ನನಗೆ 1931ನೆ ಇಸವಿ ಮಾರ್ಚಿ ವರೆಗೆ ಪಸಲು ಭೋಗ್ಯಕ್ಕೆ 2000/ರೂಪಾಯಿಗೆ ಸದರಿಯವಳ ಅಣ್ಣ ಪವುತಿ ತಮ್ಮಣ್ಣನು ಕೊಟ್ಟಿರುವುದಾಗಿಯೂ, ವಾಯಿದೆ ತೀರಿದ ವರ್ಷ ಅಸಲು ಮೊಬಲಗು ಪಾವತಿ ಮಾಡದೆ ತಪ್ಪಿದ್ದಾದರೆ ಮುಂದಕ್ಕೆ ಅಸಲು ಮೊಬಲಗು ಪಾವತಿಯಾಗುವ ವರೆಗೆ ಸದರಿ ಪೈರೆ ನಡಕೊಂಡು ಬರಬೇಕಾಗಿ ವಗೈರೆ ರಿಜಿಸ್ಟರ್ ಭೋಗ್ಯ ಕರಾರು ಬರಕೊಟ್ಟಿರುವದರಿಂದ ಈ ಕರಾರಿಗೆ ವಿರೋಧವಾಗಿ ಯಾರೂ ಮೇಲ್ಕಂಡ ಸೊತ್ತುಗಳ ಮೇಲೆ ಕ್ರಯಮಗ್ಗೆ ಯಾವ ತರದ ಆಧಾರಗಳೂ ಮಾಡಿಸಿಕೊಳ್ಳಬಾರದಾಗಿಯೂ, ಹೀಗೆ ಮಾಡಿಸಿಕೊಂಡದ್ದಾದರೆ ನನಗೆ ಇದರಿಂದುಂಟಾಗುವ ಎಲ್ಲಾ ನಷ್ಟಕ್ಕೆ ಸದರಿಯವರು ಗುರಿಯಾಗತಕ್ಕದ್ದು. ಅಲ್ಲದೆ ಹಾಗೆ ಮಾಡಿಸಿಕೊಂಡ ಪತ್ರಗಳು ನನ್ನ ಭೋಗ್ಯ ಕರಾರಿನ ಶರತ್ತು ತೀರುವ ವರೆಗೆ ಅಸಿಂಧುವಾಗುವದೆಂದು ಈ ಮೂಲಕ ತಿಳಿಸಲಾಗಿದೆ.

ವಕ್ಕಲಿಗರ ಕೆ. ರಾಮೈಯ್ಯ,
ಕಾಂತೂರು ಗ್ರಾಮ,
12—4 ಮೂರ್ನಾಡು.

## For Sale

6000 Orange Plants, two year old cultivated on scientific agricultural principles. Prices range between 12 to 15 rupees per hundred. For further particulars apply to the undersigned.

P. M. Chengappa,
Inspector of Co-operative Societies,
4—4 South Coorg. Virajpet.

## ಮಾರಾಟಕ್ಕಿದೆ.

ಶಾಸ್ತ್ರೀಯ ರೀತಿಯಲ್ಲಿ ವ್ಯವಸಾಯ ಮಾಡಿ ಬೆಳೆದ 2 ವರ್ಷದ 6000 ಕಿತ್ತಳೆ ಗಿಡಗಳು ಮಾರಾಟಕ್ಕೆ ತಯಾರಾಗಿವೆ. ಕ್ರಯ ನೂರಕ್ಕೆ 12—ರೂಪಾಯಿಗಳಿಂದ 15/—ರೂಪಾಯಿಗಳವರೆಗೆ ಇದೆ. ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳತಕ್ಕದ್ದು.

ಪಿ. ಯಂ. ಚಂಗಪ್ಪ,
ಕೋ ಆಪರೇಟಿವ್ ಇನ್ಸ್‌ಪೆಕ್ಟರು,
ದಕ್ಷಿಣ ಕೊಡಗು
ವೀರರಾಜಪೇಟೆ.

## ಮಾರಾಟಕ್ಕಿದೆ.

ಲೇಟ್ ಸಾಹುಕಾರ್ ಡಿ. ಚನ್ನಬಸಪ್ಪಶೆಟ್ಟರ ಮಕ್ಕಳ ಬಾಬ್ತು ಮಡಿಕೇರಿಯಲ್ಲಿರುವ ಒಂದು ದೊಡ್ಡ ಬಂಗ್ಲೆ, ಒಂದು ಚಿಕ್ಕ ಬಂಗ್ಲೆ, ಗ್ಯಾರೇಜ್, ಆಳುಗಳಮನೆ ಕುದುರೆ ಲಾಯ, ದನದ ಕೊಟ್ಟಿಗೆ, ಹಣ್ಣಿನ ಮತ್ತು ಸೊಗಸಾದ ಕಾಂಪೌಂಡ್ ಮಾರಾಟಕ್ಕಿದೆ. ಹೆಚ್ಚಿಗೆ ವಿಷಯ ತಿಳಿಯಲಪೇಕ್ಷಿಸುವವರು ಎಂ. ಎನ್. ವೆಂಕಪ್ಪಯ್ಯ ಬಿ. ಎ. ಬಿ. ಎಲ್., ವಕೀಲ್, ಮಡಿಕೇರಿ, ಇವರಿಗೆ ಬರೆದು ತಿಳಿದುಕೊಳ್ಳತಕ್ಕದ್ದು. 4—3

## ಏಕೆ ನರಳುತ್ತೀರಿ?

ಪ್ರಾಚೀನ ಋಷಿಗಳಿಂದ ಪ್ರಣೀತವಾದ ಆಯುರಾರೋಗ್ಯಪುಷ್ಟಿವರ್ಧಕವಾದ ಆರೋಗ್ಯವಿಧಿಗಳನ್ನು ತಿಳಿಯದೆ ಅಜ್ಞಾನಾಂಧಕಾರದಲ್ಲಿ ಮುಳುಗಿ ಅನೇಕ ತರಹೆಗಳವ್ಯಾಧಿಗಳಿಂದ ಏಕೆ ನರಳುವಿರಿ?

**ಕ್ರಯವು! ಇಲ್ಲದೆ!!**

ಉಚಿತವಾಗಿ ಕೊಡಲ್ಪಡುವ ನಮ್ಮ

ನಮ್ಮ ಔಷಧಿಗಳನ್ನು ವಿಕ್ರಿ ಮಾಡುವದಕ್ಕೆ

### ವೈದ್ಯವಿದ್ಯೆ

ಏಜಂಟರು ಬೇಕಾಗಿರುವದು.

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52—1

ರಾಜವೈದ್ಯ ನಾರಾಯಣಜಿ ಕೇಶವಜಿ,
1/91 ಜೈನ ಬಜಾರು ರೋಡು ಮದ್ರಾಸು
N. B.— ವೈದ್ಯಸಲಹೆಯು ಶುಲ್ಕವಿಲ್ಲದೆ ಕೊಡಲಾಗುವದು

## ನೀವು ನಿರ್ಬಲಸ್ತರಾಗಿ ಯಾಕೆ ನರಳುವಿರಿ?

ಇಪ್ಪತ್ತು ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

### ಸಾಲಂಮಿಸ್ರಿ ಮುರಬ್ಬ



ಸೇವನೆಯಿಂದ ಎಂಥಾ ಧಾತು ಜನ್ಯವಿಕಾರಗಳನ್ನೂ, ನರಗಳ ಶಕ್ತಿ ಕುಂದಿಹೋಗಿರುವದನ್ನೂ ಮದುಳಿನ ಬಲಹೀನತೆಯನ್ನೂ ಇಂಥಾ ರೋಗಗಳನ್ನೆಲ್ಲಾ ಯುಕ್ತಿಯಿಂದ ಹೋಗಲಾಡಿಸುವದಕ್ಕೆ ತನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸುತ್ತದೆ. ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ಮಹನೀಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ಯಾರೂ ಪರಿಶೀಲಿಸಿ ನೋಡಬಹುದು. ಒಂದು ಡಬ್ಬಿ ೧೫ ದಿನಗಳ ಸೇವನೆಯಿಂದಲೇ ಇದರ ಗುಣವು ತೋರಿಬರುವುದು. ೨-೩ ಡಬ್ಬಿಗಳ ಸೇವನೆಯಿಂದ ಜನ್ಮಾಂತ್ಯದವರಿಗೂ ಸಂಪೂರ್ಣ ಗುಣವನ್ನುಂಟುಮಾಡುವದು ನಮ್ಮ ಟ್ರೇಡ್ ಮಾರ್ಕು ನೋಡಿ ಡಬ್ಬಿ ತೆಗೆದುಕೊಳ್ಳಿರಿ. ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಅವಶ್ಯಕವಿರುತ್ತೆ.

ಕ್ರಯ ಡಬ್ಬಿ ೧ಕ್ಕೆ ೨—೦—೦. ಟಪಾಲು ಖರ್ಚು ೧ರಿಂದ ೩ ಡಬ್ಬಿಗಳ ವರೆಗೆ ೦—೮—೦.

**ಡಿ. ಮನ್ನಾಲಾಲ್,**
ಡೆಲ್ಲಿ ನೇಟೀವ್ ಡಾಕ್ಟರು, ಸಾಲಂಮಿಸ್ರಿ ಮುರಬ್ಬ ಫಾರ್ಮಸಿ, ಬೆಂಗಳೂರು ಸಿಟಿ.

12—3

# ವರ್ತಮಾನ ಸಂಗ್ರಹ.

## ಒಳದೇಶ

ಫ್ರೇಜರ್ ಪೇಟೆ ಮಲ್ಲಿ ನರ್ಸ ಸ್ಕೂಲನ್ನು ಆಗೊಸ್ತು 6 ನೇ ತಾರೀಖಿನಿಂದ ತೆರೆಯುವರೆಂದು ತಿಳಿಯುತ್ತೇವೆ.

ಕಿತ್ತೂರು ಗ್ರಾಮದ ಮೆ. ಕೆ. ಮಲ್ಲಪ್ಪನವರು ಬಿ. ಎ. ಪರೀಕ್ಷೆಯಲ್ಲಿ ಪಾಸಾಗಿರುತ್ತಾರೆಂತ ತಿಳಿಯಲು ಸಂತೋಷ ಪಡುತ್ತೇವೆ.

ಕಲ್ಕತ್ತಾದಲ್ಲಿ ಆಯುರ್ವೇದ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಮೆ. ಮಂಡೇಟಿರ ಎ ಚಂಗಪ್ಪನವರನ್ನು ಅಷ್ಟಾಂಗ ಆಯುರ್ವೇದಿಕ ಕಾಲೇಜಿನ ಹೌಸ್ ಸರ್ಜನರಾಗಿ ನೇಮಿಸಿದ್ದಾರೆಂದು ತಿಳಿಯಲು ಸಂತೋಷ ಪಡುತ್ತೇವೆ.

ಕೊಡ್ಲಿಪೇಟೆ ಕಲ್ಲುಮಠದ ಶ್ರೀ ಚರಮೂರ್ತಿ ಸ್ವಾಮೀ ಮಹೇಶ್ವರ ಸ್ವಾಮಿಗಳವರು ತಾ. 21—7—28ರಲ್ಲಿ ಶಿವಾಧೀನರಾದರೆಂತ ತಿಳಿಸಲು ವಿಷಾದಿಸುತ್ತೇವೆ.

ಈ ವಾರ ಮಡಿಕೇರಿಯಲ್ಲಿ ಮಳೆಯು ಹೆಚ್ಚೆಂದೇ ಹೇಳಬಹುದು. ತಾರೀಖು 28 ರಿಂದ ಇಂದಿನ ವರೆಗೆ ಒಟ್ಟು 11 ಇಂಚು 27 ಸೆಂಟು ಮಳೆಯಾಗಿದೆ, ಅದರಲ್ಲಿ 2 ನೇ ತಾರೀಖಿನಲ್ಲಿ 4. 87 ಇಂಚು ಮಳೆ ಬಿದ್ದಿದೆ.

ಸ್ಪೆಶಿಯಲ್ ಟೆಸ್ಟ್ ಪರೀಕ್ಷೆಯಲ್ಲಿ ಮೆ. ಗಳಾದ ಅರೆಯಂಡ ಕುಶಾಲಪ್ಪನವರು, ಪಟ್ಟಮಾಡ ಮಂದಪ್ಪನವರು, ವೆಂಕಟರಾಮೈಯ್ಯರವರು, ಶ್ರೀನಿವಾಸರಾವ್‌ರವರು, ಕೋಡಿರ ಮಂದಣ್ಣನವರು, ನಾಣಮಂಡ ಉತ್ತಯ್ಯನವರು, ಕಾಂತ್ರಾಡ ಪೊನ್ನಪ್ಪನವರು, ಮತ್ತು ಯಂ. ಎನ್. ಗುಂಡುರಾಯರು. ತೇರ್ಗಡೆಯಾಗಿರುವರೆಂದು ತಿಳಿಯುತ್ತೇವೆ.

ಇಂಡಿಯನ್ ಸಿವಿಲ್ ಸರ್ವಿಸ್ ಸ್ಪರ್ಧೆ ಪರೀಕ್ಷೆಯು 1929ನೇ ಇಸವಿ ಜನವರಿ ತಿಂಗಳು 3ನೇ ತಾರೀಖಿನಲ್ಲಿ ಡೆಲ್ಲಿಯಲ್ಲಿ ನಡೆಯುವುದೆಂದೂ ಅದಕ್ಕೆ ಪ್ರವೇಶಿಸಲಿಚ್ಛಿಸುವವರು 21 ವರ್ಷ ಪ್ರಾಯಸ್ಥರಾಗಿಯೂ, ಇಲ್ಲವೇ ಆ ವರ್ಷದ ಜನವರಿ ಒಂದನೇ ತಾರೀಕಿಗೆ 23 ವಯಸ್ಸಿಗೆ ಮೀರದಿರಬೇಕೆಂದ ಸಿವಿಲ್ ಪರೀಕ್ಷೆ ನೋಟೀಸಿನಲ್ಲಿ ಪ್ರಕಟವಾಗಿದೆ.

ಮಡಿಕೇರಿ ಹೈಸ್ಕೂಲ ಹೆಡ್‌ಮಾಸ್ಟರಾದ ಮೆ. ಪಿ ಮಂಗೇಶರಾಯರು ತಾ. 1—8—28ರಲ್ಲಿ ರಜೆಯಲ್ಲಿ ಹೋದರು. ಇವರ ಬದಲಿಗೆ ಯಾರನ್ನು ನೇಮಿಸುತ್ತಾರೆಂಬುದು ಗೊತ್ತಿಲ್ಲ. ಇವರು ಇನ್ನು ಪುನಃ ಕೆಲಸಕ್ಕೆ ಸೇರದೆ ರಿಟೈರ್ ಆಗುತ್ತಾರೆ. 1ನೇ ತಾರೀಕಿನಲ್ಲಿ ಇವರಿಗೆ ಹೈಸ್ಕೂಲ್ ಮಾಸ್ಟರುಗಳು ತಿಂಡಿ ತೀರ್ಥದಿಂದ ಸತ್ಕರಿಸಿದರು.

ಮಡಿಕೇರಿ ಸಮೀಪ ಮೇಕೇರಿ ಗ್ರಾಮದ ಸೂಡನ ಗಣಪತಿಯವರ ಸುಮಾರು ಏಳು ವರ್ಷ ಪ್ರಾಯದ ಮಗಳು ಗದ್ದೆಯಿಂದ ಮನೆಗೆ ಒಬ್ಬಳೇ ಹೋಗುವಾಗ ಕಾಟಕೇರಿ ಹೊಳೆಯ ಪಾಲ ದಾಟುತ್ತಿದ್ದ ವೇಳೆ ಕಾಲು ಜಾರಿಬಿದ್ದು ಹೊಳೆ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿ ಶ್ರವವು ಮೂರು ದಿನದ ಮೇಲೆ ಸಿಕ್ಕಿತು. ಸಾಯಂಕಾಲ ತಂದೆ ತಾಯಿಗಳು ಮನೆಗೆ ಬರುವಾಗ ಮಧ್ಯಾಹ್ನವೇ ಹೊರಟ ಮಗಳು ಮನೆಗೆ ಬಂದಿಲ್ಲವೆಂತ ಗೊತ್ತಾಯಿತು.

## ಹಿಂದೂದೇಶ.

ಲೀಗ್ ಆಫ್ ನೇಶನ್ಸಿಗೆ ಇಂಡಿಯಾದ ಸದಸ್ಯರಾಗಿ ಚುನಾಯಿಸಲ್ಪಟ್ಟಿರುವ ಸರ್. ಕೆ. ವಿ. ರೆಡ್ಡಿಯವರು, ಕಳೆದ ತಿಂಗಳ ಅಖೈರಿನಲ್ಲಿ ಜೀನಿವಾಕ್ಕೆ ಹೋದರು.

ಮೈಸೂರಿನ ಪತ್ನಿಯವರು ನ್ಯೂ ಡೆಲ್ಲಿಯಲ್ಲಿ ಕ್ರಿಶ್ಚಿಯನ್ ದಂಪತಿಯರ ಹಾಸ್ಪಿಟಲಿಗೋಸ್ಕರ 75,000 ರೂ. ಗಳ ಸಹಾಯ ಮಾಡಲು, ಅಲ್ಲಿಯ ಜನರನ್ನು ಕೇಳಿಕೊಂಡಿರುತ್ತಾರೆ.

ಬಂಗಾಳದ ಮಂತ್ರಿಯಾಗಿದ್ದ ಸರ್ ಪಿ. ಸಿ. ಮಿತ್ರರವರು ಎಗ್ಸಿಕ್ಯುಟಿವ್ ಕೌನ್ಸಿಲರಾಗಿ ನೇಮಿಸಲ್ಪಟ್ಟದ್ದರಿಂದ ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟಿದ್ದನ್ನು ಗವರ್ನರವರು ಅಂಗೀಕರಿಸಿದ್ದಾರೆಂದು ತಿಳಿದು ಬರುತ್ತದೆ.

ಕಾನ್‌ಪೂರಿನಲ್ಲಿ ಮೋಸದಿಂದ ನಾಣ್ಯಗಳನ್ನು ಮಾಡಿದ ಹೀರಾ ಮತ್ತು ಅವನ ಹೆಂಡತಿಯನ್ನು ಪೋಲೀಸಿನವರು ದಸ್ತಗಿರಿ ಮಾಡಿರುವರು. ನಾಣ್ಯಗಳನ್ನು ಮಾಡುವ ಬಟ್ಟೆಯೋಗಿತ್ತಿದ್ದ ಸಾಮಾನುಗಳು ಕೂಡ ಪೋಲೀಸು ವಶವಾಯಿತೆಂದು ತಿಳಿಯುತ್ತದೆ.

ಆಫ್ಘಾನಿಸ್ತಾನದಲ್ಲಿ ನಡೆಯುವ ಅಖಿಲ ಸಾಮ್ರಾಜ್ಯ ಪಾರ್ಲಿಮೆಂಟ್ ಸಭೆಗೆ ಮದ್ರಾಸಿನಿಂದ ಮೆ. ಜಿ. ಎ. ನಟೇಶನ್‌ರವರು ಚುನಾಯಿಸಿದ ಕಾರಣ ಅವರು ಕಳೆದ ತಿಂಗಳ 24 ನೇ ತಾರೀಖಿನಲ್ಲಿ ಬೊಂಬಾಯಿ ಮಾರ್ಗವಾಗಿ ಹೊರಟಿರುವರೆಂದು ತಿಳಿಯುತ್ತದೆ.

ಬಾಬುಲಾಲ್ ಜಮೂರ್ ಎಂಬಾತನು ಕಲ್ಕತ್ತಾದಲ್ಲಿ ಒಬ್ಬ ಮಾರ್‌ವಾಡಿ ವ್ಯಾಪಾರಸ್ಥನ ಜೇಬಿನಿಂದ 32,000 ರೂಪಾಯಿಗಳನ್ನು ಕದ್ದು, ತನ್ನ ಸಂಗಾತಿಯ ಕೈಗೆಕೊಟ್ಟು ಪಟ್ಟಿನ ಮೆಟ್ಟಿಲಿನ ಮೇಲೆ ಪೋಲೀಸಿನವರು ಅವನನ್ನು ದಸ್ತಗಿರಿ ಮಾಡಿರುವರೆಂದು ತಿಳಿಯುತ್ತದೆ.

ಕಳೆದ ತಿಂಗಳ 30 ನೇ ತಾರೀಖಿನ ರಾತ್ರಿ, ಮದ್ರಾಸಿನ ಮೈಲಾಪುರ ಎಂಬಲ್ಲಿ, ಬೆಂಕಿಯ ಅನಾಹುತದಿಂದ, ಸುಮಾರು 200 ಹುಲ್ಲು ಮನೆಗಳು ಭಸ್ಮವಾಗಿ 900 ಜನರಿಗೆ ಮನೆ ಮಠಗಳಿಲ್ಲದೆ ಸುಮಾರು 15,000 ರೂಪಾಯಿಗಳ ಬೆಲೆ ಬಾಳುವ ಆಸ್ತಿಯು ನಷ್ಟವಾಗಿದೆಯೆಂದು ತಿಳಿಯುತ್ತದೆ.

ನ್ಯೂ ಡೆಲ್ಲಿಯ ಮುನಿಸಿಪಾಲಿಟಿಯವರು ಪಟ್ಟಣದ ಹಂಗಿಗೆ ಅಟೆಂಡರುಗಳ ಕೆಲಸಕ್ಕಾಗಿ ಸುಮಾರು 2,900 ರೂ. ಗಳನ್ನು ಖರ್ಚುಮಾಡಿ ಪ್ಲೈಡರನ್ನು ಏರ್ಪಡಿಸಲು ಪರ್ಯಾಲೋಚಿಸುತ್ತಿರುವರು. ಈ ಮುನಿಸಿಪಾಲಿಟಿಯವರು, ಒಂದು ಯಂತ್ರದ ರಾತೆಯ ಅಭಿವೃದ್ಧಿಗೋಸ್ಕರ 11,200 ರೂಪಾಯಿಗಳನ್ನು ಕೊಟ್ಟಿರುವರೆಂದು ತಿಳಿಯುತ್ತದೆ.

ಮಹಾತ್ಮಾ ಗಾಂಧಿಯವರು ಬಾರ್ಡೋಲಿ ಸತ್ಯಾಗ್ರಹದ ಸ್ಥಿತಿಯನ್ನು ನೋಡುವುದಕ್ಕೆ ಬಾರ್ಡೋಲಿಗೆ ಪದ್ಧತಿಯಲ್ಲಿ ಹೊರಟರು. ಇದರಿಂದ ವಲ್ಲಭಾಯಿ ಪಟೇಲರನ್ನು ಜೈಲಿಗೆ ಕಳಿಸುವ ಸಂದರ್ಭ ಬರುವ ವೇಳೆಗೆ ತಾವು ಬಾರ್ಡೋಲಿಯಲ್ಲಿನ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವುದು ಮೇಲೆಂದೂ ಮತ್ತು ಸರಕಾರದವರು ಅಪಾಯ ದಾರಿಯಲ್ಲಿಲ್ಲ ಹರಡಿದೆಯೆಂದು ತಿಳಿಯುತ್ತದೆ.

ಬಾರ್ಡೋಲಿ ಸತ್ಯಾಗ್ರಹವನ್ನು ಈ ನೆಲಗಾರರು ಸರಿಯಾಗಿ ನಡೆಸುತ್ತಿದ್ದಾರೆ. ಸರಕಾರದವರ ಶಕ್ತಿಯ ಪ್ರಕಾರ ಹೆಚ್ಚಿನ ಕಂದಾಯವನ್ನು ವಿಚಾರಣೆಗೆ ಬೇಡದೇ ರಂಗನಾಥ ಇವರೇ ಕೆಂಬ ಶರತ್ತಿಗನುಸಾರವಾಗಿ, ಬಾರ್ಡೋಲಿಯ ಜಮೀನುದಾರರಾದ ರಾಮಚಂದ್ರ ಭಟ್ಟ ಎಂಬಾತರು ಈ ದಾವೆಯನ್ನು ಸರಕಾರದವರಲ್ಲಿ ಕೊಡುತ್ತೇನೆಂದು ತಿಳಿಸುವರು. ಅವರ ಸತ್ಯಾಗ್ರಹಿಗಳು ಎದ್ದು ನನ್ನ ತಪ್ಪಿಲ್ಲವೆಂದು ತಿಳಿಯುತ್ತದೆ.

ವಲ್ಲಭಾಯಿ ಪಟೇಲರು, ಗುಜರಾತಿನ ಪತೀದಾರ ಜಾತಿಗೆ ಸೇರಿದವರು, ಇವರ ಕುಲದವರು ಸರ್ ಆಫ್ರಿಕಾದಲ್ಲಿ ಜೋಸೆಫ್ ಬರ್ಗ್ ಎಂಬಲ್ಲಿ ವಾಸಿಸುತ್ತಿರುವರು. ಇವರು, ಗವರ್ನರವರು ಬೊಂಬಾಯಿ ಕೌನ್ಸಿಲಿನಲ್ಲಿ ಮಾಡಿದ ಬಾಷಣವು ಭಾರತ ದೇಶಕ್ಕೆ ಅವಮಾನವೆಂದೂ ವಲ್ಲಭಾಯಿಯವರ ಸ್ವರ್ಗಾರೋಹಣವು ಸ್ಮರಣಾರ್ಹವಾಗಿದೆಯೆಂದೂ, ಅಧಿಕಾರಿಗಳು ತಂತಿ ವರ್ತಮಾನವನ್ನು ಬಾರ್ಡೋಲಿಯ ಪ್ರಮುಖರಾದ ವಲ್ಲಭಾಯಿ ಪಟೇಲರಿಗೆ ಕಳುಹಿಸಿರುವರು.

ಈ ವರ್ಷದ ಕಾಂಗ್ರೆಸ್ ಅಧ್ಯಕ್ಷಪದವಿಗೆ ಶ್ರೀಯುತ ಮೋತಿಲಾಲ್ ನೇಹರುವವರೇ ಅಧ್ಯಕ್ಷರಾಗಬೇಕೆಂದೂ, ಅವರ ಪುತ್ರರಾದ ಜವಾಹಿರಲಾಲ್ ನೆಹರುರವರು ಯುವಕರಿಂದ ಇನ್ನೂ ಕಾಯಬಹುದೆಂದೂ, ವಲ್ಲಭಾಯಿ ಪಟೇಲರು ಬಾರ್ಡೋಲಿಯನ್ನು ಬಿಟ್ಟು ಬರಲು ಸಾಧ್ಯವಿಲ್ಲದ್ದರಿಂದಲೂ ಇವರನ್ನು ಎಂದಾದರೂ ಸರಕಾರದವರು ದಸ್ತಗಿರಿಮಾಡಬಹುದಾದ್ದರಿಂದಲೂ ಅವರು ಈ ವರ್ಷ ಕಾಂಗ್ರೆಸ್ ಅಧ್ಯಕ್ಷರಾಗಲು ಸಾಧ್ಯವಿಲ್ಲವೆಂತಲೂ ಮಹಾತ್ಮಾ ಗಾಂಧಿಯವರು ಅಭಿಪ್ರಾಯಪಟ್ಟಿರುತ್ತಾರೆ.

ಅಲಹಾಬಾದ್ ಸ್ಟೇಶನಿನಲ್ಲಿ ವಿಶ್ವೇಶ್ವರನಾಥ ಶರ್ಮ ಎಂಬ ವಿಶುತ್ತಿನ ವೈದ್ಯನು ತನ್ನ ಕಡೆ ಒಂದು ಪೆಟ್ಟಿಗೆಯನ್ನು ತೆಗೆದುಕೊಂಡು ಹೋಗುತ್ತಿದ್ದನು. ದುರ್ಗಂಧವು ಪೆಟ್ಟಿಗೆಯಿಂದ ಹೊರಡುತ್ತಿರುವ ಗುಮಾನಿಯ ಮೇಲೆ, ಪೋಲೀಸಿನವರು ಅವನನ್ನು ನಿಲ್ಲಿಸಿ ಪೆಟ್ಟಿಗೆ ತೆರೆದು ನೋಡಲು ಅದರಲ್ಲಿ ಅಂಗಗಳಿಲ್ಲದ ಎರಡು ಭಾಗವಾಗಿದ್ದ ಮನುಷ್ಯ ದೇಹವನ್ನೂ, ಇನ್ನೊಂದು ಗಂಟಿನಲ್ಲಿ ರುಂಡವನ್ನೂ ಕಂಡರು. ಅದು ದುರಂದ, ಕೊಲೆಪಾತಕನು ಇವನೇ ವೈದ್ಯನೆಂದು ಭಾವಿಸಿ, ದಸ್ತಗಿರಿ ಮಾಡಿರುವರೆಂದು ತಿಳಿಯುತ್ತದೆ. ಮೃತನು 18 ವರ್ಷ ಪ್ರಾಯದ ಹುಡುಗನೆಂದು ತಿಳಿದು ಬಂದಿದೆ. ಪೋಲೀಸಿನವರು ಇನ್ನೂ ವಿಚಾರಣೆ ನಡೆಸುತ್ತಲಿದ್ದಾರೆ.

ಬೆಂಗಳೂರು ಸುಲ್ತಾನ್ ಪೇಟೆಯಲ್ಲಿ ವಿದ್ಯಾರ್ಥಿಗಳು ಪೂಜಿಸುತ್ತಿದ್ದ ಒಂದು ಗಣಪತಿ ವಿಗ್ರಹವನ್ನು ಮುನಿಸಿಪಾಲ್ ಪ್ರೆಸಿಡೆಂಟರ ಅಪೇಕ್ಷೆಯ ಮೇರೆ ಶಾಲಾಧಿಕಾರಿಗಳು ತೆಗಿಸಿದರು. ವಿದ್ಯಾರ್ಥಿಗಳು ಸಿಟ್ಟಿದ್ದು ಸತ್ಯಾಗ್ರಹ ನಡೆಸುತ್ತಿದ್ದರು. ಈ ಸಂಬಂಧವಾಗಿ ಮೂರು ಜನರು ದಸ್ತಗಿರಿ ಮಾಡಲ್ಪಟ್ಟರು. ತಾ. 30 ರಲ್ಲಿ ವಿದ್ಯಾರ್ಥಿಗಳೂ ಇತರ ಜನರೂ ಸೇರಿ ಗುಂಪು ಗುಂಪಾಗಿ ದಿವಾನರ ಮನೆಗೂ, ಜೈಲಿಗೂ, ದಿವಾನರ ಆಫೀಸಿಗೂ ಮುತ್ತಿಕೊಂಡಿದ್ದರು. ದಿವಾನರು ಕೊಡಿದ್ದ ಕಾಂರಿಗೆ ಕಲ್ಲು ಬಿತ್ತು. ಈ ಗುಂಪನ್ನು ಚದರಿಸಲಿಕ್ಕೆ ಕುದುರೆ ಸವಾರರು ಬಂದರು ಕೆಲವರಿಗೆ ಘಾಯವಾಯಿತು. ಕುದುರೆ ಸವಾರನೊಬ್ಬನಿಗೆ ಕಲ್ಲು ತಗಲಿ ಬಿದ್ದನು. ಅಂತು ಸಾಯಂಕಾಲದ ಸಮಯಕ್ಕೆ ಗುಂಪಿನ ಹೀಗೆ ಚದುರಿತು. ದಸ್ತಗಿರಿಯೂ ದವರನ್ನು ಬಿಟ್ಟರು. ಇವರನ್ನು ಬರಮಾಡಿ ಮೆರವಣಿಗೆಯಿಂದ ಕರೆದುಕೊಂಡು ಹೋದರು. ರಾತ್ರಿ ಅದೇ ಗಣಪತಿ ವಿಗ್ರಹಕ್ಕೆ ಪೂಜೆಯಾಗಿ ಗುಂಪು ಹೊರಡುವ ಸಮಯದಲ್ಲಿ ಎದುರು ಮನೆಯಿಂದ ಯಾರೋ ಗುಂಡು ಹೊಡೆದರು. ಅಲ್ಲಿಂದಲೇ ಬಡಿಗೆ ದೊಣ್ಣೆ ಹಿಡಿದ ಮುಸಲ್ಮಾನರು ಹೊರಬಂದು ಹಿಂದುಗಳನ್ನು ಹೊಡೆದರು. 80—90 ಜನರಿಗೆ ಘಾಯವಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟಿದ್ದಾರೆ. ಇವರಲ್ಲಿ ಹೆಚ್ಚಿನವರು ಹಿಂದುಗಳು ಕುದುರೆ ಸವಾರರು ಒಂದು ಗುಂಪುಗಳನ್ನು ಚದರಿಸಿ ರಸ್ತೆಗಳಲ್ಲೆಲ್ಲಾ ಪಹರೆಯಲ್ಲಿದ್ದಾರೆ.

## ವಿದೇಶ.

ಲಾರ್ಡ್ ಇಂಚ್ ಕೇಪರವರು ಅಟ್ಲಾಂಟಿಕ್ ಸಾಗರವನ್ನು ವಿಮಾನದಲ್ಲಿ ದಾಟಲೆತ್ನಿಸಿ ಅನಾಹುತಗಳಿಗೆ ಒಳಗಾಗುವವರ ಸಹಾಯಾರ್ಥವಾಗಿ 10,000 ಸವರನ್‌ಗಳನ್ನು ಕೊಟ್ಟಿರುತ್ತಾರೆ.

ಬರ್ಲಿನ್ ಪಟ್ಟಣದಲ್ಲಿ ಎರಡು ರೈಲುಗಾಡಿಗಳು ಒಂದೇ ರಸ್ತೆಯಲ್ಲಿ ಎದುರುಬದರಾಗಿ ಬಂದು ಡಿಕ್ಕಿ ಹೊಡೆದು ಅದರೊಳಗಿದ್ದ 14 ಪ್ರಯಾಣಿಕರು ಮೃತರಾದರೆಂದೂ, 20 ಜನರು ಘಾಯಪಟ್ಟರೆಂದೂ ತಿಳಿಯುತ್ತದೆ.

ಇಟಲಿಯ "ಪಂಟೆಗ್ಲಿಯೋ" ಎಂಬ ಹಡಗಿನಲ್ಲಿ ಹೋದ ನಾವಿಕರು, ಸಮುದ್ರದೊಳಗೆ ಮುಳುಗಿ ಬಿದ್ದಿರುವ ಬ್ರಿಟಿಷರ, "ಎಲಿಜಬೆತ್" ಎಂಬ ಸ್ಟೀಮರು ಮುಳುಗಿದ ಕಾಲದಲ್ಲಿ ಕಳೆದು ಹೋಗಿದ್ದ ಒಂದು ದೊಡ್ಡ ಪೆಟ್ಟಿಗೆಯನ್ನು ಹೊರಕ್ಕೆ ತೆಗೆದಿರುವರು. ಇದರೊಳಗೆ 50 ಮಿಲಿಯನ್ ಫ್ರಾಂಕ್ ಬೆಲೆ ಬಾಳುವ, ವಜ್ರಗಳೂ ಮತ್ತು ಅಮೂಲ್ಯವಾದ ರತ್ನಗಳೂ ಇದ್ದವೆಂದು ತಿಳಿದು ಬಂದಿದೆ.


### ರಬ್ಬರ್ ಸ್ಪ್ರಿಂಗ್ ಇನಾಂ.

### ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚುಗಳು.

ಈ ಚಿತ್ರದಲ್ಲಿ ತಾಣದ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಟ್ಜರ್‌ಲೇಂಡ್) ತಯಾರಿಸಿದೆ. ಬಂಗಾರು ಗುಣವನ್ನು ತೋರಿಸುವವು. ಇದರ ಕೇಸು ಬಂಗಾರಕ್ಕೆ ಸಮಾನವಾಗಿರುವುದು. ಇದಕ್ಕೆ ನಾವು 5 ವರ್ಷ ಗ್ಯಾರಂಟಿ ಕೊಡುತ್ತೇವೆ. ಈ ವಾಚ್ 12 ಈ ಚಿತ್ರದಲ್ಲಿ ತೋರುವ ಇತರ ವಸ್ತುಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ಒಬ್ಬರಿಗೆ ಸ್ಥಳ ವಿಳಾಸ, ಪೋಸ್ಟು ಮುಂತಾದವುಗಳನ್ನು ಸ್ಫುಟವಾಗಿ ಬರೆದು ಹೊಸ ನಮೂನೆಯ ರಬ್ಬರ್ ಸ್ಪ್ರಿಂಗನ್ನು ಇನಾಮ್ ಪ್ಯಾಡ್ ಸಹಿತ ಇನಾಮಾಗಿ ಕೊಡುವೆವು.

ಕ್ರಯ ರಿಸ್ಟ್ ವಾಚ್ 1ಕ್ಕೆ 6—4—0.

ವಿಳಾಸ — ಲೀಗಲ್ ಟ್ರೇಡಿಂಗ್ ಕಂಪೆನಿ,

ಪೋ. ಬಾ. ನಂ. 243

52—11 ಮದರಾಸು.

### ಗೆಜ್ಜೆ ಕಟ್ಟಿದ ಬಂಗಾರದ ಕಾಲು ಉಂಗುರ.



ಇವನ್ನು ಸೀಮೆಯ ರೋಲ್ಡ್ ಗೋಲ್ಡ್ ಬಂಗಾರದಿಂದ ಮಾಡಿ ಬಂಗಾರದಂತೆ ಥಳಗಾಯಿಸಿ ಮಾಡಿದೆ. 150 ಗೆಜ್ಜೆಗಳನ್ನು ಕಟ್ಟಿದೆ. ನೋಡಲು ಬಹು ಅಂದವಾಗಿದೆ. ಹಾಕಲು ತೆಗೆಯಲೂ ಕಷ್ಟವಿಲ್ಲ. ಒಂದು ಜೊತೆ ಇದ್ದರೆ ಮನೆಯವರೆಲ್ಲರೂ ಉಪಯೋಗಿಸಬಹುದು. ಬಣ್ಣ ಹೋಗದು. ಕ್ರಯ 1ಕ್ಕೆ 4—8—0.

7 ಕಲ್ಲಿನ ಬೆಂಡೋಲೆ ಜೊತೆ 1ಕ್ಕೆ 1—8—0 ಬಂಗಾರದ ಸಂಕೋಲೆ ಪದಕ ಸಹಿತ 1—1—0 ಅರ್ಧ ಸವರನ್ ಗಾತ್ರ ಉಂಗುರ 1ಕ್ಕೆ 8—12—0

### ಬೆಸ್ಟ್ ರೇಜರ್.



ಇದು ಸೀಮೆಯಲ್ಲಿ ತಯಾರಾದ ಸ್ಟೀಲ್ ಎಂಬ ಲೋಹದಿಂದ ತಯಾರಿಸಿದ್ದು. ಕಪ್ಪು ಮತ್ತು ಬಿಳಿಯ ದಂತದ ಹಿಡಿಯು ಇದೆ. ರೂ. 2—4—0 ತಲೆಯ ಕೂದಲನ್ನು ಕತ್ತರಿಸುವ ಮಿಷೀನ್ 1ಕ್ಕೆ 5—3—0.

ವಿಳಾಸ — The Legal Trading Co

52—11 P B No 243 Madras


## ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಮಂದನೀಪ್ರಾಂತದವರಿಗೆ ತಿರಸ್ಕರಿಸಲ್ಪಟ್ಟ ಬಾತ್ಮಿಗಳು ನಮ್ಮ ಘನಮಾತ್ರದ ದಾವೆಯ ಕೆಲಸದ ಬಗ್ಗೆ ಸಕಾರಣವೆನಿಸಿದ್ದ ಇಲ್ಲಿ ಪ್ರಕಟಿಸಲ್ಪಟ್ಟಿದೆ.

"ಸೇಗ್ರಾಮುಸ್ತ"ರ ಮತ್ತು "ಸಂಘದಲ್ಲಿ ಕುಳಿತು ದಪ"ರ ಬಾತ್ಮಿಗಳಲ್ಲಿ, ವ್ಯಕ್ತಿದೂಷಣೆಗಳು ಪ್ರಧಾನವಾಗಿರುವುದರಿಂದ ಪ್ರಕಟಿಸಲಿಲ್ಲ.

ಕೊ. ಸಂ.

### ಕೀಳು ಮೇಲು.

ಮ ರಾ॥ ಮುತ್ತಣ್ಣನವರೇ,

ನೀವು ತಾ. 27—7—28ರ 'ಕೊಡಗು' ಪತ್ರದಲ್ಲಿ ಕೊಡವರನ್ನು ಕುರಿತು ಬರೆದ ವಿನಂತಿಯನ್ನು ನೋಡಿದೆನು. ಆ ಬಾತ್ಮಿಯು ಸಾಮಾನ್ಯವಾಗಿ ಕೊಡವರನ್ನೂ, ಕೊಡವರಲ್ಲದ ಇತರ ಎಲ್ಲಾ ಜಾತಿಗಳ ಜನರನ್ನೂ ಸಿಟ್ಟಿಗೇಳಿಸುವಂತಾದ್ದಾಗಿದೆ. ನೀವೇನೂ ನಿಮಗೆ ಮನೋವ್ಯಾಕುಲ್ಯವುಂಟಾದಾಗ ಆ ಲೇಖನವನ್ನು ಬರೆದಿರಿ. ಆದರೆ ಬರೆದ ಮೇಲಾದರೂ ಇದರ ಪರಿಣಾಮವನ್ನು ಕುರಿತು ಆಲೋಚಿಸಬೇಕಾಗಿತ್ತು. ನಿಮ್ಮ ಲೇಖನವು ನ್ಯೂನತೆಗಳಿಂದ ಕೂಡಿದ್ದರೂ, ಅದರಲ್ಲಿ ಉಚ್ಚ ಭಾವನೆ ಇವೆ. ನಿಮ್ಮ ಜನರನ್ನು ನೀತಿವಂತರನ್ನಾಗಿ ಮಾಡಲೆತ್ನಿಸಿರುವ ನಿಮ್ಮ ಪ್ರಯತ್ನಕ್ಕೆ ಮಂಗಳವಾಗಲಿ. ಆದರೆ ಈ ಸಂದರ್ಭದಲ್ಲಿ ನಾನು ಒಂದೆರಡು ನುಡಿಗಳನ್ನು ತಮ್ಮ ಮುಂದೆ ಇಡಬೇಕೆಂದಿದ್ದೇನೆ. ಇಂಥಾ ಚಳವಳವು ಬಹಿರಂಗವಾಗಿ ನಡಿಯದೆ ಗುಪ್ತರೀತಿಯಿಂದ ನಡಿಯುತ್ತಿದ್ದೆಂದು ನಾನು ಮೊದಲಾಗಿ ನಿಮಗೆ ಹೇಳತಕ್ಕ ಮಾತಾಗಿದೆ.

ನಿಮ್ಮ ಜನರು ಅಪವಿತ್ರ ಪ್ರಾಣಿಗಳನ್ನು ತಿನ್ನುವುದರಿಂದ ಇತರ ಜನರು ನಿಮ್ಮನ್ನು ಅಪಹಾಸ್ಯ ಮಾಡುತ್ತಾರೆಂದೂ, ಇಂತಹ ಅಪಹಾಸ್ಯದಿಂದ ನಿಮ್ಮ ಜನರು ತಪ್ಪಿಸಿಕೊಳ್ಳಬೇಕಾದರೆ ಅಂಥಾ ಪ್ರಾಣಿಗಳನ್ನು ಅವರು ತಿನ್ನಬಾರದೆಂದೂ ನಿಮ್ಮ ವಿನಂತಿಯಿರುತ್ತಾ ವೈಶ್ಯ, ದೇವಾಂಗ, ಮುಸಲ್ಮಾನ, ಮಾಪಿಳ್ಳೆ ಜಾತಿಯವರು ನಿಮ್ಮ ಜಾತಿಗಿಂತ ಕೀಳೆಂದು ಹೇಳುತ್ತೀರಿ. ಹೀಗೆ ಹೇಳಲಿಕ್ಕೆ ನಿಮಗೆ ಆಧಾರಗಳೇನಿವೆ? ನೀವು ಕ್ಷತ್ರಿಯ ಕುಲದವರೆಂದು ಸಾಧಿಸಲಿಕ್ಕಾಗಿ ವೈಶ್ಯ ವರ್ಗ್ಯರಯರು ಕೀಳು ಜನರೆಂದು ಬರೆಯುತ್ತೀರೆಂದು ನಾನು ಊಹಿಸಬೇಕಾಗಿದೆ. ನಿಮ್ಮ ಜನರೆಲ್ಲರೂ ಕ್ಷತ್ರಿಯರೇ ಆಗಲಿ, ಇಲ್ಲವೇ ಈ ಜಾತಿಗಿಂತ ಉತ್ತಮ ಜಾತಿಯವರೇ ಆಗಲಿ, ನಮಗೆ ದುಃಖವೇನಿಲ್ಲ. ಆದರೆ ನೀವು ಇತರ ಜಾತಿಯವರು ಕೀಳೆಂದು ಬರೆಯಬಾರದಿತ್ತು. ಹಿಂದು ಧರ್ಮದಲ್ಲಿ ಚಾತುರ್ವರ್ಣ್ಯಭೇದವಿದ್ದರೂ, ಒಂದು ವರ್ಣದವರು ಇನ್ನೊಂದು ವರ್ಣದವರಿಗೆ ಸರಿ ಸಮಾನರು. ಕ್ಷತ್ರಿಯನು ವೈಶ್ಯನಿಗಿಂತ ಉತ್ತಮನೆಂದೂ, ಬ್ರಾಹ್ಮಣನು ಕ್ಷತ್ರಿಯನಿಗಿಂತ ಶ್ರೇಷ್ಠನೆಂದೂ, ಯಾವ ಹಿಂದೂ ಗ್ರಂಥದಲ್ಲೂ ಹೇಳಿರುವುದಿಲ್ಲ. ಹೀಗಿರುತ್ತಾ ನಿಮಗಿಂತಲೂ ವೈಶ್ಯರು ಹೀನರೆಂದು ಹೇಳುವುದು ಅನ್ಯಾಯವಲ್ಲವೇ? "ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮ ವಿಭಾಗಶಃ" ಎಂಬ ಶ್ರೀಕೃಷ್ಣಭಗವಾನನ ವಚನದಲ್ಲಿ ವರ್ಣಗಳು ಮನುಷ್ಯರ ಗುಣ ಕರ್ಮಗಳ ಮೇಲೆ ರೂಪಿತವಾಗಿವೆಂಬುದು ವ್ಯಕ್ತವಾಗುವದಿಲ್ಲವೇ? ಅದು ಹಾಗಿರಲಿ.

ಹಿಂದು ಜಾತಿಗಳನ್ನು ನೀವು ಕೀಳೆಂದು ಹೇಳಿದ್ದು ಚಿಂತೆ ಇಲ್ಲ. ಆದರೆ ಮುಸಲ್ಮಾನರೂ ಸಹ ನಿಮಗಿಂತ ಕೀಳೆಂದು ಹೇಳಿದ್ದು ನಿಮ್ಮ ಮೂಢತನವನ್ನು ಹೊರಗೆ ಹಾಕುವುದು. ಮುಸಲ್ಮಾನರು ಪ್ರಾರ್ಥನೆ, ಭ್ರಾತೃ ವಾತ್ಸಲ್ಯ, ಏಕದೇವೋಪಾಸನ, ಸ್ವಮತಪ್ರೇಮ ಇವುಗಳಿಗೆ ಲೋಕ ವಿಖ್ಯಾತಿಯನ್ನು ಪಡದಿರುವರು. ಜಾತಿ ವ್ಯತ್ಯಾಸವನ್ನೇ ಹೀಗ್ಗಳಿಸುವ ಮುಸಲ್ಮಾನರು ನಿಮಗಿಂತ ಕೀಳು ಎಂದು ಹೇಳಿದ್ದು ನಿಮ್ಮ ಅಜ್ಞಾನದಿಂದುಂಟಾದ ದೊಡ್ಡ ತಪ್ಪು. ಎಲ್ಲಾ ಮತಗಳ ಧ್ಯೇಯವು ಒಂದೇ ಎಂಬದಾಗಿ ಅವತಾರ ಪುರುಷರೆಲ್ಲರೂ ಹೇಳಿರುವಾಗ, ಹಿಂದೂವಾದ ನೀವು ಮುಸಲ್ಮಾನರನ್ನು ತನ್ನ ಜಾತಿಗಿಂತ ಕೀಳೆಂದು ಹೇಳಿದ್ದು ಬಹಳ ವಿಷಾದಕರ ಮತ್ತು ನಾಚಿಗೆಕರ. ಆದುದರಿಂದ ಬಹಿರಂಗ ಪತ್ರದ ಮುಖೇನ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳಬೇಕಾಗಿ ನಾನು ನಿಮಗೆ ವಿನಂತಿ ಮಾಡಿಕೊಳ್ಳುತ್ತೇನೆ. ನಿಮ್ಮ ಕ್ಷಮಾ ಪತ್ರವು ಕೊಡವ ಭಾಷೆಯಲ್ಲಿರದೆ ಕನ್ನಡದಲ್ಲಿಯೇ ಇರಬೇಕಾಗಿ ನನ್ನ ಅಪೇಕ್ಷೆ.

"ನಿಮ್ಮ ಮಿತ್ರ"

---

### ಮಕ್ಕಳ ಪ್ರದರ್ಶನ, ಚಿತ್ರದುರ್ಗ.

ಒಂದು ಸಣ್ಣ ದೃಶ್ಯ.

(ವಿಶ್ವಕರ್ನಾಟಕ ಪತ್ರಿಕೆಯಿಂದ)

(ಹಲವು ಮಕ್ಕಳು ಒಂದಿದ್ದುವು. ಬಹುಮಾನ ಕೊಡಲು ಮಕ್ಕಳನ್ನು ಪರೀಕ್ಷಿಸಲಿಕ್ಕಾಗಿ ಸಾಹೇಬರೊಬ್ಬರ ಸವಾರಿ ಬಂತು.)

ಸಾಹೇಬರು—(ತಾಯಿಯ ಹೊಟ್ಟೆಬಿಟ್ಟು ಬಂದ ದಿನದಿಂದ ಗಾಳಿ ಬೆಳಕನ್ನು ಕಾಣದೆ, ಪಿತ್ರಪಾಂಡುವಿನಿಂದ ಶೋಷಿಸಿ ಹೋಗಿ ಮೆಕಮಲ್ ಬಟ್ಟೆಯಿಂದ ಪಾರ್ಸಲಿನಂತೆ ಸುತ್ತಿದ್ದ ಹೆಣ್ಣು ಕೂಸೊಂದನ್ನು ನೋಡಿ) ಇದು ಯಾರ ಮಗು?

ಉತ್ತರ—.......ಇನಾಮ ಸಾಹೇಬರ ಮಗು.

ಸಾಹೇಬರು—ಓಹೋ! ಸಂತೋಷ. ಹಾಗೋ! ಎಲ್ರಿ ಇದಕ್ಕೊಂದು ಬೆಳ್ಳಿ ಬಟ್ಟಲು ಕೊಡಿ.

ಸಾಹೇಬರು—(ಬಡವರ ಹೊಟ್ಟೆಯಲ್ಲಿ ಹುಟ್ಟಿ, ಹೊಟ್ಟೆಗೆ ಸರಿಯಾಗಿ ಹಿಟ್ಟಿಲ್ಲದೆ ಹೋದರೂ ಗಾಳಿ, ಬಿಸಿಲು, ಬೆಳಕಿನಲ್ಲಿ ಬೆಳೆದು, ಜ್ವಲಿಸುವ ಜಠರಾಗ್ನಿಯಿದ್ದು, ರಸರಕ್ತಾದಿ ಧಾತುಗಳೆಲ್ಲ ಬಲಿತು ಚಟ್ಟೆಯಂತಿದ್ದ ಮಗುವನ್ನು ನೋಡಿ) ಇದು ಯಾರ ಮಗು?

ಉತ್ತರ—.......ಇಲಾಖೆಗೆ ಗುಮಾಸ್ತರಿದ್ದಾರಲ್ಲ ಅವರ ಮಗು.

ಸಾಹೇಬರು—ಪಾಪ ಪೂರ್ ಕ್ರೀಚರ್. ಎಲ್ರಿ! ಈ ಮಗೂಗೆ ಕೊಂಚ ಬತ್ತಾಸು ಕೊಡ್ರಿ.

ಸಾಹೇಬರು ಹೀಗೆ ಹೇಳುತ್ತಾ ಹೊರಟೇ ಹೋದರು.

—ಬಡಮಕ್ಕಳ ತಾಯಿ.

---

### ಡಿಸ್ಟ್ರಿಕ್ಟ್ ಬೋರ್ಡಿನ ಉಪಕಮಿಟಿ ಮೀಟಿಂಗು.

ಜುಲೈ ತಿಂಗಳ ಎರಡನೇ ತಾರೀಖಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ವಿದ್ಯಾವರ್ಧಕ ಕಮಿಟಿಯು ನಡೆಸಿದ ಮೀಟಿಂಗಿನ ವಿವರ.

ಹಾಜರಿದ್ದ ಮೆಂಬರುಗಳು.

ಮೆ ॥ಳಾದ ಪಿ. ಎ. ಚಂಗಪ್ಪನವರು, (ವೈಸ್ ಪ್ರಸಿಡೆಂಟರು) ಪಿ. ಸಿ. ಉತ್ತಯ್ಯನವರು, ಬಿ. ಎ. ಎಲ್. ಟಿ. ಶಾಲಾ ಸಬ್ ಅಸಿಸ್ಟೆಂಟರು, ಎನ್. ಮುದ್ದಪ್ಪನವರು ಬಿ. ಎ. ಬಿ. ಎಲ್. ಮತ್ತು ಯಂ. ಎಲ್. ಸಿ.

ಮೆ. ಪಿ. ಜಿ. ಮುದ್ದಮ್ಮಯ್ಯನವರು ಗೈರಾಜರಾಗಿದ್ದರು.

ಮೇಲಿನ ಕಮಿಟಿ ಮೆಂಬರುಗಳು ಈ ಕೆಳಗಿನ ಸ್ಥಳಗಳನ್ನು ಸಂದರ್ಶಿಸಿ ಕಾರ್ಯ ನಿರ್ವಾಹಕ್ಕೆ ಅನುಕೂಲಮಾಡಿಕೊಳ್ಳಬೇಕೆಂಬ ಠರಾವು ಮಂಜೂರಾಯಿತು.

ಪೊನ್ನಂಪೇಟೆ, ಪೊಳ್ಳಬೆಟ್ಟ, ಚೆನ್ನಯ್ಯನಕೋಟೆ, ಹೆಗ್ಗಳ, ಮೈತಾಡಿ, ನಾಪೋಕ್ಲು, ಗೋಣಿಕೊಪ್ಪಲು, ಚೈಯ್ಯಂಡಾಣೆ, ಮರೆನಾಡು, ಹಾರಂಗಿ, ಚೆಂಬು, ಸಣ್ಣಪುಲಿಕೋಟು, ಕೊಟ್ಟೂರು, ಮತ್ತು ಭಾಗಮಂಡಲ.

2. ಅಲ್ಲಲ್ಲಿಯ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳು ಈ ಕಮಿಟಿಗೆ ಬತ್ತಾಸೆಯನ್ನು ಕೊಟ್ಟು, ಎಲ್ಲಾ ವಿಷಯಗಳನ್ನು ಸಾಂಗವಾಗಿ ತಿಳಿಸುವಂತೆ ಅವರನ್ನು ಬರೆದುಕೊಳ್ಳಕೆಂದು, ಈ ಕೆಳಗಿನ ವಿಷಯಗಳಿಗೆ ಅದಷ್ಟು ಹೆಚ್ಚು ಗಮನ ಕೊಡಬೇಕೆಂಬ ಠರಾವು ಮಂಜೂರಾಯಿತು.

(1) ನಾಡಿನಲ್ಲಿ ಹೊಸಶಾಲೆಗಳನ್ನು ಏರ್ಪಡಿಸಲು ಅವಶ್ಯಕತೆ.

(2) ಇಂಥಾವುಗಳಲ್ಲಿ ಅತ್ಯಗತ್ಯವಾದ ಸ್ಥಳಗಳ ಹೆಸರು.

(3) ಈ ಕಾರ್ಯಕ್ಕೆ ಅನುಕೂಲವಾದ ಕಟ್ಟಡಗಳು ದೊರಕುವ ಸಂದರ್ಭ ಮತ್ತು ಸ್ಥಳೀಕರಿಂದ ಹಣ ಸಹಾಯವೇನಾದರೂ ಇದ್ದರೆ ಅದು ಎಷ್ಟರಮಟ್ಟಿಗೆ ದೊರಕುವುದು.

(4) ಹಾಲಿ ಇರುವ ಶಾಲೆಗಳ ಅಭಿವೃದ್ಧಿಗೆ ಸಲಕರಣೆ, ಹೆಚ್ಚಿನ ಉಪಾಧ್ಯಾಯರುಗಳು, ಹೆಚ್ಚಿನ ತರಗತಿಗಳು ಮುಂತಾದವುಗಳ ಅವಶ್ಯಕತೆ.

Sd./ ಪಿ. ಎ. ಚಂಗಪ್ಪ,
(ಮೆಂಬರುಗಳಪರವಾಗಿ.)
ತಾ॥ 11—7—28.

---

### ಅಖಿಲ ಹಿಂದೂಸ್ಥಾನ ಖಾದಿ ನೂಲುವವರ ಸಂಘ (ಕರ್ನಾಟಕ ಶಾಖೆ.)

### 1928ನೇ ಇಸವಿ ಜೂನ್ ತಿಂಗಳ ವರೆಗೆ ಉತ್ಪನ್ನವಾದ ಖಾದಿ ಮತ್ತು ಅದರ ಮಾರಾಟದ ವಿವರವನ್ನು ತೋರಿಸುವ ಪಟ್ಟಿ.

| ಸಂ. | ಉತ್ಪನ್ನವಾದ ಸ್ಥಳ. | ಉತ್ಪನ್ನದ ಬೆಲೆ. | ಮಾರಾಟ ಹೊರಪ್ರಾಂತ್ಯ. | ಮಾರಾಟ ಚಿಲ್ಲರೆ ಬಿಕ್ರಿ. |
|---|---|---|---|---|
| 1. | ಭಾಗಬಿಕೊಪ್ಪ. | 504 9 9 | | 28 15 0 |
| 2. | ಉಪ್ಪಿನ ಬೆಟ್ಟಗೇರಿ. | 507 6 0 | 57 1 0 | 96 14 0 |
| 3. | ಗಲಗಲಿ. | 1073 11 0 | 34 1 0 | 279 11 9 |
| 4. | ನಿಲೇಶ್ವರ. | 177 14 6 | | 139 2 9 |
| 5. | ಕಲ್ಡಗಿ. | 1431 10 0 | | |
| 6. | ಲೋಕಮಾನ್ಯ ಬಿಜಾಪುರ. | 156 9 0 | | |
| 7. | ಹುಡ್ಲಿ. | 955 15 3 | 327 12 6 | 82 14 0 |
| 8. | ಬದನವಾಳ. | 1127 11 5 | | |
| | ಒಟ್ಟು ಉತ್ಪನ್ನದ ಬೆಲೆ. | 5935 6 11 | | |
| | ಮಾರಾಟ ಸ್ಥಳಗಳು. | | | |
| 1. | ಬೆಲಗಾಮ. | | 118 8 0 | 1073 10 0 |
| 2. | ಧಾರವಾಡ. | | | 448 2 3 |
| 3. | ಹುಬ್ಬಳ್ಳಿ. | | | 525 9 0 |
| 4 | ಗದಗ. | | | 387 0 0 |
| 5. | ಬಿಜಾಪುರ. | | | 628 12 6 |
| 6. | ಭಾಗಲಕೋಟೆ. | | 782 15 0 | 410 8 6 |
| 7. | ಬಕ್ಕರಿ. | | | 178 0 0 |
| 8 | ಸಿರ್ಸಿ. | | | 208 5 0 |
| 9. | ಮಂಗಳೂರು. | | | 201 4 0 |
| 10. | ದೇವಣಗೆರೆ. | | | 423 10 6 |
| 11. | ಶಿವಮೊಗ್ಗ. | | | 665 8 3 |
| 12. | ನಿಪ್ಪಾಣಿ. | | 308 0 0 | 149 13 3 |
| 13. | ಮನಮನೆ ತಿರುಗಿ ಮಾರಾಟದಿಂದ. | | | 608 8 6 |
| 14. | ಮೈಸೂರು ಸಹಕಾರ ಸಂಘ. | | | 777 14 6 |
| 15. | ಬೆಂಗಳೂರು ಇದರ ಸಂಖ್ಯೆ ದೊರೆತಿಲ್ಲ. | | | |
| | ಜುಮ್ಲ | | 1628 5 6 | 7314 3 9 |

---

ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಲು ಸುಸಮಯ.

## ಶ್ರೀ ಕರ್ನಾಟಕ ಹರಿದಾಸ ಕೀರ್ತನ ತರಂಗಿಣಿ (ಮಾಸ ಪುಸ್ತಕ)

## (ಎರಡನೆಯ ವರ್ಷಾರಂಭವಾಗಿದೆ.)

'ಹರಿದಾಸ ಸೇವಾ ಸಮಿತಿ' ಯವರಿಂದ ಬಹಳ ಶುದ್ಧ ರೀತಿಯಲ್ಲಿ ಪರಿಶೋಧಿಸಲ್ಪಟ್ಟು ಮಾಸ ಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಲಿರುವ 'ಶ್ರೀ ಕರ್ನಾಟಕ ಹರಿದಾಸ ಕೀರ್ತನ ತರಂಗಿಣಿ' ಯನ್ನು ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿರಿ! ಇದರಲ್ಲಿ ಜಗದ್ವಂದ್ಯರಾದ ಶ್ರೀ ಪುರಂದರದಾಸರು, ಶ್ರೀ ಕನಕದಾಸರೇ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ನುಡಿದ ದಿವ್ಯ ಭಗವನ್ನಾಮ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ಕ್ರೌನ್ ಅಷ್ಟಪತ್ರದ ನಾಲ್ವತ್ತು ಪುಟಗಳ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಲಿವೆ. ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೇ ಹಾಸಲು ಉಚಿತ) ಸಾಮಾನ್ಯ ಪ್ರತಿ ರೂ. ೧—೪—೦ ಉತ್ತಮ ಪ್ರತಿ ರೂ. ೨—೪—೦

## ಪ್ರಥಮ ಸಂಪುಟದ ಬೈಂಡಾದ ಪ್ರತಿಗಳು.

| | ಸಾದಾ ಬೈಂಡು | ದಪ್ಪ ರಟ್ಟಿನ ಬೈಂಡು | ಕಿತ್ತಾನಾರು ಬೈಂಡು |
|---|---|---|---|
| ಸಾಮಾನ್ಯ ಪ್ರತಿ | ೧—೮—೦ | ೧—೧೨—೦ | ೨—೪—೦ |
| ಉತ್ತಮ ಪ್ರತಿ | ೨—೪—೦ | ೨—೮—೦ | ೩—೦—೦ |

ಅಂಚೇಹಾಸಲು ಪ್ರತ್ಯೇಕ.

ವಿಳಾಸ.— ಸುಬೋಧ ಪ್ರಕಟನಾಲಯ,
ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.

12—2

Please Call at

**THE GENERAL TRADING CO., MERCARA,**

**Opposite Coronation Gardens**

SOLE AGENTS FOR VAUXHALL, OAKLAND, PONTAIC & CHEVROLET CARS & TRUCKS FOR COORG.

THE 1928 NEW CHEVROLET

NEW BEAUTY ! NEW PERFORMANCE !! NEW FEATURES AND FOUR WHEEL BRAKES !!!

QUALITY AT LOW COST

**THE COORG FOOTWEAR MART, MERCARA**

The house for smart foot wear. Monsoon boot a speciality

Prompt attention. Prices very moderate.

12—6 Attended by very efficient workmen.

# Arms, Ammunition and Shooting Requisites !!!



1928 Illustrated Catalogue Just Issued Free on Application !

| | | | | | |
|---|---|---|---|---|---|
| D B B L Rifles | Rs | 120 | to | Rs | 2750. |
| S B B L | „ | 35 | to | „ | 950. |
| D B B L Guns | „ | 50 | to | „ | 1350 |
| S B B L. | „ | 35 | to | „ | 275 |
| D B M. L | „ | 45 | to | „ | 135 |
| S B M L | „ | 30 | to | „ | 80. |
| B. L Revolvers | „ | 35 | to | „ | 350 |
| Automatic Pistols | „ | 30 | to | „ | 150 |

Brilliant Search Light Lamp For Shooting Camping, Fishing and All such other Night Sports and work Rs 30 Free delivery

**Also swords, Daggers, Cartridges, Caps, Gunpowder and Shooting Requisites, at the most competitive rates.**

GOOLAMHUSAIN ALLIBHOY & SONS,

**Largest Importers of Firearms and Ammunition**

**Cheapest priced firm in India,**

24—18 **210 Abdul Rehman Street, BOMBAY.**

**ಫ್ಯಾನ್ಸಿ ಲೀವರ್ ಪಾಕೆಟ್ ವಾಚ್.**

(10 ಬಹುಮಾನಗಳ ಸಹಿತ 4—12—0)

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ಜೇಬಿಗೆ ಅಡಕವಾಗಿಯೂ ಇರುವಂತೆ ಚಿಕ್ಕ ಸೈಜಿನಲ್ಲಿ ತಯಾರು; ಹಿಂದುಗಡೆ ಚಿತ್ರ ಕೆಲಸಮಾಡಲ್ಪಟ್ಟಿರುವದು ಮತ್ತು ಒಳಗಡೆ ಗಂಪ್ರ ಕೆತ್ತಲ್ಪಟ್ಟ ಗಿಲ್ಟ್ ಮೂವ್ಮೆಂಟ್ ಮಾಡಿರುವದು ಗಾಳಿ, ದೂಳು ಸೇರದಂತೆ ಹಿಂಬಾಗದಲ್ಲಿಯೂ ಗ್ಲಾಸ್‌ಡೂಮ್ ಇರುವದು. ಈ ಗಡಿಯಾರವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್ಮೆಂಟ್ಸ್‌ಗಳಿಂದ ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 10 ಬಹುಮಾನಗಳು ಕೊಡುವೆವು —ಬಹುಮಾನಗಳ ವಿವರ —ಫೌಂಟನ್ ಪೆನ್ನ 1, ಇಂಗ್ಲೀಷ್ ಸೆಂಟ್ ಬಾಟಲ್ 1, ವಜ್ರದ ಗುಂಡಿಗಳು 4 ಗಡಿಯಾರದ ಸರಪಣಿ 1, ಪೆನ್ನ ಕತ್ತಿ 1, ಕೈ ಗುಂಡಿಗಳ ಸೆಟ್ 1, ಈ 10 ಬಹುಮಾನಗಳು ಮತ್ತು ಖಾತ್ರಿಯಾದ 3ವರ್ಷ ಗ್ಯಾರಂಟಿ ಸಹಿತ ಗಡಿಯಾರ 1 ಕ್ಕೆ 4—12—0.

ವಿಳಾಸ —ಲೀಗಲ್ ಟ್ರೇಡಿಂಗ್ ಕಂಪೆನಿ,

52—11 ಪೋ ಬಾಕ್ಸ್ ನಂ. 243 ಮದರಾಸು

ಡಿ ಬಿ ಬಿ ಎಲ್. ಕೋವಿಗಳು ರೂ 75 ರಿಂದ ರೂ 450,
ಯಸ್ ಬಿ ಬಿ ಯಲ್ ಕೋವಿಗಳು ರೂ 35 ರಿಂದ ರೂ 250,
ಯಸ್ ಬಿ ಯಮ್ ಯಲ್. ಕೋವಿಗಳು ರೂ. 35 ರಿಂದ 65
ರಿವಾಲ್ವರ್‌ಗಳು ರೂ 40/ ರಿಂದ ರೂ. 125/ರ ವರೆಗೆ.

ಡಬ್ಬಲ್ ಮತ್ತು ಸಿಂಗಲ್ ಶೋಟರ್ ಮತ್ತು ಕೇವು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ಬರೆಯಿರಿ.

**ಯನ್. ವಿ. ರಾಮಾನಂಜಂ ಚೆಟ್ಟಿ ಅಂಡ್ ಕಂಪೆನಿ.**

**ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.**

24—9 12. ಬ್ರಾಡ್ವೆ. ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)

# ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

# ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

**ಉತ್ತಮ ತರಹದ ಸಿಂಗಲ್‌ರೀಡ್ಸ್ ಹಾರ್ಮೋನಿಯಂಗಳು.**

| | |
|---|---|
| ದಿಲ್ ಬಹಾರ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 50—8—0 |
| ಶಕುಂತಲಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 40—0—0 |
| 'ಮೋಹನ್ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 37—8—0 |
| 'ಮೋಸ್ಲೇಂ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 35—0—0 |
| 'ಮಹಾರಾಜಾ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 32—8—0 |

**ಉತ್ತಮ ತರಹದ 14 ಕ್ಯಾರೆಟ್ಸ್ ಬಂಗಾರದ ನಿಬ್ಬು ಹಾಕಿದ ಫೌಂಟನ್ ಪೆನ್‌ಗಳು.**

| | |
|---|---|
| ಬ್ಲಾಕ್ ಬರ್ಡ್ ಫೌಂಟನ್ ಪೆನ್ 1ಕ್ಕೆ | 3—8—0 ಮತ್ತು 3—12—0 |
| ಪರಬ್ಲ್ಯೂ ವಂಡರ್ ಫೌಂಟನ್ ಪೆನ್ 1ಕ್ಕೆ | 3—0—0 ಮತ್ತು 3—8—0 |
| ಕಾನ್‌ವ್ಯಾಕ್ಸ್ ಸೆಫ್ಟ್ಯೂನ್ ಫೌಂಟನ್ ಪೆನ್ 1ಕ್ಕೆ | 4—8—0 |
| ವಾಟರ್ ಮನ್ ಫೌಂಟನ್ ಪೆನ್ 1ಕ್ಕೆ | 8—0—0 ಮತ್ತು 8—8—0 |
| ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌಂಟನ್ ಪೆನ್ 1ಕ್ಕೆ | 12—0—0 ಮತ್ತು 15—0—0 |

**ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು.**

| | |
|---|---|
| ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ | 4—5—0 |
| ವೆಸ್ಟ್ಕ್ಲಾಕ್ ಕಂಪೆನಿಯ ಅಲಾರಂ ಟೈಂಪೀಸ್ 1ಕ್ಕೆ | 8—0—0 |
| ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ | [illegible] |
| ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ | [illegible]—12—[illegible] |
| ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ | 6—0—0 |

ಸಚಿತ್ರ ಕ್ಯಾಟಲಾಗ್ ಒಗ್ಗೆ 6 ಪೈ ಸ್ಟಾಂಪು ರವಾನಿಸಿ

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ಮತ್ತು ಕಾಕ್ಸೀಟ್ ಕಾಲುಗಳ ವ್ಯಾಪಾರಿಗಳು, ಮೈಸೂರು.

52 13

## ಪ್ರಕಟಣೆ.

**ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.**

| | | ರೂ. |
|---|---|---|
| ಶೇರ್ ಬಂಡವಾಳ | — | 50,000 |
| ವಸೂಲಾದ ಶೇರ್ ಮೊಬಲಗು | — | 17,190 |
| ಜಮಾಬಂದ ಠೇವಣಾತಿ | — | 1,62,320 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೋಸ್ಕರ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋರಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್, ಕೊಂಗೆಟ್ಟಿರ ತಿಮ್ಮಯ್ಯನವರು.

ಸೆಕ್ರೆಟರಿ ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1-7-1927.

## ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ದಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು.
ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚಿಣ್ಣಪ್ಪನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಸುರೆನಾಡು—ಮೆ. ಕೇಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕಾನಡೇರಿರ ನಂಜುಂಡನವರು,
ಕಾಪೋಳು—ಮೆ. ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಅನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಸಿ. ಜಿ. ಮುದ್ದವ್ವಯ್ಯನವರು,
ಕುದಿಕೇರಿ & ತಿತಿಮತಿ—ಮೆ. ಡಿ. ಮಾದಪ್ಪಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

## ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನೂ ಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ.

## ARMS & AMMUNITION MART.

**Mahomedally-Noorbhoy.**



**231 Abdul Rehman Street, near Crawford Market, BOMBAY. 3**
**Telegraphic Address:-"SHOOTER" Bombay.**

(31-17) Please write for our Catalogue 1928-1929.

**ಕಟುಂಕಷಾಯ ಮಲೇರಿಯ ರಕ್ಷೆ:**—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಂಪ್ರತಿ ಬರುವ ಜ್ವರ, 3-4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1-8-0; 3ಕ್ಕೆ ರೂ. 4-0-0, 6ಕ್ಕೆ ರೂ 7-8-0, 12ಕ್ಕೆ ರೂ. 14

**ಚಂದನಾಸವ:**—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ, ಹಿಂದೆಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಅಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಊಟ್ಟುವ ನೋವು. ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲಿ 1, 3, 6ಕ್ಕೆ ರೂ 1-4-0 3-8-0, 6-12-0

**ರೋಮನಾಸಿಕ:**— ಈ ಹುಡಿಯನ್ನು ನೀರಿನಲ್ಲಿ ಕಲಸಿ ಹಚ್ಚಿದಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3-8-0

**ಮನೋಲ್ಲಾಸಿನಿ ತೈಲ:**—ತಲೆನೋವು, ತಲೆತಿರುಗುವುದು, ತಲೆಭಾರ, ಕಿವುಡು, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2-10-0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5-8-0

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ—ಮನೋಲ್ಲಾಸಿನಿ ಕಂಪೆನಿ.
9. ಮಂಗಳೂರು.

52-43

**ಕಳಾರಿಕೆ ಮಾಲುಗಳಿಗೆ ಮೋಸ ಹೋಗಬೇಡಿರಿ!**

ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ.

ಅಜಮಾಯಿಸಿ ನೋಡಿರಿ.

ಇನಾಮಿನ ಬಟ್ಲುಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ.

ಎಲ್ಲಾ ಆರ್ಡರುಗಳನ್ನೂ ಥಳೋ ರೀತಿಯಿಂದಲೂ, ಶೀಘ್ರವಾಗಿಯೂ ಗ್ಯಾರಂಟಿಯೊಡನೆ ಜಾರಿ ಮಾಡಲಾಗುವದು

ಕೇಶವಜಿಂದ್ ದೇವಚಂದ್,
ಜ್ಯುಲ್ಲರ್, (ಕೆಟಲಾಗ್ ಮುಫತ್).
21 ಚೈನಾ ಬಜಾರ್‌ರೋಡ್, ಮದರಾಸು.

12-10

## ಎಂಪಯರ್ ಆಫ್ ಇಂಡಿಯಾ

**ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,**

**ಸ್ಥಾಪಿಸಲ್ಪಟ್ಟದ್ದು 1897.**

1928ನೇ ಇಸವಿ ಫೆಬ್ರುವರಿ 29ಕ್ಕೆ ಅಖೈರಾದ 5 ವರ್ಷಗಳಲ್ಲಿ ಕಂಪನಿಗೆ ಲಾಭದ ಉತ್ಪತ್ತಿ.

| | | |
|---|---|---|
| ಹೊಸ ಪಾಲಿಸಿಗಳು ಏರಿವೆ .... .. .... | ರೂ. | 1,16,00,000. |
| ವರಮಾನ ಏರಿದೆ .... .... .. .. | ರೂ. | 54,95,000. |
| ಕಂಪೆನಿ ಆಸ್ತಿ ಏರಿದೆ . . . . .. | ರೂ. | 3,15,64,000. |

ಬೇಕಾಗಿದೆ:— ಕೊಡಗು ದೇಶದ ಮುಖ್ಯ ಸ್ಥಳಗಳಲ್ಲಿ ಏಜಂಟರುಗಳು.

ಹೆಡ್ ಆಫೀಸು.
ಎಂಪಯರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಆಫೀಸು.
ಕಮರ್ಶಿಯಲ್ ಬೀದಿ
ಬೆಂಗಳೂರು.

24-6

ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ.

## ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

## 1927

**ಅತ್ಯುಚ್ಛ್ರಾಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ**

ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

| | | | | | |
|---|---|---|---|---|---|
| 1925 | — | 13545 | — | ರೂ. | 2,95,42,000. |
| 1926 | — | 17371 | — | ರೂ. | 3,91,39,000. |
| 1927 | — | 21418 | — | ರೂ. | 4,68,04,075. |

— ಪ್ರೀಮಿಯಂ ಉತ್ಪತ್ತಿ —

| | | | |
|---|---|---|---|
| 1925 | — | ರೂ. | 92,66,000. |
| 1926 | — | ರೂ. | 1,05,33,000. |
| 1927 | — | ರೂ. | 1,21,53,000. |

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಏರಿದೆ.

ಕಂಪನಿಯ ಫಂಡು ೮ ಕೋಟಿ ರೂಪಾಯಿಗಳಿಗೆ ಏರಿದೆ.

ಜೀವವಿಮೆ ಮಾಡಬೇಕೆಂದಿರುವವರು ಪಾವಕಾಶ [illegible] ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ನಾರ್ತ್ ಪರೇಡ್, ಬೆಂಗಳೂರು.

ಎಲ್. ಆರ್. ಕೃಷ್ಣಸ್ವಾಮಯ್ಯರ್,
ಬ್ರಾಂಚ್ ಸೆಕ್ರೆಟರಿ.

52-16

Printed & published by P. I. Belliappa, at "Kodagu" Press, Mercara for "Kodagu" Ltd.

Reg No ಮ. 1530.
If not delivered please return to "KODAGU" OFFICE MERCARA.

# ಕೊಡಗು.

ಸರ್ವೇಶ ಘಟಿತವಯುಜಿ ವಿದ್ಯಾ ... || ...

ಸ್. ೧೭-ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಬುಧವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಸಂಪುಟ ೮] ಮಡಿಕೇರಿ, ಸನ ೧೯೨೮ನೇ ಇಸವಿ ... ಬುಧವಾರ [ಸಂಚಿಕೆ ೧೦

## ESTATE REQUISITES

| | | | | |
|---|---|---|---|---|
| 5 lbs Yates' hammer headed mamooties | Rs 3 0 0 Each | | Weeding forks @ | Rs 1 4 0 Each |
| $4\frac{1}{2}$ ,, ,, ,, | ,, 2 14 0 ,, | | Garden trowels | Rs 1 ? ? ,, |
| 4 ,, ,, ,, | ,, 2 12 0 ,, | | Pick axes ,, | Rs 1 8 0 ,, |
| Felling axes at Rs 3 0 0 & | ,, ? 1 0 ,, | | Bill hooks ,, | Rs ? 1? 0 ,, |
| Grubbing mattocks at | ,, 3 4 0 ,, | | Digging forks ,, | Rs ? ? 0 ,, |

## MONSOON EQUIPMENT.

| | | | |
|---|---|---|---|
| Planter boots | Rs 16 8 0 | Dales' dubbin per tin | Rs 0 ? 0 |
| Marrs oil (water proof) per tin | Rs 2 0 0 | Umbrellas | Rs ? ? 0 |

32—96

**SPENCER & CO. LTD.** General Merchants **MERCARA.**

## V. SUBRAMANIA IYER

*Manufacturing,*

## JEWELLER

GOLDSMITH, SILVERSMITH & DEALER IN ALL PRECIOUS STONES

Post Box 423, TRIPLICANE, MADRAS

Catalogue Free to Bonafide Enquirers



Rose Water Sprinkler

Nose-screws. Clover Drops. Thodu Brooch

Chased Silver Mirror

Manufacture of HIGH CLASS GEMSET JEWELS a speciality

The special features of my productions —
1 Best ...
2 ...
3 ...
4 ...
5 ...

of GOLD ... 

52—18

Before buying any Arms & Ammunition, please refer our Reduced NETT PRICED current Catalogue of GUNS RIFLES, REVOLVERS AUTOMATIC PISTOLS AMMUNITION & Shooting Requisites, Just out

**CATALOGUE of 1927-28 on application.**

# The Bombay Armoury.

*331, Abdul Rehman Street,*

*Bombay, 3.*

24—21

## ಅಪೂರ್ವ ಸಂದರ್ಭ.

...

## ಆತಂಕನಿಗ್ರಹ ಮಾತ್ರೆಗಳು

...

## ಕಾಮಶಾಸ್ತ್ರ

...

32—7

# ಕೊಡಗು.

ಸನ್ ೧೯೨೮ ನೇ ಇಸವಿ

ಆಗೊಸ್ಟು ತಾ. ೧೦ ನೇ ಶುಕ್ರವಾರ.


## ಸತ್ಯಾಗ್ರಹದ ಜಯ.

**ಬಾರ್ಡೋಲಿ** ಸತ್ಯಾಗ್ರಹವು ರಾಜಿಯಿಂದ ತೀರ್ಮಾನವಾಗಿದೆಯೆಂದು ತಿಳಿಸಲು ಸಂತೋಷಪಡುತ್ತೇವೆ. ಸತ್ಯಾಗ್ರಹಿಗಳಿಗೂ ಸರ್ಕಾರಕ್ಕೂ ಗೌರವವಾದ ಈ ತೀರ್ಮಾನವು ಇಡೀ ಹಿಂದೂದೇಶದಲ್ಲಿ ತೃಪ್ತಿಯನ್ನುಂಟುಮಾಡದೆ ಇರದು. ಸರ್ಕಾರದವರ ಪರವಾಗಿ ಬೊಂಬಾಯಿಯ ಗವರ್ನರವರು ಅಲ್ಲಿಯ ಕೌನ್ಸಿಲಿನಲ್ಲಿ ಮಾಡಿದ ಪ್ರಕಟನೆಯ ಭಾಷಣದಿಂದಲೂ, ಸತ್ಯಾಗ್ರಹಿಗಳ ಮುಂದಾಳಾದ ಶ್ರೀಯುತ ವಲ್ಲಭಭಾಯಿ ಪಟೇಲರವರು ಸ್ವಲ್ಪವೂ ಎದೆ ಗುಂದದೆ ಅಪ್ಪರು ವರೆಗೂ ಬಾರ್ಡೋಲಿಯ ಜನರ ಹಕ್ಕುಗಳನ್ನು ಬಿಟ್ಟುಕೊಡಲು ಒಪ್ಪದೆ ಹೋರಾಡಿದ್ದರಿಂದಲೂ ತೀರ್ಮಾನವು ದೂರವಾಗುತ್ತೆಂತಲೇ ಎಲ್ಲರಿಗೂ ತೋರಿತು. ಆದರೆ ಜನರ ವಾದದ ನ್ಯಾಯಕಾರಣವೂ, ಅವರ ಒಗ್ಗಟ್ಟಿನ ವರ್ತನೆಯ ಬಲವೂ ಕಡೆಗೆ ಸರ್ಕಾರದ ಗೌರವ ಪ್ರಾಮುಖ್ಯವನ್ನು ಮೀರಿದ್ದರಿಂದ ಎರಡು ಕಡೆಯವರೂ ಒಪ್ಪಂದಕ್ಕೆ ಬಂದರು.

ಹೆಚ್ಚಿನ ದರದ ಕಂದಾಯವನ್ನು ಬಾರ್ಡೋಲಿಯವರು ಕೊಡಬೇಕು, ಅಂದರೆ ಹಳೇ ಕಂದಾಯಕ್ಕಿಂತ ಹೆಚ್ಚಿಸಿರುವ ಮೊಬಲಗನ್ನು (ಸುಮಾರು ಒಂದು ಲಕ್ಷ ರೂಪಾಯಿ) ಅಲ್ಲಿಯ ಒಬ್ಬ ದೊಡ್ಡ ಜಮೀನ್ದಾರರಾದ ಶ್ರೀ ರಾಮಚಂದ್ರ ಭಟ್ಟರವರು ತಾವಾಗಿ ಒಪ್ಪಿರುವಂತೆ, ಸರ್ಕಾರದಲ್ಲಿ ಡಿಪಾಜಿಟ್ಟಾಗಿ ಇಡುವದು. ಮತ್ತು ಬಾರ್ಡೋಲಿ ತಾಲೋಕಿನಲ್ಲಿ ಸತ್ಯಾಗ್ರಹ ಚಳವಳವನ್ನು ಸಂಪೂರ್ಣ ನಿಲ್ಲಿಸುವದು. ಸರ್ಕಾರದ ಈ ಶರತ್ತುಗಳಿಗೆ ವಲ್ಲಭಭಾಯಿ ಪಟೇಲರವರು ಒಪ್ಪಿರುವರು. ಸತ್ಯಾಗ್ರಹಿ ಕೈದಿಗಳನ್ನು ಬಿಡುಗಡೆ ಮಾಡುವದು, ಹರಾಜು ಆಗದ ಸರ್ಕಾರದವರ ಸ್ವಾಧೀನ ಪಡಿಸಿಕೊಂಡಿರುವ ಭೂಮಿಗಳನ್ನು ಮಾಲೀಕರಿಗೆ ವಾಪಸು ಕೊಡುವದು, ತುಂಬಾ ಅನ್ಯಾಯವಾದವರಿಗೆ ಮತ್ತು ಕಷ್ಟವಾದವರಿಗೆ ಸರ್ಕಾರದವರು ನಷ್ಟ ಪರಿಹಾರ ಕೊಡುವದು, ರಾಜಿನಾಮೆ ಕೊಟ್ಟಿದ್ದ ತಲಾಟಿ ಮತ್ತು ಪಟೇಲರುಗಳಿಗೆ ಪುನಹ ಉದ್ಯೋಗ ಕೊಡುವದು ಮತ್ತು ಒಬ್ಬ ರೆವಿನ್ಯು ಆಫೀಸರ ಸಹಾಯದೊಡನೆ ಒಬ್ಬ ಜುಡಿಷ್ಯಲ್ ಆಫೀಸರು ಹೆಚ್ಚಿನ ದರದ ಕಂದಾಯವು ನ್ಯಾಯವಾದದ್ದೋ ಅಲ್ಲವೋ ಎಂಬದನ್ನು ವಿಚಾರಿಸುವದು, ಈ ವಿಚಾರದಲ್ಲಿ ಭಿನ್ನಾಭಿಪ್ರಾಯವುಂಟಾದಲ್ಲಿ ಜುಡಿಷ್ಯಲ್ ಆಫೀಸರ ತೀರ್ಮಾನವು ಅಖೈರಾಗತಕ್ಕದ್ದು, ವಲ್ಲಭಭಾಯಿ ಪಟೇಲರವರ ಈ ಶರತ್ತುಗಳಿಗೆ ಸರ್ಕಾರದವರು ಒಪ್ಪಿರುವರು. ಹೀಗೆ ಎರಡು ಪಾರ್ಟಿಯವರೂ ತೀರ್ಮಾನಕ್ಕೆ ಬಂದಿರುವದರಿಂದ ಈಗಾಗಲೇ ಈ ಚಳವಳದ ದೆಸೆಯಿಂದ ಜೈಲಿಗೆ ಕಳುಹಿಸಲ್ಪಟ್ಟಿದ್ದ ಹದಿನೈದು ಮಹನೀಯರನ್ನು ಬಿಡುಗಡೆಮಾಡುವಂತೆಯೂ, ಸತ್ಯಾಗ್ರಹ ಚಳವಳವನ್ನು ಸಂಪೂರ್ಣ ನಿಲ್ಲಿಸುವಂತೆಯೂ ಏರ್ಪಾಡು ಮಾಡಲಾಗಿದೆ. ಹರಾಜಿನಲ್ಲಿ ಭೂಮಿಗಳನ್ನು ಪಡೆಕೊಂಡ ಮುಖ್ಯಸ್ಥರನ್ನು ಒಪ್ಪಿಸಿ, ಅಂಥಾ ಆಸ್ತಿಗಳನ್ನು ಮಾಲೀಕರಿಗೆ ವಾಪಸು ಬಿಟ್ಟುಕೊಡುವಂತೆ ಮಾಡಲು ನಡೆದ ಪ್ರಯತ್ನಗಳು ಸಫಲವಾಗುತ್ತಿವೆ. ಮೇಲೆ ಸೂಚಿಸಿದ ಕಮಿಟಿ ವಿಚಾರವು ಪೂರೈಸಲು ಸುಮಾರು ಆರು ತಿಂಗಳು ಹಿಡಿಯಬಹುದೆಂದು ಊಹಿಸಲಾಗಿದೆ. ಈ ಕಮಿಟಿಯ ತೀರ್ಮಾನವನ್ನು ಎರಡು ಕಡೆಯವರೂ ಅಂಗೀಕರಿಸುವಂತೆ ಒಪ್ಪಿರುವದರಿಂದ ಬಾರ್ಡೋಲಿಯ ಸತ್ಯಾಗ್ರಹವು ಸಂಪೂರ್ಣವಾಗಿ ಅಂತ್ಯವಾಯಿತೆಂದೇ ಹೇಳಬೇಕಾಗಿದೆ.

**ಈ ತರಹದ** ರಾಜಿ ಒಪ್ಪಂದದಿಂದ ಬಾರ್ಡೋಲಿಯ ರೈತರು ಕೆಲವು ತಿಂಗಳುಗಳಿಂದ ನಡಿಸಿದ ಸ್ವಾರ್ಥತ್ಯಾಗದ ಮತ್ತು ಬಹು ಕಷ್ಟ ನಷ್ಟಗಳಿಗೆ ಒಳಗಾದ ಅಹಿಂಸಾತತ್ವದ ಸತ್ಯಾಗ್ರಹ ಚಳವಳಕ್ಕೆ ಪ್ರತಿಫಲ ದೊರೆಯಿತೋ ಎಂಬದನ್ನು ಸ್ವಲ್ಪ ಆಲೋಚಿಸಬೇಕಾಗಿದೆ. ಹೆಚ್ಚಿನ ದರದ ಕಂದಾಯವನ್ನು ನಿರ್ಣಯಿಸುವಲ್ಲಿ ಅಲ್ಲಿಯ ಭೂಮಾಲೀಕರ ಆರ್ಥಿಕ ಸ್ಥಿತಿಗತಿಯದನ್ನು ವಿಚಾರಿಸದುದರಿಂದ ಆ ವಿಷಯ ಪುನಃ ಸ್ವತಂತ್ರವಾಗಿ ಬಹಿರಂಗ ವಿಚಾರ ನಡಿಸಬೇಕೆಂಬದೇ ಅಲ್ಲಿಯ ಜನರ ವಾದವಾಗಿತ್ತು. ಇದಕ್ಕಾಗಿಯೇ ಹೆಚ್ಚಿನ ಕಂದಾಯವನ್ನು ಕೊಡದೆ ಸತ್ಯಾಗ್ರಹವನ್ನು ಆಚರಿಸಿದ್ದು ಆಗಿದೆ. ಇಂಥಾ ವಿಚಾರಣೆ ಈಗ ಸರ್ಕಾರದವರು ಒಪ್ಪಿರುವರು. ಅಂದಮೇಲೆ ಸತ್ಯಾಗ್ರಹದ ಉದ್ದೇಶವು ನೆರವೇರಿತೆಂದೇ ಹೇಳಬೇಕಲ್ಲವೇ.

ಸತ್ಯಾಗ್ರಹ ಚಳವಳಕ್ಕೆ ಜಯವಾಯಿತೆಂದು ಹೇಳಿದ ಮೇಲೆ ಅದಕ್ಕೆ ಕಾರಣಗಳೇನೆಂದು ವಿಚಾರಿಸಬೇಕು. ಮುಖ್ಯವಾಗಿದೆ. ಅಲ್ಲಿಯ ರೈತರು ಒಗ್ಗಟ್ಟಾಗಿ, ಅಹಿಂಸಾತತ್ವವನ್ನು ಅನುಸರಿಸಿ, ಎಷ್ಟು ಕಷ್ಟನಷ್ಟಗಳಿಗೆ ಒಳಗಾದರೂ ತುಂಬಾ ತಾಳ್ಮೆ ತೆಗೆದುಕೊಂಡು ಸ್ವಾರ್ಥತ್ಯಾಗ ಮಾಡಲು ತಯಾರಾಗಿ, ಒಬ್ಬ ಮುಂದಾಳಿನ ಹೇಳಿಕೆಯಂತೆ ನಡೆಯಲು ಸಿದ್ಧರಾದದ್ದೇ ಜಯಕ್ಕೆ ಮುಖ್ಯ ಕಾರಣವೆಂಬುದರಲ್ಲಿ ಸಂಶಯವಿಲ್ಲ. ಇಡೀ ಹಿಂದೂದೇಶದ ಜನರು ಪಂಗಡ ಭೇದಗಳನ್ನೂ, ಭಿನ್ನಾಭಿಪ್ರಾಯಗಳನ್ನೂ ಮರೆತು, ಎಲ್ಲರೂ ಈ ಚಳವಳಕ್ಕೆ ಸಂಪೂರ್ಣ ಸಹಾನುಭೂತಿಯನ್ನು ತೋರಿಸಿದ್ದರಿಂದ ಸತ್ಯಾಗ್ರಹಿಗಳಿಗೆ ತುಂಬಾ ಉತ್ತೇಜನ ದೊರೆತದ್ದಲ್ಲದೆ ಈ ವಿಷಯಕ್ಕೆ ಪ್ರಾಬಲ್ಯವುಂಟಾಯಿತು. ಮಹಾತ್ಮ ಗಾಂಧಿಯವರ ಅಹಿಂಸಾತತ್ವವನ್ನು ಚೆನ್ನಾಗಿ ಅರಿತುಕೊಂಡು, ಹಿಂಸೆಗೆ ಒಂದಿಷ್ಟೂ ಎಡೆಕೊಡದಂತೆ ಬಾರ್ಡೋಲಿಯ ಸುಮಾರು 88 ಸಾವಿರ ಗಂಡಸರು ಹೆಂಗಸರು ಮತ್ತು ಮಕ್ಕಳನ್ನು ತಾಲೋಕ ಒಂದೇ ಜೊಂಬಲದಿಂದ ಆಡಳಿತ ನಡಿಸುತ್ತಿರುವ ಸರ್ಕಾರಕ್ಕೆ ವಿರುದ್ಧವಾಗಿ ನಡಿಸಲು, ಅತಿ ಬಿಕ್ಕಟ್ಟಿನ ಸಮಯದಲ್ಲೂ ಕೂಡ ಸ್ವಲ್ಪವೂ ಧೈರ್ಯಗುಂದದೆ ಏಕಾಗ್ರತೆಯಿಂದ ಕೆಲಸ ಮಾಡಿದ ಶ್ರೀಯುತ ವಲ್ಲಭಭಾಯಿ ಪಟೇಲರವರು ಈ ಚಳವಳದ ವೀರರೆಂಬದನ್ನು ಯಾರೂ ಅಲ್ಲಗಳೆಯಲಾರರು. ಇವರ ನಿರ್ಭಿಡೆಯ ವರ್ತನೆಯೂ, ಬೊಂಬಾಯಿ ಗವರ್ನರಾದ ಸರ್ ಲೆಸ್ಲಿ ವಿಲ್ಸನ್‌ರವರ ಸಹಾನುಭೂತಿಯೂ ಮತ್ತು ರಾಜಕಾರ್ಯ ಧುರಂಧರತೆಯೂ, ಸೂರತ್ತಿನ ಹೊಸ ಕಲೆಕ್ಟರಾದ ಮೆ|| ಗಾರೆಟ್‌ರವರ ಉಚಿತಜ್ಞತೆಯ ಸಂಧಾನಗಳೂ ಸೂರತ್ತಿನ ಕೌನ್ಸಿಲು ಮೆಂಬರುಗಳ ಎಡೆಬಿಡದ ಪ್ರಯತ್ನಗಳೂ ಚರಿತ್ರಾರ್ಹವಾದ ಈ ಚಳವಳವನ್ನು ರಾಜಿ ತೀರ್ಮಾನದಲ್ಲಿ ಅಂತ್ಯಗೊಳಿಸುವಂತೆ ಮಾಡಿದವು.

ಸತ್ಯಾಗ್ರಹ ಚಳವಳವನ್ನು ಅಂತ್ಯಗೊಳಿಸಿದರಿಂದ ಸರ್ಕಾರದ ಗೌರವವೂ ಉಳಿಯಿತು. ಪ್ರಜೆಗಳಿಗೆ ಅನ್ಯಾಯವಾದು ತೋರಿದ ವಿಷಯದಲ್ಲಿ ನ್ಯಾಯವನ್ನು ಮಾಡಲಿಕ್ಕಾಗಿ ಪುನಃ ವಿಚಾರಣೆಗೆ ಬಿಡಲು ಒಪ್ಪಿದ್ದರಿಂದ ಸರ್ಕಾರದ ಘನತೆಯು ಹೆಚ್ಚಿದಲ್ಲದೆ ಕಡಿಮೆಯಾಗಿರುವದಿಲ್ಲವೆಂದೇ ನಮ್ಮ ಅಭಿಪ್ರಾಯ. ಹೀಗಲ್ಲದೆ ಸರ್ಕಾರದವರು ತಮ್ಮ ತಪ್ಪನ್ನು ಒಪ್ಪಿಕೊಳ್ಳದೆ ಬರೀ ಗೌರವದ ಮೇಲೆ ದೃಷ್ಟಿಯನ್ನಿಟ್ಟು ವರ್ತಿಸಿದರೆ ಪ್ರಜೆಗಳಿಗೂ, ಆಳರಸರಿಗೂ ಪರಸ್ಪರ ವಿಶ್ವಾಸಕ್ಕೆ ಎಡೆಯೇ ಇಲ್ಲದಾಗುತ್ತದೆ. ಆದುದರಿಂದ ಈ ರಾಜಿತೀರ್ಮಾನದಲ್ಲಿ ಭಾಗಿಗಳಾದ ಸರ್ಕಾರದವರನ್ನೂ, ಜನರ ಪ್ರತಿನಿಧಿಗಳನ್ನೂ ಅಭಿನಂದಿಸುತ್ತೇವೆ.

ಎಷ್ಟು ಪ್ರಬಲವಾದ ಸರ್ಕಾರವೇ ಆಗಲಿ ಅದು ಪ್ರಜೆಗಳ ಒಗ್ಗಟ್ಟಿನ ಅಭಿಪ್ರಾಯಕ್ಕೆ ತಲೆಬಗ್ಗಿಸಬೇಕೆಂಬದು ಬಾರ್ಡೋಲಿಯ ತೀರ್ಮಾನದಿಂದ ಸ್ಪಷ್ಟವಾಗುತ್ತದೆ. ಇಂಗ್ಲೆಂಡಿನಲ್ಲಿರುವ ಇಂಡಿಯಾದ ಒಬ್ಬ ಮೇಲಧಿಕಾರಿಯಾದ ಅರ್ಲ್ ವಿಂಟರ್ಟನ್‌ರವರೇ ಮೊದಲಾದವರು ಈ ಚಳವಳವು ಸರ್ಕಾರಕ್ಕೆ ಸಂಪೂರ್ಣ ವಿರುದ್ಧವಾದುದರಿಂದ ಇದನ್ನು ಕೂಡಲೆ ನಿರ್ಮೂಲಮಾಡಬೇಕೆಂದೂ, ಹಾಗೆ ಮಾಡಲು ಇಂಡಿಯಾ ಸರ್ಕಾರದವರ ತಮ್ಮಲ್ಲಿರುವ ಬಲವನ್ನೆಲ್ಲಾ ಉಪಯೋಗಿಸಲು ಹಿಂಜರಿಯುವದಿಲ್ಲವೆಂತಲೂ ಪಾರ್ಲಿಮೆಂಟಿನಲ್ಲಿ ಘರ್ಜಿಸಿದರೂ ಕೂಡ, ಆ ಘರ್ಜನೆಯು ಬಾರ್ಡೋಲಿಯ ಶಸ್ತ್ರಹೀನರಾದ, ಅಹಿಂಸಾತತ್ವಗಳಾದ ಮತ್ತು ಸ್ವಾರ್ಥತ್ಯಾಗಿಗಳಾದ ಬಡ ರೈತರ ಒಗ್ಗಟ್ಟಿನ ಧೃಢಮನಸ್ಸನ್ನು ಒಂದಿಷ್ಟೂ ಕದಲಿಸಲಾರದೆ ಹೋಯಿತು. ಅಧಿಕಾರ ಬಲಕ್ಕೂ, ಸ್ವಾರ್ಥತ್ಯಾಗದ ಮತ್ತು ಒಗ್ಗಟ್ಟಿನ ಬಲಕ್ಕೂ ಇರುವ ತಾರತಮ್ಯವನ್ನು ವಾಚಕರೇ ಊಹಿಸಿಕೊಳ್ಳಬಹುದು. ಹೇಗೂ ಬಾರ್ಡೋಲಿಯ ರೈತರು ಇಡೀ ಹಿಂದೂದೇಶದ ಭೂಮಾಲೀಕರ ಒಂದು ಪ್ರಾಮುಖ್ಯ ಪಕ್ಷವನ್ನು ಕಾಪಾಡಿರುವರು. ಭೂಕಂದಾಯವನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಮನಬಂದಂತೆ ಏರಿಸಕೂಡದು, ಹಾಗೆ ಏರಿಸಬೇಕಾದರೆ ನ್ಯಾಯದ ಪ್ರಕಾರ ವಿಚಾರಣೆ ನಡಿಸಬೇಕೆಂಬ ತತ್ವವನ್ನು ಸ್ಥಾಪಿಸಲು ಪ್ರಥಮತಃ ಹೋರಾಡಿದ ಕೀರ್ತಿಯು ಬಾರ್ಡೋಲಿಯ ಸತ್ಯಾಗ್ರಹಿಗಳಿಗೆ ಕೂಡಿದೆ. ಇವರು ನಿಜವಾಗಿಯೂ ಹಿಂದೂದೇಶದ ಸ್ವರಾಜ್ಯದ ದಾರಿಯನ್ನು ಮಹಾತ್ಮ ಗಾಂಧಿಯವರ ಬೋಧನೆಯಂತೆ ಆಚರಿಸಿ ತೋರಿಸಿರುವರು.

## ದಿವಂಗತ ರಾಮನಾಡು ರಾಜರು.

ರಾಮನಾಡಿನ ರಾಜರಾದ ರಾಜ ರಾಜೇಶ್ವರ ಸೇತುಪತಿಯವರು ಕಲವು ತಿಂಗಳುಗಳಿಂದ ಕಾಯಿಲಸ್ಥರಾಗಿದ್ದು ಈ ತಾ ೪ರಲ್ಲಿ ಬೆಳಿಗ್ಗೆ ರಾಮನಾಡಿನಲ್ಲಿ ಶಿವಾಧೀನರಾದರೆಂದು ಕೇಳಲು ವ್ಯಸನಪಡುತ್ತೇವೆ. ಇವರು ದಕ್ಷಿಣ ಇಂಡಿಯಾದ ದೊಡ್ಡ ಜಮೀನ್ದಾರರುಗಳ ಪೈಕಿ ಒಬ್ಬರಾಗಿದ್ದು, ಒಳ್ಳೇ ವಿದ್ಯಾವಂತರಾಗಿ ದೇಶದ ಕಾರ್ಯಗಳಲ್ಲಿ ತುಂಬಾ ಭಾಗ ತೆಗೆದುಕೊಳ್ಳುತ್ತಿದ್ದರು. ಹಲವು ವರ್ಷಗಳಿಂದ ಅಲ್ಲಿಯ ಡಿಸ್ಟ್ರಿಕ್ಟ್ ಬೋರ್ಡಿನ ಪ್ರಸಿಡೆಂಟರಾಗಿಯೂ ಮದ್ರಾಸು ಕೌನ್ಸಿಲಿನ ಮೆಂಬರಾಗಿಯೂ ಇದ್ದರು. ಮದ್ರಾಸು ಜಮೀನ್ದಾರರ ಸಂಘದ ಒಬ್ಬ ಸೀನಿಯರ್ ವೈಸ್ ಪ್ರಸಿಡೆಂಟರೂ ಆಗಿದ್ದರು. ಇವರು ತಮ್ಮ ಸ್ವಂತ ಖರ್ಚಿನಿಂದ ಒಂದು ಹೈಸ್ಕೂಲನ್ನು ನಡಿಸುತ್ತಿದ್ದರು.

ಇವರು ಧರ್ಮ ಕಾರ್ಯಗಳಲ್ಲಿ ಉತ್ಸಾಹವುಳ್ಳವರಾಗಿದ್ದರೆಂಬುದು ಕೊಡಗಿನವರಿಗೆ ಚೆನ್ನಾಗಿ ಗೊತ್ತಿದೆ. ಇವರು ತಲಕಾವೇರಿಯಲ್ಲಿ ಸುಮಾರು ಐದು ಸಾವಿರ ರೂಪಾಯಿ ಖರ್ಚು ಮಾಡಿ ಒಂದು ಛತ್ರವನ್ನು ಕಟ್ಟಿಸಿ ಶ್ರೀ ಕಾವೇರಮ್ಮನ ಭಕ್ತರ ಕೃತಜ್ಞತೆಯನ್ನು ಪಡೆದಿರುವರು. ತಳೆದ ವರ್ಷ ಇವರು ಮಡಿಕೇರಿಗೆ ದಯಮಾಡಿಸಿದ್ದು ಹಲವರಿಗೆ ನೆನಪಿರಬಹುದು. ಇವರ ಮರಣವು ಕೊಡಗಿನವರಿಗೂ ವಿಷಾದವನ್ನುಂಟುಮಾಡದೆ ಇರದು. ಇವರ ಆತ್ಮಕ್ಕೆ ಶಾಂತಿ ಇರಲಿ.

## ಗ್ರಾಮಗಳ ಪುನರುದ್ಧಾರ.

(ಬರೆದು ಬಂದದ್ದು)

(ತಳೆದ ವಾರದಿಂದ ಮುಂದುವರಿದದ್ದು)

ವ್ಯವಸಾಯ ವಿದ್ಯೆ.

ಪ್ರಥಮದಲ್ಲಿ ರೈತರ ಅಜ್ಞಾನವನ್ನು ನೀಗಿಸುವುದಕ್ಕಾಗಿ ಸಾಮಾನ್ಯ ವಿದ್ಯೆಯೂ ಉಪಯೋಗ ಜ್ಞಾನಕ್ಕಾಗಿ ವ್ಯವಸಾಯ ಕ್ರಮ ಬೋಧನೆಯೂ ಅವರಲ್ಲಿ ಹರಡುವಂತೆ ಮಾಡುವುದು ಮುಖ್ಯವಾಗಿದೆ. ಕೃಷಿಶಾಸ್ತ್ರ ಅಭ್ಯಾಸವು ನಮ್ಮ ಸೀಮೆಯಲ್ಲಿ ಪ್ರಯೋಜನಕ್ಕೆ ಬರಬೇಕಾದರೆ ಈಗಿನ ವ್ಯವಸಾಯ ಶಿಕ್ಷಣ ಶಾಲೆಗಳು ಉಚ್ಚ ಶಿಕ್ಷಣವನ್ನು ಕೊಟ್ಟು ಕೃಷಿಕಲಾ ನಿಪುಣರನ್ನೂ, ವ್ಯವಸ್ಥಾಪಕರನ್ನೂ ಗ್ರಾಮಗಳಿಗೆ ಆಗಿಂದಾಗ್ಯೆ ಕಳುಹಿಸುತ್ತಾ ಇರಬೇಕು. ವಿದ್ಯಾವಂತರಾದವರು ಕೃಷಿ ಕಸಬನ್ನು ಅವಲಂಬಿಸಿ ನೂತನ ರೀತಿಯ ವ್ಯವಸಾಯದಿಂದ ಬರುವ ಪ್ರಯೋಜನವನ್ನು ಅನುಭವಿಸಬೇಕು. ನಮ್ಮ ರೈತರು ಈಗ ಸಾಗ ಹಳೆಯಲ್ಲಿರುವ ಭೂಮಿಯ ಸಾರವನ್ನು ಹೆಚ್ಚಿಸುವುದರ ಜೊತೆಗೆ ಇನ್ನು ಪಾಳುಬಿದ್ದಿರುವ ಜಮೀನನ್ನು ರೂಢಿಗೆ ತಂದು ವ್ಯವಸಾಯವನ್ನು ವೃದ್ಧಿಗೊಳಿಸದೆ ಇದ್ದರೆ ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ಗ್ರಾಮನಿವಾಸಿಗಳಿಗೆ ಹಿತಕರವಾಗಿ ದವಸಧಾನ್ಯವನ್ನು ಪಡೆಯಲು ಸಾಧ್ಯವಿಲ್ಲ. ಗ್ರಾಮನಿವಾಸಿಗಳ ಮಕ್ಕಳು ವಿದ್ಯಾವಂತರಾದರೆ ನಮ್ಮ ಕೃಷಿ ಕಸಬು ನಾಶವಾಗುವುದೇ? ಎಂದೂ ಇಲ್ಲ. ಸಮುದ್ರದಾಚೆ ಇರುವ ದೇಶಗಳಲ್ಲಿ ವಿದ್ಯಾವಂತರ ಸಂಖ್ಯೆಯು ಹೆಚ್ಚಾಗಿದ್ದರೂ ಕಸಬುಗಳೆಲ್ಲವೂ ದಿನೇ ದಿನೇ ಪ್ರಬಲವಸ್ಥೆಯ ಹುತ್ತಿವೆಯಲ್ಲವೇ? ಇದಕ್ಕೆ ಕಾರಣವೇನು. ವಿದ್ಯಾವಂತರಾದಾಗ್ಯೂ ಉಳಬೇಕಾದವರು ಭೂಮಿಯನ್ನು ಉಳಲು ಸಿದ್ಧರಾಗಿರುವರು. ವಿದ್ಯಾವಂತರಾದ ಮಾತ್ರಕ್ಕೆ ತಮ್ಮ ಕಸಬನ್ನು ಯಾತಕ್ಕೆ ಉಪೇಕ್ಷಿಸಬೇಕು. ವಿದ್ಯಾವಿಶಾರದನಾಗಲಿ, ವಿದ್ಯಾವಿಹೀನನಾಗಲಿ ಪ್ರತಿಯೊಬ್ಬ ಮಾನವನೂ ತನ್ನ ಕಾಲಕ್ಷೇಪವನ್ನು ಮಾಡಿಕೊಳ್ಳಬೇಕಲ್ಲವೆ? ಅದಕ್ಕಾಗಿ ಯಾವುದಾದರೊಂದು ಉದ್ಯೋಗವನ್ನಾಶ್ರಯಿಸುವುದು ಅಗತ್ಯವೇ ಆಗಿದೆ. ಮಾನವನು ತನ್ನ ಕಸಬಿನಲ್ಲಿ ಹೆಚ್ಚು ಬುದ್ಧಿಯನ್ನೂ, ಚಟುವಟಿಕೆಯನ್ನೂ ತೋರಿಸುವನೋ ಅವನೇ ಗಟ್ಟಿಗನು. ಹೆಚ್ಚು ಆದಾಯವನ್ನು ಪಡೆಯಬೇಕೆಂದಿರುವ ಪ್ರತಿಯೊಬ್ಬ ಗ್ರಾಮನಿವಾಸಿ ಅಥವ ರೈತ ತರುಣನು ಬೇಸಾಯವನ್ನೇ ಕೈಕೊಳ್ಳಬೇಕಾಗಿದೆ. ವಿದ್ಯಾವಂತನಾದ ಮಾತ್ರಕ್ಕೆ ಎಲ್ಲರೂ ಸರ್ಕಾರಿ ಹುದ್ದೆಗೆ ಅರ್ಹರೇ? ಎಂದಿಗೂ ಸಾಧ್ಯವಿಲ್ಲ. ಸರ್ಕಾರಿ ಹುದ್ದೇದಾರನಾಗಬೇಕಾದರೆ ಅದಕ್ಕೆ ತಕ್ಕ ಯೋಗ್ಯತೆ ಯಾರಲ್ಲಿ ನೆಲೆಗೊಂಡಿರುವುದೋ ಅವರೇ ಅದಕ್ಕೆ ಅರ್ಹರು. ಆಧುನಿಕ ಕಾಲದಲ್ಲಿ ವಿದ್ಯಾವಂತರಾಗಿರುವ ಅನೇಕರು ನಿರುದ್ಯೋಗಿಗಳಾಗಿ ಬಹಳ ಸಮಯದವರೆಗೆ ಅಲೆದಾಡುತ್ತಿರುವರು. ವಿದ್ಯಾವಂತರಿಗೆಲ್ಲಾ ಸರ್ಕಾರ ಹುದ್ದೆಯು ದೊರಕುವುದೇ ದುರ್ಲಭ. ಹೀಗಿರುವಾಗ ಸ್ವಗೌರವವನ್ನೂ, ಸ್ವಾತಂತ್ರ್ಯವನ್ನೂ ಅಭಿಲಾಷಿಸುವ ಪ್ರತಿಯೊಬ್ಬ ಗ್ರಾಮನಿವಾಸಿಯು ಕೃಷಿಯನ್ನೇ ಕೈಕೊಳ್ಳಬೇಕು. ಎಂದರೆ ಕಡಿಮೆ ತಲೆಯ ಹುದ್ದೆಯನ್ನು ಸ್ವೀಕರಿಸಿ ಅದರಲ್ಲಿ ನೇಚಾಡುವುದಕ್ಕಿಂತ ಕೃಷಿಯನ್ನೇ ಆಶ್ರಯಿಸುವುದು ಉತ್ತಮ. ಯಾತಕ್ಕೆಂದರೆ—ಬೇಸಾಯವು ತಮಗೆ ದೊರೆಯಬಹುದಾದ ಕಡಿಮೆ ತಲೆಯ ಹುದ್ದೆಗಿಂತಲೂ ಹೆಚ್ಚು ಆದಾಯಕರವಾದುದಾಗಿದೆ. ಆದಕಾರಣ ಬೇಸಾಯವು ಹೆಚ್ಚು ಲಾಭಕರವಾಗಬೇಕಾದರೂ ಗ್ರಾಮನಿವಾಸಿಯು ಕೇವಲ ಸುಗಮವಾದ ಜೀವನವನ್ನು ನಡೆಸಬೇಕಾದರೂ ಮುಂದಿನ ಗ್ರಾಮನಿವಾಸಿಗಳೆಲ್ಲರೂ ವಿದ್ಯಾವಂತರಾಗಬೇಕು. ಈಗ ವಿದ್ಯಾವಂತರಾದ ಮತ್ತು ಸ್ವಾತಂತ್ರ್ಯದ ಮಹಿಮೆಯನ್ನು ಅರಿತ ಗ್ರಾಮನಿವಾಸಿಗೆ ವ್ಯವಸಾಯವಲ್ಲದೆ ಬೇರೆ ಯಾವ ಕೆಲಸವೂ ರುಚಿಸದು.

ಕಸಬುಗಳು.

ವ್ಯವಸಾಯ ವಿದ್ಯಾಭ್ಯಾಸದ ಮೂಲಕ ಪ್ರಥಮ ಆರಂಭವನ್ನು ಸ್ಥಾಪಿಸಿದನಂತರ ಕಸಬುಗಳನ್ನು ಅಭಿವೃದ್ಧಿಪಡಿಸಲಿಕ್ಕೆ ಶಾಸ್ತ್ರಜ್ಞಾನವು ಅತ್ಯಾವಶ್ಯಕವಾಗಿರಬೇಕು. ವ್ಯಾಪಾರದಿಂದ ಹೇರಳವಾದ ಲಾಭವು ದೊರೆಯಬೇಕಾದರೆ ವ್ಯವಸಾಯದಿಂದ ಹುಟ್ಟುವ ಪದಾರ್ಥಗಳನ್ನು ಹೇರಳವಾಗಿ ಬೆಳೆಯಬೇಕು. ನಮ್ಮ ದೇಶದಲ್ಲಿ ನಮಗೆ ಬೇಕಾಗುವುದಕ್ಕಿಂತಲೂ ಹೆಚ್ಚಾಗಿ ಹುಟ್ಟುವ ಪದಾರ್ಥಗಳ ದೊರೆಯುವುವು. ಶಾಸ್ತ್ರರೀತ್ಯ ಅನೇಕ ಸಾಮಗ್ರಿಗಳನ್ನು ಈ ಹುಟ್ಟುವ ಪದಾರ್ಥದಿಂದ ಸಿದ್ಧಮಾಡಿಕೊಂಡು ಇತರ ದೇಶಗಳಿಗೂ ಕಳುಹಿಸಬಹುದು. ಹಾಗಾದರೆ ಇಂಥಾ ಕಸಬುಗಳಿಗೆ ಉತ್ತೇಜನವನ್ನು ಕೊಡಬೇಕಾದರೆ ವ್ಯವಸಾಯ ಶಿಕ್ಷಕರಾದ ಗ್ರಾಮನಿವಾಸಿಗಳು ಉತ್ಸಾಹವನ್ನು ತೋರಿಸಿ ಗ್ರಾಮಾಂತರಗಳಲ್ಲಿ ತಿರುಗಿ ಗ್ರಾಮದಲ್ಲಿ ರೈತರು ಮಾಡುತ್ತಿರುವ ಚಿಕ್ಕಪುಟ್ಟ ಕಸುಬುಗಳನ್ನು ಪರೀಕ್ಷಿಸಿ ಅವರಿಗೆ ಶಾಸ್ತ್ರರೀತ್ಯ ಅಂಥಾ ಸಾಮಗ್ರಿಗಳನ್ನು ಮಾಡಲು ಕಲಿಸಿಕೊಡಬೇಕು.

ಸಶೇಷ

## ಮಹಾತ್ಮಗಾಂಧಿಯವರ ಸ್ವಚರಿತ್ರೆ.

ಐದನೇ ಭಾಗದಲ್ಲಿ ೧ನೇ ಪ್ರಕರಣ.

ಮೊದಲನೆಯ ಅನುಭವ.

ಫೀನಿಕ್ಸಿನಿಂದ ಹೊರಟ ಸಂಗಡವು ನಾನು ಸ್ವದೇಶವನ್ನು ಮುಟ್ಟುವುದಕ್ಕಿಂತ ಮುಂಚೆಯೇ ಅಲ್ಲಿಗೆ ತಲುಪಿದ್ದಿತು. ನಮ್ಮ ಮೊದಲಿನ ಏರ್ಪಾಡಿನ ಪ್ರಕಾರ ನಾನೇ ಅವರಿಗಿಂತ ಮುಂಚೆ ಬಂದಿರಬೇಕಾಗಿದ್ದಿತು. ಆದರೆ ಯುದ್ಧ ಸಂಬಂಧವಾಗಿ ಇಂಗ್ಲೆಂಡಿನಲ್ಲಿ ನನಗೆ ಒದಗಿದ ಕೆಲಸವು ಈ ಏರ್ಪಾಡನ್ನು ತಲೆಕೆಳಗೆ ಮಾಡಿಬಿಟ್ಟಿತು. ಇಂಗ್ಲೆಂಡಿನಲ್ಲಿ ಎಷ್ಟು ಕಾಲ ಇರಬೇಕೆಂಬುದನ್ನು ನಿಶ್ಚಯಿಸಲಶಕ್ಯವೆಂಬುದು ನನಗೆ ಕಂಡುಬಂದಿತು. ಈಗ ನಾನು ಫೀನಿಕ್ಸ್ ಸಂಗಡವು ಎಲ್ಲಿ ವಾಸಿಸಬೇಕೆಂಬ ಪ್ರಶ್ನೆಯನ್ನು ನಿರ್ಧರಿಸಬೇಕಾಗಿ ಬಂದಿತು. ಸಾಧ್ಯವಾದರೆ ಅವರೆಲ್ಲರೂ ಒಟ್ಟಿಗೆ ಹಿಂದೂಸ್ಥಾನದಲ್ಲಿದ್ದು ಅವರು ಫೀನಿಕ್ಸ್ ಆಶ್ರಮದಲ್ಲಿ ನಡೆಸುತ್ತಿದ್ದ ಜೀವನವನ್ನೇ ನಡೆಸಬೇಕೆಂದು ನನ್ನ ಇಷ್ಟವಿದ್ದಿತು. ಅವರು ಹೋಗಿ ಇರಲು ಯೋಗ್ಯವಾದ ಆಶ್ರಮವಾವುದೂ ನನಗೆ ಗೊತ್ತಿರಲಿಲ್ಲ. ಆದುದರಿಂದ ಅವರು ಮಿ. ಆಂಡ್ರ್ಯೂಸರನ್ನು ಕಂಡು, ಅವರ (ಆಂಡ್ರ್ಯೂಸರ) ಸಲಹೆಯಂತೆ ನಡೆಯಬೇಕೆಂದು ಫೀನಿಕ್ಸ್ ಸಂಗಡದವರಿಗೆ ತಾರು ಕೊಟ್ಟೆನು.

ಮೊದಲು ಅವರು ಕಾಂಗ್ರಿಯ (ಹರಿದ್ವಾರದ) ಗುರುಕುಲದಲ್ಲಿ ಇಳಿದರು. ಅಲ್ಲಿ ದಿವಂ. ಸ್ವಾಮಿ ಶ್ರದ್ಧಾನಂದಜಿಯವರು ಅವರನ್ನು ತಮ್ಮ ಮಕ್ಕಳಂತೆಯೇ ಕಂಡರು. ಇದಾದ ಮೇಲೆ ಅವರನ್ನು ಶಾಂತಿನಿಕೇತನ ಆಶ್ರಮಕ್ಕೆ ಕೊಂಡೊಯ್ದರು. ಅಲ್ಲಿ ಕವಿ ರವೀಂದ್ರರೂ ಅವರ ಜನರೂ ಈ ಸಂಗಡದ ಮೇಲೆ ಅದೇ ರೀತಿಯಾಗಿ ಪ್ರೇಮ ವರ್ಷವನ್ನು ಸುರಿಸಿದರು. ಇವೆರಡು ಸ್ಥಳಗಳಲ್ಲಿಯೂ ಅವರು ಸಂಪಾದಿಸಿದ ಅನುಭವವು ಅವರಿಗೂ, ನನಗೂ ಸಹಾಯವಾಯಿತು. ರವೀಂದ್ರರೂ, ಶ್ರದ್ಧಾನಂದಜಿಯವರೂ ಮತ್ತು ಅಧ್ಯಾಪಕ ಸುಶೀಲರುದ್ರರೂ ನಾನು ಆಂಡ್ರ್ಯೂಸರಿಗೆ ಹೇಳುತ್ತಿದ್ದಂತೆ, ಅವರ (ಆಂಡ್ರ್ಯೂಸರ) ತ್ರಿಮೂರ್ತಿಗಳಾಗಿದ್ದರು. ಅವರು ದಕ್ಷಿಣ ಆಫ್ರಿಕದಲ್ಲಿದ್ದಾಗ ಇವರುಗಳ ವಿಷಯವಾಗಿ ಮಾತನಾಡಲು ಅವರಿಗೆ ಬೇಸರವೇ ಆಗುತ್ತಿರಲಿಲ್ಲ. ಅಲ್ಲಿನ ಅನೇಕ ಸವಿ ನೆನಪುಗಳಲ್ಲಿ ಇವರು ಆ ಮಹಾ ತ್ರಿಮೂರ್ತಿಗಳ ವಿಷಯವಾಗಿ ಹಗಲಿರುಳೂ ಮಾತನಾಡುತ್ತಿದ್ದುದಕ್ಕಿಂತ ಹೆಚ್ಚು ಮಧುರವಾದುದೂ, ಸ್ಪಷ್ಟವಾದುದೂ ಯಾವುದೂ ಇಲ್ಲ. ಆದುದರಿಂದ ಮಿ. ಆಂಡ್ರ್ಯೂಸರು ಫೀನಿಕ್ಸ್ ಸಂಗಡಕ್ಕೆ ಸುಶೀಲರುದ್ರರ ಸಂಪರ್ಕವನ್ನೂ ಉಂಟುಮಾಡಿದರು. ಅಧ್ಯಾಪಕ ರುದ್ರರಿಗೆ ಯಾವ ಆಶ್ರಮವೂ ಇರಲಿಲ್ಲ. ಅವರಿಗಿದ್ದುದು ತಮ್ಮ ಮನೆ. ಅದನ್ನು ಅವರು ಫೀನಿಕ್ಸ್ ಕುಟುಂಬದ ಸ್ವಾಧೀನಕ್ಕೆ ಬಿಟ್ಟು ಕೊಟ್ಟರು. ಅವರ ಮನೆಯವರು ಸಂಗಡದವರನ್ನು ಎಷ್ಟು ಆದರದಿಂದ ಕಂಡರೆಂದರೆ ಸಂಗಡವು ಬಂದಿಳಿದ ಒಂದು ದಿನದಲ್ಲಿಯೇ ಅವರು ಫೀನಿಕ್ಸ್ ಆಶ್ರಮವನ್ನು ಮರೆತಂತೆ ಕಂಡಿತು.

ಫೀನಿಕ್ಸ್ ಕುಟುಂಬವು ಶಾಂತಿನಿಕೇತನದಲ್ಲಿರುವುದೆಂಬುದು ನಾನು ಮುಂಬಯಿಯ ಬಂದರಿನಲ್ಲಿಳಿದಾಗಲೇ ನನಗೆ ಗೊತ್ತಾದುದು. ಆದುದರಿಂದ ನಾನು ಗೋಖಲೆಯವರೊಡನೆ ಭೇಟಿಯಾದ ಮೇಲೆ ಆದಷ್ಟು ಜಾಗ್ರತೆಯಾಗಿ ಸಂಗಡವನ್ನು ನೋಡಲು ಆತುರನಾಗಿದ್ದೆನು.

ಮುಂಬಯಿಯಲ್ಲಿ ನನಗಾಗಿ ಏರ್ಪಡಿಸಿದ ಸ್ವಾಗತ ಸಭೆಗಳು ನಾನು ಸಣ್ಣ ಸತ್ಯಾಗ್ರಹವನ್ನು ನಡೆಸಲು ಕಾರಣವಾದವು.

ನನ್ನ ಸನ್ಮಾನಾರ್ಥವಾಗಿ ಮಿ. ಜಹಾಂಗೀರ್ ಪೆಟಿಟರ ಮನೆಯಲ್ಲಿ ಕೂಡಿದ ಸಭೆಯಲ್ಲಿ ನನಗೆ ಗುಜರಾತಿಯಲ್ಲಿ ಮಾತನಾಡಲು ಧೈರ್ಯವುಂಟಾಗಲಿಲ್ಲ. ಮಹಾವೈಭವದಿಂದ ಬೆಳಗುತ್ತಿದ್ದ ಆ ಪ್ರಾಸಾದದ ಆವರಣದಲ್ಲಿ ಜೀವನದ ಮುಖ್ಯಭಾಗವನ್ನು ಕರಾರು ಕೂಲಿಗಾರರ ಮಧ್ಯೆ ಕಳೆದಿದ್ದ ನಾನು ನನ್ನ ಮನಸ್ಸಿಗೇ ಹಳ್ಳಿಯ ಗಾಂಡನಂತೆ ತೋರಿದೆನು. ಕಾಠ್ಯವಾಡಿ ನಿಲುವಂಗಿ, ಪೇಟಾ ಮತ್ತು ಪಂಚೆಯನ್ನು ಹಾಕಿಕೊಂಡಿದ್ದೆನು. ನಾನು ಆಗ, ನಾನು ಇಂದು ಕಾಣುವುದಕ್ಕಿಂತ ಅಂದು ಹೆಚ್ಚು ಮಟ್ಟಿಗೆ ನಾಗರೀಕನಾಗಿ ಕಂಡಿದ್ದಿರಬೇಕು. ಆದರೆ ಮಿ. ಪೆಟಿಟರ ಮನೆಯ ಭವನದ ವೈಭವ ಸಮಾರಂಭಗಳು ನನ್ನನ್ನು ನೀರಿನಿಂದ ಹೊರಗೆ ಬಂದ ಮೀನಿನಂತೆ ಮಾಡಿದುವು. ಆದರೂ ನಾನು ಸರ್ ಫಿರೋಜ್ ಷಹರ ಆಶ್ರಯವನ್ನು ಹುಡುಕ್ಕಿ ನಗೆಗೀಡಾಗದೆ ಗೆದ್ದೆನು.

ಇದಾದ ಮೇಲೆ ಗುಜರಾತಿ ಕೂಟವಿದ್ದಿತು. ಸ್ವಾಗತ ಸಭೆಯಲ್ಲಿ ನನಗೆ ಮನ್ನಣೆಮಾಡದೆ ಗುಜರಾತಿಗಳು ನನ್ನನ್ನು ಬಿಡುವುದೆಲ್ಲಿ? ಈ ಸಭೆಯನ್ನು ದಿವಂ. ಉತ್ತಮಲಾಲ್ ತ್ರಿವೇದಿಯವರು ಏರ್ಪಡಿಸಿದ್ದರು. ಇದರ ಕಾರ್ಯಕ್ರಮವನ್ನು ನಾನು ಮುಂಚೆಯೇ ತಿಳಿದುಕೊಂಡಿದ್ದೆನು. ಮಿ. ಜಿನ್ನಾರವರು ಗುಜರಾತಿನವರು. ಆದುದರಿಂದ ಅವರೂ ಅಲ್ಲಿಗೆ ಬಂದಿದ್ದರು—ಅಧ್ಯಕ್ಷರಾಗಿಯೋ ಅಥವಾ ಪ್ರಧಾನ ಉಪನ್ಯಾಸಕರಾಗಿಯೋ ನನಗೆ ನೆನಪಿಲ್ಲ. ಅವರು ತಮ್ಮ ಮಧುರವಾದ ಸಂಕ್ಷೇಪವಾದ ಭಾಷಣವನ್ನು ಇಂಗ್ಲೀಷಿನಲ್ಲಿ ಮಾಡಿದರು. ನನಗೆ ನೆನಪಿರುವ ಮಟ್ಟಿಗೆ ಉಳಿದ ಭಾಷಣಗಳಲ್ಲಿ ಬಹು ಭಾಗವು ಇಂಗ್ಲೀಷಿನಲ್ಲಿಯೇ ನಡೆಯಿತು. ನನ್ನ ಸರದಿಯು ಬಂದಾಗ ನಾನು ನನ್ನ ಕೃತಜ್ಞತೆಯನ್ನು ಗುಜರಾತಿಯಲ್ಲಿ ವ್ಯಕ್ತಪಡಿಸುತ್ತಾ, ಗುಜರಾತೀ ಹಿಂದೂಸ್ಥಾನೀ ಭಾಷೆಗಳಲ್ಲಿ ನನಗಿರುವ ಪಕ್ಷಪಾತಕ್ಕೆ ಕಾರಣವನ್ನು ವಿವರಿಸಿ ಗುಜರಾತಿ ಜನರು ಕೂಡಿರುವ ಸಭೆಯಲ್ಲಿ ಇಂಗ್ಲೀಷಿನಲ್ಲಿ ಮಾತನಾಡುವುದನ್ನು ನಮ್ರತಾಪೂರ್ವಕವಾಗಿ ವಿರೋಧಿಸಿದೆನು. ಹೀಗೆ ಮಾಡುವಾಗ ನಾನು ಸ್ವಲ್ಪ ಹಿಂದೆಗೆಯದೆ ಇರಲಿಲ್ಲ. ಏಕೆಂದರೆ—ದೀರ್ಘಪ್ರವಾಸದಿಂದ ಹಿಂತಿರುಗಿದ ಅನನುಭವಿ ಸಾಲದ ಮನುಷ್ಯನು ನಡೆವಳಿಕೆಯಲ್ಲಿರುವ ಪದ್ಧತಿಗಳನ್ನು ವಿರೋಧಿಸುವುದು ಎಲ್ಲಿ ಅವಿನಯ ವರ್ತನೆಯೆಂದು ಎಣಿಸಲ್ಪಡುವುದೋ ಎಂಬ ದಿಗಿಲು ನನಗಿದ್ದಿತು. ಆದರೆ ಗುಜರಾತಿಯಲ್ಲಿಯೇ ಉತ್ತರಕೊಡಬೇಕೆಂದು ನಾನು ಹಠಹಿಡಿದುದನ್ನು ಯಾರೂ ತಪ್ಪು ತಿಳಿದುಕೊಂಡಂತೆ ತೋರಲಿಲ್ಲ. ಅಷ್ಟೇಕೆ, ಪ್ರತಿಯೊಬ್ಬರೂ ನನ್ನ ವಿರೋಧವಾದಕ್ಕೆ ಸಮ್ಮತಿಸಿದಂತೆಯೇ ತೋರಿತು. ಇದರಿಂದ ನನಗೆ ಸಂತೋಷವಾಯಿತು.

ದೇಶಬಾಂಧವರ ಮುಂದೆ ನನ್ನ ಹೊಸ ರೀತಿಯ ಅಭಿಪ್ರಾಯಗಳನ್ನು ನಿರ್ದೇಶಿಸಲು ಕಷ್ಟವೇನೂ ಆಗುವುದಿಲ್ಲವೆಂದು ಯೋಚಿಸಲು ಈ ಸಭೆಯಿಂದ ನಾನು ಎದೆಗೊಂಡೆನು.

ನಾನು ಮುಂಬಯಿಯಲ್ಲಿ ಕೊಂಚ ಕಾಲ ಮಾತ್ರ ನಿಂತೆನು. ಈ ಅಲ್ಪಕಾಲವು ಈ ರೀತಿಯ ಪ್ರಾಥಮಿಕ ಅನುಭವಗಳಿಂದ ತುಂಬಿದ್ದಿತು. ಅಲ್ಲಿಂದ ನಾನು ಗೋಖಲೆಯವರ ಆಜ್ಞೆಯ ಪ್ರಕಾರ ಪೂನಾಕ್ಕೆ ಹೋದೆನು.

---

## ಸಣ್ಣ ಮಕ್ಕಳ ಮೈ ತೊಳೆಯುವುದು ಮತ್ತು ಅವುಗಳ ಉಡಿಗೆ.

ಶುಚಿಯಾಗಿರುವ ಮಕ್ಕಳಿಗೂ, ಬಹಳ ಕೊಳಕು ಮಕ್ಕಳಿಗೂ ಇರುವ ವ್ಯತ್ಯಾಸವೇನೆಂಬುದು ನಮ್ಮೆಲ್ಲರಿಗೂ ತಿಳಿದ ವಿಷಯವೇ! ಶುಚಿಯಾದ ಮಕ್ಕಳನ್ನು ನೋಡುವಾಗಲೇ ಆನಂದವಾಗುವುದು. ಅವು ನಮ್ಮ ಕಣ್ಣನ್ನೂ, ಮನಸ್ಸನ್ನೂ ಆಕರ್ಷಿಸುವುವು. ನೋಡಿದೊಡನೆ ಅವುಗಳನ್ನು ಕೈಗೆತ್ತಿ ಮುದ್ದಾಡಬೇಕೆಂಬ ಆಸೆಯು ಹುಟ್ಟುವುದು. ಇದಕ್ಕೆ ವಿರುದ್ಧವಾಗಿ ಕೊಳಕು ಮಕ್ಕಳನ್ನು ಕಂಡರೆ ಮುಟ್ಟುವುದಕ್ಕಾಗಲಿ, ಮಾತಾಡಿಸುವುದಕ್ಕಾಗಲಿ ಮನಸ್ಸು ಬಾರದು. ಅವುಗಳನ್ನು ಎತ್ತಿ ಮುದ್ದಾಡುವ ಮಾತು ಹಾಗಿರಲಿ, ಅವು ಪ್ರೀತಿಯಿಂದ ತಾವಾಗಿ ಬಂದು ಪಕ್ಕದಲ್ಲಿ ಕುಳಿತರೆ ಸ್ವಲ್ಪ ಹಿಂದಕ್ಕೆ ಸರಿಯುವಂತೆಯೂ ಆಗುವುದು. 'ಹೆತ್ತವರಿಗೆ ಹೆಗ್ಗಣ ಮುದ್ದು' ಎಂಬ ಗಾದೆಯಂತೆ ಹೆತ್ತ ತಾಯಿಯು ಮಾತ್ರ ವಿಧಿಯಿಲ್ಲದೆ ಅಂತಹ ಮಕ್ಕಳನ್ನೂ ಎತ್ತಿ ಉಪಚರಿಸಬೇಕಾಗುವುದು. ಅಸಹ್ಯಪಡದೆ ಅದರ ಕಣ್ಣು ಮೂಗು ಕನ್ನಗಳನ್ನೆಲ್ಲಾ ಕೊಳೆಯು ಒದ್ದೆಯಾಗಿ, ಒಳ್ಳೇ ಉಡುಗೆಗಳನ್ನು ತೊಡಿಸಿ, ಲಕ್ಷಣವಾಗಿರಿಸಲು ಆಕೆ ಬಯಸುವಳು. ಆದರೆ ಕೆಲವು ತಾಯಿಯರು ಹೆತ್ತ ಕರುಳಿಗೆ ಮಾತ್ರ ಮಕ್ಕಳ ಲಾಲನೆ ಪಾಲನೆಗಳನ್ನು ಮಾಡುತ್ತ, ಅವುಗಳ ಆಟಪಾಟಗಳನ್ನು ನೋಡಿ ಹಿಗ್ಗುವರೇ ಹೊರತು, ಆ ಮಕ್ಕಳನ್ನು ಶುಚಿಯಾಗಿಡುವ ಯೋಚನೆಯೇ ಅವರಿಗಿರುವುದಿಲ್ಲ. ಆ ಮಗುವಿನ ಮೈಕೊಳೆಯೆಲ್ಲಾ ಹೆಪ್ಪುಗಟ್ಟಿ ಅವುಗಳ ಕೈ ಮೈಗಳೆಲ್ಲಾ ಅಸಹ್ಯವಾಗಿ ಅವುಗಳ ಕಣ್ಣು ಮೂಗುಗಳೆಲ್ಲಾ ಅಸಹ್ಯವಾಗಿ ಕಶ್ಮಲವನ್ನು ಸುರಿಸುತ್ತಾ, ಕೈ ಕಾಲು ಚರ್ಮಗಳೆಲ್ಲಾ ಕಂಪೇರಿ ಹುಣ್ಣಾಗಿರುವುದನ್ನೂ ನೋಡದೆ ಅಲಕ್ಷ್ಯಮಾಡುವವರು ಕೆಲವರುಂಟು. ಇಂತಹ ತಾಯಿಯರು ಆ ಮಕ್ಕಳಿಗೆ ಶತ್ರುಗಳೇ ಹೊರತು ತಾಯಿಯರಲ್ಲ.

ಕೊಳೆಯೆಂಬುದೇ ಶಿಶುಗಳ ಪರಮಶತ್ರು. ಅಂತಹ ಶತ್ರುವಿನಿಂದ ಮಕ್ಕಳನ್ನು ಕಾಪಾಡುವುದು ಹೆತ್ತ ತಾಯಿಯರ ಮೊದಲನೆಯ ಕರ್ತವ್ಯವು. ಕೊಳೆಯಲ್ಲಿ ನಾನಾ ತರದ ವಿಷಕ್ರಿಮಿಗಳು ಸೇರಿರುವುವು. ಕಜ್ಜಿ, ಹೇನು, ಮುಂತಾದ ವಿಷಕೀಟಗಳು ಒಂದು ವೇಳೆ ಮಕ್ಕಳ ಮೈಯನ್ನು ಕಚ್ಚುವ ಸಂದರ್ಭದಲ್ಲಿ ನಾವು ಎಷ್ಟು ಆತುರದಿಂದ ಆ ವಿಷಜಂತುಗಳನ್ನು ಓಡಿಸಲು ಯತ್ನಿಸುವೆವೋ ಅದರಂತೆಯೇ ಮಗುವಿನ ಬಟ್ಟೆ, ಆಹಾರ, ಅದರ ಆಹಾರ ಪಾತ್ರೆಗಳು, ಅವುಗಳ ಮೈಮೇಲಿನ ಚರ್ಮ, ಈ ಎಲ್ಲಾ ಕಡೆಗಳಲ್ಲಿರುವ ಅಲ್ಪಸ್ವಲ್ಪ ಕೊಳೆಯನ್ನು ಕೂಡ ನಿವಾರಿಸಬೇಕು.

ಮಕ್ಕಳನ್ನು ಬಹಳ ಶುಚಿಯಾಗಿಡಬೇಕೆಂದರೂ ಸಾಧ್ಯವಿಲ್ಲ. ಮೊಳಕಾಲಿನ ಮೇಲೆ ಮಕ್ಕಳನ್ನು ಮಲಗಿಸಿ, ದಿನಕ್ಕೊಮ್ಮೆ ಬಿಸಿನೀರಿನ ಸ್ನಾನದಿಂದಲೋ ಇಲ್ಲವೇ ಬಿಸಿನೀರಿನಲ್ಲಿ ನೆನೆಸಿದ ಫ್ಲಾನಲ್ ಬಟ್ಟೆಯಿಂದ ಮೈಯೊರಸಿಯೋ ಶುಚಿಮಾಡುತ್ತಿರಬೇಕು. ನೀರಿನಲ್ಲಿ ಮೈ ತೊಳೆಯುವುದಾದರೆ ಶುದ್ಧವಾದ ಸೋಪನ್ನು ಸ್ವಲ್ಪ ಮಟ್ಟಿಗೆ ಉಪಯೋಗಿಸುವುದು ಉತ್ತಮವು. ಮಕ್ಕಳಿಗೆ ಸ್ನಾನಮಾಡಿಸಿ ಮೈಯೊರೆಸುವಾಗ, ಮೃದುವಾದ ಬಟ್ಟೆಯಿಂದ ಬಹಳ ಎಚ್ಚರಿಕೆಯಿಂದ ಚೆನ್ನಾಗಿ ಒರೆಸಿದ ಮೇಲೆ ಬೆನ್ನು, ಪೃಷ್ಠ, ತೊಡೆ ಈ ಮೊದಲಾಗಿ ಚರ್ಮವು ಮಡಿಸಿಕೊಳ್ಳುವ ಸ್ಥಳಗಳಲ್ಲಿ ಪೌಡರನ್ನು ಸವರಬೇಕು. 'ಫುಲ್ಲರ್ಸ್ ಅರ್ತ್ ಪೌಡರ್' ಎಂಬ ಹಿಟ್ಟು ಇದಕ್ಕೆ ಒಳ್ಳೆಯದು. ಮಕ್ಕಳ ತಲೆಯನ್ನು ಚೆನ್ನಾಗಿ ತೊಳೆಯಬೇಕು. ಆದರೆ ನಡು ತಲೆಯನ್ನು ಬಹಳ ಒತ್ತಿ ತಿಕ್ಕಬಾರದು. ತಲೆಯಲ್ಲಿ ದದ್ದುಗಳಿದ್ದರೆ ಎಣ್ಣೆ ಹಾಕಿ ಮೆಲ್ಲಗೆ ಸವರಬೇಕು. ಮಕ್ಕಳ ಬಾಯೊಳಗೆ ಕೈಹಾಕಿ ಶುದ್ಧಮಾಡಬೇಕೆಂಬ ಪ್ರಯತ್ನವನ್ನು ಮಾಡಬಾರದು.

ಕಣ್ಣುಗಳಲ್ಲಿ ಕಶ್ಮಲವಿದ್ದರೆ ಸ್ವಲ್ಪ ಬೋರಿಕ್ ಪುಡಿಯನ್ನು ಉಷ್ಣ ಜಲದಲ್ಲಿ ಕದಡಿ ಕಣ್ಣಿಗೆ ಬಿಟ್ಟು ತೊಳೆದರೆ ಕಣ್ಣಿಗೆ ಯಾವ ಉಪದ್ರವವೂ ಇರುವುದಿಲ್ಲ.

ಮಕ್ಕಳ ಸ್ನಾನಕ್ಕಾಗಿ ನೀರನ್ನು ಹದಮಾಡಿಕೊಳ್ಳುವುದರಲ್ಲಿಯೂ ಕೆಲವು ವಿಧಿಗಳುಂಟು. ಮೊದಲು ತೊಟ್ಟಿಯಲ್ಲಿ ತಣ್ಣೀರನ್ನು ಬಿಟ್ಟುಕೊಳ್ಳಬೇಕು. ತಣ್ಣೀರನ್ನು ಬಿಡುವುದಕ್ಕೆ ಮೊದಲು ಮಕ್ಕಳ ಮೈಮೇಲೆ ಬಿಸಿನೀರನ್ನು ಸುರಿದುದರಿಂದ ಎಷ್ಟೋ ಮಕ್ಕಳಿಗೆ ಮೈ ಚರ್ಮವು ಬೆಂದು ಹೋದುದುಂಟು. ಮಗುವು ಜಲ ಮಲ ವಿಸರ್ಜನೆ ಮಾಡಿದ ಮೇಲೆ ಆ ದ್ವಾರಗಳನ್ನು ಚೆನ್ನಾಗಿ ಒರೆಸಿ ಶುದ್ಧಮಾಡಿದೊಡನೆ ಆ ಸ್ಥಳದಲ್ಲಿ ಪೌಡರನ್ನು ಚಲ್ಲುವುದು ಒಳ್ಳೆಯದು. ಒಂದು ತಿಂಗಳಾದ ಮೇಲೆ ಮಕ್ಕಳ ಜಲ ಮಲ ವಿಸರ್ಜನೆ ವಿಷಯದಲ್ಲಿ ಸ್ವಲ್ಪ ಎಚ್ಚರ ತೆಗೆದುಕೊಂಡು ಕಾಲ ಕ್ರಮವಾಗಿ ಅವುಗಳನ್ನು ಕಾಲ ಮೇಲೆ ಕುಳ್ಳಿರಿಸಿಕೊಂಡು ಅಭ್ಯಾಸ ಮಾಡಿಸಿದರೆ ಆ ಅಭ್ಯಾಸವು ಬಳಕೆಗೆ ಬಂದುಬಿಡುವುದು. ಪ್ರತಿದಿನವೂ ಅದೇ ಕ್ಲುಪ್ತ ಕಾಲಕ್ಕೆ ವಿಸರ್ಜನ ಕಾರ್ಯವು ನಡೆಯುವುದರಿಂದ ಬಟ್ಟೆಗಳು ಕೆಡುವುದಕ್ಕೆ ಅವಕಾಶವಿರದು. ಮಕ್ಕಳಿಗೆ ಹಾಸುವ ಬಟ್ಟೆಯು ಮೃದುವಾಗಿರಬೇಕು. ಮಕ್ಕಳ ಬಟ್ಟೆಗಳನ್ನು ಸೋಡಾ ಹಾಕಿ ಶುದ್ಧ ಮಾಡಬಾರದು. ಜಲ ಮಲಗಳಿಂದ ಕೆಟ್ಟು ಹೋದ ಬಟ್ಟೆಯನ್ನು ಹಾಗೆಯೇ ಒರಸಿ ಬಿಸಿಲಿನಲ್ಲಿ ಒಣಗಿಸಿ ತಾಡು ಪುನಃ ಉಪಯೋಗಿಸಬಾರದು.

ಮಕ್ಕಳನ್ನು ಹೊರಗೆ ಎತ್ತಿಕೊಂಡು ಹೋಗುವಾಗ ಫ್ಲಾನಲ್ ಬಟ್ಟೆಯನ್ನು ಮೇಲೆ ಹೊದಿಸಿಕೊಂಡು ಹೋಗಬೇಕು.

ಮಕ್ಕಳಿಗೆ ಉಡುಪನ್ನು ಹಾಕುವಾಗ ಕತ್ತಿಗಾಗಲಿ, ತೋಳಿಗಾಗಲಿ ಬಿಗಿಯುವಂತೆ ಕಟ್ಟುಗಳಿರಬಾರದು. ಮೃದುವಾದ ಬಟ್ಟೆಗಳನ್ನು ಸಡಿಲವಾಗಿ ಉಡಿಸಬೇಕು. ಮಕ್ಕಳ ಕೈಕಾಲುಗಳಿಗೆ ಶೀತವೇರಿ ತಣ್ಣಗಾಗದಂತೆ ಹೊದ್ದಿಸಬೇಕು. ಮಕ್ಕಳಿಗೆ ಬೈಂಡರುಗಳನ್ನು ಉಪಯೋಗಿಸುವ ವಾಡಿಕೆ ಇದ್ದವರು ಡಾಕ್ಟರು ಹೇಳುವ ಕಾಲದ ವರೆಗೆ ಮಾತ್ರವೇ ಅದನ್ನು ಉಪಯೋಗಿಸಬೇಕು. ಅವು ಎದೆಯನ್ನು ಬಿಗಿ ಹಿಡಿಯುವ ಹಾಗಿರಬಾರದು. ಮಕ್ಕಳಿಗೆ ಮೈಶಾಖವನ್ನು ಕಾಪಾಡುವುದಕ್ಕೆ ಅನುಕೂಲವಾಗಿಯೂ ಮೃದುವಾಗಿಯೂ ಸಡಿಲವಾಗಿಯೂ ಇರುವ ಉಡುಪನ್ನೇ ಹಾಕಬೇಕು. ಒಳಗೆ ಷರ್ಟನ್ನು ಹಾಕಿ ಮೇಲೆ ಗೌನನ್ನು ಹಾಕಬಹುದು. ಮಳೆಗಾಲದಲ್ಲಿ ಆ ಗೌನು ಉಣ್ಣೆಯ ವಸ್ತ್ರವಾಗಿರಬೇಕು. ಎದೆಯ ಮೇಲಿನ ಉಡುಪನ್ನು ಆಗಾಗ ಬದಲಾಯಿಸುತ್ತಿರಬೇಕು. ಬೆವರು, ಜೊಲ್ಲು ಮುಂತಾದುವುಗಳಿಂದ ಒದ್ದೆಯಾದ ಬಟ್ಟೆಯನ್ನು ಹಾಗೆಯೇ ಬಿಟ್ಟಿದ್ದರೆ, ಮಕ್ಕಳಿಗೆ ಎದೆನೆಗಡಿ ಕಾರಣವಾಗಬಹುದು. ಆದುದರಿಂದ ಉಡುಪುಗಳನ್ನು ಆಗಾಗ ಬದಲಾಯಿಸುತ್ತಿರಬೇಕು.

ಮಕ್ಕಳಿಗೆ ಮೂರು ತಿಂಗಳ ಮೇಲೆ ಆಗಲಿ, ಚಳಿಗಾಲವಾಗಿದ್ದರೆ ಇನ್ನೂ ಹೆಚ್ಚು ದಿನಗಳಲ್ಲಿ ಉಡುಪುಗಳ ಉದ್ದವನ್ನು ಉದ್ದದಲ್ಲಿ ತಗ್ಗಿಸಬಹುದು. ಪೆಟಿಕೋಟುಗಳನ್ನು ಮಾತ್ರ ಉಪಯೋಗಿಸಬಾರದು. ಏಕೆಂದರೆ—ಅಂತಹ ಬಟ್ಟೆಗಳು ಮೈಶಾಖವನ್ನು ಕಾಪಾಡಲಾರವು. ಅದು ಮಾತ್ರವಲ್ಲ, ಅದಕ್ಕೆ ಬೇಗನೆ ಬೆಂಕಿ ಹಿಡಿಯುವ ಪ್ರಸಂಗದಿಂದ ಎಷ್ಟೋ ಮಕ್ಕಳು ಮರಣಕ್ಕೀಡಾಗಿವೆ. ಮಕ್ಕಳನ್ನು ಹೊರಗೆ ಎತ್ತಿಕೊಂಡು ಹೋಗಬೇಕಾದಾಗ ಸೊಂಟದಂತೆ ಕೆಳಗೆ ಬರುವಂತೆ ಉಡುಪುಗಳಿರಬೇಕು. ಬಹಳ ಭಾರವಾದ ಉಡುಪುಗಳನ್ನು ಮಾತ್ರ ಉಡಿಸಬಾರದು. ಕಾಲು ಚೀಲಗಳು ಉದ್ದವಾಗಿಯೂ, ಭಾರಕವಾಗಿಯೂ ಇರಬೇಕು. ಬೂಟ್ಸುಗಳು ಬಹಳ ಬಿಗಿಯಾಗಿರಬಾರದು.

ಸರಸ್ವತಿ.

---

## ನೋಟೀಸು.

ಶಾಂತಳ್ಳಿ ಗ್ರಾಮದ ಒಕ್ಕಲಿಗರ ಕೆ. ರಾಮಯ್ಯನು ಈ ಮೂಲಕ ಪ್ರಕಟಿಸುವುದೇನೆಂದರೆ—ಶಾಂತಳ್ಳಿ ಗ್ರಾಮದ ಒಕ್ಕಲಿಗರ ಪವ್ರತಿ ತಮ್ಮಣ್ಣನ ತಂಗಿ ಕಾವೇರಮ್ಮನು ಮಾರಾಟಕ್ಕೆ 3 ಯೇಕರೆ ಅಂದರೆ 100 ಬಟ್ಟಿ ಭೂಮಿ, 3 ಯೇಕರೆ ಬಾಣೆ, ಹಿತ್ತಲು, ಮನೆ (ಹಂಚು ಹುಲ್ಲು ಹಾಕಿದ್ದು) ಇದೆಯೆಂದಾಗಿ ಪ್ರಕಟಣೆ ಮಾಡಿರುವ ನೋಟೀಸುಗಳು, ನನ್ನ ಭೋಗ್ಯದ ಸೊತ್ತುಗಳು ಇವು ನನಗೆ 1931ನೆ ಇಸವಿ ಮಾರ್ಚಿ ವರೆಗೆ ಪಸಲು ಭೋಗ್ಯಕ್ಕೆ 2000/ರೂಪಾಯಿಗೆ ಸದರಿಯವಳ ಅಣ್ಣ ಪವ್ರತಿ ತಮ್ಮಣ್ಣನು ಕೊಟ್ಟಿರುವುದಾಗಿಯೂ, ಬಾಯಿದೆ ತೀರಿದ ಮೇಲೆ ಅಸಲು ಮೊಬಲಗು ಹಿಂತಿರುಗಿ ಕೊಡದೆ ತಪ್ಪಿದ್ದಾದರೆ ಮುಂದಕ್ಕೆ ಅಸಲು ಮೊಬಲಗು ಹಿಂತಿರುಗಿಸುವ ವರೆಗೆ ಸದರಿ ಮೇರೆ ನಡಕೊಂಡು ಬರಬೇಕಾಗಿ ಪತ್ರ ರಿಜಿಸ್ಟರ್ ಭೋಗ್ಯ ಕರಾರು ಬರಕೊಟ್ಟಿರುವುದರಿಂದ್ಲೂ ಈ ಕರಾರಿಗೆ ವಿರೋಧವಾಗಿ ಯಾರೂ ಮೇಲ್ಕಂಡ ಸೊತ್ತುಗಳ ಮೇಲೆ ಕ್ರಯ ಮಗೈರೆ ಯಾವ ತರದ ಆಧಾರಗಳನ್ನೂ ಮಾಡಿಸಿಕೊಳ್ಳಬಾರದಾಗಿಯೂ, ಹೀಗೆ ಮಾಡಿಸಿಕೊಂಡದ್ದಾದರೆ ನನಗೆ ಅದರಿಂದುಂಟಾಗುವ ಎಲ್ಲಾ ನಷ್ಟಕ್ಕೆ ಸದರಿಯವರು ಗುರಿಯಾಗತಕ್ಕದ್ದು. ಅಲ್ಲದೆ ಹಾಗೆ ಮಾಡಿಸಿಕೊಂಡ ಪತ್ರಗಳು ನನ್ನ ಭೋಗ್ಯ ಕರಾರಿನ ಕರಾರು ತೀರುವ ವರೆಗೆ ಅಬಂಧವಾಗುವವೆಂದು ಈ ಮೂಲಕ ತಿಳಿಸಲಾಗಿದೆ.

ಒಕ್ಕಲಿಗರ ಕೆ. ರಾಮಯ್ಯ,
ಶಾಂತಳ್ಳಿ ಗ್ರಾಮ,
ಮುಕ್ಕೊಡ್ಲು(?).

12—8

## ಶಾರದಾಶ್ರಮದ ಚಟುವಟಿಕೆಗಳು.

ಕೊಡಗು ನಿವಾಸಿಗಳ ಪೂರ್ವ ಪುಣ್ಯದಿಂದ ಈಗ್ಯೆ ಒಂದು ವರುಷಕ್ಕೆ ಹಿಂದೆ ಪೊನ್ನಂಪೇಟೆಯಲ್ಲಿ ಶಾರದಾಶ್ರಮವೆಂಬ ರಾಮಕೃಷ್ಣ ಸಂಸ್ಥೆಯೊಂದು ಸ್ಥಾಪಿತವಾಗಿ ಆದರ್ಶ ರೂಪವಾದ ಸೇವೆಯನ್ನು ಮಾಡುತ್ತಿದೆ. ಪರಮಹಂಸರು ಜೀವಂತರಾಗಿರುವಾಗ್ಯೆ ಅವರ ಆತ್ಮತೇಜಸ್ಸು ಬಂಗಾಳದಲ್ಲಿ ಮಾತ್ರ ಹರಡಿದ್ದು, ಅವರು ತಮ್ಮ ಭೌತಿಕ ಶರೀರವನ್ನು ತ್ಯಜಿಸಿದ ೫೦ ವರುಷಗಳನಂತರ ಸಮಗ್ರ ಹಿಂದೂ ದೇಶದಲ್ಲಿ ಮಾತ್ರವಲ್ಲದ ಪ್ರಪಂಚದ ಅನೇಕಾನೇಕ ದಿಕ್ಕುಗಳಲ್ಲಿ ಪಸರಿಸಿರುವುದೂ, ಇನ್ನೂ ಇನ್ನೂ ಪಸರಿಸುತ್ತಿರುವುದೂ ನಮಗೆ ಸ್ಪಷ್ಟವಾಗಿ ತೋರಿಬರುತ್ತದೆ. ಪರಮಹಂಸರು ಹೊಸದಾದ ಒಂದು ಪಂಥವನ್ನು ನಿರ್ಮಿಸಲಿಲ್ಲ. ಅವರ ಅನುಯಾಯಿಗಳು ಸಹ ನವೀನ ಮಾರ್ಗವನ್ನೇರ್ಪಡಿಸಿಕೊಂಡಿಲ್ಲ. ಪರಮಹಂಸರು ಸನಾತನ ಧರ್ಮವನ್ನೇ ಬೋಧಿಸುತ್ತಾ, ಅವರ ಶಿಷ್ಯಮಂಡಲಿಯವರು ಅವರು ಎತ್ತಿ ಹಿಡಿದ ಜ್ಞಾನಜ್ಯೋತಿಯನ್ನೇ ಹಿಡಿದು ನಡೆಯುತ್ತಿರುವರು.

ಒಂದಾನೊಂದು ಕಾಲದಲ್ಲಿ ಬೌದ್ಧಧರ್ಮವು ಖ್ಯಾತಿಯನ್ನು ಹೊಂದಲು ಅದರ ಪ್ರಸಾರದ ಕಲಸವೇ ಮುಖ್ಯಕಾರಣವಾಗಿತ್ತು. ಬೌದ್ಧ ಭಿಕ್ಷುಗಳು ವಿದ್ಯಾಪ್ರಸಾರಕ್ಕಾಗಿ ಪ್ರಯತ್ನಪಟ್ಟಂತೆಯೇ ರಾಮಕೃಷ್ಣ ಸಂಸ್ಥೆಯೂ ಯತ್ನ ಮಾಡುತ್ತಿದೆ. ರಾಮಕೃಷ್ಣ ಸಂಸ್ಥೆಯು ಮಾಡುತ್ತಿರುವ ಕಾರ್ಯಗಳನ್ನು ಮೂರು ಭಾಗಗಳಾಗಿ ಮಾಡಬಹುದು. 1 ಬ್ರಹ್ಮಜ್ಞಾನ ಪ್ರಸಾರಭಾಗ, 2 ವಿದ್ಯಾಪ್ರಸಾರಭಾಗ, 3 ಲೋಕಸೇವಾ ಭಾಗ. ಇದರಿಂದ ರಾಮಕೃಷ್ಣ ಸಂಸ್ಥೆಯವರ ಹಾಗೂ ಅವರ ಶಿಷ್ಯರುಗಳ ಧ್ಯೇಯವು ನಿಜ ಕೊಡುತ್ತಿದೆಂದು ಸರ್ವರಿಗೆ ಗೊತ್ತಾಗುವುದು. ಮೇಲಾಗಿ, ಈ ಸಂಸ್ಥೆಯವರು ಮಾಡುತ್ತಿರುವ ಸತ್ಕಾರ್ಯವು ಸ್ತೋತ್ರಾರ್ಹವಾದುದು.

ಬ್ರಹ್ಮಜ್ಞಾನವನ್ನು ಪ್ರಸಾರಮಾಡಲಿಕ್ಕಾಗಿ ಅಲ್ಲಲ್ಲಿ ಮಠಗಳನ್ನು ಕಟ್ಟಿ, ಅಲ್ಲಿ ಸನ್ಯಾಸಿಗಳನ್ನಿಟ್ಟಿರುವರು. ಇವರು ಧರ್ಮ ಸಂಬಂಧವಾದ ಭಾಷಣಗಳನ್ನು ಕೊಡುವರು. ಅಲ್ಲದೆ ಕಡೆಗಳಲ್ಲಿ ಮಾಸಿಕ ಪತ್ರಗಳನ್ನು ಹೊರಡಿಸುತ್ತಿರುವರು. ರಾಮಕೃಷ್ಣ ಸಂಸ್ಥೆಯು ಸ್ಥಾಪಿತವಾಗಿ ಮೂವತ್ತು ವರುಷಗಳು ಮಾತ್ರವಾದುದರಿಂದ ಅದರ ಚಟುವಟಿಕೆಗಳು ಹೆಚ್ಚಾಗಿರುವುದಿಲ್ಲ. ಆದರೂ ಈ ಸಂಸ್ಥೆಯ ಮಠಗಳು ಅಮೇರಿಕ ಇಂಗ್ಲಂಡ್ ಮುಂತಾದ ಪರದೇಶಗಳಲ್ಲಿಯೂ ಹಿಂದೂ ದೇಶದ ಅನೇಕ ಕಡೆಗಳಲ್ಲಿಯೂ ಸ್ಥಾಪಿತವಾದವು. ಈ ಸ್ವಲ್ಪ ಸಮಯದಲ್ಲೇ ಆಗಿರುವುದರಿಂದ ಇವು ಮಾಡಿರುವ ಕಾರ್ಯವು ಬಹಳವೆಂದೇ ಹೇಳಬೇಕಾಗಿದೆ. ಈ ಸಂಸ್ಥೆಯು ಅನೇಕ ಶಾಲೆಗಳನ್ನೂ, ಹಾಸ್ಟಲುಗಳನ್ನೂ, ಆಸ್ಪತ್ರೆಗಳನ್ನೂ ನಡೆಸುತ್ತಿದೆ. ಕಲ್ಕತ್ತಾದಲ್ಲಿರುವ ಹುಡುಗಿಯರ ಶಾಲೆಯು ಈ ಸಂಸ್ಥೆಯ ಸಿಸ್ಟರ್ ನಿವೇದಿತಾ ಎಂಬ ಆಂಗ್ಲ ಕನ್ನೆಯಿಂದ ಸ್ಥಾಪಿಸಲ್ಪಟ್ಟು, ಈಗ ಅದು ಬಂಗಾಳಕ್ಕೆ ಮಾದರಿಶಾಲೆಯಾಗಿದೆ. ಬಂಗಾಳದಲ್ಲಿ ಈ ಸಂಸ್ಥೆಯ ಕೈಕೆಳಗಿರುವ ವಿದ್ಯಾಪೀಠಗಳು ಮಾಡುತ್ತಿರುವ ಕೆಲಸವನ್ನು ಕುರಿತು ಅಲ್ಲಿನ ಗವರ್ನರ್ ಧೊರೆಗಳು ಬಹಳವಾಗಿ ಹೊಗಳಿ ಮಾತಾಡಿರುವರು. ಮದ್ರಾಸಿನಲ್ಲಿರುವ ಇವರಿಂದ ನಡೆಸಲ್ಪಡುತ್ತಿರುವ ಆಸ್ಪತ್ರೆಯು ಒಮ್ಮೂರಲ್ಲೇ ಎರಡನೇದಾಗಿದೆ. ಮದ್ರಾಸಿನ ಮಠವು ಒಂದು ಹುಡುಗರ ಹಾಸ್ಟೆಲನ್ನೂ ಮತ್ತೊಂದು ಹುಡುಗಿಯರ ಹಾಸ್ಟೆಲನ್ನೂ ನಡೆಸುತ್ತದೆ.

ಶಾಲೆಗಳಲ್ಲಿ ಮಕ್ಕಳಿಗೆ ಈಗ ದೊರೆಯುತ್ತಿರುವ ವಿದ್ಯೆಯಲ್ಲಿ ನ್ಯೂನತೆಗಳು ಇವೆಯೆಂದು ನಾವೆಲ್ಲರೂ ಒಪ್ಪುವರು. ಧರ್ಮ ಸಂಬಂಧವಾದ ವಿದ್ಯೆಯು ಅವರಿಗೆ ದೊರೆಯುತ್ತಿಲ್ಲ. ಪಾರಮಾರ್ಥಿಕ ವಿದ್ಯೆಯಿಲ್ಲದೆ ಬರೇ ಲೌಕಿಕ ವಿದ್ಯೆಯಿಂದ ನಮಗೆ ಏಳ್ಗೆ ದೊರೆಯದು. ಬರೇ ಲೌಕಿಕ ವಿದ್ಯೆಯಿಂದ ನಮಗೆ ಉನ್ನತಿಯಾದರೂ ಅದು ಕ್ಷಣಿಕವಾದದ್ದು. ಧರ್ಮದ ಸಂಪರ್ಕವಿಲ್ಲದ ಅಂಧ ವಿದ್ಯೆಯಿಂದಲೇ ಗ್ರೀಸ್, ರೋಮ್ ಮೊದಲಾದ ರಾಜ್ಯಗಳೂ ನಾಶವಾದುವು. ಮೊನ್ನಿನ ಮಹಾ ಯುದ್ಧಕ್ಕೂ ಮೇಲ್ಕಂಡ ನಾಸ್ತಿಕ ವಿದ್ಯೆಯೇ ಕಾರಣವಾಗಿದೆ. ದೇಶದಲ್ಲಿ ಶಾಂತಿ ಸ್ಥಾಪನೆಯಾಗಬೇಕಾದರೆ, ಲೌಕಿಕ ವಿದ್ಯೆಯೊಂದಿಗೆ ಧಾರ್ಮಿಕ ವಿದ್ಯೆಯೂ ಕಲಿಸಲ್ಪಡಬೇಕು. ರಾಮಕೃಷ್ಣ ಸಂಸ್ಥೆಯ ಶಾಲೆಗಳಲ್ಲಿ ಈ ವಿದ್ಯೆಯು ಹೇಳಿ ಕೊಡಲ್ಪಡುತ್ತಿದೆ.

ಸಂಸಾರದಲ್ಲಿ ಸುಖ ಶಾಂತಿಗಳಿರಬೇಕಾದರೆ ಹೆಂಗಸರಿಗೆ ಒಳ್ಳೆ ವಿದ್ಯೆ ದೊರೆಯಬೇಕು. ನೂಲುವುದು, ನೇಯುವುದು, ಅಡಿಗೆ, ಶಿಶು ಸಂಗೋಪನ, ಗೃಹಕೃತ್ಯ ಈ ಕೆಲಸಗಳೊಂದಿಗೆ ಧಾರ್ಮಿಕ ವಿದ್ಯೆಯು ಕಲಿಸಲ್ಪಡದಿದ್ದರೆ, ಬೇರೆ ಏನೇ ಕಲಿಸಲ್ಪಟ್ಟರೂ ಅದು ನಿಜವಾದ ವಿದ್ಯೆ ಎನಿಸಿಕೊಳ್ಳಲಿಕ್ಕಿಲ್ಲ. ರಾಮಕೃಷ್ಣ ಸಂಸ್ಥೆಯವರು ದಕ್ಷಿಣಕೊಡಗಿನಲ್ಲಿ ಸದ್ಯಕ್ಕೆ ಒಂದು ಹುಡುಗಿಯರ ಹಾಸ್ಟೆಲನ್ನೂ ಮತ್ತೊಂದು ಹುಡುಗರ ಹಾಸ್ಟೆಲನ್ನೂ ಸ್ಥಾಪಿಸಬೇಕೆಂದು ಆಲೋಚಿಸುತ್ತಿದ್ದರು. ಅಷ್ಟರಲ್ಲಿ ಪೊನ್ನಂಪೇಟೆಯ ಸರಕಾರಿ ಹಾಸ್ಟೆಲನ್ನು ಮಿಷನ್ನಿನವರು ವಹಿಸಿಕೊಳ್ಳುವುದುಚಿತವೆಂದು ಕೆಲವು ಧರ್ಮಾಭಿಮಾನಿಗಳು ಅಪೇಕ್ಷೆ ಪಟ್ಟಿದ್ದರಿಂದ, ಈ ವಿಚಾರವಾಗಿ ಸರಕಾರಕ್ಕೂ ಮಿಷನ್ನಿನವರಿಗೂ ಪತ್ರ ವ್ಯವಹಾರ ನಡೆಯುತ್ತಿದೆ. ಇದಲ್ಲದೆ ವೀರರಾಜಪೇಟೆಯ ಹುಡುಗಿಯರ ಹಾಸ್ಟೆಲು ಶಿಕ್ಷಕಮಂಡಲಿಕ್ಕೆ ಸಮೀಚೀನ ಸ್ಥಳವೆಂದು ತೋರಿಬಂದು ಹಾಸ್ಟೆಲುಗಳಿಗೆ ಯೋಗ್ಯ ಮನೆಯು ಸಾಹುಕಾರ ಕುಂಞಯ್ಯನವರದೊಂದೇ ಎಂದು ಯೋಚಿಸುತ್ತಿದ್ದ ಸಮಯಕ್ಕೆ ಕೊಡಗಿನ ಒಬ್ಬ ಮಹನೀಯರು ಉದಾರ ಮನಸ್ಸಿನಿಂದ, ಸದರಿ ಕಟ್ಟಡವನ್ನು ಕ್ರಯಕ್ಕೆ ಕೊಂಡು ಕೊಂಡು ಮೂರು ವರ್ಷಕ್ಕೆ ಬಾಡಿಗೆ ಇಲ್ಲದೆ ಮಿಷನ್ನವರಿಗೆ ಕೊಟ್ಟರು. ಮೂರು ವರ್ಷಗಳ ಒಳಗ ಮಿಷನ್ನಿನವರೇ ಇದನ್ನು ಕೊಂಡುಕೊಳ್ಳಬಹುದೆಂಬ ಶರತ್ತಿಗೂ ಇವರು ಒಪ್ಪಿದ್ದಾರೆ. ಇವರು ಮಿಷನ್ನಿನವರಿಗೆ ಮಾಡಿದ ಉಪಕಾರಕ್ಕಾಗಿ ಆ ಮಿಷನ್ನಿನ ಭಕ್ತ ಮಂಡಲಿಯವರು ಅವರಿಗೆ ಆಭಾರಿಯಾಗಿದ್ದಾರೆ. ಶೀಘ್ರದಲ್ಲಿಯೇ ಹಾಸ್ಟೆಲು ವೀರರಾಜಪೇಟೆಯಲ್ಲಿ ತೆರೆಯಲಾಗುವುದೆಂದು ಕಂಡುಬರುತ್ತದೆ.

ಇಷ್ಟಲ್ಲದೆ ರಾಮಕೃಷ್ಣ ಸಂಸ್ಥೆಯವರು ರಾಮಸ್ವಾಮಿ ಕಣಿವೆ ದೇವಸ್ಥಾನವನ್ನು ವಹಿಸಿಕೊಂಡು ಅದರ ಕಾರುಬಾರುಗಳನ್ನು ನಡೆಸಲಿಕ್ಕೆ ಇಷ್ಟಪಡುತ್ತಾರೆಂದು ತಿಳಿದು ಬರುತ್ತದೆ. ಹೀಗಾದರೆ ಹಿಂದುಳಿದಿರುವ ಉತ್ತರ ಕೊಡಗಿನವರಿಗೆ ಮುಂದಕ್ಕೆ ಬಹಳ ಪ್ರಯೋಜನವುಂಟಾಗುತ್ತದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ರಾಮಸ್ವಾಮಿ ದೇವಾಲಯವು ಉತ್ತರ ಕೊಡಗಿಗೆ ಒಳ್ಳೆ ಕೇಂದ್ರವಾಗಿದ್ದು ರಾಮಕೃಷ್ಣ ಸಂಸ್ಥೆಯು ಕೆಲಸ ನಡೆಸಲಿಕ್ಕೆ ಅನುಕೂಲವಿದೆ. ಈ ವಿಚಾರವಾಗಿ ದೇವಾಲಯದ ಆಡಳಿತ ನಡೆಸುವವರು ದೀರ್ಘಾಲೋಚನೆ ಮಾಡದೆ ರಾಮಕೃಷ್ಣ ಸಂಸ್ಥೆಯವರು ಮಾಡಬೇಕಾಗಿರುವ ಸೇವೆಯನ್ನು ಸ್ವೀಕರಿಸಿ ಜನರ ಪ್ರೀತಿಯನ್ನು ಗಳಿಸುವರಾಗಿ ನಂಬಲಾಗಿದೆ.

ಶಿವಸುತ

---

## ಬಾಡಗರಕೇರಿ ಸತ್ಯಾಗ್ರಹ ಫಂಡು

ಬಾಡಗರಕೇರಿ ಸತ್ಯಾಗ್ರಹ ಫಂಡಿಗೆ ಈ ಕೆಳಗಿನ ಮಹನೀಯರು ಉದಾರ ಮನಸ್ಸಿನಿಂದ ಕೊಟ್ಟಿರುವ ದಾನವು ವಂದನಾಪೂರ್ವಕ ಸ್ವೀಕರಿಸಲ್ಪಟ್ಟು ಶ್ರೀಯುತ ವಲ್ಲಭಭಾಯಿ ಪಟೇಲರವರಿಗೆ ಕಳುಹಿಸಲಾಗಿದೆ.

ಈ ಸತ್ಯಾಗ್ರಹ ಚಳವಳವು ರಾಜಿಯಿಂದ ತೀರ್ಮಾನಕ್ಕೆ ಬಂದಿರುವ ಕಾರಣ ಹಣ ಒಪ್ಪಿಸುವುದು ನಿಲ್ಲಿಸಲಾಗಿದೆ.

| | | ರೂ | ಆ | ಪೈ |
|---|---|---|---|---|
| 1 | ಮ ಪಿ ಟಿ ಕುಶಾಲಪ್ಪನವರು | 5 | 0 | 0 |
| 2 | ,, ಸಿ ಯಸ್ ವೆಂಕಪ್ಪಯ್ಯನವರ | 5 | 0 | 0 |
| 3 | ಪೀಠ ಫಿಗಸಿ | 5 | 0 | 0 |
| 4 | [illegible] | [illegible] | 0 | 0 |
| 5 | [illegible] | [illegible] | 0 | 0 |
| 6 | ,, [illegible] | 2 | 0 | 0 |
| 7 | [illegible] | 2 | 0 | 0 |
| 8 | ಯಸ್ ಮುದ್ದಪ್ಪನವರು | 2 | 0 | 0 |
| 9 | [illegible] | 1 | 4 | 0 |
| 10 | ಸಿ ಎ ಚಂಗಪ್ಪನವರು | 1 | 0 | 0 |
| 11 | ಸಿ ಎ ಬೆಳ್ಯಪ್ಪನವರು | 1 | 0 | 0 |
| 15 | ನಾಲ್ಕು ಹಿತಚಿಂತಕರು | 4 | 0 | 0 |
| 16 | [illegible] ಪೂವಯ್ಯನವರ | 0 | 8 | 0 |
| 19 | [illegible] | 1 | 8 | 0 |
| | ಒಟ್ಟು | [illegible] | [illegible] | 0 |

ಬಿವಿಶಾರದ ಸಂಘ — ಪಿ ಐ ಬೆಳ್ಯಪ್ಪ

ಮಡಿಕೇರಿ 1-8-28 — (ಜನರಲ್ ಸೆಕ್ರೆಟರಿ)

---

## ಮಾರಾಟಕ್ಕಿದೆ.

ವಿರಾಜಪೇಟೆನಾಡು ಬಾಳೋಳಿ ಗ್ರಾಮದಲ್ಲಿ ತೋಟದ ಭೂಮಿ

| | | | |
|---|---|---|---|
| ಪಂಚಾಯತಿಯಲ್ಲಿ ಭೂಮಿ | 10 78 | ಒಟ್ಟು 20 | [illegible] |
| ಪೀಠ ಸಮೀಪ ಭೂಮಿ | 9 10 | —ಡಿ— 7 | [illegible] |
| —ಟಿ— | 9 97 | —ಟಿ— 9 | 94 |

ಈ ವಿಳಾಸಕ್ಕೆ ಬರೆಯಿರಿ —

**P. J. Lobo,**

2–1 Virarajendrapet

---

## ಶರೀರ ಮರ್ಮಶಾಸ್ತ್ರ ಎಂಬ ಕಾಮಶಾಸ್ತ್ರದ ಪುಸ್ತಕ.



ಮೊದಲು ಈ ಪುಸ್ತಕವು ಹಿಂದುಸ್ಥಾನಿ ಫ್ರೆಂಚ್, ಇಂಗ್ಲೀಷ್ ಮುಂತಾದ ಭಾಷೆಗಳಲ್ಲಿ ಇತ್ತು. ಅದನ್ನು ಈಗ ಕನ್ನಡಕ್ಕೆ ತರ್ಜುಮೆ ಮಾಡಿ ಚಿತ್ರಪಟಗಳ ಸಹಿತ ಪ್ರಿಂಟು ಮಾಡಿದೆ. ಇದರಲ್ಲಿ ಸ್ತ್ರೀ ಪುರುಷರ ಎಲ್ಲಾ ಮರ್ಮ ವಿಷಯಗಳು ಶಿಶು ಉತ್ಪತ್ತಿ, ಗರ್ಭ ಉತ್ಪತ್ತಿ, ಸ್ತ್ರೀಯರ ಲಕ್ಷಣಗಳು, ಸ್ತ್ರೀ ಪುರುಷರು ಅನ್ಯೋನ್ಯವಾಗಿರುವಿಕೆ ಮುಂತಾದ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ವಿಷಯಗಳು ಚಿತ್ರಪಟಗಳ ಸಹಿತ ಪ್ರಿಂಟಾಗಿದೆ. ಕ್ರಯ ಪುಸ್ತಕ ಒಂದಕ್ಕೆ 1–0–0

ವಿಳಾಸ —ಕೆ. ಎಸ್. ರಾಧಾಕೃಷ್ಣ ಬ್ರದರ್ಸ್,

109. ಜೈನಾ ಬಜಾರ್ ರೋಡ್,

52–12 ಮದರಾಸು.

---

## ಮಾರಾಟಕ್ಕಿದೆ.

ಲೇಟ್ ಸಾಹುಕಾರ್ ಡಿ ಜನ್ನಬಸಪ್ಪಶೆಟ್ಟರ ಮಕ್ಕಳ ಬಳಿ ಮಡಿಕೇರಿಯಲ್ಲಿರುವ ಒಂದು ದೊಡ್ಡ ಬಂಗ್ಲೆ ಒಂದು ಚಿಕ್ಕ ಬಂಗ್ಲೆ ಗ್ಯಾರೇಜ್ ಔಟ್‌ಹೌಸ್ ಮನೆ, ಹುದಿಕೇರಿ ಬಯಲು ದನದ ಕೊಟ್ಟಿಗೆ ಪತ್ತಾಯ ಮತ್ತು ಸೇಗಿನಿಂದ ಕಾಂಪೌಂಡು ಮಾರಾಟಕ್ಕಿದೆ. ಹೆಚ್ಚಿಗೆ ವಿಷಯ ತಿಳಿಯಬೇಕೆನ್ನುವವರು ಸಿ ಯಸ್ ವೆಂಕಪ್ಪಯ್ಯ ಬಿ ಎ ಬಿ ಎಲ್, ವಕೀಲ್, ಮಡಿಕೇರಿ, ಇವರಿಗೆ ಬರೆದು ತಿಳಿದುಕೊಳ್ಳತಕ್ಕದ್ದು. 4–4

---

## ರೆಬ್ಬರ್ ಸ್ಟ್ಯಾಂಪ್ ಇನಾಂ.
## ರೋಲ್ಡ್ ಗೋಲ್ಡ್ ಬಂಗಾರದ
## ರಿಸ್ಟ್ ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್‌ಮೇಡ್) ತಯಾರಿಸಿದೆ. ಸರಿಯಾದ ಗಂಟೆಯನ್ನು ತೋರಿಸುವವು. ಇದರ ಕೇಸು ಬಂಗಾರಕ್ಕೆ ಸರಿಸಮಾನವಾಗಿರುವುದು. ಇವಕ್ಕೆ ಜವಾಬ್ದಾರಿಯಾದ ೩ ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿಯೊಬ್ಬರ ಹೆಸರು ವಿಳಾಸ, ಪೂರ್ಣ ... ಒಂದು ದಿವಸ ಕನ್ನಡ ಪ್ರಿಂಟು ಮಾಡಿಕೊಳ್ಳುವ ... ರಬ್ಬರ್ ಸ್ಟ್ಯಾಂಪನ್ನು ಇಂಕ್‌ಪ್ಯಾಡ್ ಸಹಿತ ಇನಾಮಾಗಿ ಕೊಡುವೆವು.

ಕ್ರಯ ರಿಸ್ಟ್ ವಾಚ್ 1ಕ್ಕೆ 6–4–0

ವಿಳಾಸ — ರೀಗಲ್ ಟ್ರೇಡಿಂಗ್ ಕಂಪೆನಿ,

ಪೋ. ಬಾಕ್ಸ್ ನಂ. 243

52 12 ಮದರಾಸು.

---

## ಏನು ನೋಡುತ್ತೀರಿ ?

[illegible]

ಪ್ರಯತ್ನ! ಇಲ್ಲವೆ!!

ಉಚಿತವಾಗಿ ಕಳುಹಿಸಲ್ಪಡುವ ನಮ್ಮ

ನಮ್ಮ ... ಏಜಂಟರು ... ಬೇಕಾಗಿರುವುದು

**ವೈದ್ಯ ವಿದ್ಯೆ**

... ರೋಗಗಳ ... ಪರಿಹಾರ ... ದಲ್ಲಿ ರೋಗಗಳು ... ಪ್ರಕಾರ ...

52–2

ರಾಜವೈದ್ಯ ನಾರಾಯಣಜಿ ಕೇಶವಜಿ,

... ಮದ್ರಾಸು

N. B. ವೈದ್ಯಸಲಹೆಯು ಫೀಜಿಲ್ಲದೆ ಕೊಡಲಾಗುವುದು

---

ಎ ಗ್ರೆ ವಿ ಕರ್ ಸ್ಟ್ರರ್

ಮಲೇರಿಯ ಇನ್‌ಫ್ಲುಯೆಂಝಾ ಸಹಾ ಜ್ವರಕ್ಕೆ ... ಮೇಲೆ ಇದನ್ನು ಉಪಯೋಗಿಸಿರಿ ... ದಿವಸ ... ಬಾಟ್ಲಿಗೆ ಆಗ ೧ರ. ಔಷಧಿ ವಿಕ್ರೇತರ ಬಳಿ

ಸಾಧ ಕಾಡ ಪ ರಿ ಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವದಕ್ಕೆ ... ಬಾಟ್ಲಿಗೆ ಬೆಲೆ ೧–೦–೦. ಔಷಧಿ ವಿಕ್ರೇತರ ಬಳಿ

... ಬ್ರದರ್ಸ್

12–7 ... ಲೇನ್.

... ಮುಂಬಾಯಿ

# ವರ್ತಮಾನ ಸಂಗ್ರಹ.

## ಒಳದೇಶ.

ಶ್ರೀಮಾನ್ ಪಾಂಡಂಡ ಪಿ ಅಕ್ಕಮ್ಮನವರು ವೀರಾಜಪೇಟೆ ಆಸ್ಪತ್ರೆಯಲ್ಲಿ ಹೆಡ್ಡು ನರ್ಸಾಗಿ ನೇಮಿಸಲ್ಪಟ್ಟಿರುವರು

ಮುಳೆಗಾಲದ ಮೂರು ವಾರದ ರಜೆ ತೀರಿ ವೀರಾಜಪೇಟೆ ಹೈಸ್ಕೂಲು ಈ ತಾ 27ರಲ್ಲಿ ಪುನಹ ತೆರೆಯಲ್ಪಡುವದು.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾರೀಕು 19ನೇ ಆದಿತ್ಯವಾರ ಬೆಳಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯಲಿಕ್ಕಿದೆ

ಈ ತಿಂಗಳಲ್ಲಿ ಜಿಲ್ಲೆಯಲ್ಲಿ ಒಂದು ಸ್ಪರ್ಧೆಯ ಪರೀಕ್ಷೆಯನ್ನು ನಡಿಸಿ ಮೂರು ಜನರನ್ನು ಇಂಡಿಯನ್ ಪೋಲೀಸ್ ಸರ್ವಿಸಿಗೆ ಪ್ರೊಬೇಶನರುಗಳಾಗಿ ಆರಿಸಲ್ಪಡುವರು.

ಈ ವಾರ ಮಡಿಕೇರಿಯಲ್ಲಿ ಮಳೆ ಬಹಳ ಕಡಿಮೆ ಯಾಗಿದೆ ಇಲ್ಲಿಗೆ ತಾ 3 ರಿಂದ 9 ರ ವರೆಗೆ 4 ಇಂಚು, ಸಂತರ ಇಂದಿನವರೆಗೆ ಬರೇ 1 ಇಂಚು 12 ಸೆಂಟು ಮಳೆ ಬಿದ್ದಿದೆ

ಮಡಿಕೇರಿಯಲ್ಲಿ ಪ್ಲೀಡರರಾಗಿರುವ ಮಿ ಯನ್ ಯಸ್ ರಾಮಯ್ಯನವರ ಮಗ ಮಿ ಯನ್ ಆರ್ ಗೋಪಾಲಕೃಷ್ಣ ಬಿ ಎ, ಬಿ ಎಲ್ ರವರು ಮಡಿಕೇರಿಯಲ್ಲಿ ವಕೀಲ ವೃತ್ತಿಯನ್ನು ಪ್ರಾರಂಭಿಸಿರುವರು

ಕಳೆದ ಆದಿತ್ಯವಾರ ದಿನ ಮಡಿಕೇರಿ ಕೊಡವರ ಮೀಟಿಂಗೊಂದು ಓಂಕಾರೇಶ್ವರ ದೇವಸ್ಥಾನದ ಹಾಲ್‌ನಲ್ಲಿ ನಡೆದು ಕೈಲ್ ಮುಹೂರ್ತ ಹಬ್ಬದ ದಿನವಾದ ಸೆಪ್ಟೆಂಬರು ತಾ 3ರಲ್ಲಿ ಒಂದು ಔತಣವನ್ನು ಏರ್ಪಡಿಸುವಂತೆ ತೀರ್ಮಾನಿಸಲಾಯಿತು.

ಬಡವನಾಡು, ಮೂರು ನಾಡು ಕಡ್ಡಪ ಪಕ್ಕೆ ಕೋಡಿ, ಪುಷ್ಪ ಬ್ರಾಯನ, ಮೂವರೂ ಒಂದು ಎತ್ತು ಸುಮಾರು ಹತ್ತು ದಿವಸಗಳಿಂದ ಕಾಲುಬೇನೆ (ಅಸ್ವಸ್ಥ) ಗ್ರಾಮದಲ್ಲಿ ಅಲೆಯುತ್ತಿದೆಯೆಂದು ಮಿ ಬಿ ಪೂವಪ್ಪನವರು ತಿಳಿಸಿರುತ್ತಾರೆ

ಮದ್ರಾಸು ಟ್ರಾನ್ಸಲೇಶನ್ (ತರ್ಜುಮೆ) ಡಿಪ್ಲೊಮ ಪರೀಕ್ಷೆಯಲ್ಲಿ ಸೆಂಟ್ರಲ್ ಹೈಸ್ಕೂಲು ಹೆಡ್ ಕ್ಲಾರ್ಕರಾದ ಮಿ ಚೆಟ್ಟಿಂಡ ಗಣಪತಿಯವರೂ, ಸಿವಿಲ್ ಜುಡಿಶಿಯಲ್ ಡಿಪಾರ್ಟ್‌ಮೆಂಟ್‌ನಲ್ಲಿ ಸಬ್ ಜಡ್ಜ್ ಕೋರ್ಟಿನ ಮಿ ಕೋಡಿರ ಮುಂಡಣ್ಣನವರೂ ಮತ್ತು ಪ್ರಿನ್ಸಿಪಲ್ ಜುಡಿಶಿಯಲ್ ಟೆಸ್ಟ್ ಪರೀಕ್ಷೆಯಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಆಫೀಸಿನ ಮಿ ಮಕ್ಕಿ ಮನೆ ಕೃಷ್ಣಯ್ಯನವರು ಫಸ್ಟ್ ಕ್ಲಾಸಿನಲ್ಲಿಯೂ ತೇರ್ಗಡೆಯಾಗಿರುವರೆಂದು ಕೇಳುತ್ತೇವೆ

ಪ್ರೈವೆಟ್ ದೃಷ್ಟಿಯ ಸ ಪೀರಿಯರ್ ದಿವಾನ ಭಾಗದ ಮೆಕ್ಯಾನಿಕಲ್ ಇಂಜಿನೀಯರಿಂಗ್ ಮತ್ತು ಟ್ರಾನ್ಸ್‌ಪೋರ್ಟೇಶನ್ ಇಲಾಖೆಗಳಲ್ಲಿ ಸ್ಪೆಶ್ಯಲ್ ಕ್ಲಾಸ್ ಅಪ್ರೆಂಟಿಸರಾಗಿ ನೇಮಿಸಲ್ಪಡುವ ಅಭ್ಯರ್ಥಿಗಳ ಪರೀಕ್ಷೆಯು ಡೆಲ್ಲಿಯಲ್ಲಿ 1924ನೇ ಜನವರಿ 28ರಲ್ಲಿ ಪ್ರಾರಂಭವಾಗುವದೆಂದೂ, ಇದಕ್ಕೆ ಇಂಟರ್ ಮೀಡಿಯೇಟ್ ಪರೀಕ್ಷೆ ಪಾಸಾಗಿಯೂ, 1928ನೇ ಇಸವಿ ಆಗಸ್ಟು 1ರಲ್ಲಿ 21ರ ಮೇಲೆ 24ರ ಒಳಗಿನ ಪ್ರಾಯವಿರುವ ಇರುವವರು ಮಾತ್ರ ಸೆಪ್ಟೆಂಬರು 21 ರೊಳಗೆ ಚೀಫ್ ಕಮಿಷನರಿಗೆ ಅಪ್ಲಿಕೇಶನ್ ಕಳುಹಿಸತಕ್ಕದೆಂದೂ ಪ್ರಕಟವಾಗಿದೆ

## ಹಿಂದೂದೇಶ.

ಎಸೆಂಬ್ಲಿಯ ಅಧ್ಯಕ್ಷರಾದ ಗೌರವಾನ್ವಿತ ವಿ. ಜೆ ಪಟೇಲರವರು ಈಗ ಬರ್ಮಾದಲ್ಲಿ ಸಂಚರಿಸುತ್ತಿರುವರು. ಅವರು ಹೋದ ಕಡೆಗಳಲ್ಲೆಲ್ಲಾ ಜನರು ಉತ್ಸಾಹದಿಂದ ಸ್ವಾಗತವನ್ನೀಯುತ್ತಿರುವರು.

ಬಂಗಾಳ ಕೌನ್ಸಿಲಿನ ಅಧ್ಯಕ್ಷರಾಗಿರುವ ನಾನಾಟಕದ ರಾಜರನ್ನು ಸರ್ ಪ್ರೊವಾಷ ಮಿತ್ರರೂ ಎರಡು ಮಂತ್ರಿ ಪದವಿಯನ್ನು ವಹಿಸಿಕೊಳ್ಳುವ ಗೊತ್ತೇ ಇಲ್ಲವಾಗಿದೆಯೆಂದೂ, ಸಹ ಅಧ್ಯಕ್ಷರ ಪದವಿಗೆ ಕೌನ್ಸಿಲ್ ಸದಸ್ಯರಾಗಿ ಮಹಾಪ್ರಭುವರೆಂದೂ ಸುದ್ದಿ

ಬೊಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಸೈಮನ್ ಕಮಿಷನಿನೊಂದಿಗೆ ಸಹಕರಿಸಲು ಕಮಿಟಿಯನ್ನು ಚುನಾಯಿಸುವಾಗ ಅದಕ್ಕೆ ವಿರೋಧಿಸಿದ ಸ್ವರಾಜ್ಯ ಪಂಗಡದವರು, ಇಂಡಿಪೆಂಡೆಂಟರು ಮತ್ತು ಬೇರೆ ಕೆಲವರು ಕೌನ್ಸಿಲು ಹಾಲಿನಿಂದ ಎದ್ದು ಹೊರಗ ಹೋಗಿಬಿಟ್ಟರು.

ಬಾರ್ಡೋಲಿಯ ಸತ್ಯಾಗ್ರಹ ಚಳವಳಿ ಈ ತಾ. 5ರ ರಾಜಕೀಯ ಸಮ್ಮೇಳನದಲ್ಲಿ ಅಧ್ಯಕ್ಷರಾಯಿತು ಬೊಂಬಾಯಿ ಸರಕಾರದವರೂ, ಶ್ರೀಯುತ ವಲ್ಲಭಭಾಯಿ ಪಟೇಲರವರೂ ಒಪ್ಪಿಕೊಂಡು ಗೌರವವಾದ ಕರಾರುಗಳಿಗೆ ಒಪ್ಪಿರುವರು ಕರಾರುಗಳು ಅಗ್ರಲೇಖನದಲ್ಲಿ ವಿವರಿಸಲ್ಪಟ್ಟಿವೆ ರೈತರ ಹೋರಾಟದ ಜಯಪ್ರದವಾದ ಅಂತ್ಯವು ಇಡೀ ಭಾರತ ಭೂಮಿಯವರಿಗೆ ತೃಪ್ತಿಯನ್ನುಂಟುಮಾಡಿದೆ.

ಆಲ್ ಪಾರ್ಟೀ ಕಾನ್ಫರೆನ್ಸಿನವರು, ಪಂಡಿತ ಮೋತಿಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ನೇಮಿಸಿದ ಕಮಿಟಿಯವರು ತಯಾರಿಸಿರುವ ಹಿಂದೂ ದೇಶದ ಆಡಳಿತ ರಚನೆಯು ಇನ್ನೂ ಹೊರಬಿದ್ದಿರುವದಿಲ್ಲವಾದರೂ ಅದರಲ್ಲಿ ಇಂಡಿಯಾಕ್ಕೆ 'ಡೊಮಿನಿಯನ್ ಸ್ಟೇಟಸ್' ಕೊಡಬೇಕೆಂತ ಕೇಳಿರುವರೆಂತಲೂ ಕನ್ನಡ ಮತ್ತು ದಕ್ಷಿಣ ಕನ್ನಡ ಆಡಳಿತ ರಚನೆ ಸಿದ್ದಿ ಹೆಚ್ಚು ಹಿಂಬಾಲಿಸಿರ ವದಂತಿಯೂ ವರ್ತಮಾನವಿದೆ.

1923ನೇ ಇಸವಿ ಸೆಪ್ಟೆಂಬರ್ ತಿಂಗಳು 1ನೇ ತಾರೀಕಿನಿಂದ ಎಲ್ಲಾ ಬ್ರಿಟಿಷ್ ಪ್ರಜೆಗಳೂ, ಅವರಲ್ಲಿಯೂ ಹಿಂದೂಸ್ಥಾನದವರು, ಮಲೇಯಾ ಸ್ಟೇಟ್ಸಿಗ ಹೋಗಬೇಕಾದರೆ ಮೊದಲಿನಂತೆ ಸರ್ಟಿಫಿಕೇಟುಗಳು ದೊರೆಯುವದಿಲ್ಲವೆಂತಲೂ, ಇನ್ನು ಮುಂದೆ ಸ್ಟ್ರೇಟ್ ಸೆಟ್ಲ್‌ಮೆಂಟಿಗಾಗಲೀ, ಅಥವಾ ಇನ್ನು ಈ ಮಲಯದ ಸ್ಥಳಗಳಿಗೆ ಹೋಗಬೇಕಾದರೆ ಪಾಸು ಪೋರ್ಟುಗಳನ್ನು ಇಂಡಿಯಾ ದೇಶದಿಂದ ಹೊರಡುವ ಮೊದಲೇ ಹೊಂದಿಕೊಳ್ಳಬೇಕೆಂಬ ಹೊಸ ಕಾನೂನು ಫೋರ್ಟ್ ಸೆಂಟ್ ಜಾರ್ಜ್ ಗೆಜೆಟಿನಲ್ಲಿ ನಮೂದಾಗಿದೆಯೆಂದು ತಿಳಿಯ ಬರುತ್ತದೆ.

ಪ್ರಿವಿ ಕೌನ್ಸಿಲಿನ ಜುಡಿಶ್ಯಲ್ ಕಮಿಟಿಯ ಒಬ್ಬ ಮೆಂಬರಾಗಿದ್ದ ನ್ಯಾಮದಾರ ಸಯದ್ ಅಮೀರ್ ಅಲಿಯವರು ಈ ತಾ 3ರಲ್ಲಿ ಲಂಡನಿನಲ್ಲಿ ಮೃತರಾದರೆಂದು ತಿಳಿಯಲು ವ್ಯಸನವಾಗುತ್ತದೆ ಇವರು ಕಲ್ಕತ್ತಾ ಹೈಕೋರ್ಟಿನ ಜಡ್ಜರಾಗಿದ್ದರು. ಮಹಮ್ಮದೀಯ ಮತ ಮತ್ತು ಕಾಯಿದೆ ವಿಷಯವಾದ ಬರವಣಿಗೆಗಳು ಪ್ರಾಮುಖ್ಯತೆ ಹೊಂದಿವೆ ಲಾರ್ಡ್ ಸಿಂಹರ ಮತ್ತು ಇವರ ಮರಣದನಂತರ ಪ್ರಿವಿ ಕೌನ್ಸಿಲಿನ ಜುಡಿಶ್ಯಲ್ ಕಮಿಟಿಯಲ್ಲಿ ಇಂಡಿಯನ್ ಲಾ ವಿಷಯ ತಿಳಿಯುಳ್ಳ ಅಭಿಪ್ರಾಯ ಕೊಡುವವರೇ ಇಲ್ಲದಾಗಿದೆ ಇವರ ಮರಣದಿಂದ ಮುಸಲ್ಮಾನರಿಗೆ ಮಾತ್ರವಲ್ಲ, ಹಿಂದೂ ದೇಶಕ್ಕೇ ದೊಡ್ಡ ನಷ್ಟವುಂಟಾಗಿದೆ

ಬೊಂಬಾಯಿ ಲಾ ಕಾಲೇಜಿನ ಒಬ್ಬ ಪ್ರೊಫೆಸರಾದ ಡಾಕ್ಟರ್ ಅಂಬೇಡ್ಕಾರ್‌ರವರು ಅಲ್ಲಿಯ ಕೌನ್ಸಿಲಿನಲ್ಲಿ ಹಿಂದುಳಿದ ಪಂಗಡದವರ ಪರವಾಗಿ ನೇಮಿಸಲ್ಪಟ್ಟಿರುವ ಮೆಂಬರಾಗಿರುವರು. ಇವರು ಆ ಕೌನ್ಸಿಲಿನಲ್ಲಿ ಸೈಮನ್ ಕಮಿಷನಿನೊಂದಿಗೆ ಸಹಕರಿಸಲು ಆರಿಸಿರುವ ಕಮಿಟಿಗೆ ಒತ್ತಾಸೆಕೊಟ್ಟು ಅದರಲ್ಲಿ ಒಬ್ಬ ಮೆಂಬರಾಗಿ ಚುನಾಯಿಸಲ್ಪಟ್ಟಿದ್ದರು. ಆದಕಾರಣ ಅವರು ತಾ 7ರಲ್ಲಿ ಲಾ ಕಾಲೇಜಿನಲ್ಲಿ ಸಿಗ ಬಂದಾಗ ಆ ಕ್ಲಾಸಿನ ವಿದ್ಯಾರ್ಥಿಗಳು, ಅವರು ಸೈಮನ್ ಕಮಿಷನಿನೊಂದಿಗೆ ಸಹಕರಿಸಲು ಒಪ್ಪಿದ್ದು ಸರಿಯೇ ಅಲ್ಲ ವೆಂದೂ, ಇನ್ನಾದರೂ ಆ ಕಮಿಟಿಗೆ ರಾಜೀನಾಮೆ ಕೊಡಬೇಕೆಂತಲೂ ಬೇರೆಯಾಗಿ ಬರೆದಿದ್ದ ಒಂದು ಪತ್ರವನ್ನು ಓದಿ ಆ ವರ್ಗ್ಲದ ಕ್ಲಾಸಿನಿಂದ ಹೊರಗೆ ಹೋಗಿಬಿಟ್ಟರಂತೆ

## ವಿದೇಶ.

ಈ ತಾ 9ರಲ್ಲಿ ಜರ್ಮನಿ ಫ್ರಾನ್ಸ್ ಮತ್ತು ಅಮೇರಿಕ ದೇಶಗಳಲ್ಲಿಯೂ ತಡೆಯಲಾರದಷ್ಟು ಶೆಕೆಯ ಕಾರಣ ಗುಡುಗು ಮಿಂಚುಗಳಿಂದ ಕೂಡಿದ ಬಿರುಗಾಳಿಯಿಂದ ಬಹು ನಷ್ಟವುಂಟಾಗಿದೆಯೆಂದು ಬರ್ಲಿನ್ ಪ್ಯಾರಿಸ್ ಮತ್ತು ನ್ಯೂಯಾರ್ಕ್ ಪಟ್ಟಣಗಳಿಂದ ವರ್ತಮಾನ ಬಂದಿದೆ

ಮಿ ಜಿನ್ನಾ ಮತ್ತು ಮಿ ಸನ್ಮುಗಂ ಚೆಟ್ಟಿಯವರು ಕಳೆದ ತಿಂಗಳ ಕಡೆಯ ವಾರದಲ್ಲಿ ಐರ್ಲೆಂಡ್ ದೇಶವನ್ನು ಸಂದರ್ಶಿಸಿದರು. ಅವರು ಅಲ್ಲಿಯ ಸರಕಾರದ ಪ್ರೆಸಿಡೆಂಟ್ ಕಾಸ್ಗ್ರೇವರನ್ನೂ, ಪ್ರಮುಖ್ಯ ಮಂತ್ರಿಗಳನ್ನೂ ನೋಡಿ ಐರಿಷ್ ಫ್ರೀಸ್ಟೇಟ್ ಸರ್ಕಾರದ ರಚನೆಯ ವಿಷಯ ಸಂಭಾಷಿಸಿದ್ದರು ಇವರಿಬ್ಬರು ಈ ತಾ 10ರಲ್ಲಿ ಹಿಂದೂ ದೇಶಕ್ಕೆ ಹಿಂತಿರುಗಲು ಸ್ಟೀಮರು ಹತ್ತುವರು.

ಇಂಗ್ಲೆಂಡಿನ ಪಬ್ಲಿಕ್ ಸ್ಕೂಲುಗಳಲ್ಲಿ ಹೆಡ್ಮಾಸ್ತರುಗಳು ಇಂಡಿಯನ್ ವಿದ್ಯಾರ್ಥಿಗಳನ್ನು ಪಕ್ಷಪಾತದ ದೃಷ್ಟಿಯಿಂದ ನೋಡುತ್ತಿರುವದು ನ್ಯಾಯವಲ್ಲವೆಂದೂ ಹಿಂದೂಸ್ಥಾನದ ಯುವಕರ ಮಕ್ಕಳ ವಿದ್ಯಾಭ್ಯಾಸಕ್ಕೆಂತ ಇಂಗ್ಲಿಷ್ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಖರ್ಚು ಮಾಡುತ್ತಿರುವಲ್ಲಿ ಇಂಗ್ಲಿಷ್ ಪಬ್ಲಿಕ್ ಸ್ಕೂಲುಗಳ ಈ ತರದ ವರ್ತನೆಯು ಬಹು ಅನ್ಯಾಯಕರವೆಂದೂ ಮುಂತಾಗಿ ಸರ್ ಅಬ್ಬಾಸ್ ಅಲಿ ಬೇಗ್‌ರವರು ಈ ತಾ 4ರಲ್ಲಿ ಲಂಡನಿನಲ್ಲಿ ಇಂಡಿಯನ್ ಸೋಶ್ಯಲ್ ಕ್ಲಬ್ ವಾರ್ಷಿಕ ಔತಣದಲ್ಲಿ ಭಾಷಣಮಾಡಿದರು.

### ಆಲ್ ಇಂಡಿಯಾ ಮ್ಯೂಚುವಲ್ ಎಯಿಡ್ ಆಂಡ್ ಪೂವರ್ ಹೌಸಸ್ ಎಸೋಸಿಯೇಷನ್ ಲಿಮಿಟೆಡ್.

ಬ್ರಾಂಚ್ ಆಫೀಸು, ಮಡಿಕೇರಿ.

ಮೇಲ್ಕಂಡ ಸಂಘದ ಮಡಿಕೇರಿ ಶಾಖೆಯ ಷೇರು ಮತ್ತು ಬಾಂಡು ಹೋಲ್ಡರುಗಳ ಮೀಟಿಂಗೊಂದು ತಾ 26 8-28ನೇ ಆದಿತ್ಯವಾರ ಸಂಘದ ಆಫೀಸಿನಲ್ಲಿ 2 ಗಂಟೆಗೆ ನಡೆಯುವುದು.

ಚರ್ಚಿಸತಕ್ಕ ವಿಷಯಗಳು —

ಬೋನಸ್ ಮತ್ತು ಸಾಲ ಕೊಡುವದು.

ಅಧ್ಯಕ್ಷರ ಅನುಮತಿ ಮೇರೆ ಇತರ ವಿಷಯಗಳು.

B. O.

ಸಿ. ಬಿ. ಕರುಂಬಯ್ಯ,

ಬ್ರಾಂಚ್ ಸೆಕ್ರೆಟರಿ.

### ಮಹಾಜನರಲ್ಲಿ ವಿಜ್ಞಾಪನೆ.

೧ನೇ ತಾರೀಖಿನ ದಿನ ಸಾಯಂಕಾಲ ಬೆಂಗಳೂರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಬೆಂಗಳೂರಿನ ಈಗಿನ ಸ್ಥಿತಿಯಲ್ಲಿ ಈ ಪತ್ರಿಕಾ ಪ್ರಕಟನೆಯು ದ ಪ್ರಜಾ ಶಾಂತಿಗೆ ಭಂಗವುಂಟಾಗಬಹುದೆಂದು ನನ್ನ « ವಿಶ್ವಕರ್ಣಾಟಕ » ಪತ್ರಿಕೆಯನ್ನು ನಿಲ್ಲಿಸಬೇಕೆಂದು ಆಜ್ಞೆಯನ್ನು ಕಳುಹಿಸಿದರು. ಎಷ್ಟುಕಾಲ ನಿಲ್ಲಿಸಬೇಕೆಂಬುದನ್ನು ತಿಳಿಸಲಿಲ್ಲ. ಮಹಾಜನ ಶಾಂತಿಕೋಪಕಕೆ ಪತ್ರಿಕೆಯನ್ನು ನಿಲ್ಲಿಸುವುದು ಸರಿಯಾಗಲಿ, ನ್ಯಾಯವಾಗಲಿ ನನಗೆ ತೋರಲಿಲ್ಲ. ಪತ್ರಿಕೆ ಮಹಾಜನರ ಆಸ್ತಿ; ಅದು ಮಹಾಜನರ ನಿಜ ಸ್ಥಿತಿಯನ್ನು ತಿಳಿಸಿರುತ್ತದೆ. ನನ್ನ ಬಾಂಧವರೆಲ್ಲರೂ ಬೇರೊಂದನ್ನು ತಿಳಿಯದೆ, ಸರಕಾರದವರು ಪತ್ರಿಕೆಯ ಮೇಲೆ ಹಾಕಿರುವ ಆಜ್ಞೆಯನ್ನು ತೆಗೆದುಹಾಕಿಸಿ, ಒಂದಿನಂತೆ « ವಿಶ್ವಕರ್ಣಾಟಕ » ಪತ್ರಿಕೆಯನ್ನು ಪ್ರಕಟಿಸಿ, ದೇಶದ ಸೇವೆಯನ್ನು, ಪ್ರಜಾ ಸೇವೆಯನ್ನೂ ನ್ಯಾಯವಾಗಿಯೂ ನಿರ್ಭಯವಾಗಿಯೂ ಮಾಡುವಂತೆ ನನಗೆ ಸಹಾಯಮಾಡುವರೆಂದು ಪ್ರಾರ್ಥನೆ.

ಬೆಂಗಳೂರು ನಗರ, ತಿರುಮಲೆ ತಾತಾಚಾರ್ಯ ಶರ್ಮ,

೨-೮-೧೯೨೮ ಸಂಪಾದಕ « ವಿಶ್ವಕರ್ಣಾಟಕ »

### ಗೆಜ್ಜೆ ಕಟ್ಟಿದ ಭಂಗಾರದ ಬಾಬು.



ಇವನ್ನು ನೀವು ರೋಲ್ಡು ಗೋಲ್ಡು ಫಾರಂನಿಂದ ತಯಾರಿಸಿ ಅಸಲ್ ಬಂಗಾರದ ಗಿಲಿಟ್ ಮಾಡಿದೆ 150 ಗೆಜ್ಜೆಗಳನ್ನು ಕಟ್ಟಿದೆ ನೋಡಲು ಬಹು ಅಲಂಕಾರವಾಗಿದೆ ಹತ್ತು ವರ್ಷ ಕಪ್ಪಾಗಲ್ಲ ಒಂದು ಬಾಬು ಅದ್ದರಿ ಮನೆಯವರಿಗೆಲ್ಲರೂ ಉಪಯೋಗಿಸಬಹುದು. ಒಂದು ಜೊತೆ ಕ್ರಯ 1ಕ್ಕೆ 1-8-0.

7 ಕಲ್ಲಿನ ಮಿಂಚುಕಲ್ಲಿ ಜೊತೆ 1ಕ್ಕೆ 2-8-0 ಬಂಗಾರದ ಸರವು ಅದ್ದಿಗೆ ಸರಕ ಸಹಿತ 3-8-0 6 ಆರ್ಡರ ಸವರ್ಣಗಳ ಕಳುಹಿಸಲಾಗುತ್ತೆ 1 ಕ್ಕೆ 1-1

### ಜೆಸ್ಟ್ ಲೇಸರ್.



ಇದು ನೀವು ಯಾವ ದಿನ ಸವರುವ ಸ್ಟೀಲ್ ಬ್ಲೇಡಿನಿಂದ ತಯಾರಾದದ್ದು, ಕತ್ತರಿ ಮತ್ತು ಬಿಳಿಯ ದಾರದ ಹಿಡಿಯು ಇದೆ ಬೆಲೆ 2-10 ಕಲೆಯು ಕೂದಲನ್ನು ಕತ್ತರಿಸುವ ವಿಶೇಷ 1 ಕ್ಕೆ —3—.

ವಿಳಾಸ — The I[illegible] Trading Co

52-12 [illegible] Madras

### ನಾರು ಹುಣ್ಣು.

(ಎನ್ ಶಾಸ್ತ್ರಿ ಸಂಪಾದಿಂದ)

ನಾರುಹುಣ್ಣು ಬಹು ಕಷ್ಟಕರವಾದ ಸಾಂಕ್ರಾಮಿಕ ರೋಗವಾಗಿದೆ. ಈ ವ್ಯಾಧಿಯು ಸಾಧಾರಣವಾಗಿ ಮೊದಲು ಕಾಲಿನಲ್ಲಿ ಒಂದು ಸಣ್ಣ ಗುಳ್ಳೆಯಾಗಿ ಕಾಣಿಸಿಕೊಳ್ಳುತ್ತದೆ. ಈ ಗುಳ್ಳೆಯು ಎರಡು ಒಡೆದ ಹೋಗುತ್ತದೆ ಮತ್ತು ಆಗ ಗಾಯದ ದ್ವಾರದಿಂದ ಹುಳವು ಸಹಸ್ರ ಗಟ್ಟಿಯಿಂದ ಮುಂಗಾರು ಹಾಲಿನಂತಿರುವ ರಸದ ಬಿಂದುಗಳನ್ನು ಹೊರಗೆ ಹಾಕುತ್ತದೆ. ಜಾಗ್ರತೆಯಿಂದ ಸ್ವಲ್ಪ ಸ್ವಲ್ಪ ಅದನ್ನು ಹೊರಗೆ ತೆಗೆಯುವ ಪಕ್ಷದಲ್ಲಿ ಹುಳವು ತನ್ನಷ್ಟಕ್ಕೆ ಹೊರಗೆ ಬರಲಿಕ್ಕೆ ಯಾವ ತೊಂದರೆ ತೋರಿಸುವದಿಲ್ಲ ಆದರೆ ಹೊರಗೆ ತೆಗೆಯುವಾಗ ಅಜಾಗ್ರತೆ ಮಾಡಿದರೆ, ಹುಳವು ಒಳಗೆ ಒಡೆದು ರೋಗಿ ರೋಗವು ಕಠಿಣವಾಗಿ ಪರಿಣಮಿಸುತ್ತದೆ. ವಿಷ ಬಾವುಗಳು, ವ್ರಣಗಳು, ಕೀಲು ನೋವು ಮತ್ತು ಅನೇಕ ಸಾರಿ ಪ್ರಾಣಾಪಾಯಕರವಾದ ಕುರೂಪವನ್ನು ಕೊಡತಕ್ಕಂಥ ದೀರ್ಘಕಾಲದ ರೋಗದಿಂದ ನರಳುವಿಕೆಯೂ ಉಂಟಾಗುತ್ತದೆ.

ರೋಗವು ಒಬ್ಬ ಮನುಷ್ಯನಿಂದ ಇನ್ನೊಬ್ಬ ಮನುಷ್ಯನಿಗೆ ಬಹಳ ಸುಲಭವಾಗಿ ಹರಡುತ್ತದೆ ಹುಣ್ಣು ಇದ್ದ ಹುಳವು ಸ್ವಲ್ಪವೇ ಹೊರಗೆ ಬಂದಿರುವ ರೋಗದ ಮೊದಲನೇ ಸ್ಥಿತಿಯಲ್ಲಿದ್ದ ರೋಗಿಗಳಿಗೆ ಹೆಚ್ಚು ಅಸೌಖ್ಯ ತೋರಲಿಕ್ಕಿಲ್ಲ. ಅವರು ಎಂದಿನಂತೆಯೇ ಕೆರೆಗಳಿಗೂ ಬಾವಿಗಳಿಗೂ ಹೋಗಿ ತಮ್ಮ ಸ್ನಾನಕ್ಕೋಸ್ಕರವೂ ನೀರಿನ ಪಾತ್ರೆಗಳನ್ನು ತುಂಬುವದಕ್ಕೂ ನೀರಿನಲ್ಲಿ ನಡೆಯುತ್ತಾರೆ ಅಂಥಾ ಮನುಷ್ಯನ ಕಾಲುಗಳು ನೀರಿನೊಳಗೆ ಪ್ರವೇಶಿಸಿದ ಕೂಡಲೆ ಹುಳುವು ಮರಿಗಳಿಂದ ತುಂಬಿರುವ ರಸವನ್ನು ಹೊರಗೆ ಹಾಕುತ್ತದೆ. ಆ ಸಣ್ಣ ಮರಿಗಳು ಕೆರೆ, ಕೊಳ ಮತ್ತು ಬಾವಿಯ ನೀರಿನೊಳಗೆ ಹೋಗಿ ಅಲ್ಲಿರುವ ಸಣ್ಣ ಜಂತುಗಳ ಒಳಗೆ ಹೊಕ್ಕುತ್ತವೆ ಅಂಥಾ ನೀರನ್ನು ಕುಡಿಯುವ ಯಾವನೊಬ್ಬ ಮನುಷ್ಯನೂ ಜಂತುಗಳನ್ನು ನುಂಗುತ್ತಾನೆ ಮತ್ತು ಆಗ ಆ ಸಣ್ಣ ನಾರು ಹುಳುಗಳು ಮನುಷ್ಯನ ಹುಳಗಳಿಂದ ಹೊರಗೆ ಬಂದು ಹೊಟ್ಟೆಯ ಕರುಳಿನ ಚಲನಗಳಲ್ಲಿ ದೊಡ್ಡ ಹುಳುಗಳಾಗಿ ಬೆಳೆದು, ಹನ್ನೆರಡು ತಿಂಗಳ ತಮ್ಮ ಸಣ್ಣ ಮರಿಗಳನ್ನು ನೀರಿನಲ್ಲಿ ಹೊರಗೆ ಹಾಕುತ್ತವೆ.

ನಾರು ಹುಣ್ಣು ಬಾರದಂತೆ ಮಾಡಬೇಕಾದ ನಿವಾರಣೋಪಾಯಗಳು.

ಇದಕ್ಕೆ ಬೇಕಾದ ಒಂದೇ ಸಂಗತಿಯು — ಕುಡಿಯುವ ನೀ

ರಿನ ಅಶ್ರಯರ್ವ ವಿಷಯ ಯಾ . . ಗಲೂ ಜಾಗ್ರತೆ ತೆಗೆದುಕೊಳ್ಳುವದೂ ಅವಶ್ಯವದೆ ಮೆಟ್ಲು ಬಾವಿಗಳನ್ನು ತೆಗೆದು ಹಾಕಿರಿ. ಅಥವಾ ಅವುಗಳಿಗೆ ಕಟ್ಟೆಯನ್ನಾಗಲಿ ನೀರೆಳೆಯುವ ಯಂತ್ರಗಳನ್ನಾಗಲಿ ಹಾಕಿರಿ. ಕುಡಿಯುವ ನೀರಿನ ಬಗ್ಗೆ ಕೆರೆ ಮಾತ್ರ ಇರುವದಾದರೆ ಕೆರೆಯ ಹತ್ತಿರ ಬಾವಿಯನ್ನು ತೋಡಿಸಿರಿ. ಸಾಧ್ಯವಿರುವ ಎಲ್ಲಾ ಉಪಾಯಗಳಿಂದ ಜನರನ್ನು ಕೆರೆಗಳೊಳಗೂ, ಬಾವಿಗಳೊಳಗೂ ಇಳಿಯದ ಹಾಗೆ ತಡೆಯಿರಿ. ಹೀಗೆ ಮಾಡಿದರೆ ರೋಗವು ಸೋಂಕು ಹರಡಲಿಕ್ಕೆ ಏನೂ ಸಂದರ್ಭ ಇರುವದಿಲ್ಲ.

ಸ್ವಂತ ಮುಂಜಾಗ್ರತೆಗೋಸ್ಕರ ಎಲ್ಲಾ ಕುಡಿಯುವ ನೀರನ್ನು ಒಂದು ಮಸ್ಲೀನು ಬಟ್ಟೆಯ ಒಳಗೆ ಗಾಳಿಸಿದರೆ ಅಥವಾ ಕುದಿಸಿದರೆ ನಾರುಹುಳದ ಮರಿಗಳಿರುವ ಸಣ್ಣ ಬಸವನ ಹುಳಗಳನ್ನು ತೆಗೆದು ಸೋಂಕನ್ನು ನಿವಾರಿಸಬಹುದು.

ನಾರು ಹುಣ್ಣಿನಿಂದ ಪೀಡಿತರಾದ ರೋಗಿಗಳು ಕೂಡಲೆ ತಕ್ಕದಾದ ಚಿಕಿತ್ಸೆಯನ್ನು ಮಾಡಿಸಬೇಕು. ಹುಳವನ್ನು ದಿನಾಲೂ ನಿಧಾನವಾಗಿ ಸ್ವಲ್ಪ ಸ್ವಲ್ಪ ಹೊರಗೆ ಎಳೆದು ಹೊರಗೆ ಎಳೆದಿರುವ ಭಾಗವನ್ನು ಒಂದು ಸಣ್ಣ ಕಡ್ಡಿಗೆ ಸುತ್ತಿಕೊಳ್ಳಬೇಕು. ಗಾಯಕ್ಕೆ ಯೋಗ್ಯವಾದ ಶುಶ್ರೂಷೆ ಮಾಡಬೇಕು. ಮುಖ್ಯವಾಗಿ, ಅಂಥಾ ಮನುಷ್ಯರ ಸೋಂಕನ್ನು ಬೇರೆಯವರಿಗೆ ಹರಡಿಸದಂತೆ ಅವರಿಗೆ ಯಾವ ನೀರಿನ ಆಶ್ರಯದ ಹತ್ತಿರವೂ ಹೋಗಲಿಕ್ಕೆ ಬಿಡಬಾರದು.

## ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

—ಶ್ರೀ—

### ಮಡಿಕೇರಿ ಮುನ್ಸಿಪಾಲಿಟಿಯೂ, ಹಂದಿ ಸಾಕುವಿಕೆಯೂ.

ಅಯ್ಯಾ,

ಹಂದಿಗಳನ್ನು ಮುನ್ಸಿಪಾಲಿಟಿಯಲ್ಲಿ ಮನಸ್ಸೋ ಇಚ್ಛೆ ತಿರುಗಾಡಲು ಬಿಡುವದರಿಂದ ಪಟ್ಟಣದ ಶುಚಿತ್ವವು ಕಡುಪಡಲ್ಲದೆ ಅವುಗಳಿಂದ ತುಂಬಾ ನಷ್ಟವೆಂಬುದು ನಿರ್ವಿವಾದದ ಮಾತಾಗಿದೆ. ಆದುದರಿಂದ ಮುನ್ಸಿಪಾಲಿಟಿಯೊಳಗೆ ಪಬ್ಲಿಕ್ ಸ್ಥಳಗಳಲ್ಲಿ ಹಂದಿಗಳನ್ನು ಕಂಡರೆ ಮುನ್ಸಿಪಾಲಿಟಿಯವರು ಅವುಗಳನ್ನು ಗುಂಡು ಹೊಡೆದು ಕೊಲ್ಲಬಹುದೆಂದು ಇಲ್ಲಿ ಮುನ್ಸಿಪಲ್ ನಿಬಂಧನೆ ಇರುವದಾಗಿದೆ. ಆದರೆ ಈ ನಿಬಂಧನೆ ಇದ್ದದ್ದು . . . ಯವರಿಗೆ ಇಷ್ಟರವರೆಗೆ ಗೊತ್ತಿರಲಿಲ್ಲವೆಂದೇ ತೋರುತ್ತದೆ. ಈ ವೈಶಾಖ . . . ಬಾರಿಗೆ ತರಬೇತು ಹೊಸ ಮುನ್ಸಿಪಲ್ ಕಮಿಟಿಯವರು . . . ಪ್ರಾರಂಭಿಸಿರುವದು ಶ್ಲಾಘನೀಯವೇ ಸರಿ.

ಆದರೆ . . . ಕಮಿಟಿ ಮತ್ತು ಪ್ರೆಸಿಡೆಂಟರು . . . ಮಡಿಕೇರಿ ಹಂದಿಗಳ ಮೇಲೆ . . . ಪರಿಣಮಿಸಿದ . . . ಕಳೆದ ಮಂಗಳವಾರ . . . ರಸ್ತೆ ಬಜಾರುಗಳಲ್ಲಿ ಹಂದಿಗಳನ್ನು ಕಂಡರೆ ಮುನ್ಸಿಪಾಲಿಟಿಯವರು ಅವುಗಳನ್ನು ಗುಂಡು ಹೊಡೆಯುವರೆಂದು . . . ಡಂಗುರ ಹೊಡಸಿದರು. . . . ಹೊಡೆಸಿದ ವಿಷಯ ಪಟ್ಟಣವಾಸಿಗಳಿಗೆ ತಿಳಿಯುವದಕ್ಕಾಗಿಯೇ . . . ಬಗ್ಗೆ . . . ಗಂಟೆಗೆ . . . ತಿಳಿಸಿದವು . . . ಹಂದಿಗಳಿಗೆ ಗುಂಡು ಹೊಡೆಯುವೆಂದು ಕೆಲವರು ಭಾವಿಸಿದರು . . . ಆದರೆ . . . ಹೊತ್ತಿಗೆ . . . ಬಜಾರುಗಳ . . . ದಿಯ ಪ್ರಾಣ . . . ಕಂಡು ಬಂದ. . . . ಇದು ಹಂದಿ . . . ಗೆ ಗಾಬರಿಯನ್ನುಂಟುಮಾಡಿದೆ.

ಹಂದಿ ಸಾಕುವದನ್ನು ಕಡ್ಡಾಯವಾಗಿ ಇಲ್ಲದೆ ಮಾಡುವದು ಆತ್ಮವಿಶ್ವಾಸದಿಂದಲೂ ದಕ್ಕೆ . . . ಯಿಲ್ಲ. ಆದರೆ ಡಂಗುರ ಹೊಡೆಸಿದ ಮರುದಿನವೇ ಗುಂಡು ಹೊಡೆಯಲು ಶುರು ಮಾಡಿದ್ದು ಹಂದಿ ಸಾಕಿದವರಿಗೆ ದೊಡ್ಡ ಕಷ್ಟವಾಗಿದೆ. ಸಾಕಿರುವ ಹಂದಿಗಳನ್ನು ಪಟ್ಟಣದ ಸ್ಥಳಗಳಿಗೆ ಬಾರದಂತೆ ಒಂದೋ ಬಿಟ್ಟು ಮಾಡಲಿಕ್ಕಾಗಲೀ, ಅಥವಾ ಅವುಗಳನ್ನು ವಿಕ್ರಯ ಖರ್ಚು ಮಾಡಲಿಕ್ಕಾಗಲೀ ಮಾಲೀಕರಿಗೆ ಸಾಕಷ್ಟು ಸಮಯ ಕೊಡಬೇಕಾದದ್ದು ನ್ಯಾಯ. ಮೂರು ತಿಂಗಳು ಅಥವಾ ಕಮ್ಮಿ ಪಕ್ಷ ಒಂದು ತಿಂಗಳ ಸಮಯವಾದರೂ ಕೊಟ್ಟು ನಂತರ ಈ ನಿಬಂಧನೆಯನ್ನು ಜಾರಿಗೆ ತಂದರೆ ಅದರ ಕಾಠಿಣ್ಯವು ಜನರಿಗೆ ಅಷ್ಟೊಂದು ತೋರಲಾರದು. ಇದಕ್ಕೆ ಹೊಸ ಕಮಿಟಿ ಮತ್ತು ಪ್ರೆಸಿಡೆಂಟರು ಗಮನ ಕೊಡುವರೇ?

ಪಟ್ಟಣಿಗ.

### ವಿನಂತಿ.

ತಾ 27—7—39ರ ಪತ್ರಿಕೆಯಲ್ಲಿ "ಮುತ್ತಣ್ಣ" ಎಂಬ ಹೆಸರಿನಿಂದ ಕೊಡವ ಭಾಷೆಯಲ್ಲಿ ತಮ್ಮ ಕುಲಾಭಿವೃದ್ಧಿಯ ಉದ್ದೇಶವನ್ನಾಶಿಸಿ ಒಂದು ಬಾತ್ಮಿ ಬರೆದದನ್ನು ಎಲ್ಲರೂ ಓದಿರಬಹುದು. ಆದರೆ ಸದರಿ ಬಾತ್ಮಿಯು ಪತ್ರಿಕೆಯಲ್ಲಿ ಹೊರಟ್ಟ ದಿವಸವೇ ನನ್ನ ಅನೇಕ ಕ್ಷೇಮ ಚಿಂತಕರು ಸದರಿ ಬಾತ್ಮಿ ವಿಷಯ ಮಮತೆಯಿಂದ ನನ್ನಲ್ಲಿ ಮಾತಾಡಿದರು. ಬಾತ್ಮಿದಾರರು ತಮ್ಮ ಕುಲ ಜನರನ್ನು ಉದ್ದೇಶಿಸಿದ ಸಂಗತಿಯನ್ನೇ ನಾನು ಈ ಮೊದಲು ಕಥಾ ರೂಪವಾಗಿಯೂ, ಬಾತ್ಮಿರೂಪವಾಗಿಯೂ, ಭಾಷಣರೂಪವಾಗಿಯೂ ನನ್ನ ಹೆಸರನ್ನು ವಿಜ್ಞಾಪಿಸುತ್ತಿದ್ದುದ್ದರಿಂದ 'ಮುತ್ತಣ್ಣ' ವೆಂಬ ದಸ್ಕತ್ತು ನನ್ನನ್ನೇ ಪ್ರತಿಬಿಂಬಿಸುತ್ತಿರುತ್ತದೆಂಬುದಾಗಿ ಹೇಳಿದರೆ ತಪ್ಪಾಗದು. ದಸ್ಕತ್ತಿನ ಜೊತೆಯಲ್ಲಿ ತಮ್ಮ ಮನೆಯ ಅನುಕೂಲ್ಯ ಒಂದೆರಡು ಅಕ್ಷರಗಳನ್ನು ತೋರಿಸುವದು ಬರವಣಿಗೆಯವರಿಗೆ ಒಂದು ಘನತೆಯಲ್ಲವೇ? ಸದರಿ ಬಾತ್ಮಿಯು ನಾನು ಬರೆದದ್ದಲ್ಲವೆಂತಲೂ, ನನ್ನ ಧ್ಯೇಯವು ಯಾವಾಗಲೂ ಪರಸ್ಪರ ಸಮಾನತ್ವದ (Socialism' ಧ್ಯೇಯವಾಗಿರುತ್ತದೆಂತಲೂ ಮತ್ತು ಸದರಿ ಧ್ಯೇಯವನ್ನು ಸಾಧಿಸಲು ಅತಿಕ್ರಮಿಸಿದ ಸಂಘವನ್ನು ಆಳಿಸುವ ಕಾರಣದಿಂದ ಅನೇಕ ಸಂದರ್ಭಗಳಲ್ಲಿ ನಾನಾ ವಿಧದ ಬರವಣಿಗೆಗಳನ್ನು ಬರೆದರೂ ನಾನು ಯಾವಾಗಲೂ "ಪಿ. ಯಂ. ಮುತ್ತಣ್ಣ" ವೆಂಬದಾಗಿಯೇ ನನ್ನ ದಸ್ಕತ್ತನ್ನು ಹಾಕುತ್ತಿರುತ್ತೇನೆ. ಆದ್ದರಿಂದ ಯಾರೂ ಮುತ್ತಣ್ಣ (ಮಾತ್ರ) ವೆಂಬುವ ದಸ್ಕತ್ತಿನಿಂದ ಕೂಡಿದ ಬಾತ್ಮಿಗಳನ್ನು ತಪ್ಪು ಅಭಿಪ್ರಾಯ ಮಾಡಿಕೊಳ್ಳಬಾರದಾಗಿ ನನ್ನ ಇಷ್ಟಮಿತ್ರರಲ್ಲಿ ವಿಜ್ಞಾಪಿಸುತ್ತೇನೆ.

ಇದಲ್ಲದೆ "ಮುತ್ತಣ್ಣ"ವೆಂಬವರ ಬಾತ್ಮಿಯು ಎಂದೂ ಇತರರನ್ನು ಹೀಯಾಳಿಸಲು ಬರೆದ ಬಾತ್ಮಿಯಂತೆ ಕಾಣುವುದಿಲ್ಲ. ತಮ್ಮ ಬಾತ್ಮಿಯು ಇತರರಿಗೆ ತಿಳಿಯಬಾರದೆಂಬುವುದಕ್ಕಾಗಿಯೇ ತಮ್ಮ ಸ್ವಭಾಷೆಯಲ್ಲಿ ತಮ್ಮ ಸ್ವಜನರಿಗೆ ಮಾತ್ರ ವಿಜ್ಞಾಪಿಸಿದಂತೆ ಕಾಣುತ್ತದೆ. ಭಾಷಾ ಪರಿಚಯದವರು ಇದನ್ನು ತಿಳಿದರೂ ಒಂದು ಬಾತ್ಮಿಯ ಧ್ಯೇಯವನ್ನು ಪರಿಶೀಲಿಸಬೇಕೇ ಹೊರತು ಮಹತಿಯಿಲ್ಲದ ಬರವಣಿಗೆಯನ್ನು ಆರೋಪಿಸುವದರಿಂದ ಪ್ರಯೋಜನವಾಗಲಾರದು. ಆದ್ದರಿಂದ ನಮ್ಮ 'ಮಿತ್ರರು' ಶಾಂತಿಯನ್ನು ತಾಳುವುದುತ್ತಮವಾಗಿರುತ್ತದೆ.

ಪಿ. ಯಂ. ಮುತ್ತಣ್ಣ.

### ಕೊಡಗು ವೀರಶೈವರಲ್ಲಿ ಪ್ರಥಮ ಬಿ. ಎ.

ಅಯ್ಯಾ,

ಕಳೆದವಾರ ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾದಂತೆ ಈ ವರ್ಷ ಬಿ. ಎ. ಪರೀಕ್ಷೆಯಲ್ಲಿ ಪಾಸಾಗಿರುವ ಕಿತ್ತೂರು ಮ. ರಾ. ಕೆ. ಮಲ್ಲಪ್ಪನವರು ಕೊಡಗು ವೀರಶೈವ ವಿದ್ಯಾಭಿವೃದ್ಧಿ ಸಂಘದಿಂದ ವೇತನ ಹೊಂದುತ್ತಿದ್ದವರು. ವೀರಶೈವ ಸಮಾಜದಲ್ಲಿ ಬಿ. ಎ. ತರಗತಿಯಲ್ಲಿ ಪಾಸಾದವರಲ್ಲಿ ಇವರೇ ಮೊದಲನೆಯವರಾಗಿರುತ್ತಾರೆ. ಇವರು ಈಗ ಮದ್ರಾಸಿನ ಲಾ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇವರಿಗೆ ಇವರ ಸಮಾಜದವರ ಅಭಿವಂದನೆಗಳಿವೆ. ಇವರು ಲಾ ಕೋರ್ಸನ್ನು ಮುಗಿಸಿ ಒಂದು ಕೆಲಸಗಿಸಲ್ಲಿ ಆಯುರು ವೃತ್ತಿಯನ್ನು ಕೈಕೊಂಡ ನಮ್ಮ ಸಮಾಜದ ಏಳಿಗೆಗೆ ತುಂಬಾ ಕೆಲಸ ಮಾಡುವರಾಗಿ ಅಪೇಕ್ಷಿಸುವ

'ವೀರಶೈವ'

### ವಿರಾಜಪೇಟೆ ಕಲ್ಲುಮಠದ ಸ್ವಾಮಿಗಳು

ಅಯ್ಯಾ,

ವಿರಾಜಪೇಟೆ . . . ಕಲ್ಲುಮಠದ ಶ್ರೀ ಗುರು ಸಿದ್ದಲಿಂಗಸ್ವಾಮಿಗಳವರು ಶ್ರೀ ಚರಮೂರ್ತಿ ಸನ್ಯಾಸ . . . ಇದೇ . . . 24-7-39ರಲ್ಲಿ ಶಿವಸಾಯುಜ್ಯ ಹೊಂದಿದ ಸಂಗತಿ . . . ಶುಕ್ರವಾರ . . . ತೇವೆ. ಇವರು ಕೊಡಗು ವೀರಶೈವ ವಿದ್ಯಾಭಿವೃದ್ಧಿ ಸಂಘಕ್ಕೆ 100 ರೂಪಾಯಿ ಕೊಡುವುದಾಗಿ ವಾಗ್ದಾನ ಮಾಡಿದ್ದು . . . ಲಿಂಗಗಳವರು ಸಂಘಕ್ಕೆ ಆಗಾಗ ಉತ್ತೇಜನ ಕೊಡುತ್ತಿದ್ದರು. ಅವರನ್ನು ಕಳಕೊಂಡದ್ದು ತುಂಬಾ ವ್ಯಸನಕರವಾಗಿದೆ. ಇವರು ಕೇವಲ ಮಠಾಧಿಪತಿಗಳೂ, ಮೃದುಭಾಷಿಗಳೂ, ಶಾಂತಿ ಸ್ವಭಾವವುಳ್ಳವರೂ, ಗುರುಜಂಗಮಪ್ರಿಯರೂ, ಶಿವಪೂಜಾಧುರಂಧರರೂ, ಶಿವಾನುಭವಶಾಸ್ತ್ರ ಪಾರಂಗತರೂ, ಆಚಾರಸಂಪನ್ನರೂ ಆಗಿದ್ದರು. ಇವರ ಆತ್ಮಕ್ಕೆ ಶಾಂತಿಯು ದೊರಕಲೆಂದು ಪರಮೇಶ್ವರನನ್ನು ಪ್ರಾರ್ಥಿಸುವ,

'ಶಿಷ್ಯ.'

### ಸ್ಕೌಟುಗಳ ವಿನೋದ ಸಮಾರಂಭ.

ಅಯ್ಯಾ,

ಇದೇ ತಿಂಗಳು 23ನೇ ತಾರೀಕಿನಿಂದ 28ರ ವರೆಗೆ ಬೆಂಗಳೂರು ಕ್ಯಾಂಟನ್‌ಮೆಂಟಿನ ಸ್ಕವುಟುಗಳ ವಿನೋದದ ಸಮಾರಂಭ ನಡೆಯಿತು. ಸ್ಕವುಟುಗಳು ಪ್ರದರ್ಶಿಸಿದ ಮುಖ್ಯ ಕಾರ್ಯಭಾಗಗಳು—ಸೆರಿಮೋನಿಯಲ್ ಪೆರೇಡು ಪಂಥದಾಟ, ಕೈಗಾರಿಕೆ ವಸ್ತುಪ್ರದರ್ಶನ (Craft exhibition) ಮತ್ತು ಕ್ಯಾಂಪು ಫಯರ್.

ಈ ಸಂದರ್ಭದಲ್ಲಿ ಗ. ಟ್ರೈನಿಂಗ್ ಶಾಲೆ ರೋವರ್ ಸ್ಕೌಟುಗಳ ಪಂಗಡವನ್ನು ನೋಡಿ ಸ್ಕೌಟು ಅಧಿಕಾರಿಗಳಾದ ಡಿ. ಸಿ., ಎ. ಡಿ. ಸಿ. ಮತ್ತು ಇತರರು ಬಹು ಆನಂದಪಟ್ಟಿರುವರು.

ಇದೇ ತಾರೀಕು 27ರಲ್ಲಿ ರೆಸಿಡೆಂಟರ (Cheif Scout) ಬಂಗ್ಲೆ ಕಾಂಪೌಂಡಿನಲ್ಲಿ ಸರ್ವ ಸ್ಕೌಟುಗಳೂ ಸಾಯಂಕಾಲ ಸುಮಾರು 6½ ಗಂಟೆಗೆ ನೆರೆದರು. ಅಲ್ಲಿ ಎಲ್ಲಾ ಸ್ಕೌಟು ಅಧಿಕಾರಿಗಳೂ, ಇತರ ಮಹನೀಯರೂ ಸಭೆ ಸೇರಿದ್ದರು. ಆಯಾಯ ಟ್ರೂಪಿನ ಸ್ಕೌಟುಗಳು ನಾನಾ ತರ ವೇಷ ಧರಿಸಿ ಆಟಗಳನ್ನೂ ಪದಗಳನ್ನೂ ಆಡಿ ತೋರಿಸಿದರು. ತನ್ಮಧ್ಯೆ ಟ್ರೈನಿಂಗ್ ಶಾಲೆಯ ರೋವರ್ಸ್‌ಗಳ ತಮಾಷೆ ತೋರಿಸುವ ಸಂದರ್ಭವೊದಗಿತು. ಆಗಲೇ ಕೆಲವರಿಗೆ ರೋವರ್ಸ್‌ಗಳ ಪೈಕಿ ಕೆಲವರು ಕೊಡಗರ ಕುಣಿತವನ್ನು (Coorg National Dance) ಪ್ರದರ್ಶಿಸುವರೆಂದು ತಿಳಿದ ಕಾರಣ ಸಭಿಕರಲ್ಲಿ ಅನೇಕರು ಬಹು ಕುತೂಹಲದಿಂದ ಕುಣಿತವನ್ನು ನೋಡಲಪೇಕ್ಷಿಸಿದರು. ಯಾಕೆಂದರೆ—ಕೊಡಗರ ಕುಣಿತವು ಬಹು ಹರ್ಷಕವಾದುದೆಂದು ಅನೇಕರ ಭಾವನೆಯಾಗಿತ್ತೆಂದು ಕಂಡು ಬಂತು. ಆದುದರಿಂದ ಕುಲಧರ್ಮ ಸಹಸವನ್ನು ತೋರಿ ಮಹನೀಯರ ಮನತೃಪ್ತಿಗೊಳಿಸುವ ಬಗ್ಗೆ ಮೇ॥ ಗಳಾದ ಬಿ. ಜಿ. ಅಪ್ಪಣ್ಣನವರೂ, ಕೆ. ಯಂ. ಚಂಗಪ್ಪನವರೂ, ಬಿ. ಬಿ. ಮುದ್ದಯ್ಯನವರೂ, ಹೆಚ್. ಬಿ. ಕುಶಾಲಪ್ಪನವರೂ, ಯಂ. ಕೆ. ಅಪ್ಪಯ್ಯನವರೂ, ಜಿ. ಡಬ್ಲ್ಯು. ಪೂವಯ್ಯನವರೂ, ಟಿ. ಯಂ. ಉತ್ತಯ್ಯನವರೂ ವಾಲಗ ಸಮೇತ ಸಭೆ ಮುಂದೆ ಬಂದು ನಮಸ್ಕರಿಸಿ ನಿಂತರು. ಆಗ ಡಿ. ಸಿ. ಯವರು ಎದ್ದು ಸಭೆ ಮುಂದೆ ನಿಂತು ಚೀಫ್ ಸ್ಕೌಟಾಗಿರುವ ಕೊಡಗಿನ ಚೀಫ್ ಕಮಿಷನರಿಗೆ ಇವರು ಕೊಡಗಿನವರೆಂದೂ ಉಪಾಧ್ಯಾಯರ ತರಬೇತಿಗೆ ಬೆಂಗಳೂರಿಗೆ ಬಂದು ಸ್ಕೌಟುಗಳಾಗಿದ್ದು ಇವರ ನೇಷನಲ್ ಡ್ಯಾನ್ಸನ್ನು ಇಲ್ಲಿ ಪ್ರದರ್ಶಿಸುವರೆಂದೂ ಕೋರಿಕೆಯಾಗಿ ಸೂಚಿಸಿದರು.

ಆ ವೇಳೆ . . . ಬಹು ಅಂದವಾಗಿ ತಂದ ಕುಣಿತವನ್ನು . . . ಯಾದ ವಾದ್ಯದೊಡನೆ ನೋಡಿದ ಸಭಿಕರ ಆನಂದವು . . . ಅಪರಿಮಿತವಾಯಿತು. ಈ ರೀತಿ . . . ಪ್ರದರ್ಶನಕ್ಕೆ ಚೀಫ್ ಕಮಿಷನರೂ, ಡಿ. ಸಿ., ಎ. ಡಿ. ಸಿ. . . . ಮತ್ತು ಇತರ ಮಹನೀಯರೂ ಹರ್ಷಯುಕ್ತವಾಗಿ ಉತ್ತೇಜನ ಭಾವವನ್ನು ಸೂಚಿಸಿದರು. . . . ಸರ್ವರ . . . ಅನುಸಾರ ಮಹನೀಯರ ಮುಂದೆ ತಮ್ಮ ಕುಲಧರ್ಮ . . . ತೋರಿ ಸತ್ಕರಿಸಿ ಅಭಿಮಾನವನ್ನು . . . ಪ್ರಕಟವಾದ ಕರ್ತವ್ಯವು.

ಇದನ್ನು ನೋಡಿಯ ಕೊಡಗಿನ ಮಹನೀಯರ ಮನಸ್ಸು ಹರ್ಷಗೊಳ್ಳದಿರುವುದೇ? ಸರ್ವ ಮಹನೀಯರು ಸಮಾಜಕ್ಕೆ ಮಹತ್ತರ ಅಭಿಮಾನವನ್ನೀಯುವ ಕುಲ ಧರ್ಮಪ್ರಸಾರದಲ್ಲಿ ಹಿರಿಯರನ್ನು ಶುದ್ಧ ಮಾರ್ಗದಲ್ಲಿ ಹಿಂಬಾಲಿಸಿ ಅಭಿಮಾನಿಗಳಾಗಿ ಕರ್ತವ್ಯವನ್ನು ಸಾಧಿಸುವದೇ ಮುಖ್ಯವಾದದ್ದು.

'ಹಾಜರಿದ್ದವ.'


# ನೀವು ನಿರ್ಬಲಸ್ತರಾಗಿ ಯಾಕೆ ನರಳುವಿರಿ?

ಇಪ್ಪತ್ತು ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

## ಸಾಲಂಮಿಸ್ರಿ ಮುರಬ್ಬ




ಸೇವನೆಯಿಂದ ಎಂಥಾ ಧಾತು ಜನ್ಯವಿಕಾರಗಳನ್ನೂ, ನರಗಳ ಶಕ್ತಿ ಕುಂದಿಹೋಗಿರುವದನ್ನೂ, ಮೆದುಳಿನ ಬಲಹೀನತೆಯನ್ನೂ ಇಂಥಾ ರೋಗಗಳನ್ನೆಲ್ಲಾ ಯಕ್ತಿನಾಗುಂತೆ ಮಾಯಹೊಂದಿಸತಕ್ಕ ತನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸುತ್ತದೆ. ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ಮಹನೀಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ಯಾರೂ ತರಿಸಿ ನೋಡಬಹುದು. ಒಂದು ಡಬ್ಬಿಗಳ ದಿನಗಳ ಸೇವನೆಯಿಂದಲೇ ಇದರ ಗುಣವು ತೋರಿಬರುವುದು. ೨-೩ ಡಬ್ಬಿಗಳ ಸೇವನೆಯಿಂದ ಜನ್ಮಾಂತ್ರದವರೆಗೂ ಸಂಪೂರ್ಣ ಗುಣವನ್ನುಂಟುಮಾಡುವದು ನಮ್ಮ ಟ್ರೇಡ್ ಮಾರ್ಕು ನೋಡಿ ಡಬ್ಬಿ ತೆಗೆದುಕೊಳ್ಳಿರಿ. ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಆವಶ್ಯಕವಿರುತ್ತೆ.

ಕ್ರಯ ಡಬ್ಬಿ ೧ಕ್ಕೆ ೨—೦—೦. ಟಪ್ಪಾಲು ಖರ್ಚು ೧ರಿಂದ ೩ ಡಬ್ಬಿಗಳ ವರೆಗೆ ೦—೮—೦.

**ಡಿ. ಮುನ್ನಾಲಾಲ್,**

ಡೆಲ್ಲಿ ನೇಟೀವ್ ಡಾಕ್ಟರು, ಸಾಲಂಮಿಸ್ರಿ ಮುರಬ್ಬ ಫಾರ್ಮಸಿ, ಬೆಂಗಳೂರು ಸಿಟಿ.

12—4

Please Call at

**THE GENERAL TRADING CO., MERCARA,**

**Opposite Coronation Gardens.**

SOLE AGENTS FOR VAUXHALL, OAKLAND, PONTIAC & CHEVROLET CARS & TRUCKS FOR COORG.

THE 1928 NEW CHEVROLET

NEW BEAUTY! NEW PERFORMANCE!! NEW FEATURES AND FOUR WHEEL BRAKES!!!

QUALITY AT LOW COST.

**THE COORG FOOTWEAR MART, MERCARA.**

The house for smart foot wear. Monsoon boot a speciality.

Prompt attention. Prices very moderate.

12–7 Attended by very efficient workmen.

# Arms, Ammunition and Shooting Requisites!!!



1928 Illustrated Catalogue Just Issued Free on Application!

| | | | | | |
|---|---|---|---|---|---|
| D. B. B. L. Rifles | Rs | 130 | to | Rs. | 2750 |
| S. B. B. L. | " | 35 | to | " | 950. |
| D. B. B. L. Guns | " | 50 | to | " | 1350 |
| S. B. B. L. " | " | 35 | to | " | 275 |
| D. B. M. L. " | " | 45 | to | " | 135. |
| S. B. M. L. " | " | 30 | to | " | 80 |
| B. L. Revolvers | " | 35 | to | " | 350 |
| Automatic Pistols | " | 30 | to | " | 150 |

Brilliant Search Light Lamp For Shooting Camping, Fishing and All such other Night Sports and work Rs 30 Free delivery

**Also swords, Daggers, Cartridges, Caps, Gunpowder and Shooting Requisites at the most competitive rates.**

GOOLAMHUSAIN ALLIBHOY & SONS,

**Largest Importers of Firearms and Ammunition Cheapest priced firm in India,**

24–19 210 Abdul Rehman Street, BOMBAY.

**ಫ್ಯಾನ್ಸಿ ಲೀವರ್ ಪಾಕೆಟ್ ವಾಚ್.**

(10 ಬಹುಮಾನಗಳ ಸಹಿತ 4–12–0)

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ಬಂದಿರುತ್ತದೆ.



ಈ ಗಡಿಯಾರವು ನೋಡುವುದಕ್ಕೆ ಗಂಟೆಯಾಗಿಯೂ, ಬೆಳಗಿನ ಅಲಾರಂ ಮತ್ತು ಒಳ್ಳೆ ನೆಟ್ಟಿನಲ್ಲಿ ತಯಾರು ಹಿಂದುಗಡೆ ಚಿತ್ರ ಕೆಲಸಮಾಡಲ್ಪಟ್ಟಿರುವದು. ಮತ್ತು ಒಳಗಡೆ ಕೆಂಪು ಕಲ್ಲು ಹೊಂದಿಸಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಹೊಂದಿರುವದು. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ್ ಡೂಮ್ ಇರುವದು. ಈ ಗಡಿಯಾರವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್‌ಮೆಂಟ್‌ಗಳಿಂದ ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ, ಒಂದನ್ನು ತರಿಸಿನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧವಾಗುವ ದಾಗಿ ಈ ಕೆಲ ಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 10 ಬಹುಮಾನಗಳ್ನು ಕೊಡುವೆವು.—ಬಹುಮಾನಗಳ ವಿವರ —ಫೌಂಟನ್ ಪೆನ್ನು 1, ಇಂಗ್ಲೀಷ್ ಸೇಫ್ಟಿ ಬ್ಲಾಟ್ 1, ಚಿನ್ನದ ಗುಂಡಿಗಳು 4, ಗಡಿಯಾರದ ಸರ 1, ಪೆನ್ನಾ ಕತ್ತಿ 1, ಕೈ ಗುಂಡಿಗಳ ಸೆಟ್ 1, ಈ 10 ಬಹುಮಾನಗಳು ಮತ್ತು ಖಾತ್ರಿಯಾದ 3ವರ್ಷ ಗ್ಯಾರಂಟಿ ಸಹಿತ ಗಡಿಯಾರ 1 ಕ್ಕೆ 1–12–0.

ವಿಳಾಸ.—ಲೀಗಲ್ ಟ್ರೇಡಿಂಗ್ ಕಂಪೆನಿ,

52–12 ಪೋ. ಬಾಕ್ಸ್ ನಂ. 243. ಮದರಾಸು.

ಡಿ. ಬಿ. ಬಿ. ಯಲ್. ಕೋವಿಗಳು ರೂ. 75 ರಿಂದ ರೂ. 470/.
ಯಸ್. ಬಿ. ಬಿ. ಯಲ್. ಕೋವಿಗಳು ರೂ. 35 ರಿಂದ ರೂ. 250/.
ಯಸ್. ಬಿ. ಯಮ್ ಯಲ್. ಕೋವಿಗಳು ರೂ. 35 ರಿಂದ [illegible]
ರಿವಾಲ್ವರ್‌ಗಳು. ರೂ. 40/ರಿಂದ ರೂ. 125 ವರೆಗೆ.

ಡಬ್ಬಲ್ ಮತ್ತು ಸಿಂಗಲ್ ತೋಟದ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ, ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಅಗ್ಗದಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

**ಯಸ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.**

**ದ. ಹಿಂದೂಸ್ಥಾನದ ಬಹು ಹಳೆಯ ಕಂಪೆನಿ.**

24–10 12. ಬ್ರಾಡ್ವೇ, ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)

# ಎಂ. ಎಸ್. ಶಿದ್ದಪ್ಪ ಬ್ರದರ್ಸ್

# ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

**ಉತ್ತಮ ತರದ ಸಿಂಗಲ್ ರೀಡ್ಸ್ ಹಾರ್ಮೋನಿಯಂಗಳು.**

| | |
|---|---|
| ..ಲ್ ಬಹಾರ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 50–8–0 |
| ಕುಂತಲಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 40–0–0 |
| ಕೋಹಿನೂರ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 37–8–0 |
| "ಕೀಸ್ಟೋನ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 35–0–0 |
| ..ಶರಾಜಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 32–8–0 |

**ಉತ್ತಮ ತರದ 14 ಕ್ಯಾರೆಟ್ಸ್ ಬಂಗಾರದ ನಿಬ್ಬುಳ್ಳ ಉಂತವ ಫೌನ್‌ಟನ್ ಪೆನ್‌ಗಳು.**

| | |
|---|---|
| ಬ್ಲಾಕ್ ಬರ್ಡ್ ಫೌನ್‌ಟನ್ ಪೆನ್ 1ಕ್ಕೆ | 3–8–0 ಮತ್ತು 3–12–0 |
| ವರಲ್ಡ್ಸ್ ವಂಡರ್ ಫೌನ್‌ಟನ್ ಪೆನ್ 1ಕ್ಕೆ | 3–0–0 ಮತ್ತು 3–8–0 |
| ಕರಂಡ್ಯಾಕ್ಸ್ ಸೆಲ್ಫ್ಲೇನ್ ಫೌನ್‌ಟನ್ ಪೆನ್ 1ಕ್ಕೆ | 4–8–0 |
| ವಾಟರ್ ಮನ್ ಫೌನ್‌ಟನ್ ಪೆನ್ 1ಕ್ಕೆ | 8–0–0 ಮತ್ತು 8–8–0 |
| ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌನ್‌ಟನ್ ಪೆನ್ 1ಕ್ಕೆ | 12–0–0 ಮತ್ತು 15–0–0 |

**ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು**

| | |
|---|---|
| ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ | [illegible]–0 |
| ಬೆಸ್ಟೆಂಡ್ ಕಂಪೆನಿಯ ಅಲಾರಂ ಟೈಂಪೀಸ್ 1ಕ್ಕೆ | [illegible] |
| ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ | [illegible]–0 |
| ಬಿಗ್ ಬೆನ್ ನಮೂನ ಇಟಾಲಿಯನ್ ಟೈಂಪೀಸ್ 1ಕ್ಕೆ | 0–12–0 |
| ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ | 6–0–0 |

ಸಚಿತ್ರ ಕ್ಯಾಟಲಾಗ್ ಬಗ್ಗೆ 6 ಪೈ ಸ್ಟಾಂಪು ರವಾನಿಸಿ.

**ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,**

**ಹಾರ್ಮೋನಿಯಂ ಮತ್ತು ಕಾಪೀರ್ ಕಾಲುಗಳ ವ್ಯಾಪಾರಿಗಳು, ಮೈಸೂರು.**

ಪ್ರಾಸ್ಪೆಕ್ಟಸ್

ಕೊಡಗ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ್,
ಲಿಮಿಟೆಡ್ ಈ ಬ್ಯಾಂಕಿನ್ ಶೇರುಗಳು
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

ಶೇರ್ ಬಂಡವಾಳ — ...000
ವಸೂಲಾದ ಶೇರ್ ... — 17,190
ಜಮೆಯಾದ ಠೇವಣಾತಿ — 1,62,320

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಮೊದಲಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಪಾಯಿದೆ ಅಥವ ಹೆಚ್ಚಿನ ಪಾಯಿದೆಯ ಠೇವಣಾತಿಗೆ ೧ ರ ಸಾಮಾನ್ಯ ರೂ ೧೦೦ರ ವರದಲ್ಲಿ ... ದೊರೆಯುತ್ತೆ ... ಪಾಯಿದೆಯ ಠೇವಣಾತಿಗಳಿಗೆ ... ಸಾಮಾನ್ಯ 4ರ ಬಡ್ಡಿ ದೊರೆಯುತ್ತೆ.

ವಿವರಗಳ ... ಕೊಆಪರೇಟಿವ್ ರಿಜಿಸ್ಟ್ರಾರವರು ... ಉಪಯೋಗಿಸಿಕೊಳ್ಳಬಹುದು.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಷರರ್, ಕೊಂಗೆಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ

ಸಿ. ಯಸ್ ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಕು 1—7—1927


## ನೋಟೀಸು.

ಈ ಕೆಳಗಿನ ವರ್ಷದ "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲು ... ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ... ಸಬ್ ಏಜೆಂಟರುಗಳಿಗೆ ... ಏಜೆಂಟ್ ಮೆ ... ಪೂವಯ್ಯನವರ ಒಪ್ಪಿಗೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಏಜೆಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ...ಯಂತ ಪೂವಯ್ಯನವರು.

ಪೊನ್ನಂಪೇಟನಾಡು—ಮೆ. ಕಾಳೇಂಗಡ ಚೆಟ್ಟಿಯನವರು
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಮರೆನಾಡು—ಮೆ. ಕೇಕಡ ಅಯ್ಯಯ್ಯನವರು.

ಸಬ್ ಏಜೆಂಟರುಗಳು

ವೀರರಾಜಪೇಟೆ—ಮೆ. ... ನಂಜಪ್ಪನವರು,
ನಾಪೋಕ್ಲು—ಮೆ. ... ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ. ... ಮಾದಪ್ಪನವರು,
ಅಮ್ಮತ್ತಿ-ಸಿದ್ದಾಪುರ—ಮೆ. ... ಮಾದಪ್ಪನವರು
ಪೊನ್ನಂಪೇಟೆನಾಡು—ಮೆ. ಪಿ. ಜಿ. ಸುಬ್ಬಯ್ಯನವರು,
ಮಡಿಕೇರಿ & ತಿರಿಮುತ್ತಿ—ಮೆ. ... ಪೂವಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ... ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

## ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಆಯಾ ವ್ಯವಹಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ ... ರಿಜಿಸ್ಟ್ರಾರವರ ... ಬರೆಯುವುದರಲ್ಲಿ ... ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿನ ಪ್ರಕಾರವಾಗಿ ತಯಾರಿಸಲ್ಪಟ್ಟ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ... ಸ್ಟೋರಿನಲ್ಲಿಯೂ ದೊರೆಯುತ್ತವೆ. ... 

"ಕೊಡಗು" ಮಡಿಕೇರಿ


## Mahomedally-Noorbhoy.



321 Abdul Rehman Street, near Crawford Market, BOMBAY 3
Telegraphic Address—"SHOOTER" Bombay.

(52—18) "Please write for our Catalogue 1928—1929.



ಕಟು ಕಷಾಯ ಮಾತ್ರೆ:—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೇರಿಯಾ ಜ್ವರ ಬಿಟ್ಟು ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ ... ಬರುವ ಜ್ವರ ... ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತೆ. ... ರೂ 1—8—0 30ಕ್ಕೆ ರೂ 1—0—0 ... ರೂ ...—8—0 120ಕ್ಕೆ ರೂ 11

ಚಂದ್ರಪ್ರಭಾವತಿ:—... ಮೂತ್ರ ... ಮೂತ್ರದಲ್ಲಿ ಉರಿ ... ರಕ್ತ ಬರುವುದು ... ಮುಂತಾದ ... ಮೂತ್ರ ಪಿಂಡಗಳಲ್ಲಿ ... ಔಷಧಿ ... 1, 3 6ಕ್ಕೆ ರೂ 1—...—0 3—8—0 6—12—0

ರೋಮನಾಶಿನಿ:— ಈ ಪುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಹುರಿ, ಕಣ್ಣುರಿ ... ಕಣ್ಣು ನೋವು ... ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ... ಕೂದಲನ್ನು ... ಹೊಸ ... ಹುಟ್ಟಿಸುತ್ತದೆ ... ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ

ಏಜೆಂಸ—ಮನೋಲ್ಲಾಸಿನಿ ಕಂಪೆನಿ.

52—44 ೨. ಮಂಗಳೂರು



ರದ್ದಾರಿಕೆ ಸಾಲುಗಳಿಗೆ ಮೋಸ ಹೋಗಬೇಡಿರಿ!

ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ

ಅಜಮಾಯಿಸಿ ನೋಡಿರಿ.




ಅನಾಮಿನ ಬಟ್ಟಿಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ.

ಎಲ್ಲಾ ತರದವುಗಳನ್ನೂ ಚಲೋ ರೀತಿಯಿಂದಲೂ, ಶೀಘ್ರವಾಗಿಯೂ ಗ್ಯಾರಂಟಿಯೊಡನೆ ಚಾರಿ ಮಾಡಲಾಗುವದು

ಕೇಶವಚಂದ್ ದೇವಚಂದ್,
ಜ್ಯುಲ್ಲರ್, (ಕೆಟಲಾಗ್ ಮುಫತ್).

12—11 21 ಜೈನಾ ಬಜಾರ್ ರೋಡ್, ಮದರಾಸು.



# EMPIRE OF INDIA LIFE ASSURANCE COMPANY, LIMITED.

(Established 1897.)

FOR THE YEAR ENDING 29th FEBRUARY 1928.

| | | |
|---|---|---|
| New Business Exceeds | .... | Rs 1,16,00,000 |
| Income Exceeds | .... | Rs 54,95,000. |
| Assets Exceed | | Rs 3,15,64,000 |

## Wanted Agents in Important Places in Coorg

HEAD OFFICE
Empire of India Life Building
BOMBAY

24—7

BRANCH OFFICE.
152, Commercial Street,
BANGALORE



ಸ್ಥಾಪನೆ-1874. ಹೆಡ್ ಆಫೀಸು—ಬೊಂಬಾಯಿ.

# ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

## 1927

ಅತ್ಯುಚ್ಛ್ರಾಯ ಸ್ಥಿತಿಯನ್ನು ತೋರಿಸುವ ಸುತ್ತೊಂದು ವರ್ಷ

ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು

—ಪಾಲಿಸಿಗಳು—

| | | |
|---|---|---|
| 1925 | 13545 | ರೂ. 2,91,42,000 |
| 1926 | 17371 | ರೂ. 3,91,34,000 |
| 1927 | 21418 | ರೂ. 4,68,01,075. |

—ಪ್ರೀಮಿಯಂ ಉತ್ಪತ್ತಿ—

| | |
|---|---|
| 1925 | ರೂ 92,66,000. |
| 1926 | ರೂ. 1,05,33,000 |
| 1927 | ರೂ. 1,21,53,000. |

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಮೀರಿದೆ.

ಕಂಪನಿಯ ಫಂಡು ೮ ಕೋಟಿ ರೂಪಾಯಿಗಳಿಗೆ ಮೀರಿದೆ.

ಜೀವವಿಮೆ ಮಾಡಬೇಕೆಂದಿರುವವರು ಗಾಪಾದರೆ ಮಾಡದೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದುಕೊಳ್ಳಬಹುದು

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.

52—17

ಎಲ್. ಆರ್. ಕೃಷ್ಣಸ್ವಾಮಿಯ್ಯರ್, ಬ್ರಾಂಚ್ ಸೆಕ್ರೆಟರಿ


Printed & published by P I. Bellappa, at "Kodagu" Press, Mercara for "Kodagu," Ltd.

Regd. No. M. 1530.
If not delivered please return to
"KODAGU" OFFICE, MERCARA.

# ಕೊಡಗು.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಮಡಿಕೇರಿ, ... ಆಗೊಸ್ಟು ತಾರೀಖು ... ಶುಕ್ರವಾರ


## ESTATE REQUISITES

| | | | | |
|---|---|---|---|---|
| lbs Yates' hammer headed mamooties | Rs 3 0 0 Each. | Weeding forks @ | Rs 1 4 0 Each |
| " " " | " 2 14 0 " | Garden trowels " | " |
| " " " | " 2 12 0 " | Pick axes " | " |
| Felling axes at Rs 3 0 0 & | " 3 1 0 " | Bill hooks " | " |
| Grubbing mattocks at | " 3 4 0 " | Digging forks " | Rs |

## MONSOON EQUIPMENT.

| | | | |
|---|---|---|---|
| Planter boots | Rs 16 8 0 | Dales' dubbin per tin | Rs 0 8 0 |
| Marrs' oil (water proof) per tin | Rs 2 0 0 | Umbrellas | Rs 4 |

52—29 SPENCER & CO. LTD. General Merchants MERCARA.

## V. SUBRAMANIA IYER

*Manufacturing,*

## JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423,
TRIPLICANE, MADRAS.

Catalogue Free
to Bonafide Enquirers

Rose Water Sprinkler.

Nose-screws. Claver. Drops. Thodu. Brooch

Manufacture of
HIGH CLASS
GEMSET JEWELS.
a speciality.

The special features
of my productions are —
1. Best QUALITY.
2. Latest novel designs.
3. Promptest execution
4. Neat & artistic finish.
5. Most moderate prices.

GOLD
or
SILVER
of all descri...
neatly exec...

Chased Silver Mirror.

52—49

Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, just out.

CATALOGUE of 1927-28 on application.

## The Bombay Armoury.

331, Abdul Rehman Street,
Bombay, 3.

ಕಾಮಶಾಸ್ತ್ರ

52—

# ಕೊಡಗು.

ಸನ್ ೧೯೩೮ ನೇ ಇಸವಿ
ಆಗೋಸ್ತು ತಾ. ೧೨ ನೇ ಶುಕ್ರವಾರ.


## ಹಿಂದೂಸ್ಥಾನದ ರಾಜಕೀಯ ರಚನೆ.

ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಕ್ಕಬೇಕೆಂತ ಅನೇಕ ವರ್ಷಗಳಿಂದ ಹೋರಾಡುತ್ತಿರುವ (ನೇಶನಲ್ ಕಾಂಗ್ರೆಸ್) ರಾಷ್ಟ್ರೀಯ ಸಭೆಯು ಕಳೆದ ಡಿಸೆಂಬರಿನಲ್ಲಿ ಮದ್ರಾಸಿನಲ್ಲಿ ನಡೆದ ಅಧಿವೇಶನದಲ್ಲಿ ರಾಷ್ಟ್ರೀಯ ಸಭೆಯ ಕಾರ್ಯಕಾರೀ ಮಂಡಲಿಯು ದೇಶದಲ್ಲಿರುವ ಎಲ್ಲಾ ಪಕ್ಷಗಳ ಪ್ರತಿನಿಧಿಗಳನ್ನು ಸೇರಿಸಿಕೊಂಡು ಸ್ವರಾಜ್ಯದ ಆಡಳಿತವು ಯಾವ ರೀತಿಯಲ್ಲಿರಬೇಕೆಂಬದನ್ನು ನಿರ್ಣಯಿಸಬೇಕೆಂತ ತೀರ್ಮಾನಿಸಿದ ಮೇರೆ ಸರ್ವ ಪಕ್ಷದವರ ಪರಿಷತ್ತು ಆಗಿಂದಾಗ್ಯೆ ಸೇರಿ ಯಾವ ತೀರ್ಮಾನಕ್ಕೂ ಬಾರದೆ ರಾಜಕೀಯ ರಚನೆಯನ್ನು ತಯಾರಿಸಲು ಒಂದು ಉಪಕಮಿಟಿಯನ್ನು ನೇಮಿಸಿತು. ಸದರಿ ಉಪಕಮಿಟಿಯವರು ತಯಾರಿಸಿದ ರಾಜಕೀಯ ರಚನೆಯು ಮೊನ್ನೆಯು ತಾ 15ರಲ್ಲಿ ಪ್ರಕಟವಾಗಿದೆ. ಇದು ಸರ್ವ ಪಕ್ಷ ಪರಿಷತ್ತಿನಲ್ಲಿ ಶೀಘ್ರದಲ್ಲೇ ಚರ್ಚಿಸಲ್ಪಡುವುದು. ಇದರಲ್ಲಿ ಏನಾದರೂ ಬದಲಾವಣೆಗಳು ಆದರೂ ಆಗಬಹುದು. ಆದರೆ ಈಗ ಪ್ರಕಟವಾಗಿರುವ ರಚನಾಕ್ರಮವನ್ನು ಹಿಂದುಸ್ಥಾನದ ಪ್ರತಿಯೊಬ್ಬನೂ ಚೆನ್ನಾಗಿ ಓದಿ ನೋಡಬೇಕಾದಂಥಾದ್ದಾಗಿದೆ. ಈ ಉಪಕಮಿಟಿಯವರ ಸದಸ್ಯರು ಯಾರೆಂದರೆ—ಪಂಡಿತ ಮೋತಿಲಾಲ್ ನೆಹರು, ಸರ್ ಅಲಿ ಇಮಾಮ್, ಸರ್ ತೇಜ್ ಬಹದೂರ್ ಸಪ್ರೂ, ಯಂ ಯಸ್ ಅಣೇ ಮಂಗಲ್ ಸಿಂಗ್ ಶ್ರೀಬ್ ಖುರೇಶಿ ಸುಭಾಸ್ ಚಂದ್ರ ಬೋಸ್ ಮತ್ತು ಜಿ ಆರ್ ಪ್ರಧಾನ್ ರವರು.

ಅಲ್ಲಲ್ಲಿ ಏನಾದರೂ ಅಲ್ಪ ಸ್ವಲ್ಪ ಬದಲಾವಣೆಗಳಿಗೆ ಎಡೆ ಇರಬಹುದಾದರೂ ರಚನಾ ಕ್ರಮವು ಬಹಳ ತೃಪ್ತಿಕರವಾಗಿದೆ. ಈ ರಚನೆಯನ್ನು ತಪಶೀಲಾಗಿ ಹಿಂದಿನಿಂದ ವಿಮರ್ಶಿಸಬೇಕಾಗಿದೆ. ಆದರೆ ಕೂಡಲೇ ಅದರ ಮುಖ್ಯ ಶಿಫಾರಸ್ಸುಗಳನ್ನು ವಾಚಕರ ಮುಂದಿಡದೆ ಕಳೆಯದು. ಈ ರಚನೆಯು ಕೆನಡಾ, ಆಸ್ಟ್ರೇಲಿಯಾ ಮುಂತಾದ ಬ್ರಿಟಿಷ್ ಸಾಮ್ರಾಜ್ಯದ ಭಾಗಗಳಲ್ಲಿ ಜಾರಿಯಲ್ಲಿರುವ ರಾಜಕೀಯ ರಚನೆಯನ್ನು ಹೋಲುವಂಥಾದ್ದಾಗಿದೆ. ಅಂಥಾ ಉಪನಿವೇಶನಗಳಿಗಿರುವಂತೆಯೇ ದೇಶದ ಸಂರಕ್ಷಣೆಯ ವಿಷಯದಲ್ಲಿ ಸಹ ಹಿಂದುಸ್ಥಾನದ ಪಾರ್ಲಿಮೆಂಟಿಗೂ, ಹಿಂದುಸ್ಥಾನದ ಸರಕಾರಕ್ಕೂ ಸಂಪೂರ್ಣ ಸ್ವಾತಂತ್ರ್ಯವಿರಬೇಕು.

ಹಿಂದೂಸ್ಥಾನದ ಪಾರ್ಲಿಮೆಂಟ್ ಎರಡು ಸಭೆಗಳುಳ್ಳದ್ದಾಗಿರಬೇಕು. ಪ್ರಾಯ ಬಂದ ಪ್ರತಿಯೊಬ್ಬ ಗಂಡಸಿಗೂ, ಹೆಂಗಸಿಗೂ ಓಟ್ ಕೊಡುವ ಹಕ್ಕಿದ್ದು, ಅಂಥಾ ಓಟರುಗಳಿಂದ ಆರಿಸಲ್ಪಟ್ಟ 500 ಜನರಿರುವ ಒಂದು ಸಭೆಯೂ, ಪ್ರಾಂತೀಕ ಕಾಯಿದೆ ಮಂಡಲಿಗಳಿಂದ ಆರಿಸಲ್ಪಡುವ 200 ಸಭಿಕರುಳ್ಳ ಸೆನೇಟ್ ಎಂಬ ಸಭೆಯೂ ಮಧ್ಯವರ್ತಿ ಸರ್ಕಾರದಲ್ಲಿರಬೇಕು. ಪ್ರಾಂತ್ಯಗಳಲ್ಲಿ ಒಂದು ಲಕ್ಷ ಜನರಿಗೊಬ್ಬರಂತೆ ಪ್ರತಿನಿಧಿಗಳುಳ್ಳ ಪ್ರಾಂತೀಕ ಸಭೆ ಇರಬೇಕು. ನೂರು ಲಕ್ಷಕ್ಕಿಂತ ಕಡಮೆ ಜನಸಂಖ್ಯೆ ಇರುವ ಪ್ರಾಂತ್ಯಗಳಲ್ಲಿನ ಸಭೆಯಲ್ಲಿ ನೂರರಷ್ಟು ಮೆಂಬರುಗಳೂ ಇರಬಹುದು. ಮಧ್ಯವರ್ತಿ ಪಾರ್ಲಿಮೆಂಟಿನಲ್ಲಾಗಲೀ ಪ್ರಾಂತೀಕ ಪಾರ್ಲಿಮೆಂಟಿನಲ್ಲಾಗಲೀ ಕೋಮುವಾರು ಚುನಾವಣೆ ಇರಕೂಡದು. ಆದರೆ ಹತ್ತು ವರ್ಷಗಳ ವರೆಗೆ ಮುಸಲ್ಮಾನ್ ಜನಸಂಖ್ಯೆಯ ದಾಮಾಶಾಯಿ ಮೇರೆ ಸಿಕ್ಕಬೇಕಾದಷ್ಟು ಸ್ಥಳಗಳು ಮುಸಲ್ಮಾನರಿಗೆ ಬೇರ್ಪಡಿಸಿಡಬೇಕು ಮತ್ತು ಇತರ ಸ್ಥಳಗಳಿಗೂ ಮುಸಲ್ಮಾನ ಉಮೇದ್ವಾರರು ಚುನಾವಣೆಗೆ ನಿಲ್ಲಬಹುದು. ಬಲೂಚಿಸ್ಥಾನ್ ಮತ್ತು ವಾಯುವ್ಯ ಸರಹದ್ದು ಪ್ರಾಂತ್ಯದಲ್ಲಿ ಮಾತ್ರ ಮುಸಲ್ಮಾನರಲ್ಲದವರಿಗೆ ಈ ರಿಯಾಯ್ತಿಯು ಇರಬೇಕು. ದೇಶೀಯ ರಾಜರುಗಳಿಗೂ ಸ್ವರಾಜ್ಯ ಸರಕಾರಕ್ಕೂ ಈಗ ಆ ರಾಜರುಗಳಿಗೂ ಇಂಡಿಯಾ ಸರಕಾರಕ್ಕೂ ಇರುವ ಸಂಬಂಧವೇ ಇರಬೇಕು. ಇವರೊಳಗೆ ತಕರಾರು ಬಂದರೆ ಹಿಂದುಸ್ಥಾನದಲ್ಲಿ ನೇಮಕವಾಗಬೇಕಾದ ಸುಪ್ರೀಮ್ ಕೋರ್ಟಿನ ತೀರ್ಮಾನಕ್ಕೆ ಒಳಪಡಬೇಕು. ಭಾಷೆಗೆ ಅನುಸಾರವಾಗಿಯೂ, ಜನರ ಅಭಿಪ್ರಾಯಕ್ಕನುಸಾರವಾಗಿಯೂ ಆಡಳಿತದ ಅನುಕೂಲತೆಗೆ ಸರಿಯಾಗಿಯೂ ದೇಶದ ಪ್ರಾಂತ್ಯಗಳನ್ನು ವಿಭಾಗಿಸಬೇಕು.

ಮಧ್ಯವರ್ತಿ ಸರಕಾರದಲ್ಲಿ ಏಳು ಜನ ಮಂತ್ರಿಯರೂ, ಪ್ರಾಂತೀಕ ಸರಕಾರದಲ್ಲಿ ಐದು ಮಂತ್ರಿಯರೂ ಆಯಾ ಪ್ರತಿನಿಧಿ ಸಭೆಗೆ ಜವಾಬ್ದಾರರಾಗಿ ಆಡಳಿತವನ್ನು ನಡಿಸತಕ್ಕದ್ದು. ಪ್ರಾಂತೀಕ ಸಭೆಗೆ ಮಧ್ಯವರ್ತಿ ಪ್ರತಿನಿಧಿ ಸಭೆಯಂತೆಯೇ ಚುನಾವಣೆಯಾದರೂ ಬಂಗಾಳದಲ್ಲೂ ಪಂಜಾಬಿನಲ್ಲೂ ಯಾವ ಕೋಮಿನವರಿಗೂ ಬೇರ್ಪಡಿಸಿ ಇಟ್ಟ ಮೆಂಬರು ಸ್ಥಾನವಿರಕೂಡದು. ಸಿವಿಲ್ ಇಲಾಖೆಗಳ ಉದ್ಯೋಗಗಳನ್ನು ದೇಶದ ಅವಶ್ಯಕತೆಗೆ ತಕ್ಕಂತೆ ಸಂಪಾದಿಸಿಕೊಳ್ಳಲು ಸ್ವರಾಜ್ಯ ಪಾರ್ಲಿಮೆಂಟ್ ಕೂಡಿದ ಒಡನೇ ಒಂದು ಪಬ್ಲಿಕ್ ಸರ್ವಿಸ್ ಕಮಿಶನನ್ನು ನೇಮಿಸಬೇಕು. ಆಗ ಕೆಲಸದಲ್ಲಿ ಇರುವ ಅಧಿಕಾರಿಗಳು ಹೊಸ ಶರತ್ತುಗಳಿಗೆ ಒಳಪಟ್ಟು ನಡಕೊಳ್ಳಲು ಇಷ್ಟಪಡದಿದ್ದರೆ ಮೂರು ವರ್ಷದ ಒಳಗೆ ಕೆಲಸದಿಂದ ಬಿಡುಗಡೆ ಹೊಂದಲು ಅವರಿಗೆ ಅವಕಾಶ ಕೊಡಬೇಕು. ದೇಶದ ಸಂರಕ್ಷಣೆಗೆ ಒಬ್ಬ ಮಂತ್ರಿ ಒಳಗೊಂಡ ಸಂರಕ್ಷಣೆ ಸಭೆಯೆಂಬದೊಂದು ನಿರ್ಮಿಸಲ್ಪಡಬೇಕು.

ಇವೇ ರಾಜಕೀಯ ಮುಖ್ಯ ಅಂಶಗಳಾಗಿವೆ. ಇದಲ್ಲದೆ ಪ್ರಜಾಜನರ ಒಪ್ಪಿಸಿದ್ದ ಹಕ್ಕುಗಳಿಗೆ ವಿರೋಧ ಬರದಂಥ ಕೆಲವು ನಿಯಮಗಳನ್ನು ಬಾಸನಾಸಿಗೆ ಒಳಪಡಿಸದ ಕಾಯಿದೆ ಸೇರಿಸಬೇಕೆಂತ ತಿಪಾರಸ್ಸು ಮಾಡಿರುತ್ತಾರೆ. ಕಾನೂನಿನ ವಿನಹ ಯಾವ ಮನುಷ್ಯನ ಸ್ವಾತಂತ್ರ್ಯವನ್ನಾದರೂ ತಪ್ಪಿಸಬಾರದು. ಅಥವ ವಾಸಸ್ಥಳಕ್ಕೆ ಪ್ರವೇಶಿಸಕೂಡದು, ಸೊತ್ತನ್ನು ಸರಕಾರಕ್ಕೆ ವಹಿಸಿಕೊಳ್ಳಬಾರದು. ದೇಶದ ಸ್ವಾಸ್ಥ್ಯಕ್ಕೂ ನೀತಿಗೂ ವಿರೋಧವಿಲ್ಲದೆ ಪ್ರತಿಯೊಬ್ಬನೂ ತನ್ನ ತನ್ನ ಧರ್ಮವನ್ನು ಅನುಸರಿಸುವ ಸ್ವಾತಂತ್ರ್ಯವಿರಬೇಕು. ಭಾಷಣ ಸ್ವಾತಂತ್ರ್ಯವೂ, ಕೂಟ ಸ್ವಾತಂತ್ರ್ಯವೂ ಪ್ರಜಾಜನರಿಗೆ ಇರಬೇಕು. ಜಾತಿ ಮತ ಭೇದವಿಲ್ಲದೆ ಪ್ರತಿಯೊಬ್ಬನಿಗೂ ಮಾಫಿಯಾಗಿ ಪ್ರಾಥಮಿಕ ವಿದ್ಯೆ ಸಿಕ್ಕಬೇಕು. ಸಾರ್ವಜನಿಕ ಶಾಲೆಗಳೂ ರಸ್ತೆಗಳೂ, ಬಾವಿಗಳೂ ಸರ್ವಜನರ ಉಪಯೋಗಕ್ಕೂ ಇರಬೇಕು. ಕಾಲಕಾಲಕ್ಕೆ ಮಾಡಿಕೊಳ್ಳುವ ನಿಬಂಧನೆಗಳಿಗೆ ಒಳಪಟ್ಟು ಪ್ರತಿಯೊಬ್ಬನಿಗೂ ಆಯುಧ ಧಾರಣೆ ಮಾಡುವ ಸ್ವಾತಂತ್ರ್ಯವಿರಬೇಕು. ಒಪ್ಪಂದಕ್ಕೆ ತಪ್ಪಿದರೆ ಕ್ರಿಮಿನಲ್ ಶಿಕ್ಷೆಗೆ ಗುರಿಯಾಗುವ ಕಾನೂನು ಇರಕೂಡದು. ಇಂಥಾ ಇನ್ನೂ ಕೆಲವು ನಿಯಮಗಳಿವೆ.

ಉಪನಿವೇಶನಗಳಲ್ಲಿರುವ ಪ್ರಜಾಸತ್ತಾತ್ಮಕ ಸರಕಾರ ಪದ್ಧತಿಯನ್ನು ಅಂಗೀಕರಿಸಿದ್ದು ಸಂಪೂರ್ಣ ಸ್ವಾತಂತ್ರ್ಯವನ್ನೇ ಧ್ಯೇಯವಾಗಿ ಮಾಡಿಕೊಂಡ ರಾಷ್ಟ್ರೀಯ ಸಭೆಯ ತೀರ್ಮಾನಕ್ಕೆ ವಿರೋಧ ಬರುವದಿಲ್ಲವೋ ಎಂಬ ಶಂಕೆಗೆ ಪಂಡಿತಲ್ಲೇ ಜವಾಬು ಇದೆ. ಈ ರಚನೆಯು ಎಲ್ಲಾ ಪಕ್ಷದವರೂ ಒಪ್ಪುವಂಥಾದ್ದಾಗಿದೆಯೆಂತಲೂ, ಎಲ್ಲಾ ಪಕ್ಷದವರೂ ಒಪ್ಪುವಂಥಾದ್ದಾಗಿಲ್ಲದಿದ್ದರೆ ಯಾವ ರಚನೆ ಮಾಡಿಯೂ ಪ್ರಯೋಜನವಿಲ್ಲವೆಂತಲೂ ಮತ್ತು ಈ ಉಪನಿವೇಶನಗಳ ಸ್ವಾತಂತ್ರ್ಯವು ಸಂಪೂರ್ಣ ಸ್ವಾತಂತ್ರ್ಯದ ಸಮೀಪವಿನೆಯೆಂತಲೂ ಇನ್ನೂ ಸಂಪೂರ್ಣ ಸ್ವಾತಂತ್ರ್ಯಕ್ಕೆ ದೇಶವನ್ನೆಲ್ಲಾ ಒಪ್ಪಿಸಿಕೊಳ್ಳಲು ಆ ಪಕ್ಷದವರು ಕೆಲಸ ಮಾಡಬಹುದೆಂತಲೂ ಬರೆದಿದೆ. ಸಂಪೂರ್ಣ ಸ್ವಾತಂತ್ರ್ಯ ಧ್ಯೇಯವು ಉತ್ತಮವೇ. ಆದರೂ ಎಲ್ಲಾ ಪಕ್ಷದವರ ಒಪ್ಪಿಗೆ ದೊರೆಯುವಂಥಾ ರಚನೆಯೇ ಕಾರ್ಯತಃ ಫಲದಾಯಕವಾದದ್ದು ಎಂಬದರಲ್ಲಿ ಸಂಶಯವಿಲ್ಲ. ಉಪನಿವೇಶನಗಳಿಗೆ ಈವರೆಗೆ ದೊರಕಿದ ಹಕ್ಕುಗಳಿಂದ ಅವಕ್ಕೆ ಒಂದೆರಡು ವಿಷಯಗಳಲ್ಲಿ ಸಾಮ್ರಾಜ್ಯದ ಸಂಬಂಧವಿದ್ದರೂ ಅವು ಸಂಪೂರ್ಣ ಸ್ವಾತಂತ್ರ್ಯವುಳ್ಳವು ಆಗಿವೆ ಎಂಬದು ವೃತ್ತಾಂತ ಪತ್ರಿಕೆಗಳನ್ನು ಓದುವವರಿಗೆ ತಿಳಿದೇ ಇರುವದಾಗಿದೆ. ಈ ರೀತಿ ಕಾಂಗ್ರೆಸ್ಸಿನ ಧ್ಯೇಯವನ್ನೇ ಸಾಧಿಸುವ, ಸರ್ವ ಪಕ್ಷದವರೂ ಸೇರಿ ಒಗ್ಗಟ್ಟಿನಿಂದ ಹೋರಾಡಿ ಪಡಕೊಳ್ಳಬಹುದಾದ ರಚನೆಯನ್ನು ತಯಾರಿಸಿದ್ದಕ್ಕೆ ಕಮಿಟಿಗೆ ದೇಶವು ಎಷ್ಟು ಧನ್ಯವಾದವನ್ನು ಕೊಟ್ಟರೂ ಸಾಲದು.

ಕೋಮುವಾರು ವ್ಯತ್ಯಾಸಗಳನ್ನು ಹೋಗಲಾಡಿಸಲು ಕಮಿಟಿಯವರು ತುಂಬಾ ಪ್ರಯತ್ನದಿಂದ ತಕ್ಕಂಥ ಆಧಾರಗಳನ್ನು ಕೊಟ್ಟು ತೀರ್ಮಾನಕ್ಕೆ ಬಂದಿದ್ದಾರೆ. ಈ ಬಾಬಿನ ಕಮಿಟಿಯ ತೀರ್ಮಾನವು ಕೆಲವು ಹಿಂದೂಗಳಿಗೂ ಮುಸಲ್ಮಾನರಿಗೂ ತೃಪ್ತಿಯಾಗಲಾರದು. ಆದರೆ ಸ್ವರಾಜ್ಯ ಸಂಪಾದನೆಯ ಮುಖ್ಯ ಉದ್ದೇಶವನ್ನು ನೆರವೇರಿಸಲು ಕೋಮಿನ ಮನೋಭಾವವನ್ನು ತ್ಯಾಗಗೊಳಿಸುವ ಅಷ್ಟು ಆಶೆಗೆ ಮನಗೊಡದೆ, ಕಮಿಟಿಯು ತಯಾರಿಸಿದ ರಾಜಕೀಯ ರಚನೆಗೆ ಸರ್ವ ಕೋಮಿನವರೂ ಒತ್ತಾಸೆ ಕೊಡಬೇಕೆಂತ ನಾವು ಸಹ ಸವಿನಯದಿಂದ ಸೂಚಿಸುತ್ತೇವೆ.

ಓಟ್ ಕೊಡುವ ಹಕ್ಕು ಪ್ರತಿಯೊಬ್ಬ ಪ್ರಾಯ ಬಂದ ಗಂಡಸಿಗೂ ಹೆಂಗಸಿಗೂ ಇರಬೇಕೆಂತ ನಮ್ಮ ದೇಶದವರು ಕಳೆದ ಮೇ ತಿಂಗಳಲ್ಲಿ ತೀರ್ಮಾನಿಸಿದಾಗ ಇದನ್ನು ಜಾರಿಗೆ ತರುವದು ಕಷ್ಟವಾಗಬಹುದೆಂತ ಒಂದೆರಡು ಕಡೆ ಮಾತು ಬಂದಿತ್ತು. ಒಟ್ಟು ಹಿಂದೂಸ್ಥಾನದಲ್ಲೇ ಈ ತತ್ವವನ್ನು ಅಂಗೀಕರಿಸಿದ್ದನ್ನು ನೋಡಿದರೆ ಇದರಲ್ಲಿ ಕಷ್ಟವೇನೂ ಇಲ್ಲವೆಂತಲೂ ಮತ್ತು ಹಿಂದೂಗಳೊಳಗೆ ಇರುವ ಕೋಮುವಾರು ಭೇದಗಳನ್ನು ಹೋಗಲಾಡಿಸಬೇಕಾದರೆ ಇದೊಂದೇ ಉಪಾಯವೆಂಬದೂ ಸ್ಪಷ್ಟವಾಯಿತು.

ನಮ್ಮ ದೇಶಕ್ಕೆ ಇದನ್ನು ಹೇಗೆ ಉಪಯೋಗಿಸಿಕೊಳ್ಳಬಹುದೆಂಬದನ್ನು ಮಾತ್ರ ಯೋಚಿಸಿ ಲೇಖನವನ್ನು ಮುಗಿಸುವೆವು. ಕರ್ನಾಟಕ ಪ್ರಾಂತ್ಯದೊಡನೆ ಸೇರಿಕೊಳ್ಳಲು ದೇಶವು ಒಪ್ಪುತ್ತದೆಂಬವೊಂದು ತೀರ್ಮಾನವೂ ಇದೆ. ಇದು ಸರ್ವ ಸಮ್ಮತವಾದರೆ ಇದನ್ನು ಜಾರಿಮಾಡಿಕೊಳ್ಳಲು ಕಷ್ಟವೇ ಇಲ್ಲ. ದೇಶದ ಜನರ ಬಹುಮತದ ಒಪ್ಪಿಗೆ ಇದ್ದರೆ ಮಾತ್ರ ಭಾಷಾವಾರು ಪ್ರಾಂತ್ಯದೊಳಗೆ ಸೇರಿಸುವದೆಂತ ಪರದಿಯಲ್ಲಿ ಇರುವದರಿಂದ, ಒಪ್ಪಿಗೆ ಇಲ್ಲದ ಜನರು ಭೀತಿ ಪಡಲೂ ಕಾರಣವಿಲ್ಲ. ಏಕೀಕರಣವಾಗಬೇಕೆನ್ನುವವರು ಹೆಚ್ಚಿನ ಜನರನ್ನು ಒಪ್ಪಿಸಿಕೊಂಡರೆ ಮಾತ್ರ ಇದು ಸಾಧ್ಯವೆಂತ ತಿಳಿದು ಕೆಲಸಮಾಡಬೇಕಾಗಿದೆ. ಬೇರೆ ಪ್ರಾಂತ್ಯವಾಗಿಯೇ ಇದ್ದು ಆಡಳಿತ ನಡಿಸಲು ಸಾಧ್ಯವಿದ್ದರೆ ಮಾತ್ರ, ಹಾಗೆ ಇರಬಹುದಷ್ಟೆ ಎಂಬ ಸೂಚನೆಯೂ ವರದಿಯಲ್ಲಿದೆ. ಈ ವಿಷಯವನ್ನು ಸಹ ನೆನಪಿನಲ್ಲಿಟ್ಟುಕೊಂಡು ಕೊಡಗಿನ ಭವಿಷ್ಯತ್ತನ್ನು ನಿರ್ಧರಿಸಲು ದೇಶದವರೆಲ್ಲರೂ ಯೋಚಿಸಬೇಕಾಗಿದೆ.

---

## ಗ್ರಾಮಗಳ ಪುನರುದ್ಧಾರ.

(ಬರೆದು ಬಂದದ್ದು)

(ಕಳೆದ ವಾರದಿಂದ ಮುಂದುವರಿದದ್ದು)

ನಮ್ಮಲ್ಲಿ ಎಲ್ಲರೂ ರೈತರೇ ಆದರೆ ಉಪಜೀವನಕ್ಕೆ ನೇಗಿಲನ್ನೇ ನೆಚ್ಚಿಕೊಂಡಿಲ್ಲ. ರೈತರು [illegible] ಕಡಿಮೆ. ಆದಂದ ಕಾಲದ ಸಮಯದಲ್ಲಿ ತಮ್ಮ ಹೊಲಗಳಲ್ಲಿರುವ ಹಾಳೆಯ ಕೃಷಿಯನ್ನು ಗೋಳು ಕಟ್ಟಿ ಹೆಚ್ಚಾಗಿ ಬಿಟ್ಟುಕೊಟ್ಟು ನೇಗಿಲನ್ನು ಬಿಡುಕೊಳ್ಳುತ್ತಾರೆ. ಅತ್ಯವಶ್ಯಕರವಾದ ನೇಗಿಲನ್ನೇ ಮಾಡಿಕೊಳ್ಳಲು ಗೊತ್ತಿಲ್ಲದ ಈ ಗ್ರಾಮನಿವಾಸಿಗಳು ರೆಂದೆನ್ನಿಸಿಕೊಳ್ಳುವುದು ಕೇವಲ ಅವಮಾನವಲ್ಲವೇ?

ಮುಂದಿನ ಜನಾಂಗವಾದ ನಮ್ಮ ಬಾಲಕರಿಗೆ ದೊರೆಯುವ ವಿದ್ಯಾಭ್ಯಾಸ ಕ್ರಮದಲ್ಲಿ ಕಸಬುಗಳನ್ನು ಕಲಿಯಲು ಅವಕಾಶವಿಲ್ಲ. [illegible] ಆದ ಪ್ರಕಾರ ಗೆಲಸು ಆಗಬಾರದು [illegible] ಒಂದು ಉಪಯೋಗಕರವಾದ ಕಸಬನ್ನು [illegible] ಕೊಂಡು ಜೀವನವನ್ನು ಮಾಡಿಕೊಳ್ಳಲು ಸಾಧ್ಯ[illegible].

ಬರೇ ದೇಶದ ಮುಂದಕ್ಕೆ ದೇಶವನ್ನು ಆಳುವ ಮೂಡಣ ಜನಾಂಗವು ಶಾಲೆಯಲ್ಲಿ ಬೆಂಚುಗಳ ಮೇಲೆ ಕುಳಿತು ವಿದ್ಯಾಭ್ಯಾಸ ಮಾಡುತ್ತಿರುವರು (In future the rulers of our country are sitting on school benches) ಎಂಬ ಗಾದೆಯುಂಟು. ಆದರೆ ವಿದ್ಯಾಭ್ಯಾಸವನ್ನು ಪಡೆಯುವ ನಮ್ಮ ಯುವಕರನ್ನು ನೋಡಿದರೆ ಈ ತೆರನಾದ ಕೋರಿಕೆಯು ನಿಷ್ಫಲವೆಂದೇ ನಿರ್ಧಾರವಾಗುವುದು. ಈಗ ವಿದ್ಯೆಯನ್ನು ಕಲಿತವರೆಲ್ಲರೂ ಕಸಬುಗಳನ್ನು ಮಾಡಲು ಅಶಕ್ತರಾಗಿ ಕಠಿಣವಾದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ್ದರೂ ಅಲ್ಪ ಸಂಬಳ ಬರುವ ಸರಕಾರದ ಗುಮಾಸ್ತ ಮೊದಲಾದ ಕೆಲಸಗಳಲ್ಲಿ ಸೇರಿಕೊಳ್ಳುತ್ತಾರೆ.

ಬಾಲಕರನ್ನು ಮುಂದಕ್ಕೆ ಕಸುಬಿನ ವಿಷಯಕ್ಕೆ ಪ್ರಾರಂಭಿಸುವಾಗಲೇ ಅವರಿಗೆ ಇಷ್ಟವಿರುವ ಯಾವುದಾದರೂ ಒಂದು ಕಸಬನ್ನು ಕಲಿಸುವುದಕ್ಕೆ ಪ್ರಯತ್ನಪಡುವುದು ಅತ್ಯವಶ್ಯಕವಾಗಿದೆ. ಆದಕಾರಣ ಈ ಎರಡು ಬಗೆಯ ವಿದ್ಯೆಯನ್ನು ಕಲಿಸುವ ಪಾಠಶಾಲೆಗಳನ್ನು ಗ್ರಾಮ ಗ್ರಾಮಗಳಲ್ಲಿ ಏರ್ಪಡಿಸಲು ಸಹಾಯ ಮಾಡಬೇಕು. ಚಿಕ್ಕಂದಿನಿಂದಲೇ ಹುಡುಗರಿಗೆ ಪ್ರಕೃತಿಯಲ್ಲಿ ಅಭಿರುಚಿ ಹುಟ್ಟಿಸುತ್ತಾ ಬಂದರೆ ಅವರು ದೊಡ್ಡವರಾದ ನಂತರ ಸ್ವತಂತ್ರರಾಗಿ ಯಾವುದಾದರೊಂದು ಕಸಬನ್ನು ಮಾಡಿಕೊಂಡು ಸುಖ ಜೀವನದಿಂದ ಕಾಲಕ್ಷೇಪ ಮಾಡುವರು. ತಮಗೆ ಅವಶ್ಯಕವಾದ ವಸ್ತುಗಳನ್ನೂ, ವ್ಯವಸಾಯ ಮುಟ್ಟುಗಳನ್ನೂ ತಾವೇ ಕೈಯಿಂದ ಸ್ವತಃ ಮಾಡಿಕೊಂಡು ಇತರರಿಗೆ ಮಾರಿ ವ್ಯಾಪಾರವನ್ನು ವೃದ್ಧಿಪಡಿಸಿಕೊಂಡರೆ ನಮ್ಮ ಹಣವು ನಮ್ಮ ದೇಶದಲ್ಲಿಯೇ ಉಳಿದು ನಮ್ಮ ಜನರು ಧನಿಕರಾಗಿ ಇರಲು ಅನುಕೂಲವು ದೊರೆಯುವುದು. ಹಾಗಿಲ್ಲದೆ ಅಹರ್ನಿಶಿ ಕಷ್ಟಪಟ್ಟು ಬೆಳೆದ ಪದಾರ್ಥಗಳನ್ನು ಪಟ್ಟಣಕ್ಕೆ ಸಾಗಿಸಿ ಅಲ್ಪ ಬೆಲೆಗೆ ಅನ್ಯದೇಶೀಯರಿಗೆ ವಿಕ್ರಯಿಸಿ, ಅವರು ಆ ಪದಾರ್ಥಗಳನ್ನೇ ಯಂತ್ರಗಳ ಮೂಲಕ ಶೃಂಗಾರವಾಗಿ ತಯಾರಿಸಿ ಸಿದ್ಧ ವಸ್ತುಗಳನ್ನಾಗಿ ಮಾಡಿ ಪುನಃ ನಮ್ಮ ದೇಶಕ್ಕೆ ಕಳುಹಿಸುವಾಗ ಆ ವಸ್ತುಗಳಿಗೆ ವಿಪರೀತವಾದ ಕ್ರಯವನ್ನು ಕೊಟ್ಟು ನಮ್ಮ ಅವಶ್ಯಕತೆಯ ಎಲ್ಲಾ ಸಾಮಾಗ್ರಿಗಳಿಗೂ ಅನ್ಯ ದೇಶೀಯರನ್ನೇ ಅವಲಂಬಿಸುವುದಾದರೆ ಗ್ರಾಮನಿವಾಸಿಗಳು ಬಡತನವೆಂಬ ನರಕ ಕೂಪದಲ್ಲಿ ಬಿದ್ದು ಅಲ್ಲಿಂದ ತಪ್ಪಿಸಿಕೊಳ್ಳಲಾಗದೆ ನರಳುತ್ತಿರುವುದು ಆಶ್ಚರ್ಯಕರವೇ?

ಈ ದುಃಸ್ಥಿತಿಯು ಹೋಗಬೇಕಾದರೆ ಗ್ರಾಮ ಪ್ರಚಾರಕ್ಕಾಗಿ ಕೃಷಿವಿದ್ಯಾ ಶಿಕ್ಷಣ, ಗ್ರಾಮದ ಕೈಕಸಬುಗಳ ಅಭಿವೃದ್ಧಿಗೆ ಗಮನ ಕೊಟ್ಟು ಗ್ರಾಮ ನಿವಾಸಿಗಳು ತಯಾರಿಸಿದ ಮುಟ್ಟುಗಳು ಮತ್ತು ಇನ್ನೂ ಬೇರೆ ಪದಾರ್ಥಗಳ ಪ್ರದರ್ಶನವನ್ನು ವರ್ಷಕ್ಕೊಂದಾವರ್ತಿ ಆಯಾ ಗ್ರಾಮದಲ್ಲಾಗಲೀ ಇಲ್ಲವೇ ಸಮೀಪದ ಪಟ್ಟಣದಲ್ಲಾಗಲೀ ಏರ್ಪಡಿಸಿ ಉತ್ಕೃಷ್ಟವಾದವುಗಳಿಗೆ ಬಹುಮಾನ [illegible] ಮತ್ತು ಬೆಲೆಯ ಬಹುಮಾನವನ್ನು ಕೊಟ್ಟು ಕಸಬುಗಾರರ [illegible] ಉತ್ಸಾಹವು ಹುಟ್ಟಿ, ಅವರು [illegible] ಗಳನ್ನು ಕೈಕೊಂಡು ಸು[illegible] ದೆ ಗ್ರಾಮದಲ್ಲಿಯೇ [illegible] ನ್ನ ಕ್ಷೀಣ ದೆಶೆಯಲ್ಲಿ [illegible] ಸ್ವಲ್ಪ ಕಾಲದಲ್ಲಿ [illegible] ಈ [illegible] ಕೊಟ್ಟ [illegible] ರೂಪಾಯಿಗಳಿಗೆ ವಿಕಿವಿ [illegible] ಗಳಿಗೆ ಮಾರಿದೆ [illegible] ಇದೀಗ ಮುಂದಿನ ವಾರ [illegible] ಕೊಳ್ಳಬಹುದು.

ಎಲ್. ಆರ್. ಕೃಷ್ಣ ಸ್ವಾಮಿಯ್ಯರ್,
ಬ್ರಾಂಚ್ ಸೆಕ್ರೆಟರಿ.

[illegible] at "Kodagu" Press, Mercara

"KODAGU" OFFICE, MERCARA.

# ಕೊಡಗು.

ಪ್ರತಿ ರವಿವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಮಡಿಕೇರಿ, ... ಆಗಸ್ಟು ...


## ESTATE REQUISITES

| | | | | | |
|---|---|---|---|---|---|
| 5 lbs Yates' hammer headed mamooties | Rs 3 0 0 Each | Weeding forks @ | Rs 1 | | |
| 4½ „ „ „ „ | „ 2 14 0 „ | Garden trowels „ | Rs 1 | „ | |
| 4 „ „ „ „ | „ 2 12 0 „ | Pick axes „ | Rs 1 | „ | |
| Felling axes at Rs 3 0 0 & | „ 3 4 0 „ | Bill hooks „ | Rs | „ | |
| Grubbing mattocks at | „ 3 4 0 „ | Digging forks „ | Rs | „ | |

## MONSOON EQUIPMENT.

| | | | |
|---|---|---|---|
| Planter boots | Rs 16 8 0 | Dairs' dubbin per tin | Rs |
| Marrs' oil (water proof) per tin | Rs 2 0 0 | Umbrellas | R |

52—30 **SPENCER & CO. LTD.** General Merchants. MERCARA.

# V. SUBRAMANIA IYER.

*Manufacturing,*

# JEWELLER

GOLDSMITH SILVERSMITH & DEALER IN ALL PRECIOUS STONES

Post Box 423, TRIPLICANE MADRAS

Catalogue Free to Bonafide Enquirers




Manufacture of HIGH CLASS GEMSET JEWELS a speciality

The special features of my productions are —
1 Best QUALITY
2 Latest novel designs
3 Honest, test ex... tion
4 Neat & artistic finish
5 Most moderate prices

GOLD or SILVERWARE of all descriptions neatly executed



52—50



Before buying any Arms & Ammunition please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS AMMUNITION, & Shooting Requisites, Just out

*CATALOGUE of 1927-28 on application.*

## The Bombay Armoury,

*331, Abdul Rehman Street,*

*Bombay, 3.*

ಆತಂಕನಿಗ್ರಹ ಮಾತ್ರೆಗಳು

ಕಾಮರಾಜ

32—1

# ಕೊಡಗು.

ಸ ೧೯೨೮ ನೇ ಇಸವಿ

ಆಗೊಸ್ತು ತಾ. ೨೪ ನೇ ಶುಕ್ರವಾರ.


## ಹಿಂದುಸ್ಥಾನದ ರಾಜಕೀಯ ರಚನೆ.

೨.

ಕಳೆದ ಸಂಚಿಕೆಯಲ್ಲಿ ನೆಹರು ಕಮಿಟಿ ವರದಿಯ ಸಾರಾಂಶವನ್ನು ಕೊಟ್ಟಿದ್ದೆವು. ಈ ವರದಿಯನ್ನು ತಪಶೀಲಾಗಿ ವಿಮರ್ಶಿಸುವದು ಅವಶ್ಯವಿದೆ. ಸಾಮ್ರಾಜ್ಯದ ಉಪನಿವೇಶನಗಳಲ್ಲಿ ಇರುವ ಪ್ರಜಾಸತ್ತಾತ್ಮಕ ಸರಕಾರವು ಹಿಂದುಸ್ಥಾನಕ್ಕೆ ಸಾಧ್ಯವಿಲ್ಲವೆಂಬದಕ್ಕೆ ಸರಕಾರದ ಪರವಾಗಿ ಕೊಡಲ್ಪಡುವ ಕಾರಣಗಳನ್ನು ಚನ್ನಾಗಿ ವಿಮರ್ಶಿಸಿ ಖಂಡಿಸಿರುತ್ತಾರೆ. ಬ್ರಿಟಿಷ್ ಪಾರ್ಲಿಮೆಂಟಿನವರು 1917ನೇ ಇಸವಿಯಲ್ಲಿ "ಹಿಂದುಸ್ಥಾನದಲ್ಲಿ ಪ್ರಜಾ ಜವಾಬ್ದಾರಿ ಸರಕಾರ ಪದ್ಧತಿಯು ಕ್ರಮ ಕ್ರಮವಾಗಿ ಸ್ಥಾಪನೆಯಾಗಬೇಕೆಂಬ ಉದ್ದೇಶದಿಂದ ಸ್ವರಾಜ್ಯ ಸಂಸ್ಥೆಗಳನ್ನು ಸ್ಥಾಪಿಸಬೇಕೆಂತ" ಹೇಳಿದರೂ ಸಹ ಸಾಮ್ರಾಜ್ಯದ ಉಪನಿವೇಶನಗಳಲ್ಲಿ ಇರುವ ಪ್ರಜಾಸತ್ತಾತ್ಮಕ ರಾಜ್ಯ ಪದ್ಧತಿಯನ್ನು ಸ್ಥಾಪಿಸುವದಾಗಿ ಒಪ್ಪಲಿಲ್ಲವೆಂಬದು ಸರಕಾರದ ಪರವಾಗಿ ಮೊದಲನೇ ವಾದವಾಗಿದೆ. ಈ ವಾದದ ಅರ್ಥವೇನೆಂದರೆ—ಉಪನಿವೇಶನಗಳಲ್ಲಿ ಪ್ರಜಾಸತ್ತಾತ್ಮಕ ರಾಜ್ಯದ ಪದ್ಧತಿಯು ಜಾರಿಯಲ್ಲಿದ್ದರೂ ಉಪನಿವೇಶನಗಳ ಸರಕಾರಗಳಿಗೆ ಇರುವಷ್ಟು ಸ್ವಾತಂತ್ರ್ಯ ಕೊಡದೇನೇ ಹಿಂದೂಸ್ಥಾನದಲ್ಲಿ ಪ್ರಜಾಸತ್ತಾತ್ಮಕ ಅಂದರೆ ಪ್ರಜೆಗಳಿಗೆ ಅಧೀನವಾಗಿರುವ ಸರಕಾರವನ್ನು ಸ್ಥಾಪಿಸುವದೇ ಪಾರ್ಲಿಮೆಂಟಿನ ಉದ್ದೇಶವಾಗಿದೆ ಎಂತಾಯಿತು. ಕಮಿಟಿಯವರು ಈ ವಾದವನ್ನು ಬಹು ಗಂಭೀರವಾದ ಮತ್ತು ತೂಕವಾದ ಮಾತುಗಳಿಂದ ಖಂಡಿಸಿರುತ್ತಾರೆ. 1917ನೇ ಇಸವಿಯಲ್ಲಿ ಪಾರ್ಲಿಮೆಂಟಿನವರು ಕೊಟ್ಟ ವಾಗ್ದಾನವು ಈ ಅರ್ಥದಿಂದ ಕೊಟ್ಟದ್ದಾದರೆ ಪಾರ್ಲಿಮೆಂಟಿನವರು ಹಿಂದುಸ್ಥಾನದವರನ್ನು ಮೋಸಗೊಳಿಸುವ ಉದ್ದೇಶದಿಂದಲೇ ಎರಡು ಅರ್ಥವಿರುವ ಮಾತುಗಳನ್ನು ಹೇಳಿದರೆಂತಾಯಿತು. ಈ ತರದ ಮಾತುಗಳನ್ನು ಬ್ರಿಟಿಷ್ ಸಾಮ್ರಾಜ್ಯದ ಮುಖ್ಯ ಅಧಿಕಾರಿಗಳು ಆಡಿದರೆ ಹಿಂದುಸ್ಥಾನದವರಿಗೆ ಬ್ರಿಟಿಷ್ ಸರಕಾರದಲ್ಲಿ ಇರುವ ನಂಬಿಕೆಯು ಸಂಪೂರ್ಣವಾಗಿ ನಾಶವಾಗುತ್ತದೆಯೆಂಬದರಲ್ಲಿ ಸಂಶಯವಿಲ್ಲವೆಂತ ವರದಿಯಲ್ಲಿ ಬರೆದಿದ್ದಾರೆ. ಪ್ರಾಂತ್ಯಗಳ ಗವರ್ನರುಗಳು ಹೇಗೆ ವರ್ತಿಸಬೇಕೆಂಬದನ್ನು ವಿವರಿಸಿ ಚಕ್ರವರ್ತಿಯವರು ಕೊಡುತ್ತಿರುವ ಸೂಚನಾಪತ್ರದ ಆಧಾರವನ್ನು ಕೊಟ್ಟು ಹಿಂದುಸ್ಥಾನಕ್ಕೆ ಉಪನಿವೇಶನಗಳ ಸರಕಾರ ಪದ್ಧತಿಯನ್ನು ಕೊಡುವದೇ ಪಾರ್ಲಿಮೆಂಟಿನ ಉದ್ದೇಶವಾಗಿರುತ್ತದೆಂದು ಸ್ಪಷ್ಟಪಡಿಸಿರುತ್ತಾರೆ.

ಬ್ರಿಟಿಷ್ ಸರಕಾರವು ಹಿಂದುಸ್ಥಾನದವರ ಸಮಾಧಾನ ಸ್ವಭಾವವನ್ನು ತುಚ್ಛೀಕರಿಸಬಾರದು. ಪ್ರಪಂಚದಲ್ಲಿ ಪರ ಜನಾಂಗದ ಅಧೀನವಾಗಿರುವ, ತುಂಬಾ ನಾಚಿಕೆಕರವಾದ ಸ್ಥಿತಿಯನ್ನು ಸಹಿಸಿಕೊಂಡಿರಲು ಹಿಂದುಸ್ಥಾನದಂಥ ಶಾಂತಿಪ್ರಿಯ ಜನಾಂಗಕ್ಕೂ ಸಾಧ್ಯವಿಲ್ಲವೆಂತ ಬ್ರಿಟಿಷ್ ಜನಾಂಗಕ್ಕೆ ಇನ್ನೂ ತಿಳಿಯದಿದ್ದರೆ ಆಶ್ಚರ್ಯವೇ ಸರಿ. ಕಳೆದ ಮದ್ರಾಸ್ ಕಾಂಗ್ರೆಸ್ಸಿನಲ್ಲಿ ಸಂಪೂರ್ಣ ಸ್ವಾತಂತ್ರ್ಯವೇ ಹಿಂದುಸ್ಥಾನದ ಧ್ಯೇಯವೆಂತ ತೀರ್ಮಾನವಾಗಿದೆ. ಈ ತೀರ್ಮಾನವು ಅನೇಕ ಪ್ರಾಂತೀಕ ಪರಿಷತ್ತುಗಳಲ್ಲಿಯೂ ಮಂಜೂರಾಗಿದೆ. ನೆಹರು ಕಮಿಟಿಯು ವರದಿಯು ಮೇಲೆ ಮಾಡಿರುವ ಟೀಕೆಗಳಲ್ಲಿ ಸ್ವಾತಂತ್ರ್ಯ ಧ್ಯೇಯವನ್ನು ಬಿಟ್ಟುಕೊಟ್ಟದ್ದಕ್ಕೆ ಕೆಲವರು ಒಪ್ಪಿರುವದಿಲ್ಲ. ಪ್ರಪಂಚದ ಶಾಂತಿಗೂ ಸಹ ಹಿಂದುಸ್ಥಾನವು ಸಾಮ್ರಾಜ್ಯದ ಒಳಗಾದರೂ ಸ್ವಾತಂತ್ರ್ಯವಾಗಿರಬೇಕಾದದ್ದು ಅವಶ್ಯವೆಂತ ಅನೇಕ ರಾಜ ತಂತ್ರ ಪ್ರವೀಣರು ಹೇಳಿರುತ್ತಾರೆ. ಆದ್ದರಿಂದ ಈಗಲಾದರೂ ಸಾಮ್ರಾಜ್ಯದ ಒಳಗೆ ಹಿಂದುಸ್ಥಾನವನ್ನು ಇಟ್ಟುಕೊಳ್ಳಬೇಕಾದರೆ ಸಾಮ್ರಾಜ್ಯದ ಅಂಗಗಳಾಗಿರುವ ಕೆನಾಡಾ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ದೇಶಗಳಿಗೆ ಇರುವಷ್ಟು ಸ್ವಾತಂತ್ರ್ಯವನ್ನು ತಡಮಾಡದೆ ಹಿಂದುಸ್ಥಾನಕ್ಕೆ ಕೊಡಬೇಕಾದದ್ದು ಅವಶ್ಯವಾಗಿದೆ.

ಹಿಂದುಸ್ಥಾನಕ್ಕೆ ಉಪನಿವೇಶನಗಳ ಸ್ವಾತಂತ್ರ್ಯ ಕೊಡಬಾರದೆಂಬದಕ್ಕೆ, ಹಿಂದುಸ್ಥಾನದವರಿಗೆ ಓಟನ್ನು ಉಪಯೋಗಿಸಲು ಗೊತ್ತಿಲ್ಲವೆಂತಲೂ, ಓಟಿನ ಪದ್ಧತಿಯು ಹಿಂದುಸ್ಥಾನದ ಸಂಸ್ಕೃತಿಗೆ ವಿರೋಧವಾಗಿದೆಯೆಂತಲೂ, ಯುರೋಪಿನಲ್ಲಿ ಸಹ ಓಟಿನ ಮೂಲಕ ನಡೆಯುವ ಪ್ರಜಾಸತ್ತಾತ್ಮಕ ಸರಕಾರ ಕ್ರಮವು ಅತೃಪ್ತಿಯನ್ನುಂಟುಮಾಡಿದೆಯೆಂತಲೂ ವಾದಿಸುತ್ತಾರೆ. ಏಷ್ಯಾಖಂಡದ ಜಪಾನ್, ಟರ್ಕಿ, ಪರ್ಶಿಯಾ ದೇಶಗಳಲ್ಲಿ ಓಟಿನ ಮೂಲಕ ಆರಿಸುವ ಪ್ರಜಾಸತ್ತಾತ್ಮಕ ಸರಕಾರವು ಜಯಪ್ರದವಾಗಿ ನಡೆಯುವಾಗ ಹಿಂದುಸ್ಥಾನದಲ್ಲಿ ಯಾಕೆ ನಡೆಯಬಾರದು, ಪ್ರಜಾ ಸತ್ತಾತ್ಮಕ ಸರಕಾರವನ್ನು ಕೊಡುವದಿಲ್ಲವಾದರೆ ರಷ್ಯಾ ಅಥವ ಇಟಲಿ ರಾಜ್ಯಗಳ ಕ್ರಮಗಳನ್ನು ಅನುಸರಿಸಬೇಕನ್ನುತ್ತಾರೋ ಎಂತ ವರದಿಯಲ್ಲಿ ಕೇಳಿದೆ. ರಷ್ಯಾ ರಾಜ್ಯದ ಆಡಳಿತ ಕ್ರಮವನ್ನು ಬ್ರಿಟಿಷರು ಅಹೋರಾತ್ರಿ ದೂಷಿಸುತ್ತಿರುವಾಗ ಈ ಪ್ರಶ್ನೆಯು ಅವರಿಗೆ ರುಚಿಸಲಿಕ್ಕಿಲ್ಲ. ಹಿಂದುಸ್ಥಾನವನ್ನು ದೇಶೀಯ ರಾಜರಿಗೆ ಹಂಚಿಕೊಟ್ಟು ಬಿಡಬಹುದೆಂತಲೂ, ಯಾ ಬ್ರಿಟಿಷ್ ಜನರಿಗೆ ಅಡಿಯಾಳಾಗಿರುವ ಇತರ ಯಾರಿಗಾದರೂ ಒಪ್ಪಿಸಿಬಿಡಬಹುದೆಂತಲೂ, ಅಥವಾ ಪೂರ್ವದ ಮೊಘಲಾಯ್ ದರ್ಬಾರ್ ನಡಿಸಿದ ಕುಟುಂಬದವರನ್ನು ಕಂಡುಹಿಡಿದು ಅವರಿಗೆ ಹಿಂದುಸ್ಥಾನವನ್ನು ವಹಿಸಿಬಿಡಬಹುದೆಂತಲೂ ಬ್ರಿಟಿಷ್ ಪತ್ರಿಕೆಗಳಲ್ಲಿ ಸೂಚನೆಗಳಿವೆಯೆಂತ ವರದಿಯಲ್ಲಿ ತಿಳಿಸಿ, ಇಂಥಾ ಸೂಚನೆಗಳಿಗೆ ಗಮನ ಕೊಡಬೇಕಾದ ಅವಶ್ಯವಿಲ್ಲವೆಂತ ಬರೆದಿದ್ದಾರೆ. ಪ್ರಜಾಜನರ ಅಭಿಮತಕ್ಕೆ ಅಧೀನವಾಗಿರುವ ಸರಕಾರವು ಹಿಂದುಸ್ಥಾನಕ್ಕೆ ಬೇಕಾಗಿದೆಯೇ ಹೊರತು ಬಿಳೀ ಚರ್ಮದ ಅಧಿಕಾರಿಗಳನ್ನು ತೆಗೆದು ಕಪ್ಪು ಚರ್ಮದ ಅಧಿಕಾರಿಗಳನ್ನು ನೇಮಿಸಿದರೆ ಹಿಂದುಸ್ಥಾನಕ್ಕೆ ಎಂದೂ ತೃಪ್ತಿಯಾಗಲಾರದೆಂತ ಈ ಕಮಿಟಿಯವರ ಅಭಿಪ್ರಾಯವಾಗಿದೆ.

ನಮ್ಮ ದೇಶದಲ್ಲೂ ಅಧಿಕಾರಿಗಳೆಲ್ಲರೂ ದೇಶೀಯರಾದರೆ ಸ್ವರಾಜ್ಯವೇ ಆಯಿತೆಂತ ನಂಬುವವರು ಇದ್ದಾರೆ. ಇಂಥವರಿಗೆ ವರದಿಯಲ್ಲಿ ಬರೆದ ಮೇಲಿನ ಮಾತುಗಳು ಸಂಪೂರ್ಣ ಉತ್ತರ ಕೊಟ್ಟಿವೆ. ಕೊಡಗಿನಲ್ಲಿ ಬ್ರಿಟಿಷರು ಕಾಲಿಡುವ ಮುಂಚೆ ಸ್ವರಾಜ್ಯವಿತ್ತೆನ್ನಬಹುದು. ಆದರೆ ಮನಸ್ಸಿಗೆ ಇಚ್ಛೆ ನಡಿಯುವ ಒಬ್ಬ ವ್ಯಕ್ತಿಯ ಹಾವಳಿ ತಡೆಯಲಾರದೆ ಬ್ರಿಟಿಷರನ್ನು ಈ ದೇಶಕ್ಕೆ ಬರಮಾಡಿಸಿಕೊಂಡದ್ದಾಗಿದೆಯೆಂತ ಚರಿತ್ರೆ ಪುಸ್ತಕಗಳು ಹೇಳುತ್ತವೆ. ಒಬ್ಬನಲ್ಲ, ನಾಲ್ಕು ಜನರಾದರೂ ಮನಸ್ಸಿಗೆ ಇಚ್ಛೆ ನಡೆಯುವವರಾದರೆ ದೇಶಕ್ಕೆ ಕ್ಷೇಮವಿಲ್ಲ. ದೇಶಕ್ಕೆ ಕ್ಷೇಮವಾಗಬೇಕಾದರೆ ದೇಶದ ಜನರ ಓಟ್ ಪಡೆದು ದೇಶದ ಜನರ ಅಭಿಮತದಂತೆ ರಾಜ್ಯಾಡಳಿತ ನಡಿಸುವವರೇ ಆಗ ಬೇಕೆಂತ ಈ ದೇಶದವರಿಗೂ ಅನುಭವಕ್ಕೆ ಬಂದಿದೆ. ಪ್ರಪಂಚದ ರಾಜನೀತಿಜ್ಞರೆಲ್ಲರೂ ಇದೇ ತತ್ವವನ್ನು ಪ್ರತಿಪಾದಿಸಿದ್ದಾರೆ.

ಈಗ ಇಂಡಿಯಾದ ಆಡಳಿತ ನಡಿಸುವವರು ಬ್ರಿಟಿಷ್ ಪಾರ್ಲಿಮೆಂಟಿಗೆ ಅಧೀನರಾಗಿ ಇರುವದು ಎಷ್ಟರಮಟ್ಟಿಗೆ ನಿಜವೆಂಬದನ್ನು ವರದಿಯು ವಿವರಿಸಿದೆ. ಹಿಂದೂಸ್ಥಾನದ ಆಡಳಿತವನ್ನು ಪಾರ್ಲಿಮೆಂಟಿನವರು ಇಂಡಿಯಾ ಸ್ಟೇಟ್ ಸೆಕ್ರೆಟರಿ ಎಂಬ ಅಧಿಕಾರಿಯ ಮೂಲಕ ನಡಿಸುತ್ತಾರೆ. ಬ್ರಿಟಿಷ್ ಓಟರುಗಳಿಗೆ ಸಾಧಾರಣವಾಗಿ ಹಿಂದೂಸ್ಥಾನದ ವಿಷಯ ಏನೂ ಗೊತ್ತಿಲ್ಲ. ಅಲ್ಲಿನ ಓಟರುಗಳು ತಮ್ಮ ದೇಶದ ಕ್ಷೇಮವನ್ನು ಮಾತ್ರ ಗಣನೆಗೆ ತೆಗೆದುಕೊಂಡು ತಮ್ಮ ಓಟನ್ನು ಉಪಯೋಗಿಸುತ್ತಾರೆ. ಹಾಗೆ ಚುನಾಯಿಸಲ್ಪಟ್ಟ ಮೆಂಬರುಗಳು ಪಾರ್ಟಿ ತತ್ವವನ್ನು ಅನುಸರಿಸಿ ಆಡಳಿತವನ್ನು ನಡಿಸುತ್ತಾರೆ. ಹೆಚ್ಚು ಸಂಖ್ಯೆಯುಳ್ಳ ಪಾರ್ಟಿಯು ಬೆಂಬಲವಿರುವ ಒಬ್ಬರು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾಗಿರುತ್ತಾರೆ. ಇವರಿಗೂ ಹಿಂದುಸ್ಥಾನದ ವಿಷಯ ಸ್ವತಃ ಅನುಭವವಿರುವದು ಅಪರೂಪ. ಇವರು ಇಂಡಿಯಾ ಸರಕಾರದವರು ಒದಗಿಸಿಕೊಡುವ ತಿಳುವಳಿಕೆಯಿಂದ ಇಂಡಿಯಾ ಕೌನ್ಸಿಲ್ ಎಂಬ ಸಂಸ್ಥೆಯ ಸದಸ್ಯರು ಕೊಡುವ ಸಲಹೆಗಳನ್ನು ಅನುಸರಿಸಿ ಸ್ಟೇಟ್ ಸೆಕ್ರೆಟರಿಯವರ ಆಡಳಿತವನ್ನು ನಡಿಸುತ್ತಾರೆ. ಆದ್ದರಿಂದ ಹಿಂದುಸ್ಥಾನವನ್ನು ಆಳುವ ಭಾರವು ಪಾರ್ಲಿಮೆಂಟಿಗೆ ಹೆಸರಿಗೆ ಮಾತ್ರ ಇದ್ದರೂ ಕಾರ್ಯತಃ ಆಡಳಿತವೆಲ್ಲಾ ಇಂಡಿಯಾ ಕೌನ್ಸಿಲಿನಿಂದ ನಡಿಸಲ್ಪಡುತ್ತಿದೆ. ಈ ಆಡಳಿತದ ಜವಾಬ್ದಾರಿಯು ಈ ರೀತಿ ಪಾರ್ಲಿಮೆಂಟಿಗೆ ಇರುವದನ್ನು ತಪ್ಪಿಸಿ ಹಿಂದೂ ಸ್ಥಾನವನ್ನು ಆಳುವ ಭಾರವು ಹಿಂದೂ ಸ್ಥಾನದ ಜನರೇ ವಹಿಸಿಕೊಳ್ಳಬೇಕೆಂಬದೇ ವರದಿಯ ಮುಖ್ಯ ಸಿಫಾರಸ್ಸಾಗಿದೆ.

ಹಿಂದೂಸ್ಥಾನದಲ್ಲಿ ಪ್ರಜಾಸತ್ತಾತ್ಮಕ ರಾಜ್ಯಭಾರವು ಸಾಧ್ಯವಾಗಲಾರದೆಂಬದಕ್ಕೆ ಜಾತಿವಾರು ವ್ಯತ್ಯಾಸಗಳನ್ನು ತೋರಿಸುತ್ತಾರೆ. ಸ್ವರಾಜ್ಯವಿರುವ ಬೇರೆ ಜನಾಂಗಗಳಲ್ಲೂ ಈ ತೊಡಕು ಇತ್ತೇ ಇತ್ತು. ಆದರೆ ಈ ತೊಡಕನ್ನು ಪ್ರಜಾಸತ್ತಾತ್ಮಕ ರಾಜ್ಯ ಪದ್ಧತಿಗೆ ಅಡ್ಡಿಯೆಂದು ಯಾವ ಜನಾಂಗದಲ್ಲೂ ಭಾವಿಸಿರುವದಿಲ್ಲ. ಜನರ ಮೂಲ ಹಕ್ಕುಗಳನ್ನು ಖಾನೂನಿಗೆ ಒಳಪಡದೆ ಕಾದಿಡುವುದರಿಂದಲೂ, ಕೆಲವು ಕಾಲದವರೆಗೆ ಕಡಿಮೆ ಸಂಖ್ಯೆಯ ಕೋಮಿನವರಿಗೆ ಚುನಾವಣ... ಮೆಂಬರುತನವನ್ನು ಕಾದಿಡುವದರಿಂದಲೂ ಈ ತೊಡಕ... ಸಿಕೊಳ್ಳಬಹುದೆಂದು ವರದಿಯು ಸೂಚಿಸುತ್ತದೆ. ಪ್ರ... ಮನುಷ್ಯನಿಗೂ ಪ್ರೈಮರಿ ವಿದ್ಯೆಯನ್ನು ಹೊಂದಲು ... ರ್ಣ ಹಕ್ಕು ಇದೆಯೆಂತಲೂ, ಸಾಮುದಾಯಕ ಕ್... ಳಿಂದ ಧನ ಸಹಾಯ ಪಡೆಯುವ ಶಾಲೆಗಳಲ್ಲಿ ಜಾತಿ... ವಿಲ್ಲದೆ ಪ್ರತಿಯೊಬ್ಬನಿಗೂ ವಿದ್ಯಾರ್ಜನೆಗೆ ಹಕ್ಕಿದೆಯೆ... ನಿರ್ಧರಿಸಿ ಇಡುವದರಿಂದ ಸಂಪೂರ್ಣ ಪ್ರಜಾಸತ್ತಾತ್ಮ... ಜ್ಯ ಪದ್ಧತಿಯಿಂದ ಕಡಿಮೆ ಸಂಖ್ಯೆಯ ಅಥವ ತಿಳುವ... ಲ್ಲದ ಯಾವ ಕೋಮಿನವರಿಗೂ ಕೆಡಕಾದೀತೆಂಬ ... ಲು ಕಾರಣವಿಲ್ಲ.

ಸಾಮ್ರಾಜ್ಯದ ಉಪನಿವೇಶನಗಳ ಸರಕಾರವು ... ಸ್ಥಾನಕ್ಕೆ ಇರಬೇಕಾದರೆ ಹಿಂದುಸ್ಥಾನದ ಸರಕಾರದ ... ದಲ್ಲಿ ಹಿಂದೂಸ್ಥಾನೀ ಸೈನ್ಯವಿರಬೇಕಾಗುತ್ತದೆಯೆಂ... ಹಿಂದುಸ್ಥಾನಕ್ಕೆ ಕಲವು ಕಾಲದ ವರೆಗೆ ಹೀಗೆ ಮಾಡ... ಲು ಸಾಧ್ಯವಿದೆಯೆಂತ ಯಾರೂ ಹೇಳಿರುವದಿಲ್ಲವೆಂ... ಸರಕಾರಿ ಮೆಂಬರೊಬ್ಬರು ಆಡಿದ ಆಕ್ಷೇಪಣೆಗೆ ಸಂ... ಸ್ವಾಮಿ ಅಯ್ಯರವರ ಭಾಷಣದಿಂದ ಎತ್ತಿದ ಕೆಳಗಿನ ... ಗಳಿಂದ ಜವಾಬು ಕೊಟ್ಟಿರುತ್ತಾರೆ. "ಉಪನಿವೇಶ... ಸ್ವರಾಜ್ಯ ಕೊಟ್ಟಾಗ ತಮ್ಮ ರಕ್ಷಣೆ ತಮಗೇನೇ ಮಾ... ಳ್ಳಲಿಕ್ಕ ಒಂದಕ್ಕೂ ಶಕ್ತಿ ಇರಲಿಲ್ಲ. ತಮ್ಮ ರಕ್ಷಣೆ... ಕಾದ ಖರ್ಚು ಕೊಡಲು ಸಹ ಅನೇಕ ವರ್ಷಗಳ ವರೆ... ಇರಲಿಲ್ಲ. ಇಂಗ್ಲೆಂಡಿನ ಧನ ಸಹಾಯ ಬೇಕಾಗಿತ್ತು... ವಾದರೋ (ಹಿಂದೀಯರು) ನಮ್ಮ ಸೈನ್ಯದ ಖರ್ಚನ್ನು... ವೇ ಕೊಡುತ್ತೇವೆ. ನಮಗೆ ಬೇಕಾದ ಸೈನಿಕರನ್ನು ... ಒದಗಿಸಿಕೊಳ್ಳುತ್ತಿದ್ದೇವೆ. ಬ್ರಿಟಿಷ್ ಸೈನಿಕರನ್ನು ... ಕೊಂಡರೂ ಅವರ ಖರ್ಚನ್ನು ಸಹ ನಾವೇ ವಹಿಸಿ... ಡುತ್ತೇವೆ. ಸೈನ್ಯಕ್ಕೆ ಬೇಕಾದ ಆಫೀಸರುಗಳನ್ನ ಒ... ಕೊಳ್ಳಬೇಕೆಂತ ಸರಕಾರಿ ಮೆಂಬರು ಹೇಳಿದರು. ... ವೇಶನಗಳಲ್ಲಿ ಆಂತರಿಕ ಶಾಂತಿ ರಕ್ಷಣೆಗೆ ಈ ಶರತ್ತು... ದ್ದರೂ ಹೊರಗಿನಿಂದ ಬರುವ ಅಪಾಯವನ್ನು ತಪ್ಪಿಸ... ಲು ಉಪನಿವೇಶನಗಳಿಗೆ ಇನ್ನೂ ಜವಾಬ್ದಾರಿಯು ಕೊ... ಟ್ಟಿರುವದಿಲ್ಲ." ಹಿಂದುಸ್ಥಾನದ ಸ್ವರಾಜ್ಯ ಸರಕಾರವ... ಲಟರಿ ಆಫೀಸರುಗಳನ್ನು ತರಬೇತು ಮಾಡುವ ಶಾಲೆ... ಏರ್ಪಡಿಸಬೇಕೆಂತ ಸಿಫಾರಸು ಮಾಡಿರುವದರಿಂದ ಹಿಂದು... ನದ ಸೈನ್ಯವನ್ನು ಹಿಂದೀ ಆಫೀಸರುಗಳೇ ಉಳ್ಳದ್ದಾಗಿ ... ಡಿಕೊಳ್ಳುವದು ಸಾಧ್ಯವೆಂತ ಸೂಚಿಸಿರುತ್ತಾರೆ.

ಹಿಂದುಸ್ಥಾನದ ಆಡಳಿತವು ಸಂಪೂರ್ಣವಾಗಿ ಹಿಂದಿ... ರ ವಶಕ್ಕೆ ಸಿಕ್ಕಬೇಕೆಂಬದಕ್ಕ ಜವಾಬು ಕೊಡಲು ಸಾಧ್ಯ... ದಂಥ ಆಧಾರಗಳನ್ನು ಕೊಟ್ಟು ಪುಷ್ಟೀಕರಿಸಿದ್ದಾರೆ.

---

## ಕರ್ನಾಟಕ ಏಕೀಕರಣ.

ಸರ್ವಪಕ್ಷ ಕಾನ್ಫರೆನ್ಸಿನವರಿಂದ ನೇಮಿಸಲ್ಪಟ್ಟ... ರು ಉಪಕಮಿಟಿಯವರು ಹಿಂದೂದೇಶದ ಪ್ರಾಂತ್ಯಗ... ರಚಿಸುವದರ ವಿಷಯವೂ, ಕರ್ನಾಟಕ ಏಕೀಕರಣದ ವಿ... ವೂ ಬರೆದಿರುವ ಅಭಿಪ್ರಾಯಗಳನ್ನು ಎತ್ತಿ, ಹಸ್ತಪತ್ರ ರ... ಲ್ಲಿ ಅಚ್ಚುಹಾಕಿಸಿ ಕರ್ನಾಟಕ ಏಕೀಕರಣದ ಕಾರ್ಯ... ಯವರೂ, ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿ... ಯ್ದರ್ಶಿಯವರೂ ಪ್ರಕಟಿಸಿರುವರು. ಈ ಸಂಗತಿಯ... ಕುರಿತು ಕಳೆದ ವಾರದ ಅಗ್ರಲೇಖನದಲ್ಲಿ ನಮ್ಮ ದೇಶ... ಒಂದಿನುವಷ್ಟು ನಮ್ಮ ಅಭಿಪ್ರಾಯವನ್ನು ಸಂಕ್ಷೇಪ... ಸೂಚಿಸಿದ್ದೆವು. ಈಗ ಇದೇ ಕರ್ನಾಟಕದ ವಿಷಯ ... ಮಾತು ಹೇಳಬಿಚ್ಚಿಸುತ್ತೇವೆ.

ಹಿಂದೂದೇಶದ ಈಗಿನ ಪ್ರಾಂತ್ಯಗಳು ಯಾವನೊ... ಕ್ರಮದ ಪ್ರಕಾರ ರಚಿಸಲ್ಪಟ್ಟಿರುವದಿಲ್ಲವೆಂಬದು ... ರಿಗೂ ತಿಳಿದ ಸಂಗತಿ. ಅನುದಿನದ ಇನ್ನಾದರೂ ... ಕ್ರಮಗಳನ್ನನುಸರಿಸಿ ಪ್ರಾಂತ್ಯಗಳನ್ನು ರಚಿಸುವದು ಅ... ವೆಂದೂ, ಭಾಷಾನುಸಾರು, ಜನರ ಬಹುಮತ ಅಭಿಪ್ರಾ... ಮತ್ತು ಆಡಳಿತ ಅನುಕೂಲ, ಈ ಮೂರು ತತ್ವಗಳ ... ಪ್ರಾಂತ್ಯಗಳನ್ನು ಏರ್ಪಡಿಸುವದು ಉತ್ತಮವೆಂದೂ ... ಯಲ್ಲಿ ಹೇಳಿರುವದಕ್ಕೆ ನಾವು ಸಂಪೂರ್ಣ ಒಪ್ಪುತ್ತೇವೆ... ತತ್ವಗಳ ಪ್ರಕಾರ ಕರ್ನಾಟಕ ಪ್ರಾಂತ್ಯವನ್ನು ರಚಿಸು... ಸಾಕಷ್ಟು ಕಾರಣಗಳಿವೆಯೆಂದೂ, ಆದರೆ ಆಶ್ರಿತ ಸಂ... ವಾದ ಮೈಸೂರು ಮತ್ತು ಅದರಿಂದಾಚೆ ಇರುವ ಸಣ್ಣ ... ದ್ವೀಪಗಳನ್ನು ಇದಕ್ಕೆ ಸೇರಿಸಲು ತುಂಬಾ ಕಷ್ಟವಿ... ದೂ, ಇವುಗಳನ್ನು ಬಿಡು ಬೇರೆ ಕರ್ನಾಟಕ ಭಾಗಗಳನ್ನು ... ಪ್ರಾಂತ್ಯಗಳಿಂದ ವಿಂಗಡಿಸಿ, ಒಂದು ಕರ್ನಾಟಕ ಪ್ರಾ... ನ್ನು ರಚಿಸತಕ್ಕದೆಂದೂ ವರದಿಯಲ್ಲಿ ಬರೆಯಲಾಗಿದೆ. ... ಸೂರು ಪ್ರಾಂತ್ಯವನ್ನೇನೋ ತತ್ಕಾಲ ಬಿಡಬೇಕಾ... ಆದರೆ ಅದರಿಂದಾಚೆ ಇರುವ ನೀಲಗಿರಿ, ಕೊಳ್ಳೆಗಾಲ, ಹೊಸೂರು, ಕೃಷ್ಣಗಿರಿ, ಮಡಕಶೀರಾ ಮುಂತಾದ ಕನ್ನ... ದೇಶಗಳನ್ನು ಕರ್ನಾಟಕ ಪ್ರಾಂತ್ಯಕ್ಕೆ ಸೇರಿಸದೆ ಬಿ... ನ್ಯಾಯವಲ್ಲ. ಸರ್ವಪಕ್ಷದವರ ಪರಿಷತ್ತಿನಲ್ಲಿ ಈ ... ಯನ್ನು ಪಚಾರಮಾಡಬೇಕಂತ ಕೋರುತ್ತೇವೆ.

---

## ಮಹಾತ್ಮಗಾಂಧಿಯವರ ಸ್ವಚರಿತ್ರೆ.

೨ನೇ ಭಾಗದಲ್ಲಿ ೩ನೇ ಪ್ರಕರಣ

### ಅದೇನು ಬೆದರಿಕೆಯೇ?

ನಾನು ಮುಂಬಯಿಯಿಂದ ರಾಜಕೋಟೆಗೂ ಪೋರ ಬಂದರಿಗೂ ಹೋದೆನು. ಅಲ್ಲಿ ನಾನು ನಮ್ಮ ಅತ್ತಿಗೆ (ಸ ತ್ತುಹೋಗಿದ್ದ) ಅಣ್ಣನ ಹೆಂಡತಿ) ಯನ್ನೂ ಇತರ ನೆಂಟರನ್ನೂ ನೋಡಬೇಕಾಗಿದ್ದಿತು.

ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ ನಡೆದ ಕಾಲದಲ್ಲಿ ನನ್ನ ಉಡುಪನ್ನು ಅದು ಸಾಧ್ಯವಾದ ಮಟ್ಟಿಗೂ ಕರಾರ ಗಾರರ ಉಡುಪಿನಂತಿರುವಂತೆ ಮಾರ್ಪಡಿಸಿದ್ದೆನು. ಇಂ ಗ್ಲೆಂಡಿನಲ್ಲಿ ಕೂಡ ಮನೆಯಲ್ಲಿ ಇದೇ ಪೋಷಾಕನ್ನು ಧರಿ ಸಿದ್ದೆನು. ಮುಂಬಯಿಯಲ್ಲಿ ಹಡಗಿನಿಂದ ಇಳಿಯುವಾ ಗ ತೊಟ್ಟುಕೊಳ್ಳಲು ನನ್ನ ಬಳಿ ಕಾಥ್ಯವಾಡಿ ಉಡುಪಿದ್ದಿತು. ಒಂದು ಅಂಗಿ, ಒಂದು ಪಂಚೆ, ಒಂದು ನಿಲುವಂಗಿ ಮ ತ್ತು ಒಂದು ಬಿಳಿಯ ಪೇಟ. ಇದೆಲ್ಲವೂ ಹಿಂದೂಸ್ಥಾನ ದ ಯಂತ್ರದಿಂದ ಆದ ಬಟ್ಟೆಯಾಗಿದ್ದಿತು. ಆದರೆ ನಾನು ಮುಂಬಯಿಯಿಂದ ಮೂರನೆಯ ತರಗತಿಯಲ್ಲಿ ಪ್ರಯಾಣ ಮಾಡುವವನಾಗಿದ್ದುದರಿಂದ ನಿಲುವಂಗಿ, ಪೇಟ ಇವುಗಳು ಹೊರೆಯೆಂದೆಣಿಸಿ ಅವನ್ನು ತೆಗೆದಿಟ್ಟು ಒಂದು ಕಾಶ್ಮೀರಿ ಟೋಪಿಯನ್ನು ಕೊಂಡುಕೊಂಡೆನು. ಈ ರೀತಿ ಯ ಉಡುಪನ್ನು ಧರಿಸಿರುವವನನ್ನು ನೋಡಿದವರು ಬಡವ ನೆಂದೆಣಿಸುವುದರಲ್ಲಿ ಸಂಶಯವೇ ಇರಲಿಲ್ಲ.

ಆಗ ಗೊಟ್ಟಬೇನೆಯು (ಪ್ಲೇಗ್) ಹರಡಿದ್ದಿತ್ತಾದುದರಿಂ ದ ಮೂರನೆಯ ತರಗತಿಯ ಪ್ರಯಾಣಿಕರನ್ನು ವೀರಮ್ ಗಾಮದಲ್ಲಿಯೋ ವಢವಾಣದಲ್ಲಿಯೋ (ನನಗೆ ಸರಿಯಾಗಿ ನೆನಪಿಲ್ಲ) ವೈದ್ಯರು ಪರೀಕ್ಷಿಸುತ್ತಿದ್ದರು. ನನಗೆ ಸ್ವಲ್ಪ ಜ್ವ ರವಿತ್ತು. ನನ್ನ ಮೈ ಬಿಸಿಯಾಗಿದ್ದುದನ್ನು ನೋಡಿ ವೈ ದ್ಯರು ನಾನು ರಾಜಕೋಟೆಯಲ್ಲಿನ ವೈದ್ಯಾಧಿಕಾರಿಗಳನ್ನು ಕಾಣಬೇಕೆಂದು ನನಗೆ ಹೇಳಿ ನನ್ನ ಹೆಸರನ್ನು ಬರೆದುಕೊಂಡ ರು.

ನಾನು ವಢವಾಣದ ಮೇಲೆ ಹಾದು ಬರುವೆನೆಂಬ ಸ ಮಾಚಾರವನ್ನು ಯಾರೋ ಕಳುಹಿಸಿದ್ದರೆಂದು ತೋರುತ್ತದೆ. ಏಕೆಂದರೆ ಅಲ್ಲಿನ ಪ್ರಸಿದ್ಧ ಪ್ರಜಾಸೇವಕರಾದ ಚಪ್ಸಿಗ (ಮ ) ಮೋತೀಲಾಲರು ನನ್ನನ್ನು ನಿಲ್ದಾಣದಲ್ಲಿ ಬಂದು ಕಂಡರು. ವೀರಮ್‌ಗಾಮದ ಸುಂಕದ ಕಟ್ಟೆಯ ವಿಚಾರವಾಗಿಯೂ ಅದರ ಕಾರಣದಿಂದ ರೈಲಿನ ಪ್ರಯಾಣಿಕರು ಪಡುತ್ತಿದ್ದ ಸಂಕಟ ಗಳನ್ನೂ ನನಗೆ ತಿಳಿಸಿದರು. ನಾನು ಜ್ವರದಿಂದ ನರಳುತ್ತಿ ದ್ದ ಕಾರಣ ನನಗೆ ಮಾತನಾಡಲು ಇಷ್ಟವಿರಲಿಲ್ಲ. ಆದು ದರಿಂದ ಸಂಕ್ಷೇಪವಾದ ಉತ್ತರವನ್ನಿತ್ತು ಈ ಪ್ರಸಂಗವನ್ನು ಮುಗಿಸಲು ಯತ್ನಿಸಿದೆನು. ಆ ಉತ್ತರವು ಈ ಪ್ರಶ್ನೆಯ ರೂಪವಾಗಿದ್ದಿತು

"ನೀವುಗಳು ಸೆರೆಮನೆಗೆ ಹೋಗಲು ಸಿದ್ಧರಾಗಿದ್ದೀರಾ?"

ಆಲೋಚನೆಯಿಲ್ಲದೆ ಮಾತನಾಡುವ ದುಡುಕಿನ ಯುವ ಕರಲ್ಲಿ ಮೋತೀಲಾಲರೂ ಒಬ್ಬರೆಂದು ನಾನು ಎಣಿಸಿದ್ದೆನು. ಆದರೆ ಅದು ತಪ್ಪಾಗಿದ್ದಿತು. ಅವರು ದೃಢತಾಪೂರ್ವಕ ವಾಗಿ

"ನೀವು ನಮ್ಮ ಮುಂದಾಳಾಗುವುದಾದರೆ ನಾವು ಕಾರಾ ಗೃಹಕ್ಕೆ ಅಗತ್ಯವಾಗಿ ಹೋಗುತ್ತೇವೆ. ನಾವು ಕಾಥ್ಯ ವಾಡಿಗಳಾದುದರಿಂದ ನಿಮ್ಮ ಮೇಲಿನ ಮೊಟ್ಟಮೊದಲಿನ ಅ ಧಿಕಾರವು ನಮ್ಮದೇ ಆಗಿದೆ. ನಿಮ್ಮನ್ನು ಈಗ ಇಲ್ಲಿ ನಿಲ್ಲಿ ಸಬೇಕೆಂದು ನಾವೇನೂ ಅಪೇಕ್ಷಿಸುವುದಿಲ್ಲ. ಆದರೆ ನೀವು ಹಿಂದಿರುಗುವಾಗ ಇಲ್ಲಿ ನಿಲ್ಲುವಿರೆಂದು ಮಾತುಕೊಡಬೇಕು. ಈ ಯುವಕರ ಕಾರ್ಯವನ್ನೂ ಉತ್ಸಾಹವನ್ನೂ ನೋಡಿ ನೀವು ಸಂತಸಗೊಳ್ಳುವಿರಿ. ನೀವು ಕರೆಯುವುದೇ ತಡ ನಾವು ಹೊರಡುವೆವೆಂದು ನೀವು ನಮ್ಮಲ್ಲಿ ಭರವಸೆಯಿಡಬಹುದು" ಎಂದು ಉತ್ತರ ಕೊಟ್ಟರು.

ಮೋತೀಲಾಲರಿಗೆ ನನ್ನ ಮನಸ್ಸು ಸೋತಿತು. ಅವರ ಜೊತೆಗಾರರೊಬ್ಬರು ಅವರನ್ನು ಹೊಗಳುತ್ತಾ,

'ನಮ್ಮ ಮಿತ್ರನು ಒಬ್ಬ ದರ್ಜಿಯವರು. ಆದರೆ ತಮ್ಮ ಕಸಬಿನಲ್ಲಿ ಅವರು ಎಷ್ಟು ಗಟ್ಟಿಗರೆಂದರೆ ದಿನಕ್ಕೆ ಒಂದು ಘಂ ಟೆ ಕೆಲಸಮಾಡಿ ತಿಂಗಳಿಗೆ ಸುಮಾರು ೧೫ ರೂಪಾಯಿ ಸಂಪಾದಿಸುತ್ತಾರೆ. ಅವರಿಗೆ ಬೇಕಾದುದು ಅಷ್ಟೇ. ಉಳಿದ ಕಾಲವನ್ನೆಲ್ಲಾ ಸಾರ್ವಜನಿಕ ಸೇವೆಯಲ್ಲಿ ವಿನಿಯೋ ಗಿಸುತ್ತಾರೆ. ನಮ್ಮ ಓದು ಬರಹ ಕಲಿತ ನಮ್ಮೆಲ್ಲರಿಗೂ ಮುಂದಾ ಳಾಗಿ ಅವರು ನಮ್ಮನ್ನು ನಾಚಿಕೆಗೊಳಿಸುತ್ತಾರೆ" ಎಂದರು.

ಆ ಮೇಲೆ ಮೋತೀಲಾಲರಿಗೂ ನನಗೂ ಗಾಢಪರಿಚಯ ವಾದಾಗ ಈ ಸ್ತುತಿಯಲ್ಲಿ ಅತಿಶಯೋಕ್ತಿಯೇನೂ ಇರಲಿ ಲ್ಲವೆಂಬುದು ನನಗೆ ಗೊತ್ತಾಯಿತು. ಸತ್ಯಾಗ್ರಹಾಶ್ರಮದ ಸ್ಥಾಪನೆಯಾದ ಮೇಲೆ ಪ್ರತಿ ತಿಂಗಳೂ ಕೆಲವು ದಿವಸಗಳನ್ನು ಅಲ್ಲಿ ಕಳೆದು ಅಲ್ಲಿನ ಹುಡುಗರಿಗೆ ಹೊಲಿಗೆಯ ಕೆಲಸವನ್ನು ಕಲಿಸಿಕೊಟ್ಟು ಆಶ್ರಮದ ಬಟ್ಟೆಗಳಲ್ಲಿ ಕೆಲವನ್ನು ಸ್ವತಃ ಹೊ ಲಿಯುತ್ತಿದ್ದರು. ವೀರಮ್‌ಗಾಮದ ವಿಷಯವನ್ನೂ ಅಲ್ಲಿ ಪ್ರಯಾಣಿಕರು ಅನುಭವಿಸುತ್ತಿದ್ದ ತೊಂದರೆಗಳನ್ನೂ ಇವರು ನಿತ್ಯವೂ ನನ್ನೊಡನೆ ಹೇಳುತ್ತಿದ್ದರು. ಹಾದಿಗಾರರ ಸಂ ಕಟವನ್ನು ನೋಡಿ ಸಹಿಸಲು ಇವರಿಗೆ ಕೇವಲ ಅಸಾಧ್ಯವಾ ಗಿತ್ತು. ಅಕಸ್ಮಿಕವಾಗಿ ಒದಗಿದ ಜಾಡ್ಯವು ಇವರನ್ನು ತುಂಬ ಯವ್ವನದಲ್ಲಿ ಕೊಂಡೊಯ್ದು ಇವರನ್ನುಳಿದ ವಢ ವಾಣದ ಲೋಕಜೀವನವು ಕುಂದಿತು.

ರಾಜಕೋಟೆಯನ್ನು ತಲುಪಿದ ಮಾರನೆ ಪ್ರಾತಃಕಾಲವೇ ನಾನು ಅಲ್ಲಿನ ವೈದ್ಯಾಧಿಕಾರಿಯ ಬಳಿಗೆ ಹೋಗಿ ಕಂಡೆನು. ಅ ವರು ನನ್ನನ್ನು ಬಲ್ಲರು. ನನ್ನನ್ನು ಪರೀಕ್ಷಿಸಿದ ವೈದ್ಯರ ಮೇ ಲೆ ಸಿಟ್ಟಾದರು. ಇದು ಅನವಶ್ಯಕವಾಗಿದ್ದಿತು. ಏಕೆಂದ ರೆ ಪರೀಕ್ಷಕರು ತಮ್ಮ ಕರ್ತವ್ಯ ಮಾಡಿದ್ದರೇ ಹೊರತು ಇನ್ನೇನೂ ಇಲ್ಲ. ಅವರಿಗೆ ನಾನು ಯಾರೆಂಬುದು ತಿಳಿದಿರಲಿ ಲ್ಲ. ಒಂದು ವೇಳೆ ಹಾಗೆ ತಿಳಿದಿದ್ದರೂ ಬೇರೆ ರೀತಿಯಲ್ಲಿ ವರ್ತಿಸತಕ್ಕುದಾಗಿದ್ದಿತು. ವೈದ್ಯಾಧಿಕಾರಿಗಳು ನನ್ನನ್ನು ಪು ನಃ ತಮ್ಮ ಬಳಿಗೆ ಬರಗೊಡದೆ ಬದಲಾಗಿ ಒಬ್ಬ ಪರೀಕ್ಷ ಕರನ್ನು ನನ್ನ ಮನೆಗೆ ಕಳುಹಿಸುತ್ತಿದ್ದರು.

ಇಂತಹ ಸಂದರ್ಭಗಳಲ್ಲಿ ಮೂರನೆಯ ತರಗತಿಯ ಪ್ರ ಯಾಣಿಕರನ್ನು ಪರೀಕ್ಷಿಸುವುದು ಆರೋಗ್ಯ ಸಂರಕ್ಷಣೆಯ ದೃಷ್ಟಿಯಿಂದ ಅಗತ್ಯವಾದುದು. ದೊಡ್ಡ ಮನುಷ್ಯರು ಇ ಚ್ಛಾಪೂರ್ವಕವಾಗಿ ಮೂರನೆ ದರ್ಜೆಯಲ್ಲಿ ಹೋದರೆ ಬ ಡವರಿಗೆ ಅನ್ವಯಿಸುವ ನಿಯಮಬಂಧನೆಗಳಿಗೆಲ್ಲ ತಾವೂ ಮನಃಪೂರ್ವಕವಾಗಿ ಒಳಗಾಗಿ, ಮತ್ತು ಅಧಿಕಾರಿಗಳು ಈ ವಿಷಯದಲ್ಲಿ ನಿಷ್ಪಕ್ಷಪಾತವಾಗಿ ನಡೆದುಕೊಳ್ಳಬೇಕು ನನ್ನ ಅನುಭವವೇನೆಂದರೆ, ಅಧಿಕಾರಿಗಳು ಮೂರನೆಯ ವರ್ಗ ದ ಪ್ರಯಾಣಿಕರನ್ನು ತಮ್ಮಂತೆ ಮನುಷ್ಯರೆಂದೆಣಿಸದೆ ಅವ ರನ್ನು ಅಷ್ಟು ಜನ ಕುರಿಗಳೆಂದು ಕಾಣುತ್ತಾರೆ. ಅವರೊಡನೆ ತಿರಸ್ಕಾರದಿಂದ ಮಾತನಾಡಿ, ಅವರಿಂದ ಉತ್ತರಗಳಿ ಗಾಗಲಿ ಕಾರಣಗಳಿಗಾಗಲಿ ಕಾಯುವುದಿಲ್ಲ.

ಮೂರನೆಯ ವರ್ಗದ ಪ್ರಯಾಣಿಕನು ಆಳಿನಂತೆ ಅಧಿ ಕಾರಿಯ ಅಪ್ಪಣೆಯನ್ನು ನಡೆಸಬೇಕು. ಅಧಿಕಾರಿಯು ಆತನನ್ನು ನಿರ್ದಯವಾಗಿ ಹೊಡೆಯಬಹುದು, ಆತನಿಂದ ಹ ಣ ಸುಲಿಯಬಹುದು. ಆತನ ದೆಸೆಯಿಂದ ಮಟ್ಟಿಗೆ ತೊಂದ ರೆ ಮಾಡಿದ ಮೇಲೆಯೇ ಆತನಿಗೆ ಟಿಕೆಟ್ಟನ್ನು ಕೊಡಬಹುದು. ಅನೇಕ ವೇಳೆ ಆತನಿಗೆ ರೈಲನ್ನು ತಪ್ಪಿಸಬಹುದು. ಇವೆಲ್ಲವನ್ನೂ ನಾನು ನನ್ನ ಕಣ್ಣಿನಿಂದಲೇ ನೋಡಿದ್ದೇನೆ. ವಿದ್ಯಾವಂತರಲ್ಲಿ, ಧನಿಕರಲ್ಲಿ ಕೆಲವರು ಬಡವರ ಮಟ್ಟಕ್ಕಿಳಿದು ಮೂರನೆಯ ದರ್ಜೆಯಲ್ಲಿ ಪ್ರಯಾಣಮಾಡಿ ಬಡವರಿ ಗೆ ದೊರಕದ ಸೌಕರ್ಯಗಳನ್ನು ತಮಗೂ ಕಳೆದುಕೊಂಡು ತೊಂದರೆಗಳನ್ನೂ ಅವಿನಯವನ್ನೂ ಅನ್ಯಾಯವನ್ನೂ ತಲೆಬಾಗಿಸಿ ಸಹಿಸಿಕೊಂಡು ಅದರ ವಿರುದ್ಧ ಪ್ರತಿಭಟಿಸದೆ ಎಂದಿಗೂ ತಪ್ಪದ ಅವ್ಯವಸ್ಥೆಯನ್ನು ನಿರ್ಮೂಲನಮಾಡಲು ಹೋ ರಾಡುವ ವರೆಗೂ ಈ ಸುಧಾರಣೆಯೂ ಸಾಧ್ಯವಲ್ಲ.

ನಾನು ಕಾಥ್ಯವಾಡದಲ್ಲಿ ಹೋದರೂ ವೀರಮ್‌ ಗಾಮದ ಸುಂಕದ ಕಟ್ಟೆಯ ದರೆಯ ವಿಚಾರವಾಗಿ ಜನರ ದೂರನ್ನು ಕೇಳಿದೆನು. ಆದುದರಿಂದ ನಾನು ಲಾರ್ಡ್ ವಿ ಲ್ಲಿಂಗ್‌ಡನ್ನರ ಸೂಚನೆಯನ್ನುಪಯೋಗಿಸಲು ಒಡನೆಯೇ ನಿಶ್ಚ ಯಿಸಿದೆನು. ಈ ವಿಷಯಸಂಬಂಧವಾಗಿ ದೊರೆತ ಕಾಗ ದ ಪತ್ರಗಳನ್ನೆಲ್ಲಾ ಒಟ್ಟುಗೂಡಿಸಿ ಓದಿ ನೋಡಿದಾಗ ಅದರಿಂದ ದೂರಿನಲ್ಲಿ ಹುರುಳಿದೆಯೆಂಬ ಭರವಸೆಯುಂಟಾಯಿತು. ಆ ಮೇಲೆ ಮುಂಬಯಿ ಸರಕಾ ರದೊಡನೆ ಪತ್ರವ್ಯವಹಾರ ನಡೆಸಿದೆನು. ಲಾರ್ಡ್ ವಿಲ್ಲಿಂಗ್‌ ಡನ್ನರ ಖಾಸಗಿ ಕಾರ್ಯದರ್ಶಿಯವರನ್ನು ಕಂಡು, ಅಲ್ಲದೆ ಗವರ್ನರವರನ್ನೂ ಭೇಟಿಮಾಡಿದೆನು. ಈ ವಿಷಯದಲ್ಲಿ ತಮಗಿ ದ್ದ ಸಹಾನುಭೂತಿಯನ್ನು ಪ್ರಕಟಿಸಿದರು. ಆದರೆ ತಪ್ಪ ನ್ನು ದೆಹಲಿಯ ಮೇಲೆ ಹೊರಿಸುತ್ತ 'ನಮ್ಮ ಕೈಯಲ್ಲಿ ದ್ದಿದ್ದರೆ ಸುಂಕದ ಕಟ್ಟೆಯನ್ನೆಂದೋ ತೆಗೆದುಬಿಟ್ಟಿರುತ್ತಿ ದ್ದೆವು. ನೀವು ಇಂಡಿಯಾ ಸರಕಾರದ ಮುಂದೆ ಹೋಗಬೇ ಕು." ಎಂದು ಕಾರ್ಯದರ್ಶಿ ಹೇಳಿದರು.

ನಾನು ಇಂಡಿಯಾ ಸರಕಾರಕ್ಕೆ ಕಾಗದ ಬರೆದೆನು. ಆ ದರೆ ನನ್ನ ಪತ್ರವು ತಲುಪಿತೆಂಬುದರ ಹೊರತು ಇನ್ನಾವ ಉತ್ತರ ವೂ ಬರಲಿಲ್ಲ. ನಾನು ಲಾರ್ಡ್ ಚೆಮ್ಸ್‌ಫರ್ಡರನ್ನು ಕಾಣುವ ಅವಕಾಶ ದೊರೆತಾಗಲೇ ಈ ತೊಂದರೆ ಯು ಪರಿಹಾರವಾದುದು. ನಾನು ಇದಕ್ಕೆ ಸಂಬಂಧ ಪಟ್ಟ ವಿಷಯಗಳನ್ನೆಲ್ಲಾ ಅವರಿಗೆ ತಿಳಿಸಲು ಅವರು ತ ಮ್ಮ ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಅವರಿಗೆ ವೀರಮ್‌ ಗಾಮದ ವಿಷಯವೇ ತಿಳಿದಿರಲಿಲ್ಲ. ಅವರು ನನ್ನ ಹೇಳಿಕೆ ಯನ್ನು ತಾಳ್ಮೆಯಿಂದ ಕೇಳಿ ವೀರಮ್‌ಗಾಮಕ್ಕೆ ಸಂಬಂಧಪ ಟ್ಟ ಕಾಗದ ಪತ್ರಗಳಿಗೆ ಟೆಲಿಫೋನಿನ ಮೂಲಕ ಹೇಳಿ ಕಳುಹಿಸಿ ಅಧಿಕಾರಿಗಳಿಂದ ದೂರಿನ ಸಮಾಧಾನವ ನ್ನೂ ಕೇಳಿದರು. ಅನಂತರ ಸುಂಕದ ಕಟ್ಟೆಯನ್ನು ತೆಗೆ ದು ಹಾಕುವುದಾಗಿ ಮಾತುಕೊಟ್ಟರು. ಈ ಭೇಟಿಯಾ ದ ಕೆಲವು ದಿವಸಗಳ ಮೇಲೆ ವೀರಮ್‌ಗಾಮದ ಸುಂಕದ ಕಟ್ಟೆಯನ್ನು ತೆಗೆದ ಹಾಕಿದ ವರ್ತಮಾನವನ್ನು ನಾ ನು ವೃತ್ತಪತ್ರಗಳಲ್ಲಿ ಓದಿದೆನು.

ಈ ಘಟನೆಯೇ ಹಿಂದೂಸ್ಥಾನದಲ್ಲಿ ಸತ್ಯಾಗ್ರಹದ ಉ ದಯವೆಂದು ನಾನು ಎಣಿಸಿದೆನು. ಏಕೆಂದರೆ ನಾನು ಮುಂ ಬಯಿ ಸರಕಾರವನ್ನು ಕಾಣಲು ಹೋದಾಗ ಕಾರ್ಯದ ರ್ಶಿಯವರು ನಾನು ಬಗಸರದಲ್ಲಿ (ಕಾಥ್ಯವಾಡದಲ್ಲಿನ ಒಂದು ಊರು) ಕೊಟ್ಟ ಭಾಷಣದಲ್ಲಿ ಸತ್ಯಾಗ್ರಹದ ವಿಷಯವಾಗಿ ಮಾತನಾಡಿದ ವರದಿಯನ್ನು ಓದಿ ಹಾಗೆ ಮಾತನಾಡಿದುದು ತರವಲ್ಲವೆಂದು ಹೇಳಿದ್ದರು.

"ಇದೇನು ಬೆದರಿಕೆಯೇ? ಪ್ರಬಲವಾದ ಸರಕಾರವು ಬೆದರಿಕೆಗಳಿಗೆ ಬಗ್ಗುವುದೆಂದು ನೀವು ಎಣಿಸಿರುವಿರಾ?" ಎಂ ದು ನನ್ನನ್ನು ಕೇಳಿದ್ದರು.

"ಇದೇನೂ ಬೆದರಿಕೆಯಲ್ಲ. ಇದು ಪ್ರಜಾಶಿಕ್ಷಣ. ತಮ್ಮ ಸಂಕಟಗಳನ್ನು ದೂರಮಾಡುವುದಕ್ಕೆ ಎಲ್ಲಾ ನ್ಯಾಯ ವಾದ ಉಪಾಯಗಳನ್ನೂ ಜನರಿಗೆ ತಿಳಿಯ ಹೇಳುವುದು ನ ನ್ನಂತವರ ಧರ್ಮ. ಪ್ರಜಾಸ್ವಾತಂತ್ರ್ಯವನ್ನು ಗಳಿಸಬೇಕೆಂ ದಿಚ್ಛಿಸುವ ಜನಾಂಗವು ಆ ಸ್ವಾತಂತ್ರ್ಯವನ್ನು ಸಾಧಿಸಲು ಎ ಲ್ಲಾ ಮಾರ್ಗಗಳನ್ನೂ ಉಪಾಯಗಳನ್ನೂ ಅರಿತಿರಬೇಕು. ಸಾಧಾರಣವಾಗಿ ಈ ಉಪಾಯಗಳಲ್ಲಿ ಪಶುಬಲವೇ ಅಂತಿ ಮೋಪಾಯವಾಗಿರುತ್ತದೆ. ಸತ್ಯಾಗ್ರಹವಾದರೋ ಶುದ್ಧ ಅಹಿಂಸಾತ್ಮಕವಾದ ಉಪಾಯ. ಅದರ ಉಪಯೋಗವನ್ನು ಅದರ ಮೇರೆಗಳನ್ನೂ ಜನರಿಗೆ ವಿಶದಪಡಿಸುವುದು ನನ್ನ ಕ ರ್ತವ್ಯವೆಂದು ನಾನು ಎಣಿಸುತ್ತೇನೆ. ಬ್ರಿಟಿಷ್ ಸರಕಾರವು ಪ್ರಬಲವಾದ ಸರಕಾರವೆಂಬುದರಲ್ಲಿ ನನಗೇನೂ ಸಂಶಯವಿಲ್ಲ. ಆದರೆ ಸತ್ಯಾಗ್ರಹವು ಸಮಸ್ತ ಸಂಕಟಗಳಿಗೂ ದಿವ್ಯೌಷಧ ವೆಂಬುದರಲ್ಲಿಯೂ ನನಗೆ ಸಂದೇಹವಿಲ್ಲ.' ಎಂದು ಉತ್ತರ ಕೊಟ್ಟೆನು.

ಜಾಣರಾದ ಆ ಕಾರ್ಯದರ್ಶಿಗಳು ತಲೆಯಲ್ಲಾಡಿಸಿ ಸಂ ಶಯವನ್ನು ಸೂಚಿಸುತ್ತಾ 'ನೋಡೋಣ' ಎಂದರು.

---

## ಆರೋಗ್ಯ ಪ್ರಸಂಗಗಳು.

(ಕಳೆದ ವಾರದಿಂದ ಮುಂದುವರಿದುದು)

"ಕಾರ್ಬಾಲಿಕ್ ಆಸಿಡ್" ಮತ್ತು "ಮೈಸಾಲ್" ಇವೆ ರಡೂ ವಿಷಹಾರಕ ದ್ರವ್ಯಗಳು. ಶುದ್ಧವಾದ ಗಾಳಿ, ಸೂ ರ್ಯರಶ್ಮಿ, ಇವೆರಡೂ ಅವುಗಳಿಗಿಂತಲೂ ಉತ್ತಮವಾದ ಮತ್ತು ದೈವಕಲ್ಪಿತವಾದ ವಿಷಹಾರಕಗಳು.

.... ....

ಆಮಶಂಕೆಯೂ ಕಲರಾ ವ್ಯಾಧಿಯಂತೆಯೇ ನೀರು ಮ ತ್ತು ಆಹಾರಪದಾರ್ಥಗಳಲ್ಲಿ ನೊಣಗಳ ಮೂಲಕವಾಗಿಯೂ ಧೂಳಿನ ಮೂಲಕವಾಗಿಯೂ ರೋಗಿಯ ದೇಹಮಲವು ಒಂ ದು ಸೇರುವುದರಿಂದಲೇ ಬರುವುದು. ಈ ಭಾಗದಲ್ಲಿ ಎಚ್ಚ ರಿಕೆಯನ್ನು ತೆಗೆದುಕೊಂಡರೆ ನಿರ್ಭಯವಾಗಿರಬಹುದು.

.

ಹಸಿ ಮೊಟ್ಟೆಗಳು ಸುಲಭ ಜೀರ್ಣವಾಗುವುವು. ಬೇ ಯಿಸಿದ ಮೊಟ್ಟೆಗಳು ಮಧ್ಯಮವು. ಹುರಿದ ಮೊಟ್ಟೆಗಳು ಅ ಧಮಪಕ್ಷಕ್ಕೆ ಸೇರುವುವು.

.. ..

ವ್ಯಾಯಾಮಗಳೊಳಗೆಲ್ಲಾ ಕಾಲ್ನಡೆಯೇ ಉತ್ತಮವಾ ದ ವ್ಯಾಯಾಮವು. ಕೊನೆಯಪಕ್ಷ ಒಂದು ಘಂಟೆಯ ಹೊ ತ್ತು ವೇಗವಾಗಿ ನಡೆಯಬೇಕು.

. . .

ಮಕ್ಕಳಿಗೆ ಹಾಲು ಕುಡಿಸುವ ಹಾಲುಬುಡ್ಡಿಗಳಿಗೆ ಉ ದ್ದವಾದ ಕೊಳವೆಯಿರಬಾರದು. ಚಿತ್ರಕ ಯಂತ್ರವಾರ ದು. ಹಾಲು ಬಿಟ್ಟೊಡನೆ ಬಿಸಿನೀರಿನಲ್ಲಿ ಹಾಕಿ ತೊಳೆದು, ಮತ್ತೊಮ್ಮೆ ಹಾಲು ಬಿಡುವ ವರೆಗೆ ತಣ್ಣೀರಿನಲ್ಲಿಯೇ ಮು ಳುಗಿಸಿಡಬೇಕು. ಸೀಪುವ ರಬ್ಬರನ್ನು ಹಾಗೆಯೇ ಶುದ್ಧ ಮಾಡಿಡಬೇಕು.

.. ....

ರೋಗದ ಸೋಂಕನ್ನು ನಿಶ್ಯೇಷವಾಗಿ ಮುರಿಯಬೇಕಾ ದರೆ, ಸ್ವಲ್ಪ ಬೆಲೆಯುಳ್ಳ ಪದಾರ್ಥಗಳನ್ನು ಸುಟ್ಟುಬಿಡುವುದೇ ಉತ್ತಮವು.

.... ....

ಮನೆಯ ನೊಣಗಳೇ ಅನೇಕ ರೋಗಕ್ರಿಮಿಗಳನ್ನು ಒ ಬ್ಬರಿಂದೊಬ್ಬರಿಗೆ ಅಂಟಿಸತಕ್ಕ ಮುಖ್ಯ ಸಾಧನಗಳು. ವಾಂ ತಿಭೇದಿ, ಆಮಶಂಕೆ, ಸನ್ನಿಜ್ವರ, ಮುಂತಾದುವೆಲ್ಲ ನೊಣಗ ಳಿಂದಲೇ ಹರಡುವುವು. ಈ ನೊಣಗಳನ್ನು ನಿವಾರಿಸುವುದ ಕ್ಕೆ ಮನೆಯ ಆಜೂಬಾಜುಗಳಲ್ಲಿ ಯಾವ ಬಗೆಯ ಕಲ್ಮಲಗಳೂ ಸೇರದಂತೆ ಎಚ್ಚರ ತೆಗೆದುಕೊಂಡರೆ ಸಾಕಾಗಿದೆ.

.. ...

ವಿಷಮ ಸನ್ನಿಪಾತಜ್ವರದ ಕ್ರಿಮಿಗಳು ಒಂದೂವರೆ ಮೊ ದಲು ಎರಡು ದಿನಗಳವರೆಗೆ ಕಾಯುವ ಬಿಸಿಲಿನಲ್ಲಿಟ್ಟರೆ ನಿಶ್ಯೇ ಷವಾಗಿ ಸಾಯುವುವು. ಕ್ಷಯರೋಗ ಕ್ರಿಮಿಗಳು ಕೆಲವು ನಿಮಿಷಗಳಲ್ಲಿ, ಹೆಚ್ಚೆಂದರೆ, ಕೆಲವು ಘಂಟೆಗಳಕಾಲದಲ್ಲಿಯೇ ಸಾಯುವುವು. ಆದುದರಿಂದ ದಿನಂಪ್ರತಿ ಸ್ವಲ್ಪಹೊತ್ತು ಸೂ ರ್ಯರಶ್ಮಿಯಲ್ಲಿರುವುದೇ ಮೇಲ್ಕಂಡ ರೋಗಿಗಳಿಗೆ ಉತ್ತಮ ಚಿಕಿತ್ಸೆ.

.... . ....

ಒಬ್ಬ ಮನುಷ್ಯನು ತನ್ನ ಸ್ವಂತ ಆಚರಣೆಯಿಂದ ಮೂ ವತ್ತು ವರ್ಷದಲ್ಲಿಯೇ ಮುದುಕನಾಗಿ ಸಾಯಬಹುದು. ಅ ಥವಾ ಎಂಬತ್ತು ವಯಸ್ಸಿನಲ್ಲಿಯೂ ಯುವಕನಾಗಿ ಸಂತೋ ಷಿಸಬಹುದು. ಶುದ್ಧವಾದ ಗಾಳಿಯನ್ನು ಶ್ವಾಸಿಸುವುದು, ಹಿತವಾದ ಮತ್ತು ಪಥ್ಯವಾದ ಆಹಾರ ಸೇವನೆ, ಶುದ್ಧವಾದ ನೀರನ್ನು ಕುಡಿಯುವುದು, ಶುಚಿಯಾಗಿರುವುದು, ಸಕಾಲದಲ್ಲಿ ನಿದ್ರೆ, ಮೈಬಗ್ಗಿ ಕೆಲಸಮಾಡುವುದು, ವ್ಯಾಯಾಮಗಳಿಂದ ಸ್ನಾಯುಗಳಿಗೆ ಬಲಕೊಡುವುದು, ಮದವ್ಯಾಪಕಗಳನ್ನು ತ್ಯ ಜಿಸುವುದು, ಮಿತಜೀವನ, ಇವೆಲ್ಲಾ ಚಿರಾಯುಷ್ಯದ ಮಾರ್ಗ ಗಳು.

. ...

ವಾಸಮಾಡತಕ್ಕ ಮನೆಯು ತೇವವಿಲ್ಲದೆಯೂ, ಗಾಳಿಬೆ ಳಕಿಗೆ ಧಾರಾಳವಾದ ಅವಕಾಶವುಳ್ಳುದಾಗಿಯೂ ಇರಬೇಕು.

ಮನೆಯ ಸ ತ್ತಲೂ ತುಚಿಯಾಗಿ ನೀರೋಟವುಳ್ಳ ಚರಂಡಿಗಳಿರಬೇಕು. ದನದ ಕೊಟ್ಟಿಗೆ, ಲಾಯ ಮುಂತಾದವು ಮನಗ ದೂರವಾಗಿರಬೇಕು. ಮನೆಗೆ ಸ್ವಲ್ಪದೂರ ಬಟ್ಟು ಮರಗಳನ್ನು ಬೆಳಸಿಡಬೇಕು. ಒಡಳ ಸಮೀಪದಲ್ಲಿ ಮರಗಳಿದ್ದರೆ ಗಾಳಿ ಬೆಳಕಿಗೆ ಅಡ್ಡಿಯಾಗುವುದು.

ಸೊಣ ಚಿಗಟ, ತಿಗಣೆ, ಸೊಳ್ಳೆ, ಇಂಥ ಕೀಟಗಳನ್ನು ಕೊಲ್ಲುವುದಕ್ಕೆ ಮೂರು ಪಾಲು ಸಾಧಾರಣವಾದ ಸೋಪನ್ನೂ, 1೦ ಪಾಲು ನೀರನ್ನೂ, 82 ಪಾಲು ಸೀಮೆಯೆಣ್ಣೆಯನ್ನೂ ಸೇರಿಸಿ ಮಾಡಿದ ಮಿಶ್ರಣವು ಉತ್ತಮಸಾಧನವೆನಿಸಿದೆ. ನೀರಿಗೆ ಸೋಪನ್ನು ಹಾಕಿ ಕಾಯಿಸಿ ಅದು ಕರಗಿದಮೇಲೆ, ಅದಕ್ಕೆ ಸೀಮೆಯೆಣ್ಣೆಯನ್ನು ಬಿಟ್ಟು ಕದಡಿದರೆ ಈ ದ್ರಾವಕವಾಗುವುದು. ಈ ಮಿಶ್ರಣದಲ್ಲಿ ಸಾವಿರದಲ್ಲಿ ಒಂದು ಪಾಲನ್ನು ಪಯೋಗಿಸಿದರೂ, ಅದರಲ್ಲಿ ಷಟ್ಪಕ್ರಿಮಿಗಳು ಎರಡು ನಿಮಿಷಗಳೊಳಗಾಗಿ ಸಾಯುವುವು. "ಆ ಚ"

## ಫೋಟೋ ಕ್ಯಾಮರಾ.

ಈ ಫೋಟೋ ಕ್ಯಾಮರಾಗಳು ವಿಲಾಯತಿಯಲ್ಲಿ ತಯಾರಾದವು. ಈ ಕ್ಯಾಮರಾಗಳಲ್ಲಿ ಒಬ್ಬರ ಸಹಾಯವಿಲ್ಲದೆ



ಎಷ್ಟು ಮಂದಿಗಾದರೂ ಫೋಟೋಗಳನ್ನು ತೆಗೆಯಬಹುದು. ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನ ಮಾಡಬಹುದು. ಪೋಸ್ಟ್ ಕಾರ್ಡಿನ ಸೈಜಿನಲ್ಲಿ ಫೋಟೋಗಳನ್ನು ಎಷ್ಟು ಮಂದಿಗಾದರೂ ತೆಗೆಯಬಹುದು. ಫೋಟೋ ತೆಗೆಯುವದನ್ನು ಕಲಿತುಕೊಳ್ಳಬೇಕಾಗಿಲ್ಲ. ಕ್ಯಾಮರಾ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನು ಕಳುಹಿಸುವೆವು.

ಕ್ರಯ 1ಕ್ಕೆ 1—8—0

ವಿಳಾಸ — ಕೆ. ನಾಥಮುನಿ ಅಂಡ್ ಸನ್ಸ್,
168. ಚೈನಾ ಬಜಾರ್ ರೋಡ್, ಮದರಾಸು.

## ಕಮ್ಮಿ ಕರೀದಿಯನ್ನು ನೆನಪಿನಲ್ಲಿಡಿ!
## ಲೋಕವಿಖ್ಯಾತವಾದ "ಜಿಗ್ ಜೀಗ್"



ಟೈಂಪೀಸ್ ಸೈಜು 8 × 4½'
ಬೆಲೆ ರೂ. 3—0—0 ಮಾತ್ರ.
3 ವರ್ಷ ಖಾತ್ರಿಕೊಡುತ್ತೇವೆ

ಈ ಟೈಂಪೀಸು ಬಹಳ ಉತ್ತಮವಾದ ಮತ್ತು ಬಲವಾದ ಆತಿಯಾರಗಳಿಂದ ಮಾಡಲ್ಪಟ್ಟು, ಚಿತ್ರದಲ್ಲಿ ತೋರಿಸಿರುವಂತೆ ಸುಂದರವಾದ ಕತ್ತನೆಯ ಸ್ಟಾಂಡ್‌ನೊಳಗೆ ಇರಿಸಲ್ಪಟ್ಟದೆ. ನೋಡಲು ಸುಂದರವಾಗಿಯೂ ಸರಿಯಾದ ಗಂಟೆಯನ್ನು ತೋರಿಸುವುದಾಗಿಯೂ ಇರುವ ಈ ಟೈಂಪೀಸನ್ನು ಅನೇಕರು ಉಪಯೋಗಿಸಿ ತೃಪ್ತಿಪಡೆಂದಿದ್ದಾರೆ.

ಇಂದಾ ಟೈಂಪೀಸಿಗೆ 3—0—0 ರೂ ಮಾತ್ರ ಬೆಲೆ.

ಏಜಂಟರು — ಧೈರ್ಯಲಕ್ಷ್ಮಿ ಅಂಡ್ ಕಂಪೆನಿ,
ಪೋಸ್ಟು ಬಾಕ್ಸು ನಂ 265.
52—2 ಮದ್ರಾಸು.

## ಪುತ್ರ ಸಂತಾನದ ಎಣ್ಣೆ.



ಈ ಎಣ್ಣೆಯು ಒಬ್ಬ ದೊಡ್ಡ ಪಂಡಿತರಿಂದ ತ[...]ದ್ದು. ಹೆಂಗಸರಿಗೆ ಅನೇಕ ಕಾರಣಗಳಿಂದ ಗರ್ಭವು [...]ದಿಲ್ಲ. ಕೆಲವರಿಗೆ 3—4 ತಿಂಗಳ ಕಾಲ[...] ನಂತರ ಹೋಗಿಬಿಡುವದು. ಇಂದಾ[...]ದು ಈ ಎಣ್ಣೆಯನ್ನು 15 ದಿನಗಳು ಸೇ[...]ಂದ ಗರ್ಭವು ನಿಂತು ಪುತ್ರ ಸಂತಾನವಾಗ[...] ಕಲವು ಹೆಂಗಸರಿಗೆ ಮುಟ್ಟಾಗುವ ಸಮ[...]ಯೂ, ಮುಟ್ಟಾದನಂತರವೂ ಉಂಟಾಗು[...]ಟ್ಟೆ ನೋವು ಮುಂತಾದವುಗಳನ್ನು ಖಂ[...]ಣ ಪಡಿಸುವದು. ಈ ಎಣ್ಣೆಯನ್ನು ಮೈ[...]ಯಿ, ಮದರಾಸು ಅಧಿಪತ್ಯಗಳಲ್ಲಿ ಮಕ್ಕ[...]ವರು ಉಪಯೋಗಿಸಿ ಪುತ್ರ ಸಂತಾನ ಪಡೆದಿರುವರು[...]ದು ಬಾಟ್ಲಿಯನ್ನು ತರಿಸಿ ಪರೀಕ್ಷಿಸಿರಿ. ಉಪ[...]ಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸುತ್ತೇವೆ.

ಕ್ರಯ ಬಾಟಲ್ 1ಕ್ಕೆ 2—8—0.

ವಿಳಾಸ — ಕೆ. ಎನ್ ರಾಧಾಕೃಷ್ಣ ಬ್ರದರ್ಸ್,
109. ಚೈನಾ ಬಜಾರ್ ರೋಡ್,
52—13 ಮದರಾಸು.

## ರಬ್ಬರ್ ಸ್ಟಾಂಪ್ ಇನಾಮು.
## ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚುಗಳು.

ಈ ಚಿತ್ರದಲ್ಲಿ[...] ಣುವ ರೋ[...] ಗೋಲ್ಡ್ ವಾಚುಗಳು ಮೇಲಾದ ಗಟ್ಟಿ ಮಾಸುಗಳಿಂದ (ಸ್ವಿಸ್‌ಮೇಡ್) ತಯಾರಿಸಿವೆ. ಖರಾರು ಟೈಮನ್ನು ತೋರಿಸುವವು. ಇದರ ಕೇಸು ಬಂಗಾರಕ್ಕೆ ಸಮನಾಗಿರುವದು. ಇವಕ್ಕೆ ಖಾತ್ರಿಯಾದ ೩ ವರ್ಷ[...]ರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾ[...] ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿಯೊಬ್ಬರ ಹ[...] ವಿಳಾಸ, ಪೋಸ್ಟು ಮುಂತಾದವುಗಳನ್ನು ಪ್ರಿಂಟುಮಾಡ[...] ಬಹುದಾದ ಹೊಸ ನಮೂನೆಯ ರಬ್ಬರ್ ಸ್ಟಾಂಪನ್ನು ಇಂ[...] ಪ್ಯಾಡ್ ಸಹಿತ ಇನಾಮಾಗಿ ಕೊಡುವೆವು.

ಕ್ರಯ ರಿಸ್ಟ್ ವಾಚ್ 1ಕ್ಕೆ 6—4—0.

ವಿಳಾಸ — ಲೀಗಲ್ ಟ್ರೇಡಿಂಗ್ ಕಂಪೆನಿ,
52—13 ಪೊ. ಬಾಕ್ಸ್ ನಂ. 24[...],
ಮದರಾಸು

## ನೂರಾರು ಔಷಧಗಳೇಕೆ?

ಪ್ರತ್ಯಕ್ಷ ಕಲ್ಪತರುವೇ ಔಷಧರೂಪವಾಗಿ ಅವತರಿಸಿದೆ.

# ಕಲ್ಪತರು ಮಿಶ್ರಣ

ಮಲೇರಿಯಾ ನಿವಾರಕ

ಇಂಡಿಯಾ ಗವರ್ನಮೆಂಟಿನಲ್ಲಿ ರಿಜಿಸ್ಟರಾಗಿದೆ

ಎಷ್ಟು ಕಾಲದ ನರಳಿಕೆಯಾದರೂ ಇನ್ನೂ ಇತರ ಔಷಧಗಳಿಗೆ ಮಣಿಯದ ಮಲೇರಿಯಾ ಜ್ವರ, ಇನ್‌ಫ್ಲುಯೆಂಝಾ, ನ್ಯುಮೋನಿಯಾ ಮೊದಲಾದವುಗಳಿಂದ ಸುಮ್ಮನೆ ಮತ್ತೂ ನರಳುವಿರೇತಕ್ಕೆ? ಪ್ರತ್ಯಕ್ಷ ಕಲ್ಪತರುವೇ ಅವತಾರವೆತ್ತಿ ಬಂದಿರುವಂತೆ ನಿಮಗೆ ಆರೋಗ್ಯದಾನವನ್ನು ಮಾಡಲು ಇದೊಂದು ಸಿದ್ಧೌಷಧವು ಇದೆ ಎಂಬುದನ್ನು ಮರೆಯಬೇಡಿರಿ. ಸಾಮರ್ಥ್ಯವಂತವಾದ ಈ ಔಷಧವು ಮೊದಲನ ಗುಟುಕಿನ ಸೇವನೆಯೊಡನೆಯೇ ರೋಗಿಗಳಿಗೆ ಗುಣಮುಖವಾಗುವಂತೆ ಮಾಡುವ ಶಕ್ತಿಯುಳ್ಳದಾಗಿದೆ. ಇದೊಂದು ಔಷಧವು ನಿಮ್ಮಲ್ಲಿದ್ದರೆ ಬೇರೆ ಬಯವೇಕೆ? ಯಾವತ್ತೂ ಬಗೆಯ ಜ್ವರಗಳ ಮೇಲೆ ಅದರಲ್ಲೂ ಯಕೃತ್ ಪ್ಲೀಹಗಳು ವಿಕಾರ ಹೊಂದಿಬಂದಾಗಲೂ, ಜ್ವರಗಡ್ಡೆ ಬೆಳೆದು ದೇಹವು ಅಶಕ್ತಿ ಹೊಂದಿದಾಗಲೂ, ಇದೊಂದೇ ಔಷಧವು ಸಂಪೂರ್ಣ ಗುಣವನ್ನುಂಟುಮಾಡಿ, ರೋಗೋತ್ಪಾಟನವನ್ನು ಸಾಧಿಸುವುದು ಎಂಬುದಕ್ಕೆ ಸಾವಿರಾರು ರೋಗಿಗಳು ಗುಣಹೊಂದಿ ಅದನ್ನು ಹೊಗಳುತ್ತಿರುವುದೇ ಸಾಕ್ಷಿಯಾಗಿದೆ. ಅದೂ ಅಲ್ಲದೆ, ಹಕೀಮರು, ವೈದ್ಯರು, ಪದವೀಧರ ಡಾಕ್ಟರು, ಕೆಮಿಸ್ಟರೇ ಮೊದಲಾದ ಔಷಧ ವ್ಯಾಪಾರಿಗಳು ಸಹ ಅದನ್ನೇ ಹೊಗಳುತ್ತಾರೆ. ಅನಾರೋಗ್ಯವನ್ನು ಹೋಗಲಾಡಿಸಿ, ಆರೋಗ್ಯವನ್ನು ಪರಿವರ್ಧಿಸಿ ಕೊಡುವ ಕಲ್ಪತರು ಮಿಶ್ರಣವನ್ನು ಎಲ್ಲೆಲ್ಲಿಯೂ ಪಡೆಯಬಹುದು. ಬೇಕಾದರೆ ನಮಗೇ ಬರೆಯಿರಿ. ನಾಹಿತಿ ಪತ್ರಗಳೂ ಸಿಕ್ಕುತ್ತವೆ. ಇದು ಅಲ್ಲದೆ ನಮ್ಮಲ್ಲಿ ಎಲ್ಲಾತರದ ಆಯುರ್ವೇದೀಯ ಔಷಧಗಳು ಯಾವಾಗಲೂ ಸಿದ್ಧವಾಗಿವೆ.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ

12—2 ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,
ಮಂಗಳೂರು, (ದಕ್ಷಿಣ ಕನ್ನಡ)

## ನೀವು ನಿರ್ಬಲಸ್ತರಾಗಿ ಯಾಕೆ ನರಳುವಿರಿ?

ಇಪ್ಪತ್ತು ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

# ಸಾಲಂಮಿಸ್ರಿ ಮುರಬ್ಬ

ಕೇವನೆಯಿಂದ ಎಂಥಾ ಧಾತು ಒಸ್ಮವಿಕಾರಗಳನ್ನೂ, ನರಗಳ ಶಕ್ತಿ ಕುಂದಿಹೋಗಿರುವದನ್ನೂ ಮೆದುಳಿನ ಬಲಹೀನತೆಯನ್ನು ಇಂಥಾ ರೋಗಗಳನ್ನೆಲ್ಲಾ ಯಕ್ಷಿಣಿಯಂತೆ ಮಾಯಹೊಂದಿಸತಕ್ಕ ತನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸುತ್ತದೆ. ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ಮಹನೀಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ಯಾರೂ ತರಿಸಿ ನೋಡಬಹುದು. ಒಂದು ಡಬ್ಬ ೧೫ ದಿನಗಳ ಸೇವನೆಯಿಂದಲೇ ಇದರ ಗುಣವು ತೋರಬರುವುದು. ೨೪ ಡಬ್ಬಿಗಳ ಸೇವನೆಯಿಂದ ಜನ್ಮಾಂತ್ಯದವರಿಗೂ ಸಂಪೂರ್ಣ ಗುಣವನ್ನುಂಟುಮಾಡುವದು. ನಮ್ಮ ಟ್ರೇಡ್ ಮಾರ್ಕು ನೋಡಿ ಡಬ್ಬಾ ತೆಗೆದುಕೊಳ್ಳಿರಿ. ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಅವಶ್ಯಕವಿರುತ್ತೆ.

ಕ್ರಯ ಡಬ್ಬ ೧ಕ್ಕೆ ೨—೦—೦. ಟಪ್ಪಾಲು ಖರ್ಚು ೧ರಿಂದ ೪ ಡಬ್ಬಾಗಳವರೆಗೆ ೦—೮—೦.

ಡಿ. ಮುನ್ನಾಲಾಲ್,
12—4 ಡಿಲ್ಲಿ ನೇಟೀವ್ ಡಾಕ್ಟರು, ಸಾಲಂಮಿಸ್ರಿ ಮುರಬ್ಬ ಫಾರ್ಮಸಿ, ಬೆಂಗಳೂರು ಸಿಟಿ.

## ಫ್ಯಾನ್ಸಿ ಲೀವರ್ ಪಾಕೇಟ್ ವಾಚ್

(15 ಬಹುಮಾನಗಳು ಸಹಿತ ರೂ. 4—8—0)

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಿ ರಿಜಿಸ್ಟರಾ[...]

ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, [...]ಗೆ ಅಡಕವಾಗಿಯೂ ಇರುವಂತೆ ಚಿಕ್ಕ ಸೈಜಿನಲ್ಲಿ ತಯಾ[...] ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು. ಮತ್ತು



[...]ಗಡೆ ಕೆಂಪು ಕ[...]ಟ್ಟು ಗಿಲ್ಟ್ [...]ಮೆಂಟಾ ಮಾ[...]ವದ. ನಾಳೆ[...]ಳು ಸೇರದಂತೆ[...] ಭಾಗದಲ್ಲಿ [...]ಗ್ಲಾಸ್ ಡೂ[...] ಇರುವದು[...]ದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋ[...]ಸುವಂತೆ ಲೀವರ್ ಮೂವೆಂಟುಗಳಿಂದ ಈ ಗಡಿಯಾರವ[...] ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗ[...]ದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. [...]ಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿ[...]ಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ [...]ತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆ[...] ಬಹುಮಾನಗಳ ವಿವರ — ಫೌಂಟನ್ ಪೆನ್ 1. ಹೇ[...]ಯಿಲ್ ಬಾಟಲ್ 1 ವಜ್ರದ ಗುಂಡಿಗಳು 4 ಪಾಕೆಟ್ ಕನ್[...] 1 ಗಡಿಯಾರದ ಸರಪಣಿ 1 ಸುವಾಸನೆ ಸೋಪು 1 ಪೆ[...] ಕತ್ತಿ 1 ರೋಲ್ಡ್ ಗೋಲ್ಡ್ ಬಂಗಾರದ ಉಂಗುರ 1 [...]ಲ್ಡ್ ಗೋಲ್ಡ್ ಬಂಗಾರದ ನೆಕ್‌ಲೇಸ್ ಎಂಬ ಕತ್ತಿನ ಹ[...] 1 ದಂತದ ಬಾಚಣಿಗೆ 1. ಕೈ ಗುಂಡಿಗಳ ಸೆಟ್ 1. ಕ[...]ತ್ರ. ಈ 15 ಬಹುಮಾನಗಳು ಮತ್ತು ಖಾತ್ರಿಯಾದ 3 ವ[...] ಗ್ಯಾರಂಟಿ ಸಹಿತ ಗಡಿಯಾರ 1ಕ್ಕೆ ಕ್ರಯ ರೂ 4[...]

ವಿಳಾಸ — ವಿ. ಎಸ್. ವಾಚ್ ಕಂಪೆನಿ,
ಪೋಸ್ಟು ಬಾಕ್ಸ್ ನಂ. 15[...]
ಮದ[...]

... ಜನಗಳಿಗೆ ... ಸಾಲುಗಳನ್ನು ಕೊಟ್ಟು ಮೋಸಪಡಿಸುತ್ತಿರುವರು. ಆದ್ದರಿಂದ ನಮ್ಮ ಛಾಂಗಿ ...ವಾಗ ಡಿ ಮನ್ನಾಲಾಲ್, ನೇಟೀವ್ ಡಾಕ್ಟರು, ಬೆಂಗಳೂರು ಸಿಟಿ ಎಂದು ಮತ್ತು ನಿಮ್ಮ ಕಣ್ಣಿನ ಎದುರಿನಲ್ಲಿ ಕಾಣುತ್ತಿರುವ ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಆಗಿರುವ ಟ್ರೇಡ್‌ಮಾರ್ಕ ಇರುವುದನ್ನು ನೋಡಿ ತೆಗೆದುಕೊಳ್ಳಿರಿ ಹಾಗೆ ನೋಡದೆ ತೆಗೆದುಕೊಂಡರೆ ಮೋಸ ಹೋಗುವಿರಿ. ಯಾಕೆಂದರೆ ಬಹಳ ಜನಗಳು ನಮ್ಮ ಕ್ಯಾಟಲಾಗಿನಂತೆಯೇ ಬೇರೆಯೊಂದನ್ನು ತಯಾರ್ಮಾಡಿ ಜನಗಳಿಗೆ ಮೋಸಪಡಿಸುತ್ತಿರುವರು ನಮ್ಮ ಕಂಪನಿಯು ಕಳೆದ ೨೦ ವರ್ಷಗಳಿಂದಲೂ ಬಹಳ ಹೆಸರುವಾಸಿಯನ್ನು ಪಡೆದಿರುವದು ಮತ್ತು ಪ್ರತಿದಿನವೂ ಹೈದ್ರಾಬಾದ್, ಮದ್ರಾಸ್, ಬೊಂಬೈ, ಕಲ್ಕತ್ತಾ, ರಂಗೂನ್, ಬರ್ಮಾ, ಕೊಲಂಬೊ, ಸಿಲೋನ್, ಪೀನಾಂಗ್ ಸಿಂಗಪೂರ್ ಮುಂತಾದ ದೇಶಗಳಿಂದ ನಮಗೆ ಆರ್ಡರುಗಳು ಬರುತ್ತಿರುವದು ಮೇಲ್ಕಂಡ ದೇಶದ ಜನಗಳು ನಮ್ಮ ಕಂಪನಿಯ ಔಷಧವನ್ನು ಉಪಯೋಗಿಸಿ ಯೋಗ್ಯತಾಪತ್ರಿಕೆಗಳನ್ನು ತಾವಾಗಿಯೇ ಕೊಟ್ಟಿರುವರು. ಬೇಕಾದವರು ನಮ್ಮ ಕಂಪೆನಿಗೆ ಎಂದುನೋಡಬಹುದು ನಮ್ಮ ಕಂಪೆನಿಯ ಔಷಧವನ್ನು ಒಂದಾವರ್ತಿ ಪರೀಕ್ಷಿಸುವುದರಿಂದ ಸುಳ್ಳುನಿಜವೆಂಬುದು ಕಂಡುಬರುತ್ತದೆ

# 1000 ರೂಪಾಯಿಗಳ ಬಹುಮಾನ.

## ಲೋಕಪ್ರಸಿದ್ಧವಾದ

# ಸಾಲಂಮಿಸ್ರಿಮುರಬ್ಬ

## ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಿರುತ್ತದೆ.

ಈ ದಿನವು ನಾಳೆಯೂ ಬಹಳ ಜನರು ಉಪಯೋಗಕ್ಕೆ ಬಾರದ ಔಷಧಗಳನ್ನು ಬಹಳವಾಗಿ ಹೊಗಳಿ ಪ್ರಕಟನೆಗಳ ಮೂಲಕ ಪ್ರಚುರಪಡಿಸಿ ಜನಗಳಿಗೆ ಬಹಳ ಮೋಸಪಡಿಸುತ್ತಿರುವರು ಇದರಿಂದ ನಮ್ಮ ಔಷಧವು ಸುಳ್ಳೆಂದು ತಿಳಿಯುತ್ತಾರೆಂದು ನನಗೆ ಭಯವಾಗುತ್ತಿದೆ. ಆದ್ದರಿಂದ ಒಂದಾವರ್ತಿ ನಮ್ಮ ಔಷಧವನ್ನು ತರಿಸಿ ಪರೀಕ್ಷಿಸಿದರೆ ಸುಳ್ಳು ನಿಜವೆಂಬುವುದು ತಿಳಿಯುತ್ತೆ

ಜೀವನಿಗೆ ರಕ್ತವೇ ಪ್ರಾಣಾಧಾರವು ಮನುಷ್ಯರು ಆರೋಗ್ಯದಿಂದ ಇರುವಿಕೆಗೂ, ಆಯುಸ್ಸು, ಬಲ, ತೇಜಸ್ಸು, ಸಂತಾನ ಉಂಟಾಗುವಿಕೆಯೂ ರಕ್ತದಿಂದ ಉತ್ಪನ್ನವಾಗುವ ಧಾತುವೆ ಮೂಲಾಧಾರವು. ಶರೀರವು ಐಹಿಕಾಮುಷ್ಮಿಕಗಳಿಗೆ ಸಾಧನವಾದುದೆಂಬುದು ಎಲ್ಲರಿಗೂ ತಿಳಿದವಿಷಯವೇ ಅಹುದು ಅಂಥಾ ಶರೀರಕ್ಕೆ ಮೂಲಾಧಾರವಾದ ಧಾತುವಿನ ನೈರ್ಮಲ್ಯಕ್ಕೆ ತಕ್ಕಹಾಗೆಯೆ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೂ ಬುದ್ಧಿಗೂ ಪಟುತ್ವವು ಉಂಟಾಗುತ್ತದೆಂದು ಶಾಸ್ತ್ರಗಳಿಂದಲೂ ಅನುಭವದಿಂದಲೂ ವಿಶದವಾಗುತ್ತದೆ. ಧಾತುವಿನ ಸಂಪೂರ್ಣ ಸುಸ್ಥಿತಿಯಿಂದಲೇ ಯೋಗಿಗಳು ಚಿರಕಾಲ ಆರೋಗ್ಯ ದೃಢಕಾಯರಾಗಿ ಜೀವಿಸಿರುವರು ಆದುದರಿಂದ ದೇಹಸ್ಥಿತಿಯನ್ನು ನಿರ್ದುಷ್ಟವಾಗಿ ಕಾಪಾಡಿಕೊಳ್ಳಬೇಕಾದದು ಅತ್ಯಾವಶ್ಯಕವು

ಶರೀರಕ್ಕೆ ಮೂಲಕಾರಣವಾದಧಾತುವಿನ ಸ್ವಭಾವವನ್ನು ಗುರುತರಿಯದೆ ಸ್ವೇಚ್ಛೆಯಂತೆ ಪ್ರವರ್ತಿಸುವದರಿಂದ ಶಕ್ತಿಯನ್ನು ನಾಶಪಡಿಸಿಕೊಳ್ಳುವರಲ್ಲದೆ ನಾನಾವ್ಯಾಧಿಗಳ ಸಂಬಂಧದಿಂದ ಮರಣ ಪರಿಯಂತರವೂ ವ್ಯಸನಪಡುವರು ಕೆಲವರು ಬಾಲ್ಯದಲ್ಲಿಯೇ ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಳ್ಳುವರು ಅಂಥಾವರಿಗೆ ಹೃದಯಕೋಶವು ಬಲಹೀನವಾಗಿ ತನ್ನಿನಲ್ಲಿದ್ದ ಗುಣವು ಕೆಟ್ಟುಹೋಗುವದು. ಅಂಥಾವರಿಗೆ ವಯಸ್ಸುಬಂದು ಸಂಪರ್ಕದಲ್ಲಿ ಕೋರಿಕೆಯುಂಟಾದಲ್ಲಿ ಶಕ್ತಿಇಲ್ಲದೆ ಹೋಗುವದು ಆದಕಾರಣ "ಶರೀರ ಮಾದ್ಯಂ ಖಲು ಧರ್ಮಸಾಧನಂ" ಎಂಬ ವಚನದಿಂದ ಪ್ರಾಪಂಚಿಕವಾದ ಸಕಲವಿಧಸೌಕರ್ಯಗಳಿಗೆ ಮನುಷ್ಯದೇಹವು ಮುಖ್ಯಸಾಧನವಾಗುವುದರಿಂದ ಇದಕ್ಕೆ ಅಪಾಯಕರಗಳಾದ ರೋಗಗಳಿಂದಲೂ ಅದನ್ನು ಕಾಪಾಡಿಕೊಳ್ಳುವಬಗ್ಗೆ ಮನುಷ್ಯರು ಸರ್ವಪ್ರಯತ್ನದಿಂದಲೂ ಆರೋಗ್ಯವೆಂಬ ಭಾಗ್ಯವನ್ನು ಪಡೆಯತಕ್ಕದ್ದು ಮುಖ್ಯಕರ್ತವ್ಯವಾಗಿರುವುದು

ಪ್ರಿಯ ಸಹೋದರರೇ ನಿಮ್ಮ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರ್ಮಾಡಿರುವ "ಸಾಲಂಮಿಸ್ರಿಮುರಬ್ಬ" ವನ್ನು ಸೇವಿಸಿ

ಸಾಲಂಮಿಸ್ರಿಮುರಬ್ಬಾವು—ನೀರಿನಂತಿರುವಧಾತುವನ್ನು ಘಟ್ಟಿಪಡಿಸುವುದು.

ಸಾಲಂಮಿಸ್ರಿಮುರಬ್ಬಾವು—ನಿದ್ರೆಯಲ್ಲಿ ಧಾತುಹೋಗುವುದನ್ನು ನಿಲ್ಲಿಸುವುದು

ಸಾಲಂಮಿಸ್ರಿಮುರಬ್ಬಾವು—ಸ್ತ್ರೀಸಂಗಕ್ಕೆ ಮೊದಲೇ ಧಾತುಸ್ಖಲನವಾಗುವುದನ್ನು ನಿಲ್ಲಿಸುವದು.

ಸಾಲಂಮಿಸ್ರಿಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.

ಸಾಲಂಮಿಸ್ರಿಮುರಬ್ಬವು—ಮೂತ್ರದಲ್ಲಿ ಧಾತುಹೋಗುವುದನ್ನು ನಿಲ್ಲಿಸುವುದು.

ಸಾಲಂಮಿಸ್ರಿಮುರಬ್ಬಾವು—ಕ್ಷಣಕ್ಷಣಕ್ಕೂ ಮೂತ್ರವಾಗುವುದನ್ನು ನಿಲ್ಲಿಸುವುದು

ಸಾಲಂಮಿಸ್ರಿಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವನ್ನು ಹೋಗಲಾಡಿಸುದು.

ಸಾಲಂಮಿಸ್ರಿಮುರಬ್ಬಾವು—ಕೆಟ್ಟು ಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಬೆಳಸುವುದು

ಸಾಲಂಮಿಸ್ರಿಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವುದು.

ಸಾಲಂಮಿಸ್ರಿಮುರಬ್ಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನು ಮಾಡುವುದು.

ಸಾಲಂಮಿಸ್ರಿಮುರಬ್ಬವು— ಉತ್ಸಾಹ, ಧೈರ್ಯ, ಬುದ್ಧಿ, ಕುಶಲತೆ, ಶರೀರಕಾಂತಿಯನ್ನುಕೊಡುವುದು.

ಸಾಲಂಮಿಸ್ರಿಮುರಬ್ಬವು—ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವು

ಸಾಲಂಮಿಸ್ರಿಮುರಬ್ಬವು—ಶ್ವಾಸಕೋಶರೋಗಗಳನ್ನು ನಾಶಪಡಿಸುವದು.

ಸಾಲಂಮಿಸ್ರಿಮುರಬ್ಬಾವು—ಇದಕ್ಕೆ ತಾಂಮ್ರ, ಬೆಳ್ಳಿ, ಭಂಗಾರ ಭಸ್ಮಗಳು ಎಷ್ಟುಮಾತ್ರವೂ ಸಮಾನವಾಗಲಾರವು.

ಈ ಸಾಲಂಮಿಸ್ರಿ ಎಂಬುವದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬೆಳೆಯುತ್ತದೆ. ಅಲ್ಲಿಯ ಜನರು ಸಾಲಂಮಿಸ್ರಿಯ ಹಣ್ಣನ್ನು ಬಹಳ ತಿನ್ನುವರು ...ತ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬಮನುಷ್ಯನಿಗೆ ನಮ್ಮದೇಶದ ...ಲ್ಲು ಜನಗಳು ...ದಿಗೂ ಸಮಾನವಾಗಲಾರರು ಸಾಲಂಮಿಸ್ರಿಯ ಮುರಬ್ಬಾವನ್ನು ಸೇವಿಸುವದರಿಂದ ...ದರ ಗುಣವನ್ನು ತಾನಾಗಿಯೇ ಪ್ರಕಾಶಪಡಿಸುವುದು. ಪ್ರತಿಯೊಬ್ಬರೂ ಮುರಬ್ಬಾದಲ್ಲಿ ಸಾಲಂಮಿ...ಸ್ರಿಯನ್ನು ನೋಡಬಹುದು. ಇದು ಬಹಳ ಮೃದುವಾಗಿಯೂ ತಿನ್ನುವುದಕ್ಕೆ ಬಹಳ ...ಯಾಗಿಯೂ ...ದೆ. ಅನೇಕರು ಸಾಲಂಮಿಸ್ರಿಯನ್ನು ಹಾಲಿನೊಂದಿಗೆ ಕಾಯಿಸಿ ಕುಡಿಯುವುದು ಸಾಧಾರಣ ...ವಾಡಿಕೆಯಲ್ಲಿಟ್ಟಿರುವರು. ಆದರೂ ಈ ಮುರಬ್ಬಾವಿನಲ್ಲಿರುವ ಗುಣವು ಅದಕ್ಕೆ ಬರಲಾರದು

ಸಾಲಂಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವುದರಿಂದ ಬಹಳ ಜನರು ಮರುಳುಗಡ್ಡೆ, ಕಾಮುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡಿದ್ದು ಸಾಲಂಮಿಸ್ರಿ ಯೆಂದು ಹೇಳಿಮೋಸಪಡಿಸುವರು ಈ ಮುರಬ್ಬಾವನ್ನು ಚನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಂಮಿಸ್ರಿಯೋ ಅಥವಾ ಬೇರೆತರಹದ್ದೋ ಎಂಬುವುದು ಚನ್ನಾಗಿ ತಿಳಿದು ಬರುತ್ತದೆ

ಈ ಮುರಬ್ಬವನ್ನು ಸೇವಿಸಿ ಗುಣಹೊಂದಿರುವ ಮೇಲ್ಕಂಡ ದೇಶಗಳ
ಅನೇಕ ಜನಗಳು ತಾವಾಗಿಯೇ ಕೊಟ್ಟಿರತಕ್ಕ ಯೋಗ್ಯತಾಪತ್ರಿಕೆಗಳು ಸುಳ್ಳೆಂದು
ವ್ಯಕ್ತಪಡಿಸುವವರಿಗೆ

## ೧೦೦೦ ರೂಪಾಯಿಗಳ ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ
ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು

ಈ ಮುರಬ್ಬಾವಿನಲ್ಲಿರುವ ಗುಣಕ್ಕೆ ೨೦ ರೂಪಾಯಿಗಳು ಬೆಲೆಯಿಟ್ಟರೂ ಬಹಳ ಕಡಿಮೆಯಾದ ಬೆಲೆಯೆಂದು ತಿಳಿಯತಕ್ಕದ್ದು ಈ ಬೆಲೆಯನ್ನು ಇಡುವುದರಿಂದ ಗುಣವು ಕೆಟ್ಟುಹೋಗಲಾರದೆಂದು ಲೋಕೋಪಕಾರಾರ್ಥವಾಗಿ ಡಬ್ಬಾ ೧ಕ್ಕೆ ೨—೦—೦ ರೂ. ಇಟ್ಟಿದೆ.

ಈ ಮುರಬ್ಬಾವನ್ನು ಪ್ರತಿಯೊಬ್ಬರೂ ಸ್ವಲ್ಪಸ್ವಲ್ಪವಾಗಿ ಸಾಲಂಮಿಸ್ರಿಯೊಂದಿಗೆ ಬಲಕೊಡುವಂಥಾ ಪದಾರ್ಥಗಳನ್ನು ಸೇರಿಸಿ ಕ್ರಮದಿಂದ ಮಾಡಿದ ತಯಾರುಮಾಡಿರುವೆವು ೧ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವದರಿಂದ ಗುಣವು ಖಂಡಿತವಾಗಿ ತೋರಬಹುದು ೨—೩ ಡಬ್ಬಿಗಳನು ಉಪಯೋಗಿಸುವದರಿಂದ ಜನ್ಮಾಂತರದವರೆವಿಗೂ ಸಂಪೂರ್ಣ ಗುಣಕೊಡುತ್ತದೆ

## ಕ್ರಯ ಡಬ್ಬಾ ೧ಕ್ಕೆ ೨ ರೂಪಾಯಿ

### ಟಪಾಲು ಖರ್ಚ ೧ ಡಬ್ಬಿಯಿಂದ ೩ ಡಬ್ಬಿಗಳವರಿಗೆ ೦-೮-೦

### ಅನುಪಾನ ಪತ್ರಿಕೆ ಡಬ್ಬಿಜೊತೆಯಲ್ಲಿಯೇ ಇರುತ್ತೆ.

ಬೆಂಗಳೂರು ಷಹರಿನಲ್ಲಿ ನನ್ನ ಕಂಪನಿಯು ಸ್ಥಾಪಿತವಾಗಿ ಸುಮಾರು ಇಪ್ಪತ್ತುವರುಷಗಳಾಗಿರುತ್ತೆ. ಯಾವ ಸಾಮಾನುಗಳು ಬೇಕಾದಾಗ್ಯೂ ನನ್ನ ಕಂಪೆನಿಗೆ ಆರ್ಡರು ಕೊಟ್ಟಲ್ಲಿ ಮಾತ್ರಿಯಾದ ಸಾಮಾನುಗಳನ್ನು ಸುಲಭ ಕಮೀಷನ್ ಮೇಲೆ ಕಳುಹಿಸಿಕೊಡುತ್ತೇವೆ ಯಾವಸಾಮಾನುಗಳಾಗಲಿ ಒಂದು ರೂಪಾಯಿಗಿಂತಲೂ ಕಡಿಮೆಯಾದಲ್ಲಿ ವಿ.ಪಿ ಯಲ್ಲಿ ಕಳುಹಿಸುವದಿಲ್ಲ ಒಂದಾವರ್ತಿ ಆರ್ಡರುಕೊಟ್ಟು ಅಜಮಾಯಿಷಿ ಮಾಡಿದಲ್ಲಿ ನಿಮಗೆ ಖಾತ್ರಿ ಉಂಟಾಗುತ್ತೆ. ಅರುಕಾಸಿನ ಕಾರ್ಡನ್ನು ಬರದರೆ ಯಾವ ಸಾಮಾನುಗಳು ಬೇಕೆಂದರೂ ನಿಮ್ಮ ಮನೆಯಬಾಗಲಿಗೆ ಬಂದು ಸೇರುವುದು ಸೂಚನೆ—ನಮಗೆ ಕಾಗದವನ್ನು ಬರೆಯುವವರು. ಹೆಸರ, ಗ್ರಾಮ ಹೋಬಳಿ, ತಾಲ್ಲೂಕು, ಡಿಸ್ಟ್ರಿಕ್ಟು, ಪೋಸ್ಟುಮುಂತಾದವುಗಳನ್ನು ಯಾವ ಭಾಷೆಯಲ್ಲಾಗಲಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು.

**ಡಿ. ಮನ್ನಾಲಾಲ್.**
**ಡೆಲ್ಲಿ ನೇಟೀವ್ ಡಾಕ್ಟರ್,**
**ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ**

ಈ ಕೆಳಗೆ ತಿಳಿಸಿರುವ ಮೂರು ಔಷಧಗಳಲ್ಲಿ ಅಂದರೆ ಚಂದ್ರಪ್ರಭಾಪತಿ ಹೇರಾಯಿಲಿನಲ್ಲಿ ೩ ದಿವಸಗಳೊಳಗೆ ಸುವಾಸನೆಯುಹೋದರೂ ದುರ್ವಾರ್ ರಂಗಿನಲ್ಲಿ ಕೂದಲು ಕಪ್ಪು ಆಗದಿದ್ದರೂ ಹೇರ್ ಡಿಸ್ಟ್ರಾಯರ್ ಪುಡಿಯಲ್ಲಿ ಕೂದಲು ಹೋಗದಿದ್ದರೂ 100—0—0 ರೂಪಾಯಿಗಳು ಬಹುಮಾನಕೊಡಲ್ಪಡುತ್ತೆ. ಹಾಗೆಕೊಡದೆ ತಪ್ಪಿದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು.

ರುವಿಗೂ ನೀವುಗಳು ಅನೇಕ ವಿಧವಾದ ಹೇರ್ ಆಯಿಲ್‌ಗಳನ್ನು ಹಚ್ಚಿ ಅಜಮಾಯಿಷಿ ಮಾಡಿರಬಹುದು. ಆದರೆ ಇದೊಂದು ಅಪ್ರತಿಮ ಹೆಸರುಗೊಂಡ ಸುಗಂಧ ಎಣ್ಣೆಯಾಗಿರುವ ತೈಲವು ಅವುಗಳೆಲ್ಲದಕ್ಕಿಂತಲೂ ಇದೇ ಒಂದು ಪ್ರತ್ಯೇಕವಾದ ಬಹಳ ಶ್ರೇಷ್ಠವಾದ ಆಯಿಲ್ ಆಗಿರುತ್ತದೆ. ಯಾತಕ್ಕೆಂದರೆ ಇದನ್ನು ಅನೇಕ ವಿಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತೆ. ಇದನ್ನು ಉಪಯೋಗಿಸುವುದರಿಂದ ತಲೆಯಲ್ಲಿ ಯಾವ ವಿಧವಾದ ನೋವು ಇದ್ದಾಗ್ಯೂ ತಲೆ ತಿರುಗುತ್ತಾ ಇದ್ದಾಗ್ಯೂ ಮೆದುಳಿನ ಶಕ್ತಿ ಕಡಿಮೆಯಾಗಿದ್ದಾಗ್ಯೂ ಕಣ್ಣುಗಳ ದೃಷ್ಟಿ ಮಂಜುಮಂಜಾಗಿದ್ದಾಗ್ಯೂ ಕಣ್ಣುಗಳಲ್ಲಿ ಉರಿ ಇದ್ದಾಗ್ಯೂ ತಲೆಯಲ್ಲಿ ಕೂದಲೇ ಇಲ್ಲದೆ ಬೋಳಾಗಿದ್ದಾಗ್ಯೂ ತಲೆಕೂದಲು ಬೇರುಸಹಿತ ಹಿರಿಯುತ್ತಾ ಇದ್ದಾಗ್ಯೂ ಬಾಲ್ಯ ಯೌವನವಯಸ್ಸಿನಲ್ಲೇ ಕೂದಲು ಬೆಳ್ಳಗೆ ಆಗುತ್ತಿದ್ದಾಗ್ಯೂ ಈ ತೈಲವನ್ನು ಹಚ್ಚಿದನಂತರ ಕೂದಲುಗಳನ್ನು ಹುಟ್ಟಿಸಿ ಕೂದಲಿನಂತೆ ಕಪ್ಪಗೂ ರೇಷ್ಮೆಯೋಪಾದಿಯಲ್ಲಿ ನಯವಾಗಿಯೂ ಮೃದುವಾಗಿಯೂ ತ್ವರಿಯಾಗಿಯೂ ಬೆಳೆಸುತ್ತದೆ.

ಈ ತೈಲವನ್ನು ಹಚ್ಚುವುದರಿಂದ ಕೂದಲನ್ನು ಉದ್ದವಾಗಿ ಬೆಳೆಸುತ್ತದೆ ಈ ತೈಲವು ವಿದ್ಯಾರ್ಥಿಗಳಿಗೂ ಮೆದುಳಿನ ಬುದ್ಧಿ ಶಕ್ತಿಯನ್ನು ಅನೇಕ ವಿಚಾರಗಳಲ್ಲಿ ಹೆಚ್ಚು ಉಪಯೋಗಿಸತಕ್ಕಂಥ ವರಿಗೂ ಇದು ಒಂದು ಗುಣಕಾರಿಯಾದ ಔಷಧಕ್ಕೆ ಔಷಧವಾಗಿರುತ್ತೆ. ಇದನ್ನು ಉಪಯೋಗಿಸುವುದರಿಂದ ಮೆದುಳಿನಲ್ಲಿ ರತಕ್ಕ ಎಲ್ಲಾ ವಿಧವಾದ ವ್ಯಾಧಿಗಳನ್ನು ಪರಿಹರಿಸಿ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುತ್ತದೆ. ಇದರ ಸುವಾಸನೆಯಾದರೋ ಉದ್ಯಾನವನದಲ್ಲಿ ಅಥವಾ ಹೂವಿನ ತೋಟದಲ್ಲಿ ಕೂತುಕೊಂಡರೆ ಎಷ್ಟರಮಟ್ಟಿಗೆ ಸುವಾಸನೆಯು ಹರ್ಷವೂ ಉಲ್ಲಾಸವೂ ಉಂಟಾಗುತ್ತದೊ ಈ ತೈಲವನ್ನು ಹಚ್ಚುವದರಿಂದಲೂ ಅದೇ ರೀತಿಯಾದ ಆನಂದವಾದ ಸುವಾಸನೆಯನ್ನುಂಟುಮಾಡುತ್ತದೆ. ಈ ತೈಲವು ಸ್ತ್ರೀ ಪುರುಷರಿಗೆ ಔಷಧಕ್ಕೆ ಔಷಧವೂ ಸುಗಂಧದ್ರವ್ಯಕ್ಕೆ ಸುಗಂಧದ್ರವ್ಯವೂ ಆಗಿರುವುದು. ಕಡಿಮೆ ತರದ ಹೇರ್ ಆಯಿಲ್‌ಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳುಮಾಡಿಕೊಳ್ಳುವದಕ್ಕಿಂತಲೂ ಈ ತೈಲವನ್ನು ಒಂದಾವರ್ತಿ ಹಚ್ಚಿ ಅಜಮಾಯಿಷಿ ಮಾಡುವುದರಿಂದಲೇ ಇದರ ಗುಣವು ಗೊತ್ತಾಗುತ್ತೆ ಒಂದು ಸೀಸೆಯು ಬಹಳ ದಿನಗಳ ಉಪಯೋಗಕ್ಕೆ ಬರುತ್ತದೆ.

ಕ್ರಯ ೧ಸೀಸೆಗಕ್ಕೆ **1-0-0** ಟಪಾಲು ಖರ್ಚು ೧ ರಿಂದ ೩ ಸೀಸೆಗಳ ವರಿಗೆ **8** ಆ.

---

# 3 DURBAR RANGU
## ದರ್ಬಾರ್ ರಂಗು

ನಮ್ಮಲ್ಲಿ ರತಕ್ಕ ದರ್ಬಾರ್‌ರಂಗನ್ನು ಒಂದುಸಲ ಹಚ್ಚಿದರೆ ೨೫ ವರುಷದ ಪ್ರಾಯಸಮರ್ಥರಂತೆ ಕಾಣಿಸುತ್ತೀರಿ. ಈ ರಂಗು ಹಚ್ಚುವಾಗ್ಯೆ ಮೊದಲು ಕೂದಲನ್ನು ನೀರಿನಿಂದ ಚೊಕ್ಕಟವಾಗಿ ತೊಳೆದು ಒಂದು ಬಟ್ಟೆಯಿಂದ ಕೊಳೆಯನ್ನು ಶುಭ್ರವಾಗಿ ವರಿಸಬೇಕು ನಂತರ ಒಂದು ಸಣ್ಣ ಗಾಜಿನ ಬಟ್ಟಲಿಗೆ ಈ ಪುಡಿಯನ್ನು ಸುಮಾರು ೪ ಆಣೆ ಅಥವಾ ೬ ಆಣೆ ತೂಕದಷ್ಟುಹಾಕಿ ಉಗುರು ಬೆಚ್ಚಗಿರುವನೀರಿನಲ್ಲಿ ಕಲಿಸಬೇಕು ಈ ರೀತಿ ಚಟ್ನಿಯೋಪಾದಿಯಲ್ಲಿ ಮಂದಗೆ ಆಗುವಹಾಗೆ ಎಷ್ಟು ನೀರು ಬೇಕೋ ಅಷ್ಟುನೀರು ಹಾಕಿ ಕಲಸಿ ಇದರ ಜೊತೆಯಲ್ಲಿರುವ ಬುರುಸಿನಿಂದ ಹಚ್ಚಬೇಕು. ಕೂದಲು ಒಣಗಿದ ನಂತರ ಉಗುರು ಬೆಚ್ಚಗಿರುವ ನೀರಿನಿಂದ ಪುನಹಾ ತೊಳೆಯಬೇಕು. ಇದನ್ನು ಹಚ್ಚುವಾಗ್ಯೆ ಪುಡಿಯು ಚರ್ಮದ ಮೇಲೆ ಬಿದ್ದವಡನೆ ಸಾಬೂನಿನ ನೀರಿನಲ್ಲಿ ನೆನಸಿದ ಒಂದು ಸಣ್ಣ ಒದ್ದೆಬಟ್ಟೆಯಿಂದ ವರಸಿಕೊಳ್ಳಬೇಕು ಈ ರೀತಿ ಒಂದಾವರ್ತಿಹಚ್ಚಿದರೆ ಕೂದಲು ಹುಟ್ಟು ಕೂದಲಿನಂತೆ ಕಪ್ಪಾಗಿ ರೇಷ್ಮೆಯಹಾಗೆ ಥಳಥಳಿಸುತ್ತಲೂ ಕಂಗೊಳಿಸುತ್ತಲೂ ಇರುತ್ತದೆ. ಮತ್ತು ಈ ರಂಗು ಬಹಳ ದಿನಗಳವರಿಗೂ ಇರುತ್ತದೆ

ಕ್ರಯ ಬುರುಸು ಸಮೇತ **1-4-0**

---

# 4 HAIR DESTROYER
## ಹೇರ್ ಡಿಸ್ಟ್ರಾಯರ್

ಈ ಪುಡಿಯನ್ನು ಸುಮಾರು ೪ ಆಣೆ ಅಥವಾ ೬ ಆಣೆ ತೂಕದಷ್ಟು ಒಂದು ಸಣ್ಣ ಗಾಜಿನ ಬಟ್ಟಲಿನಲ್ಲಿ ಹಾಕಿ ಕೊಂಚ ನೀರು ಹಾಕಿ ಮಂದಗೆ ಚಟ್ನಿಯೋಪಾದಿಯಲ್ಲಿ ಕಲಿಸಿ ಯಾವ ಸ್ಥಳದಲ್ಲಿ ಕೂದಲನ್ನು ತೆಗೆಯಬೇಕೋ ಆ ಸ್ಥಳದಲ್ಲಿ ಹಚ್ಚಿದ ೫ನಿಮಿಷಗಳೊಳಗಾಗಿ ಕೂದಲು ನುಣ್ಣಗೆ ಉದುರಿಹೋಗಿ ಚರ್ಮವು ಮೊದಲಿನಂತೆ ಬಹಳ ನಯವಾಯವಾಗುತ್ತದೆ ಕಣ್ಣುಗಳಿಗೆ ಸೋಕಿಸದಂತೆ ಬಹಳ ಎಚ್ಚರಿಕೆಯಿಂದಲೂ ಹುಷಾರಿಯಿಂದಲೂ ಹಚ್ಚಬೇಕು

ಕ್ರಯ ಶೀಸೆಗಕ್ಕೆ **0-4-0**

---

### 5 VEERYASTHMBAKA--KAMOTHEJAKA PILLS

**ಧಾತುಪೌಷ್ಟಿಕ!** **ವೀರ್ಯವರ್ಧಕ!!** **ಮನೋಲ್ಲಾಸಕ!!**

ಯಾವದಿನ ಲೋಕ ಸುಖವನ್ನು ಅನುಭವಿಸಬೇಕೆಂಬ ಯೋಚನೆ ಉಂಟಾಗುವುದೋ ಆ ದಿನದಲ್ಲಿ ಮಾತ್ರ ಈ ಮಾತ್ರೆಯನ್ನ ಉಪಯೋಗಿಸಿಕೊಳ್ಳಬೇಕು ಇದನ್ನು ಉಪಯೋಗಿಸುವದರಿಂದ ವರ್ತಿ ... ಅಜಮಾಯಿಷಿ ... ಸಂಗ ಮಾಡುವಾಗಲೆ ಬಲಹೀನವಾಗುತ್ತಿರುವ ಪುರುಷ ... ಯಕೋಲಿನಂತೆ ಸಹಾಯವಾಗಿರುವುದು ಈ ಔಷದವನ್ನು ಸೇವಿಸಿದ ದಿನಗಳಲ್ಲಿ ಹೇಡಿತನವನ್ನು ಹೋಗಲಾಡಿಸಿ ಚಟುವಟಿಕೆಯೂ ಶರೀರದಲ್ಲಿ ನವೀನವಾದ ಲವಲವಿಕೆಯೂ ಉಂಟಾಗುವುದು.

ಕ್ರಯ ಡಬ್ಬಿಗಕ್ಕೆ **0-8-0**

---

# 6 GONORRHOEA SANJEEVINI
## ಗನೇರಿಯ ಸಂಜೀವಿನಿ

[ ಪ್ರಮೇಹ ಜ್ವರ ]

ಪ್ರಮೇಹವೆಂಬುವ ಈ ರೋಗವು ಭಯಂಕರವಾದ ಅಂಟುರೋಗವಾಗಿದೆ ಎಂದು ಪ್ರಸಿದ್ಧ ವೈದ್ಯರು ಹೇಳುವರು ಎಲ್ಲಾತರದ ಮೇಹಗಳು ಕೈಮೀರಿ ಹೋದರ ಕಡೆಗೆ ಕುಷ್ಟರೋಗವಾಗಿ ಪರಿಣಮಿಸುವುದು ರೋಗಿಯು ಜೀವದಲ್ಲಿದ್ದರೂ ಸತ್ತಬಾಳ್ವೆಯಲ್ಲಿಯೇ ಇರುವಹಾಗಿರುವದು ಸುಖಸಂತೋಷದಲ್ಲಿ ಬಾಳುವ ಕುಟುಂಬವನ್ನು ತಾನೇಹಾಳುಮಾಡಿ ಮಹಾಕಷ್ಟ ಆಪತ್ತುಗಳ ಸಾಗರದಲ್ಲಿ ಮುಳುಗಿಸಿಬಿಡುನು ತನ್ನ ಮರ್ಮಸ್ಥಾನದಿಂದ ನಾರುವ ಹಳದಿ ಬಣ್ಣದಂಥಾ ಕೀವನ್ನು ಸೋರಿಸಿಕೊಂಡು ಹುಣ್ಣುಗಳಿಂದ ವೇದನೆ ಪಡುವವನಾಗಿ ಮನಸ್ಸಿನ ಸಂತೋಷವನ್ನು ಕಳಕೊಂಡವನೂ ಎಲ್ಲರಿಂದ ತುಚ್ಛೀಕರಿಸಲ್ಪಟ್ಟವನೂ ಆಗುವನು ತನ್ನ ದೇಹಸೌಂದರ್ಯವನ್ನೂ ಬಲಶಕ್ತಿಯನ್ನೂ ಕಳಕೊಳ್ಳಬೇಕಾಗುತ್ತದೆ ಒಂದುವೇಳೆ ಎಚ್ಚರಿಕೆ ತಪ್ಪಿ ಗೊತ್ತಿಲ್ಲದೆ ಪರಾಮೋಸೆಯಿಂದ ಈ ರೋಗವನ್ನು ಪಡೆದುಕೊಂಡವರಿಗೆ ಈ ಔಷಧವು ಪರಮ ಸಂಜೀವನವಾಗಿ



ಈವ್ಯಾಧಿಯಲ್ಲಿ ಯಾವಾಗಲೂ ಉರಿಯಿಂದೊಡಗೂಡಿದಮೂತ್ರವು ಸ್ವಲ್ಪಸ್ವಲ್ಪವಾಗಿ ಬರುವುದು ಕೀವು ಹರು ಹೋಗುವುದು ಕೆಲವು ಸಮಯದಲ್ಲಿ ರಕ್ತಬೀಳುವುದು ಇವುಗಳಿಂದ ಕಷ್ಟಪಡುತ್ತಿರುವವರು ಸಾವಿರಾರು ಜನರಿಂದ ಪರೀಕ್ಷಿಸಲ್ಪಟ್ಟ ಈಗನೇರಿಯ ಸಂಜೀವಿನಿಯನ್ನು ಉಪಯೋಗಿಸುವುದರಿಂದ ಕೀವು ಬರುವದನ್ನು ಮೂತ್ರದಲ್ಲಿ ಉರಿಯುವುದನ್ನು ೨೪ ಘಂಟೆಗಳೊಳಗಾಗಿ ನಿಲ್ಲಿಸುವುದು ಈ ವ್ಯಾಧಿಯ ಹಳೆಯದಾಗಿರಲಿ ಹೊಸದಾಗಿರಲಿ ಈ ಔಷಧವನ್ನು ೧೫ ದಿನಗಳು ಸೇವಿಸುವದರಿಂದ ಖಂಡಿತವಾಗಿಯೂ ಮೇಲ್ಕಂಡ ವ್ಯಾಧಿಯನ್ನು ಬುಡಮುಟ್ಟ ಮಾಯ ಮಾಡಿಸಿ ಶರೀರವನ್ನು ಒಳ್ಳೆ ಸ್ಥಿತಿಯಲ್ಲಿಡುವುದು

ಉಪಯೋಗಿಸುವ ವಿಧಾನ ಈ ಔಷಧವನ್ನು ಸುಮಾರು ಒಂದು ೧ ತೊಲದಷ್ಟು ಸಕ್ಕರೆಯಲ್ಲಿ ೧೫ ತೊಟ್ಟು ಔಷಧಿಯನ್ನು ಹಾಕಿ ದಿನಕ್ಕೆ ಮೂರಾವರ್ತಿ ತೆಗೆದುಕೊಳ್ಳಬೇಕು ಪಥ್ಯ ಹುಳಿ ಖಾರ ಬಹಳ ಮಟ್ಟಿಗೆ ಕಡಿಮೆ ಮಾಡಬೇಕು.

ಕ್ರಯ **1-8-0**

---

# 7 MULAVYADHI OUSHADHA

ಮನುಷ್ಯರಿಗೆ ಉಂಟಾಗುವ ರೋಗಗಳಲ್ಲಿ ಮೂಲವ್ಯಾಧಿ ಮಹಾಬಾಧೆ ಕೊಡುವದು ಆಬಾಧೆ ಅನುಭವಿಸುವವರಿಗೆ ತಿಳಿಯುವದು ಹಿಂದೂದೇಶದಲ್ಲಿ ಈ ವ್ಯಾಧಿಯಿಂದ ಬಹುಜನರು ಶ್ರಮಪಡುವರು ಯಾವದೆ ಒಂದುವಿಧವಾದ ಮೂಲವ್ಯಾಧಿಯಿಂದ ಅನೇಕ ಜನರು ಬಾಧೆಪಡುತ್ತಿರುವರು ಈ ವ್ಯಾಧಿಯನ್ನು ಶೀಘ್ರವಾಗಿ ಹೊರಡಿಸಿದರೇನೆ ಕೂಡಲೇ ಅದು ಪ್ರಬಲವಾಗಿ ಗುದಸ್ಥಾನದಲ್ಲಿ ರಕ್ತವು ಬೀಳುವದು ಅದನ್ನು ರಕ್ತಮೂಲವೆಂದು ಕರೆಯಲ್ಪಡುವರು ನಂತರ ಶಸ್ತ್ರ ಚಿಕಿತ್ಸೆಮಾಡಿದಾಗ್ಯೂ ನಿವಾರಣೆಆಗುವದಿಲ್ಲ ನಿವಾರಣೆಯಾಗುವದು ದುರ್ಲಭವೆಂದು ನಿರಾಶೆಹೊಂದಿ ವೈದ್ಯರು ಬಿಟ್ಟಿರುವ ಎಷ್ಟೋ ಜನರು ನಮ್ಮ ಔಷಧವನ್ನು ಸೇವಿಸಿ ಗುಣಹೊಂದಿರುವರು ಪರೀಕ್ಷಮಾಡಿ ನೋಡಿ ಶಸ್ತ್ರಚಿಕಿತ್ಸೆಯಿಂದ ಗುಣವಾಗದೆ ಇರುವ ವ್ಯಾಧಿಗಳನ್ನು ಸಹಿತವಾಗಿ ನಮ್ಮ ಔಷಧ ಗುಣಮಾಡುವ ಚಿರಕಾಲ ವ್ಯಾಧಿಯಾಗಿದ್ದರು ಮಲದ್ವಾರದಲ್ಲಿ ಎಷ್ಟು ರಕ್ತಸ್ರಾವವೂ ಮೊಳಕೆಂಬಾಧೆಯು ಸಹಾ ಇದ್ದು ಶ್ರಮಪಡುತ್ತಿರುವವರು ಈ ಮಾತ್ರೆಗಳನ್ನು ದಿನಕ್ಕೆ ಎರಡಾವರ್ತಿ ಬೆಳಿ ಒಂದುಮಾತ್ರೆ ಸಾಯಂಕಾಲ ಒಂದುಮಾತ್ರೆ ಊಟವಾದ ನಂತರ ತಣ್ಣೀರಿನಲ್ಲಿ ದಿನಗಳು ಸೇವಿಸಲು ಸಂಪೂರ್ಣವಾಗಿ ಗುಣಹೊಂದುವರು. ಪಥ್ಯ ಹುಳಿ ಪದಾರ್ಥ ತಿನ್ನಬಾರದು

ಕ್ರಯ 30 ಮಾತ್ರೆಗಳಿರುವ ಡಬ್ಬಿ 1ಕ್ಕೆ 0-12-0

---

# 8 USHNAKARKA PILLS
## ಉಷ್ಣಕಾರಕಕ್ಕೆ ಮಾತ್ರೆ.



ಉಷ್ಣಕಾರಕದಿಂದ ಮೈ ಕೈಕಾಲುಗಳಲ್ಲಿಯೂ ಸೊಂಟದಲ್ಲಿಯೂ ತೊಡೆಯಲ್ಲಿಯೂ ಕೆಳ ಹೊಟ್ಟೆಯಲ್ಲಿಯೂ ಅಧಿಕ ಕಡಿತವನ್ನುಂಟುಮಾಡಿ ಪ್ರತಿನಿತ್ಯವೂ ತೊಂದರೆಪಡಿಸಿ ಕಷ್ಟಪಡಿಸುವಂಥ ಮೇಹ ಪಡೇ, ಮೇಹಕಾರಕದ ಪಡೆ ಇವುಗಳನ್ನು ಹೋಗಲಾಡಿಸಿಮನಸ್ಸಂತೋಷಪಡಿಸುವ ಈ ಮಾತ್ರೆಗಳನ್ನು ಬೆಳಗ್ಯೆ ಒಂದು ಮಾತ್ರೆ ಸಾಯಂಕಾಲ ಒಂದು ಮಾತ್ರೆಯಂತೆ ೨೦ದಿನಗಳು ಬೆಣ್ಣೆಯಲ್ಲಿ ಸೇವಿಸಿದರೆಖಂಡಿತವಾಗಿಯೂ ಗುಣವಾಗುವುದು.



ಪಥ್ಯ---ಖಾರ ಇವುಗಳನ್ನು ತಿನ್ನಬಾರದು

ಕ್ರಯ 40 ಗುಳಿಗೆಗಳುಳ್ಳ ಸೀಸೆಗಕ್ಕೆ 1-

ಮೋಹವಾಯು ಖಂಡವಾಯು ಉದಯವಾಯು ಉಷ್ಣವಾಯು ಮೊದಲಾದವುಗಳಿಗೆ ಶ್ರೇಷ್ಠವಾದ ಔಷಧ

ದೇಹದಲ್ಲಿ ವಾಯು ಹೆಚ್ಚಿ ರಕ್ತದಲ್ಲಿ ಉಷ್ಣವು ಅಧಿಕವಾಗಿ ಕೈಕಾಲು ಒಡಕ ವ್ಯಯಲ್ಲಾ ನೋಯುವುದು ಸಂದುಗಳಲ್ಲಿ ನೋವು ಸೆಳೆದುಹಿಡಿದುಕೊಳ್ಳುವುದು ನಡುನೋವು ಕೈಕಾಲುಗಳನ್ನು ನೀಡು ವದಕ್ಕೂ ಮಡಿಸುವುದಕ್ಕೂ ಆಗದೆ ಇರುವದು ಮಲಬಂಧ ತೊಡೆ ನೋವು ಆಗಾಗ್ಯೆ ಅಪಾನ ವಾಯುಸಡಿಲುವದು ಹೊಟ್ಟೆಯುಬ್ಬರ ಮೇಲುಸುರು ಎದೆನೋವು ಮೈ ಊದುವುದು ಶರೀರದಲ್ಲಿ ಒಂದು ಕಡೆಯಿಂದ ಇನ್ನೊಂದುಕಡೆಗೆ ಓಡಾಡಿದಂತೆ ಆಗುವದು ಇನ್ನೂ ಅವರವರ ದೇಹಗುಣಕ್ಕೆ ತಕ್ಕ ಹಾಗೆ ಏರ್ಪಡುವ ಚಿಹ್ನೆಗಳಿಗೆ ಈ ನಮ್ಮ ವಾಯುಸಂಹಾರಿ ತೈಲವನ್ನು ಉಪಯೋಗಿಸುವದರಿಂದ ನಡೆಯುವಾಗ ಕೂರುವಾಗ ಏಳುವಾಗ ಎದೆಯಲ್ಲಿ ಪಕ್ಕೆಗಳಲ್ಲಿ ಸೊಂಟದಲ್ಲಿ ಕೈಕಾಲುಗಳಲ್ಲಿ ನೋವು ಬಿದ್ದು ವಾಯುವಿನಿಂದ ಪೀಡಿಸಲ್ಪಡುತ್ತಿರುವವರು ಈ ನಮ್ಮ ವಾಯುಸಂಹಾರಿ ತೈಲವನ್ನು ಪ್ರತಿದಿನ ರಾತ್ರಿಯಲ್ಲಿ ಮರ್ದನ ಮಾಡಿ ಬೆಳಿಗ್ಗೆ ಬಿಸಿನೀರಿನಿಂದ ಸ್ನಾನಮಾಡಲು ಮೇಲ್ಕಂಡ ವಾಯುಸಂಬಂಧ ರೋಗಗಳನ್ನು ಖಂಡಿಸುವ ಶಕ್ತಿಯುಳ್ಳದ್ದಾಗಿರುವುದು ಇದನ್ನು ಕ್ರಮವಾಗಿ ೮-೧೦ ದಿನಗಳು ಉಪಯೋಗಮಾಡುವುದರಿಂದ ಈ ರೋಗಗಳು ನೀಗಿಹೋಗಿ ಮೊದಲಿನಂತೆ ದೇಹದಲ್ಲಿ ಆರೋಗ್ಯವಾದ ಲವಲವಿಕೆಯನ್ನುಂಟುಮಾಡಿ ಮನಸ್ಸಂತೋಷ ಪಡಿಸುವುದು ಈ ಔಷಧವು ಹೆಚ್ಚು ಪ್ರಯೋಜನದಿಂದ ತಯಾರಿಸಲ್ಪಟ್ಟಿರುವದರಿಂದ ಒಂದು ಒಂದುಸಾರಿ ಇದನ್ನು ತರಿಸಿ ಪರೀಕ್ಷಿಸಿ ನೋಡಿ

ಕ್ರಯ ಸೀಸಗಳಿಕ್ಕೆ 1 0

# 10 CHANDRAKANTI
## ಚಂದ್ರಕಾಂತಿ

ಎಂಬವಳಿಗೆ ಎಷ್ಟಿದರೂ ... ಮುಖವು ಮುಚ್ಚಿಕೊಳ್ಳುವಂತೆ ಮಾಡುತ್ತಾ ಹ್ಯಾಗೂ ನಾಶಿಯಾಗದೆ ಮೋಹದ ಗುಣಗಳೂ, ಸಿಡುಬುಗಳೂ ಗಂಧಗಳೂ ಎಂಜಲುಗುಳ್ಳಗಳು ಚಟ್ಟು ಇತರ ವಿಧವಾದ ಮಚ್ಚೆಗಳು ಕಪ್ಪುಬಣ್ಣವಾದವುಗಳಿಗೆ ಈ ... ವನ್ನು ಸುಮಾರು ನಾಲ್ಕಾರು ತೊಳೆದುಕೊಂಡು ಕೊಬ್ಬರಿಯಣ್ಣೆಯಲ್ಲಿ ... ಮುಖಕ್ಕೆ ಹಚ್ಚಿ ... ಎಪ್ಪತ್ತು ನಂತರ ಬಿಸಿನೀರಿನಿಂದ ಮುಖವನ್ನು ತೊಳೆದುಕೊಳ್ಳಬೇಕು ಈ ರೀತಿ ಔಷಧವನ್ನು ೧೦ ದಿನಗಳು ಹಚ್ಚುವುದರಿಂದ ಗಣನೀಯವಾಗಿ ಮುಖಕಾಂತಿಯನ್ನುಂಟುಮಾಡಿ ಹಸನ್ಮುಖಿಗಳಾಗಿ ಮಾಡುವದು. ನಾಚಿಕೆಯಿಂದ ಕೂಡಿದವರು ಹೇಳುವಷ್ಟು

ಕ್ರಯ ಡಬ್ಬಿಗಳಿಕ್ಕೆ 0 0

## 11 ILLUSTRIOUS HARI-SHANKARA RAA
## ಆಶ್ಚರ್ಯಕರವಾದ ಹರಿಶಂಕರರಸ

ಕ್ರಯ ಸ್ವಲ್ಪ! ಗುಣ ಹೆಚ್ಚು!!

ಈ ಹರಿಶಂಕರ ರಸವು ಅನೇಕವರನ್ನು ನಗಿಸಿ ನಿಮಿಷದಲ್ಲಿ ತಲೆಯ ನೋವನ್ನು ಹೋಗಲಾಡಿಸುವದು ಹುಚ್ಚಿತನಗಳೂ ... ಇರುವ ರೋಗಗಳಿಗೂ ... ಈ ಔಷಧವನ್ನು ... ಉಪಯೋಗಿಸುವದರಿಂದ ... ಜನಗಳಿಗೆ ಈ ಔಷಧವನ್ನು ... ಈ ಔಷಧವು ... ನಿಮ್ಮಲ್ಲಿ ಇರಬೇಕು ಇರುತ್ತದೆ. ಈ ಔಷಧವು ಬಹಳ ವೇಗವಾಗಿರುವುದರಿಂದ ಇದನ್ನು ಒಳಕ್ಕೆ ತೆಗೆದುಕೊಳ್ಳುವ ವಿಧಾನವಾಗಿ ಸ್ವಲ್ಪ ಸ್ವಲ್ಪ ಮೂಸಬೇಕು.

ಕ್ರಯ ಸೀಸೆಗಳಿಕ್ಕೆ 0 0

## 12 KAPHADHWANSINI
## ಕಫಧ್ವಂಸಿನಿ

ಉಬ್ಬಸ ಎಂಬ ಈ ರೋಗವು ಅಸಾಧ್ಯರೋಗಗಳ ಒಂದಾಗಿದೆ ಈ ರೋಗವು ಪ್ರಾಣಾಪಾಯವಾಗುವ ರೋಗವಲ್ಲದಿದ್ದರೂ ಬಹುಪೀಡನೆ ಕೊಡುವ ರೋಗವಾಗಿದೆ ಹೀಗೆ ಮಕ್ಕಳೂ ದೊಡ್ಡವರೂ ಈ ಸಂಕಟದಿಂದ ನರಳುತ್ತಾ ಇರುವವರಾಗಿದ್ದಾರೆ ಈ ರೋಗವು ಗುಣವಾಗತಕ್ಕದ್ದಲ್ಲವೇನು ಎಂಬ ಭಾವನೆಯಾಗಿದೆ. ಇದು ಸಂತಾನಪಾರಂಪರ್ಯ ಬರುವರೋಗವಾಗಿದ್ದರೂ ಕಾರಣಗಳಿಂದುಂಟಾಗಿದ್ದರೂ ನಾವು ಹೇಳುವ ಸಮಯದಲ್ಲಿ ತಕ್ಕ ಜಾಗ್ರತೆಯಿಂದ ಚಿಕಿತ್ಸೆ ಮಾಡಿದರೆ ಗುಣವಾಗುವುದಕ್ಕೆ ಸಂದೇಹವಿಲ್ಲ. ನಾವ ಮನುಷ್ಯ ಉಬ್ಬಸ ರೋಗಕ್ಕೆ ಔಷಧಿಯನ್ನು ಮಾಡುತ್ತಾ ವ್ಯಾಪಾರ ಪಟ್ಟಿರುವನೋ ಅವರೂ ಇದರಿಂದ ನಿವಾರಣೆಯಾಗುವದಿಲ್ಲವೆಂದು ನಿರ್ಧಾರವಾಡಿಕೊಂಡಿರುವನೋ ಅಂಥಾವರಿಗೆ ನಾವು ನಂಬಿಕೆ ಕೊಡುತ್ತೇವೆ. ಔಷಧಿಯವಿಶೇಷ ಮಹಾತ್ಮೆಯುಳ್ಳ ಒಬ್ಬ ಸನ್ಯಾಸಿಯಿಂದ ಅನುಭವಪಡೆದು ಕಶ್ಮೀರದೇಶದಲ್ಲಿ ಬೆಳೆಯತಕ್ಕ ವನಸ್ಪತಿಗಳನ್ನು ತರಿಸಿ ತಯಾರಿಸಲ್ಪಟ್ಟಿದ್ದಾಗಿದೆ ಕೆಮ್ಮು, ಗೂರಲು ಪಕ್ಕೆಗಳ ವಡತ ಮೂಛಾತೆ ಗುರುಗುಟ್ಟುವ ಶಬ್ದ ಮೇಲುಬ್ಬಸ ನಿದ್ರೆ ಬರುತ್ತಿದ್ದ ಕೆಮ್ಮು ಕಡಲುವದು ದುರ್ಬಲದಿಂದ ಆಗುವ ತೀವ್ರನಾಡಿ ತಲೆನೋವು ಮೂಗುಕಟ್ಟಿಕೊಂಡಿದ್ದುದುಮೊದಲಾದವುಗಳಿಂದ ಕಷ್ಟಪಡುತ್ತಿರುವವರು ಖಂಡಿತವಾಗಿಯೂ ಗುಣ ಹೊಂದುವರು ಈ ಔಷಧವು ಎಲ್ಲವನ್ನು ಕೊಟ್ಟು ಮೇಲ್ಕಂಡವ್ಯಾಧಿಗಳು ತಲೆ ಇಡದಂತೆ ಮಾಡುತ್ತದೆ ಎದೆಯಲ್ಲಿ ಬಿಗಿದುಕೊಂಡಿರುವ ಕಫವನ್ನು ಕೂಡಲೇ ಬಿಡಿಸಿ ನೀರುಮಾಡಿ ಬಹಳ ಸುಲಭತರದಿಂದ ಸರಿಪಡಿಸುವುದು ಕರಿದ್ದು ಎದೆ ಆಯಾಸ ಮುಂತಾದವುಗಳನ್ನು ಗುಣಪಡಿಸಿ ಶಕ್ತಿಪ್ರಾಣ ಉಂಟುಮಾಡುವದು ನೂತನರಿಗೆ ಬೇಗನೆ ಗುಣಕಾಣಿಸುವದು ಹಳೇರೋಗಿಯು ತಾಳ್ಮೆಯಿಂದ ಈ ಕಫಧ್ವಂಸಿನಿಯನ್ನಾಗಿ ಹಿಡಿಯುತ್ತಾ ಬರುವವರಲ್ಲಿ ರೋಗದ ಕಷ್ಟವನ್ನು ತಾಳಿಕೊಳ್ಳಲಿಕ್ಕೆ ಬಲಕೊಟ್ಟು ಹೆಚ್ಚಿನ ಸಂಕಟಗಳು ಒದಗದಂತೆ ಮಾಡುವುದು ಕೆಂಗಲಾಗಿ ಕುಂದಿಹೋದ ದೇಹವನ್ನು ನಮಿಸಿ ಹೆರುವದು ಉಬ್ಬಸವುಳ್ಳ ರೋಗಿಗಳು ಬಹಳ ಕಷ್ಟತರವಾದ ಕೆಲಸಗಳನ್ನು ಮಾಡುವ ಬಹುತನವನ್ನು

ಧವನ್ನು ತೆಗೆದು ಸ್ವಲ್ಪ ಶೇಖವಾಡಿ ಚುಂಗಾಣಿಯಲ್ಲಿ ಹಾಕಿ ಹೋಗಿ ಸಾಯಂಕಾಲ ದಿನಕ್ಕೆ ಎರಡಾವರ್ತಿ ೨೧ ಇಪ್ಪತ್ತೊಂದು ದಿನಗಳು ಮಾಡಬೇಕು

ಕ್ರಯ ಚುಂಗಾಣಿ ಸಮೇತಾ ಡಬ್ಬಿಗಳಿಕ್ಕೆ

## 13 SUKHABHEDIMATRE
## ಸುಖಭೇಧಿಮಾತ್ರೆ

ಆಗಿಂದಾಗ್ಯೆ ಉಂಟಾಗತಕ್ಕ ಮತ್ತು ಬಹಳ ದಿವಸಗಳಿಂದ ವಾಡಿಕೆಯಲ್ಲಿರುವ ಮಲಬದ್ಧತನವನ್ನು ಸಂಪೂರ್ಣಗುಣಪಡಿಸುವವರಲ್ಲಿ ಇದು ಸರ್ವೋತ್ಕೃಷ್ಟವಾದ ಔಷಧವು ಅಜೀರ್ಣವಾದ ಕಾಳಜ ತನವನ್ನು (ಲೀವರ್) ಬಲಪಡಿಸಿ ಸ್ವಭಾವವಾಗ ಎಷ್ಟಾಗಬೇಕೋ ಅಷ್ಟು ಸ್ವಚ್ಛ ಪಿತ್ತದ ನೀರನ್ನು ವಿಸರ್ಜನೆಮಾಡಿಸಿ ಹೊಟ್ಟೆಯ ಭಾರವನ್ನು ನೀಗಿ ಹಗುರಮಾಡುತ್ತದೆ ಮತ್ತು ಹೊಟ್ಟೆಯ ನೋವು ಆಯಾಸ ಇವು ಸ್ವಲ್ಪವೂ ಉಂಟಾಗದಂತೆ ಸುಖವಾಗಿ ವಿರೇಚನೆಯಾಗುವುದು ೧೪ವರ್ಷದ ಲಾಗಾಯ್ತು ೫ ವರ್ಷದ ಮಕ್ಕಳಿಗೆ ಅರ್ಧಮಾತ್ರೆಯಿಂದ ೧ ಮಾತ್ರೆಯವರಿಗೂ ೫ ವರ್ಷದವಲಾಗಾಯ್ತು ೧೪ ವರುಷದ ಹುಡುಗರಿಗೆ ೨ ಎರಡುಮಾತ್ರೆಯವರಿಗೂ ೧೪ ವರ್ಷದವರೆಗಲಾಗಾಯ್ತು ೨ ಮಾತ್ರೆಯವರೆಗೂ ಉಪಯೋಗಿಸಬಹುದು ಸಣ್ಣ ಮಕ್ಕಳಿಗೆ ಎದೆಹಾಲಿನಲ್ಲಿ ತೇದು ಕುಡಿಸಬೇಕು ಹುಡುಗರು ಮತ್ತು ದೊಡ್ಡವರಿಗೆ ಸಕ್ಕರೆಯಲ್ಲಾಗಲೀ ಆಥವಾ ದ್ರಾಕ್ಷಿಹಣ್ಣಿನಲ್ಲಾಗಲೀ ಆಥವಾ ಚನ್ನಾಗಿ ಪುಡಿಮಾಡಿದ ಒಂದು ಕಾಸಿನ ತೂಕದಷ್ಟು ಜೀರಿಗೆ ಮತ್ತು ಬೆಲ್ಲದಲ್ಲಾಗಲೀ ಉಪಯೋಗಿಸಿ ಸ್ವಲ್ಪ ಬಿಸಿನೀರನ್ನು ಕುಡಿಯಬೇಕು ಇಷ್ಟವುಳ್ಳವರು ತಾಂಬೂಲವನ್ನು ಕೂಡಲೆ ಹಾಕಿಕೊಳ್ಳಬಹುದು ಭೇಧಿಗೆ ಔಷದವನ್ನು ತೆಗದುಕೊಂಡದಿವಸ ತಿಳಿಯಾದ ಬೇಳೆಸಾರನ್ನವನ್ನು ಮಾತ್ರ ಉಪಯೋಗಿಸಬೇಕು ಬಹಳ ಸೂಕ್ಷ್ಮವಾದ ಪ್ರಕೃತಿ (ಪಿತ್ತಪ್ರಕೃತಿಯುಳ್ಳವರಿಗೆ ೧-೨ ವೇಳೆ ಭೇಧಿ ಹೆಚ್ಚಾಯಿತೆಂದು ತೋರಿದಕೂಡಲೇ ಮಜ್ಜಿಗೆ ಅನ್ನವನ್ನು ತಿನ್ನಿಸಿದರೆ ತಕ್ಷಣ ನಿಲ್ಲುತ್ತದೆ ಭೇದಿಗೆ ಔಷದವನ್ನು ತೆಗೆದು ೩-೪ ಘಂಟೆಯವರೆಗೆ ಭೇಧಿಯಾಗದೆ ಇದ್ದರೆ ಬಿಸಿಯಾಗಿರುವ ಸಾರಿನಲ್ಲಿ ಊಟಮಾಡಬೇಕು ಊಟವಾದ ನಂತರ ಸುಖವಾಗಿ ೩-೪ ವೇಳೆ ಭೇಧಿಯಾಗುತ್ತದೆ ಕೇವಲ ಬದ್ಧಶರೀರವುಳ್ಳವರು ೧-೨ ಮಾತ್ರೆಗಳನ್ನು ಹೆಚ್ಚಾಗಿ ಉಪಯೋಗಿಸಬೇಕು ಸೂಕ್ಷ್ಮ ಪ್ರಕೃತಿಯುಳ್ಳವರು ೨ ಮಾತ್ರೆ ಮಾತ್ರ ಉಪಯೋಗಿಸಬೇಕು

೭ ಮುದುಕರು ಕ್ಷಯರೋಗಿಗಳು ಬಲಹೀನ ಬಳಲಿದವರು ಗರ್ಭಿಣಿಯರು ಹೊಸದಾಗಿ ಜ್ವರ ಬಂದವರು ಬಾಣಂತಿಯರು ಇವರೇ ಮೊದಲಾದವರು ಭೇದಿಗೆ ಔಷಧಿಯನ್ನು ತೆಗೆಯಬಾರದು.

೬ ಹಳೇಜ್ವರದವರು ವಿಷಸಂಬಂಧರೋಗವುಳ್ಳವರು ಮೂಲವ್ಯಾಧಿಯಿಂದನರಳುವವರು ಗುಲ್ಮ ಜ್ವರದಗಡ್ಡೆ ಪ್ರಮೇಹ ರಕ್ತ ಪಿತ್ತ ಕುಷ್ಟ ಚರ್ಮವ್ಯಾಧಿಯಿಂದಲು ಕ್ರಿಮಿರೋಗಗಳಿಂದ ಪೀಡಿತರಾದವರು ಆಗ್ಯವಾಗಿ ಉಪಯೋಗಿಸಬಹುದು

ಕ್ರಯ ಸೀಸೆ 0-8-0

## 14 SARVACHELU VISHAVYRI
## ಸರ್ವಚೇಳು ವಿಷವೈರಿ

ಇದು ಪ್ರತಿಯೊಂದುಕುಟುಂಬದಲ್ಲಿಯೂ ಇಡಬೇಕಾದ ಔಷದವು ಜೀವನ ಕಾಡತದಿಂದ ಕಷ್ಟಪಡುತ್ತಿರುವವರನ್ನು ... ಸಹಸದಿಂದ ಈ ಔಷಧವನ್ನು ತಯಾರಿಸಿದೆವು ಈ ಔಷಧವನ್ನು ಹೆಚ್ಚು ಪ್ರಭಾವದಿಂದ ಯಾವ ವಿಧವಾದ ವಿಷವು ... ಹೋದದಿದ್ದಾಗ್ಯೂ ೫ ನಿಮಿಷಗಳೊಳಗಾಗಿ ... ವಾಸಿಯಾಗುತ್ತದೆ ಒಂದು ಸೀಸೆ ... ಜನಗಳ ಉಪಯೋಗಕ್ಕೆ ಬರುತ್ತದೆ ೨-೩ ಸೀಸೆಗಳನ್ನು ಮನೆಯಲ್ಲಿ ಇಟ್ಟುಕೊಳ್ಳುವುದರಿಂದ ನೂರಾರುಜನ ಬಡಬಗ್ಗರಿಗೆ ಕೊಟ್ಟು ಗುಣಪಡಿಸುವುದರಿಂದ ಇಹಪರಲೋಕಗಳಲ್ಲಿ ಯೂ ಪುಣ್ಯವುಂಟಾಗುವುದು ಇದರ ಚಲಿಯನ್ನು ಬಹಳ ಕಡಿಮೆ ಮಾಡಿದೆ ಈ ಪುಡಿಯನ್ನು ಸ್ವಲ್ಪ ನೀರುಹಾಕಿ ಚಟ್ಟೆಯೋಪಾದಿಯಲ್ಲಿ ಕಲಿಸಿ ಚೇಳು ಹೊಡೆದಸ್ಥಳದಲ್ಲಿ ಹಚ್ಚಿದಕೂಡಲೆ ಉರಿಯುಭಯ ನಿಲ್ಲುತ್ತವೆ

ಕ್ರಯ ಸೀಸೆಗಳಿಕ್ಕೆ 0--6--0

## 15 RATAINJOT SURMA
# ರತನ್‌ಜೋತ್ ಸುರ್ಮ



ಪ್ರತಿಯೊಬ್ಬರಿಗೂ ಸಕಲೇಂದ್ರಿಯಗಳ ಪೈಕಿ ಮುಖ್ಯವಾದದ್ದು ನೇತ್ರೇಂದ್ರಿಯವೆಂಬುದು ಸರ್ವರಿಗೂ ತಿಳಿದ ವಿಷಯವೇ ಆಗಿರುತ್ತೆ ಆದ್ದರಿಂದ ಪ್ರತಿಯೊಬ್ಬರೂ ಜೀವಂತರಾಗಿರುವವರೆಗೆ ಕಣ್ಣು ಕೈಕಾಲುಗಳು ಚಟ್ಟಿಯಾಗಿರಬೇಕೆಂದು ಜನಗಳು ಸ್ವಭಾವಿಕವಾಗಿಯೂ ವಾಡಿಕೆಯಾಗಿಯೂ ಬೇಡುತ್ತಾ ಇರುತ್ತಾರೆ. ನಮ್ಮ ಹಿರಿಯರಿಂದ ರಹಸ್ಯವಾಗಿ ಉಪದೇಶಿಸಲ್ಪಟ್ಟಿರುವ ಈ ಅಪೂರ್ವವಾದ ರತನ್‌ಜೋತ್ ಸುರ್ಮವನ್ನು ಕಣ್ಣುಗಳಿಗೆ ಹಚ್ಚಿಕೊಂಡರೆ ಕಣ್ಣುಗಳಲ್ಲಿ ಬೀಳುವ ಕಳ್ಳಪಯುಕ್ತವಾದ ನೀರು ಜಿಬರು ಸಹ ಈಚೆಗೆಬಂದು ಕಣ್ಣಿನಲ್ಲಿ ನೀರು ಸುರಿಯುವುದು ಕಣ್ಣುರಿ ಕಣ್ಣುಮಂಜು ದೃಷ್ಟಿಕಡಿಮೆಯಾಗುವುದು ಹೂವಿರುವುದು ಪೊರೆಯಿರುವುದು ಇಂಥಾ ಉಪದ್ರವಗಳೆಲ್ಲಾ ವನಮೂಲಿಕೆಗಳಿಂದ ತಯಾರಾದ ಈ ಸುರ್ಮವನ್ನು ರಾತ್ರಿ ಒಂದಾವರ್ತಿ ಕಣ್ಣಿಗೆ ಹಚ್ಚಿದರೆ ಬಹಳ ಗುಣಕೊಡುವುದು. ಇದನ್ನು ಯಾರುಬೇಕಾದರೂ ಹಚ್ಚಬಹುದು

ಕ್ರಯ ಸೀಸೆಗಳಿಕ್ಕೆ 0-8 0

——:o:——

...ಬಾಯದು ಜ್ವರ, ಆಹಾರ-ವಿಹಾರ ದೋಷಗಳಿಂದ ಅನೇಕ ...ಜ್ವರ ... ಸಂಭವವಾದ ಜ್ವರಗಳು ಮನುಷ್ಯನಿಗೆ ಸಂಭವವಾಗುವದು ಗಂಟ್ಲು ತುಟಿ ರಾತ್ರಿಯಲ್ಲಿ ನಿದ್ರಾಹೀನತೆಗಳು ಶರೀರದಲ್ಲಿ ಚೆನ್ನಿಲ್ಲದಂತೆ ಇರುವದು ತಲೆನೋವು ...ಂತ ಇರುವುದು ಹೊಟ್ಟೆನೋವು ಉಬ್ಬರ ಅಳಳಿಕೆ ಮಲವ್ಯನಿರಾಗಿರುವದು ಸ್ವಲ್ಪ ... ಗಂಟ್ಲು ತುಟಿ ಮೂಗು ಹುಣ್ಣಾಗುವದು ಬೆವರು ತಿಳವಳಿಕೆಯಿಲ್ಲದ ಮಾತು ಮೂರ್ಛೆ ...ಮೂತ್ರ ಕಣ್ಣು ಹಳ್ದ ಗಿರುವದು ಶರೀರ ಕಣ್ಣಿಗಿರುವದು ಜಾಯಿಲೇಯಾಗಿರುವದು ಮಲ ...ಗಿರುವದು ದೇಹವಾದ್ಯಂತವೊದ್ದಾಗಿರುವದು ಹೊಟ್ಟೆಯುಬ್ಬರ ಶರೀರಭಾರ ಛಳವಾಂತಿ ಅತಿನಿದ್ರೆನಿಗಡಿಕೆಮ್ಮು ವಾತಪಿತ್ತಜ್ವರ ಸನ್ನಿಪಾತ

ಜ್ವರ ಎಲುಬಿನಲ್ಲಿಯು ಕೀಲುಗಳಲ್ಲಿಯು ಮತ್ತು ಶಿರಸ್ಸಿನಲ್ಲಿಯೂನೋವು ಕಣ್ಣುನೀರಿನಿಂದ ತುಂಬಿ ಕೊಂಡು ಕೆಂಪಾಗಿ ಸೆಳದುಕೊಳ್ಳುಂಡಿರುವದು ಕಿವಿ ಯಲ್ಲಿ ಧ್ವನಿ ಮತ್ತು ನೋವು ಗಂಟ್ಲಲ್ಲಿ ಮುಳ್ಳಿ ನಿಂದ ತುಂಬಿದಂತೆ ಇರುವದು ಮೂರ್ಛೆ ಹುಚ್ಚುಮಾತು ಕೆಮ್ಮು ಆಯಾಸ ಅನ್ನಹಿತ ಹೀನ ನಾಲಿಗೆ ಸುಟ್ಟಂತೆ ಕಪ್ಪಾಗಿ ದನಗಳ ನಾಲಿಗೆ ರೀತಿಬಿರುಸಾಗಿರುವದು.

ಕಫರಕ್ತದಲ್ಲಿ ಕೂಡಿ ಹಸುರುವಾಂತಿ ತಲೆ ಸುತ್ತುವದು ನಿದ್ರೆಯಿಲ್ಲದಂತೆಯಿರುವದು ಎದೆ ನೋವು ಬೆವರು ಮೂತ್ರ ಸ್ವಲ್ಪವಾಗಿ ಹೊರಡುವದು ಮೂಗಿನಲ್ಲಿ ಮಾತು ಶರೀರದಲ್ಲಿ ಕಪ್ಪು ಕೆಂಪು ಬೊಬ್ಬೆಗಳು ಹುಟ್ಟುವದು.

ಈ ನಮ್ಮ ಜ್ವರ ಸಂಹಾರಿ ಔಷಧ ಸೇವನೆಯಿಂದ ಮೇಲಿನರೋಗಗಳಿಗೂ ವಿಷಮಶೀತಜ್ವರಪ್ರತಿ ದಿನವೂ ಬರುವ ಜ್ವರ ದಿನಬಿಟ್ಟುದಿನ ಬರುವ ಜ್ವರ ಮೂರರಜ್ವರ ನಾಲ್ಕಾರಜ್ವರ ಮಲ್ಲಾಡುಜ್ವರ ಇವುಗಳನ್ನು ಸಂಪೂರ್ಣವಾಗಿ ರಾಮಬಾಣದಂತೆ ಗುಣಮಾಡುವದು. ಈ ನಮ್ಮ ಜ್ವರಸಂಹಾರಿ ಔಷಧಕ್ಕೆ ಸಮಾನವಾದದ್ದು ಮತ್ತ್ಯಾವ ಔಷಧವೂ ಇಲ್ಲ. ಇದರ ಉತ್ಕೃಷ್ಟತೆಯನ್ನು ಅಷ್ಟೆನ್ನೆಂದು ನಾವು ಹೇಳುವುದಕ್ಕಾಗುವುದಿಲ್ಲ. ಒಂದು ಡಬ್ಬಿಯಲ್ಲಿ ೨೧ ಮಾತ್ರೆಗಳು ಇರುತ್ತವೆ. ಈ ಮಾತ್ರೆಗಳಲ್ಲಿ ಬೆಳಗ್ಗೆ ಮದ್ಯಾಹ್ನ ಸಾಯಂಕಾಲ ಒಂದೊಂದು ಮಾತ್ರೆ ನೀರಿನಲ್ಲಿ ಸೇವಿಸಬೇಕು. ಹೀಗೆ ದಿನಕ್ಕೆ ಮೂರಾವರ್ತಿ ೭ ದಿನ ತೆಗೆದುಕೊಳ್ಳಬೇಕು. . ಪಥ್ಯ ಹುಳಿ ಪದಾರ್ಥ ತಿನ್ನಕೂಡದು.

ಕ್ರಯ ೨೧ ಮಾತ್ರೆಗಳುಳ್ಳ ಡಬ್ಬಿ ಗಳ್ಕೆ ರೂ 0—8—0

## 17 Sugandhahallupudi ಸುಗಂಧ ಹಲ್ಲುಪುಡಿ

ಈ ದಂತಚೂರ್ಣವು ಒಳ್ಳೆ ಗುಣಕಾರಿಯಾದ ಶುದ್ಧ ಗಿಡಮೂಲಿಕೆಗಳಿಂದಲೇ ಬಹು ಪ್ರಯಾಸ ದಿಂದ ತಯಾರಿಸಿದ್ದಾಗಿದೆ. ಇದನ್ನು ಹಲ್ಲುಗಳಿಗೆ ನಿತ್ಯವುಜ್ಜಿಕೊಳ್ಳುವುದರಿಂದ ಹಲ್ಲುಗಳು ಯಾವಾ ಗಲೂ ಕೆಡದಂತೆ ಕಾಪಾಡುವುದು ಹಲ್ಲುಗಳು ಯಾವಾಗಲೂ ಶುಭ್ರವಾಗಿಯೇ ಇರುವುದು ಹಲ್ಲುಗಳು ಮುಖಸೌಂದರ್ಯವನ್ನು ಉಳಿಸುವಂಥಾದ್ದಾಗಿದೆ. ಅದಲ್ಲದೆ ಅನ್ನಕೋಶದಿಂದ ಒಂದು ಕೆಟ್ಟವಾಯು ಬಾಯಿಯಲ್ಲಿ ಬಂದು ಹಲ್ಲುಗಳಿಗೆ ಒಂದುತರದ ಅಂಟು ಅಂಟಿಕೊಂಡು ಹಲ್ಲಿನ ಬಡವೇ ಕೊಳೆಯಲಿಕ್ಕೆ ಮೂರುವಾಗಿ ನರಗಳು ಹಾಳಾಗಿ ರಕ್ತಸೇರುವುದು ಕೆಟ್ಟುಹೋಗಿ ಸೇರುವದರಿಂದ ಉಳ್ಳಿನಕೊಳಕು ತಿರಗಿ ಎಂಜಲಿನ ಮುಖಾಂತರ ಅನ್ನಕೋಶಕ್ಕೆ ಹೋಗಿ ಅನ್ನಕೋಶವನ್ನೇ ಹಾಳುಮಾಡುವುದು. ಎಂಥಾ

ಶುದ್ಧ ಆಹಾರತಿಂದರೂ ವಿಷದಹಾಗೆಯೇ ಆಗಿ ತರತರದ ರೋಗವಾಗಿ ಪರಿಣಮಿಸುವುದು. ಹಲ್ಲಿನ ಯಾವಬಾಧಕ ಇಲ್ಲದವರಾದರೂ ಸರಿಯೆ ನಿತ್ಯ ಈ ಹಲ್ಲುಪುಡಿಯನ್ನು ಹಲ್ಲಿಗೆಹಾಕಿ ಉಜ್ಜಿಕೊಳ್ಳುವುದರಿಂದ ನಿತ್ಯ ಸೌಖ್ಯಪಟ್ಟವರುವರು. ಹಲ್ಲಿನರೋಗದಿಂದ ಕಷ್ಟಪಡುವ ರೋಗಿಗಳಿಗೆ ಇದು ಒಳ್ಳೆಔಷಧವು ಆಗಿರುವುದು ಹಲ್ಲುನೋವು ವಸಡಿನಿಂದ ರಕ್ತಹರಿ ಯುವುದು ಹಲ್ಲಿನ ಬಡವೇ ಕೊಳೆತು ಹುಣ್ಣಾಗಿ ಬಾಯಿನಾರುವುದು ವಸಡುಗಳಲ್ಲಿ ಹುಣ್ಣಾಗಿ ದವಡೆ ಬಗಿಬರುವುದು, ಹಲ್ಲಿನಲ್ಲಿ ಸಂದು ಬೀಳುವುದು. ನಾಲಿಗೆಯಲ್ಲಿಯೂ, ತುಟಿಗಳ ಒಳಭಾಗದಲ್ಲಿಯೂ ಸಿಪ್ಪೆಯೇಳುವುದು, ಸುಟ್ಟಹಾಗಿರು ವುದು, ನಾಲಿಗೆಯಲ್ಲಿ ದಪ್ಪ ಅಗ್ರವಾಗಿ ರುಚಿ ಕಡುವುದು ಇತ್ಯಾದಿಗಳನ್ನು ಖಂಡಿತಗುಣಪಡಿಸುವುದು ಜೀರ್ಣಶಕ್ತಿಯನ್ನೂ ಸೌಖ್ಯವನ್ನೂ ಹೆಚ್ಚಿಸುವುದು. ಮೇಲಿನ ಯಾವ ಲಕ್ಷಣವಿಲ್ಲದವರಾದರೂ ಸರಿಯೆ ಹಲ್ಲಿನ ಗುಣಕ್ಕೂ ಶರೀರದ ಕ್ಷೇಮಕ್ಕೂ ಈ ದಂತಧಾವನ ಚೂರ್ಣವನ್ನು ಉಪಯೋಗಿಸುತಿದ್ದ ಬಂದರೆ ಹಲ್ಲುಗಳು ಗಟ್ಟಿಯಾಗಿಯೂ ಥಳಥಳಿಸುತ್ತಲೂ ಬಾಯಿಗೆ ಸುವಾಸನೆಯನ್ನುಂಟು ಮಾಡು ವುದು. ಪುನಃ ದಂತಬಾಧೆಗಳು ಎಂದಿಗೂ ಉಂಟಾಗಲಾರವು

ಕ್ರಯ ಡಬ್ಬಿ ಗಳ್ಕೆ ರೂ 0—4—0

## 18 Kalija gulmaroga oushada
## ಕಲಿಜ ಗುಲ್ಮರೋಗಗಳಿಗೆ ಔಷಧಿ.

ಗುಲ್ಮರೋಗವು ಜೀರ್ಣಕೋಶವು ವಿಕಲ್ಪವಾಗುವುದರಿಂದ ಉಂಟಾಗುವುದು ಇದು ಮಹಾಕ ಠಿಣವ್ಯಾಧಿ ಪ್ರಾರಂಭದಲ್ಲಿ ಸ್ವಲ್ಪವಾಗಿ ಕಂಡು ಒಳಿಕೆ ಹೆಚ್ಚು ಉಪದ್ರವನ್ನು ಕೊಡಲಿಕ್ಕೆ ಕಳ್ಳತನದ ರೋಗ ಈ ವ್ಯಾಧಿಯ ಲಕ್ಷಣಗಳು.

ಹಸಿವು ಮಂದ ಮೇಲು ಹೊಟ್ಟೆಯಲ್ಲಿ ವೇದನೆ ಹೊಟ್ಟೆಯಲ್ಲಿ ವಾಯುಸೇರಿ ಭಾರವಾಗಿ ಕೂಗು ವುದು-ಹೊಟ್ಟೆಯಲ್ಲಿ ಉಬ್ಬಸ, ಅಪಾನವಾಯು ಸಡಿಲುವುದು-ವಾಕರಿಕೆ ಮಲಬಂಧವು ಭೇದಿಯು ತಪ್ಪಿ ತಪ್ಪಿ ಆಗುವುದು ನಾಲಿಗೆಯ ಮೇಲೆ ಬೆಳ್ಳಗೆ ಹಿಟ್ಟಿನಂತೆ ಕೊಳೆ ಸೇರುವುದು ಪಕ್ಕೆಗಳಲ್ಲಿ ನೋವು ಬಾಯಿದುರ್ಗಂಧ ಹೃದಯ ನಡನಡುಗುವುದು ನಡು ನೋವು ಕೈಕಾಲುಗಳಲ್ಲಿ ವೇದನೆ ತಲೆಭಾರ ಕರುಳು ಉರಿ ಹುಳಿತೇಗು ಎದೆ ಒಡೆದು ಹೋಗುವಂತಾಗುವ ನೋವು ಮೊದಲಾದವುಗಳು ಈ ರೋಗದ ಲಕ್ಷಣಗಳಾಗಿರುವವು.

ಊಟಮಾಡಿದ ಕೂಡಲೆ ಹೊಟ್ಟೆನೋವು ಹಸಿವಾಗುವಾಗ ಹೊಟ್ಟೆನೋವು ಬರಿಯ ಹೊಟ್ಟೆನೋವು ಯಾವಾಗಲೂ ಹೊಟ್ಟೆ ತುಂಬಿದ ಹಾಗೆ ಇರುವುದು ಆಹಾರದ ಮೇಲೆ ಆಶೆ ಇಲ್ಲದಿರುವುದು ಒಂದು ವಿಧವಾದ ವೇದನೆ ತಿಂದ ಆಹಾರ ವನ್ನು ವಾಂತಿಮಾಡಿದ ಮೇಲೆಕೊಂಚ ಸುಖವಾದ ಹಾಗೆ ಇರುವದು ಅಗ್ನಿ ಮಂದ ಇನ್ನೂ ಅನೇಕವಿಧವಾಗಿ ಕಾಣಬರುವುದು ಗುಲ್ಮರೋಗಗಳಿಗೆ ಕೆಲವು ಸಮಯ ದಲ್ಲಿ ಮೂರ್ಛೆಯುಂಟಾಗುವುದು ದೃಷ್ಟಿಮಂದವಾಗುವುದುಂಟು ಕೆಲವರಿಗೆ ಈ ರೋಗದಿಂದುಂಟಾಗುವ ಬಾಧೆ ಕೊಂಚವಾಗಿಯೂ ಕೆಲವರಿಗೆ ತಡೆಯಲಾರ ದಂಥಾದ್ದಾಗಿಯೂ ಇರುವುದು ಪ್ರಾಣತ್ಯಾಗಮಾಡಿಕೊಳ್ಳುವುದಕ್ಕಾದರೂ ಮನಸ್ಸುಂಟಾಗುವುದು ಈ ವ್ಯಾಧಿಯನ್ನು ಅನುಭವಿಸುವವರು ಸುಖವಾಂಛಲ್ಯ ಗಳನ್ನು ಬಿಟ್ಟು ಋಣವನ್ನು ಬಿಟ್ಟವಾಗಿ ಮಾಡಿಕೊಳ್ಳುವರು ನಾನಾವ್ಯಾಧಿ



ಗಳಿಂದ ಹೊಟ್ಟೆಯಲ್ಲಿ ಗೆಡ್ಡೆಯು ಬೆಳದು ಗಡಿಗೆಯ ಹಾಗೆ ದೊಡ್ಡದಾಗಿಯೂ ಕಲ್ಲಿನ ಹಾಗೆ ಘಟ್ಟಿಯಾಗಿಯೂ ಕೈಕಾಲುಗಳು ಸಣ್ಣದಾಗಿಯೂ ಇದ್ದು ನೋಡುವವರಿಗೆ ಅಸಹ್ಯವಾಗಿ ಕಾಣುತ್ತಾ ಎಷ್ಟು ಔಷಧಗಳನ್ನು ಸೇವಿಸಿದಾಗ್ಯೂ ಹೇಗೂ ವಾಸಿಯಾಗದೆ ಅಕಾಲ ಮರಣಕ್ಕೆ ತುತ್ತಾಗಬೇಕಿಂದಿರುವವರು ನಮ್ಮಲ್ಲಿ ಬಹಳ ಪರಿಶ್ರಮಗಳಿಂದ ತಯಾರ್ಮಾಡ ಲ್ಪಟ್ಟಿರುವ " ಗುಲ್ಮರೋಗನಿವಾರಣಿ " ಎಂಬ ಔಷಧವನ್ನು ಸೇವಿಸಿದರೆ ಮೇಲ್ಕಂಡ

ಯಾವಾಗಲು ಗಂಟಲಲ್ಲಿ ಉಕ್ಕ... ...ಗೆ ಕಾಣದಂತೆ ಮರೆ ಗುಣಪಡಿಸುವುದು ಅಜೀರ್ಣವು ಮತ್ತೊಂದುವೇಳೆ ... ಯಾಗುವುದು.

ಉಪಯೋಗಿಸುವ ವಿಧ ಬೆಳಿಗ್ಗೆ ಮಧ್ಯಾನ್ಹ ಸಾಯಂಕಾಲ ಸುಮಾರು ೨ ಎರಡಾಣೆಯ ತೂಕ ಔಷಧವನ್ನು ತಿಂದು ಅರ್ಧಪಾವು ನೀರು ಕುಡಿಯಬೇಕು ಊಟಮಾಡಿ ಅರ್ಧ ಘಂಟೆಯಾದ ಮೇಲೆ ಸೇವಿಸಬೇಕು ಹೀಗೆ ದಿನಕ್ಕೆ ಮೂರಾವರ್ತಿ ಪೂರಾ ಒಂದು ತಿಂಗಳು ಸೇವಿಸಬೇಕು.

ಕ್ರಯ 1-0-0

## 19 Nadi Shakti Taila ನಾಡೀಶಕ್ತಿ ತೈಲ

(ಜೀವನರಗಳನ್ನು ಬಲಪಡಿಸುವಂಥಾ ಮೇಲೆ ಹಚ್ಚುವ ತೈಲ) ಪುರುಷರೇ ಜನನೇಂದ್ರಿಯಗಳ ಬಲಹೀನತೆಯನ್ನು ನೀಗಿ ಬಲವನ್ನು ಕೊಡುವುದರಲ್ಲಿ ಇದಕ್ಕಿಂತಲೂ ಮಿಂಚಿದ ಔಷಧವೇರೆ ಯಾವುದೂ ಇಲ್ಲವೆಂದು ಖಂಡಿತವಾಗಿ ಹೇಳಬಹುದು. ಮುಷ್ಟಿಮೈಥುನ ಚುಂಬನ ಎನ್ನುವ ದುಷ್ಟಾಭ್ಯಾಸದಿಂದ ಕೆಟ್ಟ ಸ್ತ್ರೀಯರ ಸಂಗದಿಂದಲೂ ಮುಖ್ಯನರಗಳು ಕುಗ್ಗಿ ಸಡಿಲವಾಗಿ ಹೋಗಿ ಸುರಟಿಕೊಂಡು ವಿಷಯ ಸುಖಕ್ಕೆಪ್ರಯೋಜನವಿಲ್ಲದಂತೆ ಇರುವುದು ದುಃಖಕರವಾಗಿ ಬಲಹೀನತೆ ಮನುಷ್ಯರ ದೂಷಿತ ವೀರ್ಯವು ಗರ್ಭಕೋಶವಾಗಲಾರದು ಅತ್ಯಂತವ್ಯಾಯಾಮ (ಕಸರತ್)ನಿಂದಲೂ ತನ್ನ ಪ್ರಕೃತಿಗೆ ವಿರುದ್ಧವಾದ ಪದಾರ್ಥಗಳನ್ನು ಭುಜಿಸುವದರಿಂದಲೂ ಯಾವಾಗಲೂ ಕೂತುಕೊಂಡೇ ಇರುವುದರಿಂದಲೂ ಹಸ್ತ ಪ್ರಯೋಗಾದಿಗಳಿಂದಲೂ ವೃದ್ಧಾಪ್ಯದಿಂದಲೂ ನಾಡಿಗಳು ಬಲಹೀನವನ್ನೈದುವವು ಕೆಲವರು ಚಿಕ್ಕ ದಲ್ಲಿಯೆದುಸ್ಸಹವಾಸದಿಂದ ಮೇಲ್ಕಂಡ ದೋಷಗಳನ್ನುಂಟು ಮಾಡಿಕೊಳ್ಳುವರು ಇವರು ಚಿಕಿತ್ಸೆ ಯನ್ನು ಹೊಂದದೆಯೂ ವೈದ್ಯರಲ್ಲಿ ಹೇಳಲು ನಾಚಿಕೆಯಿಂದಲೂ ತಮಗಿರುವ ಕೊರತೆಯನ್ನು ಹೆಚ್ಚು ಮಾಡಿಕೊಂಡು ಪ್ರಾಯಸಮರ್ಥರಾದಾಗ ಸಂಭೋಗಾಪೇಕ್ಷೆಗೆ ಶಕ್ತಿ ಇಲ್ಲದೇ ಲಜ್ಜಾಸ್ಪದದಿಂದ ಆಶಾ ಭಗ್ನರಾ ಮನೋವ್ಯಥೆಯನ್ನು ಉಂಟುಮಾಡಿ ಕೊಳ್ಳುವರು ಅವರುಗಳ ಉಪಕಾರಕ್ಕೋಸ್ಕರ ಹಿಂದೂಸ್ಥಾನದಲ್ಲಿ ಕೇವಲ ಅಪೂರ್ವವಾಗಿ ಸಿಕ್ಕುವ 'ಸಾಂಡಾ' ಎಂಬ ಮೃಗದಿಂದ ಬಹಳ ಪಂತ್ರಮದಿಂದ ಈನಾಡೀಶಕ್ತಿ ತೈಲವನ್ನು ತಯಾರ್ಮಾಡಲ್ಪಟ್ಟಿರುವುದು ಈತೈಲವನ್ನು ಲಿಂಗಕ್ಕೆ ಸವರುವ ದರಿಂದಲಿಂಗವು ಬಲಹೀನವಾಗಿದ್ದರೂ ಅಗ್ನಿಜ್ವಾಲೆಯೋಪಾದಿಯಾದ ವೇಗವಾದ ಶಕ್ತಿಯನ್ನುಂಟು ಮಾಡುವದು. ಒಂದಾವರ್ತಿ ಉಪಯೋಗಿಸುವುದರಿಂದಲೇ ಇದರ ಗುಣವು ಕಂಡು ಬರುವುದು ಉಪಯೋಗಿಸುವ ವಿಧಾನ ;—ಈ ತೈಲವನ್ನುಸುಮಾರು ಎರಡಾಣೆತೂಕದಷ್ಟು ಒಂದು ಕಡ್ಡಿಗೆ ಹತ್ತಿಯನ್ನಾಗಲಿ ಸ್ವಲ್ಪ ಬಟ್ಟೆಯನ್ನಾಗಲೀ ಸುತ್ತಿತೈಲದಲ್ಲಿ ಅದ್ದಿ ಮಣಿಯ ಸುಂಭಾಗವನ್ನು ಮತ್ತು ಹಿಂಭಾಗವನ್ನು ಬಿಟ್ಟು ಬಾಕಿ ಲಿಂಗದಮೇಲಿರತಕ್ಕ ಚರ್ಮದ ಮೇಲೆ ೬-೪ ನಿಮಿಷಗಳವರೆಗೆ ಸವರಿ ನಂತರ ಳ್ಳೆಯೆಲೆಯನ್ನು ಕಟ್ಟಿ ಒಂದು ಬಟ್ಟೆಯನ್ನು ಸುತ್ತಬೇಕು. ನಂತರ ಬೆಳಿಗ್ಗೆ ಅದನ್ನು ತೆಗಯಕು. ಈ ರೀತಿ ೧೫ ದಿನಗಳು ಕ್ರಮವಾಗಿ ಮಾಡುವುದರಿಂದ ಲಿಂಗವು ಎಷ್ಟು ಬಲಹೀನ ವಾಗಿದ್ದರೂ ಶಕ್ತಿಯನ್ನುಂಟುಮಾಡಿ ದೃಢಪಡಿಸುತ್ತದೆ.

ಕ್ರಯ ಶೀಸೆ ಗಳ್ಕೆ 1—0—0

## 0 Ointment For Itches ಕಜ್ಜಿಮುಲಾಮು

ಗಜ್ಜ - ಸಣ್ಣಸಣ್ಣ ತುರಿ ಕಜ್ಜಿ ಮತ್ತು ಉರಿದು ನೀರು ಬರುತ್ತಿರುವ ಕಜ್ಜಿ ಹುಳಿನೋಯುವ ತರತರದಚರ್ಮರೋಗ ಇವುಗಳೆಲ್ಲಾ ಈ ಮುಲಾಮು ಹಚ್ಚುವದರಿಂದ ಗುಣವಾಗಲು ಇದು ಖಾತರಿಯಾದ ಮುಲಾಮು.

ಕ್ರಯ 0—4—0 ಟಪಾಲು ಖರ್ಚು ಅಲಾಹಿದ.

## 21 ingworm Ointment ಹುಳುಕಡ್ಡಿಗೆ ಮುಲಾಮು

ಸದ ಒಳಭಾಗದಿಂದ ಬರುವ ಅಶುದ್ಧ ಬೆವರು ಶರೀರದ ಆಯಾಭಾಗದಲ್ಲಿ ನಿಂತು ಗಟ್ಟಿ ಯಾಗಿ ೪೫ ತರದ ಚರ್ಮ ರೋಗಗಳಾಗಿ ಹೊರಪಡುವುದು. ಕಜ್ಜಿ ದದ್ದುಮುಂತಾದುವು ತೊಡೆ ಸಂದ್ಗುಳಿಯೂ, ಮೈ ಆಯಾಭಾಗಗಳಲ್ಲಿಯೂ ಹರಡಿಕೊಂಡಿರುವುದು. ಕಡೆಗೆ ಇದು ಮಹಾ ಅಂಟುರೋಗವಾಗಿ ಪರಿಣಮಿಸುವುದು. ಇಂಥಾ ಅವಸ್ಥೆಗಳುಳ್ಳ ಸಾವಿರಾರು ಜನಗಳು ಪರೀಕ್ಷಿಸಿರ ತಕ್ಕ ಈಮುಲಾಮನ್ನು ಹಚ್ಚುವದರಿಂದ ಎಷ್ಟು ವರ್ಷಗಳ ಹುಳುಕಡ್ಡಿಯಾಗಲೀ ಎಂಥಾ ಗಜಕರ್ಣ ಉಪದ್ರವಾಗ್ಯೂ ತಳಭಂಗಗಳಾಗಿ ಖಂಡಿತವಾಗಿಯೂ ಗುಣವಾಗುತ್ತದೆಂದು ನಾವು ಡಂಗುರ ಹೊಡೆಯಲುವವು ಈ ಔಷಧದ ಚಮತ್ಕಾರವನ್ನು ಮತ್ತು ಆಶ್ಚರ್ಯಕರವಾದ ಇದರ ಗುಣವನ್ನೂ ಅನುಭವಮಾಡಿ ನೋಡಿ ಈ ಔಷಧವನ್ನು ಹಚ್ಚುವದರಿಂದ ಉರಿಯು ಕಂಡು ಬರುವುದಿಲ್ಲ.

...ಉಪಯೋಗಿಸುವ ವಿಧ ರೋಗಗತಗಳಿವ ಭಾಗವನ್ನು ಚನ್ನಾಗಿ ತೊಳೆದು ನಿರ್ಮಲ ಬಟ್ಟೆ ಯಿಂದ ...ಗಿ ಒರಸಿ ನಂತರ ಈ ಮುಲಾಮನ್ನು ಹಚ್ಚಿಕೊಳ್ಳುವದು. ಯಾವ ಸಾಬೂನಾ ದರೂ ...ಯೋಗಿಸಬಹುದು.

...ಯ ಡಬ್ಬಿ ೧ ಕ್ಕ 0—8—0 ಟಪ್ಪಾಲು ಖರ್ಚು ಅಲಾಹಿದ

## 22 kvarathna Pills ಪರಿಮಳನವರತನ್ ಮಾತ್ರೆ

...ಬಹಳ ಸುವಾಸನೆಯಾದದ್ದು ಇದನ್ನು ಉಪಯೋಗಿಸಿದರೆ ದೇಹಪುಷ್ಟಿಯು ಜೀರ್ಣಶಕ್ತಿ ಯಾಗು ಮಾಡುವುದು ಸ್ವದೇಶದ ಶುದ್ಧವಾದ ಗಿಡಮೂಲಿಕೆಗಳಿಂದ ಮಾಡಿರುತ್ತದೆ ದೊಡ್ಡ ದೊಡ್ಡ ಶ್ರೀಮಂತರುಗಳು ನೇಟೀವ ವೈದ್ಯರುಗಳು ಮಿಲ್ಟರಿ ಆಫೀಸರುಗಳು ಮತ್ತು ವ್ಯಾಪಾರಸ್ತರು ಈ ಮಾತ್ರೆಗಳ ಉಪಯೋಗಿಸಿ ಇದರ ಗುಣಗಳನ್ನು ಪರೀಕ್ಷಿಸಿರುತ್ತಾರೆ.

—ಇದರ ವಿವರಗಳು—

ತಾಂಬೂಲದಲ್ಲಿ ೩ ಮಾತ್ರೆಗಳನ್ನು ತಿಂದರೆ ಕಂಠದಲ್ಲಿರುವ ಶ್ಲೇಷ್ಮವು ಹೋಗಿ ಒಳ್ಳೆಯ ಧ್ವನಿಯುಂಟುಮಾಡುವದು

೩ ಮಾತ್ರೆಗಳನ್ನು ಉಪಯೋಗಿಸಿದರೆ ಒಳ್ಳೆಸುವಾಸನೆಯನ್ನು ಕೊಡುವದು.

೧೦ ಮಾತ್ರೆಗಳನ್ನು ನೀರಿನಲ್ಲಿ ಉಜ್ಜಿ ತಲೆಗೆ ಪಟ್ಟುಹಾಕಿದರೆ ತಲೆನೋವು ನಿಂತು ಹೋಗುವು.

೧೦ ಮಾತ್ರೆಗಳು ಬಾಯಿಯಲ್ಲಿ ಹಾಕಿಕೊಂಡು ಸ್ವಲ್ಪ ಬಿಸಿ ನೀರನ್ನು ಕುಡಿದರೆ ಹೊಟ್ಟೆ ನೋವು ವಾಂತಿ, ಭೇದಿಗಳು ನಿಂತುಹೋಗುವದು.

೩ ಮಾತ್ರೆಗಳು ದವಡೆಯಲ್ಲಿ ಇಟ್ಟುಕೊಂಡಿದ್ದರೆ ಕೆಮ್ಮು ದಾಹವು ನಿಂತು ಹೋಗು.

ಹಾಲುಕುಡಿಯುವ ಮಕ್ಕಳಿಗೆ ೧ ಮತ್ತು ೨ ಮಾತ್ರೆಗಳನ್ನು ಹಾಲಿನಲ್ಲಿ ತೇದು ಕುಡಿಸಿದರೆ ಜ್ವರ ಕೆ ತಲೆನೋವು ಹೊಟ್ಟೆನೋವು ನಿಂತುಹೋಗುತ್ತದೆ.

ಪ್ರಯಾಣಕಾಲದಲ್ಲಿ ಬಾಯಿಯಲ್ಲಿ ೩ ಮಾತ್ರೆಗಳನ್ನು ಹಾಕಿಕೊಂಡಿದ್ದರೆ ನೀರಿನ ದಾಹವು ನಿಂತುಹೋಗುವದು.

ಈ ಮಾತ್ರೆಯು ಪ್ರಯಾಣ ಮಾಡುವವರ ಹತ್ತಿರ ಮುಖ್ಯವಾಗಿ ಇರಬೇಕಾದ್ದು

ವಿವರಗಳು

50 ಮಾತ್ರೆಗಳುಳ್ಳ ಶೀಸೆ ಗಳ್ಕೆ 0—2—0. 100 ಮಾತ್ರೆಗಳುಳ್ಳ ಶೀಸೆ 0—4—0
200 ಮಾತ್ರೆಗಳುಳ್ಳ ಶೀಸೆ 0—8—0

## [illegible]ವಾರದ ಸಂಗ್ರಹ.

### ಒಳನಾಡು

[illegible]ರ ಕೋಟೆಯಲ್ಲಿರುವ ನಮ್ಮ 70 ಚಪ್ಪರ[illegible] [illegible]ಲೋ ಕಾರಣದಿಂದ ರಾಜಿನಾಮೆ ಕೊಟ್ಟಿರುವ [illegible]

[illegible] ಯಂ. ರಾಮರಾಯರು ಮಡಿಕೇರಿ ಸೆಂಟ್ರಲ್ [illegible] ಹೆಡ್ಮಾಸ್ಟರು ತಮ್ಮ ಚಾರ್ಜನ್ನು ಈ ತಾ. 27 [illegible]ಕೊಳ್ಳುವರು.

[illegible]ಶ್ಯಾಂರಾವ ಮಿ. ಪಟ್ಟಮಾಡ ಪೂವಯ್ಯನವ[illegible] [illegible]20ರಿಂದ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಿಂದ [illegible] ಹೈಸ್ಕೂಲಿಗೆ ವರ್ಗಾಯಿಸಲ್ಪಟ್ಟಿರುವರು.

[illegible]ಸ್ತು ಇಂಗ್ಲಾಂಡಿಗೆ ಹೋಗಿದ್ದ ಚೀಫ್ ಫಾರೆಸ್ಟ್ [illegible]ರೂ ಜಿ. ಸಿ. ರಾಬಿನ್‌ಸನ್‌ರವರು ರಜೆ ತೀರಿ ಸೆ[illegible] ತಾ7ರಲ್ಲಿ ಹಿಂತಿರುಗಿ ಬಂದು ವುನಃ ಆ ಉ[illegible] [illegible]ವಹಿಸಿಕೊಳ್ಳುವರೆಂದು ತಿಳಿಯುತ್ತೇವೆ.

[illegible] ಇಂಡಿಯಾ ಮಧ್ಯಾಹ್ನದ ಎಂಬ ಡ ಬಂಡ [illegible] [illegible]ನ ಎಸೋಸಿಯೇಶನಿನ ಮಡಿಕೇರಿ ಶಾಖೆಯು ಕೆ[illegible] [illegible] ಬಿಡುಕೋಲ್ದುರುಗಳ ಮೀಟಿಂಗೊಂದು ಈ ತಾ [illegible]ದಿತ್ತಾರ ಆ ಸಂಘದ ಆಫೀಸಿನಲ್ಲಿ ನಡೆಯಲಿಕ್ಕಿದೆ.

[illegible]ಸುಮಾರು ಎರಡು ತಿಂಗಳ ಹಿಂದೆ ಕಾಟಕೇರಿ ಗ್ರಾಮ[illegible] [illegible]ಮಪ್ಪೊನ್ನಪ್ಪನೆಂಬವನು ಸದರಿ ಮನೆ ತಂಗಪ್ಪನೆಂ[illegible] [illegible]ವನನ್ನು ಗುಂಡು ಹೊಡೆದು ಕೊಂದನೆಂಬ ಮೊಕದ್ದಮ್ಮೆ [illegible] ತಾ17ರಲ್ಲಿ ಸೆಷನ್ ಜಡ್ಜರ ಕೋರ್ಟಿನಲ್ಲಿ ವಿಚಾ[illegible] [illegible]ಲ್ಪಡುವದು

[illegible]ಜಿಲ್ಲಾಸಭೆಯ ಮೆಂಬರನ ಮಗನಾದ, ಸಿಂಡಿಕೇಟ್ [illegible]ಕ್ವಿಕ್ ಸಾಲ್ಕಾನ ಪಾರಮಿನಲ್ಲಿ ವಿದ್ಯಾಭ್ಯಾಸ ಮಾ[illegible] [illegible]ಟ್ಟಿರುವ [illegible] ವಿದ್ಯಾರ್ಥಿಗೆ ಕೇಂದ್ರ ಸಭೆಯ ಕಮಿಟಿ [illegible] [illegible] ಒಂದ[illegible]ಕವನ್ನು ಕೊಟ್ಟಿರುವರೆಂದು ಅವರ ನ್ಯಾಟ [illegible]ಯವರು ತಿಳಿಸುತ್ತಾರೆ.

[illegible]ಕೊಡಗು ಎಲಿಮೆಂಟರಿ ಶಾಲೆಗಳ ಸಬ್ ಅಸಿಸ್ಟೆಂಟ್ [illegible] ಇನ್ಸ್‌ಪೆಕ್ಟರಾಗಿದ್ದ ಮಿ. ಪಟ್ಟಡ ಸಿ. ಉತ್ತಯ್ಯನವರು ಸಿಂ[illegible] [illegible]ಪೇಟೆ ಸ್ಕೂಲಿನ ಹೆಡ್ಮಾಸ್ಟರಾಗಿ ನೇಮಿಸಲ್ಪಟ್ಟಿ[illegible] [illegible]ರು. ಇವರು ತಾ. 23ರಲ್ಲಿ ಮಿ. ಸಿ. ಯಂ. [illegible] ಅವರಿಂದ ಚಾರ್ಜು ತೆಗೆದುಕೊಂಡರು

[illegible] ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಅಸಿಸ್ಟೆಂಟ್ ಮಾ[illegible] [illegible]ಸ್ಟರಾಗಿದ್ದ . ಬಿದ್ದಂಡ ಯಸ್. ಕುಶಾಲಪ್ಪನವರು ಕೊಡ[illegible] [illegible]ನ ಎಲಿಮೆಂಟರಿ ಶಾಲೆಗಳ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟ[illegible]ರಾಗಿ ನೇಮಿಸಲ್ಪಟ್ಟಿರುವರು. ಇವರು ತಾ. 21ರಲ್ಲಿ ಮಿ. ಪಿ. ಸಿ. ಉತ್ತಯ್ಯನವರಿಂದ ಚಾರ್ಜು ತೆಗೆದುಕೊಂಡರು.

[illegible]ಕೆದಮುಳ್ಳೂರ ಸಾವ್ರೋಕ್ಲು ನಾಡು ನೆಲಜಿ ಗ್ರಾಮದ [illegible] ಕೈಬಿಲಿರ ನೇಮಯ್ಯನು ಸದರಿ ಮನೆ ಪೇದಪ್ಪನನ್ನು ಪ[illegible] [illegible] ಕಾರಣದಿಂದ ಚೂರಿ ಹಾಕಿ ಕೊಂದ ತಕ್ಸೀರಿನ ಮೇಲೆ [illegible] ದಸ್ತಗಿರಿ ಮಾಡಲ್ಪಟ್ಟಿರುವನೆಂದೂ, ಕೇಸ[illegible] [illegible]ನ್ನು ಪೊಲೀಸಿನವರು ವಿಚಾರ ಮಾಡುತ್ತಿರುವರೆಂದೂ ತಿಳಿಯ ಬರುತ್ತದೆ.

ಮಿ. ಪಿ. ಉತ್ತಯ್ಯನವರಿಗೂ ಮತ್ತು ಮಿ. ಬಿ. ಯಸ್. ಕುಶಾಲಪ್ಪನವರಿಗೂ ಜವಾಬ್ದಾರಿಯ ಹೊಸ ಉದ್ಯೋಗಗಳು ದೊರೆತ ಸಂತೋಷಕ್ಕಾಗಿ ಅವರ ಕೆಲವು ಆಪ್ತ ಸ್ನೇಹಿತರು ತಾ. 21ಲ್ಲಿ ಜವಿಾನ್ದಾರರ ಸಂಘದ ಹಾಲ್‌ನಲ್ಲೂ, ಮಡಿಕೇರಿಯ ಎಲಿಮೆಂಟರಿ ಉಪಾಧ್ಯಾಯರುಗಳು ತಾ. 22ರಲ್ಲಿ ಹಿಂದುಸ್ಥಾನಿ ಸ್ಕೂಲಿನಲ್ಲಿಯೂ ಅವರಿಗೆ ಟೀಪಾರ್ಟಿಯನ್ನು ಕೊಟ್ಟರು

ಬೆಂಗಳೂರಿನಲ್ಲಿರುವ ಪೆಲ್ಲಿ ನೇಟಿವ್ ಡಾಕ್ಟರ್ ಡಿ. ಮ[illegible] [illegible]ರ 'ಶಾಲಿಂಮಿಸ್ತ್ರಿ ಮಿಂರಬ್ಬ'ದ ಪ್ರಕಟಣೆಯನ್ನು ಈ ಸಂಚಿಕೆಯ ಪುರವಣಿಯಾಗಿ ಕಳುಹಿಸಿರುತ್ತೇವೆ

---

### ಹಿಂದೂದೇಶ.

"[illegible] ಸರ್ಚ್‌ಲೈಟ್" ಎಂಬ ಪತ್ರಿಕೆಯ ಸಂಪಾದಕರನ್ನು [illegible]ನ್ನು ಹೀಯಾಳಿಸಿದ ತಕ್ಸೀರಿನ ಮೇಲೆ ತಪ್ಪಿತಸ್ಥನೆಂದು [illegible]ಸಿ 500 ರು. ಜುಲ್ಮಾನೆ [illegible] ದರು

ಕರ್ನಾಟಕ ಪ್ರಾಂತ್ಯದಲ್ಲಿ ಪ್ರಾಂತೀಕ ಕಾಂಗ್ರೆಸ್ ಕ[illegible] [illegible]ಟಿಗಳು ಬರುವ ಕಿತ್ತಿತ್ತಾ [illegible] ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ [illegible] ವೋಕಿಲರ್ [illegible] ನಿಮ್ಮತವರನ್ನು ಶಿಫಾರಸ್ಸು [illegible] [illegible]ರು.

"ಪೂನಾ ಡಿಸ್ಟ್ರಿಕ್ಟಿನ ಇಂದಾಪುರದ ಮುನ್ಸಿಪಲ್ ಕಮಿಟಿ[illegible]ಯವರು ಕೆಲಸ ನಡೆಸಲು ಅಪಾತ್ರರಲ್ಲವೆಂಬ ಕಾರಣದಿಂದ ಸ[illegible] [illegible]ದವರು ಆ ಕಮಿಟಿಯನ್ನು ಡಿಸ್‌ಮಿಸ್ ಮಾಡಿ ಹೊಸ [illegible]ಯನ್ನು ನೇಮಿಸಿರುವರು.

ಪೂನಾ ಸಿಟಿ ಮ್ಯುನಿಸಿಪಾಲಿಟಿಯವರು ಸೈಮನ್ ಕಮಿ[illegible]ನ್ನು ಬಹಿಷ್ಕರಿಸಬೇಕೆಂದೂ, ಅವರಿಗೆ ಯಾವರೀತಿಯ ಗೌ[illegible]ವನ್ನು ಮಾಡಬಾರದೆಂದೂ ಎಂಬ ಠರಾವನ್ನು ಇದೇ ತಾ. [illegible] ಮಂಜೂರು ಮಾಡಿರುವರು.

[illegible] ಬುದ್ಧಿವಂತಿಕೆಯ ಮತ್ತು ಒಮ್ಮತದ ರಚನೆಯನ್ನು ತ[illegible] [illegible]ದಕ್ಕಾಗಿ ಮಹಾತ್ಮ ಗಾಂಧಿಯವರು, ಲಾಲಾ ಲಜಪ[illegible] [illegible], ಸೆನ್‌ಗುಪ್ತರೇ ಮೊದಲಾದ ಪ್ರಾಮುಖ್ಯ ಧುರೀ[illegible] [illegible]ರು ಕಮಿಟಿಯವರನ್ನು ಅಭಿನಂದಿಸಿರುವರು.

ಆನೆಗಳು ಕತ್ತಲಾದ ಮೇಲೆ ರಾಜಾ ರಸ್ತೆಯಲ್ಲಿ ತಿರುಗುವಾಗ ಹಿಂದೆಯೂ ಮುಂದೆಯೂ ದೀಪಗಳನ್ನು ಹೊತ್ತಿಕೊ[illegible]ಬೇಕೆಂಬ ವಿಶೇಷವಾದ ಸೂಚನೆಯೊಂದು ಸಿಲೋನಿನ ಕ್ಯಾಂಡಿ ಪಟ್ಟಣದ ಮುನಿಸಿಪಾಲಿಟಿಗೆ ಕಳುಹಿಸಲ್ಪಟ್ಟಿದೆಯಂತೆ!

ಸಿಲೋನಿನ ರಾಜಕೀಯ ಸಭೆಗಳನ್ನು [illegible] ಡೊನಮೋರ ಕಮಿಟಿಯ ವರದಿಯಲ್ಲಿರುವ ಸೂಚನೆಗಳನ್ನು ಕೆಲವು ಬದಲಾವಣೆಗಳಿಂದ ಒಪ್ಪಿಕೊಳ್ಳುವಂತೆ ಸಿಲೋನ್ ನ್ಯಾಶನಲ್ ಕಾಂಗ್ರೆಸ್ಸಿನ ಕಾರ್ಯಕಾರೀ ಮಂಡಳಿಯ[illegible]ರು ತೀರ್ಮಾನಿಸಿರುವರು

ಪಾಶ್ಚಾತ್ಯ ದೇಶಗಳಲ್ಲಿ ಪ್ರವಾಸಮಾಡಿ ಹಿಂದಿರುಗಿ ಬರುವ ಶ್ರೀಮತಿ ಯಸ್. ಶ್ರೀನಿವಾಸ ಅಯ್ಯಂಗಾರರವರು ಮದ್ರಾಸಿಗೆ ತಲುಪುವಾಗ ಅವರಿಗೆ ಸ್ವಾಗತವನ್ನೀಯಲು ತಕ್ಕ ವಿಚಾರಗಳನ್ನು ಮಾಡಲು ಮುಖ್ಯಸ್ಥರ ಒಂದು ಕಮಿಟಿಯು ನೇಮಕ ಮಾಡಲಾಗಿದೆ.

ಫಾಜಿಲ್ಕಾ ಎಂಬ ಸ್ಥಳದಲ್ಲಿ ಗೋಹತ್ಯವನ್ನು ಮಾಡಲು ಸ್ಥಳೀಕ ಅಧಿಕಾರಿಗಳು ಅಪ್ಪಣೆ ನೀಡಿದ್ದರಿಂದ ಅಲ್ಲಿಯ ಹಿಂದೂಗಳು ಕಳೆದ ಒಂದು ವಾರದಿಂದ ಹರತಾಳವನ್ನು ಆಚರಿಸಿರುತ್ತಾರೆ. ಈ ಸ್ಥಳದಲ್ಲಿ ಕಳೆದ 100 ವರ್ಷಗಳಿಂದ ಗೋಹತ್ಯದ ವಿಷಯವೇ ಗೊತ್ತಿಲ್ಲವಂತೆ. ಈ ತೊಂದರೆಯನ್ನು ನಿವಾರಿಸಲು ಅಲ್ಲಿಯ ಹಿಂದೂಗಳು ಪಂಡಿತ ಮದನಮೋಹನ ಮಾಳವೀಯರನ್ನು ಬರುವಂತೆ ಕೇಳಿದ್ದಾರೆ

ಬೆಂಗಾಲಿನ ಗಿರಣಿ ಕೆಲಸಗಾರರ ಪ್ರತಿನಿಧಿಗಳು ಮತ್ತು ಗಿರಣಿಯ ಧನಿಗಳ ಪ್ರತಿನಿಧಿಗಳೂ [illegible], ಮುಷ್ಕರ ಹಿಡಿದಿರುವ ಕೆಲಸಗಾರರು ಒಳನೆ ಕೆಲಸಕ್ಕೆ ಹೋದರೆ, ಅವರ ಸರ್ವ ಕಷ್ಟಗಳನ್ನು ನೀಗಿಸಲು ಸರಿಯಾದ ವಿಚಾರಣೆ ಮಾಡಲಾಗುವುದೆಂದು ಧನಿಗಳು ಹೇಳಲು, ಕೆಲಸಗಾರರ ಪ್ರತಿನಿಧಿಗಳು [illegible] ಒಪ್ಪದೆ ಹೋದುದರಿಂದ ಸಭೆಯು ಮುಕ್ತಾಯವಾಗಿ ಯಾವ ತರಹದ ಸಂಧಾನವೂ ಜರುಗಿದಂತಾಗಲಿಲ್ಲ. ಮುಷ್ಕರದ ಸ್ಥಿತಿಯು ಇನ್ನೂ ಬದಲಾಗದುವುದಿಲ್ಲ.

ಸೆಂಟ್ರಲ್ ಪ್ರಾವಿನ್ಸಿನ ಮಂತ್ರಿಗಳಾದ [illegible] ಎಂದೇಶಮುಖ್ ಮತ್ತು ಮಿ. ರಾಘವೇಂದ್ರರಾವ್ ರ ಮೇಲೆ ಅವಿಶ್ವಾಸದ ಠರಾವುಗಳು ಅಲ್ಲಿಯ ಲೆಜಿಸ್ಲೇಟಿವ್ ಕೌನ್ಸಿಲಿನ ಚರ್ಚೆಗೆ ಸೂಚಿಸಲ್ಪಟ್ಟಿದ್ದುವು. ಅವು ಚರ್ಚೆಗೆ ಬರುವ ಹಿಂದೆಯೇ ಅವರಿಬ್ಬರೂ ತಮ್ಮ ಪದವಿಗೆ ರಾಜಿನಾಮೆ ಕೊಟ್ಟರು. ತಾವು ಸೇರಿರುವ [illegible] ಪಾರ್ಟಿಯ [illegible] ಕುಂದ ತಮ್ಮ ಒಸಕ್ಕಿಲ್ಲದ [illegible] ತಮಗೆ [illegible] ರಾಘವೇಂದ್ರರಾಯರಿಗೆ ಹಲವು [illegible] [illegible] ಇದರ [illegible] ವಿಶ್ವಾಸದ ಠರಾವಿನ ಸೂಚನೆ [illegible] ಎಂದೂ ಕಾರಣ [illegible] ದು ಮಿ. ದೇಶಮುಖರವರು ರಾಜಿನಾಮೆ ಪತ್ರದಲ್ಲಿ ಗವರ್ನರಿಗೆ ತಿಳಿಸಿರುವರು.

ಬಾರ್ಡೋಲಿ ಸತ್ಯಾಗ್ರಹದ ಜಯಕ್ಕಾಗಿ ಸೂರತ್ [illegible]ಟ್ಟವಾಸಿಗಳು ಪ್ರಮುಖ ಪಲ್ಲವಾಯಿ ಮಹಾಶಯರಿಗೆ ತಾ. 13ರಲ್ಲಿ ಒಂದು ಅಭಿನಂದನಾ ಪತ್ರವನ್ನು ಅರ್ಪಿಸಿದರು. ಮಹಾತ್ಮಾ ಗಾಂಧಿಯವರು, ಪಟೇಲರು ಮತ್ತು ಜನರಿಗೆ ಮುಂದಾಳ್ಪಟ್ಟ ಸತ್ಯಾಗ್ರಹಿ ಸ್ತ್ರೀಯರು ಆ ದಿನ ಸೂರತ್ತಿಗೆ ದಯಮಾಡಿದ್ದರು. ಸಾವಿರಾರು ಜನರು ಅವರನ್ನು ಸ್ಟೇಷನ್‌ನಲ್ಲಿ ಕರತಾಡನದಿಂದ ಸ್ವಾಗತಿಸಿದರು. ರಸ್ತೆ ಬಾಗಿಲುಗಳಲ್ಲಿ, ಮನೆಮಾಡುಗಳಲ್ಲಿ ಜನರು ಕಿಕ್ಕಿರಿದು ತುಂಬಿದ್ದರು. ಸರ್ದಾರರ ಮೇಲೆ ಅಪ್ಪು ಹಾಕಿದ್ದ ಬಿನ್ನವತ್ತ ಪತ್ರವನ್ನು ಗಾಂಧಿಯವರಿಂದ ಪಟೇಲರವರಿಗೆ ಕೊಡಿಸಿದರು. ಆ ಸ್ಥಳದಲ್ಲಿ ಸುಮಾರು 40 ಸಾವಿರ ಜನರು ನೆರೆದಿದ್ದರು. ಜನರಲ್ಲಿ ಉತ್ಸಾಹವು ತಣಿವ ತುಳುಕುತ್ತಿತ್ತು.

ಮಾಂಟೇಗ್ಯು ಚೆಮ್ಸ್‌ಫರ್ಡ್ ಸುಧಾರಣೆಗಳು ಕೊಟ್ಟ ಎಂಟು ವರ್ಷಗಳಿಂದ [illegible] ಮೀಟಿಂಗನ್ನು ಪ್ರಾರಂಭಿಸುವಾಗ ವೈಸರಾಯರು ಹಿಂದೂದೇಶದ ಸದ್ಯದ ರಾಜಕೀಯ ಸ್ಥಿತಿಯನ್ನು [illegible] ವಿಚಾರ ಮಾಡಿ ಮುಖ್ಯಾಂಶಗಳನ್ನು [illegible] ಗಣನೆಗೆ ತಂದಿದ್ದರು. ಆದರೆ ಬರುವ ಸಾರಿಯ [illegible] ಮೀಟಿಂಗಿಗೆ ವೈಸರಾಯರು ಹಾಗೆ ಮಾಡುವದಿಲ್ಲವೆಂದು ಸುದ್ದಿ. ಈಗಿನ ರಾಜಕೀಯ ಮುಖ್ಯ ಸಂಗತಿಯು ಸೈಮನ್ ಕಮಿಷನ್ ಆಗಿದೆ. ಅದರೊಂದಿಗೆ ಸಹಕರಿಸುವದಿಲ್ಲವೆಂದು [illegible] ಕಳೆದ ಮೀಟಿಂಗಿನಲ್ಲಿ ತೀರ್ಮಾನಿಸಿದರು. ಇದನ್ನು [illegible] ನ್ಯಾಯವಾದ ಸುಧಾರಣೆ ತೋರುವದಿಲ್ಲ. ಆದುದರಿಂದ ಆ [illegible] ಮೊದಲನೆಯಲ್ಲಿ ಅದೇಲು ಮಾಡುವದರಿಂದ [illegible] ಗೌರವದಿಂದ ವೈಸರಾಯರು ಈ ಸಾರಿ ಮೌನ [illegible] ಊಹಿಸಲಾಗಿದೆ

---

### ವಿದೇಶ.

ಚೈನಾ ದೇಶದ "ಶಿಂಗ ಟ್ಯಾಂಗ್" ಎಂಬ ಹಡಗವು ಮುಳುಗಿಹೋಗಿ 500 ಪ್ರಯಾಣಿಕರು ನೀರು ಪಾಲಾದರೆಂದು ತಿಳಿಯುತ್ತದೆ

ಅಫ್ಘಾನಿಸ್ಥಾನದ ಸರಕಾರದ ಅಧ್ಯಕ್ಷರಾದ [illegible] ಕಿಮೂಲ್ ಪಾಷಾರವರು ಅಫ್ಘಾನಿಸ್ಥಾನದ ಅಮೀರರ ಪಡೆಯನ್ನು ಮಡುಗಿ ಮಾಡಿಕೊಡಬೇಕೆಂದು ಕೇಳಿದ್ದರೆಂದು ಹೊರಟ ವರ್ತಮಾನವು ನಿಜವಲ್ಲವೆಂದು ಪ್ರಕಟವಾಗಿದೆ.

ಬ್ರಿಟನ್ನಿನ ಮಂತ್ರಿ ಮಂಡಲಿಯಲ್ಲಿ ಒಬ್ಬ ಮಂತ್ರಿಯಾಗಿದ್ದ ಲಾರ್ಡ್ ಹಾಲ್ಡೇನರವರು ತಾ. 19ರಲ್ಲಿ ಕಿಡಾಕ್ಷೀನರಾದರು. ಇವರು ಒಳ್ಳೇ ತತ್ವಜ್ಞಾನಿಗಳೂ ರಾಜ್ಯಕಾರ್ಯ ಧುರೀಣರೂ ಆಗಿದ್ದರು. ತತ್ವಜ್ಞಾನದ ಮೇಲೆ ಇವರು ಹಲವು ಪುಸ್ತಕಗಳನ್ನು ಬರೆದಿರುವರು.

ನೆಹರು ಕಮಿಟಿಯ ವರದಿಯ ಮೇಲೆ ಇಂಗ್ಲೆಂಡಿನ ಪತ್ರಿಕೆಗಳ ಅಭಿಪ್ರಾಯವು ಭಿನ್ನಭಿನ್ನವಾಗಿದೆ. ಆಯಾಯ ಪಾರ್ಟಿಯ ಅಭಿಪ್ರಾಯಗಳನ್ನೇ ಪತ್ರಿಕೆಗಳು ಸೂಚಿಸಿವೆ. ಲೇಬರ್ ಪಕ್ಷದ ಪತ್ರಿಕೆಗಳು ಈ ರಚನೆಯಲ್ಲಿ ತೃಪ್ತಿಯನ್ನು ಸೂಚಿಸಿವೆ. ಕನ್‌ಸರ್ವೇಟಿವ್ ಪಕ್ಷದ ಪತ್ರಿಕೆಗಳು ಕೆಲವು ಇದನ್ನು ಹೀಯಾಳಿಸಿವೆ.

ಹೈಟಿ ಮತ್ತು ಅಲ್ಜೀರಿಯ ಎಂಬ ಪ್ರದೇಶಗಳಲ್ಲಿ ತಾ. 19ರಲ್ಲಿ ಅದ್ಭುತವಾದ ಬಿರುಗಾಳಿ ಎದ್ದು ಅನೇಕರು ಮೃತಪಟ್ಟಿರುವದಲ್ಲದೆ ಹಲವರಿಗೆ ಗಾಯ ಉಂಟಾಗಿದೆ. ಬಹಳ ಮನೆ ಮಠಗಳು ನೆಲಸಮವಾಗಿವೆ. ಹಲವು ಗ್ರಾಮಗಳು ನಾಶಮಾಡಲ್ಪಟ್ಟಿವೆ. ಹೈಟಿಯಲ್ಲಿ ಕಳೆದ 42 ವರ್ಷಗಳಿಂದ ಇಷ್ಟು ಕಠಿಣವಾದ ಬಿರುಗಾಳಿ ಉಂಟಾಗಿರಲಿಲ್ಲವಂತೆ. ಅಲ್ಲಿಯ ನಷ್ಟವು ಒಂದು ಮಿಲ್ಲಿಯ ಡಾಲರುಗಳಾಗಿರುವುದಂತೆ.

ಗ್ರೀಸ್ ದೇಶದ ಪಾರ್ಲಿಮೆಂಟಿನ ಜನರಲ್ ಚುನಾವಣೆಯಲ್ಲಿ ಈಗಿನ ಸರಕಾರದ ಪಾರ್ಟಿಯಾದ ವೆನಿಜಲಿಸ್ಟರಿಗೆ ದೊಡ್ಡ ಜಯವಾಗಿದೆ. 250 ಸ್ಥಳಗಳಲ್ಲಿ 228 ಅವರಿಗೆ ದೊರೆತ್ತಿದೆ. ಅವರ ಎದುರು ಪಾರ್ಟಿಯ ಮುಂದಾಳಾದ ಪಾಂಗಲಾಸ್‌ರವರೇ ಸೋಲಿಸಲ್ಪಟ್ಟಿರುವರು. ಈ ಚುನಾವಣೆಯ ಸಮಯದಲ್ಲಿ ಅಲ್ಲಿಯ ಮುಖ್ಯ ಪಟ್ಟಣದಲ್ಲಿ ಅದೇಲು ಪದಾರ್ಥಗಳಾ ಪದಗಳ್ಳಿ ಮಾಡಕೂಡದೆಂದು ಸರಕಾರದವರ ಹುಕುಂ ಆಗಿತ್ತು. ನಮ್ಮ ಸರಕಾರದವರ ಮನಸ್ಸಿಗೆ ಇದು ಹೊಕ್ಕುವದೇ?

ಪ್ರಪಂಚದ ಯುವಕರ ಶಾಂತಿ ಕಾಂಗ್ರೆಸ್ ಈ ತಾ. 19ರಲ್ಲಿ ಇಂಗ್ಲೆಂಡಿನ ಒಮ್ಮೆನ್ ಎಂಬಲ್ಲಿ ನಡೆಯಿತು. ಭೂಲೋಕದ 26 ಜನಾಂಗಗಳ ಪರವಾಗಿ ಸುಮಾರು 500 ಪ್ರತಿನಿಧಿಗಳು ನೆರೆದಿದ್ದರು. ಇಂಡಿಯಾದ ಹಲವು ಪ್ರಾಂತ್ಯಗಳಿಂದಲೂ ಪ್ರತಿನಿಧಿಗಳು ಹೋಗಿದ್ದರು. ಇಂಡಿಯಾದ ಪ್ರತಿನಿಧಿಗಳ [illegible] ಸಂಬಂಧ ಕಾಂಗ್ರೆಸ್ಸಿನ ಕಾರ್ಯಗಳಲ್ಲಿ ಭಾಗವಹಿಸಿದರು. [illegible] ಪ್ರತಿನಿಧಿಯಾದ ಮಿ. [illegible] ನ್ನು ಮತಸಂಬಂಧ [illegible] ಪ್ರೆಸಿಡೆಂಟಾಗಿಯೂ [illegible] ಪ್ರತಿನಿಧಿಯಾದ [illegible] [illegible] ಇಂಡಿಯಾವನ್ನು ಬಹುಮಾನಿಸಿದರು.

---

### ಸೆಂಟ್ರಲ್ ಬ್ಯಾಂಕು ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 19ನೇ ದಿನ ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು. ಡೈರೆಕ್ಟರುಗಳು 7 ಜನ ಹಾಜರಿದ್ದರು.

1 ಕಳೆದ ಮೀಟಿಂಗಿನ ಪ್ರೊಸೀಡಿಂಗ್ [illegible] ಒಪ್ಪಲಾಯಿತು.

2 ಸಾಲದ [illegible] ಪಟ್ಟಿ [illegible]

3 ಜುಲಾಯಿ ತಿಂಗಳ [illegible] ಮತ್ತು [illegible] ಲೆಕ್ಕ [illegible] ಮಂಜೂರು ಮಾಡಲಾಯಿತು.

4. ಭಾಗಮಂಡಲ ಸೊಸೈಟಿಗೆ ರೂ. 800 ಕಡಗದಾಳು ಸೊಸೈಟಿಗೆ ರೂ. 400 ಸಾಲ ಮಂಜೂರು ಮಾಡಲಾಯಿತು,

5. ಶನಿವಾರಸಂತೆ ಟವ್ನ್ ಸೊಸೈಟಿಯ ಸ್ಥಿತಿಯನ್ನು ಅರಿಯಬೇಕಾದುದರಿಂದ ಅದರ ಅರ್ಜಿ ಮುಂದಕ್ಕಿಡಲಾಯಿತು. ಈಚೂರು ಮ್ಯುಸ್ಸ ಸೊಸೈಟಿಗೆ ತಕ್ಕ ಕಾರಣಗಳಿಂದ ಸಾಲ ಮಂಜೂರಾಗಲಿಲ್ಲ

6. ಹಂಡ್ಲಿ ಸೊಸೈಟಿಯವರು [illegible] ವರ್ಷದ ಕಂತಿನ ಸಾಲದ ಬಾಕಿಗೆ ವಾಯಿದೆ ಕೊಡಬೇಕೆಂದು ಅರ್ಜಿ ಬರಕೊಂಡ ಮೇರೆ ವಾಯಿದೆ ಕೊಡಲಾಯಿತು.

7. ಕುಂದಳ್ಳಿ ಕುಮ್ರಳ್ಳಿ ಸೊಸೈಟಿಯವರು ತಮ್ಮ ಪಾಲು ಶೇರು ಸರ್ಟಿಫಿಕೇಟನ್ನು ಕಳಕೊಂಡದ್ದರಿಂದ ಅವರ ಅರ್ಜಿ ಮೇರೆ ಪುನಃ ಒಂದು ಹೊಸ ಸರ್ಟಿಫಿಕೇಟನ್ನು ಷೇರು ನಂಬ್ರ 19ರ ಮೇರೆ ಸಾಲಿಸ್ಥಿಗೆ ರಿಜಿಸ್ಟ್ರಾರ್‌ನಿಂದ ತರಿಸಿಕೊಟ್ಟು ಕೊಡಬಹುದೆಂತ ತೀರ್ಮಾನಿಸಲಾಯಿತು

8. ಆಫೀಸಿನ ಉಪಯೋಗಕ್ಕಾಗಿ ಒಂದು ಮೇಜು ಮತ್ತು ಅಲ್ಮೈರವನ್ನು 100 ರೂಪಾಯಿ ಒಳಗಿನ ಖರ್ಚಿನಿಂದ ಮಾಡಿಸಿಕೊಳ್ಳಬಹುದೆಂತ ತೀರ್ಮಾನಿಸಲಾಯಿತು.

9. ಸೆಂಟ್ರಲ್ ಬ್ಯಾಂಕಿನ ಜವಾನನಿಗೆ ತಿಂಗಳಿಗೆ 3 ರೂಪಾಯಿ ಬದಲು 5 ರೂಪಾಯಿ ಎಲೋವೆನ್ಸ್ ಕೊಡಬಹುದೆಂತ ಮಂಜೂರಾಯಿತು.

10. ಸುಪರ್ ವೈಜರುಗಳು ತಮ್ಮ ಡೈರಿಗಳನ್ನು ಸೆಂಟ್ರಲ್ ಬ್ಯಾಂಕಿಗೆ ನೇರವಾಗಿ ಕಳುಹಿಸತಕ್ಕ ಇಲ್ಲದ ಇರುವುದರಿಂದ ಇನ್ನು ಮುಂದೆ ಪ್ರತಿ ತಿಂಗಳ 1 ಮತ್ತು 16ನೇ ತಾರೀಖುಗಳಲ್ಲಿ ಒಂದೇ ನಮೂನೆಯಲ್ಲಿ ಅವರು ಡೈರಿಗಳನ್ನು ಬ್ಯಾಂಕಿನ ಗೌರವ ಸೆಕ್ರೆಟರಿಯವರಿಗೆ ಕಳುಹಿಸುವಂತೆ ಆರ್ಡರು ಮಾಡುವ ಹಾಗೆ ಕೋಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರರವರನ್ನು ಕೇಳಿಕೊಳ್ಳಬೇಕೆಂತ ತೀರ್ಮಾನಿಸಲಾಯಿತು.

11. ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಇನ್ನು ಮುಂದೆ ರಿಜಿಸ್ಟ್ರಾರರವರಿಗೂ ಕಳುಹಿಸಬೇಕೆಂತ ತೀರ್ಮಾನಿಸಲಾಯಿತು.

ಕೆ. ಅಪ್ಪಯ್ಯ,
(ಅಧ್ಯಕ್ಷರು.)

**ಕಾಂಗ್ರೆಸ್ ಸಭಾಸದರಾಗಿರಿ**

**ಮತ್ತು**

**ಸೇವಾದಲದ ಸದಸ್ಯರಾಗಿರಿ.**

ಸಭಾಸದರನ್ನು ಕೂಡಿಸುವ ಅವಧಿಯು ಸೆಪ್ಟೆಂಬರ್ 30ನೆಯ ತಾರೀಖಿನ ವರೆಗಿರುವದರಿಂದ ಅಷ್ಟರೊಳಗಾಗಿ ಸರ್ವರೂ ದಯವಿಟ್ಟು ತಮ್ಮ ಹೆಸರುಗಳನ್ನು ಬರೆಯಿಸಬೇಕು.

ಈಗ ಎರಡು ವರ್ಷಗಳಿಂದ ಕರ್ನಾಟಕ ಪ್ರಾಂತ್ಯವು ಕಾಂಗ್ರೆಸ್ ಸಭಾಸದರನ್ನು ಕೂಡಿಸುವ ಕಾರ್ಯದಲ್ಲಿ ಮೊದಲನೆಯ ಸ್ಥಾನವನ್ನು ಪಡೆದಿದೆ. ಈ ವರ್ಷದಲ್ಲಿಯೂ ಸಹ ತನಗೆ ಲಭಿಸಿದ ಸ್ಥಾನವನ್ನು ಕಾಯ್ದುಕೊಳ್ಳುವದೋ ?

ಹುಬ್ಬಳ್ಳಿ, ೧೮—೮—೨೮. | ನಾ. ಸು. ಹರ್ಡೀಕರ, ಸೇವಾದಲದ ಕಾರ್ಯದರ್ಶಿ.


## ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

### ನ್ಯಾಯವೋ ಅನ್ಯಾಯವೋ ?

ಅಯ್ಯಾ,

ಮಡಿಕೇರಿಯಿಂದ ಸುಂಟಿಕೊಪ್ಪಲಿಗೆ ಐದುಸಾರಿ ನಾಲ್ಕು ಕಂಪೆನಿಯವರ ಬಸ್ಸುಗಳು ಪ್ರತಿನಿತ್ಯವೂ ಓಡುತ್ತಿರುವ ಸಂಗತಿ ಎಲ್ಲರಿಗೂ ಗೊತ್ತಿರುವುದಾಗಿದೆ. ಅಲ್ಲದೆ ಪ್ರತಿ ಆದಿತ್ಯವಾರ ಸುಂಟಿಕೊಪ್ಪಲು ಸಂತೆಗೆ ಹೋಗುವ ವ್ಯಾಪಾರಸ್ಥರ ಅನುಕೂಲಕ್ಕಾಗಿ ವಿಕ್ಟೋರಿಯಾ ಮೋಟಾರ್ ಸರ್ವಿಸ್‌ನವರು ಸ್ಪೆಶಲ್ ಬಸ್ಸುಗಳನ್ನು ಓಡಿಸುವುದೂ ಸರ್ವರಿಗೂ ತಿಳಿದ ಸಂಗತಿಯಾಗಿದೆ. ಆದರೆ ಈಚೆಗೆ ಈ ಸ್ಥಳಕ್ಕೆ ಓಡುವ ಬಸ್ಸುಗಳು ಸಾಲವೆಂಬ ಅಭಿಪ್ರಾಯದಿಂದಲೋ ಅಥವಾ ಇನ್ಯಾವ ಕಾರಣದಿಂದಲೋ ............ ಈ ಸರ್ವಿಸ್‌ನವರಿಗೆ ಜನ ಸಿಕ್ಕಿದ ಹಾಗೆಲ್ಲಾ ಬಸ್ಸ್ ಓಡಿಸುವುದಕ್ಕೆ ಹುಕುಂ ಸಿಕ್ಕಿದೆ. 'ಲೋಕಪಾವನದ' ಹಿಂದಿನ 1 ಸಂಚಿಕೆಯಲ್ಲಿ ಸುಗಿ ಜನರ ಅನುಕೂಲಕ್ಕೆ ಕಾವೇರಿ ಸರ್ವಿಸ್‌ನವರು ಬಸ್ಸ್ ಓಡಿಸುತ್ತಾರೆಂದು ಇದೆ. ಈ ಲೈನಿನಲ್ಲಿ ಪ್ರತಿನಿತ್ಯವೂ ನಡೆಯುವ ಅನೇಕ ಬಸ್ಸುಗಳನ್ನೂ ಅಲ್ಲದೆ ಆದಿತ್ಯವಾರ ವಿಕ್ಟೋರಿಯಾ ಸರ್ವಿಸಿನವರು ಸ್ಪೆಶ್ಯಲ್ ಬಸ್ಸುಗಳನ್ನು ಓಡಿಸುವ ಸಂಗತಿಯನ್ನೂ ಗಣನೆಗೆ ತಂದಲ್ಲಿ ಇದು ಮುಖ್ಯವಾಗಿ ಜನಾನುಕೂಲಕಲ್ಲ, ಕಾವೇರಿ ಸರ್ವಿಸ್‌ನವರ ಅನುಕೂಲಕ್ಕೇ ಎಂದು ಯೋಚಿಸಲು ಎಡೆಯಾಗುತ್ತೆ. ಒಂದು ವೇಳೆ ಜನಾನುಕೂಲಕ್ಕೆ ಎಂದು ಹೇಳೋಣ. ಹಾಗಾದರೆ ಜನರಿಗೆ ಇದಕ್ಕಿಂತ ಹೆಚ್ಚಿಗೆ ಅನುಕೂಲವಾಗುವಂತ ರಸ್ತೆಗಳಲ್ಲಿ ಒಂದೇ ಬಸ್ಸು ಓಡುತ್ತಿದ್ದರೂ ಸರಕಾರದವರು ಯಾತಕ್ಕೆ ಸ್ಪರ್ಧೆಗೆ ಅವಕಾಶ ಕೊಡಬಾರದು.

ಮಡಿಕೇರಿಯಿಂದ ವೀರರಾಜಪೇಟೆಗೆ ಮೂರ್ನಾಡಿಗಾಗಿ ಕಾವೇರಿ ಸರ್ವಿಸ್ ವಿನಹ ಇತರ ಸರ್ವಿಸ್ ಇಲ್ಲದಿರುವ ಸಂಗತಿ ಎಲ್ಲರಿಗೂ ಗೊತ್ತಿದೆ. ಒಂದೇ ಸರ್ವಿಸ್ ಓಡುವುದರಿಂದ ಜನರಿಗೆ ಸ್ಥಳ ದೊರೆಯದೆ ಬಹಳ ಅನಾನುಕೂಲವೆಂದೂ, ಈ ಲೈನಿನಲ್ಲಿ ಬೇರೆ ಸರ್ವಿಸ್‌ಗಳಿಗೆ ಲೈಸನ್ಸ್ ಕೊಟ್ಟು ಸ್ಪರ್ಧೆಗೆ ಅವಕಾಶಕೊಡಬೇಕೆಂದೂ ಪತ್ರಿಕೆಗಳಲ್ಲಿ ಎಷ್ಟೋವರ್ತಿ ಬರೆದರೂ, ಇನ್ನೂ ಅನೇಕ ರೀತಿಯಲ್ಲಿ ದೇಶದ ಜನರೆಲ್ಲಾ ಸೂಚಿಸಿದರೂ ಸ್ಪರ್ಧೆಗೆ ಬೇರೆ ಎಡೆಕೊಡಲಿಲ್ಲ. ಈ ಲೈನಿನಲ್ಲಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂತ ಸರಕಾರದ ಅಧಿಕಾರಿಗಳಿಗೆ ತೋರದಿರುವದು ಆಶ್ಚರ್ಯವಾಗಿದೆ.

ಇತ್ತೀಚೆಗೆ ವಿಕ್ಟೋರಿಯಾ ಸರ್ವಿಸ್‌ನವರು ಮೂರ್ನಾಡು ಸಂತೆಗೆ ಹೋಗುವ ಜನರ ಅನುಕೂಲಕ್ಕಾಗಿ ಪ್ರತಿ ಬೃಹಸ್ಪತಿವಾರ ಅಲ್ಲಿಗೆ ಬಸ್ಸ್ ಓಡಿಸಲು ಲೈಸನ್ಸ್ ಕೇಳಿದಲ್ಲಿ ಈಗ ಲೈಸನ್ಸ್ ಕೊಡಲಾಗುವುದಿಲ್ಲವೆಂದು ಹುಕುಂ ಆಗಿದೆಯಂತೆ. ಈ ಲೈನಿನಲ್ಲಿ ಸುಂಟಿಕೊಪ್ಪಲು ಲೈನಿನಲ್ಲಿ ತಿರುಗುವುದಕ್ಕಿಂತ ಜನರು ಬಹಳ ಕಮ್ಮಿಯೋ ? ಸುಂಟಿಕೊಪ್ಪಲಿಗೆ ಪ್ರತಿ ದಿನ 5 ಸರ್ವಿಸ್ ಓಡುವುದು. ಅಲ್ಲದೆ ಆದಿತ್ಯವಾರ ಬೇರೆ ಸ್ಪೆಶಲ್ ಬಸ್ಸ್ ಓಡಿಸಲು ಹುಕುಂ ಕೊಡುವುದು ! ಒಂದೇ ಒಂದು ಬಸ್ಸ್ ಓಡುವ ಮೂರ್ನಾಡಿನಲ್ಲಿ ವಾರಕ್ಕೊಮ್ಮೆ ಕೂಡ ಸ್ಪೆಶಲ್ ಬಸ್ಸ್ ಓಡಿಸಲು ವಿಕ್ಟೋರಿಯಾ ಸರ್ವಿಸ್‌ನವರಿಗೆ ಹುಕುಂ ಇಲ್ಲ ! ಇದು ವಿಕ್ಟೋರಿಯಾ ಸರ್ವಿಸ್‌ನವರ ದುರಾದೃಷ್ಟವೋ, ಕಾವೇರಿ ಸರ್ವಿಸ್‌ನವರ ಅದೃಷ್ಟವೋ? ಎರಡೂ ನಿಜವಲ್ಲವೇ..............................

ಇವರ ಉದ್ದೇಶವೇನಿರಬಹುದು? ಮತ್ತೇನು—ಕಾವೇರಿ ಸರ್ವಿಸ್ ಓಡುವ ಲೈನಿನಲ್ಲಿ ಸ್ಪರ್ಧೆಗೆ ಎಡೆ ಇರಬಾರದು. ಬೇರೆ ಲೈನುಗಳಲ್ಲಿ ಕಾವೇರಿ ಸರ್ವಿಸ್ಸಿನವರಿಗೆ ಲೈಸನ್ಸ್ ಕೊಡಬಹುದು. ಈ ಸರ್ವಿಸ್‌ನವರ ಮೇಲೆ ಅಧಿಕಾರಿಗಳಿಗೆ ಇಷ್ಟು ಮಮತೆಯೋ ಎಂಥ ಸಂಶಯಕ್ಕೆ ಕಾರಣವಾಗುತ್ತದೆ. ಪತ್ರಿಕೆಗಳಲ್ಲಿ ಚಳವಳವೆಬ್ಬಿಸಿದರೇನು? ಜಮೀನ್‌ದಾರರ ಸಂಘದಲ್ಲಿ ಠರಾವು ಮಾಡಿದರೇನು ? ಕೌನ್ಸಿಲ್‌ಗಳಲ್ಲಿ ತರ್ಕಿಸಿದರೇನು ? ಇವೆಲ್ಲಾ ಬಂಡೆಕಲ್ಲಿನ ಮೇಲೆ ಮಳೆ ಸುರಿದಂತೆಯೇ ಸರಿ. ಇನ್ನಾದರೂ ಮೇಲಧಿಕಾರಿಗಳು ಇದಕ್ಕೆ ಗಮನ ಕೊಡುವರೇ ?

"ವ್ಯಾಪಾರಿ"

### ಕೊಡವ ಸಭೆಯೂ ಸೈಮನ್‌ಕಮಿಷನೂ.

ಮಹನೀಯರೆ,

ಸೈಮನ್ ಕಮಿಶನನ್ನು ಬಹಿಷ್ಕರಿಸಿ ಹಿಂದೀಯರು ತಮ್ಮ ಸ್ವಾಭಿಮಾನವನ್ನು ಉಳಿಸಿಕೊಳ್ಳಬೇಕೆಂದು ಇಡೀ ಹಿಂದೂಸ್ಥಾನವು ಘೋಷಿಸುತ್ತಿರುವಾಗ ನಮ್ಮ ಈ ಪುಟ್ಟ ದೇಶವು ಏನು ಮಾಡುತ್ತಿದೆ ಎಂಬುದನ್ನು ಸ್ವಲ್ಪ ವಿಚಾರಿಸಬೇಕಾಗಿದೆ. ಹಿಂದೂ ದೇಶದ ಬೇರೆ ಕಡೆಗಳಲ್ಲಿ ನಡೆದ ಚಳವಳಿಯಂತೆಯೇ ಇಲ್ಲಿಯ ಪ್ರಾಮುಖ್ಯ ರಾಜಕೀಯ ಸಂಸ್ಥೆಯಾದ ಜಮೀನ್ದಾರರ ಸಂಘವು ಸದರಿ ರಾಯಲ್ ಕಮಿಷನನ್ನು ಎಲ್ಲಾ ಕಾಲಗಳಲ್ಲೂ, ಎಲ್ಲಾ ರೀತಿಯಲ್ಲೂ ಸಂಪೂರ್ಣವಾಗಿ ಬಹಿಷ್ಕರಿಸಬೇಕೆಂದು ತೀರ್ಮಾನಿಸಿರುವದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ತೀರ್ಮಾನದಂತೆ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ (ಅರ್ಧ ಭಾಗದಷ್ಟು) ಹತ್ತು ಮೆಂಬರುಗಳು ಕಳೆದ ಬಜೆಟ್ ವೋಟಿಂಗಿಗೆ ಹೋಗದೆ ಸೈಮನ್ ಕಮಿಶನಿನ ನೇಮಿಸುವಿಕೆಯಿಂದ ತಮಗುಂಟಾದ ಅತೃಪ್ತಿಯನ್ನು ವ್ಯಕ್ತಪಡಿಸಿದರು.

ಆದರೆ ಕೆಲವು ಸಮಯದನಂತರ ಸದರಿ ಕಮಿಷನಿಗೆ ಅಭಿಪ್ರಾಯ ಕೊಡುವ ಬಗ್ಗೆ ಕೆಲವು ವಿಷಯಗಳನ್ನು ಸೂಚಿಸಿ ಪತ್ರಗಳು ದೇಶದ ಎಲ್ಲಾ ಸಂಸ್ಥೆಗಳಿಗೂ, ಪ್ರಾಮುಖ್ಯ ಮಹನೀಯರಿಗೂ ಕಳುಹಿಸಲ್ಪಟ್ಟವು. ಬಗ್ಗೆ ಕೆಲವರು ತಮ್ಮ ಅಭಿಪ್ರಾಯವನ್ನು ಕಳುಹಿಸಿದರೆಂತಲೂ, ಇನ್ನು ಕೆಲವರು ತಮ್ಮ ಬಹಿಷ್ಕಾರ ವ್ರತವನ್ನು ಕೈಬಿಡಲಿಲ್ಲವೆಂತಲೂ ವರ್ತಮಾನವಾಯಿತು. ಸಂಸ್ಥೆಗಳ ಪೈಕಿ ಜಮೀನ್ದಾರರ ಸಂಘವು ತನ್ನ ಮೊದಲಿನ ತೀರ್ಮಾನವನ್ನೇ ಪಟ್ಟಾಗಿ ಹಿಡಿಯಿತಂತೆ. ಆದರೆ ಇತ್ತೀಚೆಗೆ ಹುಟ್ಟಿದ ಕೊಡವ ಸಭೆಯು ತನ್ನ ಅಭಿಪ್ರಾಯವನ್ನು ಬರೆದು ಕಳುಹಿಸಿ ಕಮಿಶನಿನೊಂದಿಗೆ ಸಹಕರಿಸುತ್ತದೆಂದು ವ್ಯಕ್ತಪಡಿಸಿದ್ದು ಹಲವರಿಗೆ ಗೊತ್ತಿರುವುದಾದರೂ ಎಂಥಾ ಅಭಿಪ್ರಾಯವನ್ನು ಕಳುಹಿಸಿದೆ ಎಂಬುದನ್ನು ತಿಳಿದವರು ಬಹು ಕಡಿಮೆ ಎಂದೇ ತೋರುತ್ತದೆ. ಇದು ಯಾಕೆಂದು ಸ್ವಲ್ಪ ಆಲೋಚಿಸಬೇಕಾಗಿದೆ.

ಕೊಡವರ ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಲೋಸುಗ ಹೊರಟ ಕೊಡವ ಸಭೆಯು, ಈಗ ರಾಜಕೀಯ ವಾತಾವರಣದಲ್ಲಿ ಹೆಣಗಾಡುವಂತೆ ಕಾಣುತ್ತದೆ. ಇಲ್ಲವಾದರೆ ಕೊಡವರ ಸಾಮಾಜಿಕ ಸುಧಾರಣೆಗೂ ಸೈಮನ್ ಕಮಿಷನಿಗೂ ಏನು ಸಂಬಂಧವೆಂದು ಗೊತ್ತಾಗುವದಿಲ್ಲ. 'ಅಮವಾಸ್ಯೆಗೂ ಇಮಾಮ್ ಸಾಬಿಗೂ ಇರುವ ಸಂಬಂಧವೇ' ಇದಕ್ಕೂ ಇರಬಹುದಷ್ಟೆ! ಹೀಗೆ ಸಾಮಾಜಿಕ ಸಭೆಯು ತತ್ವವನ್ನು ಬದಲಾಯಿಸಿ ರಾಜಕೀಯ ಸಭೆಯಾಗಲು ಯತ್ನಿಸಿದ್ದರೂ ಅಲ್ಲದೆ ಈ ಮೊದಲು ಅದರಲ್ಲಿ ಬಹು ಉತ್ಸುಕತೆಯಿಂದ ಕೆಲಸ ಮಾಡುತ್ತಿದ್ದ ಕಾರ್ಯದರ್ಶಿಯವರು ತಮ್ಮ ಆ ಉದ್ಯೋಗವನ್ನು ಮುಂದಕ್ಕೆ ನಡಿಸಲು ಒಪ್ಪಲಿಲ್ಲವೆಂದೂ ವರ್ತಮಾನವಿದೆ.

ಹೇಗೂ ಆಗಲಿ ಸಭೆಯ ಪರವಾಗಿ ಸೈಮನ್ ಕಮಿಷನಿಗೆ ಅಭಿಪ್ರಾಯವೇನೋ ಕಳುಹಿಸಲಾಗಿದೆ. ಎಷ್ಟಾದರೂ ಕಮಿಷನಿನೊಂದಿಗೆ ಸಹಕಾರಿಗಳೆಂದು ತೋರಿಸಿಕೊಂಡೂ ಆಯಿತು. ಆದರೆ ಆ ಅಭಿಪ್ರಾಯವು ಯಾರ ಪರವಾಗಿ ಕಳುಹಿಸಲ್ಪಟ್ಟಿತೋ ಅವರಿಗೇನೇ ಅದು ಏನೆಂದು ಗೊತ್ತಿಲ್ಲದೆ ಇರುವದು ವ್ಯಸನಕರವಲ್ಲವೇ ? ಆ ಅಭಿಪ್ರಾಯವು ಸದರಿ ಸಭೆಯ ಮೆಂಬರುಗಳಿಗೆಲ್ಲರಿಗೂ ತಿಳಿಯಬೇಕಾದದ್ದು ಆವಶ್ಯವಲ್ಲವೇ ? ಹಾಗೆ ಅವರಿಗೆಲ್ಲರಿಗೂ ತಿಳಿಸದೆಯೂ, ದೇಶದವರ ಅರಿವಿಕೆ ಬಗ್ಗೆ ಪತ್ರಿಕೆಗಳಲ್ಲಾಗಲೀ, ಹಸ್ತಪತ್ರಿಕೆಯ ಮೂಲಕವಾಗಿಯಾಗಲೀ ಪ್ರಕಟಿಸದೆಯೂ ಇರುವದು ಆಶ್ಚರ್ಯವೇ ಸರಿ. ಹೀಗೆ ಒಂದು ಸಭೆಯ ಪರವಾಗಿ ಕೊಟ್ಟ ಅಭಿಪ್ರಾಯವನ್ನು ಗುಟ್ಟಾಗಿ ಇಟ್ಟುಕೊಳ್ಳಲು ಕಾರಣವೇನು ? ಗುಟ್ಟು ಹೊರಬಿದ್ದರೆ ಸಭೆಯನ್ನು ಸ್ಥಾಪಿಸಿದ ಉದ್ದೇಶವು ಬಹಿರಂಗವಾಗುವದೆಂದೋ ? ಇಲ್ಲವಾದರೆ ಇನ್ನಾದರೂ ಸಭೆಯ ಸೆಕ್ರೆಟರಿಯವರು ಆ ಮೆಮೋರಾಂಡಮನ್ನು ಪ್ರಕಟಿಸಿ ಜನರಲ್ಲಿ ಉಂಟಾಗಿರುವ ಸಂಶಯವನ್ನು ಪರಿಹರಿಸುವರಾಗಿ ನಂಬುತ್ತೇನೆ.

"ಬಂಧು."

### ರಿಟಯರ್ ಆಗುವ ಉದ್ಯೋಗಸ್ಥರಿಗೆ ಬಹುಮಾನ !

ಅಯ್ಯಾ,

ಉದ್ಯೋಗಸ್ಥರು 'ಪೆನ್‌ಷನ' ತೆಗೆಯುವ ಕಾಲ ಬಂದೊದಗಿದಾಗ್ಗೆ ಅವರನ್ನು ಹಲವು ತರದಲ್ಲಿ ಬಹುಮಾನಿಸಿ ಕಳುಹಿಸಬಹುದು. ಅಂಥಾ ಉದ್ಯೋಗಸ್ಥರು ದೇಶದ ಪ್ರೀತಿಗೆ ಪಾತ್ರರಾಗಿದ್ದರೆ, ಇಡೀ ದೇಶದವರೇ ಬಹುಮಾನಿಸಬಹುದು. ಅಥವಾ ಆಯಾ ಇಲಾಖೆಯವರು ಮಾತ್ರ ಸನ್ಮಾನಿಸಬಹುದು. ಯಾವ ರೀತಿಯಲ್ಲಿ ಅಂಥಾ ಉದ್ಯೋಗಸ್ಥರನ್ನು ಗೌರವಿಸಿದರೂ. ಅದರಲ್ಲಿ ಎಳ್ಳಷ್ಟು ಬಲಾತ್ಕಾರವಿರಬಾರದು. ಉದ್ಯೋಗಸ್ಥರಿಗೆ ತಮ್ಮ ಇಲಾಖೆಯವರೇ ಗೌರವಿಸುವಾಗ್ಗೆ ಅಂಥಾ ಗೌರವವು ಹಲವು ತರದಲ್ಲಿ ಪರಿಣಮಿಸಬಹುದು. ಇಲಾಖೆಯಲ್ಲಿ ಕೆಲವರಿಗೆ ಅಂಥಾ ಉದ್ಯೋಗಸ್ಥರಿಂದ ಹೆಚ್ಚಿನ ಸಹಾಯಗಳು ದೊರಕಿರಬಹುದು. ಅಥವಾ ಕೆಲವರಿಗೆ ಹೆಚ್ಚಿನ ಕಷ್ಟಗಳುಂಟಾಗಿರಬಹುದು.

ಪೆನ್‌ಷನ್ ಆಗುವ ಉದ್ಯೋಗಸ್ಥರಿಗೆ ಯಥೇಷ್ಟ ಸನ್ಮಾನ ಮಾಡಬಾರದೆಂಬುದು ಈ ಲೇಖಕನ ಉದ್ದೇಶ... ಒಬ್ಬ ದೊಡ್ಡ ಉದ್ಯೋಗಸ್ಥನು ರಿಟಯರ್ ಆಗ... ಆತನ ಇಲಾಖೆಯಲ್ಲಿರುವ ಸಣ್ಣ ಉದ್ಯೋಗಸ್ಥರೆಲ್ಲ... ರಿಟಯರ್ ಆಗುವ ಉದ್ಯೋಗಸ್ಥನನ್ನು ಬಹುಮಾನಿ... ಮಾಡಿಕೆಯಾಗಿದೆ. ಆದರೆ ಯಥೇಷ್ಟ ಬೆಲೆ ಬಾಳುವ ಇ... ಗಳನ್ನು ಶಕ್ತಿಮೀರಿ ಚಂದಾಹಣವೆತ್ತಿ ಕೊಡುವುದು ... ವಲ್ಲ. ಅದೇ ಇಲಾಖೆಯಲ್ಲಿರುವ ಮತ್ತೊಬ್ಬ ಅಧಿ... ಇಂದಾ ಇನಾಮು ಕೊಡಲು ನಿಶ್ಚಯಿಸಿ, ಕೆಳ ಉದ್ಯೋ... ಇಂತಿಷ್ಟೇ ಚಂದಾಕೊಡಬೇಕೆಂದು ಹೇಳಿದರೆ, ಸ... ದ್ಯೋಗಸ್ಥರಿಗೆ ವಿರೋಧಿಸಲು ಧೈರ್ಯವಿಲ್ಲ. ಅ... ನಿಸ್ಸಿನಲ್ಲಿ ಅಸಮಾಧಾನಪಟ್ಟುಕೊಂಡರೂ ಸಹ ಬಾಚಿ... ಚ್ಚಿಕೊಂಡು ಚಂದ ಕೊಟ್ಟುಬಿಡುತ್ತಾರೆ. ಆದರೆ ಇ... ಡ ಉದ್ಯೋಗಸ್ಥರಿಗೆ ತುಂಬಾ ಅನಾನುಕೂಲಗಳನ್ನುಂಟು... ದ ಹಾಗಾಗುತ್ತದೆ.

ರಿಟಯರ್ ಆಗುವ ಉದ್ಯೋಗಸ್ಥರಿಗೆ ಆಯಾ ಇ... ಯವರು ತಿಂಡಿತೀರ್ಥಗಳನ್ನು ಕೊಟ್ಟು ತಮ್ಮ ಪ್ರೀತಿ... ತೋರಿಸುವುದರಲ್ಲಿ ಆಕ್ಷೇಪವಿಲ್ಲ. ಆದರೆ ತಮ್ಮ ಶಕ್ತಿ ಮೀರಿ ಇನಾಮು ವಗೈರೆಯನ್ನು ಮೊರೆಕಿಸಿ... ಆಗುವ ಉದ್ಯೋಗಸ್ಥರ ಮನಸ್ಸನ್ನು ತೃಪ್ತಿಪಡಿಸಲು ... ತ್ನಿಸುವುದು ಖಂಡಿತವಾಗಿಯೂ ಅಸಮಾಧಾನಕರವಾ... ದೇ ನನ್ನ ಅಭಿಪ್ರಾಯವಾಗಿದೆ.

"ಸಾರಥಿ."

### ಹೊರ ಪ್ರದೇಶಗಳಲ್ಲಿ ಕೊಡವರ ಹಬ್ಬ.

ಅಯ್ಯಾ,

ನಾನು ಕೊಡಗು ದೇಶವನ್ನು ಬಿಟ್ಟು ಮೈಸೂರು... ಕ್ಕೆ ಸೇರಿದ ಚಿಕ್ಕಮಗಳೂರಿಗೆ ಬಂದು ಕೆಲವು ವರ್ಷ... ದವು. ನಾನು ಇಲ್ಲಿಗೆ ಮೊದಲು ಬಂದಾಗ ನನ್ನ ಸ್ವ... ಜನರನ್ನು ಕಾಣಬೇಕಾದರೆ ಸ್ವಲ್ಪ ಕಷ್ಟವಾಗಿತ್ತು. ಒಂದೆರಡು ವರ್ಷಗಳಿಂದ ನನ್ನ ಬಂಧುಗಳೂ, ಸ್ನೇಹಿತ... ಸ್ವಜನರೂ ಅಲ್ಲಲ್ಲಿ ಕಾಣುತ್ತಿರುವರು. ಇಷ್ಟೆಲ್ಲಾ ... ದ್ದರೂ ನಮ್ಮ ಕೊಡಗಿನ ಪದ್ಧತಿಗನುಗುಣವಾಗಿ ನಡೆಸ... ಬ ನಾನಾತರದ ಹಬ್ಬಗಳಲ್ಲಿ, ಒಂದೆರಡನ್ನಾದರೂ ಇಲ್ಲಿ... ಲ್ಲರೂ ಒಂದು ಕಡೆ ಸೇರಿ ಇದು ವರೆವಿಗೂ ನಡೆಸದಿರು... ನನಗೆ ವ್ಯಸನಕರವಾಗಿ ಕಾಣುತ್ತೆ. ನಮ್ಮ ಹಾಗೆ ಕೊ... ರು, ನಾವಿರುವದಕ್ಕಿಂತಲೂ ಎಷ್ಟೋ ದೂರ ಪಟ್ಟಣಗ... ಬೊಂಬಾಯಿ, ಮದ್ರಾಸು, ಬೆಂಗಳೂರು, ಮುಂತಾದ ಸ್ಥ... ಳಲ್ಲಿ ಎಲ್ಲರೂ ಒಗ್ಗಟ್ಟಿನಲ್ಲಿ ಸೇರಿ, ಕೊಡಗಿನ ಪದ್ಧತಿ... ಗುಣವಾಗಿ ಹಬ್ಬಗಳನ್ನು ಆಚರಿಸುವದನ್ನು ಈ ಪೇಪ... ತಿಳಿಸುವಾಗ ನಾವುಗಳು ಅದನ್ನು ಓದಿಕೊಂಡು ಸುಮ್ಮನಿ... ದು ಸರಿಯಾಗಿ ಕಾಣುವದಿಲ್ಲ.

ಆದುದರಿಂದ ನಾವೂ ಸಹ ಅವರಂತೆಯೇ ಎಲ್ಲ... ರಿ ಕೊಡಗಿನ ಪದ್ಧತಿಗನುಗುಣವಾಗಿ ಆಗುವಂಥ ಹಬ್ಬಗ... ಚಿಕ್ಕಮಗಳೂರು ಪಟ್ಟಣದಲ್ಲಿ ಆಚರಿಸಬೇಕಾಗಿ ಅಪೇಕ್ಷಿ... ಸ್ತೇನೆ. ಈ ರೀತಿ ನಡಸುವ ಬಗ್ಗೆ ಬುದ್ಧಿಶಾಲಿಗಳಾದವ... ವಿದ್ಯಾವಂತರೂ ಮನಸ್ಸಿಟ್ಟು ಮೇಲಿನ ಸ್ಥಳದಲ್ಲಿರುವ ಕ... ಗರನ್ನೆಲ್ಲಾ ಒಗ್ಗಟ್ಟಿಗೆ ಬರಲು ಪ್ರಯತ್ನಿಸಬೇಕಾಗಿ ಕೋರ...

"ಒಬ್ಬ ಕೊಡವ

ಸಂಪಾದಕರೇ,

ನಿಮ್ಮ ಕಳೆದ ವಾರದ ಸಂಚಿಕೆಯಲ್ಲಿ "ಶಾರದಾ... ಮದ ಚಟುವಟಿಕೆಗಳು" ಎಂಬ ಲೇಖನದಲ್ಲಿ 'ಶಿವಶಂಕರ'... ಲವು ನಿಜವಲ್ಲದ ವಿಷಯಗಳನ್ನು ಬರೆದುದನ್ನು ಮಾತ್ರ... ಮ್ಮ ವಾಚಕ ಮಹಾಶಯರಲ್ಲಿ ತಿಳಿಸಲು ಭಾಧ್ಯಸ್ಥ... ನಾಗಿದ್ದೇನೆ. ದಯವಿಟ್ಟು ಈ ವಾರದ ಸಂಚಿಕೆಯಲ್ಲಿ... ವಕ್ಕೆ ಅವಕಾಶ ಕೊಡಿ.

ಶ್ರೀ ರಾಮಕೃಷ್ಣ ಸಂಸ್ಥೆಗೆ ಸೇರಿದ ಮಠವು ಇಂಗ್ಲ... ಡಿನಲ್ಲಿ ಇಲ್ಲ. ಬರ್ಮಾದಲ್ಲಿ ವಿದ್ಯಾಪೀಠಗಳಿಲ್ಲ ; ಮದ್ರಾ... ಸಿನಲ್ಲಿ ಹುಡುಗಿಯರ ಹಾಸ್ಟೆಲ್ ಇಲ್ಲ ; ಪೊನ್ನಂಪೇಟೆಯ ... ಸ್ಕೂಲನ್ನು ವಹಿಸಿಕೊಳ್ಳುವ ವಿಚಾರವಾಗಿ ಮಿಷನ್‌ನವರಿಗೆ ಕಾರ್ಯಕರ್ತರಿಗೂ ಪತ್ರ ವ್ಯವಹಾರ ನಡೆದಿಲ್ಲ ಮತ್ತು ಪೊನ್ನಂಪೇಟೆಯಲ್ಲಿ ಬರುವ ಮೇ ತಿಂಗಳಲ್ಲಿಯಲ್ಲದೆ "ಶಿವಸುತರು" ... ಹಿಸುವಷ್ಟು ಶೀಘ್ರ ಹುಡುಗಿಯರ ಹಾಸ್ಟೆಲು ತೆರೆಯಲ್ಪಡು... ವುದಿಲ್ಲ. ಅಲ್ಲದೆ ಇವರು ರಾಮಕೃಷ್ಣ ಸಂಸ್ಥೆಯವರು ... ಮನಸ್ವಾಮಿ ಕಣ್ವ ದೇವಸ್ಥಾನವನ್ನು ವಹಿಸಿಕೊಂಡು ಅ... ಕಾರುಬಾರುಗಳನ್ನು ನಡೆಸಲಿಕ್ಕೆ ಇಷ್ಟಪಡುತ್ತಾರೆಂದು ... ಬುದೂ ಶೋಚನೀಯವಾಗಿದೆ.

ಲೇಖನಗಳನ್ನು ಬರೆಯುವಾಗ ಕೆಲವನ್ನು ಊಹಿಸಿ... ದೂ, ಯಾ ಸರಿಯಾದ ಆಧಾರವಿಲ್ಲದೆ ಕೇಳಿ ಬರುವುದನ್ನೂ ತಿಳಿದುಬರುವುದನ್ನೂ ಸೇರಿಸಿ ಬರೆದು ಬಿಡುವುದು ತಪ್ಪು. ಹೀಗೆ ಬರೆಯುವುದರಿಂದ ಲೇಖನದ ಉದ್ದಿಶ್ಯವು ಈಡೇರು... ವಿಲ್ಲ. ಅಲ್ಲದೆ "ಶಿವಸುತರು" ರಾಮಕೃಷ್ಣ ಮಿಷನ್ ಮತ್ತು ಸಂಸ್ಥೆ ಎಂಬ ಶಬ್ದಗಳನ್ನು ಎಲ್ಲಿ ಯಾವ ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸಬಹುದೆಂಬುದನ್ನು ಅರಿತುಕೊಳ್ಳುವುದು ಅವಶ್ಯಕ.

ಶಾರದಾಶ್ರಮದ ಚಟುವಟಿಕೆಗಳ ವಿಷಯ ವಾಚಕರು ತಿಳಿಯಲು ಇನ್ನೂ ಕೆಲವು ದಿವಸಗಳು ಕಳೆಯಬೇಕು.

ಶಾಂಭವಾನಂದ.

**Please Call at**

**THE GENERAL TRADING CO., MERCARA,**

**Opposit Coronation Gardens.**

SOLE AGENTS FOR VAUXHALL, OAKLAND, PONTIAC & CHEVROLET CARS & TRUCKS FOR COORG.

THE 1928 NEW CHEVROLET

NEW BEAUTY ! NEW PERFORMANCE !! NEW FEATURES AND FOUR WHEEL BRAKES !!!

QUALITY AT LOW COST

**THE COORG FOOTWEAR MART, MERCARA**

The house for smart foot wear. Monsoon boot a speciality

Prompt attention. Prices very moderate

12–9 Attended by very efficient workmen

# Arms, Ammunition and Shooting Requisites !!!



1928 Illustrated Catalogue Just Issued Free on Application !

| | | | | | |
|---|---|---|---|---|---|
| D B B L Rifles | Rs | 120 | to | Rs | 2750 |
| S B B L | " | 35 | to | " | 950 |
| D B B L Guns | " | 50 | to | | 1350 |
| S B B L " | | 35 | to | | 275 |
| D B M L " | " | 45 | to | | 135 |
| S B M L " | " | 30 | to | " | 80 |
| B L Revolvers | " | 35 | to | " | 350 |
| Automatic Pistols | " | 30 | to | " | 150 |

Brilliant Search Light Lamp For Shooting Camping, Fishing and All such other Night Sports and work Rs 30 Free delivery

**Also swords, Daggers, Cartridges, Caps, Gunpowder and Shooting Requisites at the most competitive rates.**

GOOLAMHUSAIN ALLIBHOY & SONS

**Largest Importers of Firearms and Ammunition**

**Cheapest priced firm in India,**

24–21 **210 Abdul Rehman Street, BOMBAY.**

**ಫ್ಯಾನ್ಸಿ ಲೀವರ್ ಪಾಕೆಟ್ ವಾಚ್.**

(10 ಬಹುಮಾನಗಳ ಸಹಿತ 4–12–0)

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಜೇಬಿಗೆ ಅಡಕವಾಗಿಯೂ ಇರುವಂತೆ ಚಿಕ್ಕ ಸೈಜಿನಲ್ಲಿ ತಯಾರು; ಹಿಂದುಗಡೆ ಚಿತ್ರ ಕಲಸಮಾಡಲ್ಪಟ್ಟಿರುವದು ಮತ್ತು ಒಳಗಡೆ ಗಂಪು ಕೆತ್ತಲ್ಪಟ್ಟು ಗಿಲ್ಟು ಮಾಮೆಂಟ್ ಮಾಡಿರುವದು ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ್‌ಡೋಮ್ ಇರುವದು. ಈ ಗಡಿಯಾರವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್‌ಮೆಂಟ್ಸುಗಳಿಂದ ತಯಾರಿಸಿದೆ ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ಒಂದನ್ನು ತರಿಸಿನೋಡಿರಿ ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 10 ಬಹುಮಾನಗಳು ಕೊಡಲ್ಪಡುವವು. ಬಹುಮಾನಗಳ ವಿವರ —ಫೌಂಟನ್ ಪೆನ್ 1 ಇಂಗ್ಲೀಷ್ ಸೆಂಟ್ ಬಾಟಲ್ 1, ಚಿನ್ನದ(?) ಗುಂಡಿಗಳು 4 ಗಡಿಯಾರದ ಸರಪಣಿ 1, ಚಾಕು(?) ಕತ್ತಿ 1, ಕೈ ಗುಂಡಿಗಳ ಸೆಟ್ 1, ಈ 10 ಬಹುಮಾನಗಳು ಮತ್ತು ಖಾತ್ರಿಯಾದ 3 ವರ್ಷ ಗ್ಯಾರಂಟಿ ಸಹಿತ ಗಡಿಯಾರ 1 ಕ್ಕೆ 4–12–0

ವಿಳಾಸ —ಲೀಗಲ್ ಟ್ರೇಡಿಂಗ್ ಕಂಪೆನಿ,

22—14 ಪೋ ಬಾಕ್ಸ್ ನಂ 213 ಮದರಾಸು

ಡಬ್ಬಲ್ ಮತ್ತು ಸಿಂಗಲ್ ತೋಟದ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿವಿಧ ವಿವರ ಕ್ರಯದಲ್ಲಿ ಒದಗಿಸಿ ಕೊಡಲಾಗುವದು

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ

ಎಸ್. ವಿ. ರಾಮಾನುಜಂ ಚೆಟ್ಟಿ

ಅಂಡ್ ಕಂಪೆನಿ.

**ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.**

24—12 12, ಬ್ರಾಡ್ವೇ, ಮದ್ರಾಸ್

(ಪತ್ರಗಳನ್ನು ಇಂಗ್ಲೀಷಿನಲ್ಲಿ ಬರೆಯುವದು ಉತ್ತಮ.)

# ಎಂ.ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

# ಹಾರ್ಮೋನಿಯಂ ವ್ಯಾಪಾರಿಗಳು. ಮೈಸೂರು.

**ಉತ್ತಮ ತರಹದ ಸಿಂಗಲ್‌ರೀಡ್ಸ್ ಹಾರ್ಮೋನಿಯಂಗಳು**

| | |
|---|---|
| ದಿಲ್ ಖುಷ್(?) ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 30—8—0 |
| ಶಕುಂತಲಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 40—0—0 |
| ಮೋಹನ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 37—8—0 |
| ಮೋಸ್ಟೀನ್(?) ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 35—0—0 |
| ಮಹಾರಾಜಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 32—8—0 |

**ಉತ್ತಮ ತರಹದ 14 ಕ್ಯಾರೆಟ್ಸ್ ಬಂಗಾರದ ನಿಬ್ಸ್ ಹಾಕಿದ ಫೌಂಟನ್ ಪೆನ್‌ಗಳು.**

| | |
|---|---|
| ಬ್ಲಾಕ್ ಬರ್ಡ್ ಫೌಂಟನ್ ಪೆನ್ | 1ಕ್ಕೆ 3—8—0 ಮತ್ತು 3—12—0 |
| ಪರಲ್ಸ್ ಪಂಡರ್ ಫೌಂಟನ್ ಪೆನ್ | 1ಕ್ಕೆ 3—0—0 ಮತ್ತು 3—8—0 |
| ಕಾಂಪ್ಯಾಕ್ಟ್ ಸೆಲ್ಫ್ಯಾನ್(?) ಫೌಂಟನ್ ಪೆನ್ 1ಕ್ಕೆ | 4—8—0 |
| ವಾಟರ್ ಮನ್ ಫೌಂಟನ್ ಪೆನ್ | 1ಕ್ಕೆ 8—0—0 ಮತ್ತು 8—8—0 |
| ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌಂಟನ್ ಪೆನ್ | 1ಕ್ಕೆ 12—0—0 ಮತ್ತು 15—0—0 |

**ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು**

| | |
|---|---|
| ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ | 4—8—0 |
| ವೆಸ್ಟಂಡ್ ಕಂಪನಿಯ ಅಲಾರಂ ಟೈಂಪೀಸ್ 1ಕ್ಕೆ | 8—0—0 |
| ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ | [illegible]—[illegible]—0 |
| ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ | 6—1—0 |
| ಅನ್ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ | 6—0—0 |

**ಸಚಿತ್ರ ಕ್ಯಾಟಲಾಗ್‌ಗೆ 6 ಪೈ ಸ್ಟಾಂಪು ರವಾನಿಸಿ.**

**ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,**

**ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು, ಮೈಸೂರು.**

**16**

# ಪ್ರಕಟಣೆ.

**ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,**
**ಲಿಮಿಟೆಡ್ ಕೊ ಅಪರೇಟಿವ್ ಸೊಸೈಟೀಸ್**
**ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.**

| | | ರೂ |
|---|---|---|
| ಶೇರ್ ಬಂಡವಾಳ | — | 50,000 |
| ವಸೂಲಾದ ಶೇರ್ ಮೊಬಲಗು | — | 17,190 |
| ಒಟ್ಟು ಠೇವಣಾತಿ | — | 1,62,320 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಕಕ್ಕದ್ದು

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

| ಪ್ರೆಸಿಡೆಂಟರು, | ಟ್ರೆಜರರ್. |
|---|---|
| ಕೋದಂಡ ಅಪ್ಪಯ್ಯನವರು, | ಕೊಂಗಟ್ಟಿರ ತಿಮ್ಮಯ್ಯ |
| ರಾವ್ ಬಹದ್ದೂರ್. | ನವರು. |

ಸೆಕ್ರೆಟರಿ
ಎ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್
ತಾರೀಖು 1—7—1927

## ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜಂಟ್ ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಏಜಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಪೇರಿಯಂಡ ಪೂವಯ್ಯನವರು
ಪೊನ್ನಂಪೇಟೆನಾಡು—ಮೆ ಕಾಳೇಂಗಡ ಚಿಣ್ಣಪ್ಪನವರು
ಶ್ರೀಮಂಗಲನಾಡು—ಮೆ ಅಜ್ಜಮಾಡ ಮಾದಪ್ಪನವರು
ಮರೆನಾಡು—ಮೆ ಕೇಕಿರ ಅಪ್ಪಯ್ಯನವರು

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ ಕಾಣಚೇರರ ನಂಜಪ್ಪನವರು,
ನಾಪೋಕ್ಲು—ಮೆ ಅರಿಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ ಒಮ್ಮಡ ಮಾದಪ್ಪನವರು
ಅಮ್ಮತ್ತಿ—ಸಿದ್ದಾಪುರ—ಮೆ. ಬಿಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ. ಜಿ ಮುದ್ದಯ್ಯನವರು,
ಮಡಿಕೇರಿ & ತಿತಿಮತ್ತಿ—ಮೆ ಜಿ. ಮಾದಯ್ಯನವರು,
**ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಚಂಗಂಡ ಕುಟ್ಟಪ್ಪನವರು,**

**ಮೇನೇಜರ್,**
**"ಕೊಡಗು" ಲಿಮಿಟೆಡ್, ಮಡಿಕೇರಿ,**

## ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದಪ್ಪ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ ಮೇನೇಜರ್,
"ಕೊಡಗು" ಮಡಿಕೇರಿ


# ARMS & AMMUNITION MART.
## Mahomedally-Noorbhoy.



**321 Abdul Rehman Street, near Crawford Market, BOMBAY. 3**
**Telegraphic Address—"SHOOTER" Bombay.**
(57-50) 'Please write for our Catalogue 1928-1929.



**ಕಟಿಮಕಶ್ವಾಯು ಮಲೇರಿಯ ರಕ್ಷೆ:—** ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ ಬಿಟ್ಟು ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಶೀಘ್ರ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ 4—0—0 6ಕ್ಕೆ ರೂ 7—8—0, 12ಕ್ಕೆ ರೂ 14

**ಚಂದನಾಸವ:—** ಇದು ಪ್ರಮೇಹ ಮೂತ್ರ ಕೃಚ್ಛ್ರ ಮೂತ್ರ ... ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದ ... ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ... ಲ್ಲಿ ಧಾತು ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ... ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರ... ಮುದ್ದುವ ನೋವು ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲು 1 3 6ಕ್ಕೆ ರೂ 1... 3—8—0 6—12—0

**ರೋಮನಾಶಿನಿ:—** ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮ ... ರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಅಣೆ, 3 ಡಬ್ಬಿ ರೂ 1, 1 ಡಜನಿಗೆ 3—8—0

**ಮನೋಲ್ಲಾಸಿನಿ ತೈಲ.—** ತಲೆನೋವು, ತಲೆತಿರುಗುವುದು, ತಲೆಹೊಟ್ಟು, ಕಣ್ಣು ... ಕಿವಿಯಿಂದ ಕೀವು ಸೋರುವುದು ಕಿವುಡುತನ ಕಣ್ಣು ನೋವು ಅಕಸ್ಮಾತ ನಿದ್ದೆ ಬಾರದಿದ್ದು ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8

ನಮ್ಮ ಕೆಟಲಾಗು ತರಿಸಿ ನೋಡಿರಿ ವಿಳಾಸ—ಮನೋಲ್ಲಾಸಿನಿ ಕಂಪೆನಿ.
52—46 9. ಮಂಗಳೂರು



**ಕಳಾರಿಕೆ ಮಾಲುಗಳಿಗೆ ಮೋಸ ಹೋಗಬೇಡಿರಿ!**
ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ

ಅಜಮಾಯಿಸಿ ನೋಡಿರಿ.

ಆಭಾಮಿಷ ಬಟ್ಟೆಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ.

ಎಲ್ಲಾ ಆರ್ಡರುಗಳನ್ನೂ ಭಲೋ ರೀತಿಯಿಂದಲೂ, ಶೀಘ್ರವಾಗಿಯೂ ಗ್ಯಾರೆಂಟಿಯೊಡನೆ ಜಾರಿ ಮಾಡಲಾಗುವದು

**ಕೇಶವಜಿಂದ್ ದೇವಚಂದ್,**
**ಜ್ಯುವೆಲ್ಲರ್, (ಕೆಟಲಾಗ್ ಮುಫತ್).**
14—13 **21 ಚೈನಾ ಬಜಾರ್‌ರೋಡ್, ಮದರಾಸು.**



# ಎಂಪಯರ್ ಆಫ್ ಇಂಡಿಯಾ
## ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
**ಸ್ಥಾಪಿಸಲ್ಪಟ್ಟದ್ದು 1897.**

1928ನೇ ಇಸವಿ ಫೆಬ್ರವರಿ 29ಕ್ಕೆ ಆಖೈರಾದ 5 ವರ್ಷಗಳಲ್ಲಿ ಕಂಪನಿಗೆ ಲಾಭದ ಉತ್ಪತ್ತಿ.

| | | |
|---|---|---|
| ಹೊಸ ಪಾಲಿಸಿಗಳು ಮೀರಿವೆ | ರೂ | 1,16,00,000 |
| ವರಮಾನ ಮೀರಿದೆ .. .. | ರೂ. | 54,95,000. |
| ಕಂಪೆನಿ ಆಸ್ತಿ ಮೀರಿದೆ | ರೂ | 3,15,64,000. |

**ಬೇಕಾಗಿದೆ:— ಕೊಡಗು ದೇಶದ ಮುಖ್ಯ ಸ್ಥಳಗಳಲ್ಲಿ ಏಜಂಟರುಗಳು.**

| ಹೆಡ್ ಆಫೀಸು | | ಬ್ರಾಂಚ್ ಆಫೀಸು. |
|---|---|---|
| **ಎಂಪಯರ್ ಆಫ್ ಇಂಡಿಯಾ** | | **ಕಮರ್ಷಿಯಲ್ ಬೀದಿ** |
| **ಲೈಫ್ ಬಿಲ್ಡಿಂಗ್, ಬೊಂಬಾಯಿ.** | 24—9 | **ಬೆಂಗಳೂರು.** |



ಸ್ಥಾಪನೆ—1874. **ಹೆಡ್ ಆಫೀಸು—ಬೊಂಬಾಯಿ.**

# ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ
# ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
## 1927
**ಅತ್ಯುಚ್ಛ್ರಾಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ**
ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

| | | | | | |
|---|---|---|---|---|---|
| 1925 | — | 13545 | — | ರೂ. | 2,95,42,000. |
| 1926 | — | 17371 | — | ರೂ. | 3,91,39,000 |
| 1927 | — | 21418 | — | ರೂ. | 4,68,04,075. |

— ಪ್ರೀಮಿಯಂ ಉತ್ಪತ್ತಿ —

| | | | |
|---|---|---|---|
| 1925 | — | ರೂ | 92,66,000. |
| 1926 | — | ರೂ. | 1,05,33,000. |
| 1927 | — | ರೂ. | 1,21,53,000. |

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಏರಿದೆ.
ಕಂಪನಿಯ ಫಂಡು ೮ ಕೋಟಿ ರೂಪಾಯಿಗಳಿಗೆ ಮೀರಿದೆ.
ಜೀವವಿಮೆ ಮಾಡಬೇಕೆಂದಿರುವವರು ಸಾವಕಾಶ ಮಾಡದೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದುಕೊಳ್ಳಬಹುದು.

| | | |
|---|---|---|
| ಓರಿಯಂಟಲ್ ಬಿಲ್ಡಿಂಗ್ಸ್, | | **ಎಲ್. ಆರ್. ಕೃಷ್ಣಸ್ವಾಮಯ್ಯರ್,** |
| ಸೌತ್ ಪರೇಡ್, ಬೆಂಗಳೂರು. | 52—19 | ಬ್ರಾಂಚ್ ಸೆಕ್ರೆಟರಿ. |


**Printed & published by P. I. Belliappa, at "Kodagu" Press, Mercara for "Kodagu" Ltd.**

"KODAGU" OFFICE. MERCARA.

# ಕೊಡಗು.

ವಾರ್ಷಿಕ ಚಂದಾ ರೂ. [illegible]

ಸಂಪಾದಕ—[illegible]

ಪ್ರತಿ ಬುಧವಾರ [illegible] ಪ್ರಕಟಿಸಲ್ಪಡುವದು.

[illegible] ಮಡಿಕೇರಿ, [illegible] ಅಗೊಸ್ತು [illegible] ಶುಕ್ರವಾರ [ಸಂಚಿಕೆ [illegible]

## ESTATE REQUISITES

| | | | |
|---|---|---|---|
| 5 lbs Yates' hammer headed mamooties | Rs 3 0 0 Each | Weeding forks @ | Rs 1 4 0 Each |
| „ „ „ | „ 2 14 0 „ | Garden trowels „ | Rs 1 4 0 „ |
| „ „ „ | „ 2 12 0 „ | Pick axes „ | Rs 1 8 0 „ |
| Felling axes at Rs 3 0 0 & | „ 3 4 0 „ | Bill hooks „ | Rs 3 14 0 „ |
| Grubbing mattocks at | „ 3 4 0 „ | Digging forks „ | Rs 4 0 0 „ |

## MONSOON EQUIPMENT.

| | | | |
|---|---|---|---|
| Planter boots | Rs 16 8 0 | Dales' dubbin per tin | Rs 0 8 0 |
| Marrs' oil (water proof) per tin | Rs 2 0 0 | Umbrellas | Rs 4 8 0 |

52—31

**SPENCER & CO. LTD.** General Merchants **MERCARA.**



## V. SUBRAMANIA IYER

*Manufacturing,*

## JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423.

TRIPLICANE, MADRAS.

Catalogue Free to bonafide Enquirers

Rose Water Sprinkler.





Nose-screws. Claver. Drops Thodu. Brooch.

Chased Silver Mirror.

Manufacturer of HIGH CLASS GEMSET JEWELS a speciality

The special features of my productions are —
1 Best quality
2 Latest novel designs
3 Perfect execution
4 Neat & artistic finish
5 Most moderate prices

GOLD or SILVERWARE of all descriptions neatly executed

52—51

## ನೀವು ನಿರ್ಬಲಸ್ತರಾಗಿ ಯಾಕೆ ನರಳುವಿರಿ?

[illegible]

## ಸಾಲುಮಿಸ್ರಿ ಮುರಬ್ಬ

[illegible]

ವರೆಗೆ ೦—೮—೦.

ಬಿ. [illegible],

[illegible]

14—5

## ಅಪೂರ್ವ ಸಂದರ್ಭ.

[illegible] ಅಪೂರ್ವ ಸಂದರ್ಭ.

## ಆತಂಕನಿಗ್ರಹ ಮಾತ್ರೆಗಳು.

[illegible]

## ಕಾಮಶಾಸ್ತ್ರ

[illegible]

52—5 [illegible]

# ಕೊಡಗು.

ಸನ್ ೧೯೨೮ ನೇ ಇಸವಿ

ಆಗೊಸ್ತು ತಾ ೩೧ ನೆ ಶುಕ್ರವಾರ


## ಶಾಂತಿ ಕವಲು.

ಈ ತಾರೀಕು 27ರಲ್ಲಿ ಫ್ರಾನ್ಸ್ ದೇಶದ ರಾಜಧಾನಿಯಾದ ಪ್ಯಾರಿಸ್ ಪಟ್ಟಣದಲ್ಲಿ ಕೆಲವು ಪ್ರಮುಖ ರಾಜ್ಯಗಳ ಪ್ರತಿನಿಧಿಗಳು ಇನ್ನು ಮುಂದೆ ಯುದ್ಧ ಮಾಡಬಾರದೆಂಬ ಕವಲಿಗೆ ತಮ್ಮ ತಮ್ಮ ದೇಶದ ಸರಕಾರದ ಮತ್ತು ಜನರ ಪರವಾಗಿ ಸಹಿ ಹಾಕಿದರು. ಅಮೇರಿಕಾ ದೇಶದ ಪರರಾಷ್ಟ್ರ ಸಚಿವ ಮಿ ಕೆಲಗ್ ಎಂಬವರು ಇಂಥಾ ಕವಲು ಮಾಡಿಕೊಳ್ಳಬೇಕೆಂತ ಸೂಚನೆ ಕೊಟ್ಟು ಕವಲಿನ ಕರಡುಗಳನ್ನು ತಯಾರಿಸಿ ಎಲ್ಲಾ ದೇಶಗಳಿಗೂ ಕಳುಹಿಸಿಕೊಟ್ಟು ಅವರವರ ಅಭಿಪ್ರಾಯವನ್ನು ಪಡೆದು, ಮೊನ್ನೆ ದಿನ ಕವಲು ಮಂಜೂರಾಯಿತು. ಬ್ರಿಟನ್, ಉತ್ತರ ಐರ್ಲ್ಯಾಂಡ್ ಮತ್ತು ಹಿಂದೂಸ್ಥಾನದ ಪರವಾಗಿ ಬ್ರಿಟನಿನ ಪ್ರತಿನಿಧಿಯೂ, ಬ್ರಿಟಿಷ್ ಸಾಮ್ರಾಜ್ಯದ ಉಪನಿವೇಶನಗಳಾದ ದಕ್ಷಿಣ ಆಫ್ರಿಕಾ ಆಸ್ಟ್ರೇಲಿಯಾ ಕೆನಾಡಾ ನ್ಯೂಜೀಲ್ಯಾಂಡ್, ಐರಿಷ್ ಫ್ರೀಸ್ಟೇಟ್, ಇವುಗಳ ಪ್ರತಿನಿಧಿಗಳೂ, ಅಮೇರಿಕ, ಫ್ರಾನ್ಸ್, ಫ್ರೈನ್ಸ್, ಇಟಲಿ, ಜಪಾನ್, ಬೆಲ್ಜಿಯಮ್, ಜರ್ಮನಿ, ಪೋಲೆಂಡ್, ಜೆಕೊಸ್ಲೋವಾಕಿಯಾ ರಾಜ್ಯಗಳ ಪ್ರತಿನಿಧಿಗಳೂ ಈ ಕವಲಿಗೆ ದಸ್ಕತ್ತು ಹಾಕಿದರು. ಬ್ರಿಟಿಷ್ ಸಾಮ್ರಾಜ್ಯದ ಉಪನಿವೇಶಗಳು ಸ್ವತಂತ್ರವಾಗಿ ಪ್ರತ್ಯೇಕ ಪ್ರತಿನಿಧಿಗಳನ್ನು ಈ ಕವಲಿಗೆ ಒಪ್ಪಿಗೆ ಕೊಡಲು ಕಳುಹಿಸಿರುವಾಗ ಹಿಂದೂಸ್ಥಾನದ ಪರವಾಗಿ ಹಿಂದೀ ಪ್ರತಿನಿಧಿಯು ಹೋಗಲು ಅವಕಾಶ ಇಲ್ಲದೆ ಇದ್ದದ್ದು ಎಂಥಾ ನಾಚಿಕೆಗೇಡು! ಇದರಿಂದಲೇ ಉಪನಿವೇಶಗಳ ಸ್ವರಾಜ್ಯವಾದರೂ ಹಿಂದೂಸ್ಥಾನಕ್ಕೆ ಬೇಕೆಂತ ನೆಹರು ಕಮಿಟಿಯವರು ತೀರ್ಮಾನಿಸಿದ್ದನ್ನು ಸಾಧಿಸಲು ಪ್ರತಿಯೊಬ್ಬ ಹಿಂದೀಯನೂ ಹಿಂದೂಸ್ಥಾನದ ಗೌರವವನ್ನು ನೆನಪಿನಲ್ಲಿಟ್ಟುಕೊಂಡು ಪ್ರಯತ್ನಿಸಬೇಕಾಗಿದೆ.

ಕವಲಿನ ಮುಖ್ಯ ಉದ್ದೇಶವೆಂದರೆ ಪ್ರಪಂಚದ ಮನುಷ್ಯ ಜಾತಿಯ ಅಭಿವೃದ್ಧಿಯನ್ನು ಸಾಧಿಸಲಿಕ್ಕಾಗಿ ಇನ್ನು ರಾಜ್ಯಗಳೊಳಗೆ ಬಂದ ತಕರಾರುಗಳನ್ನು ತೀರಿಸಿಕೊಳ್ಳಲು ಯುದ್ಧ ಮಾಡಬಾರದು, ಅಂಥಾ ತಕರಾರುಗಳನ್ನು ಶಾಂತ ರೀತಿಯ ಪಂಚಾಯತಿಗಳಿಂದಲೇ ತೀರಿಸಿಕೊಳ್ಳಬೇಕು. ಈ ಉದ್ದೇಶವು ಸರ್ವರಿಗೂ ಮಾನ್ಯವೇ ಸರಿ. ಯುದ್ಧ ಮಾಡಿ ರಕ್ತ ಪ್ರವಾಹ ಹರಿಸಬೇಕೆಂಬ ಅಭಿಪ್ರಾಯ ಇರುವವರು ಈಗ ಪ್ರಪಂಚದಲ್ಲಿ ಬಹಳ ಕಡಿಮೆ ಇರಬಹುದು. ಪ್ರಪಂಚದ ಮುಖ್ಯ ಜನಾಂಗಗಳಲ್ಲಿ ಯುದ್ಧ ನಿಲ್ಲಿಸಬೇಕೆಂತ ಅಭಿಪ್ರಾಯ ಹುಟ್ಟಿದ್ದಕ್ಕೆ ನಾವು ಸಂತೋಷಪಡಬೇಕಾಗಿದೆ. ಆದರೆ ಈ ಕವಲಿಗೆ ಸೇರಿದ ಜನಾಂಗಗಳ ನಡತೆಯನ್ನು ನೋಡಿದರೆ ಹೆಚ್ಚಿನ ಹರುಷಕ್ಕೆ ಎಡೆ ಇಲ್ಲ. ಅಮೇರಿಕಾ, ಬ್ರಿಟನ್, ಫ್ರಾನ್ಸ್, ಇಟಲಿ ಜಪಾನ್ ದೇಶಗಳು ತಮ್ಮ ತಮ್ಮ ಸೈನ್ಯ ಬಲವನ್ನೂ ನೌಕಾ ಬಲವನ್ನೂ, ಆಕಾಶ ವಿಮಾನಗಳನ್ನೂ ಹೆಚ್ಚಿಸಿಕೊಳ್ಳುತ್ತಾ ಶಾಂತಿ ಕವಲಿಗೆ ಸಹಿ ಹಾಕುವದು ನೋಡುವರಿಗೆ ನಗು ಬರುವಂತಿದೆ. ಪ್ರಪಂಚದಲ್ಲಿ ಶಾಂತಿ ಸ್ಥಾಪನೆಯ ಕವಲಿಗೆ ಒಪ್ಪುವ ರಾಜ್ಯಗಳೆಲ್ಲಾ ಯುದ್ಧ ಸನ್ನಾಹಗಳನ್ನು ನಿಲ್ಲಿಸುವದಾದರೆ ತಾವು ಅದಕ್ಕೆ ಸೇರುತ್ತೇವೆಯೆಂತ ರಷ್ಯಾ ದೇಶದ ಸರಕಾರದವರು ತಿಳಿಸಿದರು. ಆದರೆ ಈ ಶರತ್ತಿಗೆ ಬೇರೆ ರಾಜ್ಯಗಳು ಒಪ್ಪಲಿಲ್ಲವಂತೆ! ಶಾಂತಿ ಕವಲಿಗೆ ಸಹಿ ಮಾಡಿದವರೆಲ್ಲರೂ ಇದಕ್ಕೆ ಒಪ್ಪಿಕೊಂಡಿದ್ದರೆ ಇನ್ನು ಮುಂದಕ್ಕೆ ಯುದ್ಧವಾಗುವ ಸಂಭವವು ಕಡಿಮೆಯಾಗುತಿತ್ತು.

ಆತ್ಮರಕ್ಷಣೆಗಾಗಿ ಯುದ್ಧ ಮಾಡಬಹುದೆಂತಲೂ ತಮ್ಮ ತಮ್ಮ ಅಧೀನಗಳಲ್ಲಿ ಇರುವ ಪ್ರಾಂತ್ಯಗಳನ್ನು ಕಾಪಾಡಿಕೊಳ್ಳುವ ಹಕ್ಕು ಇದರಿಂದ ತಪ್ಪುವದಿಲ್ಲವೆಂತಲೂ ಕವಲಿನ ಶರತ್ತುಗಳಿವೆ. ಈ ಎರಡು ಶರತ್ತುಗಳು ಇರುವವರೆಗೆ ಯುದ್ಧ ಆಗಬೇಕಾದಾಗ ಆಗಿಯೇ ಆಗುತ್ತದೆ. 'ಮೋಡರ್ನ್ ರಿವ್ಯೂ'ನಲ್ಲಿ ಸೂಚಿಸಿರುವಂತೆ ಯಾವ ಯುದ್ಧವೂ ಆತ್ಮರಕ್ಷಣೆಗಾಗಿ ನಡೆದದ್ದಲ್ಲ. ಯುದ್ಧ ಮಾಡಬೇಕೆಂತ ರಾಜ್ಯಾಧಿಕಾರಿಗಳಿಗೆ ತೋರಿದಾಗ ಆತ್ಮರಕ್ಷಣೆಯ ಕಾರಣವನ್ನು ತೋರಿಸುವದು ಕಷ್ಟವಲ್ಲ. ಅದರಲ್ಲೂ ಅಧೀನ ರಾಜ್ಯಗಳ ಮೇಲಿನ ಹಕ್ಕನ್ನು ಉಳಿಸಿಕೊಳ್ಳುವ ಸ್ವಾತಂತ್ರ್ಯವಿರುವಾಗ ಯುದ್ಧ ಮಾಡಲು ಕವಲಿಗೆ ವಿರೋಧವಿಲ್ಲದ ಕಾರಣಗಳನ್ನು ತೋರಿಸುವದು ಏನೇನೂ ಕಷ್ಟವಲ್ಲ. ಈ ಕವಲಿಗೆ ಉತ್ತೇಜನ ಕೊಡುವ ಬಗ್ಗೆ ಮದ್ರಾಸಿನಲ್ಲಿ ಈ ವಾರ ನಡೆದ ಪಬ್ಲಿಕ್ ಮೀಟಿಂಗಿನಲ್ಲಿ ಮಿ ಇಗ್ನೇಶಿಯಸ್‌ರವರು ಹೇಳಿರುವ ಮೇರೆ ಈ ಕವಲಿಗೆ ಸಹಿ ಹಾಕಿದ ದಿನವೇ ಅಧೀನ ರಾಜ್ಯಗಳಿಗೆ ಸ್ವಾತಂತ್ರ್ಯವನ್ನೂ ಕೊಟ್ಟಿದ್ದರೆ ಶಾಂತಿಯು ನಿಜವಾಗಿಯೂ ಸಂಸ್ಥಾಪಿತವಾಗುತ್ತಿತ್ತು.

ಮೇಲೆ ಹೇಳಿದ ಮದ್ರಾಸ್ ಮೀಟಿಂಗಿನಲ್ಲಿ ಮಿ ಮೆ. ಹಾಲ್ಯಾಂಡ್ ಎಂಬವರು, ಈ ಕವಲಿನ ಶರತ್ತುಗಳಿಗನುಸಾರವಾಗಿ ಆಯಾ ದೇಶದ ಸರಕಾರಗಳು ನಡೆದುಕೊಳ್ಳುವಂತೆ ನೋಡಿಕೊಳ್ಳುವದು ಆಯಾ ದೇಶದ ಜನರ ಕೈಯಲ್ಲಿ ಇದೆಯೆಂತ ಹೇಳಿದರು. ಈ ಮಾತನ್ನೇ ಪಂಡಿತ ಜವಹಿರಲಾಲ್ ನೆಹರುರವರು ಮದ್ರಾಸ್ ಕಾಂಗ್ರೆಸ್ಸಿನಲ್ಲಿ ಹೇಳಿ ಬ್ರಿಟಿಷರು ಮುಂದೆ ಮಾಡಲಿಕ್ಕಿರುವ ಯುದ್ಧದಲ್ಲಿ ಹಿಂದೀಯರು ಸಹಕರಿಸುವದಿಲ್ಲವೆಂತ ಸ್ಪಷ್ಟವಾಗಿ ತಿಳಿಸಬೇಕೆಂತ ಕೇಳಿಕೊಂಡರು. ಹಿಂದೀಯರ ಪ್ರತಿನಿಧಿಯಾಗಿ ಬ್ರಿಟಿಷರೊಬ್ಬರು ಈ ಕವಲಿಗೆ ಸೈನ್ ಹಾಕಿದವರಿಂದ ಈ ಕವಲನ್ನು ಕಾಪಾಡಲು ಬ್ರಿಟಿಷ್ ಸರಕಾರವನ್ನು ನಿರ್ಬಂಧಿಸುವ ಹಕ್ಕು ಹಿಂದೀಯರಿಗೂ ಇದೆ. ಈ ಕವಲಿನ ಮಾತುಗಳು ನಡೆಯುತ್ತಿರುವಾಗಲೇ ಹಿಂದೂಸ್ಥಾನದ ಸೈನ್ಯವನ್ನು ಬಲಪಡಿಸುವ ಏರ್ಪಾಡುಗಳು ನಡೆಯುತ್ತಿರುವವೆಂದು ಪತ್ರಿಕೆಗಳಿಂದ ತಿಳಿದು ಬರುತ್ತದೆ. ಇದನ್ನು ನೋಡುವಾಗ ಶೀಘ್ರದಲ್ಲೇ ಹಿಂದೂಸ್ಥಾನದ ಸಮೀಪದಲ್ಲಿ ಯುದ್ಧ ಸಂಭವಿಸಬಹುದೆಂಬ ಸಂಶಯ ಹುಟ್ಟುತ್ತದೆ. ಅಂಥಾ ಯುದ್ಧಕ್ಕೆ ಹಿಂದೀಯರು ಖಂಡಿತವಾಗಿಯೂ ಸಹಾಯ ಕೊಡುವದಿಲ್ಲವೆಂತ ಹಿಂದೀ ಸರಕಾರಕ್ಕೆ ತಿಳಿಸಿದರೆ ಈಗ ಮಂಜೂರಾದ ಶಾಂತಿ ಕವಲಿಗೆ ಉತ್ತೇಜನ ಕೊಟ್ಟಂತಾಗುವದು.

## ಕಾಂಗ್ರೆಸ್ಸಿನ ಅಧ್ಯಕ್ಷರು.

ಬರುವ ಡಿಸೆಂಬರು ತಿಂಗಳ ಅಂತ್ಯದಲ್ಲಿ ಕಲ್ಕತ್ತಾದಲ್ಲಿ ನಡೆಯಲಿಕ್ಕಿರುವ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ ಪಂಡಿತ ಮೋತಿಲಾಲ್ ನೆಹರುರವರನ್ನು 14 ಪ್ರಾಂತೀಯ ಕಾಂಗ್ರೆಸ್ ಕಮಿಟಿಗಳೂ, ವಲ್ಲಭಭಾಯಿ ಪಟೇಲರವರನ್ನು 4 ಕಾಂಗ್ರೆಸ್ ಕಮಿಟಿಗಳೂ, ಯನ್ ಸಿ ಕೇಳ್ಕರವರನ್ನು ಮಹಾರಾಷ್ಟ್ರ ಕಾಂಗ್ರೆಸ್ ಕಮಿಟಿಯೂ ಶಿಫಾರಸ್ಸು ಮಾಡಿದ್ದರಿಂದ ಪಂಡಿತ ಮೋತಿಲಾಲ್ ನೆಹರುರವರನ್ನೇ ಸ್ವಾಗತ ಕಮಿಟಿಯವರು ಸರ್ವಾನುಮತದಿಂದ ಈ ಉಚ್ಚ ಪದವಿಗೆ ಆರಿಸಿರುವರು. ಇವರ ಆರಿಸುವಿಕೆಯು ನ್ಯಾಯವಾದದೆಂಬುದರಲ್ಲಿ ಏನಿಷ್ಟೂ ಸಂದೇಹವಿಲ್ಲ. ನೆಹರು ಕಮಿಟಿಯವರು ತಯಾರಿಸಿರುವ ಹಿಂದೂ ದೇಶದ ರಾಜಕೀಯ ರಚನೆಯು ಸರ್ವಪಕ್ಷ ಸಭೆಯವರಿಂದ ಒಪ್ಪಲ್ಪಟ್ಟರೂ ಅದು ಬರುವ ನೇಶನಲ್ ಕಾಂಗ್ರೆಸ್ಸಿನಲ್ಲಿ ಚರ್ಚಿಸಲ್ಪಡುವ ಪ್ರಾಮುಖ್ಯ ವಿಷಯವಾಗುವದು. ಈ ಮಹತ್ವದ ಸಂಗತಿಯು ಚರ್ಚಿಸಲ್ಪಡುವ ಮಹಾಸಭೆಯ ಅಧ್ಯಕ್ಷ ಪದವಿಗೆ ಆ ರಚನೆಯ ಮುಖ್ಯ ಕರ್ತರಷ್ಟು ಯೋಗ್ಯರಾದವರು ಬೇರೆ ಯಾರೂ ಇಲ್ಲವೆಂದೇ ಹೇಳಬೇಕಾಗಿದೆ. ಅಲ್ಲದೆ ಮೋತಿಲಾಲರು ತಮ್ಮ ವೃದ್ಧಾಪ್ಯದಲ್ಲೂ ಕೂಡ ಯುವಕರಿಗಿಂತ ಉತ್ಸಾಹದಿಂದಲೂ ಬುದ್ಧಿವರ್ಚಸ್ಸಿನಿಂದಲೂ ಮಾಡುತ್ತಿರುವ ದೇಶಸೇವೆಗಾಗಿ ಅವರಿಗೆ ಭಾರತ ಪುತ್ರರು ಎರಡನೇ ಸಾರಿ ಈ ಅಧ್ಯಕ್ಷತ್ವದ ಬಹುಮಾನವನ್ನು ಮಾಡಿದ್ದು ಶ್ಲಾಘನೀಯವಾಗಿದೆ.

## ಖಾದಿ ಪ್ರಚಾರ.

ಈ ವಿಷಯವನ್ನು ಕುರಿತು ಈ ತಾ 3 ರಲ್ಲಿ ಅಗ್ರಲೇಖನವನ್ನು ಬರೆದಿದ್ದೆವು. ಅದನ್ನು ಓದಿದ ಅಖಿಲ ಭಾರತ ನೂಲುವವರ ಸಂಘದ ಕರ್ಣಾಟಕ ಶಾಖೆಯ ಸೆಕ್ರೆಟರಿಯವರು ನಮಗೆ ಬರೆದಿರುವ ಪತ್ರವನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ನಮ್ಮ ದೇಶದಲ್ಲಿ ಉಪಯೋಗಿಸಲು ಅಪೇಕ್ಷಿಸುವವರಿಗಾದರೂ ಖಾದಿ ಬಟ್ಟೆಯನ್ನು ಒದಗಿಸಿಕೊಡದೆ ಇರುವದು ತುಂಬಾ ವ್ಯಸನಕರವೆಂದು ಎಷ್ಟು ಹೇಳಿದರೂ ಸಾಲದು. ಈ ಕೊರತೆಯನ್ನು ಹೋಗಲಾಡಿಸಲು ಇಲ್ಲಿಯ ಖಾದಿ ಪ್ರೇಮಿಗಳ ಮುಖಾಂತರ ಇನ್ನಾದರೂ ಮುಂದೆ ಬಂದ ಅಖಿಲಭಾರತ ನೂಲುವವರ ಸಂಘದ ಸೆಕ್ರೆಟರಿಯವರೊಂದಿಗೆ ಪತ್ರವ್ಯವಹಾರ ನಡಿಸಿ ಸಂಘದ ಬೊರೆಯಬಹುದಾದ ಸಹಾಯವನ್ನು ಪಡೆಕೊಳ್ಳಬೇಕಾಗುವದು. ಬೇಗ ಕೊಡಗಿನ ಮಧ್ಯ ಸ್ಥಳವಾದ ವೀರರಾಜಪೇಟೆ ಯ... ರಿಯಲ್ಲಿ ಒಂದು ಖಾದಿ ಅಂಗಡಿಯನ್ನು ತೆರೆಯುವರಾಗಿ ನಂಬುತ್ತೇವೆ. ಅಖಿಲ ಭಾರತ ನೂಲುವವರ ಸಂಘವು ತಕ್ಕಷ್ಟು ಸಹಾಯ ಕೊಡದೆ ಇರಲಿಕ್ಕಿಲ್ಲವೆಂದು ನಂಬುತ್ತೇವೆ. ಅಂಗಡಿಯನ್ನಿಟ್ಟು, ಕೊಂಡು ಕೊಳ್ಳುವವರು ಅಂಗಡಿಗೆ ಬರುವದನ್ನೇ ಕಾಯದೆ ಗ್ರಾಮಾಂತರಗಳಿಗೂ ಖಾದಿಯನ್ನು ಒಯ್ದು ಜನರಿಗೆ ಮಾರಾಟ ಮಾಡುವ ಏರ್ಪಾಡನ್ನು ಮಾಡುವದು ಉತ್ತಮವಾಗಿದೆ. ಈ ಕೆಲಸವನ್ನು ಕೈಕೊಳ್ಳಲು ದೇಶಾಭಿಮಾನ ಮತ್ತು ಸ್ವಾಭಿಮಾನವುಳ್ಳ ಉತ್ಸಾಹಭರಿತರಾದ ಯುವಕರು ಮುಂದೆ ಬರಬೇಕೆಂದು ಅವರಲ್ಲಿ ನಮ್ಮ ವಿನಂತಿ.

## ಗ್ರಾಮಗಳ ಪುನರುದ್ಧಾರ.

(ಬರೆದು ಬಂದದ್ದು)

ಮುಂದುವರಿದದ್ದು

ಪ್ರಪಂಚದಲ್ಲಿ ಔನ್ನತ್ಯಕ್ಕೆ ಬಂದಿರುವ ಯಾವ ಜನಾಂಗವನ್ನು ನೋಡಿದರೂ ವ್ಯಾಪಾರ ಮತ್ತು ಕೈಗಾರಿಕೆಗಳಿಂದಲೇ ಎಂಬುದು ವ್ಯಕ್ತವಾಗುವುದು. ಪೂರ್ವದಲ್ಲಿ ಆ ಜನಾಂಗದವರು ವ್ಯವಸಾಯವನ್ನು ಶಾಸ್ತ್ರೋಕ್ತ ಮಾಡಲು ತಿಳಿದುಕೊಂಡರು. ಅನಂತರ ದಾರಿದ್ರ್ಯವು ತಲೆದೋರುವುದನ್ನು ಮುಂಚಿತವಾಗಿ ತಮ್ಮ ಚಟುವಟಿಕೆ ಮೇಧಾಶಕ್ತಿ ಉತ್ಸಾಹಗಳಿಂದ ಕೈಗಾರಿಕೆಗಳಿಗೆ ಉತ್ತೇಜನವನ್ನು ಕೊಟ್ಟು ಕೈಗಾರಿಕೆಗಳಲ್ಲಿ ಪ್ರವೀಣರಾಗಿ ತಾವು ಮಾಡಿದ ಸಾಮಾನುಗಳನ್ನು ಮಾರುತ್ತಾ ಬಂದು ಕಾಲಕ್ರಮೇಣ ವ್ಯಾಪಾರವನ್ನು ಅಭಿವೃದ್ಧಿ ಹೊಂದಿಸಿದರು.

ನಮ್ಮನ್ನು ಆಳುತ್ತಿರುವ ಬ್ರಿಟಿಷ್ ಜನಾಂಗದವರನ್ನೇ ತೆಗೆದುಕೊಂಡರೆ ಇವರು ಪೂರ್ವದಲ್ಲಿ ಕೃಷೀವಲರಾಗಿಯೇ ಇದ್ದು ದಿನಗಳು ಕಳೆದಂತೆಯೇ ಕ್ರಮೇಣ ಅಭಿವೃದ್ಧಿ ಹೊಂದಿ ವ್ಯಾಪಾರವನ್ನು ಕೈಕೊಂಡು ವ್ಯಾಪಾರದಲ್ಲಿಯೇ ಆಸಕ್ತರಾಗಿ ವ್ಯಾಪಾರ ಮಾಡುವ ಕಾರಣದಿಂದಲೇ ಸಮುದ್ರಗಳನ್ನು ದಾಟಿ ಬಂದು ಭರತಖಂಡದ ಸಾಧಕ ಪದಾರ್ಥಗಳನ್ನು ಕೊಂಡೊಯ್ದು ಅದರ ಲಾಭದಿಂದ ಹೆಚ್ಚು ಉತ್ಸಾಹಗೊಂಡು ಹಿಂದೂಸ್ಥಾನದ ಅತುಲೈಶ್ವರ್ಯದಿಂದ ಆಕರ್ಷಿತರಾಗಿ ಹಿಂದೂಸ್ಥಾನವನ್ನು ಗೆದ್ದು ದೊಡ್ಡ ಸಾಮ್ರಾಜ್ಯವನ್ನು ಸ್ಥಾಪಿಸಿರುವರು. ಈ ನಿದರ್ಶನವೇ ಹಗಲಿರುಳು ಚಿಂತಿಸುತ್ತಾ ಇರುವ ಗ್ರಾಮನಿವಾಸಿಗಳಿಗೆ ತದೇ ರೀತಿ ವರ್ತಿಸಲು ದಾರಿ ತೋರಿಸುವುದು. ಹೀಗೆ ಬ್ರಿಟಿಷರೇ ಅಲ್ಲ, ಯೂರೋಪ್ ಖಂಡದ ಇನ್ನೂ ಅನೇಕ ದೇಶಗಳ ಗ್ರಾಮ ನಿವಾಸಿಗಳಿಗೆ ಬಡತನವೇ ಏನೆಂದು ಗೊತ್ತಿಲ್ಲ. ಗೊತ್ತಿರುವ ಕೆಲವರಿಗೆ ಅದರ ಅಂಜಿಕೆಯೇ ಇಲ್ಲ. ನಮ್ಮ ಜನಗಳಾದರೋ ಇರುವುದರಲ್ಲಿಯೇ ಸಂತೃಪ್ತರಾಗಿ 'ಬಂದಷ್ಟು ಬರಲಿ ಬರಸಿವ್ವ ಹಾಲು' ಎಂಬ ತತ್ವವನ್ನನುಸರಿಸಿ ಭಾಗ್ಯಾರ್ಜಿತವಾದ ಸಾರವು ಮುಗಿಯುವ ವರೆಗೆ ಮನಸು ಬಂದತೆ ಉಣ್ಣು ಬಿತ್ತಿ ಭೂಮಿಯು ಕರುಣದಿಂದಲೂ ವಾಯುಗಣದಿಂದಲೂ ಬೆಳದ ಪೈರನ್ನು ಕೊಯಿಸಿ, ಹಾಲಿದ್ದಾಗಲೇ ಹಬ್ಬವೆಂದು ಇರುವಾಗ ಉಂಡು ವೆಚ್ಚ ಮಾಡಿ ಇಲ್ಲದಿದ್ದಾಗ ಸರಿಹೋರೆಯುವರ ಸಾಲ ಮಾಡಿ, ಬಡತನಕ್ಕೆ ಆಮಂತ್ರಣವನ್ನೇ ಕೊಟ್ಟು ಬರಮಾಡಿಕೊಂಡಂತೆ ತಮ್ಮಲ್ಲಿ ದಾರಿದ್ರ್ಯವನ್ನು ಒಳಸೇರಿಸುವ ಸ... ಗಳಿಗೆ ... ಉಪ ... ಮಾಡುವರು. ಇಷ್ಟೇ ಅಲ್ಲ ... ಬಲ್ಲದ ತನ ... ಧೈರ್ಯಶಾಲಿ ... ಉತ್ಸಾಹೀ ... ವ್ಯವಸಾಯ ... ಇದೇ ಮೊದಲಾದ ... ದ ... ಗ್ರಾಮವಾಸಿಗಳನ್ನು ಆ ... ವುದರಿಂದ ... ಹಿಂದೂಸ್ಥಾನದ ಗ್ರಾಮ ನಿವಾಸಿಗಳನ್ನು ಅದೋಗತಿಗೆ ಇಳಿಸುವುದರಲ್ಲಿ ಆಶ್ಚರ್ಯವೇನಿದೆ? ಈ ಎಲ್ಲೆಯಿಂದ ಎಚ್ಚತ್ತು ಕೈಗಾರಿಕೆಗಳನ್ನು ನವೀನ ರೀತಿಯಿಂದ ಉನ್ನತ ಸ್ಥಿತಿಗೆ ತಂದು ಯಾವ ಧುಂದು ವೆಚ್ಚವನ್ನೂ, ದುರ್ವ್ಯಯವನ್ನೂ ಮಾಡದೆ ಸಹಕಾರ ಮಾಗದಿಂದಲೂ, ಸದ್ವರ್ತನೆಯಿಂದಲೂ ಇತರ ಜನಾಂಗಗಳ ಅಭಿವೃದ್ಧಿಯ ನಿದರ್ಶನಗಳನ್ನು ನೋಡಿ ಅವರಂತೆಯೇ ಕಸಬುಗಳನ್ನೂ, ವ್ಯಾಪಾರವನ್ನೂ ವ್ಯವಸಾಯದ ಜೊತೆಯಲ್ಲಿಯೇ ಪ್ರಾಮಾಣಿಕತೆಯಿಂದ ಮಾಡುತ್ತಿದ್ದರೆ ಇತರ ದೇಶಗಳಲ್ಲಿ ಸುಖಜೀವನದಿಂದ ಸಂತೋಷ ಯುಕ್ತರಾಗಿರುವ ರೈತರಂತೆಯೇ ಭಾರತ ಮಾತೆಯ ಗ್ರಾಮ ನಿವಾಸಿಗಳು ಸಂತೃಪ್ತರಾಗಿ ಋಣದ ಬಂಧನದಿಂದ ನರಳುತ್ತಿರುವ ಭಾರತ ಮಾತೆಯ ಬಂಧ ವಿಮೋಚನೆ ಮಾಡಲು ಶಕ್ತರಾಗುವರು.

ಅನ್ಯೋನ್ಯ ಸಹಾಯ ಅಥವಾ ಸಹಕಾರ —

ಚಂದ್ರಪ್ರಭಾವಟಿ:—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಪದೇಪದೇ ಹೋಗುವುದು, ಮೂತ್ರಕೋಶದ ಉರಿ, ಮೂತ್ರ, ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ದೋಷ ಸಂಬಂಧವಾದ ಎಲ್ಲಾ ರೋಗಗಳು, ದೇಹದಲ್ಲಿ ಉರಿ ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳ ಬಿಚ್ಚುವ ರೋಗ ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—12—0

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 4 ಡಬ್ಬಿಗೆ ರೂ 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಹುರಿ, ಕಣ್ಣುರಿ ಇವುಗಳಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನರಗಳ ಶಕ್ತಿ ಕುಂದಿಹೋಗುವುದು. ಇವುಗಳಿಗೆಲ್ಲ ಒಂದೇ ಗುಣ ಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—...

ನಮ್ಮ ಕೆಟಲಾಗು ತರಿಸಿ ನೋಡಿರಿ. — ವಿಳಾಸ—ಮನೋಲ್ಲಾಸಿನಿ ಕಂಪೆನಿ
52—47 — 9. ಮಂಗಳೂರು.

ರಕಾರಿಕೆ ಮಾಲುಗಳಿಗೆ ಮೋಸ ಹೋಗಬೇಡಿರಿ!
ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ.

ಅಜಮಾಯಿಸಿ ನೋಡಿರಿ.




ಇನಾಮಿನ ಬಟ್ಲುಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ

ಎಲ್ಲಾ ಆರ್ಡರುಗಳನ್ನೂ ಭರವಸೆ ರೀತಿಯಿಂದಲೂ, ತುರ್ತವಾಗಿಯೂ ಗ್ಯಾರೆಂಟಿಯೊಡನೆ ಜಾರಿ ಮಾಡಲಾಗುವದು.

ಕೇಶವಜೀ ದೇವಚಂದ್,
ಜ್ವಲ್ಲರ್, (ಕೆಟಲಾಗ್ ಮುಫತ್).
1—14 — 21 ಚೈನಾ ಬಜಾರ್ ರೋಡ್, ಮದರಾಸು.

## ಎಂಪಯರ್ ಆಫ್ ಇಂಡಿಯಾ
### ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು 1897.

1928ನೇ ಇಸವಿ ಫೆಬ್ರುವರಿ 21ಕ್ಕೆ ಆಖೈರಾದ 5 ವರ್ಷಗಳಲ್ಲಿ ಕಂಪನಿಗೆ ಲಾಭದ ಉತ್ಪತ್ತಿ.

| | | |
|---|---|---|
| ಹೊಸ ಪಾಲಿಸಿಗಳು ವಿಮೆ ... ... ... | ರೂ. | 1,16,00,000. |
| ವರಮಾನ ವಿಮೆ .... ... ... .. | ರೂ. | 54,95,000. |
| ಕಂಪೆನಿ ಆಸ್ತಿ ವಿಮೆ . ... ... .. | ರೂ. | 3,15,64,000. |

ಬೇಕಾಗಿದೆ:— ಕೊಡಗು ದೇಶದ ಮುಖ್ಯ ಸ್ಥಳಗಳಲ್ಲಿ ಏಜಂಟರುಗಳು.

ಹೆಡ್ ಆಫೀಸು. — ಬ್ರ್ಯಾಂಚ್ ಆಫೀಸು.
ಎಂಪಯರ್ ಆಫ್ ಇಂಡಿಯಾ — ಕಮರ್ಶಿಯಲ್ ಬೀದಿ
ಲೈಫ್ ಬಿಲ್ಡಿಂಗ್, ಬೊಂಬಾಯಿ. — 24—10 — ಬೆಂಗಳೂರು.

ಸ್ಥಾಪನೆ—1874. — ಹೆಡ್ ಆಫೀಸು—ಬೊಂಬಾಯಿ.

## ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ
## ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

**1927**

ಅತ್ಯುಚ್ಛ್ರಾಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ
ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ
ಪಡೆಯುತ್ತಿರುವುದನ್ನು ಈ ವಿವರಗಳಿಂದ ತಿಳಿಯಬಹುದು.

—ಪಾಲಿಸಿಗಳು—

| | | | | | |
|---|---|---|---|---|---|
| 1925 | — | 13545 | — | ರೂ. | 2,97,42,000. |
| 1926 | — | 17371 | — | ರೂ. | 3,91,39,000. |
| 1927 | — | 21418 | — | ರೂ. | 4,68,04,075. |

— ಪ್ರೀಮಿಯಂ ಉತ್ಪತ್ತಿ —.

| | | | |
|---|---|---|---|
| 1925 | — | ರೂ. | 92,66,000. |
| 1926 | — | ರೂ. | 1,05,53,000. |
| 1927 | — | ರೂ. | 1,21,53,000. |

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಮೀರಿದೆ.
ಕಂಪನಿಯ ಫಂಡು ೮ ಕೋಟಿ ರೂಪಾಯಿಗಳಿಗೆ ಮೀರಿದೆ
ಜೀವವಿಮೆ ಮಾಡಬೇಕೆಂದಿರುವವರು ನಾವಕಾಶ ಮಾಡದೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದುಕೊಳ್ಳಬಹುದು

ಓರಿಯಂಟಲ್ ಬಿಲ್ಡಿಂಗ್ಸ್, — ಎಲ್. ಆರ್. ಕೃಷ್ಣಸ್ವಾಮಯ್ಯರ್,
ಸೌತ್ ಪರೇಡ್, ಬೆಂಗಳೂರು. — 52—20 — ಬ್ರ್ಯಾಂಚ್ ಸೆಕ್ರೆಟರಿ.

Printed & published by P. I. Belliappa, at 'Kodagu' Press, Mercara for "Kodagu" Ltd.

## ಮಹಾತ್ಮಗಾಂಧಿಯವರ ಸ್ವಚರಿತ್ರೆ.

ಎರಡನೇ ಭಾಗದಲ್ಲಿ ಐದನೇ ಪ್ರಕರಣ.

ಪೂನಾದಲ್ಲಿ ಗೋಖಲೆಯವರೊಡನೆ.

ನಾನು ಮುಂಬಯಿಯನ್ನು ತಲುಪಿದೊಡನೆ ಇಲ್ಲಿ ಗವರ್ನರು ನನ್ನನ್ನು ನೋಡಲೆಳಸುವರೆಂದೂ ನಾನು ಪೂನಾಕ್ಕೆ ಹೊರಡುವುದಕ್ಕೆ ಮುಂಚೆ ಅವರನ್ನು ನೋಡುವುದು ಉಚಿತವೆಂದೂ ಗೋಖಲೆಯವರು ನನಗೆ ಹೇಳಿ ಕಳುಹಿಸಿದರು. ಆ ಪ್ರಕಾರ ನಾನು ಗವರ್ನರರನ್ನು ಭೇಟಿಮಾಡಿದೆನು. ಯಥಾಪ್ರಕಾರ ಕುಶಲವಾರ್ತಾವಿಚಾರವಾದ ಮೇಲೆ ಅವರು,

"ನಿಮ್ಮಲ್ಲಿ ಒಂದು ವಿಚಾರವನ್ನು ಕೇಳುತ್ತೇನೆ—ಸರಕಾರದ ಸಂಬಂಧವಾಗಿ ನೀವು ಯಾವ ಕೆಲಸವನ್ನು ಮಾಡಬೇಕಾದರೂ ನನ್ನನ್ನು ಒಂದು ನೋಡಿದರೆ ಸಂತೋಷ" ಎಂದು ಹೇಳಿದರು.

"ನಾನು ಇದಕ್ಕೆ ಸುಲಭವಾಗಿ ಒಪ್ಪಬಲ್ಲೆನು. ಏಕೆಂದರೆ ಸತ್ಯಾಗ್ರಹಿಯಾಗಿ ನಾನು ಯಾರನ್ನು ಇದಿರಿಸುತ್ತೇನೋ ಅವರ ಅಭಿಮತವನ್ನು ತಿಳಿದುಕೊಂಡು ಸಾಧ್ಯವಾದ ಮಟ್ಟಿಗೆ ಅವರ ಅಭಿಪ್ರಾಯಕ್ಕೆ ಸಮ್ಮತಿಸಲು ಪ್ರಯತ್ನಪಡುವುದು ನನ್ನ ನಿಯಮ. ದಕ್ಷಿಣ ಆಫ್ರಿಕದಲ್ಲಿ ನಾನು ಈ ನಿಯಮವನ್ನು ತಪ್ಪದೆ ಅನುಸರಿಸಿದೆನು. ಇಲ್ಲಿಯೂ ಹಾಗೆಯೇ ಮಾಡಬೇಕೆಂದು ನನ್ನ ಉದ್ದೇಶ." ಎಂದು ಉತ್ತರವಿತ್ತೆನು.

ಲಾರ್ಡ್ ವಿಲ್ಲಿಂಗ್‌ಡನರು ನನಗೆ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿ,

"ನಿಮಗೆ ಇಷ್ಟಬಂದಾಗ ನೀವು ನನ್ನನ್ನು ಕಾಣಬಹುದು. ನನ್ನ ಸರಕಾರವು ಉದ್ದೇಶಪೂರ್ವಕವಾಗಿ ಯಾವ ತಪ್ಪನ್ನೂ ಮಾಡುವುದಿಲ್ಲವೆಂಬುದನ್ನು ನೀವೇ ನೋಡುವಿರಿ" ಎಂದರು.

ಅದಕ್ಕೆ ನಾನು "ಈ ನಂಬಿಕೆಯೇ ನನ್ನ ಆಧಾರಸ್ತಂಭವಾಗಿದೆ" ಎಂದೆನು.

ಆ ಮೇಲೆ ನಾನು ಪೂನಾಕ್ಕೆ ಹೋದೆನು. ಆ ಅಮೂಲ್ಯವಾದ ಕಾಲದ ನೆನಪುಗಳನ್ನೆಲ್ಲಾ ತಿಳಿಸ ಬರದು. ಆ ಮೇಲೆ ಗೋಖಲೆಯವರೂ ಭಾರತ ಸೇವಾಸಂಘ (ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ) ದ ಸದಸ್ಯರೂ ನನ್ನನ್ನು ಅಕ್ಕರದಿಂದ ಕಂಡರು. ನನಗೆ ನೆನಪಿರುವ ಮಟ್ಟಿಗೆ ಗೋಖಲೆಯವರು ನನ್ನನ್ನು ನೋಡುವುದಕ್ಕಾಗಿ ಅವರೆಲ್ಲರನ್ನೂ ಕರೆಸಿದ್ದರು. ಸಕಲ ವಿಧದ ವಿಷಯಗಳನ್ನೂ ಕುರಿತು ಅವರೊಡನೆ ನಾನು ನಿರಾತಂಕವಾಗಿ ಮಾತನಾಡಿದೆನು.

ನಾನು ಭಾರತ ಸೇವಾಸಂಘವನ್ನು ಸೇರಬೇಕೆಂದು ಗೋಖಲೆಯವರಿಗೆ ಬಹು ತೀವ್ರವಾದ ಇಚ್ಛೆಯಿದ್ದಿತು. ನನಗೂ ಹಾಗೆಯೇ ಇದ್ದಿತು. ಆದರೆ ನನ್ನ ಮತ್ತು ಸಂಘದ ಧ್ಯೇಯಗಳಿಗೂ ಕೆಲಸ ನಡೆಸುವ ರೀತಿಗೂ ಬಹು ವ್ಯತ್ಯಾಸವಿದ್ದುದರಿಂದ ನಾನು ಸಂಘಕ್ಕೆ ಸೇರುವುದು ಉಚಿತವಾಗಲಾರದೆಂದು ಸದಸ್ಯರುಗಳಿಗೆ ತೋರಿತು. ನನ್ನ ಸ್ವಂತ ನೀತಿನಿಯಮಗಳ ವಿಷಯದಲ್ಲಿ ನಾನು ಬಾಧಿತನಾಗಿದ್ದರೂ ಅವರ ನೀತಿನಿಯಮಗಳಿಗೆ ಸಹನೆಯನ್ನು ತೋರಿಸಲು ನಾನು ಸಿದ್ಧನಾಗಿರುವೆನೆಂದು ಗೋಖಲೆಯವರು ನಂಬಿದ್ದರು.

"ಆದರೆ ಇತರರ ಅಭಿಮತಕ್ಕೆ ತಕ್ಕ ಬೆಲೆಯನ್ನು ಕೊಡಲು ನೀವು ಸಿದ್ಧರಿರುವ ಸಿದ್ಧತೆಯನ್ನು ಸಂಘದ ಸದಸ್ಯರು ಇನ್ನೂ ತಿಳಿಯರು. ಅವರು ತಮ್ಮ ನೀತಿನಿಯಮಗಳ ವಿಷಯವಾಗಿ ವಾದಿಗಳಾಗಿದ್ದಾರೆ. ಮತ್ತು ಕೇವಲ ಸ್ವತಂತ್ರರಾಗಿದ್ದಾರೆ. ಅವರು ನಿಮ್ಮನ್ನು ಸ್ವೀಕರಿಸುವರೆಂಬ ಆಸೆಯನ್ನು ನಾನು ಇಟ್ಟುಕೊಂಡಿದ್ದೇನೆ. ಒಂದು ವೇಳೆ ಅವರು ಹಾಗೆ ಮಾಡದಿದ್ದರೆ ಅವರಿಗೆ ನಿಮ್ಮಲ್ಲಿ ಗೌರವವಾಗಲಿ ಆದರವಾಗಲಿ ಇಲ್ಲವೆಂದು ಒಂದು ಕ್ಷಣವೂ ಎಣಿಸಬೇಡಿ. ನಿಮ್ಮಲ್ಲಿಟ್ಟಿರುವ ಗೌರವಕ್ಕೆ ಅಪಾಯವುಂಟಾದೀತೆಂದು ಅವರು ನಿಮ್ಮನ್ನು ಸೇರಿಸಿಕೊಳ್ಳಲು ಹಿಂದು ಮುಂದು ನೋಡುತ್ತಾರೆ. ಆದರೆ ಅವರು ನಿಮ್ಮನ್ನು ನಿಯಮಪೂರ್ವಕವಾಗಿ ಸೇರಿಸಿಕೊಳ್ಳಲಿ, ಬಿಡಲಿ ನಾನಂತೂ ನಿಮ್ಮನ್ನು ಸದಸ್ಯನೆಂದೇ ಭಾವಿಸುತ್ತೇನೆ." ಎಂದು ಗೋಖಲೆಯವರು ಹೇಳಿದರು.

ನಾನು ಗೋಖಲೆಯವರಿಗೆ ನನ್ನ ಉದ್ದೇಶಗಳನ್ನು ತಿಳಿಸಿದೆನು. ನನ್ನನ್ನು ಸದಸ್ಯನನ್ನಾಗಿ ಸೇರಿಸಲಿ, ಬಿಡಲಿ ನಾನು ನನ್ನ ಕುಟುಂಬದೊಡನೆ ಗುಜರಾತಿನಲ್ಲಿ ಒಂದು ಆಶ್ರಮವನ್ನು ಮಾಡಿಕೊಂಡು ನೆಲೆಸಬೇಕೆಂದು ನನಗೆ ಇದ್ದಿತು. ಏಕೆಂದರೆ ನಾನು ಗುಜರಾತಿನವನಾದುದರಿಂದ ಗುಜರಾತಿನ ಸೇವೆಮಾಡುವುದರ ಮೂಲಕ ದೇಶಸೇವೆ ಮಾಡುವುದು ನನಗೆ ಸುಲಭವಾದ ದಾರಿಯೆಂದು ನಾನು ತಿಳಿದೆನು. ಗೋಖಲೆಯವರಿಗೆ ಈ ಅಭಿಪ್ರಾಯವು ರುಚಿಸಿತು,

"ಅಗತ್ಯವಾಗಿ ಹಾಗೆ ಮಾಡಬೇಕು. ಸದಸ್ಯರೊಡನೆ ನಡೆದ ಮಾತುಕಥೆಯ ಫಲವೇನೇ ಆಗಲಿ ಆಶ್ರಮದ ಖರ್ಚನ್ನು ನೀವು ನನ್ನಿಂದಲೇ ಪಡೆಯಬೇಕು. ಆಶ್ರಮವನ್ನು ನನ್ನದೆಂದೇ ಎಣಿಸುತ್ತೇನೆ" ಎಂದರು.

ನನ್ನ ಹೃದಯವು ಆನಂದದಿಂದ ತುಂಬಿತುಳುಕಿತು. ಹಣ ಸಂಗ್ರಹದ ಜವಾಬ್ದಾರಿಯು ಹೊಲಗಿ ನಾನೊಬ್ಬನೇ ಈ ಕೆಲಸವನ್ನು ಮಾಡಬೇಕಾದ ಆವಶ್ಯಕತೆಯಿಲ್ಲದೆ ನಾನು ಕಷ್ಟಗಳಲ್ಲೆಲ್ಲಾ ಪಾರುಮಾಡಿಸಲು ಆಧಾರಸ್ತಂಭರಂತಹವರೊಬ್ಬರು ದೊರಕಿದುದು ಹರ್ಷದಾಯಕವಾಗಿದ್ದಿತು. ಇದೆಲ್ಲದರಿಂದ ನನ್ನ ಮನಸ್ಸಿನಿಂದ ದೊಡ್ಡ ಹೊರೆಯೊಂದಿಳಿಯಿತು. ದಿವಂ. ಡಾ. ದೇವರವರು ಕರೆಯಿಸಿ ಸಂಘದ ಲೆಕ್ಕದ ಪುಸ್ತಕಗಳಲ್ಲಿ ನನ್ನ ಹೆಸರಿಗೊಂದು ಖಾತೆಯನ್ನು ತೆಗೆದು ಆಶ್ರಮಕ್ಕಾಗಿಯೂ ಸಾರ್ವಜನಿಕ ಕಾರ್ಯಗಳ ವೆಚ್ಚಕ್ಕಾಗಿಯೂ ನನಗೆ ಬೇಕಾಗುವ ಹಣವನ್ನು ಕೊಡಲು ಅವರಿಗೆ ಹೇಳಿದುದಾಯಿತು.

ನಾನು ಇನ್ನು ಶಾಂತಿನಿಕೇತನಕ್ಕೆ ಹೋಗಲು ಸಿದ್ಧಪಡಿಸಿಕೊಂಡೆನು. ನಾನು ಹೊರಡುವುದಕ್ಕೆ ಮುಂಚೆ ಗೋಖಲೆಯವರು ಕೆಲವು ಮಿತ್ರರನ್ನು ಕರೆಸಿ ಕರೆದು ಕೂಟವನ್ನೇರ್ಪಡಿಸಿದರು. ನನಗೆ ಇಷ್ಟವಾದ ಆಹಾರ ಪದಾರ್ಥಗಳನ್ನೇ—ಹಣ್ಣುಗಳು, ಬಾದಾಮಿ, ದ್ರಾಕ್ಷಿ ಮುಂತಾದುವುಗಳನ್ನು—ತರಿಸಿದ್ದರು. ಅವರ ಕೊಠಡಿಯಿಂದ ನಾಲ್ಕು ಹೆಜ್ಜೆಯ ದೂರದಲ್ಲಿಯೇ ಈ ಕೂಟವು ಸೇರಿದ್ದರೂ ಅವರು ಅಷ್ಟು ದೂರ ಕೂಡ ನಡೆದು ಕೂಟದಲ್ಲಿ ಭಾಗಿಗಳಾಗುವ ಸ್ಥಿತಿಯಲ್ಲಿರಲಿಲ್ಲ. ಆದರೆ ಅವರು ನನ್ನಲ್ಲಿಟ್ಟಿದ್ದ ಪ್ರೇಮದ ಬಲದಿಂದ ಅವರು ಬರಲು ಹಟ ಹಿಡಿದರು. ಅವರು ಬಂದರು. ಆದರೆ ಅವರು ಮೂರ್ಛೆಹೋದುದರಿಂದ ಅವರನ್ನು ಹಿಂದಕ್ಕೆ ಹೊತ್ತುಕೊಂಡು ಹೋಗಬೇಕಾಯಿತು. ಹಾಗೆ ಅವರು ಮೂರ್ಛೆಹೋದುದು ಇದೇನೂ ಮೊದಲನೆಯ ಸಲವಾಗಿರಲಿಲ್ಲ. ಆದುದರಿಂದ ಅವರಿಗೆ ತಿಳಿವು ಬಂದೊಡನೆಯೇ ಅವರು ನಾವು ಕೂಟವನ್ನು ನಡೆಸಬೇಕೆಂದು ಹೇಳಿ ಕಳುಹಿಸಿದರು.

ಈ ಕೂಟವು ಸಂಘದ ಅತಿಥಿಗೃಹದ ಇದಿರಿನ ಬಯಲಿನಲ್ಲಿ ಕೆಲವು ಮಿತ್ರರು ಸೇರಿ ನಲಿಗಡಲೆಕಾಯಿ, ಖರ್ಜೂರ ಮತ್ತು ಆಗ ದೊರಕುತ್ತಿದ್ದ ಹಣ್ಣುಗಳನ್ನು ಸೇವಿಸುತ್ತಾ ಒಬ್ಬರಿಗೊಬ್ಬರು ತಮ್ಮ ಮನಸ್ಸಿನಲ್ಲಿದ್ದುದನ್ನೆಲ್ಲಾ ಹೇಳುತ್ತಾ ಮಾತುಕಥೆಯಾಡಲು ಅವಕಾಶವನ್ನೊದಗಿಸಿಕೊಡುವ ಏರ್ಪಾಡಾಗಿದ್ದಿತೇ ವಿನಾ ಇನ್ನೇನೂ ಅಲ್ಲವೆಂದು ಹೇಳಬೇಕಾಗಿಲ್ಲ.

ಆದರೆ ಎಚ್ಚರತಪ್ಪಿ ಬೀಳುವುದು ನನ್ನ ಜೀವನದಲ್ಲಿ ಸಾಧಾರಣವಾದ ವಿಷಯವಾಗಿದ್ದೇನೂ ಪರಿಣಮಿಸಲಿಲ್ಲ.

---

## ಆರೋಗ್ಯ ಪ್ರಸಂಗಗಳು.

ಮನೆಯೊಳಗಿನ ಗಾಳಿಗಿಂತ, ಹೊರಗಿನ ಮೈದಾನದ ಗಾಳಿಯು ಶುದ್ಧವೂ, ಆರೋಗ್ಯಕರವೂ ಆದುದರಿಂದ, ಕೊನೇಪಕ್ಷ ದಿನಕ್ಕೆ ೩ ಘಂಟೆಗಳಿಗೆ ಕಡಿಮೆಯಿಲ್ಲದೆ ಮನೆಯನ್ನು ಬಿಟ್ಟು ಬಯಲು ಸ್ಥಳಗಳಲ್ಲಿದ್ದು ತಿರಬೇಕು.

.... .... .

ಒಂದು ಮನೆಯೊಳಕ್ಕೆ ಮೊದಲು ಪ್ರವೇಶಿಸುವಾಗ, ಅಲ್ಲಿ ಶಾಖವಾದ ಕೆಟ್ಟ ವಾಸನೆಯುಳ್ಳ ಆವಿಯು ಹೊಡೆಯುವಂತಾದರೆ, ಆ ಮನೆಯೊಳಗೆ ಪ್ರವೇಶಿಸಬಾರದು. ಮೊದಲು ಕಿಟಕಿ ಮತ್ತು ಬಾಗಿಲುಗಳನ್ನೆಲ್ಲ ತೆರೆದಿಟ್ಟು, ಆ ಮೇಲೆ ಒಳಗೆ ಹೋಗಿ, ವಾಯುವು ಕೆಡುವ ಕಾರಣವೇನೆಂಬುದನ್ನು ಪರೀಕ್ಷಿಸಿ ತಿಳಿದು ಆ ಕಾರಣವನ್ನು ನಿವೃತ್ತಿಮಾಡಬೇಕು.

.... .... ....

ಮದ್ಯಪಾನಕಗಳೂ ಒಂದು ಬಗೆಯ ವಿಷಜಾತಿಗೇ ಸೇರಿದವು. ಅದು ಪ್ರಾಣಿವರ್ಗಗಳನ್ನೂ ಸಸ್ಯವರ್ಗಗಳನ್ನೂ ಕೊಂದುಬಿಡುವುದು. ಆದರೆ ಕೆಲವು ವೇಳೆಗಳಲ್ಲಿ ವಿಷಪದಾರ್ಥಗಳೂ ಔಷಧಗಳಿಗೆ ಉಪಯೋಗವಾಗುವಂತೆ, ಮದ್ಯದಲ್ಲಿಯೂ ಔಷಧಗುಣಗಳುಂಟು. ಅಂತಹ ಉಚಿತ ಕಾಲದಲ್ಲಿ ಉಪಯೋಗಿಸುವುದನ್ನು ಬಿಟ್ಟು ಅದನ್ನು ದುರುಪಯೋಗಪಡಿಸಿಕೊಳ್ಳಬಾರದು.

.... .. ....

ಮಗುವಿಗೆ ಗಡಿಯಾರದ ಲೆಕ್ಕದಿಂದ ಆಹಾರಗಳನ್ನು ಕೊಡಬೇಕೇ ಹೊರತು, ಅದು ಅತ್ತಾಗಲೆಲ್ಲಾ ಆಹಾರವನ್ನು ಕೊಡಬಾರದು. ಊಟವಿಲ್ಲದವರೂ ಆಹಾರವನ್ನು ತಿನ್ನಿಸಬಾರದು. ಕಾಲಕ್ರಮದಿಂದ ಆಹಾರಕೊಡುವುದನ್ನು ಅಭ್ಯಾಸಮಾಡಿಸಿದ ಮಕ್ಕಳು, ಆ ಆಹಾರ ಕಾಲವು ಬಂದರೆ ತಾನಾಗಿಯೇ ಆತುರವನ್ನು ತೋರಿಸುವವು. ಕಾಲಕ್ಕೆ ತಪ್ಪಿ ಆಹಾರವನ್ನು ಕೊಡುವುದು ಮಕ್ಕಳ ಅಜೀರ್ಣಕ್ಕೆ ಕಾರಣವು. ಬರೀ ರಬ್ಬರಿನ ತೊಟ್ಟುಗಳನ್ನು ಮಕ್ಕಳಿಗೆ ಸೀಪುವುದಕ್ಕೆ ಕೊಡುವುದೂ ಅಪಾಯಕರವು.

.... ...

ಅತ್ಯುಷ್ಣವನ್ನು ತಗ್ಗಿಸುವುದಕ್ಕಾಗಿ ತಣ್ಣೀರಿನ ಸ್ನಾನ ಮಾಡಬೇಕು. ಸ್ನಾನ ಮಾಡಿದ್ದರೆ, ಮೈಯೊರಸಬೇಕಾಗಿದ್ದರೆ, ಮೈಯಲ್ಲಿ ನೋವು ಕಾಣುತ್ತಿದ್ದರೆ ಆಗ ಉಷ್ಣ ಜಲಸ್ನಾನವು ಒಳ್ಳೆಯದು. ನಾಸಿಕೆಯನ್ನುಳಿದು ಕಂಠದ ನೀರಿನಲ್ಲಿ ಪಾದಮಜ್ಜನವನ್ನು (ಫೂಟ್ ಬಾತ್) ಮಾಡುವುದರಿಂದ, ಛಳಿ, ನೆಗಡಿ, ತಲೆನೋವು ಇವು ನಿವೃತ್ತಿಯಾಗುವುವು.

.... ... . ....

ಬಾರ್ಲಿ ನೀರನ್ನು ಈ ಕೆಳಗೆ ಕಂಡಂತೆ ತಯಾರಿಸಬೇಕು. ಎರಡು ಟೀ ಸ್ಪೂನಿನಷ್ಟು ಬಾರ್ಲೀ ಅಕ್ಕಿಯನ್ನು ಚೆನ್ನಾಗಿ ನೀರಲ್ಲಿ ತೊಳೆದು, ಶುದ್ಧಮಾಡಿ ಅದನ್ನು ಒಂದು ಮಡಿಕೆಯಲ್ಲಿ ಹಾಕಿ, ಒಂದು ಪಾತ್ರ ನೀರನ್ನು ಬಿಟ್ಟು, ಅದನ್ನು ಮೂರರಲ್ಲಿ ಒಂದುಪಾಲು ನೀರುಳಿಯುವಂತೆ ಕುದಿಸಬೇಕು. ಆದರೆ ಹೀಗೆ ತಯಾರಿಸಿದ ನೀರನ್ನು ದಿನವೆಲ್ಲಾ ಇಟ್ಟಿದ್ದು ಕುಡಿದರೆ, ಮೈಗೆ ಒಳ್ಳೆಯದಲ್ಲ. ಆದುದರಿಂದ ದಿನಕ್ಕೆ ಮೂರು ನಾಲ್ಕುಸಾರಿ ಆಗಾಗ ಹೊಸದಾಗಿ ಮಾಡಿಕೊಳ್ಳುವುದು ಒಳ್ಳೆಯದು. .... .... .... ....

ಮಲಗುವ ಕೋಣೆಯಲ್ಲಿ ದೀಪವನ್ನಿಡಬಾರದು. ವಿಧಿಯಿಲ್ಲದೆ ಇಡಬೇಕಾದ ಸಂದರ್ಭದಲ್ಲಿ ಸಣ್ಣದಾಗಿ ಉರಿಸಿರಿ. ಎರಡು ಮೋಂಬತ್ತಿಗಳನ್ನು, ಇಲ್ಲವೇ ಎರಡು ದೀಪಗಳನ್ನು ಉರಿಸುವುದರಿಂದ ಒಬ್ಬ ಮನುಷ್ಯನ ಉಸಿರಾಟದಿಂದ ಹೇಗೋ ಹಾಗೆ ಗಾಳಿಯು ಅಶುದ್ಧವಾಗುವುದು. ಚಿಮ್ನಿಯಿಲ್ಲದೆ ಸೀಮೆ ಎಣ್ಣೆಯ ದೀಪವನ್ನುರಿಸುವುದರಿಂದ ಕೆಡುವ ಗಾಳಿಯು ಏಳುಜನರ ಉಸಿರಾಟದಿಂದ ಕೆಡುವ ಗಾಳಿಗೆ ಸಮಾನವಾದುದು.

.... .... .... ....

ತಾಂಬೂಲವು ಜೀರ್ಣಕಾರಿ, ಆದರೆ ಮಿತವಾಗಿರಬೇಕು. ಮಿತಿಮೀರಿ ಹೋದರೆ, ಹಲ್ಲುಗಳೂ, ಜೀರ್ಣಶಕ್ತಿಯೂ ಕೆಡುವುವು. . ... ... ...

ಬೈಸಿಕಲ್ ಸವಾರಿಯು ದೂರದಲ್ಲಿಯೂ, ವೇಗದಲ್ಲಿಯೂ ಮಿತವಾಗಿದ್ದರೆ, ಅದೊಂದು ಸರ್ವೋತ್ತಮವಾದ ವ್ಯಾಯಾಮವು. ಆಯಾಸವಾಗುವಷ್ಟು ಮಿತಿಮೀರಿದರೆ ಅಪಾಯಕಾರಣವು

.... ... .. ...

ಮಕ್ಕಳಿಗೆ ಅಗ್ಗವಾಗಿಯೂ, ಸಿರಸಾಯವಾಗಿಯೂ, ಅತ್ಯುತ್ತಮವಾಗಿಯೂ ಇರುವ ಆಹಾರವು ಸ್ತನ್ಯವೇ!

.... . .... ....

ಸಿಡುಬು, ಸೀತಾಳೆ, ದಡಾರ, ಮುಂತಾದ ಸ್ಫೋಟಕ ರೋಗಗಳಿಗೆ ಆ ರೋಗವುಳ್ಳವರಿಂದ ದೂರವಾಗಿರುವುದೊಂದೇ ನಿವಾರಣೋಪಾಯವು.

.... .. .... ....

ಕಾಲರಾವ್ಯಾಧಿಯೆಂಬುದು ರೋಗಿಯ ದೇಹದಿಂದ ಹೊರಬೀಳುವ ಕಲ್ಮಲಗಳು, ವಾಂತಿ, ಬೇಧಿ ಮೊದಲಾದವುಗಳಲ್ಲಿ ಸಂಬಂಧಿಸುವುದರಿಂದ ಇತರರಿಗೆ ಬರುವುದೇ ಹೊರತು ಬರೀ ಸಂಪರ್ಕದಿಂದ ಅಂಟುವುದಿಲ್ಲ. ಗಾಳಿಯಿಂದ ಹಾರಿಬರುವ ಧೂಳು ಮತ್ತು ನೊಣಗಳೂ ಈ ರೋಗವನ್ನು ಹರಡುವುವು. ಆದುದರಿಂದ ಈ ರೋಗವಿದ್ದ ಕಡೆಯಲ್ಲಿ ಚೆನ್ನಾಗಿ ಕುದಿಸಿ ಆರಿಸಿದ ನೀರನ್ನು ಕುಡಿಯುವುದರಿಂದಲೂ, ಚೆನ್ನಾಗಿ ಪಕ್ವವಾದ ಆಹಾರಗಳನ್ನು ತಿನ್ನುವುದರಿಂದಲೂ ನಿರ್ಭಯವಾಗಿರಬಹುದು.

.... .. ....

ಕಾಲರಾವ್ಯಾಧಿಯು ನೆಲಸಿಯಿದ್ದ ಕಡೆಯಲ್ಲಿ, ಅಜೀರ್ಣಕಾರಿಯಾದ ಆಹಾರಗಳನ್ನು ತಿನ್ನಲೇಬಾರದು. ಚೆನ್ನಾಗಿ ಪಕ್ವವಾಗದ ಅಥವಾ ಕಳಿತು ಹೋದ ಹಣ್ಣುಗಳನ್ನು ತಿನ್ನಬಾರದು. ಅಜೀರ್ಣ ಸೂಚನೆ ಕಂಡಾಗ ಒಡನೆಯೇ ಅದನ್ನು ತಗ್ಗಿಸಬೇಕು. ಭೇದಿಯ ಔಷಧಿಗಳನ್ನು ತೆಗೆದುಕೊಳ್ಳಬಾರದು. ಆರಿದ ಪದಾರ್ಥಗಳನ್ನು ತಿನ್ನಬಾರದು.

.... .... ....

ಒಬ್ಬ ಮನುಷ್ಯನಿಗೆ ಕಾಲರಾವ್ಯಾಧಿಯು ಕಂಡರೆ ಅವನನ್ನು, ಅವನ ಬಟ್ಟೆ ಬರೆ, ಪಾತ್ರೆ ಮುಂತಾದವುಗಳನ್ನೂ ಪ್ರತ್ಯೇಕಿಸಿಡಬೇಕು. ನೊಣಗಳಿಗೆ ಅವಕಾಶವನ್ನು ತಪ್ಪಿಸಬೇಕು. ರೋಗಿಯು ಉಪಯೋಗಿಸಿದ ಬಟ್ಟೆ ಬರೆಗಳನ್ನು ಸುಟ್ಟುಬಿಡಬೇಕು ಅಥವಾ ಹೂಳಿಡಬೇಕು. ಶುಚಿತ್ವವೇ ಇದರ ಮುಖ್ಯ ನಿವಾರಣೋಪಾಯವು

.... ... ' ....

ಕೋಕೋ ಎಂಬುದು ಮೈಗೆ ಪುಷ್ಟಿಕಾರಿ. ಆದರೆ ದುರ್ಬಲವಾದ ಜೀರ್ಣಶಕ್ತಿಯುಳ್ಳವರಿಗೆ ಅನುಕೂಲಿಸದು. ಮಕ್ಕಳಿಗೂ ವಿದ್ಯಾರ್ಥಿಗಳಿಗೂ ಇದು ಹಿತಕರವು.

.... .. ...

ಕಾಫಿ ಮತ್ತು ಟೀ ಇವೆರಡೂ ದಣಿದು ಬಂದವರಿಗೆ ಆಪ್ಯಾಯನಕರಗಳು. ಬುದ್ಧಿಗಾಗಲಿ, ದೇಹಕ್ಕಾಗಲಿ ಅಧಿಕವಾಗಿ ಶ್ರಮಕೊಡತಕ್ಕವರಿಗೆ ಇವು ತತ್ಕಾಲಕ್ಕೆ ಉತ್ತೇಜಕಗಳು. ಇದರಲ್ಲಿ ಮಿತಿಮೀರಿದರೆ ಅಜೀರ್ಣ, ನಿದ್ರೆಬಾರದಿರುವುದು, ನರಗಳ ದುರ್ಬಲತೆ, ಎದೆಬಡಿತ ಮುಂತ ದುವುಗಳಿಗೆ ಕಾರಣವಾಗುವುದು. ಕಾಫಿಯನ್ನಾಗಲಿ ಟೀಯನ್ನಾಗಲಿ ನಾಲ್ಕು ನಿಮಿಷಗಳಿಗಿಂತ ಹೆಚ್ಚು ಕಾಲ ಕಷಾಯಮಾಡಿ ಇಡಬಾರದು. ಊಟದ ಕಾಲದಲ್ಲಿಯಾಗಲಿ, ಊಟವಾದೊಡನೆಯಾಗಲಿ ಇವುಗಳನ್ನು ಕುಡಿಯಬಾರದು, ಇವುಗಳನ್ನು ಬಹಳ ಬಿಸಿಯಾಗಿಯೂ ಕುಡಿಯಬಾರದು. ಬಹಳ ತಣ್ಣಗೂ ಕುಡಿಯಬಾರದು. ಬಹಳ ಮಂದವಾಗಿಯೂ ಕುಡಿಯಬಾರದು. ಹದವಾಗಿಯೂ ಕುಡಿಯಬಹುದು

.... .... ...

ಮೈಗೆ ಶೈತ್ಯವೆಂಬುದು ದೇಹದಮೂಗಿನವಾಗಿ ಬರುವುದೇ ಹೊರತು ಉಸಿರಿನ ಮಾರ್ಗವಾಗಿ ಬರುವುದಲ್ಲ. ಆದುದರಿಂದ ಮೈಯನ್ನು ಬೆಚ್ಚಗಿರಿಸಿ, ತಂಪಾದ ಗಾಳಿಯನ್ನು ಶ್ವಾಸಿಸಬೇಕು.

.... .... ....

ಈ ಕೆಳಗೆ ಹೇಳುವ ಎಚ್ಚರಿಕೆಗಳಿಂದ ಕ್ಷಯರೋಗವನ್ನು ತಪ್ಪಿಸಿಕೊಳ್ಳಬಹುದು.—ಶುದ್ಧವಾದ ಗಾಳಿಯನ್ನು ಶ್ವಾಸಿಸುವುದು, ಜನರ ಗುಂಪಿನಲ್ಲಿ ಸೇರದಿರುವುದು, ಹಿತವಾದ ಆಹಾರ, ರೋಗಿಗಳ ಕಫ ಮುಂತಾದುವುಗಳ ಸಂಪರ್ಕವನ್ನು ತಪ್ಪಿಸುವುದು, ನೊಣಗಳನ್ನು ಹಗಿಸುವುದು, ಹಾಲನ್ನು ಚೆನ್ನಾಗಿ ಮರಳಿಸಿ ಕುಡಿಯುವುದು.

ಔಷಧದ ಸೋಂಕನ್ನು ನಿವಾರಿಸಬೇಕಾದರೆ ನೀರಿನಿಂದ ತೊಳೆಯಬಹುದಾದ ಪದಾರ್ಥಗಳನ್ನು ಇಪ್ಪತ್ತು ನಿಮಿಷಗಳ ವರೆಗೆ ಕುದಿಸಬೇಕು. ತೊಳೆಯಲು ಸಾಧ್ಯವಿಲ್ಲದ ವಸ್ತುಗಳನ್ನು ಎರಡು ದಿನಗಳ ವರೆಗೆ ಬಿಸಿಲಿನಲ್ಲಿ ಹಾಕಿಡಬೇಕು. ಲೋಹದ ಪಾತ್ರೆಗಳನ್ನು ಅರ್ಧ ಗ್ಯಾಲನ್ ನೀರಿಗೆ ನಾಲ್ಕು ಔನ್ಸು ಕಾರ್ಬಾಲಿಕ್ ಆಸಿಡ್ಡನ್ನು ಮಿಶ್ರಮಾಡಿದ ನೀರಿನಿಂದ ತೊಳೆಯಬೇಕು. (ಮುಂದುವರಿಯುವುದು)


## ಏಕೆ ನರಳುತ್ತೀರಿ?

ಪ್ರಾಚೀನ ಋಷಿಗಳಿಂದ ಪ್ರಣೀತವಾದ ಆಯುರಾರೋಗ್ಯೈಶ್ವರ್ಯ ವರ್ಧಕವಾದ ಆರೋಗ್ಯವಿಧಿಗಳನ್ನು ತಿಳಿಯದೆ ಅಜ್ಞಾನಾಂಧಕಾರದಲ್ಲಿ ಮುಳುಗಿ ಅನೇಕ ತರಹಗಳ ವ್ಯಾಧಿಗಳಿಂದ ಏಕೆ ನರಳುವಿರಿ?

**ಕ್ರಯವು! ಇಲ್ಲದೆ!!**

ಉಚಿತವಾಗಿ ಕೊಡಲ್ಪಡುವ ನಮ್ಮ

ನಮ್ಮ ಔಷಧಗಳನ್ನು ಬಿಕ್ರಿ ಮಾಡುವದಕ್ಕೆ ಏಜಂಟರು ಬೇಕಾಗಿರುವದು.

**ವೈದ್ಯ ವಿದ್ಯೆ**

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52—2

ರಾಜವೈದ್ಯ ನಾರಾಯಣಜಿ ಕೇಶವಜಿ,

1/94 ಚೈನ ಬಜಾರು ರೋಡು, ಮದ್ರಾಸು

N. B. — ವೈದ್ಯ ಸಲಹೆಯು ಫೀಜಿಲ್ಲದೆ ಕೊಡಲಾಗುವದು.



# ಕರ್ಣಿಕ

ಎಗ್ಯೂ ಮಿಕ್‌ಶ್ಚರ್

ಮಲೇರಿಯಾ, ಇನ್‌ಫ್ಲ್ಯುಯೆಂಝಾ, ನಡುಕಜ್ವರ, ಅಡವಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲಶುದ್ಧಿಯಾಗಿ ಬೆವರು ಒಂದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪. ಟಪಾಲು ವೆಚ್ಚ ಬೇರೆ.

**ಸಾರಸಾಪರಿಲಾ.**

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವದಕ್ಕೆ ಇದು ಖಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿಗೆ ರೂ. ೧—೦—೦. ಟಪ್ಪಾಲು ವೆಚ್ಚ ಬೇರೆ.

ಕರ್ಣಿಕ ಬ್ರದರ್ಸ್

12—7 ದುಬಾಷ್ ಲೇನ್,

ಗಿರಗಾಂವ, ಮುಂಬಾಯಿ.



## ಕಮ್ಮಿ ಕರೀದಿಯನ್ನು ನೆನಪಿನಲ್ಲಿಡಿ!
## ಲೋಕವಿಖ್ಯಾತವಾದ "ಜಿಗ್ ಜೇಗ್"



ಟೈಂಪೀಸ್ ಸೈಜು 8 × 4½"

ಬೆಲೆ ರೂ. 3—0—0 ಮಾತ್ರ.

3 ವರ್ಷ ಖಾತ್ರಿಕೊಡುತ್ತೇವೆ.

ಈ ಟೈಂಪೀಸು ಬಹಳ ಉತ್ತಮವಾದ ಮತ್ತು ಬಲವಾದ ಆತಿಹಾರಗಳಿಂದ ಮಾಡಲ್ಪಟ್ಟು, ಚಿತ್ರದಲ್ಲಿ ತೋರಿಸಿರುವಂತೆ ಸುಂದರವಾದ ಕೆತ್ತನೆಯ ಸ್ಟೆಂಡ್‌ನೊಳಗೆ ಇರಿಸಲ್ಪಟ್ಟಿದೆ. ನೋಡಲು ಸುಂದರವಾಗಿಯೂ, ಸರಿಯಾದ ಗಂಟೆಯನ್ನು ತೋರಿಸುವುದಾಗಿಯೂ ಇರುವ ಈ ಟೈಂಪೀಸನ್ನು ಅನೇಕರು ಉಪಯೋಗಿಸಿ ತೃಪ್ತಿಹೊಂದಿದ್ದಾರೆ.

ಇಂಥಾ ಟೈಂಪೀಸಿಗೆ 3—0—0 ರೂ. ಮಾತ್ರ ಬೆಲೆ.

ಏಜಂಟರು: — ಧೈರ್ಯಲಕ್ಷ್ಮಿ ಆಂಡ್ ಕಂಪೆನಿ,

ಪೋಸ್ಟು ಬಾಕ್ಸು ನಂ 265.

52—1 ಮದ್ರಾಸು.



## ಪುತ್ರ ಸಂತಾನದ ಎಣ್ಣೆ.

ಈ ಎಣ್ಣೆಯು ಒಬ್ಬ ದೊಡ್ಡ ಪಂಡಿತರಿಂದ ತಯಾರಾದ್ದು. ಹೆಂಗಸರಿಗೆ ಅನೇಕ ಕಾರಣಗಳಿಂದ ಗರ್ಭವು ನಿಲ್ಲುವದಿಲ್ಲ. ಕೆಲವರಿಗೆ 3—4 ತಿಂಗಳ ಕಾಲ ನಿಂತ ನಂತರ ಹೋಗಿಬಿಡುವದು. ಇಂಥಾ ಹೆಂಗಸರು ಈ ಎಣ್ಣೆಯನ್ನು 15 ದಿನಗಳು ಸೇವಿಸುವದರಿಂದ ಗರ್ಭವು ನಿಂತು ಪುತ್ರ ಸಂತಾನವಾಗುವದು. ಕೆಲವು ಹೆಂಗಸರಿಗೆ ಮುಟ್ಟಾಗುವ ಸಮಯದಲ್ಲಿಯೂ, ಮುಟ್ಟಾದನಂತರವೂ ಉಂಟಾಗುವ ಹೊಟ್ಟೆ ನೋವು ಮುಂತಾದವುಗಳನ್ನು ಖಂಡಿತ ಗುಣ ಪಡಿಸುವದು. ಈ ಎಣ್ಣೆಯನ್ನು ಬೊಂಬಾಯಿ, ಮದರಾಸು ಆಧಿಪತ್ಯಗಳಲ್ಲಿ ವಿಕ್ಕಲ್ಲರವರು ಉಪಯೋಗಿಸಿ ಪುತ್ರ ಸಂತಾನ ಪಡೆದಿರುವರು. ಒಂದು ಬಾಟ್ಲಿಯನ್ನು ತರಿಸಿ ಪರೀಕ್ಷಿಸಿರಿ. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸುತ್ತೇವೆ.

ಕ್ರಯ ಬಾಟಲ್ 1ಕ್ಕೆ 2—8—0.

ವಿಳಾಸ: — ಕೆ. ಎಸ್. ರಾಧಾಕೃಷ್ಣ ಬ್ರದರ್ಸ್,

109, ಜೈನಾ ಬಜಾರ್ ರೋಡ್,

52—12 ಮದರಾಸು



## ಗೆಜ್ಜೆ ಕಟ್ಟಿದ ಭಂಗಾರದ ಡಾಬು.

ಇವನ್ನು ಸೀಮೆಯ ರೋಲ್ಡ್ ಗೋಲ್ಡ್ ಭಂಗಾರದ ತಯಾರಿಸಿ ಅಪರಂಜಿ ಭಂಗಾರದ ಗಿಲೀಟು ಮಾಡಿದೆ. ಗೆಜ್ಜೆಗಳನ್ನು ಕಟ್ಟಿದೆ, ನೋಡಲು ಬಹು ಲಕ್ಷಣವಾಗಿದೆ. ಹಾಕಲು ತೆಗೆಯಲೂ ಕಷ್ಟವಿಲ್ಲ. ಒಂದು ಡಾಬು ಇದ್ದರೆ ಮನೆಯವರೆಲ್ಲರೂ ಉಪಯೋಗಿಸಬಹುದು. ಬಣ್ಣವು ಕೆಡದು. ಕ್ರಯ 1ಕ್ಕೆ 4—...

7 ಕಲ್ಲಿನ ಬೆಂಡೋಲೆ ಜೊತೆ 1ಕ್ಕೆ 2—8—0 ಭಂಗಾರದ ಅಡ್ಡಿಗೆ ಪದಕ ಸಹಿತ 3—8—0 64 ಅರ್ಧ ಸವರನ್ ಕಾಸಿಮಾಲೆ 1ಕ್ಕೆ 8—12—0

## ಬೆಸ್ಟ್ ರೇಜರ್.



ಇದು ಸೀಮೆಯಲ್ಲಿ ಹೊಸನಾದ ಸ್ಟೀಲ್ ಎಂಬ ಲೋಹದಿಂದ ತಯಾರಿಸಿದ್ದು. ಕಪ್ಪು ಮತ್ತು ಬಿಳಿಯ ದಂತದ ಹಿಡಿಯು ಇದೆ. ರೂ. 2... ತಲೆಯ ಕೂದಲನ್ನು ಕತ್ತರಿಸುವ ಮಿಷೆನ್ 1ಕ್ಕೆ 5—...

ವಿಳಾಸ. — The Legal Trading Co

52—12 P B No. 243, Madr...



## ರಬ್ಬರ್ ಸ್ಟಾಂಪ್ ಇನಾಂ.
## ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಒಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್‌ಮೇಡಾ) ತಯಾರಿಸಿದೆ. ಬರಾಬರು ಗಂಟೆಯನ್ನು ತೋರಿಸುವವು. ಇದರ ಕೇಸು ಭಂಗಾರಕ್ಕೆ ಸರಿಸಮನಾಗಿರುವದು. ಇವಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿಯೊಬ್ಬರ ಹೆಸರು ವಿಳಾಸ, ಪೋಸ್ಟು ಮುಂತಾದವುಗಳನ್ನು ಪ್ರಿಂಟುಮಾಡಿಕೊಳ್ಳಬಹುದಾದ ಹೊಸ ನಮೂನೆಯ ರಬ್ಬರ್ ಸ್ಟಾಂಪನ್ನು 'ಇಂಕ' ಪ್ಯಾಡ್ ಸಹಿತ ಇನಾಮಾಗಿ ಕೊಡುವೆವು.

ಕ್ರಯ ರಿಸ್ಟ್ ವಾಚ್ 1ಕ್ಕೆ 6—4—0.

ವಿಳಾಸ. — ಲೀಗಲ್ ಟ್ರೇಡಿಂಗ್ ಕಂಪೆನಿ,

52—12 ಪೊ. ಬಾಕ್ಸ್ ನಂ. 243 ಮದರಾಸು.



## ನೂರಾರು ಔಷಧಗಳೇಕೆ?

ಪ್ರತ್ಯಕ್ಷ ಕಲ್ಪತರುವೇ ಔಷಧರೂಪವಾಗಿ ಅವತರಿಸಿದೆ.

# ಕಲ್ಪತರು ಮಿಶ್ರಣ

ಮಲೇರಿಯಾ ನಿವಾರಕ

ಇಂಡಿಯಾ ಗವರ್ನಮೆಂಟಿನಲ್ಲಿ ರಿಜಿಸ್ಟರಾಗಿದೆ

ಎಷ್ಟು ಕಾಲದ ನರಳಿಕೆಯಾದರೂ ಇನ್ನೂ ಇತರ ಔಷಧಗಳಿಗೆ ಮಣಿಯದ ಮಲೇರಿಯಾ ಜ್ವರ, ಇನ್‌ಫ್ಲ್ಯುಯೆಂಝಾ, ನ್ಯುಮೋನಿಯಾ ಮೊದಲಾದವುಗಳಿಂದ ಸುಮ್ಮನೆ ಮತ್ತೂ ನರಳುವಿರೇತಕ್ಕೆ? ಪ್ರತ್ಯಕ್ಷ ಕಲ್ಪತರುವೇ ಅವತಾರವೆತ್ತಿ ಬಂದಿರುವಂತೆ ನಿಮಗೆ ಆರೋಗ್ಯದಾನವನ್ನು ನೀಡಲು ಇದೊಂದು ದಿವ್ಯೌಷಧವು ಇದೆ ಎಂಬುದನ್ನು ಮರೆಯಬೇಡಿರಿ. ಸಾಮರ್ಥ್ಯವಂತವಾದ ಈ ಔಷಧವು ಮೊದಲನೆ ಗುಟುಕಿನ ಸೇವನೆಯೊಡನೆಯೇ ರೋಗಗಳೆಲ್ಲ ಗುಣಮುಖವಾಗುವಂತೆ ಮಾಡುವ ಶಕ್ತಿಯುಳ್ಳದಾಗಿದೆ. ಇದೊಂದು ಔಷಧವು ನಿಮ್ಮಲ್ಲಿದ್ದರೆ ಬೇರೆ ಭಯವೇಕೆ? ಯಾವತ್ತೂ ಒಗೆಯ ಜ್ವರಗಳ ಮೇಲೆ, ಅವರಲ್ಲೂ ಯಕೃತ್ ಪ್ಲೀಹಗಳು ವಿಕಾರ ಹೊಂದಿದಾಗಲೂ, ಜ್ವರಗಡ್ಡೆ ಬೆಳೆದು ದೇಹವು ಅಶಕ್ತ ಹೊಂದಿದಾಗಲೂ, ಇದೊಂದೇ ಔಷಧವು ಸಂಪೂರ್ಣ ಗುಣವನ್ನುಂಟುಮಾಡಿ, ರೋಗೋತ್ಪಾಟನವನ್ನು ಸಾಧಿಸುವದು ಎಂಬುದಕ್ಕೆ ಸಾವಿರಾರು ರೋಗಿಗಳು ಗುಣಹೊಂದಿ ಅದನ್ನು ಹೊಗಳುತ್ತಿರುವುದೇ ಸಾಕ್ಷಿಯಾಗಿದೆ. ಅಷ್ಟೂ ಅಲ್ಲದೆ, ಹಕೀಮರು, ವೈದ್ಯರು, ಪದವೀಧರ ಡಾಕ್ಟರು, ಕೆಮಿಸ್ಟರೇ ಮೊದಲಾದ ಔಷಧ ವ್ಯಾಪಾರಿಗಳು ಸಹ ಅದನ್ನೇ ಹೊಗಳುತ್ತಾರೆ. ಅನಾರೋಗ್ಯವನ್ನು ಹೋಗಲಾಡಿಸಿ, ಆರೋಗ್ಯವನ್ನು ಪರಿವರ್ಧಿಸಿ ಕೊಡುವ ಕಲ್ಪತರು ಮಿಶ್ರಣವನ್ನು ಎಲ್ಲೆಲ್ಲಿಯೂ ಪಡೆಯಬಹುದು. ಬೇಕಾದರೆ ನಮಗೇ ಬರೆಯಿರಿ. ಮಾಹಿತಿ ಪತ್ರಗಳೂ ಸಿಕ್ಕುತ್ತವೆ. ಇದು ಅಲ್ಲದೆ ನಮ್ಮಲ್ಲಿ ಎಲ್ಲಾತರದ ಆಯುರ್ವೇದೀಯ ಔಷಧಗಳು ಯಾವಾಗಲೂ ಸಿದ್ಧವಾಗಿವೆ.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ.

12—1 ಶ್ರೀ ಸಮರ್ಥ ಆಯುರ್ವೇದಿಯ ಔಷಧಾಲಯ,

ಮಂಗಳೂರು, (ದಕ್ಷಿಣ ಕನ್ನಡ)



## ಫ್ಯಾನ್ಸಿ ಲೀವರ್ ಪಾಕೇಟ್ ವಾಚ್

(15 ಬಹುಮಾನಗಳು ಸಹಿತ ರೂ. 4—8—...

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಿ ರಿಜಿಸ್ಟರ್...

ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ...ಗೆ ಅನುಕೂಲವಾಗಿಯೂ ಇರುವಂತೆ ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸವನ್ನು ಮಾಡಲ್ಪಟ್ಟಿರುವದು. ...



...ಗಡೆ ಕೆಂಪು ...ಟ್ಟು ಗಿಲ್ಟು ...ಮೆಂಟು ...ವದು. ...ಕು ಸೇರದ ...ಭಾಗದಲ್ಲಿ ಗ್ಲಾಸ್ ...ಇರುವದು ...ದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ...ಸುವಂತೆ ಲೀವರ್ ಮೂವೆಂಟುಗಳಿಂದ ಈ ಗಡಿಯಾರ ...ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿ ... ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧವಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡು... ಬಹುಮಾನಗಳ ವಿವರ: — ಫೌಂಟನ್ ಪೆನ್ 1 ...ಯಿಲ್ ಬಾಟಲ್ 1. ವಜ್ರದ ಗುಂಡಿಗಳು 4. ಪಾಕೆಟ್ ... 1. ಗಡಿಯಾರದ ಸರಪಣಿ 1. ಸುವಾಸನೆ ಸೋಪು 1. ...ಕತ್ತಿ 1. ರೋಲ್ಡ್ ಗೋಲ್ಡ್ ಭಂಗಾರದ ಉಂಗುರ 1 ...ಲ್ಡ್ ಗೋಲ್ಡ್ ಭಂಗಾರದ ನೆಕ್‌ಲೇಸ್ ಎಂಬ ಕತ್ತಿನ... 1. ದಂತದ ಬಾಚಣಿಗೆ 1. ಕೈ ಗುಂಡಿಗಳ ಸೆಟ್ 1. ...ಪ್ರೇ. ಈ 15 ಬಹುಮಾನಗಳು ಮತ್ತು ಖಾತ್ರಿಯಾದ ... ಗ್ಯಾರಂಟೀ ಸಹಿತ. ಗಡಿಯಾರ 1ಕ್ಕೆ ಕ್ರಯ ರೂ ...

ವಿಳಾಸ: — ವಿ. ಎಸ್. ವಾಚ್ ಕಂಪೆನಿ,

ಪೋಸ್ಟ್ ಬಾಕ್ಸ್ ನಂ. 105, ಮದ್ರಾಸು

“ಕೊಡಗು” ಪತ್ರಿಕೆಯ ತಾ ೧೭-೮-'೨೮ರ ಸಂಚಿಕೆಯ ಪುರವಣಿ.

ಈ ಜಾಹಿರಾತನ್ನು ಸಂಪೂರ್ಣವಾಗಿ ಓದಿ ತಮ್ಮ ಆಪ್ತ ಮಿತ್ರರಲ್ಲಿ ಪ್ರಚಾರಪಡಿಸಿರಿ
ಎಷ್ಟೋ ಕಾಲ ಒಬ್ಬರ ಆಶ್ರಯವನ್ನು ಮಾಡಿದರೂ ದೊರೆಯದಂತ ಮರ್ಮವಿಷಯಗಳನ್ನೊಳಗೊಂಡು ಸುಖಭಾಗ್ಯನಿಧಿ ಆಗಿ ರಂಜಿಸುತ್ತ
ಅನೇಕಾನೇಕ ಮಹಾಶಯರಿಂದ ಕೊಂಡಾಡಲ್ಪಟ್ಟ

ಕಲಿಕಾಲಕಲ್ಪತರು!

# ರಹಸ್ಯಬೋಧಾಮೃತವೆಂಬ ವಿದ್ಯಾಗುರು ಭಾಗ ೨.

ಸುಸಮಯವನ್ನು ಬಿಡಬೇಡಿ! ಸಂಸಾರದುಃಖ ಮುಕ್ತಿಕಾಸಾಧನ!!

ಈ ಗ್ರಂಥವನ್ನು ತರಿಸಿ ಓದಿನೋಡಿ ಚನ್ನಾಗಿಲ್ಲದಿದ್ದರೆ ವಾಪ್ಸುಮಾಡಿರಿ.

ಈ ಗ್ರಂಥದಲ್ಲಿರುವ ಒಂದೊಂದು ವಿಷಯಕ್ಕಾಗಿ ಎಷ್ಟು ಬೆಲೆ ಕೊಟ್ಟರೂ ಅಲ್ಪವೇ, ಬಡವರೇ ಮೊದಲಾದ ಸರ್ವರು ತರ್ಸಿಕೊಂಡು ಇದರ ಪ್ರಯೋಜನವನ್ನು ಹೊಂದಲೆಂಬುವ ದೆಶೆ
ಯಿಂದ ಕ್ರಯವನ್ನು ತೀರ ಕಡಿಮೆ ಇಟ್ಟಿರುತ್ತೆ. ಅಂದವಾದ ಮುದ್ರಣ, ವಿಕರಿಗೆ ಸಿದ್ಧವಾಗಿದೆ.
ಕ್ರಯ ಪ್ರತಿ ೧ಕ್ಕೆ ರೂ. ೨-೦-೦ ಟ ಕ ಪ್ರತ್ಯೇಕ

ಈ ಗ್ರಂಥದ ರತಿ ರಹಸ್ಯದಲ್ಲಿ ಸ್ತ್ರೀ ಪುರುಷ ಜಾತಿಗಳನ್ನು ನಿರ್ಣಯಿಸುವ ರಹಸ್ಯಗಳು, ಮೊಲ, ವೃಷಭ, ಕುದುರೆ ಈ ಜಾತಿ ಪುರುಷರ, ಜಿಂಕೆ, ಹೆಣ್ಣು ಕುದುರೆ, ಆನೆ ಈ ಜಾತಿ ಸ್ತ್ರೀಯರ, ಶ್ಲೇಷ್ಮ, ಪಿತ್ಥ, ಕಫ ಪ್ರಕೃತಿ ಸ್ತ್ರೀಯರ, ದುಕ್ಷ, ನರ, ಗಂಧರ್ವ, ಪಿಶಾಚ, ವಾನರ ಸತ್ವ ಸ್ತ್ರೀಯರ ಆಂಧ್ರ, ವಾಂಗ, ದೇಶ ಗುಜರಾತ, ಸೌರಾಷ್ಟ್ರ ಆದಿ ಪ್ರತಿಯೊಂದು ದೇಶದ ಸ್ತ್ರೀಯರ ಲಕ್ಷಣಗಳು, ಗುಣಾತಿಶಯಗಳು, ಸ್ತ್ರೀ ಪುರುಷರ ಉಚ್ಛ, ಮಧ್ಯಮ, ನೀಚ ರತಗಳ ವಿಚಾರ, ಮಂದ, ಮಧ್ಯಮ, ಚಂಡವೇಗಾದಿ ಕಾಮೋದ್ರೇಕ ವಿಚಾರ, ಸ್ತ್ರೀ ಪ್ರೀತಿ ಅವಸ್ಥೆ ವಿಚಾರ, ಸ್ತ್ರೀಯರು ಪುರುಷರನ್ನು ಜರೆಯುವ ಕಾರಣಗಳು, ಸ್ತ್ರೀಯರ ಪ್ರೇಮದ ಬಹಿರಂಗ ಚೇಷ್ಟೆಗಳು, ಸ್ತ್ರೀ ವಶ್ಯ ನಿಯಮಗಳು, ಸ್ತ್ರೀ ಸುಖಸಂತೋಷ ವಿಚಾರಗಳು, ಕಾಂಡೂಲಾ ಲಿಂಗನ, ತಿರೋಲಾಲಿಂಗನ, ಚಕ್ರಸೋಪಾ ಶ್ಲೇಷ, ಸ್ತನ ಆಲಿಂಗನಾದಿ ಸರ್ವವಿಧ ಆಲಿಂಗನೆಗಳ ವರ್ಣನೆ, ಸ್ಫುರಿತ, ಘಟಿಕ, ಉತ್ತರೋಷ್ಠ, ಜಿಹ್ವಾ ಇತ್ಯಾದಿ ಸಕಲವಿಧ ಚುಂಬನಗಳ ವಿಚಾರಗಳು, ನಾನಾವಿಧ ನಖದಂತ ಚೇಷ್ಟೆಗಳ ವರ್ಣನೆ, ಜಾನು, ಕರ್ಪರ, ಡಿಲ್ಲ, ಅವಲಂಬಿತ ಧೇನುಕ, ಸಂಘಟಕ ಇತ್ಯಾದಿ ಸರ್ವ ವಿಧಕೂಟಗಳ ವರ್ಣನೆ, ಉತ್ತಾನಕ, ತಿರ್ಯಕ್, ಆಸಿತಕ, ಸ್ಥಿತ, ಅನತ ಆದಿ ಸಕಲವಿಧ ಆಸನಗಳ ವರ್ಣನೆ, ಭಾರ್ಯಾಧಿಕಾರ ವಿಚಾರ, ಅನೇಕಾನೇಕ ಸ್ತ್ರೀ ಪುರುಷ ವಶ್ಯಪ್ರಯೋಗಗಳು, ಸ್ತ್ರೀಯರನ್ನು ಶೀಘ್ರಪತಲ್ಲೀ ದ್ರವಿಸುವಂತೆ ಮಾಡುವ ಕ್ರಮಗಳು, ವೀರ್ಯಸ್ತಂಭನ, ವಾಜಸ್ತಂಭನ, ಲಿಂಗ ವೃದ್ಧೀಕರಣ, ಭಗಸಂಕೋಚ ವಿಕಾಶನ, ಗರ್ಭಧಾರಣೆ, ಗರ್ಭ ಸ್ರಾವನಿವಾರಣೆ, ಸುಖಪ್ರಸವ, ಯೋನಿದುರ್ಗಂಧ ನಿವಾರಣ, ಮುಖಗಂಧ ದೂರೀಕರಣ, ಕುಚೋನ್ನತಿಕರಣ, ಷಂಡತ್ವನಾಶನೆ, ಸ್ತ್ರೀ ಪುರುಷ ವೈರತ್ವ ನಾಶನೆ, ಪ್ರೀತಿ ವೃದ್ಧೀಕರಣ ಇತ್ಯಾದಿಗಳಿಗೆ ನಾನಾವಿಧ ಪ್ರಯೋಗಗಳನ್ನು, ನಾನಾವಿಧ ಮರ್ಮ ವಿಷಯಗಳನ್ನು ಸಪ್ರಮಾಣಗಳೊಂದಿಗೆ ಟೀಕು ಸಹಿತವಾಗಿ ಬರೆದಿರುತ್ತೆ. ಈ ರತಿ ರಹಸ್ಯವನ್ನು ಓದದ ಸಂಸಾರಿಕ ಜನ್ಮ ವ್ಯರ್ಥವೆಂದು ಹೇಳಲು ಸಂದೇಹವಿಲ್ಲ. ಉಪಾಸನ ರಹಸ್ಯದಲ್ಲಿ ಓಂಕಾರ ಗಣಪತಿ, ಶ್ರೀ ಆಂಜನೇಯ, ಸರಸ್ವತಿ, ಬಾಲ ಪರಮೇಶ್ವರಿ, ಮಹಾಲಕ್ಷ್ಮಿ, ಕಾಳಿಕಾದೇವಿ, ಶ್ರೀ ವೀರಭದ್ರಾದಿ ದೇವತೆಗಳ ಉಪಾಸನೆಗಳ ಕ್ರಮಗಳನ್ನು ಸಕ್ರಮಗಳೊಂದಿಗೆ ಬರೆದು ಗುರುವಿಲ್ಲದೆ ಸಾಧಕರು ಪಡೆಯುವ ಅಸಾಧಾರಣ ಮತ್ತು ಲೋಕೋಪಕಾರಕವಾದ ಫಲಿತಾಂಶಗಳನ್ನು ಚನ್ನಾಗಿ ವಿವರಪಡಿಸಿರುತ್ತೆ. ವೈದ್ಯ ರಹಸ್ಯದಲ್ಲಿ ಪೂರ್ವ ಜನ್ಮದ ಯಾವ ಯಾವ ಕರ್ಮದಿಂದ ಈ ಜನ್ಮದಲ್ಲಿ ಯಾವ ಯಾವ ರೋಗಗಳು ಪ್ರಾಪ್ತಿಸುತ್ತವೆಂಬುವ ವಿಷಯ, ಅವುಗಳ ಪರಿಹಾರಕ್ಕಾಗಿ ಮಾಡುವ ಶಕ್ತಿಯುತ ಶಾಂತಿಗಳು, ಭಾನುವಾರಾದಿ ಸಪ್ತವಾರಗಳಲ್ಲಿ ಅಶ್ವಿನ್ಯಾದಿ ಪ್ರತಿಯೊಂದು ನಕ್ಷತ್ರಗಳು ಬಂದಾಗ ಜ್ವರಾದಿ ರೋಗಗಳು ಪ್ರಾಪ್ತಿಸಿದರೆ ಎಷ್ಟುವರೆಗೆ ಕಾಡುತ್ತವೆಂಬುವ ವಿಚಾರ, ಅವುಗಳ ಪರಿಹಾರಕ್ಕಾಗಿ ಮಾಡಬೇಕಾದ ಸಕ್ರಮಯುಕ ಶಾಂತಿಗಳು, ಶಿರಸ್ಸಿನಿಂದ ಪಾದದವರೆಗುಂಟಾಗುವ ಸ್ತ್ರೀ, ಪುರುಷ, ಬಾಲಕರ ಸಣ್ಣ ದೊಡ್ಡ ಪ್ರತಿಯೊಂದು ರೋಗ ಲಕ್ಷಣಗಳು, ಪ್ರತಿಯೊಬ್ಬರು ಅನ್ಯರ ಸಹಾಯವಿಲ್ಲದೆ ಎಲ್ಲಾ ಕಡೆಗೂ ಸುಲಭವಾಗಿ ದೊರೆಯುವ ಫಲ ವನಸ್ಪತಿಗಳಿಂದಲೇ ಒಂದೊಂದು ರೋಗಕ್ಕೆ ನಾನಾವಿಧ ಔಷಧಗಳನ್ನು ತಯಾರಿಸುವ ಕ್ರಮಗಳು, ಅಲ್ಲದೆ ಭಸ್ಮಗಳನ್ನು ಮಾಡಿಕೊಳ್ಳುವುದಕ್ಕೂ ರಸವಾದ ವಿದ್ಯೆ (ಸ್ವರ್ಣಕಲಾ ಪ್ರಯೋಗ)ಕ್ಕು ಅತ್ಯಗತ್ಯವಾದ ಪ್ರತಿಯೊಂದು ಲೋಹದ್ರವ್ಯಗಳ ಶಕ್ತಿಪ್ರ ಮಿಶ್ರಣ ವಿಚಾರಗಳನ್ನು ವ್ಯಾಧಿವ್ಯಾಧಿ ಪಂಚ ಭೂತಗಳ ವಿಚಾರಗಳನ್ನು ಬಹು ವಿವರವಾಗಿ ಬರೆದಿರುತ್ತೆ. ಇದರಲ್ಲಿ ಬರೆದಂತ ಪರಮಗೋಪ್ಯವಾದ ಸುಲಭ ಔಷಧಗಳನ್ನು ಇದುವರೆಗೆ ಯಾರು ಪ್ರಕಟಿಸಲಿಲ್ಲ. ಪಶುವೈದ್ಯ ರಹಸ್ಯದಲ್ಲಿ ಪಶುಗಳಿಗುಂಟಾಗುವ ಸಂಕ್ರಾಮ್ಯಗಳು ಮತ್ತು ಎಲ್ಲಾ ವಿಧವ್ಯಾಧಿಗಳ ಲಕ್ಷಣಗಳು ಅವುಗಳ ನಿವಾರಣೋಪಾಯಗಳು, ಎಲ್ಲಾ ಕಡೆಗೂ ದೊರೆಯುವ ಫಲ ವನಸ್ಪತಿಗಳಿಂದಲೇ ಪ್ರತಿಯೊಂದು ರೋಗಕ್ಕೂ ಅನೇಕಾನೇಕ ಔಷಧಗಳನ್ನು ತಯಾರಿಸುವ ವಿಧಗಳು, ಪಶುಗಳನ್ನು ಆರೋಗ್ಯದಿಂದಿರುವ ಔಷಧಗಳು, ಪುಷ್ಟಿ ಔಷಧಗಳು, ಬಲವನ್ನು ವೃದ್ಧೀಕರಿಸುವ ಪ್ರಯೋಗಗಳು, ಪಶುಗಳ ಹಾಲು ನಿಲ್ಲದಿರುವದಕ್ಕೂ, ಸುಖಪ್ರಸವವಾಗುವುದಕ್ಕೂ ಔಷಧಗಳು, ವಿಷಚಿಕಿತ್ಸೆಗಳು, ದೃಷ್ಟಿದೋಷ ನಿವಾರಣ ಪ್ರಯೋಗಗಳು ಇತ್ಯಾದಿಗಳನ್ನು ವಿವರಪಡಿಸಿರುತ್ತೆ. ಪ್ರತಿಯೊಬ್ಬ ಪಶುಪಾಲಕನು ಪರಮರಹಸ್ಯವಾದ ಈ ಪಶುವೈದ್ಯರಹಸ್ಯವನ್ನು ಚನ್ನಾಗಿ ತಿಳಿದಿರಬೇಕು.

ಜ್ಯೋತಿಷ್ಯ ತರ್ಕರಹಸ್ಯದಲ್ಲಿ ಆಕಾಶದಲ್ಲಿ ನಕ್ಷತ್ರ ರಾಶಿ ಗ್ರಹಗಳನ್ನು ತಿಳಿಯುವ ವಿಚಾರ, ನಮಗೂ, ನಕ್ಷತ್ರ, ರಾಶಿಗ್ರಹಗಳಿಗೂ, ಮನುಷ್ಯರಿಗೂ ಸಂಬಂಧವೇನು? ಗ್ರಹಣಗಳು ಆಗುವ ಕಾರಣಗಳು, ಗ್ರಹಣಗಳು ಹೆಚ್ಚುಕಡಿಮೆ ಕಾಲ ಆಗುವ ಕಾರಣವೇನು, ಗ್ರಹಗಳಿಗೆ ವಕ್ರ, ಋಜುತ್ವಗಳು ಯಾಕೆ ಉಂಟು, ಗ್ರಹ, ನಕ್ಷತ್ರ, ರಾಶಿಗಳ ತತ್ವಗಳ್ಯಾವು, ಯಾವ ಯಾವ ನಕ್ಷತ್ರ, ರಾಶಿ ಗ್ರಹಗಳಿಗೂ, ಯಾವ ಯಾವ ಪ್ರಾಣಿಗಳಿಗೂ ವಿಶೇಷಸಂಬಂಧವು, ೯, ೯ ಪಾದಗಳಿಗೆ ಒಂದೊಂದು ರಾಶಿ ಎಂದು ಯಾಕೆ ಹೇಳಬೇಕು? ಇಂಥಾ ಗ್ರಹಗಳಿಗೆ ಇಂಥಿಂಥಾ ರಾಶಿಗಳೇ ಯಾಕೆ, ಸ್ವಕ್ಷೇತ್ರ, ಉಚ್ಚ, ನೀಚ, ಮೂಲತ್ರಿಕೋಣರಾಶಿಗಳು ಇಂಥಾ ಗ್ರಹಗಳಿಗೆ ಇಂಥಿಂಥಾ ಗ್ರಹಗಳೇ ಯಾಕೆ ಶತ್ರುಮಿತ್ರರು, ಸಮರಾದ್ಯಾದಿ ಅಷ್ಟಕೂಟಗಳು ಇದ್ದರೆ ಶುಭಾಶುಭವೆಂದು ಹೇಳಲು ಕಾರಣವೇನು, ಈ ಅಷ್ಟಕೂಟಗಳ ಗುಣಗಳು ಹೆಚ್ಚುಕಡಿಮೆ ಇರಲು ಕಾರಣವೇನು, ತಿಥಿ, ನಕ್ಷತ್ರ, ವಾರ, ಯೋಗ, ಕರಣಗಳು ಹೇಗೆ ಉಂಟಾದವು, ಇಂಥಿಂಥವು ಶುಭಕಾರ್ಯಗಳಿಗೆ ವಾರದೇಕೆಂದು ನಿರ್ಧರಿಸಲು ಕಾರಣವೇನು, ಲಗ್ನ ಅಂದರೇನು ಇಂಥಿಂಥಾ ಯಾಕೆ ಕೇಂದ್ರ, ತ್ರಿಕೋಣ, ಉಪಚಯ, ಮಾರಕಸ್ಥಾನಗಳು, ಕೇಂದ್ರ ತ್ರಿಕೋಣಗಳಲ್ಲಿ ಶುಭ ೩, ೬, ೧೧ ರಲ್ಲಿ ಪಾಪಗ್ರಹಗಳು ಯಾಕೆ ಬಲಿಷ್ಠರು, ವಿವಾಹಕ್ಕೆ ಶುಭವಿಷ್ಠವು, ಭೃಗುಷಷ್ಠ ಸಪ್ತಾಷ್ಟಮ, ದ್ವಾದಶ ಲಗ್ನ ಚಂದ್ರ ದೋಷಗಳು ಯಾಕೆ ಬಲವಾದವುಗಳು, ವಿವಾಹಲಗ್ನಕ್ಕೆ ಸಪ್ತಮ, ಇತರ ಶುಭಕಾರ್ಯಗಳಿಗೆ ಅಷ್ಟಮಶುದ್ಧಿಯು ಯಾಕೆ ಇರಬೇಕು. ದಂಪತಿಗಳ ಜನ್ಮಲಗ್ನ, ಅಷ್ಟಮರಾಶಿ ಯಾಕೆ ವಿನಾಶ ಲಗ್ನವಾಗುವರು, ಜನ್ಮವಾರ, ಜನ್ಮನಕ್ಷತ್ರ ವರ್ಜಿತವು, ಶುಭಕರಗಳು, ಗುರುಶುಕ್ರರ ಅಸ್ತಕಾಲಗಳು ಯಾಕೆ ನಿಷೇಧಗಳು, ಗೋಧೂಳಿಲಗ್ನ, ಅಭಿಜಿತ್ ಪ್ರಶಸ್ತಗಳೆಂಬುವದಕ್ಕೆ ಕಾರಣವೇನು, ಉಪನಯನಕ್ಕೆ ಮಾತ್ರ ಜನ್ಮಮಾಸ ಯಾಕೆ ನಿಷಿ

ಧವು ಇತ್ಯಾದಿ ಅನೇಕಾನೇಕ ವಿಷಯಗಳನ್ನು ಪ್ರಶ್ನೋತ್ತರ ಮೂಲಕವಾಗಿ ಪ್ರತಿಯೊಬ್ಬರಿಗೂ ತಿಳಿಯುವಂತೆ ವಿವರವಾಗಿ ಬರೆದಿರುತ್ತೆ. ಈ ಜ್ಯೋತಿಷ್ಯ ತರ್ಕವನ್ನು ತಿಳಿಯದ ವಿನಹ ಈ ಶಾಸ್ತ್ರದ ಮೂಲತತ್ವಗಳು ಎಂದಿಗೂ ತಿಳಿಯಲಾರವೆಂದು ಹೇಳಲು ಸಂದೇಹವಿಲ್ಲ. ತಾಜಿಕ ಜ್ಯೋತಿಷ್ಯ ರಹಸ್ಯದಲ್ಲಿ ಪ್ರತಿವರುಷದೊಳು ಜಾತಕನ ಜನ್ಮತಿಥಿ, ಜನ್ಮವಾರ, ಜನ್ಮಕಾಲಾದಿಗಳನ್ನು ತಿಳಿಯುವ ಕ್ರಮ, ವರ್ಷಪ್ರವೇಶ ಕುಂಡಲಿಯನ್ನು ಹಾಕುವ ಕ್ರಮ, ಗ್ರಹಗಳ ಉಚ್ಚನೀಚಾಂಶಗಳ ವಿಚಾರ, ದಿಕ್ಪಾತಂಶವಿಚಾರ, ಉಚ್ಚಬಲ, ರಾಶಿಬಲ, ದ್ರೇಕ್ಕಾಣಬಲ, ನವಶಲ್ಲಾದಿ ಬಲಗಳನ್ನು ತಿಳಿಯುವಕ್ರಮ, ಪಂಚಾಧಿಪ ತ್ರೈರಾಶಿಪ, ಮುಂಥಧಿಪ, ವರ್ಷಾಧಿಪನನ್ನು ತಿಳಿಯುವಕ್ರಮ, ಗ್ರಹಗಳ ದೃಷ್ಟಿತಾರತಮ್ಯ ವಿಚಾರ, ಇಂದುವಾರ ಇಕ್ಕವಾಲ, ನಕ್ತ, ಯಮ ಇತ್ಯಾದಿ ಷೋಡಶವಿಶೇಷ ಯೋಗಗಳ ವಿಚಾರ, ಅವುಗಳ ಫಲಿತಾಂಶಗಳು, ಪುಣ್ಯ, ಗುರು, ಬುದ್ಧಿ, ಮಿತ್ರ, ಶತ್ರು, ಕಳತ್ರ, ಕಲಹ, ರೋಗ, ಮೃತ್ಯು ಆದಿ ೫೦ ಸಹಮಗಳ ಗಣಿತ ಕ್ರಮಗಳು, ವರ್ಷಬಲವಿಚಾರ, ವರ್ಷದಶಾಂತರ್ದಶಾಗಣಿತ ಕ್ರಮಗಳು, ಅವುಗಳ ಫಲಿತಾಂಶಗಳು, ವರ್ಷಾಧಿಪ, ಮುಂಥಾಧಿಪ ತನ್ವಾದಿ ದ್ವಾದಶಭಾವ, ದಶಾಂತರ್ದಶಾ, ಸಹಮಗಳು ಮುಂತಾದವುಗಳ ಬಲಾಬಲ ಮತ್ತು ಫಲವಿಚಾರ, ವರ್ಷಾರಿಷ್ಟ ಮತ್ತು ಭಂಗವಿಚಾರ ಇತ್ಯಾದಿ ಈ ಕಲಿಯುಗದಲ್ಲಿ ಫಲಪ್ರದರ್ಶನ ಕೊಡುವ ಈ ತಾಜಿಕ ಜ್ಯೋತಿಷ್ಯ ಶಾಸ್ತ್ರದ ಅನೇಕಾನೇಕ ರಹಸ್ಯಗಳನ್ನು ಬಹು ವಿವರವಾಗಿ ಬರೆದಿರುತ್ತೆ. ಕ್ಷಣಿಕ ಗ್ರಹ ರಹಸ್ಯದಲ್ಲಿ ಕ್ಷಣಿಕ ಗ್ರಹಗಳ ವಿಚಾರ, ಕ್ಷಣಿಕಲಗ್ನ, ಕ್ಷಣಿಕನವಾಂಶ ಕುಂಡಲಿಗಳನ್ನು ಹಾಕುವ ಕ್ರಮಗಳು, ಮೂಕ ಪ್ರಶ್ನ, ಧನ, ಸಂತಾನ, ವಿವಾಹ, ವೃಷ್ಟಿ, ವ್ಯಾಪಾರ, ರೋಗ, ಭೂಗತದ್ರವ್ಯ, ಚೋರ ಪ್ರಶ್ನಾದಿ ಸಕಲವಿಧ ಪ್ರಶ್ನೆಗಳನ್ನು ಹೇಳುವ ರಹಸ್ಯಗಳು, ಅವುಗಳ ಫಲಿತಾಂಶಗಳನ್ನು ತಿಳಿಯುವ ಕ್ರಮಗಳನ್ನು ಬಹು ಚನ್ನಾಗಿ ವಿವರಪಡಿಸಿರುತ್ತೆ. ಇದಕ್ಕೆ ಪ್ರಶ್ನೆ ಶಿರೋಮಣಿಯೆಂದು ಹೇಳಲು ಅಡ್ಡಿಯಿಲ್ಲ. ಗಣಪತಿ ಪ್ರಶ್ನ ರಹಸ್ಯದಲ್ಲಿ ಸರ್ವವಿಧ ಪ್ರಶ್ನ ಫಲಿತಾಂಶಗಳನ್ನು ಸುಲಭವಾಗಿ ತಿಳಿದುಕೊಳ್ಳುವಂತೆ ಕೋಷ್ಟಕ ರೂಪವಾಗಿ ಬರೆದಿರುತ್ತೆ. ಇದು ಬಹಳ ರಹಸ್ಯವಾದದ್ದು. ಅಂಗ ವಿದ್ಯಾ ರಹಸ್ಯದಲ್ಲಿ ಪೃಚ್ಛಕನ ಅಂಗ ಚೇಷ್ಟೆಯಿಂದಲೇ ಇಂಥಾ ಪ್ರಶ್ನವೆಂದು ನಿರ್ಣಯಿಸುವ ವಿಚಾರಗಳು, ಅವುಗಳ ಫಲಿತಾಂಶಗಳನ್ನು ತಿಳಿಯುವ ವಿಧಗಳನ್ನು ಸ್ಪಷ್ಟೀಕರಿಸಿರುತ್ತೆ. ಉದಕಾರ್ಗಳ ಶಾಸ್ತ್ರದಲ್ಲಿ ಯಾವಯಾವ ಪ್ರದೇಶದೊಳು ಎಷ್ಟೆಷ್ಟು ವೃಕ್ಷಕ್ಕೆ ಯಾವ ಯಾವ ದಿಕ್ಕಿನಿಂದ ಎಂಥೆಂಥಾ ಜಲ ಸಿಕ್ಕುತ್ತೆ ಎಂಥಾ ವರ್ಣದಕಲ್ಲು, ಮಣ್ಣು ದೊರೆಯುತ್ತದೆಂಬುವದನ್ನು ತಿಳಿಯುವ ರಹಸ್ಯಗಳು, ಕಲ್ಲು ಬಿಟ್ಟರೆ ಸುಲಭವಾಗಿ ಒಡೆಯುವ ಕ್ರಮಗಳು ಇತ್ಯಾದಿ ಪರಮ ರಹಸ್ಯಕರವಾದ ಪುರಾತನ ರಹಸ್ಯಗಳನ್ನು ಬಿಡಿಸಿರುತ್ತೆ. ವಾಸ್ತು ವಿದ್ಯಾರಹಸ್ಯದಲ್ಲಿ ೩ ವಿಧವಾಸ್ತು ಮಂಡಲಗಳ ವಿಚಾರ, ವಾಸ್ತು ಮಂಡಲಗಳಲ್ಲಿ ದೇವತೆಗಳನ್ನು ಸ್ಥಾಪಿಸುವ ಕ್ರಮಗಳು, ವಾಸ್ತು ಮೊದಲ ಜ್ಞಾನದಿಂದ ಶಲ್ಯವನ್ನು ತಿಳಿಯುವ ಕ್ರಮ, ಗೃಹಪ್ರಾರಂಭದ ಫಲವಿಚಾರ, ಗೃಹ, ವೃಕ್ಷ, ದೇವಸ್ಥಾನಾದಿ ಛಾಯೆಗಳ ವಿಚಾರಗಳು, ಗೃಹದ ಸುತ್ತು ಮುತ್ತು ಎಲ್ಲಿಲ್ಲಿ ಯಾವ ಯಾವ ವೃಕ್ಷಗಳಿದ್ದರೆ ಏನೇನು ಫಲಿತಾಂಶಗಳುಂಟಾಗುತ್ತವೆಂಬುವ ವಿಚಾರಗಳು, ಭೂಪರೀಕ್ಷೆ ಕ್ರಮ, ಯಾವಯಾವ ಸ್ಥಳದಲ್ಲಿ ಯಾವಯಾವ ಜಾತಿಯವರು ವೃದ್ಧಿಹೊಂದುತ್ತಾರೆಂಬುವ ವಿಷಯ. ಗೃಹಪ್ರವೇಶ, ಗೃಹಾರಂಭ ಕಾಲದಲ್ಲಿ ಉಂಟಾಗುವ ಶುಭಾಶುಭ ಶಕುನಗಳವಿಚಾರ, ಗೃಹದಲ್ಲಿ ಯಾವಯಾವ ದಿಕ್ಕುಗಳಲ್ಲಿ ಯಾವಯಾವ ಶಾಲೆಗಳನ್ನು ನಿರ್ಮಾಣಮಾಡಬೇಕೆಂಬುವ ವಿಷಯ ಇತ್ಯಾದಿಗಳನ್ನು ಬಹಳ ವಿವರವಾಗಿ ಬರೆದಿರುತ್ತೆ. ಮನೆ ಕಟ್ಟುವ ಪ್ರತಿಯೊಬ್ಬರು ಇದನ್ನು ಓದಲೇಬೇಕು. ಪಿಟಕ, ತಿಲಲಕ್ಷಣ ರಹಸ್ಯದಲ್ಲಿ ಮನುಷ್ಯನ ಯಾವ ಯಾವ ಅಂಗಗಳಲ್ಲಿ ಇದ್ದ ಯಾವಯಾವ ವರ್ಣದಿಂದಿದ್ದರೆ ಎಂಥೆಂಥಾ ಫಲಗಳುಂಟಾಗುತ್ತವೆಂಬುದನ್ನು ಚನ್ನಾಗಿ ವಿವರಪಡಿಸಿರುತ್ತೆ. ವಜ್ರ, ಮುತ್ತು, ಪದ್ಮರಾಗ ಪರೀಕ್ಷೆ ರಹಸ್ಯದಲ್ಲಿ ಅವುಗಳ ಭೇದಾಭೇದಗಳು ದೊರೆಯುವ ಸ್ಥಾನಗಳು, ಅವುಗಳ ಶುಭಾಶುಭ ಫಲಿತಾಂಶಗಳು, ಇವುಗಳ ಬೆಲೆಯೆಂದು ನಿರ್ಣಯಿಸುವ ರಹಸ್ಯಗಳನ್ನು ವಿವರವಾಗಿ ಬರೆದಿರುತ್ತೆ. ಗೋ, ಅಶ್ವ, ಶ್ವಾನ, ಛಾಗಲಕ್ಷಣ ರಹಸ್ಯದಲ್ಲಿ ಈ ಜಂತುಗಳ ಶುಭಾಶುಭ ಲಕ್ಷಣಗಳ ವಿಚಾರ, ಎಂಥೆಂಥಾ ಲಕ್ಷಣ ಪ್ರಾಣಿಗಳನ್ನು ಸಾಕಿದರೆ ಎಂಥೆಂಥಾ ಸುಖ ದುಃಖಗಳುಂಟಾಗುತ್ತವೆಂಬುವ ವಿಚಾರಗಳನ್ನು ಬಹು ಸ್ವಾರಸ್ಯವಾಗಿ ಬರೆದಿರುತ್ತೆ. ಇವುಗಳನ್ನು ಬೆಳೆಸುವ ಪ್ರತಿಯೊಬ್ಬರು ಕಷ್ಟನಷ್ಟಗಳಿಗೊಳಗಾಗದೆ ಇರುವದಕ್ಕಾಗಿ ಇವುಗಳ ಲಕ್ಷಣಗಳನ್ನು ಚನ್ನಾಗಿ ತಿಳಿದಿರಬೇಕು.

ಮಹಾಶಯರುಗಳೇ! ಈ ಗ್ರಂಥದಲ್ಲಿ ಅನೇಕಾನೇಕ ಮಹತ್ವ ಮತ್ತು ರಹಸ್ಯಕರವಾದ ವಿಷಯಗಳಿದ್ದಾಗ್ಯೂ ಸ್ಥಲ ಸಂಕೋಚದಿಂದ ಕೆಲವು ವಿಷಯಗಳನ್ನು ಮಾತ್ರ ಇಲ್ಲಿ ನಮೂದಿಸಿರುತ್ತೆ. ಈ ಗ್ರಂಥವನ್ನು ತರಿಸಿ ಓದಿದನಂತರ ಇದನ್ನು ರಚಿಸಲು ಪಟ್ಟಿರುವ ಶ್ರಮವನ್ನು, ಮತ್ತು ಗ್ರಂಥದ ಪ್ರಯೋಜನ ವಿಷಯವನ್ನು ಊಹಿಸಿ ಕೊಂಡಾಡದೆ ಇರಲಾರಿರಿ. ಸರ್ವರು ತರ್ಸಿಕೊಳ್ಳುವಂತೆ ಬೆಲೆಯನ್ನು ಕಡಿಮೆ ಇಟ್ಟಿರುತ್ತೆ. ಅಲ್ಪ ಪ್ರತಿಗಳನ್ನು ಮಾತ್ರ ಮುದ್ರಣಗೊಳಿಸುವದರಿಂದ ಆಲಸ್ಯ ಮಾಡಿದರೆ ಪ್ರತಿಗಳು ದೊರೆಯಲಿಕ್ಕಿಲ್ಲವೆಂಬ ಅಂಶವನ್ನು ಮರೆಯಬೇಡಿ. ಈ ಗ್ರಂಥವನ್ನು ತಪ್ಪದ ಮಹಾಶಯರು ಕೊಂಡಾಡಿರುವರು.

ಕ್ರಯ ಪ್ರತಿ ೧ಕ್ಕೆ ರೂ. ೨-೦-೦ ಟ ಕ. ಪ್ರತ್ಯೇಕ

ಗ್ರಂಥ ದೊರೆಯುವ ಪತ್ತೆ —

ಮೇನೇಜರ್, ಭಾರತ ಜ್ಯೋತಿಷ್ಯ ವೈದ್ಯಾಲಯ,
ಮರಪನಹಳ್ಳಿ ಜಿಲ್ಲಾ (ಬಳ್ಳಾರಿ.)

ದಿ ಪವರ್ ಪ್ರಿಂಟಿಂಗ್ ವರ್ಕ್ಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮರಪನಹಳ್ಳಿಯ ಭಾರತ ಜ್ಯೋತಿಷ್ಯ ವೈದ್ಯಾಲಯದ ಜಾಹಿರಾತನ್ನು ಈ ಸಂಚಿಕೆಯ ಪುರವಣಿಯಾಗಿ ನಮ್ಮ ವಾಚಕರಿಗೆ ಕಳುಹಿಸಿರುತ್ತೇವೆ.

## ಹಿಂದೂದೇಶ.

ಬಂಗಾಳ ಕೌನ್ಸಿಲಿನಲ್ಲಿ ಚರ್ಚಿಸಲ್ಪಡುತ್ತಿದ್ದ ಪ್ರೈಮರಿ ವಿದ್ಯಾಭ್ಯಾಸದ ಬಿಲ್ಲು 23 ಮೆಂಬರುಗಳುಳ್ಳ ಸಿಲೆಕ್ಟ ಕಮಿಟಿಯ ವಶಕ್ಕೆಗೆ ಬಿಡಲಾಗಿದೆ.

ಒರಿಸ್ಸಾ ಸತಿ ... ಒಪ್ಪಿಸುವ ತೀರ್ಮಾನವನ್ನು ಬಿಂಬಿಸಿದನಕ್ಕೆ ಕೋರ್ಟಿನ್ನು ತಿರಸ್ಕರಿಸಿದೆಂಬ ತಕ್ಕರಾರಿಗಾಗಿ ಅಲ್ಲಿ “ಸರ್ಚ್‌ಲೈಟ್” ಪತ್ರಿಕೆಯ ಸಂಪಾದಕರು, ಮೇನೇಜರ್ ಮತ್ತು ಬೇರೆ ಕೆಲವು ಮುದ್ರಾಧಿಕಾರಿಗಳ ಮೇಲೆ ಬೇಜವಾಬ್ದಾರಿಯು ಆ ಹೈಕೋರ್ಟಿನಲ್ಲಿ ನಡೆಯುತ್ತಿದೆ. ವಿಚಾರವು ತಾ 13ರಲ್ಲಿ ಪ್ರಾರಂಭವಾಗಿದೆ. ಪಂಡಿತ ಮೋತಿಲಾಲ್ ನೆಹ್ರು, ಸರ್ ತೇಜ್ ಬಹದ್ದೂರ್ ಸಾಪ್ರು ಮೊದಲಾದ ಪ್ರಮುಖ ಲಾಯರುಗಳು ಅಪರಾಧಿಗಳ ಪರವಾಗಿ ವಕಾಲತ್ತು ವಹಿಸಿರುವರು.

ಅಕಿಗಾಗಿ ಪ್ರತಿ ಆದಿತ್ಯವಾರ ಬೆಳಿಗ್ಗೆ ಮತ್ತು ಸಾಯಂಕಾಲ ಮಡಿಕೇರಿಯಿಂದಲೂ, ಸುಂಟಿಕೊಪ್ಪದಿಂದಲೂ ಪ್ರಯಾಣಿಕರು ದೊರೆತಹಾಗೆ ಬಸ್ಸು ನಡೆಸಲು ಏರ್ಪಾಡು ಮಾಡಿದ್ದಾರೆ.” ಎಂದು ಪ್ರಕಟವಾಗಿತ್ತು. ಸಂತೆದಿವಸಗಳಲ್ಲಿ ಇಂಥಾ ಏರ್ಪಾಡು ಜನರಿಗೆ ತುಂಬಾ ಸಹಾಯಕರವಾಗಿದೆ. ಸುಂಟಿಕೊಪ್ಪಲು ಸಂತೆಗೆ ನಾಲ್ಕೈದು ಬಸ್ಸುಗಳು ... ದಲ್ಲೇ ಓಡ್ಯಾಡುತ್ತಿವೆ. ಮಡಿಕೇರಿಯಿಂದ ಮುಖ್ಯನಾಡಿಗೆ ಗುರುವಾರವೂ, ವೀರರಾಜಪೇಟೆಯಿಂದ ಸಿದ್ದಾಪುರಕ್ಕೂ ...

ವಿಷದ ಸೋಂಕನ್ನು ನಿವಾರಿಸಬೇಕಾದರೆ ನೀರಿನಿಂದ ತೊಳೆಯಬಹುದಾದ ಪದಾರ್ಥಗಳನು ಇಷ್ಟು [illegible]

ಕವಿಂ ಕರೀಂಗಿಗರು [illegible]

**Supplement to this issue**

ಈ ಪಂಚಾಂಗವನ್ನು ಸಂಪೂರ್ಣವಾಗಿ ಓದಿ ತಪ್ಪು ಇದ್ದ ಪುಸ್ತಕದಲ್ಲಿ ಪ್ರಕಟಿಸಲಾಗುವುದು. [illegible] ಅನೇಕಾನೇಕ ಸರ್ಟಿಫಿಕೇಟುಗಳನ್ನು ಪಡೆದ

ಸಂವತ್ಸರ ಪ್ರತಿದಿನದ ಫಲ, ಮತ್ತು ಜನಸಾಮಾನ್ಯರ ವಿಷಯಗಳೆಂದ್ಯಸ್ತ್ವೇಕಾಗಿ ಬಹು ಶೋಧನೆಯಿಂದ ಬರೆಯಲ್ಪಟ್ಟ

# ಹರಪುರಿ ಸುಪ್ರಸಿದ್ಧ ತೆಗ್ಗಿನಮಠದ ಶುಕ್ಲ ಸಂ॥ ಸಿದ್ಧಾಂತ ಫಲ ಪಂಚಾಂಗ

ಹರಪುರವರೇಣ್ಯ ಸೇವೋಬಿಸ । ವರಹಗ್ಗಿನಮಠದ ಚನ್ನವೀರಂಭಿ ಬಿಬ ಧರ್ ॥ ವಿರಚಿಸಿಹ ಪಂಚಾಂಗ [illegible] । ನರರೆಲ್ಲರ್ ತಾಂ ಪೆರೆಯುತಿಸುವ ಬಸುವತ್ಸರದಿಂ ॥ ೧ ॥

ಕ್ರಯ ಪ್ರತಿ ಒಂದಕ್ಕೆ ರೂ ೦—೩—

ಈ ಪಂಚಾಂಗವನ್ನು ತರಿಸಿ ಓದಿನೋಡಿ ಚನ್ನಾಗಿಲ್ಲದಿದ್ದರೆ ವಾಪಸು ಮಾಡಿರಿ.

ದಪ್ಪವಾದ [illegible] ! [illegible]

ಈ ಪಂಚಾಂಗದಲ್ಲಿ [illegible]

[illegible]

ಪಂಚಾಂಗದ ಬಹುಮಾನಗಳು.

[illegible]

ಕ್ರಯ ಪ್ರತಿ ಒಂದಕ್ಕೆ ರೂ. ೦-೩-೦

ಪಂಚಾಂಗ ದೊರೆಯುವ ಪತ್ತೆ —

ಮ್ಯಾನೇಜರ್, ಭಾರತ ಜ್ಯೋತಿಷ್ಯ ವೈದ್ಯಾಲಯ

ಹರಪನಹಳ್ಳಿ (ಬಳ್ಳಾರಿ)

---

ಒಂದು ಜನ ಸಂತತಿಯಿಂದಲೇ [illegible] ಈ ಗ್ರಂಥವನ್ನು ತರಿಸಿ ಓದಿನೋಡಿ ಚನ್ನಾಗಿಲ್ಲದಿದ್ದರೆ ವಾಪಸು ಮಾಡಿರಿ.

[illegible] ಶಾಸ್ತ್ರಗಳ ಮರ್ಮಗಳನ್ನು ಚಿಕ್ಕಚಿಕ್ಕ ಬಾಲಕರಿಗೂ ಸಹ ತಿಳಿಯುವಂತೆ ಬರೆಯಲ್ಪಟ್ಟ

ಕ್ರಯ ಪ್ರತಿ ಒಂದಕ್ಕೆ ರೂ [illegible]

# ರಹಸ್ಯಬೋಧಾಮೃತವೆಂಬ ವಿದ್ಯಾಗುರು ಭಾಗ ೧

ಈ ಗ್ರಂಥದ [illegible]

[illegible]

ಈ ಗ್ರಂಥದ ವಿಷಯವಾಗಿ ಯೋಗ್ಯತಾ ಪತ್ರಿಕೆಗಳನ್ನು ಕೊಟ್ಟ ಪಂಡಿತರು

ಪತ್ರಿಕಾಕರ್ತರು ಮತ್ತು ಇತರ ಸಭ್ಯರು,

ಬೆಂಗಳೂರು ಪ್ರಜಾಮಿತ್ರ, ಮೈಸೂರು ಸತ್ಯವಾದಿ ಪತ್ರಿಕಾಕರ್ತರು, [illegible]

[illegible]

ಕ್ರಯ ಪ್ರತಿ ಒಂದಕ್ಕೆ ರೂ ೨—೦—೦

ಗ್ರಂಥ ದೊರೆಯುವ ಪತ್ತೆ —

ಮ್ಯಾನೇಜರ್ ಭಾರತ ಜ್ಯೋತಿಷ್ಯ ವೈದ್ಯಾಲಯ

ಹರಪನಹಳ್ಳಿ.

---

[illegible] ಕಮಿಷ್ಟನ್ ಮೊದಲಾದ ಔಷಧ ವ್ಯಾಪಾರಿಗಳು ಸಹ ಅದನ್ನೇ ಕೊಡುತ್ತಾರೆ. ಅನಾರೋಗ್ಯವನ್ನು ಹೋಗಲಾಡಿಸಿ, ಆರೋಗ್ಯವನ್ನು ಪರಿವರ್ಧಿಸಿ ಕೊಡುವ ಕಲ್ಪತರು ಮಿತ್ರಾಣವನ್ನು ಎಲ್ಲೆಲ್ಲಿಯೂ ಪಡೆಯಬಹುದು ಬೇಕಾದರೆ ನಮಗೇ ಬರೆಯಿರಿ. ಮಾಹಿತಿ ಪತ್ರಗಳೂ ಸಿದ್ಧ ತ್ತಿವೆ. ಇದು ಅಲ್ಲದೆ ನಮ್ಮಲ್ಲಿ ಎಲ್ಲಾ ತರದ ಆಯುರ್ವೇದೀಯ ಔಷಧಗಳು ಯಾವಾಗಲೂ ಸಿದ್ಧವಾಗಿವೆ.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ

12—1

ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,

ಮಂಗಳೂರು, (ದಕ್ಷಿಣ ಕನ್ನಡ)

[illegible] 1. ಪಟ್ಟದ ಗಂಟೆಗಳು 4. ಪಾಕೆಟ್ [illegible]
1. ಗಡಿಯಾರದ ಸರಪಣಿ 1. ಸುವಾಸನೆ ಸೋಪು [illegible]
ಕತ್ತಿ 1. ರೋಲ್ಡ್ ಗೋಲ್ಡ್ ಭಂಗಾರದ ಉಂಗುರ [illegible]
[illegible] ಗೋಲ್ಡ್ ಭಂಗಾರದ ನೆಕ್‌ಲೇಸ್ ಎಂಬ ಕತ್ತಿ [illegible]
1. ದಂತದ ಬಾಚಣಿಗೆ 1. ಕೈ ಗುಂಡಿಗಳ ಸೆಟ್ [illegible]
ಪ್ರ. ಈ 15 ಬಹುಮಾನಗಳು ಮತ್ತು ಖಾತ್ರಿಯಾದ [illegible]
ಗ್ಯಾರಂಟಿ ಸಹಿತ. ಗಡಿಯಾರ 1ಕ್ಕೆ ಕ್ರಯ ರೂ [illegible]

ವಿಳಾಸ.— ವಿ. ಎಸ್. ವಾಚ್ ಕಂಪೆನಿ [illegible]
ಪೋಸ್ಟ್ ಬಾಕ್ಸ್ ನಂ. 105, ಮದ್ರಾಸ್

ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಲು ಸುಸಮಯ.

# ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ (ಮಾಸ ಪುಸ್ತಕ)

(ಎರಡನೆಯ ವರ್ಷಾರಂಭವಾಗಿದೆ.)

'ಹರಿದಾಸ ಸೇವಾ ಸಮಿತಿ' ಯವರಿಂದ ಬಹಳ ಶುದ್ಧ ರೀತಿಯಲ್ಲಿ ಪರಿಶೋಧಿಸಲ್ಪಟ್ಟು ಮಾಸ ಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಲಿರುವ 'ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ' ಯನ್ನು ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿರಿ! ಇದರಲ್ಲಿ ಜಗದ್ವಂದ್ಯರಾದ ಶ್ರೀ ಪುರಂದರದಾಸರು, ಶ್ರೀ ಕನಕದಾಸರೇ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ಮಾಡಿದ ದಿವ್ಯ ಭಗವನ್ನಾಮ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ೩೨ ಅಷ್ಟಪತ್ರದ ಸಾಧ್ಯಕ್ಕೆ ಪುಟಗಳ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿವೆ. ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೆ ಹಾಸಲು ಉಚಿತ) ಸಾಮಾನ್ಯ ಪ್ರತಿ ರೂ. ೧–೪–೦ ಉತ್ತಮ ಪ್ರತಿ ರೂ. ೨–೪–೦

## ಪ್ರಥಮ ಸಂಪುಟದ ಬೈಂಡಾದ ಪ್ರತಿಗಳು.

| | ಸಾದಾ ಬೈಂಡು | ದಪ್ಪ ರಟ್ಟಿನ ಬೈಂಡು | ಕಿತ್ತಾನಾರು ಬೈಂಡು |
|---|---|---|---|
| ಸಾಮಾನ್ಯ ಪ್ರತಿ | ೧–೮–೦ | ೧–೧೨–೦ | ೨–೪–೦ |
| ಉತ್ತಮ ಪ್ರತಿ | ೨–೦–೦ | ೨–೮–೦ | ೪–೦–೦ |

ಅಂಚೆ ಹಾಸಲು ಪ್ರತ್ಯೇಕ.

12–3

ವಿಳಾಸ — ಸುಬೋಧ ಪ್ರಕಟನಾಲಯ,
ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.



# Silks! Silks!! Silks!!!

Sarees with gold borders body plain or spotted in various designs and colours
5 yds by 45 inches plain body Rs 30 to Rs 50
do spotted body
6 yds by 45 inches plain body 40 – to 90
do spotted body 50 – to 100
Headkerchief 44 by 44 inches price 10 to 10
Gold Lace borders Ribbons price from 12 ... per yd

**For further particulars, please write to:–**

BHARADWAJ & CO.,
BROCADE, EMBROIDARY & SILK MANUFACTURERS,
**Benares City.**

52–1


ಮೇನೇಜರಾಗಿ ಮಿ. ಕೆ. ನಾರಾಯಣರಾಯರೂ, ಅಕೌಂಟೆಂಟರಾಗಿ ಮಿ. ಮೇರಿಯಂಡ ಭೀಮಯ್ಯ ನವರೂ ಕೆಲಸವನ್ನು ನೋಡುವಂತೆ ನೇಮಿಸಲ್ಪಟ್ಟಿದ್ದಾರೆ.

ಗೋದಾವರಿಯಲ್ಲಿದ್ದ ಮಿ. ವಿ. ಸುಂದರಚಾರ್ಯರೆಂಬವರು ಡಿ. ಪಿ. ಡಬ್ಲ್ಯು. ಇಲಾಖೆಯ ದಕ್ಷಿಣ ಕೊಡಗು ಸಬ್ ಡಿವಿಜನ್ ಆಫೀಸರಾಗಿ ನೇಮಿಸಲ್ಪಟ್ಟಿರುವರು. ಅವರು ಒಂದು ವೀರರಾಜಪೇಟೆಯಲ್ಲಿ ಚಾರ್ಜು ತೆಗೆದುಕೊಂಡಿದ್ದರ ಮೇಲೆ ಅಲ್ಲಿದ್ದ ಮಿ. ಕಾಳೀಶ್ವರ ಅಯ್ಯರವರು ನಿನ್ನೆ ದಿನ ಮಡಿಕೇರಿಗೆ ಬಂದು ಉತ್ತರ ಕೊಡಗು ಸಬ್ ಡಿವಿಜನಿನ ಚಾರ್ಜು ತೆಗೆದುಕೊಂಡಿರುವರು.

ಅಬ್ಬಿ ಮಠದ ಗುರುಗಳಾಗಿದ್ದ ಚಿಕ್ಕ ಮಲ್ಲಿಕಾರ್ಜುನ ಸ್ವಾಮಿಯವರು ತನ್ನ ಮರುದಿನಕ್ಕೆ ಸದರಿ ಮಠದ ಗುರುವಾಗಿ ನೇಮಿಸಿದ ನಾಗಭೂಷಣ ಸ್ವಾಮಿ ಎಂಬವರು ಚಿತ್ರದುರ್ಗದ ಜಗದ್ಗುರು ಮುರುಗರಾಜೇಂದ್ರ ಸ್ವಾಮಿಯವರ ಮೇಲೆ ಈ ಮಠದ ಹಕ್ಕಿಗಾಗಿ ಮಾಡಿದ ದಾವೆಯು ಸುಮಾರು ಮೂರು ವರ್ಷಗಳಿಂದ ಸಬ್ ಜಡ್ಜರ ಕೋರ್ಟಿನಲ್ಲಿ ವಿಚಾರ ನಡೆದು, ಬರುವ ಸಪ್ಟೆಂಬರ್ ಎರಡನೇ ವಾರದಲ್ಲಿ ನಡೆಯುವ ಜಡ್ಜ್‌ಮೆಂಟಿಗೆ ಚಿತ್ರದುರ್ಗದ ಮಠದವರ ಪರ ವಕೀಲರಾಗಿ ಮದ್ರಾಸಿನ ಸರಾ ಸಿ. ಪಿ. ರಾಮಸ್ವಾಮಿ ಅಯ್ಯರವರು ಮಡಿಕೇರಿಗೆ ಬರುತ್ತಾರೆಂದು ತಿಳಿಯುತ್ತೇವೆ. ಕೊಡಗಿನಲ್ಲಿರುವ ಎಲ್ಲಾ ಲಿಂಗಾಯತ ವಿರಕ್ತ ಮಠಗಳು ತಮ್ಮದೆಂದೂ, ಅಧಿಕಾರದಲ್ಲಿರುವ ಸ್ವಾಮಿಗಳು ತಮ್ಮ ಏಜೆಂಟರುಗಳೆಂದೂ, ಆದುದರಿಂದ ಚಿಕ್ಕಮಲ್ಲಿಕಾರ್ಜುನ ಸ್ವಾಮಿಯವರಿಗೆ ಮುಂದಿನ ಗುರುವನ್ನು ನೇಮಕಮಾಡುವ ಹಕ್ಕಿಲ್ಲವೆಂತಲೂ ಚಿತ್ರದುರ್ಗದವರ ವಾದವಾಗಿದೆ. ಅನಾದಿಕಾಲದಲ್ಲಿ ಗುರುಶಿಷ್ಯ ಪರಂಪರೆಯಾಗಿ ಅಧಿಕಾರ ನಡೆದು ಬಂದದ್ದರಿಂದಲೂ ಚಿತ್ರದುರ್ಗ ಮಠಕ್ಕೆ ಈ ಮಠದ ಮೇಲೆ ಹಕ್ಕಿಲ್ಲವೆಂತಲೂ ವಾದಿಯ ವಾದವಾಗಿದೆ.

ಹರಪನಹಳ್ಳಿಯ ಬಾರತ ಜ್ಯೋತಿಷ್ಯ ವೈದ್ಯಾಲಯದ ಜಾಹೀರಾತನ್ನು ಈ ಸಂಚಿಕೆಯ ಪುರವಣಿಯಾಗಿ ನಮ್ಮ ವಾಚಕರಿಗೆ ಕಳುಹಿಸಿರುತ್ತೇವೆ.

## ಹಿಂದೂದೇಶ.

ಬಂಗಾಳ ಕೌನ್ಸಿಲಿನಲ್ಲಿ ಚರ್ಚಿಸಲ್ಪಡುತ್ತಿದ್ದ ಪ್ರೈಮರಿ ವಿದ್ಯಾಭ್ಯಾಸದ ಬಿಲ್ಲು 29 ಮೆಂಬರುಗಳುಳ್ಳ ಸಿಲೆಕ್ಟು ಕಮಿಟಿಯವರಿಗೆ ಬಿಡಲಾಗಿದೆ.

... ಹೋಗುತ್ತಿರುವರು.

ತಾ. 14 ರಲ್ಲಿ ಕಲ್ಕತ್ತಾದಲ್ಲಿ ಸರಾದ ಥಾಮಸ್ ... ಪಟೇಲರವರಿಗೆ ಇಂಡಿಯನ್ ಚೇಂಬರ್ ಆಫ್ ಕಾಮರ್ಸಿನವರು ಒಂದು ಬಿನ್ನಹ ಪತ್ರವನ್ನು ಒಪ್ಪಿಸಿದರು. ಹಿಂದೂದೇಶದ ವ್ಯಾಪಾರಿಗಳೆಲ್ಲರೂ ಸ್ವದೇಶಿ ಚಳವಳಿ ಉತ್ತೇಜನ ಕೊಟ್ಟರೆ ಹಿಂದೂ ದೇಶಕ್ಕೆ ಹೆಚ್ಚಾಗಿ ಸಹಾಯವಾಗುವದೆಂದು ಪಟೇಲರವರು ಉತ್ತರ ಕೊಟ್ಟರು.

"ಪಯನೀರ" ಪತ್ರಿಕೆಯ ಮಾಜಿ ಅಸಿಸ್ಟೆಂಟ್ ಎಡಿಟರಾಗಿರುವ ಮಿ. ಡ. ಗನ್ನಿ ಮನೆಸ್ಸಿರವರು, ತನ್ನ ಕುರಿತಾಗಿ ಮಿಸ್ ಮೇಯೊ ಮಾಡಿದ್ದರಿಂದ ತನಗುಂಟಾದ ಅಪಮಾನಕ್ಕೂ, ನಷ್ಟಕ್ಕೂ ಒಂದು ಲಕ್ಷ ರೂಪಾಯಿ ನಷ್ಟಪರಿಹಾರ ಕೊಡಬೇಕೆಂದು ಆ ಪುಸ್ತಕದ ಪ್ರಕಾಶಕರ ಮೇಲೆ ಅಲ್ಲಹಾಬಾದು ಸಬ್‌ಜಡ್ಜರ ಕೋರ್ಟಿನಲ್ಲಿ ದಾವೆ ಹಾಕಿರು.

ಬ್ರಿಟಿಷ್ ಇಂಡಿಯಾದಲ್ಲಿ ನೇಟಿವ್ ಸಂಸ್ಥಾನ ಗಳನ್ನು ಸೇರುವದಕ್ಕೆ ಲೈಸೆನ್ಸು ಕೊಡುವದರಲ್ಲಿ ... ಅಭಿಪ್ರಾಯವಂತೆ ನಡೆಸುತ್ತಿದ್ದರೆಂದು ಮಹಾರಾಜರನ್ನು ಬೆಂಬಲಿಸಿ ಹಾರ್ಕೋರ್ಟಿನ ಬಟ್ಲರ್ ಕಮಿಟಿಯವರು ತಯಾರಿಸಿರುವರಂತೆ. ಇಂಡಿಯಾ ಸರಕಾರದವರು ಈ ಮಸೂದೆಯನ್ನು ಮಂಜೂರು ಮಾಡಿದರೆ ಉತ್ತಮವಾಗುವದು.

ಕರ್ಣಾಟಕ ಪತ್ರಿಕೆಯ ಸಂಪಾದಕರ ತಗಲಿನದು ರಾಜದ್ರೋಹದ ಮೊಕದ್ದಮೆಯ ... ಪತ್ರಿಕೆ ಸಂಪಾದಕರಾದ ಥಾಮಸ್ ಗೌಡ ... ಮೇಲೆ ... ಸಾಕಿದ್ದರು. ... ರಕ್ಷಿಸಿದ್ದರು. ... ಸ್ಪೆಷಲ್ ಜಡ್ಜಿಯವರ ಕೋರ್ಟಿನಲ್ಲಿ ಪುನಃ ಅರ್ಜಿ ಕೊಡಲು ... ಒಪ್ಪಿ ಕೇಸನ್ನು ಶನಿವಿ ಮಾಡುವಂತೆ ಆಜ್ಞೆ ಕೊಡಿಸಿದ್ದಾರಂತೆ.

ಒರಿಸ್ಸಾ ಸರಿ ಕೇಸಿನಲ್ಲಿ ಪಾಟ್ನಾ ಹೈಕೋರ್ಟಿನ ಚೀಫ್ ಜಸ್ಟಿಸರ ತೀರ್ಮಾನವನ್ನು ಟೀಕಿಸಿದವಕ್ಕೆ ಕೋರ್ಟನ್ನು ತಿರಸ್ಕರಿಸಿದನೆಂಬ ತಕ್ಕೀರಿಗಾಗಿ ಅಲ್ಲಿ "ಸರ್ಚ್ ಲೈಟ್" ಪತ್ರಿಕೆಯ ಸಂಪಾದಕರು, ಮೇನೇಜ ಮತ್ತು ಬೇರೆ ಕೆಲವು ಮಂದಿಗಳ ಮೇಲೆ ವೊಕದ್ದಮೆಯು ಆ ಹೈಕೋರ್ಟಿನಲ್ಲೇ ನಡೆಯುತ್ತಿದೆ. ವಿಚಾರವು ತಾ13ರಲ್ಲಿ ಪ್ರಾರಂಭವಾಗಿದೆ. ಪಂಡಿತ ಮೋತಿಲಾಲ್ ನೆಹರು, ಸರ್ ತೇಜ್ ಬಹದ್ದೂರ್ ಸಾಪ್ರು ಮೊದಲಾದ ಪ್ರಾಮುಖ್ಯ ಲಾಯರುಗಳು ಅಪರಾಧಿಗಳ ಪರವಾಗಿ ವಕಾಲತ್ತು ನಿಂತಿರುವರು.

## ಹಿಂದೀ—ರಾಷ್ಟ್ರಭಾಷೆ.

ಕಳೆದ ಕೊಚ್ಚಿಯ ಶಾಸಕ ಸಭೆಯಲ್ಲಿ ಹಿಂದಿ ಭಾಷೆಯನ್ನು ಶಾಲೆಗಳಲ್ಲಿ ಕಲಿಸಬೇಕೆಂಬ ಠರಾವು ಚರ್ಚಿಸಲ್ಪಟ್ಟಿತದಿಂದ ಮಂಜೂರಾಯಿತು. ಹಿಂದಿಯು ಹಿಂದೂ ರಾಷ್ಟ್ರಭಾಷೆಯಾಗಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಉತ್ತರ ದೇಶದ ಪ್ರಾಮುಖ್ಯ ಭಾಷೆಯದಿಯೇ ಆಗಿದೆ. ಈಗ್ಗೆ ಇಪ್ಪತ್ತು ವರ್ಷಗಳ ಹಿಂದಿನಿಂದ ಚಳವಳಿಯು ಹಿಂದಿಯು ರಾಷ್ಟ್ರಭಾಷೆಯಾಗಿ ಬಳಕೆಗೆ ಬರುವದು ತೋರಿಸಿಕೊಟ್ಟಿತು. ಆದರೆ 1920 ರಿಂದೀಚೆಗೆ ದೇಶದ ಸಕಲರೂ ಭಾಷೆಯನ್ನೇ, ಐಕ್ಯತೆಯುಂಟಾಗುವದೆಂದಿಯೂ ದಕ್ಷಿಣ ಹಿಂದೂ ದೇಶದಲ್ಲಿ ಇನ್ನೂ ಇಲ್ಲ. ಈ ಭಾಷೆಯು 'ದಕ್ಷಿಣ ಭಾರತ ಹಿಂದೀ ಸಭೆ' ಯವರಿಂದ ದಕ್ಷಿಣ ದೇಶದಲ್ಲಿ ಹರಡಲ್ಪಡುತ್ತಿದೆ. ಸಭೆಯ ಸೆಕ್ರೆಟರಿಯಾದ ಡಬ್ಲ್ಯು. ಸಿ. ಇಗ್ನೇಷಿಯಸ್ ಹಿಂದಿಯನ್ನು ಕೊಚ್ಚಿನಿನಲ್ಲಿ ಕಡ್ಡಾಯವಾಗಿ ಆಲ್ಲಿನ ನ್ಯಾಯ ವಿಧಾಯಕ ಸಭೆಗೆ ಒಂದು ಪತ್ರ. ಈ ಭಾಷೆಯ ಮಹತ್ವವನ್ನು ಕುರಿತು ಅವರು ಒಂದು ಕಡೆಯಲ್ಲಿ ಹೀಗೆ ಬರೆಯುತ್ತಾರೆ. 'ಈ ಹಿಂದೂ ದೇಶದ ಪದಿನಾಲ್ಕು ಕೋಟಿ ಜನಸಂಖ್ಯೆಯಾಗಿದೆ. ಸಾಮಾನ್ಯವಾಗಿ ಈ ಭಾಷೆಯವರು ಕೋಟಿ ಜನರಿಗೆ ಅರ್ಥವಾಗುತ್ತದೆ. ಈ ಭಾಷೆ ಬಿಟ್ಟರೆ ಬಂಗಾಳಿಯೇ ದೊಡ್ಡ ಭಾಷೆ. ಬಂಗಾಳಿ ಐದು ಕೋಟಿ ಜನರು ಮಾತಾಡುತ್ತಾರೆ. ಪೋಲೀಸ್ ರೈಲ್ವೆ ರಂಗನಾಥ ಮುಂತಾದ ಕಡೆ ಹೆಚ್ಚಾಗಿ ಕೆಲಸದಲ್ಲಿರುವವರು ಗುಜರಾತಿ, ಬಂಗಾಳಿ, ... ಮರಾಠಿ ... ವ್ಯಾಪಾರ ... ಹಿಂದೀ ಭಾಷೆಯಲ್ಲೇ ... ದಕ್ಷಿಣಾಪಥವನ್ನು ದಾಟಿದ ಮೇಲೆ ... ಯುರೋಪಿಯನ ರು ಹಿಂದಿಯನ್ನು ... ಉತ್ತರ ದೇಶದಲ್ಲಿ ... ಯುರೋಪಿಯನರು ... ಹಿಂದಿಯ ... ಭಾರತವಾಸಿಗಳ ... '

ಹಿಂದು ಸಂಸ್ಕಾರದವರಿಗೂ ಒಂದೇ ಭಾಷೆ ತಿಳಿಯದಿದ್ದರೆ ಕೆಲಸ ನಡೆಸುವದರಲ್ಲಿ ಎಷ್ಟು ದೊಡ್ಡ ಸಂಸ್ಕಾರದ ದೇಶಕ್ಕೆ ಏಕಭಾಷೆಯೊಂದಿಲ್ಲದಿದ್ದ ರ ಅವಗಡಗಳನ್ನು ... ಹೇಳಲು ಸಾಧ್ಯವಿಲ್ಲ.

ಗಾಂಧಿ ನಡೆಸುವದರಿಂದ ಜನರು ... ಮಾಡಿದ ಗವರ್ನರಿಗೆ ತಿಳಿಸಿದರು ... ಸರ್ಕಾರದ ... ಟ್ರೈನಾದವನ್ನು ಒಳಕೊಳ್ಳದೆ ... ಕಳ್ಳಿಗೆ ... ಲ್ಲವೆಂದೂ ಗವರ್ನರು ಜನರು ... ತಿಳಿಸಿ ...

ಕಳೆದ ಒಂದು ಶತಮಾನದಿಂದ ಇಂಗ್ಲೆಂಡಿನ ಆರೋಗ್ಯವು ಬಹಳ ಉತ್ತಮಗೊಂಡಿದೆ. ಜನರ ಸಂಖ್ಯೆಯು ಇನ್ನೂ ಹಿಗಿಂತ ಹೆಚ್ಚಾಗಿದ್ದರೂ ಇಂಗ್ಲೆಂಡ್ ಮತ್ತು ವೇಲ್ಸಿನಲ್ಲಿ ಮರಣ ಸಂಖ್ಯೆಯು 1838ರಿಂದ ಅರ್ಧಕ್ಕೆ ಇಳಿದಿದೆ. ... ಸಿನಲ್ಲಿ 5 ವರ್ಷದೊಳಗಿನ ಮಕ್ಕಳ ... ಸಂಖ್ಯೆಯು ... ಮೊದಲಿಗಿಂತ ಮೂರರಲ್ಲಿ ಒಂದು ... ಕೆತ್ತನವಾಗಿ ... ಒಂದು ವರ್ಷದೊಳಗಿನವರ ಮರಣವು 100 ಕ್ಕೆ ... ಶೇಕಡ 71 ... ದ್ದಿದ್ದು ಈಗ ಶೇಕಡ ... ಇಳಿದಿದೆ. ಸರಾಸರಿ ಈಗ ಗಂಡಸರು 12 ವರ್ಷ ಹೆಚ್ಚು, ಹೆಂಗಸರಿಗೆ 14 ವರ್ಷ ಹೆಚ್ಚು ಮೊದಲಿದ್ದದಕ್ಕಿಂತ ಹೆಚ್ಚು ಆಯುಸ್ಸು ... ಅಲ್ಲಿಯ ಚೀಫ್ ಮೆಡಿಕಲ್ ಆಫೀಸರು ಪ್ರಕಟಿಸಿರುವರು.

## ಪತ್ರವ್ಯವಹಾರ

ಪತ್ರದಾರರು ವ್ಯಕ್ತಪಡಿಸುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಪ್ರಯಾಣಿಕರ ಅನುಕೂಲತೆಗೆ ಬಸ್ಸು ಸರ್ವಿಸು.

ಅವಶ್ಯ,

ತಾ 7–8–28 ರ "ಲೋಕಪಾವನ" ಪತ್ರಿಕೆಯ ಸ್ಥಳೀಕ ವರ್ತಮಾನದಲ್ಲಿ 'ಶ್ರೀ ಕಾವೇರಿ ಬಸ್ಸು ಸರ್ವಿಸಿನವರು ... ಪೊನ್ನಂಪೇಟೆಗೆ ಹೋಗುವ ಪ್ರಯಾಣಿಕರ ಅನುಕೂಲತೆಗಾಗಿ ಪ್ರತಿ ಆದಿತ್ಯವಾರ ಬೆಳಿಗ್ಗೆ ಮತ್ತು ಸಾಯಂಕಾಲ ಮಡಿಕೇರಿಯಿಂದಲೂ, ಪೊನ್ನಂಪೇಟೆಯಿಂದಲೂ ಪ್ರಯಾಣಿಕರು ಬೇಕಾದಾಗ ಬಸ್ಸು ನಡಿಸಲು ಏರ್ಪಾಡು ಮಾಡುವರು." ಎಂದು ಪ್ರಕಟವಾಗಿತ್ತು. ಸಂತೆದಿವಸಗಳಲ್ಲಿ ಇಂಥಾ ಏರ್ಪಾಡು ಬಸ್ಸಿಗೆ ತುಂಬಾ ಸಹಾಯಕರವಾಗಿದೆ ... ಪೊನ್ನಂಪೇಟೆಗೆ ... ಸಂತೆಗೆ ನಾಲಕಷ್ಟು ಬಸ್ಸುಗಳು ... ದಲ್ಲೇ ಓಡ್ಯಾಡುತ್ತಿವೆ. ಮಡಿಕೇರಿಯಿಂದ ಮೂರ್ನಾಡಿಗೆ ಗುರುವಾರವೂ, ವೀರರಾಜಪೇಟೆಯಿಂದ ಸಿದ್ದಾಪುರಕ್ಕೂ, ...

ಡು ಬಾಷೆಯು ರಾಷ್ಟ್ರಭಾಷೆಯಾಗಬೇಕಾದರೆ ಅದರ ಕ್ಷಣಗಳಾವವೆಂದರೆ —(1) ಆ ಭಾಷೆಯು ಹಿಂದೂದೇಶದ ಮುಂದರಿಯುವಂತೆ ತನಗ ಯೋಗ್ಯವಾದ ರೀತಿಯಲ್ಲಿ ಡುವಂಥಾದ್ದಾಗಬೇಕು. ( ಅತ್ಯಲ್ಪ ಶ್ರಮದಿಂದ ಅದ ಬೇಗನೆ ಕಲಿಯುವಂತಾದ್ದಾಗಬೇಕು ಕೊಡಲಿನ ಲಕ್ಷಣದ ಸಮಾಲೋಚನೆಯಿಂದ ಹಿಂದೂ ದೇಶಕ್ಕೆ ಇಂಗ್ಲಿಷ್ ಭಾಷೆಯು ಯೋಗ್ಯವಲ್ಲವೆಂದು ತಿಳಿಯುವುದು ನಿಜ, ಇಂಗ್ಲಿಷು ಹಿಂದೂ ದೇಶ ಭಾಷೆಯಾಗಲಾರದೆಂದು ಗ್ರೇಹಿಯಸರು ಹೀಗೆ ಹೇಳುವರು. 'ಇಂಗ್ಲಿಷ್ ವಿದ್ಯೆಯು ಹಿಂದೂ ದೇಶದಲ್ಲಿ ಆರಂಭವಾ, ನೂರಾರು ವರ್ಷಗಳಾದ ಗೂ, ಸೇವಕರು ಮತ್ತು ವಕೀಲರ ಸೇರಿ ಶೇಕಡ ಎರಡರಷ್ಟು ಇಂದಿಗ ಮಾತ್ರ ಇಂಗ್ಲಿಷು ತಿಳಿದು ಒರುವರು. ಈ ಪ್ರಮಾಣದ ಮೇರ ಹಿಂದಿನರು ಇಂಗ್ಲಿಷು ಕಲಿಯಬೇಕಾದರೆ ಎಷ್ಟೋ ಶತಮಾನಗಳು ಬೇಕಾಗುವುವು. ಹಿಂದಿಯರ ಸಾಹಿತ್ಯ, ಸಭ್ಯತೆ, ಚರಿತ್ರೆ ಸಂಪ್ರದಾಯ ಇವುಗಳು ಆಂಗ್ಲ ಜನರ ಸಾಹಿತ್ಯ ಸಭ್ಯತೆ ಮೊದಲಾದವುಗಳಿಂದ ಭಿನ್ನವಾಗಿರು ತ್ತವೆ. ಇಂಗ್ಲಿಷು ಭಾಷೆಗೆ ಹಿಂದೂ ದೇಶದ ಮಣ್ಣು ಆಯೋಗ್ಯವು. ಆಂಗ್ಲೆಯರು ಐರಿಯನ್ನು ತಮ್ಮ ಭಾಷೆಯಾಗಿ ಮಾಡಿಕೊಳ್ಳುವುದು ಎಷ್ಟು ಅಸ್ವಾಭಾವಿಕವೋ ಅಷ್ಟೇ ಹಿಂದಿಯರು ಇಂಗ್ಲಿಷನ್ನು ತಮ್ಮ ಭಾಷೆಯನ್ನಾಗಿ ಮಾಡಿಕೊಳ್ಳುವುದು ಅಯೋಗ್ಯವು. ಮೇಲ್ಕಂಡಗಳಿಂದಲ್ಲದೆ ಮಾತ್ರ ಇಂಗ್ಲಿಷನ್ನು ಕಲಿಯಬಲ್ಲವರಲ್ಲದೆ ಜನಸಾಮಾನ್ಯರಲ್ಲ. ಮದ್ರಾಸಿನಲ್ಲಿ ಲಾ ಮೆಂಬರಾಗಿರುವ ದಿ. ಬ. ಎಂ. ಕೃಷ್ಣನ್ನಾಯರು ಸಹ ಇಂಗ್ಲಿಷು ಬಾರತೀಯರ ಮಾತೃಭಾಷೆಯಾಗಲಾರದೆಂದು ಹೇಳುವರು. ಈ ಭಾಷೆಯನ್ನು ಕಲಿಯಲಿಕ್ಕೆ ನೂರಾರು ವರ್ಷಗಳು ಹಿಡಿದರೂ, ನಾವು ಆಗದ ಮರ್ಮ ತಿಳಿಯಲಾರೆವು ಮಾತಿನಿಂದ ತಪ್ಪು ತಪ್ಪಾಗಿ ಮಾತಾಡುವೆವು ಎಲ್ಲ ಯೋ ಠಾಗೋರ್ ಗಾಂಧಿ ಇಂತಹವರಲ್ಲದೆ, ಈ ಭಾಷೆಯನ್ನು ಶುದ್ಧವಾಗಿ ಬರೆಯುವರು.

ಇಡಿಯಾವು ಇಂಗ್ಲಿಷ್ ಭಾಷೆಯನ್ನು ಮಾತೃಭಾಷೆಯಾಗಿ ಮಾಡಿಕೊಂಡರೆ, ಅದು ಇಂಗ್ಲಾಂಡಿನ ಪ್ರತಿಬಿಂಬವಾ ಗಬಹುದು ಆಗ ಇಂಡಿಯದ ವ್ಯಕ್ತಿತ್ವವೂ, ಆತ್ಮವೂ ನಾಶವಾಗುವುವು. ಇಂಗ್ಲೆಂಡು ಒಡೆಯನಾಗಿ, ಇಂಡಿಯವು ದಾಸಿಯಾಗಿರುವುದು. ಇಂಗ್ಲಾಂಡು ಸ್ವಾತಂತ್ರ್ಯ ತನಗಿರುವ ವ್ಯಕ್ತಿತ್ವವು. ಪ್ರತಿಯೊಂದು ದೇಶವೂ ತನ್ನ ವ್ಯಕ್ತಿತ್ವ ಇಂಗ್ಲೀಷರು ಇಂಡಿಯನರನ್ನು ಸ್ವರಾಜ್ಯಕ್ಕೆ ತರಲು ಮಾಡುತ್ತಾರೆಂದು ಹೇಳು ಇಂಡಿಯಾಕ್ಕೆ ಪರಭಾಷೆಯು ರಾಷ್ಟ್ರಭಾಷೆಯಾಗಲಾರದು

ಹೀಗಿರುತ್ತಾ ಇಂಡಿಯಾಕ್ಕೆ ಇಂಡಿಯದ ಭಾಷೆಯೇ ಮಾತೃಭಾಷೆಯಾಗಬೇಕು. ಹಿಂದಿಯು ಇಪ್ಪತ್ತು ಮೂರು ಕೋಟಿ ಜನಗಳಿಗೆ ತಿಳಿದಿರುವುದರಿಂದ ಅದನ್ನು ದೇಶಭಾಷೆಯೂ ಗಿ ಮಾಡಲಿಕ್ಕೆ ಒತ್ತಾಯ ಹೆಚ್ಚು ಸಮಯವೂ ಬೇಡ. ಇತರ ಬಂಗಾಳಿ, ತಮಿಳು, ಕರ್ನಾಟಕ ಭಾಷೆಗಳಲ್ಲಿರುವಂತೆ ಸಂಸ್ಕೃತ ಶಬ್ದಗಳಿರುವುದರಿಂದ, ಯಾರಾದರೂ ಹಿಂದೀಯ ನು ಈ ಹಿಂದೀಭಾಷೆಯನ್ನು ಕಲಿಯಬಲ್ಲರು ಸುಲಭ ಹಿಂದೀ ಭಾಷೆಯನ್ನು ಮಾತೃಭಾಷೆಯಾಗಿ ಮಾಡುವುದರಿಂದ, ಇತರ ಪ್ರಾಂತಿಕ ಭಾಷೆಗಳ ಬೆಳವಣಿಗೆಯು ಕಡಿಮೆಯಾಗಲಾರದು. ಹಿಂದಿಯು ಸಭಾಭಾಷೆ ಎಂಬ ವಿಚಾರವು ಮೊದಲು ನಮ್ಮ ಮನಸ್ಸಿನಿಂದ ತೊಲಗಬೇಕು ಇಂಗ್ಲೀಷರು ಎರಡು ಮೂರು ಭಾಷೆಗಳನ್ನು ಕಲಿಯುವಾಗ ಹಿಂದಿಯರು ತಮ್ಮ ಪ್ರಾಂತಿಕ ಭಾಷೆಯೊಂದಿಗೆ ಹಿಂದಿಯನ್ನು ಕಲಿಯಬಾರದೇ?

ಹಿಂದಿಯನ್ನು III, IV, V, & VI, ಫಾರಂಗಳಲ್ಲಿ ಕಡ್ಡಾಯವಾಗಿ ಕಲಿಸುವಂತೆ ಏರ್ಪಾಡು ಮಾಡಬೇಕು ಯಾ ವ ಭಾಷೆಯನ್ನು ಕಡ್ಡಾಯವಾಗಿ ಕಲಿಸದಿದ್ದರೆ, ಅದನ್ನು ಜನರು ಪ್ರೀತಿಸಲಾರರು. ಹಿಂದಿಯನ್ನು ಕಲಿಯುವುದರಿಂದ ಹಿಂದೂ ಮುಸಲ್ಮಾನರು ಹೆಚ್ಚು ಸಮೀಪದ ಭಾವದಿಂದಿರುವರು. ಹಿಂದಿ ಕಲಿತರೆ, ಹಿಂದೂಸ್ಥಾನದಲ್ಲಿ ಕೆಲಸ ದೊರೆಯದಿದ್ದಾಗ ಪರ ಊರಿನಲ್ಲಿ ಕೆಲಸ ಸಂಪಾದಿಸಬಹುದು. ನಾವು ಭಾರತೀಯರಾಗಿ ನಮ್ಮ ವ್ಯಕ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ಹಿಂದೀ ಭಾಷೆಯನ್ನು ನಾವು ಕಲಿಯಬೇಕು.

ಹೊಸ ಅಂಗಡಿ! ಸುಲಭ ಕ್ರಯ !!

**ಬೇಟೆಗಾರರೇ ಇತ್ತ ನೋಡಿರಿ!**

ಒಳ್ಳೆ ನವ ನಮೂನೆಯ ಬ್ರೀಚ್ ಲೋಡಿಂಗ್ (ಕೋವಿ) ಮತ್ತು ಮಸ್ಲ್ ಲೋಡಿಂಗ್ (ಕೇಪು) ಜೋಡು ಮತ್ತು ಒಂಟಿ ಕೋವಿಗಳೂ, ಅವುಗಳಿಗೆ ಬೇಕಾದ ಉತ್ತಮ ತರಹದ ತೋಟಗಳು, ಕೇಪು ಇ ಲ್ಲಾ ಮತ್ತು ಮದ್ದು ಯಾವಾಗಲೂ ದೊರೆಯುವ ಈ ಹೊಸ ಅಂಗಡಿಯನ್ನು ವೀರಾಜಪೇಟೆಗೆ ಬಂದಾಗ ಒಮ್ಮೆ ನೋಡದೆ ಹೋಗಬೇಡಿರಿ ಹೆಚ್ಚಿನ ವಿ ವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಬಿ. ಬಿ. ಉತ್ತಯ್ಯ,
ಕೋವಿ, ಮದ್ದು, ಚಿಲ್ಲ ವಸ್ತುಗಳ
ವ್ಯಾಪಾರಿ,
ವೀರಾಜಪೇಟೆ.

0 2

**7½ ಲಕ್ಷ ವರ್ಷ ಪ್ರಾಯದ ಒಂದು ಕಪ್ಪೆ.**

ಡಸ್ವರ ಎಂಬಲ್ಲಿ ವಸ್ತು ಸಂಗ್ರಹಾಲಯದಲ್ಲಿ, ಒಂದು ಕಲ್ಲನ್ನು ಎರಡು ಭಾಗ ಮಾಡಿದಾಗ ಅದರೊಳಗೆ ದೊರೆತ ಒಂದು ಜೀವವಿರುವ ಕಪ್ಪೆಯು ಇದೆ ಈ ಕಪ್ಪೆಯು ಆ ಸ್ಥಳದಲ್ಲಿ ಏಳೂವರೆ ಲಕ್ಷ ವರ್ಷಗಳಿಂದ ಇರಬೇಕೆಂದು ಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿರುವರಂತೆ.

**ಮಾರಾಟಕ್ಕಿದೆ.**

ವಿರಾಜಪೇಟೆನಾಡು ಬೇಟೋಳಿ ಗ್ರಾಮದಲ್ಲಿ
ಬಾಗಿನ ಭೂಮಿ.

| | | |
|---|---|---|
| ಪರಂಬಾಡಿಯಲ್ಲಿ ಭೂಮಿ 10. 78. | ಬಾಣೆ 20 95 | |
| ಪೇಟೆ ಸಮೀಪ ಭೂಮಿ 9. 10. | —ಡಿ— 7 93. | |
| —ಡಿ— 9 97. | —ಡಿ— 9 91. | |

ಈ ವಿಳಾಸಕ್ಕೆ ಬರೆಯಿರಿ —

**P. J. Lobo,**
Virarajendrapet.

2—2

**ನೋಟೀಸು.**

ಕಾಂತೂರು ಗ್ರಾಮದ ಒಕ್ಕಲಿಗರ ಕ ರಾಮಯ್ಯನು ಈ ಮೂಲಕ ಪ್ರಕಟಿಸುವುದೇನೆಂದರೆ —ಕಾಂತೂರು ಗ್ರಾಮದ ಒಕ್ಕಲಿಗರ ಪವುತಿ ತಮ್ಮಣ್ಣನ ತಂಗಿ ಕಾಳಮ್ಮನು ಪೂರಾಟಕ್ಕೆ 3 ಯೇಕರೆ ಅಂದರೆ 100 ಬಟ್ಟಿ ಭೂಮಿ 3 ಯೇಕರೆ ಬಾಣೆ, ಹಿತ್ತಲು, ಮನೆ (ಹಂಚು ಹುಲ್ಲು ಹಾಕಿದ್ದು) ಇದೆಯೂಗಿ ಪ್ರಕಟಿಸಿಮಾಡಿರುವ ಸೊತ್ತುಗಳು ನನ್ನ ಬೇರೆ ಸೊತ್ತುಗಳು ಸಹ ಸನಗೆ 1931ನೆ ಇಸವಿ ಮಾರ್ಚಿ ವರೆಗೆ ವಸೂಲು ಜ್ಯೋಗ್ಯತ್ತು 2000 ರೂಪಾಯಿಗೆ ಸದರಿ ಪವತಿ ಅಣ್ಣ ಪವುತಿ ತಮ್ಮಣ್ಣನು ಕಟ್ಟಿರುವುದಾಗಿಯೂ, ವಾಯಿದೆ ತೀರಿದ ಮೇಲೆ ಅಸಲು ಮೊಬಲಗು ಪಾವತಿ ಮಾಡದೆ ತಪ್ಪಿದ್ದಾದರೆ ಮುಂದಕ್ಕೆ ಅಸಲು ಮೊಬಲಗು ಪಾವತಿಯಾಗುವ ವರೆಗೆ ಸದರಿ ಮೇರೆ ನಡೆಕೊಂಡು ಬರಬೇಕೆಂದು ಪತ್ರಕೆ ರಿಜಿಸ್ಟರ ಭೋಗ್ಯ ಕರಾರು ಬರಕೊಟ್ಟಿರುವುದರಿಂದ ಈ ಶರತ್ತಿಗೆ ವಿರೋಧವಾಗಿ ಯಾರೂ ಮೇಲ್ಕಂಡ ಸೊತ್ತುಗಳ ಮೇಲೆ ಕ್ರಯ ಮುಂತಾಗಿ ಯಾವ ತರದ ಆಧಾರಗಳೂ ಮಾಡಿಸಿಕೊಳ್ಳಬಾರದಾಗಿಯೂ, ಹೀಗೆ ಮಾಡಿಸಿಕೊಂಡದ್ದಾದರೆ ನನಗೆ ಇದರಿಂದ ಟಾಗುವ ಎಲ್ಲಾ ನಷ್ಟಕ್ಕೆ ಸದರಿಯವರು ಗುರಿಯಾಗತಕ್ಕದ್ದು ಅಲ್ಲದೆ ಹಾಗೆ ಮಾಡಿಸಿಕೊಂಡ ಪತ್ರಗಳು ನನ್ನ ಭೋಗ್ಯ ಕರಾರಿನ ಶರತ್ತು ತೀರುವ ವರೆಗೆ ಅಸಿಂಧುವಾಗುವದೆಂದು ಸೂಚಿಸಿ ತಿಳಿಸಲಾಗಿದೆ

ಒಕ್ಕಲಿಗರ ಕ ರಾಮಯ್ಯ,
ಕಾಂತೂರು ಗ್ರಾಮ, ಮೂರ್ನಾಡು

12—6

... ಖಂಡವಾದ ಭವಿಷ್ಯತ್ತು, ಜನ್ಮಕುಂಡಲಿ ಬರೆಯುವ ಕ್ರಮ ... ನಮಗೆ ಬೇಕಾದುದನ್ನು ಹೊಂದುವದಕ್ಕೆ ಅದ್ಭುತ ರೀತಿ ಕಾರ್ಯಗಳ ಯುಕ್ತಿ ... ಯುಕ್ತಿಗಳನ್ನು ಒಳಗೊಂಡಿರುತ್ತದೆ. ... ಸುಲಭ ರಹಸ್ಯಗಳನ್ನು ಬರೆದಿರುತ್ತೆ. ಮಲಯಾಳ ಯಂತ್ರ ಮತ್ತು ಮಂತ್ರ ರಹಸ್ಯದಲ್ಲಿ ಪ್ರತ್ಯಕ್ಷವಾಗಿ ಫಲವನ್ನು ಕೊಡುವ ಪ್ರತಿಯೊಂದು ವಿಷಯಕ್ಕೂ ಬೇಕಾದ, ಶ್ರೀ ಆಂಜನೇಯ ಶಾಕ್ತಿ, ಪರ ಮೇಶ್ವರ, ಗರುಡ, ಸೂರ್ಯ, ಭದ್ರಕಾಳೀ ಶ್ರೀ ನೀಲಕಂಠಾದಿ ಮಂತ್ರಗಳನ್ನು, ಯಂತ್ರಗಳನ್ನು, ಅವುಗಳ ರಹಸ್ಯ ಗಳನ್ನು, ಜ್ವರ, ದೃಷ್ಟಿ ದೋಷ ಗೃಹದಿಗ್ಬಂಧನ, ವಶ್ಯ ಮರುವು ಗೃಹಕಲಹ ಭಯ ಮುಂತಾದವು ಗಳನ್ನು ನಿವಾರಿಸುವ ಕ್ರಮಗಳನ್ನು ವಿವರವಾಗಿ ಬರೆದಿರುತ್ತೆ. ಶಕುನ ಶಾಸ್ತ್ರ ರಹಸ್ಯದಲ್ಲಿ ಕಾಗೆ ಸಿಂಗಳ ಗಳನ್ನು ನಿವಾರಿಸುವ ... ಹಲ್ಲಿ ಆದಿ ಅನೇಕ ಜೀವ ಪಕ್ಷ್ಯಾದಿ ಪಕ್ಷಿಗಳ ಸ್ವರ ಭೇದದಿಂದ ಶುಭಾಶುಭ ಶಕುನಗಳ ಫಲಗಳನ್ನು ... ಬಂಧುಗಳ ಶಕುನಗಳನ್ನು ಅಂಗ ಚಲನೆ, ಹಲ್ಲಿ ಶಕುನ, ... ಶಕುನಗಳನ್ನು ವಿಶದ ಪಡಿಸಿರುತ್ತೆ. ಸ್ವಪ್ನ ಫಲ ಶಾಸ್ತ್ರದಲ್ಲಿ ಅನೇಕಾನೇಕ ಸ್ವಪ್ನಗಳ ಪರಿಣಾಮಗಳನ್ನು, ಶುಭ ಫಲಗಳನ್ನು ... ಜ್ಯೋತಿಷ್ಯ ಶಾಸ್ತ್ರದಲ್ಲಿ ವಿವಾಹ, ಉಪನಯನ ಗೃಹ ಪ್ರವೇಶ, ಗೃಹ ನಿರ್ಮಾಣ, ಪ್ರಯಾಣ ಮುಂತಾದ ಯಾವತ್ತು ವಿಷಯಗಳಿಗೆ ಮುಹೂರ್ತಗಳನ್ನು ನಿರ್ಣಯಿಸುವ ರಹಸ್ಯಗಳನ್ನು, ನವಗ್ರಹಗಳ ಗೋಚಾರ ಫಲಗಳನ್ನು ಪ್ರತಿದಿನ ಪ್ರತಿವಾರ ... ಉಂಟಾಗುವ ಪ್ರತಿಯೊಬ್ಬರ ಸುಖದುಃಖಾದಿಗಳನ್ನು ತಿಳಿಸುವ ಭವಿಷ್ಯತ್ ರಹಸ್ಯವನ್ನು ಜಾತಕ ಗಣಿತ ಮರ್ಮಗಳು ಅಂದರೆ ಲಗ್ನ, ನವಾಂಶ, ದ್ರೇಕ್ಕಾಣ, ಚಂದ್ರಲಗ್ನ ಭಾವಕುಂಡಲಿ ದಶಾಭಾವ ಕುಂಡಲಿ, ಸಪ್ತಾಂಶ, ತ್ರಯೋದಶ ವರ್ಗ, ತ್ರಯೋದಶ ವರ್ಗದ ಕುಂಡಲಿಗಳು, ಅಷ್ಟ ವರ್ಗ, ಗ್ರಹಸ್ಪಷ್ಟ, ಲಗ್ನ ಸ್ಪಷ್ಟ, ಆಯುರ್ದಾಯ, ಅಷ್ಟಕವರ್ಗಾದಿ ಪ್ರತಿ ಒಂದು ಗಣಿತಗಳನ್ನು ಮಾಡಿಕೊಳ್ಳುವವನ್ನು ಉದಾಹರಣೆಗಳೊಂದಿಗೆ ಚಿಕ್ಕ ಚಿಕ್ಕ ಟಿಪ್ಪಣಿಗಳ ಸಹ ... ಬರೆದಿರುವದಲ್ಲದೆ ದಶಾನಿರ್ಣಯ, ಅಂತರ್ದಶಾ, ... ಮತ್ತು ಪ್ರತಿ ಒಂದು ದಶಾಭುಕ್ತಿ, ಅಂತರ ... ಫಲಗಳನ್ನು, ... ಜಾತಕಗಳನ್ನು ನೋಡಿ ... ದಶಾ, ಭುಕ್ತಿ, ಅಂತರಾಂತರ ಸೂಕ್ಷ್ಮಾದಿ ಭುಕ್ತಿ ಫಲಗಳು ... ಇಂದಾ ಪ್ರಶ್ನೆ ... ನಿರ್ಣಯ ... ಕಳ್ಳತನ ... ರಮಲ ... ಶಾಸ್ತ್ರ ರಹಸ್ಯದಲ್ಲಿ ... ಯಾವತ್ತು ಪ್ರಶ್ನೆಗಳನ್ನು ... ಮರ್ಮಗಳನ್ನು ... ಬರೆದಿರುತ್ತೆ. ಅಲ್ಲದೆ ಪ್ರಪಂಚದಲ್ಲಿ ... ನೆಪೋಲಿಯನ್ ಬೋನಪಾರ್ಟ್‌ರವರು ಉಪಯೋಗಿಸಿದ ... ಪ್ರಶ್ನೆ ಶಾಸ್ತ್ರವನ್ನು ... ಬರೆದಿರುತ್ತೆ ಸ್ವರಶಾಸ್ತ್ರ ರಹಸ್ಯದಲ್ಲಿ ಸಕಲ ವಿಧ ಮುಹೂರ್ತಗಳನ್ನು ನಿರ್ಣಯಿಸುವ ರಹಸ್ಯಗಳನ್ನು, ಪ್ರತಿಯೊಂದು ಪ್ರಶ್ನೆಗಳನ್ನು ... ಶ್ರೀ ... ಆದೃಷ್ಟ ರೇಖಾಶಾಸ್ತ್ರದಲ್ಲಿ ಪ್ರತಿಯೊಬ್ಬ ಸ್ತ್ರೀ ಪುರುಷರ ಸಸ್ತ, ಭಾಗ್ಯ, ದಾರಿದ್ರ್ಯ, ಶ್ರೀ ...

... ಭಂಗಾರ ... ಮುಂತಾದುವುಗಳಿಗೆ ... ಕೊಡುವ ವಿಧಗಳು ಇತ್ಯಾದಿ ... ಯೊಂದು ಕೈಗಾರಿಕೆಗಳನ್ನು ಬರೆದಿರುತ್ತೆ.

ಈ ಗ್ರಂಥದ ವಿಷಯವಾಗಿ ಯೋಗ್ಯತಾ ಪತ್ರಿಕೆಗಳನ್ನು ಕೊಟ್ಟ ಪ ಪತ್ರಿಕಾಕರ್ತರು ಮತ್ತು ಇತರ ಸಜ್ಜನರು,

ಬೆಂಗಳೂರು ಪ್ರಜಾಮಿತ್ರ, ಮೈಸೂರು ... ಪತ್ರಿಕಾಕರ್ತರು, ಶ್ರೀ ... ಸಂಸ್ಥಾನದ ಸರ್ವಾಧಿಕಾರಿಗಳಾದ ... ಸ್ವಾಮಿಗಳು, ... ಬ್ಬಾದಿ ... ಸಿದ್ಧಾಂತಿ ... ಶಾಸ್ತ್ರಿಗಳು, ಬೆಂಗಳೂರು ... ಪಂಡಿತರು ... ಕೃಷ್ಣನ್ ... ಅನೇಕ ಗ್ರಂಥಕರ್ತರು ... ಬೆಂಗಳೂರು ... ಜ್ಯೋತಿಷ ... ಶಾಸ್ತ್ರಿಗಳು ... ಆಯುರ್ವೇದ ವಿದ್ವಾನ್ ... ಪಿಠಾಧಿಪತಿಗಳು, ... ಮಲ್ಲಪ್ಪ ... ಸ್ವಾಮಿಗಳು ... ವಕೀಲರು ... ಮುಂತಾದ ... ಅನೇಕರ ಹಸ್ತಾಕ್ಷರಗಳನ್ನು ... ಮಹಾರಾಜರ ಹಸ್ತ ... ಇರುತ್ತೆ

ಕ್ರಯ ಪ್ರತಿ ಒಂದಕ್ಕೆ ರೂ ೩—೦—೦

ಗ್ರಂಥ ದೊರೆಯುವ ಸ್ಥಳ —

ಮೇನೇಜರ್ ಭಾರತ ಜ್ಯೋತಿಷ್ಯ ವೈದ್ಯ
ಹರಪನಹಳ್ಳಿ

... ಕಾಯಿಲೆಗಳಿಗೂ, ಆಯುರ್ವೇದ ಪದ್ಧತಿಯ ಔಷಧ ವ್ಯಾಪಾರಿಗಳು ಸಹ ಅದನ್ನೇ ಹೊಗಳುತ್ತಾರೆ. ಅನಾರೋಗ್ಯವನ್ನು ಹೋಗಲಾಡಿಸಿ, ಆರೋಗ್ಯವನ್ನು ಪರಿವರ್ಧಿಸಿ ಕೊಡುವ ಕಲ್ಪತರು ಮಿಶ್ರಣವನ್ನು ಎಲ್ಲೆಲ್ಲಿಯೂ ಪಡೆಯಬಹುದು ಬೇಕಾದರೆ ನಮಗೇ ಬರೆಯಿರಿ. ಮಾಹಿತಿ ಪತ್ರಗಳೂ ಸಿಕ್ಕುತ್ತವೆ. ಇದು ಅಲ್ಲದೆ ನಮ್ಮಲ್ಲಿ ಎಲ್ಲಾತರದ ಆಯುರ್ವೇದೀಯ ಔಷಧಗಳು ಯಾವಾಗಲೂ ಸಿದ್ಧವಾಗಿವೆ.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ

12—1

ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,
ಮಂಗಳೂರು, (ದಕ್ಷಿಣ ಕನ್ನಡ)

... ಜೋಡು 1. ಪನ್ನದ ಗುಂಡಿಗಳು 4. ವಾಚು 1. ಗಡಿಯಾರದ ಸರಪಣಿ 1. ಮುವಾಸನೆ ಸೋಪು 1 ಕತ್ತಿ 1. ರೋಲ್ಡ್ ಗೋಲ್ಡ್ ಭಂಗಾರದ ಉಂಗುರ ... ಗೋಲ್ಡ್ ಭಂಗಾರದ ನೆಕ್‌ಲೇಸ್ ಎಂಟು ... 1. ಪಂಚದ ಬಾಣಿಗೆ 1. ಕೈ ಗುಂಡಿಗಳ ಸೆಟ್ 1 ... ಈ 15 ಜಿನಸುಗಳು ಮತ್ತು ಖಾತ್ರಿಯ ... ಗ್ಯಾರಂಟಿ ಸಹಿತ. ಗಡಿಯಾರ 1ಕ್ಕೆ ಕ್ರಯ ...

ವಿಳಾಸ:— ವಿ. ಎಸ್. ವಾಚ್ ಕಂಪೆ
ಪೋಸ್ಟ್ ಬಾಕ್ಸ್ ನಂ. 105, ಮದ್ರಾ...

# ವರ್ತಮಾನ ಸಂಗ್ರಹ.

## ಒಳಪ್ರದೇಶ

ದೇಶದ ಕೆಲವು ಕಡೆಗಳಲ್ಲಿ ದನಗಳ ಕಾಯಿಲೆಯು ಹರಡುತ್ತಿದೆಯೆಂದು ವರ್ತಮಾನ ಬರುತ್ತಿದೆ.

ರಜೆಯಲ್ಲಿರುವ ಮಿ ಪಿಯರ್ಸ್‌ರವರು ರಜೆ ತೀರಿ ಒಂದು ಬೇಗನೆ ಚೀಫ್‌ಕಮಿಷನರ ಉದ್ಯೋಗವನ್ನು ಕೈಕೊಳ್ಳುವರೆಂದೂ, ಈಗಿನ ಚೀಫ್‌ಕಮಿಷನರವರಾದ ಮಿ ಕ್ರಂಪ್‌ರವರು ರಜೆಯಲ್ಲಿ ಹೋಗುವರೆಂದೂ ವರ್ತಮಾನ.

ಡಾಕ್ಟರ್ ಚೆಪ್ಪುಡಿರ ಗಣಪತಿ ಯಲ್. ಯಂ ಆಂಡ್. ಯಸ್. ರವರು ತಾ 14ರಲ್ಲಿ ಗೋಣಿಕೊಪ್ಪಲಲ್ಲಿ ಸ್ವರ್ಗಸ್ಥರಾದರೆಂದೂ ಅವರ ಶವವು ಅವರ ಪೈಲಾತ್ಪುರ ತೋಟದ ಮನೆಗೆ ಒಯ್ಯಲ್ಪಟ್ಟು ಅಲ್ಲಿ ದಫನ ಮಾಡಲ್ಪಟ್ಟಿತೆಂದೂ ತಿಳಿಯುತ್ತೇವೆ.

ಬೆಂಗಳೂರಿನಲ್ಲಿ ಕಳೆದ ತಿಂಗಳ ಅಂತ್ಯದಲ್ಲಿ ನಡೆದ ಗಲಾಟೆಯಲ್ಲಿ ನೋವು ಯಾ ನಷ್ಟ ಉಂಟಾಗಿರುವವರ ವಿಚಾರ ನಡಿಸುವ ಬಗ್ಗೆ ಅಸಿಸ್ಟೆಂಟ್ ಕಮಿಷನರಾದ ಮಿ ಕೋದಂಡ ಮಾಚೈಯ್ಯನವರನ್ನು ಸ್ಪೆಶ್ಯಲ್ ಮೇಜಿಸ್ಟ್ರೇಟರಾಗಿ ನೇಮಿಸಿರುವರೆಂದು ತಿಳಿಯಬರುತ್ತದೆ.

ವೀರಾಜಪೇಟೆಯ ಹೈಸ್ಕೂಲಿನ ಹೆಡ್ ಮಾಸ್ಟರಾಗಿರುವ ಮಿ ಸಿ. ಯಂ ರಾಮರಾಯರು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಹೆಡ್ ಮಾಸ್ಟರಾಗಿ ನೇಮಿಸಲ್ಪಟ್ಟಿರುವರು. ವೀರಾಜಪೇಟೆ ಹೈಸ್ಕೂಲಿನ ಹೆಡ್ ಮಾಸ್ಟರಾಗಿ ಯಾರನ್ನು ನೇಮಿಸಿರುವರೆಂದು ಇನ್ನೂ ಗೊತ್ತಾಗಿರುವದಿಲ್ಲ.

ತಾ. 13ರಲ್ಲಿ ಪೊನ್ನಂಪೇಟೆಯಲ್ಲಿ ನಡೆದ ಪಬ್ಲಿಕ್ ಮೀಟಿಂಗಿನಲ್ಲಿ ಪೊನ್ನಂಪೇಟೆ ಪ ಗೋರ್ಡಿಂಗನ್ನೂ, ಅದಕ್ಕೆ ಸೇರಿದ ಭೂಮಿಯನ್ನೂ ಅಭಿವೃದ್ಧಿಪಡಿಸಲಿಕ್ಕಾಗಿ ಅಲ್ಲಿಯ ರಾಮಕೃಷ್ಣ ಮಠಕ್ಕೆ ಬಿಟ್ಟುಕೊಡುವಂತೆ ಸರ್ಕಾರವನ್ನು ಕೇಳಿಕೊಳ್ಳಬೇಕೆಂದು ಠರಾವು ಪಾಸುಮಾಡಿರುವರೆಂದು ತಿಳಿಯಬರುತ್ತದೆ.

ಈ ವಾರವೂ ಮಡಿಕೇರಿಯಲ್ಲಿ ಮಳೆ ಕಡಿಮೆ. ಉತ್ತರದ್ದರ ಒಳ್ನಾಡು ಕಡೆಗಳಿಗೆ ಮಡಿಕೇರಿಗಿಂತಲೂ ಕಡಿಮೆ ಮಳೆ. ತಾ 1ರಿಂದ ಇಂದಿನ ವರೆಗೆ ಮಡಿಕೇರಿಗೆ 419 ಇಂಚು ಮಳೆ ಬಿದ್ದಿದೆ. ಈ ವರ್ಷ ಮಳೆಗಾಲವು ಸರಿಯಾಗಿ ನಡೆಯದ್ದರಿಂದ ಹಲವು ರೈತರ ನಾಟಿ ಕೆಲಸವು ಇನ್ನೂ ಮುಗಿದಿರುವದಿಲ್ಲ.

ಕಮಿಷನರ ಇಂಗ್ಲಿಷ್ ಆಫೀಸಿನ ಮೇನೇಜರಾಗಿರುವ ರಾ. ಸಾ. ಹೆಚ್. ಯಂ ಕಾಮತ್‌ರವರು ತಾ. 1ರಿಂದ ಎರಡು ತಿಂಗಳು ರಜೆ ತೆಗೆದುಕೊಂಡಿರುವದರಿಂದ ಅವರ ಬದಲು ಮೇನೇಜರಾಗಿ ಮಿ. ಕ ನಾರಾಯಣರಾಯರೂ, ಹೆಡ್ ಎಕೌಂಟೆಂಟರಾಗಿ ಮಿ ಮೇರಿಯಂಡ ಬೋಪೈಯ್ಯನವರೂ ಕೆಲಸವನ್ನು ನೋಡುವಂತೆ ನೇಮಿಸಲ್ಪಟ್ಟಿದ್ದಾರೆ.

ಗೋದಾವರಿಯಲ್ಲಿದ್ದ ಮಿ. ಎ ಸುಂದರಚಾರ್ಯರೆಂಬವರು ಡಿ. ಪಿ ಡಬ್ಲ್ಯು. ಇಲಾಖೆಯ ದಕ್ಷಿಣ ಕೊಡಗು ಸಬ್ ಡಿವಿಜನ್ ಆಫೀಸರಾಗಿ ನೇಮಿಸಲ್ಪಟ್ಟಿರುವರು. ಅವರು ಒಂದು ವೀರಾಜಪೇಟೆಯಲ್ಲಿ ಚಾರ್ಜು ತೆಗೆದುಕೊಂಡದ್ದರ ಮೇಲೆ ಅಲ್ಲಿದ್ದ ಮಿ. ಕಾಳೇಶ್ವರ ಅಯ್ಯರವರು ನಿನ್ನೆ ದಿನ ಮಡಿಕೇರಿಗೆ ಬಂದು ಉತ್ತರ ಕೊಡಗು ಸಬ್ ಡಿವಿಜನಿನ ಚಾರ್ಜು ತೆಗೆದುಕೊಂಡಿರುವರು.

ಅಬ್ಬಿ ಮಠದ ಗುರುಗಳಾಗಿದ್ದ ಚಿಕ್ಕ ಮಲ್ಲಿಕಾರ್ಜುನಸ್ವಾಮಿಯವರು ತನ್ನ ಮರಣಾನಂತರ ಸದರಿ ಮಠದ ಗುರುವಾಗಿ ನೇಮಿಸಿದ ನಾಗಭೂಷಣ ಸ್ವಾಮಿ ಎಂಬವರು ಚಿತ್ರದುರ್ಗದ ಜಗದ್ಗುರು ಮುರುಗರಾಜೇಂದ್ರ ಸ್ವಾಮಿಯವರ ಮೇಲೆ ಈ ಮಠದ ಹಕ್ಕಿಗಾಗಿ ಮಾಡಿದ ದಾವವು ಸುಮಾರು ಮೂರು ವರ್ಷಗಳಿಂದ ಸಬ್ ಜಡ್ಜರ ಕೋರ್ಟಿನಲ್ಲಿ ವಿಚಾರ ನಡೆದು, ಬರುವ ಸೆಪ್ಟೆಂಬರ್ ಎರಡನೇ ವಾರದಲ್ಲಿ ನಡೆಯುವ ಆರ್ಗ್ಯುಮೆಂಟಿಗೆ ಚಿತ್ರದುರ್ಗದ ಮಠದವರ ಪರ ವಕೀಲರಾಗಿ ಮದ್ರಾಸಿನ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರು ಮಡಿಕೇರಿಗೆ ಬರುತ್ತಾರೆಂದು ತಿಳಿಯುತ್ತೇವೆ. ಕೊಡಗಿನಲ್ಲಿರುವ ಎಲ್ಲಾ ಲಿಂಗಾಯಿತ ವಿರಕ್ತ ಮಠಗಳು ತಮ್ಮದೆಂದೂ, ಅಧಿಕಾರದಲ್ಲಿರುವ ಸ್ವಾಮಿಗಳು ತಮ್ಮ ಶಿಷ್ಯರಾಗಿ ಕೆಂದೂ, ಆದುದರಿಂದ ಚಿಕ್ಕಮಲ್ಲಿಕಾರ್ಜುನ ಸ್ವಾಮಿಯವರಿಗೆ ಮುಂದಿನ ಗುರುವನ್ನು ನೇಮಕಮಾಡುವ ಹಕ್ಕಿಲ್ಲವೆಂತಲೂ ಚಿತ್ರದುರ್ಗದವರ ವಾದಮಾಡುವದಾಗಿದೆ. ಅಬ್ಬಿ ಮಠದಲ್ಲಿ ಗುರುಶಿಷ್ಯ ಪಾರಂಪರ್ಯವಾಗಿ ಅಧಿಕಾರ ನಡೆದು ಬಂದದ್ದೆಂತಲೂ ಚಿತ್ರದುರ್ಗ ಮಠಕ್ಕೆ ಈ ಮಠದ ಮೇಲೆ ಹಕ್ಕಿಲ್ಲವೆಂತಲೂ ವಾದಿಯ ವಾದವಾಗಿದೆ.

ಪರಪನಹಳ್ಳಿಯ ಬಾರತ ಜೋತಿಷ್ಯ ವೈದ್ಯಾಲಯದ ಜಾಹಿರಾತನ್ನು ಈ ಸಂಚಿಕೆಯ ಪುರವಣಿಯಾಗಿ ನಮ್ಮ ವಾಚಕರಿಗೆ ಕಳುಹಿಸಿರುತ್ತೇವೆ.

## ಹಿಂದೂದೇಶ.

ಬಂಗಾಳ ಕೌನ್ಸಿಲಿನಲ್ಲಿ ಚರ್ಚಿಸಲ್ಪಡುತ್ತಿದ್ದ ಪ್ರೈಮರಿ ವಿದ್ಯಾಭ್ಯಾಸದ ಬಿಲ್ಲ್ 29 ಮೆಂಬರುಗಳುಳ್ಳ ಸಿಲೆಕ್ಟ್ ಕಮಿಟಿಯಗೆ ಬಿಡಲಾಗಿದೆ.

ಕೊಟ್ಟ ಸಂಸ್ಥಾನ ಶಾಲೆಗಳಲ್ಲಿ ಹಿಂದೀ ಭಾಷೆಯನ್ನು ಕಡ್ಡಾಯವಾಗಿ ಕಲಿಸಬೇಕೆಂಬ ಠರಾವು ಅಲ್ಲಿಯ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಒಮ್ಮತದಿಂದ ಪಾಸಾಗಿದೆ.

ಸಂಯುಕ್ತ ಸಂಸ್ಥಾನದ ಕಾಂಗ್ರೆಸ್ ಕಮಿಟಿಯವರು ಒರುವ ಕಾಂಗ್ರೆಸ್ಸಿನ ಅಧ್ಯಕ್ಷತೆಗೆ ಶ್ರೀಯುತ ವಲ್ಲಭಬಾಯಿ ಪಟೇಲರನ್ನು ಆ ನಾಮಿನೇಷನ್ನು ಮಾಡಿದ್ದಾರೆ.

ಮಿ. ಎಸ್. ಆರ್ ದಾಸ್‌ರವರು ರಜೆ ಮುಗಿಸಿಕೊಂಡು ಹಿಂದು ಪುನಹ ವೈಸರಾಯರ ಎಕ್ಸಿಕ್ಯೂಟಿವ್ ಕೌನ್ಸಿಲಿನ ಮೆಂಬರುತನದ ಚಾರ್ಜನ್ನು ವಹಿಸಿಕೊಂಡಿರುವರು.

ಬೆಂಗಳೂರಿನಲ್ಲಿ ಕಳೆದ ತಿಂಗಳ ಅಂತ್ಯದಲ್ಲಿ ನಡೆದ ಗಲಾಟೆಯನ್ನು ವಿಚಾರಿಸಲು ನೇಮಿಸಲ್ಪಟ್ಟಿರುವ ಕಮಿಟಿಗೆ ಮೈಸೂರು ರಿಟಯರ್ಡ್ ಎಕ್ಸಿಕ್ಯೂಟಿವ್ ಕೌನ್ಸಿಲರಾದ ಮಿ ಚಾಂಡಿಯವರನ್ನು ಅಧ್ಯಕ್ಷರನ್ನಾಗಿ ಮಾಡಿರುವರಾಗಿ ವರ್ತಮಾನ.

ಬಾರ್ಡೋಲಿಯ ಸತ್ಯಾಗ್ರಹದ ಜಯಕ್ಕಾಗಿ ಸರದಾರ್ ವಲ್ಲಭಬಾಯಿ ಪಟೇಲರಿಗೆ ವಿಶೇಷ ಅಭಿನಂದನಾ ತಂತಿಗಳು ಕಳುಹಿಸಲ್ಪಟ್ಟಿವೆ. ಹಲವು ಕಡೆಗಳಲ್ಲಿ ಮೀಟಿಂಗ್ ಮಾಡಿ ಜನರು ತಮ್ಮ ಸಂತೋಷವನ್ನೂ, ತೃಪ್ತಿಯನ್ನೂ ವ್ಯಕ್ತಪಡಿಸುತ್ತಿರುವರು.

ಮದ್ರಾಸು ಸರಕಾರದವರು ಕಲ್ಲಿಕೋಟೆ ಮತ್ತು ಬಳ್ಳಾರಿಯಲ್ಲಿ ಕೈಗಾರಿಕಾ ಶಾಲೆಗಳನ್ನೂ, ಮಂಗಳೂರಲ್ಲಿ ವ್ಯಾಪಾರದ ಶಾಲೆಯನ್ನೂ ತೆರೆಯುವಂತೆ ಮಾಡಿರುವರು. ಬರುವ ವರ್ಷದ ಪ್ರಾರಂಭದಲ್ಲಿ ಈ ಶಾಲೆಗಳನ್ನು ತೆರೆಯುವಂತೆ ಏರ್ಪಾಡುಗಳು ಮಾಡಲಾಗುತ್ತಿವೆಯಂತೆ.

ಸೈಮನ್ ಕಮಿಷನ್ ಬಹಿಷ್ಕಾರದ ಸಂಬಂಧ ರಾತ್ರಿ ಹಗಲೆನ್ನದೆ ಯಾವಾಗ ಬೇಕಾದರೂ ಕೆಲಸಮಾಡಲು ತಯಾರಾಗಿರುವೆವೆಂದು ಮದ್ರಾಸಿನ ಪ್ರಾಂತ್ಯದ ಯುವಕರು ... ಸರ್ ಮುಖ್ಯ ಮಿ ರಾಘವೇಂದ್ರರವರು ಬಹಿರಂಗ ಪಡಿಸಿರುವರು. ಇದು ಅಭಿನಂದನೀಯವಾದ ಸಂಗತಿಯಾಗಿದೆ.

ಸರ್ವ ಪಾರ್ಟಿ ಯಪರಿಷತ್ತಿನಿಂದ ನೇಮಿಸಲ್ಪಟ್ಟಿದ್ದ ಉಪಕಮಿಟಿಯವರು ತಯಾರಿಸಿದ ಹಿಂದೂ ದೇಶದಾಡಳಿತ ರಚನೆಯು ಈ ತಾ 15 ರಲ್ಲಿ ಪ್ರಕಟವಾಗಿದೆ. ಈ ರಚನೆಯು ದೇಶದಲ್ಲಿ ಹಲವರಿಗೆ ತೃಪ್ತಿಯನ್ನುಂಟುಮಾಡಿದಂತೆ ಕಾಣುತ್ತದೆ. ಇದರ ವಿಷಯ ವಿವರವಾಗಿ ಆಗ್ರಲೇಖನದಲ್ಲಿ ಬರೆಯಲ್ಪಟ್ಟಿದೆ.

ಕಲ್ಕತ್ತಾ ಸಿಟಿ ಕಾಲೇಜು ಹಾಸ್ಟಲಿನಲ್ಲಿ ಸರಸ್ವತಿ ವಿಷಯ ಹಿಂದು ವಿದ್ಯಾರ್ಥಿಗಳಿಗೂ ಕಾಲೇಜು ಅಧಿಕಾರಿಗಳಿಗೂ ತಕರಾರು ಉಂಟಾಗಿ ವಿದ್ಯಾರ್ಥಿಗಳು ಕಾಲೇಜಿಗೆ ಹೋಗದೆ ಮುಷ್ಕರ ಹೂಡಿದ್ದರು. ಈಗ ಎಲ್ಲಾ ರಾಜಿಯಾದ ತೀರ್ಮಾನವಾಗಿದ್ದು ವಿದ್ಯಾರ್ಥಿಗಳು ಕಾಲೇಜಿಗೆ ಹೋಗುತ್ತಿರುವರು.

ತಾ 14 ರಲ್ಲಿ ಕಲ್ಕತ್ತಾದಲ್ಲಿ ನಾಮದಾರ್ ಜೆ ಪಟೇಲರವರಿಗೆ ಇಂಡಿಯನ್ ಛೇಂಬರ್ ಆಫ್ ಕಾಮರ್ಸಿನವರು ಒಂದು ಬಿನ್ನವತ್ತಳೆಯನ್ನು ಒಪ್ಪಿಸಿದರು. ಹಿಂದೂ ದೇಶದ ವ್ಯಾಪಾರಿಗಳೆಲ್ಲರೂ ಸ್ವದೇಶಿ ಚಳವಳಿಗೆ ಉತ್ತೇಜನ ಕೊಟ್ಟರೆ ಹಿಂದೂ ದೇಶಕ್ಕೆ ಹೆಚ್ಚಿನ ಸಹಾಯವಾಗುವದೆಂದು ಪಟೇಲರವರು ಉತ್ತರ ಕೊಟ್ಟರು.

"ಪಯನೀರ್" ಪತ್ರಿಕೆಯ ಮಾಜಿ ಜಾಯಿಂಟ್ ಎಡಿಟರಾಗಿರುವ ಮಿ ಜೆ ಗಸ್ಟ್ ಮನಫೋರ್ಡರವರ, ಶ್ರೀಮತಿ ... ಮಿಸ್ ... ಮಾಡಿದ್ದರಿಂದ ತನಗುಂಟಾದ ಮಾನನಷ್ಟಕ್ಕಾಗಿ ಒಂದು ಲಕ್ಷ ರೂಪಾಯಿ ನಷ್ಟಪರಿಹಾರ ಕೊಡಬೇಕೆಂದು ಆ ಪತ್ರಿಕೆಯ ಮಾಲೀಕರ ಮೇಲೆ ಅಲಹಾಬಾದ ಹೈಕೋರ್ಟಿನಲ್ಲಿ ದಾವೆ ಹಾಕಿದ್ದಾರೆ.

ಬ್ರಿಟಿಷ್ ಇಂಡಿಯಾದಲ್ಲಿ ಸೇಂದಿ ಸಾರಾಯಿಗಳನ್ನು ಮಾರುವದಕ್ಕೆ ಲೈಸೆನ್ಸು ಕೊಡುವದರಲ್ಲಿ ಲೋಕ ಜನರ ಅಭಿಪ್ರಾಯದಂತೆ ನಡೆಯಬೇಕೆಂದು ಮುಸಲ್ಮಾನರನ್ನು ವೆಂಬಲಿಸುವ ... ಅಂಥಾ ಸರಕಾರದವರು ಈ ಮಸೂದೆಯನ್ನು ಮಂಜೂರು ಮಾಡಿದರೆ ಉತ್ತಮವಾಗುವದು.

ಕರ್ನಾಯರ ಪತ್ರಿಕೆಯ ಸಂಪಾದಕರ ತಗಡೂರು ರಾಮಚಂದ್ರರಾಯರು "ಕ್ರಾಂತ ಪತ್ರಿಕೆ" ಸಂಪಾದಕರಾದ ... ಮೇಲೆ ... ಮಾನನಷ್ಟಕ್ಕೆ ದಾವೆ ಹಾಕಿದ್ದರು. ... ಅವರ ಮೇಲೆ ... ರಕ್ಷ ... ಕೋರ್ಟಿನಲ್ಲಿ ಪುನಃ ಅರ್ಜಿಕೊಡಲು ... ಕೇಸನ್ನು ತನಿಖೆ ಮಾಡುವಂತೆ ಆಜ್ಞೆ ಕೊಡಿಸಿದ್ದಾರಂತೆ.

ಒರಿಸ್ಸಾ ಸತಿ ಕೇಸಿನಲ್ಲಿ ಪಾಟ್ನಾ ಹೈಕೋರ್ಟಿನ ಚೀಫ್ ಜಸ್ಟಿಸರ ತೀರ್ಮಾನವನ್ನು ಖಂಡಿಸಿದ್ದಕ್ಕೆ ಕೋರ್ಟನ್ನು ತಿರಸ್ಕರಿಸಿದರೆಂಬ ತಕ್ಸೀರಿಗಾಗಿ ಅಲ್ಲಿನ "ಸರ್ಚ್ ಲೈಟ್" ಪತ್ರಿಕೆಯ ಸಂಪಾದಕರ, ಮೇನೇಜರ ಮತ್ತು ಪ್ರಿಂಟರ ಕೆಲವು ಮುಂದಾಳುಗಳ ಮೇಲೆ ಮೊಕದ್ದಮೆಯು ಆ ಹೈಕೋರ್ಟಿನಲ್ಲಿ ನಡೆಯುತ್ತಿದೆ. ವಿಚಾರವು ತಾ 15ರಲ್ಲಿ ಪ್ರಾರಂಭವಾಗಿದೆ. ಪಂಡಿತ ಮೋತಿಲಾಲ್ ನೆಹರು ಸರ್ ತೇಜ್ ಬಹದ್ದೂರ್ ಸಪ್ರೂ, ದೇಶದ ಪ್ರಮುಖ ಲಾಯರುಗಳು ಆಪಾದಿತರ ಪರವಾಗಿ ವಕಾಲತ್ತು ವಹಿಸುವರು.

ಬಾರ್ಡೋಲಿ ಸತ್ಯಾಗ್ರಹದ ರಾಜಿ ತೀರ್ಮಾನದ ಮೇರೆ ಸರಕಾರದವರು ಎಲ್ಲಾ ಸತ್ಯಾಗ್ರಹಿ ಕೈದಿಗಳನ್ನು ಬಿಡುಗಡೆ ಮಾಡಿರುವರು ಮತ್ತು ರಾಜಿನಾಮೆ ಕೊಟ್ಟಿದ್ದ ಪಟೇಲರುಗಳಿಗೆಲ್ಲಾ ಪುನಹ ಕೆಲಸ ಕೊಟ್ಟಿರುವರು. ಆದುದರಿಂದ ಬಾರ್ಡೋಲಿಯ ರೈತರು ಹಳೇ ದರದಲ್ಲಿ ಕಂದಾಯ ಕೊಡಲು ಸಾಧ್ಯವಾದಷ್ಟು ಬೇಗನೆ ಪ್ರಾರಂಭಿಸಬೇಕೆಂದು ಶ್ರೀಯುತ ವಲ್ಲಭಬಾಯಿ ಪಟೇಲರವರು ಬಾರ್ಡೋಲಿಯ ರೈತರಿಗೆ ಸಂದೇಶ ಕಳುಹಿಸಿರುವರು. ಮಿ ರಾಮಚಂದ್ರ ಭಟ್ಟರವರು ಹೆಚ್ಚಿನ ದರದ ಕಂದಾಯ 70 ಸಾವಿರ ರೂಪಾಯಿಯನ್ನು ಬೊಂಬಾಯಿ ಸರಕಾರದಲ್ಲಿ ಈ ತಾ. 12ರಲ್ಲಿ ಡಿಪಾಜಿಟ್ಟು ಇಟ್ಟಿರುವರು. ಇನ್ನು ಬಾರ್ಡೋಲಿಯ ಹೆಚ್ಚಿನದರ ಕಂದಾಯದ ವಿಚಾರಣೆಯು ಬೇಗನೆ ನಡೆಯುವದೆಂದು ತೋರುತ್ತದೆ.

## ವಿದೇಶ.

ಗ್ರೇಟ್ ಬ್ರಿಟನ್ನಿನಲ್ಲಿ ಪೊಲೀಸಿನವರು ನಡಿಸುವ ರೀತಿಗಳನ್ನು ವಿಚಾರಿಸಲು ವೈಕೌಂಟ್ ಲೀ ಯವರ ಅಧ್ಯಕ್ಷತೆಯಲ್ಲಿ ಒಂದು ರಾಯಲ್ ಕಮಿಷನು ನೇಮಿಸಲಾಗಿದೆ.

ಪ್ರಿನ್ಸ್ ಆಫ್ ವೇಲ್ಸ್‌ರವರು ತಮ್ಮ ಸಹೋದರ ಗ್ಲಾಸ್ಟರ್ ಡ್ಯೂಕರ ಸಮೇತ ಪೂರ್ವ ಆಫ್ರಿಕ ಪ್ರವಾಸಕ್ಕಾಗಿ ಸಪ್ಟಂಬರ್ ತಾ 8ರಲ್ಲಿ ಲಂಡನಿನಿಂದ ಹೊರಡಲಿರುವರು.

ಸಿಲೋನದ ಎಸೆಂಬ್ಲಿಯವರು ಅಲ್ಲಿಯ ಹೈ ಕಮಿಷನರ ಕೋರಿಕೆ ಮೇರೆ ಅಲ್ಲಿಯ ಆಡಳಿತ ರಚನೆಯಲ್ಲಿ ಕೆಲವು ಸಿಬಂದಿಗಳನ್ನು ಮಂಜೂರಿಡಲು ಒಪ್ಪದ್ದರಿಂದ ಹೈ ಕಮಿಷನರು ಆ ಎಸೆಂಬ್ಲಿಯನ್ನು ಮೂರು ತಿಂಗಳ ವರೆಗೆ ಸಸ್ಪೆಂಡ್ ಮಾಡಿರುವರು.

ಚಕ್ರವರ್ತಿಯವರ ಕಿರೀ ಮಗನಾದ ಪ್ರಿನ್ಸ್ ಜಾರ್ಜ್‌ರವರು ಕನಾಡಾದ ಕ್ಯೂಬೆಕ್ ಪಟ್ಟಣದಲ್ಲಿ ಅಮೇರಿಕದ ಮತ್ತು ... ಉದ್ಯೋಗವನ್ನು ... ತಾ 15ರಲ್ಲಿ ಇಂಗ್ಲೆಂಡಿನಿಂದ ಹೊರಟು ಹೋಗಿರುವರು.

... ... ಅಯ್ಯಂಗಾರ್ ... 1 ... ದಿಂದ ಬೊಂಬಾಯಿಗೆ ಸ್ಟೀಮರ್ ಹತ್ತಿ ... ಸರ್ ಮಹಮದ್ ಶಾಫಿಯವರು ಪತ್ನಿ ಸಮೇತ ... ಗ್ಲೆಂಡಿಗೆ ಹೋಗಿರುವರು. ಎರಡು ವಾರಗಳನಂತರ ಅವರು ... ಲ್ಲಿಂದ ಇಂಡಿಯಕ್ಕೆ ಹಿಂತಿರುಗುವರು.

ಮಂಚೂರಿಯವು ಜಪಾನ ... ಸರಕಾರಕ್ಕೆ ... ಒಳಗಾದರೆ ಜಪಾನಿಗೆ ಅತೃಪ್ತಿಯುಂಟಾಗುವದು. ಹಾಗೆ ಮಾಡಿದಲ್ಲಿ ಜಪಾನು ಮಂಚೂರಿಯ ... ಮಸಲು ... ದಂತೆ ನಡಿಸುವದೆಂದೂ ಜಪಾನ ಪ್ರಧಾನಿ ... ಮಾದ ಗವರ್ನರಿಗೆ ತಿಳಿಸಿದರು. ... ಸರ್ಕಾರವು ಇದೇ ಜೈನಾವನ್ನು ... ಜಪಾನು ... ಕ್ಕಾಗಿ ಜಪಾನು ... ಲ್ಲವೆಂದೂ ಗವರ್ನರು ಜಪಾನು ... 

ಕಳೆದ ಒಂದು ಶತಮಾನದಿಂದ ಇಂಗ್ಲೆಂಡಿನ ಆರೋಗ್ಯವು ಬಹಳ ಉತ್ತಮಗೊಂಡಿದೆ. ಜನರ ಸಂಖ್ಯೆಯು ಇದಕ್ಕಿಂತ ಹೆಚ್ಚಾಗಿದ್ದರೂ ಇಂಗ್ಲೆಂಡ್ ಮತ್ತು ವೇಲ್ಸಿನಲ್ಲಿ ಮರಣ ಸಂಖ್ಯೆಯು 1838ರಿಂದ ಒಂದೇ ಸಮನಾಗಿದೆ. ... ... ಮಕ್ಕಳ ... ಸಂಖ್ಯೆಯು ... ವರ್ಷದೊಳಗಿನ ... ಮರಣವು ... ಶೇಕಡ 71 ... ಈಗ ... ಇಳಿದಿದೆ. ... ಈಗ ... ಗಂಗೆ 12 ವರ್ಷವೂ, ... 14 ವರ್ಷವೂ ... ದರಕ್ಕಿಂತ ಹೆಚ್ಚು ... ಅಲ್ಲಿಯ ಚೀಫ್ ಮೆಡಿಕಲ್ ಆಫೀಸರು ಪ್ರಕಟಿಸಿರುವರು.

## ಪತ್ರವ್ಯವಹಾರ

ಬಾತ್ಮಿದಾರರು ಸಹ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಪ್ರಯಾಣಿಕರ ಅನುಕೂಲತೆಗೆ ಒಸ್ಸು ಸರ್ವಿಸು.

ಸವಕ್ಕೆ,

ತಾ 7—8—28 ರ "ರಾಷ್ಟ್ರಕರ್ತಾವರ" ಪತ್ರಿಕೆಯ ಸ್ಥಳೀಕ ವರ್ತಮಾನದಲ್ಲಿ, 'ಶ್ರೀ ಕಾವೇರಿ ಬಸ್ಸ್ ಸರ್ವಿಸಿನವರು ಸೋಮವಾರಪೇಟೆ ಸಂತೆಗೆ ಹೋಗುವ ಪ್ರಯಾಣಿಕರ ಅನುಕೂಲತೆಗಾಗಿ ಪ್ರತಿ ಆದಿತ್ಯವಾರ ಬೆಳಿಗ್ಗೆ ಮತ್ತು ಸಾಯಂಕಾಲ ಮಡಿಕೇರಿಯಿಂದಲೂ, ಸೋಮವಾರಪೇಟೆಯಿಂದಲೂ ಪ್ರಯಾಣಿಕರು ಬೇಕಾದಹಾಗೆ ಬಸ್ಸು ನಡಿಸಲು ಏರ್ಪಾಡು ಮಾಡಿರುವರು." ಎಂದು ಪ್ರಕಟವಾಗಿತ್ತು. ಸಂತೆಗಳಲ್ಲಿ ಇಂಥಾ ಏರ್ಪಾಡು ಜನರಿಗೆ ತುಂಬಾ ಸಹಾಯಕರವಾಗಿದೆ ... ದಂತೆ ಸೋಮವಾರಪೇಟೆ ಸಂತೆಗೆ ನಾನಾಕಡೆ ಬಸ್ಸುಗಳು ಈ ಮಾರ್ಗದಲ್ಲೇ ಓಡುತ್ತಿದ್ದವೆ. ಮಡಿಕೇರಿಯಿಂದ ಮೂರ್ನಾಡಿಗೆ ಗುರುವಾರವೂ, ವೀರಾಜಪೇಟೆಯಿಂದ ಸಿದ್ದಾಪುರಕ್ಕೂ ಮ

ಸೋಣಿಕೊಪ್ಪಲಿಗೂ ಆದಿತ್ಯವಾರವೂ ಈಗ ನಡೆಯುವ ಬಸ್ಸುಗಳು ಸಾಲದೆ ಸಂತೆಗೆ ಹೋಗುವ ಜನರಿಗೆ ತುಂಬಾ ಅನಾನುಕೂಲವಾಗಿದೆ. ಆದುದರಿಂದ ಈ ಲೈಸನ್ಸುಗಳನ್ನು ಇನ್ನೂ ಹೆಚ್ಚು ಸಲ ಬಸ್ ನಡಿಸಲು ಕೊಡಗಿನಲ್ಲಿರುವ ಹಲವು ಸರ್ವಿಸಿನವರು ಏರ್ಪಾಡು ಮಾಡುವರೇ? ಹಾಗೆ ಬಸ್ ನಡಿಸುವ ಸರ್ವಿಸಿನವರಿಗೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಲೈಸೆನ್ಸ್ ಕೊಡುವರೇ?

"ಪ್ರಯಾಣಿಕ"

---

ಹರಟೆ.

ಸ್ವಾಮಿ,

ಬಹು ಪುರಾತನ ಕಾಲದಿಂದಲೇ ಆರ್ಯರಲ್ಲಿ ಭಕ್ತಿಮಾರ್ಗವು ಸ್ಥಿರವಾಗಿ ನೆಲೆಗೊಳಿಸುವದಕ್ಕೆ ವಿಗ್ರಹಾರಾಧನೆಯೇ ಪ್ರಥಮ ಮೆಟ್ಟಲೆಂದು ನಂಬಿ ಆಯಾ ಜನರ ಅನುಕೂಲಗಳಿಗನುಸಾರವಾಗಿ ಅಲ್ಲಲ್ಲಿ ವಿಗ್ರಹ ಪೂಜೆಗಳನ್ನು ನಿರ್ಮಿಸಿದರೆಂದು ಹೇಳಬಹುದು. ಇಂಥಾ ಅಭಿಪ್ರಾಯಗಳನ್ನು ಹಿಂದುಗಳು ಮನಃಪೂರ್ತಿಯಾಗಿ ನಂಬಿ ಪ್ರತಿಯೊಂದು ಹಳ್ಳಿಗಳಲ್ಲೂ ದೇವತಾಸ್ಥಾನಗಳನ್ನು ಸ್ಥಾಪಿಸಿ ಏಕ ಮನಸ್ಸಿನಿಂದ ಆರಾಧಿಸುತ್ತಾ ಇರುವರೆಂದು ಹೇಳಬಹುದು. ಇತ್ತೀಚೆಗೆ ಹಿಂದುಗಳಲ್ಲಿ ತಮ್ಮ ತಮ್ಮೊಳಗೆ ಉಂಟಾದ ಮನಃಕಲಹಗಳಿಂದ ಅನೇಕ ಸಂಗಡಿಗಳು ವಿಂಗಡವಾದರೂ ಪ್ರತಿಯೊಂದು ಪಕ್ಷದವರು ತಮ್ಮ ತಮ್ಮ ಶಕ್ತಿಗನುಸಾರ ವಿಗ್ರಹ ಪೂಜೆಯಿಂದಾಗಿ ಮೋಕ್ಷಕ್ಕೆ ಹೊಡೆದಾಡುತ್ತಿರುವರೆಂದರೂ ತಪ್ಪಾಗಲಾರದು. ಮತ್ತು ಕೆಲವರು ವಿಗ್ರಹಾರಾಧನೆ ಇಲ್ಲದೆ ಬರೇ ಭಕ್ತಿಯಿಂದಲೇ ಮೋಕ್ಷ ಲಭಿಸುವದೆಂದು ಒಪ್ಪುವರಾದರೂ ಅದು ಒತ್ತಟ್ಟಿಗಿರಲಿ.

ಈ ಸಮಯದಲ್ಲಿ ವಿಗ್ರಹಪೂಜಿತರಾದ ಜೀವಿಗಳಿಗೆ ನೋಡಲು ಅವರ ಭಕ್ತಿಯನ್ನು ವಾಚಕ ಮಹಾಶಯರ ಮುಂದಿಡಲು ನಾನು ಚಿಂತಿಸಿಡುವವನಲ್ಲವಾದರೂ ಆನಂದ ಪಡಲು ಕಿಂಚಿತ್ತಾದರೂ ಮನವೊಪ್ಪಲೊಲ್ಲದು. ಈ ಹಳ್ಳಿಯಲ್ಲಿ ನಾಲ್ಕೈದು ಅಂಶೀ ದೇವರನ್ನು ಪೂಜಿಸುವರು. ಇವುಗಳಲ್ಲಿ "ಮಂದತ್ತವ್ವ" ಎಂಬುದು ಪ್ರಧಾನ ದೇವತೆ. ಈ ದೇವತೆಗೆ ಮೂರು ವರ್ಷಕ್ಕೊಂದು ಸಾರಿ ದೊಡ್ಡ ಉತ್ಸವ. ಬೇರೆ ದಿನಗಳಲ್ಲಿ ಪೂಜೆಯ ಪ್ರಸ್ತಾಪವೇ ಎತ್ತಲ್ಪಡದು. ಗುಡಿಗೋಪುರಗಳಂತೂ ಮೊದಲೇ ಇಲ್ಲ. ಬರೇ ಏಕಾಂತ ಕಾಡಿನ ಮಧ್ಯದಲ್ಲಿ ಮರದಡಿ ದೇವರ ಕಟ್ಟೆ. ಉತ್ಸವವು ಹಿಂಥತ್ತು ಹತ್ತು ದಿನಗಳ ವರೆಗೆ ಪ್ರತಿ ರಾತ್ರೆ ಬೆಳಗಿನ ವರೆಗೂ ನಡೆಯುವದು. ಆಗ ಮಾತ್ರ ವಿಗ್ರಹವನ್ನು ಆಭರಣಾದಿಗಳಿಂದ ಅಲಂಕರಿಸುವ ಹೊತ್ತು ಅಭಿಷೇಕ ಮೊದಲಾದುವು ಯಾವುದೂ ನಡೆಯುವ ಹಾಗಿಲ್ಲ. ಈ ದೇವತೆಗೆ ಪ್ರಧಾನ ಭಕ್ತನೇ "ಮಾಲವ" ಅಂದರೆ ಹೊಲೆಯ. ಆ ಗ್ರಾಮದಲ್ಲಿ ಅನಾದಿಯಾಗಿ ನಡೆದು ಬರುತ್ತಿರುವ ಅಂಥಾ ಒಂದು ಕುಟುಂಬವನ್ನು ನೇಮಕ ಮಾಡಿರುವರು. ಈಗಲೂ ಕೂಡ ಶಾಂತಿಗಾರನಿಗೆ ಸಂಬಳ ಕೊಡಲು ತಪ್ಪಿದರೂ ಕೂಡ ಆ ಪಂಚಮನಿಗೆ ಮಾತ್ರ ಹಬ್ಬ ಹುಣ್ಣಿಮೆಗಳಲ್ಲಿ ಸತ್ಕಾರ, ಮತ್ತು ವರ್ಷಕ್ಕೊಂದು ಸಾರಿ ಆಯಾ ಕಟುಂಬವು ಇಂತಿಷ್ಟೇ ಸಂಬಳ ಕೊಟ್ಟೇ ತೀರಬೇಕೆಂಬ ದೇವರ ನಿರ್ಣಯ. ಇದಕ್ಕೆ ಯಾವನಾದರೂ ತಪ್ಪಿದರೆ ಆ ದೇವರ ಕೋಪಕ್ಕೆ ಪಾತ್ರನಾಗುವನೆಂದು ನಂಬುತ್ತಾರೆ. ಅಲ್ಲದೆ ಆತನಿಗೆ ಸಿಕ್ಕತಕ್ಕ ಸತ್ಕಾರ ಒಹುಮಾನಗಳಂತೂ ಮತ್ತೆ ಯಾವ ಬ್ರಾಹ್ಮಣ ಶ್ರೇಷ್ಠನಿಗೂ ಆ ಗ್ರಾಮದಲ್ಲಿ ಸಿಗಲಾರದೆಂದೇ ಹೇಳಬಹುದು.

ಆತನ ವಿಶಾಸವೋ ಮೂಢ ನಂಬಿಕೆಯೋ. ಹಬ್ಬವಾಗುವ ವರ್ಷ ಆತನು ಆ ಗ್ರಾಮಕ್ಕೆ ಕಾಲಿಟ್ಟ ದಿನವೇ ಆತನನ್ನು ಮುಂದಿರಿಸಿ ಹಬ್ಬಕ್ಕೆ ನಿಶ್ಚಯಿಸುವದು. ಅಂದಿನಿಂದ ಆ ಪಂಚಮನು ಶುದ್ಧ ಮುದ್ರಿಕೆಯಿಂದ ಉಪವಾಸ ಮೊದಲಾದವನ್ನು ಶಾಸ್ತ್ರಕ್ಕನುಸಾರವಾಗಿ ಆಚರಿಸಿ ಆತನೇ ಮುಂದಾಳಾಗಿ ದೇವರ ಭಕ್ತನೆಂದೆನಿಸಿಕೊಳ್ಳುವನು. ಉತ್ಸವ ಕಾಲದಲ್ಲಿ ಆತನು ಗ್ರಾಮಸ್ಥರನ್ನು ಹಿಂದಿರಿಸಿ ತಾನು ಮುಂದೆ ಆ ದೇವಸ್ಥಾನಕ್ಕೆ ಹೋಗುವನು. ಮತ್ತು ಅವನು ಯಾವಾಗ ಹಿಂದಕ್ಕೆ ಹೊರಟು ಬರುತ್ತಾನೋ ಆಗಲೇ ಬಾಕಿಯವರೆಲ್ಲಾ ಆತನನ್ನು ಹಿಂಬಾಲಿಸುವರು. ಆತನ ವಿನಹ ಬಾಕಿ ಯಾವ ಸಮಯದಲ್ಲೂ ಯಾರೂ ಆ ಸ್ಥಾನಕ್ಕೆ ಹೋಗಕೂಡದೆಂದು ದೇವರ ನಿರ್ಣಯ. ದೇವರ ಉತ್ಸವವೋ ಅಂದರೆ ಒಳ್ಳೇ ಪೇಟೆ. ಒಂದು ಅಗ್ನಿಕೊಂಡವನ್ನು ಮಾಡಿ ಅದರ ಮುಂದೆ ಪಕ್ಕದಲ್ಲೂ ಕುಣಿಯಬೇಕೇ ವಿನಹ ದೀಪದ ಬೆಳಕು ಸ್ವಲ್ಪವು ಬೀಳಕೂಡದೆಂದು ದೇವರ ಕಟ್ಟು. ಈ ಹಬ್ಬದಲ್ಲಿ ಗ್ರಾಮಸ್ಥರು ವೇಷಹಾಕಿಕೊಂಡು ದೋಲು ಬಡಿಯುತ್ತಾ ಓಲಗದವರಂತೆ ವೇಷಹಾಕಿಕೊಂಡು ಹೊಸ ಹೊತ್ತು ಕುಣಿಯುವ ಪಂಚಮನಾದ ಸೋಟವಾಗಿ ತುಂಬಾ ಮತ್ತ ಆ ದೇವರಿಗೆ ಹಾಗೆ ಕುಣಿಯುವದು ತುಂಬಾ ಪ್ರೀತಿಯಂತೆ. ಅಂತಿಕಲಿ—ಮೊದಲು ಬಂದ ಆ ಮಾಲವ ಹಾಗೆ ಕುಣಿದಾಡುತ್ತಿರುವವನನ್ನು ತಾನು ಕಣ್ಣೆತ್ತಿ ನೋಡಲಾರೆನೆಂಬ ವ್ಯಾಮೋಹದಿಂದಲೋ ಅವರ ಕೈವ್ವವೂ ಕೂಡ ತನ್ನ ಕಿವಿಗೆ ಬೀಳಬಾರದೆಂಬ ಅಭಿಪ್ರಾಯದಿಂದಲೋ ಅಥವಾ ತಮ್ಮ ದೇವತೆಯನ್ನು ಬಲತ್ಕಾರದಿಂದ ಕೆಕ್ಕರಿಸ ಬಾರದೆಂಬ ನ್ಯಾಯದಿಂದಲೋ ಎಂಬಂತೆ ಆತನು ಉಂಗುಷ್ಟದಿಂದ ಶಿರಸ್ಸಿನ ವರೆಗೆ ಮುಸುಕು ಹಾಕಿಕೊಂಡು ಕೋಲು ಬಾರಿಸುತ್ತಾ ಆ ಅಗ್ನಿಕುಂಡಕ್ಕೆ ಬೆನ್ನು ಹಾಕಿಕೊಂಡು ದೇವರ ಧ್ಯಾನದಲ್ಲಿ ಲೋಲಾಡುತ್ತಿರುವನು. ಆತನು ಆ ಸ್ಥಳ ಬಿಟ್ಟಲ್ಲದೆ ಯಾರೂ ಹಿಂತಿರುಗಕೂಡದೆಂತಲೂ ಅವನು ಹೊರಟು ಹೋದ ಕೂಡ್ಲೆ ಎಲ್ಲವರೂ ಆತನನ್ನು ಹಿಂಬಾಲಿಸಲೇಬೇಕೆಂಬ ದೇವರ ಕಟ್ಟಳೆ ಇರುವದರಿಂದ ಎಲ್ಲರೂ ಅದರಂತೆ ಆಚರಿಸುವರು. ಇದರಿಂದ ಅಲ್ಲಿ ಪಂಚಮರಿಗ ಇಷ್ಟು ಶ್ರೇಷ್ಠತ್ವವಿರಬೇಕೆಂದು ಆ ದೇವರೇ ಉದಾಹರಿಸಿರುವಾಗ್ಯೆ ಅಲ್ಪ ಜೀವಿಗಳಾದ ನಾವು ಮಾತ್ರ ಅವರನ್ನು ತಿರಸ್ಕರಿಸಬಹುದೇ?

ಇಷ್ಟು ಮಾತ್ರವಲ್ಲ, ವರ್ಷಾವಧಿ ಕೈಲ್ ಮೂಹೂರ್ತ ಹಬ್ಬವನ್ನು ನಿರ್ಣಯಿಸುವ ದಿನ ಆ ಗ್ರಾಮದ ದೇವತಕ್ಕರೂ ಬ್ಬರು ಹೊಲೆಯನ ಕುತ್ತಿಗೆಯಲ್ಲಿರುವ ಡೋಲಿಗೆ ಮೊದಲು ಬಡೆಯಬೇಕೆಂಬ ದೇವರ ನಿರ್ಣಯದಂತೆ ಈಗಲೂ ಆಚರಿಸುವರು. ಕೆಲವು ಕಾಲದ ಹಿಂದೆ ಆ ಡೋಲು ತಮ್ಮ ಕುತ್ತಿಗೆಯಲ್ಲಿ ಬಹುಮಲ್ಪಡುತ್ತಿತ್ತಂತೆ! ಈ ಉದಾಹರಣೆಗಳಿಂದಲೂ ಆ ಗ್ರಾಮದಲ್ಲಿ ಪಂಚಮರಿಗೆ ಶ್ರೇಷ್ಠತೆಯನ್ನು ಕೊಟ್ಟ ಹಾಗೆ ಕಾಣಬರುವದಿಲ್ಲವೇ? ಇಷ್ಟೇ ಅಲ್ಲ, ಇನ್ನೂ ಅನೇಕ ತರ ಪೂರ್ವಾಚಾರದ ಪದ್ಧತಿಗಳನ್ನು ಅನುಸರಿಸುತ್ತಾ ಬರುವದನ್ನು ಗಣನೆಗೆ ತಂದರೆ ಒಡನಾಡಿಯಾಗಿಲ್ಲದು ತಿರಸ್ಕರಿಸಲ್ಪಟ್ಟ ಆ ಪಂಚಮರನ್ನು ಉದ್ಧರಿಸಲು ಆ ಗ್ರಾಮವೇ ಮುಂದಾಳಾಗಿ ಇತ್ತೆಂದು ಹೇಳಲು ಯಾವ ಅಭ್ಯಂತರವೂ ಇಲ್ಲ. ಇಂಥಾ ಹಿರಿಯರ ಆಧಾರಗಳನ್ನು ಕಣ್ಣು ಮುಂದೆ ಇಟ್ಟುಕೊಂಡು ಅದಕ್ಕೆ ವ್ಯತಿರಿಕ್ತವಾಗಿ ಅವರನ್ನು ನಿಷ್ಕಾರಣವಾಗಿ ಹೊರದೂಡಲು ಪ್ರಯತ್ನಿಸಬಹುದೇ?

ಎಲ್ಲಿಲ್ಲೂ ಪಂಚಮ ಸಹೋದರರನ್ನು ಗಾಯತ್ರೀಮಂತ್ರೋಪದೇಶದಿಂದ ಬ್ರಾಹ್ಮಣ ಶ್ರೇಷ್ಠರನ್ನಾಗಿ ಮಾಡಿ ಹಿಂದೂಮತವನ್ನು ಉದ್ಧರಿಸಬೇಕೆಂದು ಚಳವಳ ನಡೆಯುತ್ತಿರುವಲ್ಲಿ ಈ ಗ್ರಾಮದಲ್ಲಿ ಮಾತ್ರ ಅವರನ್ನು ಸರಸ್ವತೀ ಆಲಯಕ್ಕಾಗಿ ಬಹಿಷ್ಕರಿಸುವದು ಯಾವ ನ್ಯಾಯ? ಮೇಲೆ ವಿವರಿಸಿದ ಆಚಾರ ವ್ಯವಹಾರಗಳಲ್ಲಿ ಅವರಿಗೆ ಶ್ರೇಷ್ಠತೆಯನ್ನು ಕೊಟ್ಟು ಇಲ್ಲಿ ಮಾತ್ರ ಅಲ್ಲಗಳೆಯಬಹುದೇ? ಈ ಸಡವಳಿಕೆಗೆ "ಮಂದತ್ತವ್ವ" ಒಪ್ಪುವದು ಹೇಗೆ?

ಹಳಿಕೆ ಮಾತಿನಿಂದ ಪ್ರಯೋಜನವಾಗಲಿಕ್ಕಿಲ್ಲ. ಲೋಕದ ಸ್ಥಿತಿಗತಿಗಳನ್ನು ಅರಿತು ಆ ರೀತಿ ನಡೆಯುವದು ನಮ್ಮ ಧರ್ಮ. ಹಿಂದೂ ಮತವನ್ನು ಉದ್ಧರಿಸಿ ಭಾರತ ಮಾತೆಯನ್ನು ಕಾಪಾಡುವದು ನಮ್ಮ ಮುಖ್ಯ ಕರ್ತವ್ಯವು. ಎಲ್ಲಾ ಮಕ್ಕಳು ದೇವರ ಮಕ್ಕಳೆಂದೇ ಭಾವಿಸಿ ಒಪ್ಪ ಮನಸ್ಸಿನಿಂದ ಜಾತಿ ವ್ಯತ್ಯಾಸವಿಲ್ಲದೆ ವಿದ್ಯಾಭ್ಯಾಸವನ್ನು ಕೊಟ್ಟು ಮುಂದಿನ ಜನಾಂಗವನ್ನು ಉದ್ಧರಿಸಲೋಸುಗ ಆ "ಮಂದತ್ತವ್ವ" ದೇವರು ಮನಸ್ಸು ಕೊಡಲೆಂದು ನಾನು ಪ್ರಾರ್ಥಿಸುವವನಾಗಿರುತ್ತೇನೆ.

ಹರಟೆ ಮಲ್ಲ.

---

ಸ್ವಾಮಿ,

ತೂಚನುಕೇರಿ ಬಾವಿಯ ವಿಷಯ ತಾ. 8—6—28 ರಲ್ಲು ಹಿತಚಿಂತಕರೂ 13—7—28 ರಲ್ಲು ವಿ. ಮುತ್ತುಸಾಮಿ ಪಿಳ್ಳೆಯವರು ಬರೆದ ಬಾತ್ಮಿಗಳನ್ನೂ ಮತ್ತು ಹಿತಚಿಂತಕರು ತಾರೀಖು 27—7—28ರಲ್ಲು ಬರೆದ ಜವಾಬನ್ನು ನೋಡಿದೆನು. ಬಾವಿಯ ಕೆಲಸವೇನೋ 3/4 ಪಾಲು ಪೂರೈಸಿದೆಯೆಂದು ನಾನು ಪ್ರತ್ಯಕ್ಷ ನೋಡಿರುತ್ತೇನೆ. ಈ ಬಾತ್ಮಿ ಬರೆದ ಹಿತಚಿಂತಕರು ಹೀಗೆ ಬಾವಿಯ ಕಂಟ್ರಾಕ್ಟು ಎಷ್ಟೆಂದು ಮತ್ತು ಹಣ ಒಟ್ಟು ಜಮೆ ಆದದ್ದು ಎಷ್ಟೆಂದು ಬರೆದಿದ್ದರೆ ಉತ್ತಮವಿತ್ತು. ಇದು ತಿಳಿಯದೆ ಹೇಳಿಕೆ ಮಾತಿಗೂ ಮತ್ತು ಕಂಟ್ರಾಕ್ಟುದಾರರ ಮೇಲಿರುವ ಪ್ರೀತಿಗೂ ಬರೆದ ಬಾತ್ಮಿಯೆಂದು ಎಲ್ಲರೂ ತಿಳಿಯಬಹುದು. ಗ್ರಾಮಸ್ಥರಿಂದ ಕೂಲಿಗೆ ಸ್ಕೂಲು ಪೀಜು, ಪಾಪ್ಸು ಬಾದದ್ದು ಎಷ್ಟು ವಸೂಲ್ ಮಾಡಿದ್ದು ಮತ್ತು ಯಾರಿಂದ ಎಂದು ತಿಳಿಸಿದ್ದರೆ ಉತ್ತಮವಿತ್ತು. ಈ ಮೊದಲು ಹಳೇ ಸ್ಕೂಲ್ ಬಳಿ ಇರುವ ಬಾವಿಗೆ ವಿ. ಮುತ್ತುಸಾಮಿ ಪಿಳ್ಳೆಯವರು 50 ರೂಪಾಯಿ ಉಚಿತಾರ್ಥ ಇದನ್ನು ತೋಡಿಸಲು ಕೊಟ್ಟದ್ದಲ್ಲದೆ ಮತ್ಯಾರು ಕೊಟ್ಟಿರುವದಿಲ್ಲ. ಇದರ ಪ್ರಯೋಜನವನ್ನು ಈಗಲೂ ಗ್ರಾಮಸ್ಥರಲ್ಲಿರೂ ಸ್ಕೂಲ ವಿದ್ಯಾರ್ಥಿಯರೂ ಹೊಂದುತ್ತಿದ್ದಾರೆ ಅಲ್ಲದೆ ಮುತ್ತುಸಾಮಿ ಪಿಳ್ಳೆಯವರಿಗ ಯಾವ ಪ್ರಯೋಜನವೂ ಇಲ್ಲ. ಈಗ ತೆಗೆಯುವ ಬಾವಿಯ ಸಮೀಪ ಒಂದು ಸಸ್ಕೂಲನ್ನು ವಿ. ಮುತ್ತುಸಾಮಿ ಪಿಳ್ಳೆಯವರು ತನ್ನ ಸ್ವಂತ ಕರ್ಚಿನಿಂದ 1500—0—0 ರೂಪಾಯಿ ಕರ್ಚು ಹುಟ್ಟಿಸಿ ಹಾಡು ಸಹ ಹಾಕಿಸಿ ಕಟ್ಟಿಸಿರುವಾಗ ಈ ಬಾವಿಯ ಕಲ್ಸಕ್ಕೆ ದ್ರವ್ಯ ಸಹಾಯ ಮಾಡದ ಇರುವರೇ? ಹ್ಯಾಗೂ ಮುಂದಕ್ಕೆ ವಿದ್ಯಾರ್ಜನೆಗೆ ದ್ರವ್ಯಸಾಹಾಯ ಮಾಡುವ ಮಹಾತ್ಮರಿಗೆ ಉತ್ತೇಜನಕೊಡಬೇಕಲ್ಲದೆ ಕಾಲಿ ವಿಕಯ ಬರೆದು ಜನರ ಮನಸ್ಸಿಗೆ ಅಸಮಾಧಾನ ತಂದು ಪವಿತ್ರ 'ಕೊಡಗು' ಪತ್ರಿಕೆಯಲ್ಲು ಇಂಥಾ ನಿಜವಲ್ಲದ ಬಾತ್ಮಿ ಪ್ರಕಟಿಸಿದ ಹಿತಚಿಂತಕರ ಹೆಸರನ್ನು ಯಾಕೆ ಅಡಗಿಸಿದರೋ ವಾಚಕರೇ ಊಹಿಸಿರಿ. ಈ ವಿಷಯ ಬಾತ್ಮಿ ಇಲ್ಲಿಗೆ ಮುಗಿಯಿತು.

ಗ್ರಾಮಸ್ಥ

---

ದನಗಳ ಕಾಯಿಲೆ.

ಸ್ವಾಮಿ,

ಕಳೆದ ಎರಡು ವರ್ಷಗಳಿಂದ ದಕ್ಷಿಣ ಕೊಡಗಿನ ವೆಟರ್ನರಿ ಇನ್ಸಾಪೆ ಡಾಕ್ಟರು ಪೊನ್ನಂಪೇಟೆಯಲ್ಲಿ ಇಲ್ಲದೆಯೂ ಇದ್ದರೂ ಆಗಾಗ್ಗೆ ವರ್ಗವಾಗಿಯೋ ಅಥವ ರಜೆಯಲ್ಲಿ ಹೋಗಿಯೋ ಸುತ್ತು ಮುತ್ತಲಿನ ರೈತರ ದನಗಳಿಗೆ ಕಾಯಿಲೆ ಬಂದಾಗ ಅವರ ಸಹಾಯವು ದೊರೆಯದೆ ಉಂಟಾದ ನಷ್ಟವು ಅಲ್ಲಿಯ ರೈತರಿಗೆ ತಿಳಿಯದ ಸಂಗತಿಯಲ್ಲ.

ಮದ್ರಾಸಿನಲ್ಲಿ ಇಷ್ಟರ ವರೆಗೆ ತರಬೇತು ಹೊಂದುತ್ತಿದ್ದ ಒಬ್ಬ ವೆಟರ್ನರಿ ಡಾಕ್ಟರರು ಈ ವರ್ಷ ಪೊನ್ನಂಪೇಟೆಗೆ ಬಂದಿದ್ದಾರೆ. ಅವರು ಬಂದು ಬಹಳ ದಿನಗಳಾಗಲಿಲ್ಲ. ಆದರೆ ಸುತ್ತು ಮುತ್ತಲೂ ದನಗಳ ಕಾಯಿಲೆಯು ಹರಡಿ ದನಗಳು ದಿನೇ ದಿನೇ ಒಂದೊಂದಾಗಿ ಸಾಯುತ್ತಲಿವೆ. ಹ್ಯಾಗೂ ರೋಗವು ಅತಿ ಕ್ರಮಿಸಲಿಲ್ಲವೆಂದೂ, ಘೋರ ಪ್ರಮಾಣವನ್ನು ಹೊಂದಿಲ್ಲವೆಂದೇ ಜನರ ಭಾವನೆ. ಆದರೆ ಒಡ ರೈತನ ಕೊಟ್ಟಿಗೆಯು ಒಂದು ಎತ್ತು ಸತ್ತರೆ ಆ ರೈತನು ಸಾಲಗಾರನಾಗುತ್ತಾನೆಂಬುದು ಅನುಭವದ ವಿಷಯವೇ ಆಗಿದೆ. ಮೊದಲು ವೆಟರ್ನರಿ ಡಾಕ್ಟರು ಇದ್ದ ಸಮಯದಲ್ಲಿ ದನಗಳಿಗೆ ಕಾಯಿಲೆ ಬಂದಾಗ ನಿವಾರಣೆಗೋಸ್ಕರ ಬೇಕಾದ "ಸೀರಂ" ಇಲ್ಲವೆಂದೂ, ಸರಕಾರದಿಂದ ಇದಕ್ಕೆ ಬೇಕಾದಷ್ಟು ಹಣವು ದೊರಕುವುದಿಲ್ಲವೆಂದೂ, ಇರುವ "ಸೀರಂ" ಸ್ಟಾಕ್ ತೀರಿಹೋಯಿತೆಂದೂ ಹೇಳಿದ ಫಲವಾಗಿ ಅನೇಕ ದನಗಳು ಯಮನ ಬಾಯಿಗೆ ತುತ್ತಾದವು. ಇವೆಲ್ಲವನ್ನೂ ಇಲ್ಲವೇ ಇವುಗಳಲ್ಲಿ ಕೆಲವನ್ನಾದರೂ "ಸೀರಂ" ದೊರಕಿದ್ದ ಪಕ್ಷದಲ್ಲಿ ಉಳಿಸಿಕೊಳ್ಳುವ ಸಂಭವವಿತ್ತು. ನಿವಾರಣೆಗೆ ಅಗತ್ಯವಾದ ಸೌಕರ್ಯಗಳು ದೊರಕದೆ ಎಷ್ಟು ದನಗಳು ಸತ್ತವೆಂದು ಯಾರೂ ಲೆಕ್ಕ ಮಾಡಿರುವುದಿಲ್ಲ. ಅದರೂ ಇವೆಲ್ಲ ಕಳೆದು ಹೋದ ಸಂಗತಿಯಾಗಿದೆ.

ಈಗಲಾದರೂ ಸ್ಥಳೀಕ ವೆಟರ್ನರಿ ಡಾಕ್ಟರು ಈ ವಿಷಯಗಳನ್ನು ಅನಿಗಾಮನಸಿಗೆ ತಂದುಕೊಂಡು ಒಡ ರೈತರಿಗೆ ತಮ್ಮ ದನಗಳನ್ನು ರಕ್ಷಿಸಿಕೊಳ್ಳಲು ಅಗತ್ಯವಾದ ನಿವಾರಣೋಕ 'ಸೀರಂ'ನ್ನೂ ಇನ್ನೂ ಇತರ ಸೌಕರ್ಯಗಳನ್ನು ಈಗಾಗಲೇ ಒದಗಿಸಿಕೊಂಡು ಸುತ್ತ ಮುತ್ತಲಿನ ರೈತರು ಬಂದಾಗ ಇಲ್ಲವೆಂದೆನ್ನದೆ ದನಗಳ ಕಾಯಿಲೆಯನ್ನು ಆದಷ್ಟು ಬೇಗ ದೂರೀಕರಿಸಲು ಸಕಲ ಪ್ರಯತ್ನವನ್ನೂ ಮಾಡುವರೆಂದು ಭಾವಿಸುತ್ತೇನೆ.

'ರೈತ'


ನೀವು ನಿರ್ಬಲಸ್ತರಾಗಿ ಯಾಕೆ ನರಳುವಿರಿ?

ಇಪ್ಪತ್ತು ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

ಸಾಲಂಮಿಶ್ರಿ ಮುರಬ್ಬ

ಸೇವನೆಯಿಂದ ಎಂಥಾ ಧಾತು ಜನ್ಯವಿಕಾರಗಳನ್ನೂ, ನರಗಳ ಶಕ್ತಿ ಕುಂದಿಹೋಗಿರುವದನ್ನೂ ಮೆದುಳಿನ ಬಲಹೀನತೆಯನ್ನೂ ಇಂಥಾ ರೋಗಗಳನ್ನೆಲ್ಲಾ ಯುಕ್ತಿಯಿಂತೆ ಮಾಯಹೊಂದಿಸತಕ್ಕ ತನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸುತ್ತದೆ. ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ಮಹನೀಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ಯಾರೂ ತರಿಸಿ ನೋಡಬಹುದು. ಒಂದು ಡಬ್ಬಿ ೧೫ ದಿನಗಳ ಸೇವನೆಯಿಂದಲೇ ಇದರ ಗುಣವು ತೋರಿಬರುವುದು. ೨-೩ ಡಬ್ಬಿಗಳ ಸೇವನೆಯಿಂದ ಜನ್ಮಾಂತ್ರದವರೆಗೂ ಸಂಪೂರ್ಣ ಗುಣವನ್ನುಂಟುಮಾಡುವದು ನಮ್ಮ ಟ್ರೇಡ್ ಮಾರ್ಕು ನೋಡಿ ಡಬ್ಬಿ ತೆಗೆದುಕೊಳ್ಳಿರಿ. ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಅವಶ್ಯಕವಿರುತ್ತೆ.

ಕ್ರಯ ಡಬ್ಬಿ ೧ಕ್ಕೆ ೨—೦—೦. ಟಪ್ಪಾಲು ಖರ್ಚು ೧-೨ ರಿಂದ ೩ ಡಬ್ಬಿಗಳ ವರೆಗೆ ೦—೮—೦.

ಡಿ. ಮುನ್ನಾಲಾಲ್,

ಡೆಲ್ಲಿ ನೇಟೀವ್ ಡಾಕ್ಟರು, ಸಾಲಂಮಿಶ್ರಿ ಮುರಬ್ಬ ಫಾರ್ಮಸಿ, ಬೆಂಗಳೂರು ಸಿಟಿ

12—4

Please Call at

**THE GENERAL TRADING CO., MERCARA,**

Opposite Coronation Gardens.

SOLE AGENTS FOR VAUXHALL, OAKLAND, PONTIAC & CHEVROLET CARS & TRUCKS FOR COORG.

THE 1928 NEW CHEVROLET

New BEAUTY! New PERFORMANCE!! New FEATURES AND FOUR WHEEL BRAKES!!!

QUALITY AT LOW COST.

**THE COORG FOOTWEAR MART, MERCARA.**

The house for smart foot wear. Monsoon boot a speciality.

Prompt attention. Prices very moderate.

12–8 Attended by very efficient workmen.

# Arms, Ammunition and Shooting Requisites!!!



1928 Illustrated Catalogue Just Issued Free on Application!

| | | | | |
|---|---|---|---|---|
| D. B. B. L. Rifles | Rs. 120 | to | Rs. 2750. |
| S. B. B. L. „ | „ 35 | to | 950. |
| D. B. B. L. Guns | „ 50 | to | 1350. |
| S. B. B. L. „ | „ 35 | to | 275 |
| D. B. M. L. „ | „ 45 | to | 135 |
| S. B. M. L. „ | „ 30 | to | 80. |
| B. L. Revolvers | „ 35 | to | 350. |
| Automatic Pistols | „ 30 | to | 150 |

Brilliant Search Light Lamp For Shooting, Camping, Fishing and such other Night Sports and work Rs 30 Free delivery.

**Also swords, Daggers, Cartridges, Caps, Gunpowder and Shooting Requisites at the most competitive rates.**

GOOLAMHUSAIN ALLIBHOY & SONS.

**Largest Importers of Firearms and Ammunition Cheapest priced firm in India,**

24–2) 210 Abdul Rehman Street, BOMBAY.

**ಫ್ರಾನ್ಸಿ ಲೀವರ್ ಪಾಕೆಟ್ ವಾಚ್.**

(ಬಹುಮಾನಗಳ ಸಹಿತ 4–12–0)

ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ಜೇಬಿಗೆ ಅಡಕವಾಗಿಯೂ ಇರುವಂತೆ ಚಿತ್ರದಲ್ಲಿ ತೋರಿಸಿ ಹಿಂದುಗಡೆ ಚಿತ್ರ ಕೆಲಸಮಾಡಲ್ಪಟ್ಟಿರುವ ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ್ ಮಾಡಲ್ಪಟ್ಟಿರುವದು ಗಾಳಿ, ಧೂಳು ಸೇರದಂತೆ ಹಿಂಬಾಗದಲ್ಲಿ ಗ್ಲಾಸ್ ಡೋರ್ ಇರುವದು. ಈ ಗಡಿಯಾರವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂಮೆಂಟ್ಸ್‌ಗಳಿಂದ ತಯಾರಿಸಿದೆ. ಸದರಿ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 10 ಬಹುಮಾನಗಳನ್ನು ಕೊಡುವೆವು.—ಬಹುಮಾನಗಳ ವಿವರ.—ಫೌಂಟನ್ ಪೆನ್ನು 1, ಇಂಗ್ಲೀಷ್ ಸೆಂಟ್ ಬಾಟಲ್ 1, ವಜ್ರದ ಗುಂಡಿಗಳು 4, ಗಡಿಯಾರದ ಸರಪಣಿ 1, ಪೆನ್ನ ಕತ್ತಿ 1, ಕೈ ಗುಂಡಿಗಳ ಸೆಟ್ 1, ಈ 10 ಬಹುಮಾನಗಳು ಮತ್ತು ಖಾತ್ರಿಯಾದ 3ವರ್ಷ ಗ್ಯಾರಂಟಿ ಸಹಿತ ಗಡಿಯಾರ 1 ಕ್ಕೆ 4–12–0.

ವಿಳಾಸ.—ಲೀಗಲ್ ಟ್ರೇಡಿಂಗ್ ಕಂಪೆನಿ,

52–13 ಪೋ. ಬಾಕ್ಸ್ ನಂ. 243 ಮದರಾಸು.



ಡಬ್ಬಲ್ ಮತ್ತು ಸಿಂಗಲ್ ತೋಟದ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ನೋಡಿರಿ.

**ಯನ್. ವಿ. ರಾಮಾನಂಜಂ ಚೆಟ್ಟಿ ಅಂಡ್ ಕಂಪೆನಿ.**

ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.

24—11 12. ಬ್ರಾಡ್ವೇ. ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)

# ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

## ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರವದ ಸಿಂಗಲ್ ರೀಡ್ಸ್ ಹಾರ್ಮೋನಿಯಂಗಳು.

| | |
|---|---|
| ದಿಲ್ ಬಹಾರ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 50—8—0 |
| ಶಕುಂತಲಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 40—0—0 |
| 'ಮೋಹನ್ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 37—8—0 |
| 'ಮೋಸ್ಲೇಂ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 35—0—0 |
| 'ಮಹರಾಜಾ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 32—8—0 |

ಸಚಿತ್ರ ಕ್ಯಾಟಲಾಗ್ ಬಗ್ಗೆ 6 ಪೈ ಸ್ಟಾಂಪು ರವಾನಿಸಿ.

ಉತ್ತಮ ತರದ 14 ಕ್ಯಾರೆಟ್ ಬಂಗಾರದ ನಿಬ್ಬು ಉಳ್ಳ ಫೌಂಟನ್ ಪೆನ್ನುಗಳು.

| | |
|---|---|
| ಪ್ಲೈಕಾ ಬಿಲ್ ಫೌಂಟನ್ ಪೆನ್ 1ಕ್ಕೆ | 3—8—0 ಮತ್ತು 3—12—0 |
| ಸವರ್ನ್ ಪೆನ್ ಫೌಂಟನ್ ಪೆನ್ 1ಕ್ಕೆ | 3—0—0 ಮತ್ತು 3—8—0 |
| ಕಾಂಪ್ಯಾಕ್ಟ್ ಸೆಲ್ಫ್ ಫಿಲ್ಲರ್ಸ್ ಫೌಂಟನ್ ಪೆನ್ 1ಕ್ಕೆ | 4—8—0 |
| ವಾಟರ್ ಮ್ಯಾನ್ ಫೌಂಟನ್ ಪೆನ್ 1ಕ್ಕೆ | 8—0—0 ಮತ್ತು 8—8—0 |
| ವಾಟರ್ ಮ್ಯಾನ್ ಸೆಲ್ಫ್ ಫಿಲ್ಲಿಂಗ್ ಫೌಂಟನ್ ಪೆನ್ 1ಕ್ಕೆ | 12—0—0 ಮತ್ತು 15—0—0 |

ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು

| | |
|---|---|
| ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ | 4—6—0 |
| ವೆಸ್ಟ್‌ಕ್ಲಾಕ್ ಕಂಪನಿಯ ಅಲಾರಂ ಟೈಂಪೀಸ್ 1ಕ್ಕೆ | 8—0—0 |
| ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ | 9—5—0 |
| ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ | 6—12—0 |
| ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ | 6—10—0 |

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು, ಮೈಸೂರು.

52 15

## ಪ್ರಕಟಣೆ.

ಕೊಡಗ ... ಸಹಕಾರಿ ಬ್ಯಾಂಕ್, ... ಕೊಆಪರೇಟಿವ್ ...

ರೂ

| | | |
|---|---|---|
| ... | — | 10,0.. |
| ... | — | 17 1.. |
| ... | — | 1,82,3.. |

... ಸಹಕಾರಿ ಸಂಘಗಳಿಗೆ ... ಕೊಡತಕ್ಕದ್ದು.

... ಅಥವ ಹೆಚ್ಚಿನ ವಾಯಿದೆಯ ... ಠಾಲಿಯಾನ ರೂ 5...ರ ... ಕಡಿಮೆ ವಾಯಿದೆಯ ... ಠಾಲಿಯಾನ 4ರ ಬಡ್ಡಿ ದೊರೆಯುತ್ತ ... ರಿಜಿಸ್ಟ್ರಾರವರು ...

| | |
|---|---|
| ...ಡೆಂಟರು | ...ಸಿಡೆಂಟ್. |
| ಕೋಡಂಡ ಅಪ್ಪಯ್ಯನವರು, | ಕೊಂಗಟ್ಟಿರ ಅಪ್ಪಯ್ಯ |
| ರಾವ್ ಬಹದ್ದೂರ್ | ನವರು. |

ಸೆಕ್ರಟರಿ

... ವೆಂಕಟಯ್ಯನವರು ಬಿ ಎ, ಬಿ ಎಲ್.

ತಾರೀಖು 1—7—1927

## ನೋಟೀಸು.

... "ಕೊಡಗು" ಪತ್ರಿಕೆಯ ... ಒಪ್ಪಿಕೊಂಡದ್ದರಿಂದ, ... ಏಜಂಟರುಗಳಿಗೆ ... ಪೂವಯ್ಯನವರ ಒವಾಚ್ಚಾರಿಕೆ ... ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ... ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ... ರಶೀತಿ ಪಡೆಯಬೇಕಾಗಿ ಕೋರಿದೆ

ಏಜಂಟರುಗಳು

... ಭಾಗಕ್ಕೂ—ಮೆ. ಪೇರಿಯಂಡ ಪೂವ್ವಯ್ಯನವರು

...—ಮೆ ... ಚಿಣ್ಣಪ್ಪನವರು

...—ಮೆ ಅಜ್ಜಮಾಡ ಮಾದಪ್ಪನವರು

...—ಮೆ ... ಅಪ್ಪಯ್ಯನವರು

... ಏಜಂಟರುಗಳು

...—ಮೆ ... ಸಂಬಪ್ಪನವರು,

...—ಮೆ ... ಸುಬ್ಬಯ್ಯನವರು,

...—ಮೆ ಜಮ್ಮಡ ಮಾದಪ್ಪನವರು,

...—ಮೆ. ... ಮಾದಪ್ಪನವರು,

...—ಮೆ ... ಮುದ್ದಯ್ಯನವರು,

...—ಮೆ. ಬಿ ಮಾದಯ್ಯನವರು,

... ಭಾಗಕ್ಕೂ—ಮೆ ... ಕುಟ್ಟಪ್ಪನವರು,

ಮ್ಯಾನೇಜರ್,

ಕೊಡಗು ಲಿಮಿಟೆಡ್, ಮಡಿಕೇರಿ.

## ಮಾರಾಟಕ್ಕೆ ಸಿದ್ಧವಾಗಿವೆ.

... ಪ್ರತಿಯೊಬ್ಬ ... ಪರಸ್ಪರ ಸಹಾಯಕ ಸಂ... ರಿಜಿಸ್ಟ್ರಾರವರ ... ಬರೆಯಲ್ಪಟ್ಟದಲ್ಲಿ ... ಸರಿಯಾಗಿ ಒಂದೆ ... ರೂಲ್ಸಿಗನುಸಾರ ... ಪಾಸ್ ಬುಕ್ಕು ... ಸ್ಟೋರಿ ... ಮ್ಯಾನೇಜರ್,

"ಕೊಡಗು" ಮಡಿಕೇರಿ


**... AMMUNITION MART.**

**... Noorbhoy.**



... Abdul Rehman Street, near ... BOMBAY 3

Telegraphic Address—"SHOOTER" Bombay.

(37 49) **"Please write for our Catalogue 1928—1929."**

**ಕಟುಕಷಾಯ ಮತ್ತು ಜರಕ್ಷೆ:**—ಇದು ಇಂಜಕ್ಷನ್ ಮತ್ತು ಕ್ವಿನೀನು ... ಗುಣವಾಗದಿರುವ ಮಲೆ ಜ್ವರ ... ಬರುವ ಜ್ವರ 3—4 ದಿವಸಕ್ಕೊಂದು ... ಬರುವ ಜ್ವರ ... ಗುಣಕೊಡುತ್ತದೆ. ... ರೂ 1—8—0 ... ರೂ 4—0—0 ... ರೂ 7—8—0 ... ರೂ 14

**ಚಂದನ-ಸವ**—ಇದು ... ಮೂತ್ರ ... ಮೂತ್ರ ... 3—8—0 6—12—0

**ರೋಮನಾಶಿನಿ.**— ಈ ಹುಡಿಯನ್ನು ... ರೂ 1 1 ... 3—8—0

**ಮನೋಲ್ಲಾಸಿನಿ ತೈಲ:**— ... ನಮ್ಮ ಕಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ.

52—45 ೧ ಮಂಗಳೂರು



ರಸ್ತಾರಿಕೆ ಮಾಲುಗಳಿಗೆ ಮೋಸ ಹೋಗಬೇಡಿರಿ!

ನಮ್ಮ ಒಡವೆಗಳಿಗೆ ಕೂಡುವ ... ಪ್ರತಿಫಲವಿದ

ಅಜನೂರಾಯಿಸಿ ನೋಡಿರಿ.




ಇನಾಮಿನ ಬಟ್ಟೆಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ.

ಎಲ್ಲಾ ಆರ್ಡರುಗಳನ್ನೂ ಭಲೇ ರೀತಿಯಿಂದಲೂ, ಶೀಘ್ರವಾಗಿಯೂ ಗ್ಯಾರಂಟಿಯೊಡನೆ ಬಾರಿ ಮಾಡಲಾಗುವದು

ಕೇಶವಜಿಂದ್ ದೇವಚಂದ್,

ಜ್ಯುಲ್ಲರ್, (ಕೆಟಲಾಗ್ ಮುಫತ್).

12—12 21 ಚೈನಾ ಬಜಾರ್ ರೋಡ್, ಮದರಾಸು.



# EMPIRE OF INDIA
# LIFE ASSURANCE COMPANY, LIMITED.

(Established 1897.)

**FOR THE YEAR ENDING 29th FEBRUARY 1928.**

| | |
|---|---|
| New Business Exceeds | Rs. 3 16 00 000 |
| Income Exceeds | Rs. 54 95 000 |
| Assets Exceed | Rs. 3 35 64,000 |

**Wanted Agents in Important Places in Coorg**

| | | |
|---|---|---|
| HEAD OFFICE | | BRANCH OFFICE |
| Empire of India Life Building, | | 152, Commercial Street, |
| BOMBAY | 24—8 | BANGALORE |



ಸ್ಥಾಪನೆ 1874. ಹೆಡ್ ಆಫೀಸು—ಬೊಂಬಾಯಿ.

# ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

## 1927

ಅತ್ಯುತ್ತಮವಾದ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ

ಓರಿಯಂಟಲ್ ಕಂಪೆನಿಯ ಜನಾನುರಾಗವನ್ನು ಹೆಚ್ಚು ... ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

| | | | | |
|---|---|---|---|---|
| 1925 | — | 1... | — | ರೂ 2,5.. 42.. |
| 1926 | — | 1..1 | — | ರೂ ..91,33 ..0 |
| 1927 | — | 2..8 | — | ರೂ 4 ..8.. 5 |

—ಪ್ರೀಮಿಯಂ ಉತ್ಪತ್ತಿ—

| | | |
|---|---|---|
| 1925 | ರೂ | 9 66 000 |
| 1926 | ರೂ | 1,05,33,000 |
| 1927 | ರೂ | 1 21 53 000 |

ಇದುವರೆಗೆ ಮೆಂಬರರಿಗೆ ಪಾವತಿ ಮಾಡಿದ ಹಣವು 10½ ಕೋಟಿ ... ಕಂಪೆನಿಯ ಫಂಡು ... ಕೋಟಿ ... ಜೀವವಿಮೆ ಮಾಡಬೇಕೆಂದಿರುವವರು ... ಉಪಯೋಗಿಸಬಹುದು.

| | |
|---|---|
| ಓರಿಯಂಟಲ್ ಬಿಲ್ಡಿಂಗ್ಸ್, | ಎಲ್. ಆರ್. ಕೃಷ್ಣಸ್ವಾಮಯ್ಯರ್, |
| ಕ್ರಾಫ್ ಪರೇಡ್, ... | ... |


Printed & published by I. I. Bellappa, at "Kodagu" Press, Mercara for "Kodagu" Ltd.

Reg. No. M. 1550.
If not delivered please return to
"KODAGU" OFFICE: MERCARA.

# ಕೊಡಗು.

ಸತ್ಯೇನ ಧೂತಕಯುಯ ತಿತ್ಯಾ ಸಾತಿ ಸ್ಯುಕ್ತನಾ || ಅಸ್ಯಮಿತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ವಾರ್ಷಿಕ ಚಂದಾ ರೂ. ೩-೮-೦.

ಸಂಪಾದಕ-ತಿಂದ್ಯಂಡ ಬಿ. ತಿಮ್ಮಯ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೮} ಮಡಿಕೇರಿ, ಸಾ ೧೯೨೮ನೇ ಇಸವಿ ಸೆಪ್ಟಂಬರ್ ತಾರೀಕು ೭ ನೇ ಶುಕ್ರವಾರ [ಸಂಚಿಕೆ ೦೫

## ESTATE REQUISITES

| | | | |
|---|---|---|---|
| 5 lbs Yates' hammer headed mamooties | Rs 3 0 0 Each. | Weeding forks @ | Rs. 1 4 0 Each |
| 4½ " " " " | " 2 14 0 " | Garden trowels " | Rs 1 4 0 " |
| 4 " " " " | " 2 12 0 " | Pick axes " | Rs. 1 8 0 " |
| Felling axes at Rs 3 0 0 & | " 3 4 0 " | Bill hooks " | Rs 3 14 0 " |
| Grubbing mattocks at | " 3 4 0 " | Digging forks " | Rs 4 0 0 " |

## MONSOON EQUIPMENT.

| | | | |
|---|---|---|---|
| Planter boots | Rs. 16 8 0 | Dales' dubbin per tin | Rs. 0 8 0 |
| Marrs' oil (water proof) per tin | Rs 2 0 0 | Umbrellas | Rs 4 8 0 |

52—32 SPENCER & CO. LTD. General Merchants MERCARA.

## V. SUBRAMANIA IYER
*Manufacturing,*
## JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423,
TRIPLICANE, MADRAS.

Catalogue Free
to Bonafide Enquirers

Manufacture of
HIGH CLASS
GEMSET JEWELS.
a speciality.

The special features
of my productions are —
1 Best QUALITY.
2. Latest novel designs
3. Promptest execution
4 Neat & artistic finish.
5. Most moderate prices.

GOLD
or
SILVERWARE
of all descriptions
neatly executed

52—52

## ನೀವು ನಿರ್ಬಲಸ್ಥರಾಗಿ ಯಾಕೆ ನರಳುವಿರಿ?

ಇಪ್ಪತ್ತು ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

## ಸಾಲಂಮಿಸ್ರಿ ಮುರಬ್ಬ

ಸೇವನೆಯಿಂದ ಎಂಥಾ ಧಾತು ಬಲ್ಯವಿಕಾರಗಳನ್ನೂ, ನರಗಳ ಶಕ್ತಿ ಕುಂದಿಹೋಗಿರುವದನ್ನೂ ಮೆದುಳಿನ ಬಲಹೀನತೆಯನ್ನೂ ಇಂಥಾ ರೋಗಗಳನ್ನೆಲ್ಲಾ ಯಕ್ಷಿಣಿಗುಂಡಿ ಮೊಯಮೊಂದಿಸತಕ್ಕ ತನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸುತ್ತದೆ. ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ಮಹನೀಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ಯಾರೂ ತರಿಸಿ ನೋಡಬಹುದು. ಒಂದು ಡಬ್ಬಿ ೧೫ ದಿನಗಳ ಸೇವನೆಯಿಂದಲೇ ಇವರ ಗುಣವು ತೋರಬರುವದು. ೨-೩ ಡಬ್ಬಿಗಳ ಸೇವನೆಯಿಂದ ಜನ್ಮಾಂತ್ರದವರಿಗೂ ಸಂಪೂರ್ಣ ಗುಣವನ್ನುಂಟುಮಾಡುವದು ನಮ್ಮ ಟ್ರೇಡ್ ಮಾರ್ಕು ನೋಡಿ ಡಬ್ಬಿ ತೆಗೆದುಕೊಳ್ಳಿರಿ. ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಅವಶ್ಯಕವಿರುತ್ತೆ.

ಕ್ರಯ ಡಬ್ಬಿ ೧ಕ್ಕೆ ೨-೦-೦. ಟಪ್ಪಾಲು ಖರ್ಚು ೧ರಿಂದ ೩ ಡಬ್ಬಿಗಳವರೆಗೆ ೦-೮-೦.

ಡಿ. ಮನ್ನಾಲಾಲ್,
12—6 ಹೆಡ್ಡ ನೇಟೀವ್ ಡಾಕ್ಟರು, ಸಾಲಂಮಿಸ್ರಿ ಮುರಬ್ಬ ಫಾರ್ಮಸಿ, ಬೆಂಗಳೂರು ಸಿಟಿ.

## ಅ ಪೂ ರ್ವ ಸಂ ದ ರ್ಭ.

ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸಬೇಕಾದರೆ ಇದೀಗ ಅಪೂರ್ವ ಸಂದರ್ಭ.

## ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ, ಮುಪ್ಪಡರ್ಕೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಮಾಡುವವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ! ಧರ್ಮಾರ್ಥ!!

## ಕಾ ಮ ಶಾ ಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.—

ಆತಂಕನಿಗ್ರಹ ಔಷಧಾಲಯ,
52—6 ಚಿಕ್ಕಪೇಟೆ, ಬೆಂಗಳೂರು ಸಿಟಿ.

# ಕೊಡಗು.

ಸನ್ ೧೯೨೮ ನೇ ಇಸವಿ
ಸೆಪ್ಟಂಬರ್ ತಾ. ೭ ನೇ ಶುಕ್ರವಾರ.


## ಸರ್ವ ಪಕ್ಷಗಳ ಪರಿಷತ್ತು.

ಕಳೆದ ತಿಂಗಳ ಅಂತ್ಯದಲ್ಲಿ ಲಕ್ನೋದಲ್ಲಿ ನಡೆದ ಎಲ್ಲಾ ಪಾರ್ಟಿಗಳ ಪರಿಷತ್ತು ಹಿಂದೂದೇಶದ ಸ್ವರಾಜ್ಯದ ಹೋರಾಟದ ಇತಿಹಾಸದಲ್ಲಿ ಬಹು ಪ್ರಾಮುಖ್ಯತೆಯನ್ನು ಹೊಂದಿದೆ ಎಂಬುದರಲ್ಲಿ ಸಂಶಯವಿಲ್ಲ. ಹಲವು ವರ್ಷಗಳಿಂದೀಚೆ ಭಾರತ ಭೂಮಿಯ ಎಲ್ಲಾ ಪಂಗಡಗಳು ಒಂದಾಗಿ ಸೇರಿ ಹಿಂದೂದೇಶದ ರಾಜಕೀಯ ವಿಚಾರವನ್ನು ಕುರಿತು ಚರ್ಚಿಸಿ ಒಗ್ಗಟ್ಟಿನ ತೀರ್ಮಾನಕ್ಕೆ ಬಂದದ್ದು ಇದೇ ಮೊದಲೆನ್ನಬಹುದು. ಈ ಸಭೆಯಲ್ಲಿ ಹಿಂದೂಸ್ಥಾನದ ಎಲ್ಲಾ ಪ್ರಾಮುಖ್ಯ ಜಾತೀಯ ಮತ್ತು ರಾಜಕೀಯ ಪಕ್ಷಗಳಾದ ಹಿಂದೂ ಮಹಾಸಭೆ, ಖಿಲಾಫತ್ ಕಮಿಟಿ, ಮುಸ್ಲಿಮ್ ಲೀಗ್, ಇಂಡಿಯನ್ ನೇಶನಲ್ ಕಾಂಗ್ರೆಸ್ ಲಿಬರಲ್ ಫೆಡರೇಶನ್, ಸಿಖ್ ಲೀಗ್, ಜಮಯತ್ತುಲ್ ಉಲೆಮಗಳ ಪ್ರತಿನಿಧಿಗಳು ಹಾಜರಿದ್ದರು. ಅಖಿಲಭಾರತ ಪ್ರಸಿದ್ಧಿ ಹೊಂದಿರುವ ಯಾವ ಪಾರ್ಟಿಯ ಪ್ರಾತಿನಿಧ್ಯವೂ ಅಲ್ಲಿ ಇಲ್ಲದೆ ಇರಲಿಲ್ಲವಾದುದರಿಂದ ಈ ಪರಿಷತ್ತಿನ ತೀರ್ಮಾನಗಳು ಹಿಂದೂ ದೇಶದ ಎಲ್ಲಾ ಪಕ್ಷಗಳ ಒಗ್ಗಟ್ಟಿನ ಅಭಿಪ್ರಾಯವೆಂಬದನ್ನು ಅಲ್ಲಗಳೆಯಲು ಯಾರಿಗೂ ಧೈರ್ಯ ಸಾಲದು. ರಾಜಕೀಯ ಗುರಿಯಲ್ಲಿಯಾಗಲೀ ಮುಂಬಾರು ಚುನಾವಣೆಯಲ್ಲಿಯಾಗಲೀ ತೀವ್ರ ಮತ ಭೇದಗಳು ಹುಟ್ಟಿ ಸಭೆಯು ಗಲಿಬಿಲಿಯಲ್ಲಿ ಅಂತ್ಯಗೊಳ್ಳುವದೆಂದು ಯೋಚಿಸಿದ್ದ ಇಂಡಿಯಾದ ಸ್ವರಾಜ್ಯ ವಿರೋಧಿಗಳಿಗೆ ಕುಂಚವೂ ನಿರಾಶೆಯುಂಟಾಗದಿರದು. "ನಿಮಗೆ ಶಕ್ತಿ ಇದ್ದರೆ ನಿಮ್ಮ ದೇಶಕ್ಕೆ ಒಗ್ಗಟ್ಟಿನ ರಾಜಕೀಯ ರಚನೆಯನ್ನು ತಯಾರಿಸಿರಿ" ಎಂದು ಹಂಗಿಸಿದ ಇಂಡಿಯಾ ಸ್ಟೇಟ್ ಸೆಕ್ರೆಟರಿಯಾದ ಲಾರ್ಡ್ ಬರ್ಕನ್‌ಹೆಡ್ಡರವರಿಗೆ ಈ ಸಭೆಯು ಯೋಗ್ಯವಾದ ಪ್ರತಿಕಾರವನ್ನಿತ್ತದ್ದು ಸಂತೋಷದ ಸಂಗತಿಯಾಗಿದೆ. ಲಕ್ನೋದ ಒಗ್ಗಟ್ಟಿನ ತೀರ್ಮಾನವು ಹಿಂದೂದೇಶದ ಉದ್ದಗಲಕ್ಕೂ ತೃಪ್ತಿಯನ್ನೂ ಆನಂದವನ್ನೂ ಉಂಟುಮಾಡಿರುವಲ್ಲಿ ಇಂಡಿಯಾದ ಅಹಿತಕಾಂಕ್ಷಿಗಳಲ್ಲಿ ಅಷ್ಟೇ ಅತೃಪ್ತಿಯನ್ನೂ ಹೊಟ್ಟೆಬೇಗೆಯನ್ನೂ ಹುಟ್ಟಿಸದೆ ಇರಲಿಕ್ಕಿಲ್ಲ.

ಈ ಪ್ರಾಮುಖ್ಯ ಒಗ್ಗಟ್ಟಿನ ತೀರ್ಮಾನಕ್ಕೆ ಕಾರಣಗಳ್ಯಾವವು ಎಂಬದನ್ನು ಸ್ವಲ್ಪ ವಿಚಾರಿಸುವದು ಉಚಿತವಾಗಿದೆ. ಸಹೋದರರುಗಳಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಕಷ್ಟ ಕಾಲದಲ್ಲಿ ಅವುಗಳನ್ನು ಮರೆತು ಒಂದಾಗುವಂತೆ, ಹಿಂದೂ ದೇಶದ ಜನರಲ್ಲಿ ಜಾತಿ, ಮತ, ತತ್ವ ಭೇದಗಳಿದ್ದರೂ ತಮ್ಮೆಲ್ಲರ ದಾಸ್ಯತ್ವವನ್ನು ತೊಲಗಲಾಡಿಸಿ ಸ್ವತಂತ್ರರಾಗುವ ಹೋರಾಟದ ಈ ಬಿಕ್ಕಟ್ಟಿನ ಸಮಯದಲ್ಲಿ ತಮ್ಮಲ್ಲಿರುವ ಭಿನ್ನ ಭೇದಗಳನ್ನು ಮರೆತು ಒಂದಾಗಿ ಸೇರಿದ್ದೇ ಈ ಪರಿಷತ್ತಿನ ಜಯಕ್ಕೆ ಮುಖ್ಯ ಕಾರಣವೆಂಬುದರಲ್ಲಿ ಸಂದೇಹವಿಲ್ಲ. ಇಡೀ ಹಿಂದೂ ಸ್ಥಾನದ ಕನಿಷ್ಠ ಬೇಡಿಕೆಯಾದ ವಸಾಹತು ಸ್ವರಾಜ್ಯವನ್ನು ಸ್ಥಾಪಿಸಬೇಕೆಂದು ನೆಹರು ಕಮಿಟಿಯವರು ಮಾಡಿದ ಸಿಫಾರಸ್ಸು ಇನ್ನೊಂದು ಕಾರಣವಾಗಿದೆ. ಸಂಪೂರ್ಣ ಸ್ವಾತಂತ್ರ್ಯ ಸರ್ಕಾರ ಬೇಕೆನ್ನುವ ನೇಶನಲ್ ಕಾಂಗ್ರೆಸ್ಸಿನ ಧ್ಯೇಯಕ್ಕೆ ಒಪ್ಪುವ ಕೆಲವು ಮುಖ್ಯ ಮುಂದಾಳುಗಳೂ ಕೂಡ ಹಿಂದೂ ದೇಶದ ಎಲ್ಲಾ ರಾಜಕೀಯ ಪಾರ್ಟಿಗಳ ಒಪ್ಪಿಗೆಯನ್ನು ಪಡೆಯುವದಕ್ಕಾಗಿ ಉಪನಿವೇಶಗಳ ಸ್ವರಾಜ್ಯಕ್ಕೆ ಸಮ್ಮತಿಸಿರುವರು.

ಆದರೆ ಉತ್ಸಾಹಭರಿತರಾದ ಯುವಕ ಜನಾಂಗಕ್ಕೆ ಇದು ತೃಪ್ತಿಯಾಗಲಿಲ್ಲ. 'ಸಂಪೂರ್ಣ ಸ್ವಾತಂತ್ರ್ಯವೇ ಹಿಂದೂದೇಶಿಯರ ಧ್ಯೇಯವಾಗಿರಬೇಕು. ಅದನ್ನು ಸಾಧಿಸಲು ಪ್ರತಿಯೊಬ್ಬ ಹಿಂದೀಯನೂ ಪ್ರಯತ್ನಿಸಬೇಕಲ್ಲದೆ, ಅರ್ಧಮರ್ಧ ಸ್ವತಂತ್ರವುಳ್ಳ ವಸಾಹತು ಸ್ವರಾಜ್ಯಕ್ಕೆ ಒಪ್ಪಿಕೊಂಡರೆ ಬ್ರಿಟಿಷ್ ಸಾಮ್ರಾಜ್ಯವು ಬೇರೆ ಅನ್ಯ ರಾಜ್ಯಗಳ ಮೇಲೆ ನಡಿಸುವ ದಬ್ಬಾಳಿಕೆಯಲ್ಲಿ ಭಾಗಿಗಳಾಗ ಬೇಕಾಗುವದರಿಂದ ಬ್ರಿಟಿಷರ ಸಂಬಂಧವೇ ನಮಗೆ ಬೇಡ,' ಎಂದು ಮುಂತಾಗಿ ನೆಹರು ಕಮಿಟಿಯ ವರದಿಯನ್ನು ಖಂಡಿಸಿ, ವೀರಪಕ್ಷದ ಮುಂದಾಳುತನವನ್ನು ವಹಿಸಿ ಮಾತಾಡಿದ ಪಂಡಿತ ಜವಹಿರ್ ಲಾಲ್ ನೆಹರುರವರ ಭಾಷಣಕ್ಕೆ ಸಭೆಯವರಲ್ಲಿ ಹೆಚ್ಚಿನವರು ಒಪ್ಪಿದ್ದು ಹಿಂದೂ ದೇಶದ ಮುಂದಿನ ರಾಜಕೀಯ ಪರಿಸ್ಥಿತಿಯು ಹೇಗಾಗುವದೆಂಬದನ್ನು ಸೂಚಿಸುತ್ತದೆ. ಇದರಿಂದ ಬ್ರಿಟಿಷ್ ಸಾಮ್ರಾಜ್ಯವಾದಿಗಳು ಕಣ್ಣು ತೆರೆಯಬೇಕಾಗಿದೆ. ಈಗ ಅಲಕ್ಷ್ಯ ಭಾವವನ್ನು ವಹಿಸಿದರೆ ಸಂತರ "ತಡವಾಯಿತು" ಎನ್ನುವ ಕಾಲವು ಬಂದೊದಗುವದು. ಶಾಂತ ಪಕ್ಷದ ಹಿಂದೀಯರೂ ತಮ್ಮ ಧ್ಯೇಯವನ್ನು ಸಾಧಿಸಲು ದೊರೆತಿರುವ ಈ ಸುಸಂಧಿಯನ್ನು ಕಳಕೊಳ್ಳದೆ, ಸೈಮನ್ ಕಮಿಷನಿನೊಂದಿಗೆ ಸಹಕರಿಸದೆ, ಈ ಪರಿಷತ್ತಿನ ತೀರ್ಮಾನಕ್ಕೆ ಸರಿಯಾಗಿ ನಡಕೊಳ್ಳುವರೆಂದು ಹಾರೈಸುತ್ತೇವೆ. ವಸಾಹತುಗಳ ಸ್ವರಾಜ್ಯದ ರಚನೆಗೆ ಸಭಿಕರ ಮೂರರಲ್ಲಿ ಒಂದು ಭಾಗವೂ ಓಟುಕೊಟ್ಟು ಬಾಕಿಯವರು ಜವಹಿರ್‌ಲಾಲ್‌ರವರ ಅಭಿಪ್ರಾಯದಂತೆ ಸುಮ್ಮನಿದ್ದುದರಿಂದ ಸಂಪೂರ್ಣ ಸ್ವಾತಂತ್ರ್ಯದ ಠರಾವು ಬಹುಮತದಿಂದ ಪಾಸಾಗುತ್ತಿತ್ತು ಎಂಬುದು ಸ್ಪಷ್ಟವಾಯಿತು. ಆದರೂ ಕೂಡ ಜವಹಿರ್‌ಲಾಲ್ ನೆಹರುರವರು "ಕಟ್ಟುವವರ ಕೆಲಸವನ್ನು ಕೆಡಿಸಲು ಇಚ್ಛಿಸುವದಿಲ್ಲವಾಗುದರಿಂದ ವಸಾಹತು ಸ್ವರಾಜ್ಯದ ರಚನೆಗೆ ಪರವಾಗಿಯಾಗಲೀ, ವಿರೋಧವಾಗಿಯಾಗಲೀ ಓಟು ಮಾಡದೆ ಸುಮ್ಮನಿದ್ದು ಸಂಪೂರ್ಣ ಸ್ವಾತಂತ್ರ್ಯವನ್ನು ಸಾಧಿಸಲು ಪ್ರಯತ್ನಿಸುವೆವು" ಎಂದು ಹೇಳಿ ಉದಾರ ಬುದ್ಧಿಯನ್ನು ತೋರಿಸಿದುದು ಶ್ಲಾಘನೀಯವಾಗಿದೆ. ಇದುದರಿಂದ ನೆಹರು ಕಮಿಟಿಯವರ ರಾಜಕೀಯ ರಚನೆಯು ಸರ್ವಾನುಮತವಾಯಿತು.

ಚುನಾವಣೆಯ ವಿಷಯದಲ್ಲಿ ಹಿಂದೂಗಳಿಗೂ ಮುಸಲ್ಮಾನರಿಗೂ ಮತ್ತು ಬೇರೆ ಕೋಮುಗಳಿಗೂ ಇದ್ದ ಕಠಿಣ ಸಮಸ್ಯೆಯು ಈ ಸಭೆಯಲ್ಲಿ ಎಲ್ಲರಿಗೂ ಒಪ್ಪುವಂತೆ ತೀರ್ಮಾನಿಸಲ್ಪಟ್ಟದ್ದು ಹಿಂದೂದೇಶದ ಸ್ವಾತಂತ್ರ್ಯ ಹೋರಾಟದ ಒಂದು ಪ್ರಾಮುಖ್ಯ ಅಡಚಣೆಯನ್ನು ನೀಗಿದಂತಾಯಿತು. ನೆಹರು ಕಮಿಟಿಯವರು ಸಿಫಾರಸ್ಸು ಮಾಡಿರುವ ಮಿಶ್ರ ಚುನಾವಣೆ ಪದ್ಧತಿಯೂ, ಮುಸಲ್ಮಾನರು ಕಡಿಮೆ ಸಂಖ್ಯೆಯಲ್ಲಿರುವ ಪ್ರಾಂತ್ಯಗಳಲ್ಲಿ ಮುಸಲ್ಮಾನರಿಗೂ, ಮಾಮೂಲು ಪ್ರಾಂತ್ಯದಲ್ಲಿ ಮುಸಲ್ಮಾನೇತರರಿಗೂ ಅವರವರ ಜನಸಂಖ್ಯೆಗನುಸಾರವಾಗಿ ಕಾಯಿದೆ ಮಂಡಳಿಗಳಲ್ಲಿ ಮೆಂಬರುತನಗಳು ಕಾಯ್ದಿಡ ಬೇಕೆಂಬದು ಎಲ್ಲರಿಂದಲೂ ಒಪ್ಪಲ್ಪಟ್ಟದ್ದು ತೃಪ್ತಿಕರವಾಗಿದೆ. ಬಂಗಾಳದ ಹಿಂದೂಗಳು ಕಡಿಮೆ ಸಂಖ್ಯೆಯವರಾದರೂ ತಮಗೆ ಪ್ರತ್ಯೇಕ ಪ್ರತಿನಿಧಿತ್ವ ಕೇಳದೆ ಇದ್ದದ್ದೂ ಪಂಜಾಬಿನ ಹಿಂದೂ, ಮುಸಲ್ಮಾನ, ಸಿಖ್ಖರು ಹತ್ತು ವರ್ಷಗಳ ವರೆಗೆ ಮಿಶ್ರ ಚುನಾವಣೆಗೆ ಸಮ್ಮತಿಸಿದ್ದೂ ಹೊಗಳತಕ್ಕ ವಿಷಯಗಳಾಗಿವೆ. ಮಿಶ್ರ ಚುನಾವಣೆಯ ಒಪ್ಪಂದವು ಪಂಜಾಬಿನವರಿಂದ ಮುರಿಯಲ್ಪಡುವದೆಂದು ಹಲವರಿಗೆ ಭಯವಿತ್ತು. ಇದರ ಅಲ್ಲಿಯ ಮುಂದಾಳುಗಳ ಮುಂದಾಲೋಚನೆಯ ತೀರ್ಮಾನದಿಂದ ಈ ಭಯವು ನೀಗಲ್ಪಟ್ಟಿತು.

ಪ್ರಾಂತ್ಯಗಳ ವಿಭಜನೆಯ ಪ್ರಶ್ನೆಯಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ದೀರ್ಘ ಚರ್ಚೆಯ ಫಲಿತಾಂಶವಾಗಿ ಧುರೀಣರು ನ್ಯಾಯವಾದ ತೀರ್ಮಾನಕ್ಕೆ ಬಂದರು. ಸಿಂಧು ಪ್ರಾಂತ್ಯದ ವಿಭಾಗವೇ ಇದರಲ್ಲಿ ಹೆಚ್ಚಿನ ಮನಸ್ತಾಪಕ್ಕೆ ಎಡೆಕೊಡುವಂಥಾದದ್ದಾಗಿದ್ದಿತು. ಆದರೆ ಕೆಲವು ವಿಖ್ಯಾತ ಧುರೀಣರ ಪ್ರಯತ್ನದಿಂದ ಆ ಪ್ರಾಂತ್ಯದ ನಿವಾಸಿಗಳ ಬಹು ಮತ ಇಚ್ಛೆಯಂತೆ ನಡೆಯಲು ಅಲ್ಲಿಯವರು ಒಪ್ಪಿಕೊಂಡದ್ದು ಯೋಗ್ಯವಾಗಿದೆ. ನೆಹರು ಕಮಿಟಿಯ ವರದಿಯು ಮೇರೆ ಕರ್ನಾಟಕ, ಆಂಧ್ರ ಮತ್ತು ಉರಿಯಾ ಪ್ರಾಂತ್ಯಗಳನ್ನು ಬೇರ್ಪಡಿಸುವಂತೆಯೂ ನಿಶ್ಚಯವಾಯಿತು.

ನೆಹರು ಕಮಿಟಿಯ ವರದಿಯು ಹೆಚ್ಚು ಕಮ್ಮಿ ಸಂಪೂರ್ಣವಾಗಿ ಲಕ್ನೋ ಪರಿಷತ್ತಿನಲ್ಲಿ ಎಲ್ಲಾ ಪಕ್ಷದವರಿಂದಲೂ ಅಂಗೀಕರಿಸಲ್ಪಟ್ಟಿತ್ತೆಂಬದು ಆನಂದದ ವಿಷಯವಾಗಿದೆ. ಈ ವರದಿಯಲ್ಲಿರುವ ತತ್ವಗಳನ್ನನುಸರಿಸಿ ಒಂದು ಮಸೂದೆ (ಬಿಲ್) ಯನ್ನು ತಯಾರಿಸಲು ಇನ್ನು ಸ್ವಲ್ಪ ದೊಡ್ಡದು ಮಾಡಿಕೊಳ್ಳಬಹುದಾದ ನೆಹರು ಕಮಿಟಿಯವರಿಗೇನೇ ಅಧಿಕಾರ ಕೊಡಲಾಗಿದೆ. ಈ ಬಿಲ್ಲನ್ನು ಹಿಂದೂದೇಶದ ಎಲ್ಲಾ ಭಾಗಗಳ ಪ್ರತಿನಿಧಿಗಳ ಪರಿಷತ್ತನ್ನು ಕೂಡಿಸಿ ಅವರ ಮಂಜೂರಾತಿಗೆ ಇಡಲಾಗುವದಂತೆ. ಆದರೆ ಇದನ್ನು ಹೇಗೆ ಜಾರಿಗೆ ತರುವದೆಂದು ಈ ಸಭೆಯು ಈಗ ನಿಶ್ಚೈಸಿರುವದಿಲ್ಲ. ದೇಶದ ಮಂಜೂರಾತಿಯು ದೊರೆತ ಮೇಲೆ ಈ ಮಸೂದೆಯ ಸರ್ಕಾರವನ್ನು ಸ್ಥಾಪಿಸಲು ತಕ್ಕ ಏರ್ಪಾಡುಗಳನ್ನು ಮಾಡುವದೆಂದು ತೋರುತ್ತದೆ. ಅದುದರಿಂದ ಈ ರಚನೆಯನ್ನು ದೇಶದ ಎಲ್ಲಾ ಮೂಲೆಗಳಲ್ಲೂ ಪ್ರಚುರಪಡಿಸಿ ಜನರ ಒಪ್ಪಿಗೆಯನ್ನು ಪಡೆಯಲು ಯತ್ನಿಸಬೇಕಾದದ್ದು ಪ್ರತಿಯೊಬ್ಬನ ಕರ್ತವ್ಯವಾಗಿದೆ.

---

## ಗ್ರಾಮಗಳ ಪುನರುದ್ಧಾರ.

(ಬರೆದು ಬಂದದ್ದು)

(ಕಳೆದ ವಾರದಿಂದ ಮುಂದುವರಿದದ್ದು)

ನ್ಯಾಯವಾಗಿ ನೋಡಿದರೆ ಇಂಥಾ ವಿದ್ಯಾವಂತರು ಗ್ರಾಮದಭ್ಯುದಯವನ್ನು ಚಿರಸ್ಥಾಯಿಯಾಗಿ ಮಾಡಬೇಕಾಗಿದೆ. ಇವರು ತಮ್ಮ ಗ್ರಾಮದಲ್ಲಿ ಬೆಳೆದು ಜೀವಿಸಿ ಪಾಂಡಿತ್ಯ ಹೊಂದಿದುದಕ್ಕಾಗಿಯಾದರೂ ಗ್ರಾಮವನ್ನುದ್ಧರಿಸಬೇಕು. ಹಾಗಲ್ಲದೆ ಇಂಥಾವರು ಪಟ್ಟಣವನ್ನು ಸೇರಿ ಹಳ್ಳಿ, ಗಾಡಿನ ಜನರನ್ನು ಮೂಢರೆಂದು ಭಾವಿಸಲನುವರ್ತಿಸುವರು. ಈ ತೆರವಾದ ಜೀವನ ಬದಲಾವಣೆಯಿಂದ ಇಂದು ಗ್ರಾಮವೂ ಗ್ರಾಮನಿವಾಸಿಗಳೂ ಗ್ರಾಮ ಜೀವನವೂ ಬಹಳ ದುರ್ದಶೆಯಲ್ಲಿವೆ.

ಯಾವನ ಹೃದಯದಲ್ಲಿ ಗ್ರಾಮಹಿತವು ತೃಣಮಾತ್ರವಾದರೂ ಅಂಕುರಿಸಿರುವುದೋ, ಆತನು ಮೊದಲು ತನ್ನ ಪೂರ್ವ ಜೀವನವನ್ನು ಮನಸ್ಸಿಗೆ ತಂದುಕೊಂಡು ಕೇವಲ ಕೃತ್ರಿಮ ಘನತೆಯನ್ನು ತ್ಯಜಿಸಿ, ಗ್ರಾಮ ನಿವಾಸಿಗಳೊಡನೆ ಬೆರೆತು, ಅವರ ಜೀವನಕ್ರಮಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಗ್ರಾಮದ ಜನರಿಗೆ ಸಾಂಘಿಕ ಕಾರ್ಯನಿಯಮದ ಶಕ್ತಿಯು ತಿಳಿಯದು. ಇದುವರೆವಿಗೆ ಅವರಿಗೆ ಸಹಕಾರ ತತ್ವವು ಏನೆಂಬುದೇ ಗೊತ್ತಿಲ್ಲ. ಆದಕಾರಣ ವಿದ್ಯಾವಂತರೂ ಬುದ್ಧಿವಂತರೂ ಪಟ್ಟಣಗಳನ್ನು ಬಿಟ್ಟು ಗ್ರಾಮಗಳಲ್ಲಿ ಸಹಕಾರ ತತ್ವವನ್ನು ಬೋಧಿಸಿ ಅಲ್ಲಲ್ಲಿ ವ್ಯವಸಾಯದ ಸಹಕಾರ ಸಂಘಗಳನ್ನು ಸ್ಥಾಪಿಸಿ ಗ್ರಾಮದ ಜನರಿಗೆ ಆಗಿಂದಾಗ್ಗೆ ವ್ಯವಸಾಯದಲ್ಲಿ ಯಾವತೆರನಾದ ಉಪಾಯಗಳು ಬಹಳ ಪ್ರಯೋಜನಕಾರಿಗಳೆಂದೂ, ಯಂತ್ರಗಳನ್ನು ಎಷ್ಟರಮಟ್ಟಿಗೆ ಉಪಯೋಗಿಸಬಹುದೆಂದೂ, ದವಸ ಧಾನ್ಯಗಳನ್ನು ಹೇಗೆ ಒಂದೇ ಕಡೆಯಲ್ಲಿ ಶೇಖರಿಸಿ ಮಾರಿದರೆ ಲಾಭವಾಗುವುದೆಂದೂ, ಗ್ರಾಮನಿವಾಸಿಗಳ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕೆಂಬ ದೇ ಮೊದಲಾದ ವಿಷಯಗಳನ್ನು ಮಂದಟ್ಟು ಮಾಡಿಕೊಡಬೇಕು.

ಹಿಂದೂ ಸ್ಥಾನದ ರೈತರೆಲ್ಲರೂ ಭಾಗ್ಯವಂತರಾಗಿಲ್ಲ ಮತ್ತು ಎಲ್ಲರೂ ದರಿದ್ರರಾಗಿಯೂ ಇಲ್ಲ. ರೈತರು ವ್ಯವಸಾಯದಿಂದಲೇ ಜೀವಿಸಬೇಕಾಗಿರುವುದು ನಿರತವಾಗಿಯೇ ಇದೆ. ಭೂಮಿಯಲ್ಲಿ ಹುಲುಸಾದ ಪೈರು ಬೆಳೆದರೆ ರೈತರು ಸುಖಭೋಗಿಗಳಾಗುವರು. ಭೂಮಿಯಲ್ಲಿ ಚೆನ್ನಾಗಿ ಪೈರಾಗಬೇಕಾದರೆ ಭೂಸಾರವನ್ನು ವೃದ್ಧಿಮಾಡಬೇಕು. ಅನಾವೃಷ್ಟಿಯ ಕಾಲದಲ್ಲಿ ಹೊಲಗದ್ದೆಗಳು ಒಣಗಿ ಹೋಗದೆ ಇರುವುದಕ್ಕೋಸ್ಕರ ನೀರಿನ ವಸತಿಯನ್ನು ಒದಗಿಸಿಕೊಳ್ಳಬೇಕು. ನೀರಿನ ಪ್ರವಾಹಗಳಿಗೆ ಅಣೆ ಕಟ್ಟುಗಳಾಗಬೇಕು. ಪೈರು ಒಳ್ಳೆಯದಾಗಬೇಕಾದರೆ, ಪುಷ್ಟಿಕರವಾದ ಬೀಜಗಳನ್ನು ಬಿತ್ತಬೇಕು. ಇಷ್ಟೆಲ್ಲ ಸೌಕರ್ಯಗಳು ಅವಶ್ಯವಾಗಿರುವಾಗ ಪ್ರತಿಯೊಬ್ಬ ರೈತನು ಇವುಗಳಿಗೆ ತಗಲುವ ಖರ್ಚನ್ನು ಕೊಡಬಲ್ಲನೇ? ಗ್ರಾಮದಲ್ಲಿ ಧನಿಕನಾದವನು ಗ್ರಾಮದ ಹಿತಕ್ಕಾಗಿ ಉದಾರ ಮನಸ್ಸಿನಿಂದ ದ್ರವ್ಯವನ್ನು ವೆಚ್ಚಮಾಡುವನೇ? ಎಂದಿಗೂ ಇಲ್ಲ. ಹಾಗಾದರೆ ರೈತರು ವೃದ್ಧಿಯಾಗಬೇಕಾದರೆ ಉಪಾಯವೇನು?

ಇಂಥಾ ಸಂದರ್ಭದಲ್ಲಿ "ಸಂಘೇಶಕ್ತಿ ಕಲೌಯುಗೇ" ಎಂಬ ತತ್ವವನ್ನನುಸರಿಸಿ ಸಾಂಘಿಕ ಕಾರ್ಯವನ್ನು ನಿರ್ವಹಿಸಬೇಕು. ಈ ಸಾಂಘಿಕ ಕಾರ್ಯವೇ ಸಹಕಾರವು. ಈ ಸಹಕಾರದಿಂದಲೇ ಅನ್ಯೋನ್ಯ ಸಹಾಯವು ಲಭಿಸುವುದು. ಈ ಕಾರ್ಯವನ್ನು ಪ್ರಾರಂಭಿಸಬೇಕೆಂದರೆ ಗ್ರಾಮನಿವಾಸಿಗಳೆಲ್ಲರೂ ಉತ್ಸಾಹದಿಂದ ಈ ಕಾರ್ಯದಲ್ಲಿ ಸಮಭಾಗಿಗಳಾಗಬೇಕು. ಒಂದು ಗ್ರಾಮದಲ್ಲಿ ಸೌಕರ್ಯಗಳನ್ನೊದಗಿಸಲು 10,0 0 ರೂಪಾಯಿಗಳ ಅವಶ್ಯವಿರುವುದೆಂದು ಭಾವಿಸೋಣ. ಈ ದೊಡ್ಡ ಮೊಬಲಗನ್ನು ಒಬ್ಬ ಗ್ರಾಮನಿವಾಸಿಯು ಗ್ರಾಮದ ಹಿತಕ್ಕಾಗಿ ಕೊಡಲಾರನು. ಆದಕಾರಣ ತೆರಿಗೆಯ ಮೂಲಕ ಆ ಧನವನ್ನು ಒದಗಿಸಿಕೊಳ್ಳಬೇಕು. ಈ ತೆರಿಗೆಯನ್ನು ಮನಃ ಸಂತೋಷದಿಂದ ರೈತರುಕೊಡಲು ಸಿದ್ಧವಾದರೆ ಕನ್ಯಸಂಕಲ್ಪನಾಕಾರ್ಯದ ಪ್ರಥಮ ಭಾಗವು ಪೂರೈಸಿದಂತೆಯೇ ಆಯಿತು. ಈ ಹಣವನ್ನು ಮೂಲಧನವಾಗಿ ಮಾಡಿಕೊಂಡು, ತೆರಿಗೆ ಕೊಟ್ಟವರನ್ನು ಸಂಘದ ಸದಸ್ಯರನ್ನಾಗಿ ಮಾಡಿ ತಕ್ಕ ನಿರ್ಬಂಧಗಳನ್ನಿಟ್ಟು ಹಣವನ್ನು ಜನರ ಉಪಯೋಗಕ್ಕಾಗಿ ಉಚಿತಮಾರ್ಗದಿಂದ ವ್ಯಯಮಾಡಿದರೆ ಗ್ರಾಮದ ಎಲ್ಲ ರೈತರಿಗೂ ತಮ್ಮ ಸೌಕರ್ಯಗಳನ್ನು ಒದಗಿಸಿಕೊಳ್ಳಲು ಅನುಕೂಲವಾಗುವುದು. ಇಂಥಾ ಸಂಘಗಳು ಈಗಾಗಲೇ ಸರಕಾರದವರ ಮೂಲಕ ಸಹಕಾರ ಸಂಘಗಳೆಂದು ಕರೆಯಲ್ಪಡುತ್ತಿವೆ. ಇದೇ ರೀತಿಯಲ್ಲಿ ರೈತರೆಲ್ಲರೂ, ಒಗ್ಗಟ್ಟಾಗಿ ಯಾರ ಹಂಗೂ ಇಲ್ಲದ ವ್ಯವಸಾಯ ಸಂಘಗಳನ್ನು ಮೇಲೆ ಹೇಳಿದ ರೀತಿಯಲ್ಲಿ ಸ್ಥಾಪಿಸುವಂತೆ ದೇಶಾಭಿಮಾನಿಗಳು ಸಾಹಸ ಮಾಡಬೇಕು.

ಪರಸ್ಪರ ಸಹಾಯವು ವಿಚಿತ್ರಕೆಲಸಗಳನ್ನಾಗಲೀ, ಆಶ್ಚರ್ಯದ ಕೆಲಸಗಳನ್ನಾಗಲೀ ಮಾಡಲಾರದು. ಆದರೆ ಉಚಿತ ಮಾರ್ಗದಿಂದಲೂ, ಉತ್ಸಾಹದಿಂದಲೂ, ಹಿತ ಚಿಂತನೆಯಿಂದಲೂ ನಡೆಸಲ್ಪಟ್ಟದ್ದೇ ಆದರೆ ಜನರ ಆರ್ಥಿಕ ಸ್ಥಿತಿಯು ಪ್ರವರ್ಧಮಾನವಾಗಿ ಗ್ರಾಮನಿವಾಸಿಗಳ ಮಾನಸಿಕ ಮತ್ತು ಸಾಂಘಿಕ ಅಭಿವೃದ್ಧಿಯ ಕುರುಹುಗಳು ಉತ್ಪನ್ನವಾಗುತ್ತವೆ. ಇಂಥಾ ಕುರುಹುಗಳು ಅಂಕುರಿಸಿದಲ್ಲಿ ಗ್ರಾಮದ ಪುನರುಜ್ಜೀವನ ಕೆಲಸವನ್ನು ಕೈಕೊಳ್ಳಲು ಸಾಮರ್ಥ್ಯವೂ ದೊರೆಯುತ್ತದೆ.

ಸಶೇಷ.

## ಮಹಾತ್ಮಗಾಂಧಿಯವರ ಸ್ವಚರಿತ್ರೆ.

೫ನೇ ಭಾಗದಲ್ಲಿ ೫ನೇ ಪ್ರಕರಣ.

### ಮೂರನೆಯ ದರ್ಜೆಯ ಪ್ರಯಾಣಿಕರ ಸಂಕಟಗಳು.

ಟಿಕೆಟನ್ನು ಕೊಂಡುಕೊಳ್ಳುವುದರಲ್ಲಿ ಕೂಡ ಮೂರನೆಯ ತರಗತಿಯ ಪ್ರಯಾಣಿಕರು ಅನುಭವಿಸುವ ತೊಂದರೆಯನ್ನು ನಾವು ವರ್ಧಮಾನ (ಬರ್ದವಾನ) ದಲ್ಲಿ ಸ್ವತಃ ಅನುಭವಿಸಿದೆವು. "ಮೂರನೆಯ ತರಗತಿಯ ಟಿಕೆಟನ್ನು ಇಷ್ಟು ಜಾಗ್ರತೆ ಕೊಡುವುದಿಲ್ಲ." ಎಂದರು ನಮಗೆ. ನಾನು ಸ್ಟೇಷನ್ ಮಾಸ್ತರ ಬಳಿಗೆ ಹೋದೆನು. ಇದು ಕೂಡ ಕಷ್ಟದ ಕೆಲಸವಾಗಿದ್ದಿತು. ಯಾರೋ ಒಬ್ಬರು ಕೃಪೆ ಇಟ್ಟು ಅವರಿದ್ದ ಸ್ಥಳವನ್ನು ನಮಗೆ ತೋರಿಸಿದರು. ನಾನು ಅವರ ಬಳಿಗೆ ಹೋಗಿ ನಮ್ಮ ಕಷ್ಟವನ್ನು ಹೇಳಿಕೊಳ್ಳಲು ಅವರೂ ಅದೇ ಉತ್ತರವನ್ನು ಕೊಟ್ಟರು. ಟಿಕೆಟನ್ನು ಕೊಡುವ ಕಿಟಕಿಯ ಬಾಗಿಲು ತೆಗೆದೊಡನೆಯೇ ನಾನು ಟಿಕೆಟನ್ನು ಕೊಳ್ಳಲು ಹೋದೆನು. ಆದರೆ ಅವುಗಳನ್ನು ತೆಗೆದುಕೊಳ್ಳುವುದೇನೂ ಸುಲಭದ ಮಾತಾಗಿರಲಿಲ್ಲ. ಅಲ್ಲಿ ಸಮುಚಿತ ಮಾರ್ಗ ಯಾವದೂ ಇರಲಿಲ್ಲ. ಇತರರನ್ನು ಲಕ್ಷಿಸದೆ ಒಬ್ಬರಮೇಲೊಬ್ಬರು ನುಗ್ಗುತ್ತಿದ್ದ ಜನರು ನನ್ನನ್ನು ಹಿಂದಕ್ಕೆ ತಳ್ಳುತ್ತಾ ಬಂದರು. ಆದುದರಿಂದ ಮೊದಲು ಸೇರಿದ ಗುಂಪಿನಲ್ಲಿ ಟಿಕೆಟನ್ನು ತೆಗೆದುಕೊಳ್ಳಲು ಹೆಚ್ಚು ಕಡಿಮೆ ನಾನೇ ಕಡೆಯವನಾಗಿದ್ದೆನು.

ಗಾಡಿ ಬಂದಿತು, ಅದರೊಳಗೆ ಹೋಗುವುದು ಇನ್ನೊಂದು ಗಂಡಾಂತರವಾಗಿದ್ದಿತು. ಗಾಡಿಯೊಳಗಿದ್ದ ಜನರಿಗೂ ಒಳಕ್ಕೆ ಹೋಗಲು ಯತ್ನಿಸುತ್ತಿದ್ದ ಮಂದಿಗೂ ಮಧ್ಯೆ ಶಿಷ್ಟತೆಯಿಲ್ಲದೆ ಬೈದಾಟವೂ ನೂಕಾಟವೂ ನಡೆಯುತ್ತಿದ್ದಿತು. ನಾವು ನಿಲ್ದಾಣದಲ್ಲಿ ಅಲ್ಲಿಂದಿಲ್ಲಿಗೆ ಓಡಾಡಿದೆವು. ಆದರೆ ಯಾವ ಗಾಡಿಯಲ್ಲೂ "ಇಲ್ಲಿ ಜಾಗವಿಲ್ಲ" ಎಂಬ ಉತ್ತರವೇ. ನಾನು ಗಾರ್ಡಿನ ಬಳಿಗೆ ಹೋದೆನು. ಅತನು "ಎಲ್ಲಿ ಆಗುತ್ತದೆಯೋ ಅಲ್ಲಿ ಹೋಗಿ ಕುಳಿತುಕೊಳ್ಳಬೇಕು. ಇಲ್ಲದಿದ್ದರೆ ಮುಂದಿನ ಗಾಡಿಯಲ್ಲಿ ಬರಬೇಕು." ಎಂದು ಹೇಳಿದನು.

"ಆದರೆ ನನಗೆ ತ್ವರಿತದ ಕೆಲಸವಿದೆ." ಎಂದು ನಾನು ನಮ್ರತೆಯಿಂದ ಹೇಳಿದೆನು. ಇದನ್ನು ಕೇಳಲು ಅತನಿಗೆ ಹೊತ್ತಿರಲಿಲ್ಲ. ನನಗೆ ದಿಕ್ಕು ತೋಚದಂತಾಯಿತು. ಸಾಧ್ಯವಾದ ಕಡೆ ಹೋಗಿ ಕುಳಿತುಕೊಳ್ಳಬೇಕೆಂದು ಮಗನಲಾಲನಿಗೆ ಹೇಳಿ ನಾನು ನನ್ನ ಹೆಂಡತಿಯೊಡನೆ ಮಧ್ಯಮ ದರ್ಜೆಯ (ಇಂಟರ್ ಕ್ಲಾಸ್) ಗಾಡಿಯೊಂದರಲ್ಲಿ ಕುಳಿತೆನು. ನಾವು ಕುಳಿತುಕೊಂಡುದನ್ನು ಗಾರ್ಡ ನೋಡಿದನು. ಅಸನ್ ಸೋಲ್ ನಿಲ್ದಾಣದಲ್ಲಿ ಅತನು ನಮ್ಮಿಂದ ಹೆಚ್ಚು ಬಾಡಿಗೆಯನ್ನು ತೆಗೆದುಕೊಳ್ಳಲು ಬಂದನು. ಅತನಿಗೆ ನಾನು

"ನಮಗೆ ಜಾಗವನ್ನು ಒದಗಿಸಿಕೊಡುವದು ನಿಮ್ಮ ಕರ್ತವ್ಯವಾಗಿದ್ದಿತು. ನಮಗೆ ಸ್ಥಳ ಸಿಕ್ಕದುದರಿಂದ ನಾವು ಇಲ್ಲಿ ಕುಳಿತುಕೊಂಡಿದ್ದೇವೆ. ನೀವು ಮೂರನೆಯ ದರ್ಜೆಯ ಗಾಡಿಯಲ್ಲಿ ಸ್ಥಳ ಕೊಟ್ಟರೆ ನಮಗೆ ಅಲ್ಲಿ ಹೋಗಲು ಸಂತೋಷವೇ." ಎಂದೆನು.

"ನನ್ನೊಡನೆ ಚರ್ಚಿಸಬೇಡಿ. ನಾನು ನಿಮಗೆ ಜಾಗವನ್ನು ಕೊಡಲಾರೆನು. ಹೆಚ್ಚಿನ ಬಾಡಿಗೆಯನ್ನು ಕೊಡಿ, ಇಲ್ಲದಿದ್ದರೆ ಇಳಿದು ಹೋಗಿ." ಎಂದು ಅತನು ಹೇಳಿದನು.

ನಾನು ಹೇಗಾದರೂ ಮಾಡಿ ಪೂನಾವನ್ನು ಸೇರಬೇಕಾಗಿದ್ದಿತು. ಆದುದರಿಂದ ನಾನು ಅಲ್ಲಿ ಗಾರ್ಡಿನೊಡನೆ ಹೊಡೆದಾಡಲು ಸಿದ್ಧನಾಗಿರಲಿಲ್ಲ. ಅತನು ಕೇಳಿದಂತೆ ಪೂನಾದ ವರೆಗೂ ಹೆಚ್ಚಿನ ಬಾಡಿಗೆಯನ್ನು ಕೊಟ್ಟೆನು. ಆದರೆ ಈ ಅನ್ಯಾಯವು ನನಗೆ ಸರಿಬೀಳಲಿಲ್ಲ.

ಬೆಳಿಗ್ಗೆ ನಾವು ಮೊಗಲಸರಾಯನ್ನು ಸೇರಿದೆವು. ಮಗನಲಾಲನು ಮೂರನೆಯ ತರಗತಿಯಲ್ಲಿ ಸ್ಥಳವನ್ನು ಸಂಪಾದಿಸಿದರು. ನಾವು ಈಗ ಆ ಗಾಡಿಗೆ ಹೋದೆವು. ಇಲ್ಲಿ ನಾನು ಟಿಕೆಟ್ ಕಲೆಕ್ಟರಿಗೆ ಎಲ್ಲಾ ವಿಷಯಗಳನ್ನೂ ತಿಳಿಸಿ ನಾನು ಮೊಗಲಸರಾಯಿಯಲ್ಲಿ ಮೂರನೆಯ ತರಗತಿಗೆ ಬದಲಾಯಿಸಿದುದಕ್ಕೆ ಸಾಕ್ಷಿಪತ್ರವನ್ನು ಬರೆದುಕೊಡಿರೆಂದು ಕೇಳಿದೆನು. ಇದಕ್ಕೆ ಅತನು ಒಪ್ಪಲಿಲ್ಲ. ನಾನು ರೈಲ್ವೆ ಅಧಿಕಾರಿಗಳಿಗೆ ಈ ವಿಷಯವಾಗಿ ಬರೆಯಲು ಅವರಿಂದ 'ಸಾಕ್ಷಿಪತ್ರವಿಲ್ಲದೆ ಹೆಚ್ಚಿನ ಬಾಡಿಗೆಯನ್ನು ಹಿಂದಕ್ಕೆ ಕೊಡುವ ಪದ್ಧತಿಯು ನಮ್ಮಲ್ಲಿಲ್ಲ. ನಿಮ್ಮ ವಿಷಯದಲ್ಲಿ ಮಟ್ಟಿಗೆ ಈ ಪದ್ಧತಿಯನ್ನು ಬಿಟ್ಟು ನಡೆಯುತ್ತೇವೆ. ಆದರೆ ವರ್ಧಮಾನದಿಂದ ಮೊಗಲಸರಾಯಿಯ ವರೆಗಿನ ಹೆಚ್ಚು ಬಾಡಿಗೆಯನ್ನು ಹಿಂದಕ್ಕೆ ಕೊಡಲಾಗುವುದಿಲ್ಲ" ಎಂದು ಉತ್ತರ ಬಂದಿತು.

ಇದಾದ ಮೇಲೆ ನನಗೆ ಮೂರನೆಯ ದರ್ಜೆಯ ಪಯಣದ ಅನುಭವಗಳೆಷ್ಟೋ ಆಗಿವೆ. ಅವುಗಳನ್ನೆಲ್ಲಾ ಉಲ್ಲೇಖಿಸಹೊರಟರೆ ಒಂದು ಗ್ರಂಥವಾಗುವುದು. ಈ ಪ್ರಕರಣಗಳಲ್ಲಿ ಅವುಗಳ ವಿಚಾರವಾಗಿ ಸಂಧರ್ಭವೊದಗಿದಾಗ ಅಷ್ಟು ಇಷ್ಟು ಮಾತ್ರ ಬರೆಯುವುದು ಸಾಧ್ಯ. ನನ್ನ ಶರೀರದ ದೌರ್ಬಲ್ಯದಿಂದ ನಾನು ಮೂರನೆಯ ತರಗತಿಯಲ್ಲಿ ಪ್ರಯಾಣ ನಡೆಸದು ಅಸಾಧ್ಯವಾಗಿರುವುದು ನನಗೆ ಅತ್ಯಂತ ವಿಷಾದಕ್ಕೆ ಕಾರಣವಾಗಿದೆ. ಸದಾ ಕಾರಣವಾಗಿಯೇ ಇರುತ್ತದೆ.

ಮೂರನೆಯ ತರಗತಿಯ ಪ್ರಯಾಣಿಕರ ಸಂಕಟಗಳಿಗೆ ರೈಲ್ವೆ ಅಧಿಕಾರಿಗಳ ನಿರಂಕುಶವರ್ತನೆಯೇ ಕಾರಣವೆಂಬುವುದರಲ್ಲಿ ಸಂದೇಹವಿಲ್ಲ. ಆಗಿಗೆ ಪ್ರಯಾಣಿಕರ ಒರಟುತನವೂ, ಕೊಳಕಿನ ಪದ್ಧತಿಗಳೂ, ಸ್ವಾರ್ಥಪರತೆಯೂ, ಅಜ್ಞಾನವೂ ಕಡಮೆಯಾದ ಕಾರಣಗಳೇನೂ ಅಲ್ಲ. ಇದರಲ್ಲಿ ಖೇದಕ್ಕೆ ಕಾರಣವೇನೆಂದರೆ, ತಾವು ಔದ್ಧತ್ಯದಿಂದಲೂ ಸ್ವಾರ್ಥಪರತೆಯಿಂದಲೂ ವರ್ತಿಸುತ್ತಿರುವರೆಂಬುದೂ, ತಮ್ಮ ಪದ್ಧತಿಗಳು ಕೊಳಕಾಗಿರುವುವೆಂಬುದೂ ಅವರಿಗೇ ಗೊತ್ತಿರುವುದಿಲ್ಲ. ಅವು ಮಾಡುವುದೆಲ್ಲಾ ಸ್ವಾಭಾವಿಕವೇ ಎಂದು ಅವರಿಗೆ ತೋರುತ್ತದೆ. ಇದೆಲ್ಲಕ್ಕೂ ಮೂಲ ಕಾರಣ 'ಸುಶಿಕ್ಷಿತ'ರೆನಿಸಿಕೊಳ್ಳುವ ನಾವು ಅವರಲ್ಲಿ ತೋರಿಸುವ ಔದಾಸೀನ್ಯವೇ.

ನಾವು ಕಲ್ಯಾಣವನ್ನು ತಲುಪಿದಾಗ ಬಳಲಿ ಬೇಸತ್ತಿದ್ದೆವು. ನಿಲ್ದಾಣದ ನಳ (ನಲ್ಲಿ) ದಿಂದ ನೀರನ್ನು ತೆಗೆದುಕೊಂಡು ಮಗನಲಾಲನೂ ನಾನೂ ಸ್ನಾನ ಮಾಡಿದೆವು. ನನ್ನ ಹೆಂಡತಿಯ ಸ್ನಾನಕ್ಕೆ ಏರ್ಪಡಿಸಲು ಹೋಗುತ್ತಿದ್ದಾಗ ಭಾರತ ಸೇವಾಸಂಘದ ಶ್ರೀ ಕೌಲರು ನಮ್ಮನ್ನು ಗುರುತು ಹಿಡಿದು ನಮ್ಮ ಬಳಿಗೆ ಬಂದರು. ಅವರೂ ಪೂನಾಕ್ಕೆ ಹೋಗುತ್ತಿದ್ದರು. ಅವರು ನನ್ನ ಹೆಂಡತಿಯನ್ನು ಎರಡನೆಯ ತರಗತಿಯ ಸ್ನಾನದ ಕೋಣೆಗೆ ಕರೆದುಕೊಂಡು ಹೋಗಿ ಬಿಡುವೆನೆಂದು ಹೇಳಿದರು. ಅವರು ಆದರಪೂರ್ವಕವಾಗಿ ಮಾಡಲೆಳಿಸಿದ ಈ ಸಹಾಯವನ್ನು ಸ್ವೀಕರಿಸಲು ನಾನು ಹಿಂದೆಗೆದೆನು. ನನ್ನ ಹೆಂಡತಿಗೆ ಎರಡನೆಯ ತರಗತಿಯ ಸ್ನಾನದ ಕೋಣೆಯನ್ನು ಉಪಯೋಗಿಸುವ ಅಧಿಕಾರವಿಲ್ಲವೆಂಬುದು ನನಗೆ ತಿಳಿದಿದ್ದಿತು. ಆದರೆ ಕಡೆಗೆ ನಾನು ಈ ಅನುಚಿತ ಕಾರ್ಯದಲ್ಲಿ ಭಾಗಿಯಾದೆನು. ಸತ್ಯೋಪಾಸಕನಿಗೆ ಇದು ಸರಿಯಲ್ಲವೆಂದು ನನಗೆ ಗೊತ್ತು. ಅಲ್ಲಿ ಹೋಗಿ ಸ್ನಾನ ಮಾಡಬೇಕೆಂದು ನನ್ನ ಹೆಂಡತಿಯು ಆತುರಳಾಗಿದ್ದಾಳೆಂದಲ್ಲ, ಆದರೆ ಗಂಡನಿಗೆ ಹೆಂಡತಿಯಲ್ಲಿರುವ ಪಕ್ಷಪಾತವು ಅವನ ಸತ್ಯಪಕ್ಷಪಾತವನ್ನು ಗೆದ್ದಿತು. ಸತ್ಯದ ಮುಖವು ಮಾಯೆಯ ಪೊನ್ನ ತೆರೆಯ ಮರೆಯಲ್ಲಿರುವುದೆಂದು ಉಪನಿಷತ್ತು ಹೇಳುತ್ತದೆ.

---

## ಸರ್ವಪಾರ್ಟಿಗಳ ಕಾನ್‌ಫರೆನ್ಸ್

ಹಿಂದೂ ದೇಶದ ರಾಜಕೀಯ ಮತ್ತು ಜಾತೀಯ ಸರ್ವ ಪಕ್ಷಗಳ ಪ್ರತಿನಿಧಿಗಳ ಕಾನ್‌ಫರೆನ್ಸ್ ಕಳೆದ ತಾ. 28ರ ಮಧ್ಯಾಹ್ನ ಲಕ್ನೋದ ಬಾರದಾರಿ ಹಾಲ್‌ನಲ್ಲಿ ಪ್ರಾರಂಭವಾಯಿತು. ಸದರಿ ಹಾಲ್ ಖದ್ದರ್ ಬಟ್ಟೆಗಳಿಂದ ಚನ್ನಾಗಿ ಶೋಭಿತವಾಗಿತ್ತು. ಮೇಗಡೆ ರಾಷ್ಟ್ರೀಯ ಧ್ವಜವು ಹಾರಿಸಲ್ಪಟ್ಟಿತ್ತು. ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಅಧ್ಯಕ್ಷರಾದ ಡಾಕ್ಟರ್ ಅನ್ಸಾರಿಯವರು ಪರಿಷತ್ತಿನ ಅಧ್ಯಕ್ಷ ಪದವಿಯನ್ನು ಅಲಂಕರಿಸಿದ್ದರು. ಈ ಕೆಳಗಿನ ಪ್ರಾಮುಖ್ಯ ಮುಂದಾಳುಗಳು ಹಾಜರಿದ್ದರು: ಡಾಕ್ಟರ್ ಬೆಸೆಂಟ್, ಮೌಲಾನ ಅಬ್ದುಲ್ ಕಲಾಂ ಅಜಾದ್, ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್, ಸಿ. ವಿಜಯರಾಘವಚಾರ್ಯರ್, ಪಂಡಿತ ಮೋತಿಲಾಲ್ ನೆಹರು, ಎ ರಂಗಸ್ವಾಮಿ ಅಯ್ಯಂಗಾರ್, ಪಂಡಿತ ಮದನಮೋಹನ ಮಾಳವೀಯ, ಮಹಮ್ಮದಾಬಾದ್ ಮಹಾರಾಜರ, ಮೌಲ್ವಿ ಮಹಮ್ಮದ್ ಯಾಕೂಬ್, ಸರ್ ಅಲಿ ಇಮಾಮ್, ಸರ್ ಗೋವಿಂದದಾಸ್, ಸರ್ ತೇಜ್ ಬಹದ್ದೂರ್ ಸಪ್ರು, ಪಂಡಿತ ಹಿರ್ದಯನಾಥ ಕುಂಜ್ರು, ಮೌಲಾನ ಶೌಕತಾಲಿ, ಸರ್ದಾರ್ ಮಂಗಲ್ ಸಿಂಗ್, ಪಂಡಿತ ಜವಾಹಿರ್‌ಲಾಲ್, ಸರೋಜಿನಿದೇವಿ, ಸುಭಾಸ್ ಚಂದ್ರಬೋಸ್, ಸೇನ್‌ಗುಪ್ತ, ಲಾಲಾ ಲಜಪತರಾಯಿ, ಮೌಲಾನ ಹಜರತ್ ಮೋಹನಿ- ಇವರೇ ಮೊದಲಾದವರು.

ಮಹಮ್ಮದಾಬಾದ್ ಮಹಾರಾಜರು ಹಿಂದು ಚಿಕ್ಕ ಭಾಷಣದಿಂದ ಪ್ರತಿನಿಧಿಗಳಿಗೆ ಯೋಗ್ಯವಾದ ಸ್ವಾಗತವನ್ನೀಡಿದರು. ನಂತರ ಅಧ್ಯಕ್ಷರಾದ ಡಾಕ್ಟರ್ ಅನ್ಸಾರಿಯವರು, ನೆಹರು ಕಮಿಟಿಯವರನ್ನು ಅವರ ಒಗ್ಗಟ್ಟಿನ ವರದಿಗೆ ಅಭಿನಂದಿಸಿ, 'ಹಿಂದೂ ದೇಶದ ಎಲ್ಲಾ ಪಕ್ಷಗಳ ಪ್ರತಿನಿಧಿಗಳು ಒಂದಾಗಿ ಸೇರಿದ್ದು ಇದೇ ಮೊದಲು, ಆದ ಕಾರಣ ಇದರ ಪ್ರಾಮುಖ್ಯತೆಯು ಬಹು ದೊಡ್ಡದು, ಇಲ್ಲಿ ನೀವು ಇಂದು ಮಾಡುವದರ ಫಲವು ನಾಳೆನಾಡದಾಗಿ ಮಾಯವಾಗುವದಿಲ್ಲ, ಅದು ಚಿರಾಯಿಯಾಗಿ ನಿಲ್ಲುವದು; ಇಂದು ನಿಮ್ಮ ಕೈಯಲ್ಲಿ ಹಿಂದೂ ದೇಶದ ಸುಖಕ್ಕೆ ಬೇಗದ ಕೈ ಇರುವದಾದರೂ, ದುಃಖಕ್ಕೂ ಬೇಗದ ಕೈ ನಿಮ್ಮಲ್ಲಿದೆ, ನಿಮ್ಮ ದೇಶದ್ದ ಜವಾಬ್ದಾರಿಯನ್ನು ಅರಿತುಕೊಂಡು ಉತ್ತಮವಾದುದನ್ನು ಆರಿಸುವದಾಗಿ ನನ್ನ ವಿನಂತಿ' ಎಂದು ಮುಂತಾಗಿ ಸ್ವಾರಸ್ಯವಾದ ಭಾಷಣವನ್ನು ಮಾಡಿದರು.

ಅಧ್ಯಕ್ಷರ ಕೋರಿಕೆ ಮೇರೆ ಪಂಡಿತ ಮೋತಿಲಾಲ್ ನೆಹರುರವರು ತಮ್ಮ ಕಮಿಟಿಯ ವರದಿಯನ್ನು ಭಾಷಣವೇನೂ ಮಾಡದೆ ಸಭೆಯ ಮುಂದಿಟ್ಟರು. ಸಭೆಯವರೆಲ್ಲರೂ "ವಂದೇ ಮಾತರಂ" ಎಂದು ಕೂಗಿದರು.

1. 'ಸರ್ವಪಕ್ಷ ಕಾನ್‌ಫರೆನ್ಸಿನಿಂದ ನೇಮಿಸಲ್ಪಟ್ಟ ನೆಹರು ಕಮಿಟಿಯವರು ಮಾಡಿದ ಕೆಲಸಕ್ಕಾಗಿ ಈ ಸಭೆಯು ಕೃತಜ್ಞತಾಪೂರ್ವಕವಾದ ಮೆಚ್ಚಿಗೆಯನ್ನು ಸೂಚಿಸುತ್ತದೆ" ಎಂಬ ಪ್ರಥಮದ ಠರಾವನ್ನು ಅಲಾಲಾ ಲಜಪತರಾಯರು ಸೂಚಿಸಿ, 'ನಾನು ಈ ರಿಪೋರ್ಟಿನ ಪ್ರತಿಯೊಂದು ಶಬ್ದವನ್ನೂ ಒಪ್ಪುತ್ತೇನೆ. ಈ ಅತ್ಯುತ್ತಮ ವರದಿಯನ್ನು ಎಲ್ಲರೂ ಒಪ್ಪಿಕೊಳ್ಳದೆ ಹೋದರೆ, ಗಿರಿಜಾಗಿರುವ ತಮ್ಮ ವಿರೋಧ ಪಕ್ಷದವರ ಸಂತೋಷಕ್ಕೆ ಎಡೆ ಕೊಟ್ಟಂತಾಗುವದು' ಎಂದು ಮೊದಲಾಗಿ ಭಾಷಣ ಮಾಡಿದರು. "ತಾಯಿಯು ತನ್ನ ಮಗುವನ್ನು ಪ್ರೀತಿಯಿಂದಲೂ, ಹೆಮ್ಮೆಯಿಂದಲೂ ನೋಡುವಂತೆ ನೀವು ಈ ವರದಿಯನ್ನು ಕಾಣಬೇಕೆಂತ' ಪಂಡಿತ ಮಾಳವೀಯರ, "ಫ್ರಾನ್ಸಿನ ಕ್ರಾಂತಿಕಾರರ ಪ್ರತಿಜ್ಞೆಯನ್ನು ತೆಗೆದುಕೊಳ್ಳಲು ಹಿಂದೂದೇಶಕ್ಕೆ ಇದೀಗ ತಕ್ಕ ಸಮಯ. ನೆಹರು ಕಮಿಟಿಯ ವರದಿಯ ಮೇಲೆ ಹಿಂದೂಸ್ಥಾನದ ಸ್ವರಾಜ್ಯ ಮಂದಿರವನ್ನು ಕಟ್ಟಬೇಕು, ಹಿಂದೂ ದೇಶದ ಇಂದಿನ ಒಗ್ಗಟ್ಟಿನ ತೀರ್ಮಾನವು ಪ್ರಪಂಚದ ದೃಷ್ಟಿಯಲ್ಲಿ ಅದರ ಪ್ರಾಶಸ್ತ್ಯವನ್ನು ಹೆಚ್ಚಿಸುವದು' ಎಂದು ಡಾಕ್ಟರ್ ಬೆಸೆಂಟರವರೂ, "ಲಾರ್ಡ್ ಬಿರ್ಕೆನ್ ಹೆಡ್ಡರವರ ಪಂಥಕ್ಕೆ ಇದು ಸಾಕಷ್ಟು ತೀವ್ರ ಪ್ರತೀಕಾರವಾಗುವದಿಲ್ಲ; ಆದರೂ ಅದಕ್ಕೆ ನನ್ನ ಒಪ್ಪಿಗೆ ಇದೆ" ಎಂದು ಶೌಕತಾಲಿಯವರೂ, "ಹಿಂದೂ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯ ದೊರೆಯಬೇಕೆಂಬುದೇ ತನ್ನ ಧ್ಯೇಯವಾದರೂ, ಈ ಅಮೂಲ್ಯ ವರದಿಯನ್ನು ತಯಾರಿಸಿದ ಕಮಿಟಿಯವರಿಗೆ ತನ್ನ ಕೃತಜ್ಞತೆ ತುಂಬಾ ಇದೆ' ಯೆಂದು ಸರೋಜಿನೀ ದೇವಿಯವರೂ ಠರಾವನ್ನು ಅನುಮೋದಿಸಿ ಭಾಷಣಮಾಡಿದರು. ಮೌಲಾನ ಅಬ್ದುಲ್ ಕಲಂ ಅಜಾದ್, ಸೇನ್‌ಗುಪ್ತಾ, ಮೌಲ್ವಿ ಮಹಮ್ಮದ್ ಯಾಕುಬ್, ವಿಜಯರಾಘವಚಾರಿ, ಸರ್ದಾರ್ ಶರ್ ಸಿಂಗ್, ರಾಜ ಸರ್ ರಾಂಪಾಲ್ ಸಿಂಗ್, ಮೌಲಾನ ಅಹ್ಮದ್, ಚಂದಾವರ್, ಜಗ್ಗಾ, ಮುಕುಂದಿಲಾಲ್, ಬ್ರಿಜ್ವಲ್ ಅಹ್ಮದ್ ರವರು, ಹಿಂದೂ ಮಹಾಸಭೆ, ಕಾಂಗ್ರೆಸ್ ಪಕ್ಷ, ಖಿಲಾಫತ್ ಪಾರ್ಟಿ, ಮುಸ್ಲಿಮ್ ಲೀಗ್, ಲಿಬರಲ್ ಲೀಗ್ ಮುಂತಾದ ಸಂಗಡಗಳ ಪರವಾಗಿ ಠರಾವಿಗೆ ಒತ್ತಾಸೆಯನ್ನು ಕೊಟ್ಟರು. ಹಜರತ್ ಮೋಹನಿಯವರು "ನೆಹರು ಕಮಿಟಿಯ ವರದಿ ತೃಪ್ತಿಕರವಲ್ಲ, ನಮಗೆ ಸಂಪೂರ್ಣ ಸ್ವಾತಂತ್ರ್ಯ ಬೇಕೆನ್ನುವಾಗ ಇವರು 'ಡೊಮಿನಿಯನ್ ಸ್ಟೇಟಸ್' ಕೇಳಿದ್ದಾರೆ; ಇವರ ಕೆಲಸವು ಹೊಗಳತಕ್ಕದ್ದಲ್ಲ" ಎಂದು ಮುಂತಾಗಿ ಹೇಳಿ ಠರಾವನ್ನು ವಿರೋಧಿಸಿದರು. ಪಂಡಿತ ಮೋತಿಲಾಲರು "ತಾನು ಮೋಹನಿಯವರ ಅಭಿಪ್ರಾಯಕ್ಕೆ ಒಪ್ಪುತ್ತೇನೆ, ಆದರೆ ಗೊಡ್ಡ ಬಹುಮತಕ್ಕೆ ವಿರೋಧವಾಗಿ ನಾವಿದ್ದರೇ ಇರುವದು" ಎಂದು ಯೋಗ್ಯವಾದ ರೀತಿ ಜವಾಬಿತ್ತರು. "ನಾಗಿಕ ಮೋತಿಲಾಲರು ಹಿಂದೂ ಮುಸಲ್ಮಾನರ ಸುಂದರಾಲೋಚನೆಯಲ್ಲಿ ಸಂಶಯವಿಲ್ಲ. ಆದರೆ ಕಮಿಟಿಯ ಎಲ್ಲಾ ಮೆಂಬರುಗಳ ಹೃದಯದಲ್ಲಿ ತಾವೆಲ್ಲರೂ ಒಂದೇ ಎಂಬ ಭಾವನೆ ಇದ್ದದರಿಂದಲೇ ಇಂಥಾ ವರದಿಯು ತಯಾರಾದದ್ದು, ಹಿಂದೂ ಮುಸಲ್ಮಾನರು ಒಬ್ಬರನ್ನೊಬ್ಬರು ಪೀಡಿಸುವರೆಂಬುದು ಯೋಚಿಸಲೂ ಕೂಡ ಸಾಧ್ಯವಲ್ಲದ ಸಂಗತಿ" ಎಂದು ಸರ್ ಅಲಿ ಇಮಾಮರವರು ಉಗ್ರಸ್ವರದಿಂದ ಮಾತಾಡಿದರು. ಈ ಠರಾವು "ವಂದೇ ಮಾತರಂ" ಎಂಬ ಜಯಘೋಷದೊಡನೆ ಮಂಜೂರಾಯಿತು. ಹಜರತ್ ಮೋಹನಿಯವರು ಮಾತ್ರ ವಿರೋಧಿಸಿದರು.

2. 'ಹಿಂದೂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಪದ್ಧತಿ ಅಂದರೆ ಕಾರ್ಯ ನಡೆಸುವ ಭಾಗವು ಜನರ ಚುನಾಯಿತ ಪ್ರತಿನಿಧಿಗಳ ಸಭೆಗೆ ಜವಾಬ್ದಾರಿಯಾಗಿರುವ ಸರ್ಕಾರವು ಸ್ಥಾಪಿಸಲ್ಪಡಬೇಕು, ಅಂಥಾ ಸರ್ಕಾರವು ಸ್ವತಂತ್ರ ಸ್ಥಿತಿ ದೊರೆತಿರುವ ಉಪನಿವೇಶನಗಳ ಸರ್ಕಾರಕ್ಕಿಂತ ಕಡಿಮೆ ತರದ್ದಾಗಿರಕೂಡದು" ಎಂಬ ಠರಾವನ್ನು ಪಂಡಿತ ಮದನಮೋಹನ ಮಾಳವೀಯರು ಸಭೆಯ ಮುಂದಿಟ್ಟು 'ಹಿಂದೂದೇಶದ ಈಗಿನ ಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಎಲ್ಲಾ ಪಾರ್ಟಿಗಳಿಗೂ ಒಪ್ಪುವಂತೆ ನೆಹರು ಕಮಿಟಿಯವರು ಡೊಮಿನಿಯನ್ ಸ್ಟೇಟಸ್ ಕೇಳಿರುವರು. ಸಂಪೂರ್ಣ ಸ್ವಾತಂತ್ರ್ಯವೇ ಪ್ರತಿಯೊಂದು ಜನಾಂಗದ ಧ್ಯೇಯವಾಗಿರಬೇಕು; ಆದರೆ ಈ ರಚನೆಯಲ್ಲಿ ಬ್ರಿಟಿಷರ ಸಂಬಂಧವನ್ನು ಬಿಡುವ ಹಕ್ಕು ಅಂಗೀಕರಿಸಲ್ಪಟ್ಟಿರುವದರಿಂದ ಉಪನಿವೇಶನಗಳ ಸ್ವರಾಜ್ಯವೂ ಸ್ವಾತಂತ್ರ್ಯಕ್ಕೆ ಸಮಾನವಾದಂತಾಗಿದೆ' ಎಂದು ಉಪನ್ಯಾಸ ಮಾಡಿದರು. ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರು ಮತ್ತು ಸರ್ ತೇಜ್ ಬಹದ್ದೂರ್ ಸಪ್ರುರವರು ಠರಾವನ್ನು ಸಮರ್ಥಿಸಿ ಮಾತಾಡಿದರು.

ಎರಡನೆಯ ದಿನ ಹಿಂಬಗ, ಮಧ್ಯಾಹ್ನ ಸುರುವಾಯಿತು. ಪಂಡಿತ ಮೋತಿಲಾಲ್ ನೆಹರುರವರ ಮಗ ಜವಹಿರ್‌ಲಾಲರವರು ಸಂಪೂರ್ಣ ಸ್ವಾತಂತ್ರ್ಯ ಬೇಕೆನ್ನುವವರ ಪರವಾಗಿ ಅತ್ಯುತ್ತಮವಾದ ಭಾಷಣವನ್ನು ಮಾಡಿದರು. "ನೆಹರು ಕಮಿಟಿಯವರು ಕೋಮುವಾರು ಪ್ರತಿನಿಧಿತ್ವದ ವಿಷಯ ಮಾಡಿರುವ ಸೂಚನೆಗಳು ಒಳ್ಳೆಯವು. ರಾಜಕೀಯ ಸಭಾಗಳಲ್ಲಿ ಮಾಡಿದ ಸಿಫಾರಸ್ಸುಗಳು ತೃಪ್ತಿಕರವಲ್ಲ. ಈ ಠರಾವು ಉಪನಿವೇಶನಗಳ ಸರ್ಕಾರ ಪದ್ಧತಿಯನ್ನು ಕೇಳುವದಾಗಿದೆ. ಪಂಡಿತ ಮಾಳವೀಯರ ಭಾಷಣವು 19ನೇ ಶತಮಾನದ ಕಾಂಗ್ರೆಸ್ ಭಾಷಣದಂತಿದೆ. ಈ ರಚನೆಯ ಕರ್ತರು ಬಹು ಪ್ರಾಮುಖ್ಯ ಮನುಷ್ಯರು. ಹಿರಿಯರೂ ಕೂಡ. ಅವರಿಗೆ ಅವಮಾನವಾಗದಿದ್ದರೆ, ಅವರು ಹಿಂದಿನ ಪದ್ಧತಿಯ ಮನುಷ್ಯರಾಗಿರುವರು. (ಸಭಿಕರೆಲ್ಲಾ ನಗಿದರು. ಪಂಡಿತ ಮೋತಿಲಾಲರೂ ಅವರೊಂದಿಗ ನಕ್ಕರು.) ನಮಗೆ ಬೇಕಾದದ್ದು ಸಂಪೂರ್ಣ ಸ್ವಾತಂತ್ರ್ಯ. ಬ್ರಿಟಿಷರೊಂದಿಗೆ ನಮಗೆ ಯಾವ ಸಂಬಂಧವೂ ಬೇಡ. ಬ್ರಿಟಿಷ್ ರಾಜಕೀಯ ಸಂಗಡಗಳಲ್ಲಿ ಲೇಬರ್ ಪಕ್ಷದವರು ಹೋಸಗಾಗಿ ಡೊಮಿನಿಯನ್ ಸ್ಟೇಟಸ್ ನಮಗೆ ದೊರಕಿದ ಬ್ರಿಟಿಷರು ಈಜಿಪ್ಟ್, ಚೈನಾ, ಮಲೆಯ ಮುಂತಾದ ಜನಾಂಗಗಳಿಗೆ ಮಾಡುವ ಅನ್ಯಾಯದಲ್ಲಿ ನಾವೂ ಭಾಗಿಗಳಾಗಬೇಕಾಗುವದು. ನೆಹರು ಕಮಿಟಿಯವರ ಕೆಲಸಕ್ಕೆ ನಾವು ಅಡ್ಡಿ ಬರುವವರಲ್ಲ. ಈ ಠರಾವಿಗೆ ವಿರೋಧಿಸುವದೂ ಇಲ್ಲ. ಇದಕ್ಕೆ ಬಿದ್ದು ಸಾಕಾಗುವುದೂ ಇಲ್ಲ. ನಾವು ಈ ಸಭೆಯಲ್ಲಿ ಸಂಪೂ

ರ್ಣ ಸ್ವರಾಜ್ಯಕ್ಕೆ ಹೋರಾಡುತ್ತೇವೆ." ಎಂದು ಹೇಳಿ ಮೇಲಿನ ಕಡೇ ವಾಕ್ಯದ ಅಭಿಪ್ರಾಯವುಳ್ಳ ಒಂದು ಪತ್ರಕ್ಕೆ ಹಲವರು ಸಹಿ ಮಾಡಿದನ್ನು ಅವರು ಸಭೆಯ ಮುಂದಿಟ್ಟರು ಇವರ ವೀರ ಭಾಷಣಕ್ಕೆ ಸಭೆಯ ಬಹುಮತದವರು ಸೈ ಎನ್ನುವಂತೆ ಕಂಡುಬಂತಂತೆ. ಇವರ ಅಭಿಪ್ರಾಯಕ್ಕೆ ಒತ್ತಾಸೆಯಾಗಿ ಜಮಾಯತುಲ ಉಲೆಮದ ಅಧ್ಯಕ್ಷರಾದ ಮೌಲಾನ ಕಿಫಾಯತುಲ್ಲಾ, ಖಿಲಾಫತ್ ಕಮಿಟಿಯ ಪರವಾಗಿ ಶಫಿ ದಾವೂದಿ, ಸುಭಾಸ್ ಚಂದ್ರಬೋಸ್, ಮುಸ್ಲಿಮ್ ಲೀಗಿನ ಡಾಕ್ಟರ್ ಕಿಚ್ಲು, ಕಾಂಗ್ರೆಸ್ ನೇಶನಲಿಸ್ಟರ ಪರವಾಗಿ ಮಹ್ಮದ್ ಆಲಮ್, ಸಿಖ್ ಜನರ ಪರವಾಗಿ ಸರ್ದಾರ್ ಸಾರ್ದೂಲ್ ಸಿಂಗರವರು ಮಾತಾಡಿದರು. 'ತಂದೆಯವರು ಉಪನಿವೇಶನಗಳ ಸ್ವರಾಜ್ಯ ಪಡೆಯಲು ಸೋತರೆ ಎರಡು ವರ್ಷಗಳ ನಂತರ ಸಂಪೂರ್ಣ ಸ್ವಾತಂತ್ರ್ಯ ಸರಕಾರದ ರಚನೆಯನ್ನು ತಯಾರಿಸಲು ಮಗನನ್ನು ಆರಿಸಲಾಗುವದು, ಇದು ಲಿಬರಲ್ ಪಕ್ಷದವರಿಗೆ ಅಪ್ಪರು ಸಂದರ್ಭ, ಬ್ರಿಟಿಷರೊಂದಿಗೆ ಕಡೇ ಸಂಧಾನ" ಎಂದು ಆಲಮ್‌ರವರೂ, "ಎತ್ತಾಸದ ದೊಡ್ಡ ಮುಂದಾಳುಗಳು ಅಹಿಂಸಾತತ್ವವನ್ನು ಬೋಧಿಸಿದರಿಂದ ಇಷ್ಟರವರೆಗೆ ನಾವು ಕೈಕಟ್ಟಿ ಸುಮ್ಮನಿದ್ದೆವು. ಆದರೆ ಈಗ ಬೇಸತ್ತಿದ್ದೇವೆ' ಎಂದು ಸಾರ್ದೂಲ್ ಸಿಂಗರೂ ಹೇಳಿದರು.

ಈ ಠರಾವಿನಲ್ಲಿ 'ಡೊಮಿನಿಯನ್ ಸ್ಟೇಟಸ್'ಗೆ ಸಂಬಂಧಿಸುವ ಭಾಗವನ್ನು ತೆಗೆದುಹಾಕಿ ಅದರ ಬದಲು 'ಸಂಪೂರ್ಣ ಜವಾಬ್ದಾರಿಯ ಸರ್ಕಾರ'ವೆಂದು ಹಾಕಬೇಕೆಂದು ಪಂಡಿತ್ ಮೋಹನರಾಯವರು ಉಪ ಸೂಚನೆಯನ್ನು ತಂದರು. ಈ ಸೂಚನೆಯು ಓಟಿಗೆ ಹಾಕಲಾಗಿ ಅಪಜಯ ಹೊಂದಿತು

ಮೊಳವೀಯರ ಠರಾವು ಓಟಿಗೆ ಹಾಕಿದಲ್ಲಿ ಬಹುಸಂತೋಷದಿಂದ ಮಂಜೂರಾಯಿತು ನೆರೆದಿದ್ದವರಲ್ಲಿ ಮೂರರಲ್ಲಿ ಒಂದು ಪಾಲು ಮಾತ್ರ ಇದಕ್ಕೆ ಪರವಾಗಿ ಓಟು ಕೊಟ್ಟರು. ಬಾಕಿಯವರು ಸುಮ್ಮನಾದರು.

(ಸಶೇಷ)

## ಪ್ರಕಟನೆ.

ಅಮ್ಮತ್ತಿನಾಡು ಹೊಸೂರು ಗ್ರಾಮದ 'ವಿಕ್ಟರ್ ತೋಟ'ದಲ್ಲಿರುವ ಚೆಪ್ಪುಡಿರ ಕಾರ್ಯಪ್ಪನು ಈ ಮೂಲಕ ಸರ್ವರಿಗೂ ತಿಳಿಯಪಡಿಸುವದೇನಂದರೆ—

ಸಂನ್ 1928ನೇ ಇಸವಿ ಜೂನ್ ತಾ. 3ನೆ ಭಾನುವಾರ ದಿನ ಸಾಯಂಕಾಲ 7 ಘಂಟೆಗೆ ನನ್ನ 6ನೇಯ ಸಹೋದರ ಸಿ. ಟಿ. ಪೊನ್ನಪ್ಪನು ಬಾಯಿಲದಲ್ಲಿದ್ದವನು ಮಡಿಕೇರಿ ಆಸ್ಪತ್ರೆಯಲ್ಲಿ ದಿವಾಧೀನವಾದನು. ತನ್ಮಧ್ಯೆ ನನ್ನ "ಕ್ರಿಸ್ಟಲ್ ಪ್ಯಾಲೆಸ್" ಭವನದಲ್ಲು ಇಟ್ಟಿದ್ದ ಕಬ್ಬಿಣದ ಪೆಟ್ಟಿಗೆಯಲ್ಲಿ (Iron safe) ಅಂದಾಜು ಒಂದು ಸಾವಿರ ರೂಪಾಯಿ ಕ್ರಯಬಾಳುವ ಒಂದು ಚಿನ್ನದ ಪಟ್ಟಿ ಟೋಪಿ (ಕೊಂಬತೊಪ್ಪಿಯ. ಕೊಡಗಿನ ರಾಜರಾಗಿದ್ದ ದೊಡ್ಡ ವೀರರಾಜೇಂದ್ರ ಒಡೆಯರವರು ನನ್ನ ಪ್ರಪಿತಾಮಹರಾದ ಚೆಪ್ಪುಡಿರ ಪೊನ್ನಪ್ಪನ್ನಾ ದಿವಾನರಿಂಗ ಬಹುಮಾನಾರ್ಥವಾಗಿ ವಿಳಾಸದಿಂದ ಕೊಟ್ಟಂಥಾದ್ದು) ಇದ್ದದ್ದು, ಬೀಗಹಾಕಿರುವ ಕಬ್ಬಿಣದ ಪೆಟ್ಟಿಗೆಯಲ್ಲು ಈಗ ಅದು ಕಾಣದೆ ಇರುವದರಿಂದ ಮೃತನಾಗಲಿ, ಯಾ ಇತರೇ ಯಾರಾಗಲಿ, ಯಾರಲ್ಲಾದರೂ ಗಿರ್ವಿಯಾ ವಿಕ್ರಯ ಮಾಡಿರುವದಾದರೆ ಅವರು ದಯವಿಟ್ಟು ಈ ಸಂಗತಿ ನನಗ ತಿಳಿಸಬೇಕಾಗಿ ಕೋರುತ್ತೇನೆ ಅಲ್ಲದೆ ಗಿರ್ವಿಯಾ ವಿಕ್ರಯದ ಮೊಬಲಗನ್ನು ಕ್ಷಣವೇ ತಿಳಿಸಿದಲ್ಲಿ ಕೊಡಲು ಸಿದ್ಧನಾಗಿದ್ದೇನೆ

ಹೊಸೂರು ವಿಕ್ಟರ್ ತೋಟ ಸಿ. ಟಿ. ಕಾರ್ಯಪ್ಪ.
ಪೊಳ್ಳಿಬೆಟ್ಟ (ತಾ. 20-8-28)
4—3


## ಜ್ವರ

ಎ ಗನ್ಯೆ ಪಿ ಚ್ ಸ್ಟರ್

ಮಲೇರಿಯಾ, ಇನ್‌ಫ್ಲುಯೆಂಝಾ, ಸಚುಕಜ್ವರ ಅಡವಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲ ಶುದ್ಧಿಯಾಗಿ ಬೆವರು ಒಂದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪ ಟಪಾಲು ವೆಚ್ಚ ಬೇರೆ.

ಸಾ ರ ಸಾ ಪ ರಿ ಲ್ಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವುದಕ್ಕೆ ಇದು ಖಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿಗ ರೂ. ೧—೦—೦ ಟಪ್ಪಾಲು ವೆಚ್ಚ ಬೇರೆ.

ಕರ್ಣಾಕ ಬ್ರದರ್ಸ್
12—10 ದುಬಾಶ್ ಲೇನ್,
ಗಿರಗಾಂವ್, ಮುಂಬಾಯಿ.



### ಟೇಬಲ್ ಟೈಂಪೀಸ್ ಇನಾಂ.

ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು ಬಹು ಮೇಲಾದ ಗಟ್ಟಿ ಲೀವರ್ ಸಾಮಾನುಗಳಿಂದ



(ಸ್ವಿಸ್ ಮೇಡ್) ತಯಾರಿಸಿದೆ. ಬರಾಬರು ಗಂಟೆಯನ್ನು ತೋರಿಸುವವು ಇದರ ಕೇಸು ಭಂಗಾರಕ್ಕೆ ಸರಿಸಮನಾಗಿರುವುದು ಇವಕ್ಕೆ ಖಾತ್ರಿಯಾದ ೯ ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗ ಟೇಬಲ್ ಟೈಂಪೀಸನ್ನು ಇನಾಮಾಗಿ ಕೊಡುವೆವು. ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್ 1ಕ್ಕೆ ರೂ. 6—8—0.

ವಿಳಾಸ:— ಲೀಗಲ್ ಟ್ರೇಡಿಂಗ್ ಕಂಪೆನಿ,
52-16 ಪೊ. ಬಾಕ್ಸ್ ನಂ. 243, ಮದರಾಸು.



### ಫ್ಯಾನ್ಸಿ ಲೀವರ್ ಪಾಕೆಟ್ ವಾಚ್.

(15 ಬಹುಮಾನಗಳು ಸಹಿತ ರೂ. 4—8—0)

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟಿರುವದು

ಈ ಗಡಿಯಾರವು ಕೋಟಕ್ಕೆ ಗಂಭೀರವಾಗಿಯೂ, ಜೇಬಿಗೆ ಅಡಕವಾಗಿಯೂ ಇರುವಂತೆ ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು ಮತ್ತು ಒಳಗಡೆ ಕೆಂಪು ಕಲ್ಲುಗಳು ಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವದು. ಹಾಗೇ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ್ ಡೋಮ್ ಇರುವದು.



ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್‌ಮೆಂಟುಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ:—ಫೌಂಟನ್ ಪೇನ್ 1. ಸೆಂಟು ಬಾಟಲ್ 1. ವಜ್ರದ ಗುಂಡಿಗಳು 4 ಪಾಕೆಟ್ ಕನ್ನಡಿ 1. ಗಡಿಯಾರದ ಸರಪಣಿ 1 ಸುವಾಸನೆ ಸೋಪು 1 ಪೆನ್ನಾಕತ್ತಿ 1 ರೋಲ್ಡ್ ಗೋಲ್ಡ್ ಭಂಗಾರದ ಉಂಗುರ 1 ರೋಲ್ಡ್ ಗೋಲ್ಡ್ ಭಂಗಾರದ ನೆಕ್‌ಲೇಸ್ ಎಂಬ ಕತ್ತಿನ ಹಾರ 1 ದಂತದ ಬಾಚಣಿಗೆ 1. ಕೈ ಗುಂಡಿಗಳ ಸೆಟ್ 1. ಕೈ ವಸ್ತ್ರ. ಈ 15 ಬಹುಮಾನಗಳು ಮತ್ತು ಖಾತ್ರಿಯಾದ 3 ವರುಷ ಗ್ಯಾರಂಟಿ ಸಹಿತ. ಗಡಿಯಾರ 1ಕ್ಕೆ ಕ್ರಯ ರೂ. 4-8—0

ವಿಳಾಸ — ವಿ. ಎಸ್. ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್, ನಂ. 105,
52—1 ಮದರಾಸು.



### ಯಾರಿಗೆ ತಾನೇ ಸಂತೋಷವಾಗಲಾರದು!

ನೀವು ಕೊಡುವ ಕ್ರಯಕ್ಕಿಂತಲೂ ಎರಡರಷ್ಟು ಜಾಸ್ತಿಯಾಗಿ ಬಂದರೆ?

ಈ ಚಿತ್ರದಲ್ಲಿ ಕಾಣುವ ರಿಜಿಸ್ಟರಾದ ಟೈಂಪೀಸನ್ನು ಕೊಳ್ಳುವವರಿಗೆ 200 ರೂ. ಗಳ

ಕ್ರಯ ಕಾಣುವಂಥ ಒಂದು ಜೊತೆ 7 ಕಲ್ಲಿನ ಒಲೆಯನ್ನು (Earrings) ಒಂದು 14 ಕ್ಯಾರೆಟ್ಟಿನ ಭಂಗಾರದಂಥ ನಿಬ್ಬು ಹಾಕಿರುವ ಇಂಗ್ಲಿಷ್ ಮೇಡ್ ಫೌಂಟೆನ್‌ಪೇನಾ ಒಂದು, ಗಂಡಸರೂ, ಹೆಂಗಸರೂ ಉಪಯೋಗಿಸಬಹುದಾದ ರೋಲ್ಡ್ ಗೋಲ್ಡ್ ಭಂಗಾರದ (Necklace) ಕತ್ತಿನ ಹಾರ ಒಂದು ಇನಾಮಾಗಿ ಕೊಡುವವು ಒಂದನ್ನು ತರಿಸಿ ನೋಡಿರಿ. ಬೇಡವಾದರೆ ನಿಮ್ಮ ಹಣವನ್ನು ವಾಪಸುಕೊಡುವೆವು.

ಕ್ರಯ ರೂ. 4—4—0 ಮಾತ್ರ. ಟಪ್ಪಾಲು ಖರ್ಚು 0—6—0.

ವಿಳಾಸ — ಕೆ. ನಾಥಮುನಿ ಅಂಡ್ ಸನ್ಸ್,
168. ಜೈನಾ ಬಜಾರ್ ರೋಡ್,
52—16 ಮದರಾಸು.



### ಕಮ್ಮಿ ಕರೀದಿಯನ್ನು ನೆನಪಿನಲ್ಲಿಡಿ!
### ಲೋಕವಿಖ್ಯಾತವಾದ "ಜಿಗ್ ಜೇಗ್"



ಟೈಂಪೀಸ್ ಸೈಜು 8 × 4½"
ಬೆಲೆ ರೂ. 3—0—0 ಮಾತ್ರ.
3 ವರ್ಷ ಖಾತ್ರಿಕೊಡುತ್ತೇವೆ.

ಈ ಟೈಂಪೀಸು ಬಹಳ ಉತ್ತಮವಾದ ಮತ್ತು ಬಲವಾದ ಅತಿಹಾಸಗಳಿಂದ ಮಾಡಲ್ಪಟ್ಟು, ಚಿತ್ರದಲ್ಲಿ ತೋರಿಸಿರುವಂತೆ ಸುಂದರವಾದ ಕೆತ್ತನೆಯ ಸ್ಟಾಂಡ್‌ನೊಳಗೆ ಇರಿಸಲ್ಪಟ್ಟಿದೆ. ನೋಡಲು ಸುಂದರವಾಗಿಯೂ, ಸರಿಯಾದ ಗಂಟೆಯನ್ನು ತೋರಿಸುವುದಾಗಿಯೂ ಇರುವ ಈ ಟೈಂಪೀಸನ್ನು ಅನೇಕರು ಉಪಯೋಗಿಸಿ ತೃಪ್ತಿಹೊಂದಿದ್ದಾರೆ.

ಇಂಥಾ ಟೈಂಪೀಸಿಗೆ 3—0—0 ರೂ. ಮಾತ್ರ ಬೆಲೆ.

ಏಜಂಟರು: — ಧೈರ್ಯಲಕ್ಷ್ಮಿ ಅಂಡ್ ಕಂಪೆನಿ,
52—4 ಪೋಸ್ಟು ಬಾಕ್ಸು ನಂ. 265. ಮದ್ರಾಸು.



### ನೂರಾರು ಔಷಧಗಳೇಕೆ?

ಪ್ರತ್ಯಕ್ಷ ಕಲ್ಪತರುವೇ ಔಷಧರೂಪವಾಗಿ ಅವತರಿಸಿದೆ.]

## ಕಲ್ಪತರು ಮಿಶ್ರಣ

ಇಂಡಿಯಾ ಗವರ್ನಮೆಂಟಿನಲ್ಲಿ ರಜಿಸ್ಟರಾಗಿದೆ

ಎಷ್ಟು ಕಾಲದ ಸಂತೆಕಲಯಾದರೂ ಇನ್ನು ಅನ್ಯ ಔಷಧಗಳಿಗೆ ಮಣಿಯದ ಮಲೇರಿಯಾ ಜ್ವರ, ಇನ್‌ಫ್ಲುಯೆಂಝಾ, ನ್ಯುಮೋನಿಯಾ ಮೊದಲಾದುವುಗಳಿಂದ ಸುಮ್ಮನೆ ಮತ್ತು ನರಳುವಿರೇತಕ್ಕೆ? ಪ್ರತ್ಯಕ್ಷ ಕಲ್ಪತರುವೇ ಅವತಾರವೆತ್ತಿ ಬಂದಿರುವಂತೆ ನಿಮಗೆ ಆರೋಗ್ಯದಾನವನ್ನು ಮಾಡಲು ಇದೊಂದು ಸಿದ್ಧೌಷಧವು ಇದೆ ಎಂಬುದನ್ನು ಮರೆಯಬೇಡಿರಿ. ಸಾಮರ್ಥ್ಯವಂತವಾದ ಈ ಔಷಧವು ಮೊದಲನೆ ಗುಟುಕಿನ ಸೇವನೆಯೊಡನೆಯೇ ರೋಗಗಳೆಲ್ಲ ಗುಣಮುಖವಾಗುವಂತೆ ಮಾಡುವ ಶಕ್ತಿಯುಳ್ಳದಾಗಿದೆ. ಇದೊಂದು ಔಷಧವು ನಿಮ್ಮಲ್ಲಿದ್ದರೆ ಬೇರೆ ಭಯವೇಕೆ? ಯಾವತ್ತು ಬಗೆಯ ಜ್ವರಗಳ ಮೇಲೆ, ಅವರಲ್ಲೂ ಯಕೃತ್ ಪ್ಲೀಹಗಳು ವಿಕಾರ ಹೊಂದಿದಾಗಲೂ, ಜ್ವರಗಟ್ಟಿ ಬೆಳೆದು ದೇಹವು ಅಶಕ್ತಿ ಹೊಂದಿದಾಗಲೂ, ಇದೊಂದೇ ಔಷಧವು ಸಂಪೂರ್ಣ ಗುಣವನ್ನುಂಟುಮಾಡಿ, ರೋಗೋತ್ಪಾಟನವನ್ನು ಸಾಧಿಸುವುದು ಎಂಬುದಕ್ಕೆ ಸಾವಿರಾರು ರೋಗಿಗಳು ಗುಣಹೊಂದಿ ಅದನ್ನು ಹೊಗಳುತ್ತಿರುವುದೇ ಸಾಕ್ಷಿಯಾಗಿದೆ. ಅದೂ ಅಲ್ಲದೆ, ಹಕೀಮರು, ವೈದ್ಯರು, ಪದವೀಧರ ಡಾಕ್ಟರು, ಕೆಮಿಸ್ಟರೇ ಮೊದಲಾದ ಔಷಧ ವ್ಯಾಪಾರಿಗಳು ಸಹ ಅದನ್ನೇ ಹೊಗಳುತ್ತಾರೆ. ಅನಾರೋಗ್ಯವನ್ನು ಹೋಗಲಾಡಿಸಿ, ಆರೋಗ್ಯವನ್ನು ಪುನರ್ಘಟಿಸಿ ಕೊಡುವ ಕಲ್ಪತರು ಮಿಶ್ರಣವನ್ನು ಎಲ್ಲೆಲ್ಲಿಯೂ ಪಡೆಯಬಹುದು. ಬೇಕಾದರೆ ನಮಗೇ ಬರೆಯಿರಿ. ಮಾಹಿತಿ ಪತ್ರಗಳೂ ಸಿಕ್ಕುತ್ತವೆ. ಇದು ಅಲ್ಲದೆ ನಮ್ಮಲ್ಲಿ ಎಲ್ಲ ಜಾತಿಯ ಆಯುರ್ವೇದೀಯ ಔಷಧಗಳು ಯಾವಾಗಲೂ ಸಿದ್ಧವಾಗಿವೆ.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ

12—4 ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,
ಮಂಗಳೂರು, (ದಕ್ಷಿಣ ಕನ್ನಡ.)

# ವರ್ತಮಾನ ಸಂಗ್ರಹ.

## ಒಳದೇಶ.

ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗು ಈ ತಾ 14 ನೇ ಶುಕ್ರವಾರ ಕೌನ್ಸಿಲ್ ಹಾಲ್‌ನಲ್ಲಿ ನಡೆಯುವದು

ಕೊಡಗಿನ ಡೆಪ್ಯುಟಿ ಕಮಿಷನರ್ ... ಶ್ರೀಯುತರು ಈ ತಾ 6 ರಲ್ಲಿ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ

ಮಡಿಕೇರಿಯಲ್ಲಿ ಮಳೆಯು ಬಹಳ ಕಡಿಮೆಯಾಗಿ ಚೆನ್ನಾಗಿ ಬಿಸಿಲು ಕಾಯುತ್ತಿದೆ. ದೇಶದ ಎಲ್ಲಾ ಕಡೆಗಳಲ್ಲಿ ಹೀಗೆಯೇ ಮಳೆ ಕಡಿಮೆಯಾಗಿದೆ ಎಂದು ವರ್ತಮಾನವಿದೆ

"ಕೊಡಗು" ಕಂಪನಿಯ ಡೈರೆಕ್ಟರುಗಳ ಮೀಟಿಂಗೊಂದು ಈ ತಾ. 15 ರಲ್ಲಿ ಬೆಳಿಗ್ಗೆ 11 ಗಂಟೆಗೆ ವೀರರಾಜಪೇಟೆಯ ... ಸ್ಟೋರ್ ಹಾಲ್‌ನಲ್ಲಿ ನಡೆಯುವದು

ಸರ್ವ ಪಕ್ಷಗಳ ಪರಿಷತ್ತು ಕಳೆದ ತಾ 28ರಿಂದ 30ರವರೆಗೆ ಲಕ್ನೋದಲ್ಲಿ ಡಾಕ್ಟರ್ ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ನಡೆದು ನೆಹರು ಕಮಿಟಿಯವರ ವರದಿಯನ್ನು ಹೆಚ್ಚು ಕಮ್ಮಿ ಸಂಪೂರ್ಣವಾಗಿ ಮಂಜೂರು ಮಾಡಲಾಯಿತು

ದಕ್ಷಿಣ ಆಫ್ರಿಕಾದ ಏಜೆಂಟರಾಗಿರುವ ಮಾನ್ಯ ವಿ. ಎಸ್. ಶ್ರೀನಿವಾಸ ಶಾಸ್ತ್ರಿಯವರು ನಿವೃತ್ತಿ ಹೊಂದಿದ ಮೇಲೆ ಸರ್ ಮಹಮದ್ ಹಬೀಬುಲ್ಲರವರು ಆ ಉದ್ಯೋಗಕ್ಕೆ ನೇಮಿಸಲ್ಪಡುವರೆಂದು ... ಪತ್ರಿಕೆಯ ಸೂಚನೆಯುಂಟು.

ಅಮರನಾಥಕ್ಕೆ ಹೋಗುತ್ತಿದ್ದ ಹಿಂದೂ ಯಾತ್ರಿಕರನೇಕರು ಬೆಟ್ಟದ ಮೇಲಿನ ಘೋರವಾದ ಗಾಳಿ ಮಳೆಯ ದೆಸೆಯಿಂದ ಮೃತರಾಗಿರುವರೆಂದೂ, ನೂರಾರು ಜನರು ಕಷ್ಟಕ್ಕೀಡಾಗಿರುವರೆಂದೂ ವರ್ತಮಾನ. ಕಾಶ್ಮೀರದ ಸರಕಾರದವರು ಅವರಿಗೆ ತಕ್ಕ ಸಹಾಯವನ್ನು ಕಳುಹಿಸಿರುವರಂತೆ

ಎಸೆಂಬ್ಲಿಯ ಮೆಂಬರುಗಳಾರನ್ನು ಸಮ್ಮತಿ ಪ್ರಾಯದ ಕಮಿಟಿಯ ಮೆಂಬರರಾಗಿ ನೇಮಿಸದೆ ತನ್ನ ಕಾರಾಗೆಳು ... ಹೊರಗೆ ಬಿಟ್ಟರು ಕಾಂಗ್ರೆಸ್ ಪಕ್ಷದ ಮೆಂಬರುಗಳು ಮೀಟಿಂಗನ್ನು ಬಿಟ್ಟು ಹೊರಟು ಹೋದರು ಸರಕಾರದವರಿಗೆ ... ಕಳೆದ ಫೆಬ್ರವರಿಯಲ್ಲಿ ಕಮಿಷನಿನೊಂದಿಗೆ ಸಹಕರಿಸಬಾರದೆಂದು ನಿರ್ಧರಿಸಿದ ಕೌನ್ಸಿಲು ಈಗ ಸಹಕರಿಸಲು ಒಪ್ಪಿದ್ದು ಆಶ್ಚರ್ಯವೇ ಸರಿ!

## ವಿದೇಶ.

ಸಾಧಾರಣವಾದ ಕತ್ತಲಾದಲ್ಲಿ ಬಹಳ ಒಳ್ಳೆಯ ಫೋಟೋಗಳನ್ನು ತೆಗೆಯುವ ಏರ್ಪಾಡನ್ನು ಇಬ್ಬರು ಇಂಗ್ಲಿಷ್ ಯುವಕರು ಕಂಡು ಹಿಡಿದಿರುವರಂತೆ

ಜನಾಂಗಗಳ ಕೂಟದ 9ನೇ ಎಸೆಂಬ್ಲಿಯು ಜಿನೀವಾದಲ್ಲಿ ಈ ತಾ 3ರಲ್ಲಿ ಪ್ರಾರಂಭವಾಯಿತು ಡೆನ್ಮಾರ್ಕಿನ ಪ್ರತಿನಿಧಿಯಾದ ... ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು

ಪಶ್ಚಿಮ ಯುರೋಪಿನ ... ಕೊಲ್ಲಿಯ ... ಎಂಬಲ್ಲಿ ... ಒಂದು ಗ್ರಾಮವು ಬಿದ್ದು ...



### ನಿದರ್ಶಕಶಾಸ್ತ್ರಿಯು ಪತ್ನಿಯರ ಲಕ್ಷಣವೇನು?

ಒಹಿಯೋ ಎಂಬಲ್ಲಿ ಒಂದು ಪ್ರೌಢ ವಿದ್ಯಾಶಾಲೆಯ ವಿದ್ಯಾರ್ಥಿಗಳು ಮೇಲಿನ ವಿಷಯವನ್ನು ಕೂಲಂಕಷವಾಗಿ ಪರೀಕ್ಷಿಸಿದಾಗ ಮದುವೆಯಾಗಲಿರುವ ಅನೇಕ ಯುವಕರಿಗೆ ತಮ್ಮ ಹೆಂಡತಿಯರು ಗೃಹಕೃತ್ಯವನ್ನು ನಡೆಸುವುದರಲ್ಲಿ ಬಹಳ ಚತುರರಾಗಿರಬೇಕೆಂದೂ ಅದನಂತರ ರೂಪವಾನ್ಯಾಗ ... ದೇಹಧಾರ್ಢ್ಯವೂ, ಮೇಧಾಶಕ್ತಿಯೂ, ಇವೆಲ್ಲವೂ ಇದ್ದ ನಂತರ ಸಂಸಾರವನ್ನು ನಡೆಯುವ ಅಭಿಲಾಷೆಯೂ ಇದ್ದರೆ ಸಾಕೆಂದು ನಿಶ್ಚಯವಾಯಿತು

ಆಗತ್ಯವಾಗಿರಬೇಕಾದ ಲಕ್ಷಣಗಳಲ್ಲಿ ಸೌಂದರ್ಯವು ಕಡೆಯದಾಗಿಯೇ ಪರಿಣಮಿಸಿತು. ಆದರೆ ಶೇಕಡ 3೦ ವಿದ್ಯಾರ್ಥಿಗಳು ತಮ್ಮ ಹೆಂಡತಿಯರು ಕೇವಲ ಐಶ್ವರ್ಯವಂತರಾಗಿಯೇ ಇರಬೇಕೆಂದು ಅಪೇಕ್ಷಿಸಿದರು ... ದು ನಿಜವೇ!

### ಬಟ್ಟೆ ಹೊಲಿಯುವ ಸೂಜಿಯು ಮಗುವನ್ನು ಕೊಲ್ಲುವುದೇ?

ಹಾರ್ಟ್‌ಫರ್ಡ್ ಹಿಲ್ಸ್ ಎಂಬಲ್ಲಿ ಸುಮಾರು ಎರಡು ವರ್ಷ ಪ್ರಾಯದ ಹುಡುಗಿಯ ತಾಯಿಯು ಮಗುವಿನ ಬಟ್ಟೆಯನ್ನು ಹೊಲಿದು ಅಜಾಗರೂಕತೆಯಿಂದ ಅಲ್ಲೇ ಸಿಕ್ಕಿಸಿಬಿಟ್ಟಿದ್ದಳು ಅದೇ ಬಟ್ಟೆಯನ್ನು ಅನಂತರ ಮಗುವು ಹಾಕಿಕೊಂಡು ಆಡುತ್ತಿದ್ದಿತು ತಾಯಿಯು ತನ್ನ ಕೆಲಸವನ್ನು ಮಾಡುತ್ತಿದ್ದಳು ಸ್ವಲ್ಪ ಸಮಯದ ನಂತರ ಮಗುವು ಒಂದೇ ಬಾರಿ ನೋವಾದಂತೆ ಅಳಲು ಪ್ರಾರಂಭಿಸಿತು. ಅಳುವುದನ್ನು ಕೇಳಿದ ತಾಯಿಯು ಒಡನೆ ಓಡಿಹೋಗಿ ಮಗುವನ್ನು ಪರೀಕ್ಷಿಸಲು ಒಂದು ಸೂಜಿಯು ಮಗುವಿನ ಎದೆಯಲ್ಲಿ ಹೃದಯ ಭಾಗಕ್ಕೆ ಚುಚ್ಚಿಕೊಂಡಿದ್ದಿತು. ಒಡನೆ ಡಾಕ್ಟರರನ್ನು ಕರೆ ಕಳುಹಿಸಿದಳು ಅವರು ಬಂದು ನೋಡುವುದರೊಳಗಾಗಿಯೇ ಮಗುವು ಮೃತಪಟ್ಟಿತು ಅನಂತರ ಶಸ್ತ್ರಕ್ರಿಯೆ ನಡೆಸಿ ದೇಹವನ್ನು ಪರೀಕ್ಷಿಸಿ ನೋಡಲು ಸೂಜಿಯು ಹೃದಯದವರೆಗೆ ಹೊಕ್ಕು ರಕ್ತನಾಳಿಯನ್ನು ಘಾಯ ಮಾಡಿದ್ದರಿಂದ ಮಗುವು ಮೃತಪಟ್ಟಿತೆಂದು ವೇದ್ಯವಾಯಿತು ಈ ರೀತಿಯ ಆಕಸ್ಮಿಕವು ಬಹಳ ಅಪೂರ್ವವಾದುದು. ಇಷ್ಟರ ವರೆಗೆ ಇಂಥಾ ಸಂಭವವು ವೈದ್ಯರ ದೃಷ್ಟಿಗೆ ಗೋಚರವಾಗಿದ್ದು ಇದೇ ಮೊದಲೆಂದೂ ತಿಳಿಯಬಂದಿದೆ. ಹೀಗೆ ಬಟ್ಟೆ ಹೊಲಿಯುವ ಸಮ್ಮ ಸ್ತ್ರೀಯರು ಸೂಜಿಯನ್ನು ಮಡಗುವುದರ ವಿಷಯ ಎಚ್ಚರದಿಂದಿರಬೇಕೆಂಬುದನ್ನು ಈ ಮೇಲಿನ ಆಕಸ್ಮಿಕವು ಸ್ಥಿರಪಡಿಸುತ್ತದೆ.

## "ಔಷಧ ಸೇವೆಗಳಿಗಿಂತಲೂ ಬರೇ ಜೀವನ ಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು"

### ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರಬಲ್. ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯ ಚಂದ್ರಿಕೆ" ಎಂಬ ಆರೋಗ್ಯಬೋಧಕವಾದ ಮಾಸ ಪತ್ರಿಕೆಯು, ನಿಮಗೆ ಆರೋಗ್ಯ ದೃಢಕಾಯರಾಗಿ ಜೀವಿಸುವ ಮಾರ್ಗವನ್ನೂ ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟ ರೋಗ ನಿವಾರಣವನ್ನೂ ಬೋಧಿಸುವುದು

ಈ ಆರೋಗ್ಯ ಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ ಬಹು ಕಾಲದಿಂದ ಶಸ್ತ್ರ ಚಿಕಿತ್ಸೆಯಲ್ಲಿಯೂ ಔಷಧ ಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ ಯಾವಾಗಲೂ ನಿಮ್ಮ ಬಳಿಯಲ್ಲಿ ಇರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಎಂಬೀ ಮಾಸ ಪತ್ರಿಕೆಯಲ್ಲಿ ಆಹಾರ ಕ್ರಮ ರೋಗನಿವಾರಣೋಪಾಯಗಳು ಮಕ್ಕಳ ಪೋಷಣೆ, ರೋಗಿಗಳ ಉಪಚಾರ ಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು ಅಂಗಸಾಧನೆಯಿಂದಾಗುವ ಪ್ರಯೋಜನಗಳು, ಸಾಂಕ್ರಾಮಿಕ ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿ ತಂದೆ ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವುವು ಆರೋಗ್ಯಚಂದ್ರಿಕೆಯನ್ನು ನಿಮ್ಮ ... ಗೃಹವೈದ್ಯನೆಂದೇ ಎಣಿಸಿರಿ

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ, ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ ಕನ್ನಡ ತೆಲುಗ ತಮಿಳು ಇಂಗ್ಲೀಷ್ ಈ ನಾಲ್ಕು ಭಾಷೆಗಳಲ್ಲಿಯೂ ಪ್ರತಿ ತಿಂಗಳಲ್ಲಿಯೂ ಪ್ರತ್ಯೇಕವಾಗಿ ... ಪತ್ರಿಕೆಯು ಒಂದು ಬೀಳುವುದು ... ಅಂಚೆ ಖರ್ಚು ಕೂಡ ನೀವು ಕೊಡಬೇಕಾದುದಿಲ್ಲ

12-1 ಮ್ಯಾನೇಜರ್, ಆರೋಗ್ಯಚಂದ್ರಿಕೆ, 12೦ ಪೊಂಬುಶೆಟ್ಟಿ ಬೀದಿ, ಮದರಾಸು

### ಆಲ್-ಇಂಡಿಯಾ ಮ್ಯೂಚ್ಯುವಲ್ ಏಯಿಡ್ ಆಂಡ್ ಪೂವರ್ ಹೌಸಸ್ ಅಸೋಸಿಯೇಷನ್ ಲಿಮಿಟೆಡ್.

### ಬೇಕಾಗಿದೆ.

ಮಡಿಕೇರಿಯಲ್ಲಿರುವ ಸಂಘದ ಬ್ರಾಂಚ್ ಆಫೀಸಿಗೆ ವಮುಖ್ಯಸ್ಥರಾಗಿ ಕೆಲಸ ಮಾಡತಕ್ಕ ಒಬ್ಬ ಸೆಕ್ರಟರಿಯು ಬೇಕಾಗಿದೆ

ಯೋಗ್ಯತೆಗೂ ಮತ್ತು ಕೆಲಸಕ್ಕೂ ತಕ್ಕಂತೆ ಸಂಬಳವು ಗೊತ್ತುಮಾಡಲ್ಪಡುತ್ತೆ. ಬಾಕಿ ವಿಷಯಗಳಿಗೆ ಈ ಕೆಳಗಿನ ಅಡ್ರೆಸ್ಸಿಗೆ ಬರೆಯತಕ್ಕದ್ದು. ಅಥವಾ ಈ ಕೆಳಗೆ ರುಜು ಮಾಡುವವರನ್ನು ಮುಖತಾ ನೋಡತಕ್ಕದ್ದು

ತಾ 2-...-28 } ಸಿ. ದೇವಯ್ಯ.
4-2 } ಚೇರ್ಮನ್ ಪ್ರಾವಿನ್ಶಿಯಲ್ ಬೋರ್ಡ್

### ಕಾಂಗ್ರೆಸ್ ಮೆಂಬರರಾಗಿರಿ

ಕಾಂಗ್ರೆಸ್ ಮೆಂಬರರಾಗುವವರು ಈ ಕೆಳಗಿನ ಯೋಗ್ಯತೆಯನ್ನು ಪಡೆದಿರಬೇಕು.—

೧ ನೀವು ೧೮ ವರ್ಷದವರು ಅಥವಾ ೧೮ ವರ್ಷಕ್ಕೆ ಮೇಲ್ಪಟ್ಟವರಿರಬೇಕು.

೨ ನೀವು ಈ ಕೆಳಗೆ ಬರೆದ ಕಾಂಗ್ರೆಸ್ಸಿನ ಧ್ಯೇಯಕ್ಕೆ ಒಪ್ಪಿಕೊಂಡಿರಬೇಕು. "ಯೋಗ್ಯ ಮತ್ತು ಶಾಂತ ಉಪಾಯಗಳಿಂದ ಹಿಂದುಸ್ಥಾನದೊಳಗಿನ ಜನರು, ಹಿಂದುಸ್ಥಾನಕ್ಕಾಗಿ ಸ್ವರಾಜ್ಯವನ್ನು ಸಂಪಾದಿಸಬೇಕೆಂಬುದೇ ಹಿಂದುದೇಶದ ರಾಷ್ಟ್ರೀಯ ಮಹಾಸಭೆಯ ಧ್ಯೇಯವಾಗಿರುತ್ತದೆ

೩ ನೀವು ಕಾಂಗ್ರೆಸ್ ಮೆಂಬರಾಗಬೇಕಾದರೆ, ಕಾಂಗ್ರೆಸ್ಸಿನ ಧ್ಯೇಯದ ಮೇಲೆ ಸಹಿ ಮಾಡಿ ವಾರ್ಷಿಕ ನಾಲ್ಕು ಆಣೆಗಳನ್ನು ಕೊಡಬೇಕಾಗುವದು. ಇಲ್ಲವೇ ಅಖಿಲ ಭಾರತೀಯ ಚರಕಾ ಸಂಘಕ್ಕೆ ನಿಮ್ಮ ಸ್ವಂತ ಕೈಯಿಂದ ನೆಗೆದ 2೦೦೦ ಗಜ ನೂಲನ್ನಾದರೂ ಕೊಡಬೇಕಾಗುವದು. ಅಂದರೆ ಮಾತ್ರ ನೀವು ಮೆಂಬರಾದಂತಾಯಿತು

ಸೇವಾದಲದ ಕೆಲಸಗಾರರು ಸದ್ಯಕ್ಕೆ ಕಾಂಗ್ರೆಸ್ ಮೆಂಬರರನ್ನು ಮತ್ತು ಸೇವಾದಲದ ಮೆಂಬರರನ್ನು ಕೂಡಿಸಲು ತೊಡಗಿದ್ದಾರೆ. ಈ ಕಾರ್ಯದಲ್ಲಿ ಅವರಿಗೆ ಎಲ್ಲರೂ ಸಹಾಯ ಮಾಡಬೇಕಾಗಿ ವಿನಂತಿ ಮಾಡಿಕೊಳ್ಳುವೆ.

ಮೈಸೂರು } ತಮ್ಮ
2೮-5-2೮ } ನಾ. ಸು. ಹರ್ಡೀಕರ.
ಸೇವಾದಲದ ಕಾರ್ಯದರ್ಶಿ.

ವಾಟಕ್ಕೆ ಆದ ಈ ತಾ 2 ರಿಂದ ನಿಲ್ಲಿಸಲ್ಪಟ್ಟಿದೆಯೆಂದೂ, ಕೆಲವು ದಿವಸಗಳಲ್ಲಿ ಸಿದ್ದಾಪುರ ತಿತಿಮತಿ ರಸ್ತೆಯಿಂದ ಕಟ್ಟಲ್ಪಟ್ಟ ಮೈದಾನಕ್ಕೆ ಬಿಡಲಾಗುವದೆಂದೂ ಎಕ್ಸಿಕ್ಯೂಟಿವ್ ಇಂಜಿನಿಯರವರು ತಿಳಿಸುತ್ತಾರೆ. ಆದುದರಿಂದ ಈ ರಸ್ತೆಗಾಗಿ ಈಗ ಬಸ್ಸ್ ಸರ್ವಿಸು ನಿಲ್ಲಿಸಲ್ಪಟ್ಟಿದೆ

### ಹಿಂದೂದೇಶ.

ಟೆಲಿಫೋನಿಯ ... ಈ ಸೆಪ್ಟೆಂಬರು 1ರಿಂದ ಜಾರಿಗೆ ಬಂದಿದೆ.

ಸೈಮನ್ ಕಮಿಷನಿನ ... ಕಮಿಟಿಯೊಂದಿಗೆ ಸಹಕರಿಸುವದಿಲ್ಲವೆಂದು ... ನಿರ್ಧರಿಸಿರುವರು.

ನವೆಂಬರು ತಾ 1ರಲ್ಲಿ ... ಹಿಂದೂ ವಿಶ್ವವಿದ್ಯಾಲಯದ ಕಾನ್ವೊಕೇಶನ್ ... ಡಾಕ್ಟರ್ ... ಒಪ್ಪಿ ...

... ಪ್ರಾರಂಭವಾಗಿದೆ. ಇಂಥಾ ಸಮಯದಲ್ಲಿ ಮೈಸೂರು ... ಹಿಂದೂಸ್ಥಾನದ ನಿದ್ದೆಯ ರಾಜಕೀಯ ಮುನ್ನ ಸಂಗತಿಗಳನ್ನು ಕುರಿತು ಪ್ರಾರಂಭ ಭಾಷಣ ಮಾಡುವದು ... ಆದರೆ ಈ ಸಾರಿ ಅವರು ಭಾಷಣವೇನೂ ಮಾಡಲಿಲ್ಲ ಎಸೆಂಬ್ಲಿಯ ... ನಾಮಧಾರಿ ... ಪಟೇಲರವರ ಮೇಲೆ ... "ಟಯಿಮ್ಸ್ ಆಫ್ ಇಂಡಿಯಾ" ಪತ್ರಿಕೆಯು ಹೊರಿಸಿದ ಆಕ್ಷೇಪಣೆ ... ಮಿ. ಗಯಾ ಪ್ರಸಾದ್ ಸಿಂಗ್ ರವರು ... ಅದ ... ಅಧ್ಯಕ್ಷರು ...

ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಸೈಮನ್ ಕಮಿಷನಿನೊಂದಿಗೆ ಸಹಕರಿಸಲು ... ಮೆಂಬರುಗಳ ಒಂದು ಕಮಿಟಿಯನ್ನು ... ಸೂಚನೆಯು ಮೆಂಬರರು ... ಮಂಜೂರಾಯಿತು ಇದೇ ವಿಷಯ ... ಕೌನ್ಸಿಲಿನಲ್ಲಿ ಚರ್ಚಿಸಿ ಬಂದು ... ಸ್ವರಾಜ್ಯ ಪಕ್ಷದ ಮೆಂಬರುಗಳು ... ಅಧ್ಯಕ್ಷರ ... ರವರು ...

1 ನೆ ... ರವರಲ್ಲ.

### 'ಕೊಡವರ ಹಬ್ಬ'

ಪ್ರಿಯರೇ,

ತಾರೀಖು 24–8–28 ರ 'ಕೊಡಗು' ಪತ್ರಿಕೆಯಲ್ಲಿ ಹೊರ ಪ್ರದೇಶಗಳಲ್ಲಿ ಕೊಡವರ ಹಬ್ಬವೆಂಬ ಬಾತ್ಮಿಯನ್ನು ನೋಡಿದೆನು. ಅದರ ನಮಗೆನೊಂತ ... ದೂರದಲ್ಲಿರುವ ಕೊಡವರು ಒಂದಾಗಿ ಸೇರಿ ಹಬ್ಬ ಮಾಡುವುದು ಸರಿಯಷ್ಟೆ. ಇಲ್ಲಿ ಚಿಕ್ಕಮಗಳೂರು ಪ್ರಾಂತ್ಯದವರು ಸೇರಿ ನಮಗೆ ಪದ್ಧತಿಗನುಸಾರವಾಗಿ ಹಬ್ಬ ಮಾಡಲು ನಮಗಳಂಥವರು ನಿಶ್ಚಯಮಾಡಿದರೆ, ಅದಕ್ಕೆ ಯಾರು ಅಡ್ಡಿಮಾಡುವವಿಲ್ಲವೆಂದು ನನ್ನ ಭಾವನೆ ನೀವು ಕೂಡ ನನ್ನೊಂದು ದಸ್ತತ್ತು ಹಾಕಿ ಸರಿಯಾದ ವಿಳಾಸ ಕೊಟ್ಟು ಬಾತ್ಮಿ ಬರೆದಿದ್ದರೆ ಪತ್ರವಾಗಲಿ ಅಕ್ಷರವಾಗಲಿ ನಾವುಗಳು ಆಲೋಚಿಸುತ್ತಿದ್ದೆವು. ಆದ ಕಾರಣ ದಯವಿಟ್ಟು ನಿಜವಾದ ಅಡ್ರೆಸು ಬರೆದು ತಿಳಿಸಬೇಕಾಗಿ ನನ್ನ ಕೋರಿಕೆ ಯು. ಎ. ಟಿ.

ರ್ಣ ಸ್ವರಾಜ್ಯಕ್ಕೆ ಹೋರಾಡುತ್ತೇವೆ." ಎಂದು ಹೇಳಿ ಮೇಲಿನ ಕಡೇ ವಾಕ್ಯದ ಅಭಿಪ್ರಾಯವುಳ್ಳ ಒಂದು ಪತ್ರಕ್ಕೆ ಹಲವರು ಸಹಿ ಹಾಕಿದನ್ನು ಅವರು ಸಭೆಯ ಮುಂದಿಟ್ಟರು. ಇವರ ವೀರ ಭಾಷಣಕ್ಕೆ ಸಭೆಯ ಬಹುಮತದವರು ಸ್ವೈ ಎನ್ನುವಂತೆ ಕಂಡುಬಂತಂತೆ. ಇವರ ಅಭಿಪ್ರಾಯಕ್ಕೆ ಒತ್ತಾಸೆಯಾಗಿ ಜಮಯುತುಲ ಉಲೆಮದ ಅಧ್ಯಕ್ಷರಾದ ಮೌಲಾನ ಕಿಫಾಯತುಲ್ಲಾ, ಖಿಲಾಫತ್ ಕಮಿಟಿಯ ಪರವಾಗಿ ಶಾಫಿ ದಾವಿ, ಸುಭಾಸ್ ಚಂದ್ರಬೋಸ್, ಮುಸ್ಲಿಮ್ ಲೀಗಿನ ಡಾಕ್ಟರ್ ಕಿಚ್ಲು, ಕಾಂಗ್ರೆಸ್ ಸೋಶಲಿಸ್ಟರ ಪರವಾಗಿ ಮಹ್ಮದ್ ಆಲಮ್, ಸಿಖ್ ಜನರ ಪರವಾಗಿ ಸರ್ದಾರ್ ಸಾರ್ದೂಲ್ ಸಿಂಗರವರು ಮಾತಾಡಿದರು. 'ತಂದೆಯವರು ಉಪನಿವೇಶನಗಳ ಸ್ವರಾಜ್ಯ ಪಡೆಯಲು ಸೋತರೆ ಎರಡು ವರ್ಷಗಳ ನಂತರ ಸಂಪೂರ್ಣ ಸ್ವಾತಂತ್ರ್ಯ ಸರ್ಕಾರದ ರಚನೆಯನ್ನು ತಯಾರಿಸಲು ಮಗನನ್ನು ಆರಿಸಲಾಗುವದು, ಇದು ಲಿಬರಲ್ ಪಕ್ಷದವರಿಗೆ ಅತ್ಯೈರು ಸಂದರ್ಭ, ಬ್ರಿಟಿಷರೊಂದಿಗೆ ಕಡೇ ಸಂಧಾನ" ಎಂದು ಆಲಮ್‌ರವರೂ, "ವಿಶ್ವಾಸದ ದೊಡ್ಡ ಮುಂದಾಳುಗಳು ಅಹಿಂಸಾತತ್ವವನ್ನು ಬೋಧಿಸಿದರಿಂದ ಇಷ್ಟರವರೆಗೆ ನಾವು ಕೈಕಟ್ಟಿ ಸುಮ್ಮನಿದ್ದೆವು; ಆದರೆ ಈಗ ಬೇಸತ್ತಿದ್ದೇವೆ" ಎಂದು ...

## ಟೇಬಲ್ ಟೈಂಪೀಸ್ ಇನಾಂ.

ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಲೀವರ್ ಸಾಮಾನುಗಳಿಂದ (ಸ್ವಿಸ್ ಮೇಡ್) ಆಯಾರಿಸಿದೆ. ಸರಿಯಾದ ಗಂಟೆಯನ್ನು ತೋರಿಸುವವು. ಇದರ ಕೇಸು ಭಂಗಾರಕ್ಕೆ ಸರಿಸಮನಾಗಿರುವುದು. ಇವಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಟೇಬಲ್ ಟೈಂಪೀಸನ್ನು ಇನಾಮಾಗಿ ಕೊಡುವೆವು. ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್ 1ಕ್ಕೆ ರೂ. 6—8—0.



ವಿಳಾಸ: — ಲೀಗಲ್ ಟ್ರೇಡಿಂಗ್ ಕಂಪೆನಿ,

52–16 ಪೋ. ಬಾಕ್ಸ್ ನಂ. 213, ಮದರಾಸು.

## ಯಾರಿಗೆ ತಾನೇ ಸಂತೋಷವಾಗಲಾರದು!

ನೀವು ಕೊಡುವ ಕ್ರಯಕ್ಕಿಂತಲೂ ಎರಡರಷ್ಟು ಜಾಸ್ತಿಯಾಗಿ ಬಂದರೆ?

ಈ ಚಿತ್ರದಲ್ಲಿ ಕಾಣುವ ರಿಜಿಸ್ಟರಾದ ಟೈಂಪೀಸನ್ನು ಕೊಳ್ಳುವವರಿಗೆ 200 ರೂ. ಗಳ ಕ್ರಯ ಕಾಣುವಂಥ ಒಂದು ಜೊತೆ 7 ಕಲ್ಲಿನ ಒಲೆಯನ್ನು (Earings) ಒಂದು 14 ಕ್ಯಾರೆಕ್ಟಿನ ಭಂಗಾರದಂಥ ನಿಬ್ಬು ಹಾಕಿರುವ ಇಂಗ್ಲಿಷ್ ಮೇಡ್ ಫೌಂಟೆನ್‌ಪೇನಾ ಒಂದು, ಗಂಡಸರೂ, ಹೆಂಗಸರೂ ಉಪಯೋಗಿಸಬಹುದಾದ ರೋಲ್ಡ್ ಗೋಲ್ಡ್ ಭಂಗಾರದ (Necklace) ಕತ್ತಿನ ದಾರ ಒಂದು ಇನಾಮಾಗಿ ಕೊಡುವೆವು. ಒಂದನ್ನು ತರಿಸಿ ನೋಡಿರಿ. ಬೇಡವಾದರೆ ನಿಮ್ಮ ಹಣವನ್ನು ವಾಪಸುಕೊಡುವೆವು.

ಕ್ರಯ ರೂ. 4—4—0 ಮಾತ್ರ. ಟಪ್ಪಾಲು ಖರ್ಚು 0—6—0.




**Silks!** **Silks!!** **Silks!!!**

Sarees with gold borders. Body plain or spotted in various designs and colours

| | | |
|---|---|---|
| | Rs 30/- to Rs 80/- | |
| 5 yds. by 45 inches plain body | 40/- to 90/ | |
| do spotted body | 50/- to 100/ | |
| 6 yds. by 45 inches plain body | 60/- to 120/ | |
| do spotted body | 12 - to 15/- | |
| Headkerchief 44 by 44 inches price | 1/8/- to 5 | per yd |

Gold Lace borders. Ribbons. price from

*For further particulars, please write to:–*

BHARADWAJ & CO.,

BROCADE, EMBROIDARY & SILK MANUFACTURERS,

Benares City.

52–1



ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಲು ಸುಸಮಯ.

# ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ (ಹೊಸ ಪುಸ್ತಕ)

## (ಎರಡನೆಯ ವರ್ಷಾರಂಭವಾಗಿದೆ.)

'ಹರಿದಾಸ ಸೇವಾ ಸಮಿತಿ' ಯವರಿಂದ ಬಹಳ ಶುದ್ಧ ರೀತಿಯಲ್ಲಿ ಪರಿಶೋಧಿಸಲ್ಪಟ್ಟು ಹೊಸ ಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಲಿರುವ 'ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ' ಯನ್ನು ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿರಿ! ಇದರಲ್ಲಿ ಜಗದ್ವಂದ್ಯರಾದ ಶ್ರೀ ಪುರಂದರದಾಸರು, ಶ್ರೀ ಕನಕದಾಸರೇ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ನುಡಿದ ದಿವ್ಯ ಭಗವನ್ನಾಮ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ಕ್ರೌನ್ ಅಷ್ಟಪತ್ರದ ನಾಲ್ವತ್ತು ಪುಟಗಳ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಲಿವೆ. ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೆ ಹಾಸಲು ಖಚಿತ) ಸಾಮಾನ್ಯ ಪ್ರತಿ ರೂ. ೧—೪—೦ ಉತ್ತಮ ಪ್ರತಿ ರೂ. ೨—೪—೦

## ಪ್ರಥಮ ಸಂಪುಟದ ಬೈಂಡಾದ ಪ್ರತಿಗಳು.

| | ಸಾದಾ ಬೈಂಡು | ದಪ್ಪ ರಟ್ಟಿನ ಬೈಂಡು | ಕಿತ್ತಾಸಾದು ಬೈಂಡು |
|---|---|---|---|
| ಸಾಮಾನ್ಯ ಪ್ರತಿ | ೧—೮—೦ | ೧—೧೨—೦ | ೨—೬—೦ |
| ಉತ್ತಮ ಪ್ರತಿ | ೨—೪—೦ | ೨—೮—೦ | ೩—೦—೦ |

ಅಂಚೇಹಾಸಲು ಪ್ರತ್ಯೇಕ

ವಿಳಾಸ — ಸಂತೋಷ ಪ್ರಕಟನಾಲಯ,

ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.

12–6


## ಕೆನರಾ ಹೈಸ್ಕೂಲ್ ಲೋಟರಿ.

ಮಂಗಳೂರಲ್ಲಿರುವ ಕೆನರಾ ಹೈಸ್ಕೂಲಿನ ಮತ್ತು ಕೆನರಾ ಬಾಲಕಿಯರ ಸ್ಕೂಲಿನ ಸಹಾಯಾರ್ಥವಾಗಿ ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರ ಅಪ್ಪಣೆ ಪಡೆದು ಅತೀ ಮಹತ್ವದ ಒಂದು ಲೋಟರಿಯನ್ನು ತೆಗೆಯಲು ನಿಶ್ಚೈಸಿಯದೆ. ಇದರ ಆಡಳಿತೆಯನ್ನು ಜವಾಬ್ದಾರಿಯುಳ್ಳ ಪ್ರಮುಖ ಗೃಹಸ್ಥರು ನಡಿಸುವರು.

ಒಟ್ಟು ಟಿಕೇಟಿನ ಮೌಲ್ಯ ಒಂದುಲಕ್ಷ ರೂಪಾಯಿ. ಈ ಪೈಕಿ ರೂಪಾಯಿ 15,000 ಖರ್ಚಿನ ಬಗ್ಗೆ ವಜಾ ಮಾಡೋಣ. ರೂಪಾಯಿ 10,000 ಶಾಲೆಗಳ ಉಪಯೋಗಕ್ಕಾಗುವದು. ರೂಪಾಯಿ 45,000 ರೂಪಾಯಿ ದ ಒಗ್ಗೆ ವಿನಿಯೋಗಿಸಲ್ಪಡುವದು ಮತ್ತು 45,000 ರೂಪಾಯಿಗಳನ್ನು 3043 ಲೋಟರಿ ಬಹುಮಾನಗಳಾಗಿ ಹಂಚಲಾಗುವದು. ಆ ಬಹುಮಾನಗಳ ತಪಶೀಲು ಕೆಳಗೆ ಕಾಣಿಸಿಯದೆ.

1ನೇ ಬಹುಮಾನ ರೂಪಾಯಿ 12500. 2ನೇ ಬಹುಮಾನ ರೂಪಾಯಿ 5000. ರೂಪಾಯಿ 1000ದರದ 2 ಬಹುಮಾನಗಳು. ರೂಪಾಯಿ 500 ದರದ 3 ಬಹುಮಾನಗಳು. ರೂಪಾಯಿ 250 ದರದ 6 ಬಹುಮಾನಗಳು ರೂಪಾಯಿ100 ದರದ 10 ಬಹುಮಾನಗಳು. ರೂಪಾಯಿ 50 ದರದ 20 ಬಹುಮಾನಗಳು. ರೂಪಾಯಿ 20 ದರದ 100ಬಹುಮಾನಗಳು ರೂಪಾಯಿ 10ದರದ 800 ಬಹುಮಾನಗಳು. ರೂಪಾಯಿ 5ದರದ 2100 ಬಹುಮಾನ ಗಳು.

ಟಿಕೇಟು ಮಾರಾಟವು ತಾ. 4—1—29ಕ್ಕೆ ಮುಗಿಯುವದು ಮತ್ತು ಲೋಟರಿಯು ತಾ. 26—1—29ರಲ್ಲಿ ತೆಗೆಯಲ್ಪಡುವದು.

ಪ್ರತಿ ಒಂದು ಟಿಕೇಟಿನ ಬೆಲೆಯು ಬರೇ ಒಂದು ರೂಪಾಯಿ ಆಗಿರುತ್ತದೆ. 21 ಟಿಕೇಟುಗಳು ಮಾರಿದವರಿಗೆ ಪ್ರತಿಫಲವಾಗಿ ಒಂದು ಟಿಕೇಟು ಜಾಸ್ತಿ ಸಿಕ್ಕುವದಲ್ಲದೆ ಹೆಚ್ಚು ಟಿಕೇಟುಗಳು ಮಾರಿದವರಿಗೆ ವಿಶೇಷ ಬಹುಮಾನಗಳು ದೊರೆಯುವವು. ಈ ವಿವಾಯಿ ಯೋಗ್ಯವಾದ ಎರಡು ಸಂಸ್ಥೆಗಳಿಗೆ ಮುಖ್ಯವಾಗಿ ಕೆನರಾ ಹೈಸ್ಕೂಲಿನ ಸಂಬಂಧವಾಗಿ ಈಗ ತೆರೆಯಲ್ಪಡಬೇಕಾಗಿ ನಿಶ್ಚೈಸಿದ ಕೈಗಾರಿಕೆ ಶಾಲೆಗೆ ಕೂಡ ಅನುಕೂಲ ಸಹಾಯ ಮಾಡಿದಂತಾಗುವದು. ಆ ಸೀಕ್ಷ್ಣಯ ... ಏಜೆಂಟ ರು ಲೋಟರಿ ಕಮಿಟಿಯ ಹಾನರರಿ ಸೆಕ್ರೆಟರಿಯವರಿಗೆ ಕೆಳಗೆ ಕಾಣಿಸಿದ ವಿಳಾಸಕ್ಕೆ ಬರೆಯಬಹುದು. ಏಜಂಟರು ಎಲ್ಲಾ ಕಡೆಗಳಲ್ಲಿಯೂ ಕಮಿಟಿಯವರಿಗೆ ಬೇಕಾಗಿರುವರು.

ಬಿ. ಮಂಜುನಾಥ ಬಾಳಿಗ,

ತಾ 15—3—28. ಹಾನರರಿ ಸೆಕ್ರೆಟರಿ

ಕೆನರಾ ಹೈಸ್ಕೂಲ್ ಲೋಟರಿ ಕಮಿಟಿ

ಪ್ರಿಟೋ ಗಲ್ಲಿ, ಫಳನೀರ,

ಮಂಗಳೂರು

6–5


## ಎಗ್ಸ್ಟ್ರಾ ಚ್ ಫೀವರ್

ಮಲೇರಿಯಾ, ಇನ್‌ಫ್ಲುಯೆಂಝಾ, ನಡುಕಜ್ವರ ಆಡವಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲ ಶುದ್ಧಿಯಾಗಿ ಬೆವರು ಬಂದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪. ಟಪ್ಪಾಲು ವೆಚ್ಚ ಬೇರೆ.

## ಸಾರಸಾಪರಿಲ್ಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವುದಕ್ಕೆ ಇದು ಖಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿಗೆ ರೂ. ೧—೦—೦. ಟಪ್ಪಾಲು ವೆಚ್ಚ ಬೇರೆ.

ಕರ್ನಾಟಕ ಬ್ರದರ್ಸ್

12–10 ದುಬಾಷ್ ಲೇನ್,

ಗಿರಗಾಂವ, ಮುಂಬಾಯಿ.



... ಮಲೇರಿಯದ ಮೈಲಿಗೆಯ ಜ್ವರ, ಇನ್‌ಫ್ಲುಯೆಂಝಾ, ನ್ಯುಮೋನಿಯಾ ಮೊದಲಾದವುಗಳಿಂದ ಸುಮ್ಮನೆ ಯಾತಕ್ಕೆ ನರಳುವಿರೀ? ಪ್ರತ್ಯಕ್ಷ ಕಲ್ಪತರುವೇ ಅವತರಿಸಿ ಬಂದಿರುವಂತೆ ನಿಮಗೆ ಆರೋಗ್ಯದಾನವನ್ನು ಮಾಡಲು ಇದರಿಂದು ಸಿದ್ಧೌಷಧವು ಇದೆ ಎಂಬುದನ್ನು ಮರೆಯಬೇಡಿರಿ. ಸಾಮರ್ಥ್ಯಪಂತವಾದ ಈ ಔಷಧವು ಮೊದಲನೆ ಗುಟುಕಿನ ಸೇವನೆಯೊಡನೆಯೇ ರೋಗಗಳೆಲ್ಲ ಗುಣಮುಖವಾಗುವಂತೆ ಮಾಡುವ ಶಕ್ತಿಯುಳ್ಳದಾಗಿದೆ. ಇದೊಂದು ಔಷಧವು ನಿಮ್ಮಲ್ಲಿದ್ದರೆ ಬೇರೆ ಭಯವೇಕೆ? ಯಾವತ್ತೂ ಬಗೆಯ ಜ್ವರಗಳ ಮೇಲೆ, ಅವರಲ್ಲೂ ಯಕೃತ್ ಪ್ಲೀಹಗಳು ವಿಕಾರ ಹೊಂದಿದಾಗಲೂ, ಜ್ವರಗಳು ಬಿಟ್ಟು ದೇಹವು ಅಶಕ್ತಿ ಹೊಂದಿದಾಗಲೂ, ಇದೊಂದೇ ಔಷಧವು ಸಂಪೂರ್ಣ ಗುಣವನ್ನುಂಟುಮಾಡಿ, ರೋಗೋತ್ಪಾಟನವನ್ನು ಸಾಧಿಸುವುದು ಎಂಬುದಕ್ಕೆ ಸಾವಿರಾರು ರೋಗಿಗಳು ಗುಣದಿಂದ ಅದನ್ನು ಹೊಗಳುತ್ತಿರುವುದೇ ಸಾಕ್ಷಿಯಾಗಿದೆ. ಅದೂ ಅಲ್ಲದೆ, ವಕೀಲರು, ವೈದ್ಯರು, ಪದವೀಧರ ಡಾಕ್ಟರು, ಕಮಿಷ್ನರೇ ಮೊದಲಾದ ಔಷಧ ವ್ಯಾಪಾರಿಗಳು ಸಹ ಅದನ್ನೇ ಹೊಗಳುತ್ತಾರೆ. ಅನಾರೋಗ್ಯವನ್ನು ಹೋಗಲಾಡಿಸಿ, ಆರೋಗ್ಯವನ್ನು ಪರಿವರ್ಧಿಸಿ ಕೊಡುವ ಕಲ್ಪತರು ಮಿಶ್ರಣವನ್ನು ಎಲ್ಲೆಲ್ಲಿಯೂ ಪಡೆಯಬಹುದು. ಬೇಕಾದರೆ ನಮಗೇ ಬರೆಯಿರಿ. ಮಾಹಿತಿ ಪತ್ರಗಳೂ ಸಿಕ್ಕುತ್ತವೆ. ಇದು ಅಲ್ಲದೆ ನಮ್ಮಲ್ಲಿ ಎಲ್ಲ ತರದ ಆಯುರ್ವೇದೀಯ ಔಷಧಗಳು ಯಾವಾಗಲೂ ಸಿದ್ಧವಾಗಿವೆ.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ

12–4 ಶ್ರೀ ಸಮರ್ಥ ಆಯುರ್ವೇದಿಯ ಔಷಧಾಲಯ,

ಮಂಗಳೂರು, (ದಕ್ಷಿಣ ಕನ್ನಡ.)

# ವರ್ತಮಾನ ಸಂಗ್ರಹ.

## ಒಳದೇಶ.

ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗು ಈ ತಾ. 14 ನೇ ಶುಕ್ರವಾರ ಕೌನ್ಸಿಲ್ ಹಾಲ್‌ನಲ್ಲಿ ನಡೆಯುವದು.

ಕೊಳತ್ತೋಡ ಬೈಗೋಡು ಗ್ರಾಮದ ಮೆ॥ ಕೇಳಪಂಡ ಅಪ್ಪಯ್ಯನವರ ಪತ್ನಿಯವರು ಈ ತಾ. 6 ರಲ್ಲಿ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮಡಿಕೇರಿಯಲ್ಲಿ ಮಳೆಯು ಬಹಳ ಕಡಿಮೆಯಾಗಿ ಚೆನ್ನಾಗಿ ಬಿಸಿಲು ಕಾಯತೊಡಗಿದೆ. ದೇಶದ ಎಲ್ಲಾ ಕಡೆಗಳಲ್ಲೂ ಹೀಗೆಯೇ ಮಳೆ ಕಡಿಮೆಯಾಗಿದೆ ಎಂದು ವರ್ತಮಾನವಿದೆ.

"ಕೊಡಗು' ಕಂಪನಿಯ ಡೈರೆಕ್ಟರುಗಳ ಮೀಟಿಂಗೊಂದು ಈ ತಾ. 15 ರಲ್ಲಿ ಬೆಳಿಗ್ಗೆ 11 ಗಂಟೆಗೆ ವೀರಾಜಪೇಟೆಯ ಬಿಡ್ಡರ್ ಸ್ಟೋರ್ ಹಾಲ್‌ನಲ್ಲಿ ನಡೆಯುವದು.

ಕಳೆದ ಜುಲೈ ತಿಂಗಳಲ್ಲಿ ಕೊಡಗಿನಲ್ಲಿ 301 ಜನನಗಳೂ, 3/7 ಮರಣಗಳೂ ಆಗಿವೆ. ಇದರ ಪೈಕಿ 221 ಮರಣಗಳು ಮಲೇರಿಯ ಜ್ವರದಿಂದಲೂ, 102 ಬೇರೆ ಜ್ವರಗಳಿಂದಲೂ ಆಗಿವೆ

ಮಡಿಕೇರಿ ವೇದಾಂತ ಸಂಘದವರು ಶ್ರೀ ಕೃಷ್ಣಜಯಂತಿಯನ್ನು ಈ ದಿನ ಸಾಯಂಕಾಲ ಜವಿಡಿನವ್ವರ ಸಂಘದ ಹಾಲ್‌ನಲ್ಲಿ ಆಚರಿಸುವರು. 4½ ಗಂಟೆಯಿಂದ 7½ ಗಂಟೆವರೆಗೆ ಭಜನೆಯೂ, ಉಪನ್ಯಾಸವೂ, ಮತ್ತು ಹರಿಕಥೆಯೂ ನಡೆಯುವದೆಂದು ತಿಳಿಯಲಾಗಿದೆ.

ಜವಿಡಿನವ್ವರ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗು ಈ ತಾ. 15 ನೇ ಶನಿವಾರ ಮಧ್ಯಾಹ್ನ 2 ಗಂಟೆಗೆ ವೀರಾಜಪೇಟೆ ಖಾದಿ ಭಂಡಾರದಲ್ಲಿ ನಡೆಯುವದೆಂದು ತಿಳಿಯುತ್ತೇವೆ.

ನಟ್ಟಕೋಡಿನ ಒಂದು ಬಿಳೀ ದನವು ಕಡಸು ಸಮೇತ ಸುಮಾರು 15 ದಿವಸಗಳಿಂದ ಸಾಕಾರ್‌ಬೆಂದು ತನ್ನ ದನಗಳ ಜೊತೆಯಲ್ಲಿದೆಯೆಂದೂ, ಮಾಲೀಕರು ಬಂದು ಹಿಡಕೊಂಡು ಹೋಗಬಹುದೆಂದೂ ಅಮ್ಮತ್ತಿನಾಡಿನ ಕಿಣ್ಣಂಗಾಲ ಗ್ರಾಮದ ಮೆ॥ ಸೋಮೆಯಂಡ ಮುತ್ತಣ್ಣನವರು ತಿಳಿಸುತ್ತಾರೆ.

ವೀರಾಜಪೇಟೆ ಮುನ್ಸಿಪಲ್ ಕಮಿಟಿಗೆ ಕ್ರಿಶ್ಚಿಯನ್ 1 ಹಿಂದೂಗಳು 4, ಮುಸಲ್ಮಾನರು 3, ಕೊಡವರು 2, ಈ ಮೇರೆ ಪ್ರತಿನಿಧಿಗಳ ಸಂಖ್ಯೆಯನ್ನು ಬದಲಾಯಿಸಲು ಚೀಫ್ ಕಮಿಷನರು ಯೋಚಿಸಿರುವರೆಂದೂ, ಇದರ ಮೇಲೆ ಸೂಚನೆಗಳು ಯಾ ಆಕ್ಷೇಪಣೆಗಳಿರುವವರು ಅಕ್ಟೋಬರು 1ರ ಒಳಗೆ ಬರಕೊಳ್ಳಬೇಕೆಂದೂ ಕೊಡಗು ಗಜೆಟಿನಲ್ಲಿ ಪ್ರಕಟವಾಗಿದೆ.

ಅಪ್ಪ ಮಂಡ ಕೇಸಿನ ಸಂಬಂಧ ಮದ್ರಾಸಿನ ಎಗ್ಸಿಕ್ಯುಟಿವ್ ಕೌನ್ಸಿಲ್ ಮೆಂಬರಾಗಿದ್ದ ಸರ್ ಸಿ. ಪಿ. ರಾಮಸ್ವಾಮಿ ಐಯ್ಯರವರು ಈ ತಾ. 9 ರಲ್ಲಿ ಮಡಿಕೇರಿಗೆ ಬರುವರೆಂದೂ, ತಾ. 10 ಮತ್ತು 11ರ ಸಾಯಂಕಾಲಗಳಲ್ಲಿ ಲಕ್ನೋದ ಸರ್ವಪಕ್ಷ ಪರಿಷತ್ತಿನ ಮೇಲೂ, ಜನಾಂಗಗಳ ಕೂಟದ ಮೇಲೂ ಅವರಿಂದ ಭಾಷಣಗಳನ್ನು ಮಾಡಿಸಲು ಏರ್ಪಾಡು ನಡೆಯುತ್ತಿದೆಯಾಗಿಯೂ ವರ್ತಮಾನ.

ಎಂದಿನಂತೆ ಮಡಿಕೇರಿ ಕೊಡವರು ಕಳೆದ ಸೋಮವಾರ ಕೈಲ್‌ಮುಹೂರ್ತ ಹಬ್ಬವನ್ನು ಆಚರಿಸಿದರು. ಮಧ್ಯಾಹ್ನದ ಮೇಲೆ 3 ಗಂಟೆಗೆ ಮ್ಯಾನ್ಸ್ ಕಾಂಪೌಂಡಿನಲ್ಲಿ ತೆಂಗಿನಕಾಯಿಗೆ ಗುಂಡು ಹೊಡೆಯುವದು, ಓಡುವದು, ಹಾರುವದು ಮುಂತಾದ ಪಂದ್ಯಗಳನ್ನು ನಡೆಸಿ ಗೆದ್ದವರಿಗೆ ಇನಾಮುಗಳೂ, ಸರ್ಟಿಫ್ [illegible] ಮಿಠಾಯಿಯೂ ಹಂಚಲಾಯಿತು. ರಾತ್ರಿ [illegible] ಬಂಗಲೆ ಹಾಲ್‌ನಲ್ಲಿ ಔತನವೂ ಇತ್ತು.

ಮಡಿಕೇರಿ ಮೈಸೂರು ರಸ್ತೆಯ 5/1½ ಮೈಲಿನ ಒಳ [illegible] ಒಂದು ಭಾಗವು ಮಳೆ [illegible] ವಾಹನಗಳಿಗೆ [illegible] ಈ ತಾ. 1 ರಿಂದ ಮುಚ್ಚಲ್ಪಟ್ಟಿದೆಯೆಂದೂ, ಕೆಲವು ದಿವಸಗಳಲ್ಲಿ ಪಕ್ಕದಲ್ಲಿ ತಾತ್ಕಾಲಿಕ ರಸ್ತೆಯೊಂದು ಕಟ್ಟಲ್ಪಟ್ಟು ವಾಹನಕ್ಕೆ ಬಿಡಲಾಗುವದೆಂದೂ ಎಗ್ಸಿಕ್ಯುಟಿವ್ ಇಂಜಿನಿಯರವರು ತಿಳಿಸುತ್ತಾರೆ. ಆದುದರಿಂದ ಈ ರಸ್ತೆಯಾಗಿ ಈಗ ಬಸ್ಸು ಸರ್ವಿಸು ನಿಲ್ಲಿಸಲ್ಪಟ್ಟಿದೆ.

## ಹಿಂದೂದೇಶ.

ಪೆಟ್ರೋಲಿಯಂ ಹೆಚ್ಚಿನ ಬೆಲೆಯಾಗಿದ್ದ ರಸ್ತೆ ಈ ಸೆಪ್ಟಂಬರು 1ರಿಂದ ಜಾರಿಗೆ ಬಂದಿದೆ.

ಸೈಮನ್ ಕಮಿಷನಿನ ಪ್ರಾಂತ್ಯ ಕಮಿಟಿಯೊಂದಿಗೆ ಸಹಕರಿಸುವದಿಲ್ಲವೆಂದು ಕಲ್ಕತ್ತಾ ಕಾರ್ಪೊರೇಶನಿನವರು ತೀರ್ಮಾನಿಸಿರುವರು.

ನವಂಬರು ತಾ. 13ರಲ್ಲಿ ಕಾಶಿ ಹಿಂದೂ ವಿಶ್ವವಿದ್ಯಾಲಯದ ಕಾನ್ವೊಕೇಶನ್ ಭಾಷಣವನ್ನು ಮಾಡಲು ಡಾಕ್ಟರ್ ಅನಿಬೆಸಂಟರವರು ಒಪ್ಪಿ [illegible]

ಸರ್ವ ಪಕ್ಷಗಳ ಪರಿಷತ್ತು ಕಳೆದ ತಾ. 28ರಿಂದ 30ರ ವರೆಗೆ ಲಕ್ನೋದಲ್ಲಿ ಡಾಕ್ಟರ್ ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ನಡೆದು ನೆಹರು ಕಮಿಟಿಯವರ ವರದಿಯನ್ನು ಹೆಚ್ಚು ಕಡಿಮೆ ಸಂಪೂರ್ಣವಾಗಿ ಮಂಜೂರು ಮಾಡಲಾಯಿತು.

ದಕ್ಷಿಣ ಆಫ್ರಿಕಾದ ಏಜೆಂಟನಿಂದ ನಾಮಧಾರಿ ವಿ. ಎಸ್. ಶ್ರೀನಿವಾಸ ಶಾಸ್ತ್ರಿಯವರು ನಿವೃತ್ತಿ ಹೊಂದಿದ ಮೇಲೆ ಸರ್ ಮಹಮದ್ ಹಬೀಬುಲ್ಲಾರವರು ಆ ಉದ್ಯೋಗಕ್ಕೆ ನೇಮಿಸಲ್ಪಡುವರೆಂದು 'ಸಿಯಾಸತ್' ಎಂಬ ಪತ್ರಿಕೆಯ ಸೂಚನೆಯುಂಟು.

ಅಮರನಾಥಕ್ಕೆ ಹೋಗುತ್ತಿದ್ದ ಹಿಂದೂ ಯಾತ್ರಿಕರನೇಕರು ಬೆಟ್ಟದ ಮೇಲಿನ ಜೋರಾದ ಗಾಳಿ ಮಳೆಯ ದೆಸೆಯಿಂದ ಮೃತರಾಗಿರುವರೆಂದೂ, ನೂರಾರು ಜನರು ಕಷ್ಟಕ್ಕೀಡಾಗಿರುವರೆಂದೂ ವರ್ತಮಾನ. ಕಾಶ್ಮೀರದ ಸರ್ಕಾರದವರು ಅವರಿಗೆ ತಕ್ಕ ಸಹಾಯವನ್ನು ಕಳುಹಿಸಿರುವರಂತೆ.

ಎಸೆಂಬ್ಲಿಯ ಮೆಂಬರುಗಳ್ಯಾರನ್ನೂ ಸವ್ಮತಿ ಸ್ವಾಮದ ಕಮಿಟಿಯ ಮೆಂಬರರಾಗಿ ನೇಮಿಸದಕ್ಕೆ ತಕ್ಕ ಕಾರಣಗಳು ಇನ್ನೂ ಕಾಣಲ್ಪಡದೆ ಇರುವದರಿಂದ ಆ ಕಮಿಟಿಯ ಖರ್ಚಿಗೆ ಬೇಕಾಗಿರುವ ಒಂದು ಲಕ್ಷ ರೂಪಾಯಿಯನ್ನು ಎಸೆಂಬ್ಲಿಯ ಸ್ಟಾಂಡಿಂಗ್ ಫೈನಾನ್ಸ್ ಕಮಿಟಿಯವರು ಮಂಜೂರು ಮಾಡಿರುವದಿಲ್ಲ.

ವ್ಯವಸಾಯ ಅಭಿವೃದ್ಧಿಗಾಗಿ ಲಿನ್ಲಿತ್‌ಗೋ ವ್ಯವಸಾಯ ಕಮಿಷನಿನ ವರದಿಯಲ್ಲಿರುವ ನಿರ್ಣಯಗಳನ್ನು ಚರ್ಚಿಸುವ ಬಗ್ಗೆ ಪಂಜಾಬಿನ ವ್ಯವಸಾಯ ಇಲಾಖೆಯ ಮಂತ್ರಿಯವರು ಅಲ್ಲಿಯ ಉದ್ಯೋಗಸ್ಥರ ಮೀಟಿಂಗೊಂದನ್ನು ತಾ 1ರಲ್ಲಿ ನಡೆಸಿದರು. ಗವರ್ನರು ಆ ಸಭೆಯನ್ನು ತೆರದರು. ಬೇರೆ ಬೇರೆ ವಿಷಯಗಳ ಮೇಲೆ ಒಂದು ವಾರದಲ್ಲಿ ಅಭಿಪ್ರಾಯ ಕೊಡಲು ಸಭೆಯು ಉಪಕಮಿಟಿಗಳನ್ನು ನೇಮಿಸಿದೆ.

ಬೆಂಗಳೂರಿನ ಸತ್ಯಾಗ್ರಹದ ಮುಂದಾಳುಗಳನ್ನು ವಿಚಾರ ಮಾಡುತ್ತಿದ್ದ ಸ್ಪೆಶಲ್ ಮೇಜಿಸ್ಟ್ರೇಟರಾದ ಮಿ॥ ಕೋದಂಡ ಮುದಲಿಯಾರವರು ಮುನ್ಸಿಪಲ್ ಪ್ರೆಸಿಡೆಂಟರಾದ ಅಬ್ಬಾಸ್ ಖಾನ್‌ರಲ್ಲಿ ಪಕ್ಷಪಾತ ತೋರಿಸುತ್ತಾರೆಂದು ಅಪರಾಧಿಗಳ ಕಡೆ ವಕೀಲರು ಅರ್ಜಿ ಹಾಕಿದ ಕಾರಣ ಆ ಮೊಕದ್ದಮೆಯನ್ನು ನಂಜನಗೂಡಿನ ಇನ್ನೊಬ್ಬ ಮೇಜಿಸ್ಟ್ರೇಟರು ತನಿಕೆ ಮಾಡಬೇಕೆಂದು ಕೋರ್ಟಿನವರು ಒಪ್ಪಿರುವರಂತೆ.

ಲಕ್ನೋ ಪರಿಷತ್ತಿನಲ್ಲಿ ಪಂಜಾಬಿನ ಒಬ್ಬ ಸಿಖ್ ಪ್ರಮುಖರಾದ ಸರ್ದಾರ್ ಖಡಕ್‌ಸಿಂಗ್‌ರವರು ಸಂಪೂರ್ಣ ಸ್ವಾತಂತ್ರ್ಯವೇ ಹಿಂದೂದೇಶದ ಧ್ಯೇಯವಾಗಬೇಕೆಂದು ಭಾಷಣ ಮಾಡುವಾಗ 'ಸ್ವಲ್ಪ ಬಾಂಬುಗಳು ಮತ್ತು ಕೆಲವು ಪಿಸ್ತೂಲುಗಳು ತಮ್ಮ ಕೆಲಸವನ್ನು ಮುಗಿಸಿಯಾವು' ಎಂದು ಹೇಳಿದರೆಂದು ಅವರ ಮೇಲೆ ರಾಜದ್ರೋಹಕ್ಕಾಗಿ ಮೊಕದ್ದಮೆ ನಡೆಸಬೇಕಾಗಿ ಅಲ್ಲಿಯ ಡಿಸ್ಟ್ರಿಕ್ಟ್ ಅಧಿಕಾರಿಗಳು ಶಿಫಾರಸ್ಸು ಮಾಡಿರುವರೆಂದು ಸುದ್ದಿ.

ಪಂಡಿತ ಜವಾಹಿರ್‌ಲಾಲ್ ನೆಹರುರವರು 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್' ಎಂಬ ಹಿಂದೂದೇಶದ ಸಂಪೂರ್ಣ ಸ್ವಾತಂತ್ರ್ಯವೇ ಧ್ಯೇಯವಾಗಿರುವ ಸಂಸ್ಥೆಯನ್ನು ಸ್ಥಾಪಿಸಿರುವರು. ಇದಕ್ಕೆ ಯಸ್. ಶ್ರೀನಿವಾಸಯ್ಯಂಗಾರ್, ಸುಭಾಸ್ ಚಂದ್ರ ಬೋಸ್, ಡಾಕ್ಟರ್ ಕಿಚ್ಲು, ಮುರ್ತಿ, ಎಸ್. ಸತ್ಯಮೂರ್ತಿ, ಸರೋಜಿನೀದೇವಿ ಮೊದಲಾದ ಹಲವು ಪ್ರಮುಖರು ಸೇರಿರುವರು. ಈ ಸಂಘವು ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಒಂದು ಒಳ ಶಾಖೆಯಾಗಿರುವದು.

'ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯು ತಾ 1ರಲ್ಲಿ ಅಲ್ಲಾಹಾಬಾದಿನಲ್ಲಿ ಸೇರಿ ಆಲ್ ಪಾರ್ಟಿ ಕಾನ್ಫರೆನ್ಸು ಜಯಪ್ರದವಾಗಿ ಕೊನೆಗೊಂಡದಕ್ಕೆ ತೃಪ್ತಿಯನ್ನು ಸೂಚಿಸಿದರು. ಪಂಡಿತ ಜವಾಹಿರ್ ಲಾಲ್‌ರವರು ತಾನು ಸಂಪೂರ್ಣ ಸ್ವಾತಂತ್ರ್ಯ ಲೀಗನ್ನು ಹೊರಡಿಸಿರುವದರಿಂದಲೂ ತನಗೂ ಕಮಿಟಿ ಮೆಂಬರುಗಳಿಗೂ ಮತಭೇದವಿರುವದರಿಂದ [illegible] ರಾಜಿನಾಮೆಯನ್ನು ಕೊಟ್ಟಿದ್ದರು. ಅದನ್ನು [illegible] ತೆಗೆದುಕೊಳ್ಳಬೇಕೆಂದು ಕಮಿಟಿಯ ಅವರ [illegible] ಕೇಳಿಕೊಂಡಿರುತ್ತಾರೆ.

ಲೆಜಿಸ್ಲೇಟಿವ್ ಎಸೆಂಬ್ಲಿಯ ಮೀಟಿಂಗು ಈ ತಾ. 4ರಲ್ಲಿ ಸಿಮ್ಲಾದಲ್ಲಿ ಪ್ರಾರಂಭವಾಗಿದೆ. ಇಂಥಾ ಸಮಯದಲ್ಲಿ ವೈಸರಾಯರು ಹಿಂದೂಸ್ಥಾನದ ಸದ್ಯದ ರಾಜಕೀಯ ಮುಖ್ಯ ಸಂಗತಿಗಳನ್ನು ಕುರಿತು ಪ್ರಾರಂಭ ಭಾಷಣ ಮಾಡುವದು ವಾಡಿಕೆಯಾಗಿತ್ತು. ಆದರೆ ಈ ಸಾರಿ ಅವರು ಭಾಷಣವನ್ನೇ ಮಾಡಲಿಲ್ಲ. ಎಸೆಂಬ್ಲಿಯ ಅಧ್ಯಕ್ಷರಾದ ನಾಮದಾರ ವಿ. ಜೆ. ಪಟೇಲರವರ ಮೇಲೆ ಬೊಂಬಾಯಿಯ "ಟೈಮ್ಸ್ ಆಫ್ ಇಂಡಿಯಾ" ಪತ್ರಿಕೆಯು ಹೊರಿಸಿದ ಆಕ್ಷೇಪಣೆಗಳನ್ನು ಕುರಿತು ಮಿ॥ ಗಯಾ ಪ್ರಸಾದ್ ಸಿಂಗ್‌ರವರು ತಂದ 'ಅಡ್ಜರ್ನ್‌ಮೆಂಟ್ ಮೋಶನ್'ನ ಚರ್ಚೆಗೆ ಅಧ್ಯಕ್ಷರು ಎಡೆ ಕೊಡಲಿಲ್ಲ.

ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಸೈಮನ್ ಕಮಿಷನಿನೊಂದಿಗೆ ಸಹಕರಿಸಲು ಏಳು ಮೆಂಬರುಗಳ ಒಂದು ಕಮಿಟಿಯನ್ನು ಆರಿಸಬೇಕು ಎಂದು ಸರಕಾರಿ ಮೆಂಬರರು ತಂದ ಠರಾವು ಮಂಜೂರಾಯಿತು. ಇದೇ ವಿಷಯ ಠರಾವನ್ನು ಕೌನ್ಸಿಲಿನಲ್ಲಿ ಚರ್ಚಿಸಿ ಒಂದು ವರ್ಷವಾಗಿದ್ದರಿಂದ ಈ ಠರಾವನ್ನು ಈಗಲೇ ಚರ್ಚಿಸಕೂಡದೆಂದು ಸ್ವರಾಜ್ಯ ಪಕ್ಷದ ಮೆಂಬರುಗಳು ಎಷ್ಟು ವಾದಿಸಿದರೂ ಅಧ್ಯಕ್ಷರು ಠರಾವನ್ನು ಚರ್ಚೆಗೆ ಬಿಟ್ಟರು. ಕಾಂಗ್ರೆಸ್ ಪಕ್ಷದ ಮೆಂಬರುಗಳು ಎಡೆಬಿಡದೆ ಹೊರಟು ಹೋದರು. ಸರ್ಕಾರದವರಿಗೆ ಜಯವಾಯಿತು. ಕಳೆದ ಫೆಬ್ರವರಿಯಲ್ಲಿ ಕಮಿಷನಿನೊಂದಿಗೆ ಸಹಕರಿಸುವದಿಲ್ಲವೆಂದು ತೀರ್ಮಾನಿಸಿದ ಕೌನ್ಸಿಲು ಈಗ ಸಹಕರಿಸಲು ಒಪ್ಪಿದ್ದು ಆಶ್ಚರ್ಯವೇ ಸರಿ!

## ವಿದೇಶ.

ಸಾಧಾರಣದ ಕೆಮರಾದಲ್ಲಿ ವಿವಿಧ ಬಣ್ಣದ ಫೋಟೋಗಳನ್ನು ತೆಗೆಯುವ ವಿಧಾನವನ್ನು ಇಬ್ಬರು ಇಂಗ್ಲಿಷ್ ಯುವಕರು ಕಂಡು ಹಿಡಿದಿರುವರಂತೆ!

ಜನಾಂಗಗಳ ಕೂಟದ 9ನೇ ಎಸೆಂಬ್ಲಿಯು ಜಿನೀವಾದಲ್ಲಿ ಈ ತಾ. 3ರಲ್ಲಿ ಪ್ರಾರಂಭವಾಯಿತು. ದೆನ್ಮಾರ್ಕಿನ ಪ್ರತಿನಿಧಿಯಾದ ಜಾಹ್ಲೆಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಪಶ್ಚಿಮ ಯುರೋಪಿನ ಸ್ವೈಲ್ ಕೊಲ್ಲಿಯ ಬಳಿ ಓರ್ಕನೀಸ್ ಎಂಬಲ್ಲಿ ಕಲ್ಲುಯುಗದ ಒಂದು ಗ್ರಾಮವು ಬೀದಿ, ಮನೆಗಳ ಸಮೇತ ಭೂಮಿಯನ್ನು ಅಗೆಯುತ್ತಿದ್ದಾಗ ಒಳಗೆ ಕಾಣ ಸಿಕ್ಕಿದೆ.

ಫ್ರಾನ್ಸಿನ ಕಾಮರ್ಸ್ ಮಂತ್ರಿಯಾದ ಮಂ॥ ಬೊಕಾನೊವ್ಸ್ಕಿಯವರು ತಾ. 2ರಲ್ಲಿ ವಿಮಾನದಲ್ಲಿ ಹೋಗುತ್ತಿರುವಾಗ ಅಕಸ್ಮಾತ್ತಾಗಿ ಅದಕ್ಕೆ ಬೆಂಕಿ ಹಿಡಿದು ಅವರೂ, ಅದರಲ್ಲಿದ್ದ ಬೇರೆ ನಾಲ್ವರೂ ಸುಟ್ಟು ಬೂದಿಯಾಗಿ ಹೋದರು.

ಕೆಮಾಲ್ ಪಾಷಾರವರ ಅಧ್ಯಕ್ಷತೆಯಲ್ಲಿ ಪ್ರಮುಖರ ಮೀಟಿಂಗೊಂದು ನಡೆದು ತುರ್ಕಿಸ್ಥಾನದಲ್ಲಿ ಅರಬಿ ಅಕ್ಷರಗಳ ಬದಲಿಗೆ ಲ್ಯಾಟಿನ್ ಬರವಣಿಗೆಯಲ್ಲಿ ಒಂದು ಹೊಸ ಅಕ್ಷರ ಮಾಲೆಯನ್ನು ಮಂಜೂರು ಮಾಡಿರುವದೆಂದು ವರ್ತಮಾನ.

ಪ್ರಪಂಚದಲ್ಲಿರುವ ಹಡಗುಗಳಿಗಿಂತೆಲ್ಲಾ ದೊಡ್ಡದಾದ ಹಡಗನ್ನು ಈಗ ಬ್ರಿಟನಿನ ಬೆಲ್‌ಫಾಸ್ಟಿನಲ್ಲಿ ಕಟ್ಟುತ್ತಿದ್ದಾರೆ. ಅದು 60,000 ಟನ್ ಭಾರವಿರುವದಂತೆ. ಅದನ್ನು ಕಟ್ಟಲು ಇದು [illegible] ಪೌನುಗಳ ಖರ್ಚೂ, ಮೂರು ವರ್ಷ ಸಮಯವೂ ಬೇಕಾಗುವದಂತೆ.

ಇಂಡಿಯಾದ ಸ್ಟೇಟ್ ಸೆಕ್ರೆಟರಿಯಾದ ಲಾರ್ಡ್ ಬರ್ಕೆನ್ ಹೆಡ್ಡರವರು ರಾಜಕೀಯವನ್ನು ಬಿಟ್ಟು ವ್ಯಾಪಾರಕ್ಕೆ ಇಳಿಯುವರೆಂದೂ, ಬರುವ ನವಂಬರು ತಿಂಗಳಲ್ಲಿ ತನ್ನನ್ನು ಉದ್ಯೋಗದಿಂದ ಬಿಡುಗಡೆ ಮಾಡಬೇಕೆಂದು ಪ್ರಧಾನ ಮಂತ್ರಿಯವರನ್ನು ಕೇಳಿಕೊಂಡಿರುವರೆಂದೂ ಸುದ್ದಿ.

ಕೆಲ್ಲಾಗ್ ಶಾಂತಿ ಕರಾರಿಗೆ ಈಗಾಗಲೇ 40 ಜನಾಂಗಗಳು ಸಹಿ ಮಾಡಲು ಒಪ್ಪಿರುವರು. ಈ ಮಧ್ಯೆ ಇಂಗ್ಲೆಂಡಿಗೂ ಫ್ರಾನ್ಸಿಗೂ ಆಗಿರುವ ಗುಟ್ಟಿನ ಕರಾರಿನಲ್ಲಿ ಟಕ್ಕ ಫಿರಂಗಿಗಳುಳ್ಳ ಹಡಗುಗಳು ಎಷ್ಟನ್ನಾದರೂ ಇಟ್ಟುಕೊಳ್ಳಬಹುದೆಂದಿದೆಯಂತೆ! ಹೀಗಲ್ಲವೇ ಕೆಲ್ಲಾಗ್ ಕರಾರನ್ನು ಪಾಲಿಸುವದು!!

ಇಂಗ್ಲೆಂಡಿನ ಎಕ್ಸ್‌ಚೆಕ್ಕರಿನ ಚಾನ್ಸಲರಾದ ಮಿ॥ ಚರ್ಚ್ ಹಿಲ್ಲರವರು ತಾವೇ ಮುದ್ದು ಇಟ್ಟಿಗೆ ಇಟ್ಟು ಗಾರೆ ಕೆಲಸ ಮಾಡಿ, ತಮ್ಮ ಮಗಳು ಆಚಿನ ಕೆಲಸ ಮಾಡುತ್ತಾ, ತಮ್ಮ ಆಳಿಗೆ ಮನೆ ಕಟ್ಟುತ್ತಿದ್ದಾರಂತೆ. ಮಿನಿಟಿಗೊಂದು ಇಟ್ಟಿಗೆಯಂತೆ ಇಟ್ಟು 15 ದಿನ ಕೆಲಸ ಮಾಡಿದ್ದೇನೆಂತಲೂ ಒಂದು ತಿಂಗಳೊಳಗೆ ಮುಗಿಸುತ್ತೇನೆಂತಲೂ, ಇದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಡವೆಂತಲೂ ಅವರು ಒಬ್ಬ ಪತ್ರಿಕಾ ಪ್ರತಿನಿಧಿಗೆ ಹೇಳಿದರಂತೆ.

ಲಕ್ನೋದ ಸರ್ವ ಪಕ್ಷಗಳ ಪರಿಷತ್ತಿನಲ್ಲಿ ಡೊಮಿನಿಯನ್ ಸ್ಟೇಟಸ್ ತಮ್ಮ ಧ್ಯೇಯವೆಂದು ತೀರ್ಮಾನಿಸಿದ ಮೇಲೆ ಬ್ರಿಟಿಷ್ ರಾಷ್ಟ್ರೀಯ ಗೀತವನ್ನು ಹಾಡಬೇಕೆಂದು ಸಭೆಗೆ ಅಧ್ಯಕ್ಷರಾಗಿದ್ದ ಡಾಕ್ಟರ್ ಅನ್ಸಾರಿಯವರು ಒಪ್ಪಲಿಲ್ಲವೆಂಬ ವರ್ತಮಾನವು ಇಂಗ್ಲೆಂಡಿನ ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟವಾಗಿದೆಯಂತೆ! ಬ್ರಿಟಿಷ್ ಪತ್ರಿಕೆಗಳು ಇಂಡಿಯಾವನ್ನು ಕುರಿತು ನಿಜವಾಗಲಿ, ನಿಜವಾಗದಿರಲಿ ವಿಶೇಷ ವರ್ತಮಾನಗಳನ್ನು ಪ್ರಕಟಿಸುವದರಲ್ಲಿ ಕುಂಬಾ ಶ್ರದ್ಧೆಯನ್ನು ವಹಿಸುತ್ತವೆ.

---

## ಪತ್ರವ್ಯವಹಾರ

ಪ್ರಕಟಿತವಾದ ಪತ್ರಗಳ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ॥

### ' ಕೊಡವರ ಹಬ್ಬ "

ಪ್ರಿಯರೇ,

ತಾರೀಖು 24—8—28 ರ 'ಕೊಡಗು' ಪತ್ರಿಕೆಯಲ್ಲಿ ಹೊರ ಪ್ರದೇಶಗಳಲ್ಲಿ ಕೊಡವರ ಹುತ್ತರಿಯೆಂಬ ವಾರ್ತೆಯನ್ನು ನೋಡಿದೆನು. ಇದರಿಂದ ನಮಗಳಿಗಾಗ ಎಷ್ಟೋ ದೂರದಲ್ಲಿರುವ ಕೊಡವರು ಒಂದಾಗಿ ಸೇರಿ ಹಬ್ಬ ಮಾಡುವುದು ಸಂತೋಷ. ಇಲ್ಲಿ ಚಿಕ್ಕಮಗಳೂರು ಪ್ರಾಂತ್ಯದವರು ಸೇರಿ ನಮ್ಮ ಪದ್ಧತಿಗನುಸಾರವಾಗಿ ಹಬ್ಬ ಮಾಡಲು ನಿಮಗಿಂತಲೂ ನಿಶ್ಚಯಮಾಡಿದರೆ ಅದಕ್ಕೆ ಯಾರು ಅಡ್ಡಿಮಾಡುವದಿಲ್ಲವೆಂದು ನನ್ನ ಭಾವನೆ. ನೀವು ಕೊಡವನೆಂಬ ದಸ್ತತ್ತು ಹಾಕದೆ ನಿಮ್ಮೂರ ವಿಳಾಸ ಕೊಟ್ಟು ವಾರ್ತೆ ಬರೆದಿದ್ದರೆ ಪತ್ರಮೂಲಕವಾದರೂ ನಾವುಗಳು ಆಲೋಚಿಸಬಹುದಾಗಿತ್ತು. ಆ ಕಾರಣ ದಯವಿಟ್ಟು ನಿಜವಾದ ಅಡ್ರೆಸು ಬರೆದು ತಿಳಿಸಬೇಕಾಗಿ ನನ್ನ ಕೋರಿಕೆ.

ಯಾಂ. ಮ. ಟಿ.

### ರಿಟಯರ್ ಆಗುವ ಉದ್ಯೋಗಸ್ಥರಿಗೆ ಬಹುಮಾನ

ಅಯ್ಯಾ,

ಬೇಗನೆ ಉದ್ಯೋಗದಿಂದ ನಿವೃತ್ತಿ ಹೊಂದಿ ಪೆನ್ಶನಾಗಿ ಹೋಗುವ ಶಾಲಾ ಇನ್ಸ್‌ಪೆಕ್ಟರಾದ ವೆ. ಯೇಟ್ಸ್‌ರವರಿಗೆ ಕೊಡಗಿನ ಉಪಾಧ್ಯಾಯರುಗಳು ಸೇರಿ ಅವರಿಗೊಂದು ಎಟ್ ಹೋಮ್ ಕೊಡುವರೆಂದೂ ಆ ಸಂದರ್ಭದಲ್ಲಿ ಜ್ಞಾಪಕಾರ್ಥವಾಗಿ ಕೊಡವರ ಸಂಪೂರ್ಣ ಡ್ರೆಸ್ಸ್ ಒಂದನ್ನು ಬಹುಮಾನವಾಗಿ ಅವರಿಗೆ ಕೊಡಲಿಕ್ಕಿರುವ ಏರ್ಪಾಡುಗಳು ನಡೆಯುತ್ತಿವೆಯೆಂದೂ ಸುದ್ದಿ ಇದೆ. ನಮ್ಮ ಕುಪ್ಪಸ ದಟ್ಟಿ ರುಮಾಲು ಮಿ. ಯೇಟ್ಸ್ ದೊರೆಯವರಿಗೆ ಯಾವ ಪ್ರಯೋಜನಕ್ಕೆ ಬಂದೀತು? ಅವರು ಅದನ್ನು ಇಂಗ್ಲೆಂಡಿಗೆ ತೆಗೆದುಕೊಂಡು ಹೋಗಿ ಅಲ್ಲಿ ಅದನ್ನು ಏನು ಮಾಡುವರು? ಪ್ರದರ್ಶನಾಲಯದಲ್ಲಿ ಇಟ್ಟು ತೋರಿಸುವರೋ? ಅದನ್ನು ಅವರೆಂದಿಗೂ ಉಪಯೋಗಿಸಲಿಕ್ಕಿಲ್ಲವೆಂಬದು ನಿಶ್ಚಯ. ಒಂದು ವೇಳೆ ಉಪಯೋಗಿಸಿದರೂ ಅದು ಫೇನ್ಸಿ ಡ್ರೆಸ್ ಬಾಲ್‌ಗೆ ಮಾತ್ರವಲ್ಲವೇ? ಅದರಲ್ಲೂ ಕಾರುಗಳು, ವಿಮಾನಗಳು ಮಷಿನ್ ಗನ್ನುಗಳು ಇರುವ ಈಗಿನ ಕಾಲದಲ್ಲಿ ನಮ್ಮ ಒಡಿಕತ್ತಿ ಪೀಚೆ ಕತ್ತಿಗೆ ಸ್ಥಳವೆಲ್ಲಿ?

ಯೇಟ್ಸ್‌ರವರು ಹಲವು ವರ್ಷಗಳಿಂದ ಕೊಡಗಿನ ಶಾಲೆಗಳ ಇನ್ಸ್‌ಪೆಕ್ಟರಾಗಿದ್ದು ಒಳ್ಳೇ ಕೆಲಸ ಮಾಡಿರುವದರಿಂದಲೇ ಅವರಿಗೆ ಇಂಥಾ ಬಹುಮಾನವನ್ನು ಮಾಡಬೇಕೆಂದು ಪ್ರಯತ್ನಗಳು ನಡೆಯುತ್ತಿರುವವಾಗಿದೆಯೆಂದು ತೋರುತ್ತದೆ. ಹಾಗಾದರೆ ಅವರು ಮಾಡಿರುವ ಒಳ್ಳೇ ಕೆಲಸದ ಜ್ಞಾಪಕವು ಈ ದೇಶದಲ್ಲಿ ಶಾಶ್ವತವಾಗಿ ಇರುವಂತೆ ಮಾಡುವದು ಉತ್ತಮವಲ್ಲವೆ? ಅವರಿಗೆ ನಮ್ಮ ಡ್ರೆಸ್ಸನ್ನು ಕೊಟ್ಟರೆ ಅವರಿಗೆ ಇಲ್ಲಿಯ ನೆನಪು ಇರುವದೆಂದು ಕೆಲವರು ಹೇಳಬಹುದು. ಆದರೆ ಆ ನೆನಪು ಕೆಲವು ಸಮಯ ಮಾತ್ರವಿರುವದು. ನೂಲಿನ ಬಟ್ಟೆಯು ಎಷ್ಟು ಕಾಲ ಉಳಿಯುವದು? ಅದಕ್ಕಿಂತ ಅವರಿಗೆ ಇಲ್ಲಿ ಉಂಟಾಗಿರುವ ಅನುಭವದ ನೆನಪು ಅವರ ಮರಣಪರ್ಯಂತರವೂ ಇರುವದಲ್ಲವೇ. ಅವರ ಒಳ್ಳೆ ಕೆಲಸವನ್ನು ನಮ್ಮ ದೇಶದವರು ಇನ್ನು ಮುಂದೆಯೂ ಮರೆಯದಂತೆ ಮಾಡಲು ಇಲ್ಲಿ ಯಾವದಾದರೊಂದು ಸತ್ಕಾರ್ಯವನ್ನು ಮಾಡುವದರಿಂದ ಅವರನ್ನು ಹೆಚ್ಚು ಬಹುಮಾನಿಸಿದಂತಾಗುವದೆಂದು ನನ್ನ ಅಭಿಪ್ರಾಯ.

ಇಂಥಾ ಸತ್ಕಾರ್ಯಗಳು ಹಲವು ಇರಬಹುದು. ಆದರೆ ನನಗೆ ತೋರಿದ ಒಂದು ಸೂಚನೆಯನ್ನು ಇಲ್ಲಿ ಕೊಡಲಿಚ್ಛಸುತ್ತೇನೆ. ಯೇಟ್ಸ್ ದೊರೆಯವರ ಹೆಸರಿನಲ್ಲಿ ಒಂದು ಸ್ಕಾಲರ್‌ಶಿಪ್ಪನ್ನು ಬಡ ಮಾಸ್ತರುಗಳ ಮಕ್ಕಳಿಗೆ ಖಾಯಂ ಆಗಿ ಕೊಡಲು ಏರ್ಪಾಡು ಮಾಡಿದರೆ ಅವರ ಹೆಸರು ಎಂದೆಂದಿಗೂ ನೆನಸಲ್ಪಡುವದು. ಅವರಿಗೆ ಕೊಡಲು ಈಗ ಏರ್ಪಾಡು ಮಾಡುತ್ತಿರುವ ಡ್ರೆಸ್ಸಿನ ಬಹುಮಾನಕ್ಕಾಗಿ ವಸೂಲಾಗುತ್ತಿರುವ ಹಣವನ್ನು ಸೆಂಟ್ರಲ್ ಬ್ಯಾಂಕಿನಲ್ಲಾಗಲಿ ಉಪಾಧ್ಯಾಯರುಗಳ ಸಹಕಾರಿ ಸಂಘದಲ್ಲಿಯಾಗಲೀ ಠೇವಣಾತಿಯಾಗಿಟ್ಟು ಅದರ ಬಡ್ಡಿಯನ್ನು ಪ್ರತಿವರ್ಷವೂ ಪ್ರೈಮರಿ ಪಾಸಾಗುವ ಗಟ್ಟಿಗನಾದ (ಉಪಾಧ್ಯಾಯರ ಮಗನಾದ) ಒಬ್ಬ ವಿದ್ಯಾರ್ಥಿಗೆ ಕೊಡುವಂತೆ ಮಾಡಬಹುದು. ಈ ಬಡ್ಡಿಯು ಸ್ಕಾಲರ್‌ಶಿಪ್ಪಿಗೆ ಸಾಲದೆ ಹೋದರೆ ಅದನ್ನು ಪ್ರೈಮರಿ ಪರೀಕ್ಷೆಯಲ್ಲಿ ಒಂದನೇಯವನಾಗಿ ಬರುವ ವಿದ್ಯಾರ್ಥಿಗೆ ಇನಾಮು ಕೊಡಲು ಉಪಯೋಗಿಸಬಹುದು. ಇಂತಾ ಶಾಶ್ವತವಾದ ಏರ್ಪಾಡನ್ನು ಮಾಡುವದಾದರೆ ಯೇಟ್ಸ್ ದೊರೆಗಳೂ ತಮ್ಮ ಉದಾರ ಭಾವದಿಂದ ಚಂದಾವನ್ನು ಕೊಡದೆ ಇರಲಿಕ್ಕಿಲ್ಲವಾಗಿ ನನಗೆ ತೋರುತ್ತದೆ. ಪ್ರಯೋಜನಕಾರಿಯಾದ ಈ ಕೆಲಸಕ್ಕೆ ಸಹಾಯ ಮಾಡಲು ಉಪಾಧ್ಯಾಯರುಗಳ್ಯಾರೂ ಹಿಂಜರಿಯಲಿಕ್ಕಿಲ್ಲವೆಂದೇ ನನ್ನ ಭಾವನೆ. ಈ ತೆರದ ಏರ್ಪಾಡು ಮಾಡುವದರಿಂದ ಯೇಟ್ಸ್‌ರವರ ಜ್ಞಾಪಕವು ದೇಶದಲ್ಲಿ ಖಾಯಂ ಮಾಡಲ್ಪಟ್ಟಂತೆಯೂ ಆಗುವದು. ಬಡ ಉಪಾಧ್ಯಾಯರುಗಳ ಮಕ್ಕಳಿಗೆ ಒಂದು ಸಹಾಯ ಮಾಡಿದಂತೆಯೂ ಆಗುವದು. ಇದೀಗ ನನ್ನ ಸೂಚನೆ. ಬಹುಮಾನ ಕೊಡಲು ಏರ್ಪಾಡು ಮಾಡುತ್ತಿರುವ ಮಹನೀಯರು ಇದಕ್ಕೆ ಸ್ವಲ್ಪ ಗಮನ ಕೊಡುವರೇ? ಇಷ್ಟು ಮಾತ್ರವಲ್ಲ. ಇದಕ್ಕಿಂತ ಉತ್ತಮವಾದ ಮತ್ತು ಹೆಚ್ಚು ಪ್ರಯೋಜನಕಾರಿಯಾದ ಬೇರೆ ಯಾವುದಾದರೂ ಏರ್ಪಾಡು ಮಾಡಬಹುದೆಂದಿದ್ದರೆ, ಅಂಥಾ ಅಭಿಪ್ರಾಯವಿರುವವರು ಕೂಡಲೆ ಪತ್ರಿಕೆಯಲ್ಲಿ ಪ್ರಕಟಿಸಿ ಏರ್ಪಾಡು ಮಾಡುವವರಿಗೆ ಅರಿವು ಕೊಡುವದು ಉತ್ತಮವಾಗಿದೆ.

'ನಾನೊಬ್ಬ'

---

### ಸಂತಾಪ ರೈತರ ಕಷ್ಟ

ಅಯ್ಯಾ,

ಇಲ್ಲಿ ಹಳ್ಳಿಯ [illegible]ಗಳಲ್ಲಿ ಕಾಯಿಪಲ್ಯ ತರಕಾರಿ ಗಿಡ [illegible] ಸುರುವಾಗಿರುವ ಈ ಸಮಯದಲ್ಲಿ [illegible]ಂತರವಾದ ಬೊಂಡೆಚ್ಚು ಹುಳಗಳು ಅಲ್ಲಲ್ಲಿ [illegible] ಪ್ರಾರಂಭವಾಗಿದೆ. ಈ ಹುಳಗಳ ಒಣ್ಣ ಮೈ ಕಪ್ಪು ತಲೆ ಕೆಂಪು [illegible]ಗಿನಂತಿದೆ. ಅವು ತಂಡೋಪತಂಡವಾಗಿ ಸೈನ್ಯದಂತೆ ಇವೆ. ದಯಾಳು ಸರಕಾರದವರು ತಕ್ಕ ವ್ಯವಸ್ಥೆ ಪಡಿಸಿ, ಬಡ ರೈತರ ಕಷ್ಟ ಪಾರು ಮಾಡುವರಾಗಿ ನಂಬಿದ್ದೇನೆ.

'ಬಡರೈತ'

---

### ಮದ್ರಾಸು ಪ್ರೆಸಿಡೆನ್ಸಿ ಕಾಲೇಜು ಕರ್ನಾಟಕ ಸಭೆ

ಅಯ್ಯಾ,

ತಾ 22—8—28ರಲ್ಲಿ ಈ ಸಭೆಯ ಪ್ರಥಮ ಸಮ್ಮೇಳನವು ಸಭೆಯ ಉಪಾಧ್ಯಕ್ಷರಾದ ಅಸಿಸ್ಟಾಂಟ ಪ್ರೊಫೆಸರ್ ಯು. ಕಣ್ಣಪ್ಪ ಎಂ ಎ ಎಲ್ ಟಿ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಆನರೇಬಲ್ ರಾವ್‌ಸಾಹೆಬ್ ಡಾಕ್ಟರ್ ಯು ರಾಮರಾಯರು ಭಾಷಣ ಕರ್ತರಾಗಿದ್ದರು. ಅಧ್ಯಕ್ಷರು ನೆರೆದ ಜನರಿಗೆ ಭಾಷಣ ಕರ್ತರ ಪರಿಚಯವನ್ನು ಮಾಡಿದನಂತರ ರಾಮರಾಯರು ಕರ್ನಾಟಕ ಭಾಷೆಗಳ ಏಕೀಕರಣದ ವಿಷಯ (Unity of Karnataka dialects) ಒಂದು ಚಿಕ್ಕ ಭಾಷಣವನ್ನು ಮಾಡಿದರು. ಭಾಷಣ ಮುಗಿಯುತ್ತಲೇ ಕಾರ್ಯದರ್ಶಿಯರಾದ ಕೆ ದೇ[illegible] ನಾಯಕರು ಮತ್ತು ಡಿ [illegible] ಅಪ್ಪಯ್ಯನವರು ಅಧ್ಯಕ್ಷರನ್ನೂ, ಭಾಷಣ ಕರ್ತರನ್ನೂ ಮಾಲೆಗಳಿಂದ ಸತ್ಕರಿಸಿ ಸಭೆಯ ಪರವಾಗಿ ಅವರಿಗೆ ವಂದನೆಗಳನ್ನು ಸಮರ್ಪಿಸಿದರು.

ತಾ 25—8—28ರಲ್ಲಿ ಈ ಸಭೆಯವರು ಕಳೆದ ಮಾರ್ಚ ತಿಂಗಳಲ್ಲಿ ತೇರ್ಗಡೆಹೊಂದಿದ ಕರ್ನಾಟಕದ ಗ್ರ್ಯಾಜುವೇಟರನ್ನು ವಾಡಿಕೆಯಂತೆ ಉಪಹಾರಾದಿಗಳಿಂದ ಸತ್ಕರಿಸಿದರು. ಎಡ್ವೋಕೇಟ್ ಬಿ ಸೀತಾರಾಮ್ ರಾವ್ ಬಿ ಎ, ಬಿ ಎಲ್ ಇವರು ಆ ದಿನ ಅಧ್ಯಕ್ಷರಾಗಿದ್ದರು.

ಅಧ್ಯಕ್ಷರು ಸರಿಯಾಗಿ ಸಾಯಂಕಾಲ 4½ ಗಂಟೆಗೆ ಬಂದರು. ಬಂದ ಕೂಡಲೇ ಸಂಗೀತ ಉಪಹಾರಾದಿಗಳು ನಡೆದವು. ಆದರನಂತರ ಪರಸ್ಪರ ಅಭಿನಂದನೆಗಳು ನಡೆದವು. IV ಹಾನರ್ಸ್ ಲಿಟರೇಚರ್ ಕ್ಲಾಸಿನಲ್ಲಿ ಕಲಿಯುತ್ತಿದ್ದ ಬಿ ಕೆ ಸರ್ವೋತ್ತಮರಾಯರು ಸಭೆಯ ಪರವಾಗಿಯೂ [illegible] ನರಸಿಂಹಮೂರ್ತಿಯವರು ಗ್ರ್ಯಾಜುವೇಟರ ಪರವಾಗಿಯೂ ಮಾತನಾಡಿದರು. ಬಿ ಕೆ ಸರ್ವೋತ್ತಮರಾಯರು ತಮ್ಮ ಭಾಷಣದಲ್ಲಿ ಪಾಸಾದ ಗ್ರಾಜುವೇಟರನ್ನುದ್ದೇಶಿಸಿ ನೀವು ನಮ್ಮ ಜತೆಯಲ್ಲಿ ಕಳೆದ ದಿನಗಳೆಲ್ಲಾ ಹೋದವು. ಈ ದಿನ ನೀವು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಡಿಗ್ರಿಗಳನ್ನು ಪಡೆದಿರುವಿರಿ. ಇಂದ, ನಾಳೆ ನೀವು ಒಂದಲ್ಲ ಒಂದು ಉದ್ಯೋಗಕ್ಕೆ ಹೋಗುವಿರಿ. ಅದು ಯಾವುದಾದರೂ ಅದರಲ್ಲಿ ಬಹು ಒಳ್ಳೆ ರೀತಿಯಲ್ಲಿ ನಡೆಯಿರಿ. ನಿಮಗೆ ಉದ್ಯೋಗಕ್ಕೆ ಬೇಕಾದ ಧೈರ್ಯ ಚಟುವಟಿಕೆ ಮತ್ತು ಆರೋಗ್ಯವನ್ನು ಶ್ರೀ ಭಗವಂತನು ದಯಪಾಲಿಸಲಿ! ನಮ್ಮನ್ನು ಮರೆಯದೆ ನೀವು ಇನ್ನಂತೆ ನಮ್ಮ ಸಭೆಗೆ ಒಂದು ಸಮ್ಮನ್ನು ಸಂತೋಷಗೊಳಿಸಿರಿ ಎಂದು ಪ್ರೇಮಪೂರ್ವಕವಾಗಿ ಹೇಳಿದರು. [illegible] ನರಸಿಂಹ ಮೂರ್ತಿ ಬಿ ಎ ಇವರು ತಮ್ಮ ಭಾಷಣದಲ್ಲಿ ಉತ್ತೀರ್ಣರಾದರೆ ಗ್ರ್ಯಾಜುವೇಟರಲ್ಲಿ ಅನೇಕರು ಬಂದಿಲ್ಲವಾದದ್ದರಿಂದ ಅವರ ಪರವಾಗಿ ಮಾತಾಡುವ ಕಾರ್ಯವು ಅಸಮರ್ಥನಾದ ತನ್ನ ಪಾಲಿಗೆ ಬಂದಿದೆಂತಲೂ ಈ ಸಭೆಯ ಕಾರ್ಯನಿರ್ವಾಹಕ ಕ್ರಮವು ಕಳೆದ ವರ್ಷದಂತೆ ಎರಡೇ ಮೀಟಿಂಗುಗಳಿಂದ ಮುಗಿಯದೆ ಅನೇಕ ಭಾಷಣಗಳಿಂದಲೂ ವಾದ ಪ್ರತಿವಾದಗಳಿಂದಲೂ ಹರ್ಷಜನಕವಾಗಲೆಂದು ಕೋರುತ್ತೇನೆಂಬದಾಗಿ ಹೇಳಿದರು.

ಇದು ಮುಗಿಯುತ್ತಲೇ ಅಧ್ಯಕ್ಷರು ಕವಿತಾಜ್ಞಾನದ ಲೇಶ ಮಾತ್ರವೂ ಇಲ್ಲದೆ ಪದ್ಯಗಳನ್ನು ರಚಿಸಲು ಉಪಕ್ರಮಿಸುವುದರಿಂದಲೂ ಇಂಗ್ಲೀಷ ಮೊದಲಾದ ಇತರ ಭಾಷೆಗಳ ವಿಖ್ಯಾತ ಕವಿಗಳ ಪದ್ಯರಚನಾ ಕ್ರಮವನ್ನು ಅನುಸರಿಸುವುದರಿಂದಾಗುವ ಅನರ್ಥಗಳಿಂದಲೂ, ಉಂಟಾದ ಕನ್ನಡ ಭಾಷೆಯ ಪ್ರಕೃತ ಹೀನಸ್ಥಿತಿ ಅದನ್ನು ಉದ್ಧರಿಸಲು ನಾವು ಮಾಡಬೇಕಾದ ಪ್ರಯತ್ನಗಳು ಇವೇ ಮೊದಲಾದ ಸಂಗತಿಗಳನ್ನು ಕುರಿತು ಮಾತಾಡಿದರು.

ಈ ರೀತಿಯಲ್ಲಿ ಅಧ್ಯಕ್ಷರು ಭಾಷಣ ಮಾಡಿದ ತರುವಾಯ ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್‍ಯರು ಅಧ್ಯಕ್ಷರಿಗೂ ನೆರೆದ ಜನರಿಗೂ ಸಭೆ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು. ಅಲ್ಲಿಗೆ ಸಮ್ಮೇಳನವು ಮುಗಿಯಿತು.

ಸದಸ್ಯರೊಬ್ಬ

---

### ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರು ಮತ್ತು ಮೆಂಬರುಗಳಲ್ಲಿ ವಿನಂತಿ

ಮಹನೀಯರೇ,

ನಾನು ಒಂದೆರಡು ವಾರಗಳ ಹಿಂದೆ ಸ್ಥಳೀಕ ಪತ್ರಿಕೆಗಳಲ್ಲಿ ಡಿ. ಬೋರ್ಡು ಮೆಂಬರುಗಳು ಅವರವರ ಪಿರ್ಕೆಗೆ ಒಳಪಟ್ಟ ಸ್ಕೂಲ್ ರಸ್ತೆ ರಿಪೇರಿ ವಗೈರೆ ಮೋರ್ಚಿಗೆ ಸಂಬಂಧಪಟ್ಟ ಸಂಗತಿಗಳಲ್ಲಿ ಯಾವ ಯಾವ ಕೆಲಸಗಳು ಎಲ್ಲೆಲ್ಲಿ ಮುಂದಾಗಿ ಕೈಕೊಳ್ಳಬೇಕೆಂದು ಇನ್ನೊಂದು ಮೀಟಿಂಗಿಗೆ ಮುಂದಾಗಿ ತಮ್ಮ ತಮ್ಮ ರಿಪೋರ್ಟು ಕೊಡಬೇಕಾಗಿ ಬರೆದ ಬೋರ್ಡಿನವರ ಇಂಡೆಯನ್ನು ನೋಡಿದೆನು.

ಈ ಲೇಖನ ಪಿರ್ಕೆಗೆ ಸೇರಿದ ಡಿ. ಬೋರ್ಡಿನ ಮೆಂಬರರನ್ನು ಮುಖ್ಯವಾಗಿ ಕಂಡು ಪ್ರಸ್ತಾಪಿಸಿದಲ್ಲಿ ಪುಲಿಕೋಟು ನಾಡು ಹಾಕತ್ತೂರು [illegible] ಶಾಲೆಯನ್ನು ತೆಗೆದುಹಾಕಬೇಕೆಂಬೂ (Dismantle) ಹೊಸದಾಗಿ ವಿಲ್ಯಂಗೇರಿ ಒಳ ಜಾಮವಟ್ಟು ಪರಂಬಿನಲ್ಲಿ ಒಂದು ಶಾಲೆ ಏರ್ಪಾಡು ಮಾಡಬೇಕೆಂದವರು ಹೇಳಿದರು.

ಮಹನೀಯರು ಈಗಿರುವದನ್ನು ಒಳ್ಳೆ ಸ್ಥಿತಿಗೆ ತರುವ ಯೋಚನೆಯ ಬದಲು (ಮೊದಲೆ ಇರುವ ಮಟ್ಟಿಗೆ ಕೇಲು ನೀಡಬೇಕು) ಆಕಾಶಕ್ಕೆ ಏಣಿ ಕಟ್ಟಲು ಹೊರಟಂತೆ ತೋರಿತು. ಹಾಲಿ ಇರುವ ಕಕ್ಕಬೆ ಸ್ಕೂಲಿನಲ್ಲಿ 135 ಹುಡುಗರಿರುತ್ತಾರೆ 5 ಟೀಚರುಗಳಿರುತ್ತಾರೆ. 5ನೇ ಸ್ಟಾಂಡಾರ್ಡು ಇರುತ್ತೆ. ಈ ಶಾಲೆಯನ್ನು ಎಂದೂ ಸಂದರ್ಶಿಸದ ಆ ಮೆಂಬರರಿಗೆ ಇದರ ವಿಷಯ ಕೆಲವು ಸಂಗತಿಗಳನ್ನು ಹೇಳಿ ಕೊಳ್ಳುತ್ತೇನೆ.

ಈ ಶಾಲೆಯು ಪ್ರೈಮರಿ ಸ್ಕೂಲ್ ಫೀಜು ಮಾಫಿಯಿರುವ ಶಾಲೆಯಾಗಿರುತ್ತೆ. ಇದನ್ನು 1886ರಲ್ಲಿ ಅಂದಿನ [illegible] ಡಿಸ್ಟ್ರಿಕ್ಟ್ ಬೋರ್ಡಿಂಗ್ ಪಾ[illegible]ಗಾರರಾಗಿದ್ದ ಪರಾ ಶ್ರೀ ಕುಂಞಪ್ಪನವರು ಕಟ್ಟಿಸಿ ಸರಕಾರಕ್ಕೆ ವಹಿಸಿದಾಗಿರುತ್ತೆ. ಅಂದಿನಿಂದ ಇಲ್ಲಿವರೆಗೂ ಅಂದರೆ 42 ವರ್ಷಗಳಿಂದ ಡಿ ಬೋರ್ಡಿನವರಿಗೆ ಯಾನೆ ಶಾಲಾ ಇಲಾಖೆಯವರಿಗೆ ಈ ಕಟ್ಟಡಕ್ಕೆ ಒಂದು ವರಾಂ (Veranda) ಕಟ್ಟಿಸಲು ದಯ ಬರಲಿಲ್ಲ. ಇತ್ತಲಾಗಿ 1915ರಲ್ಲಿ ನಡೆದ ದೊರೆಪಟ್ಟದ (Coronation) ದಿನ ಈ ಸ್ಕೂಲಿನಲ್ಲಿ ಕೂಡಂದರೆ ಗ್ರಾಮಸ್ಥರೆಲ್ಲಾ ಸೇರಿ ಈ ಶಾಲೆಯ ಏಳ್ಗೆಗಾಗಿ ಒಂದು ಸಂಘವನ್ನು ತೆರದು ಸದರಿ ಸಂಘಕ್ಕೆ (Coronation Union society Kakabe) ಕಾರೊನೇಶನ್ ಯೂನಿಯನ್ ಸೊಸೈಟಿ ಎಂಬ ಹೆಸರನ್ನು ಕೊಟ್ಟು ಸಂಘಕ್ಕೆ ಕೆಲವು ವಾರ ಮತ್ತು ಮಾಸ ಪತ್ರಿಕೆ ಕೊಡಗು ಗಜೆಟ್ ಸಹ ತರಿಸಿಕೊಂಡು ನಡಿಸಲಾಗಿ ಸದರಿ ಸಂಘದ ಆದಾಯದಿಂದ ಒಂದು ಸಣ್ಣ ಕೋಣೆ ಅದಕ್ಕೆ ಸರಿಯಾಗಿ ವಸಾರೆಯನ್ನು ಸಹ ಕಟ್ಟಿಸಿದಾಯಿತು.

ಹಿಂಭಾಗದ ವಸಾರೆಯಲ್ಲಿ ಎಲ್ಲಾ ಮಕ್ಕಳು ನಿಲ್ಲಲಾಗುವದಿಲ್ಲ. ಈ ಶಾಲಾ ಹುಡುಗರು 12 ವಯಸ್ಸಿನ ಕೆಳಪಟ್ಟವರು. 13ನೇ ಪ್ರಾಯದ ವೇಳೆ ಪ್ರೈಮರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಸೆಕೆಂಡರಿ ಶಾಲೆಗಳಿಗೆ ಹೋಗುವವರಾಗಿದ್ದಾರೆ. ಈ ಶಾಲೆ ನಿಂತಿರುವ ಸ್ಥಳವು ಸಮುದ್ರ ಮಟ್ಟದಿಂದ 3 900 ಅಡಿ ಎತ್ತರವಿರುತ್ತೆ ಮತ್ತು ಉತ್ತರ ದಕ್ಷಿಣ, ಪಶ್ಚಿಮ ಭಾಗ ಪೂರ ಬೆಟ್ಟವಾಗಿ ಈ ಸ್ಥಳಕ್ಕೆ ಗಾಳಿ ಮತ್ತು ಮಳೆಯು ಹೆಚ್ಚಾಗಿ, ಅಂದಾಜು 168 ಇಂಚುಗಳ ಮಳೆ ಇರುತ್ತೆ. 5 ರಿಂದ 12 ವರ್ಷ ಪ್ರಾಯದ ಮಕ್ಕಳು ಈ ಎತ್ತರವಾದ ಸ್ಥಳದಲ್ಲಿ ವಸಾರೆಯಲ್ಲಿ ಓದುವದು ಹೇಗೆ?

ಡಿ ಬೋರ್ಡು ವೈಸ್ ಪ್ರೆಸಿಡೆಂಟರು ಕೊಡಗಿನ ಹಲವು ಕಡೆಗಳಿಗೆ ಹೋಗಿ ರಸ್ತೆ ಕೆಲಸ, ಸ್ಕೂಲುಗಳ ವಗೈರೆ ಕೆಲಸಗಳನ್ನು ನೋಡಿದಂತೆ ಪತ್ರಿಕೆಗಳಲ್ಲಿ ಕಂಡೆನು. ನಮ್ಮ ಈ ನಿರ್ಭಾಗ್ಯದ ಮಲೆನಾಡು ಪ್ರದೇಶಕ್ಕೆ ಯಾಲಿ ಇರುವ ಡಿ ಬೋರ್ಡು ಪ್ರೆಸಿಡೆಂಟರಾಗಲಿ ವೈಸ್‌ಪ್ರೆಸಿಡೆಂಟರಾಗಲಿ ಯಾವೊಂದು ಸಾರಿಯಾಗಲಿ ಇದುವರೆಗೂ ಬಾರದೆ ಇರುವದು ವ್ಯಸನಕರವಾದ ಸಂಗತಿಯಾಗಿದೆ.

ಡಿ ಬೋರ್ಡು ಪ್ರೆಸಿಡೆಂಟರು ಯಾ ವೈಸ್ ಪ್ರೆಸಿಡೆಂಟರು ನಮ್ಮ ಪಿರ್ಕೆಯ ಮೆಂಬರರ ಇರಾದೆಗೆ ಬಿಡದೆ ತಾವು ಯಾರಾದರು ದಯಮಾಡಿ ನಮ್ಮ ಕಕ್ಕಬೆ ಶಾಲೆಯನ್ನು ಸಂದರ್ಶಿಸಿದ ಮಹನೀಯರಾದ ನಮ್ಮ ಕೊಡಗು ವಿದ್ಯಾ ಇಲಾಖೆ ಇನ್ಸ್‌ಪೆಕ್ಟರವರೂ ಮತ್ತು ಸಿವಿಲ್ ಸರ್ಜನ್ ಸಾಹೇಬರವರೂ ಈ ಶಾಲೆಯ (Visitors Book) ಸಂದರ್ಶಕರ ರಿಜಿಸ್ಟರಿನಲ್ಲಿ ಬರೆದಿರುವದನ್ನು ನೋಡಿದರೆ ಕೊಡಗಿನ ಎಲ್ಲಾ ಶಾಲೆಗಳಿಗಿಂತಲೂ ಈ ಶಾಲೆಯ ಸಮ್ಮದಿಯನ್ನು ವಿಶೇಷವಾಗಿ ಪೂರೈಸಲಾಗಿ ವೇದ್ಯವಾಗುವದು. ಅತಿ ವಿಪರೀತ ಬರುವ ತಮ್ಮ ಮೀಟಿಂಗಿನ ಒಳಗೆ ಹೊಳೆಗಳಿಗೆ ಸೇತುವೆ ಇಲ್ಲದ ಮತ್ತು ರಸ್ತೆಗಳು ಸರಿಯಿಲ್ಲದ ಈ ಶಾಲೆಗೆ ಬರಲು ಅನಾನುಕೂಲವಾಗಿ ಕಂಡಲ್ಲಿ ಈ ಶಾಲೆಯ ಸಂದರ್ಶಕರ ಪುಸ್ತಕವನ್ನು ತರಿಸಿಕೊಂಡು ತಮ್ಮ ಸಭೆಯಲ್ಲಿ ಚರ್ಚಿಸಿ ನ್ಯಾಯ ಕೊಡಬೇಕಾಗಿ ಬೇಡುವ,

'ಮಕ್ಕಳ ತಂದೆ'

---


**ಏಕೆ ನರಳುತ್ತೀರಿ?**

ಪ್ರಾಚೀನ ಋಷಿಗಳಿಂದ ಪ್ರಣೀತವಾದ ಆಯುರ್ದೀರ್ಘತ್ವಕ್ಕೆ ವರ್ಧಕವಾದ ಆರೋಗ್ಯವಿಧಿಗಳನ್ನು ತಿಳಿಯದೆ ಅಜ್ಞಾನಾಂಧಕಾರದಲ್ಲಿ ಸಿಲುಕಿ ಅನೇಕ ತರಹದ ವ್ಯಾಧಿಗಳಿಂದ ಏಕೆ ನರಳುವಿರಿ?

**ಕ್ರಯವು! ಇಲ್ಲದೆ!!**

**ಉಚಿತವಾಗಿ ಕೊಡಲ್ಪಡುವ ನಮ್ಮ**

ನಮ್ಮ ಔಷಧಗಳನ್ನು ಬಿಕ್ರಿ ಮಾಡುವದಕ್ಕೆ **ವೈದ್ಯ ವಿದ್ಯೆ** ಏಜೆಂಟರು ಬೇಕಾಗಿರುವದು.

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ

2—4

**ರಾಜವೈದ್ಯ ನಾರಾಯಣಜಿ ಕೇಶವಜಿ,**

1/94 ಬೈನ ಬಜಾರು ರೋಡು ಮದ್ರಾಸು

N. B. — ವೈದ್ಯ ಸಲಹೆಯು ಫೀಜಿಲ್ಲದೆ ಕೊಡಲಾಗುವದು

Please Call at

**THE GENERAL TRADING CO., MERCARA,**

Opposite Coronation Gardens.

SOLE AGENTS FOR VAUXHALL, OAKLAND, PONTIAC & CHEVROLET CARS & TRUCKS FOR COORG.

THE 1928 NEW CHEVROLET

NEW BEAUTY! NEW PERFORMANCE!! NEW FEATURES AND FOUR WHEEL BRAKES!!!

QUALITY AT LOW COST.

**THE COORG FOOTWEAR MART, MERCARA.**

The house for smart foot wear. Monsoon boot a speciality

Prompt attention. Prices very moderate.

12–11 Attended by very efficient workmen.

# Arms, Ammunition and Shooting Requisites !!!



1928 Illustrated Catalogue Just Issued Free on Application!

| | | | | |
|---|---|---|---|---|
| D. B. B. L. Rifles | Rs. 120 | to | Rs. 2750 |
| S. B. B. L. | „ 35 | to | „ 950. |
| D. B. B. L. Guns | „ 50 | to | „ 1350. |
| S. B. B. L. „ | „ 35 | to | „ 275. |
| D. B. M. L. „ | „ 45 | to | „ 135 |
| S. B. M. L. „ | „ 30 | to | „ 80 |
| B. L. Revolvers | „ 35 | to | „ 350. |
| Automatic Pistols | „ 30 | to | „ 150 |

Brilliant Search Light Lamp For Shooting, Camping, Fishing and All such other Night Sports and work Rs 30 Free delivery.

**Also swords, Daggers, Cartridges, Caps, Gunpowder and Shooting Requisites at the most competitive rates.**

GOOLAMHUSAIN ALLIBHOY & SONS.

**Largest Importers of Firearms and Ammunition Cheapest priced firm in India,**

24–23 210 Abdul Rehman Street, BOMBAY.

**Real Rolled Gold Jewelleries.**

(Warrented for 10 years)

ರೋಲ್ಡ್ ಗೋಲ್ಡ್ ಭಂಗಾರದ ಒಡವೆಗಳು.

ಇವುಗಳನ್ನು ಸಾಚಾ ರೋಲ್ಡ್ ಗೋಲ್ಡ್ ಭಂಗಾರದಿಂದ ವಿಲಾಯಿತಿಯಲ್ಲಿ ಮಾಡಿಸಿದ್ದು, ಇದರ ಬಣ್ಣವು 10 ವರುಷಗಳ ವರೆವಿಗೂ ಕೆಡದು. ಇಂಗ್ಲೀಷ ನಮೂನೆ. ನೋಡಲು ಬಹು ಚೆನ್ನಾಗಿರುವವು.

| | |
|---|---|
| ನೆಕ್‌ಲೇಸ್ ಪದಕ ಸಹಿತ | 3—8—0. |
| ಬೋಜಾಕ್ (Ear rings) ಜೊತೆ 1ಕ್ಕೆ | 2—8—0. |
| ಭಂಗಾರದ ಕೈ ಬಳೆಗಳು ಜೊತೆ 1ಕ್ಕೆ | 2—0—0. |

ವಿಳಾಸ.—ಕೆ. ಎನ್. ರಾಧಾಕೃಷ್ಣ ಬ್ರದರ್ಸ್,

109. ಚೈನಾ ಬಜಾರ್ ರೋಡ್,

52–16 ಮದರಾಸು.

**ವಜ್ರದ ಉಂಗುರಗಳು. (0–8–0)**



ಈ ಉಂಗುರಗಳನ್ನು ಲಂಡನ್ ಪಟ್ಟಣದ ದೊಡ್ಡ ಕಂಪನಿಯವರಿಂದ ವಜ್ರದ ಕಲ್ಲುಗಳನ್ನು ಇಟ್ಟು ನೀವು ಭಂಗಾರದಿಂದ ತಯಾರಿಸಿದೆ. ನೋಡಲು ಸಾಚಾ ವಜ್ರದ ಉಂಗುರಗಳಿಗೆ ಸರಿಸಮನಾಗಿರುವವು. ಬಣ್ಣ ಕೆಡದು. ಕ್ರಯ ಉಂಗುರ 1ಕ್ಕೆ 0–8–0. ಒಂದಾವರ್ತಿ 6 ಉಂಗುರಗಳನ್ನು ತರಿಸುವವರಿಗೆ ಒಂದು ಟೇಬಲ್ ಟೈಂಪೀಸನ್ನೂ, 12 ಉಂಗುರಗಳನ್ನು ತರಿಸುವವರಿಗೆ ಒಂದು ರೋಲ್ಡ್ ಗೋಲ್ಡ್ ಭಂಗಾರದ ಲೀವರ್ ಪಾಕೆಟ್ ವಾಚನ್ನೂ ಇನಾಮಾಗಿ ಕೊಡುವೆವು. ಸ್ವಲ್ಪವೇ ದಿವಸಗಳವರೆಗೆ ತರಿಸುವವರಿಗೆ ಮಾತ್ರ ಇನಾಮು ಸಿಕ್ಕುವವು. ವ್ಯಾಪಾರಸ್ಥರಿಗೆ ಒಳ್ಳೇ ಸವಲತ್ತು. ಗಡಿಯಾರಗಳಿಗೆ ಖಾತ್ರಿಯಾದ 3 ವರುಷ ಗ್ಯಾರಂಟಿ ಕೊಡುವೆವು. ಉಂಗುರಕ್ಕೆ ಅಳತೆ ಕಳಿಸಬೇಕು.

ವಿಳಾಸ.—ಓರಿಯಂಟ್ ಟ್ರೇಡಿಂಗ್ ಕಂಪೆನಿ,

?–16 ಪೋಸ್ಟ್ ಬಾಕ್ಸ್ ನಂ. 213. ಮದರಾಸು.



ಡಬ್ಬಲ್ ಮತ್ತು ಸಿಂಗಲ್ ಕೋವಿಗಳು ಮತ್ತು ಶಿಕಾರಿ ಸಾಮಾನುಗಳು ಎಲ್ಲಾ ದರ್ಜೆಯ ಜನರಿಗೂ (ಬಡವರಿಗೂ ಬಲ್ಲಿದರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

**ಎಸ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.**

ದಕ್ಷಿಣ ಹಿಂದೂಸ್ಥಾನದ ಬಹು ಹಳೇ ಕೋವಿಯ ಕಂಪೆನಿ.

24–14 12. ಬ್ರಾಡ್ವೇ. ಮದ್ರಾಸ್

(ಪತ್ರಗಳನ್ನು ಇಂಗ್ಲೀಷಿನಲ್ಲಿ ಬರೆಯುವದು ಉತ್ತಮ.)

# ಎಂ. ಎಸ್. ಶಿದ್ದಪ್ಪ ಬ್ರದರ್ಸ್.

## ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

**ಉತ್ತಮ ತರಹದ ಸಿಂಗಲ್‌ರೀಡ್ಸ್ ಹಾರ್ಮೋನಿಯಂಗಳು.**

| | |
|---|---|
| ಬಿಲ್ ಏಪಾರ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 50—8—0 |
| ಕಲಂಕಲಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 40—0—0 |
| 'ಸೋಹನ್' ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 37—8—0 |
| ಪೋರ್ಟೇಬಲ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 35—0—0 |
| 'ಮಹಾರಾಜಾ' ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 32—8—0 |

**ಉತ್ತಮ ತರಹದ 14 ಕ್ಯಾರೆಟ್ಸ್ ಬಂಗಾರದ ನಿಬ್ಬುಳ್ಳ ಹಾಕಿದ ಫೌಂಟೇನ್ ಪೆನ್‌ಗಳು.**

| | |
|---|---|
| ಬ್ಲ್ಯಾಕ್ ಬರ್ಡ್ ಫೌಂಟೇನ್ ಪೆನ್ 1ಕ್ಕೆ | 3—8—0 ಮತ್ತು 3—12—0 |
| ವಂಡರ್ಫುಲ್ ವಂಡರ್ ಫೌಂಟೇನ್ ಪೆನ್ 1ಕ್ಕೆ | 3—0—0 ಮತ್ತು 3—8—0 |
| ಕಾಂಪ್ಯಾಕ್ಟ್ ಸೆಲ್ಫ್ ಫಿಲ್ಲಿಂಗ್ ಫೌಂಟೇನ್ ಪೆನ್ 1ಕ್ಕೆ | 4—8—0 |
| ವಾಟರ್ ಮನ್ ಫೌಂಟೇನ್ ಪೆನ್ 1ಕ್ಕೆ | 8—0—0 ಮತ್ತು 8—8—0 |
| ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌಂಟೇನ್ ಪೆನ್ 1ಕ್ಕೆ | 12—0—0 ಮತ್ತು 15—0—0 |

**ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು**

| | |
|---|---|
| ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ | 4—5—0 |
| ವೆಸ್ಟ್‌ಕ್ಲಾಕ್ ಕಂಪೆನಿಯ ಅಲಾರಂ ಟೈಂಪೀಸ್ 1ಕ್ಕೆ | 8—0—0 |
| ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ | 9—8—0 |
| ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ | 6—12—0 |
| ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ | 6—0—0 |

ಸಚಿತ್ರ ಕ್ಯಾಟಲಾಗ್ ಒಗ್ಗೆ 6 ಪೈ ಸ್ಟಾಂಪು ರವಾನಿಸಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ಮತ್ತು ಕಾಪಿಯರ್ ಸಾಮಾನುಗಳ ವ್ಯಾಪಾರಿಗಳು, ಮೈಸೂರು.

52 18

## ಪ್ರಕಟಣೆ.

**ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.**

| | | |
|---|---|---|
| ಷೇರ್ ಬಂಡವಾಳ | — | 50,000 |
| ವಸೂಲಾದ ಷೇರ್ ಮೊಬಲಗು | — | 17,190 |
| ಜಮೂಬಂದ ಠೇವಣಾತಿ | — | 1,62,320 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್. ಕೊಂಗೆಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1-7-1927.

## ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ವಳರಿಗೆ ಅನುಕೂಲವಿರು ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು.
ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚಿಣ್ಣಪ್ಪನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಮರೆನಾಡು—ಮೆ. ಕೇಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಕಾನಜೀರಿರ ನಂಜಪ್ಪನವರು,
ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ. ಜಿ ಮುದ್ದವ್ವಯ್ಯನವರು,
ಮಡಿಕೇರಿ & ತಿತಿಮತ್ತಿ—ಮೆ ಜೆ. ಮಾದವ್ವಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

## ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ ಮೇನೇಜರ್,
"ಕೊಡಗು" ಮಡಿಕೇರಿ

12 bore Victor Cartridges Rs 10/- Per 100

**Mahomedally-Noorbhoy.**

**ARMS & AMMUNITION MART.**

321 Abdul Rehman Street.

52-52 BOMBAY. 3.



**ಕಟುಕಷಾಯ ಸಂಜೀವ ರಕ್ಷೆ:**—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಬಿಟ್ಟು ಬರುವ ಜ್ವರ, 3-4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1-8-0 3ಕ್ಕೆ ರೂ 4-0-0, 6ಕ್ಕೆ ರೂ. 7-8-0, 12ಕ್ಕೆ ರೂ 14.

**ಚಂದ್ರಪ್ರಭಾಸವ:**—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಲಿಂಗದ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯುವ ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರನಾಳವನ್ನು ಬಿಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲಿ 1, 3 6ಕ್ಕೆ ರೂ 1-4-0 3-8-0, 6-12-0

**ರೋಮನಾಶಿನಿ:**— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವುಳ್ಳ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗೆ ರೂ 1, 1 ಡಜನಿಗೆ 3-8-0

**ಮನೋಲ್ಲಾಸಿನಿ ತೈಲ:**—ತಲೆನೋವು, ತಲೆತಿರುಗುವುದು, ತಲೆಭಾರ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ಬಿದ್ದ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣವಾಗುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡನಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2-10-0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5-5-0

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ.—ಮನೋಲ್ಲಾಸಿನಿ ಕಂಪನಿ.

52-48 ೮. ಮಂಗಳೂರು.



ಕಳಪೆ ಮಾಲುಗಳಿಗೆ ಮೋಸ ಹೋಗಬೇಡಿರಿ!

ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ

ಆಜಮಾಯಿಸಿ ನೋಡಿರಿ.

ಇನಾಮಿನ ಬಟ್ಟಲುಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ.

ಎಲ್ಲಾ ಆರ್ಡರುಗಳನ್ನೂ ಥಳೋ ರೀತಿಯಿಂದಲೂ, ಶೀಘ್ರವಾಗಿಯೂ ಗ್ಯಾರಂಟಿಯೊಡನೆ ಜಾರಿ ಮಾಡಲಾಗುವದು

ಕೇಶವಜೀ ದೇವಚಂದ್,
ಜ್ಯುವೆಲ್ಲರ್, (ಕೆಟಲಾಗ್ ಮುಫತ್).

12-1 21 ಚೈನಾ ಬಜಾರ್ ರೋಡ್, ಮದರಾಸು.



## EMPIRE OF INDIA LIFE ASSURANCE COMPANY, LIMITED.

(Established 1897.)

**FOR THE YEAR ENDING 29th FEBRUARY 1928.**

| | | | | |
|---|---|---|---|---|
| New Business Exceeds | .... | .... | .... | Rs. 1,16,00,000. |
| Income Exceeds | .... | .... | .... | Rs. 54,95,000. |
| Assets Exceed | .. | .... | . | Rs. 3,15,64,000. |

**Wanted Agents in Important Places in Coorg**

HEAD OFFICE.
Empire of India Life Building,
BOMBAY.

24-11

BRANCH OFFICE.
152, Commercial Street,
BANGALORE.



ಸ್ಥಾಪನೆ-1874. ಹೆಡ್ ಆಫೀಸು-ಬೊಂಬಾಯಿ.

## ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

### 1927

**ಅತ್ಯುಚ್ಛ್ರಾಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ**

ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

| | | | | | |
|---|---|---|---|---|---|
| 1925 | — | 13545 | — | ರೂ. | 2,96,42,000. |
| 1926 | — | 17371 | — | ರೂ. | 3,91,39,000. |
| 1927 | — | 21418 | — | ರೂ. | 4,68,04,075. |

—ಪ್ರೀಮಿಯಂ ಉತ್ಪತ್ತಿ—

| | | | |
|---|---|---|---|
| 1925 | — | ರೂ. | 92,66,000. |
| 1926 | — | ರೂ. | 1,05,33,000. |
| 1927 | — | ರೂ. | 1,21,53,000. |

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಏರಿದೆ.

ಕಂಪನಿಯ ಫಂಡು ೮ ಕೋಟಿ ರೂಪಾಯಿಗಳಿಗೆ ಏರಿದೆ

ಜೀವವಿಮೆ ಮಾಡಬೇಕೆಂದಿರುವವರು ಸಾವಕಾಶ ಮಾಡದೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪರೇಡ್, ಬೆಂಗಳೂರು.

52-21

ಎಲ್. ಆರ್. ಕೃಷ್ಣಸ್ವಾಮಯ್ಯರ್,
ಬ್ರಾಂಚ್ ಸೆಕ್ರೆಟರಿ.


Printed & published by P I Belliappa, at "Kodagu" Press, Mercara for "Kodagu" Ltd.

*If not delivered please return to* "KODAGU" OFFICE. MERCARA.

# ಕೊಡಗು.

ಸರ್ವೇಷ ಕೋಶದಯಯಃ ವಿದ್ಯಾ ... ಪ್ರಯುಕ್ತಾಃ || ಐಶ್ವರ್ಯಮಕ್ಷೀಣ ದೇವಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಶಂಭ್ಯ ಐ. ಬೆಳ್ಳಿ.

ಪ್ರತಿ ಬುಧವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೮] ಮಡಿಕೇರಿ, ಸ್ಥ ೧೯೨೦ನೇ ಇಸವಿ ಸೆಪ್ಟಂಬರ್ ತಾರೀಕು ೧೮ ನೇ ಶುಕ್ರವಾರ [ಸಂಚಿಕೆ ೧೩.


## ESTATE REQUISITES

| | | | |
|---|---|---|---|
| 5 lbs Yates hammer headed mamooties Rs 3 0 0 Each | | Weeding forks @ | Rs 1 1 0 Each |
| 4½ „ „ „ „ | „ 2 14 0 „ | Garden trowels „ | Rs 1 4 0 „ |
| 4 „ „ „ „ | „ 2 12 0 „ | Pick axes „ | Rs 1 8 0 „ |
| Felling axes at Rs 3 0 0 & | „ 3 4 0 „ | Bill hooks „ | Rs 3 14 0 „ |
| Grubbing mattocks at | „ 3 4 0 „ | Digging forks „ | Rs 1 0 0 „ |

## MONSOON EQUIPMENT.

| | | | |
|---|---|---|---|
| Planter boots | Rs 16 8 0 | Dates' dubbin per tin | Rs 0 8 0 |
| Marrs' oil (water proof) per tin | Rs 2 0 0 | Umbrellas | Rs 4 8 0 |

52—33 **SPENCER & CO. LTD.** General Merchants **MERCARA.**

# V. SUBRAMANIA IYER

*Manufacturing,*

## JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423
TRIPLICANE, MADRAS.

Catalogue Free
to Bonafide Enquirers

Rose Water Sprinkler.


Nose-screws. Chiver. Drops. Thodu. Brooch

Chased Silver Mirror.

Manufacture of
HIGH CLASS
GEMSET JEWELS.
a speciality

The special features
of my productions are —
1 Best QUALITY.
2 Latest novel designs
3 Promptest execution
4 Neat & artistic finish.
5 Most moderate prices

GOLD
or
SILVERWARE
of all descriptions
neatly executed

52—1

## ನೀವು ನಿರ್ಬಲಸ್ಥರಾಗಿ ಯಾಕೆ ನರಳುವಿರಿ?

ಇಪ್ಪತ್ತು ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

### ಸಾಲಂಮಿಶ್ರಿ ಮುರಬ್ಬ

ಸೇವನೆಯಿಂದ ಎಂಥಾ ಧಾತು ಬಲ್ಲವಿಕಾರಗಳನ್ನೂ, ನರಗಳ ಶಕ್ತಿ ಕುಂದಿಹೋಗಿರುವದನ್ನೂ ಮೆದುಳಿನ ಬಲಹೀನತೆಯನ್ನೂ ಇಂಥಾ ರೋಗಗಳನ್ನೆಲ್ಲಾ ಯುಕ್ತಿಯಾಗುಂತೆ ಹೋಯಹೊಂದಿಸತಕ್ಕ ತನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸುತ್ತದೆ ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದುವ ಅನೇಕ ಮಹನೀಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ನೋಡಿ ತಿಳಿದು ನೋಡಬಹುದು. ಒಂದು ಡಬ್ಬಿಯ ದಿನಗಳ ಸೇವನೆಯಿಂದಲೇ ಇದರ ಗುಣವು ತೋರಿಬರುವುದು. ... ಡಬ್ಬಗಳ ಸೇವನೆಯಿಂದ ಒನ್ನಾಂಶ್ರದವರಿಗೂ ಸಂಪೂರ್ಣ ಗುಣವನ್ನುಂಟುಮಾಡುವದು. ನಮ್ಮ ಪ್ರೈಸ್ ಮೊಹರ್ ನೋಡಿ ಪಡೆದುಕೊಳ್ಳಿರಿ ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಅವಶ್ಯಕವಿದೆ.

ಕ್ರಯ ಡಬ್ಬಿಗೆ ೨—೦—೦ ಟಪ್ಪಾಲು ಖರ್ಚು ೧ರಿಂದ ೩ ಡಬ್ಬಿಗಳವರೆಗೆ ೦—೮ ೦.

**ವಿ. ಮನ್ನಾಲಾಲ್,**
... ಸೇಟ್‌ ... ಮುರಬ್ಬ ... ಬೆಂಗಳೂರು ಸಿಟಿ

## ಅಪೂರ್ವ ಸಂದರ್ಭ.

ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸ ಬೇಕಾದರೆ ಇದೀಗ ಅಪೂರ್ವ ಸಂದರ್ಭ.

### ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ, ಮಲಬದ್ಧತೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಪಡಿಸುವವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ! ಧರ್ಮಾರ್ಥ!!

### ಕಾಮಶಾಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ —

ಆತಂಕನಿಗ್ರಹ ಔಷಧಾಲಯ,
52—7 ಚಿಕ್ಕಪೇಟೆ, ಬೆಂಗಳೂರು ಸಿಟಿ.

# ಕೊಡಗು.

ಸನ್ ೧೯೨೮ ನೇ ಇಸವಿ

ಸೆಪ್ಟಂಬರ್ ತಾ ೧೪ ನೇ ಶುಕ್ರವಾರ.


## ಸೈಮನ್ ಕಮಿಷನೂ - ಲಕ್ನೊ ಸಭೆಯೂ.

ರಾಜಕೀಯ ಸುಧಾರಣೆಯ ವಿಷಯದಲ್ಲಿ ಹಿಂದೂ ದೇಶದವರ ಅಭಿಪ್ರಾಯವನ್ನು ಸವಿಸ್ತಾರವಾಗಿ ತೆಗೆದುಕೊಳ್ಳಲು ಸೈಮನ್ ಕಮಿಷನಿನವರು ಈಗ ಪುನಹ ಇಂಡಿಯಾಕ್ಕೆ ಬರುತ್ತಾರೆ. ಅವರು ಈ ತಾ. 27ರಲ್ಲಿ ಲಂಡನಿನಿಂದ ಹೊರಟು ಅಕ್ಟೋಬರು ತಾ. 12ರಲ್ಲಿ ಪೂನಾಕ್ಕೆ ತಲಪಿ, ಅಲ್ಲಿ ಅವರು ಪ್ರಥಮ ವಿಚಾರವನ್ನು ಪ್ರಾರಂಭಿಸುವರು. ಇವರ ಇಡೀ ಹಿಂದೂಸ್ಥಾನದ ಪ್ರವಾಸದಲ್ಲಿ ಇವರೊಂದಿಗೆ ಸಹಕರಿಸಲು ಮಧ್ಯವರ್ತಿ ಶಾಸನ ಸಭೆಗಳ ಏಳು ಮೆಂಬರುಗಳುಳ್ಳ ಒಂದು ಕಮಿಟಿಯನ್ನು ಚುನಾಯಿಸಬೇಕೆಂದು ಈ ಮೊದಲು ಗೊತ್ತು ಮಾಡಲ್ಪಟ್ಟಿತ್ತು. ಆದರೆ ಲೆಜಿಸ್ಲೇಟಿವ್ ಎಸೆಂಬ್ಲಿಯವರು ಈ ಕಮಿಷನಿನೊಂದಿಗೆ ಸಹಕರಿಸುವದಿಲ್ಲವೆಂದು ತೀರ್ಮಾನಿಸಿದ ಕಾರಣ ಅಂಥಾದೊಂದು ಕಮಿಟಿಯನ್ನು ಚುನಾಯಿಸಲು ಸಾಧ್ಯವಾಗಲಿಲ್ಲ. ಆದರೆ ಐಶ್ವರ್ಯವಂತ ಮೆಂಬರುಗಳಿಂದ ಕೂಡಿದ ಕೌನ್ಸಿಲ್ ಆಫ್ ಸ್ಟೇಟಿನವರು ತಮ್ಮ ಪಾಲಿನ ಎರಡು ಯಾ ಮೂರು ಮೆಂಬರುಗಳನ್ನು ಚುನಾಯಿಸಲು ತಯಾರಾಗಿರುವರು. ಎಸೆಂಬ್ಲಿಯ ಪ್ರತಿನಿಧಿಗಳು ಮುಂದುಬಾರದಿದ್ದರೆ ವೈಸರಾಯರು ತಮಗೆ ತೋಚಿದ ಮೇರೆ ಆ ಕಮಿಟಿಯನ್ನು ಪೂರ್ತಿಗೊಳಿಸಬೇಕೆಂದು ಸೈಮನರವರು ವೈಸರಾಯರನ್ನು ಕೇಳಿಕೊಂಡಿರುವರು. ಇಡೀ ಹಿಂದೂ ದೇಶದ ಪ್ರತಿನಿಧಿ ಸಭೆಯಾದ ಎಸೆಂಬ್ಲಿಯಲ್ಲಿ ಮೆಜಾರಿಟಿ ಅವರ ಶಾಸನ ತೀರ್ಮಾನವನ್ನು ಒದಲಾಯಿಸಲು ಸಾಧ್ಯವಿಲ್ಲವೆಂದು ತೋರಿದ್ದರಿಂದಲೇ ಸರಕಾರದವರು ಸಹಕಾರದ ಕಮಿಟಿಯನ್ನು ಆರಿಸುವ ವಿಷಯ ಅದರಲ್ಲಿ ಈಗ ಚರ್ಚೆಗೆ ತರದಿರುವದಾಗಿದೆ. ಹೀಗೆ ಎಸೆಂಬ್ಲಿಯು ತನ್ನ ದೃಢತೆಯನ್ನು ತೋರಿಸಿ ಭಾರತ ಭೂಮಿಯ ಗೌರವವನ್ನು ಕಾಪಾಡಿದ್ದು ಶ್ಲಾಘನೀಯವಾಗಿದೆ. ಸೈಮನರ ಕೋರಿಕೆ ಮೇರೆ ಅಂಥಾ ಕಮಿಟಿಯನ್ನು ವೈಸರಾಯರು ನೇಮಿಸಬೇಕಲ್ಲದೆ ಬೇರೆ ಉಪಾಯವಿಲ್ಲ. ಹಾಗೆ ನೇಮಿಸಿದ ಕಮಿಟಿಯು ಎಸೆಂಬ್ಲಿಯ ಮೆಂಬರುಗಳುಳ್ಳದಾದರೂ ಅದೆಂದಿಗೂ ದೇಶದ ಪ್ರತಿನಿಧಿತ್ವವನ್ನು ಹೊಂದಲಾರದು. ಅದು ಬರೇ ತೋರಿಕೆಯ ಕಮಿಟಿಯಾಗುವದು. ಮಧ್ಯವರ್ತಿ ಶಾಸನ ಮಂಡಳಿಯೂ ಕಮಿಷನಿನೊಂದಿಗೆ ಸಹಕರಿಸಿತು ಎಂದು ಪರರಾಷ್ಟ್ರಗಳ ಕಣ್ಣಿಗೆ ಮಣ್ಣೆರಚುವದಕ್ಕಾಗಿಯೇ ಸೈಮನರು ಇಂಥಾ ಕಮಿಟಿಯನ್ನು ಹೇಗಾದರೂ ನೇಮಿಸಬೇಕೆಂದು ಕೇಳಿಕೊಂಡಿರುವದಾಗಿದೆ. ಆದುದರಿಂದ ಎಸೆಂಬ್ಲಿಯ ಚುನಾಯಿತ ಮೆಂಬರುಗಳ್ಯಾರೂ ನೇಮಿತ ಕಮಿಟಿಯ ಮೆಂಬರುತನವನ್ನು ಒಪ್ಪಿಕೊಳ್ಳದೆ ದೇಶೀಯರಿಗೆ ಅವರಲ್ಲಿರುವ ವಿಶ್ವಾಸವನ್ನು ಕಾಪಾಡುವರಾಗಿ ನಂಬುತ್ತೇವೆ.

ಎಸೆಂಬ್ಲಿಯು ತನ್ನ ಘನತೆಯನ್ನು, ಗೌರವವನ್ನೂ ಕಾಪಾಡಿದಂತೆ ಪ್ರಾಂತೀಕ ಕೌನ್ಸಿಲುಗಳು ತಮ್ಮ ಮೊದಲಿನ ತೀರ್ಮಾನದ ಪ್ರಕಾರ ವರ್ತಿಸದೆ ಇರುವದು ಶೋಚನೀಯವಾಗಿದೆ. ಈಗಾಗಲೇ ಆರೇಳು ಕೌನ್ಸಿಲುಗಳು ಸಹಕಾರ ಕಮಿಟಿಗಳನ್ನು ಆರಿಸಿರುವವು. ಅಖಿಲಭಾರತ ರಾಷ್ಟ್ರೀಯ ಸಭೆಯ ತೀರ್ಮಾನಕ್ಕೂ, ಹಲವು ವಿಖ್ಯಾತ ಮುಂದಾಳುಗಳ ಕೋರಿಕೆಗೂ ಗಮನಿಸದೆ ಪ್ರಾಂತೀಕ ಕೌನ್ಸಿಲುಗಳ ಮೆಂಬರುಗಳು ಸೈಮನ್ ಕಮಿಷನಿನೊಂದಿಗೆ ಸಹಕರಿಸಲು ನಿಶ್ಚೈಸಿದ್ದು ತುಂಬಾ ಅತೃಪ್ತಿಕರವಾದ ಸಂಗತಿಯಾಗಿದೆ. ಇವರು ತಮ್ಮ ಓಟರುಗಳ ಅಭಿಪ್ರಾಯಕ್ಕನುಸಾರವಾಗಿ ನಡೆಯಲಿಲ್ಲವೆಂದೇ ಹೇಳಬೇಕು. ನಮ್ಮ ನೆರೆ ಪ್ರಾಂತ್ಯವಾದ ಮದ್ರಾಸಿನ ಕೌನ್ಸಿಲು ಕಳೆದ ವಾರ ತನ್ನ ಕಮಿಟಿಯನ್ನು ಆರಿಸಿತು. ಕಳೆದ ಫೆಬ್ರವರಿ ತಿಂಗಳಲ್ಲಿ ಸೈಮನ್ ಕಮಿಷನಿನೊಂದಿಗೆ ಸಹಕರಿಸಬಾರದೆಂದು ತೀರ್ಮಾನಿಸಿದ ಈ ಕೌನ್ಸಿಲು ಈಗ ಪುನಹ ಸಹಕಾರದ ಕಮಿಟಿಯನ್ನು ಚುನಾಯಿಸಿ ತನ್ನ ಮೊದಲಿನ ತೀರ್ಮಾನವನ್ನು ಅಲ್ಲಗಳೆದದ್ದು ಅಪಮಾನಕರವಾಗಿದೆ. ಒಂದು ವರ್ಷವಾಗುವದರೊಳಗೇನೇ ಅದೇ ಸಂಗತಿಯನ್ನು ಆದಲಿಗೆ ವಿರೋಧವಾಗಿ ಕೌನ್ಸಿಲಿನಲ್ಲಿ ಪುನಹ ಚರ್ಚೆಗೆ ಬಿಟ್ಟದ್ದು ಆ ಕೌನ್ಸಿಲಿನ ರಾಷ್ಟ್ರೀಯ ಪಕ್ಷಕ್ಕೆ ಸೇರಿದ ಅಧ್ಯಕ್ಷರಿಗೆ ಎಂದೂ ಯೋಗ್ಯವಲ್ಲ. ಕಮಿಷನಿನ ವರ್ತನೆಯಲ್ಲಿ ಹಿಂದೂದೇಶಕ್ಕೆ ಪ್ರಯೋಜನಕರವಾಗುವ ಸ್ವಲ್ಪ ಬದಲಾವಣೆಯು ಉಂಟಾಗಿರುವದರಿಂದ ಹೀಗೆ ತಮ್ಮ ಮೊದಲಿನ ತೀರ್ಮಾನಕ್ಕೆ ವಿರೋಧವಾಗಿ ಈಗ ಸಹಕರಿಸಲು ನಿಶ್ಚೈಸಿರುವದೆಂದು ಕೆಲವರು ವಾದಿಸಬಹುದು. ಆದರೆ ಆ ಅಲ್ಪ ಬದಲಾವಣೆಯು ಬರೇ ಟೊಳ್ಳು ಸ್ವಭಾವದೆಂದೂ, ಅದು ಚಂಚಲ ಚಿತ್ತದವರನ್ನು ತಿರುಗಿಸಲಿಕ್ಕೆ ಮಾಡಿದ ಉಪಾಯವೆಂದೂ ಈ ಮೊದಲೇ ಸೂಚಿಸಿದ್ದೆವು. ಹಾಗೆಯೇ ಕೆಲವರು ಆ ಬಲೆಗೆ ಸಿಕ್ಕಿ ಬಿದ್ದದ್ದು ವ್ಯಸನಕರವಾಗಿದೆ. ಇದರಿಂದ ಮಾತೃಭೂಮಿಗೆ ಅಪಕೀರ್ತಿಯನ್ನು ತಂದಂತಾಗಿದೆ. ಇನ್ನಾದರೂ ಇವರು ತಾವು ಮಾಡಿದ ರಾಜಕೀಯ ಪ್ರಮಾದವನ್ನು ಸರಿಪಡಿಸಲು ಯತ್ನಿಸುವರಾಗಿ ಆಶಿಸುತ್ತೇವೆ. ಇದಕ್ಕೆ ಬಹು ಸುಲಭದ ದಾರಿ ಇದೆ. ಲಕ್ನೋ ಕಾನ್‌ಫರೆನ್ಸಿನ ತೀರ್ಮಾನವು ಇವರ ಸಹಾಯಕ್ಕೆ ಬರುತ್ತದೆ. ಕೌನ್ಸಿಲಿನ ಕಮಿಟಿಗಳಾಗಲೀ, ಪ್ರತ್ಯೇಕ ಮೆಂಬರುಗಳಾಗಲೀ ಕಮಿಷನಿನ ಮುಂದೆ ಅಭಿಪ್ರಾಯ ಕೊಡುವಾಗ್ಯೆ ಸರ್ವಪಕ್ಷಗಳ ಪರಿಷತ್ತಿನಲ್ಲಿ ಮಂಜೂರಾಗಿರುವ ಆಡಳಿತ ರಚನೆಯನ್ನೇ ಕೊಡಬೇಕೆಂದು ಕೇಳಿದರೆ ಅದು ಇಡೀ ಇಂಡಿಯಾದ ಒಗ್ಗಟ್ಟಿನ ಅಭಿಪ್ರಾಯವಾಗಿ ಪರಿಣಮಿಸುವದು. ಹೀಗೆ ಎಲ್ಲರೂ ಒಂದೇ ತರಹದ ಅಭಿಪ್ರಾಯ ಕೊಟ್ಟರೆ ಕಮಿಷನಿನವರು ಹಿಂದೀಯರಲ್ಲಿರುವ ಭಿನ್ನಾಭಿಪ್ರಾಯಗಳ ನೆವವನ್ನು ಹೇಳಿ ಹೆಸರು ಮಾತ್ರದ ಸುಧಾರಣೆಯನ್ನು ಕೊಡಲು ಅವರಿಗೆ ಅವಕಾಶದೊರೆಯಲಾರದು.

ಲಕ್ನೋ ಕಾನ್‌ಫರೆನ್ಸಿಗೂ ಸೈಮನ್ ಕಮಿಷನಿಗೂ ಸಂಬಂಧವೇನೆಂದು ಕೆಲವರು ಕೇಳಬಹುದು. ಸೈಮನ್ ಕಮಿಷನು ಇಂಡಿಯಾದ ಭಾವಿ ಸರ್ಕಾರವನ್ನು ರಚಿಸಲು ಬ್ರಿಟಿಷ್ ಪಾರ್ಲಿಮೆಂಟಿನಿಂದ ನೇಮಿಸಲ್ಪಟ್ಟ ಬಿಳೀಜನರ ಕಮಿಟಿಯಾಗಿದೆ. ಲಕ್ನೋ ಕಾನ್‌ಫರೆನ್ಸು ಇಂಡಿಯಾದ ಎಲ್ಲಾ ಪ್ರಾಮುಖ್ಯ ಪಾರ್ಟಿಗಳ ಪ್ರತಿನಿಧಿಗಳಿಂದ ಕೂಡಿ ಇಂಡಿಯಾಕ್ಕೆ ಬೇಕಾದ ಆಡಳಿತ ರಚನೆಯ ತತ್ವಗಳನ್ನು ಮಂಜೂರುಮಾಡಿದ ಸಭೆಯಾಗಿದೆ. ಸೈಮನ್ ಕಮಿಷನಿನ ಕೆಲಸವನ್ನು ಅವರು ಪ್ರಾರಂಭಿಸುವ ಮುಂಚೆಯೇ ನೆಹರು ಕಮಿಟಿಯವರು ಮುಗಿಸಿರುವರು. ಬ್ರಿಟಿಷ್ ಸರ್ಕಾರದವರು ಹಿಂದೂದೇಶಕ್ಕೆ ಜವಾಬ್ದಾರಿಯ ಸರ್ಕಾರವನ್ನು ಕೊಡಬೇಕೆಂದು ಮನಃಪೂರ್ವಕವಾಗಿ ಇಚ್ಛಿಸುವದಾದರೆ ಈಗ ಒಂದು ಸುಸಂಧಿಯು ದೊರೆತಿದೆ. ಹಿಂದೀಯರಿಗೆ ಬೇಕಾದ ಸರ್ಕಾರದ ರಚನೆಯು ಹಿಂದೀಯರಿಂದಲೇ ತಯಾರಿಸಲ್ಪಟ್ಟಿದೆ. ಅದರ ಆಧಾರದ ಮೇಲೆ ಬ್ರಿಟಿಷರು ತಮ್ಮ ಪಾರ್ಲಿಮೆಂಟಿನಲ್ಲಿ ಮಸೂದೆಯನ್ನು (ಬಿಲ್ಲು) ತಯಾರಿಸಬಹುದು. ಇಲ್ಲವೇ ಸೈಮನ್ ಕಮಿಷನಿನವರು ನೆಹರು ಕಮಿಟಿಯೊಂದಿಗೆ ಸಂಧಾನಗಳನ್ನು ನಡಿಸಿ ಎರಡು ಪಕ್ಷಕ್ಕೂ ಒಪ್ಪುವಂಥ ರಚನೆಯನ್ನು ತಯಾರಿಸಬಹುದು. ಬ್ರಿಟಿಷ ಪಾರ್ಲಿಮೆಂಟು ಮೊದಲು, ಕನಡಾ, ದಕ್ಷಿಣ ಆಫ್ರಿಕಾ ಮತ್ತು ಐರ್ಲ್ಯಾಂಡಿನ ಆಡಳಿತ ರಚನೆಯ ವಿಷಯ ಈ ರೀತಿಯಲ್ಲಿ ವರ್ತಿಸಿದೆ. ಯಾಕೆ, ಸೈಮನ್ ರವರೇ 1922ರಲ್ಲಿ ಪಾರ್ಲಿಮೆಂಟಿನಲ್ಲಿ ಐರಿಷ್ ರಚನೆಯ ಮಸೂದೆಯನ್ನು ಕುರಿತು ಮಾತಾಡಿದಾಗ 'ಐರಿಷರಿಂದ ಐರ್ಲ್ಯಾಂಡಿಗಾಗಿ ಐರ್ಲ್ಯಾಂಡಿನಲ್ಲಿ ತಯಾರಿಸಲ್ಪಟ್ಟ' ಮತ್ತು 'ಅದರ ಆಡಳಿತದಲ್ಲಿರಬೇಕಾದ ಜನರಿಂದಲೇ ಅದು ಜಾರಿಯಲ್ಲಿರಬೇಕಾದ ಭೂಮಿಯಲ್ಲಿ ತೀರ್ಮಾನಿಸಲ್ಪಟ್ಟ' ರಚನೆಯನ್ನು ಪೂರ್ತಿಯಾಗಿ ಒಪ್ಪಿಕೊಳ್ಳಬೇಕೆಂದು ವಾದಿಸಿದರಲ್ಲವೇ. ಆ ಮಾತುಗಳಲ್ಲಡಗಿರುವ ಉತ್ತಮ ತತ್ವವನ್ನು ಸರ್ ಜಾನ್ ಸೈಮನರು ಈಗೊಮ್ಮೆ ಜ್ಞಾಪಿಸಿಕೊಂಡು, ಆಶ್ರಿತ ರಾಜ್ಯವಾದ ಹಿಂದೂದೇಶಕ್ಕೂ ಅದು ಅನ್ವಯಿಸುವಂತೆ ಯಾಕೆ ಮಾಡಬಾರದು?

ಇಡೀ ಹಿಂದೂದೇಶದ ಕೋರಿಕೆಯು ಲಕ್ನೋ ಕಾನ್‌ಫರೆನ್ಸಿನ ತೀರ್ಮಾನದಲ್ಲಿ ರೂಪಿತಗೊಂಡಿದೆ. ಆ ಸಭೆಯ ಅಧ್ಯಕ್ಷರಾದ ಡಾಕ್ಟರ್ ಅನ್ಸಾರಿಯವರು ಹೇಳಿದಂತೆ 'ಈ ತೀರ್ಮಾನವನ್ನು ಸಾಧಿಸಲು ಪ್ರಾಣವನ್ನಾದರೂ ಅರ್ಪಿಸಲು ಪ್ರತಿಯೊಬ್ಬ ಹಿಂದೀಯನೂ ತಯಾರಾಗಬೇಕು.' ಹಿಂದೀಯರು ಇನ್ನಾದರೂ ತಮತಮ್ಮಲ್ಲಿರುವ ಅಲ್ಪ ಮತಭೇದಗಳನ್ನು ಬಿಟ್ಟು ಲಕ್ನೋ ತೀರ್ಮಾನವನ್ನೇ ಭದ್ರವಾಗಿ ಕೈ ಹಿಡಿದರೆ ಹಿಂದೂಸ್ಥಾನದ ಸ್ವಾತಂತ್ರ್ಯವು ದೂರವಾಗಲಾರದು.

---

## ಹಿಂದೂಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿ.

ಕೊನೆಗಿನ ಅಪ್ರಿಲ್ ವರೆಗೆ ಕೇಂದ್ರ ಸರಕಾರದ ಸಂಬಂಧ ಸಡಿಕೇರಿಗೆ ಬಂದಿದ್ದ ಮದ್ರಾಸಿನ ಸರ್ ಸಿ. ಪಿ ರಾಮಸ್ವಾಮಿ ಅಯ್ಯರವರು ಈ ತಾ. 11 ನೇ ಮಂಗಳವಾರ ಸಾಯಂಕಾಲ ಆರು ಗಂಟೆಗೆ ಸೆಂಟ್ರಲ್ ಹೈಸ್ಕೂಲು ಹಾಲ್‌ನಲ್ಲಿ "ಹಿಂದೂಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿ" ಯನ್ನು ಕುರಿತು ಅರ್ಥಗರ್ಭಿತವಾದ ಮತ್ತು ಸ್ವಾರಸ್ಯವಾದ ಭಾಷಣವನ್ನು ಸುಮಾರು ಒಂದು ಗಂಟೆಕಾಲ ಮಾಡಿದರು. ರಾ ಸಾ ಕೋಡಿಮಣಿಯಂಡ ಸುಬ್ಬಯ್ಯನವರು ಅಧ್ಯಕ್ಷರಾಗಿದ್ದರು. ಉಪನ್ಯಾಸದ ನೋಟೀಸು ಸ್ವಲ್ಪ ಸಮಯ ಮುಂಚಿತವಾಗಿ ಮಾತ್ರ ಹಂಚಲ್ಪಟ್ಟಿದ್ದರೂ ನಿಯಮಿತ ಗಂಟೆಗೆ ಮುಂಚೆಯೇ ಹಾಲ್ ಜನರಿಂದ ತಿಕ್ಕಿರಿದುಹೋಗಿತ್ತು. ಸ್ಥಳವಿಲ್ಲದೆ ಹಲವರು ಹೊರಗೆ ನಿಲ್ಲಬೇಕಾಯಿತು. ಕೆಲವು ಮಹಿಳೆಯರೂ ಹಾಜರಿದ್ದರು.

ಅಧ್ಯಕ್ಷರು—ಪ್ರಸಿದ್ಧ ಉಪನ್ಯಾಸಕರು, ವಿದ್ಯಾರ್ಥಿಯಾಗಿರುವಾಗಲೇ ಬಹು ಗಟ್ಟಿಗರಾಗಿದ್ದರೆಂಬುದು ಅವರು ಪಡೆಯುತ್ತಿದ್ದ ಇನಾಮು ಪುಸ್ತಕಗಳನ್ನು ತೆಗೆದುಕೊಂಡು ಹೋಗಲು ಗಾಡಿಗಳನ್ನು ತರುತ್ತಿದ್ದರೆಂಬುದರಿಂದಲೇ ವಿಶದವಾಗುತ್ತದೆಂತಲೂ, ಅವರು ಲಾಯರು ವೃತ್ತಿಯಲ್ಲಿ ಹೆಸರುವಾಸಿ ಪಡೆದಕೂಡಲೆ ಮದ್ರಾಸಿನ ಅಡ್ವಕೇಟ್ ಜನರಲಾಗಿಯೂ, ನಂತರ ಅಲ್ಲಿಯ ಗವರ್ನರವರ ಎಗ್ಸಿಕ್ಯುಟಿವ್ ಕೌನ್ಸಿಲಿನ ಲಾ ಮೆಂಬರಾಗಿಯೂ ನೇಮಿಸಲ್ಪಟ್ಟರೆಂದೂ ಮುಂತಾಗಿ ಹೇಳಿ ಸಭೆಗೆ [illegible] ಭಾಷಣಕಾರರ ಪರಿಚಿತಿಯನ್ನು ಮಾಡಿದರು.

ನಂತರ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರವರು ತಮ್ಮ ಭಾಷಣವನ್ನು ಮಾಡಿದರು. ಅದರ ಸಾರಾಂಶವೇನೆಂದರೆ— ಹಿಂದೂಸ್ಥಾನದ ಪೂರ್ವ ಇತಿಹಾಸವು ಮಹತ್ವದಾಗಿದೆ. ಇದು ವಿಶೇಷವಾದ ನಾಗರೀಕತೆಯನ್ನು ಹೊಂದಿದ ದೇಶವಾಗಿತ್ತು. ಹಿಮಾಲಯದಿಂದ ಹಿಡಿದು ಕನ್ಯಾಕುಮಾರಿವರೆಗೆ ಒಂದೇ ನಾಗರೀಕತೆಯಾಗಿದೆ. ನಮ್ಮ ವಿರೋಧಿಗಳು ಯೂರೋಪಿಯನರಾಗಲೀ, ಅಮೇರಿಕನರಾಗಲಿ ಹಿಂದೂ ದೇಶವು ಒಂದು ಭೂಖಂಡವಾಗಿದೆ, ಅದು ಒಗ್ಗಟ್ಟಾಗಲಾರದು, ಒಂದು ರಾಷ್ಟ್ರೀಯವಾಗಲಾರದು ಎಂದು ಎಷ್ಟು ಹೇಳಿದರೂ ಹಿಂದೂಸ್ಥಾನದ ಸಾಹಿತ್ಯ, ಪದ್ಧತಿಗಳ ಐಕ್ಯತೆಯು ಎಂದೂ ಸುಳ್ಳಾಗಲಾರದು. ನಾನು ಹಲವು ದೇಶಗಳಲ್ಲಿ ಸಂಚಾರ ಮಾಡಿರುತ್ತೇನೆ. ನನ್ನ ಅನುಭವದಲ್ಲಿ ಕಂಡು ಬಂದ ಪ್ರಕಾರ ಯೂರೋಪ್ ಖಂಡದ ಬೇರೆ ಜನಾಂಗಗಳು ಇಂಡಿಯನರೊಂದಿಗೆ ಬೇಗನೆ ಮಿಳಿತವಾಗುತ್ತಾರೆ. ಆದರೆ ಆಂಗ್ಲೇಯರು ಮಿಳಿತವಾಗುವದು ಕಡಿಮೆ. ಇಂಗ್ಲಿಷರ ಸಾಹಿತ್ಯದಿಂದ ನಮಗೆ ಪ್ರಜಾಪ್ರತಿನಿಧಿ ಸರ್ಕಾರ ಪದ್ಧತಿಯ ಮಾಹಿತಿಯೂ, ವ್ಯಕ್ತಿತ್ವದ ಪ್ರಾಮುಖ್ಯತೆಯೂ ತಿಳಿಯಬಂತು. ಆಂಗ್ಲೇಯರ ಸ್ವಭಾವವು ಯೋಧರಾದ ಸ್ವಭಾವ. ಅವರಿಂದ ಹೊಡೆಸಿಕೊಳ್ಳಬೇಕು, ಇಲ್ಲವೇ ಅವರಿಗೆ ಹೊಡೆಯಬೇಕು ; ಅಂಥವರಲ್ಲಿಯೇ ಅವರಿಗೆ ಗೌರವ. ಮಿಲ್ಟನನು "ಪೇರಡೈಸ್ ಲಾಸ್ಟ್" ಎಂಬ ಪದ್ಯದಲ್ಲಿ ದೇವರ ಬದಲು ಸೈತಾನನನ್ನು ವೀರನನ್ನಾಗಿ ಮಾಡಿದಂತೆ ಅವರು ಸೋಲುವವನ ಪಕ್ಷವನ್ನೇ ವಹಿಸುವರು. ಅವರು ವ್ಯಕ್ತಿತ್ವಕ್ಕೆ ಉತ್ತೇಜನ ಕೊಡುತ್ತಾರೆ. ಆದರೆ ಇಂಡಿಯನರು ಕೂಟತತ್ವಕ್ಕೆ, ಕೋಮುವಾರು ತತ್ವಕ್ಕೆ ಹೆಚ್ಚಿನ ಬೆಲೆ ಕೊಡುತ್ತಿದ್ದರು. ಪಾಶ್ಚಿಮಾತ್ಯ ನಾಗರೀಕತೆಯ ಪರಿಣಾಮದಿಂದ ಹಿಂದೂ ದೇಶದಲ್ಲಿ ಈಗ ಎಲ್ಲವೂ ಬದಲಾಗಿದೆ. ಎಷ್ಟಾದರಲ್ಲಿಯೂ ಪೂರ್ವ ಪದ್ಧತಿಗೆ ಹೋಗಲು ಈಗ ಸಾಧ್ಯವಿಲ್ಲ. ಪೂರ್ವದ ಉತ್ತಮ ಪದ್ಧತಿಗಳನ್ನು ಕಾಪಾಡುವಂತೆಯೂ, ಈಗಿನ ನಾಗರೀಕತೆಯ ಒಳ್ಳೇ ಗುಣವನ್ನು ಅನುಸರಿಸುವಂತೆಯೂ ಎಲ್ಲರೂ ಪ್ರಯತ್ನಿಸಬೇಕು.

ಬ್ರಿಟಿಷರು ಇಂಡಿಯಾ ದೇಶಕ್ಕೆ ಒಂದು ನೂರಾರು ವರ್ಷಗಳಾದರೂ ಇಂಡಿಯನರನ್ನು ಇನ್ನೂ ಚಿಕ್ಕಮಕ್ಕಳಂತೆ ಭಾವಿಸುತ್ತಾರೆ. ಸ್ವರಾಜ್ಯವನ್ನು ಕೇಳಿದರೆ, ಇನ್ನೂ ಕಾರ್ಯಭಾರವನ್ನು ವಹಿಸಲು ಶಕ್ತರಲ್ಲವೆಂದು ಹೇಳುತ್ತಾರೆ. ಆದರೆ ಹಿಂದೂಸ್ಥಾನವು ಪ್ರಾಯಕ್ಕೆ ಬಂದ ಮಗನಂತೆ ಕಾರ್ಯಭಾರವನ್ನು ವಹಿಸಿಕೊಳ್ಳಲು ತ್ವರೆಪಡುತ್ತಿದೆ. ಬೆಳವಣಿಗೆಯನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ. ಈ ಭಾವವನ್ನು ನಮ್ಮನ್ನಾಳುವ ಬ್ರಿಟಿಷರು ರಿಪ್ಪನ್ ಮತ್ತು ಮಾಂಟೇಗ್ಯುರಂತೆ ತಿಳಿಯಕೊಳ್ಳದೆ ಇರುವುದು ವಿಷಾದಕರ. ಅಲ್ಲದೆ ಇಂಡಿಯಾ ದೇಶವು ಅವರ ಕೈಸೇರಿದಂದಿನಿಂದ ಅವರು ಈ ದೇಶವನ್ನು ತಮ್ಮ ಸ್ವಂತ ಸ್ವತ್ತನ್ನಾಗಿ ಗಣಿಸಿ, ದೇಶೀಯ ಉದ್ಯಮಗಳನ್ನು ಹಾಳುಮಾಡಲು ಇಂಗ್ಲೆಂಡಿನಲ್ಲಿ ಅನೇಕ ಕಾಯಿದೆಗಳನ್ನು ಮಾಡಿದರು. ಹಿಂದೂ ದೇಶದ ಪ್ರಖ್ಯಾತವಾದ ಕ್ಯಾಲಿಕೋ, ಮಸ್ಲಿನ್ ಮತ್ತು ರೇಶ್ಮೆಬಟ್ಟೆಗಳನ್ನು ಇಂಗ್ಲೆಂಡಿನಲ್ಲಿ ಉಪಯೋಗಿಸಿದವರಿಗೆ ಶಿಕ್ಷೆ ಮಾಡುವಂತೆ 3 ಸಂವತ್ಸರಗಳವರೆಗೆ ಕಾಯಿದೆಗಳನ್ನು ಮಾಡಿ, ಹಿಂದೂ ದೇಶವು ತನ್ನ ಅತ್ಯಾವಶ್ಯಕವಾದ ಸಾಮಗ್ರಿಗಳಿಗೆ ಇಂಗ್ಲಾಂಡನ್ನೇ ನಂಬಿರುವಂಥ ಸ್ಥಿತಿಗೆ ತಂದಿವೆ. ಇಂಡಿಯಾ ದೇಶವು ಮಾತ್ರ ತನ್ನ ಉದ್ಯಮಗಳನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಿದರೆ, ಅದನ್ನು ಅವರು ಸಿಟ್ಟಿನಿಂದ ನಿರೋಧಿಸುತ್ತಾರೆ.

ನಮ್ಮ ದೇಶದಲ್ಲಿ ವರ್ಣಾಶ್ರಮ ಭೇದಗಳಿದ್ದರೂ ಒಂದು ಮತದಲ್ಲಿ ಐಶ್ವರ್ಯವಂತನೂ, ಬಡವನೂ ಸಮದೃಷ್ಟಿಯಿಂದ ಕಾಣಲ್ಪಡುತ್ತಾರೆ. ಆದರೆ ಅಮೇರಿಕಾ ಮತ್ತು ಯುರೋಪ್ ಖಂಡಗಳಲ್ಲಿ ಐಶ್ವರ್ಯವಂತನಿಗೂ ಬಡವನಿಗೂ ಬಹಳ ತಾರತಮ್ಯವಿದೆ. ಈ ತೆರನಾದ ತಾರತಮ್ಯವು ನಮ್ಮ ವರ್ಣಾಶ್ರಮ, ಧರ್ಮದಲ್ಲಿಯ ಕುಂದುಕೊರತೆಗಳಿಗಿಂತಲೂ ಹಾನಿಕರವು. ನಮ್ಮನ್ನು ವಿದ್ಯಾವಂತರನ್ನಾಗಿ ಮಾಡಿದ್ದಕ್ಕೆ ಇಂಗ್ಲಿಷರು ಕಾರಣಭೂತರು. ನಾವು ನಮ್ಮ ದೇಶವನ್ನು ಆಳಬೇಕಾದವರೇ ಮುಖ್ಯರು. ಆದರೆ ಈಗ ನಮಗೆ ದೊರೆಯುತ್ತಿರುವ ವಿದ್ಯೆಯು ನಮ್ಮನ್ನು ನೌಕರಿಗೆ ತಯಾರು ಮಾಡುತ್ತದೆಯೇ ಹೊರತು ನಮ್ಮ ದೇಶದ ಕಾರ್ಯ ಭಾರವನ್ನು ವಹಿಸಿಕೊಂಡು ಹೋಗಲು ಅಗತ್ಯವಾದ ಗುಣಗಳನ್ನು ನಮಗೆ ಕಲಿಸುವುದಿಲ್ಲ. ಇಂಗ್ಲಿಷರು ಬಹಳ ಯುಕ್ತಿಯುಳ್ಳವರು. ನಮ್ಮನ್ನು ಸಣ್ಣ ಹುದ್ದೆಗಳಿಂದಲೂ ಬಿರುದುಗಳಿಂದಲೂ ತೃಪ್ತಿಪಡಿಸಿ ನಮ್ಮ ವ್ಯಾಪಾರವನ್ನು ಕೈವಶಮಾಡಿಕೊಂಡಿದ್ದಾರೆ. ಹಸೀ ಪದಾರ್ಥಗಳೆಲ್ಲವನ್ನೂ ತಮ್ಮ ದೇಶಕ್ಕೇ ಒಯ್ಯುತ್ತಾರೆ. ಇವೆಲ್ಲವನ್ನು ತಡೆಯಲು ನಮಗೆ ಸರ್ವ ಸ್ವಾತಂತ್ರ್ಯಬೇಕು. ಸರ್ವ ಹಕ್ಕು ದೊರೆತರೆ ಈಗಿನ ದುಸ್ಥಿತಿಯಿಂದ ಪಾರಾಗುವೆವು. ಈಗ ಬ್ರಿಟಿಷರು ತಾವು ನಿರ್ಣಯಿಸಿದ ಸುಧಾರಣೆಗಳು ಹಿಂದೀಯರಿಗೆ ಒಳ್ಳೆಯದೆಂದೇ ಆಲೋಚಿಸಿ, ಅದರಿಂದಲೇ ನಾವು ತೃಪ್ತಿ ಹೊಂದಬೇಕೆಂದು ಹೇಳುತ್ತಾರೆ. ಅವರೇ ಔಷಧವನ್ನು ಉಪಯೋಗಿಸಿ ನೋಡಿದರೆ ಅವರಿಗೆ ಅದರ ಕುಂದುಕೊರತೆಗಳು ಗೊತ್ತಾಗುತ್ತವೆ. ಡಾಕ್ಟರನು ಔಷಧಿಯನ್ನು ರೋಗಿಗೆ ಕೊಡುವನು. ಕುಡಿಯುವ ರೋಗಿಯು ಅದರ ಪ್ರತಿಫಲವನ್ನು ಅನುಭವಿಸುವನು.

ಬ್ರಿಟಿಷರು ಇಂಡಿಯದಿಂದ ಹೋಗಿಬಿಟ್ಟರೆ ಇಂಡಿಯಾದಲ್ಲಿ ಅನೇಕ ಅನಾಹುತಗಳುಂಟಾಗುತ್ತವೆಂದು ಪದೇ ಪದೇ

(7ನೇ ಪುಟದಲ್ಲಿ ಮುಂದುವರಿದಿದೆ.)

## ಮಹಾತ್ಮಗಾಂಧಿಯವರ ಸ್ವಕಥೆ.

೫ನೇ ಭಾಗದ ೨೦ನೇ ಪ್ರಕರಣ

ಒಲಿಸಲು ಪ್ರಯತ್ನ

ಗೋಖಲೆಯವರ ಶ್ರಾದ್ಧ ಕ್ರಿಯೆಗಳೆಲ್ಲಾ ಮುಗಿದ ಮೇಲೆ ನಾವೆಲ್ಲರೂ ಭಾರತಸೇವಾ ಸಂಘದ ಪರಿಷತ್ತಿನಲ್ಲಿ ನಾನು ಅದನ್ನು ಸೇರಬೇಕೇ ಬೇಡವೇ ಎಂಬುದನ್ನು ಚರ್ಚಿಸತೊಡಗಿದೆವು. ಈ ಪ್ರಶ್ನೆಯನ್ನು ನಿರ್ಧರಿಸುವುದು ನನಗೆ ಬಹು ಸೂಕ್ಷ್ಮವಾದ ಕೆಲಸವಾಗಿ ಪರಿಣಮಿಸಿತು. ಗೋಖಲೆ ಮುಂದಿರುವ ವರೆಗೂ ನಾನು ಸಂಘದ ಸದಸ್ಯನಾಗಿ ಸೇರಬೇಕಾದ ಅವಶ್ಯಕವೇ ಇರಲಿಲ್ಲ. ನಾನು ಕೇವಲ ಗೋಖಲೆಯವರ ಅಪ್ಪಣೆಯನುಸಾರವಾಗಿ ವರ್ತಿಸಿದರೆ ಸಾಕಾಗಿದ್ದಿತು. ಈ ಪರಿಸ್ಥಿತಿಯು ನನಗೆ ಸುಖದಾಯಕವಾಗಿದ್ದಿತು. ಬಿರುಗಾಳಿಯ ಸಮುದ್ರದಲ್ಲಿ ಹಡಗನ್ನು ನಡೆಸಲು ಒಳ್ಳೆಯ ನಾವಿಕನು ಬೇಕಾಗಿರುವಂತೆ ಭರತಖಂಡದ ಸಾರ್ವಜನಿಕ ಜೀವನದಲ್ಲಿ ನನಗೆ ದಾರಿ ತೋರಿಸುವವನೊಬ್ಬನು ಬೇಕಾಗಿದ್ದಿತು. ಗೋಖಲೆಯವರು ನನಗೆ ಇಂತಹ ಮಾರ್ಗದರ್ಶಿಗಳಾಗಿದ್ದರು. ಅವರ ಆಶ್ರಯದಲ್ಲಿ ನಾನು ಸುರಕ್ಷಿತವಾಗಿ ನಿರ್ಭಯದಿಂದಿದ್ದೆನು. ಈಗ ಅವರಿಲ್ಲದುದರಿಂದ ಆ ಭಾರವು ನನ್ನ ಮೇಲೆಯೇ ಬಿದ್ದಿತು. ಸಂಘಕ್ಕೆ ಸೇರಲು ಪ್ರಯತ್ನಪಡುವುದು ನನ್ನ ಕರ್ತವ್ಯವೆಂದು ನಾನು ಎಣಿಸಿದೆನು. ಏಕೆಂದರೆ ಗೋಖಲೆಯವರ ಆತ್ಮಕ್ಕೆ ಇದರಿಂದ ಸಂತೋಷವಾಗುವುದೆಂದು ನನಗೆ ತೋರಿತು. ಆದುದರಿಂದ ನಾನು ನಿಸ್ಸಂಕೋಚವಾಗಿ ದೃಢತಾಪೂರ್ವಕವಾಗಿ ಸಂಘವನ್ನು ಒಲಿಸಲು ಪ್ರಯತ್ನಪಡತೊಡಗಿದೆನು.

ಈ ಸಮಯದಲ್ಲಿ ಹೆಚ್ಚು ಕಡಿಮೆ ಸಂಘದ ಸದಸ್ಯರೆಲ್ಲಾ ಪೂನಾದಲ್ಲಿದ್ದರು. ನಾನು ಅವರುಗಳ ಬಳಿಗೆ ಹೋಗಿ ವಿನಯಿಸಿ ಅವರು ನನ್ನ ವಿಷಯದಲ್ಲಿಟ್ಟುಕೊಂಡಿದ್ದ ಸಂಶಯವನ್ನು ದೂರ ಮಾಡಲು ಹೊರಟೆನು. ಆದರೆ ಅವರಲ್ಲಿ ಭಿನ್ನಾಭಿಪ್ರಾಯವಿದ್ದುದು ಕಂಡು ಬಂದಿತು. ಒಂದು ಪಂಗಡವು ನನ್ನನ್ನು ಸೇರಿಸಿಕೊಳ್ಳಲು ಸಿದ್ಧವಾಗಿದ್ದಿತು. ಇನ್ನೊಂದು ಪಂಗಡದವರಿಗೆ ಇದು ಏನೇನೂ ಇಷ್ಟವಿರಲಿಲ್ಲ. ಎರಡು ಪಂಗಡದವರು ನನ್ನಲ್ಲಿ ಒಂದೇ ತೆರನಾಗಿ ಅಧಿಕ ಪ್ರೇಮವಿಟ್ಟಿದ್ದರೆಂಬುದು ನನಗೆ ಗೊತ್ತಿದ್ದಿತು. ಆದರೆ ಬಹುಶಃ ಅವರಿಗೆ ತಮ್ಮ ಸಂಘದಲ್ಲಿದ್ದ ಭಕ್ತಿಯು ಇನ್ನೂ ಹೆಚ್ಚಾಗಿದ್ದಿತು. ಅದು ಹೇಗೇ ಇರಲಿ ನನ್ನಲ್ಲಿಟ್ಟಿದ್ದ ಪ್ರೇಮಕ್ಕಿಂತ ಕಡಿಮೆಯಾಗಿರಲಿಲ್ಲ.

ಆದುದರಿಂದ ನಮ್ಮ ಚರ್ಚೆಯಲ್ಲೆಲ್ಲಾ ಯಾವ ರೀತಿಯ ಮನಃಕಷಾಯಕ್ಕೂ ಎಡೆ ಇರಲಿಲ್ಲ. ಅದು ಕೇವಲ ಮುಖ್ಯತತ್ವಗಳಿಗೆ ಸಂಬಂಧಿಸಿದುದಾಗಿದ್ದಿತು. ನನ್ನ ವಿರುದ್ಧ ಪಕ್ಷದವರಿಗೆ ತಮ್ಮ ಮತ್ತು ನನ್ನ ಅಭಿಪ್ರಾಯಗಳು ಅನೇಕ ಮುಖ್ಯ ವಿಚಾರಗಳಲ್ಲಿ ಉತ್ತರ ದಕ್ಷಿಣ ಧ್ರುವಗಳಂತಿದ್ದುವೆಂದು, ನಾನೇನಾದರೂ ಸಂಘದ ಸದಸ್ಯನಾದರೆ ಸಂಘವನ್ನು ಸ್ಥಾಪಿಸಿದ ಮುಖ್ಯೋದ್ದೇಶಗಳಿಗೆ ಭಂಗವುಂಟಾಗುವ ಸಂಭವವುಂಟೆಂದೂ ತೋರುತ್ತಿದ್ದಿತು. ಸ್ವಭಾವತಃ ಇದು ಅವರ ಸಹನೆಯನ್ನು ಮೀರಿದ್ದಿತು.

ಬಹುವಾಗಿ ಚರ್ಚಿಸಿದ ಮೇಲೆ ನಾವು ಬೇರೆಯಾದೆವು. ಅಂತಿಮ ನಿರ್ಣಯಕ್ಕಾಗಿ ಇನ್ನೊಮ್ಮೆ ಸೇರಬೇಕೆಂದು ಗೊತ್ತಾಯಿತು. ಮನೆಗೆ ಹೋಗ ತ್ತಾ ನಾನು ಆಲೋಚನೆಯಲ್ಲಿ ಮುಳುಗಿದೆನು. ಸಂಘದ ಸದಸ್ಯರಲ್ಲಿ ಹೆಚ್ಚು ಮಂದಿಯ ಅಭಿಮತದ ಬಲದಿಂದ ಸಂಘವನ್ನು ಸೇರುವುದು ಸರಿಯೇ? ಹೀಗೆ ಮಾಡಿದರೆ ಗೋಖಲೆಯವರಲ್ಲಿ ನಾನಿಟ್ಟಿದ್ದ ಗುರುಭಕ್ತಿಗೆ ಭಂಗವಾಗುವುದಿಲ್ಲವೇ? ನನ್ನನ್ನು ಸೇರಿಸಿಕೊಳ್ಳುವ ವಿಷಯವಾಗಿ ಸಂಘದ ಸದಸ್ಯರಲ್ಲಿ ಇಷ್ಟು ತೀಕ್ಷ್ಣವಾದ ಮತಭೇದವಿರುವಾಗ ಸಂಘಕ್ಕೆ ಸೇರುವ ಉದ್ದೇಶವನ್ನು ನಾನಾಗಿಯೇ ತ್ಯಜಿಸಿ ವಿರುದ್ಧ ಪಕ್ಷದವರನ್ನು ಉಭಯ ಸಂಕಟದಿಂದ ಪಾರು ಮಾಡುವುದೇ ಅತ್ಯುತ್ತಮವಾದ ಮಾರ್ಗವೆಂದು ನನಗೆ ಸ್ಪಷ್ಟವಾಗಿ ತೋರಿತು. ಹೀಗೆ ಮಾಡುವುದರಿಂದಲೇ ಗೋಖಲೆಯವರ ವಿಷಯದಲ್ಲಿಯೂ ನನ್ನ ಧರ್ಮವನ್ನು ಪಾಲಿಸಬಹುದೆಂದು ಯೋಚಿಸಿದೆನು. ಈ ನಿರ್ಧಾರವು ನನ್ನ ಮನಸ್ಸಿಗೆ ತಟ್ಟನೆ ಹೊಳೆಯಿತು. ಒಡನೆಯೇ ನಾನು ಶ್ರೀ. ಶ್ರೀನಿವಾಸಶಾಸ್ತ್ರಿಗಳಿಗೆ ನನ್ನನ್ನು ಸಂಘಕ್ಕೆ ಸೇರಿಸಿಕೊಳ್ಳುವ ಸಂಬಂಧವಾಗಿ ಸಭೆಗೂಡಬೇಕಾದುದೇ ಇಲ್ಲವೆಂದು ಬರೆದೆನು. ವಿರುದ್ಧಪಕ್ಷದವರು ನನ್ನ ಈ ನಿಶ್ಚಯವನ್ನು ಬಹು ಮೆಚ್ಚಿದರು. ಇದು ಅವರನ್ನು ಧರ್ಮಸಂಕಟದಿಂದ ಪಾರು ಮಾಡಿತು. ಇದರಿಂದ ನಮ್ಮ ಸ್ನೇಹಸಂಬಂಧವು ಇನ್ನೂ ಗಾಢವಾಯಿತು. ವಾಸ್ತವಿಕವಾಗಿ ನಾನು ಸಂಘದ ಸದಸ್ಯನಾದೆನು.

ನಾನು ನಿಯಮಪೂರ್ವಕವಾಗಿ ಸಂಘದ ಸದಸ್ಯನಾಗದಿದ್ದುದು ಒಳ್ಳೆಯದೇ ಆಯಿತೆಂದೂ ವಿರುದ್ಧ ಪಕ್ಷದವರು ನನ್ನ ವಿರೋಧಿಸಿದುದು ನ್ಯಾಯವೆಂದೂ ಅನುಭವವು ನನಗೆ ಈಗ ತೋರುತ್ತದೆ. ನಮ್ಮ ಮುಖ್ಯ ತತ್ವಗಳ ವಿಚಾರದಲ್ಲಿ ನಮ್ಮ ಮಧ್ಯೆ ಬಹು ಭೇದವಿದ್ದಿತೆಂಬುದನ್ನೂ ಅನುಭವವು ತೋರಿಸಿದೆ. ಆದರೆ ಈ ಮತಭೇದದಿಂದ ನಮ್ಮ ಮೈತ್ರಿಗೆ ಕುಂದಾಗಲಿ ನಮ್ಮ ಸಂಬಂಧದಲ್ಲಿ ಕಟುತ್ವವಾಗಲಿ ಉಂಟಾಗಿಲ್ಲ. ಅಂದಿನಿಂದ ಅಣ್ಣತಮ್ಮಂದಿರಂತಿದ್ದೇವೆ. ಪೂನಾದಲ್ಲಿ ಸಂಘದ ಭವನವು ನನಗೆ ಸದಾ ಯಾತ್ರಾಸ್ಥಳವಾಗಿದೆ.

ಕಟ್ಟಳೆಯ ದೃಷ್ಟಿಯಿಂದ ನೋಡಿದರೆ ನಾನು ಸಂಘದ ಸದಸ್ಯನಾಗಲಿಲ್ಲವೆಂಬುದೇನೋ ನಿಜ. ಆದರೆ ಅಂತಃಕರಣದಲ್ಲಿ ನಾನು ಸದಾ ಸದಸ್ಯನಾಗಿಯೇ ಇದ್ದೇನೆ. ಲೌಕಿಕ ಸಂಬಂಧಕ್ಕಿಂತ ಆಧ್ಯಾತ್ಮಿಕ ಸಂಬಂಧವು ಎಷ್ಟೋ ಬೆಲೆಯುಳ್ಳದು. ಆಧ್ಯಾತ್ಮಿಕ ಸಂಬಂಧವಿಲ್ಲದ ಲೌಕಿಕ ಸಂಬಂಧವು ಆತ್ಮವಿಲ್ಲದ ದೇಹದಂತೆ.

---

## ಹಾವುಗಳ ಕಡಿತ.

ಹಾವುಗಳ ಕಡಿತದಿಂದ ಉಂಟಾಗುವ ಮರಣಗಳು.

ಹಿಂದೂದೇಶದಲ್ಲಿ ಪ್ರತಿ ವರ್ಷವೂ ಸರಾಸರಿ ಇಪ್ಪತ್ತು ಸಾವಿರ ಜನರು ಹಾವುಗಳ ಕಡಿತದಿಂದಲೇ ಸಾಯುತ್ತಿರುವರು. ಸರ್ಪಗಳಿಂದ ತಪ್ಪಿಸಿಕೊಳ್ಳುವುದಕ್ಕೂ, ಹಾವು ಕಚ್ಚಿದಾಗ ಚಿಕಿತ್ಸೆ ಮಾಡುವುದಕ್ಕೂ ಜನರು ತಿಳಿದುಕೊಂಡರೆ, ಈ ಅಕಾಲ ಮರಣಗಳ ಸಂಖ್ಯೆಯನ್ನು ಧಾರಾಳವಾಗಿ ಕಡಿಮೆ ಮಾಡಬಹುದೆಂಬುದರಲ್ಲಿ ಸಂದೇಹವಿಲ್ಲ. ಈ ಕೆಳಗೆ ವಿವರಿಸುವ ಕ್ರಮಗಳನ್ನು ಅನುಸರಿಸಿದಲ್ಲಿ ಹಾವುಗಳಿಂದ ಉಂಟಾದ ಹಾವಳಿಯು ಕಡಿಮೆಯಾಗುವುದು.

ವಿಷವುಳ್ಳ ಹಾವುಗಳ ಕಡಿತದಿಂದಾಗುವ ಗುರುತುಗಳು.

ಈ ದೇಶದ ಹಾವುಗಳಲ್ಲಿ ಅನೇಕ ಜಾತಿಗಳಿವೆ. ಆದರೆ ಇವುಗಳಲ್ಲಿ ಮೂವತ್ತೇಳು ಜಾತಿಗಳು ಮಾತ್ರ ವಿಷವುಳ್ಳವು. ಅದರಲ್ಲಿ ಕೆಲವು ಜಾತಿಯವು ಮಾತ್ರ ಸಾಮಾನ್ಯವಾಗಿ ಗೋಚರವಾಗುವುವು. ಆ ಜಾತಿಯನ್ನು ತಿಳಿದುಕೊಳ್ಳುವುದರಿಂದ ಎಷ್ಟೋ ಗುಣವುಂಟು. ಏಕೆಂದರೆ ವಿಷವೇನೂ ಇಲ್ಲದ ಹಾವು ಕಡಿದರೂ ಮನುಷ್ಯನು ಕೇವಲ ಬೆದರಿಕೆಯಿಂದಲೇ ಎಷ್ಟೋ ಬಾರಿ ಮರಣ ಹೊಂದುವುದುಂಟು.

ವಿಷವುಳ್ಳ ಮತ್ತು ವಿಷವಿಲ್ಲದ ಹಾವುಗಳ ಕಡಿತದ ಗಾಯಗಳಲ್ಲಿ ಸೂಕ್ಷ್ಮವಾದ ಭೇದಗಳಿವೆ. ಆಧಾರವೆಂದು ಗಾಯವನ್ನು ಪರೀಕ್ಷಿಸಿದಲ್ಲಿ, ಎರಡು ಹಲ್ಲುಗಳ ಗುರುತು ತೋರಿದರೆ, ಅಲ್ಲಿ ಕಡಿದ ಹಾವು ವಿಷವುಳ್ಳದೆಂದೂ, ಹಲವು ಹಲ್ಲು ಗುರುತುಗಳು ಉದ್ದಕ್ಕೂ ಅಡ್ಡಕ್ಕೂ ಇದ್ದರೆ ಹಾವು ವಿಷವಿಲ್ಲದುದೆಂದೂ ನಿರ್ಧಾರ ಮಾಡಬಹುದಾಗಿದೆ.

ವಿಷವುಳ್ಳ ಹಾವು ಕಡಿದ ಗಾಯದಲ್ಲಿ ಕೆಲವು ವಿಶೇಷ ಲಕ್ಷಣಗಳುಂಟು. ಕಡಿದ ಸ್ವಲ್ಪ ಸಮಯದೊಳಗಾಗಿಯೇ ತೀವ್ರವಾದ ಉರಿ, ಬೇನೆ ಉಂಟಾಗುವುದು, ಗಾಯವು ಕೆಂಪೇರುತ್ತ ಬರುವುದು, ನೆತ್ತರು ಸೋರುವುದು, ಆ ಭಾಗವೆಲ್ಲ ನೀಲವಾಗುತ್ತ ಬಂದು ಬಾತುಕೊಳ್ಳುವುದು. ಆ ಮನುಷ್ಯನು ಆಗಲೇ ಅಮಲು ಕುಡಿದಂತವನಾಗಿ, ದಣಿದು ನಿದ್ದೆ ಹೋಗುವನು. ಅವನ ಕಾಲುಗಳಲ್ಲಿ ಬಲವು ಕುಗ್ಗಿ ತೀಕ್ಷ್ಣ ನಿಶ್ಶಕ್ತಿಯುಂಟಾಗುವದು. ಕೆಲವು ವೇಳೆ ಅವನು ವಾಂತಿ ಮಾಡುವುದುಂಟು. ಮಾತನಾಡುವ ಶಕ್ತಿಯೂ, ನುಂಗುವ ಶಕ್ತಿಯೂ ಅವನಲ್ಲಿ ಕಡಿಮೆಯಾಗಿ ಉಸಿರಾಟವು ಕ್ಷೀಣವಾಗುತ್ತ ಹೋಗುವುದು. ಕೆಲವು ಜಾತಿಯ ಸರ್ಪಗಳು ಕಡಿದರೆ, ಮನುಷ್ಯನು ಕಣ್ಣಿನ ರೆಪ್ಪೆಯ ಚಲನೆಯನ್ನು ಕಳೆದುಕೊಳ್ಳುವನು. ಅವನ ಕೈಯು ತಣ್ಣಗಾಗುವದು, ತುಂಬಾ ಬೆವರುವುದು, ನಾಡಿಯು ದುರ್ಬಲವಾಗುವುದು. ಬಾಯಿಂದಲೂ, ಕಣ್ಣುಗಳಿಂದಲೂ ರಕ್ತವು ಸುರಿಯುವುದುಂಟು.

ಹಾವುಗಳು ಸಂಚರಿಸುವ ಪ್ರದೇಶಗಳಲ್ಲಿ ವಾಸ ಮಾಡುವವರು ಈ ಕೆಳಗೆ ಕಾಣಿಸಿದ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳುವುದವಶ್ಯವು.

ಯಾವಾಗಲೂ ಮಂಚಗಳ ಮೇಲೆಯೇ ಮಲಗಬೇಕು. ರಾತ್ರಿ ಹೊತ್ತಿನಲ್ಲಿ ದೀಪವಿಲ್ಲದೆ ಹೋಗಬಾರದು.

ಯಾವಾಗಲೂ ಮುಖ್ಯವಾಗಿ ಮಳೆಗಾಲದಲ್ಲಿ ರಾತ್ರಿ ಕಾಲದಲ್ಲಿ ಹೊರಕ್ಕೆ ಹೋಗುವುದಾದರೆ ಕಾಲ್ಮೆಟ್ಟುಗಳನ್ನು ಹಾಕಿಕೊಳ್ಳದೆ ಅಥವಾ ದೀಪವಿಲ್ಲದೆ ಹೋಗಬಾರದು.

ಮನೆಯ ಸುತ್ತಲೂ ಹುಲ್ಲು ಪೊದೆಗಳು ಬೆಳೆಯದಂತೆ ಜಾಗ್ರತೆ ಇರಬೇಕು. ಇವುಗಳಲ್ಲೇ ಹಾವುಗಳು ಮರೆಯಾಗಿರುವವು. ಮನೆಯ ಸುತ್ತಲೂ ಕೊನೆಯ ಪಕ್ಷ ಒಂದು ಗಾವುದ ದೂರಕ್ಕೆ ಕಿರುಗಲ್ಲನ್ನು ಹಾಸುವುದುತ್ತಮವು. ಅಂಥ ದೊರಗಾದ ಸ್ಥಳದ ಮೇಲೆ ಹರಿದಾಡುವುದಕ್ಕೆ ಹಾವುಗಳು ಮೆಚ್ಚುವುದಿಲ್ಲ. ಮನೆಯಲ್ಲಿ ಕಸ, ಇಲಿ ಮುಂತಾದುವು ಸುಳಿಯದಂತೆ ಜಾಗ್ರತೆ ಇರಲಿ. ಇವೇ ಹಾವುಗಳನ್ನು ಮನೆಯ ಕಡೆಗೆ ಸೆಳೆಯತಕ್ಕವು.

### ಹಾವು ಕಡಿದಾಗ ಏನು ಮಾಡಬೇಕು?

ಕೊಡಗಿನಲ್ಲಿ ರಾಮಕೃಷ್ಣ ಮಿಷನಿನವರ ಆಶ್ರಯದಲ್ಲಿ ಮಡಿಕೇರಿಯಲ್ಲಿ ಕೆಲವು ಕಾಲದಿಂದ ವೇದಾಂತ ಸಂಘವೊಂದು ನಡೆಯುತ್ತಿರುವದೂ, ಪೊನ್ನಂಪೇಟೆಯಲ್ಲಿ ಜನಸಮುದಾಯದ ಧನಸಹಾಯದಿಂದ ಮಠವೊಂದು ಸ್ಥಾಪನೆಯಾಗಿರುವದೂ ವಾಚಕರಿಗೆ ತಿಳಿದ ಸಂಗತಿಯಾಗಿದೆ. ಈ ಸಂಸ್ಥೆಗಳಿಗಿಂತಲೂ ವಿಶೇಷವಾದ ಇನ್ನೊಂದು ಶುಭ ವಿಷಯವನ್ನು ಈ ಲೇಖನದಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಕೊಡಗು ದೇಶದಲ್ಲಿ ರಾಮಕೃಷ್ಣ ಮಿಷನಿಗೆ ಸಂಬಂಧಪಟ್ಟ ವೇದಾಂತ ಸಂಘವು ಸ್ಥಾಪಿತವಾದಂದಿನಿಂದ ಆಗಿಂದಾಗ್ಗೆ ರಾಮಕೃಷ್ಣ ಮಿಷನಿನ ಸನ್ಯಾಸಿಗಳು ಕೊಡಗನ್ನು ಸಂದರ್ಶಿಸಿ ಕೊಡಗು ನಿವಾಸಿಗಳಿಗೆ ವೇದಾಂತ ಬೋಧನೆಯನ್ನು ಕೊಡಲು ಅವಕಾಶವಾಯಿತು. ಈ ಮಿಶನಿನ ಮಹತ್ವದ ಧ್ಯೇಯಗಳನ್ನು ಓದಿ ಈಚೆಗೆ ಮೂವರು ಕೊಡವ ಯುವಕರು ಈ ಮಿಶನಿಗೆ ಸೇರಿ ಇಬ್ಬರು ಸನ್ಯಾಸಿಗಳಾಗಿರುವದು ಬಹು ವಿಶೇಷವಾದ ಸಂಗತಿಯಾಗಿದೆ. ಸುಮಾರು ಹದಿನೈದು ವರ್ಷಗಳ ಹಿಂದೆ ಇನ್ನೊಬ್ಬರು ಮ. ಅಪ್ಪಾಪಂಡ ಮುದ್ದಪ್ಪನೆಂಬವರು ಈ ಮಿಶನಿಗೆ ಸೇರಿ ಸ್ವಾಮಿ ಮೋಕ್ಷಾನಂದರೆಂಬ ಸನ್ಯಾಸಿಯಾಗಿದ್ದಾರೆ. ಇವರ ಉತ್ತರ ಹಿಂದೂಸ್ಥಾನದಲ್ಲಿಯೇ ಕೆಲಸ ಮಾಡುತ್ತಿರುವದರಿಂದ ಇವರ ವಿಷಯ ಹೆಚ್ಚಿಗೆ ಗೊತ್ತಿರುವದಿಲ್ಲ.

ಮ. ಕೇಲಪಂಡ ಜಂಗಪ್ಪನೆಂಬವರು ಸ್ವಾಮಿ ಶಾಂಭವಾನಂದರೆಂಬ ಹೆಸರಿನಿಂದ ಈ ಮಿಶನಿನ ಪರವಾಗಿ ಪೊನ್ನಂಪೇಟೆ ಮಠದಲ್ಲಿದ್ದುಕೊಂಡು ಶ್ಲಾಘನೀಯವಾದ ಕೆಲಸಮಾಡುತ್ತಿರುವದು ಈ ದೇಶದವರಿಗೆಲ್ಲಾ ಗೊತ್ತಿರುವ ವಿಷಯವಾಗಿದೆ. ಇವರು 8 ವರ್ಷಗಳ ಹಿಂದೆ ಬೆಂಗಳೂರಲ್ಲಿ ಇಂಟರ್‌ಮೀಡಿಯೇಟ್ ಕ್ಲಾಸಿನಲ್ಲಿ ಓದುತ್ತಿರುವಾಗಲೇ ಮಿಶನಿಗೆ ಸೇರಿದರು. ಇವರು ಯುನಿವರ್ಸಿಟಿ ವಿದ್ಯೆಯಲ್ಲಿ ಹೆಚ್ಚಿನ ಪದವಿಗಳನ್ನು ಪಡೆದು ದೊಡ್ಡ ಉದ್ಯೋಗ ಮಾಡಿ ಹೆಸರು ಪಡೆಯಬೇಕೆಂಬ ವಾಡಿಕೆಯಾದ ಕಾಂಕ್ಷೆಗೆ ಮನಸ್ಸು ಕೊಡದೆ ಸರ್ವಸಂಗ ಪರಿತ್ಯಾಗ ಮಾಡಿದರು. ಇವರ ಉತ್ಸಾಹವನ್ನೂ, ಕಾರ್ಯದಕ್ಷತೆಯನ್ನೂ ನೋಡಿಯೇ ಪೊನ್ನಂಪೇಟೆ ಬೋರ್ಡಿಂಗನ್ನು ಮಿಶನಿನವರು ನಡೆಸಲು ಬಿಟ್ಟುಕೊಡಬೇಕೆಂತ ಆ ಪ್ರಾಂತ್ಯದ ಜನರು ಅಧಿಕಾರಿಗಳನ್ನು ಕೇಳಿಕೊಂಡಿರುವದಾಗಿದೆ. ಜನರ ಈ ಕೋರಿಕೆಯನ್ನು ಶಾಲಾ ಅಧಿಕಾರಿಗಳೂ ಸರಕಾರದವರೂ ನೆರವೇರಿಸಿಕೊಡದೆ ಇರಲಾರರೆಂತ ನಂಬುತ್ತೇವೆ. ವೀರರಾಜಪೇಟೆಯಲ್ಲಿ ಒಂದು ವಿದ್ಯಾರ್ಥಿ ಭವನವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವದು ಇವರ ಉತ್ತೇಜನದಿಂದಲೇ ಎಂತ ತಿಳಿಯುತ್ತೇವೆ. ಈ ಎಲ್ಲಾ ಕೆಲಸಗಳಿಂದ ಇವರು ಸೇರಿಕೊಂಡ ಮಿಶನಿನ ಧ್ಯೇಯಕ್ಕೆ ಸರಿಯಾದ ಕೆಲಸವನ್ನು ಮಾಡುತ್ತಿರುವರು ಎಂತ ಕಂಡು ಬರುತ್ತದೆ. ಇವರ ಜನಸೇವೆ ಕೆಲಸಗಳಿಗೆ ಜಯವಾಗಲಿ ಎಂದು ನಮ್ಮ ಹಾರೈಕೆ.

ಮಡಿಕೇರಿಯಲ್ಲಿ ಮೂರು ದಿವಸ ಮಾತ್ರ ಇದ್ದು ನಿನ್ನೆ ದಿನ ಹೊರಟುಹೋದ ದೇಶಿಕಾನಂದ ಸ್ವಾಮಿಯವರು ಕೊಡಗಿನಿಂದ ರಾಮಕೃಷ್ಣ ಮಿಶನಿಗೆ ಸೇರಿದ ಇನ್ನೊಬ್ಬ ಯುವಕರಾಗಿದ್ದಾರೆ. ಇವರು ಮಡಿಕೇರಿ ಪೋಲೀಸ್ ಆಫೀಸಿನಲ್ಲಿ ಕಿಂಚಿತ್ ಸಂಬಳದ ಗುಮಾಸ್ತರಾಗಿದ್ದ ಮ. ಪಟ್ಟಡ ಪೂವಯ್ಯನವರು. ಮಡಿಕೇರಿ ವೇದಾಂತ ಸಂಘದ ಮೆಂಬರಾಗಿದ್ದು ವೇದಾಂತದಲ್ಲಿ ಅಭಿಮಾನ ಹುಟ್ಟಿ, ತನ್ನ ಉದ್ಯೋಗ, ಮನೆಮಾರು, ಆಸ್ತಿಪಾಸ್ತಿ, ನೆಂಟರಿಷ್ಟರು ಸರ್ವಸ್ವವನ್ನೂ ಬಿಟ್ಟು ಬೆಂಗಳೂರಿನಲ್ಲಿರುವ ರಾಮಕೃಷ್ಣ ಮಠಕ್ಕೆ ಈಗ ಸುಮಾರು ಆರು ವರ್ಷಗಳ ಹಿಂದೆ ಹೋಗಿ ಸೇರಿದರು. ಇವರು ಅಲ್ಲಿ ಒಂದೂವರೆ ವರ್ಷಗಳ ವರೆಗೆ ಕೆಲಸ ಮಾಡಿ, ನಂತರ ದಕ್ಷಿಣ ಹಿಂದೂಸ್ಥಾನದ ಪ್ರವಾಹದ ಹಾವಳಿಯಲ್ಲಿ ಮಿಶನಿನ ಪರವಾಗಿ ಜನರಿಗೆ ಸಹಾಯ ಕೊಡುವ ಕೆಲಸದಲ್ಲಿ ಭಾಗಿಗಳಾಗಿ ಆ ಮೇಲೆ ಹಿಂದೂಸ್ಥಾನದ ಪುಣ್ಯಕ್ಷೇತ್ರಗಳಲ್ಲೂ, ಐತಿಹಾಸಿಕ ಪ್ರದೇಶಗಳಲ್ಲೂ ಸುತ್ತಿ ಬೇಕಾದಷ್ಟು ಅನುಭವ ಹೊಂದಿದವರಾಗಿ ಈಗ ಬೆಂಗಳೂರು ಮಠದ ಹಂಗಾಮಿ ಚಾರ್ಜಿನಲ್ಲಿ ಇರುವವರಾಗಿದ್ದಾರೆ.

ಇವರು ಬರೇ ಸ್ಕೂಲ್ ಫೈನಲ್ ವರೆಗೆ ಮಾತ್ರ ಓದಿದವರಾದರೂ ಇಂಗ್ಲೀಷ್ ಭಾಷೆಯಲ್ಲಿ ಮಹತ್ವವಾದ ವಿಷಯಗಳನ್ನು ಕುರಿತು ಬಹು ಚೆನ್ನಾಗಿ ಭಾಷಣಮಾಡಿ ಜನರನ್ನು ವಿಸ್ಮಿತಗೊಳಿಸಿರುತ್ತಾರೆ. ಇವರು ಇನ್ನು ಮುಂದಕ್ಕೂ ಇವರ ಅಭ್ಯಾಸವನ್ನು ಮುಂದರಿಸುತ್ತಾ ಹೋಗಿ ಮಿಶನಿನ ಪರವಾಗಿ ವಿಶೇಷ ಕಾರ್ಯಗಳನ್ನು ಮಾಡಲು ಇವರಿಗೆ ದೇವರು ಶಕ್ತಿಯನ್ನೂ ದೀರ್ಘಾಯುಷ್ಯವನ್ನೂ ಕೊಡಲೆಂದು ಪ್ರಾರ್ಥಿಸುವವರಾಗಿದ್ದೇವೆ.

ರಾಮಕೃಷ್ಣ ಮಿಶನಿನವರು ರಾಜಕೀಯ ಚಳವಳದಲ್ಲಿ ಏನೂ ಭಾಗ ತೆಗೆದುಕೊಳ್ಳುವವರಲ್ಲ. ರಾಜಕೀಯ ಕಾರ್ಯದಲ್ಲಿ ಕೆಲಸಮಾಡುವವರಿಗೆ ಸಿಕ್ಕುವಷ್ಟು ಪ್ರಾಮುಖ್ಯತೆ ಈಗಿನ ಕಾಲದಲ್ಲಿ ಬೇರೆ ಸಾಮಾಜಿಕ ಮತ್ತು ಧಾರ್ಮಿಕ ಅಭಿವೃದ್ಧಿಯ ಕೆಲಸಗಾರರಿಗೆ ಸಿಕ್ಕದಿದ್ದರೂ ಅಂಥ ಕೆಲಸಗಳು ಕಡಿಮೆ ಮಹತ್ವದ್ದಲ್ಲ. ರಾಮಕೃಷ್ಣಮಿಶನಿಸಂಘ ಸಂಸ್ಥೆಯಲ್ಲಿ ಸಮಾಜ ಸೇವೆಗೆ ತುಂಬಾ ಅವಕಾಶವಿದೆ. ವೇದಾಂತ ಬೋಧನೆಯೇ ಈ ಸಂಸ್ಥೆಯ ಮುಖ್ಯ ಉದ್ದೇಶವಾದರೂ ವಿದ್ಯಾ ಪ್ರಚಾರ, ಕಷ್ಟ ಪರಿಹಾರ, ಅಸ್ಪೃಶ್ಯರ ಉದ್ಧಾರ ಮುಂತಾದ ಸಮಾಜ ಸೇವೆಗಳಲ್ಲೂ ಈ ಮಿಶನಿನವರು ಭಾಗ ತೆಗೆದುಕೊಳ್ಳುತ್ತಾರೆ. ಈ ಸಂಸ್ಥೆಗೆ ಸೇರಿ ಸನ್ಯಾಸವನ್ನು ಪಡೆದು, ಆ ಆಶ್ರಮ ಧರ್ಮಕ್ಕೆ ಸರಿಯಾಗಿ ನಡಕೊಂಡು ಜನರ ಸೇವೆಯನ್ನು ಸ್ವಾರ್ಥಬುದ್ಧಿಯಿಲ್ಲದೆ ಮಾಡುವದೆಂದರೆ ಸಾಧಾರಣ ಸಂಗತಿಯಲ್ಲ. ಕೊಡವ ಜನಾಂಗಕ್ಕೆ ಸೇರಿದ ಯುವಕರಲ್ಲಿ ಈಗಾಗಲೇ ಮೂವರು ರಾಮಕೃಷ್ಣ ಮಿಶನಿನ ಸನ್ಯಾಸಿಗಳಾಗಿ ಅಹೋರಾತ್ರಿ ಸಮಾಜ ಸೇವೆಗಾಗಿ ತಮ್ಮ ಜೀವನವನ್ನು ಅರ್ಪಿಸಿರುವದು ದೇಶದವರು ಹೆಮ್ಮೆಯಿಂದ ನೆನೆಸಿಕೊಳ್ಳಬಹುದಾದ ವಿಷಯವಾಗಿದೆ. ಇಂಥಾ ಯುವಕರಿಗೆ ಜನ್ಮಕೊಟ್ಟ ಸಮಾಜವೂ ದೇಶವೂ ಅಧೈರ್ಯಪಡಬೇಕಾದುದಿಲ್ಲ. ದೇಶದ ಮೇಲ್ಮೆಗಾಗಿ ತ್ಯಾಗಮಾಡಬೇಕಾಗಿ ಬಂದಾಗ ಸರ್ವಸ್ವವನ್ನೂ ತ್ಯಾಗಮಾಡಿ ದೇಶದ ಹಿತಕ್ಕೆ ಕೆಲಸಮಾಡಲು ಮುಂದೆ ಬರುವ ಯುವಕರು ಇಲ್ಲಿ ಅನೇಕರು ದೊರಕಿಯಾರೆಂತ ನಂಬಬಹುದಾಗಿದೆ. ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಕೆಲಸಗಳಿಗೆ ಅವಶ್ಯವಿರುವಷ್ಟು ಕೆಲಸಗಾರರು ಮುಂದೆ ಬಂದಿರುವದಿಲ್ಲ. ಈ ರಾಮಕೃಷ್ಣ ಮಿಶನಿಗೆ ಸೇರಿದ ಯುವಕರನ್ನು ಮೇಲ್ಪಂಕ್ತಿಯಾಗಿ ಇಟ್ಟುಕೊಂಡು ಸ್ವಾರ್ಥತೆಯನ್ನು ಸಂಪೂರ್ಣವಾಗಿ ಬಿಟ್ಟು ದೇಶಸೇವೆಗೆ ಸೊಂಟಕಟ್ಟುವಂತೆ ಅನೇಕ ಯುವಕರಿಗೆ ಬುದ್ಧಿ ಹುಟ್ಟಲಿ ಎಂತ ಆಶಿಸುತ್ತೇವೆ.

## ಡಿಸ್ಟ್ರಿಕ್ಟ್ ಬೋರ್ಡ್.

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗೊಂದು ಈ ತಾ. 14ರಲ್ಲಿ ನಡೆಯಿತು. ಅದರ ವಿವರವು ಇನ್ನೊಂದು ಕಡೆ ಪ್ರಕಟಿಸಲಾಗಿದೆ. ಮೀಟಿಂಗಿನ ಕಾರ್ಯಕ್ರಮ ಪಟ್ಟಿಯಲ್ಲಿ ಕೆಲವು ಮುಖ್ಯ ವಿಷಯಗಳನ್ನು ಕುರಿತ ಠರಾವುಗಳು ಸೂಚಿಸಲ್ಪಟ್ಟಿದ್ದವು. ಆದರೆ ಮೀಟಿಂಗಿನ ತೀರ್ಮಾನಗಳನ್ನು ನೋಡಿದರೆ ಪೂರಾ ಆಶಾಭಂಗವಾಗಿದೆ. ಕೆಲವು ಮುಖ್ಯ ಸಂಗತಿಗಳನ್ನೊಳಕೊಂಡ ಚುನಾಯಿತ ಮೆಂಬರುಗಳ ಸೂಚನೆಗಳಿಗೆ ಅನುಮೋದಕರೇ ಇಲ್ಲದಾಯಿತೆಂದರೆ ಯಾರಿಗ ತಾನೇ ಆಶ್ಚರ್ಯವೂ ವ್ಯಸನವೂ ಉಂಟಾಗದಿರದು.

ಮನೆ ಕಂದಾಯ ಯಾ ಉದ್ಯೋಗ ತೆರಿಗೆಯ ದರವು ಸರಿಯಾಗಿಲ್ಲವಾದುದರಿಂದ ಅದನ್ನು ಕ್ರಮಕ್ಕೆ ತರಬೇಕೆಂದೂ, ಬೇರೆಯವರಂತೆ ಕಾಫಿ ತೋಟಗಳ ಸುಪರಿಂಟೆಂಡೆಂಟರು ಮತ್ತು ಮೇನೇಜರುಗಳು ಈ ತೆರಿಗೆಯನ್ನು ಕೊಡುವಂತೆ ಮಾಡಬೇಕೆಂದೂ ಡಿಸ್ಟ್ರಿಕ್ಟ್ ಬೋರ್ಡ್ ಹಲವು ವರ್ಷಗಳಿಂದ ಹೋರಾಡುತ್ತಿದೆ. ಆದರೆ ಈ ಮೊದಲು ಬೋರ್ಡಿನಲ್ಲಿ ಚುನಾಯಿತ ಮೆಂಬರುಗಳ ಬಹುಮತವಿಲ್ಲದ್ದರಿಂದ ಈ ವಿಷಯವನ್ನು ಜನರ ಅಪೇಕ್ಷೆಯಂತೆ ತೀರ್ಮಾನಿಸಲು ಸಾಧ್ಯವಾಗಲಿಲ್ಲ. ಜನರ ಪ್ರತಿನಿಧಿಗಳ ಬಹುಮತವಿರುವ ಈಗಿನ ಬೋರ್ಡಿನಲ್ಲಾದರೂ ಈ ಪ್ರಾಮುಖ್ಯ ವಿಷಯವು ತೃಪ್ತಿಕರವಾಗಿ ತೀರ್ಮಾನಿಸಲ್ಪಡುವದೆಂದು ಪ್ರಜೆಗಳ ನಿರೀಕ್ಷಣೆಯಾಗಿತ್ತು. ಡಿಸ್ಟ್ರಿಕ್ಟ್ ಬೋರ್ಡಿಗೆ ಸೆಸ್ಸನ್ನಾಗಲೀ ಉದ್ಯೋಗ ತೆರಿಗೆಯನ್ನಾಗಲೀ ಕೊಡದೆ ತೋಟದ ಸುಪರಿಂಟೆಂಡೆಂಟರು ಮತ್ತು ಮೇನೇಜರುಗಳು ಬೋರ್ಡಿನ ರಸ್ತೆ, ಆಸ್ಪತ್ರೆ, ಮೊದಲಾದವುಗಳಿಂದ ಪ್ರಯೋಜನ ಹೊಂದುತ್ತಿರುವ ಅನ್ಯಾಯವನ್ನು ಹೋಗಲಾಡಿಸಲು ಈಗಿನ ಬೋರ್ಡೂ ತೊಂದರೆ ತೆಗೆದುಕೊಳ್ಳದೆ ಹೋದದ್ದು ಒಂದಿಷ್ಟೂ ತೃಪ್ತಿಕರವಲ್ಲ. ಈ ವಿಷಯ ಪ್ರತಿನಿಧಿ ಮೆಂಬರುಗಳು ಚೆನ್ನಾಗಿ ಆಲೋಚಿಸದ್ದರಿಂದಲೇ ಅವರು ಮೀಟಿಂಗಿನಲ್ಲಿ ಮೌನ ತಾಳಿದ್ದರೆಂಬುದರಲ್ಲಿ ಸಂಶಯವಿಲ್ಲ. ಈ ತರಹದ ಅಶ್ರದ್ಧೆಯು ಚುನಾಯಿತ ಪ್ರತಿನಿಧಿಗಳಿಗೆ ಯೋಗ್ಯವಲ್ಲವೆಂದು ಹೇಳದಿರಲಾರೆವು.

ಬೋರ್ಡಿಗೆ ಪ್ರೆಸಿಡೆಂಟರನ್ನು ಆರಿಸಿಕೊಳ್ಳುವ ಹಕ್ಕು, ಆಸ್ಪತ್ರೆಗಳು ಬಹು ದೂರವಾಗಿರುವ ಒಂದೆರಡು ಕಡೆಗಳಲ್ಲಿ ಆಯುರ್ವೇದ ವೈದ್ಯ ಶಾಲೆಗಳನ್ನು ಸ್ಥಾಪಿಸುವದು, ಎಲಿಮೆಂಟರಿ ಶಾಲೆಗಳ ವಿದ್ಯಾಭ್ಯಾಸ ಕ್ರಮವನ್ನು ನಿಶ್ಚೈಸಲು ಕಮಿಟಿಯ ನೇಮಿಸುವಿಕೆ ಮುಂತಾದ ಮುಖ್ಯ ಸಂಗತಿಗಳೆಲ್ಲವೂ ಸಾಕಷ್ಟು ತಿಳುವಳಿಕೆಯ ಚರ್ಚೆ ಇಲ್ಲದೆ ನಾಪಾಸಾದದ್ದು ಈಗಿನ ಬೋರ್ಡಿಗೆ ಎಂದೂ ಶ್ರೇಯಸ್ಕರವಲ್ಲ.

ಈ ಮೀಟಿಂಗಿನ ಫಲಿತಾಂಶವು ಇಷ್ಟು ಆಶಾಭಂಗವಾಗಲು ಕಾರಣವೇನೆಂಬದನ್ನು ಸ್ವಲ್ಪ ವಿಚಾರಿಸಬೇಕಾಗಿದೆ. ಚುನಾಯಿತ ಪ್ರತಿನಿಧಿಗಳು ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳದೆ ಇರುವದೇ ಇದಕ್ಕೆ ಮುಖ್ಯ ಕಾರಣವೆಂದು ಯಾರಿಗೂ ತೋಚದೆ ಇರದು. ಮಾತ್ರವಲ್ಲ ಚುನಾಯಿತ ಮೆಂಬರುಗಳು ಬೋರ್ಡ್ ಮೀಟಿಂಗಿಗೆ ಮುಂಚಿತವಾಗಿ ಸೇರಿ ಕಾರ್ಯಕ್ರಮ ಪಟ್ಟಿಯಲ್ಲಿರುವ ವಿಷಯಗಳನ್ನೆಲ್ಲಾ ಮುಂದಾಗಿ ಚರ್ಚಿಸಿ ಮೀಟಿಂಗಿನಲ್ಲಿ ಹೇಗೆ ವರ್ತಿಸಬೇಕೆಂಬದನ್ನು ಆಲೋಚಿಸಬೇಕು. ಹಿಂದೂ ದೇಶದ ಸಾಧಾರಣವಾಗಿ ಎಲ್ಲಾ ಪ್ರತಿನಿಧಿ ಸಭೆಗಳ ಸದಸ್ಯರು ಹೀಗೆ ಮಾಡುತ್ತಾರೆಂಬದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಪ್ರತಿನಿಧಿಗಳು ಹಾಗೆ ಕಲೆತು ಪ್ರತಿಯೊಬ್ಬರೂ ತಾವು ಚರ್ಚೆಗೆ ಕಳುಹಿಸಿರುವ ಸಂಗತಿಯನ್ನು ಮಾತ್ರವಲ್ಲ ಬೇರೆಯವರ ಠರಾವುಗಳ ವಿಷಯವನ್ನೂ ಚೆನ್ನಾಗಿ ಅರಿತುಕೊಂಡು ದೇಶಕ್ಕೆ ಪ್ರಯೋಜನವಾಗುವ ರೀತಿ ವರ್ತಿಸಲು ನಿಶ್ಚೈಸಿಕೊಂಡು ಮೀಟಿಂಗಿಗೆ ಹೋದರೇನೇ ಏನಾದರೂ ಪ್ರಯೋಜನವಾಗುವದು. ಇಲ್ಲವಾದರೆ ಮೊನ್ನೆಯ ಮೀಟಿಂಗಿನ ಗತಿಯೇ ಆಗುವದು. ಓಟರುಗಳಿಗೆ ತಮ್ಮ ಪ್ರತಿನಿಧಿಗಳ ಮೇಲೆ ಇರುವ ವಿಶ್ವಾಸವು ಕಡಿಮೆಯಾಗಲು ಎಡೆಯುಂಟಾಗುವದು. ಆದುದರಿಂದ ಇನ್ನಾದರೂ ಪ್ರತಿನಿಧಿ ಮೆಂಬರುಗಳು ಎಚ್ಚರಗೊಳ್ಳುವರಾಗಿ ಆಶಿಸುತ್ತೇವೆ.

## ಸ್ವಾಮಿ ದೇಶಿಕಾನಂದರವರು.

ಇವರು ಬೆಂಗಳೂರಿನಲ್ಲಿರುವ ತಮ್ಮ ರಾಮಕೃಷ್ಣಾಶ್ರಮದಿಂದ ಇಲ್ಲಿಗೆ ಈ ವಾರ ದಯಮಾಡಿಸಿ, ಮೂರು ದಿನಗಳ ಮಟ್ಟಿಗೆ ಇಲ್ಲಿದ್ದು, ಎರಡು ಮೂರು ಸ್ಥಳಗಳಲ್ಲಿ ವ್ಯಾಖ್ಯಾನಗಳನ್ನಿತ್ತರು. ಇವರು ಕೊಡಗಿನ ನಿವಾಸಿಗಳಾಗಿದ್ದು, ಸುಮಾರು ಐದು ವರುಷಗಳಿಗೆ ಹಿಂದೆ ರಾಮಕೃಷ್ಣ ಸಂಸ್ಥೆಗೆ ಸೇರಿಕೊಂಡು, ಈಗ ಲೋಕಸೇವಾ ಕಾರ್ಯದಲ್ಲಿ ನಿರತರಾಗಿರುವರು. 1924ರ ನೆರೆಹಾವಳಿಯಲ್ಲಿ ಇವರು ಶ್ರದ್ಧೆಯಿಂದ ಬಡ ನಾರಾಯಣರ ಸೇವೆಯನ್ನು ಮಾಡಿ ಜನಪ್ರೀತಿಯನ್ನು ಸಂಪಾದಿಸಿರುವರು.

ಕೊಡಗು ಜಮೀನ್ದಾರರ ಸಂಘದ ಹಾಲ್‌ನಲ್ಲಿ 18ನೇ ತಾರೀಕಿನಲ್ಲಿ 'ಆರ್ಯಧರ್ಮ''ದ ವಿಷಯವಾಗಿಯೂ, 19ರಲ್ಲಿ ಹೈಸ್ಕೂಲ್ ಹಾಲಿನಲ್ಲಿ ''ಪ್ರಾಚೀನ ಮತ್ತು ಅರ್ವಾಚೀನ ವಿದ್ಯಾಭ್ಯಾಸ'ವನ್ನು ಕುರಿತೂ ಭಾಷಣ ಮಾಡಿದರು. ಇವರ ಭಾಷಣಗಳ ಎರಡಕ್ಕೂ ಜನಸ್ತೋಮವು ದೊಡ್ಡದಿತ್ತು.

''ಧರ್ಮ''ದ ವಿಷಯವಾಗಿ ಮಾತಾಡುವಾಗ ಸ್ವಾಮಿಯವರು ಧರ್ಮ ಎಂಬ ಶಬ್ದದ ಅರ್ಥವನ್ನು ವಿಶಾಲವಾಗಿ ವಿಸ್ತರಿಸಿ, ಹಿಂದಿನ ಕಾಲದಲ್ಲಿ ಭರತ ಭೂಮಿಯು ಪರ, ಅಪರ ವಿದ್ಯೆಗಳೆರಡಕ್ಕೂ ಎಷ್ಟೊಂದು ಖ್ಯಾತಿಗೊಂಡಿತ್ತೆಂದೂ, ಆಗ್ಗೆ ನಾಲ್ಕು ವರ್ಣದವರು ತಮ್ಮ ಕರ್ತವ್ಯವನ್ನು ತಂತಮ್ಮ ಗುಣ ಮತ್ತು ಕರ್ಮಗಳಿಗನುಸಾರವಾಗಿ ಮಾಡುತ್ತಿದ್ದು, ಪ್ರಪಂಚದಲ್ಲಿ ಚೇತನಾಚೇತನ ವಸ್ತುಗಳೆಲ್ಲಾ ಆತ್ಮಮಯವಾದುವೆಂಬುದನ್ನು ತಿಳಕೊಂಡಿದ್ದರೆಂಬ ಸಂಗತಿಯನ್ನು ಧರ್ಮವ್ಯಾಧನ ಕಥೆಯಿಂದ ಬಲಪಡಿಸಿ, ಆ ನಾಲ್ಕು ವರ್ಣದವರು ಒಂದೇ ಜಾತಿಯವರಾಗಿದ್ದರೆಂದೂ, ಈ ಕಾರಣದಿಂದ ಆ ವರ ಕಾಲವು ಸತ್ಯಯುಗವೆಂದು ಕರೆಯಲ್ಪಡುತ್ತಿದೆಂದೂ ಹೇಳುತ್ತಾ, ಈಗಿನ ದುಃಖಕರವಾದ ಹಿಂದೀಯರ ಸ್ಥಿತಿಯನ್ನು ಆಗಿನ ಸತ್ಯಯುಗದೊಂದಿಗೆ ಹೋಲಿಸಿ ಹಿಂದುಮತದ ಶ್ರೇಷ್ಠತೆಯನ್ನೂ, ಪ್ರತಿಷ್ಠೆಯನ್ನೂ ಕೊಂಡಾಡಿದರು. ಹಿಂದೀಯರೊಳಗೆ ಮೊದಲು ಬ್ರಾಹ್ಮಣರ ಸಂಖ್ಯೆಯು ದೊಡ್ಡದಿದ್ದು, ಈಗ ಶೂದ್ರರ ಸಂಖ್ಯೆಯು ಬೆಳೆದಿದೆ ಎಂದೂ ಹೀಗೆ ಬೆಳೆಯಲಿಕ್ಕೆ ನಾವು ಧರ್ಮದಿಂದ ವಿಮುಖರಾದದ್ದೇ ಮುಖ್ಯ ಕಾರಣವೆಂದೂ, ನಮ್ಮ ಕ್ಷಾತ್ರ ಬಲವನ್ನು ನಾವು ಪುನಃ ಸಂಪಾದಿಸಿಕೊಳ್ಳಲಿಕ್ಕೆ ಪ್ರಯತ್ನಪಡಬೇಕೆಂದೂ, ಹಿಂದೆ ಭಾರತೀಯರ ಧರ್ಮಾಚಾರದಿಂದ ವಿಶಾಲ ಭಾರತಕ್ಕೆ ಪ್ರಖ್ಯಾತಿಯನ್ನು ತಂದಂತೆ ಈಗಲೂ ತರಲಿಕ್ಕೆ ನಾವು ಬದ್ಧ ಕಂಕಣರಾಗಬೇಕಾದರೆ, ನಮ್ಮಲ್ಲಿ ಹಿಂದಿನ ಆರ್ಯರಂತೆ ತ್ಯಾಗಬುದ್ಧಿಯು ಅವಶ್ಯವೆಂದೂ ನುಡಿದರು. ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಅನೇಕತ್ವವನ್ನು ಕಾಣುತ್ತೇವಾದರೂ, ನಿಜ ಯಥಾರ್ಥವಾಗಿ ಏಕತ್ವವೇ ನಮಗೆ ಕಾಣುತ್ತದೆಂದೂ, ಈಗಿನ ಕಾಲದ ಜೀವನ ಸಂಗ್ರಾಮವು ಕಠಿಣವಾಗಲಿಕ್ಕೆ ಈ ಏಕತ್ವವನ್ನು ನಾವು ಅನುಭವದಿಂದ

(7ನೇ ಪುಟದಲ್ಲಿ ಮುಂದುವರಿಕೆ)

## ಮಹಾತ್ಮಗಾಂಧಿಯವರ ಸ್ವಚರಿತ್ರೆ.

### ೫ನೇ ಭಾಗದಲ್ಲಿ ೭ನೇ ಪ್ರಕರಣ

### ಕುಂಭ ಮೇಳ

ಡಾ. ಮೆಹತಾರವರನ್ನು ನೋಡಬೇಕೆಂಬ ಉದ್ದೇಶದಿಂದ [illegible] ದಾರಿಯಲ್ಲಿ ನಾನು ಕಲಿಕತ್ತೆಯಲ್ಲಿ ನಿಲ್ಲಬೇಕಾಯಿತು. [illegible] ಅಲ್ಲಿ ದಿವಂ. ಶ್ರೀ. ಭೂಪೇಂದ್ರನಾಥ ವಸುಗಳ ಮನೆಯಲ್ಲಿ ಇಳಿದೆನು. ವಂಗ ಬಂಧು ಸತ್ಕಾರವು ಇಲ್ಲಿ ಪರಮಾವಧಿಯನ್ನು ಮುಟ್ಟಿತು. ಆ ಕಾಲದಲ್ಲಿ ನಾನು ಕೇವಲ ಹಣ್ಣುಗಳನ್ನು ಮಾತ್ರ ಆಹಾರವಾಗಿ ತೆಗೆದುಕೊಳ್ಳುತ್ತಿದ್ದೆನು. ಆದುದರಿಂದ ಕಲಿಕತ್ತೆಯಲ್ಲಿ ದೊರಕುವ ಹಣ್ಣು ಹಂಪಲುಗಳೆಲ್ಲ ನನಗಾಗಿ ತರಿಸಿದ್ದರು. ಮನೆಯ ಹೆಂಗಸರು ರಾತ್ರಿಯೆಲ್ಲಾ ಎದ್ದು ಬಾದಾಮಿ ಮುಂತಾದುವುಗಳ ಸಿಪ್ಪೆಯ ಸುಲಿಯುತ್ತಿದ್ದರು. ಈ ದೇಶದ ಪದ್ಧತಿಯಂತೆ ಹಣ್ಣು ರುಚಿಯ ಪದಾರ್ಥಗಳನ್ನು ಸಿದ್ಧಪಡಿಸಲು ಸಾಧ್ಯವಾದ ಪ್ರಯತ್ನವನ್ನು ಮಾಡುತ್ತಿದ್ದರು. ನನ್ನ ಜೊತೆಯವರಿಗೆ ಬಗೆ ಬಗೆಯ ಭಕ್ಷ್ಯಗಳನ್ನು ಮಾಡಿಕೊಟ್ಟರು. ಇವರಲ್ಲಿ ನನ್ನ ಮಗನಾದ ರಾಮದಾಸನೂ ಇದ್ದನು. ಈ ಪ್ರೇಮಪೂರ್ವಕವಾದ ಆದರ ಸತ್ಕಾರವನ್ನು ನನ್ನ ಮನಸ್ಸು ಎಷ್ಟು ಮೆಚ್ಚಿದರೂ ಒಂದು ಸಂಸಾರವೆಲ್ಲಾ ಇಬ್ಬರು ಮೂವರು ಅತಿಥಿಗಳ ಸುಖವನ್ನು ನೋಡಿಕೊಳ್ಳಲು ಶ್ರಮ ಪಡುವುದು ನನಗೆ ಸಹನಾತೀತವಾಗಿದ್ದಿತು. ಆದರೆ ಈ ಸಂಕಟದಿಂದ ನನಗೆ ತಪ್ಪಿಸಿಕೊಳ್ಳಲು ಯಾವ ಉಪಾಯವೂ ತೋರಲಿಲ್ಲ.

ರಂಗೂನಿಗೆ ಹೋಗುವ ಹಡಗಿನಲ್ಲಿ ನಾನು ಡೆಕ್ಕಿನ ಮೇಲೆ (ಹಡಗಿನ ಅಂಗಳ—ಎಲ್ಲಕ್ಕಿಂತ ಕಡಿಮೆ ದರ್ಜೆ) ಪ್ರಯಾಣ ಮಾಡಿದೆನು. ಶ್ರೀ. ವಸುಗಳ ಮನೆಯಲ್ಲಿ ನಾವು ಬಹು ಸತ್ಕಾರದಿಂದ ಸಂಕಟಕ್ಕೆ ಸಿಲುಕಿದರೆ ಇಲ್ಲಿ ಡೆಕ್ಕಿನ ಪ್ರಯಾಣಿಕರ ಸಾಮಾನ್ಯ ಸೌಕರ್ಯಗಳ ವಿಷಯದಲ್ಲಿ ಕೂಡ ಅತ್ಯಂತ ಅಭಾವದ ಅನುಭವವು ನಮ್ಮ ಪಾಲಿಗೆ ಬಂದಿತು. ಹೆಸರಿಗೆ ಬಂದು ಸ್ನಾನದ ಕೊಠಡಿಯಿದ್ದಿತು. ಅದರ ಕೊಳಕು ಅಸಹ್ಯವಾಗಿದ್ದಿತು. ಕಕ್ಕಸುಗಳು ನಾರುವ ಗುಣಿಗಳಾಗಿದ್ದವು. ಅವುಗಳನ್ನು ಉಪಯೋಗಿಸಲು ಮಲಮೂತ್ರಗಳನ್ನು ತುಳಿದುಕೊಂಡೋ ದಾಟಿಕೊಂಡೋ ಹೋಗಬೇಕಾಗಿದ್ದಿತು.

ರಂಗೂನನ್ನು ಸೇರಿದ ಮೇಲೆ ಅಲ್ಲಿದ್ದ ಹಡಗಿನ ಮಾಲಿಕರ ಪ್ರತಿನಿಧಿಗೆ ಎಲ್ಲಾ ವಿಷಯಗಳನ್ನೂ ತಿಳಿಸಿ ಬರೆದೆನು. ಈ ಪತ್ರದ ಪರಿಣಾಮವಾಗಿಯೂ ಡಾ. ಮೆಹತಾರವರು ಈ ವಿಷಯದಲ್ಲಿ ಪಟ್ಟ ಶ್ರಮದ ವಿಷಯವಾಗಿಯೂ ನನ್ನ ಮರು ಪ್ರಯಾಣವು—ನಾನು ಡೆಕ್ಕಿನ ಪ್ರಯಾಣಿಕನಾಗಿಯೇ ಇದ್ದರೂ—ಹಿಂದಿನದರಷ್ಟು ಕೇಡಾಗಿರಲಿಲ್ಲ.

ರಂಗೂನಿನಲ್ಲಿಯೂ ನನ್ನ ಫಲಾಹಾರ ಶಪಥವು ಮನೆಯ ಯಜಮಾನರಿಗೆ ತೊಂದರೆಗೆ ಕಾರಣವಾಯಿತು. ಆದರೆ ಡಾ. ಮೆಹತಾರವರ ಮನೆಯಲ್ಲಿ ನನಗೆ ನನ್ನ ಮನೆಯಲ್ಲಿದ್ದಷ್ಟೇ ಸ್ವಾತಂತ್ರ್ಯವಿದ್ದುದರಿಂದ ನಾನು ಆಹಾರದ ದುಂದನ್ನು ಒಂದು ಮಟ್ಟಿಗೆ ಅಂಕೆಯಲ್ಲಿಡಲು ಸಾಧ್ಯವಾಯಿತು. ನಾನು ತಿನ್ನಬಹುದಾದ ಪದಾರ್ಥಗಳ ವಿಷಯದಲ್ಲಿ ನಾನು ಯಾವ ಮಿತಿಯನ್ನೂ ನಿಯಮಿಸಿಕೊಂಡಿರಲಿಲ್ಲವಾದುದರಿಂದ ನನಗಾಗಿ ತರಿಸಿದ ಬಗೆ ಬಗೆಯ ಫಲಗಳ ಮೇಲಿನ ಮೋಹವನ್ನು ನನ್ನ ಕಣ್ಣೂ ನಾಲಿಗೆಯೂ ತ್ಯಜಿಸದೆ ಹೋದವು. ಊಟಕ್ಕೆ ಗೊತ್ತಾದ ಹೊತ್ತಿರಲಿಲ್ಲ. ನಾನೇನೋ ದಿನದ ಕಡೆಯ ಊಟವನ್ನು ಹೊತ್ತು ಮುಳುಗುವುದಕ್ಕೆ ಮುಂಚೆಯೇ ಮುಗಿಸುವ ಇಷ್ಟವುಳ್ಳವನಾಗಿದ್ದರೂ ಸಾಮಾನ್ಯವಾಗಿ ನನ್ನ ಊಟವು ರಾತ್ರಿ ಎಂಟೊಂಬತ್ತು ಘಂಟೆಗೆ ಮುಂಚೆ ಆಗುತ್ತಿರಲಿಲ್ಲ.

ಈ ವರ್ಷವು ಎಂದರೆ ೧೯೧೫ನೇ ಇಸವಿಯಲ್ಲಿ ಕುಂಭಮೇಳವು ನಡೆಯುವುದಿದ್ದಿತು. ಈ ಮೇಳವು ಹನ್ನೆರಡು ವರ್ಷಕ್ಕೊಮ್ಮೆ ಹರಿದ್ವಾರದಲ್ಲಿ ನಡೆಯುತ್ತದೆ. ಈ ಉತ್ಸವಕ್ಕೆ ಹೋಗಲು ನನಗೆ ತೀವ್ರವಾದ ಇಚ್ಛೆಯೇನೂ ಇರಲಿಲ್ಲ. ಆದರೆ ತಮ್ಮ ಗುರುಕುಲದಲ್ಲಿದ್ದ ಮಹಾತ್ಮಾ ಮುನ್ಷೀರಾಮಜಿ (ಸ್ವಾಮೀ ಶ್ರದ್ಧಾನಂದಜೀ) ಯವರನ್ನು ನೋಡಲು ನಾನು ಆತುರನಾಗಿದ್ದೆನು. ಗೋಖಲೆಯವರ ಸಂಘವು ಕುಂಭಮೇಳದಲ್ಲಿ ಸೇವೆಗಾಗಿ ಸ್ವಯಂಸೇವಕರ ದೊಡ್ಡದೊಂದು ದಳವನ್ನು ಕಳುಹಿಸಿದ್ದಿತು. ಪಂಡಿತ ಹೃದಯನಾಥ ಕುಂಜರುರವರು ಅದರ ಮುಖ್ಯಸ್ಥರಾಗಿಯೂ ದಿವಂ. ಡಾ. ದೇವರು ಅದರ ವೈದ್ಯಾಧಿಕಾರಿಗಳಾಗಿಯೂ ಇದ್ದರು. ಫೀನಿಕ್ಸ್ ಪಂಗಡವನ್ನು ಇವರ ಸಹಾಯಕ್ಕೆ ಕಳುಹಿಸಬೇಕೆಂದು ನನಗೆ ಆಹ್ವಾನ ಬಂದಿತು. ಆದುದರಿಂದ ಮಗನಲಾಲಗಾಂಧಿಯು ನನಗಿಂತ ಮುಂಚೆಯೇ ಹೋಗಿದ್ದರು. ರಂಗೂನಿನಿಂದ ಹಿಂದಕ್ಕೆ ಬರುತ್ತಾ ನಾನು ಪಂಗಡವನ್ನು ಸೇರಿದೆನು.

ಕಲಿಕತ್ತೆಯಿಂದ ಹರಿದ್ವಾರದ ವರೆಗಿನ ಪ್ರಯಾಣವು [illegible]ತ ಕಷ್ಟ ಕರವಾದ್ದಾಯಿತು. ಒಮ್ಮೊಮ್ಮೆ ಗಾ[illegible] ದೀಪವೇ ಇರುತ್ತಿರಲಿಲ್ಲ. ಸಹಾರನ್ಪುರದಲ್ಲಿ [illegible] ಸಾಮಾನಿನ ಗಾಡಿಗೋ ಅಥವಾ ದನದ ಗಾಡಿಗೋ [illegible]ದರು. ಇವಕ್ಕೆ ಮೇಲ್ಛಾವಣಿಯಿರಲಿಲ್ಲ. ತಲೆಯ [illegible] ನಡುಹಗಲಿನ ಬಿಸಿಲು. ಕಾಲುಕೆಳಗೆ ಸುಡುವ [illegible]ದ ನೆಲ. ಇವೆರಡರ ಮಧ್ಯೆ ನಾವು ಬೆಂದು ಬೆಂಡಾದೆವು. [illegible] ಪ್ರಯಾಣದಿಂದ ಬಾಯಾರಿಕೆಯು ಕೂಡ 'ನಿಷ್ಠ ಹಿಂ[ದು]ಗಳು' 'ಮುಸಲ್ಮಾನೀ' ನೀರನ್ನು ಕುಡಿಯಲು ಒಪ್ಪಲಿ[ಲ್ಲ]. 'ಹಿಂದೂ' ನೀರು ದೊರೆಯುವ ವರೆಗೂ ಅವರು ಕಾದಿ[illegible]. ಇದೇ ಹಿಂದೂಗಳೇ ತಾವು ಕಾಯಿಲೆಯವ[illegible] [illegible] ಡಾಕ್ಟರುಗಳು [illegible] [illegible] ಕುಡಿಯ [illegible] ಮುಸಲ್ಮಾನನೇ ಅಥವಾ [illegible] ನಾಯಿಯೋ ಔಷಧವನ್ನು ಬೆರಸಿಕೊಡಲಿ, ಹಿಂದು ಮುಂದು ನೋಡುವುದೂ ಇಲ್ಲ, ವಿಚಾರಿಸುವುದೂ ಇಲ್ಲ.

ಶಾಂತಿನಿಕೇತನದಲ್ಲಿ ನಮ್ಮ ಅನುಭವದಿಂದ ಝಾಡಮಾಲಿಯ ಕೆಲಸವೇ ಹಿಂದುಸ್ತಾನದಲ್ಲಿ ನಮ್ಮ ವಿಶೇಷ ಕಾರ್ಯವಾಗಿ ನಿಲ್ಲುವುದೆಂದು ನಮಗೆ ಗೊತ್ತಾಗಿದ್ದಿತು. ಹರಿದ್ವಾರದಲ್ಲಿ ಸ್ವಯಂಸೇವಕರಿಗಾಗಿ ಧರ್ಮಶಾಲೆಯೊಂದರಲ್ಲಿ ಗುಡಾರವನ್ನು ಹಾಕಿದ್ದರು. ಕಕ್ಕಸುಕ್ಕಾಗಿ ಡಾ. ದೇವರು ಕೆಲವು ಗುಣಿಗಳನ್ನು ತೆಗೆಸಿದ್ದರು. ಇವುಗಳನ್ನು ನೋಡಿಕೊಳ್ಳಲು ಅವರು ಕೆಲವು ಸಂಬಳದ ಝಾಡಮಾಲಿಗಳ ಮೇಲೆ ಭಾರವನ್ನು ಹಾಕಬೇಕಾಗಿದ್ದಿತು. ಇದೋ ಇಲ್ಲಿ ಫೀನಿಕ್ಸ್ ಪಂಗಡಕ್ಕೆ ಕೆಲಸವಿದ್ದಿತು. ಈ ಗುಣಿಗಳಲ್ಲಿನ ಮಲದ ಮೇಲೆ ಮಣ್ಣು ಹಾಕಿ ನೀಗಿಸಿ ಅವುಗಳನ್ನು ಶುಚಿಯಾಗಿಟ್ಟುಕೊಂಡಿರುವೆವೆಂದು ನಾವು ಹೇಳಿದೆವು. ಡಾ. ದೇವರು ಸಂತೋಷದಿಂದ ಒಪ್ಪಿದರು. ಹೀಗೆ ಸೇವೆಮಾಡುವೆವೆಂದು ಹೇಳಿದವನು ನಾನಾದರೂ ಕೆಲಸವನ್ನು ನಡೆಸುವವರು ಮಗನಲಾಲ ಗಾಂಧಿಯವರಾಗಿದ್ದರು. ನನ್ನ ಕೆಲಸವು ಮುಖ್ಯವಾಗಿ ಡೇರೆಯಲ್ಲಿ ಕುಳಿತುಕೊಂಡು ದರ್ಶನವೀಯುವುದು. ನನ್ನನ್ನು ನೋಡಲು ಬಂದ ಅನೇಕ ಯಾತ್ರಿಕರೊಡನೆ ಧರ್ಮಸಂಬಂಧವಾಗಿಯೂ ಇತರ ವಿಚಾರಗಳನ್ನು ಕುರಿತು ಚರ್ಚೆ ನಡಸುವುದೂ ಆಗಿದ್ದಿತು. ಇದರ ಮಧ್ಯೆ ನನಗೆ ಒಂದು ಕ್ಷಣದ ವಿರಾಮವೂ ದೊರಕುತ್ತಿರಲಿಲ್ಲ. ಸ್ನಾನಘಟ್ಟಕ್ಕೆ ಕೂಡ ಈ ದರ್ಶನಾರ್ಥಿಗಳು ನನ್ನನ್ನು ಹಿಂಬಾಲಿಸುತ್ತಿದ್ದರು; ಊಟ ಮಾಡುವಾಗ ಕೂಡ ನಾನೊಬ್ಬನೇ ಇರಲು ಅವಕಾಶ ಕೊಡುತ್ತಿರಲಿಲ್ಲ. ದಕ್ಷಿಣ ಆಫ್ರಿಕದಲ್ಲಿ ನಾನು ಮಾಡಿದ ಅಲ್ಪಸೇವೆಯಿಂದ ಭರತಖಂಡವೆಲ್ಲಾ ಎಷ್ಟು ಗಂಭೀರವಾದ ಪರಿಣಾಮವುಂಟಾಗಿರುವುದೆಂಬುದನ್ನು ನಾನು ಈ ರೀತಿಯಾಗಿ ಹರಿದ್ವಾರದಲ್ಲಿ ಮನಗಂಡೆನು. ಆದರೆ ಈ ಸ್ಥಿತಿಯೇನೂ ನನಗೆ ಸಂತೋಷದಾಯಕವಾಗಿರಲಿಲ್ಲ. ನಾನು ಎರಡು ರೀತಿಯ ಸಂಕಟಗಳ ಮಧ್ಯೆ ಸಿಲುಕಿದ್ದೆನು. ನನ್ನನ್ನು ಯಾರೂ ಗುರುತಿಸದೆಡೆಯಲ್ಲಿ ಈ ದೇಶದಲ್ಲಿ ಲಕ್ಷಾಂತರ ಮಂದಿ ಅನುಭವಿಸಬೇಕಾದ ಕಷ್ಟಗಳನ್ನು ಸಹಿಸಬೇಕಾಗಿದ್ದಿತು.

ಉದಾ.—ರೈಲಿನಲ್ಲಿ ಪ್ರಯಾಣಮಾಡುವಾಗ ನನ್ನ ವಿಷಯವನ್ನು ತಿಳಿದವರ ಮಧ್ಯದಲ್ಲಿದ್ದಾಗ ನಾನು ಅವರ ದರ್ಶನಾಕಾಂಕ್ಷೆಯ ಹುಚ್ಚಿಗೆ ಈಡಾಗುತ್ತಿದ್ದೆನು. ಇವೆರಡರಲ್ಲಿ ಯಾವ ಪರಿಸ್ಥಿತಿಯು ಹೆಚ್ಚು ಕರುಣಾಜನಕವಾದುದೆಂಬುದನ್ನು ನಿರ್ಧರಿಸುವುದು ನನಗೆ ಎಷ್ಟೋ ಬಾರಿ ಕಷ್ಟವಾಗಿದೆ. ಇಷ್ಟಾದರೂ ನನಗೆ ಗೊತ್ತು; ದರ್ಶನಾರ್ಥಿಗಳ ಅಂಧ ಪ್ರೇಮದಿಂದ ನಾನು ಅನೇಕ ವೇಳೆ ಕೋಪಗೊಂಡಿದ್ದೆನು, ಇನ್ನೂ ಹೆಚ್ಚು ಬಾರಿ ಮನನೊಂದಿದ್ದೇನೆ. ಆದರೆ ಮೂರನೆಯ ತರಗತಿಯ ಪ್ರಯಾಣವು ಎಷ್ಟೋ ಸಲ ಕಷ್ಟಕರವಾಗಿ ಪರಿಣಮಿಸಿದ್ದರೂ ನನ್ನ ಅಂತಃಕರಣ ಶುದ್ಧಿಗೆ ಕಾರಣವಾಗಿದೆಯೇ ಹೊರತು ಕೋಪೋದ್ರೇಕಕ್ಕೆ ಕಾರಣವಾಗಿಯೇ ಇಲ್ಲವೆಂದು ಹೇಳಬಹುದು.

ಆ ಕಾಲದಲ್ಲಿ ನನಗೆ ಬೇಕಾದಷ್ಟು ತಿರುಗಾಡಲು ತಕ್ಕ ಕಾಯಶಕ್ತಿ ಇದ್ದಿತು. ಇದೂ ಅಲ್ಲದೆ ಜನರು ನನ್ನನ್ನು ಬೀದಿಯಲ್ಲಿ ನೋಡಿದೊಡನೆಯೇ ಮುತ್ತುವಷ್ಟು ಪ್ರಸಿದ್ಧಿಗೆ ನಾನಿನ್ನೂ ಬಂದಿರಲಿಲ್ಲ. ಈ ಓಡಾಟದಲ್ಲಿ ನನಗೆ ಯಾತ್ರಿಕರ ಧರ್ಮಭಾವನೆಗಿಂತ ಅವರ ಅಜಾಗರೂಕತೆ, ಚಾಪಲ್ಯ, ಸೋಮಾರಿತನ—ಇವೇ ಹೆಚ್ಚಾಗಿ ಕಂಡುಬಂದುವು. ಅಲ್ಲಿಗೆ ಸಾಧುಗಳ ತಂಡ ತಂಡವೇ ಹಾರಿಬಂದಿದ್ದಿತು. ಅವರನ್ನು ನೋಡಿದರೆ ಅವರು ಸುಯುಕ್ತಪುಂಡು ಸುಖಶಯ್ಯೆಯಲ್ಲಿ ಮಲಗಿ ಸುಖಭೋಗದಿಂದ ಜೀವನಪಥವನ್ನು ಸಾಗಿಸುವುದಕ್ಕಾಗಿಯೇ ಜನ್ಮವೆತ್ತಿದಂತೆ ಕಾಣುತ್ತಿದ್ದಿತು.

ಇಲ್ಲಿ ನಾನು ಐದು ಕಾಲಿನ ಆಕಳನ್ನು ನೋಡಿದೆನು! ಇದರಿಂದ ನನಗೆ ಆಶ್ಚರ್ಯವಾಯಿತು. ಆದರೆ ಅನುಭವಿಗಳಾದ ಜನರು ನನಗೆ ನಿಜವಾದ ಸಂಗತಿಯನ್ನು ತಿಳಿಸಿದರು. ಈ ಐದುಕಾಲಿನ ಆಕಳುವು(?) ಪಾಪ, ದುಷ್ಟರ ಲೋಭಕ್ಕೆ ಆಹುತಿಯಾಗಿದ್ದಿತು. ಜೀವವಿದ್ದ ಕರುವಿನ ಒಂದು ಕಾಲನ್ನು ಕುಯ್ದು ಅದನ್ನು ಹಸುವಿನ ಭುಜಕ್ಕೆ ಅಂಟಿಸಿ ಉಂಟಾದುದೇ ಈ ಐದನೆಯ ಕಾಲೆಂದು ನನಗೆ ತಿಳಿದುಬಂದಿತು! ಎರಡು ಪ್ರಾಣಿಗಳಿಗೂ ಹಿಂಸೆಮಾಡಿದುದರಿಂದುಂಟಾದ ಈ ಫಲವನ್ನು ಅಜ್ಞಾನಿಗಳ ಹಣವನ್ನು ಸುಲಿಯುವುದಕ್ಕೆ ಉಪಯೋಗಿಸಿದ್ದರು. ಐದುಕಾಲಿನ ಆಕಳಿನ ದರ್ಶನವನ್ನು ಮಾಡಲೊಲ್ಲದ ಹಿಂದುವು ಉಂಟೆ? ಇಂತಹ ಅದ್ಭುತವಾದ ಹಸುವಿಗೆ ಶಕ್ತ್ಯನುಸಾರ ದಾನ ಮಾಡದೆ ಇರಲಾಗುವುದೆ?

ಕುಂಭಮೇಳ ದಿನವೊದಗಿತು. ಅದು ನನಗೆ ಬಹಳ ಸ್ಮರಣೀಯವಾಗಿ ಪರಿಣಮಿಸಿತು. ನಾನು ಹರಿದ್ವಾರಕ್ಕೆ ಯಾತ್ರಾರ್ಥಿಯಾಗಿ ಹೋಗಿರಲಿಲ್ಲ. ಪವಿತ್ರತೆಯನ್ನರಸಿಕೊಂಡು ತೀರ್ಥಕ್ಷೇತ್ರಗಳಿಗೆ ಹೋಗಲು ನಾನು ಎಂದೂ ಬಯಸಿಲ್ಲ. ಅಲ್ಲಿಗೆ ಸುಮಾರು ಹದಿನೇಳು ಲಕ್ಷ ಜನರು ಬಂದಿದ್ದರೆಂದು ಊಹಿಸಿದ್ದರು. ಇವರೆಲ್ಲರೂ ಕೇವಲ ಕಪಟಿಗಳಾಗಲಿ ನೋಟಕ್ಕೆ ಬಂದವರಾಗಲಿ ಎಂದು ಹೇಳಲು ಸಾಧ್ಯವೇ? ಇವರಲ್ಲಿ ಎಷ್ಟೋ ಜನರು ಪುಣ್ಯವನ್ನು ಗಳಿಸುವುದಕ್ಕೂ ಆತ್ಮಶುದ್ಧಿಗೂ ಬಂದಿದ್ದರೆಂಬುದರಲ್ಲಿ ನನಗೆ ಸಂಶಯವಿರಲಿಲ್ಲ. ಈ ರೀತಿಯ ಶ್ರದ್ಧೆಯು ಆತ್ಮನ ಶ್ರೇಯೋಭಿವೃದ್ಧಿಗೆ ಸಹಾಯಕವಾಗುವುದೆಂಬುದನ್ನು ಹೇಳುವುದು ಅಸಾಧ್ಯವಲ್ಲದಿದ್ದರೂ ಕಷ್ಟಸಾಧ್ಯ.

ಆದುದರಿಂದ ನಾನು ಆ ರಾತ್ರಿಯೆಲ್ಲಾ ವಿಚಾರದಲ್ಲಿ ಮಗ್ನನಾಗಿ ಕಳೆದೆನು. ಎಲ್ಲ ಕಡೆಯೂ ಪಸರಿಸಿದ ಕಾಪಟ್ಯದ ಮಧ್ಯೆ ಆ ಪವಿತ್ರಾತ್ಮರು ಇದ್ದರು. ಭಗವಂತನ ದೃಷ್ಟಿಯಲ್ಲಿ ಅವರು ನಿಷ್ಕಲ್ಮಷರಾಗಿದ್ದರು. ಹರಿದ್ವಾರಕ್ಕೆ ಯಾತ್ರೆಗಾಗಿ ಹೋಗುವುದೇ ಪಾಪಕಾರ್ಯವಾದರೆ ನಾನು ಜನರೆದುರಿಗೆ ಈ ಅಭಿಪ್ರಾಯವನ್ನು ಪ್ರಕಟಿಸಿ ಕುಂಭದ ದಿನವೇ ಹರಿದ್ವಾರವನ್ನು ಬಿಡಬೇಕು. ಹರಿದ್ವಾರಕ್ಕೂ ಕುಂಭಮೇಳಕ್ಕೂ ಯಾತ್ರಾರ್ಥಿಯಾಗಿ ಹೋಗುವುದರಲ್ಲೇನೂ ಕಲ್ಮಷವಿಲ್ಲದಿದ್ದರೆ ಅಲ್ಲಿ ಹರಡಿದ್ದ ಪಾಪಸ್ಥಿತಿಗೆ ಪ್ರಾಯಶ್ಚಿತ್ತರೂಪವಾಗಿ ನಾನು ಯಾವುದಾದರೊಂದು ತ್ಯಾಗವ್ರತವನ್ನು ಕೈಗೊಂಡು ಆತ್ಮಶುದ್ಧಿಗೈಯಬೇಕು. ಇದು ನನಗೆ ಕೇವಲ ಸಹಜವಾಗಿದ್ದಿತು. ನನ್ನ ಜೀವನವು ನಿಯಮಪೂರ್ವಕ ವ್ರತಾಚರಣೆಯ ಮೇಲೆ ರಚಿತವಾದುದೇ ಆಗಿದೆ. ಅಷ್ಟು ಔದಾರ್ಯದಿಂದ ನನ್ನನ್ನು ಕಲ್ಕತ್ತೆಯಲ್ಲಿಯೂ ರಂಗೂನಿನಲ್ಲಿಯೂ ಸತ್ಕರಿಸಿದ್ದ ಗೃಹಸ್ಥರಿಗೆ ನಾನು ಅನಾವಶ್ಯಕವಾಗಿ ಕೊಟ್ಟ ಕಷ್ಟವು ನನ್ನ ಸ್ಮರಣೆಗೆ ಬಂದಿತು. ಆದುದರಿಂದ ನಾನು ನನ್ನ ಆಹಾರವಸ್ತುಗಳ ಸಂಖ್ಯೆಯ ಮಿತಿಯನ್ನು ನಿರ್ಧರಿಸಬೇಕೆಂದೂ ಹೊತ್ತು ಮುಳುಗುವುದಕ್ಕೆ ಮುಂಚೆ ಊಟವನ್ನು ಮುಗಿಸಿಬಿಡಬೇಕೆಂದೂ ನಿಶ್ಚಯಿಸಿದೆನು. ಈ ನಿಯಮಗಳನ್ನು ನಾನು ಹೊತ್ತುಕೊಳ್ಳದಿದ್ದರೆ ಮುಂದೆ ನನ್ನನ್ನು ಸತ್ಕರಿಸುವ ಗೃಹಸ್ಥರಿಗೆ ನಾನು ಹೆಚ್ಚು ಅನಾನುಕೂಲತೆಗೆ ಕಾರಣನಾಗುವೆನೆಂದೂ ನಾನು ಸೇವೆಯಲ್ಲಿ ತೊಡಗಿರುವುದರ ಬದಲು ನನ್ನ ಸೇವೆಯಲ್ಲಿಯೇ ಅವರು ನಿರತರಾಗಿರಬೇಕೆಂಬುದಾಗಿಯೂ ನಾನು ಕಂಡೆನು. ಈ ಕಾರಣ ನಾನು ಹಿಂದೂದೇಶದಲ್ಲಿದ್ದಾಗ ಇಪ್ಪತ್ತು ನಾಲ್ಕು ತಾಸಿನಲ್ಲಿ ಐದು ಪದಾರ್ಥಗಳಿಗಿಂತ ಹೆಚ್ಚಾಗಿ ತಿನ್ನುವುದಿಲ್ಲವೆಂದೂ ರಾತ್ರಿಹೊತ್ತು ಊಟ ಮಾಡುವುದಿಲ್ಲವೆಂದೂ ವ್ರತ ಹಿಡಿದೆನು. ಇದರಿಂದ ನನಗೆ ಉಂಟಾಗಬಹುದಾದ ಕಷ್ಟಗಳನ್ನು ಕುರಿತು ನಾನು ಪೂರ್ಣವಾಗಿ ಆಲೋಚಿಸಿದೆನು. ಆದರೆ ನಾನು ತಪ್ಪಿಸಿಕೊಳ್ಳಲು ಎಷ್ಟೂ ಅವಕಾಶವನ್ನು ಬಿಡಕೂಡದೆಂದು ನನಗೆ ಇಷ್ಟವಿದ್ದಿತು. ನಾನು ಕಾಯಿಲೆಯಿದ್ದಾಗ ಔಷಧವನ್ನೂ ಐದು ಪದಾರ್ಥಗಳಲ್ಲಿ ಎಣಿಸುವುದರ ಪರಿಣಾಮವನ್ನು ಚಿಂತಿಸಿದೆನು. ಪಥ್ಯವಾಗಿ ತೆಗೆದುಕೊಳ್ಳುವ ಪದಾರ್ಥಗಳೂ ಎಣಿಕೆಗೆ ಸೇರಬೇಕೆಂದು ನಿರ್ಧರಿಸಿದೆನು. ಕಡೆಗೆ ಯಾವ ಕಾರಣಕ್ಕೂ ಈ ಕಟ್ಟನ್ನು ವಿನಾಯಿಸಕೂಡದೆಂದು ನಿಶ್ಚಯಿಸಿದೆನು.

ಈ ವ್ರತಗಳನ್ನು ನಡೆಸಿಕೊಂಡು ಈಗ ಹದಿಮೂರು ವರ್ಷವಾಯಿತು. ಇವು ನನ್ನನ್ನು ಕಠಿಣ ಪರೀಕ್ಷೆಗೆ ಗುರಿಮಾಡಿವೆ. ಇವು ನನ್ನನ್ನು ರಕ್ಷಿಸಿಯೂ ಇವೆಯೆಂದು ಹೇಳಬಲ್ಲೆನು. ಇವುಗಳಿಂದ ನನ್ನ ಜೀವಮಾನವು ನಾಲ್ಕಾರು ವ[illegible] [illegible] ನನ್ನ ಅಭಿಪ್ರಾಯ.

---

## ಜಮೀನ್ದಾರರ ಸಂಘದ ಕಮಿಟಿ ಮೀಟಿಂಗು.

ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗು ಈ ತಾ. 13ರಲ್ಲಿ ವೀರಾಜಪೇಟೆ ಬಿದ್ದರ್ ಸ್ಟೋರ್ ಹಾಲ್‌ನಲ್ಲಿ ನಡೆಯಿತು. ಸಂಘದ ಪ್ರೆಸಿಡೆಂಟರಾದ ಮಾ. ಪಿ. ಬಿ. ಕುಶಾಲಪ್ಪನವರು ಮೀಟಿಂಗಿನ ಅಧ್ಯಕ್ಷರಾಗಿದ್ದರು. ಈ ಕೆಳಗಿನ ಕಮಿಟಿ ಮೆಂಬರುಗಳು ಹಾಜರಿದ್ದರು.—ಮೇ. ಗಳಾದ 2. ಕೊಳ್ಳಿಮಾಡ ಕರುಂಬಯ್ಯ, 3. ಅಪ್ಪಿಗುಟ್ಟಿರ ಪೊನ್ನಪ್ಪ, 4. ಬಿದ್ದಂಡ ಸುಬ್ಬಯ್ಯ, 5. ಕೋದಂಡ ಉತ್ತಯ್ಯ, 6. ಅಜ್ಜಮಾಡ ಮಾದಪ್ಪ, 7. ಗುಡ್ಡಂಡ ಭೀಮಯ್ಯ, 8. ಕೊಳುವಂಡ ಎ. ನಂಜಪ್ಪ, 9. ಜಮ್ಮಡ ಮಾದಪ್ಪ, 10. ಪುತ್ತಮನ ಮುದ್ದಯ್ಯ, 11. ಚೋಗಾಡ ಕುಟ್ಟಪ್ಪ, 12. ಕೋಳಿರ ತಮ್ಮಯ್ಯ, 13. ಮುಂಜಾನಿರ ದೇವಯ್ಯ, 14. ಎ. ಕುಸ್ಸಯ್ಯ, 15. ಮುಕ್ಕಾಟಿರ ಕರುಂಬಯ್ಯ, 16. ಕೋಟೆರ ಚಿಣ್ಣಪ್ಪ, ಮತ್ತು 17. ಪಿ. ಎ. ಬೆಳ್ಯಪ್ಪ (ಜನರಲ್ ಸೆಕ್ರೆಟರಿ)

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಜುಲೈ ಮತ್ತು ಆಗೋಸ್ಟು ತಿಂಗಳುಗಳ ಜಮಾಖರ್ಚಿನ ಲೆಕ್ಕ ಓದಿ ಮಂಜೂರು ಮಾಡಲಾಯಿತು.

3 ಹುದಿಕೇರಿಯ(?) ಸಮ್ಮತ ಪ್ರಾಂತ್ಯದ ಕಮಿಟಿ ಪತ್ರಕ್ಕೆ, ಸಂಘದ 18ನೇ ನಿಬಂಧನೆಗೆ ವಿರೋಧವಾಗಿ, ಜವಾಬು ಕೊಟ್ಟದ್ದಕ್ಕೆ ಕಮಿಟಿಯು ವಿಷಾದಿಸುತ್ತದಲ್ಲದೆ ಇನ್ನು ಮುಂದಕ್ಕೆ ಹೀಗೆ ನಡೆಯಲಿಕ್ಕಿಲ್ಲವೆಂದು ಕೋರಿದೆ.

4. ಪ್ರೆಸಿಡೆಂಟರು, ಇಬ್ಬರು ವೈಸ್ ಪ್ರೆಸಿಡೆಂಟರು, ಜನರಲ್ ಸೆಕ್ರೆಟರಿಯವರು ಮತ್ತು 5. ಹಳೇ ತಾಲೋಕುಗಳಿಂದ ಆರಿಸಲ್ಪಟ್ಟ ಮೆಂಬರು, ಹಾಗೆ 9 ಮೆಂಬರುಗಳುಳ್ಳ ರಾಜಕೀಯ ರಚನಾ ಪ್ರಚಾರ ಕಮಿಟಿಯೊಂದನ್ನು ನೇಮಿಸಬೇಕೆಂದು ಮೇ. ಸಿ. ಯಮ್. ಉತ್ತಯ್ಯನವರು ತಂದ ಠರಾವು ಸರ್ವಸಮ್ಮತದಿಂದ ಮಂಜೂರಾಯಿತು.

ಮೇಲಿನ ಕಮಿಟಿಗೆ ತಾಲೋಕುವಾರು ಈ ಕೆಳಗಿನ 5 ಮೆಂಬರುಗಳು ಆರಿಸಲ್ಪಟ್ಟರು. ಮೇ. ಗಳಾದ 1. ಸಿ. ಯಮ್. ಉತ್ತಯ್ಯನವರು, 2. ಜಮ್ಮಡ ಮಾದಪ್ಪನವರು, 3. ಬಿದ್ದಂಡ ಯಮ್. ಸುಬ್ಬಯ್ಯನವರು 4. ನಿಡ್ಯಮಲೆ ಮುದ್ದಪ್ಪನವರು, 5. ಪಾಲೆಕ್ಕೇರಿ(?) ಕಣ್ಣಪ್ಪನವರು.

ಈ ಕಮಿಟಿಯು ಮೀಟಿಂಗೊಂದನ್ನು ಈ ತಾ. 29ರಲ್ಲಿ ಮಡಿಕೇರಿಯಲ್ಲಿ ನಡಿಸುವಂತೆ ಸೆಕ್ರೆಟರಿಯವರು ನೋಟೀಸು ಕೊಡತಕ್ಕದ್ದೆಂದು ತೀರ್ಮಾನವಾಯಿತು.

5. 'ಬಾರ್ಡೋಲಿಯ ಸತ್ಯಾಗ್ರಹ ಚಳವಳವು ಜಯಪ್ರದವಾದುದಕ್ಕೆ ಸಂಘವು ಅಲ್ಲಿಯ ಜನರನ್ನೂ, ಅವರ ಮುಂದಾಳನ್ನೂ ಅಭಿನಂದಿಸುತ್ತದೆ' ಎಂಬ ಠರಾವು ಏಕಮತದಿಂದ ಪಾಸಾಯಿತು

6. ಸಂಘದ ಜವಾನನಿಗೆ ಕೊಡುತ್ತಿದ್ದ ಸಂಬಳ , ರೂಪಾಯಿಯನ್ನು ೬ ರೂಪಾಯಿಗೆ ಇಳಿಸುವಂತೆ ತೀರ್ಮಾನವಾಯಿತು.

ಪಿ. ಎ. ಬೆಳ್ಯಪ್ಪ.
ಜನರಲ್ ಸೆಕ್ರೆಟರಿ.

ತಾ. 15—9—'28.

**ಆಲ್ ಇಂಡಿಯಾ ಮ್ಯೂಚ್ಯುಯಲ್ ಬಿಲ್ಡಿಂಗ್ ಅಂಡ್ ಫ್ಲವರ್ ಹೌಸಸ್ ಅಸೋಸಿಯೇಷನ್ ಲಿಮಿಟೆಡ್**

ಬ್ರಾಂಚ್ ಆಫೀಸ್ ಮಡಿಕೇರಿ (ಕೊಡಗು)

## ನೋಟೀಸು.

ಕೊಡಗು ದೇಶದಲ್ಲಿರತಕ್ಕ ಮೇಲ್ಕಂಡ ಸಂಘದ ಷೇರು ಮತ್ತು ಬಾಂಡು ಹೋಲ್ಡರುಗಳ ಮೀಟಿಂಗ್ ಮಡಿಕೇರಿಯಲ್ಲಿರುವ ಸಂಘದ ಬ್ರಾಂಚ್ ಆಫೀಸಿನಲ್ಲಿ ಇದೇ ತಿಂಗಳು 30ನೇ ತಾರೀಖು ಭಾನುವಾರ 2 ಗಂಟೆಗೆ ಸರಿಯಾಗಿ ಶೇರ್ ಮತ್ತು ಬಾಂಡ್ ಹೋಲ್ಡರುಗಳಿಗೆ ಸ್ಥಿರ ಸ್ವತ್ತುಗಳ ಆಧಾರದ ಮೇಲೆ ಸಾಲವನ್ನು ಕೊಡತಕ್ಕ ವಿಷಯವನ್ನು ತೀರ್ಮಾನಿಸುವುದಕ್ಕೆ ನಡೆಯುತ್ತೆ. ಆದ್ದರಿಂದ ಸರ್ವರೂ ಆ ಕಾಲಕ್ಕೆ ಸರಿಯಾಗಿ ಬರತಕ್ಕದ್ದು.

ಮಡಿಕೇರಿ (Sd) ಟಿ. ಎ. ಕುಪ್ಪುಸ್ವಾಮಿಪಿಳ್ಳೆ,

ತಾ 10—9—28 ಛೀಫ್ ಏಜೆಂಟ್ 2—2



## ಏಕೆ ನರಳುತ್ತೀರಿ?

ಪ್ರಾಚೀನ ಋಷಿಗಳಿಂದ ಪ್ರಣೀತವಾದ ಆಯುರಾರೋಗ್ಯೈಶ್ವರ್ಯವರ್ಧಕವಾದ ಆರೋಗ್ಯವಿಧಿಗಳನ್ನು ತಿಳಿಯದೆ ಅಜ್ಞಾನಾಂಧಕಾರದಲ್ಲಿ ಮುಳುಗಿ ಅನೇಕ ತರಹಗಳ ವ್ಯಾಧಿಗಳಿಂದ ಏಕೆ ನರಳುವಿರಿ?

**ಕ್ರಯವು! ಇಲ್ಲವೆ!!**

**ಉಚಿತವಾಗಿ ಕೊಡಲ್ಪಡುವ ಸಂಸ್ಕೃತ**

ನಮ್ಮ ಔಷಧಗಳನ್ನು ಬಿಕ್ರಿ ಮಾಡುವದಕ್ಕೆ — **ವೈದ್ಯವಿದ್ಯೆ** — ಏಜೆಂಟರು ಬೇಕಾಗಿರುವದು

ಎಂಬ ಪುಸ್ತಕವನ್ನು ಓದಿ ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ

52—6

**ರಾಜವೈದ್ಯ ನಾರಾಯಣಜಿ ಕೇಶವಜಿ,**

1/94 ಚೈನ ಬಜಾರು ರೋಡು ಮದ್ರಾಸು

N B. — ವೈದ್ಯಸಲಹೆಯು ಸಿ ಜನ್ಯದ ಕೊಡಲಾಗುವದು



**ಹೊಸ ಅಂಗಡಿ! ಸುಲಭ ಕ್ರಯ!!**

## ಬೇಟೆಗಾರರೇ ಇತ್ತ ನೋಡಿರಿ!

ಒಳ್ಳೇ ನಮೂನೆಯ ಬ್ರೀಚ್ ಲೋಡಿಂಗ್ (ಕೋವಿ) ಮತ್ತು ಮಸ್ಲ್ ಲೋಡಿಂಗ್ (ಕೇಪು) ಜೋಡು ಮತ್ತು ಒಂಟಿ ಕೊಳವಿನ ಕೋವಿಗಳೂ ಅವುಗಳಿಗೆ ಬೇಕಾದ ಉತ್ತಮ ತರಹದ ತೋಟಗಳು, ಕೇಪು ಚಿಲ್ಲು ಮತ್ತು ಮದ್ದು ಯಾವಾಗಲೂ ದೊರೆಯುವ ಈ ಹೊಸ ಅಂಗಡಿಯನ್ನು ವೀರರಾಜಪೇಟೆಗೆ ಬಂದಾಗ ಒಮ್ಮೆ ನೋಡದೆ ಹೋಗಬೇಡಿರಿ. ಹೆಚ್ಚಿನ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಬಿ. ಐ. ಉತ್ತಯ್ಯ,

ಕೋವಿ, ಮದ್ದು, ಚಿಲ್ಲು ವಗೈರೆ ವ್ಯಾಪಾರಿ,

6—3 ವೀರರಾಜಪೇಟೆ



**ಎ ಗ್ರೇಟ್ ಮಿರಾಕಲ್ ಕ್ಯೂರ್**

ಮಲೇರಿಯಾ ಇನ್‌ಫ್ಲುಯೆಂಝಾ ಸಹ ಕಚ್ಚರ. ಆಡಪ್ವರ ಕಾವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲ ಶುದ್ಧಿಯಾಗಿ ಬೆವರು ಬಂದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪ ಟಪ್ಪಾಲು ವೆಚ್ಚ ಬೇರೆ.

**ಸಾರಸಾಪರಿಲಾ.**

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವುದಕ್ಕೆ ಇದು ಖಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿಗೆ ರೂ. ೧—೦—೦ ಟಪ್ಪಾಲು ವೆಚ್ಚ ಬೇರೆ.

ಅರ್ಜುನ ಬ್ರದರ್ಸ್

12—12 ದುಬಾಶ್ ಲೇನ್

ಗಿರಗಾಂವ, ಮುಂಬಯಿ.



## ಟೇಬಲ್ ಟೈಂಪೀಸ್ ಇನಾಂ

ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಲೀವರ್ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಾದೆ. ಸರಿಯಾದ ಗಂಟೆಯನ್ನು ತೋರಿಸುವವು. ಇದರ ಕೇಸು ಬಂಗಾರಕ್ಕೆ ಸಮಾನವಾಗಿರುವುದು. ಇವಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಟೇಬಲ್ ಟೈಂಪೀಸನ್ನು ಇನಾಮಾಗಿ ಕೊಡುವೆವು. ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್ 1ಕ್ಕೆ ರೂ 6—8—0



ವಿಳಾಸ — ಲೀಗಲ್ ಟ್ರೇಡಿಂಗ್ ಕಂಪೆನಿ,

52—18 ಪೋ. ಬಾಕ್ಸ್ ನಂ 213, ಮದರಾಸು.



## ಫ್ಯಾನ್ಸಿ ಲೀವರ್ ಪಾಕೇಟ್ ವಾಚ್.

(15 ಬಹುಮಾನಗಳು ಸಹಿತ ರೂ 4—8—0)

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಿ ರಿಜಿಸ್ಟರಾಗಿದೆ

ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಜೇಬಿಗೆ ಅಡಕವಾಗಿಯೂ ಇರುವಂತೆ ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು ಮತ್ತು ಒಳಗಡೆ ಕಂಪು ಕೆತ್ತಲ್ಪಟ್ಟು ಗಿಲ್ಟ್ ಮಾಡಿರುವದು. ಧೂಳಿ ದೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ್ ಡೋಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್‌ಮೆಂಟುಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ —ಫೌಂಟನ್ ಪೇನ್ 1 ಹೇರಾಯಿಲ್ ಬಾಟಲ್ 1 ಪಚ್ಚದ ಗುಂಡಿಗಳು 4 ಪಾಕೆಟ್ ಕನ್ನಡಿ 1 ಗಡಿಯಾರದ ಸರಪಣಿ 1 ಸುವಾಸನೆ ಸೋಪು 1 ಪೇನಾ ಕತ್ತಿ 1 ರೋಲ್ಡ್ ಗೋಲ್ಡ್ ಬಂಗಾರದ ಉಂಗುರ 1 ರೋಲ್ಡ್ ಗೋಲ್ಡ್ ಬಂಗಾರದ ನೆಕ್‌ಲೇಸ್ ಎಂಬ ಕತ್ತಿನ ಹಾರ 1 ದಂತದ ಬಾಚಣಿಗೆ 1 ಕೈ ಗುಂಡಿಗಳ ಸೆಟ್ 1 ಕೈ ವಸ್ತ್ರ. ಈ 15 ಬಹುಮಾನಗಳು ಮತ್ತು ಖಾತ್ರಿಯಾದ 3 ವರುಷ ಗ್ಯಾರಂಟಿ ಸಹಿತ ಗಡಿಯಾರ 1ಕ್ಕೆ ಕ್ರಯ ರೂ 4—8—0



ವಿಳಾಸ — ವಿ. ಎಸ್. ವಾಚ್ ಕಂಪೆನಿ,

ಪೋಸ್ಟ್ ಬಾಕ್ಸ್ ನಂ 105

52—6 ಮದರಾಸು



## ಯಾರಿಗೆ ತಾನೇ ಸಂತೋಷವಾಗಲಾರದು!

ನೀವು ಕೊಡುವ ಕ್ರಯಕ್ಕಿಂತಲೂ ಎರಡರಷ್ಟು ಜಾಸ್ತಿಯಾಗಿ ಬಂದರೆ?

ಈ ಚಿತ್ರದಲ್ಲಿ ಕಾಣುವ ರಿಜಿಸ್ಟರಾದ ಟೈಂಪೀಸನ್ನು ಕೊಳ್ಳುವವರಿಗೆ 200 ರೂ ಗಳ ಕ್ರಯ ಕಾಣುವಂಥ ಒಂದು ಜೊತೆ 7 ಕಲ್ಲಿನ ಓಲೆಯನ್ನು (Earings) ಒಂದು 14 ಕ್ಯಾರೆಕ್ಟ್ ಬಂಗಾರದಂಥ ನಿಬ್ಬು ಹಾಕಿರುವ ಇಂಗ್ಲೀಷ್ ಮೇಡ್ ಫೌಂಟೆನ್ ಪೆನ್ನು ಒಂದು ಗಂಡಸರೂ ಹೆಂಗಸರೂ ಉಪಯೋಗಿಸಬಹುದಾದ ರೋಲ್ಡ್ ಗೋಲ್ಡ್ ಬಂಗಾರದ (Necklace) ಕತ್ತಿನ ಹಾರ ಒಂದು ಇನಾಮಾಗಿ ಕೊಡುವೆವು. ಒಂದನ್ನು ತರಿಸಿ ನೋಡಿರಿ. ಬೇಡವಾದರೆ ನಿಮ್ಮ ಹಣವನ್ನು ವಾಪಸುಕೊಡುವೆವು.

ಕ್ರಯ ರೂ 4—4—0 ಮಾತ್ರ, ಟಪ್ಪಾಲು ಖರ್ಚು 0—6—0

ವಿಳಾಸ — ಕೆ ನಾಥಮುನಿ ಅಂಡ್ ಸನ್ಸ್,

168 ಚೈನಾ ಬಜಾರ್ ರೋಡ್

52—18 ಮದರಾಸು.



## ಕಮ್ಮಿ ಕರೀದಿಯನ್ನು ನೆನಪಿನಲ್ಲಿಡಿ!

## ಲೋಕವಿಖ್ಯಾತವಾದ "ಜಿಗ್ ಜೇಗ್"



ಟೈಂಪೀಸ್ ಸೈಜು 8 × 1½

ಬೆಲೆ ರೂ 3 0—0 ಮಾತ್ರ

3 ವರ್ಷ ಖಾತ್ರಿಕೊಡುತ್ತೇವೆ

ಈ ಟೈಂಪೀಸು ಬಹಳ ಉತ್ತಮವಾದ ಮತ್ತು ಬಲವಾದ ಆತಿಹಾರಗಳಿಂದ ಮಾಡಲ್ಪಟ್ಟು ಚಿತ್ರದಲ್ಲಿ ತೋರಿಸಿರುವಂತೆ ಸುಂದರವಾದ ಕೆತ್ತನೆಯ ಸ್ಟೆಂಡ್‌ನೊಳಗೆ ಇರಿಸಲ್ಪಟ್ಟಿದೆ. ನೋಡಲು ಸುಂದರವಾಗಿಯೂ ಸರಿಯಾದ ಗಂಟೆಯನ್ನು ತೋರಿಸುವುದಾಗಿಯೂ ಇರುವ ಈ ಟೈಂಪೀಸನ್ನು ಅನೇಕರು ಉಪಯೋಗಿಸಿ ತೃಪ್ತಿಪೊಂದಿದ್ದಾರೆ.

ಇಂಥಾ ಟೈಂಪೀಸಿಗೆ 3—0—0 ರೂ ಮಾತ್ರ ಬೆಲೆ

ಏಜಂಟರು — ಧೈರ್ಯಲಕ್ಷ್ಮಿ ಅಂಡ್ ಕಂಪೆನಿ,

52—6 ಪೋಸ್ಟು ಬಾಕ್ಸು ನಂ 265 ಮದ್ರಾಸ



## ನೂರಾರು ಔಷಧಗಳೇಕೆ?

**ಪ್ರತ್ಯಕ್ಷ ಕಲ್ಪತರುವೇ ಔಷಧರೂಪವಾಗಿ ಅವತರಿಸಿದೆ**

# ಕಲ್ಪತರು ಮಿಶ್ರಣ

ಇಂಡಿಯಾ ಗವರ್ನಮೆಂಟಿನಲ್ಲಿ ರಿಜಿಸ್ಟರಾಗಿದೆ

ಎಷ್ಟು ಕಾಲದ ನರಳಿಕೆಯಾದರೂ ಇನ್ನೂ ಇತರ ಔಷಧಗಳಿಗೆ ಮಣಿಯದ ಮಲೇರಿಯಾ ಜ್ವರ, ಇನ್‌ಫ್ಲುಯೆಂಝಾ, ನ್ಯುಮೋನಿಯಾ ಮೊದಲಾದವುಗಳಿಂದ ಸುಮ್ಮನೆ ಮತ್ತೂ ನರಳುವಿರೇತಕ್ಕೆ? ಪ್ರತ್ಯಕ್ಷ ಕಲ್ಪತರುವೇ ಅವತಾರವೆತ್ತಿ ಬಂದಿರುವಂತೆ ನಿಮಗೆ ಆರೋಗ್ಯದಾನವನ್ನು ಮಾಡಲು ಇದೊಂದು ಸಿದ್ಧೌಷಧವು ಇದೆ ಎಂಬುದನ್ನು ಮರೆಯಬೇಡಿರಿ. ಸಾಮರ್ಥ್ಯವಂತವಾದ ಈ ಔಷಧವು ಮೊದಲನೆ ಗುಟುಕಿನ ಸೇವನೆಯೊಡನೆಯೇ ರೋಗಗಳೆಲ್ಲ ಗುಣಮುಖವಾಗುವಂತೆ ಮಾಡುವ ಶಕ್ತಿಯುಳ್ಳದಾಗಿದೆ. ಇದೊಂದು ಔಷಧವು ನಿಮ್ಮಲ್ಲಿದ್ದರೆ ಬೇರೆ ಭಯವೇಕೆ? ಯಾವತರ ಬಗೆಯ ಜ್ವರಗಳ ಮೇಲೆ ಅವರಲ್ಲೂ ಯಕೃತ್ ಪ್ಲೀಹಗಳು ವಿಕಾರ ಹೊಂದಿದಾಗಲೂ, ಜ್ವರಗಟ್ಟೆ ಬೆಳೆದು ದೇಹವು ಅಶಕ್ತಿ ಹೊಂದಿದಾಗಲೂ, ಇದೊಂದೇ ಔಷಧವು ಸಂಪೂರ್ಣ ಗುಣವನ್ನುಂಟುಮಾಡಿ, ರೋಗೋಚ್ಚಾಟನವನ್ನು ಸಾಧಿಸುವುದು ಎಂಬುದಕ್ಕೆ ಸಾವಿರಾರು ರೋಗಿಗಳು ಗುಣಹೊಂದಿ ಅದನ್ನು ಹೊಗಳುತ್ತಿರುವುದೇ ಸಾಕ್ಷಿಯಾಗಿದೆ. ಅದೂ ಅಲ್ಲದೆ ಡಾಕ್ಟರು, ವೈದ್ಯರು, ಪದವೀಧರ ಡಾಕ್ಟರು, ಕೆಮಿಸ್ಟರೇ ಮೊದಲಾದ ಔಷಧ ವ್ಯಾಪಾರಿಗಳು ಸಹ ಅದನ್ನೇ ಹೊಗಳುತ್ತಾರೆ. ಅನಾರೋಗ್ಯವನ್ನು ಹೋಗಲಾಡಿಸಿ ಆರೋಗ್ಯವನ್ನು ಪರಿವರ್ಧಿಸಿ ಕೊಡುವ ಕಲ್ಪತರು ಮಿಶ್ರಣವನ್ನು ಎಲ್ಲೆಲ್ಲಿಯೂ ಪಡೆಯಬಹುದು. ಬೇಕಾದರೆ ನಮಗೇ ಬರೆಯಿರಿ. ಮಾಹಿತಿ ಪತ್ರಗಳೂ ಸಿಕ್ಕುತ್ತವೆ. ಇದು ಅಲ್ಲದೆ ನಮ್ಮಲ್ಲಿ ಎಲ್ಲಾ ತರಹ ಆಯುರ್ವೇದೀಯ ಔಷಧಗಳು ಯಾವಾಗಲೂ ಸಿದ್ಧವಾಗಿವೆ.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ

12—6 ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,

ಮಂಗಳೂರು, (ದಕ್ಷಿಣ ಕನ್ನಡ)

# ವರ್ತಮಾನ ಸಂಗ್ರಹ.

## ಒಳದೇಶ.

ಮೈತಾಡಿ ಗ್ರಾಮದ ಪ ಐಚೆಟ್ಟಿರ ಪಂಗಣ್ಣನವರು ಕ ದಿತ್ಯವಾರ ತನ್ನ 83ನೇ ವಯಸ್ಸಿನಲ್ಲಿ ಶಿವಾಧೀನರಾ ದರು.

ಕೊಡಗು ಕೌನ್ಸಿಲಿನ ರಿಪೋರ್ಟರಾಗಿದ್ದ ಮ ವೆಂಕಟ ರಯರವರು ಸ್ಟೇಟ ಸ್ ಕಮಿಷನ ರಿಪೋರ್ಟರಾಗಿ ಹೋ ದರೆಂದು ತಿಳಿಯುತ್ತೇವೆ

ಶಾಲಾ ಇನ್ಸ್‌ಪೆಕ್ಟರಾದ ಮ ಜಿ. ಎ ಯೇಟ್ಸ್‌ರವರು 18 ಮತ್ತು 19ರಲ್ಲಿ ವೀರಾಜಪೇಟೆ ಹೈಸ್ಕೂಲನ್ನು ಇನ್ ಸ್ಪೆಕ್ಟ ಮಾಡಿದರೆಂದು ತಿಳಿದುಬರುತ್ತದೆ

ಬಿಜನ್ನೆರರ ಸಂಘದ ಕಾರ್ಯಕಾರಿ ಮಂಡಳಿಯವ ಮಿಯವ ರಾಜಕೀಯ ರಚನೆ ಪ್ರಚಾರಕ ಉಪ ಕಮಿ ಟಿ ಮೀಟಿಂಗು ಈ ತಾ 29ರಲ್ಲಿ ಸಂಘದ ಹಾಲಿನಲ್ಲಿ ನಡೆ ಯಲಿಕ್ಕಿದೆ

ಇದೇ ತಿಂಗಳ 12ನೇ ತಾರೀಖಿನಲ್ಲಿ ಮಾಸಂಕೋಡಿಯ ನಡೆದ ಆನೆಗಳ ಪೋಟದಲ್ಲಿ ಕೊಡಗು ಪಾಲಿಸ್ಟ ಇ ದ್ದಿಮ 6 ಆನೆಗಳಿದ್ದವು ಮದ್ರಾಸು ಪ್ರಾಂತ್ಯದ ಆನೆಗಳ ...

ಎಸೆಂಬ್ಲಿಯಲ್ಲಿ ಚರ್ಚಿಸಲ್ಪಡುತ್ತಿದ್ದ ಪಬ್ಲಿಕ್ ಸೇಫ್ಟಿ ಬಿ ಲ್ಲನ್ನು ಸಿಲೆಕ್ಟ ಕಮಿಟಿಯ ಚರ್ಚೆಗೆ ಎಡ ಬೇಕೆಂತ ಬಹುಮತ ದಿಂದ ತೀರ್ಮಾನವಾಯಿತು.

ಸೈಮನ್ ಕಮಿಷನನೊಂದಿಗೆ ಸಹಕರಿಸಲು ಮಾಡುವ ಮೆಂಬರುಗಳನ್ನು ಚುನಾಯಿಸಬೇಕೆಂಬ ಠರಾವು ಕೌನ್ಸಿಲ್ ಆಪ್ ಸ್ಟೇಟಿನಲ್ಲಿ ಮಂಜೂರಾಗಿದೆ

ಹಿಂದೂದೇಶದಲ್ಲಿ ವ್ಯವಸಾಯ ಅಭಿವೃದ್ಧಿಯ ವಿಷಯ ಲಿನ್ಲಿತ್‌ಗೊ ಕಮಿಷನಿನವರು ಬರೆದಿರುವ ಸಿಫಾರಸ್ಸುಗಳನ್ನು ಪ ಡನೆ ಜಾರಿಗೆ ತರಬೇಕೆಂದು ಕೌನ್ಸಿಲ್ ಆಫ್ ಸ್ಟೇಟಿನವರು ಠ ರಾವು ಪಾಸುಮಾಡಿರುವರು.

ಹೊರೆಯು ಮಧ್ಯ ತರಗತಿಯವರ ಮತ್ತು ಬಡವರ ಮೇ ಲೆ ಬೀಳುವದಾಬ ಬಗೆ ಕಾರಣವನ್ನು ಒಪ್ಪಿಕೊಂಡು ಮೊಂ ಬಾಯಿ ಸರಕಾರದವರು ಸ್ಕೂಲು ಮತ್ತು ಕಾಲೇಜುಗಳ ಫೀ ಸನ್ನು ಹೆಚ್ಚಿಸುವ ಆಲೋಚನೆಯನ್ನು ಬಿಟ್ಟಿರುವರು.

ಎಸೆಂಬ್ಲಿಯ ಅಧ್ಯಕ್ಷರನ್ನು ಲೆಜಿಸ್ಲೇಟಿವ್ ಇಲಾಖೆಯಿಂದ ಬೇರ್ಪಡಿಸಬೇಕೆಂಬ ನಾಮದಾರಿ ವಿ ಜೆ ಪಟೇಲರವರ ಸೂ ಚನೆಯನ್ನು ಆಲೋಚಿಸುವ ಬಗ್ಗೆ ವೈಸರಾಯರವರು ತಾ 1?ರಲ್ಲಿ ಮುಖಂಡರ ಒಂದು ಕಾನ್ಫರೆನ್ಸನ್ನು ನಡೆಸಿದರು

ಚಿಕ್ಕ ಪ್ರಾಯದಲ್ಲಿ ಮದುವೆ ಮಾಡುವ ಪದ್ಧತಿಯನ್ನು ನಿಲ್ಲಿಸಲು ಮ. ಸಾರ್ದಾರವರು ಎಸೆಂಬ್ಲಿಯಲ್ಲಿ ತಂದ ಬಿಲ್ಲಿನ ... ವರದಿಯನ ಎಸೆಂ

ರೈನ್ ಲ್ಯಾಂಡನ್ನು ಫ್ರೆಂಚರು ಬಿಡುವ ವಿಷಯ ಸಂ ಬಂಧವಾಗಿ ಜನಾಂಗಗಳ ಪ್ರತಿನಿಧಿಗಳ ಕೂಟದಲ್ಲಿ ಒಪ್ಪಂದ ಕ್ಕೆ ಬಂದಿರುವದಾಗಿ ಸುದ್ದಿ

ಬ್ರಿಟನ್ನಿನಲ್ಲಿ ಚಿಕ್ಕ ವಯಸ್ಸಿನಲ್ಲಿ (15 ವರ್ಷ ಪ್ರಾಯ ದ ಮೇಲೆ) ಮದ ಉಪಯೋಗಿಸುವದು ಹೆಚ್ಚಾಗುತ್ತಿದೆಯೆಂದು ಅ ಲ್ಲಿಯ ಕಳೆದ ವರ್ಷದ ಮದ್ಯಪಾನ ಲೆಕ್ಕದಿಂದ ಕಂಡು ಬರುತ್ತದೆ

ಪಶ್ಚಿಮ ಇಂಡೀಸ್‌ನಲ್ಲಿ ಬಿರುಗಾಳಿಯ ದೆಸೆಯಿಂದ ೭00 ಜನರು ಮೃತಪಟ್ಟಿರುವರು ಸುಮಾರು ಒಂದು ಮಿಲ್ಲಿಯ ಜನರಿಗೆ ಮನೆ ಮಠಗಳಿಲ್ಲದ್ದಾಗಿದೆ. ನಷ್ಟವು ವಿಪರೀತವಾ ಗಿದೆ ಬಿರುಗಾಳಿಯು ಇನ್ನೂ ನಿಂತಿರುವುದಿಲ್ಲವಂತೆ!

ಈಜಿಪ್ಟಿನ ಈಗಿನ ಸರಕಾರದ ಮೇಲೆ ಜನರಿಗೆ ದ್ವೇಷ ಹುಟ್ಟಿಸುವಂಥ ಬರವಣಿಗೆಗಳನ್ನು ಪ್ರಕಟಿಸಿದ ಕಾರಣ ದಿಂದ ಅಲ್ಲಿಯ ಪ್ರಸಿದ್ಧವಾದ ಕೈರೋದ ಆರು ಪತ್ರಿಕೆ ಗಳನ್ನು ಪ್ರಕಟಿಸಕೂಡದೆಂದು ಸರಕಾರದವರು ಹುಕುಂ ಮಾ ಡಿರುವರು

ಲೀಗ್ ಆಫ್ ನೇಶನ್ಸಿನ ಕೌನ್ಸಿಲಿನಲ್ಲಿ ಚೈನಾದ ಪ್ರತಿನಿಧಿಗೆ ಪುನಃ ಮೆಂಬರುತನ ದೊರೆಯದ್ದರಿಂದ ಲೀಗ್ ಆಫ್ ನೇಶನ್ಸಿನಿಂದಲೇ ತನ್ನ ಪ್ರತಿನಿಧಿಯನ್ನು ವಾಪಸು ಕರೆಸಬೇಕೆಂದು ಆ ಪ್ರತಿನಿಧಿಯು ಚೈನಾದ ಸರಕಾರಕ್ಕೆ ಬರೆದಿರುವರೆಂದು ವರ್ತಮಾನ



### ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು

ಕೊಡಗು ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ಈ ತಾ 14ರಲ್ಲಿ ಮಧ್ಯಾಹ್ನ 2 ಗಂಟೆಗೆ ಕೌನ್ಸಿಲ್ ಹಾಲಿನಲ್ಲಿ ಬೋ ರ್ಡಿನ ಪ್ರೆಸಿಡೆಂಟರಾದ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯಿ ತು ಮೆಂಬರುಗಳೆಲ್ಲರೂ ಹಾಜರಿದ್ದರು ಕಳೆದ ಮೀಟಿಂ ಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು ನಂತರ ಕಾ ರ್ಯಕ್ರಮ ಪಟ್ಟಿಯ ಪ್ರಕಾರ ಈ ಕೆಳಗಿನ ವಿಷಯಗಳ ಮೇ ಲೆ ಚರ್ಚೆ ನಡೆಯಿತು

1 ಸೋಮವಾರ ಪೇಟೆಯಿಂದ ಹೊರ ಹೊಳೆಗೆ ಗಾ ಡಿ ಹೋಗಲು ಮಾಡಬೇಕಾದ ರಸ್ತೆಯು ('ವಿಲೇಜ್ ಕಮ್ಯೂ ನಿಕೇಶನ್') ಗ್ರಾಮಾಂತರ ರಸ್ತೆಗಳ ಪಟ್ಟಿಗೆ ಸೇರಿಸಲ್ಪಡಬೇ ಕೆಂಬದು ಮಂಜೂರಾಯಿತ

2 ಲೋಕಲ್ ಫಂಡ್ ರಸ್ತೆಗಳ ರಿಪೇರಿ ಕೆಲಸವನ್ನು ಪಾರುಪತ್ಯಗಾರರು ಆಯಾ ನಾಡಿನ ಡಿ ಬೋರ್ಡು ಮೆಂಬರ ರ ಅಭಿಪ್ರಾಯ ತೆಗೆದುಕೊಂಡು ಕಂಟ್ರಾಕ್ಟು ಕೊಡತಕ್ಕದ್ದು ಎಂಬ ಮ ಕ ಕುಶಾಲಪ್ಪನವರ ಠರಾವಿನ ಮೇಲೆ ಚರ್ಚೆನಡೆ ದು, ಸಾಧ್ಯವಾದಷ್ಟು ಮಟ್ಟಿಗೆ ಹೀಗೆ ಮಾಡಲಾಗುವದೆಂದು ಒಪ್ಪಲಾಯಿತು.

3 ಶನಿವಾರಸಂತೆಯ ಮಾರ್ನಾಡಿನಲ್ಲಿ ಆಸ್ಪತ್ರೆಯ ನ್ನು ಇಡುವ ವಿಷಯ ಚರ್ಚಿಸಿದರೂ ಇದನ್ನು ತೀರ್ಮಾನಿಸ ಲು ಬರುವ ಬಜೆಟ್ ಮೀಟಿಂಗಿಗೆ ಇಡಲಾಯಿತು

4 ಕಾಗೋಡದಲ್ಲಿ ವನಗಳ ದೊಡ್ಡಿಯನ್ನು ಇಡುವ ವಿ ಷಯ ಅದರ ಖರ್ಚಿನ ಅಂದಾಜು ಪಟ್ಟಿಯು ತಯಾರಾಗದ್ದ ರಿಂದ ಬರುವ ಮೀಟಿಂಗಿಗೆ ಇಡಲಾಯಿತು

5 ಸ್ಯಾನಿಟರಿ ಇನ್ಸ್‌ಪೆಕ್ಟರವರ ಸಂಬಳವು 1928ನೇ ಏ ಪ್ರಿಲ್ ತಿಂಗಳಿಂದ ರೂ 75—5—100ಕ್ಕೆ ಏರಿಸಲ್ಪಟ್ಟಿತು

6 ಗೋಣಿಕೊಪ್ಪಲಿನಲ್ಲಿ ಪೇಟೆಗೆ ಎರಡು ದೀಪ ಇಡಲು ಮಂಜೂರಾಯಿತು

7 ಎಕೌಂಟೆಂಟ್ ಜನರಲವರು ಆಕ್ಷೇಪಿಸಿದ ವೀ ರಾಜಪೇಟೆ ಮತ್ತು ಮಡಿಕೇರಿ ಆಸ್ಪತ್ರೆಗಳಿಗೆ 1927—28ರಲ್ಲಿ ಬೋರ್ಡಿನಿಂದ ಕೊಟ್ಟ 500 ರೂಪಾಯಿಯನ್ನು ಮಂಜೂರು ಮಾಡಲಾಯಿತು

8 ಮೇಲಿನ ಆಸ್ಪತ್ರೆಗಳಿಗೆ 19-8—29ರಲ್ಲಿ ಕೊಡಬೇ ಕಾದ 500 ರೂಪಾಯಿಯೂ ಮಂಜೂರು ಮಾಡಲಾಯಿತು

ಮ. ಅಪ್ಪನೆರವಂಡ ಮಾದಪ್ಪನವರ ಠರಾವುಗಳು

9 ಶ್ರೀಮಂಗಲ ಶಾಲೆಯ 5ನೇ ಸ್ಟ್ಯಾಂಡರ್ಡಿಗೆ ಒಬ್ಬ ಅಸಿಸ್ಟಾಂಟ್ ಮಾಸ್ಟರನ್ನು ನೇಮಿಸಬೇಕೆಂಬುದು ಬೋರ್ಡಿನ ವಿದ್ಯಾ ಕಮಿಟಿಯ ತೀರ್ಮಾನಕ್ಕೆ ಬಿಡಲಾಯಿತು

10 ಹುದಿಕೇರಿ ಶಾಲೆಗೆ ಹೆಚ್ಚಿಗೆ ಇಬ್ಬರು ಅಸಿಸ್ಟಾಂಟ್ ಮಾಸ್ಟರುಗಳನ್ನು ನೇಮಿಸಬೇಕೆಂಬ ವಿಷಯವೂ ವಿದ್ಯಾ ಕಮಿ ಟಿಗೆ ಬಿಡಲಾಯಿತು.

11 ಹುದಿಕೇರಿ ಅಥವಾ ಬಾಳೆಲೆಯಲ್ಲಿ ಒಂದು ಆಯು ರ್ವೇದ ವೈದ್ಯ ಶಾಲೆಯನ್ನು ಇಡಬೇಕೆಂಬ ಠರಾವಿಗೆ ಅನು ಮೋದಕರಿಲ್ಲದೆ ಚರ್ಚಿಸಲ್ಪಡಲಿಲ್ಲ

12 ತೋಟಗಳ ಸುಪರಿಂಟೆಂಡೆಂಟರು ಮತ್ತು ಮೇನೇ ಜರುಗಳಿಂದ ಮನೆ ಕಂದಾಯ ವಸೂಲಿ ಮಾಡಬೇಕೆಂಬ ದಕ್ಕೂ ಅನುಮೋದಕರಿರಲಿಲ್ಲ

13 ವಿಷಸರ್ಪದ ಏಡಕಾವಣೆಯನ್ನು ಸುವರಿಸಿ ಮನೆ ಕಂದಾಯವನ್ನು ಒಡಲಾಯಿಸಬೇಕೆಂಬ ಸೂಚನೆಯು 12ನೇ ಠರಾವು ಪಾಸಾಗದ್ದರಿಂದ ಚರ್ಚಿಸಲ್ಪಡಲಿಲ್ಲ

14 ಮರೆನಾಡು ಹೊಳೆಗೆ ಬೇಸಿಗೆ ಕಾಲದ ಸೇತುವೆ (ಕಾಸ್ವ) ಮತ್ತು ತೂಗುವ ಸೇತುವೆಗಳನ್ನು ಕಟ್ಟಿಸಲು 20000 ರೂ ಮಂಜೂರು ಮಾಡಬೇಕೆಂಬದಕ್ಕೆ ಬೋರ್ಡಿನಲ್ಲಿ ಹಣ ವಿಲ್ಲವೆಂದು ತೀರ್ಮಾನವಾಯಿತು.

15 ಹುದಿಕೇರಿ ಶಾಲೆಗೆ ನೆಲಹಂಚು ಹಾಕಲು 1200ರೂ. ಮಂಜೂರು ಮಾಡಬೇಕೆಂಬ ಸೂಚನೆಯು ಬಜೆಟ್ ಮೀಟಿಂ ಗಿಗೆ ಬಿಡಲಾಯಿತು

16 ಶಾಲಾ ಪಂಚಾಯತರನ್ನು 5 ವರ್ಷಕ್ಕೊಮ್ಮೆ ಚುನಾ ಯಿಸತಕ್ಕವರು ಮತ್ತು ಗ್ರಾಮಸ್ಥರಿಗೆ ಇರಬೇಕೆಂಬ ಠರಾವು ಚ ರ್ಚಿಸಲ್ಪಟ್ಟು ತತ್ಕಾಲ ಅದು ಕಷ್ಟವಾದುದರಿಂದ ಇನ್ನು ಮೂ ರು ವರ್ಷಗಳ ವರೆಗೆ ಅವರನ್ನು ನೇಮಿಸುವಂತೆಯೇ ತೀರ್ಮಾ ನವಾಯಿತು

17 ಇಂಪೀರಿಯಲ್ ಸರಕಾರವು ಪ್ರಾಂತೀಕ ಸರ್ಕಾರ ದ ವಾರ್ಷಿಕ ವಂತಿಗೆ 12000 ರೂಪಾಯಿಗಳನ್ನು ಕಡಿಮೆ ಮಾಡಿ ರುವದರಿಂದ ಪ್ರಾಂತೀಕ ಸರ್ಕಾರದಿಂದ ಹೆಚ್ಚಿಗೆ 5000 ರೂ ನ್ನು ಗ್ರಾಂಟ್ ಕೇಳಬೇಕೆಂಬ ವಿಷಯವು ಚರ್ಚಿಸಲ್ಪಟ್ಟಾಗ ಪ್ರಾ ಸರ್ಕಾರದಲ್ಲಿ ಹಣವಿಲ್ಲವೆಂದು ತಿಳಿದು ಬಾಕಿ ಮಾಡ ಲಾಯಿತು

18 ಈ ಬೋರ್ಡಿಗೆ ತನ್ನ ಅಧ್ಯಕ್ಷರನ್ನು ಚುನಾಯಿಸಿ ಕೊಳ್ಳುವ ಹಕ್ಕಿರಬೇಕು ಎಂಬುದು ಮಂಜೂರಾಗಲಿಲ್ಲ

19 ಅಮ್ಮತ್ತಿ—ಮಾರ್ನಾಡು ರಸ್ತೆಯನ್ನು ಪ್ರಾಂತೀಕ ಸ ರ್ಕಾರಕ್ಕೆ ವಹಿಸಬೇಕು ಎಂಬ ಸೂಚನೆಯು ಮಂಜೂರಾಗಲಿಲ್ಲ

20 ಎಲಿಮೆಂಟರಿ ಶಾಲೆಗಳ ವಿದ್ಯಾಭ್ಯಾಸದ ಕ್ರಮ ವ ನ್ನು ನಿಶ್ಚೈಸಲು ಒಂದು ಟೆಕ್ಸ್ಟ್ ಬುಕ್ ಕಮಿಟಿಯನ್ನು ನೇ ಮಿಸತಕ್ಕದ್ದು ಎಂಬದ ಪಾಸಾಗಲಿಲ್ಲ

21. ಕೊಡಗಿನಲ್ಲಿ ಖಡ್ಡಾಯವಾಗಿ ಪ್ರಾಥಮಿಕ ಶಿಕ್ಷಣ ಕೊಡುವದು ಸಾಧ್ಯವೋ ಎಂಬದನ್ನು ವಿಚಾರಿಸಲು ಒಂದ ಕಮಿಟಿಯಾಗಬೇಕು ಎಂಬ ಸೂಚನೆಯು ಚರ್ಚೆಗೆ ಬರದೆ ವಾಪಾಸು ತೆಗೆದುಕೊಳ್ಳಲಾಯಿತು

22 ಬೋರ್ಡಿನ ಆಫೀಸು ಜವಾನನಿಗೂ ಸ್ಯಾನಿಟರಿ ಇನ್ಸ್‌ಪೆಕ್ಟರವರ ಜವಾನನಿಗೂ 10—8—0 ಕ್ರಯದ ಒಂ ದೊಂದು ಕಂಬಳಿ (ವಾಟರ್ ಪ್ರೂಫ್) ಕೋಟನ್ನು ಕೊಡುವಂತೆ ಮಂಜೂರಾಯಿತು.

23 ಎಕೌಂಟೆಂಟ್ ಜನರಲ್‌ರವರ 1927—28ರ ಇ ನ್ಸ್‌ಪೆಕ್ಷನ್ ಕರಾರುಗಳು ಓದಲಾದವು.

24 ತನ್ನ ಗತಿಸಿದ ತಾಯಿಯವರ ಹೆಸರಿನಲ್ಲಿ ಕಟ್ಟಿಸಲ್ಪಟ್ಟಿ ರುವ ಮಡಿಕೇರಿ ಸಿದ್ಧಾಪುರ ರಸ್ತೆಯ 10ನೇ ಮೈಲು ಶಾಲೆ ಯಲ್ಲಿ ಅವರ ಜ್ಞಾಪಕಾರ್ಥವಾಗಿ ಬೋರ್ಡಿನ ಖರ್ಚಿನಿಂದ ಒಂದು ಶಿಲಾಶಾಸನವನ್ನಿಡಬೇಕೆಂದು ಮ ಕೊಂಗೆಟ್ಟಿರ ಅ ಪ್ಪಯ್ಯನವರು ಕೇಳಿಕೊಂಡ ಮೇರೆ ಅದು ಮಂಜೂರು ಮಾ ಡಲಾಯಿತು

25 1929ನೇ ಏಪ್ರಿಲಿನಿಂದ ಮೋಟಾರು ಬಸ್ಸುಗಳ ಮತ್ತು ಮೋಟಾರು ಕಾರುಗಳ ಟೋಲ್ ಫೀಸನ್ನು ರೂ 2 ಮ ತ್ತು 1-8-0 ಗೆ ಏರಿಸಬೇಕೆಂಬ ಠರಾವು ಸೂಚಕರಾದ ಮ ಯ ಸ್ ಯನ್ ಪಾಮುಕೆಟ್ಟಿಯವರಿಂದ ವಾಪಸು ತೆಗೆಯಲ್ಪಟ್ಟಿತು

26 ಕೆಲವು ಪೇಟೆಗಳಲ್ಲಿ ಬೀದಿ ದೀಪಗಳನ್ನು ಮಳೆಗಾ ಲದಲ್ಲಿ ಅಂದರೆ ಜೂನ್‌ನಿಂದ ಅಕ್ಟೋಬರು ವರೆಗೆ ಈಗಿರು ವಂತೆ ತಿಂಗಳಿಗೆ 15 ರಾತ್ರಿಗಳ ಬದಲು ಎಲ್ಲಾ ರಾತ್ರಿಗಳ ಲ್ಲೂ ಉರಿಸುವಂತೆ ತೀರ್ಮಾನವಾಯಿತು

### ಸಾರ್ವಜನಿಕ ಪತ್ರ.

ಪಾಡಿನಾಲ್ಕುನಾಡು ಸಹಕಾರಿ ಸಂಘಗಳ ಯೂನಿಯ ನ್ ಕೂಟದವರ ಕಮಿಟಿ ಮೀಟಿಂಗು ತಾರೀಕು 1—9—28ರ ಲ್ಲು ನಡೆದು, ಸಂಘಗಳ ಏಳಿಗೆಗೆ ಎಲ್ಲಾ ಪ್ರೆಸಿಡೆಂಟರುಗಳೂ, ಸೆಕ್ರೆಟರಿಗಳೂ ಕಾರ್ಯನಿರ್ವಾಹಕ ಮಂಡಳಿಯ ಮೆಂಬರುಗ ಮತ್ತು ಕಾಯಿಸ್ ಪಡುವ ಶೇರುದಾರರೂ ಶೇರುದಾರರಲ್ಲ ದ ಇತರ ಯುವಕರೂ ಸಹ ಸಹಕಾರಿ ಧೈಲಾ, ರೂಲ್ಸ್ ಲೆಕ್ಕ ಪತ್ರಗಳ ಇಡುವ ವಗೈರೆ ಸಂಗತಿಯನ್ನು ಕಲಿಯಲೋಸುಗ, ಈಗ ಸಂಘಗಳಲ್ಲು ಲೇವಾದೇವಿಗಳು ಇಲ್ಲದ ಸಮಯವಾದ ರಿಂದ ಸಹಕಾರಿ ಸಂಘಗಳ ಸುಪರ್ ವೈಜರು ಸಂಘಗಳನ್ನು ಸಂದರ್ಶಿಸುವ ಅವಶ್ಯ ಇಲ್ಲವೆಂತಲೂ ತತ್ಕಾಲ ಪ್ರತಿಮಾಸ 1ನೇ ತಾರೀಕಿನಿಂದ 5ನೇ ತಾರೀಕಿನವರೆಗೆ ಕಕ್ಕಬೆಯಲ್ಲೂ 6ನೇ ತಾರೀಕಿನಿಂದ 11ನೇ ತಾರೀಕಿನ ವರೆಗೆ ನಾಪೋಕ್ಲಿನಲ್ಲೂ 12ನೇ ತಾರೀಕಿನಿಂದ 15ನೇ ತಾರೀಕಿನ ವರೆಗೆ ನೆಲಜಿ ಅಂಬ ಲದಲ್ಲೂ ಸುಪರ್‌ವೈಜರವರು ಬೋಧಿಸಬೇಕೆಂದೂ ತೀರ್ಮಾ ನಿಸಲಾಗಿದೆ ಕಾಯಿಷ್ ಇರುವವರು ಎಲ್ಲಾ ಜಾಗಗಳಿಗೂ ಹೋಗಬಹುದು

... ವನು ನೋಡಿ ಓ ಮೋ, ಉರಿಯುಂತ ಮುದ್ದಪ್ಪನವರು ...ಗೆ ಮಪ್ಲರ್ ಕಟ್ಟಿದಂತೆ ನೀವು ಸಹ ಕಟ್ಟಿದ್ದೀರೋ? ... ಹೇಳದ ಆಸಲೆ ಕಪಿಯು ಗುಂಡಿನಿಂದ ಹೊಡೆದಂ ...ರದಿಂದ ಒದ್ದು ಅಲ್ಲಿಯೇ ಸತ್ತು ಹೋಯಿತೆಂದು ಒಂ ...ತ್ತು

### ಹಿಂದೂದೇಶ.

...ಲ ಭಾರತ ಪ್ರಾಂತೀಕ ಸಹಕಾರ ಸಂಘಗಳ ಕಾನ್ ... ಈ ತಾ 25ರಲ್ಲಿ ಸಿಮ್ಲಾದಲ್ಲಿ ನಡೆಯುವದು.

ಎಸೆಂಬ್ಲಿಯ ಅಧ್ಯಕ್ಷರಾಗಿರುವ ಶ್ರೀ ಪಟೇಲರನ್ನು ...ಬರದ ಪತ್ರಿಕೆಗಳ ... ದ ... ...ಗ ಸರ್ಕಾರಿ ಪ್ರಕಟಣೆ.

ಎಸೆಂಬ್ಲಿಯ ಅಧ್ಯಕ್ಷರು ಇಂಡಿಯ ಸರಕಾರದ ಉದ್ಯೋ ಗಿಯನ್ನು ಕರೆದರೆಂದು ಅವರನ್ನು ಅಂದಿನಿಂದಲೇ ದೂರುವ ಹಾಗೂ ಅವರಲ್ಲಿ ಪಕ್ಷಪಾತವನ್ನು ಪ್ರಕಟಿಸುವ ಬಾತ್ಮಿಗಳು ವಿಶ್ವಾಸಾರ್ಹತೆಯ ಪತ್ರಿಕೆಗಳಲ್ಲಿ ಹರಡುತ್ತಿವೆ ವಿಶ್ವಾಸನೀಯ ರ ಪತ್ರಿಕೆಯು ಈ ಬಾತ್ಮಿಗಳಿಗೆ ಸರ್ಕಾರದ ಪ್ರೋತ್ಸಾಹವಿದೆ ಎನ್ನುತ್ತಿದೆ ಈ ಕುರಿತು ಎಸೆಂಬ್ಲಿಯಲ್ಲಿ ತರ್ಕವಾಗಿ ಅಂ ಥ ಬಾತ್ಮಿ ಬರದವರ ವಿಷಯ ಬರುವ ವಾರ ಆಲೋಚಿಸಬಹು ದಾಗಿ ಅಧ್ಯಕ್ಷರು ನಿಶ್ಚೈಸುವರು.

### ವಿದೇಶ.

ಮ ಕೆಲ್ಲಾಗ್‌ರವರ ಶಾಂತಿ ಕರಾರು 31 ಜನಾಂಗಗಳಿಂದ ಸಹಿ ಮಾಡಲ್ಪಟ್ಟಿದೆ.

... ತಿಳಿದ ಗುಣಗಳಿಗೆ ಗೊತ್ತಿದ್ದವೆಂದೂ, ಆಗಿನ ಹುಡುಗರು ಬ್ರ ಹ್ಮಚರ್ಯವನ್ನು ಕೈಕೊಂಡು ಉತ್ತಮ ಗುಣಗಳುಳ್ಳವರಾಗಿ ಬ್ರಹ್ಮ ವಿದ್ಯೆಯನ್ನು ಕಲಿತು ತಮ್ಮ ಇಚ್ಛಾನುಸಾರವಾಗಿ ಗೃ ಹಿಗಳು ಇಲ್ಲವೇ ಸನ್ಯಾಸಿಗಳಾಗುತ್ತಿದ್ದರೆಂದರು ವಿ ದ್ಯಾಸವು ಧರ್ಮಕ್ಕೆ ಸಹಾಯವಾಗುತ್ತದಲ್ಲದೆ ಅದಕ್ಕೆ ವಿ ರೋಧಿಯಾಗಲಾರದೆಂಬುದನ್ನು ಡಾ. ಜಗದೀಶ ಚಂದ್ರ ಬೋ ಸರವರ ಶೋಧನೆಗಳ ವರ್ಣನೆಯಿಂದ ವೃಷ್ಟೀಕರಿಸಿ ನಮ್ಮ ಪೂರ್ವಜರ ಮಾನವನ್ನು ನಾವು ಕಾಪಾಡಬೇಕಾದರೆ ನ ಮ್ಮ ಯುವಕರು ಯೋಗ್ಯ ಬ್ರಹ್ಮಚಾರಿಗಳಾಗಿ ಮಾನಸಿಕ ... ಗೆ ಕೊಟ್ಟಷ್ಟೇ ಲಕ್ಷ್ಯವನ್ನು ಶಾರೀರಕ ಬೆಳವಣಿ... ಕೊಡುವುದಗತ್ಯವೆಂದು ಹೇಳಿ ಭಾಷಣವನ್ನು ಮುಕ್ತಾ ಯಿಸಿದರು.

**ಆಲ್ ಇಂಡಿಯಾ ಮ್ಯೂಚ್ಯುಯಲ್ ಬಿಲ್ಡಿಂಗ್ ಅಂಡ್ ಪ್ರವರ್ ಹೌಸಸ್ ಅಸೋಸಿಯೇಸನ್ ಲಿಮಿಟೆಡ್.**

ಬ್ರ್ಯಾಂಚ್ ಆಫೀಸ್ ಮಡಿಕೇರಿ, (ಕೊಡಗು).

**ನೋಟೀಸು.**

ಕೊಡಗು ದೇಶದಲ್ಲಿರತಕ್ಕ ಮೇಲ್ಕಂಡ ಸಂಘದ ಷೇರು ಮತ್ತು ಬಾಂಡು ಹೋಲ್ಡರುಗಳ ಮೀಟಿಂಗ್ ಮಡಿಕೇರಿಯಲ್ಲಿರುವ ಸಂಘದ ಬ್ರ್ಯಾಂಚ್ ಆಫೀಸಿನಲ್ಲಿ ಇದೇ ತಿಂಗಳು 30ನೇ ತಾರೀಖು ಭಾನುವಾರ 2 ಗಂಟೆಗೆ ಸರಿಯಾಗಿ ಶೇರ್ ಮತ್ತು ಬಾಂಡ್ ಹೋಲ್ಡರುಗಳಿಗೆ ಸ್ಥಿರ ಸ್ವತ್ತುಗಳ ಆಧಾರದ ಮೇಲೆ ಸಾಲವನ್ನು ಕೊಡತಕ್ಕ ವಿಷಯವನ್ನು ತೀರ್ಮಾನಿಸುವುದಕ್ಕೆ ನಡೆಯುತ್ತೆ. ಆದ್ದರಿಂದ ಸರ್ವರೂ ಆ ಕಾಲಕ್ಕೆ ಸರಿಯಾಗಿ ಬರತಕ್ಕದ್ದು.

ಮಡಿಕೇರಿ, (Sd) ಟಿ. ಎ. ಕುಪ್ಪಸ್ವಾಮಿ ಪಿಳ್ಳೆ,

ತಾ. 10—9—29. ಚೀಫ್ ಏಜಂಟ್. 2—2.

**ಏಕೆ ನರಳುತ್ತೀರಿ?**

ಪ್ರಾಚೀನ ಋಷಿಗಳಿಂದ ಪ್ರಣೀತವಾದ ಆಯುರಾರೋಗ್ಯೈಶ್ವರ್ಯವರ್ಧಕವಾದ ಆರೋಗ್ಯವಿಧಿ

**ಟೇಬಲ್ ಟೈಂಪೀಸ್ ಇನಾಂ.**

ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಲೀವರ್ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಸರಿಯಾದ ಗಂಟೆಯನ್ನು ತೋರಿಸುವವು. ಇದರ ಕೇಸು ಭಂಗಾರಕ್ಕೆ ಸರಿಸಮನಾಗಿರುವುದು ಇವಕ್ಕೆ



ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಟೇಬಲ್ ಟೈಂಪೀಸನ್ನು ಇನಾಮಾಗಿ ಕೊಡುವೆವು. ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್ 1ಕ್ಕೆ ರೂ. 6—8—0.

ವಿಳಾಸ — ಲೀಗಲ್ ಟ್ರೇಡಿಂಗ್ ಕಂಪೆನಿ,

52—18 ಪೊ. ಬಾಕ್ಸ್ ನಂ. 243, ಮದರಾಸು.

**ಫ್ಯಾನ್ಸಿ ಲೀವರ್ ಪಾಕೇಟ್ ವಾಚ್.**

(15 ಬಹುಮಾನಗಳು ಸಹಿತ ರೂ. 4—8—0)

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಿ ...

**ಯಾರಿಗೆ ತಾನೇ ಸಂತೋಷವಾಗಲಾರದು!**

ನೀವು ಕೊಡುವ ಕ್ರಯಕ್ಕಿಂತಲೂ ಎರಡರಷ್ಟು ಜಾಸ್ತಿಯಾಗಿ ಬಂದರೆ?

ಈ ಚಿತ್ರದಲ್ಲಿ ಕಾಣುವ ರಿಜಿಸ್ಟರಾದ ಟೈಂಪೀಸನ್ನು ಕೊಳ್ಳುವವರಿಗೆ 200 ರೂ. ಗಳ ಕ್ರಯ ಕಾಣುವಂಥ ಒಂದು ಜೊತೆ 7 ಕಲ್ಲಿನ ಓಲೆಯನ್ನು (Earings) ಒಂದು 14 ಕ್ಯಾರೆಟ್ಟಿನ ಭಂಗಾರದಂಥ ನಿಬ್ಬು ಹಾಕಿರುವ ಇಂಗ್ಲಿಷ್

ಮೇಡ್ ಫೌಂಟೆನ್ ಪೇನಾ ಒಂದು, ಗಂಡಸರೂ, ಹೆಂಗಸರೂ ಉಪಯೋಗಿಸಬಹುದಾದ ರೋಲ್ಡ್ ಗೋಲ್ಡ್ ಭಂಗಾರದ (Necklace) ಕತ್ತಿನ ಹಾರ ಒಂದು ಇನಾಮಾಗಿ ಕೊಡುವೆವು. ಒಂದನ್ನು ತರಿಸಿ ನೋಡಿರಿ. ಬೇಡವಾದರೆ ನಿಮ್ಮ ಹಣವನ್ನು ವಾಪಸುಕೊಡುವೆವು

ಕ್ರಯ ರೂ. 4—4—0 ಮಾತ್ರ. ಟಪ್ಪಾಲು ಖರ್ಚು 0—6—0.

ವಿಳಾಸ — ಕೆ. ನಾಥಮುನಿ ಅಂಡ್ ಸನ್ಸ್,

168. ಚೈನಾ ಬಜಾರ್ ರೋಡ್,

52—18 ಮದರಾಸು.



**'ಕೊಡಗು' ಕಂಪೆನಿಯ ಡೈರೆಕ್ಟರುಗಳ ಮೀಟಿಂಗು.**

ಇದೇ ತಾರೀಕು 15ನೇ ಶನಿವಾರ ದಿನ ವೀರಾಜಪೇಟೆ ಒಡ್ಡರ್ ಸ್ಟೋರಿನಲ್ಲಿ 'ಕೊಡಗು' ಕಂಪೆನಿಯ ಡೈರೆಕ್ಟರುಗಳ ಮೀಟಿಂಗೊಂದು ನಡೆಯಿತು. ಸಿ. ಸಿ ಯಸ್ ಉತ್ತಯ್ಯನವರು ಅಧ್ಯಕ್ಷರಾಗಿದ್ದರು. ಈ ಕೆಳಗಿನ ಮಹನೀಯರು ಹಾಜರಿದ್ದರು. ಮೆ ಗಳು. ಡಿ. ಟಿ ಕುಶಾಲಪ್ಪನವರು, ಕೆ. ಪಿ ಚಿಣ್ಣಪ್ಪನವರು, ಪಿ ಬಿ ಗಣಪಯ್ಯನವರ, ಐ. ಪಿ ಮೊಡಪ್ಪನವರು, ಕೆ. ಸಿ ಕರುಂಬಯ್ಯನವರು, ಬಿ ಎ ಮಾದಪ್ಪನವರು.

(1) ಕಳೆದ ಮೀಟಿಂಗಿನ ವಿವರವು ಓದಿ ಒಪ್ಪಲಾಯಿತು

(2) ಜೂನ್, ಜುಲಾಯಿ ಮತ್ತು ಆಗೋಸ್ತು ತಿಂಗಳುಗಳ ಲೆಖ್ಖವನ್ನು ಓದಿ ಅಂಗೀಕರಿಸಲಾಯಿತು.

(3) ಕಂಪೆನಿಯ ಜನರಲ್ ಮೀಟಿಂಗನ್ನು ನವಂಬರ್ ತಿಂಗಳ 16ನೇ ತಾರೀಕಿನಲ್ಲಿ ಮಧ್ಯಾಹ್ನ 1 ಗಂಟೆಗ ವೀರಾಜಪೇಟೆ ತಾಲೋಕು ಕಚ್ಚೇರಿ ಒಳೀ ಮೈದಾನದಲ್ಲಿ ಜರುಗಿಸುವಂತೆ ತೀರ್ಮಾನವಾಯಿತು.

(4) ಸಿವಿಲ್ ಸರ್ಜನರು ವೀರಾಜಪೇಟೆ ಆಸ್ಪತ್ರೆಯ ಕಾಂಪೌಂಡರುಗಳಿಗೆ, ಕೊಡಗು ಪತ್ರಿಕೆಯನ್ನು ಚಾರ್ಜು ಇಲ್ಲದೆ ಕಳುಹಿಸಬೇಕೆಂದು ಬರಕೊಂಡ ಪತ್ರವನ್ನು ಓದಿ, ಸಂತೋಷದಿಂದ ಪತ್ರಿಕೆಯನ್ನು ಕಳುಹಿಸಬಹುದೆಂದು ತೀರ್ಮಾನವಾಯಿತು.

(5) 1927—28ನೇ ವರ್ಷದ ಲೆಖ್ಖವನ್ನು ಆಡಿಟ್ ಮಾಡಲು, ಆಡಿಟರ್ ಮೆ ಬಿ ತಿಮ್ಮಯ್ಯನವರಿಗೆ ಕೊಡಬೇಕೆಂದು ತೀರ್ಮಾನವಾಯಿತು.

(6) ಮೆ ಪಂಗಂಡ ಕುಟ್ಟಪ್ಪನವರು, ತನ್ನನ್ನು ದಕ್ಷಿಣ ಕೊಡಗಿನ ಏಜೆಂಟರನ್ನಾಗಿ ನೇಮಿಸಬೇಕೆಂದು ಬರೆದ ಅರ್ಜಿಯನ್ನು ಓದಲಾಯಿತು. ಏಜೆಂಟರ ಕರಾರುಗಳಿಗೆ ಒಳಪಟ್ಟು ಅವರನ್ನು ಏಜೆಂಟರನ್ನಾಗಿ ನೇಮಿಸಬಹುದೆಂದು ತೀರ್ಮಾನವಾಯಿತು.

(7) ಬಿದ್ದಾಟಂಡ ಕುಟ್ಟಪ್ಪನ ಮೋನೇಜರಾದ ಮೆ. ಯಂ ಯಸ್ ನೋಮಯ್ಯನವರು ತಾನು ಸ್ವಂತವಾಗಿ ಕೊಡಗು ಪತ್ರಿಕೆಯ ಚಂದಾ ಹಣವನ್ನು ವಸೂಲಿ ಮಾಡುತ್ತೇನಂತಲೂ, ಜಾಹೀರಾತುಗಳನ್ನು ಮತ್ತು ಇತರ ಪ್ರಿಂಟಿಂಗ್ ಕೆಲಸಗಳನ್ನು ಹೊಂದಿಸಿಕೊಡುತ್ತೇನೆಂತಲೂ, ಬರಕೊಂಡ ಪತ್ರವು ವಂದನಾಪೂರ್ವಕವಾಗಿ ಅಂಗೀಕರಿಸಲಾಯಿತು.

ಈ ಕಾರ್ಯಗಳೆಲ್ಲವೂ ಮುಗಿದನಂತರ ಮೀಟಿಂಗು ಬರಖಾಸ್ತಾಯಿತು. (ಅಧ್ಯಕ್ಷ) ಸಿ ಯಸ್ ಉತ್ತಯ್ಯ.

ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಲು ಸುಸಮಯ.

**ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ** (ಮಾಸ ಪುಸ್ತಕ)

**(ಎರಡನೆಯ ವರ್ಷಾರಂಭವಾಗಿದೆ.)**

'ಹರಿದಾಸ ಸೇವಾ ಸಮಿತಿ' ಯವರಿಂದ ಬಹಳ ಶುದ್ಧ ರೀತಿಯಲ್ಲಿ ಪರಿಶೋಧಿಸಲ್ಪಟ್ಟು ಮಾಸ ಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಲಿರುವ 'ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ' ಯನ್ನು ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿರಿ! ಇದರಲ್ಲಿ ಜಗದ್ವಂದ್ಯರಾದ ಶ್ರೀ ಪುರಂದರದಾಸರು, ಶ್ರೀ ಕನಕದಾಸರೇ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ನುಡಿದ ದಿವ್ಯ ಭಗವನ್ನಾಮ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ಕ್ರೌನ್ ಅಷ್ಟಪತ್ರದ ನಾಲ್ವತ್ತು ಪುಟಗಳ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಲಿವೆ. ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೆ ಹಾಸಲು ಉಚಿತ) ಸಾಮಾನ್ಯ ಪ್ರತಿ ರೂ. ೧—೪—೦ ಉತ್ತಮ ಪ್ರತಿ ರೂ ೨ ೪ ೦

**ಪ್ರಥಮ ಸಂಪುಟದ ಬೈಂಡಾದ ಪ್ರತಿಗಳು.**

| | ಸಾದಾ ಬೈಂಡು | ದಪ್ಪ ರಟ್ಟಿನ ಬೈಂಡು | ಕಿತ್ತಾನಾರು ಬೈಂಡು |
|---|---|---|---|
| ಸಾಮಾನ್ಯ ಪ್ರತಿ | ೧—೮—೦ | ೧—೧೨—೦ | ೨—೪—೦ |
| ಉತ್ತಮ ಪ್ರತಿ | ೨—೪—೦ | ೨—೮—೦ | ೩—೦—೦ |

ಅಂಚೆಹಾಸಲು ಪ್ರತ್ಯೇಕ.

ವಿಳಾಸ — ಸಂಬೋಧ ಪ್ರಕಟನಾಲಯ,

12—8 ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ

ಕ್ರಯ ಬಾಟ್ಲಿ ೧ಕ್ಕೆ 0—11—0. ಟ. ಖ. 0—9—0

ಕೆ. ಟಿ. ಡೋಂಗರೆ ಕಂಪೆನಿ.

25—2 ಗಿರಗಾಂವ, ಮುಂಬಯಿ.

ಅಜೀರ್ಣ ... ಇವುಗಳ ಮೇಲೆ ಇದನ್ನು ಉಪಯೋಗಿಸಿರಿ ಇದರಿಂದ ಮಲ ಶುದ್ಧಿಯಾಗಿ ಬೇವರು ಬಂದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ರೂ ೧ ೪. ಟಪ್ಪಾಲು ವೆಚ್ಚ ಬೇರೆ.

ಸಾರಸಾ ಪರಿಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವುದಕ್ಕೆ ಇದು ಖಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿಗೆ ರೂ ೧—೦—೦. ಟಪ್ಪಾಲು ವೆಚ್ಚ ಬೇರೆ.

ಕರ್ನಾಟಕ ಬ್ರದರ್ಸ್

12—12 ಮುಜಾವರ ಲೇನ್,

ಗಿರಗಾಂವ. ಮುಂಬಾಯಿ.

... ಈ ಜ್ವರದ ಗುಟುಕಿನ ಸೇವನೆಯೊಡನೆಯೇ ರೋಗಗಳೆಲ್ಲ ಗುಣಮುಖವಾಗುವಂತೆ ಮಾಡುವ ಶಕ್ತಿಯುಳ್ಳದಾಗಿದೆ ಇನೊಂದು ಔಷಧವು ನಿಮ್ಮಲ್ಲಿದ್ದರೆ ಬೇರೆ ಭಯವೇಕೆ? ಯಾವತರ ಬಗೆಯ ಜ್ವರಗಳ ಮೇಲೆ ಅವರಲ್ಲೂ ಯಕೃತ್ ಪ್ಲೀಹಗಳು ವಿಕಾರ ಹೊಂದಿದಾಗಲೂ, ಜ್ವರಗಡ್ಡೆ ಬೆಳೆದು ದೇಹವು ಅಶಕ್ತಿ ಹೊಂದಿದಾಗಲೂ, ಇದೊಂದೇ ಔಷಧವು ಸಂಪೂರ್ಣ ಗುಣವನ್ನುಂಟುಮಾಡಿ, ರೋಗೋಚ್ಚಾಟನವನ್ನು ಸಾಧಿಸುವುದು ಎಂಬುದಕ್ಕೆ ಸಾವಿರಾರು ರೋಗಿಗಳು ಗುಣಹೊಂದಿ ಅದನ್ನು ಹೊಗಳುತ್ತಿರುವುದೇ ಸಾಕ್ಷಿಯಾಗಿದೆ. ಅದೂ ಅಲ್ಲದೆ, ಪಕೀರರು, ವೈದ್ಯರು, ಪದವೀಧರ ಡಾಕ್ಟರು, ಕೆಮಿಸ್ಟರೇ ಮೊದಲಾದ ಔಷಧ ವ್ಯಾಪಾರಿಗಳು ಸಹ ಅವನ್ನೇ ಹೊಗಳುತ್ತಾರೆ. ಅನಾರೋಗ್ಯವನ್ನು ಹೋಗಲಾಡಿಸಿ, ಆರೋಗ್ಯವನ್ನು ಪರಿವರ್ಧಿಸಿ ಕೊಡುವ ಕಲ್ಪತರು ಮಿಶ್ರಣವನ್ನು ಎಲ್ಲೆಲ್ಲಿಯೂ ಪಡೆಯಬಹುದು. ಬೇಕಾದರೆ ನಮಗೇ ಬರೆಯಿರಿ. ಮಾಹಿತಿ ಪತ್ರಗಳೂ ಸಿಕ್ಕುತ್ತಿವೆ. ಇದು ಅಲ್ಲದೆ ನಮ್ಮಲ್ಲಿ ಎಲ್ಲಾ ತರದ ಆಯುರ್ವೇದೀಯ ಔಷಧಗಳು ಯಾವಾಗಲೂ ಸಿದ್ಧವಾಗಿವೆ.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ

12—6 ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,

ಮಂಗಳೂರು, (ದಕ್ಷಿಣ ಕನ್ನಡ.)

# ವರ್ತಮಾನ ಸಂಗ್ರಹ.

## ಒಳದೇಶ.

ಮೈತಾಡಿ ಗ್ರಾಮದ ಮೆ. ಐಚೆಟ್ಟಿರ ಬಂಗಪ್ಪನವರು ಕಳೆದ ಆದಿತ್ಯವಾರ ತಮ್ಮ 63ನೇ ವಯಸ್ಸಿನಲ್ಲಿ ಶಿವಾಧೀನರಾದರು.

ಕೊಡಗು ಕೌನ್ಸಿಲಿನ ರಿಪೋರ್ಟರಾಗಿದ್ದ ಮೆ. ವೆಂಕಟೇಶಯ್ಯರವರು ಸೈಮನ್ ಕಮಿಷನಿನ ರಿಪೋರ್ಟರಾಗಿ ಹೋಗುವರೆಂದು ತಿಳಿಯುತ್ತೇವೆ.

ಶಾಲಾ ಇನ್‌ಸ್ಪೆಕ್ಟರಾದ ಮೆ. ಜಿ. ಎ. ಯೇಟ್ಸ್‌ರವರು 18 ಮತ್ತು 19ರಲ್ಲಿ ವೀರಾಜಪೇಟೆ ಹೈಸ್ಕೂಲನ್ನು ಇನ್‌ಸ್ಪೆಕ್ಟ್ ಮಾಡಿದರೆಂದು ತಿಳಿದುಬರುತ್ತದೆ.

ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯವರು ನೇಮಿಸಿರುವ ರಾಜಕೀಯ ರಚನೆ ಪ್ರಚಾರಕ ಉಪ ಕಮಿಟಿಯ ಮೀಟಿಂಗು ಈ ತಾ. 29ರಲ್ಲಿ ಸಂಘದ ಹಾಲಿನಲ್ಲಿ ನಡೆಯಲಿಕ್ಕಿದೆ.

ಇದೇ ತಿಂಗಳ 12ನೇ ತಾರೀಖಿನಲ್ಲಿ ಮೈಸೂರಿನಲ್ಲಿ ನಡೆದ ಆನೆಗಳ ಮಾರಾಟದಲ್ಲಿ ಕೊಡಗು ಫಾರೆಸ್ಟ್ ಇಲಾಖೆಯ 6 ಆನೆಗಳಿದ್ದುವು. ಮದ್ರಾಸು ಪ್ರಾಂತ್ಯದ ಆನೆಗಳಿಗಿಂತಲೂ, ಕೊಡಗಿನ ಆರು ಆನೆಗಳಿಗೆ ಹೆಚ್ಚು ಬೆಲೆ ದೊರೆಯಿತೆಂದು ವರ್ತಮಾನ.

ಮೋಡರ್ನ್ ಸರ್ವಿಸ್ಸಿನ ಬಸ್ಸು ಒಂದು ತಾ. 10ರಲ್ಲಿ ಮಡಿಕೇರಿಯಿಂದ ಹೊರಟದ್ದು ಮೈಸೂರು ಬಳಿ ಹಿಸ್ಕಲ್ ಎಂಬಲ್ಲಿ ಮಗುಚಿ ಬಿದ್ದು ಹೋಯಿತ್ತೆಂತಲೂ, ಘಾಯವಾದ ಪ್ರಯಾಣಿಕರನ್ನು ಮೈಸೂರು ಆಸ್ಪತ್ರೆಗೆ ಸಾಗಿಸಿದರೆಂತಲೂ ವರ್ತಮಾನ.

ಫಾರೆಸ್ಟ್ ಆಫೀಸಿನ ಮೇನೇಜರಾದ ಮೆ. ಸೀತಾರಾಮಯ್ಯನವರು ಈ ತಾ. 18ರಿಂದ ಎಂಟು ತಿಂಗಳು ರಜೆ ತೆಗೆದುಕೊಂಡಿರುವದರಿಂದ ಅವರ ಬದಲು ಮೇನೇಜರಾಗಿ ಮೆ. ದೇವದತ್ತರವರೂ, ಎಕೌಂಟ್ಸ್ ಹೆಡ್ಡ್ ಕ್ಲಾರ್ಕರಾಗಿ ಮೆ. ನೆಲ್ಲಮಕ್ಕಳ ಮೇದಪ್ಪಯ್ಯನವರೂ ನೇಮಿಸಲ್ಪಟ್ಟಿರುವರು.

ಕೊಡಗು ವಿದ್ಯಾ ಇಲಾಖೆಯ ಉದ್ಯೋಗಸ್ಥರ ಮಿತಿಯುಳ್ಳ ಸಹಕಾರ ಲೇವಾದೇವಿ ಸಂಘದ ವಾರ್ಷಿಕ ಜನರಲ್ ಮೀಟಿಂಗು ಈ ತಾ 29ನೇ ಶನಿವಾರ ಬೆಳಿಗ್ಯೆ 11 ಗಂಟೆಗೆ ವೀರಾಜಪೇಟೆ ಬಾಲಿಕಾ ಪಾಠಶಾಲೆ ಹಾಲ್‌ನಲ್ಲಿ ಕೊಡಗು ಸಹಕಾರ ಸಂಘಗಳ ರಿಜಿಸ್ಟ್ರಾರರ ಅಧ್ಯಕ್ಷತೆಯಲ್ಲಿ ನಡೆಯುವದು.

ಚೀಫ್‌ಕಮಿಷನರಾದ ಮೆ. ಕ್ರಂಪ್‌ರವರು ಈ ತಾ. 23ರಲ್ಲಿ ಮಡಿಕೇರಿಗೆ ಬರುವರೆಂದೂ, ಕೆಲವು ಸಮಯದ ಹಿಂದೆ ಮಡಿಕೇರಿ ನಿವಾಸಿಗಳು ಮೀಟಿಂಗು ನಡಿಸಿ ವಿದ್ಯಾ ಇಲಾಖೆಯ ಒಂದೆರಡು ಕುಂದುಕೊರತೆಗಳನ್ನು ಕುರಿತು ಚೀಫ್ ಕಮಿಷನರಿಗೆ ಮೆಮೋರಿಯಲ್ ಬರಕೊಂಡವರನ್ನು ತಾ. 24ರಲ್ಲಿ ಅವರು ಭೇಟಿಮಾಡುವರೆಂದೂ ತಿಳಿಯುತ್ತೇವೆ.

ಅಖಿಲ ಭಾರತ ಪೋಸ್ಟಲ್ ಮತ್ತು ಆರ್. ಯಂ. ಯಸ್. ಯೂನಿಯನ್ನಿನ ಮೈಸೂರು ಶಾಖೆಗೆ ಸೇರಿದ ಮಡಿಕೇರಿ ಪೋಸ್ಟಾಫೀಸಿನವರ ಮೀಟಿಂಗೊಂದು ಈ ತಾ. 14ರಲ್ಲಿ ಮೆ. ಕೆ. ಕೃಷ್ಣಮೂರ್ತಿ ರಾಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ವಾರ ಸ್ಥಳ ಸಂಕೋಚದ ಕಾರಣ ಇದರ ವಿವರವು ಬರುವ ಸಂಚಿಕೆಯಲ್ಲಿ ಪ್ರಕಟಿಸಲಾಗುವದು.

ಬೆಂಗಳೂರು ರಾಮಕೃಷ್ಣ ಮಠದ ಸ್ವಾಮಿ ದೇಶಿಕಾನಂದರವರು ಕಳೆದ ವಾರ ಕೊಡಗಿಗೆ ಬಂದು ಮತ್ತು ದಿನಸಗಳವರೆಗೆ ಇದ್ದರು. ಇವರು ಮಡಿಕೇರಿಗೆ ತಾ 17ರಲ್ಲಿ ಬಂದು, ತಾ. 18ರ ಸಾಯಂಕಾಲ ಜಮೀನ್ದಾರರ ಸಂಘದ ಹಾಲ್‌ನಲ್ಲಿ 'ಅರ್ಥ-ಧರ್ಮ'ದ ವಿಷಯವಾಗಿಯೂ, ತಾ. 19ರ ಸಾಯಂಕಾಲ ಸೆಂಟ್ರಲ್ ಹೈಸ್ಕೂಲು ಹಾಲ್‌ನಲ್ಲಿ ವಿದ್ಯಾಭ್ಯಾಸ ಕ್ರಮವನ್ನು ಕುರಿತೂ ಸ್ವಾರಸ್ಯವಾದ ಮತ್ತು ಬೋಧಪ್ರದವಾದ ಭಾಷಣಗಳನ್ನು ಮಾಡಿದರು. ತಾ. 20ರಲ್ಲಿ ವಾಪಸು ಬೆಂಗಳೂರಿಗೆ ಹೋದರು.

ಕುಂಜಿಲ ಗ್ರಾಮದಲ್ಲಿ ಮಾಪಿಳ್ಳೆ ಜಾತಿಗೆ ಬಿದ್ದ ಮಕ್ಕಳ ರಾಮ (ಅಹ್ಮದ್) ಎಂಬವನು ಸೌತೆ ಕಾಯಿ ಅವನನ್ನು ಮಾಡಲು ಪಳ್ಳಿಗೆ ಸೇರಿ ಹಿಂತಿರುಗಿ ಬರುವಾಗ್ಯೆ ಒಂದು ಕೆಟ್ಟ ಮರದ ಮೇಲೆ ಕೂತಿದ್ದದನ್ನು ಒಬ್ಬ ಮಾಪಿಳ್ಳೆ ಅದು ನೋಡಿ ಓ ಹೋ, ಉದಿಯಂಡ ಮುದ್ದಪ್ಪನವರು ಕತ್ತಿಗೆ ಮಫ್ಲರ್ ಕಟ್ಟಿದಂತೆ ನೀನು ನಿನ ಕಟ್ಟಿದ್ದೀಯೋ? ಎಂದು ಹೇಳಿದ ಕ್ಷಣಲೆ ಕಪಿಯು ಗುಂಡಿನಿಂದ ಹೊಡೆದಂತೆ ಉರುಟಾದ ಬಿದ್ದು ಅಲ್ಲಿಯೇ ಸತ್ತು ಹೋಯಿತೆಂದು ಒಂದು ಬಾತ್ಮಿ.

## ಹಿಂದೂದೇಶ.

ಅಖಿಲ ಭಾರತ ಪ್ರಾಂತೀಕ ಸಹಕಾರ ಸಂಘಗಳ ಕಾನ್ಫರೆನ್ಸು ಈ ತಾ. 25ರಲ್ಲಿ ಸಿಮ್ಲಾದಲ್ಲಿ ನಡೆಯುವದು.

ಎಸೆಂಬ್ಲಿಯ ಅಧ್ಯಕ್ಷರಾಗಿರುವ ಶ್ರೀ ಪಟೇಲರನ್ನು ಬಿಟ್ಟು ಬರೆದ ಪತ್ರಿಕೆಗಳ ಮೇಲೆ ಸರ್ಕಾರದ ಬೆಂಬಲವಿಲ್ಲವೆಂದು ಸರ್ಕಾರಿ ಪ್ರಕಟಣೆ.

ಎಸೆಂಬ್ಲಿಯಲ್ಲಿ ಚರ್ಚಿಸಲ್ಪಡುತ್ತಿದ್ದ 'ಪಬ್ಲಿಕ್ ಸೇಫ್ಟಿ ಬಿಲ್ಲ'ನ್ನು ಸಿಲೆಕ್ಟ್ ಕಮಿಟಿಯ ಚರ್ಚೆಗೆ ಬಿಡುವಂತೆ ಬಹುಮತದಿಂದ ತೀರ್ಮಾನವಾಯಿತು.

ಸೈಮನ್ ಕಮಿಷನಿನೊಂದಿಗೆ ಸಹಕರಿಸಲು ಮೂವರು ಮೆಂಬರುಗಳನ್ನು ಚುನಾಯಿಸಬೇಕೆಂಬ ಠರಾವು ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಮಂಜೂರಾಗಿದೆ.

ಹಿಂದೂದೇಶದಲ್ಲಿ ವ್ಯವಸಾಯ ಅಭಿವೃದ್ಧಿಯ ವಿಷಯ ಲಿನ್ಲಿತ್‌ಗೋ ಕಮಿಷನಿನವರು ಬರೆದಿರುವ ಶಿಫಾರಸ್ಸುಗಳನ್ನು ಒಡನೆ ಜಾರಿಗೆ ತರಬೇಕೆಂದು ಕೌನ್ಸಿಲ್ ಆಫ್ ಸ್ಟೇಟಿನವರು ಠರಾವು ಪಾಸುಮಾಡಿರುವರು.

ಹೊರೆಯು ಮಧ್ಯ ತರಗತಿಯವರ ಮತ್ತು ಬಡವರ ಮೇಲೆ ಬೀಳುವದೆಂಬ ಜನರ ಕಾರಣವನ್ನು ಒಪ್ಪಿಕೊಂಡು ಬೊಂಬಾಯಿ ಸರ್ಕಾರದವರು ಸ್ಕೂಲು ಮತ್ತು ಕಾಲೇಜುಗಳ ಫೀಸನ್ನು ಹೆಚ್ಚಿಸುವ ಆಲೋಚನೆಯನ್ನು ಬಿಟ್ಟಿರುವರು.

ಎಸೆಂಬ್ಲಿಯ ಆಫೀಸನ್ನು ಲೆಜಿಸ್ಲೇಟಿವ್ ಇಲಾಖೆಯಿಂದ ಬೇರ್ಪಡಿಸಬೇಕೆಂಬ ನಾಯಕರಾದ ವಿ. ಜೆ. ಪಟೇಲರವರ ಸೂಚನೆಯನ್ನು ಆಲೋಚಿಸುವ ಬಗ್ಗೆ ವೈಸರಾಯರವರು ತಾ 19ರಲ್ಲಿ ಮುಖಂಡರ ಒಂದು ಕಾನ್‌ಫರೆನ್ಸನ್ನು ನಡಿಸಿದರು.

ಚಿಕ್ಕ ಪ್ರಾಯದಲ್ಲಿ ಮದುವೆ ಮಾಡುವ ಪದ್ಧತಿಯನ್ನು ನಿಲ್ಲಿಸಲು ಮೆ. ಸಾರ್ದರವರು ಎಸೆಂಬ್ಲಿಯಲ್ಲಿ ತಂದ ಬಿಲ್ಲಿನ ಮೇಲೆ ಸಿಲೆಕ್ಟ್ ಕಮಿಟಿಯವರು ತಮ್ಮ ವರದಿಯನ್ನು ಎಸೆಂಬ್ಲಿಗೆ ಒಪ್ಪಿಸಿರುವರು. ಹೆಚ್ಚಿನ ಬದಲಾವಣೆಗಳನ್ನೇನೂ ಮಾಡಿರುವದಿಲ್ಲ.

ಎಸೆಂಬ್ಲಿಯಲ್ಲಿರುವ ಕಾಂಗ್ರೆಸ್ ಮೆಂಬರುಗಳು, ಕಾಂಗ್ರೆಸಿನೊಳಗೆ ಇಂಡಿಯನ್ ನೇಶನಲ್ ಇಂಡಿಪೆಂಡೆಂಟ್ ಲೀಗನ್ನು ಸ್ಥಾಪಿಸಿರುವರು. ಇದಕ್ಕೆ ಈಗಾಗಲೆ 18 ಎಸೆಂಬ್ಲಿ ಮೆಂಬರುಗಳು ಸೇರಿರುವರು. ಹೆಚ್ಚು ಮೆಂಬರುಗಳು ಸೇರುವ ಭರವಸೆ ಇದೆಯಂತೆ.

ತಮ್ಮ ಅಣ್ಣನವರ ಜ್ಞಾಪಕಾರ್ಥವಾಗಿ ಟಸ್ಸರದ ವ್ಯವಸಾಯ ಶಾಲೆಗೆ ಬಿ. ಯನ್. ಪಾಲ್ ವ್ಯವಸಾಯ ಶಾಲೆಯೆಂದು ಹೆಸರಿಡಬೇಕೆಂದು ಬಿ. ಕೆ. ಪಾಲ್ ಅಂಡ್ ಕಂಪೆನಿಯ ಮೆ. ಹರಿಶಂಕರ ಪಾಲ್‌ರವರು ಬಂಗಾಳ ಸರ್ಕಾರದ ವ್ಯವಸಾಯ ಇಲಾಖೆಗೆ 50,000 ರೂಪಾಯಿಯನ್ನು ದಾನವಾಗಿ ಕೊಟ್ಟಿರುವರು.

ಯೂರೋಪಿನಲ್ಲಿ ಪ್ರವಾಸಕ್ಕೆ ಹೋಗಿದ್ದ ಮೌಲಾನಾ ಮಹಮ್ಮದ್ ಅಲಿಯವರಿಗೆ ಕಾಯಿಲೆಯಾಗಿ ಅದನ್ನು ಚಿಕಿತ್ಸೆ ಮಾಡಲು ಜರ್ಮನಿಯಲ್ಲಿ ಆಪರೇಶನ್ ಮಾಡಿದ್ದಾರೆಂದೂ, ಈ ವಿಷಯ ಅವರು ಇಂಡಿಯಾದಲ್ಲಿ ಅವರ ಅಣ್ಣನಿಗಾಗಲೀ, ಪತ್ನಿಗಾಗಲೀ ಏನೂ ತಿಳಿಸಿಲ್ಲವೆಂತಲೂ ಶೌಕತ್ ಅಲಿಯವರು ಇಂಡಿಯಾದ ಜನರ ತಿಳುವಳಿಕೆಗೋಸ್ಕರ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.

ಬರುವ ತಿಂಗಳು 12ರಲ್ಲಿ ಸೈಮನ್ ಕಮಿಷನು ಪೂನಾಕ್ಕೆ ಬರುವಾಗ್ಯೆ ಅಲ್ಲಿ ಸಂಪೂರ್ಣ ಹರತಾಳವನ್ನು ಆಚರಿಸಬೇಕಾದೂ, ಕಪ್ಪು ಬಾವುಟಗಳೊಂದಿಗೆ ಮೆರವಣಿಗೆ ಹೋಗಿ ಪಬ್ಲಿಕ್ ಮೀಟಿಂಗುಗಳನ್ನು ಮಾಡಬೇಕೆಂತಲೂ, ಆ ಸಮಯದಲ್ಲಿ ಹಿಂದೂದೇಶದ ವಿಖ್ಯಾತ ಮುಂದಾಳುಗಳು ಅಲ್ಲಿಗೆ ಬರುವಂತೆ ಅವರನ್ನು ಕೇಳಿಕೊಳ್ಳಬೇಕೆಂತಲೂ ಅಲ್ಲಿಯ ಮುಖ್ಯಸ್ಥರು ಸಭೆಸೇರಿ ತೀರ್ಮಾನಿಸಿರುವರು.

ಯುನೈಟೆಡ್ ಪ್ರಾಂತ್ಯದ ಕೌನ್ಸಿಲಿನಲ್ಲಿ ಸೈಮನ್ ಕಮಿಶನಿನೊಂದಿಗೆ ಸಹಕರಿಸಲು ಏಳು ಮೆಂಬರುಗಳ ಕಮಿಟಿಯನ್ನು ಆರಿಸಬೇಕೆಂಬ ಠರಾವು ತಾ 18ರಲ್ಲಿ ಚರ್ಚೆಗೆ ಬಂದಾಗ ಕಾಂಗ್ರೆಸ್ ಮತ್ತು ನೇಶನಲಿಸ್ಟ್ ಪಂಗಡಗಳ ಮೆಂಬರುಗಳು, ಈ ಚರ್ಚೆಯಲ್ಲಿ ತಾವು ಭಾಗಿಗಳಾಗುವದಿಲ್ಲವೆಂದು ಹೇಳಿ ಮೀಟಿಂಗಿನಿಂದ ಎದ್ದು ಹೊರಗೆ ಹೋಗಿಬಿಟ್ಟರು. ಠರಾವು ಬಾಕಿಯವರಿಂದ ಹೆಚ್ಚಿನ ಚರ್ಚೆಯಿಲ್ಲದೆ ಪಾಸುಮಾಡಲಾಯಿತು.

ಸಿಂಧು ಪ್ರದೇಶವನ್ನು ಬೇರ್ಪಡಿಸುವ ವಿಷಯ ಸರ್ವಪಕ್ಷಗಳ ಪರಿಷತ್ತಿನಲ್ಲಿ ಎರಡು ಕಡೆಯವರೂ ಒಪ್ಪಂದಕ್ಕೆ ಬಂದಿರುವದರಿಂದ ಆ ವಿಷಯ ಬೊಂಬಾಯಿ ಕೌನ್ಸಿಲಿನಲ್ಲಿ ಚರ್ಚಿಸಲು ಅವಕಾಶಕೊಡಬಾರದೆಂತ ಸಿಂಧು ಮುಸಲ್ಮಾನ ಮೆಂಬರುಗಳಿಗೂ, ಠರಾವು ಚರ್ಚೆಗೆ ಬಂದರೆ ಚುನಾಯಿತ ಮೆಂಬರುಗಳ್ಯಾರೂ ಅದಕ್ಕೆ ಒತ್ತಾಸೆ ಕೊಡಬಾರದೆಂತ ಬೇರೆ ಮೆಂಬರುಗಳಿಗೂ ಪಂಡಿತ ಮೋತಿಲಾಲ್ ನೆಹರುರವರು ಅಪ್ಪಣೆ ಮಾಡಿರುವರು.

ಎಸೆಂಬ್ಲಿಯ ಅಧ್ಯಕ್ಷರು ಇಂಡಿಯಾ ಸರ್ಕಾರದ ಉದ್ಯೋಗಸ್ಥರನ್ನು ಕಸಿದರೆಂದೂ, ಅವರನ್ನು ಅಂದಿಸಿಂದಲೂ ದೂರುವ ಹಾಗೂ ಅವರಲ್ಲಿ ಪಕ್ಷಪಾತವನ್ನು ಪ್ರಕಟಿಸುವ ಬಾತ್ಮಿಗಳು ಆಂಗ್ಲೋಇಂಡಿಯನ್ ಪತ್ರಿಕೆಗಳಲ್ಲೂ ಹರಡುತ್ತಿವೆ. ಪಾಯನೀಯರ್ ಪತ್ರಿಕೆಯು 'ಈ ಬಾತ್ಮಿಗಳಿಗೆ ಸರ್ಕಾರದ ಪ್ರೋತ್ಸಾಹವಿದೆ' ಎನ್ನುತ್ತಿದೆ. ಈ ಕುರಿತು ಎಸೆಂಬ್ಲಿಯಲ್ಲಿ ತರ್ಕವಾಗಿ ಅಂಥ ಬಾತ್ಮಿ ಬರೆದವರ ವಿಷಯ ಬರುವ ವಾರ ಆಲೋಚಿಸುವದಾಗಿ ಅಧ್ಯಕ್ಷರು ನಿಶ್ಚಯಿಸಿರುವರು.

## ವಿದೇಶ.

ಮೆ. ಕೆಲ್ಲಾಗ್‌ರವರ ಶಾಂತಿ ಕರಾರು 51 ಜನಾಂಗಗಳಿಂದ ಸಹಿ ಮಾಡಲ್ಪಟ್ಟಿದೆ.

ರೈನ್ ಲ್ಯಾಂಡನ್ನು ಫ್ರೆಂಚರು ಬಿಡುವ ವಿಷಯ ಸಂಬಂಧಪಟ್ಟ ಜನಾಂಗಗಳ ಪ್ರತಿನಿಧಿಗಳ ಕೂಟದಲ್ಲಿ ಒಪ್ಪಂದಕ್ಕೆ ಬಂದಿರುವದಾಗಿ ಸುದ್ದಿ.

ಬ್ರಿಟನ್ನಿನಲ್ಲಿ ಚಿಕ್ಕ ವಯಸ್ಸಿನಲ್ಲಿ (15 ವರ್ಷ ಪ್ರಾಯದ ಮೇಲೆ) ವ ದುವೆಯಾಗುವದು ಹೆಚ್ಚಾಗುತ್ತಿದೆಯೆಂದು ಅಲ್ಲಿಯ ಕಳೆದ ವರ್ಷದ ಮದುವೆ ಜಾನೆಸುಮಾರಿ ಲೆಖ್ಖದಿಂದ ಕಂಡು ಬರುತ್ತದೆ.

ಪಶ್ಚಿಮ ಇಂಡೀಸ್‌ನಲ್ಲಿ ಬಿರುಗಾಳಿಯ ಬೆನೆಯಿಂದ 250 ಜನರು ಮೃತಪಟ್ಟಿರುವರು. ನೂರಾರು ಒಂದು ಮಿಲ್ಲಿಯ ಜನರಿಗೆ ಮನೆ ಮಾರುಗಳಿಲ್ಲದ್ದಾಗಿದೆ. ನಷ್ಟವು ವಿಪರೀತವಾಗಿದೆ. ಬಿರುಗಾಳಿಯು ಇನ್ನೂ ನಿಂತಿರುವುದಿಲ್ಲವಂತೆ!

ಈಜಿಪ್ಟಿನ ಈಗಿನ ಸರ್ಕಾರದ ಮೇಲೆ ಜನರಿಗೆ ದ್ವೇಷ ಹುಟ್ಟಿಸುವಂಥ ಬರವಣಿಗೆಗಳನ್ನು ಪ್ರಕಟಿಸಿದರೆಂಬ ಕಾರಣದಿಂದ ಅಲ್ಲಿಯ ಮುಖ್ಯ ಪಟ್ಟಣವಾದ ಕೈರೋದ ಆರು ಪತ್ರಿಕೆಗಳನ್ನು ಪ್ರಕಟಿಸಕೂಡದೆಂದು ಸರ್ಕಾರದವರು ಹುಕುಂ ಮಾಡಿರುವರು.

ಲೀಗ್ ಆಫ್ ನೇಶನ್ಸಿನ ಕೌನ್ಸಿಲಿನಲ್ಲಿ ಚೈನಾದ ಪ್ರತಿನಿಧಿಗೆ ಪುನಹ ಮೆಂಬರುತನ ದೊರೆಯದ್ದರಿಂದ ಲೀಗ್ ಆಫ್ ನೇಶನ್ಸಿನಿಂದಲೇ ತನ್ನ ಪ್ರತಿನಿಧಿಯನ್ನು ವಾಪಸು ಕರೆಸಬೇಕೆಂದು ಆ ಪ್ರತಿನಿಧಿಯು ಚೈನಾದ ಸರ್ಕಾರಕ್ಕೆ ಬರೆದಿರುವರೆಂದು ವರ್ತಮಾನ.

---

## ಸ್ವಾಮಿ ದೇಶಿಕಾನಂದರವರು.

(2ನೇ ಪುಟದಿಂದ ಮುಂದುವರಿದದ್ದು)

ತಿಳಿಕೊಳ್ಳದಿರುವಿಕೆಯೇ ಕಾರಣವೆಂದು ಹೇಳುತ್ತಾ, ಪಾಶ್ಚಾತ್ಯರು ಈ ವಿಚಾರವನ್ನು ತಿಳಿದುಕೊಳ್ಳದೆ ಐಶ್ವರ್ಯ ಮದದಿಂದ ಕುಣಿಯುತ್ತಿರುವುದರಿಂದ ಅಲ್ಲಿ ಹಲವು ತರದ ಕ್ರಾಂತಿಗಳು ಸಮಾಜದಲ್ಲುಂಟಾಗುತ್ತಿವೆಯೆಂದೂ, ನಮ್ಮ ಸನಾತನ ಧರ್ಮವನ್ನು ಅವರಿಗೆ ಬೋಧಿಸಿ, ಅವರಿಂದ ಹಲವು ಕಲೆಗಳನ್ನೂ, ವಿಜ್ಞಾನ ಸಂಬಂಧವಾದ ವಿಚಾರವನ್ನೂ ಕಲಿಯುವುದಾದಾಗ ಪೌರ್ವಾತ್ಯರಿಗೂ ಪಾಶ್ಚಾತ್ಯರಿಗೂ ಈಗಿರುವ ಭಿನ್ನಭೇದಗಳೂ, ವೈಮನಸ್ಯಗಳೂ ಮಾಸಿಹೋಗುವುವೆಂದು ಹೇಳಿದರು. ಎಲ್ಲಾ ಮತಗಳ ಸಾರವು ಒಂದೇ ಎಂದು ಹೇಳುತ್ತಾ, ಮಾನವನು ನಾಶವಿಕ ಸ್ವಭಾವದ ಮನುಷ್ಯನಾಗದೆ, ದೈವಿಕ ಗುಣವುಳ್ಳ ಮನುಷ್ಯನಾಗಬೇಕೆಂಬ ಧ್ಯೇಯವುಳ್ಳವನಾಗಿರಬೇಕೆಂದು ನುಡಿದು ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಮರುದಿನ ಸ್ವಾಮಿಯವರು ಹೈಸ್ಕೂಲಿನಲ್ಲಿ ವಿದ್ಯಾ ಸಂಬಂಧವಾಗಿ ಕೊಟ್ಟ ಭಾಷಣವು ರಸಭರಿತವಾಗಿಯೂ ವಿಷಯಭರಿತವಾಗಿಯೂ ಇದ್ದಿತು. ಸ್ವಾಮಿಯವರು ಹಿಂದೂದೇಶದ ವಿದ್ಯಾ ಪ್ರವಾಹವನ್ನು ವೈದಿಕ ಕಾಲ, ಬೌದ್ಧರ ಕಾಲ ಮತ್ತು ಆಂಗ್ಲೇಯರ ಕಾಲ ಹೀಗೆ ಮೂರು ಭಾಗಗಳಾಗಿ ಮಾಡಿ, ವೈದಿಕ ಯುಗದಲ್ಲಿ ವಿದ್ಯೆಯು ಆಶ್ರಮಗಳಲ್ಲಿ ತ್ಯಾಗಿಗಳಾದ ಗುರುವರ್ಯರಿಂದ ಕೊಡಲ್ಪಡುತ್ತಿತ್ತೆಂದೂ, ಆಗಿನ ಕಾಲದ ಪರಿಷತ್ತುಗಳು ಮತ್ತು ಪಾಠಶಾಲೆಗಳು, ಈಗಿನ ಕಾಲದ ಕಾಲೇಜು ಸ್ಕೂಲುಗಳಿಗೆ ಸಮಾನವಾದುವಾದರೂ ಆ ಪರಿಷತ್ತು ಪಾಠಶಾಲೆಗಳಲ್ಲಿ ದೊರೆಯುತ್ತಿದ್ದ ವಿದ್ಯೆಗೂ, ಈಗಿನ ಸ್ಕೂಲು ಕಾಲೇಜುಗಳಲ್ಲಿ ದೊರೆಯುವ ವಿದ್ಯೆಗೂ ಸಾಟಿಯಿಲ್ಲವೆಂಬುದನ್ನು ಸತ್ಯ ಕಾಮಜಾಬಾಲ ಎಂಬ ಬ್ರಹ್ಮಚಾರಿಯ ಕಥೆಯಿಂದ ವ್ಯಕ್ತಪಡಿಸಿ, ಬೌದ್ಧರ ಕಾಲದಲ್ಲಿ ಮೂಕ ವಿದ್ಯಾ ಪ್ರಸಾರವು ಸಾಗಲಾಗಿ ನಡೆಯಿತೆಂದೂ, ಕಲಾ ಕೌಶಲಗಳಿಗೆ ಪ್ರಖ್ಯಾತಿಗೊಂಡ ಪ್ರಸಿದ್ಧ ಬೌದ್ಧ ರಾಜರಾದ ಅಶೋಕ ಮತ್ತು ಗುಪ್ತ ರಾಜರ ಕಾಲವಾಗಿತ್ತೆಂದೂ, ಬ್ರಿಟಿಷ ಕಾಲದ ವಿದ್ಯಾಭ್ಯಾಸ ಕ್ರಮವು ಮೆಕಾಲೆ ಸಾಹೇಬರಿಂದ ನಿರ್ಧರಿಸಲ್ಪಟ್ಟು, ಈಗ ಶಾಲೆಗಳಲ್ಲಿ ದೊರೆಯುತ್ತಿರುವ ವಿದ್ಯೆಯು ಅಯೋಗ್ಯವಾದದ್ದೆಂದೂ, ಈ ವಿದ್ಯೆಯು ನವಕಾರ ನೌಕರಿಗೆ ಮಾತ್ರ ಯೋಗ್ಯವೆಂದು ಹೇಳಿದ ಸ್ವಾಮಿ ವಿವೇಕಾನಂದರ ಮಾತನ್ನು ಎತ್ತಿ ಹೇಳಿ ಈಗಿನ ವಿದ್ಯಾ ಕ್ರಮವು ಬೇಗನೆ ರಾಷ್ಟ್ರೀಯ ರೀತಿಯಲ್ಲಿ ಸುಧಾರಿತವಾಗಬೇಕೆಂದೂ, ಹೀಗಾದರೆ ರಸಾಯನ ಶಾಸ್ತ್ರದ ಪಧವೀಧರನು ಪೋಲೀಸ್ ಡಿಪ್ಟಿ ಸುಪರಿಂಟೆಂಡೆಂಟ್ ಚಾಕರಿಗೆ ಅರ್ಜಿ ಹಾಕದಿರುವನೆಂದೂ, ಅಂದರೆ ಅವನವನು ತನ್ನ ಗುಣ ಕರ್ಮಗಳಿಗನುಸಾರವಾಗಿ ಸೇವೆ ಮಾಡುವನೆಂದೂ, ಈಗಿನ ಕಾಲದ ಡಾ. ಮಾಂಟಿಸೋರಿ, ಡಾಲ್ಟನ್ ಪದ್ಧತಿ, ಪ್ರೊಜೆಕ್ಟ್ ಮೆಥಡ್ ಮೊದಲಾದ ವಿದ್ಯಾ ಪದ್ಧತಿಗಳು ಸಾಮಾನ್ಯ ರೀತಿಯಿಂದ ನಮ್ಮ ಹಿಂದಿನ ಗುರುಗಳಿಗೆ ಗೊತ್ತಿದ್ದವೆಂದೂ, ಆಗಿನ ಹುಡುಗರು ಬ್ರಹ್ಮಚರ್ಯವನ್ನು ಕೈಕೊಂಡು ತಮ್ಮದೇ ಗುಣಗಳುಳ್ಳವರಾಗಿ ಬ್ರಹ್ಮ ವಿದ್ಯೆಯನ್ನು ಕಲಿತು ತಮ್ಮ ಇಚ್ಛಾನುಸಾರವಾಗಿ ಗೃಹಿಗಳು, ಇಲ್ಲವೇ ಸನ್ಯಾಸಿಗಳಾಗುತ್ತಿದ್ದರೆಂದರು. ವಿಜ್ಞಾನವು ಧರ್ಮಕ್ಕೆ ಸಹಾಯವಾಗುತ್ತದಲ್ಲದೆ ಅದಕ್ಕೆ ವಿರೋಧಿಯಾಗಲಾರದೆಂಬುದನ್ನು ಡಾ. ಜಗದೀಶ ಚಂದ್ರ ಬೋಸರವರ ಶೋಧನೆಗಳ ವರ್ಣನೆಯಿಂದ ಪುಷ್ಟೀಕರಿಸಿ ನಮ್ಮ ಪೂರ್ವಜರ ಮಾನವನ್ನು ನಾವು ಕಾಪಾಡಬೇಕಾದರೆ ನಮ್ಮ ಯುವಕರು ಯೋಗ್ಯ ಬ್ರಹ್ಮಚಾರಿಗಳಾಗಿ ಮಾನಸಿಕ ಜ್ಞಾನಗಳಿಗೆ ಕೊಟ್ಟಷ್ಟೇ ಬಗನ್ನು ಶಾರೀರಕ ಬೆಳವಣಿಗೆಗೂ ಕೊಡುವುದಗತ್ಯವೆಂದು ಹೇಳಿ ಭಾಷಣವನ್ನು ಮುಕ್ತಾಯಗೊಳಿಸಿದರು.

### ಹೊಶೀ: ಹರ ಪುರದ ವಿಚಿತ್ರ ಹುಡುಗಿ.

ಹೊಶೀ ಹರಪುರವೆಂಬಲ್ಲಿ ಒಂಭತ್ತು ವರ್ಷ ಪ್ರಾಯದ ಒಂದು ಹುಡುಗಿಯು ತನ್ನ ದೈವಿಕ ಶಕ್ತಿಯ ಪ್ರಭಾವದಿಂದ ಯೋಗಿಗಳನ್ನೂ, ವಿದ್ವಜ್ಜನರನ್ನೂ ವಿಸ್ಮಯಗೊಳಿಸುತ್ತಿರುವಳು. ಈ ಹುಡುಗಿಯು ಎಚ್ಚರತಪ್ಪಿದಂತಾಗಿದ್ದು, ಶ್ರೀಕೃಷ್ಣನ ಮಹಿಮೆಯನ್ನೂ ಆತನ ಪ್ರೇಮ ರಸಭರಿತವಾದ ಸಂಗೀತವನ್ನೂ ರಾಗದಿಂದ ಹೇಳುತ್ತಾ ಇರುವಳು. ಅನೇಕ ಜನರು ಈ ಹುಡುಗಿಯ ದರ್ಶನಕ್ಕಾಗಿ ಬರುತ್ತಿರುವರು

ಅಲ್ಲದೆ, ತತ್ವಜ್ಞಾನ ಮುಂತಾದ ವಿಚಾರವಾಗಿ ಭಾಷಣಗಳನ್ನು ಮಾಡುವಳು. ಇವಳ ಸ್ವರವು ಬಹಳ ಮಧುರವಾಗಿರುವುದರಿಂದ ಶ್ರೀ ಕೃಷ್ಣನ ಲೀಲೆಯನ್ನು ಹಾಡುವಾಗ ಜನರೆಲ್ಲರೂ ಆಶ್ಚರ್ಯಗೊಂಡು ಕೇಳುತ್ತಿರುವರು. ಹೀಗೆ ಕೆಲವು ಸಮಯದ ವರೆಗೆ ಇದ್ದು ಪುನಃ ಯಥಾಪ್ರಕಾರ ಎಲ್ಲರಂತೆ ವರ್ತಿಸುವಳು. ಆದರೂ ಒಂದು ದಿವಸದಲ್ಲಿ ಅನೇಕ ಸಾರಿ ಹೀಗೆ ಎಚ್ಚರ ತಪ್ಪಿದ ಸ್ಥಿತಿಯಲ್ಲಿದ್ದು ಶ್ರೀ ಕೃಷ್ಣನ ಮಹಿಮೆಯನ್ನೇ ನೆನೆಯುತ್ತಿರುವಳು. ಅನೇಕ ಯೋಗಿಗಳು ಈ ವಿಚಿತ್ರ ವರ್ತನೆಯ ರಹಸ್ಯವನ್ನು ತಿಳಿಯಲಾರದೆ ವಿಸ್ಮಯಗೊಂಡಿರುವರು. ಭಗವಂತನ ಲೀಲೆಯನ್ನು ಯಾರು ತಾನೇ ತಿಳಿಯಬಲ್ಲರು ?

### ಗಾಳಿಯ ವೇಗ.

ಗಾಳಿಯ ರಭಸದಿಂದ ಮರಮಟ್ಟುಗಳು ಬಿದ್ದು ಕಟ್ಟಡಗಳು ನುಚ್ಚುನೂರಾಗಿ ಹೋಗುತ್ತವೆ. ಮರಗಳೂ ಅವುಗಳ ಗೆಲ್ಲುಗಳೂ ಎಲೆಗಳೂ ಬೀಳುವುದರ ಮೇಲಿಂದ ಗಾಳಿಯ ವೇಗವನ್ನು ಬಗೆ ಹರಿಯುವುದಕ್ಕೆ ಸಾಧ್ಯವಾಗುತ್ತದೆ. ಮರದೆಲೆಗಳು ಕದಲದೆ ಸುಮ್ಮನಿದ್ದರೆ, ಗಾಳಿಯು ಸುಮಾರು ಗಂಟೆಗೆ ಒಂದೆರಡು ಮೈಲುಗಳಷ್ಟು ವೇಗದಿಂದ ಬೀಸುತ್ತದೆಂದು ಹೇಳಬಹುದು. ಎಲೆಗಳು ತುಸ ಅಲುಗಾಡುವವೆಂದರೆ, ಗಂಟೆಗೆ ಐದು ಮೈಲಿನ ವೇಗವುಳ್ಳ ಮಂದಾನಿಲವೆನ್ನಬೇಕು. ಕೊಂಬೆಗಳು ಮೆಲ್ಲಗೆ ಅಲ್ಲಾಡುತ್ತಿದ್ದರೆ ಗಂಟೆಗೆ ಹತ್ತು ಮೈಲಿನ ವೇಗದ ಮಂದಮಾರುತವಾಯಿತು. ಗೆಲ್ಲುಗಳು ಅಲ್ಪಸ್ವಲ್ಪ ಬಾಗುತ್ತಿರಲು ವೇಗವು ಸುಮಾರು ಹದಿನೈದು ಮೈಲು ಆ ಗೆಲ್ಲುಗಳೇ ಚಾಮರಗಳಂತೆ ಅತ್ತಿತ್ತ ತೂಗುತ್ತಿದ್ದರೆ ಇಪ್ಪತ್ತು ಮೈಲಿನ ವೇಗವಾಯಿತು. ಎಲೆಗಳು ಮರಗಳಿಂದ ಹಾರಿ ಬೀಳುತ್ತಿದ್ದರೆ, ಇಪ್ಪತ್ತೈದು ಮೈಲಾಯಿತು. ಚಿಕ್ಕ ಪುಟ್ಟ ರೆಂಬೆಗಳು ಕಡಿದು ಬಿದ್ದರೆ, ಗಾಳಿ ಮಾತ್ರವಾಗಿದ್ದುದು ಗಂಟೆಗೆ ಮೂವತ್ತೈದು ಮೈಲಿನ ಬಿರುಗಾಳಿಯೆನ್ನಬಹುದು. ದೊಡ್ಡ ದೊಡ್ಡ ಗೆಲ್ಲುಗಳೇ ಕಡಿದು ಬೀಳುತ್ತಿದ್ದರೆ, ಗಂಟೆಗೆ ಐವತ್ತೈದು ಮೈಲಿನ ಚಂಡಮಾರುತವಾಗುತ್ತದೆ. ಅದೇ ಗಾಳಿಯು ಮತ್ತೂ ಬೀಗಿ ಎಂಬತ್ತು ಮೈಲಿಗೆ ಮುಟ್ಟಿದರೆ, ಪ್ರಚಂಡ ಮಾರುತವಾಗಿ ಮರಗಳೇ ಬಿದ್ದು ಕಟ್ಟಡಗಳು ಹುಡಿಹುಡಿಯಾಗುವುವು. ಕ. ಶೇ.

## ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ ]

"ಹರಟೆ ಮಲ್ಲ'ನವರ ಅಭಿಪ್ರಾಯಗಳಿಗೆ ಜವಾಬು.

ಅಯ್ಯಾ,

ತಾ. 17—8—'28ರ ಪತ್ರಿಕೆಯಲ್ಲಿ "ಹರಟೆಮಲ್ಲ" ಎಂಬವರು ಬರೆದ ಪತ್ರವನ್ನು ನೋಡಿದ್ದಾಯಿತು. ಆದರೆ ಅವರು 'ಮಂದತವ್ವ' ದೇವರ ಹಬ್ಬದ ವಿಷಯ ಕೆಲವು ತಪ್ಪು ಅಭಿಪ್ರಾಯಗಳನ್ನು ಪ್ರಕಟಿಸಿರುವದರಿಂದ ನನಗೆ ತಿಳಿದ ಮಟ್ಟಿಗೆ ಅವುಗಳನ್ನು ತಿದ್ದುವದಕ್ಕಾಗಿ ಈ ಬಾತ್ಮಿಯನ್ನು ಬರೆದಿರುತ್ತೇನೆ

ನಮ್ಮ ದೇಶದಲ್ಲಿ ಪೂರ್ವಕಾಲದಿಂದಲೂ ಪ್ರತಿ ಗ್ರಾಮಗಳಲ್ಲಿಯೂ ದೇವತೆಗಳನ್ನು ವಿಗ್ರಹ ರೂಪದಲ್ಲಿ ಪೂಜಿಸುವುದು ನಡೆದು ಬಂದಿರುವುದು. ಅದೇ ರೀತಿ ನಮ್ಮ ಗ್ರಾಮದಲ್ಲಿಯೂ ಸಹ ನಡೆಯುತ್ತಿದೆ. ಈ ದೇವಸ್ಥಾನವು ಪೂರ್ವದಲ್ಲಿ ಒಬ್ಬ ತಪಸ್ವಿಯು ತಪಸ್ಸು ಮಾಡುತ್ತಿರುವ ಸಮಯದಲ್ಲಿ ಆವನ ಮನಕ್ಕೆ ಈ ಶ್ರೀ ಪಾರ್ವತಿಯು ಒಲಿದು ಪ್ರಸನ್ನಳಾಗಿ ಬೇಡಿದ ವರವನ್ನಿತ್ತ ಸ್ಥಳವಾಗಿದೆ. ಈ ಲೋಕಮಾತೆಯು ಪ್ರಸನ್ನಳಾದ್ದರಿಂದ ಈಕೆಯ ಗುರ್ತಿಗೋಸ್ಕರ ಆ ಸ್ಥಳದಲ್ಲಿ ಮಂದತವ್ವವೆಂಬ ಹೆಸರಿನಿಂದ ವಿಗ್ರಹವನ್ನು ನಿರ್ಮಾಣಿಸಿದಳಂತೆ. ಆ ದೇವತೆಗೆ ಮೂರು ವರ್ಷಕ್ಕೊಂದಾವರ್ತಿ ಬೇಡು ಹಬ್ಬವೆಂಬ ಉತ್ಸವವು ಪುರಾತನ ಕಾಲದಿಂದಲೇ ನಡೆದು ಬರುತ್ತದೆ. ಈ ಉತ್ಸವಕ್ಕೆ ಶ್ರೀನಿವಾಸದಪ್ಪ ಋಷಿ ವೇಷವಂ ಧರಿಸಿ ವಿಭೂತಿ ಪ್ರಸನ್ನರಾಗಿ ಶ್ರೀರಾಮನಾಮವನ್ನು ಭಜಿಸುವದು. ಈ ಉತ್ಸವಕ್ಕೆ 10 ದಿನದ ವರೆಗೆ ಎರಡು ಟಿನ್ ಎಣ್ಣೆ ದೀಪ ಉರಿಸಲಿಕ್ಕೆ ಬೇಕಾಗುತ್ತದೆ. ಇದು ಇಲ್ಲವೆಂದು ಉತ್ಸವಕ್ಕೆ ಒಂದಂಥಾ ಮಹಸ್ಸೀಯವು ಎಂದೂ ಹೇಳಲಾರರೆಂದು ನಂಬುತ್ತೇನೆ. ಉತ್ಸವವು ಪ್ರಾರಂಭನೆಯಿಂದ ನಡೆಯುವ ಕಾಲದಲ್ಲಿ ಸಂತಾನ [illegible] ನಿಂಧನೆ ಮಾಡಿದ ಬಾಳೆ ಕರ್ಮಿಯಾದ ಪಂಚಮನಿಗೆ ಅನೇಕ ಉಪದ್ರ ಕಂಡದ್ದರಿಂದ ಈ ದೋಷ ಪರಿಹಾರಕ್ಕಾಗಿ ಬಂದು ಬೇಡಿಕೊಂಡಲ್ಲಿ ಈತನ ಪುತ್ರ ಪೌತ್ರ ಪಾರಂಪರ್ಯ ವರೆಗೆ ಕಟಿಯಿಂದ ಉಪವಾಸದಿಂದಲೂ ಉತ್ಸವವನ್ನು ಸಹ ನೋಡದೆ ಪಸುಪಸು ಹಾಕಿಕೊಂಡು ತಂಬಟೆ ಜಾಗಟೆ ಭಾರಿಸುತ್ತಾ ಇರಬೇಕೆಂದಾಯಿತು. ಈತನಿಗೆ ಹತ್ತಲಿಕ್ಕೂ, ಇಳಿಯಲಿಕ್ಕೂ ಪ್ರತ್ಯೇಕ ಸ್ಥಳ ಏರ್ಪಡಿಸಿದೆ. ಈತನು ದೇವಸ್ಥಾನದಲ್ಲಿ ಗ್ರಾಮಸ್ಥರನ್ನೂ, ಇತರರನ್ನೂ ನೋಡ ಕೂಡದ ಕಾರಣ ಇವನನ್ನು ಹತ್ತಿಸುವುದೂ, ಇಳಿಸುವುದೂ ಮೊದಲಾಗಿದೆ. ಆತನು ಪ್ರಧಾನನೆಂಬ ಸಂಗ್ತಿಯು ಯಾರೂ ಹೇಳಲಾರರು. ವನದೇವತೆಯಾದ ಕಾರಣದಿಂದಲೂ ಋಷಿ ತಪಸ್ಸು ಮಾಡಿದ ಸ್ಥಳವಾದ್ದರಿಂದಲೂ ಮೊದಲಿನಿಂದಲೇ ಸದಾ ಪೂಜೆಯು ನಡೆದು ಬಂದಿರುವದಿಲ್ಲ. ಈತಿಯ ಸ್ಥಳದಲ್ಲಿ ಅಗಸರು, ಕುಂಬಾರರು, ಕ್ಷೌರಿಕರು ವಾಸ ಇರಕೂಡದು. ಬಲ್ಲವರು ನೇಂದಿ ಕಟ್ಟಕೂಡದು. ಈ ಉತ್ಸವ ಕಾಲದಲ್ಲಿ ಜಾತಿಗನುಸಾರವಾಗಿ ಹತ್ತಲಿಕ್ಕೂ, ಇಳಿಯಲಿಕ್ಕೂ ಪ್ರತ್ಯೇಕ ದಾರಿ ಏರ್ಪಡಿಸಿದೆ. ಇಷ್ಟೂ ಕೆಲವು ಪೂರ್ವಿಕ ಆಚಾರಗಳನ್ನು ತಿಳಿದಿದ್ದಾದರೆ ಶ್ರೀ ಮಂದತವ್ವ ದೇವರ ಕಾರ್ಯವನ್ನು ಬೆಕ್ಕೆಸೊಡ್ಲೂರು ಗ್ರಾಮದವರು ಸಹ ಸೇರಿ ನಡಸಬಹುದೆಂದೇ ನನ್ನ ಭಾವನೆ.

ಯಂ. ಪೊನ್ನಪ್ಪ.

### ಸಂಪಾಜೆ ಪೋಸ್ಟಾಫೀಸು.

ಅಯ್ಯಾ 'ಕೊಡಗು' ಬಂಧುವೇ,

ಸಂಪಾಜೆ ಬ್ರಾಂಚ್ ಪೋಸ್ಟಾಫೀಸು ಈ ಮುಂಚೆ ಒಂದಾವರ್ತಿ ಸಂಪಾಜೆಯಿಂದ ಮೂರು ಮೈಲು ದೂರವಾದ ಕೊಯನಾಡು ರಬ್ಬರು ತೋಟಕ್ಕೆ ಕೊಂಡುಹೋಗಿ ಇಟ್ಟದ್ದರಿಂದ ಈ ಪ್ರಾಂತ್ಯದ ಜನರಿಗೆ ಅದರಿಂದ ಉಂಟಾದ ಕಷ್ಟ, ನಷ್ಟಗಳನ್ನು ಪದೇ ಪದೇ ನಿನ್ನ ಮೂಲಕ ಮೊರೆ ಇಡುತ್ತಿದ್ದದ್ದು ವಾಚಕ ಮಹಾಶಯರಿಗೆಲ್ಲಾ ನೆನಪಿರಬಹುದು. ಈ ಮೊರೆಯನ್ನು ಮಾನ್ಯ ಕೊಡಗು ಕಮಿಶನರ್ ಸಾಹೇಬರವರು ಗಮನಕ್ಕೆ ತೆಕ್ಕೊಂಡು ಇಲ್ಲಿ ಸರ್ಕಲ್ ಶ್ಯಾನುಭೋಗರು ಇರುವ ಕಟ್ಟೋಣದ ಒಂದು ಚಿಕ್ಕ ಕೋಣೆಯನ್ನು ಪೋಸ್ಟಾಫೀಸು ತೆರೆಯುವರೆ ಬಿಟ್ಟುಕೊಟ್ಟು ಈ ಪ್ರಾಂತ್ಯದವರ ಕಷ್ಟ ನಷ್ಟವನ್ನು ಪರಿಹರಿಸಿದ್ದು ಸ್ತುತ್ಯವೇ ಸರಿ.

ಆದರೆ ಈಗಿನ ಶ್ಯಾನುಭೋಗರು ಸದರಿ ಕಟ್ಟೋಣ ಪೂರ್ಣ ತನಗೆ ಅಗತ್ಯವುಂಟೆಂತ ಕೇಳಿಕೊಂಡದ್ದರಿಂದ ಪೋಸ್ಟಾಫೀಸು ಇರುವ ಕೋಣೆಯನ್ನು ಬಿಟ್ಟುಕೊಡಬೇಕೆಂತ ಪೋಸ್ಟಲ್ ಇಲಾಖೆಯವರಿಗೆ ಹುಕುಂ ಆಗಿರುವದೆಂತಲೂ ಅವರು ಪುನಃ ಅದೇ ಕೊಯನಾಡು ರಬ್ಬರುತೋಟದ ಕಟ್ಟೋಣಕ್ಕೆ ಆಫೀಸು ಒಯ್ಯುವರಾಗಿಯೂ ತಿಳಿದು ತುಂಬಾ ವ್ಯಸನಪಡುತ್ತೇವೆ.

ಈ ತರದ ಏರ್ಪಾಡಿನಿಂದ ಇಲ್ಲಿಯ ನಿವಾಸಿಕರಿಗೂ, ಸಹಕಾರಿ ಸಂಘಗಳಿಗೂ ಮತ್ತು ಇತರ ಎಲ್ಲಾ ಉದ್ಯೋಗಸ್ತರಿಗೂ ಕೂಡ ಕಾಗದ ಪತ್ರಗಳು ಸಕಾಲಕ್ಕೆ ಸಿಕ್ಕದೆ ಕಷ್ಟ ನಷ್ಟಗಳಾಗುವುದರಿಂದ ಈ ಬಾಬಿನಲ್ಲಿ ದಯಾಳು ಕಮಿಶನರು ಸಾಹೇಬರವರು ಈ ನಮ್ಮ ಮೊರೆಯನ್ನು ವೇದ್ಯಮಾಡಿಕೊಂಡು ಇಲ್ಲಿ ಇನ್ಸ್‌ಪೆಕ್ಷನ್ ಬಂಗ್ಲೆ ಒಳಿ ಇರುವ ಖಾಲಿ ಕಟ್ಟೋಣದ ನಾಲ್ಕು ಕೋಣೆಗಳ ಪೈಕಿ ಖಾಲಿ ಇರುವ ಒಂದು ಕೋಣೆಯಲ್ಲಿ ಪೋಸ್ಟಾಫೀಸು ತೆರೆಯುವಂತೆ ಹುಕುಂ ಮಾಡಿ ನಮಗಿರುವ ತೊಂದ್ರೆಗಳನ್ನು ನಿವಾರಿಸುತ್ತಿದ್ದರೆ ಮಹದುಪಕಾರವಾಗುತ್ತಿತ್ತು. ಈ ಬಾಬಿನಲ್ಲಿ ನಮ್ಮಂಥ ಪಟ್ಟ ಅಧಿಕಾರಿಗಳು ಗಮನಕ್ಕೆ ತೆಕ್ಕೊಳ್ಳಬೇಕಾಗಿ ಬೇಡುವ

ಸಹಕಾರಿ ಬಂಧು.

### ಮಲೇರಿಯಾ ಪರಿಶೋಧನೆ.

ಅಯ್ಯಾ,

ಮಲೇರಿಯ ಪರಿಶೋಧನೆ ಬಗ್ಗೆ ಕೊಡಗು ಸರ್ಕಾರದವರು ಬರುವ ತಿಂಗಳಿಂದ ಆರು ತಿಂಗಳ ವರೆಗೆ ಒಬ್ಬ ಸಬ್ ಅಸಿಸ್ಟೆಂಟ್ ಸರ್ಜನರನ್ನು ನೇಮಿಸಿರುವರೆಂದು ವರ್ತಮಾನವಿದೆ. ಇದು ನಿಜವೋ ಎಂಬ ಸಂಶಯವು ನನಗಿದೆ. ಯಾಕಂದರೆ—ಪರಿಶೋಧನೆ ಕೆಲಸವು ಸಾಮಾನ್ಯದಲ್ಲ. ಅದನ್ನು ನಡಸಲು ದೊಡ್ಡ ದೊಡ್ಡ ಪಂಡಿತರಿಗೇನೇ (Experts) ಸಾಧ್ಯವಲ್ಲದೆ ಸಾಮಾನ್ಯ ವಿದ್ಯಾವಂತರಿಗೆ ಸಾಧ್ಯವಿಲ್ಲ. ಇಂಥಾ ಕೆಲಸಕ್ಕೆ ಬರೇ ಒಬ್ಬ ಸಬ್ ಅಸಿಸ್ಟೆಂಟ್ ಸರ್ಜನರನ್ನು ನೇಮಿಸಿರುವರೆಂದರೆ ನಂಬಲು ಕಷ್ಟವಲ್ಲವೇ ? ಯಾಕೆ ಬೇರೆ ಪ್ರಾಂತ್ಯಗಳಲ್ಲಿ ಇದು ಹಾಸ್ಯಾಸ್ಪದ ವಿಷಯವಾಗುವದು. ಆದರೆ ನಮ್ಮ ಈ ಚಿಕ್ಕ ಪ್ರಾಂತ್ಯದಲ್ಲಿ ಎಲ್ಲವೂ ಸ್ವಸ್ಥವೇ ಎಂದು ತೋರುತ್ತದೆ.

ಈ ದೇಶದ ಜನರ ಕ್ಷೀಣ ಗತಿಗೆ ಮುಖ್ಯ ಕಾರಣವಾದ ಮಲೇರಿಯಾವನ್ನು ಹೋಗಲಾಡಿಸಬೇಕಾದದ್ದೇನೋ ಅತ್ಯಾವಶ್ಯಕವೆ. ಆದರೆ ಅದನ್ನು ಹೋಗಲಾಡಿಸುವ ಬಗ್ಗೆ ಈಗ ಮುಖ್ಯವಾಗಿ ಬೇಕಾದದ್ದು ಕ್ವಯಿನ ಹಂಚಲು ಹಣವಲ್ಲದೆ ಸಬ್ ಅಸಿಸ್ಟೆಂಟ್ ಸರ್ಜನರ ಪರಿಶೋಧನೆಯಲ್ಲ. ಮಲೇರಿಯ ನಿವಾರಣೆ ಬಗ್ಗೆ ಇಂಡಿಯಾ ದೇಶದಲ್ಲಿ ಮಾತ್ರವಲ್ಲ ಇಡೀ ಭೂಲೋಕದಲ್ಲಿಯೇ ಹಲವು ಪ್ರವೀಣ ಡಾಕ್ಟರುಗಳಿಂದ ಪರಿಶೋಧನಾ ಕೆಲಸಗಳು ನಡಿಸಲ್ಪಟ್ಟಿವೆ. ಆ ಪರಿಶೋಧನೆಗಳ ಫಲಿತಾಂಶಗಳೂ ಪ್ರಕಟವಾಗಿವೆ. ಮಲೇರಿಯ ಜ್ವರವನ್ನು ತರುವ ಸೊಳ್ಳೆಗಳನ್ನು ನಾಶಪಡಿಸುವದು, ಜ್ವರವು ಮನುಷ್ಯನಿಗೆ ತಗಲಿದಾಗ ಕ್ವಯಿನನ್ನು ಸಾಕಷ್ಟು ತೆಗೆದುಕೊಳ್ಳುವದು—ಇವೆರಡು ಮುಖ್ಯ ಅಂಶಗಳನ್ನು ಸಾಧಿಸಿದರೆ ಮಲೇರಿಯವನ್ನು ತಕ್ಕಷ್ಟು ನಿವಾರಿಸಬಹುದೆಂದು ವೈದ್ಯಾಧಿಕರು ಕಂಡು ಹಿಡಿದಿರುವರು. ಅಂದ ಮೇಲೆ ಈ ವಿಷಯ ಸಬ್ ಅಸಿಸ್ಟೆಂಟ್ ಸರ್ಜನರೊಬ್ಬರು ಪರಿಶೋಧಿಸುವದೇನಿದೆ ಎಂಬದನ್ನು ತಿಳಿಯಲು ಬಹು ಕುತೂಹಲವುಳ್ಳವನಾಗಿದ್ದೇನೆ.

ಕೆಲವು ಸಮಯದ ಹಿಂದೆ ಇಂಡಿಯಾ ಸರ್ಕಾರದವರಿಂದ ಕಳುಹಿಸಲ್ಪಟ್ಟ ಕರ್ನಲ್ ಯಂಗ್ ಎಂಬ ವೈದ್ಯ ಪ್ರವೀಣರೊಬ್ಬರು ಕೊಡಗಿಗೆ ಎರಡು ಸಾರಿ ಬಂದು ಇಲ್ಲಿ ಒಂದೆರಡು ತಿಂಗಳುಗಳಷ್ಟು ಮಲೇರಿಯ ಸಾಗಿಸುವ ಸೊಳ್ಳೆಗಳ ವಿಷಯ ಪರಿಶೋಧನೆ ಮಾಡಿದರೆಂದು ಕೇಳಿದೆನು. ಆದರೆ ಅವರ ಪರಿಶೋಧನೆ ಫಲಿತಾಂಶವೇನಾಯಿತು ಎಂಬದನ್ನು ಸರ್ಕಾರದವರು ಜನರ ತಿಳುವಳಿಕೆ ಬಗ್ಗೆ ಏನೊಂದನ್ನೂ ಪ್ರಕಟಿಸದೆ ಇರುವದು ವ್ಯಸನಕರ. ಈ ಪರಿಶೋಧಕರ ಖರ್ಚಿನ ಬಗ್ಗೆ ನಮ್ಮ ಸ್ಥಳೀಯ ಸರ್ಕಾರದವರು ಹಣ ಏನಾದರೂ ಕೊಟ್ಟಿರುವರೋ, ಹಾಗೆ ಕೊಟ್ಟಿದ್ದರೆ ಎಷ್ಟು ಎಂಬದನ್ನೂ ಅವರ ಪರಿಶೋಧನೆಯಿಂದ ಈ ದೇಶಕ್ಕೆ ಯಾವ ಪ್ರಯೋಜನವಾಯಿತು ಎಂಬದನ್ನು ಇನ್ನಾದರೂ ಅಧಿಕಾರಿಗಳು ಪ್ರಕಟಿಸುವರಾಗಿ ನಂಬುತ್ತೇನೆ. ಇಂಥಾ ಪ್ರವೀಣರಿಂದ ಪರಿಶೋಧಿಸಲ್ಪಟ್ಟ ವಿಷಯವನ್ನು ಈಗ ಪುನಃ ಪರಿಶೋಧಿಸಲು ಸಬ್ ಅಸಿಸ್ಟೆಂಟ್ ಸರ್ಜನರನ್ನು ನೇಮಿಸುವದರ ಅರ್ಥವೇನೆಂದು ಗೊತ್ತಾಗುವದಿಲ್ಲ.

ಕೊಡಗು ನ್ಯಾಯವಿಧಾಯಕ ಸಭೆಯ ತೀರ್ಮಾನದ ಮೇರೆ ನೇಮಿಸಲ್ಪಟ್ಟ ಕಮಿಟಿಯೊಂದು (ಈಗ ರಜೆಯಲ್ಲಿರುವ) ಕೊಡಗಿನ ಸಿವಿಲ್ ಸರ್ಜನರ ಅಧ್ಯಕ್ಷತೆಯಲ್ಲಿ ಈ ದೇಶದ ಹಲವು ಭಾಗಗಳನ್ನು ಸಂಚರಿಸಿ ಜನರ ಅಭಿಪ್ರಾಯ ತೆಗೆದುಕೊಂಡು ಮಲೇರಿಯ ಜ್ವರವನ್ನು ಹೋಗಲಾಡಿಸಲು ಸರ್ಕಾರದವರು ಯಾವ್ಯಾವ ಏರ್ಪಾಡುಗಳನ್ನು ಮಾಡಬೇಕೆಂದು ವರದಿ ಬರೆದಿರುವದು ಎಲ್ಲರಿಗೂ ತಿಳಿದೇ ಇದೆ. ಅವರೂ ಕ್ವಯಿನ ಹಂಚುವದಕ್ಕೇ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿರುವರೆಂದು ತಿಳಿಯುತ್ತೇನೆ. ಆದರೆ ಸರ್ಕಾರದವರು ಸಾಕಷ್ಟು ಕ್ವಯಿನ ಹಂಚಲು ಹಣ ಕೊಟ್ಟಿರುವುದಿಲ್ಲವಂತೆ. ಪ್ರಾಮುಖ್ಯವಾದ ಈ ವಿಷಯಕ್ಕೇನೇ ಹಣವಿಲ್ಲವೆನ್ನುವಾಗ ಸರ್ಕಾರದವರು ಪುನಃ ಪರಿಶೋಧನೆಗೆ ಒಬ್ಬ ಸ. ಅ. ಸರ್ಜನರನ್ನು ನೇಮಿಸುವದು ವ್ಯರ್ಥವಲ್ಲವೇ ? ಈ ಪರಿಶೋಧನೆಯ ಕೆಲಸಕ್ಕೆ ಸುಮಾರು ರೂ 2000 ಬೇಕಾಗಬಹುದಂತೆ ಈ ಹಣವನ್ನು ಕ್ವಯಿನ ಹಂಚಲು ಉಪಯೋಗಿಸಿದ್ದರೆ ಸ್ವಲ್ಪವಾದರೂ ಪ್ರಯೋಜನವಾಗುತ್ತಿತ್ತು.

ಸರ್ಕಾರದವರು ಪ್ರಜೆಗಳ ಕ್ಷೇಮಾರ್ಥವಾಗಿ ನಡಿಸಲಿರುವ ಕೆಲಸಗಳನ್ನು ಜನರಿಗೆ ತಿಳಿಸದೆ ನಡಿಸುವದು ಯೋಗ್ಯವಲ್ಲ. ಅಂಥಾದ್ದರಿಂದ ಜನರು ಹೆಚ್ಚಿನ ಪ್ರಯೋಜನವನ್ನು ಹೊಂದಿಕೊಳ್ಳಲು ಸಾಧ್ಯವಾಗುವದಿಲ್ಲ. ಇಂಥಾ ಕೆಲಸಗಳನ್ನು ಪ್ರಾರಂಭಿಸುವ ಮುಂಚೆ ಕೌನ್ಸಿಲಿನಲ್ಲಿರುವ ಜನರ ಪ್ರತಿನಿಧಿಗಳ ಅಭಿಪ್ರಾಯವನ್ನು ತೆಗೆದುಕೊಳ್ಳುವದು ಅತ್ಯವಶ್ಯವೆಂದು ಹೇಳದೆ ಕಳೆಯದು.

ಈಗ ನೇಮಿಸಲ್ಪಡುವ ಸ. ಅ. ಸರ್ಜನರು ಯಾವ್ಯಾವ ಪರಿಶೋಧನೆಯ ಕೆಲಸಗಳನ್ನು ನಡಿಸುವರೆಂಬದನ್ನೂ, ಅದಕ್ಕೆ ಎಷ್ಟು ಖರ್ಚಾಗುತ್ತದೆಂಬದನ್ನೂ, ಇದುವರೆಗೆ ಮಲೇರಿಯಾ ಕಮಿಟಿಯು ಮಾಡಿದ್ದ ಶಿಫಾರಸ್ಸುಗಳನ್ನು ಜಾರಿಗೆ ತರಲು ಏನೇನು ಮಾಡಿದ್ದಾರೆಂಬದನ್ನೂ ಅಧಿಕಾರಿಗಳು ಪ್ರಕಟಿಸಿ ಜನರ ಮನಸ್ಸಿನಲ್ಲಿರುವ ಸಂಶಯಗಳನ್ನು ಹೋಗಲಾಡಿಸುವರಾಗಿ ಆಶಿಸುತ್ತೇನೆ.

"ಬಂಧು"

**Silks! Silks!! Silks!!!**

Sarees with gold borders, body plain or spotted in various designs and colours

| | | | | |
|---|---|---|---|---|
| 5 yds by 45 inches plain body | Rs 30/- | to | Rs 80/- | |
| do spotted body | „ 40/- | to | „ 96/- | |
| 6 yds by 45 inches plain body | „ 50/- | to | „ 100/- | |
| do spotted body | „ 60/- | to | „ 120/- | |
| Headkerchief 44 by 44 inches price | „ 12 - | to | „ 35/- | |
| Gold Lace borders, Ribbons, price from | „ 1/8/- | to | „ 5/- | per yd |

***For further particulars, please write to:-***

BHARADWAJ & CO.,

BROCADE, EMBROIDARY & SILK MANUFACTURERS,

Benares City.

52—5

"ಔಷಧ ಸೀಸೆಗಳಿಗಿಂತಲೂ ಬರೇ ಜೀವನ ಕ್ರಮದಿಂದಲೇ
ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು"

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರಬಲ್. ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯ ಚಂದ್ರಿಕೆ" ಎಂಬ ಆರೋಗ್ಯಬೋಧಕವಾದ ಹೊಸ ಪತ್ರಿಕೆಯು, ನಿಮಗೆ ಆರೋಗ್ಯ ದೃಢಕಾಯರಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟ ರೋಗ ನಿವಾರಣವನ್ನೂ ಬೋಧಿಸುವದು

ಈ ಆರೋಗ್ಯ ಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ, ಬಹು ಕಾಲದಿಂದ ಶಸ್ತ್ರ ಚಿಕಿತ್ಸೆಯಲ್ಲಿಯೂ ವೈದ್ಯ ಚಿಕಿತ್ಸೆಯಲ್ಲಿಯೂ ಸ್ವಾತಂತ್ರ್ಯವುಳ್ಳ ಡಾಕ್ಟರುಗಳು ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಎಂಬೀ ಹೊಸ ಪತ್ರಿಕೆಯಲ್ಲಿ ಆಹಾರ ಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರ ಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಆಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು, ಮುಂತಾಗಿ ಪ್ರತಿಯೊಬ್ಬನಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವುವು. ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ, ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ ಕನ್ನಡ, ತೆಲುಗು, ತಮಿಳು ಇಂಗ್ಲಿಷ್ ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬರುವುದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾದುದಿಲ್ಲ.

52—3 ಮ್ಯಾನೇಜರ್, ಆರೋಗ್ಯಚಂದ್ರಿಕೆ, 323 ತಂಬುಶೆಟ್ಟಿ ಬೀದಿ, ಮದರಾಸು.



# Arms, Ammunition and Shooting Requisites !!!



1928 Illustrated Catalogue Just Issued Free on Application!

| | | | | | |
|---|---|---|---|---|---|
| D. B B L. Rifles | Rs. | 120 | to | Rs | 2750. |
| S B. B. L., | „ | 35 | to | „ | 950. |
| D B. B. L. Guns | „ | 50 | to | „ | 1350. |
| S B. B. L. | „ | 35 | to | „ | 275 |
| D B. M L | „ | 45 | to | „ | 135 |
| S B. M L. | „ | 30 | to | „ | 80 |
| B. L Revolvers | „ | 35 | to | „ | 350 |
| Automatic Pistols | „ | 30 | to | „ | 150 |

Brilliant Search Light Lamp For Shooting Camping, Fishing and All such other Night Sports and work Rs 30 Free delivery.

**Also swords, Daggers, Cartridges, Caps. Gunpowder and Shooting Requisites at the most competitive rates.**

GOOLAMHUSAIN ALLIBHOY & SONS.

**Largest Importers of Firearms and Ammunition**

**Cheapest priced firm in India,**

24—25 210 Abdul Rehman Street, BOMBAY.



Real Rolled Gold Jewelleries.
(Warrented for 10 years)

**ರೋಲ್ಡ್‌ಗೋಲ್ಡ್ ಭಂಗಾರದ ಒಡವೆಗಳು.**

ಇವುಗಳನ್ನು ಸಾಚಾ ರೋಲ್ಡ್ ಗೋಲ್ಡ್ ಭಂಗಾರದಿಂದ ವಿಲಾಯತಿಯಲ್ಲಿ ತಯಾರಿಸಿದ್ದು. ಇದರ ಬಣ್ಣವು 10 ವರುಷಗಳ ವರೆವಿಗೂ ಕೆಡದು. ಇಂಗ್ಲೀಷ್ ನಮೂನೆ ನೋಡಲು ಬಹು ಚೆನ್ನಾಗಿರುವವು.

| | |
|---|---|
| ನೆಕ್‌ಲೇಸ್ ಪದಕ ಸಹಿತ | 5—8—0. |
| ಲೋಲಾಕ (Ear rings) ಜೊತೆ 1ಕ್ಕೆ | 2—8—0. |
| ಭಂಗಾರದ ಕೈ ಬಳೆಗಳು ಜೊತೆ 1ಕ್ಕೆ | 2—0—0. |

ವಿಳಾಸ —ಕೆ. ಎನ್. ರಾಧಾಕೃಷ್ಣ ಬ್ರದರ್ಸ್,
109. ಚೈನಾ ಬಜಾರ್ ರೋಡ್,
52—18 ಮದರಾಸು.



ವಜ್ರದ ಉಂಗುರಗಳು. (0—8—0)

ಈ ಉಂಗುರಗಳನ್ನು ಲಂಡನ್ ಪಟ್ಟಣದ ದೊಡ್ಡ ಕಂಪನಿಯವರಿಂದ ವಜ್ರದ ಕಲ್ಲುಗಳನ್ನು ಇಟ್ಟು ನೀವೇ ಭಂಗಾರದಿಂದ ತಯಾರಿಸಿದೆ. ನೋಡಲು ಸಾಚಾ ವಜ್ರದ ಉಂಗುರಗಳಿಗೆ ಸರಿಸಮನಾಗಿರುವವು ಬಣ್ಣ ಕೆಡದು. ಕ್ರಯ ಉಂಗುರ 1ಕ್ಕೆ 0—8—0 ಒಂದಾವರ್ತಿ 6 ಉಂಗುರಗಳನ್ನು ತರಿಸುವವರಿಗೆ ಒಂದು ಟೇಬಲ್ ಟೈಂಪೀಸನ್ನೂ, 12 ಉಂಗುರಗಳನ್ನು ತರಿಸುವವರಿಗೆ ಒಂದು ರೋಲ್ಡ್‌ಗೋಲ್ಡ್ ಭಂಗಾರದ ಲೀವರ್ ಪಾಕೆಟ್ ವಾಚನ್ನೂ ಇನಾಮಾಗಿ ಕೊಡುವೆವು. ಸ್ವಲ್ಪವೇ ಇರುವವು. ಬೇಗನೇ ತರಿಸುವವರಿಗೆ ಮಾತ್ರ ಇನಾಮು ಸಿಕ್ಕುವವು. ವ್ಯಾಪಾರಸ್ಥರಿಗೆ ಒಳ್ಳೇ ಸಮಯ. ಗಡಿಯಾರಗಳಿಗೆ ಬಾತ್ರಿಯಾದ 3 ವರುಷ ಗ್ಯಾರಂಟಿ ಕೊಡುವೆವು. 3 ಉಂಗುರಕ್ಕೆ ಕಡಿಮೆ ಕಳುಹಿಸುವದಿಲ್ಲ.

ವಿಳಾಸ — ಬೆಂಗಲ್ ಟ್ರೇಡಿಂಗ್ ಕಂಪೆನಿ,
52—18 ಪೋ ಬಾಕ್ಸ್ ನಂ. 213. ಮದರಾಸು.

ಡಬ್ಬಲ್ ಮತ್ತು ಸಿಂಗಲ್ ತೋಟ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿದ ವಿದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಯನ್. ವಿ. ರಾಮಾನುಜಂ ಚೆಟ್ಟಿ
ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.

24—16 12, ಬಡ್ರೋಡ್, ಮದ್ರಾಸ್
(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)



# ಎಂ. ಎಸ್. ಶಿವಪ್ಪ ಅಂಡ್ ಬ್ರದರ್ಸ್.

## ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

**ಉತ್ತಮ ತರಹದ ಸಿಂಗಲ್‌ರೀಡ್ಸ್ ಹಾರ್ಮೋನಿಯಂಗಳು.**

| | |
|---|---|
| ಶ್ರೀ ಒಹಾರ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 50—8—0 |
| ಕುಂತಲಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 40—0—0 |
| ಪ್ರೇಮಸ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 37—8—0 |
| ಲೋಕ್ಸ್ಟೋನ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 35—0—0 |
| ಮಹಾರಾಜಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 32—8—0 |

**ಉತ್ತಮ ತರಹದ 14 ಕ್ಯಾರೆಟ್ಸ್ ಬಂಗಾರದ ನಿಬ್ಬು ಹಾಕಿದ ಫೌನ್‌ಟನ್ ಪೆನ್‌ಗಳು.**

| | |
|---|---|
| ಬ್ಲಾಕ್ ಬರ್ಡ್ ಫೌನ್‌ಟನ್ ಪೆನ್ 1ಕ್ಕೆ | 3—8—0 ಮತ್ತು 3—12—0 |
| ವರಲ್ಡ್ಸ್ ವಂಡರ್ ಫೌನ್‌ಟನ್ ಪೆನ್ 1ಕ್ಕೆ | 3—0—0 ಮತ್ತು 3—8—0 |
| ಕಾನ್‌ವ್ಯಾಕ್ಟ್ ಸೆಲ್ಫ್‌ಫಿಲ್ಲಿಂಗ್ ಫೌನ್‌ಟನ್ ಪೆನ್ 1ಕ್ಕೆ | 4—8—0 |
| ವಾಟರ್ ಮನ್ ಫೌನ್‌ಟನ್ ಪೆನ್ 1ಕ್ಕೆ | 8—0—0 ಮತ್ತು 8—8—0 |
| ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌನ್‌ಟನ್ ಪೆನ್ 1ಕ್ಕೆ | 12—0—0 ಮತ್ತು 15—0—0 |

**ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು**

| | |
|---|---|
| ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ | 4—5—0 |
| ವೆಸ್ಟೆಂಡ್ ಕಂಪೆನಿಯ ಅಲಾರಂ ಟೈಂಪೀಸ್ 1ಕ್ಕೆ | 8—0—0 |
| ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ | 9—[illegible]—0 |
| ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ | 6—12—0 |
| ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ | 6—[illegible]—0 |

ಸಚಿತ್ರ ಕ್ಯಾಟಲಾಗ್ ಒಗ್ಗೆ 6 ಪೈ ಸ್ಟಾಂಪು ರವಾನಿಸಿ.

ಎಂ. ಎಸ್ ಶಿವಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಸ್ಮೆಟಿಕ್ ಸಾಮಾನುಗಳ ವ್ಯಾಪಾರಿಗಳು, ಮೈಸೂರು.

[illegible]0

## ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

| | | ರೂ |
|---|---|---|
| ಶೇರ್ ಬಂಡವಾಳ | — | 50,000 |
| ವಸೂಲಾದ ಶೇರ್ ಮೊಬಲಗು | — | 17,197 |
| ಜಮೂಬಂದ ಠೇವಣಾತಿ | — | 1,62,320 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5 0-0ರ ದರದಲ್ಲಿ ಬಡ್ಡಿ ದೊರೆಯುತ್ತೆ, ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟರು, ಕೋಂದಂಡ ಅಪ್ಪಯ್ಯನವರು, ರಾವ್ ಬಹದ್ದೂರ್

ಟ್ರೆಜರರ್, ಕೊಂಗೆಟ್ಟಿರ ತಿಪ್ಪಯ್ಯನವರು

ಸೆಕ್ರೆಟರಿ
ಸಿ. ಯಸ್ ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್

ತಾರೀಕು. 1—7—1928



## ನೋಟೀಸು.

ಈ ಕೆಳಗಿನ ಮಹನೀಯರು ' ಕೊಡಗು ' ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮಿ ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರು ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಏಜೆಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮಿ. ಪೇರಿಯಂಡ ಪೂವಯ್ಯನವರು
ಪೊನ್ನಂಪೇಟೆನಾಡ—ಮಿ ಕಾಳೇಂಗಡ ಚಿಣ್ಣಪ್ಪನವರು
ಶ್ರೀಮಂಗಲನಾಡು—ಮಿ. ಅಜ್ಜಮಾಡ ಮಾದಪ್ಪನವರು
ಮರೆನಾಡು—ಮಿ ಕೀಕಿರ ಅಪ್ಪಯ್ಯನವರು

ಸಬ್ ಏಜೆಂಟರುಗಳು

ವೀರರಾಜಪೇಟೆ—ಮಿ ಕಾಣತೀರರ ನಂಜಪ್ಪನವರು,
ನಾಪೋಕ್ಲು—ಮಿ ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮಿ ಚಮ್ಮಟ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮಿ ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮಿ ಪಿ ಜಿ ಮುದ್ದಪ್ಪಯ್ಯನವರು,
ಹುದಿಕೇರಿ & ತಿತಿಮತಿ—ಮಿ ಜಿ ಪೂವಪ್ಪಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮಿ ಚಂಗಂಡ ಕುಟ್ಟಪ್ಪನವರು,

ಮೇನೇಜರ್,
' ಕೊಡಗು ' ಲಿಮಿಟೆಡ್, ಮಡಿಕೇರಿ,



## ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಂಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್,
"ಕೊಡಗು" ಮಡಿಕೇರಿ

12 bore Victor Cartridges Rs 10/ Per 100

**Mahomedally-Noorbhoy.**

**ARMS & AMMUNITION MART.**

321 Abdul Rehman Street
52-4 BOMBAY 3



**ಕಟುಕಷಾಯ ಮಲೇರಿಯ ರಕ್ಷೆ**—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇರಿಸಿದರೂ ಗುಣವಾಗದಿರುವ ಮಲೆ ಜ್ವರ ದಿನಾ ಬರುವ ಜ್ವರ 3—4 ದಿನಗಳಿಗೊಂದು ಸಾರಿ ಬರುವ ಜ್ವರ ಸದಾ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14



**ಚಂದನ ಸವ**—ಇದು ಪ್ರಮೇಹ ಮೂತ್ರ ಕೃಚ್ಛ್ರ ಮೂತ್ರ ಬಿಸಿಯಾಗಿ ಹೋಗುವುದು, ಮೂತ್ರಕೋಶದ ಉರಿ ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ಕಟ್ಟಿಕೊಂಡಿರುವುದು ದೇಹದಲ್ಲಿ ಉರಿ ಬಾಯಾರಿಕೆ ಸಪ್ನಾವಸ್ಥೆ, ಮೂತ್ರನಾಳ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಚಿಕ್ಕ ಬಾಟ್ಲು 1 3 6ಕ್ಕೆ ರೂ 1—. 3—8—0 6—12—0

**ರೋಮನಾಶಿನಿ.**— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗೆ ರೂ 1 1 ಡಜನಿಗೆ 3—8—0

**ಮನೋಲ್ಲಾಸಿನಿ ತೈಲ.**—ತಲೆನೋವು ತಲೆತಿರುಗುವುದು, ತಲೆಹುರಿ, ಕಣ್ಣು ಕಿವಿಯಿಂದ ಕೀವು ಸೋರುವುದು ಕಿವುಡುತನ ಕಣ್ಣು ನೋವು ಅಪಸ್ಮಾರ ನಿದ್ದೆ ಬಾರದಿರುವುದು ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳಗಳಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—.

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ—ಮನೋಲ್ಲಾಸಿನಿ ಕಂಪೆನಿ

52—50 ೧. ಮಂಗಳೂರು



**ತಕಾರಿಕ ಮೂಲುಗಳಿಗೆ ಮೋಸ ಹೋಗಬೇಡಿರಿ!**

ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ

ಅಜಮಾಯಿಸಿ ನೋಡಿರಿ

ಇನಾಮಿನ ಬಟ್ಟಿಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ

ಎಲ್ಲಾ ಆರ್ಡರುಗಳನ್ನೂ ಭಲೋ ರೀತಿಯಿಂದಲೂ, ಶೀಘ್ರವಾಗಿಯೂ ಗ್ಯಾರಂಟಿಯೊಡನೆ ಜಾರಿ ಮಾಡಲಾಗುವದು.

**ಕೇಶವಜಿ ದೇವಚಂದ್,**
**ಜ್ಯುವೆಲ್ಲರ್, (ಕೆಟಲಾಗ್ ಮುಫತ್).**
12—3 21 ಚೈನಾ ಬಜಾರ್ ರೋಡ್, ಮದರಾಸು.



**EMPIRE OF INDIA**

**LIFE ASSURANCE COMPANY, LIMITED.**

(Established 1897.)

FOR THE YEAR ENDING 29th FEBRUARY 1928.

| | | |
|---|---|---|
| New Business Exceeds | | Rs 1 16 00 000 |
| Income Exceeds | .. | Rs 54 95 000 |
| Assets Exceed | | Rs 3 15 64,000 |

**Wanted Agents in Important Places in Coorg**

HEAD OFFICE
Empire of India Life Building,
BOMBAY

21—13

BRANCH OFFICE
152 Commercial Street
BANGALORE



ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ

**ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**

1927

**ಅತ್ಯುಚ್ಛ್ರಾಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ**

ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

| | | | | | |
|---|---|---|---|---|---|
| 1925 | — | 13515 | — | ರೂ | 2,95 42 000 |
| 1926 | — | 17373 | — | ರೂ | 3,91 39,000 |
| 1927 | — | 21418 | — | ರೂ | 4,68 04,075. |

— ಪ್ರೀಮಿಯಂ ಉತ್ಪತ್ತಿ —

| | | | |
|---|---|---|---|
| 1925 | — | ರೂ | 92,66 000 |
| 1926 | — | ರೂ | 1,05 33,000. |
| 1927 | — | ರೂ | 1,21,53 000. |

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಮೀರಿದೆ.

ಕಂಪೆನಿಯ ಫಂಡು ೮ ಕೋಟಿ ರೂಪಾಯಿಗಳಿಗೆ ಮೀರಿದೆ

ಜೀವವಿಮೆ ಮಾಡಬೇಕೆಂದಿರುವವರು ತಾವಕಾಶ ಮಾಡದೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪರೇಡ್, ಬೆಂಗಳೂರು.

52—23

ಎಲ್. ಆರ್. ಕೃಷ್ಣಸ್ವಾಮ್ಯಯ್ಯರ್,
ಬ್ರಾಂಚ್ ಸೆಕ್ರೆಟರಿ.


Printed & published by P. I. Belliappa, at "Kodagu" Press, Mercara for "Kodagu" Ltd.

Reg. No. M. 1558.
If not delivered please return to
"KODAGU" OFFICE MERCARA.

# ಕೊಡಗು.

ಸತ್ಯೇನ ಧಾರ್ಯತೇ ಪೃಥ್ವೀ ಸತ್ಯೇನ ತಪತೇ ರವಿಃ || ಸತ್ಯೇನ ವಾತಿ ವಾಯುಶ್ಚ ಸರ್ವಂ ಸತ್ಯೇ ಪ್ರತಿಷ್ಠಿತಮ್ ||

ವರ್ಷ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

[ಸಂ ೮] ಮಡಿಕೇರಿ, ಸನ್ ೧೯೨೮ನೇ ಇಸವಿ ಸೆಪ್ಟೆಂಬರ್ ತಾರೀಕು ೨೮ ನೇ ಶುಕ್ರವಾರ [ಸಂಚಿಕೆ ೧ ೮

## ESTATE REQUISITES

| | | | |
|---|---|---|---|
| 5lbs Yates' hammer headed mamooties | Rs 3 0 0 Each. | Weeding forks @ | Rs 1 4 0 Each |
| 4lbs ,, ,, ,, ,, | ,, 2 14 0 ,, | Garden trowels ,, | Rs 1 4 0 ,, |
| 4 ,, ,, ,, ,, ,, | ,, 2 12 0 ,, | Pick axes ,, | Rs 1 8 0 ,, |
| Felling axes at Rs 3 0 0 & | ,, 3 4 0 ,, | Bill hooks ,, | Rs 3 14 0 ,, |
| Grubbing mattocks at | ,, 3 4 0 ,, | Digging forks ,, | Rs 4 0 0 ,, |

## MONSOON EQUIPMENT.

| | | | |
|---|---|---|---|
| Planter boots | Rs 16 8 0 | Dales' dubbin per tin | Rs 0 8 0 |
| Marrs' oil (water proof) per tin | Rs 2 0 0 | Umbrellas | Rs 4 8 0 |

52—35

**SPENCER & CO. LTD.** General Merchants **MERCARA.**

## V. SUBRAMANIA IYER

*Manufacturing,*

## JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423.
TRIPLICANE, MADRAS.

Catalogue Free
to Bonafide Enquirers



Rose Water Sprinkler

Nose-screws. Claver. Drops. Thodu. Brooch

Chased Silver Mirror.

Manufacture of
HIGH CLASS
GEMSET JEWELS.
a speciality

The special features
of my productions are —
1 Best QUALITY.
2 Latest novel designs
3 Promptest execution
4. Neat & artistic finish.
5 Most moderate prices.

GOLD
or
SILVERWARE
of all descriptions
neatly executed

52—3

## ನೀವು ನಿರ್ಬಲಸ್ತರಾಗಿ ಯಾಕೆ ನರಳುವಿರಿ?

ಇಪ್ಪತ್ತು ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

## ಸಾಲಂಮಿಸ್ರಿ ಮುರಬ್ಬ

ಸೇವನೆಯಿಂದ ಎಂಥಾ ಧಾತು ನಷ್ಟ ವಿಕಾರಗಳನ್ನೂ, ನರಗಳ ಶಕ್ತಿ ಕುಂದಿಹೋಗಿರುವದನ್ನೂ, ಮೆದುಳಿನ ಬಲಹೀನತೆಯನ್ನೂ ಇಂಥಾ ರೋಗಗಳನ್ನೆಲ್ಲಾ ಪಕ್ಷಿಣಿ ಸಂತೆ ಹೋಯಿತೆಂದೆನಿಸತಕ್ಕ ತನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸುತ್ತದೆ. ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ಮಹನೀಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ಯಾರೂ ತರಿಸಿ ನೋಡಬಹುದು ಒಂದು ಡಬ್ಬಿ ೧೫ ದಿನಗಳ ಸೇವನೆಯಿಂದಲೇ ಇದರ ಗುಣವು ತೋರಬರುವುದು ೨-೩ ಡಬ್ಬಿಗಳ ಸೇವನೆಯಿಂದ ಬಹಳ ಜನರಿಗೂ ಸಂಪೂರ್ಣ ಗುಣವನ್ನುಂಟುಮಾಡುವದು ನಮ್ಮ ಟ್ರೇಡ್‌ಮಾರ್ಕು ನೋಡಿ ಡಬ್ಬಿ ತೆಗೆದುಕೊಳ್ಳಿರಿ. ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಅವಶ್ಯಕವಿರುತ್ತೆ.

ಕ್ರಯ ಡಬ್ಬಿ ಗ್ಗೆ ೨—೮—೦ ಟಪ್ಪಾಲು ಖರ್ಚು ೧ರಿಂದ ೩ ಡಬ್ಬಿಗಳವರೆಗೆ ೦—೮—೦.

**ಡಿ. ಮನ್ನಾಲಾಲ್,**

ಹೆಡ್ಡ ಸೇಟ್ ರ ಡಾಕ್ಟರು, ಸಾಲಂಮಿಸ್ರಿ ಮುರಬ್ಬ ಫಾರ್ಮಸಿ, ಬೆಂಗಳೂರು ಸಿಟಿ

### ಅ ಪೂ ರ್ವ ಸಂ ದ ರ್ಭ .

ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸಬೇಕಾದರೆ ಇದೀಗ ಅಪೂರ್ವ ಸಂದರ್ಭ.

## ಆತಂಕನಿಗ್ರಹ ಮಾತ್ರೆಗಳು

ಮೈದಾಳಿನ ಆಯಾಸ, ಮಲಬದ್ಧತೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಪಡಿಸುವುವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ.।

ಧರ್ಮಾರ್ಥ। ಧರ್ಮಾರ್ಥ॥

## ಕಾ ಮ ಶಾ ಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ಬೇಕಾದರೆ ೧ಅ. ಅಣೆಯ ಸ್ಟಾಂಪು ಕಳುಹಿಸಿ ತರಿಸಿಕೊಳ್ಳಿರಿ.—

ಆತಂಕನಿಗ್ರಹ ಔಷಧಾಲಯ,
52—9 ಚಿಕ್ಕಪೇಟೆ, ಬೆಂಗಳೂರು ಸಿಟಿ.

# ಕೊಡಗು.

ಸನ್ ೧೯೨೮ ನೇ ಇಸವಿ

ಸೆಪ್ಟಂಬರ್ ತಾ ೨೮ ನೇ ಶುಕ್ರವಾರ


## ಚೀಫ್ ಕಮಿಷನರವರಿಗೆ ಡೆಪ್ಯುಟೇಶನ್.

ವಿದ್ಯಾ ಇಲಾಖೆಯು ಈ ವರ್ಷಾರಂಭದಲ್ಲಿ ಮಡಿಕೇರಿ ಮತ್ತು ವೀರರಾಜಪೇಟೆ ಹೈಸ್ಕೂಲುಗಳಲ್ಲಿಯೂ, ಮೋಡೆಲ್ ಸ್ಕೂಲುಗಳಲ್ಲಿಯೂ ಎರಡು ವರ್ಷ ಒಂದೇ ಕ್ಲಾಸಿನಲ್ಲಿ ಸೋತು ಹೋದ ವಿದ್ಯಾರ್ಥಿಗಳನ್ನು ಸ್ಕೂಲಿನಿಂದ ವಜಾ ಮಾಡಿದ್ದರಿಂದಲೂ ಲೋವರ್ ಸೆಕೆಂಡರಿ ಮತ್ತು ಪ್ರಮರಿ ಬೋರ್ಡ್ ಪರೀಕ್ಷೆಗಳು ಬಹು ಕಠಿಣವಾಗಿ ಬಹು ಕಡಿಮೆ ಮಕ್ಕಳು ಮಾತ್ರ ತೇರ್ಗಡೆಯಾದುದರಿಂದಲೂ ದೇಶದಲ್ಲಿ ಉಂಟಾದ ಅತೃಪ್ತಿಯನ್ನು ತೋರಿಸಲಿಕ್ಕಾಗಿ ತಾ 10—6—28ರಲ್ಲಿ ಮಡಿಕೇರಿಯಲ್ಲಿ ಒಂದು ಮೀಟಿಂಗು ನಡೆಯಿತು. ಅಲ್ಲಿಯ ತೀರ್ಮಾನದಂತೆ ಕಮಿಷನರಲ್ಲಿಗೆ ಒಂದು ಡೆಪ್ಯುಟೇಶನೂ, ಚೀಫ್ ಕಮಿಷನರಿಗೆ ಒಂದು ಮೆಮೋರಿಯಲೂ ಕಳುಹಿಸಲಾದವು. ಇದರ ಮಧ್ಯೆ ಹೈಸ್ಕೂಲ್ ಕ್ಲಾಸ್‌ಗಳಲ್ಲಿ ಮೂರು ವರ್ಷ ಸೋತವರನ್ನು ಮಾತ್ರ ಪುನಹ ಸ್ಕೂಲಿಗೆ ಸೇರಿಸಿಕೊಳ್ಳಬಾರದೆಂತಲೂ, ಮೋಡೆಲ್ ಸ್ಕೂಲ್‌ಗಳಲ್ಲಿ ಈ ನಿಬಂಧನೆ ಇರಕೂಡದೆಂತಲೂ ವಜಾ ಮಾಡಿದ ಮಕ್ಕಳನ್ನು ಪುನಹ ಸೇರಿಸಿಕೊಳ್ಳಬಹುದೆಂತಲೂ ಶಾಲಾ ಇನ್ಸ್‌ಪೆಕ್ಟರವರು ಹುಕುಂ ಮಾಡಿರುವರೆಂದು ವರ್ತಮಾನವಾಯಿತು. ಇದರಿಂದ ಜನರಲ್ಲಿ ಸ್ವಲ್ಪ ಸಮಾಧಾನ ಉಂಟಾಗಿತ್ತು.

ಈ ತಾ 21ರಲ್ಲಿ ಚೀಫ್ ಕಮಿಷನರವರು ಮೆಮೋರಿಯಲ್ ಕಳುಹಿಸಿದವರಿಗೆ ಭೇಟಿಯನ್ನಿತ್ತು ಮೇಲಿನ ವಿಷಯಗಳನ್ನು ಕುರಿತು ಮಾತಾಡಿದರು. ಎರಡು ವರ್ಷ ಸೋತವರನ್ನು ಶಾಲೆಯಿಂದ ವಜಾ ಹಾಕಬೇಕೆಂದು ತಾನು ಹುಕುಂ ಕೊಡಲಿಲ್ಲವೆಂತಲೂ, ಹೆಡ್ಡ್ ಮಾಸ್ಟರುಗಳು ಹುಕುಮನ್ನು ತಪ್ಪರ್ಥ ಮಾಡಿಕೊಂಡು ಅಂಥಾ ಮಕ್ಕಳನ್ನು ಶಾಲೆಯಿಂದ ಹೊರಪಡಿಸಿದ್ದೆಂತಲೂ, ಹೈಸ್ಕೂಲುಗಳಲ್ಲಿ ಥರ್ಡ್ ಫಾರಂ ವಿನಹ ಬೇರೆ ಕ್ಲಾಸ್‌ಗಳಲ್ಲಿ ಮೂರು ವರ್ಷ ತೇರ್ಗಡೆಯಾಗದವರನ್ನೂ, ಥರ್ಡ್ ಫಾರಮಿನಲ್ಲಿ ಎರಡು ವರ್ಷ ಸೋತವರನ್ನೂ ಮಾತ್ರ ವಜಾ ಮಾಡಲಾಗುವದೆಂತಲೂ, 14 ವರ್ಷ ಪ್ರಾಯ ಮೀರದವರಿಗೆ ಇದು ಸಂಬಂಧಿಸುವದಿಲ್ಲವೆಂತಲೂ ಅಲ್ಲಿ ಹಾಜರಿದ್ದ ಶಾಲಾ ಇನ್ಸ್‌ಪೆಕ್ಟರವರು ಹೇಳಿದರೆಂದು ತಿಳಿಯುತ್ತೇವೆ. ಇನ್ಸ್‌ಪೆಕ್ಟರವರ ಹುಕುಮನ್ನು ಹೆಡ್ಡ್ ಮಾಸ್ಟರುಗಳು ಸರಿಯಾಗಿ ತಿಳಿದುಕೊಂಡರೋ, ಯಾ ತಪ್ಪರ್ಥ ಮಾಡಿಕೊಂಡರೋ ಎಂಬದು ಯಾರಿಗೂ ಆ ಹುಕುಮನ್ನು ನೋಡಿದವರಿಗೂ ಚೆನ್ನಾಗಿ ಗೊತ್ತಿದೆ. ಆದರೆ ಈಗ ಬಡ ಉಪಾಧ್ಯಾಯರುಗಳು ಮೇಲಧಿಕಾರಿಯು ತಮ್ಮ ಮೇಲೆ ಹೊರಿಸಿರುವ ತಪ್ಪನ್ನು ಅಲ್ಲಗಳೆಯಲಾರರೆಂದು ಯಾರಿಗೆ ತಾನೇ ಗೊತ್ತಾಗದು. ಅದಂತಿರಲಿ.

ಹೈಸ್ಕೂಲುಗಳಲ್ಲಿ ಒಂದೇ ತರಗತಿಯಲ್ಲಿ ಮೂರು ವರ್ಷ ಸೋತವರನ್ನು ಶಾಲೆಯಿಂದ ವಜಾ ಹಾಕಲಾಗುವದೆಂಬ ನಿಬಂಧನೆಯ ಆವಶ್ಯಕತೆಯೇ ಇಲ್ಲವೆಂದು ನಮ್ಮ ಅಭಿಪ್ರಾಯ. ಈ ಮೊದಲು ಒಂದೆರಡು ಸಾರಿ ನಾವು ಸೂಚಿಸಿದ್ದಂತೆ ಒಬ್ಬ ವಿದ್ಯಾರ್ಥಿಯು ಸೋಲುವಿಕೆಗೆ ಅವನ ಸೋಮಾರಿತನ, ಮನೆತನದ ತೊಂದರೆಗಳು ಅಂದರೆ ಅವನ ತಂದೆ ತಾಯಿಗಳಿಗೆ ಕಷ್ಟ ಕಾಲದಲ್ಲಿ ಅಲ್ಪ ಸ್ವಲ್ಪ ಸಹಾಯ ಮಾಡಬೇಕಾದದ್ದು, ಉಪಾಧ್ಯಾಯರುಗಳು ಚೆನ್ನಾಗಿ ಪಾಠ ಹೇಳದಿರುವಿಕೆ ಮುಂತಾದ ಹಲವು ಕಾರಣಗಳಿವೆ. ಇವುಗಳ ದೆಸೆಯಿಂದ 3 ವರ್ಷ ಸೋತವರಿಗೆ ತಮ್ಮ ವಿದ್ಯಾಭ್ಯಾಸವನ್ನು ಮುಂದರಿಸಲು ಅನುಕೂಲ ಕೊಡದಿರುವದು ಎಂದೂ ನ್ಯಾಯವಲ್ಲ. ದಡ್ಡ ಹುಡುಗರ ದೆಸೆಯಿಂದ ಹುಷಾರಾಗಿರುವ ಹುಡುಗರಿಗೆ ಶಾಲೆಯಲ್ಲಿ ಸ್ಥಳ ಸಿಕ್ಕದಾಗುತ್ತದೆಂದು ಇನ್ಸ್‌ಪೆಕ್ಟರವರು ವಾದಿಸಿದರಂತೆ. ಬಹು ದಡ್ಡ ಮಕ್ಕಳನ್ನು ಮೂರು ವರ್ಷಗಳ ವರೆಗೆ ಸೋತ ಮೇಲೆ ಪುನಹ ಹಣ ಕೊಟ್ಟು ಶಾಲೆಗೆ ಕಳುಹಿಸುವ ತಂದೆ ತಾಯಿಗಳು ಇರಲಿಕ್ಕಿಲ್ಲ, ಇದ್ದರೂ ಬಹು ವಿರಳವೆಂದೇ ಹೇಳಬೇಕು. ಇಂಥಾ ಸಂದರ್ಭಗಳು ಬಹು ಕಡಿಮೆಯಾದುದರಿಂದ ಅವರನ್ನು ವಜಾ ಮಾಡುವ ಅಧಿಕಾರವನ್ನು ಹೆಡ್ಡ್ ಮಾಸ್ಟರುಗಳಿಗೆ ಬಿಡಬಹುದು.

ಭೇಟಿಯಲ್ಲಿ ಚರ್ಚೆ ನಡೆದಾಗ ಡೆಪ್ಯುಟೇಶನಿನವರು 16 ವರ್ಷದ ಮಿತಿಯನ್ನಾದರೂ ಇಡಬೇಕೆಂತ ವಾದಿಸಿದ್ದಕ್ಕೆ 15 ವರ್ಷವಿಡಬಹುದೆಂತ ಚೀಫ್‌ಕಮಿಶನರು ಒಪ್ಪಿಕೊಂಡರಂತೆ. ಈ ವಿನಾಯತಿಯಿಂದ ಸಣ್ಣ ಮಕ್ಕಳ ವಿದ್ಯಾಭ್ಯಾಸಕ್ಕೆ ಅಡ್ಡಿಯಾಗುವದಿಲ್ಲವೆಂದು ತೋರಿಸಿರುವರು. ಆದರೆ ಫಸ್ಟ್ ಫಾರಮಿನಲ್ಲಿಯೂ, ಸೆಕೆಂಡ್ ಫಾರಮಿನಲ್ಲಿಯೂ ಈ ವಯಸ್ಸು 15 ವರ್ಷ ಮೀರಿದವರಿಗೆ ಏಕ ರೀತಿಯಾಗಿ ಅನ್ವಯಿಸಬೇಕೆಂಬದರಲ್ಲಿ ಸ್ವಲ್ಪವೂ ನ್ಯಾಯವಿಲ್ಲ.

ಕೆಲವು ಸಮಯದ ಹಿಂದೆ ಇಂಪೀರಿಯಲ್ ಸ್ಕಾಲರ್ ಶಿಪ್ಪು ಯೋಗ್ಯರಾದವರಿಗೆ ಕೊಡಲ್ಪಡದೆ ತಮ್ಮ ಇಷ್ಟ ಬಂದವರಿಗೆ ಕೊಡಲ್ಪಟ್ಟಿತ್ತೆಂಬ ಪುಕಾರನ್ನು ಕುರಿತು ಪ್ರಸ್ತಾಪಿಸಿದಾಗ ಇನ್ಸ್‌ಪೆಕ್ಟರವರು ಆಗ್ಯೆ ತಾನು ಉದ್ಯೋಗದಲ್ಲಿರಲಿಲ್ಲವೆಂತ ಹೇಳಿದ್ದರಿಂದ ಅಂಥಾ ನ್ಯಾಯವಲ್ಲದ ವರ್ತನೆಯು ಇನ್ನು ಮುಂದೆ ನಡೆಯದಂತೆ ನೋಡಿಕೊಳ್ಳಲಾಗುವದೆಂದು ಚೀಫ್ ಕಮಿಷನರು ಕೊಟ್ಟ ಭರವಸೆಯನ್ನು ಇಲಾಖೆಯವರು ಪಾಲಿಸುವರಾಗಿ ಆಶಿಸುತ್ತೇವೆ.

ಮೇಲಿನ ತರಗತಿಗೆ ಯೋಗ್ಯರಾದ ವಿದ್ಯಾರ್ಥಿಗಳನ್ನು ಆರಿಸುವದಕ್ಕಾಗಿಯೇ ಪರೀಕ್ಷೆಯನ್ನಿಟ್ಟಿರುವದೆಂಬದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಸ್ಥಳ ಸಂಕೋಚದಿಂದ ಇಲ್ಲಿ ಲೋವರ್ ಸೆಕೆಂಡರಿ ಮತ್ತು ಪ್ರೈಮರಿ ಬೋರ್ಡ್ ಪರೀಕ್ಷೆಗಳನ್ನು ಕಠಿಣ ಮಾಡುತ್ತಿರುವದೆಂಬದೂ ವಿಷದವಾಗಿದೆ. ಆದುದರಿಂದ ವಿದ್ಯಾಭ್ಯಾಸಕ್ಕೆ ಸ್ಥಳ ವಿಸ್ತರಿಸಬೇಕಾದುದ್ದೇ ಮುಖ್ಯವಾಗಿದೆ. ಈ ವಿಷಯವೆತ್ತಿದಾಗ ಕೌನ್ಸಿಲಿನವರು ಹೆಚ್ಚಿನ ಹಣ ಮಂಜೂರುಮಾಡಲು ಶಿಫಾರಸ್ಸು ಮಾಡಿದರೆ ಯೋಚಿಸಲಾಗುವದೆಂದು ಚೀಫ್‌ಕಮಿಷನರವರು ಹೇಳಿದರಂತೆ. ಕೂಡಲೆ ಡೆಪ್ಯುಟೇಶನಿನ ಒಬ್ಬ ಮೆಂಬರರು ವೀರರಾಜಪೇಟೆಯಲ್ಲಿ ಗಣಿತ ಶಾಸ್ತ್ರ ಕಲಿಸುವ ಏರ್ಪಾಡು ಮಾಡಬೇಕೆಂದು ಕೌನ್ಸಿಲಿನವರು ತೀರ್ಮಾನಿಸಿರುವರೆಂದೂ, ಇದನ್ನು ಜಾರಿಗೆ ತಂದರೆ ಮಡಿಕೇರಿ ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳ ತುಮುಕು ಕಡಿಮೆಯಾಗುವದೆಂದೂ ಸೂಚಿಸಿದರಂತೆ. ಇದು ಸಂಪೂರ್ಣ ನಿಜವೆ. ಇದನ್ನು ಕೇಳಿದ ಚೀಫ್‌ಕಮಿಷನರು ಈ ವಿಷಯ ಯೋಚಿಸುತ್ತೇನೆಂದು ಹೇಳಿದರಂತೆ. ಕೌನ್ಸಿಲಿನಲ್ಲಿ ಈ ತೀರ್ಮಾನವಾಗಿ ಕೆಲವು ವರ್ಷಗಳಾದರೂ ಮತ್ತು ಇದರ ವಿಷಯ ಆಗಾಗ್ಯೆ ಕೌನ್ಸಿಲಿನಲ್ಲಿ ಪ್ರಶ್ನೆ ಕೇಳುತ್ತಿದ್ದರೂ ನಮ್ಮ ಪ್ರಾಂತೀಯ ಸರ್ಕಾರದ ಮುಖ್ಯ ಅಧಿಕಾರಿಯೂ ಮತ್ತು ಕೌನ್ಸಿಲಿನ ಅಧ್ಯಕ್ಷರಾದ ಚೀಫ್‌ಕಮಿಷನರವರಿಗೆ ಇದು ಇನ್ನೂ ಗೊತ್ತಿರುವದಿಲ್ಲವೆಂಬುದು ಆಶ್ಚರ್ಯವೇ ಸರಿ. ಇವರು ಹೊಸಬರೆಂದು ನಮಗೆ ಗೊತ್ತಿದೆ. ಆದರೂ ಇವರು ಆ ದೊಡ್ಡ ಜವಾಬ್ದಾರಿಯ ಉದ್ಯೋಗವನ್ನು ವಹಿಸಿಕೊಂಡಿರುವವರಾದುದರಿಂದ ಇವೆಲ್ಲವನ್ನೂ ತಿಳಿದುಕೊಂಡಿರಬಹುದೆಂದು ನಂಬಿದ್ದೆವು. ಈ ವಿಷಯವನ್ನು ಇನ್ನು ಯೋಚಿಸುತ್ತಾರಂತೆ! ಇದು ಯೋಚಿಸಲ್ಪಟ್ಟು ಇನ್ಯಾವಾಗ ಜಾರಿಗೆ ತರಲ್ಪಡುವದೋ ಗೊತ್ತಾಗುವದಿಲ್ಲ. ಕೌನ್ಸಿಲಿನ ಹಲವು ಮುಖ್ಯ ಠರಾವುಗಳನ್ನು ಸರ್ಕಾರದವರು ಹೀಗೆ ಅಲಕ್ಷ್ಯಭಾವದಿಂದ ನೋಡುತ್ತಿರುವದು ತುಂಬಾ ವ್ಯಸನಕರವೂ ಅತೃಪ್ತಿಕರವೂ ಆಗಿದೆಯೆಂದು ಎಷ್ಟು ಹೇಳಿದರೂ ಸಾಲದು.

## ಎಸೆಂಬ್ಲಿಯ ಅಧ್ಯಕ್ಷರು.

ಈ ಸಾರಿಯ ಎಸೆಂಬ್ಲಿ ಮೀಟಿಂಗಿನಲ್ಲಿ ಸರ್ಕಾರದವರು ಚರ್ಚೆಗೆ ತಂದ 'ಪಬ್ಲಿಕ್ ಸೇಫ್ಟಿ ಬಿಲ್' ನ್ನು ಕುರಿತು ಸ್ವರಾಜ್ಯಪಕ್ಷದ ಮುಂದಾಳಾದ ಪಂಡಿತ ಮೋತಿಲಾಲ್ ನೆಹರುರವರು ಎತ್ತಿದ ಒಂದೆರಡು ಆಕ್ಷೇಪಗಳು ನ್ಯಾಯವೆಂದು ಅಧ್ಯಕ್ಷರಾದ ನಾಮದಾರ ವಿ ಜೆ ಪಟೇಲರವರು ನಿರ್ಣಯಿಸಿದ್ದಕ್ಕೆ ಕೆಲವು ಬ್ರಿಟಿಷ್ ಮತ್ತು ಆಂಗ್ಲೋ ಇಂಡಿಯನ್ ಪತ್ರಿಕೆಗಳು ಅಧ್ಯಕ್ಷರು ಪಕ್ಷವನ್ನು ವಹಿಸಿ ಕೆಲಸ ನಡಿಸುತ್ತಾರೆಂದು ಮುಂತಾಗಿ ಪಟೇಲರವರ ಮೇಲೆ ಆರೋಪಣೆಗಳನ್ನು ಹೊರಿಸಿ ಬರೆದಿದ್ದವು. ಇಂಥಾ ಬರವಣಿಗೆಗಳಿಗೆ ಸರ್ಕಾರದ ಉದ್ಯೋಗಸ್ಥರು ಉತ್ತೇಜನಕೊಡುತ್ತಿದ್ದಾರೆಂದು 'ಪಯೋನೀಯರ್' ಪತ್ರಿಕೆಯ ಸ್ವಂತ ಒಬ್ಬ ವಾರ್ತಾದಾರರೊಬ್ಬರು ಸೂಚಿಸಿದ್ದರು. ಈ ಸಂಗತಿಗಳನ್ನು ಕುರಿತು ಚುನಾಯಿತ ಮೆಂಬರುಗಳು ಎಸೆಂಬ್ಲಿಯಲ್ಲಿ ಚರ್ಚಿಸಿದರು. ಆಗ್ಯೆ ಸರ್ಕಾರಿ ಮೆಂಬರಾದ ಮಿ. ಕ್ರೆರಾರ್‌ರವರು ಪತ್ರಿಕೆಗಳು ಅಧ್ಯಕ್ಷರ ಮೇಲೆ ಹೊರಿಸುತ್ತಿರುವ ಆರೋಪಗಳಿಗೆ ಸರ್ಕಾರದವರು ಹೊಣೆಯಲ್ಲವೆಂತಲೂ, ಎಸೆಂಬ್ಲಿಯ ಹೊರಗಿನ ಟೀಕೆಗಳಿಗೆ ಸರ್ಕಾರಕ್ಕೂ ಸಂಬಂಧವೇನೂ ಇಲ್ಲವೆಂತಲೂ ಅಸಮಾಧಾನಕರವಾದ ಜವಾಬನ್ನಿತ್ತರು.

ಈ ಮಧ್ಯೆ ವೈಸರಾಯರ ಪ್ರೇರಣೆಯಿಂದಲೋ ಏನೋ ಮಿ. ಕ್ರೆರಾರ್‌ರವರು ಪುನಹ ಈ ತಾ 22ರಲ್ಲಿ ಎಸೆಂಬ್ಲಿಯಲ್ಲಿ ತಾನು ಮೊದಲು ಮಾಡಿದ ಭಾಷಣದಿಂದ ಸರ್ಕಾರದವರ ನಿಜವಾದ ಅಭಿಪ್ರಾಯವನ್ನು ಸೂಚಿಸದಕ್ಕೆ ತಾನು ವಿಷಾದಿಸುತ್ತೇನೆಂತಲೂ, ಅಧ್ಯಕ್ಷರು ಇಂದಿನ ವರೆಗೆ ಪಕ್ಷಪಾತವನ್ನು ತೋರಿಸಿರುವರೆಂದು ಸರ್ಕಾರದವರು ಎಂದೂ ಎಣಿಸಿರುವದಿಲ್ಲವೆಂತಲೂ, ಎಸೆಂಬ್ಲಿಯ ಮತ್ತು ಅಧ್ಯಕ್ಷರ ಮರ್ಯಾದೆಯನ್ನೂ, ಘನತೆಯನ್ನೂ ಕಾಪಾಡಲು ಸರ್ಕಾರದವರು ಯಾವಾಗಲೂ ಕುತೂಹಲದಿಂದಿರುವರೆಂತಲೂ, ಅಧ್ಯಕ್ಷರ ವರ್ತನೆಯನ್ನು ಟೀಕಿಸಿದ ಉದ್ಯೋಗಸ್ಥರ ಮೇಲೆ ತಕ್ಕ ಕ್ರಮ ಜರಗಿಸಲಾಗುವದೆಂತಲೂ ಮುಂತಾಗಿ ಪಶ್ಚಾತ್ತಾಪದ ಭಾಷಣವನ್ನು ಮಾಡಿದರು.

ಸ್ವರಾಜ್ಯ ಪಾರ್ಟಿಯವರ ಪರವಾಗಿ ಪಂಡಿತ ಮೋತಿಲಾಲ್ ನೆಹರುರವರೂ ನೇಶನಲಿಸ್ಟ್ ಸಂಗಡಿಗರವರ ಪರವಾಗಿ ಲಾಲಾ ಲಜಪತರಾಯರೂ, ಇಂಡಿಪೆಂಡೆಂಟ್ ಪಕ್ಷದ ಕಡೆಯಿಂದ ಸರ್ ಪುರುಷೋತ್ತಮದಾಸ್ ಠಾಕೂರ್‌ದಾಸ್‌ರವರೂ, ಯೂರೋಪಿಯನ್ ಪಾರ್ಟಿಯ ಪರಿಯಿಂದ ಮಿ. ಕೋಕ್‌ರವರೂ ಸೆಂಟ್ರಲ್ ಮುಸ್ಲಿಮ್ ಪಕ್ಷದಿಂದ ಸರ್ ಜುಲ್ಫಿಕಾರ್ ಅಲಿ ಖಾನ್‌ರವರೂ ಸರ್ಕಾರಿ ಮೆಂಬರರ ಪಶ್ಚಾತ್ತಾಪಕ್ಕೆ ಮೆಚ್ಚಿಗೆಯನ್ನು ಸೂಚಿಸಿ, ಅಧ್ಯಕ್ಷರ ನಿಷ್ಪಕ್ಷಪಾತ ಗುಣದ ಮೇಲೆ ತಮಗೆಲ್ಲರಿಗೂ ಸಂಪೂರ್ಣ ವಿಶ್ವಾಸವಿದೆಯೆಂದೂ, ಎಸೆಂಬ್ಲಿಯ ಮತ್ತು ಅಧ್ಯಕ್ಷರ ಗೌರವವನ್ನು ಕಾಯಲು ತಾವೆಲ್ಲರೂ ಅಧ್ಯಕ್ಷರಿಗೆ ಬೆಂಬಲರಾಗಿರುವೆವೆಂದೂ ಮಾತಾಡಿದರು. ಎಸೆಂಬ್ಲಿಯ ಮೆಂಬರುಗಳಿಗೂ ಸರ್ಕಾರದವರಿಗೂ ತನ್ನ ಮೇಲಿರುವ ವಿಶ್ವಾಸಕ್ಕೆ ಅವರನ್ನು ವಂದಿಸಿ, ಆ ವಿಶ್ವಾಸವನ್ನು ಪಾಲಿಸಲು ತಾನು ಸರ್ವ ಪ್ರಯತ್ನವನ್ನು ಮಾಡುತ್ತಿದ್ದೇನೆಂತ ಅಧ್ಯಕ್ಷರು ಉತ್ತರವನ್ನಿತ್ತರು.

ಪಂಡಿತಮೋತಿಲಾಲ್ ನೆಹರುರವರು ಸೂಚಿಸಿದಂತೆ 'ಭೂಲೋಕದ ಯಾವ ನ್ಯಾಯವಿಧಾಯಕ ಸಭೆಯ ಅಧ್ಯಕ್ಷಸ್ಥಾನವನ್ನಾದರೂ ವಹಿಸಲು ಯೋಗ್ಯರಾಗಿರುವ ಶ್ರೀಯುತ ಪಟೇಲರವರ ಮೇಲೆ ಪಕ್ಷಪಾತದ ಆರೋಪಣೆಯನ್ನು ಹೊರಿಸುವದು ಒಂದೇ ಹೊಟ್ಟೆಕಿಚ್ಚಿನಿಂದಲ್ಲದೆ ಬೇರೆಯಲ್ಲ. ಇದನ್ನು ಕುರಿತು ಸರ್ಕಾರಿ ಮೆಂಬರರು ಉಪೇಕ್ಷೆಯ ಅಭಿಪ್ರಾಯವನ್ನಿತ್ತದ್ದು ಯೋಗ್ಯವಾಗಿರಲಿಲ್ಲ. ಬೇಗನೆ ಅವರು ಅದಕ್ಕೆ ವಿಷಾದವನ್ನು ಸೂಚಿಸಿ ಸರ್ಕಾರದ ಘನತೆಯನ್ನು ಕಾಪಾಡಿದ್ದು ದೇಶದವರಿಗೆಲ್ಲರೂ ತೃಪ್ತಿಯನ್ನುಂಟುಮಾಡಿದೆ. ಎಸೆಂಬ್ಲಿಯ ಪ್ರಥಮ ಚುನಾಯಿತ ಅಧ್ಯಕ್ಷರಾದ ಪಟೇಲರವರು ತಮ್ಮ ಅಮೋಘವಾದ ಸಮದೃಷ್ಟಿಯ ವರ್ತನೆಯಿಂದ ಇಡೀ ಹಿಂದೂ ದೇಶಕ್ಕೇನೇ ಗೌರವವನ್ನು ಸಂಪಾದಿಸಿದವರೆಂದು ಹೇಳಬೇಕಾಗಿದೆ. ಈ ಸಂದರ್ಭ ಹಿಂದೂ ದೇಶ ಪ್ರತಿನಿಧಿ ಸಭೆಯು ಅದರ ಅಧ್ಯಕ್ಷರಲ್ಲಿ ಇಟ್ಟಿರುವ ಸಂಪೂರ್ಣ ವಿಶ್ವಾಸಕ್ಕಾಗಿ ನಾವು ಶ್ರೀ ಪಟೇಲರವರನ್ನು ಅಭಿನಂದಿಸುತ್ತೇವೆ.

## ಗ್ರಾಮಗಳ ಪುನರುದ್ಧಾರ.

(ಒಂದು ಬಂದದ್ದು)

(ಮುಂದುವರಿದದ್ದು)

ನಮ್ಮ ರೈತರು ಪೂರ್ವ ಪದ್ಧತಿಯಂತೆಯೇ ನಡೆದುಕೊಳ್ಳುತ್ತಾ, ಹೊಸ ವಿಷಯಗಳು ಗೊತ್ತಾದರೂ ಅವುಗಳನ್ನು ಸರಿಯಾಗಿ ತಮ್ಮ ಹಳೇ ಪದ್ಧತಿಗಳನ್ನು ಬಿಡಲಾಗದವರಾಗಿದ್ದಾರೆ. ಇದು ಬಹಳ ಮಟ್ಟಿಗೆ ತಿಳುವಳಿಕೆ ಕಮ್ಮಿಯಾಗಿರುವುದರ ದೆಸೆಯಿಂದಲ್ಲದೆ ಬೇರೆಯಲ್ಲ. ... ದ ಯಾವ ಜನರಲ್ಲಿ ಆವಶ್ಯವಾದ ವಿಷಯಗಳುಂಟೋ ಅವುಗಳನ್ನು ತಿಳಿದುಕೊಂಡು ಅವುಗಳನ್ನೇ ನಮ್ಮ ಅಭಿವೃದ್ಧಿಗೆ ಉಪಯೋಗಿಸಿಕೊಂಡರೆ ನಮ್ಮ ರೈತರ ಏಳಿಗೆಯು ಕಟ್ಟದಾಗುವುದು.

ಪಾಶ್ಚಿಮಾತ್ಯರು ಗೊಬ್ಬರಗಳ ಪ್ರಯೋಜನಗಳನ್ನು ಬಹಳ ಶ್ರಮಪಟ್ಟು ಕಂಡುಹಿಡಿದಿರುವರು. ಮತ್ತು ಯಾವ ಗೆಯ ಗೊಬ್ಬರಗಳು ಯಾವ ಯಾವ ಪೈರಿಗೆ ಫಲಕಾರಿಯಾದವನ್ನೂ ಮತ್ತು ಗೊಬ್ಬರಗಳನ್ನು ಶೇಖರಿಸಿಡುವ ಬಗೆಯನ್ನೂ ಕಂಡುಹಿಡಿದಿರುತ್ತಾರೆ. ನಮ್ಮ ರೈತರಿಗೆ ನೈಟ್ರೋಜನ್ ವಾಯುವಿನ ಉಪಯೋಗವೇ ತಿಳಿದಿರುವುದಿಲ್ಲವಾದ ಕಾರಣ ನೈಟ್ರೋಜನ್ ಎಂಬ ಪದಾರ್ಥವು ವ್ಯರ್ಥವಾಗಿ ಗೊಬ್ಬರವು ನಿಸ್ಸಾರವಾಗುವುದು. ಗೊಬ್ಬರದ ಗುಡ್ಡೆಗೆ ಒಂದು ಕೋಲಿನಿಂದ ರಂಧ್ರವನ್ನು ಮಾಡಿ ಆ ರಂಧ್ರದಿಂದ ಒಳಗಾಳಿಗೆ ಒಂದು ಅರಸಿನ ತೋಯಿಸಿದ ಬಟ್ಟೆಯನ್ನು ... ಆ ಬಟ್ಟೆಯು ಕೆಂಪು ಬಣ್ಣಕ್ಕೆ ತಿರುಗುವುದು. ... ಗೊಬ್ಬರವಿದ್ದರೆ ಅದು ಉತ್ಕೃಷ್ಟವಾದ ಗೊಬ್ಬರವೆನಿಸದೆ ಹಾಗಿಲ್ಲದಿದ್ದರೆ ಹೊರಗಿನ ವಾಯುವು ಆ ಗೊಬ್ಬರದ ಮೇಲೆ ಬಿದ್ದು ಅದರ ಸಾರವನ್ನು ಹೀರಿಬಿಟ್ಟಿರುವುದು. ಎಂದರೆ ನಮ್ಮ ಗ್ರಾಮಗಳ ರೈತರು ಗೊಬ್ಬರ ಜತನಮಾಡುವ ವಿಷಯವನ್ನರಿಯದಿರುವುದರಿಂದ ಸಗಣಿಯನ್ನು ಬೆರಣಿಮಾಡಿ ಸುಟ್ಟುಬಿಡುತ್ತಾರೆ. ಸತ್ತ ದನಗಳ ಎಲುಬನ್ನು ವ್ಯರ್ಥವಾಗಿ ಬಿಸಾಡುತ್ತಾರೆ. ಎಲುಬಿನ ಗೊಬ್ಬರದಿಂದ ಎಷ್ಟು ಪ್ರಯೋಜನವೆಂದು ಇವರಿಗೆ ಗೊತ್ತೇ ಇಲ್ಲ. ಇದೆಲ್ಲವನ್ನು ತಿಳಿಸಬೇಕಾದರೆ ನಿದರ್ಶನ ಕೆಲಸವನ್ನು ಕೈಕೊಳ್ಳಬೇಕು. ವ್ಯವಸಾಯ ಸಂಘಗಳು ಬೀಜಗಳ ಸೇಕರಣೆ ಮತ್ತು ಬೀಜಗಳನ್ನು ಒದಗಿಸುವುದು, ನೀರಿನ ಸೌಕರ್ಯ ಮಾಡಿ ಕೊಡುವುದು, ಪೈರು ಪಚ್ಚೆಗಳಿಗೆ ತಗಲುವ ರೋಗ ನಿವಾರಣೆ ಇವೇ ಮೊದಲಾದ ನಾನಾವಿಧವಾದ ಕೆಲಸಗಳನ್ನು ಕೈಕೊಳ್ಳಬೇಕು. ಹಿಂದುಳಿದ ರೈತರನ್ನು ... ಟ್ಟದ ಸರಹದ್ದಿನಲ್ಲಿ ವಿಶಾಲವಾದ ಪ್ರದೇಶಗಳಲ್ಲಿ ಸಾಯೋತ್ಕರ್ಷಣಗಳನ್ನು ರೂಢಿಗೆ ತರುವುದು ... ಜನವಾದ ಕೆಲಸ. ವ್ಯವಸಾಯ ಸಂಘಗಳೂ, ... ರರ ಸಂಘಗಳೂ, ಒಕ್ಕಲಿಗರ ಸಂಘಗಳೂ ಎಲ್ಲೆಲ್ಲಿವೆಯೋ ಅಲ್ಲಲ್ಲಿ ಅವರು ಸೇರುವ ಅಧಿವೇಶನಗಳಲ್ಲಿ ರೈತರಿಗೆ ಈ ವಿಷಯಗಳನ್ನು ಕ್ರಮವಾಗಿ ಬೋಧಿಸಿ ವ್ಯವಸಾಯ ಇಲಾಖೆಯವರ ಬೆಂಬಲದಿಂದ ರೈತರ ಸ್ವಂತ ಜಮೀನುಗಳಲ್ಲಿ ಪರೀಕ್ಷೆಗಳನ್ನು ನಡಿಸಿದರೆ ಬಹಳ ಪ್ರಯೋಜನವುಂಟು. ವ್ಯವಸಾಯದಲ್ಲಿ ಅಭಿವೃದ್ಧಿಕ್ಕೋಸ್ಕರ ಉತ್ತಮ ಜುನಾವಣೆಗಿಂತ ಉನ್ನತವಾದ ಕಾರ್ಯವಿಲ್ಲ. ಜುನಾವಣೆಯಿಂದ ಆಶ್ಚರ್ಯಕರವಾದ ಫಲವನ್ನು ...

(4ನೇ ಪುಟದಲ್ಲಿ ಮುಂದುವರಿಯುವುದು)

## ಮಹಾತ್ಮಗಾಂಧಿಯವರ ಸ್ವಚರಿತ್ರೆ.

೫ನೇ ಭಾಗದಲ್ಲಿ ೫ನೇ ಪ್ರಕರಣ

### ಲಕ್ಷ್ಮಣ ಸೇತುವೆ

ಗುರುಕುಲವನ್ನು ನೋಡಿ ಧೀಮಂತರಾದ ಮಹಾತ್ಮಾ ಮುನ್ಷಿರಾಮ (ಸ್ವಾಮಿ ಶ್ರದ್ಧಾನಂದ)ರನ್ನು ನೋಡಿದಾಗ ನಾನು ಶಾಂತಚಿತ್ತನಾದೆನು. ನನಗೆ ಹರಿದ್ವಾರದ ಗಲಿಬಿಲಿಗೂ ಗುರುಕುಲದ ಶಾಂತಿಗೂ ಮಧ್ಯೆ ಇದ್ದ ಮಹದಂತರವು ಒಡನೆಯೇ ಹೊಳೆಯಿತು.

ಮಹಾತ್ಮರು ನನ್ನನ್ನು ತಮ್ಮ ಪ್ರೇಮದಲ್ಲಿ ಮುಳುಗಿಸಿದರು. ಬ್ರಹ್ಮಚಾರಿಗಳು ನನ್ನ ಶುಶ್ರೂಷೆಯಲ್ಲಿ ನಿರತರಾದರು. ಇಲ್ಲಿಯೇ ನನಗೆ ಮೊಟ್ಟಮೊದಲು ಆಚಾರ್ಯ ರಾಮದೇವಜಿಯವರ ಪರಿಚಯವಾದುದು. ಅವರು ಎಂತಹ ಮಹಾನುಭಾವರೆಂಬುದು ಕ್ಷಣವೇ ನನ್ನ ಗೋಚರಕ್ಕೆ ಬಂದಿತು. ಕೆಲವು ವಿಷಯಗಳಲ್ಲಿ ನಾವು ಭಿನ್ನಮತವುಳ್ಳವರಾಗಿದ್ದರೂ ನಮ್ಮ ಸಂಬಂಧವು ಶೀಘ್ರದಲ್ಲಿಯೇ ಮೈತ್ರಿಯಾಗಿ ಬೆಳೆಯಿತು.

ಗುರುಕುಲದಲ್ಲಿ ಔದ್ಯೋಗಿಕ ಶಿಕ್ಷಣವನ್ನು ಆರಂಭಿಸುವ ವಿಚಾರವನ್ನು ಕುರಿತು ನಾನು ಆಚಾರ್ಯ ರಾಮದೇವಜಿಯವರೊಡನೆಯೂ ಇತರ ಅಧ್ಯಾಪಕರೊಡನೆಯೂ ದೀರ್ಘವಾಗಿ ಚರ್ಚಿಸಿದೆನು. ಅಲ್ಲಿಂದ ಹೊರಡಬೇಕಾದ ಸಮಯವು ಬಂದಾಗ ನನಗೆ ದುಃಖವುಂಟಾಯಿತು.

ನಾನು ಲಕ್ಷ್ಮಣ ಜೂಲ (ಸೇತುವೆ)ದ ಪ್ರಶಂಸೆಯನ್ನು ಬಹುವಾಗಿ ಕೇಳಿದ್ದೆನು. ಇದು ಹೃಷೀಕೇಶಕ್ಕೆ ಸ್ವಲ್ಪ ದೂರದಲ್ಲಿರುವ ತೂಗು ಸೇತುವೆಯಾಗಿದ್ದಿತು. ನಾನು ಈ ಸೇತುವೆಯನ್ನು ನೋಡದೆ ಹರಿದ್ವಾರದಿಂದ ಹಿಂತಿರುಗಕೂಡದೆಂದು ಬಹು ಮಂದಿ ಮಿತ್ರರು ನನಗೆ ಆಗ್ರಹಪೂರ್ವಕವಾಗಿ ಹೇಳಿದರು. ನಾನು ಈ ಯಾತ್ರೆಯನ್ನು ಕಾಲುನಡೆಯಲ್ಲಿ ಮಾಡಲಿಚ್ಛಿಸಿ ಇದನ್ನು ಎರಡು ಪಯಣದಲ್ಲಿ ಮುಗಿಸಿದೆನು—ಹೃಷೀಕೇಶಕ್ಕೊಂದು ಅಲ್ಲಿಂದ ಲಕ್ಷ್ಮಣ ಸೇತುವಿಗೊಂದು.

ಹೃಷೀಕೇಶದಲ್ಲಿ ಅನೇಕ ಸನ್ಯಾಸಿಗಳು ನನ್ನನ್ನು ನೋಡುವುದಕ್ಕೆ ಬಂದರು. ಅವರಲ್ಲಿ ಒಬ್ಬರು ನನ್ನಿಂದ ವಿಶೇಷವಾಗಿ ಆಕರ್ಷಿತರಾದರು. ಫೀನಿಕ್ಸ್ ಪಂಗಡವು ಅಲ್ಲಿದ್ದಿತು. ಅದರ ವಿಷಯವಾಗಿ ಆ ಸ್ವಾಮಿಗಳು ಅನೇಕ ಪ್ರಶ್ನೆಗಳನ್ನು ಕೇಳಿದರು.

ನಮ್ಮ ಮಧ್ಯೆ ಧರ್ಮಸಂಬಂಧವಾಗಿ ಚರ್ಚೆಯಾಯಿತು. ಧಾರ್ಮಿಕ ವಿಷಯಗಳಲ್ಲಿ ನನಗೆ ಬಹು ಶ್ರದ್ಧೆಯಿದ್ದಿತೆಂಬುದು ಅವರಿಗೆ ಗೊತ್ತಾಯಿತು. ಗಂಗಾಸ್ನಾನಮಾಡಿ ತಲೆಯ ಮೇಲೂ ಬೆನ್ನಿನ ಮೇಲೂ ಏನೂ ಇಲ್ಲದೆ ನಾನು ಬರುತ್ತಿದ್ದುದನ್ನು ಅವರು ಕಂಡರು. ನನ್ನ ತಲೆಯಲ್ಲಿ ಶಿಖೆ (ಜುಟ್ಟು)ಯೂ, ಮೈಮೇಲೆ ಯಜ್ಞೋಪವೀತವೂ ಇಲ್ಲದುದನ್ನು ಕಂಡು ಅವರು ನೊಂದುಕೊಂಡು,

"ಆಸ್ತಿಕ ಹಿಂದೂಗಳಾದ ನೀವು ಜುಟ್ಟು ಜನಿವಾರವಿಲ್ಲದೆ ಇರುವುದನ್ನು ನೋಡಿ ನನಗೆ ದುಃಖವಾಗುತ್ತದೆ. ಇವೆರಡೂ ಹಿಂದೂಧರ್ಮದ ಬಾಹ್ಯ ಚಿಹ್ನೆಗಳು. ಪ್ರತಿಯೊಬ್ಬ ಹಿಂದುವೂ ಇವೆರಡನ್ನೂ ಇಟ್ಟುಕೊಂಡೇ ಇರಬೇಕು" ಎಂದು ಹೇಳಿದರು.

ಇವೆರಡನ್ನೂ ನಾನು ಬಿಟ್ಟು ಬಿಟ್ಟುದು ಒಂದು ಕಥೆ. ನಾನು ಹತ್ತು ವರ್ಷದ ಹುಡುಗನಾಗಿದ್ದಾಗ ಪೋರಬಂದರದ ಬ್ರಾಹ್ಮಣ ಹುಡುಗರು ತಮ್ಮ ಜನಿವಾರಕ್ಕೆ ಬೀಗದ ಕೈ ಸರವನ್ನು ಹಾಕಿಕೊಂಡು 'ಝಣ್' 'ಝಣ್' ಎನಿಸುತ್ತಿದ್ದುದನ್ನು ನೋಡಿ ನನಗೂ ಹಾಗೆ ಮಾಡಲು ಆಸೆಯಾಯಿತು. ಆ ಕಾಲದಲ್ಲಿ ಕಾಠ್ಯಾವಾಡದ ವೈಶ್ಯರಲ್ಲಿ ಯಜ್ಞೋಪವೀತವನ್ನು ಧರಿಸುವ ವಾಡಿಕೆಯು ರೂಢಿಗೆ ಬಂದಿರಲಿಲ್ಲ. ಆದರೆ ಮೊದಲ ಮೂರು ವರ್ಣದವರು ಜನಿವಾರವನ್ನು ಹಾಕಿಕೊಳ್ಳಲೇಬೇಕೆಂಬ ಚಳವಳಿಯು ಆಗತಾನೆ ಆರಂಭವಾಗಿದ್ದಿತು. ಇದರ ಫಲವಾಗಿ ಗಾಂಧೀಮನೆತನಕ್ಕೆ ಸೇರಿದ ಕೆಲವರು ಯಜ್ಞೋಪವೀತವನ್ನು ಧರಿಸತೊಡಗಿದರು. ನಾವಿಬ್ಬರು ಮೂವರು ಹುಡುಗರಿಗೆ ರಾಮರಕ್ಷೆಯನ್ನು ಹೇಳಿಕೊಡುತ್ತಿದ್ದ ಬ್ರಾಹ್ಮಣರು ನಮಗೆ ಯಜ್ಞೋಪವೀತ ಧಾರಣೆಯನ್ನು ಮಾಡಿಸಿದರು. ನನಗೆ ಬೀಗದ ಕೈಸರದ ಅಗತ್ಯವೇನೂ ಇರದಿದ್ದರೂ ಒಂದನ್ನು ತೆಗೆದುಕೊಂಡು ಅದನ್ನು ಜನಿವಾರಕ್ಕೆ ಹಾಕಿ ಆಡಿಸತೊಡಗಿದೆನು. ಆ ಮೇಲೆ ಆ ಜನಿವಾರವು ಹರಿದು ಹೋದಾಗ ನನಗೆ ಅದರ ಮೋಹವು ಇನ್ನೂ ಕಳೆದಿದ್ದಿತೋ ಇಲ್ಲವೋ ನೆನಪಿಲ್ಲ. ಆದರೆ ನಾನು ಹೊಸ ಜನಿವಾರವನ್ನು ಹಾಕಿಕೊಳ್ಳಲಿಲ್ಲವೆಂದು ಗೊತ್ತು.

ನನಗೆ ವಯಸ್ಸು ಬಂದ ಮೇಲೆ ಪುನಃ ಜನಿವಾರವನ್ನು ತೊಡಿಸಲು ಹಿಂದೂಸ್ಥಾನದಲ್ಲೂ ದಕ್ಷಿಣ ಆಫ್ರಿಕದಲ್ಲೂ ಕೆಲವು ಸದುದ್ದೇಶಪೂರ್ವಕವಾದ ಪ್ರಯತ್ನಗಳು ನಡೆದುವು. ಆದರೆ ಅವು ಫಲಿಸಲಿಲ್ಲ. ಶೂದ್ರರು 'ಜನಿವಾರವನ್ನು ಧರಿಸಕೂಡದಾದರೆ ಇತರ ವರ್ಣಗಳಿಗೆ ಇರುವ ಅಧಿಕಾರವೇನು' ಎಂದು ನಾನು ವಾದಿಸಿದೆನು. ಮತ್ತು ನನಗೆ ಅನಾವಶ್ಯಕವಾಗಿ ತೋರಿದ ಪದ್ಧತಿಯನ್ನು ಅನುಸರಿಸಲು ಸಾಕಾದ ಯಾವ ಕಾರಣವೂ ನನಗೆ ಕಂಡುಬರಲಿಲ್ಲ. ಸುಮ್ಮನೆ ಯಜ್ಞೋಪವೀತವನ್ನು ಹಾಕಿಕೊಳ್ಳಲು ನನಗೆ ಅಭ್ಯಂತರವಿಲ್ಲ. ಆದರೆ ಅದನ್ನು ತೊಡಲು ಕಾರಣವೇ ಇರಲಿಲ್ಲ.

ನಾನು ವೈಷ್ಣವನಾದುದರಿಂದ ಸಹಜವಾಗಿ ಕೊರಳಿನಲ್ಲಿ ಕಂಠಿಯನ್ನು ಧರಿಸಿದ್ದೆನು. ಶಿಖೆಯಂತೂ ಇರಬೇಕೆಂದು ನಮ್ಮ ಹಿರಿಯರು ಎಣಿಸಿದ್ದರು. ಆದರೆ ನಾನು ಇಂಗ್ಲೆಂಡಿಗೆ ಹೊರಡಲಿರುವಾಗ ಬೋಳಿಸಿದೆನು—ತಲೆಯ ಮೇಲೆ ಏನೂ ಇಲ್ಲದಿದ್ದಾಗ ಇಂಗ್ಲಿಷ್ ಜನರ ಕಣ್ಣಿಗೆ ಬಿದ್ದು ನಾನು ನಗೆಗೀಡಾಗಿ ಆಂಗ್ಲರು ನನ್ನನ್ನು (ಆಗ ನನ್ನ ಎಣಿಕೆಯಂತೆ) ಅನಾಗರಿಕನೆಂದು ಎಲ್ಲಿ ಎಣಿಸುವರೋ ಎಂದು. ಆಫ್ರಿಕೆಯಲ್ಲಿ ಈ ನನ್ನ ಹೇಡಿತನವು ಎಷ್ಟು ದೂರ ಹೋಯಿತೆಂದರೆ, ಶ್ರದ್ಧಾಭಾವದಿಂದ ಶಿಖೆಯನ್ನು ಇಟ್ಟುಕೊಂಡಿದ್ದ ನನ್ನ ಅಣ್ಣನ ಮಕ್ಕಳಾದ ಛಗನಲಾಲ ಗಾಂಧಿ ಮುಂತಾದವರ ತಮ್ಮ ಜುಟ್ಟನ್ನು ತೆಗೆಸುವಂತೆ ಮಾಡಿದೆನು. ಶಿಖೆಯನ್ನಿಟ್ಟುಕೊಂಡಿದ್ದರೆ ಅದು ಅವರ ಸಾರ್ವಜನಿಕ ಕಾರ್ಯಕ್ಕೆ ಅಡ್ಡಬರಬಹುದೆಂಬ ಹೆದರಿಕೆಯೂ ನನಗಿದ್ದುದರಿಂದ ಅವರ ಮನಸ್ಸಿಗೆ ಖೇದವಾದರೂ ಚಿಂತೆಯಿಲ್ಲವೆಂದೆಣಿಸಿ ಅವರು ಅದನ್ನು ತೆಗೆಸುವಂತೆ ಮಾಡಿದೆನು.

ಆದುದರಿಂದ ನಾನು ಎಲ್ಲಾ ವಿಷಯವನ್ನು ಆ ಸ್ವಾಮಿಗಳಿಗೆ ತಿಳಿಸಿ,

"ನಾನು ಯಜ್ಞೋಪವೀತವನ್ನು ಧರಿಸುವುದಿಲ್ಲ. ಏಕೆಂದರೆ ಲೆಕ್ಕವಿಲ್ಲದಷ್ಟು ಮಂದಿ ಹಿಂದುಗಳು ಅದನ್ನು ಹಾಕಿಕೊಳ್ಳದೆ ಇದ್ದರೂ ಹಿಂದುಗಳಾಗಿರುವಾಗ ನಾನು ಹಾಕಿಕೊಳ್ಳುವ ಅಗತ್ಯವೇನೂ ನನಗೆ ತೋರುವುದಿಲ್ಲ. ಅದೂ ಅಲ್ಲದೆ ಯಜ್ಞೋಪವೀತವು ಆಧ್ಯಾತ್ಮಿಕ ಪುನರ್ಜನ್ಮದ ಚಿಹ್ನೆಯಾಗಿರಬೇಕು. ಇಂತಹ ಪುನರ್ಜನ್ಮಕ್ಕೆ ಯಜ್ಞೋಪವೀತಧಾರಿಯು ಉಚ್ಚತರವಾದ ವಿಶುದ್ಧತರವಾದ ಜೀವನವನ್ನು ನಡೆಸಲು ಇಚ್ಛಾಪೂರ್ವಕವಾಗಿ ಯತ್ನವೆಸಗುವುದು ಆವಶ್ಯಕ. ಭಾರತದೇಶದ ಮತ್ತು ಹಿಂದೂ ಧರ್ಮದ ಇಂದಿನ ಸ್ಥಿತಿಯಲ್ಲಿ ಹಿಂದುಗಳು ಇಂತಹ ಗೂಢಾರ್ಥವುಳ್ಳ ಜನಿವಾರವನ್ನು ಧರಿಸಲು ತಮ್ಮ ಅಧಿಕಾರವನ್ನು ಸಮರ್ಥಿಸಿಕೊಳ್ಳುವುದು ನನಗೇನೋ ಸಂಶಯಾಸ್ಪದವಾಗಿದೆ. ಹಿಂದೂ ಧರ್ಮವು ಅಸ್ಪೃಶ್ಯತೆಯನ್ನು ನೀಗಿ ಉಚ್ಚನೀಚವೆಂಬ ಭೇದವನ್ನೆಲ್ಲವನ್ನೂ ಕಳೆದು ಹೀಗೆಯೇ ಬೇರೆ ಹಬ್ಬಿ ಬೆಳೆದಿರುವ ಇತರ ಅನೇಕ ದೋಷಗಳನ್ನೂ ನ್ಯೂನತೆಗಳನ್ನೂ ತೊಲಗಿಸಿದ ಮೇಲೆಯೇ ಈ ಅಧಿಕಾರವನ್ನು ಸಂಪಾದಿಸಲು ಸಾಧ್ಯ. ಆದುದರಿಂದ ಜನಿವಾರವನ್ನು ತೊಡಲು ನನ್ನ ಮನಸ್ಸು ಒಪ್ಪುವುದಿಲ್ಲ. ಆದರೆ ತಾವು ಶಿಖಾಧಾರಣೆಯ ವಿಷಯದಲ್ಲಿ ಸೂಚಿಸಿದುದು ವಿಚಾರಯೋಗ್ಯವೆಂಬುದರಲ್ಲಿ ಸಂದೇಹವಿಲ್ಲ. ಒಂದು ಕಾಲದಲ್ಲಿ ನಾನು ಶಿಖೆಯನ್ನು ಇಟ್ಟುಕೊಂಡಿದ್ದೆನು. ಸುಳ್ಳು ನಾಚಿಕೆಯಿಂದ ಅದನ್ನು ತೆಗೆದುಬಿಟ್ಟೆನು. ಆದುದರಿಂದ ಅದನ್ನು ಪುನಃ ಬೆಳೆಸಬೇಕೆಂದು ನನಗೆ ತೋರುತ್ತದೆ. ಈ ವಿಷಯವನ್ನು ನನ್ನ ಸಂಗಡಿಗರೊಡನೆ ಚರ್ಚಿಸುವೆನು" ಎಂದು ಹೇಳಿದೆನು.

ಯಜ್ಞೋಪವೀತದ ವಿಷಯವಾಗಿ ನಾನು ಹೇಳಿದುದು ಸ್ವಾಮಿಗಳ ಒಪ್ಪಿಗೆಗೆ ಬರಲಿಲ್ಲ. ಅದನ್ನು ಹಾಕಿಕೊಳ್ಳದಿರುವುದಕ್ಕೆ ಯಾವುವು ಕಾರಣಗಳೆಂದು ನನಗೆ ತೋರಿದುವೋ ಅವೇ ಅವರಿಗೆ ಹಾಕಿಕೊಳ್ಳುವುದರ ಆವಶ್ಯಕತೆಯನ್ನು ಸಿದ್ಧಗೊಳಿಸುವಂತೆ ಕಂಡುವು. ಇಂದು ಕೂಡ ಈ ವಿಷಯದಲ್ಲಿ ನನ್ನ ಅಭಿಪ್ರಾಯವು ಹೆಚ್ಚು ಕಡಿಮೆ ಹೃಷೀಕೇಶದಲ್ಲಿದ್ದಂತೆಯೇ ಇದೆ. ಬೇರೆ ಬೇರೆ ಧರ್ಮಗಳಿರುವವರೆಗೂ ಪ್ರತಿಯೊಂದಕ್ಕೂ ಯಾವುದಾದರೊಂದು ಬಾಹ್ಯ ಚಿಹ್ನೆಯು ಬೇಕಾಗಿರಬಹುದು. ಆದರೆ ಆ ಚಿಹ್ನೆಯನ್ನೇ ಆರಾಧ್ಯದೇವತೆಯೆಂದೆಣಿಸಿ ಅದರ ಮೂಲಕ ತನ್ನ ಧರ್ಮವು ಇತರ ಧರ್ಮಗಳಿಗಿಂತ ಶ್ರೇಷ್ಠವಾದುದೆಂದು ಪ್ರತಿಪಾದಿಸತೊಡಗಿದರೆ ಆಗ ಆ ಚಿಹ್ನೆಯನ್ನು ಬಿಸುಡಬೇಕು. ಇಂದು ಯಜ್ಞೋಪವೀತವು ಹಿಂದೂ ಧರ್ಮವನ್ನು ಉತ್ತಮಗೊಳಿಸುವ ಸಾಧನವಾಗಿ ನನಗೆ ತೋರುವುದಿಲ್ಲ. ಆದುದರಿಂದ ನಾನು ಅದರ ವಿಷಯದಲ್ಲಿ ತಟಸ್ಥನಾಗಿದ್ದೇನೆ.

ಆದರೆ ಜುಟ್ಟನ್ನು ತೆಗೆದುಹಾಕುವುದಕ್ಕೆ ನನ್ನ ನಾಚಿಕೆಯೇ ಕಾರಣವಾಗಿದ್ದುದರಿಂದ ಮಿತ್ರರ ಸಲಹೆಯನ್ನು ತೆಗೆದುಕೊಂಡ ಮೇಲೆ ಅದನ್ನು ಪುನಃ ಬೆಳೆಯಿಸಲು ನಿಶ್ಚಯಿಸಿದೆನು.

ಹೃಷೀಕೇಶದ ಮತ್ತು ಲಕ್ಷ್ಮಣ ಸೇತುವಿನ ಸುತ್ತಮುತ್ತಲಿನ ಪ್ರಕೃತಿ ಸೌಂದರ್ಯವನ್ನು ನೋಡಿ ನಾನು ಮುಗ್ಧನಾದೆನು. ನಮ್ಮ ಪೂರ್ವಿಕರ ಸೌಂದರ್ಯೋಪಾಸನೆಗೂ ಪ್ರಕೃತಿಯ ಸೊಬಗಿಗೆ ಧಾರ್ಮಿಕ ಭಾವವನ್ನಿತ್ತ ಅವರ ಪ್ರತಿಭೆಗೂ ನಾನು ಭಕ್ತಿಯಿಂದ ಮಣಿದೆನು.

ಆದರೆ ಈ ಸುಂದರ ಸನ್ನಿವೇಶಗಳನ್ನು ಜನರು ಉಪಯೋಗಿಸುತ್ತಿದ್ದ ರೀತಿಯನ್ನು ಕಂಡು ನನಗೆ ಸಂಕಟವಾಯಿತು. ಹರಿದ್ವಾರದಂತೆಯೇ ಹೃಷೀಕೇಶದಲ್ಲಿಯೂ ಜನರು ಬೀದಿಗಳನ್ನೂ ಗಂಗಾನದಿಯ ದಡವನ್ನೂ ಹೊಲಸು ಮಾಡುತ್ತಿದ್ದರು. ಗಂಗೆಯ ಪವಿತ್ರಜಲವನ್ನು ಕೆಡಿಸುವುದಕ್ಕೆ ಕೂಡ ಅವರು ಹೇಸುತ್ತಿರಲಿಲ್ಲ. ಜನರು ಓಡಾಡುವ ಸ್ಥಳವನ್ನು ಬಿಟ್ಟು ಸ್ವಲ್ಪ ದೂರ ಹೋಗಲು ಕಷ್ಟವೇನೂ ಆಗುತ್ತಿರಲಿಲ್ಲವಾದರೂ ಬೀದಿಗಳಲ್ಲೂ ನದಿಯ ದಡದಲ್ಲೂ ಜನರು ಮಲಮೂತ್ರ ವಿಸರ್ಜನೆಯನ್ನು ಮಾಡುವುದನ್ನು ಕಂಡು ನನ್ನ ಹೃದಯವು ಖೇದದಿಂದ ತಲ್ಲಣಿಸಿತು.

ಲಕ್ಷ್ಮಣ ಸೇತುವೆಂದರೆ ಗಂಗಾನದಿಯ ಮೇಲೆ ಕಟ್ಟಿದ್ದ ಕಬ್ಬಿಣದ ತೂಗು ಸೇತುವೆಯಲ್ಲದೆ ಬೇರೆ ಏನೂ ಅಲ್ಲವೆಂಬುದನ್ನು ಕಂಡೆನು. ಮೊದಲು ಅಲ್ಲಿ ಸೊಗಸಾದ ಹಗ್ಗದ ಸೇತುವೆಯೊಂದಿದ್ದಿತೆಂದು ನನಗೆ ಹೇಳಿದರು. ಉದಾರಬುದ್ಧಿಯ ಮಾರ್ವಾಡಿಯೊಬ್ಬನು ಈ ಹಗ್ಗದ ಸೇತುವೆಯನ್ನು ಕೆಡಿಸಿ ಹೆಚ್ಚು ಹಣವನ್ನು ವೆಚ್ಚಮಾಡಿ ಕಬ್ಬಿಣದ ಸೇತುವೆಯನ್ನು ಕಟ್ಟಿ, ಬೀಗದ ಕೈಯನ್ನು ಸರಕಾರದ ವಶಕ್ಕೆ ಕೊಟ್ಟನಂತೆ! ಹಗ್ಗದ ಸೇತುವೆಯನ್ನು ನಾನು ನೋಡಿಯೇ ಇರಲಿಲ್ಲವಾದ ಕಾರಣ ಅದರ ವಿಷಯವಾಗಿ ಏನೂ ಹೇಳಲಾರೆನು. ಆದರೆ ಆ ಕಬ್ಬಿಣದ ಸೇತುವೆಯು ಅಂತಹ ಸನ್ನಿವೇಶದಲ್ಲಿ ಕೇವಲ ಅನುಚಿತವಾಗಿದ್ದು ಅಲ್ಲಿಯ ಸೊಬಗನ್ನು ಹಾಳುಮಾಡುತ್ತದೆ. ಈ ಯಾತ್ರಿಕರ ಸೇತುವೆಯ ಬೀಗದ ಕೈಯನ್ನು ಸರಕಾರದ ವಶಕ್ಕೆ ಕೊಟ್ಟುದು ನನ್ನ ಆಗಿನ ರಾಜನಿಷ್ಠೆಯ ಸಹನೆಯನ್ನು ಕೂಡ ಮೀರಿದ್ದಿತು.

ಸೇತುವೆಯನ್ನು ದಾಟಿದ ಮೇಲೆ ಸಿಕ್ಕುವ 'ಸ್ವರ್ಗಾಶ್ರಮ'ವು ಶೋಚನೀಯವಾದ ಸ್ಥಿತಿಯಲ್ಲಿದ್ದಿತು. ಕೆಲವು ಹರಕು ಮುರುಕು ತಗಡಿನ ಗುಡಿಸಲುಗಳನ್ನು ಬಿಟ್ಟರೆ ಅಲ್ಲಿ ಇನ್ನೇನೂ ಇರಲಿಲ್ಲ. ಇವುಗಳನ್ನು ಸಾಧಕರಿಗಾಗಿ ಕಟ್ಟಿದರೆಂದು ನಾನು ಕೇಳಿದೆನು. ಆಗ ಅಲ್ಲಿ ಹೆಚ್ಚು ಜನ ಸಾಧಕರು ಇರಲಿಲ್ಲ. ಮುಖ್ಯ ಕಟ್ಟಡದಲ್ಲಿದ್ದ ಒಬ್ಬಿಬ್ಬರನ್ನು ನೋಡಿ ನನಗೇನೂ ಸಂತೋಷವಾಗಲಿಲ್ಲ.

ಆದರೆ ಹರಿದ್ವಾರದಲ್ಲಿ ನನಗುಂಟಾದ ಅನುಭವಗಳು ಅಮೂಲ್ಯವಾಗಿ ಪರಿಣಮಿಸಿದುವು. ನಾನು ಎಲ್ಲಿರಬೇಕು, ಏನು ಮಾಡಬೇಕು ಎಂಬುದನ್ನು ನಿರ್ಧರಿಸಲು ನನಗೆ ಅವುಗಳಿಂದ ಬಹು ಸಹಾಯವಾಯಿತು.

---

## ಸೆಂಟ್ರಲ್ ಬ್ಯಾಂಕು ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾರೀಕು 22ರಲ್ಲಿ ಕೊಡಗು ಜಮೀನ್ದಾರರ ಸಂಘದ ಹಾಲಿನಲ್ಲಿ ನಡೆಯಿತು. ಹಾಜರಿದ್ದ ಮೆಂಬರುಗಳು —1. ರಾವ್‌ಬಹದ್ದೂರು ಕೆ. ಅಪ್ಪಯ್ಯನವರು (ಪ್ರೆಸಿಡೆಂಟರು) 2. ರಾವ್‌ಸಾಹೇಬ್ ಪಿ. ದೇವಯ್ಯನವರು, ಮೆ. ಗಳಾದ 3. ಕೆ. ಪಿ. ಚಿಣ್ಣಪ್ಪನವರು, 4 ಪಿ ಎ ಬೆಳ್ಯಪ್ಪನವರು, 5 ಸಿ ಹೆಚ್. ಬಿ ಕಾಳೇಗೌಡರು 6 ಯಂ ಶಿವಲಿಂಗಪ್ಪನವರು ಮತ್ತು 7. ಪಿ ಎ. ಹಂಗಪ್ಪನವರು, ಇವರಲ್ಲದೆ ಗೌರವ ಸೆಕ್ರೆಟರಿ ಮೆ. ಸಿ. ಎನ್. ವೆಂಕಪ್ಪಯ್ಯನವರು, ಖಜಾನಜಿ ಮಿ ಕೆ ಪಿ. ಅಪ್ಪಯ್ಯನವರು, ಕೋಆಪರೇಟಿವ್ ಸೊಸೈಟಿಗಳ ರಜಿಸ್ಟ್ರಾರರು ಮತ್ತು ಉತ್ತರ ಕೊಡಗಿನ ಕೋಆಪರೇಟಿವ್ ಇನ್ಸ್‌ಪೆಕ್ಟರು ಸಹ ಹಾಜರಿದ್ದರು.

1 ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಆಗೋಸ್ಟು ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರ್ ಮಾಡಲಾಯಿತು.

3. ಸೊಸೈಟಿಗಳಿಂದ ಬ್ಯಾಂಕಿಗೆ ಬರಬೇಕಾದ ಸಾಲದ ಬಾಕಿ ಪಟ್ಟಿ ಓದಲಾಯಿತು.

ಬಾಕಿ ಸಾಲದ ಮೇಲಿನ ಬಡ್ಡಿಯನ್ನು ಪಾವತಿ ಮಾಡದ ಸೊಸೈಟಿಗಳಿಗೆ, ಈ ನವಂಬರ್ ತಿಂಗಳ ಅಖೈರು ವರೆಗೆ ಬಾಕಿ ಬಡ್ಡಿಯನ್ನು ಪಾವತಿ ಮಾಡುವಂತೆಯೂ ಈ ಮಿಯಾದಿಯೊಳಗೆ ಪಾವತಿ ಮಾಡದೆ ಹೋದರೆ ವಸೂಲಾತಿಗೆ ತಕ್ಕ ತರಮೂದು ತೆಗೆದುಕೊಳ್ಳಲಾಗುವದೆಂತಲೂ, ಮತ್ತು ಅವರಿಂದ ಇನ್ನು ಮುಂದೆ ಬರುವ ಸಾಲದ ಅರ್ಜಿಗಳನ್ನು ಅಂಗೀಕರಿಸಲಾಗುವುದಿಲ್ಲವೆಂತಲೂ ತಿಳಿಸಬೇಕೆಂದು ತೀರ್ಮಾನವಾಯಿತು.

4 ಈ ಕೆಳಗಿನ ಮೇರೆ ಸೊಸೈಟಿಗಳಿಗೆ ಸಾಲ ಮಂಜೂರಾಯಿತು.

(1) ತಿರಿಕೊಡ್ಲಿ ಸೊಸೈಟಿಗೆ ರೂ. 1070, (2) ವೀರಾಜಪೇಟೆ ಟವುನ್ ಸೊಸೈಟಿಗೆ ರೂ 5000, (3) ಕೂಡ್ಲೂರು ಸೊಸೈಟಿಗೆ ರೂ 1000, (4) ಕೆರೆಹಳ್ಳಿ ಸೊಸೈಟಿಗೆ ರೂ. 700, ಮತ್ತು (5) ಪಾಲಂಗಾಲ ಸೊಸೈಟಿಗೆ ರೂ. 600.

5. ಕೊಡಗು ಕಮಿಶನರ್ ಸಾಹೇಬರವರ ನಂಬರು D. 2-$\frac{107}{7}$ ತಾರೀಕು 21—8—28 ಮತ್ತು ಉತ್ತರ ಕೊಡಗು ತಾಲೋಕು ಸುಬೇದಾರರವರ ನಂಬರು 6237 ತಾ. 10 9 28 ರ ಪತ್ರಗಳು ಓದಲಾದವು.

ಅವರ ಪತ್ರದ ಮೇರೆ ಮೈಸೂರ್ ಹನುಮೇಗೌಡನ ಪುಟ್ಟಯ್ಯನ ಬಾಬ್ತು, ಬ್ಯಾಂಕಿನಲ್ಲಿರುವ 400 ರೂಪಾಯಿಗಳ ಪೈಕಿ 350 ರೂಪಾಯಿಗಳನ್ನು ವಿಲೇವಾರಿಯಾಗಿ ವಾಪಸು ಕೊಟ್ಟು ಬಾಕಿ ಇರುವ ಹಣವನ್ನು ಪುನಃ ಹೊಸ ಡಿಪಾಜಿಟ್ಟಾಗಿ ಇಡಬಹುದೆಂತ ತೀರ್ಮಾನವಾಯಿತು.

6 5000 ರೂಪಾಯಿಗಳ ವರೆಗೆ ನಿರಖು ಠೇವಣಾತಿ (ಫಿಕ್ಸೆಡ್ ಡಿಪಾಜಿಟ್ಟು) ತೆಗೆದುಕೊಳ್ಳಲು ಗೌರವ ಸೆಕ್ರೆಟರಿಯವರಿಗೆ ಅಧಿಕಾರ ಕೊಡಲಾಯಿತು.

ಕೆ. ಅಪ್ಪಯ್ಯ,
(ಅಧ್ಯಕ್ಷರು).

---

## ಶ್ರೀ. ಕಾವೇರಿ ತುಲಾಸಂಕ್ರಮಣದ ಮುಹೂರ್ತ ಪಟ್ಟಿ.

(1) ಇದೇ ಕನ್ಯಮಾಸ ತೇದಿ 28 ಕ್ಕೆ ಸರಿಯಾದ ಅಕ್ಟೋಬರ್ ತಾರೀಕು 14 ನೇ ಭಾನುವಾರ 11 ಘಂಟೆ ಮೇಲೆ 12 ಘಂಟೆಯೊಳಗೆ ಧನುರ್ಲಗ್ನ ಗುರುಕಾಲ ಹೊರೆಯಲ್ಲು ಅಕ್ಷಯಪಾತ್ರೆ ಮಡಗುವದಕ್ಕೆ ಶುಭ ಮುಹೂರ್ತ

(2) ಇದೇ ದಿನ ಮಧ್ಯಾಹ್ನದ ಮೇಲೆ 3 ಘಂಟೆಗೆ ಕುಂಭ ಲಗ್ನ ಶುಕ್ರನಕಾಲ ಹೊರೆಯಲ್ಲ ಕಾಣಿಕೆ ಡಬ್ಬಿ ಇಡುವ ಶುಭ ಮುಹೂರ್ತ.

**(3) ಇದೇ ಕನ್ಯಮಾಸ ತೇದಿ 30 ಕ್ಕೆ ಸರಿಯಾದ ಅಕ್ಟೋಬರ್ ತಾರೀಕು 16 ನೇ ಮಂಗಳವಾರ ದಿನ ಅನೂರಾಧ ನಕ್ಷತ್ರದಲ್ಲಿ ರಾತ್ರಿ ಘಂಟೆ 9 ಮಿನಿಟು 13 ಕ್ಕೆ ತುಲಾ ಕಾವೇರಿ ಸಂಕ್ರಮಣ ತೀರ್ಥೋದ್ಭವ ಪುಣ್ಯಕಾಲದ ಶುಭ. ಮುಹೂರ್ತ.**

[illegible] ಕೆ. ಚಂಗಪ್ಪ,
ಪ್ರೆಸಿಡೆಂಟ್.

## ಗ್ರಾಮಗಳ ಪುನರುದ್ಧಾರ

(೩ನೇ ಪುಟದಿಂದ ಮುಂದುವರಿದದ್ದು)

ಹುದು. ಆದರೆ ನಮ್ಮ ರೈತರ ಹಿಂದಾಳುತನವಾ ಇದನ್ನು ತಪ್ಪಿಸಿ ಅವರನ್ನು ಮುಂದಕ್ಕೆ ತರಲು ಇತರರ ಪ್ರೋತ್ಸಾಹವಿಲ್ಲದಿರುವುದೂ ಇವೆರಡೂ ಸೇರಿ ನಮ್ಮ ಬೆಳೆಗಳೆಲ್ಲ ಕಮ್ಮಿಯಾಗಿರುವುದಲ್ಲದೆ ಆಗುವ ಫಸಲಿನ ಗುಣವು ಸಹ ಅಷ್ಟೇ ಶ್ಲಾಘನೀಯವಾದುದಾಗಿರುವುದಿಲ್ಲ. ಆದ್ದರಿಂದ ಹಿತಚಿಂತಕರಾದ ಸರಕಾರದವರೂ ಈಗೀಗ ಸ್ಥಾಪಿಸಲ್ಪಟ್ಟಿರುವ ವ್ಯವಸಾಯ ಸಂಘಗಳೂ ಸಹ, ತಮ್ಮ ಕೈಲಾಗುವ ಸಹಾಯವನ್ನೆಲ್ಲಾ ರೈತ ಜನರ ಏಳಿಗೆಗೆ ಉಪಯೋಗಿಸುವುದು ಶ್ರೇಷ್ಠವಾದ ಕಾರ್ಯವಾಗಿರುತ್ತದೆ.

ರೈತರು ತಮ್ಮ ಜಮೀನನ್ನು ಉತ್ಕೃಷ್ಟವಾಗಿ ಸಾಗುವಳಿಮಾಡಿಕೊಳ್ಳುವುದಕ್ಕೂ ಕಂದಾಯವನ್ನು ಕ್ರಮವಾಗಿ ಸರ್ಕಾರಕ್ಕೆ ಕಟ್ಟುವುದಕ್ಕೂ ಮತ್ತು ತಮ್ಮ ಗೃಹಕೃತ್ಯದಲ್ಲಿ ನಡೆಯಬೇಕಾಗುವ ವಿಶೇಷ ಕಾರ್ಯಗಳನ್ನು ನೀಗಿಸುವುದಕ್ಕೂ ಬಂಡವಾಳವಿಲ್ಲದೆ ಬಹಳ ಕಷ್ಟಪಡುತ್ತಾರೆ. ಬಂಡವಾಳ ಬೇಕಾದ ಹಾಗೆಲ್ಲ ತನ್ನ ಜಮೀನನ್ನು ಸಾಹುಕಾರರಲ್ಲಿ ಒತ್ತೆಇಟ್ಟು ಹಣ ಪಡೆಯುವರು. ಅಥವ ಒಂದಕ್ಕೆರಡರಂತೆ ದುಬಾರಿ ಬಡ್ಡಿಯನ್ನು ಕೊಟ್ಟು ಹಣವನ್ನು ಸಾಲವಾಗಿ ತಂದು ಸಾಲ ತೀರಿಸದೆ ಕೊಂದರೆ ಪಟ್ಟುಕೊಳ್ಳುತ್ತಾ ಕೇವಲ ಬಡ ಸ್ಥಿತಿಯಲ್ಲಿ ಜೀವನ ಮಾಡಿಕೊಂಡು ಹೋಗುತ್ತಿರುವರು. ಇವರ ಕಷ್ಟವನ್ನು ಹೋಗಲಾಡಿಸಬೇಕಾದರೆ ಇವರಿಗೆ ಸುಲಭ ರೀತಿಯಿಂದ ಬಂಡವಾಳ ಒದಗುವಂತೆ ಮಾಡಬೇಕು.

ಬ್ಯಾಂಕುಗಳನ್ನು ಏರ್ಪಡಿಸುವುದರಿಂದ ಬಂಡವಾಳವು ದೊರಕುತ್ತದೆಂದು ಎಲ್ಲರಿಗೂ ತಿಳಿದೇ ಇದೆ. ಬ್ಯಾಂಕುಗಳು ಊರ್ಜಿತವಾಗಿ ಅವುಗಳಿಂದ ಫಲ ಪಡೆಯಬೇಕಾದರೆ ಅವುಗಳನ್ನು ನಿರ್ಮಿಸಿಕೊಳ್ಳುವುದರಲ್ಲಿ ಐಕ್ಯಮತ್ಯವು ಪರಸ್ಪರ ಸಹಾಯವು ಇರಬೇಕು. ರೈತಾಪಿಜನರು ವಿದ್ಯೆ ಇಲ್ಲದವರಾದುದರಿಂದ ಅವರಲ್ಲಿ ಈ ಭಾವನೆಗಳು ಇರುವುದು ಅಪೂರ್ವ.

ಸಶೇಷ

---

## ಟೇಬಲ್ ಟೈಂಪೀಸ್ ಇನಾಂ.

ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಲೀವರ್ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಖರಾರು ಗಂಟೆಯನ್ನು ತೋರಿಸುವವು. ಇದರ ಕೇಸು ಭಂಗಾರಕ್ಕೆ ಸಮಾನವಾಗಿರುವುದು. ಇವಕ್ಕೆ



ಖಾತ್ರಿಯಿಂದ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಟೇಬಲ್ ಟೈಂಪೀಸನ್ನು ಇನಾಮಾಗಿ ಕೊಡುವೆವು. ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್ 1ಕ್ಕೆ ರೂ 6—8—0

ವಿಳಾಸ — ಲೀಗಲ್ ಟ್ರೇಡಿಂಗ್ ಕಂಪೆನಿ,

52—19 ಪೋ. ಬಾಕ್ಸ ನಂ. 243, ಮದರಾಸು.

---

## ಫ್ಯಾನ್ಸಿ ಲೀವರ್ ಪಾಕೆಟ್ ವಾಚ್.

(15 ಬಹುಮಾನಗಳು ಸಹಿತ ರೂ 4—8—0)

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಿ ರಿಜಿಸ್ಟರಾಗಿದೆ

ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ಜೇಬಿಗೆ ಅಡಕವಾಗಿಯೂ ಇರುವಂತೆ ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು. ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವದು. ಫಾಳಿ, ಧೂಳು ಸೇರದಂತೆ ಹಿಂಬಾಗದಲ್ಲಿಯೂ ಗ್ಲಾಸ್ ಡೋಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್‌ಮೆಂಟುಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು.



ಬಹುಮಾನಗಳ ವಿವರ — ಫೌಂಟನ್ ಪೆನ್ 1 ಹೇರಾಯಿಲ್ ಬಾಟಲ್ 1 ವಜ್ರದ ಗುಂಡಿಗಳು 4 ಪಾಕೆಟ್ ಕನ್ನಡಿ 1 ಗಡಿಯಾರದ ಸರಪಣಿ 1 ಸುವಾಸನೆ ಸೋಪು 1 ಪೇನಾ ಕತ್ತಿ 1 ರೋಲ್ಡ್ ಗೋಲ್ಡ್ ಬಂಗಾರದ ಉಂಗುರ 1 ರೋಲ್ಡ್ ಗೋಲ್ಡ್ ಭಂಗಾರದ ನೆಕ್‌ಲೇಸ್ ಎಂಬ ಕತ್ತಿನ ಹಾರ 1 ದಂತದ ಬಾಚಣಿಗೆ 1. ಕೈ ಗುಂಡಿಗಳ ಸೆಟ್ 1 ಕೈ ವಸ್ತ್ರ. ಈ 15 ಬಹುಮಾನಗಳು ಮತ್ತು ಖಾತ್ರಿಯಾದ 3 ವರುಷ ಗ್ಯಾರಂಟಿ ಸಹಿತ ಗಡಿಯಾರ 1ಕ್ಕೆ ಕ್ರಯ ರೂ 4—8—0

ವಿಳಾಸ — ವಿ. ಎಸ್. ವಾಚ್ ಕಂಪೆನಿ,

ಪೋಸ್ಟ್ ಬಾಕ್ಸ್, ನಂ 105,

52—7 ಮದರಾಸ

---

## ಯಾರಿಗೆ ತಾನೇ ಸಂತೋಷವಾಗಲಾರದು!

ನೀವು ಕೊಡುವ ಕ್ರಯಕ್ಕಿಂತಲೂ ಎರಡರಷ್ಟು ಜಾಸ್ತಿಯಾಗಿ ಬಂದರೆ?

ಈ ಚಿತ್ರದಲ್ಲಿ ಕಾಣುವ ರಿಜಿಸ್ಟರಾದ ಟೈಂಪೀಸನ್ನು ಕೊಳ್ಳುವವರಿಗೆ 200 ರೂ. ಗಳ ಕ್ರಯ ಕಾಣುವಂಥ ಒಂದು ಜೊತೆ 7 ಕಲ್ಲಿನ ಒಲೆಯನ್ನು (Earrings) ಒಂದು 14 ಕ್ಯಾರೆಕ್ಟಿನ ಭಂಗಾರದಂಥ ನಿಬ್ಬು ಹಾಕಿರುವ ಇಂಗ್ಲಿಷ್ ಮೇಡ್ ಫೌಂಟೆನ್‌ಪೇನಾ ಒಂದು ಗಂಡಸರೂ, ಹೆಂಗಸರೂ ಉಪಯೋಗಿಸಬಹುದಾದ ರೋಲ್ಡ್ ಗೋಲ್ಡ್ ಭಂಗಾರದ (Necklace) ಕತ್ತಿನ ಹಾರ ಒಂದು ಇನಾಮಾಗಿ ಕೊಡುವೆವು. ಒಂದನ್ನು ತರಿಸಿ ನೋಡಿರಿ. ಬೇಡವಾದರೆ ನಿಮ್ಮ ಹಣವನ್ನು ವಾಪಸುಕೊಡುವೆವು.

ಕ್ರಯ ರೂ 4—4—0 ಮಾತ್ರ. ಟಪ್ಪಾಲು ಖರ್ಚು 0—6—0

ವಿಳಾಸ — ಕೆ. ನಾಥಮುನಿ ಅಂಡ್ ಸನ್ಸ್,

168. ಚೈನಾ ಬಜಾರ್ ರೋಡ್,

52—19 ಮದರಾಸು.

---

## ಕಮ್ಮಿ ಕರೀದಿಯನ್ನು ನೆನಪಿನಲ್ಲಿಡಿ!

## ಲೋಕವಿಖ್ಯಾತವಾದ "ಜಿಗ್ ಜೇಗ್"



ಟೈಂಪೀಸ್ ಸೈಜು 8 × 4½"

ಬೆಲೆ ರೂ. 3—0—0 ಮಾತ್ರ.

3 ವರ್ಷ ಖಾತ್ರಿಕೊಡುತ್ತೇವೆ.

ಈ ಟೈಂಪೀಸು ಬಹಳ ಉತ್ತಮವಾದ ಮತ್ತು ಬಲವಾದ ಅಧಿಕಾರಗಳಿಂದ ಮಾಡಲ್ಪಟ್ಟು, ಚಿತ್ರದಲ್ಲಿ ತೋರಿಸಿರುವಂತೆ ಸುಂದರವಾದ ಕೆತ್ತನೆಯ ಸ್ಟೆಂಡ್‌ನೊಳಗೆ ಇರಿಸಲ್ಪಟ್ಟಿದೆ. ನೋಡಲು ಸುಂದರವಾಗಿಯೂ, ಸರಿಯಾದ ಗಂಟೆಯನ್ನು ತೋರಿಸುವುದಾಗಿಯೂ ಇರುವ ಈ ಟೈಂಪೀಸನ್ನು ಅನೇಕರು ಉಪಯೋಗಿಸಿ ತೃಪ್ತಿಹೊಂದಿದ್ದಾರೆ.

ಇಂಥಾ ಟೈಂಪೀಸಿಗೆ 3—0—0 ರೂ ಮಾತ್ರ ಬೆಲೆ

ಏಜಂಟರು. — ಧೈರ್ಯಲಕ್ಷ್ಮಿ ಅಂಡ್ ಕಂಪೆನಿ,

52—7 ಪೋಸ್ಟು ಬಾಕ್ಸು ನಂ 265. ಮದ್ರಾಸು

---

## ಏಕೆ ನರಳುತ್ತೀರಿ?

ಪ್ರಾಚೀನ ಋಷಿಗಳಿಂದ ಪ್ರಣೀತವಾದ ಆಯುರಾರೋಗ್ಯೈಶ್ವರ್ಯವರ್ಧಕವಾದ ಆರೋಗ್ಯವಿಧಿಗಳನ್ನು ತಿಳಿಯದೆ ಅಜ್ಞಾನಾಂಧಕಾರದಲ್ಲಿ ಮುಳುಗಿ ಅನೇಕ ತರಹಗಳ ವ್ಯಾಧಿಗಳಿಂದ ಏಕೆ ನರಳುವಿರಿ?

**ಕ್ರಯವು! ಇಲ್ಲದೆ!!**

**ಉಚಿತವಾಗಿ ಕೊಡಲ್ಪಡುವ ನಮ್ಮ**

ನಮ್ಮ ಔಷಧಗಳನ್ನು ವಿಕ್ರಯ ಮಾಡುವದಕ್ಕೆ ಏಜಂಟರು ಬೇಕಾಗಿರುವದು

**ವೈದ್ಯ ವಿದ್ಯೆ**

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ

52—7

ರಾಜವೈದ್ಯ ನಾರಾಯಣಜಿ ಕೇಶವಜಿ,

1/34 ಚೈನ ಬಜಾರು ರೋಡು ಮದ್ರಾಸು

N. B. — ವೈದ್ಯಸಲಹೆಯು ಫೀಜಿಲ್ಲದೆ ಕೊಡಲಾಗುವುದು

---

## ಕರ್ಣಿಕ

ಎಗ್ಜಿಬಿಷನ್ ಕ್ಯೂರ್

ಮಲೇರಿಯಾ ಇನ್‌ಫ್ಲುಯೆಂಜಾ ಸಮುಕಜ್ವರ ಆದವಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲಶುದ್ಧಿಯಾಗಿ ಬೆವರು ಬಂದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪. ಟಪ್ಪಾಲು ವೆಚ್ಚ ಬೇರೆ.

ಎರಿ ರಿ ಸಾ ಪ ರಿ ಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವುದಕ್ಕೆ ಇದು ಖಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿಗೆ ರೂ. ೧—೦—೦. ಟಪ್ಪಾಲು ವೆಚ್ಚ ಬೇರೆ.

ಕರ್ಣಿಕ ಬ್ರದರ್ಸ್

12—1 ದುಬಾಷ್ ಲೇನ್

ಗಿರಗಾಂವ್, ಮುಂಬಾಯಿ.

---

## ನೂರಾರು ಔಷಧಗಳೇಕೆ?

ಪ್ರತ್ಯಕ್ಷ ಕಲ್ಪತರುವೇ ಔಷಧರೂಪವಾಗಿ ಅವತರಿಸಿದೆ.

## ಕಲ್ಪತರು ಮಿಶ್ರಣ

ಇಂಡಿಯಾ ಗವರ್ನಮೆಂಟಿನಲ್ಲಿ ರಿಜಿಸ್ಟರಾಗಿದೆ

ಎಷ್ಟು ಕಾಲದ ನರಳಿಕೆಯಾದರೂ ಇನ್ನು ಇತರ ಔಷದಗಳಿಗೆ ಗುಣವಾಗದ ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ನ್ಯುಮೋನಿಯಾ ಮೊದಲಾದ ಪ್ರಾಣಾಂತಿಕ ಜ್ವರಗಳಿಂದ ನಿಮ್ಮನ್ನೆ ಮತ್ತು ಸರಳಜೀವಿತಕ್ಕೆ ಪ್ರತ್ಯಕ್ಷ ಕಲ್ಪತರುವೇ ಅವತಾರವೆತ್ತಿ ಬಂದಿರುವಂತೆ ನಿಮಗೆ ಆರೋಗ್ಯದಾನವನ್ನು ನೀಡಲು ಇದೊಂದು ಸಿದ್ಧೌಷಧವು ಇದೆ ಎಂಬುದನ್ನು ಮರೆಯಬೇಡಿರಿ. ಸಾಮರ್ಥ್ಯವಂತವಾದ ಈ ಔಷಧವು ಮೊದಲನೆ ಗುಟುಕಿನ ಸೇವನೆಯೊಡನೆಯೇ ರೋಗಗಳೆಲ್ಲ ಗುಣಮುಖವಾಗುವಂತೆ ಮಾಡುವ ಶಕ್ತಿಯುಳ್ಳದಾಗಿದೆ. ಇದೊಂದು ಔಷಧವು ನಿಮ್ಮಲ್ಲಿದ್ದರೆ ಬೇರೆ ಭಯವೇಕೆ? ಯಾವತರ ಜಗೆಯ ಜ್ವರಗಳ ಮೇಲೆ, ಅವರಲ್ಲಿ ಯಕೃತ್ ಪ್ಲೀಹಗಳು ವಿಕಾರ ಹೊಂದಿದಾಗಲೂ, ಜ್ವರಗಡ್ಡೆ ಬೆಳದು ದೇಹವು ಅಶಕ್ತಿ ಹೊಂದಿದಾಗಲೂ, ಇದೊಂದೇ ಔಷಧವು ಸಂಪೂರ್ಣ ಗುಣವನ್ನುಂಟುಮಾಡಿ, ರೋಗೋಚ್ಚಾಟನವನ್ನು ಸಾಧಿಸುವುದು ಎಂಬುದಕ್ಕೆ ಸಾವಿರಾರು ರೋಗಿಗಳು ಗುಣಹೊಂದಿ ಅದನ್ನು ಹೊಗಳುತ್ತಿರುವುದೇ ಸಾಕ್ಷಿಯಾಗಿದೆ. ಅದೂ ಅಲ್ಲದೆ, ಹಕೀಮರು, ವೈದ್ಯರು, ಪದವೀಧರ ಡಾಕ್ಟರು, ಕೆಮಿಸ್ಟರೇ ಮೊದಲಾದ ಔಷಧ ವ್ಯಾಪಾರಿಗಳು ಸಹ ಅದನ್ನೇ ಹೊಗಳುತ್ತಾರೆ. ಅನಾರೋಗ್ಯವನ್ನು ಹೋಗಲಾಡಿಸಿ, ಆರೋಗ್ಯವನ್ನು ಪರಿವರ್ಧಿಸಿ ಕೊಡುವ ಕಲ್ಪತರು ಮಿಶ್ರಣವನ್ನು ಎಲ್ಲೆಲ್ಲಿಯೂ ಪಡೆಯಬಹುದು. ಬೇಕಾದರೆ ನಮಗೇ ಬರೆಯಿರಿ. ಮಾಹಿತಿ ಪತ್ರಗಳೂ ಸಿಕ್ಕುತ್ತವೆ. ಇದು ಅಲ್ಲದೆ ನಮ್ಮಲ್ಲಿ ಎಲ್ಲಾತರದ ಆಯುರ್ವೇದೀಯ ಔಷಧಗಳು ಯಾವಾಗಲೂ ಸಿದ್ಧವಾಗಿವೆ.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ

12—7 ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,

ಮಂಗಳೂರು, (ದಕ್ಷಿಣ ಕನ್ನಡ)

# ವರ್ತಮಾನ ಸಂಗ್ರಹ.

## ಒಳದೇಶ.

ಯಾದವು ಸುಮಾರು 20 ಲಕ್ಷ ರೂಪಾಯಿ ವರೆಗೆ ನಷ್ಟವಾಗಿರಬಹುದೆಂದು ಅಂದಾಜು ಮಾಡಲಾಗಿದೆ

ಅಸ್ಸಾಮು ಪ್ರಾಂತ್ಯದ ಕೆಲವು ಪ್ರದೇಶಗಳಲ್ಲಿ ಈಗ

ಕೇಯ ವಿಚಾರದಲ್ಲಿ ಅಭಿಪ್ರಾಯಗಳನ್ನು ಆಗ ... ಬದಲಾ ... ರವರಿಗೆ ಇದು ಒಂದು ಒಳ್ಳೇ ಪಾಠವಾಗಿ

ಪಬ್ಲಿಕ್ ಸೇಫ್ಟಿ ಬಿಲ್ಲನ್ನು ಓಟಿಗೆ ಹಾಕುವ ... ಸಮ ... ಮುಂಚಿತವಾಗಿ ಎಸಂಬ ಮೊಬರಾದ ಯ್ಯ

ಕೊಡಗು, ತಾರೀಕು ೨೮ನೇ ಸೆಪ್ಟಂಬರ್ ೧೯೨೮


ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಯವರ ಬಾಲಾಮೃತ

ಬಾಲ್ಯಾವಸ್ಥೆಯನ್ನು ಕೂಡುವುದರಿಂದ ಪುಷ್ಟಿ ... ತೂಕವು ಹೆಚ್ಚುವುದು ಮತ್ತು ಇದು ... ಗಿರುವುದರಿಂದ ಮಕ್ಕಳು ಪ್ರೀತಿಯಿಂದ ... ತ್ತವೆ

... ೧-೧೪-೦ ೮ ೩ ೮-೧-೦

ಟಿ. ಡೋಂಗರೆ ಕಂಪೆನಿ,

ಗಿರಗಾಂವ, ಮುಂಬಯಿ



Silks! Silks!! Silks!!!

Sarees with gold borders body plain or spotted in various designs and colours

| | | | | |
|---|---|---|---|---|
| 5 yds by 45 inches plain body | Rs 30/- | to | Rs 60/- | |
| do spotted body | 40 | to | 90/- | |
| 6 yds by 45 inches plain body | 50 | to | 100/- | |
| do spotted body | 60 - | to | 120 | |
| Handkerchief 14 by 44 inches price | 12 | to | 35/- | |
| Gold Lace borders Ribbons price from | 1 8 - | to | 5/- | per yd |

For further particulars, please write to:-

BHARADWAJ & CO.,

BROCADE, EMBROIDARY & SILK MANUFACTURERS,

Benares City.

52-6



ದಾಸಸೇವಾ ಕಾರ್ಯ ಸಕ್ತ ಸಕಲ ... ಪುಣ್ಯ ... ಗಳ ... ಸಹಾಯ

ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ (...)

(ಎರಡನೆಯ ವರ್ಷಾರಂಭವಾಗಿದೆ.)

ಹರಿದಾಸ ಸೇವಾ ಸಮಿತಿ ಯವರಿಂದ ... ಸದಲ್ಲಿ ಪ್ರಕಟವಾಗುತ್ತಲಿರುವ ಶ್ರೀ ಕರ್ಣಾಟಕ ಹರಿದಾಸ ... ಸಂಚಿಕೆ ... ಇಲ್ಲವಾದರೆ ... ಇದರಲ್ಲಿ ... ರೇ ಮೊದಲಾದ ಹರಿದಾಸರುಗಳ ... ತಿಂಗಳಲ್ಲಿಯೂ ... ಅನ್ವಸತ್ವದ ನಾಲ್ವತ್ತು ಪುಟಗ ... ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೇ ಹಾಸಲು ಉಚಿತ) ...

ಪ್ರಥಮ ಸಂಪುಟದ ಬೈಂಡಾದ ಪ್ರತಿಗಳು.

| | ಸಾದಾ ಬೈಂಡು | ದಪ್ಪ ರಟ್ಟಿನ ಬೈಂಡು | ಕೆಲ್ಮಾರು ಬೈಂಡು |
|---|---|---|---|
| ಸಾಮಾನ್ಯ ಪ್ರತಿ | ೧-೮-೦ | ೧-೧೨-೦ | ೨-೬-೦ |
| ಉತ್ತಮ ಪ್ರತಿ | ೨-೬-೦ | ೩-೩-೦ | ೪-೦-೦ |

ಅಂಚೇಹಾಸಲು ಪ್ರತ್ಯೇಕ

ವಿಳಾಸ ಸುಬೋಧ ಪ್ರಕಟನಾಲಯ,

ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ

12 ...


... ಬೋಬಿನವಳಾಗುವದೆಂತಲೂ ಚೇಪ್ ಕಮಿಷನರು ಡೆಪ್ಯುಟೀಶನ್‌ನವರಿಗೆ ಹೇಳಿದರೆಂದು ತಿಳಿಯುತ್ತದೆ

ಕೊಡಗು ಪ್ಲಾಂಟೇಶನ್ ಫಂಡಿನ ಮೀಟಿಂಗು ಈ ತಾ 15 ರಲ್ಲಿ ಮಡಿಕೇರಿಯಲ್ಲಿ ನಡೆದು ಈ ಕೆಳಗಿನ ಮೇರೆ ಸ್ಕಾಲರ್ ಶಿಪ್ಪ್‌ಗಳು ಮಂಜೂರು ಮಾಡಲಾದವು. 1 ರೂ. ೨೫ ರ ಕೋದಂಡ ಸಂಜಪ್ಪ ತಿಮ್ಮಪ್ಪ ಸ್ಕಾಲರ್ ಶಿಪ್ಪ್ ಮ ಗುಮ್ಮಟಿರ ಯಸ್. ಗಣಪತಿ ... ಇನ್ನೊಂದು ವರ್ಷ ಮುಂದುವರಿಸಲ್ಪಟ್ಟಿತು 2 ಮ. ಚೇಂದ್ರಿಮಾಡ ಕೆ ಗಣಪತಿಯವರಿಗೆ ಕೊಡಲ್ಪಡುತ್ತಿದ್ದ ರೂಪಾಯಿ 20 ರ ವೇತನವು ಈ ವರ್ಷ ... ದ ಅಕ್ಟೋಬರುವರೆಗೆ ... ಕೊಡುವಂತೆ ಮಂಜೂರಾಯಿತು 3 ಮ. ಸಿ ಪಿ ತಿಮ್ಮಯ್ಯನವರಿಗೆ ದೊರೆಯುತ್ತಿದ್ದ ರೂ. 15 ರ ವೇತನವನ್ನು ಪುನಃ ಅವರಿಗೇನೇ ಒಂದು ವರ್ಷಕ್ಕೆ ಕೊಡುವಂತೆ ತೀರ್ಮಾನವಾಯಿತು. 4 ರೂ. 25 ರ ಕೋದಂಡ ಪೊನ್ನಪ್ಪ ... ಸ್ಕಾಲರ್ ಶಿಪ್ಪನ್ನು ಶ್ರೀಮತಿ ಚೆಯ್ಯಂಡ ಯ. ಸ್ ... ಮ್ಮನವರಿಗೆ ನರ್ಸ್ ತರಬೇತಿಗಾಗಿ ಮಂಜೂರು ಮಾಡಲಾಯಿತು 5. 15 ರೂಪಾಯಿಯ 3 ಕಾಲೇಜ್ ವೇತನಗಳು ಶ್ರೀಮತಿ ಕೋದಂಡ ಪಿ. ಬೋಜಮ್ಮನವರಿಗೂ ಮ. ... ರ ಮೋನಣ್ಣನವರಿಗೂ ಮತ್ತು ಮ. ನಾಪನೆರವಂಡ ಕ ... ಯ್ಯನವರಿಗೂ ಕೊಡಲಾದವು. 6 ಶ್ರೀಮತಿಗಳಾದ ... ಬಿ ಬೊ ... ಮತ್ತು ... ನರ್ಸರಿಯಂಡ ಯ ಸ್ ... ನವರಿಗೆ ಈ ವರ್ಷ ಕೊಡುತ್ತಿದ್ದ ... ರೂಪಾಯಿ ... ದ ವೇತನಗಳು ಪುನಃ ಅವರಿಗೆ ಮಂಜೂರಾಯಿ ... 5 ರೂಪಾಯಿಯ ... ಸೆಕೆಂಡರಿ ವೇತನಗಳು ಶ್ರೀ ... ತೀಯಂಡ ಪೂವಮ್ಮ ಮತ್ತು ಮ. ಪೆಮ್ಮಂಡ ಮಾ ... ನವರಿಗೆ ಕೊಡುವಂತೆ ತೀರ್ಮಾನವಾಯಿತು

## ಹಿಂದೂದೇಶ.

... ೨1ರಲ್ಲಿ ಶ್ರೀ ನಗ ... ಬಿ. ಪಿಯಲ್ಲಿ ಬೆಂಕಿ ... ಅಂಗಡಿಗಳನ್ನು 100 ... ದಗಳು ಸುಟ್ಟು ಬೂದಿ

... ದ್ದ ಒಬನು ವ್ಯಕ್ತ್ಯೋಪಚಾರ ಮಾಡಿದನಂತರ ಮರಳಿ ಜ್ಞಾನ ಹೊಂದಿದನು ... ಸ್ಥಿತಿ ಎಷ್ಟು ಭಯಾನಕವಾಗಿದೆ ನೋಡಿರಿ!

ಸೈಮನ್ ಕಮಿಷನಿನೊಡನೆ ... ನಿಯಮಿಸಿದ ಸಂಟ್ರಲ್ ಕಮಿಟಿಯಲ್ಲಿ ಮ ... ಗಳಾದ ಸರ್ ಶಂಕರ್ ನಾಯರ್, ಸರ್ ಆರ್ಥರ್ ಪ್ರೂಮ್, ರಾಜ ನವಾಬ್ ಅಲಿಖಾನ್ (ಇವರೆಲ್ಲರೂ ಕೌನ್ಸಿಲ್ ಆಫ್ ಸ್ಟೇಟಿನ ಚುನಾಯಿತ ಮೆಂಬರುಗಳು) ಮತ್ತು ವೈಸರಾಯಿಯವರಿಂದ ನೇಮಿಸಲ್ಪಟ್ಟ ಮ ... ಗಳಾದ ಸರ್ದಾರ್ ಶಿವದೇವ್ ಸಿಂಗ್ ಯೂಬ ರಾಯ್ ... ನವಾಬ್ ಸರ್ ಝುಲ್ಫಿಕರ್ ಅಲಿಖಾನ್, ಸರ್ ಹರಿಸಿಂಗ್ ಗೌರ್, ಡಾಕ್ಟರ್ ಎ ಸುಹರವರ್ಧಿ ಮತ್ತು ಶ್ರೀ ಕಿಕಾಭಾಯಿ ಪ್ರೇಮ್ ಚಂದ್ ಮತ್ತು ಎಸೆಂಬ್ಲಿಯ ಮೆಂಬರಾದ ಯಂ ... ರವರೂ ಇರುವರು. ಇವರಲ್ಲಿ ಸರ್ ಶಂಕರ್ ನಾಯರವರು ಅಧ್ಯಕ್ಷರಾಗಿ ವರ್ತಿಸುವರೆಂದು ತಿಳಿಯುತ್ತದೆ

ಸಂಯುಕ್ತ ಪ್ರಾಂತ್ಯದಲ್ಲಿ ಹೊಡಲಿದ್ದ ಇಬ್ಬರು ಮಂತ್ರಿಗಳು ಸೈಮನ ಕಮಿಷನಿನೊಂದಿಗೆ ಸಹಕರಿಸುವದಿಲ್ಲವೆಂದು ಹೇಳಿದ್ದಕ್ಕೆ ಗವರ್ನರವರು ಇವರಿಬ್ಬರು ಮಂತ್ರಿಪದವಿಗೆ ರಾಜಿನಾಮೆ ಕೊಡುವಂತೆ ಮಾಡಿದರು. ನಂತರ ರಾಜ ಜಗನಾಥ ... ಎವ್ವ ... ಮಂತ್ರಿಯಾಗಿ ನಾಮಿಸಲ್ಪಟ್ಟನು. ಇವರೂ ಮೊದಲು ಸೈಮನ್ ಕಮಿಷನಿನೊಂದಿಗೆ ಸಹಕರಿಸುವದಿಲ್ಲವೆಂದು ತೀರ್ಮಾನಿಸಿದ್ದರೂ ಮೊದಲಿನ ಮಂತ್ರಿಗಳ ರಾಜಿನಾಮೆ ಕೊಟ್ಟಕೂಡಲೆ ಅಭಿಪ್ರಾಯ ಬದಲಾಯಿಸಿ ಸಹಕರಿಸ ತ್ತೇನೆಂದರು ... ಇದುವರೆಗಿನ ಇವರ ಮಂತ್ರಿತ್ವದ ಮೇಲೆ ಅಲ್ಲಿಯ ... ವಿಶ್ವಾಸವಿಲ್ಲವೆಂದು. ಮ. ಚಿಂತಾಮಣಿಯವರು ತಂದ ಠರಾವಿಗೆ ಸರಕಾರ ಯೂ ವಿರೋಧವಾಗಿಯೂ ಸಮವಾದ ಓಟುಗಳಾದುವು. ಅಧ್ಯಕ್ಷರು ತಮ್ಮ ಕಾಸ್ಟಿಂಗ್ ಓಟನ್ನು ಪರವಾಗಿ ಕೊಟ್ಟಿದ್ದರಿಂದ ಅವಿಶ್ವಾಸದ ಠರಾವು ಪಾಸಾಯಿತು. ರಾಜ

ಗ ಅದರೊಳಗಿದ್ದ ಒಂದು ವಾಟರ ... ಸ್ತ್ರದಲ್ಲಿ ಉಸಿರು ಕಟ್ಟಿ ನೂರಾರು ಜನರು ಮೃತಪಟ್ಟರೆಂದೂ, ಸರಿಸುಮಾರು 300 ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರೆಂದೂ ಸುದ್ದಿ.

ಈ ತಾ. ೨೪ರಲ್ಲಿ ಸರ್ ಮೈಕಲ್ ಓ'ಡ್ವಯರ್‌ರವರು ಉತ್ತರ ಲಂಡನ್ನಿನ 'ಬ್ರದರ್‌ಹುಡ್' ... ದಲ್ಲಿ ಇಂಡಿಯಾವನ್ನು ಕುರಿತು ಭಾಷಣ ಮಾಡಲು ಎದ್ದಾಗ ... ಎದ್ದು ನಿಂತು ಬೊಬ್ಬೆಹಾಕಿ 'ಓಡ್ವಯರು ಕೊಲೆಪಾತಕರು,' 'ಇಂಗ್ಲಿಷ್ ಕೆಲಸಗಾರರನ್ನು ಕೊಲ್ಲುವದನ್ನು ನಿಲ್ಲಿಸಿ' ಎಂಬ ಶಬ್ದಗಳುಳ್ಳ ದೊಡ್ಡ ಹಸ್ತಪತ್ರಗಳನ್ನು ಬಿಚ್ಚಿ ತೋರಿಸಿದರು. ಭಾಷಣ ಮಾಡುವದು ಅಸಾಧ್ಯವೆಂದು ತಿಳಿದ ಓಡ್ವಯರು ವೇದಿಕೆಯನ್ನು ಬಿಟ್ಟು ಹೊರಟು ಹೋದರು ... ಪರರಾಷ್ಟ್ರಗಳ ಮೇಲೆ ದ್ವೇಷವನ್ನು ಕಾರುವಂಥವರಿಗೆ ಇದೀಗ ತಕ್ಕ ಸ್ವಾಗತ.

## ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ —

ಸಮ್ಮ ಕಂದೆ ಪಾತಿ ಒಪ್ಪುದಿರ ರಾಮಯಬರುಡಪ್ಪಾರ್ ತಿಮ್ಮಯ್ಯನವರ ಬಾಬ್ತು ಮಡಿಕೇರಿಯಲ್ಲಿರುವ ಕ್ರಸೆಂಟ್ ಪ್ಯಾಲೇಸ್ ಎಂಬ ಬಂಗ್ಲೆಯು ವಾರಿಸ ಮಕ್ಕಳಿಗೆಲ್ಲಾ ... ರುವಂಥಾ ಆಸ್ತಿಯಾಗಿದೆ. ಈ ಆಸ್ತಿಯ ಸದರಿ ಬಂಗ್ಲೆಯನ್ನು ನಮ್ಮವರ ಪೈಕಿ ಒಬ್ಬರು ಗಿರ್ವಿ, ಯಾ ಭೋಗ್ಯ ಮಾಡಿಕೊಡುತ್ತಾರೆಂಗಿ ವರ್ತಮಾನವಿದೆ. ಈ ಬಂಗ್ಲೆಯನ್ನು ಗಿರ್ವಿ ಯಾ ಭೋಗ್ಯ ಕೊಡಲು ಯಾರೊಬ್ಬರಿಗೂ ಅಧಿಕಾರವಿಲ್ಲ. ಹಾಗೆ ಗಿರ್ವಿ ಯಾ ಭೋಗ್ಯ ತೆಗೆದುಕೊಂಡವರು ವಿಶಿಷ್ಟ ನಷ್ಟಕ್ಕೆ ಗುರಿಯಾಗತಕ್ಕದ್ದೆಂದು ಈ ಮೂಲಕ ಸರ್ವರಿಗೂ ತಿಳಿಸಲಾಗಿದೆ

ಅಕ್ಕಪ್ಪರು,

ತಾ 27—9—28

ಸಿ. ಟಿ. ಪಣ್ಣೈಯ್ಯ

ಗ್ರಾಮಗಳ ಪುನರುದ್ಧಾರ.

(೨ನೇ ಪುಟದಿಂದ ಮುಂದುವರಿದದ್ದು)

ಹುದು. ಆದರೆ ನಮ್ಮ ರೈತರ ಹಿಂದಾಳುತನವೂ ಇದನ್ನು ತಪ್ಪಿಸಿ ಅವರನ್ನು ಮುಂದಕ್ಕೆ ತರಲು ಇತರರ ಪ್ರೋತ್ಸಾಹವಿಲ್ಲದಿರುವುದೂ ... ಯೊಗಿರುವ ... ಶ್ಲಾಘನೀ ... ಚಿಂತಕರ ... ವ್ಯವಸ ... ವಸ್ಥೆ ... ಪ್ರ ...

ಟೇಬಲ್ ಟ್ವೆಂಪೀಸ್ ಇನಾಂ.

ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ರಿಸ್ಟ್ ವಾಚ ಗಳು ಬಹು ಮೇಲಾದ ಗಟ್ಟಿ ಲೀವರ್ ಸಾಮಾನುಗಳಿಂದ (ಸ್ವಿಸ್ ಮೇಡ್) ...

ಯಾರಿಗೆ ತಾನೇ ಸಂತೋಷವಾಗಲಾರದು!

ನೀವು ಕೊಡುವ ಕ್ರಯಕ್ಕಿಂತಲೂ ಎರಡರಷ್ಟು ಜಾಸ್ತಿಯಾಗಿ ಒಂದರೆ?



## ಪತ್ರವ್ಯವಹಾರ

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

### ಸಹಕಾರಿ ಚಳವಳದಲ್ಲಿ ಉತ್ತೇಜನ.

ಅಯ್ಯಾ,

ಸಹಕಾರ ಸಂಘವು ಕೊಡಗಿನಲ್ಲಿ ನೆಲೆಯೂರಿ ಅದೆಷ್ಟೋ ಕಾಲವಾದರೂ ಸಹ ಹಳ್ಳಿಯಲ್ಲಿ ಅಂದರೆ ಕಡೇ ಗಡಿಯಲ್ಲಿ ಇರುವ ಸಂಘಗಳು ಇನ್ನು ಬೆಳವಣಿಗೆಯನ್ನು ಹೊಂದಿದಂತೆ ಕಾಣುವದಿಲ್ಲ. ಆದರೆ ಸಹಕಾರಿತತ್ವಗಳ ಪ್ರಯೋಜನವನ್ನು ಜನರು ಅರಿತುಕೊಂಡರೂ ಇದನ್ನು ಉತ್ಸಾಹದಿಂದ ನಡಿಸತಕ್ಕ ಜನರು ಸಿಕ್ಕುವುದೇ ದುರ್ಲಭ. ಸಂಘದ ಕಾರುಬಾರುಗಳನ್ನು ಮುಖ್ಯವಾಗಿ ಸೆಕ್ರೆಟರಿಯು ಎಷ್ಟು ಅಕ್ಕರೆಯಿಂದ ನಡಿಸುತ್ತಾನೋ ಸಂಘವು ಅಷ್ಟೇ ಉತ್ತಮ ಸ್ಥಿತಿಗೆ ಬರುತ್ತದೆ. ಇಲಾಖೆಗಳಲ್ಲಿ ಒಳ್ಳೆ ಕೆಲಸ ಮಾಡಿದವರಿಗೆ ಪ್ರಮೋಶನ್ ಕೊಡುವಂತೆಯೇ, ಈ ಡಿಪಾರ್ಟ್‌ಮೆಂಟಿನಲ್ಲೂ ಪ್ರಮೋಶನ್ ಕೊಡುತ್ತಾ ಬರುವದು ಕ್ಷೇಯಸ್ಕರವೇ. ಸಂಘಗಳಲ್ಲಿ ಒಳ್ಳೇ ಕೆಲಸ ಮಾಡಿದ ಕಮಿಟಿ ಮೆಂಬರುಗಳನ್ನು ಪ್ರೆಸಿಡೆಂಟರಾಗಿ ಹ್ಯಾಗೆ ಚುನಾಯಿಸುತ್ತಾರೆಯೋ ಹಾಗೆಯೇ ಸಂಘದಲ್ಲಿ ಒಳ್ಳೇ ಕೆಲಸ ಮಾಡಿದ ಸೆಕ್ರೆಟರಿಗಳಿಗೆ ಪ್ರಮೋಶನ್ ಕೊಟ್ಟರೆ ತಪ್ಪಾಗಲಾರದು. ಇಂಥಾ ಸಂದರ್ಭಗಳಲ್ಲಿ ಖಾಲಿಬೀಳುವ ಸುಪರ್‌ವೈಜರು ಕೆಲಸಗಳನ್ನು ಚೆನ್ನಾಗಿ ಕೆಲಸ ಮಾಡಿದ ಸೆಕ್ರೆಟರಿಗಳಿಗೆ ಕೊಟ್ಟರೆ ಸಹಕಾರ ಸಂಘಗಳಲ್ಲಿ ಮೆಂಬರರಿಗಲ್ಲದೆ ಸೆಕ್ರೆಟರಿಗಳಿಗೂ ಮತ್ತು ಸಹಕಾರದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರಿಗೂ ಉತ್ತೇಜನಕೊಟ್ಟಂತಾಗುವುದು. ಉದಾಹರಣೆಗಾಗಿ ಈಗ ಖಾಲಿಬಿದ್ದಿರುವ ದಕ್ಷಿಣಕೊಡಗಿನ ಒಬ್ಬ ಸುಪರ್‌ವೈಜರ್ ಕೆಲಸವನ್ನು ಪ್ರವೀಣರಾದ ಸೆಕ್ರೆಟರಿಗೆ ಕೊಟ್ಟರೆ ಸಹಕಾರ ಚಳವಳದ ಕೆಲಸಗಾರರಲ್ಲಿ ಡಿಪಾರ್ಟ್‌ಮೆಂಟಿನವರು ಉತ್ಸಾಹವನ್ನು ಹುಟ್ಟಿಸಿದಂತಾಗುತ್ತೆ. ಈ ವಿಷಯಕ್ಕೆ ಅಧಿಕಾರಿಗಳು ಗಮನಕೊಡುವರೆಂದು ನಂಬುತ್ತೇನೆ.

"ಸಹಕಾರ ಮಿತ್ರ"

---

### ಕಿರುಗಂದೂರು ಭತ್ತದ ಫಂಡು.

ಅಯ್ಯಾ,

ಕೊಡಗಿನ ಹೆಚ್ಚಿನ ಭಾಗಗಳಲ್ಲಿ ಸಹಕಾರಿ ಸಂಘಗಳು ಅಭಿವೃದ್ಧಿಗೆ ಬರುತ್ತಿವೆ. ಆದರೆ ನಮ್ಮ ಕಿರುಗಂದೂರು ಈ ವಿಷಯದಲ್ಲಿ ಹಿಂದೆ ಬೀಳುತ್ತಿರುವದು ವ್ಯಸನಕರ. ಇಲ್ಲಿ ಸುಮಾರು ಎರಡು ಮೂರು ವರ್ಷಗಳ ಹಿಂದೆ ಒಂದು ಭತ್ತದ ಫಂಡು ಮತ್ತು ಕಾಪೋರೇಶನ್ ಯೂನಿಯನ್ ಸಂಘವು ಸ್ಥಾಪಿಸಲ್ಪಟ್ಟವು. ಇಲ್ಲಿಯ ಮುಖ್ಯಸ್ಥರು ಇವೆರಡು ಸಂಸ್ಥೆಗಳ ಕೆಲಸಗಳನ್ನು ತೃಪ್ತಿಕರವಾಗಿ ನಡಿಸುತ್ತಾ ಇದ್ದರು. ಆದರೆ ಇತ್ತೀಚೆಗೆ ಭತ್ತದ ಫಂಡಿನ ಮುಖ್ಯಸ್ಥರ ಉತ್ಸಾಹವು ಕಡಿಮೆಯಾಗುತ್ತಾ, ಒಂದು ಆಗಾಗ್ಯೆ ನಡಿಯುತ್ತಿದ್ದ ಮೀಟಿಂಗುಗಳ ಸೊಲ್ಲೇ ಈಗ ಇಲ್ಲದಾಗಿದೆ.

ಸ್ವಲ್ಪ ಕಾಲದ ನಂತರ ಉದಾಸೀನವೆಂಬ ಅಂಟುರೋಗವು ಕಾಪೊರೇಶನ್ ಯೂನಿಯನ್ ಸೊಸೈಟಿಗೂ ತಗಲಿತು. ಆದರೆ ಅದರ ಲೆಕ್ಕ ಪಕ್ಕಗಳಾದರೂ ಇಡಲ್ಪಡುತ್ತಿದೆ. ಭತ್ತದ ಫಂಡಿನ ಗತಿ ಏನೆಂಬುದು ಶೇರುದಾರರಾದ ಬಡ ಗ್ರಾಮಸ್ಥರಿಗೆ ಗೊತ್ತಿಲ್ಲದ್ದಾಗಿದೆ. ಈ ಫಂಡಿಗೆ ಸೇರಿ ಪ್ರಯೋಜನ ಹೊಂದಬಹುದೆಂದು ಭಾವಿಸಿ ಇದರಲ್ಲಿ ಶೇರು ತೆಗೆದುಕೊಂಡ ಬಡ ರೈತರಿಗೆ ನಿರಾಶೆಯಾಗಿದೆ. ಈ ವಿಷಯ ಸಂಬಂಧಪಟ್ಟ ಅಧಿಕಾರಿಗಳು ಆಲೋಚಿಸಿ, ಫಂಡನ್ನು ಊರ್ಜಿತ ಸ್ಥಿತಿಗೆ ತಂದು ಶೇರುದಾರರ ಹಿತವನ್ನು ಕಾಪಾಡಬೇಕಾಗಿ ಕೋರುವ.

"ಮನನೊಂದ ಶೇರುದಾರ"

---

### "ಸನಾತನ ಧರ್ಮಿಯ ಮತವೂ, ಪ್ರಯಾಣಿಕನ ಮತವೂ ಒಂದೇ"

ಅಯ್ಯಾ ವಾಚಕ ಮಹಾಶಯರೇ,

ತಾ. 31—8—28ರ 'ಕೊಡಗು' ಪತ್ರಿಕೆಯಲ್ಲಿ "ಬಸ್ಸುಗಳ ಓಡಾಟ ಅದುಗಳ ಸಾಧಕಬಾಧಕ" ಎಂಬ ಶಿರೋನಾಮದಿಂದ ಪ್ರಕಟವಾದ ಲೇಖನವನ್ನು ಖಂಡಿಸಿ ತಾ. 14—9—28ರ ಕೊಡಗು ಸಂಚಿಕೆಯಲ್ಲಿ "ಸನಾತನ ಧರ್ಮಿ" ಎಂಬ ನಾಮಾಂಕಿತದಿಂದ ಒಂದು ಲೇಖನವನ್ನು ಉಲ್ಲೇಖಿಸಿರುವರು.

ಲೇಖಕರು ಸಿಸ್ಟ್ಯಪಾತಿಗಳೆಂಬಂತೆ ಖಂಡನ ಮಂಡನಗಳನ್ನೂ, ರೀತಿನೀತಿಗಳನ್ನೂ ಸಮರ್ಥನೆ ಮಾಡಿರುವದಲ್ಲದೆ "ರಾಜರಸ್ತೆಗಳು ಗೋಚರಾವಿನ ಮೈದಾನವಲ್ಲ" ಎಂಬ ವಿಶೇಷೋಕ್ತಿಯ (ಈ 20ನೇ ಶತಮಾನದಲ್ಲಿ ಹಳ್ಳಿಗಾಡಿನ ಪಶುಗೂ ತಿಳಿದಿರುವುದ)ನ್ನು ಪತ್ರದಲ್ಲಿ ಬರೆಯಲಿಕ್ಕೂ ಮರೆಯಲಿಲ್ಲ.

ಅಲ್ಲದೆ ಸನಾತನ ಧರ್ಮಿಯು ಬಸ್ಸು ಮಾಲೀಕರು, ಚಾಲಕರಿಗೋ, ಹಿತೈಷಿಗಳೆಂಬವನ್ನು ಪಕ್ಷ ವಹಿಸಿ ಲೇಖಿಸಿರುವರೆಂಬದು ಅವರ ಲೇಖದ ಒಂದೇ ಒಂದು ಪದವನ್ನು ವಾಚಕರು ತುಲನೆಮಾಡಿ ನೋಡಿದರೆ ಖಚಿತವಾಗುವದು. ಅದಾವುದೆಂದರೆ ಸ್ವೇಚ್ಛೆಯಿಂದ ಅಮಿತವಾಗಿ ಬಸ್ಸು ಡ್ರೈವರನ ಚಾಳಿಯನ್ನು ಕಣ್ಣಾರೆ ಕಂಡು ಇವರು ... ಗಳ ಗಮನಕ್ಕೆ ಒಮ್ಮೆಯಾದರೂ ತಾರದೆಯೂ ಈಗ ... ಕರೆಯಲ್ಲಿಯೇ ನಿವಾಸಮಾಡಿಕೊಂಡಿರುವ ಒಡ ... ಜೀವ ಜಂತುಗಳು ರಸ್ತೆಗೆ ಇಳಿಯಲೇ ಬಾರದೆಂಬಂತೆ ... ಗಳಿಗೆ ಪುನಃ ಪುನಃ ಎಚ್ಚರಿಸಬೇಕೆಂಬ ಇವರ ಉಪದೇ ... ಕೂಡ ತುಲನೆಮಾಡಿದರೆ ಎಷ್ಟರ ಮಟ್ಟಿಗೆ ಇವರು ... ಲ್ಲಿ ಇರುವರೆಂಬುದು ಖಚಿತವಾಗುವುದು.

ಬಸ್ಸು ಮಾಲೀಕರೂ, ಅಧಿಕಾರಿಗಳೂ, ಬಸ್ಸಿನ ... ಮಿತಿಯನ್ನು ನಿರ್ಧರಿಸಿರುತ್ತಾರೆ. ಆದರೆ—ಪ್ರಯಾಣಿಕರಾದವರು ಡ್ರೈವರನಿಗೆ ಕಾಫಿ, ತಿಂಡಿ, ಕೊಟ್ಟು ಪುಸಲಾಯಿಸಿ ... ದ ಡ್ರೈವರನು "ಅಮಿತವಾಗಿ ಬಸ್ಸು ಓಡಿಸುವುದು ... ಯಾವಾಗಲೂ, ಕಾಣಬಹುದು" ಎಂಬದಾಗಿ ಬರೆ ... ಈ ಬಾಬಿನಲ್ಲಿ ವಾಚಕರೇ ನನ್ನು ವಿರಿ? ಆ ... ಚ ಕಾಫಿ ತಿಂಡಿ"ಗಳಿಗಾಗಿ ಸ್ವೇಚ್ಛೆಯಿಂದ ಬಸ್ಸು ... ದೆ? ಡ್ರೈವರನೆಂದರೇನು? ಆತನ ಜವಾಬ್ದಾರಿ ... ನ ಕರ್ತವ್ಯವೇನು? ಬಸ್ಸು ಹತ್ತಿ, ಇಳಿಯುವ ಪ್ರಯಾಣಿಕರ ಜೀವವೇ ಡ್ರೈವರನ ಆಶ್ರಯವಷ್ಟೇ? ... ದೆಂಬ ಸಕಾರಣದಿಂದಲೇ ಸರ್ಕಾರವೂ, ಬಸ್ಸಿನ ... ರೂ ಸ್ಪೀಡಿನ ಮಿತಿ ನಿರ್ಧರಿಸಿರುವುದಲ್ಲವೇ? ... ಸೂಚಿಗೆ ವ್ಯತಿರಿಕ್ತವಾಗಿಯೂ, ಯಜಮಾನನಿಗೆ ... ನಾಗಿಯೂ ನಡಕೊಳ್ಳಬಹುದೇ? ಇಂಥಾ ... ಚ್ಛೆಯಿಂದ ಬಸ್ಸು ಓಡಿಸುವುದರಿಂದ ಇನ್ನಿತರ ... ಗುವುದಕ್ಕೂ ಕಾರಣವಲ್ಲವೇ?

ಲೇಖಕರು, ಒಂದೆಡೆಯಲ್ಲಿ ಪ್ರಯಾಣಿ ... ತತ್ವವನ್ನೊಳಗೊಂಡ ಲೇಖನವನ್ನು ಪ್ರಕಟಿಸಿ ... ವರು ಬೌದ್ಧಮತಾನುಯಾಯಿಗಳಾಗಿರಬಹುದೆ ... ತ್ತಾರೆ. ಪರಂತು ಸನಾತನ ಧರ್ಮಿ ಅನ್ನುವ ... ಅಮಿತವಾಗಿ ಓಡಿಸುತ್ತಾರೆಂಬುದೇ ಪ್ರಯಾಣಿ ... ಆಗಿರುವುದರಿಂದ ಈಗ ಇಬ್ಬರ ಮತವೂ ... ಪ್ರಯಾಣಿಕನ ಮತ.

"ಪ್ರ ...

---

... ಬಿಲ್ಡಿಂಗ್ಸ್, ನಂ. 105, ಮದರಾಸು.

52—7

ಏಜಂಟರು. — ಧೈರ್ಯಲಕ್ಷ್ಮಿ ಅಂಡ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ 265. ಮದ್ರಾಸು

52—7

...ನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52—7

ರಾಜವೈದ್ಯ ನಾರಾಯಣಜಿ ಕೇಶವಜಿ,

1/3 4 ಚೈನ ಬಜಾರು ರೋಡು, ಮದ್ರಾಸು.

N. B. — ವೈದ್ಯಸಲಹೆಯು ಫೀಜಿಲ್ಲದೆ ಕೊಡಲಾಗುವದು.

# ಕರ್ಣಿಕ

ಎಗ್ಯೂ ಮಿಕ್ಸ್ಚರ್

ಮಲೇರಿಯಾ, ಇನ್‌ಫ್ಲುಯೆಂಝಾ ಮೊದಲಾದ ಅಡವಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲ ಶುದ್ಧಿಯಾಗಿ ಜಿವರು ಒಂದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪. ಟಪ್ಪಾಲು ವೆಚ್ಚ ಬೇರೆ.

ಗಾರಸಾ ಪರಿಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವುದಕ್ಕೆ ಇದು ಖಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿಗೆ ರೂ. ೧—೦—೦. ಟಪ್ಪಾಲು ವೆಚ್ಚ ಬೇರೆ.

ಕರ್ಣಿಕ ಬ್ರದರ್ಸ್

ದುಬಾಷ್ ಲೇನ್.

12—1 ಗಿರಗಾಂವ, ಮುಂಬಯಿ.

ನೂರಾರು ಔಷಧಗಳೇಕೆ?

ಪ್ರತ್ಯಕ್ಷ ಕಲ್ಪತರುವೇ ಔಷಧರೂಪವಾಗಿ ಅವತರಿಸಿದೆ.

# ಕಲ್ಪತರು ಮಿಶ್ರಣ

ಇಂಡಿಯಾ ಗವರ್ನಮೆಂಟಿನಲ್ಲಿ ರಿಜಿಸ್ಟರಾಗಿದೆ

ಎಷ್ಟು ಕಾಲದ ನರಳಿಕೆಯಾದರೂ ಇನ್ನಿತರ ಔಷಧಗಳಿಗೆ ವಾಸಿಯಾಗದ ಮಲೇರಿಯಾ ಜ್ವರ, ಇನ್‌ಫ್ಲುಯೆಂಝಾ, ನ್ಯುಮೋನಿಯಾ ಮೊದಲಾದ ಪುಗಳಿಂದ ನಿಮ್ಮನ್ನು ಮತ್ತು ನರಳುವೀರಿಕ್ಕೆ? ಪ್ರತ್ಯಕ್ಷ ಕಲ್ಪತರುವೇ ಅವತಾರವೆತ್ತಿ ಬಂದಿರುವಂತೆ ನಿಮಗೆ ಆರೋಗ್ಯದಾನವನ್ನು ನೀಡಲು ಇದೊಂದು ಸಿದ್ಧೌಷಧವು ಇದೆ ಎಂಬುದನ್ನು ಮರೆಯಬೇಡಿರಿ. ಸಾಮರ್ಥ್ಯವಂತವಾದ ಈ ಔಷಧವು ಮೊದಲನೆ ಗುಟುಕಿನ ಸೇವನೆಯಿಂದಲೇ ರೋಗಗಳಿಲ್ಲ ಗುಣಮುಖವಾಗುವಂತೆ ಮಾಡುವ ಶಕ್ತಿಯುಳ್ಳದಾಗಿದೆ. ಇದೊಂದು ಔಷಧವು ನಿಮ್ಮಲ್ಲಿದ್ದರೆ ಬೇರೆ ಭಯವೇಕೆ? ಯಾವತರ ಬಗೆಯ ಜ್ವರಗಳ ಮೇಲೆ, ಅದರಲ್ಲೂ ಯಕೃತ್ ಪ್ಲೀಹಗಳು ವಿಕಾರ ಹೊಂದಿದಾಗಲೂ, ಜ್ವರಗಡ್ಡೆ ಬೆಳೆದು ದೇಹವು ಅಶಕ್ತಿ ಹೊಂದಿದಾಗಲೂ, ಇದೊಂದೇ ಔಷಧವು ಸಂಪೂರ್ಣ ಗುಣವನ್ನುಂಟುಮಾಡಿ, ರೋಗೋತ್ಪಾಟನವನ್ನು ಸಾಧಿಸುವುದು ಎಂಬುದಕ್ಕೆ ಸಾವಿರಾರು ರೋಗಿಗಳು ಗುಣಹೊಂದಿ ಅದನ್ನು ಹೊಗಳುತ್ತಿರುವುದೇ ಸಾಕ್ಷಿಯಾಗಿದೆ. ಅದೂ ಅಲ್ಲದೆ, ಹಕೀಮರು, ವೈದ್ಯರು, ಪದವೀಧರ ಡಾಕ್ಟರು, ಕೆಮಿಸ್ಟರೇ ಮೊದಲಾದ ಔಷಧ ವ್ಯಾಪಾರಿಗಳು ಸಹ ಅದನ್ನೇ ಹೊಗಳುತ್ತಾರೆ. ಅನಾರೋಗ್ಯವನ್ನು ಹೋಗಲಾಡಿಸಿ, ಆರೋಗ್ಯವನ್ನು ಅಭಿವರ್ಧಿಸಿ ಕೊಡುವ ಕಲ್ಪತರು ಮಿಶ್ರಣವನ್ನು ಎಲ್ಲೆಲ್ಲಿಯೂ ಪಡೆಯಬಹುದು. ಬೇಕಾದರೆ ನಮಗೇ ಬರೆಯಿರಿ. ಮಾಹಿತಿ ಪತ್ರಗಳೂ ಸಿಕ್ಕುತ್ತವೆ. ಇದು ಅಲ್ಲದೆ ನಮ್ಮಲ್ಲಿ ಎಲ್ಲಾತರದ ಆಯುರ್ವೇದೀಯ ಔಷಧಗಳು ಯಾವಾಗಲೂ ಸಿದ್ಧವಾಗಿವೆ.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ

12—7

ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,

ಮಂಗಳೂರು, (ದಕ್ಷಿಣ ಕನ್ನಡ.)

# ವರ್ತಮಾನ ಸಂಗ್ರಹ.

## ಒಳದೇಶ.

ಚೀಫ್ ಕಮಿಷನರಾದ ಮಿ. ಕ್ರಂಪ್‌ರವರು ಈ ತಾ. 23 ರಲ್ಲಿ ಮಡಿಕೇರಿಗೆ ಬಂದಿದ್ದರು. ಅವರು ಈ ತಾ. 28 ರಲ್ಲಿ ವಾಪಸು ಬೆಂಗಳೂರಿಗೆ ಹೊರಟು ಹೋದರೆಂದು ತಿಳಿಯುತ್ತೇವೆ.

ಅಕ್ಟೋಬರು ತಾ 16ನೇ (ಕನ್ಯಾಮಾಸ ಕೇದಿ 30ನೇ) ಮಂಗಳವಾರ ರಾತ್ರಿ 9ಗಂಟೆ 13 ನಿಮಿಷಕ್ಕೆ ತಲಕಾವೇರಿಯ ಕುಂಡಿಕೆಯಿಂದ ತುಲಾಕಾವೇರಿ ಸಂಕ್ರಮಣ ತೀರ್ಥೋದ್ಭವವಾಗುವದು. ಇದರ ವಿವರವಾದ ಮುಹೂರ್ತ ಪಟ್ಟಿಯು ಇನ್ನೊಂದು ಕಡೆ ಪ್ರಕಟವಾಗಿದೆ.

ಕಣ್ಣಂಗಾಲ ಮತ್ತು ಸುತ್ತು ಮುತ್ತಲಿನ ಗ್ರಾಮಸ್ಥರ ದನಕರಗಳನ್ನು ಹಿಡಿದು ತುಂಬಾ ನಷ್ಟ ಮಾಡುತ್ತಿದ್ದ ಒಂದು ದೊಡ್ಡ ಹುಲಿಯನ್ನು ಮಿ. ಸೋಮೆಯಂಡ ಮೇದಪ್ಪನವರು ಈ ತಾ. 20 ರಲ್ಲಿ ಗುಂಡು ಹೊಡೆದು ಕೊಂದಿರುವರೆಂದು ತಿಳಿಯುತ್ತೇವೆ.

ಮಿ. ಪೀಯರ್ಸ್‌ರವರು ರಜೆ ಮುಗಿಸಿಕೊಂಡು ಇಂಗ್ಲೆಂಡಿನಿಂದ ವಾಪಸು ಬಂದು ಅಕ್ಟೋಬರು ತಾ. 8 ರಲ್ಲಿ ಚೀಫ್ ಕಮಿಷನರ ಉದ್ಯೋಗದ ಚಾರ್ಜು ತೆಗೆದುಕೊಳ್ಳುವರೆಂದೂ, ಹಾಲಿ ಚೀ. ಕಮಿಷನರಾದ ಮಿ. ಕ್ರಂಪ್‌ರವರು ರಜೆಯಲ್ಲಿ ಊರಿಗೆ ಹೊರಟು ಹೋಗುವರೆಂದೂ ಸುದ್ದಿ ಇದೆ.

ಗಂಜಾಮಿನಲ್ಲಿ ಅಬ್ಕಾರಿ ಅಸಿಸ್ಟಾಂಟ್ ಇನ್‌ಸ್ಪೆಕ್ಟರಾಗಿದ್ದ ಮಿ. ಕುಞ್ಞಿಕಣ್ಣ ಮೇನನ್‌ರವರು ಕೊಡಗಿನಲ್ಲಿ ಎಕ್ಸೈಜ್ ಅಸಿಸ್ಟಾಂಟ್ ಇನ್‌ಸ್ಪೆಕ್ಟರಾಗಿ ಮಾಹೆಯಾನ ರೂ. 150+50ರಲ್ಲಿ 2 ವರ್ಷದ ವರೆಗೆ ನೇಮಿಸಲ್ಪಟ್ಟಿರುವರು. ಅವರು ತಾ 24ರಲ್ಲಿ ಮಡಿಕೇರಿಗೆ ಬಂದು ಕೆಲಸವನ್ನು ಕೈಕೊಂಡಿರುವರು.

ಇದೇ ತಿಂಗಳ 29ನೇ ತಾರೀಕು ಶನಿವಾರ ದಿನ 5—30 ಗಂಟೆಗೆ ಜನೋಪಕಾರ ಸಂಘದ ಹಾಲಿನಲ್ಲಿ ಮಿ ಶ್ರೀನಿವಾಸ ಶಾಸ್ತ್ರಿಗಳು 'ನಾರದ ಪ್ರಕಾಶ' ಯೂ 'ನಾಮಸಂಕೀರ್ತನ ವೈಭವ' ಎಂಬ ಹರಿಕಥೆಯನ್ನು ಮಾಡುವರು. ಎಲ್ಲರಿಗೂ ಆಮಂತ್ರಣವಿದೆ.

ಕಳೆದ ಸೋಮವಾರ ದಿನ ಬೆಳಿಗ್ಗೆ 10½ ಗಂಟೆಗೆ ಮೆಸೂರ್ ಬಂಗ್ಲೆಯಲ್ಲಿ ಚೀಫ್ ಕಮಿಷನರವರು, ಕಳೆದ ಜೂನ್ ತಿಂಗಳಲ್ಲಿ ವಿದ್ಯಾ ಇಲಾಖೆಯನ್ನು ಕುರಿತು ಮೆಮೋರಿಯಲ್ ಕಳುಹಿಸಿದ್ದವರನ್ನು ಭೇಟಿಮಾಡಿದರು. ಶಾಲಾ ಇನ್‌ಸ್ಪೆಕ್ಟರವರೂ, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರೂ ಅಲ್ಲಿ ಹಾಜರಿದ್ದರು. ಹೈಸ್ಕೂಲುಗಳಲ್ಲಿ ತರ್ಡ್ ಫಾರಂ ವಿನಹ ಬಾಕಿ ಎಲ್ಲಾ ತರಗತಿಗಳಲ್ಲಿ ಮೂರು ವರ್ಷ ಫೇಲಾದವರನ್ನೂ, ತರ್ಡ್ ಫಾರಮಿನಲ್ಲಿ ಎರಡು ವರ್ಷ ಸೋತವರನ್ನೂ ಪುನಹ ಶಾಲೆಗೆ ಸೇರಿಸಿಕೊಳ್ಳಲಾಗುವದಿಲ್ಲವೆಂತಲೂ, ಈ ನಿಬಂಧನೆಯು 15 ವರ್ಷ ಪ್ರಾಯ ಮೀರಿದ ವಿದ್ಯಾರ್ಥಿಗಳಿಗೆ ಮಾತ್ರ ಸಂಬಂಧಿಸುತ್ತದೆಂತಲೂ, ಹೆಚ್ಚಿನ ವಿದ್ಯಾರ್ಥಿಗಳನ್ನು ಸೇರಿಸಲು ಶಾಲೆಗಳಲ್ಲಿ ಸ್ಥಳ ವಿಸ್ತರಿಸುವ ಮತ್ತು ವೀರರಾಜಪೇಟೆ ಹೈಸ್ಕೂಲಿನಲ್ಲಿ ಗಣಿತ ಶಾಸ್ತ್ರ ಕಲಿಸುವ ಏರ್ಪಾಡಿನ ವಿಷಯ ಆಲೋಚಿಸಲಾಗುವದೆಂತಲೂ ಚೀಫ ಕಮಿಷನರು ಡೆಪ್ಯುಟೇಶನವರಿಗೆ ಹೇಳಿದರೆಂದು ತಿಳಿಯುತ್ತೇವೆ.

ಕೊಡಗು ಪ್ಲಾಂಟೇಶನ್ ಫಂಡಿನ ಮೀಟಿಂಗು ಈ ತಾ 25 ರಲ್ಲಿ ಮಡಿಕೇರಿಯಲ್ಲಿ ನಡೆದು ಈ ಕೆಳಗಿನ ಕೆಲವು ಸ್ಕಾಲರ್‌ಶಿಪ್ಪುಗಳು ಮಂಜೂರು ಮಾಡಲಾದವು. 1. ರೂ. 25 ರ ಕೋದಂಡ ನಂಜಪ್ಪ ಬೈನ್ನಪ್ಪ ಸ್ಕಾಲರ್‌ಶಿಪ್ಪು ಮ ಗುಮ್ಮಟೀರ ಬಿ. ಗಣಪತಿಯವರಿಗೆ ಇನ್ನೊಂದು ವರ್ಷ ಮುಂದುವರಿಸಲ್ಪಟ್ಟಿತು. 2. ಮಾ. ಚೇಂದ್ರಿಮಾಡ ಕೆ. ಗಣಪತಿಯವರಿಗೆ ಸಿಕ್ಕುತ್ತಿದ್ದ ರೂಪಾಯಿ 20 ರ ವೇತನವು ಈ ನವೆಂಬ್ರ ಒಂದರಿಂದ ಅಕ್ಟೋಬರುವರೆಗೆ ಪುನಹ ಒಂದು ವರ್ಷಕ್ಕೆ ಮಂಜೂರಾಯಿತು. 3 ಮಿ. ಸಿ. ಪಿ. ಭೀಮಯ್ಯನವರಿಗೆ ದೊರೆಯುತ್ತಿದ್ದ ರೂ. 15 ರ ವೇತನವನ್ನು ಪುನಹ ಅವರಿಗೇನೇ ಒಂದು ವರ್ಷಕ್ಕೆ ಕೊಡುವಂತೆ ತೀರ್ಮಾನವಾಯಿತು. 4. ರೂ. 25 ರ ಕೋದಂಡ ಪೂವಪ್ಪ ಸ್ಕಾಲರ್‌ಶಿಪ್ಪನ್ನು ಶ್ರೀಮತಿ ಚೆಪ್ಪುದಿರ ಯನ್. ಪೂವಮ್ಮನವರಿಗೆ ನರ್ಸ ತರಬೇತಿಗಾಗಿ ಮಂಜೂರು ಮಾಡಲಾಯಿತು. 5. 15 ರೂಪಾಯಿಯ 3 ಕಾಲೇಜ್ ವೇತನವು ಶ್ರೀಮತಿ ಕೋದಂಡ ಪಿ. ಬೋಜಮ್ಮನವರಿಗೂ, ಮಿ. ಕೊಂಗ್ಗ ರೋಗಣ್ಣನವರಿಗೂ ಮತ್ತು ಮಿ ನಾಪನೆರವಂಡ ಚಿಣ್ಣಪ್ಪನವರಿಗೂ ಕೊಡಲಾದವು. 6. ಶ್ರೀಮತಿಗಳಾದ ಕುಟ್ಟೆಟ್ಟಿರ ಟಿ. ಬೊಳ್ಳವ್ವ ಮತ್ತು ನಡಿಕೇರಿಯಂಡ ಯನ್. ಪೂವಮ್ಮನವರಿಗೆ ಕಳೆದ ವರ್ಷ ಕೊಡುತ್ತಿದ್ದ 5 ರೂಪಾಯಿ ಸೆಕೆಂಡರಿ ವೇತನಗಳು ಪುನಹ ಅವರಿಗೆ ಮಂಜೂರಾಯಿತು. ಐದು ರೂಪಾಯಿಯ 2 ಸೆಕೆಂಡರಿ ವೇತನಗಳು ಶ್ರೀ ಮುಕ್ಕಾಟೀರ ಪೂವಮ್ಮ ಮತ್ತು ಮಿ. ಪೆಮ್ಮಂಡ ಪೂವಯ್ಯನವರಿಗೆ ಕೊಡುವಂತೆ ತೀರ್ಮಾನವಾಯಿತು.

## ಹಿಂದೂದೇಶ.

ಮಲಬಾರಿನಲ್ಲಿ ಶ್ರೀ ನಾರಾಯಣ ಗುರುಗಳ ಮರಣದ ದಿನ 10 ಸಾವಿರ ಅಂಗಡಿಗಳನ್ನು 10 ದಿವಸಗಳು ಮುಚ್ಚಿ ಒಂದಿ... ಯಾದವು. ಸುಮಾರು 20 ಲಕ್ಷ ರೂಪಾಯಿ ವರೆಗೆ ನಷ್ಟವಾಗಿರಬಹುದೆಂದು ಅಂದಾಜು ಮಾಡಲಾಗಿದೆ.

ಅಸ್ಸಾಮು ಪ್ರಾಂತ್ಯದ ಕೆಲವು ಪ್ರದೇಶಗಳಲ್ಲಿ ಈಗ ಹಾಕಿರುವ ಹೆಚ್ಚಿನ ದರದ ಕಂದಾಯವನ್ನು, ಕಂದಾಯ ಹೆಚ್ಚಿಸುವ ಕಾನೂನು ಪಾಸಾಗಿ ಜಾರಿಗೆ ಬರುವ ವರೆಗೆ ವಸೂಲಿ ಮಾಡದೆ ಬಾಕಿ ಇಡಬೇಕೆಂಬ ಠರಾವು ಅಲ್ಲಿಯ ಕೌನ್ಸಿಲಿನಲ್ಲಿ ಬಹುಮತದಿಂದ ಪಾಸಾಯಿತು.

ಎಸೆಂಬ್ಲಿಯಲ್ಲಿ ಸ್ವರಾಜ್ಯ ಪಕ್ಷದ ಒಬ್ಬ ಮೆಂಬರಾಗಿದ್ದ ಮಿ ಯಂ. ಕೆ. ಆಚಾರ್ಯರವರು ಸ್ವರಾಜ್ಯ ಪಕ್ಷದ ತೀರ್ಮಾನವನ್ನು ಉಲ್ಲಂಘಿಸಿ ಪ್ರಥಮದಲ್ಲಿ ಪಬ್ಲಿಕ್ ಸೇಫ್ಟಿ ಬಿಲ್ಲಿಗೆ ಪರವಾಗಿ ಓಟು ಕೊಟ್ಟದ್ದರಿಂದ ಅವರನ್ನು ಆ ಪಾರ್ಟಿಯಿಂದ ವಜಾ ಮಾಡಿರುವರು. ಅವರು ಎಸೆಂಬ್ಲಿ ಮೆಂಬರುತನಕ್ಕೆ ರಾಜಿನಾಮೆ ಕೊಡಬೇಕೆಂದು ಅವರ ಪ್ರದೇಶವಾದ ಚೆಂಗಲ್ಪಟ್ಟಿನ ಕಾಂಗ್ರೆಸ್ ಕಮಿಟಿಯವರು ಅವರಿಗೆ ತಿಳಿಸಿರುವರು.

'ಪಬ್ಲಿಕ್ ಸೇಫ್ಟಿ ಬಿಲ್ಲಿನ ಮೇಲೆ ಸಿಲೆಕ್ಟ್ ಕಮಿಟಿಯ ವರದಿಯು ಎಸೆಂಬ್ಲಿಯಲ್ಲಿ ತಾ. 25ರಲ್ಲಿ ಚರ್ಚಿಸಲ್ಪಟ್ಟು ಓಟಿಗೆ ಬಿಟ್ಟಾಗ ಪರವಾಗಿಯೂ ವಿರೋಧವಾಗಿಯೂ ಓಟುಗಳು ಸಮವಾಗಿದ್ದವು. ಅಧ್ಯಕ್ಷರಾದ ಪಟೇಲರವರು ತಮ್ಮ ಕಾಸ್ಟಿಂಗ್ ಓಟನ್ನು ಬಿಲ್ಲಿಗೆ ವಿರೋಧವಾಗಿ ಕೊಟ್ಟದ್ದರಿಂದ ಸದರಿ ಬಿಲ್ಲು ಪಾಸಾಗಲಿಲ್ಲ. ಚುನಾಯಿತ ಮೆಂಬರುಗಳಿಗೆ ಇದೊಂದು ದೊಡ್ಡ ಜಯವಾಗಿದೆ.

ಮಲಬಾರಿನ 17 ಲಕ್ಷ ತೀಯರ ಗುರುವಾಗಿದ್ದ ಶ್ರೀ ನಾರಾಯಣ ಗುರುಗಳು ವರ್ಕಲಾಯಿ ಎಂಬಲ್ಲಿ ತಾ. 20ರಲ್ಲಿ ಮೃತರಾದರೆಂದು ತಿಳಿಯಲು ವಿಷಾದಿಸುತ್ತೇವೆ. 'ಮನುಷ್ಯರಿಗೆ ಒಬ್ಬ ದೇವರು, ಒಂದು ಧರ್ಮ ಮತ್ತು ಒಂದು ಜಾತಿ' ಎಂಬದೇ ಅವರ ಮುಖ್ಯ ತತ್ವವಾಗಿತ್ತು. ತಾ. 22ರಲ್ಲಿ ಅವರ ಶವದ ಮೆರವಣಿಗೆಯನ್ನು ಮಾಡಿದಾಗ ಇಡೀ ಕೇರಳದಲ್ಲಿ ತೀಯರೆಲ್ಲರೂ ಕೆಲಸ ನಿಲ್ಲಿಸಿ ಅವರ ದೇವಸ್ಥಾನಗಳಲ್ಲಿ ಪ್ರಾರ್ಥನೆಯನ್ನು ನಡಿಸಿದರು.

ಅಖಿಲ ಬಂಗಾಳ ವಿದ್ಯಾರ್ಥಿಗಳ ಕಾನ್‌ಫರೆನ್ಸು ಈ ತಾ 22ರಲ್ಲಿ ಕಲ್ಕತ್ತಾದಲ್ಲಿ ನಡೆಯಿತು. ಪಂಡಿತ ಜವಹಿರ್ ಲಾಲ್ ನೆಹರುರವರು ಅಧ್ಯಕ್ಷರಾಗಿದ್ದರು. ವಿದ್ಯಾರ್ಥಿಗಳು ಆ ವಸರದಲ್ಲಿ ಕಾರ್ಯಕ್ಕೆ ಕೈ ಹಾಕಬಾರದಾದರೂ 'ಹಿಂದೂದೇಶವನ್ನು ಗರ್ವದ ಪರಕೀಯರ ಆಡಳಿತೆಯಿಂದ ತಪ್ಪಿಸುವ ವಿಧಾನದಲ್ಲಿ' ತರಬೇತು ಹೊಂದಬೇಕೆಂತಲೂ, ಜನಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯ ಅಭಿವೃದ್ಧಿಗೆ ಅವರು ಮುತುವರ್ಜಿಯಿಂದ ಕೆಲಸ ಮಾಡಬೇಕೆಂತಲೂ ಅಧ್ಯಕ್ಷರು ಭಾಷಣ ಮಾಡಿದರು.

ಬೊಂಬಾಯಿಯ ಬಿ ಬಿ ಸಿ. ರೈಲ್ವೇ ಆಡಿಟ್ ಆಫೀಸಿನಲ್ಲಿ ಘೋರ ರೀತಿಯ ಸಿಬ್ಬಂದಿ ಕಡಿತೆಯು ನಡೆಯುತ್ತಿದೆ ಕಳೆದ ಸಾರಿ ಸಂಬಳ ಕೊಡುವಾಗ ಡಿಪ್ಯುಟಿ ಆಡಿಟರು, ಸುಮಾರು 35 ಜನರನ್ನು ಕರೆದು ನೀವು ಇನ್ನು ಮುಂದೆ ಶೇಕಡ 25 ರೂ. ಕಡಿಮೆ ಸಂಬಳದಲ್ಲಿ ಕೆಲಸ ಮಾಡಬೇಕು, ಇಲ್ಲವೇ ಕೆಲಸದಿಂದ ನಿವೃತ್ತರಾಗಬೇಕೆಂದರು. ಇವರೊಳಗೆ 18 ವರ್ಷ ಸರ್ವಿಸಿನ ರಾಜೆ ಎಂಬಾತನು ಈ ಸಮಾಚಾರವನ್ನು ಕೇಳಿ ಗಾಭರಿಗೊಂಡು ಅಲ್ಲಿಯೇ ಮೂರ್ಛೆ ಹೋದನು. ಸುತ್ತಲಿದ್ದ ಜನರು ಪ್ರಥಮೋಪಚಾರ ಮಾಡಿದನಂತರ ಮರಳಿ ಪ್ರಜ್ಞೆ ಹೊಂದಿದನು. ಸಿಬ್ಬಂದಿ ಕಡಿತೆಯು ಎಷ್ಟು ಭಯಾನಕವಾಗಿದೆ ನೋಡಿರಿ!

ಸೈಮನ್ ಕಮಿಷನಿನೊಡನೆ ಕೆಲಸ ಮಾಡಲು ನಿಯಮಿಸಿದ ಸೆಂಟ್ರಲ್ ಕಮಿಟಿಯಲ್ಲಿ ಮಿ. ಗಳಾದ ಸರ್ ಶಂಕರ್ ನಾಯರ್, ಸರ್ ಆರ್ಥರ್ ಫ್ರೂಮ್, ರಾಜ ನವಾಬ್ ಅಲಿಖಾನ್ (ಇವರೆಲ್ಲರೂ ಕೌನ್ಸಿಲ್ ಆಫ್ ಸ್ಟೇಟಿನ ಚುನಾಯಿತ ಮೆಂಬರುಗಳು) ಮತ್ತು ವೈಸರಾಯಿಯವರಿಂದ ನೇಮಿಸಲ್ಪಟ್ಟ ಮಿ ಗಳಾದ ಸರದಾರ್ ಶಿವದೇವ್ ಸಿಂಗ್ ಯೂಬರಾಯಿ, ನವಾಬ್ ಸರ್ ಝುಲ್‌ಫಿಕರ್ ಆಲೀಖಾನ್, ಸರ್ ಹರಿಸಿಂಗ್ ಗೌರ್, ಡಾಕ್ಟರ್ ಎ. ಸುಹರವರ್ಧಿ ಮತ್ತು ಕಿಕಾಬಾಯಿ ಪ್ರೇಮ್ ಚಂದ್, ಮತ್ತು ಎಸೆಂಬ್ಲಿಯ ಮೆಂಬರಾದ ಯಂ. ಸಿ. ರಾಜರವರೂ ಇರುವರು. ಇವರಲ್ಲಿ ಸರ್ ಶಂಕರ್ ನಾಯರವರು ಅಧ್ಯಕ್ಷರಾಗಿ ವರ್ತಿಸುವರೆಂದು ತಿಳಿಯುತ್ತದೆ.

ಸಂಯುಕ್ತ ಪ್ರಾಂತ್ಯದಲ್ಲಿ ಮೊದಲಿದ್ದ ಇಬ್ಬರು ಮಂತ್ರಿಗಳು ಸೈಮನ್ ಕಮಿಷನಿನೊಡನೆ ಸಹಕರಿಸುವದಿಲ್ಲವೆಂದು ಹೇಳಿದ್ದಕ್ಕೆ ಗವರ್ನರವರು ಇವರಿಬ್ಬರು ಮಂತ್ರಿಪದವಿಗೆ ರಾಜಿನಾಮೆ ಕೊಡುವಂತೆ ಮಾಡಿದರು. ನಂತರ ರಾಜ ಜಗನ್ನಾಥ ಬಕ್ಷಸಿಂಗ್‌ರವರು ವಿದ್ಯಾ ಇಲಾಖೆಯ ಮಂತ್ರಿಯಾಗಿ ನೇಮಿಸಲ್ಪಟ್ಟರು. ಇವರೂ ಮೊದಲು ಸೈಮನ್ ಕಮಿಷನಿನೊಂದಿಗೆ ಸಹಕರಿಸುವದಿಲ್ಲವೆಂದು ತೀರ್ಮಾನಿಸಿದ್ದರೂ ಮೊದಲಿನ ಮಂತ್ರಿಗಳು ರಾಜಿನಾಮೆ ಕೊಟ್ಟ ಕೂಡಲೆ ಅಭಿಪ್ರಾಯ ಬದಲಾಯಿಸಿ ಸಹಕರಿಸುತ್ತೇನೆಂದರು. ಆದುದರಿಂದ ಇವರ ಮಂತ್ರಿತ್ವದ ಮೇಲೆ ಅಲ್ಲಿಯ ನ್ಯಾಯಸಭಾಸದರಿಗೆ ವಿಶ್ವಾಸವಿಲ್ಲವೆಂದು ಮಿ. ಚಿಂತಾಮಣಿಯವರು ತಂದ ಠರಾವಿಗೆ ಪರವಾಗಿಯೂ ವಿರೋಧವಾಗಿಯೂ ಸಮವಾದ ಓಟುಗಳಾದುವು. ಅಧ್ಯಕ್ಷರು ತಮ್ಮ ಕಾಸ್ಟಿಂಗ್ ಓಟನ್ನು ಪರವಾಗಿ ಕೊಟ್ಟದ್ದರಿಂದ ಅವಿಶ್ವಾಸದ ಠರಾವು ಪಾಸಾಯಿತು. ರಾಜರ ಕೀಯ ವಿಚಾರದಲ್ಲಿ ಅಭಿಪ್ರಾಯಗಳನ್ನು ಆಗ್ಗಾಗ್ಗೆ ಬದಲಾಯಿಸುವವರಿಗೆ ಇದು ಒಂದು ಒಳ್ಳೇ ಪಾಠವಾಗಿದೆ.

ಪಬ್ಲಿಕ್ ಸೇಫ್ಟಿ ಬಿಲ್ಲನ್ನು ಓಟಿಗೆ ಹಾಕುವ ಸಮಯಕ್ಕೆ ಮುಂಚಿತವಾಗಿ ಎಸೆಂಬ್ಲಿ ಮೆಂಬರಾದ ಯಂ. ಕೆ. ಆಚಾರ್ಯರಿಗೆ ಯಾರೋ ಒಂದು ಚೀಟಿಯನ್ನು ಕಳುಹಿಸಿ ಹೊರಗೆ ಇದ್ದೇನೆಂದು ಹೇಳಿ ಕಳುಹಿಸಿದರು. ಚೀಟಿಯನ್ನು ಓದಿ ಹೊರಗೆ ಹೋಗಲು ಅವರು ಚೆನ್ನಾಗಿ ಉಡುಪು ಧರಿಸಿದ ಒಬ್ಬ ಪಂಜಾಬಿಯನ್ನು ಕಂಡರು. ಆತನು ಆಚಾರ್ಯರಿಗೆ ಒಂದು ಪಾನಗಳನ್ನು ಕೊಡಬೇಕೆಂದು ಕೇಳಿಕೊಂಡನಂತರ ವೀಳ್ಯದೆಲೆಯನ್ನು ಕೊಟ್ಟನು. ವೀಳ್ಯದೆಲೆಯನ್ನು ಆಚಾರ್ಯರು ತೆಗೆದು ತಿಂದ ಕೂಡಲೆ ಒಂದು ತರವಾದಿ ತಲೆ ತಿರುಗುಂಟಾಯಿತು. ಒಡನೆ ವೀಳ್ಯದೆಲೆಯನ್ನು ಹೊರಗೆ ಉಗಿದರು. ಪಂಜಾಬಿಯು ಇದನ್ನು ಕಂಡು ನೀರು ದಾವನ್ನು ಕುಡಿಯಲು ತರುತ್ತೇನೆಂದು ಹೇಳಿ ಹೊರಟು ಹೋದವನು ಪತ್ತೆಯಿಲ್ಲದಾದನು. ಇತ್ತಲಾಗಿ ಮೇಲಿನ ಬಿಲ್ಲನ್ನು ಓಟಿಗೆ ಹಾಕುವ ಸಮಯಕ್ಕೆ ಗಂಟೆಯಾಯಿತು. ಆದರೆ ಆಚಾರ್ಯರಿಗೆ ಮೇಲಕ್ಕೆ ಹೋಗಿ ಓಟ್ ಮಾಡಲು ಶಕ್ತಿಯುಂಟಾಗಲಿಲ್ಲ. ಆದ ದರಿಂದಲೇ ತಾನು ಗೈರಾಜರಾಗಲು ಕಾರಣವಾಯಿತೆಂದು ಎಲ್ಲರ ಅರಿವಿನ ಬಗ್ಗೆ ಮೇಲಿನ ಕುಹಕ ಉಪಾಯವನ್ನು ತಿಳಿಸಿರುವರು.

## ವಿದೇಶ.

ಈಜಿಪ್ಟಿನ ಮಾಜಿ ಪ್ರಧಾನ ಮಂತ್ರಿಯಾಗಿದ್ದ ಸರ್ವತ್ ಪಾಷಾರವರು ತಾ 22ರಲ್ಲಿ ಶಿವಾಧೀನರಾದರು.

ಸ್ವೀಡನ್ನಿನ ಸೆಕೆಂಡ್ ಚೇಂಬರಿನ ಮೆಂಬರುಗಳ ಚುನಾವಣೆಯಲ್ಲಿ 'ಸೋಶ್ಯಲ್ ಡೆಮೊಕ್ರೇಟ್' ಸಂಗಡದವರೇ ಬಹುಮತದಲ್ಲಿ ಆರಿಸಲ್ಪಟ್ಟಿರುವರು.

ಕೆಲವು ದಿವಸಗಳ ಹಿಂದೆ ಲಂಡನಿನಲ್ಲಿ ನಡೆದ ಇಂಡಿಯನ್ ಸಿವಿಲ್ ಸರ್ವಿಸ್ ಸ್ಪರ್ಧೆ ಪರೀಕ್ಷೆಯಲ್ಲಿ 45 ಉಮೇದುವಾರರು ತೇರ್ಗಡೆ ಹೊಂದಿರುವರು. ಅವರಲ್ಲಿ 12 ಜನರು ಹಿಂದೀಯರಾಗಿರುವರು.

ಮೆಕ್ಸಿಕೋ ಸರ್ಕಾರದ ಒಬ್ಬ ಮಂತ್ರಿಯಾಗಿದ್ದ ಮಿ. ಎಮಿಲ್ಯೋ ಪೋರ್ಟೆಸ್ ಜಿಲ್‌ರವರು ಅದರ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು. ಅವರು ಡಿಸಂಬರು 1ರಲ್ಲಿ ಅಧ್ಯಕ್ಷ ಪದವಿಯನ್ನು ವಹಿಸಿಕೊಳ್ಳುವರು.

ಈಜಿಪ್ಟಿನಲ್ಲಿ ಮೊದಲು ಜಡ್ಜರು 65 ವರ್ಷ ಪ್ರಾಯದ ವರೆಗೂ ಉದ್ಯೋಗದಲ್ಲಿ ರಬಹುದಾಗಿದ್ದರೂ, ಈಗ 60 ವರ್ಷ ಮೀರಿದ 13 ಜಡ್ಜಿಗಳು ಬಲಾತ್ಕಾರದಿಂದ ರಿಟೈರ್ ಮಾಡಿಸಲ್ಪಟ್ಟಿರುವರು. ಇದು ಈಗಿನ ಸರಕಾರದ ಘೋಷಣೆ.

ಲಂಡನಿನಲ್ಲಿ 4½ ರೂ. ಧಾರವಾಹಿನಿಯ ಪ್ರಾರಂಭಿಸಿ 50 ವರ್ಷಗಳ ವರೆಗೆ ಅದುಳ್ಳ ಸುಲಿದು ಉಪ್ಪಿಸಲಾಯಿ. ಸಾಕುವವರಿಗೆ ಕೊಡುತ್ತಾಬಂದ ಪೀಟರ್ ಟೈಲರ್ ಎಂಬವನು ತನ್ನ ಮರಣ ಕಾಲದಲ್ಲಿ 7000 ಪವನುಗಳನ್ನು ಅಂದರೆ ಒಂದು ಲಕ್ಷ 5 ಸಾವಿರ ರೂಪಾಯಿಗಳನ್ನು ಕೂಡಿಟ್ಟಿದ್ದನಂತೆ!

ತಾ. 23ರಲ್ಲಿ ಸ್ಪೈನ್ ದೇಶದ ಮೆಡ್ರಿಡ್ ಪಟ್ಟಣದ ಒಂದು ನಾಟಕ ಶಾಲೆಗೆ, ನಾಟಕವನ್ನು ಅಭಿನಯಿಸುತ್ತಿರುವಾಗ ಅಕಸ್ಮಾತ್ ಬೆಂಕಿ ಬಿದ್ದು ಕಟ್ಟಡವೆಲ್ಲವೂ ಸುಟ್ಟು ಹೋದಾಗ ಅದರೊಳಗಿದ್ದ ಜನರು ದಾಟುವ ಪ್ರಯತ್ನದಲ್ಲಿ ಉಸಿರು ಕಟ್ಟಿ ನೂರಾರು ಜನರು ಮೃತಪಟ್ಟರೆಂದೂ, ಸುಮಾರು 200 ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರೆಂದೂ ಸುದ್ದಿ.

ಈ ತಾ. 24ರಲ್ಲಿ ಸರ್ ಮೈಕಲ್ ಓಡ್ವೈರ್‌ರವರು ಉತ್ತರ ಲಂಡನ್ನಿನ 'ಬ್ರದರ್‌ಹುಡ್' ಚರ್ಚಿನಲ್ಲಿ ಇಂಡಿಯಾವನ್ನು ಕುರಿತು ಭಾಷಣ ಮಾಡಲು ಎದ್ದಾಗ ಸಭಿಕರು ಎದ್ದು ನಿಂತು ಬೊಬ್ಬೆಮಾಡಿ 'ಓಡ್ವೈಯರು ಕೊಲೆಪಾತಕರು,' 'ಇಂಗ್ಲಿಷ್ ಕೆಲಸಗಾರರನ್ನು ಕೊಲ್ಲುಗದನ್ನು ನಿಲ್ಲಿಸಿ' ಎಂಬ ಶಬ್ದಗಳಿರುವ ದೊಡ್ಡ ಹಸ್ತಪತ್ರಗಳನ್ನು ಎತ್ತಿ ತೋರಿಸಿದರು. ಭಾಷಣ ಮಾಡುವದು ಅಸಾಧ್ಯವೆಂದು ತಿಳಿದ ಓಡ್ವೈಯರು ಸಭೆಯನ್ನು ಬಿಟ್ಟು ಹೊರಟುಹೋದರು. ಪರರಾಷ್ಟ್ರಗಳ ಮೇಲೆ ದ್ವೇಷವನ್ನು ಕಾರುವಂಥವರಿಗೆ ಇದೀಗ ತಕ್ಕ ಸ್ವಾಗತ!

## ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ.......

ನನ್ನ ತಂದೆ ಪಾಲ್ತಿ ಚೆಪ್ಪುಡಿರ ರಾಯಬಹದ್ದೂರ್ ತಿಮ್ಮಯ್ಯನವರ ಬಾಬ್ತು ಮಡಿಕೇರಿಯಲ್ಲಿರುವ ಕ್ರಿಸ್ಟಲ್ ಪ್ಯಾಲೇಸ್ ಎಂಬ ಬಂಗ್ಲೆಯು ಪಾಲ್ತಿ ಮಕ್ಕಳಿಗೆಲ್ಲಾ ಹಕ್ಕಾಗಿರುವಂಥಾ ಆಸ್ತಿಯಾಗಿದೆ. ಈ ತನ್ನ ದ್ದೆ ಸದರಿ ಬಂಗ್ಲೆಯನ್ನು ನಮ್ಮ ಪೈಕಿ ಒಬ್ಬರು ಗಿರ್ವಿ, ಯಾ ಭೋಗ್ಯ ಮಾಡಿಕೊಡುತ್ತಾರೆಂಗಿ ವರ್ತಮಾನವಿದೆ. ಈ ಬಂಗ್ಲೆಯನ್ನು ಗಿರ್ವಿ ಯಾ ಭೋಗ್ಯ ಕೊಡಲು ಯಾರೊಬ್ಬರಿಗೂ ಅಧಿಕಾರವಿಲ್ಲ. ಹಾಗೆ ಗಿರ್ವಿ ಯಾ ಭೋಗ್ಯ ತೆಗೆದುಕೊಂಡವರು, ವಿಶಿಷ್ಟ ನಷ್ಟಕ್ಕೆ ಗುರಿಯಾಗತಕ್ಕದ್ದೆಂದು ಈ ಮೂಲಕ ಸರ್ವರಿಗೂ ತಿಳಿಸಲಾಗಿದೆ.

ಅತ್ತೂರು,
ತಾ 27—9—28. ಸಿ. ಟಿ. ಪೇಮ್ಮಯ್ಯ

## ಶನಿವಾರಸಂತೆ ಆಸ್ಪತ್ರೆ.

ಪ್ರೊ. ನಿಡ್ತದ ಸುಬ್ರಣ್ಯಯ್ಯನವರು ಮೇಲಿನ ವಿಷಯದಲ್ಲಿ ಡಿ. ಬೋರ್ಡು ಪ್ರೆಸಿಡೆಂಟರ ಪತ್ರಕ್ಕೆ ಬರೆದ ಜವಾಬು ಪ್ರಾ ಮಹಾಶಯರ ತಿಳುವಳಿಕೆ ಒಗ್ಗೆ ಇಲ್ಲಿ ಪ್ರಕಟಿಸಲ್ಪಟ್ಟಿ.

ಶನಿವಾರಸಂತೆ ಆಸ್ಪತ್ರೆಯನ್ನು ತೆರೆಯಲು ಚಂದಾ ಎತ್ತುವಂಬ ವಿಷಯದಲ್ಲು ನೀವು ಬರೆದ ಕಾಗದವು 29—3—'28 ರ ನನ್ನ ಕೈಸೇರಿತು. ಆದರೆ ಒಡನೆ ಜವಾಬು ಕೊಡಲು ನಾಶ್ಯವಾಗದೆ ಇದ್ದುದಕ್ಕೆ ಕ್ಷಮೆ ಬೇಡುತ್ತೇನೆ.

ಪ್ರಾರಭ್ಯ ಶನಿವಾರಸಂತೆ ಹೋಬಳಿ ಜನರ ಅಭಿಪ್ರಾಯ ತಿಳಿದುಕೊಂಡು ಸರಿಯಾದ ಉತ್ತರಕೊಡಬೇಕಂದು ಯೋಚಿಸಿದ್ದರಿಂದ ಆ ಅಭಿಪ್ರಾಯವನ್ನು ತಿಳಿಯದೆ ಜವಾಬು ಕೊಡುವುದು ಉಚಿತವಲ್ಲವೆಂದು ಭಾವಿಸಿದುದೇ ಈ ಅನಿವಾರ್ಯವಾದ ತಡಕ್ಕೆ ಕಾರಣವಾಯಿತು ಇದಕ್ಕೆ ತಾವು ಮನ್ನಿಸುವರಾಗಿ ಕೋರುತ್ತೇನೆ.

ಈ ನಾಡಿನ ಜನರು ತಮ್ಮ ಯಾವ ಸ್ಥಿತಿಗತಿಗಳು ಚೆನ್ನಾಗಿಲ್ಲದಿರುವುದರಿಂದ ಚಂದಾ ಕೊಡಲು ಶಕ್ತರಲ್ಲವೆಂದು ತಿಳಿಸುತ್ತಾರೆ. ಈ ವಿಷಯವು ನಿಜವೆಂದೇ ನಾನು ಹೇಳುತ್ತೇನೆ ನಾಲದುದಕ್ಕೆ ನಿಮ್ಮ ಅಂದಾಜಿನ ಮೇರೆ ಈ ಆಸ್ಪತ್ರೆಗೆ ಬೇಕಾಗಿರುವ 6000 ರೂಪಾಯಿಗಳ ಹೆಚ್ಚಿನ ಅಂಶವನ್ನು ಇಲ್ಲಿ ಯಾರಾದರೊಬ್ಬನೇ ಕೊಡಲು ಶಕ್ಯನಲ್ಲ ಈ ತೆರನಾದ ರೈತರ ಅಭಿಪ್ರಾಯಕ್ಕೆ ಅನೇಕ ಸಕಾರಣಗಳಿವೆ ಅದೆಲ್ಲವನ್ನೂ ಇಲ್ಲಿ ವಿವರಿಸುವುದಾದರೆ ಅಧ್ಯಾಯಗಳಾಗಿ ಹೋಗುವುವು ಆದರೆ ಸ್ಥಳಕ್ಕನುಕೂಲವಾಗಿ ಕೇವಲ ಮುಖ್ಯವಾದ ಅಂಶಗಳನ್ನು ನಿಮ್ಮ ಸಹಾನುಭೂತಿಯ ನಿಷ್ಕರ್ಷೆಗೋಸ್ಕರ ವಿವರಿಸುತ್ತೇನೆ

ತಾವು ಹೇಳಿದಂತೆ ಶನಿವಾರಸಂತೆಯಲ್ಲಿ ಒಂದು ಆಸ್ಪತ್ರೆ ತೆರೆಯಬೇಕೆಂದು ಎಲ್ಲರೂ ಒಪ್ಪಿ ಕೇಳುವುದಾಗಿದೆ ಆದುದರಿಂದ ಈ ವಿಷಯ ತಮ್ಮ ಚಿತ್ತಕ್ಕೆ ಮಂದಟ್ಟು ಮಾಡುವುದು ಅವಶ್ಯವಿಲ್ಲ. ಆದರೆ ಕಳೆದ 25 ವರ್ಷಗಳಿಂದಲೂ, ಈ ನಾಡಿನ ಜನರು ಒಂದು ಆಸ್ಪತ್ರೆಯಾಗಬೇಕೆಂದು ಸರ್ಕಾರದವರನ್ನೂ, ಡಿ. ಬೋರ್ಡಿನವರನ್ನೂ ಕೇಳಿಕೊಳ್ಳುತ್ತಿದ್ದಾರೆ. ಇದು ಬಹು ಹಳೇ ಪ್ರಶ್ನೆಯೆಂಬುದು ನಿಜ. ಆದರೆ ಸರ್ಕಾರದವರು ಒಂದು ಆಸ್ಪತ್ರೆಯನ್ನು ಶನಿವಾರಸಂತೆಯಲ್ಲಿ ತೆರೆಯುತ್ತೇವೆಂಬುದನ್ನು ಬಾರಿಬಾರಿಗೂ ಹೇಳುತ್ತಿದ್ದರು.

ನಾನು ಕೂಡ ಡಿ. ಬೊ. ಮೆಂಬರಾಗಿಯೂ, ಕೌನ್ಸಿಲ್ ಮೆಂಬರಾಗಿಯೂ ಒಂದು ಆಸ್ಪತ್ರೆಯನ್ನು ತೆರೆಯುವಂತೆ ಮಾಡಬೇಕೆಂದು ಸರ್ವಪ್ರಯತ್ನವನ್ನು ಮಾಡಿದೆನು. ಈ ಎರಡು ಸಂಸ್ಥೆಗಳು ತೆರೆಯುತ್ತೇವೆ ಎಂದು ಬರೀ ಮಾತಿನಿಂದ ಸುಧಾರಿಸಿಬಿಟ್ಟವು, ಅಂತೂ ತಡವಾದುದಕ್ಕೆ ಅನೇಕ ನೆಪಗಳನ್ನು ಎತ್ತಿ ಹೇಳಿದರು. ಈ ಸ್ಥಳದಲ್ಲಿ ಆಸ್ಪತ್ರೆಯನ್ನು ತೆರೆಯಲು ಸಂದರ್ಭದೊರೆತಾಗಲೂ, ಅದನ್ನು ಬಿಟ್ಟು ಫ್ರೇಜರ್ ಪೇಟೆ ಮೊದಲಾದ ಸ್ಥಳಗಳಿಗೆ ಅನುಕೂಲಗಳನ್ನು ದೊರಕಿಸಿಕೊಟ್ಟರು.

ಈಗಲೂ ಕೂಡ ಹಣವಿಲ್ಲವೆಂಬ ನೆಪದಿಂದ ಬೋರ್ಡಿನವರು ಜನರ ಮೇಲೆ ಜವಾಬ್ದಾರಿಯನ್ನು ಹಾಕಿ, ಈ ನಾಡನ್ನು ಬಿಟ್ಟು ಪ್ರಾರಂಭದ ಖರ್ಚನ್ನು ಮಾಡಲು ಭರವಸೆ ಇತ್ತಿರುವ ಮೂರ್ನಾಡಿನ ಮೇಲೆ ತಮ್ಮ ದಯೆಯನ್ನು ತೋರಿಸಿದ್ದಾರೆ. ಮೂರ್ನಾಡಿನ ಜನರು ಚಂದಾ ಹಣ ಕೊಡುವಷ್ಟು ಅನುಕೂಲದಲ್ಲಿರಬಹುದು. ಆದರೆ ಬೋರ್ಡಿನವರು ಬರೇ ಹಣದ ಬಜಾವಿನ ಅನುಕೂಲವೊಂದಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟರೆ ಸಾಲದು ಅವರು ಕೇವಲ ಸ್ಥಿತಿಗತಿಗಳನ್ನು ವಿಮರ್ಶಿಸಿ ಸರಿಯಾದ ಕಡೆ ತಮ್ಮ ದೃಷ್ಟಿಯನ್ನು ಚಾಚಬೇಕು ಈ ವಿಷಯವು ಕೇವಲ ಹಣವೊಂದನ್ನವಲಂಭಿಸಿರುವದಲ್ಲ, ಇದು ಮನುಷ್ಯನ ಜೀವಮರಣದ ಸಮಸ್ಯೆಯಾಗಿದೆ. ಬೋರ್ಡಿನವರು ಇದನ್ನು ವ್ಯಾಪಾರ ದೃಷ್ಟಿಯಿಂದ ನೋಡದೆ ಇದಕ್ಕೆ ಸಾಕಷ್ಟು ಹಣವನ್ನು ಒದಗಿಸಿಕೊಡಬೇಕು.

ಎಲ್ಲರಿಗೂ ತಿಳಿದಂತೆ ಮೂರ್ನಾಡಿನ ಜನರ ಕೋರಿಕೆಯು ಶನಿವಾರಸಂತೆಯವರದಷ್ಟು ಹಳೇದಲ್ಲ. ಅಲ್ಲದೆ ಮೂರ್ನಾಡು ಮಲೇರಿಯಾ ಪೀಡಿತ ಪ್ರದೇಶವೆಂದು ಈ ವರೆಗೆ ನನಗೆ ಗೊತ್ತಿರುವ ಮಟ್ಟಿಗೆ ಯಾರು ಹೇಳಿರುವುದಿಲ್ಲ. ಅದೂ ಅಲ್ಲದೆ ಮೂರ್ನಾಡಿನಿಂದ ಕೆಲವು ಮೈಲುಗಳ ದೂರದಲ್ಲೇ ವೀರರಾಜಪೇಟೆಯಿದೆ. ಅಲ್ಲಿ ಎಲ್ಲಾ ಸೌಕರ್ಯಗಳಿರುವ ಒಂದು ಒಳ್ಳೇ ಆಸ್ಪತ್ರೆಯಿದೆ ಇದರಿಂದ ಮೂರ್ನಾಡಿನ ಜನರಿಗೆ ಅನೇಕ ಅನುಕೂಲತೆಗಳಿವೆ ಮಲೇರಿಯಾ ಕಮಿಟಿಯವರೂ ಕೂಡ ಈ ಸ್ಥಳಕ್ಕೆ ಹೆಚ್ಚಿನ ಗಮನವನ್ನು ಕೊಟ್ಟಿರುವುದಿಲ್ಲ. ನನಗೆ ಗೊತ್ತಿರುವಂತೆ ಸೋಮವಾರಪೇಟೆ ಮತ್ತು ಶನಿವಾರಸಂತೆ, ಈ ಎರಡು ಸ್ಥಳಗಳಲ್ಲಿ ಅವಶ್ಯ ಜಾಗ್ರತ ಆಸ್ಪತ್ರೆಗಳನ್ನು ತೆರೆಯಬೇಕೆಂಬುದೇ ಅವರ ಸಿಫಾರಸು ಅದೃಷ್ಟವಶಾತ್ ಸೋಮವಾರಪೇಟೆಗೆ ದಕ್ಷಿಣ ಕನ್ನಡ ಬೋರ್ಡಿನವರ ಸಹಕಾರದಿಂದ ಒಂದು ಆಸ್ಪತ್ರೆಯು ಕೆಲವು ವರ್ಷಗಳ ಹಿಂದೆ ದೊರೆತಿದೆ. ಈ ಸಂದರ್ಭದಲ್ಲಿ ಚಂದಾದ ಬಗ್ಗೆ ಎಬ್ಬಿಸಿದ ಪ್ರಶ್ನೆಯನ್ನು ಬೋರ್ಡಿನವರು ಎತ್ತಲಿಲ್ಲವೆಂದೇ ನಾನು ಹೇಳಬೇಕಾಗಿದೆ. ಮಲೇರಿಯಾ ಕಮಿಟಿಯವರು ಶನಿವಾರಸಂತೆಯಲ್ಲಿ ಆಸ್ಪತ್ರೆಯನ್ನು ತೆರೆಯಬೇಕೆಂದು ಹೇಳಿರುವಾಗ ಅವರ ರಿಪೋರ್ಟಿಗೆ ಸನ್ಮಾನವನ್ನೂ ಬೆಲೆಯನ್ನೂ ಕೊಡಲು ಮತ್ತು ಶನಿವಾರಸಂತೆಯ ಜನರ ಆರೋಗ್ಯವನ್ನು ಕಾಪಾಡಲು ಬೋರ್ಡಿನ ಹಣದಿಂದ ಒಂದು ಆಸ್ಪತ್ರೆಯನ್ನು ಕಟ್ಟಿಸಲೇ ಬೇಕು. ಇದರಿಂದ ಜನರು ಸಂತುಷ್ಟರಾಗುವರು. ಸಂತುಷ್ಟರೂ, ತೃಪ್ತರೂ ಆದ ಜನರೇ ಸರಕಾರದ ಬೆನ್ನೆಲುಬು ಎಂಬುದರಲ್ಲಿ ಸಂಶಯವಿಲ್ಲ.

ಹೀಗಿರುವುದರಿಂದ ಬೋರ್ಡು ಕಾರಣಾಂತರಗಳಿಂದ ಮೂರ್ನಾಡಿಗೆ ಪ್ರಾಶಸ್ತ್ಯವನ್ನು ಕೊಡುವುದಾಗಲಿ, ಶನಿವಾರಸಂತೆಯನ್ನು ಉಪೇಕ್ಷಿಸುವುದಾಗಲಿ ನ್ಯಾಯವಲ್ಲ. ಮೂರ್ನಾಡಿನವರು ಆಸ್ಪತ್ರೆಯಾಗಬೇಕೆಂದು ಈಗ ತಾನೇ ಚಳವಳ ವೆಬ್ಬಿಸಿದರು. ಇದಕ್ಕಾಗಿ ಅವರಿಗೊಂದು ಆಸ್ಪತ್ರೆಯು ಇರಬಾರದೆಂದು ನಾನು ಹೇಳುವುದಿಲ್ಲ, ಆದರೆ ಕಾಲಸ್ಥಿತಿಗಳಿಗನುಸಾರವಾಗಿ ಚಂದಾಹಣ ಎತ್ತುವ ಅಭಿಪ್ರಾಯವನ್ನು ತ್ಯಜಿಸಿ ಮೊದಲು ಶನಿವಾರ ಸಂತೆಗೆ ಆಸ್ಪತ್ರೆಯನ್ನು ಕೊಡಲೇ ಬೇಕು ಈ ಆಸ್ಪತ್ರೆಯ ಎಲ್ಲಾ ಖರ್ಚನ್ನೂ ಡಿ. ಬೋರ್ಡಿನವರೇ ಕೊಡಲು ಬೇಕಾದಷ್ಟು ಸಕಾರಣಗಳಿವೆ.

ಮೊದಲೊಮ್ಮೆ ಪ್ರಸಿಡೆಂಟರಾಗಿದ್ದ ಮೆ. ಓಸ್ಕರ್ ಸಾಹೇಬರವರನ್ನು ನಾನು ಅನೇಕ ಸಾರಿ ಭೇಟಿಯಾಗಿ ನಂಬರಾಯಪಟ್ಟ ತಾಲೋಕಿನ ಕಷ್ಟ ಸುಖಗಳನ್ನು ಕುರಿತು ಪ್ರಸ್ತಾಪಿಸಿದಾಗ ಈ ತಾಲೋಕಿನ ಜನರಿಗೆ ಮೊದಲು ಬಾವಿಗಳನ್ನು ತೋಡಿ ಶುಚಿಯಾದ ನೀರನ್ನು ದೊರಕಿಸಿಕೊಡಬೇಕು, ಮತ್ತು ಮಲೇರಿಯಾ ಬಾಧೆಯಿರುವ ಸ್ಥಳವಾದುದರಿಂದ ಆಸ್ಪತ್ರೆಗಳ ಸೌಕರ್ಯವು ಅಗತ್ಯವಿರಬೇಕೆಂದು ಅವರಿಗೆ ಮಂದಟ್ಟುಮಾಡಿದ್ದೆನು. ಅವರಿರುವ ವರೆಗೆ ಈ ಎರಡು ವಿಷಯಗಳಿಗೆ ಹೆಚ್ಚು ಗಮನವನ್ನು ಕೊಡುತ್ತೇನೆಂಬ ಭರವಸೆಯನ್ನು ಕೂಡ ಕೊಟ್ಟಿದ್ದರು ಅವರು ನೀರನ್ನು ದೊರಕಿಸಿಕೊಡಲು ಬಹಳ ಶ್ರದ್ಧೆಯನ್ನು ವಹಿಸಿ ನೀರಿನ ಅಭಾವ ಬಹಳವಾಗಿದ್ದ ಗ್ರಾಮಗಳಲ್ಲಿ ಬಾವಿಗಳನ್ನು ತೋಡಿಸಿದರು ಆಸ್ಪತ್ರೆಯನ್ನು ತೆರೆಯುವ ವಿಷಯದಲ್ಲೂ ಕೂಡ ಅವರು ನಿಧಾನವಾಗಿರಲಿಲ್ಲ ಬೋರ್ಡಿನಲ್ಲಿ ಇದನ್ನೂ ಕೂಡ ಮಂಜೂರುಮಾಡಿದರು ನಾವು ಬಹಳ ಉತ್ಸಾಹದಿಂದಿದ್ದೆವು ಆದರೆ ಈಗ ಕಾರ್ಯತಃ ನೋಡಿದರೆ ಎಲ್ಲವೂ ಬದಲಾಗಿದೆ

ನಾನು ಹೇಳಿದ ಮೇರೆ ಈ ತಾಲೋಕಿನಲ್ಲಿ ಅನೇಕ ಗ್ರಾಮಗಳು ಜನರಹಿತವಾಗಿ ಹಾಳುಬೀಳುತ್ತಲಿವೆ ಎಂಬುದನ್ನೂ, ಆ ದೇಗತಿಯೂ ಶನಿವಾರಸಂತೆಗೂ ಲಭಿಸಬಹುದೆಂಬುದನ್ನೂ ಅವರು ಚೆನ್ನಾಗಿ ತಿಳಿದಿದ್ದರು. ಈ ಗ್ರಾಮಗಳನ್ನು ಉತ್ತಮ ಸ್ಥಿತಿಗೆ ತರಲು ಜೀರ್ಣೋದ್ಧಾರದ (ರೀಜನರೇಶನ್) ಏರ್ಪಾಡು ಮಾಡಿದರು ಅದು ಈಗಲೂ ನಡೆಯುತ್ತಾ ಇದೆ ಈ ಏರ್ಪಾಡಿನ ವಿಷಯ ವಿವರಿಸಲು ಇಲ್ಲಿ ಸ್ಥಳವಿಲ್ಲ. ಜೀರ್ಣೋದ್ಧಾರ ಏರ್ಪಾಡಿಗೆ ಸೇರಿದ ಹದ್ದುಗೊತ್ತಿಯೇ ಶನಿವಾರಸಂತೆಯೂ ಇದೆ ಆದುದರಿಂದ ಈ ಸ್ಥಳಕ್ಕೆ ಸರ್ಕಾರದವರ ಹೆಚ್ಚಿನ ಗಮನವು ಅಗತ್ಯ. ಈ ತಾಲೋಕಿನ ಜನರು ಬಹಳ ಬಡವರು. ಆದುದರಿಂದ ಸರ್ಕಾರದವರೂ, ಡಿ. ಬೋರ್ಡಿನವರೂ ಇದರ ಸಹಾಯಕ್ಕೆ ಬರಬೇಕು. ಇದನ್ನು ಬಿಟ್ಟು ಡಿ ಬೋರ್ಡಿನವರು ಚಂದಾಹಣ ಎತ್ತುವುದರಲ್ಲಿ ಆಸಕ್ತಿಯನ್ನು ತೋರಿಸಿದರೆ ಈ ಸ್ಥಳವೂ ಕೂಡ ಹಾಳುಬಿದ್ದ ಸ್ಥಳಗಳ ಗತಿಯನ್ನೇ ಹೊಂದಿ ಇದನ್ನು ರಿಸರ್ವ್ ಫಾರೆಸ್ಟಾಗಿ ಮಾಡಿಕೊಳ್ಳಲು ಯಾವ ಕಷ್ಟವೂ ಇರಲಾರದು ಈ ಮೇಲಿನ ಸ್ಥಿತಿಗತಿಗಳನ್ನು ಚೆನ್ನಾಗಿ ವಿಮರ್ಶಿಸಿ ನೀವು ಪೂರಾ ಸಹಾನುಭೂತಿಯನ್ನು ತೋರಿಸಿ, ಒಂದು ಆಸ್ಪತ್ರೆಯನ್ನು ಡಿ. ಬೋರ್ಡಿನ ಹಣದಿಂದಲೇ ತೆರೆದು ಒಳ್ಳೆಯ ಹೆಸರನ್ನು ಪಡೆಯಬೇಕೆಂದು ಕೋರುತ್ತೇನೆ

ಗಂಧದ ಉತ್ಪತ್ತಿಯು, ಪೂರಾ ನಂಬರಾಯಪಟ್ಣ ತಾಲೋಕಿನಿಂದಲೇ ದೊರಕುವುದು ಇದರಲ್ಲಿ ಹೆಚ್ಚಿನ ಅಂಶವು ಶನಿವಾರಸಂತೆಯಿಂದ ಬರುತ್ತದೆ ಡಿ ಬೋರ್ಡಿನವರು, ಇದು ಪ್ರಾಂತೀಕ ಉತ್ಪತ್ತಿಯಾದುದರಿಂದ ಅದು ತಮಗೆ ಸಂಬಂಧವಿಲ್ಲವೆಂದು ಹೇಳಬಹುದು. ಇದೂ ನಿಜವೇ. ಲಕ್ಷಾಂತರ ರೂಪಾಯಿ ಬೆಲೆಬಾಳುವ ಗಂಧವನ್ನು ರೈತರ ಸ್ವಂತ ಜಾಗದಿಂದ ಸರ್ಕಾರವು ಕಿತ್ತು, ಇದಕ್ಕಾಗಿ ಯಾವ ಪ್ರತಿಫಲವನ್ನೂ ಕೊಡದೇ ಇರುವರು. ಅವರಿಗೆ ಹಣ [illegible] ಯಾವ ಲಾಭವೂ ದೊರಕದೆ ಹೋದರೆ, ಆಸ್ಪತ್ರೆಗಳೇ ಮೊದಲಾದ ಸೌಕರ್ಯಗಳ ಮೂಲಕವಾಗಿ ಸಹಾಯವನ್ನಾ ಕೇಳುವುದು ತಪ್ಪಾಗುವುದೇ ? ಸರ್ಕಾರಕ್ಕೆ ಈ ತಾಲೋಕಿನಿಂದ [illegible] ವ ಉತ್ಪತ್ತಿಗನುಸಾರವಾಗಿ ಇಲ್ಲಿಯವರಿಗೆ [illegible] ಸಿಕ್ಕುತ್ತಿಲ್ಲ. ಆದುದರಿಂದ ಬೋರ್ಡಿನಲ್ಲಿ ಹಣವಿಲ್ಲದೆಹೋದರೆ ಅವರು ಸರ್ಕಾರದಿಂದ ತಕ್ಕಷ್ಟು ಹಣವನ್ನು ಹೊಂದಿಕೊಳ್ಳಬೇಕು.

ಡಿ ಬೋರ್ಡಿನವರು ಪ್ರೈಮರಿ ಸ್ಕೂಲ್ ಮಾಸ್ಟರ ಗಳ ಸಂಬಳ ಹೆಚ್ಚಿಸಲೋಸುಗ ಸೆಸ್ಸನ್ನು 1 ಆಣೆಯಿಂದ ಎರಡಾಣೆಗೆ ಏರಿಸಿದರು. ಆದರೆ ಇದರ ಆದಾಯವು ತಮಗೆ ಬೇಕಾದ ಖರ್ಚಿಗಿಂತ ಮೀರಿ ಹೋದರೂ ಕೂಡ, ಇನ್ನೂ ಪೂರ್ತಿ ಸೆಸ್ಸನ್ನು ವಸೂಲುಮಾಡುತ್ತಲೇ ಇದ್ದಾರೆ. ಈ ಹೆಚ್ಚಿನ ಹಣವು ಬೋರ್ಡಿನಲ್ಲಿ ಒಟ್ಟುಗೂಡುತ್ತಾ ಇದೆ. ಲೆಕ್ಕ ನೋಡಿದರೆ, ಈ ನಾಡಿನ ಸೆಸ್ ಉತ್ಪತ್ತಿಯು ಇತರ ನಾಡುಗಳದ್ದಕ್ಕಿಂತ ಹೆಚ್ಚಾಗಿದೆ. ವಿಚಾರಮಾಡಿದರೆ ಈ ನಾಡಿಗೆ ಉತ್ಪತ್ತಿಗನುಸಾರವಾದ ಪ್ರಯೋಜನವು ದೊರಕಿಲ್ಲ. ವಿದ್ಯೆಯಲ್ಲಿಯೂ, ಆಸ್ಪತ್ರೆ ಮುಂತಾದ ಸೌಕರ್ಯಗಳಲ್ಲಿಯೂ ಇದು ಇತರ ನಾಡುಗಳಿಗಿಂತ ಹಿಂದುಳಿದಿದೆ.

ಅವರ ಅಶಕ್ತತೆಯಿಂದ (ವಿದ್ಯಾವಿಹೀನತೆ, ಬಡತನ) ಈ ತಾಲೋಕಿನ ಜನರು ತಮ್ಮ ನ್ಯಾಯವಾದ ಕೋರಿಕೆಗಳನ್ನು ಸರಕಾರದ ಮತ್ತು ಡಿ ಬೋರ್ಡಿನ ಮುಂದಿಡಲಾರದವರಾಗಿದ್ದಾರೆ. ಈ ಕುಂದು ಕೊರತೆಗಳನ್ನು ಇಲ್ಲಿಯೇ ಇರುವ ಯಾರಾದರೂ ನೋಡಬಹುದು ಇಲ್ಲಿಯ ರೈತರು ಈ [illegible] ದುಸ್ಥಿತಿಯಲ್ಲಿರುವಾಗ, ಡಿ. ಬೋರ್ಡಿನವರು ಅವರ ಸಹಾಯಕ್ಕೆ ಬಂದು ಬಿಡಾಯ್ತವಾಗಿ ವಿದ್ಯೆ ಆಸ್ಪತ್ರೆಗಳು, ಕುಡಿಯಲು [illegible] ಚಿನೀರನ್ನು ಒದಗಿಸುವುದೇ ಮೊದಲಾದ ಕೆಲಸಗಳನ್ನು ಮಾಡಿ ಇವರು ಇತರ ನಾಡುಗಳವರ ಮಟ್ಟಕ್ಕೆ ಬರಲು ಎಲ್ಲಾ ವಿಧದಲ್ಲಿ ಉತ್ತೇಜನಕೊಡಬೇಕು.

ಈ ತಾಲೋಕಿನವರು ಹುಟ್ಟಿದ್ದೇ ಎಲ್ಲಾ ತರದ ತೆರಿಗೆ [illegible] ವಲು ಎಂಬುದನ್ನು ನಾನು ಬಹಳ ನೋವಿನಿಂದ ಹೇಳಬೇಕಾಗಿದೆ. ಯಾವ ತರದ ಕಂದಾಯವಿಂದಲೂ ಇವರು ತಪ್ಪಿಸಿಕೊಂಡಿಲ್ಲ ಯಾವ ರಿಯಾಯಿತಿಗಳೂ ಇವರಿಗೆ ದೊರೆತಿಲ್ಲ. ನ್ಯಾಯ ಪ್ರಕಾರ ಈ ತಾಲೋಕು ನೋಡಲ್ಪಡುತ್ತಿಲ್ಲ. ಜಮ್ಮ ಭೂಮಿಯನ್ನು ಅನುಭವಿಸುವ ಅದೃಷ್ಟವು ದಕ್ಷಿಣ ಕೊಡಗಿನವರದಾಗಿದೆ. ಅವರು ವಿಶಾಲವಾದ ಬಾಣೆಗಳಿಗೆ ಯಾವ ಕಂದಾಯವನ್ನು ಕೊಡದೆ ಅದರಿಂದ ಪ್ರಯೋಜನವನ್ನು ಹೊಂದಿಕೊಳ್ಳುತ್ತಿದ್ದಾರೆ. ಇಲ್ಲಿ ಹಾಗಲ್ಲ, ಒಂದು ಚೂರು ಜಾಗವನ್ನಾಗಲೀ ಕಂದಾಯ ಕೊಡದೆ ಯಾರು ಅನುಭವಿಸುತ್ತಿಲ್ಲ. ಈ ತೆರನಾದ ಇನ್ನೂ ಅನೇಕ ತಾರತಮ್ಯಗಳಿವೆ, ಆದರೆ, ನಾನು ಒಂದೆರಡನ್ನೇ ಇಲ್ಲಿ ಸೂಚಿಸಿದ್ದೇನೆ.

ಈಗ ಬೋರ್ಡಿನವರು ತಮ್ಮ ಮುಂದಿರುವ ದವಾಖಾನೆಗೆ ತರಲು ನಿರ್ಧರಿಸಿದರೆ, ಆದರ ಜನರಿಂದ ಫಂಡಿನಿಂದ [illegible] ಣವನ್ನು ಮಂಜೂರು ಮಾಡಲು ಅಸಾಧ್ಯವೆಂದು ಕಂಡ[illegible] ದಲ್ಲಿ ಸೆಸ್ಸು ಮುಖಾಂತರ ಬರುವ ಹೆಚ್ಚಿನ ಉತ್ಪತ್ತಿಯನ್ನು ಈ ಕೆಲಸಕ್ಕೆ ವಿನಿಯೋಗಿಸಬೇಕೆಂದು ಸೂಚಿಸುತ್ತೇನೆ [illegible] ಸೂಚನೆಯು ತಪ್ಪಾಗಲಿಕ್ಕಿಲ್ಲವೆಂದು ನನ್ನ ಭಾವನೆ.

ನಾನು ಸ್ಥಳೀಕ ಡಿ. ಬೋರ್ಡು ಮೆಂಬರರ ಜೊತೆಯಲ್ಲಿ ಈ ವಿಷಯ ಸಾಂಗವಾಗಿ ಚರ್ಚಿಸಿದ್ದೇನೆ ಅವರು ಈ ವಿಷಯಗಳೆಲ್ಲವನ್ನೂ ಬರುವ ಮೀಟಿಂಗಿನಲ್ಲಿ ಮೆಂಬರರ ಅವಗಾಹನೆಗೆ ತರುತ್ತೇನೆಂತಲೂ, ತನ್ನ ಹವಾಲುಗಳಿಗೆ ಬೋರ್ಡಿನ ತಕ್ಕ ಗೋಷ್ಠಿಯ ದೊರೆಯದೆ ಹೋದರೆ ತಾನು ಚಂದಾ [illegible] ಸೂಲು ಮಾಡಲು ಪ್ರಯತ್ನಿಸುತ್ತೇನೆಂತಲೂ, ಸುಮಾರು 1000/—ದಿಂದ 1500/—ರೂ. ಗಳ ವರೆಗೆ ಜಮಾಯಿಸಲು ಸಾಧ್ಯವಾಗಬಹುದೆಂತಲೂ ಹೇಳಿದರು.

ಪ್ರಥಮ ಖರ್ಚನ್ನು ನಾನೇ ವಹಿಸಿಕೊಳ್ಳಬಹುದೆಂಬ ಸೂಚನೆಯನ್ನು ನೀವು ಮಾಡಬಹುದು. ಆದರೆ ಅದು ನನ್ನಕ್ಕೆ ಸಾಧ್ಯವಲ್ಲ. ಯಾಕಂದರೆ ನನ್ನ ತೋಟದಲ್ಲಿ ಪ್ರತ್ಯೇಕ ಒಂದು ಆಸ್ಪತ್ರೆಯನ್ನು ಸ್ವತಃ ಇಡಬೇಕೆಂದು ಆಲೋಚಿಸುತ್ತಿದ್ದೇನೆ ಇಲ್ಲಿಯ ಡಿ. ಬೊ. ಮೆಂಬರನು 1,500/—ರೂ. ಗಳನ್ನು ಶೇಖರಿಸಿದರೆ, ನಾನು ಡಿ. ಬೋರ್ಡಿಗೆ ಸೆಸ್ಸು ಕೊಡುವಷ್ಟೇ ಮೊಬಲಗನ್ನು ಒಂದು ವರ್ಷ ಚಂದಾ ಕೊಡಲು ಸಿದ್ಧನಾಗಿದ್ದೇನೆ

ನಾನು ಮೇಲೆ ವಿವರಿಸಿರುವ ವಿಷಯಗಳಿಗೆಲ್ಲಾ ಸಾಕಷ್ಟು ಬೆಲೆ ಕೊಟ್ಟು ಬೋರ್ಡಿನವರನ್ನು ಒಡಂಬಡಿಸಿ ಬೋರ್ಡಿನಿಂದಲೇ ಈ ಆಸ್ಪತ್ರೆಯನ್ನು ಬೇಗ ತೆರೆಯಲು ಬೇಕಾದ ಹಣವನ್ನು ಮಂಜೂರು ಮಾಡುವಂತೆ ಸಿಫಾರಸ್ಸು ಮಾಡಬೇಕಾಗಿ ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಹೀಗೆ ಮಾಡಿದರೆ ಇಲ್ಲಿಯ ಜನರು ತೃಪ್ತರಾಗಿ ನಿಮ್ಮನ್ನು ಎಂದಿಗೂ ಮರೆಯಲಾರರು.

ಈ ಕಾಗದವು ತಮಗೆ ತಲುಪಿದ್ದನ್ನೂ, ಬೋರ್ಡಿನವರು ಈ ವಿಷಯ ಮಾಡುವ ತೀರ್ಮಾನವನ್ನೂ ನನಗೆ ತಿಳಿಸಬೇಕಾಗಿ ಕೋರುತ್ತೇನೆ. ಇಂತಿ.

(Sd) ಸುಬ್ರಣ್ಯ[illegible]

## ಪ್ರಕಟಣೆ.

ಕುಶಾಲನಗರದಿಂದ ವೀರರಾಜಪೇಟೆಗೂ, ಮಡಿಕೇರಿಯಿಂದ ರಾಜಪೇಟೆಗೂ ಮತ್ತು ವೀರರಾಜಪೇಟೆಯಿಂದ ವಾಪಸ್ [illegible] ಬಸ್ಸು [illegible] ಈ ವರೆಗೆ ಮೆ ಪೊನ್ನಪ್ಪ [illegible] ನಡೆಯುತ್ತಿದ್ದವು. ಆದರ [illegible] ಚಣ್ಣಪ್ಪನವರನ್ನು ಮಜಮಾನಿ ರಾಜಪೇಟೆ ಏಜಂಟರಾಗಿ ಮೆ. ಬಿಟ್ಟಿಯಂಡ ಉತ್ತಯ್ಯನವರನ್ನು ಏರ್ಪಾಡು ಮಾಡಿರುವ ಸಂಗತಿ ಎಲ್ಲರ ತಿಳುವಳಿಕೆಗೆ ಈ ಮೂಲಕ ಪ್ರಸಿದ್ಧಪಡಿಸಿದೆ ಈ ಲೈನಿನ ಸರ್ವೀಸಿನ ಟಿಕೇಟುಗಳನ್ನು ಮೆ. ಬಿಟ್ಟಿಯಂಡ ಉತ್ತಯ್ಯನವರಿಂದ ಹೊಂದಿಕೊಳ್ಳಬೇಕಾಗಿ ಕೇಳಿಕೊಳ್ಳಲಾಗಿದೆ ಬಸ್ಸಿನಲ್ಲಿ ಪ್ರಯಾಣಮಾಡುವ ಹೆಂಗಸರ ಅನುಕೂಲಕ್ಕಾಗಿಯೂ, ವಿಶ್ರಾಂತಿ ತೆಗೆದುಕೊಳ್ಳಲು ವೀರರಾಜಪೇಟೆ [illegible] ಮೆಂಗಡರ ಪಿಳ್ಳೆಯವರ ಹಳೇ ಬ್ರಾಂಡಿಶಾಪಿನ ಎಂದರೆ ಮೆ ಉತ್ತಯ್ಯನವರು ಇಟ್ಟಿರುವ ಅಮ್ಯುನಿಶನ್ (Ammunition Shop) ಮಹಡಿಯ ಮೇಲೆಯೂ, [illegible] ಗೆ ಅಮ್ಯುನಿಶನ್ ಶಾಪಿನಲ್ಲಿ ಸಹ ಅನುಕೂಲಪಡಿಸಲಾಗಿದೆ.

ಮೇಲೆ ಸೂಚಿಸಿದ ಬಸ್ಸುಗಳಿಗೆ ಇನ್ನು ಮುಂದೆ [illegible] ಜಪೇಟೆ ಕ್ಲಾಕ್ ಟವರ್ ಬಳಿ (Clock Tower) [illegible] ಣಪತಿ ದೇವಸ್ಥಾನದ ಎದುರಿನಲ್ಲಿ ಮತ್ತು ಮೆ. ಉತ್ತಯ್ಯ ಅಮ್ಯುನಿಶನ್ ಶಾಪಿನಲ್ಲಿ ಸಹ ಟಿಕೇಟುಗಳು ಕೊಡಲ್ಪಡುವುವು.

ಪೊನ್ನಂಪೇಟೆ, ಸಿ. ರಾಮ ನಂಬಿಯಾರ್
7—9—'28. ಮೇನೇಜರು,
4—2 ಯುನೈ. ಮೋಟಾರು ಸರ್ವೀಸು

### "ಔಷಧ ಸೀಸೆಗಳಿಗಿಂತಲೂ ಬರೀ ಜೀವನ ಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು"

**ಆರೋಗ್ಯಚಂದ್ರಿಕೆಯು ನಿಮಗೆ ನೀಡುವ ಸಹಾಯವೇ ಇದು!**

ಆನರೆಬಲ್. ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯ ಚಂದ್ರಿಕೆ" ಎಂಬ ಆರೋಗ್ಯಬೋಧಕವಾದ ಮಾಸ ಪತ್ರಿಕೆಯು, ನಿಮಗೆ ಆರೋಗ್ಯ ದೀರ್ಘಾಯುರಾಗಿ ಜೀವಿಸುವ ಮಾರ್ಗವನ್ನೂ ಪ್ರಸಿದ್ಧ ಶಾಸ್ತ್ರರುಗಳಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟ ರೋಗ ನಿವಾರಣವನ್ನೂ ಬೋಧಿಸುವುದು

ಈ ಆರೋಗ್ಯ ಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ ಒಮ್ಮೆ ಕಾಲದಿಂದ ಶಸ್ತ್ರ ಚಿಕಿತ್ಸೆಯಲ್ಲಿಯೂ ಔಷಧ ಚಿಕಿತ್ಸೆಯಲ್ಲಿಯೂ ಸೈಪುಣ್ಯವುಳ್ಳ ಡಾಕ್ಟರುಗಳು ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು

ಆರೋಗ್ಯಚಂದ್ರಿಕೆ ಎಂಬೀ ಮಾಸ ಪತ್ರಿಕೆಯಲ್ಲಿ ಆಹಾರ ಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರ ಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸಾಂಕ್ರಾಮಿಕ ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವುವು ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ

ವರ್ಷಕ್ಕೆ ಒಂದೂವರೆ ರೂಪಾಯಿ ಗಳನ್ನು ಮಾತ್ರ, ಈ ಕಚೇರಿಯ ವಿಳಾಸಕ್ಕೆ ಕಳುಹಿಸಿದರೆ ಕನ್ನಡ, ತೆಲುಗು ತಮಿಳು, ಇಂಗ್ಲಿಷ್ ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದು ಬೀಳುವುದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾದುದಿಲ್ಲ

52—4 ಮ್ಯಾನೇಜರ್, ಆರೋಗ್ಯಚಂದ್ರಿಕೆ, 323 ತಂಬುಚೆಟ್ಟಿ ಬೀದಿ, ಮದರಾಸು.

---

# Arms, Ammunition and Shooting Requisites !!!



1928 Illustrated Catalogue Just Issued Free on Application !

| | | | | |
|---|---|---|---|---|
| D B B L Rifles | Rs. | 120 | to Rs | 2750 |
| S B. B L | „ | 35 | to „ | 950. |
| D B B L Guns | „ | 50 | to | 1350 |
| S B B L. | „ | 35 | to „ | 275 |
| D B M L | „ | 45 | to | 165 |
| S B M L | „ | 30 | to „ | 80 |
| B L Revolvers | „ | 35 | to „ | 350 |
| Antomatic Pistols | „ | 30 | to „ | 150 |

Brilliant Search Light Lamp For Shooting Camping, Fishing and All such other Night Sports and work Rs 30 Free delivery

**Also swords, Daggers, Cartridges, Caps, Gunpowder and Shooting Requisites at the most competitive rates.**

GOOLAMHUSAIN ALLIBHOY & SONS,

**Largest Importers of Firearms and Ammunition Cheapest priced firm, in India,**

24—26 **210 Abdul Rehman Street, BOMBAY.**

---

**Real Rolled Gold Jewellers**

**(Warrented for 10 years)**

**ರೋಲ್ಡ್ ಗೋಲ್ಡ್ ಭಂಗಾರದ ಒಡವೆಗಳು.**

ಇವುಗಳನ್ನು ಸಾಚಾ ರೋಲ್ಡ್ ಗೋಲ್ಡ್ ಬಂಗಾರದಿಂದ ಮಾಡಲ್ಪಟ್ಟಿದ್ದು ಇದನ್ನು 10 ವರ್ಷಗಳ ವರೆವಿಗೂ ಕೆಡದೆ ಇಂಗ್ಲೀಷ್ ನಮೂನೆ ಸೊಗಸಾಗಿ ಚೆನ್ನಾಗಿರುವವು

| | |
|---|---|
| ನೆಕ್‌ಲೇಸ್ ಪದಕ ಸಹಿತ | 5—8—0 |
| ಲೋಲಾಕು (Ear rings) ಜೊತೆ 1ಕ್ಕೆ | 2—8—0. |
| ಬಂಗಾರದ ಕೈ ಬಳೆಗಳು ಜೊತೆ 1ಕ್ಕೆ | 2—0—0. |

ವಿಳಾಸ — ಕೆ. ಎನ್ ರಾಧಾಕೃಷ್ಣ ಬ್ರದರ್ಸ್,
109. ಚೈನಾ ಬಜಾರ್ ರೋಡ್,
52—10 ಮದರಾಸು.

---

**ವಜ್ರದ ಉಂಗುರಗಳು. (0–8–0)**

ಈ ಉಂಗುರಗಳನ್ನು ಲಂಡನ್ ಪಟ್ಟಣದ ದೊಡ್ಡ ಕಂಪನಿಯವರಿಂದ ವಜ್ರದ ಕಲ್ಲುಗಳನ್ನು ಇಟ್ಟು ಸೀಮೆ ಭಂಗಾರದಿಂದ ತಯಾರಿಸಿದೆ. ನೋಡಲು ಸಾಚಾ ವಜ್ರದ ಉಂಗುರಗಳಿಗೆ ಸರಿಸಮಾನಾಗಿರುವವು ಒಟ್ಟು ಕಡದು. ಕ್ರಯ ಉಂಗುರ 1ಕ್ಕೆ 0—8—0 ಒಂದಾವರ್ತಿ 6 ಉಂಗುರಗಳನ್ನು ತರಿಸುವವರಿಗೆ ಒಂದು ಟೇಬಲ್ ಟೈಂ ಪೀಸನ್ನೂ, 12 ಉಂಗುರಗಳನ್ನು ತರಿಸುವವರಿಗೆ ಒಂದು ರೋಲ್ಡ್‌ಗೋಲ್ಡ್ ಭಂಗಾರದ ಲೀವರ್ ಪಾಕೆಟ್ ವಾಚನ್ನೂ ಇನಾಮಾಗಿ ಕೊಡುವೆವು ಸ್ವಲ್ಪವೇ ಇರುವವು ಬೇಗನೇ ತರಿಸುವವರಿಗೆ ಮಾತ್ರ ಇನಾಮು ಸಿಕ್ಕುವವು ವ್ಯಾಪಾರಸ್ಥರಿಗೆ ಒಳ್ಳೇ ಸಮಯ. ಗಡಿಯಾರಗಳಿಗೆ ಪಾಕ್ಟರಿಯ 3 ವರುಷ ಗ್ಯಾರಂಟಿ ಕೊಡುವೆವು 3 ಉಂಗುರಕ್ಕೆ ಕಡಿಮೆ ಕಳುಹಿಸುವದಿಲ್ಲ

ವಿಳಾಸ — ಲೀಗಲ್ ಟ್ರೇಡಿಂಗ್ ಕಂಪೆನಿ,
52—19 ಪೋ ಬಾಕ್ಸ್ ನಂ 243 ಮದರಾಸು

---

ಡಬ್ಬಲ್ ಮತ್ತು ಸಿಂಗಲ್ ತೋಟಾ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

**ಯಸ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.**

**ದ. ಹಿಂದೂಸ್ಥಾನದ ಬಹು ಹಳೆಯ ಬಿಲ್ಲಿಯ ಕಂಪನಿ.**

24—17 12. ಚಿತ್ರಾದ್ರಿ. ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ)

---

# ಎಂ.ಎಸ್.ಶಿದ್ದಪ್ಪ ಅಂಡ್ ಬ್ರದರ್ಸ್.

## ಹಾರ್ಮೋನಿಯಂ ವ್ಯಾಪಾರಿಗಳು,ಮೈಸೂರು.

**ಉತ್ತಮ ತರಹದ ಸಿಂಗಲ್‌ರೀಡ್ಸ್ ಹಾರ್ಮೋನಿಯಂಗಳು.**

| | |
|---|---|
| ...ಹಾರ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 50—8—0 |
| ...ಲಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 40—0—0 |
| ...ಮನ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 37—8—0 |
| ...ಲ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 35—0—0 |
| ...ಬಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 32—8—0 |

**ಉತ್ತಮ ತರಹದ 14 ಕ್ಯಾರೆಟ್ಸ್ ಬಂಗಾರದ ನಿಬ್ಬು ಹಾಕಿದ ಫೌಂಟನ್ ಪೆನ್‌ಗಳು.**

| | |
|---|---|
| ಬ್ಲಾಕ್ ಬರ್ಡ್ ಫೌಂಟನ್ ಪೆನ್ 1ಕ್ಕೆ | 3—8—0 ಮತ್ತು 3—12—0 |
| ಪರಲ್ಡ್ ವಂಡರ್ ಫೌಂಟನ್ ಪೆನ್ 1ಕ್ಕೆ | 3—0—0 ಮತ್ತು 3—8—0 |
| ಕಾಂಪ್ಯಾಕ್ಟ್ ನೆಪ್ಚ್ಯೂನ್ ಫೌಂಟನ್ ಪೆನ್ 1ಕ್ಕೆ | 4—8—0 |
| ವಾಟರ್ ಮನ್ ಫೌಂಟನ್ ಪೆನ್ 1ಕ್ಕೆ | 8—0—0 ಮತ್ತು 8—8—0 |
| ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌಂಟನ್ ಪೆನ್ 1ಕ್ಕೆ | 12—0—0 ಮತ್ತು 15—0—0 |

**ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು**

| | |
|---|---|
| ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ | 4—6—0 |
| ವೆಸ್ಟ್‌ಂಡ್ ಕಂಪೆನಿಯ ಅಲಾರಂ ಟೈಂಪೀಸ್ 1ಕ್ಕೆ | 8—0—0 |
| ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ | 9—6—0 |
| ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ | 6—12—0 |
| ಅಸೋಸಿಯೆಟ್ ಅಲಾರಂ ಟೈಂಪೀಸ್ 1ಕ್ಕೆ | 6—0—0 |

ಸಚಿತ್ರ ಕ್ಯಾಟಲಾಗ್ ಒಗ್ಗೆ 6 ಕ್ಕೆ ಸ್ಟಾಂಪು ಕಳಿಸಿ.

ಎಂ. ಎಸ್ ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು, ಮೈಸೂರು.

## ಶನಿವಾರಸಂತೆ ಆಸ್ಪತ್ರೆ.

ಶ್ರೀ. ಸಿದ್ದಾಪುರದ ಸುಬ್ಬಣ್ಣಯ್ಯನವರು ಮೇಲಿನ ವಿಷಯದಲ್ಲಿ ಡಿ. ಬೋರ್ಡು ಪ್ರೆಸಿಡೆಂಟರ ಪತ್ರಕ್ಕೆ ಬರೆದ ಜವಾಬು ವಾಚಕ ಮಹಾಶಯರ ತಿಳುವಳಿಕೆ ಬಗ್ಗೆ ಇಲ್ಲಿ ಪ್ರಕಟಿಸಲ್ಪಟ್ಟಿದೆ.

ಶನಿವಾರಸಂತೆ ಆಸ್ಪತ್ರೆಯನ್ನು ತೆರೆಯಲು ಚಂದಾ ಎತ್ತುವ ವಿಷಯದಲ್ಲಿ ನೀವು ಬರೆದ ಕಾಗದವು 29—3—'28 ರಂದು ನನ್ನ ಕೈ ಸೇರಿತು. ಆದರೆ ಒಡನೆ ಜವಾಬು ಕೊಡಲು ಸಾಧ್ಯವಾಗದೆ ಇದ್ದುದಕ್ಕೆ ಕ್ಷಮೆ ಬೇಡುತ್ತೇನೆ.

ಪ್ರಾರಬ್ಧ ಶನಿವಾರಸಂತೆ ಹೋಬಳಿ ಜನರ ಅಭಿಪ್ರಾಯ ತಿಳಿದುಕೊಂಡು ಸರಿಯಾದ ಉತ್ತರಕೊಡಬೇಕೆಂದು ಯೋಚಿಸಿದ್ದರಿಂದ ಆ ಅಭಿಪ್ರಾಯವನ್ನು ತಿಳಿಯದೆ ಜವಾಬು ಕೊಡುವುದು ಉಚಿತವಲ್ಲವೆಂದು ಭಾವಿಸಿದುದೇ ಈ ಅನಿವಾರ್ಯವಾದ ತಡಕ್ಕೆ ಕಾರಣವಾಯಿತು. ಇದಕ್ಕೆ ತಾವು ಮನ್ನಿಸುವರಾಗಿ ಕೋರುತ್ತೇನೆ.

ಈ ನಾಡಿನ ಜನರು ತಮ್ಮ ಈಗಿನ ಸ್ಥಿತಿಗತಿಗಳು ಚೆನ್ನಾಗಿಲ್ಲದಿರುವುದರಿಂದ ಚಂದಾ ಕೊಡಲು ಶಕ್ತರಲ್ಲವೆಂದು ತಿಳಿಸುತ್ತಾರೆ. ಈ ವಿಷಯವು ನಿಜವೆಂದೇ ನಾನು ಹೇಳುತ್ತೇನೆ. ಸಾಲದುದಕ್ಕೆ ನಿಮ್ಮ ಅಂದಾಜಿನ ಮೇರೆ ಈ ಆಸ್ಪತ್ರೆಗೆ ಬೇಕಾಗಿರುವ 6000 ರೂಪಾಯಿಗಳ ಹೆಚ್ಚಿನ ಅಂಶವನ್ನು ಇಲ್ಲಿ ಯಾರಾದರೊಬ್ಬನೇ ಕೊಡಲು ಶಕ್ತನಲ್ಲ. ಈ ತೆರನಾದ ರೈತರ ಅಭಿಪ್ರಾಯಕ್ಕೆ ಅನೇಕ ಸಕಾರಣಗಳಿವೆ. ಅದೆಲ್ಲವನ್ನೂ ಇಲ್ಲಿ ವಿವರಿಸುವುದಾದರೆ ಅಧ್ಯಾಯಗಳಾಗಿ ಹೋಗುವುವು. ಆದರೆ ಸ್ಥಳಕ್ಕನುಕೂಲವಾಗಿ ಕೇವಲ ಮುಖ್ಯವಾದ ಅಂಶಗಳನ್ನು ನಿಮ್ಮ ಸಹಾನುಭೂತಿಯ ನಿಷ್ಕರ್ಷೆಗೋಸ್ಕರ ವಿವರಿಸುತ್ತೇನೆ.

ತಾವು ಹೇಳಿದಂತೆ ಶನಿವಾರಸಂತೆಯಲ್ಲಿ ಒಂದು ಆಸ್ಪತ್ರೆ ತೆರೆಯಬೇಕೆಂದು ಎಲ್ಲರೂ ಒಪ್ಪಿ ಕೇಳುವುದಾಗಿದೆ. ಆದುದರಿಂದ ಈ ವಿಷಯ ತಮ್ಮ ಚಿತ್ತಕ್ಕೆ ಮುಂದಿಟ್ಟು ಮಾಡುವುದು ಅವಶ್ಯವಿಲ್ಲ. ಆದರೆ ಕಳೆದ 25 ವರ್ಷಗಳಿಂದಲೂ, ಈ ನಾಡಿನ ಜನರು ಒಂದು ಆಸ್ಪತ್ರೆಯಾಗಬೇಕೆಂದು ಸರ್ಕಾರದವರನ್ನೂ, ಡಿ. ಬೋರ್ಡಿನವರನ್ನೂ ಕೇಳಿಕೊಳ್ಳುತ್ತಿದ್ದಾರೆ. ಇದು ಬಹಳ ಹಳೇ ಪ್ರಶ್ನೆಯೆಂಬುದು ನಿಜ. ಆದರೆ ಸರ್ಕಾರದವರು ಒಂದು ಆಸ್ಪತ್ರೆಯನ್ನು ಶನಿವಾರಸಂತೆಯಲ್ಲಿ ತೆರೆಯುತ್ತೇವೆಂಬುದನ್ನು ಬಾರಿಬಾರಿಗೂ ಹೇಳುತ್ತಿದ್ದರು.

ನಾನು ಕೂಡ ಡಿ. ಬೊ. ಮೆಂಬರಾಗಿಯೂ, ಕೌನ್ಸಿಲ್ ಮೆಂಬರಾಗಿಯೂ ಒಂದು ಆಸ್ಪತ್ರೆಯನ್ನು ತೆರೆಯುವಂತೆ ಮಾಡಬೇಕೆಂದು ಸರ್ವಪ್ರಯತ್ನವನ್ನು ಮಾಡಿದೆನು. ಈ ಎರಡು ಸಂಸ್ಥೆಗಳು ತೆರೆಯುತ್ತೇವೆ ಎಂದು ಬರೇ ಮಾತಿನಿಂದ ಸುಧಾರಿಸಿಬಿಟ್ಟವು; ಅಂತೂ ತಡವಾದುದಕ್ಕೆ ಅನೇಕ ನೆಪಗಳನ್ನು ಎತ್ತಿ ಹೇಳಿದರು. ಈ ಸ್ಥಳದಲ್ಲಿ ಆಸ್ಪತ್ರೆಯನ್ನು ತೆರೆಯಲು ಸಂದರ್ಭದೊರೆತಾಗಲೂ, ಅದನ್ನು ಬಿಟ್ಟು ಫ್ರೇಸರ್ ಪೇಟೆ ಮೊದಲಾದ ಸ್ಥಳಗಳಿಗೆ ಅನುಕೂಲಗಳನ್ನು ದೊರಕಿಸಿ ಕೊಟ್ಟರು.

ಈಗಲೂ ಕೂಡ ಹಣವಿಲ್ಲವೆಂಬ ನೆವದಿಂದ ಬೋರ್ಡಿನವರು ಜನರ ಮೇಲೆ ಜವಾಬ್ದಾರಿಯನ್ನು ಹಾಕಿ, ಈ ನಾಡನ್ನು ಬಿಟ್ಟು ಪ್ರಾರಂಭದ ಖರ್ಚನ್ನು ಮಾಡಲು ಭರವಸೆ ಇತ್ತಿರುವ ಮೂರ್ನಾಡಿನ ಮೇಲೆ ತಮ್ಮ ದಯೆಯನ್ನು ತೋರಿಸಿದ್ದಾರೆ. ಮೂರ್ನಾಡಿನ ಜನರು ಚಂದಾ ಹಣ ಕೊಡುವಷ್ಟು ಅನುಕೂಲದಲ್ಲಿರಬಹುದು. ಆದರೆ ಬೋರ್ಡಿನವರು ಬರೇ ಹಣದ ಬಾಬಿನ ಅನುಕೂಲವೊಂದಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟರೆ ಸಾಲದು. ಅವರು ಕೇವಲ ಸ್ಥಿತಿಗತಿಗಳನ್ನು ವಿಮರ್ಶಿಸಿ ಸರಿಯಾದ ಕಡೆ ತಮ್ಮ ದೃಷ್ಟಿಯನ್ನು ಚಾಚಬೇಕು. ಈ ವಿಷಯವು ಕೇವಲ ಹಣವೊಂದನ್ನವಲಂಭಿಸಿರುವುದಲ್ಲ. ಇದು ಮನುಷ್ಯನ ಜೀವಮರಣದ ಸಮಸ್ಯೆಯಾಗಿದೆ. ಬೋರ್ಡಿನವರು ಇದನ್ನು ವ್ಯಾಪಾರ ದೃಷ್ಟಿಯಿಂದ ನೋಡದೆ ಇದಕ್ಕೆ ಸಾಕಷ್ಟು ಹಣವನ್ನು ಒದಗಿಸಿಕೊಡಬೇಕು.

ಎಲ್ಲರಿಗೂ ತಿಳಿದಂತೆ ಮೂರ್ನಾಡಿನ ಜನರ ಕೋರಿಕೆಯು ಶನಿವಾರಸಂತೆಯವರದಷ್ಟು ಹಳೇದಲ್ಲ. ಅಲ್ಲದೆ ಮೂರ್ನಾಡು ಮಲೇರಿಯಾ ಪೀಡಿತ ಪ್ರದೇಶವೆಂದು ಈ ವರೆಗೆ ನನಗೆ ಗೊತ್ತಿರುವ ಮಟ್ಟಿಗೆ ಯಾರು ಹೇಳಿರುವುದಿಲ್ಲ. ಇದೂ ಅಲ್ಲದೆ ಮೂರ್ನಾಡಿನಿಂದ ಕೆಲವು ಮೈಲುಗಳ ದೂರದಲ್ಲೇ ವೀರರಾಜಪೇಟೆಯಿದೆ. ಅಲ್ಲಿ ಎಲ್ಲಾ ಸೌಕರ್ಯಗಳಿರುವ ಒಂದು ಒಳ್ಳೇ ಆಸ್ಪತ್ರೆಯಿದೆ. ಇದರಿಂದ ಮೂರ್ನಾಡಿನ ಜನರಿಗೆ ಅನೇಕ ಅನುಕೂಲತೆಗಳಿವೆ. ಮಲೇರಿಯಾ ಕಮಿಟಿಯವರೂ ಕೂಡ ಈ ಸ್ಥಳಕ್ಕೆ ರಕ್ಷಣೆಯ ಗಮನವನ್ನು ಕೊಟ್ಟಿರುವುದಿಲ್ಲ. ನನಗೆ ಗೊತ್ತಿರುವಂತೆ ಸಂಪಾಜೆ ಮತ್ತು ಶನಿವಾರಸಂತೆ, ಈ ಎರಡು ಸ್ಥಳಗಳಲ್ಲಿ ಆದಷ್ಟು ಜಾಗ್ರತೆ ಆಸ್ಪತ್ರೆಗಳನ್ನು ತೆರೆಯಬೇಕೆಂಬುದೇ ಅವರ ಸಿಫಾರಸು. ಅದೃಷ್ಟವಶಾತ್ ಸಂಪಾಜೆಗೆ ದಕ್ಷಿಣ ಕನ್ನಡ ಬೋರ್ಡಿನವರ ಸಹಾಯದಿಂದ ಒಂದು ಆಸ್ಪತ್ರೆಯು ಕೆಲವು ಸಮಯಕ್ಕೆ ಹಿಂದೆ ದೊರೆತಿದೆ. ಈ ಸಂದರ್ಭದಲ್ಲಿ ಉದಾಹರಣೆ ಕೊಡಿಸಿದ ಪ್ರಶ್ನೆಯನ್ನು ಬೋರ್ಡಿನವರು ಎತ್ತಲಿಲ್ಲವೆಂದೇ ನಾನು ಹೇಳಬೇಕಾಗಿದೆ. ಮಲೇರಿಯಾ ಕಮಿಟಿಯವರು ಶನಿವಾರಸಂತೆಯಲ್ಲಿ ಆಸ್ಪತ್ರೆಯನ್ನು ತೆರೆಯಬೇಕೆಂದು ಹೇಳಿರುವಾಗ ಅವರ ರಿಪೋರ್ಟಿಗೆ ಸನ್ಮಾನವನ್ನೂ ಬೆಲೆಯನ್ನೂ ಕೊಡಲು ಮತ್ತು ಶನಿವಾರಸಂತೆಯ ಜನರ ಆರೋಗ್ಯವನ್ನು ಕಾಪಾಡಲು ಬೋರ್ಡಿನ ಹಣದಿಂದ ಒಂದು ಆಸ್ಪತ್ರೆಯನ್ನು ಕಟ್ಟಿಸಲೇ ಬೇಕು. ಇದರಿಂದ ಜನರು ಸಂತುಷ್ಟರಾಗುವರು. ಸಂತುಷ್ಟರೂ, ತೃಪ್ತರೂ ಆದ ಜನರೇ ಸರಕಾರದ ಬೆನ್ನೆಲುಬು ಎಂಬುದರಲ್ಲಿ ಸಂಶಯವಿಲ್ಲ.

ಹೀಗಿರುವುದರಿಂದ ಬೋರ್ಡು ಕಾರಣಾಂತರಗಳಿಂದ ಮೂರ್ನಾಡಿಗೆ ಪ್ರಾಶಸ್ತ್ಯವನ್ನು ಕೊಡುವುದಾಗಲಿ, ಶನಿವಾರಸಂತೆಯನ್ನು ಉಪೇಕ್ಷಿಸುವುದಾಗಲಿ ನ್ಯಾಯವಲ್ಲ. ಮೂರ್ನಾಡಿನವರು ಆಸ್ಪತ್ರೆಯಾಗಬೇಕೆಂದು ಈಗ ತಾನೇ ಚಳವಳ ಹೆಚ್ಚಿಸಿದರು. ಇದಕ್ಕಾಗಿ ಅವರಿಗೊಂದು ಆಸ್ಪತ್ರೆಯು ಇರಬಾರದೆಂದು ನಾನು ಹೇಳುವುದಿಲ್ಲ; ಆದರೆ ಕಾಲಸ್ಥಿತಿಗಳಿಗನುಸಾರವಾಗಿ ಚಂದಾಹಣ ಎತ್ತುವ ಅಭಿಪ್ರಾಯವನ್ನು ತ್ಯಜಿಸಿ ಮೊದಲು ಶನಿವಾರ ಸಂತೆಗೆ ಆಸ್ಪತ್ರೆಯನ್ನು ಕೊಡಲೇಬೇಕು. ಈ ಆಸ್ಪತ್ರೆಯ ಎಲ್ಲಾ ಖರ್ಚನ್ನೂ ಡಿ. ಬೋರ್ಡಿನವರೇ ಕೊಡಲು ಬೇಕಾದಷ್ಟು ಸಕಾರಣಗಳಿವೆ.

ಮೊದಲೊಮ್ಮೆ ಪ್ರೆಸಿಡೆಂಟರಾಗಿದ್ದ ಮೆ. ಟಾಸ್ಕರ್ ಸಾಹೇಬರವರನ್ನು ನಾನು ಅನೇಕ ಸಾರಿ ಭೇಟಿಯಾಗಿ ಸಂಬರಾಯಪಟ್ಣ ತಾಲೋಕಿನ ಕಷ್ಟ ಸುಖಗಳನ್ನು ಕುರಿತು ಪ್ರಸ್ತಾಪಿಸಿದಾಗ ಈ ತಾಲೋಕಿನ ಜನರಿಗೆ ಮೊದಲು ಬಾವಿಗಳನ್ನು ತೋಡಿ ಶುಚಿಯಾದ ನೀರನ್ನು ದೊರಕಿಸಿಕೊಡಬೇಕು, ಮತ್ತು ಮಲೇರಿಯಾ ಬಾಧೆಯಿರುವ ಸ್ಥಳವಾದುದರಿಂದ ಆಸ್ಪತ್ರೆಗಳ ಸೌಕರ್ಯವು ಅಗತ್ಯವಿರಬೇಕೆಂದು ಅವರಿಗೆ ಮುಂದಿಟ್ಟುಮಾಡಿದ್ದೆನು. ಅವರಿರುವ ವರೆಗೆ ಈ ಎರಡು ವಿಷಯಗಳಿಗೆ ಹೆಚ್ಚು ಗಮನವನ್ನು ಕೊಡುತ್ತೇನೆಂಬ ಭರವಸೆಯನ್ನು ಕೂಡ ಕೊಟ್ಟಿದ್ದರು. ಅವರು ನೀರನ್ನು ದೊರಕಿಸಿಕೊಡಲು ಬಹಳ ಶ್ರದ್ಧೆಯನ್ನು ವಹಿಸಿ ನೀರಿನ ಅಭಾವ ಬಹಳವಾಗಿದ್ದ ಗ್ರಾಮಗಳಲ್ಲಿ ಬಾವಿಗಳನ್ನು ತೋಡಿಸಿದರು. ಆಸ್ಪತ್ರೆಯನ್ನು ತೆರೆಯುವ ವಿಷಯದಲ್ಲೂ ಕೂಡ ಅವರು ನಿಧಾನವಾಗಿರಲಿಲ್ಲ. ಬೋರ್ಡಿನಲ್ಲಿ ಇದನ್ನೂ ಕೂಡ ಮಂಜೂರುಮಾಡಿದರು. ನಾವು ಬಹಳ ಉತ್ಸಾಹದಿಂದಿದ್ದೆವು. ಆದರೆ ಈಗ ಕಾರ್ಯತಃ ನೋಡಿದರೆ ಎಲ್ಲವೂ ಬದಲಾಗಿದೆ.

ನಾನು ಹೇಳಿದ ಮೇರೆ ಈ ತಾಲೋಕಿನಲ್ಲಿ ಅನೇಕ ಗ್ರಾಮಗಳು ಜನರಹಿತವಾಗಿ ಪಾಳುಬೀಳುತ್ತಲಿವೆ ಎಂಬುದನ್ನೂ, ಇದೇ ಗತಿಯು ಶನಿವಾರಸಂತೆಗೂ ಲಭಿಸಬಹುದೆಂಬುದನ್ನೂ ಅವರು ಚೆನ್ನಾಗಿ ತಿಳಿದಿದ್ದರು. ಈ ಗ್ರಾಮಗಳನ್ನು ಉತ್ತಮ ಸ್ಥಿತಿಗೆ ತರಲು ಜೀರ್ಣೋದ್ಧಾರದ (ರೀಜನರೇಶನ್) ಏರ್ಪಾಡು ಮಾಡಿದರು. ಅದು ಈಗಲೂ ನಡೆಯುತ್ತಾ ಇದೆ. ಈ ಏರ್ಪಾಡಿನ ವಿಷಯ ವಿವರಿಸಲು ಇಲ್ಲಿ ಸ್ಥಳವಿಲ್ಲ. ಜೀರ್ಣೋದ್ಧಾರ ಏರ್ಪಾಡಿಗೆ ಸೇರಿದ ಹದ್ದಿಗೊತ್ತಿಯೇ ಶನಿವಾರಸಂತೆಯೂ ಇದೆ. ಆದುದರಿಂದ ಈ ಸ್ಥಳಕ್ಕೆ ಸರ್ಕಾರದವರ ಹೆಚ್ಚಿನ ಗಮನವು ಅಗತ್ಯ. ಈ ತಾಲೋಕಿನ ಜನರು ಬಹಳ ಬಡವರು. ಆದುದರಿಂದ ಸರ್ಕಾರದವರೂ, ಡಿ. ಬೋರ್ಡಿನವರೂ ಇವರ ಸಹಾಯಕ್ಕೆ ಬರಬೇಕು. ಇದನ್ನು ಬಿಟ್ಟು ಡಿ. ಬೋರ್ಡಿನವರು ಚಂದಾಹಣ ಎತ್ತುವುದರಲ್ಲಿ ಆಸಕ್ತಿಯನ್ನು ತೋರಿಸಿದರೆ ಈ ಸ್ಥಳವೂ ಕೂಡ ಪಾಳುಬಿದ್ದ ಸ್ಥಳಗಳ ಗತಿಯನ್ನೇ ಹೊಂದಿ ಇದನ್ನು ರಿಸರ್ವ್ ಫಾರೆಸ್ಟಾಗಿ ಮಾಡಿಕೊಳ್ಳಲು ಯಾವ ಕಷ್ಟವೂ ಇರಲಾರದು. ಈ ಮೇಲಿನ ಸ್ಥಿತಿಗತಿಗಳನ್ನು ಚೆನ್ನಾಗಿ ವಿಮರ್ಶಿಸಿ ನೀವು ಪೂರಾ ಸಹಾನುಭೂತಿಯನ್ನು ತೋರಿಸಿ, ಒಂದು ಆಸ್ಪತ್ರೆಯನ್ನು ಡಿ. ಬೋರ್ಡಿನ ಹಣದಿಂದಲೇ ತೆರೆದು ಒಳ್ಳೆಯ ಹೆಸರನ್ನು ಪಡೆಯಬೇಕೆಂದು ಕೋರುತ್ತೇನೆ.

ಗಂಧದ ಉತ್ಪತ್ತಿಯು, ಪೂರಾ ಸಂಬರಾಯಪಟ್ಣ ತಾಲೋಕಿನಿಂದಲೇ ದೊರಕುವುದು. ಇದರಲ್ಲಿ ಹೆಚ್ಚಿನ ಅಂಶವು ಶನಿವಾರಸಂತೆಯಿಂದ ಬರುತ್ತದೆ. ಡಿ. ಬೋರ್ಡಿನವರು ಇದು ಪ್ರಾಂತೀಕ ಉತ್ಪತ್ತಿಯಾದುದರಿಂದ ಅದು ತಮಗೆ ಸಂಬಂಧವಿಲ್ಲವೆಂದು ಹೇಳಬಹುದು. ಇದೂ ನಿಜವೇ. ಲಕ್ಷಾಂತರ ರೂಪಾಯಿ ಬೆಲೆಬಾಳುವ ಗಂಧವನ್ನು ರೈತರ ಸ್ವಂತ ಜಾಗದಿಂದ ಸರ್ಕಾರವು ಕಿತ್ತು ಇದಕ್ಕಾಗಿ ಯಾವ ಪ್ರತಿಫಲವನ್ನೂ ಕೊಡದೇ ಇರುವರು. ಅವರಿಗೆ ಹಣ [illegible] ಲಾಭವೂ ದೂರಕಡೆ ಹೋದರೂ, ಆಸ್ಪತ್ರೆಗಳೇ ಮೊದಲಾದ ಸೌಕರ್ಯಗಳ ಮೂಲಕವಾಗಿ ಸಹಾಯವನ್ನೂ ಕೇಳುವುದು ತಪ್ಪಾಗುವುದೇ? ಸರ್ಕಾರಕ್ಕೆ ಈ ತಾಲೋಕಿನಿಂದ ದೊರೆಯುವ ಉತ್ಪತ್ತಿಗನುಸಾರವಾಗಿ ಇಲ್ಲಿಯವರಿಗೆ ಪ್ರತಿ[illegible] ಸಿಕ್ಕುತ್ತಿಲ್ಲ. ಆದುದರಿಂದ ಬೋರ್ಡಿನಲ್ಲಿ ಹಣವಿಲ್ಲದೆ ಹೋದರೆ ಅವರು ಸರ್ಕಾರದಿಂದ ತಕ್ಕಷ್ಟು ಹಣವನ್ನು ಹೊಂದಿಕೊಳ್ಳಬೇಕು.

ಡಿ. ಬೋರ್ಡಿನವರು ಪ್ರೈಮರಿ ಸ್ಕೂಲ್ ಮಾಸ್ಟರುಗಳ ಸಂಬಳ ಹೆಚ್ಚಿಸಲೋಸುಗ ಸೆಸ್ಸನ್ನು 1 ಆಣೆಯಿಂದ ಎರಡಾಣೆಗೆ ಏರಿಸಿದರು. ಆದರೆ ಇದರ ಆದಾಯವು ತಮಗೆ ಬೇಕಾದ ಖರ್ಚಿಗಿಂತ ಮೀರಿ ಹೋದರೂ ಕೂಡ, ಇನ್ನೂ ಪೂರ್ತಿ ಸೆಸ್ಸನ್ನು ವಸೂಲುಮಾಡುತ್ತಲೇ ಇದ್ದಾರೆ. ಈ ಹೆಚ್ಚಿನ ಹಣವು ಬೋರ್ಡಿನಲ್ಲಿ ಜಮೆಯಾಗುತ್ತಾ ಇದೆ. ಲೆಕ್ಕ ನೋಡಿದರೆ, ಈ ನಾಡಿನ ಸೆಸ್ ಉತ್ಪತ್ತಿಯು ಇತರ ನಾಡುಗಳದ್ದಕ್ಕಿಂತ ಹೆಚ್ಚಾಗಿದೆ. ವಿಚಾರಮಾಡಿದರೆ ಈ ನಾಡಿಗೆ ಉತ್ಪತ್ತಿಗೆಸರಿಯಾದ ಪ್ರಯೋಜನವು ದೊರಕಿಲ್ಲ. ವಿದ್ಯೆಯಲ್ಲಿಯೂ, ಆಸ್ಪತ್ರೆ ಮುಂತಾದ ಸೌಕರ್ಯಗಳಲ್ಲಿಯೂ ಇದು ಇತರ ನಾಡುಗಳಿಗಿಂತ ಹಿಂದುಳಿದಿದೆ.

ಅವರ ಅಶಕ್ತತೆಯಿಂದ (ವಿದ್ಯಾವಿಹೀನತೆ, ಬಡತನ) ಈ ತಾಲೋಕಿನ ಜನರು ತಮ್ಮ ನ್ಯಾಯವಾದ ಕೋರಿಕೆಗಳನ್ನು ಸರಕಾರದ ಮತ್ತು ಡಿ. ಬೋರ್ಡಿನ ಮುಂದಿಡಲಾರದವರಾಗಿದ್ದಾರೆ. ಈ ಕುಂದು ಕೊರತೆಗಳನ್ನು ಇಲ್ಲಿಯೇ ಇರುವ ಯಾರಾದರೂ ನೋಡಬಹುದು. ಇಲ್ಲಿಯ ರೈತರು ಈ ಬಡಸ್ಥಿತಿಯಲ್ಲಿರುವಾಗ, ಡಿ. ಬೋರ್ಡಿನವರು ಅವರ ಸಹಾಯಕ್ಕೆ ಬಂದು ಮುಖ್ಯವಾಗಿ ವಿದ್ಯೆ, ಆಸ್ಪತ್ರೆಗಳು, ಕುಡಿಯಲು ಶುಚಿನೀರನ್ನು ಒದಗಿಸುವುದೇ ಮೊದಲಾದ ಕೆಲಸಗಳನ್ನು ಮಾಡಿ ಇವರು ಇತರ ನಾಡುಗಳವರ ಮಟ್ಟಕ್ಕೆ ಬರಲು ಎಲ್ಲಾ ವಿಧದಲ್ಲಿ ಉತ್ತೇಜನಕೊಡಬೇಕು.

ಈ ತಾಲೋಕಿನವರು ಹುಟ್ಟಿದ್ದೇ ಎಲ್ಲಾ ತರದ ತೆರಿಗೆ ತೆರಲು ಎಂಬುದನ್ನು ನಾನು ಬಹಳ ನೋವಿನಿಂದ ಹೇಳಬೇಕಾಗಿದೆ. ಯಾವ ತರದ ಕಂದಾಯದಿಂದಲೂ ಇವರು ತಪ್ಪಿಸಿಕೊಂಡಿಲ್ಲ. ಯಾವ ರಿಯಾಯಿತಿಗಳೂ ಇವರಿಗೆ ದೊರೆತಿಲ್ಲ. ನ್ಯಾಯ ಪ್ರಕಾರ ಈ ತಾಲೋಕು ನೋಡಲ್ಪಡುತ್ತಿಲ್ಲ. ಜಮ್ಮ ಬಾಣೆಯನ್ನು ಅನುಭವಿಸುವ ಅದೃಷ್ಟವು ದಕ್ಷಿಣ ಕೊಡಗಿನವರದಾಗಿದೆ. ಅವರು ವಿಶಾಲವಾದ ಬಾಣೆಗಳಿಗೆ ಯಾವ ಕಂದಾಯವನ್ನು ಕೊಡದೆ ಅದರಿಂದ ಪ್ರಯೋಜನವನ್ನು ಹೊಂದಿಕೊಳ್ಳುತ್ತಿದ್ದಾರೆ. ಇಲ್ಲಿ ಹಾಗಲ್ಲ, ಒಂದು ಚೂರು ಜಾಗವನ್ನಾಗಲೀ ಕಂದಾಯ ಕೊಡದೆ ಯಾರು ಅನುಭವಿಸುತ್ತಿಲ್ಲ. ಈ ತೆರನಾದ ಇನ್ನೂ ಅನೇಕ ತಾರತಮ್ಯಗಳಿವೆ; ಆದರೆ, ನಾನು ಒಂದೆರಡನ್ನೇ ಇಲ್ಲಿ ಸೂಚಿಸಿದ್ದೇನೆ.

ಈಗ ಬೋರ್ಡಿನವರು ತಮ್ಮ ಮುಂದಿರುವ ರಸ್ತಾವನ್ನು ಜಾರಿಗೆ ತರಲು ನಿರ್ಧರಿಸಿದರೆ, ಆದರ ಜನರಲ್ ಫಂಡಿನಿಂದ ಹಣವನ್ನು ಮಂಜೂರು ಮಾಡಲು ಅಸಾಧ್ಯವೆಂದು ಕಂಡು ಬಂದಲ್ಲಿ ಸೆಸ್ ಮೂಲಾಂತರ ಬರುವ ಹೆಚ್ಚಿನ ಉತ್ಪತ್ತಿಯನ್ನು ಈ ಕೆಲಸಕ್ಕೆ ವಿನಿಯೋಗಿಸಬೇಕೆಂದು ಸೂಚಿಸುತ್ತೇನೆ. ಈ ಯೋಚನೆಯು ತಪ್ಪಾಗಲಿಕ್ಕಿಲ್ಲವೆಂದು ನನ್ನ ಭಾವನೆ.

ನಾನು ಸ್ಥಳೀಕ ಡಿ. ಬೋರ್ಡು ಮೆಂಬರರ ಜೊತೆಯಲ್ಲಿ ಈ ವಿಷಯ ಸಾಂಗವಾಗಿ ಚರ್ಚಿಸಿದ್ದೇನೆ. ಅವರು ಈ ವಿಷಯಗಳೆಲ್ಲವನ್ನೂ ಬರುವ ಮೀಟಿಂಗಿನಲ್ಲಿ ಮೆಂಬರರ ಅವಗಾಹನೆಗೆ ತರುತ್ತೇನೆಂತಲೂ, ತನ್ನ ಹವಾಲುಗಳಿಗೆ ಬೋರ್ಡಿನ ತಕ್ಕ ಗೋಷ್ಠಿಯು ದೊರೆಯದೆ ಹೋದರೆ ತಾನು ಚಂದಾ ವಸೂಲು ಮಾಡಲು ಭಗೀರಥ ಪ್ರಯತ್ನಿಸುತ್ತೇನೆಂತಲೂ, ಸುಮಾರು 1000/—ದಿಂದ 1500/—ರೂ. ಗಳ ವರೆಗೆ ಜಮೂಯಿಸಲು ಸಾಧ್ಯವಾಗಬಹುದೆಂತಲೂ ಹೇಳಿದರು.

ಪ್ರಥಮ ಖರ್ಚನ್ನು ನಾನೇ ವಹಿಸಿಕೊಳ್ಳಬಹುದು ಸೂಚನೆಯನ್ನು ನೀವು ಮಾಡಬಹುದು. ಆದರೆ ಅದು ನನಗೆ ಸಾಧ್ಯವಲ್ಲ. ಯಾಕಂದರೆ ನನ್ನ ತೋಟದಲ್ಲಿ ಪ್ರತ್ಯೇಕ ಒಂದು ಆಸ್ಪತ್ರೆಯನ್ನು ಸ್ವತಃ ಇಡಬೇಕೆಂದು ಆಲೋಚಿಸುತ್ತಿದ್ದೇನೆ. ಇಲ್ಲಿಯ ಡಿ. ಬೊ. ಮೆಂಬರನು 1,500/—ರೂ. ಗಳನ್ನು ಶೇಖರಿಸಿದರೆ, ನಾನು ಡಿ. ಬೋರ್ಡಿಗೆ ಸೆಸ್ ಕೊಡುವಷ್ಟೇ ಮೊಬಲಗನ್ನು ಒಂದು ವರ್ಷ ಚಂದಾ ಕೊಡಲು ಸಿದ್ಧನಾಗಿದ್ದೇನೆ.

ನಾನು ಮೇಲೆ ವಿವರಿಸಿರುವ ವಿಷಯಗಳಿಗೆಲ್ಲಾ ನೀವು ತಕ್ಕಷ್ಟು ಬೆಲೆ ಕೊಟ್ಟು ಬೋರ್ಡಿನವರನ್ನು ಒಡಂಬಡಿಸಿ ಬೋರ್ಡಿನಿಂದಲೇ ಈ ಆಸ್ಪತ್ರೆಯನ್ನು ಬೇಗ ತೆರೆಯಲು ಬೇಕಾದ ಹಣವನ್ನು ಮಂಜೂರು ಮಾಡುವಂತೆ ಸಿಫಾರಸ್ಸು ಮಾಡಬೇಕಾಗಿ ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಹೀಗೆ ಮಾಡಿದರೆ ಇಲ್ಲಿಯ ಜನರು ತೃಪ್ತರಾಗಿ ನಿಮ್ಮನ್ನು ಎಂದಿಗೂ ಮರೆಯಲಾರರು.

ಈ ಕಾಗದವು ತಮಗೆ ತಲುಪಿದ್ದನ್ನೂ, ಬೋರ್ಡಿನವರು ಈ ವಿಷಯ ಮಾಡುವ ತೀರ್ಮಾನವನ್ನೂ ನನಗೆ ತಿಳಿಸಬೇಕಾಗಿ ಕೋರುತ್ತೇನೆ. ಇಂತಿ.

(Sd) ಸುಬ್ಬಣ್ಣಯ್ಯ

## ಪ್ರಕಟನೆ.

ಕುಟ್ಟದಿಂದ ವೀರರಾಜಪೇಟೆಗೂ, ಹುದಿಕೇರಿಯಿಂದ ವೀರರಾಜಪೇಟೆಗೂ ಮತ್ತು ವೀರರಾಜಪೇಟೆಯಿಂದ ವಾಪಸು [illegible] ಮತ್ತು [illegible] ಹೋಗತಕ್ಕ ಬಸ್ಸು [illegible] ಈ ವರೆಗೆ ಮೆ. ಪೋಸ್ಟ್ [illegible] ಚಿನ್ನಪ್ಪನವರಿಗೆ ಕೊಟ್ಟಿದ್ದು ಸರಿಯಷ್ಟೆ. ಆದರೆ ಈಗ [illegible] ಚಿನ್ನಪ್ಪನವರನ್ನು ವಜಮಾಡಿ ರಾಜಪೇಟೆ ಏಜಂಟರಾಗಿ ಮೆ. ಬಟ್ಟಿಯಂಡ ಉತ್ತಯ್ಯನವರನ್ನು ಏರ್ಪಾಡು ಮಾಡಿರುವ ಸಂಗತಿ ಎಲ್ಲರ ತಿಳುವಳಿಕೆಗೆ ಈ ಮೂಲಕ ಪ್ರಸಿದ್ಧಪಡಿಸಿದೆ. ಈ ಲಾಗಾಯಿತು ಸರ್ವೀಸಿನ ಟಿಕೇಟುಗಳನ್ನು ಮೆ. ಬಟ್ಟಿಯಂಡ ಉತ್ತಯ್ಯನವರಿಂದ ಹೊಂದಿಕೊಳ್ಳಬೇಕಾಗಿ ಕೇಳಿಕೊಳ್ಳಲಾಗಿದೆ. ಬಸ್ಸಿನಲ್ಲಿ ಪ್ರಯಾಣಮಾಡುವ ಜಂಗಮ ಅನುಕೂಲಕ್ಕೆಯೂ, ವಿಶ್ರಾಂತಿ ತೆಗೆದುಕೊಳ್ಳಲು ವೀರರಾಜಪೇಟೆ ಮೆ. ವೆಂಗಡಂ ಪಿಳ್ಳೆಯವರ ಹಳೇ ಬ್ರಾಂಡಿಶಾಪಿನ ಎದುರು ಮೆ. ಉತ್ತಯ್ಯನವರು ಇಟ್ಟಿರುವ ಅಮ್ಯುನಿಶನ್ (Ammunition Shop) ಮಹಡಿಯ ಮೇಲೆಯೂ, [illegible]ಗೆ ಅಮ್ಯುನಿಶನ್ ಶಾಪಿನಲ್ಲಿ ಸಹ ಅನುಕೂಲಪಡಿಸಲಾಗಿದೆ.

ಮೇಲೆ ಸೂಚಿಸಿದ ಬಸ್ಸುಗಳಿಗೆ ಇನ್ನು ಮುಂದೆ [illegible] ಪೇಟೆ ಕ್ಲಾಕ್ ಟವರ್ ಬಳಿ (Clock Tower) [illegible] ಗಣಪತಿ ದೇವಸ್ಥಾನದ ಎದುರಿನಲ್ಲಿ ಮತ್ತು ಮೆ. ಉತ್ತಯ್ಯನವರ ಅಮ್ಯುನಿಶನ್ ಶಾಪಿನಲ್ಲಿ ಸಹ ಟಿಕೇಟುಗಳು ಕೊಡಲ್ಪಡುವುವು.

ಪೊನ್ನಂಪೇಟೆ, ಸಿ. ರಾಮು ನಂಬಿಯಾರ್,
7—9—'28. ಮೇನೇಜರ್,
4—2 ಯೆಸ್. ಯಸ್. ಯನ್. ಮೋಟಾರ್

## “ಔಷಧ ಸೀಸೆಗಳಿಗಿಂತಲೂ ಬರೀ ಜೀವನ ಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು”

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರಬಲ್. ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ “ಆರೋಗ್ಯ ಚಂದ್ರಿಕೆ” ಎಂಬ ಆರೋಗ್ಯಬೋಧಕವಾದ ಮಾಸ ಪತ್ರಿಕೆಯು, ನಿಮಗೆ ಆರೋಗ್ಯ ವೃದ್ಧಿಕರವಾಗಿ ಜೀವಿಸುವ ಮಾರ್ಗವನ್ನೂ ಪ್ರಸಿದ್ಧ ಶಾಸ್ತ್ರರುಗಳಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟ ರೋಗ ನಿವಾರಣವನ್ನೂ ಬೋಧಿಸುವದು.

ಈ ಆರೋಗ್ಯ ಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ, ಒಮ್ಮೆ ಕಾಲದಿಂದ ಶಸ್ತ್ರ ಚಿಕಿತ್ಸೆಯಲ್ಲಿಯೂ ಔಷಧ ಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಎಂಬೀ ಮಾಸ ಪತ್ರಿಕೆಯಲ್ಲಿ ಆಹಾರ ಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರ ಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯವಿಷಯಗಳು ಇದರಲ್ಲಿರುವುವು. ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯನಂತೆ ಭಾವಿಸಿರಿ.

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಮುಂಗಡ ಕಳುಹಿಸಿದರೆ ಕನ್ನಡ, ತೆಲುಗು, ತಮಿಳು, ಇಂಗ್ಲಿಷ್ ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದು ಬೀಳುವುದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾದುದಿಲ್ಲ.

52—4 ಮ್ಯಾನೇಜರ್, ಆರೋಗ್ಯಚಂದ್ರಿಕೆ, 323 ತಂಬುಶೆಟ್ಟಿ ಬೀದಿ, ಮದರಾಸು.



# Arms, Ammunition and Shooting Requisites !!!



1926 Illustrated Catalogue Just Issued Free on Application !

| | | | | |
|---|---|---|---|---|
| D. B. B. L. Rifles | Rs. | 120 | to Rs | 2750 |
| S. B. B. L. | „ | 35 | to „ | 950. |
| D. B. B. L. Guns | „ | 50 | to „ | 1350 |
| S. B. B. L. | „ | 35 | to „ | 275 |
| D. B. M. L. | „ | 45 | to | 135 |
| S. B. M. L. | „ | 30 | to „ | 80 |
| B. L. Revolvers | „ | 35 | to „ | 350 |
| Automatic Pistols | „ | 30 | to „ | 150 |

Brilliant Search Light Lamp For Shooting Camping, Fishing and All such other Night Sports and work Rs 30 Free delivery

**Also swords, Daggers, Cartridges, Caps, Gunpowder and Shooting Requisites the most competitive rates.**

GOOLAMHUSAIN ALLIBHOY & SONS.

**Largest Importers of Firearms and Ammunition Cheapest priced firm in India,**

24—26 **210 Abdul Rehman Street, BOMBAY.**



**Real Rolled Gold Jewelleries (Warrented for 10 years)**

**ರೋಲ್ಡ್ ಗೋಲ್ಡ್ ಭಂಗಾರದ ಒಡವೆಗಳು.**

ಇವುಗಳನ್ನು ಸಾಚಾ ರೋಲ್ಡ್ ಗೋಲ್ಡ್ ಬಂಗಾರದಿಂದ ವಿಲಾಯತಿಯಲ್ಲಿ ತಯಾರಿಸಿದ್ದು. ಇದನ್ನು 10 ವರುಷಗಳ ವರೆವಿಗೂ ಕೆಟ್ಟು ಹೋಗುವದಿಲ್ಲ. ಇಂಗ್ಲೀಷ್ ನಮೂನೆ. ನೋಡಲು ಬಹು ಚೆನ್ನಾಗಿರುವವು

| | |
|---|---|
| ನೆಕ್‌ಲೇಸ್ ಪದಕ ಸಹಿತ | 5—8—0. |
| ಲೋಲಾಕ್ (Ear rings) ಜೊತೆ 1ಕ್ಕೆ | 2—8—0. |
| ಭಂಗಾರದ ಕೈ ಬಳೆಗಳು ಜೊತೆ 1ಕ್ಕೆ | 2—0—0. |

ವಿಳಾಸ — ಕೆ. ಎನ್. ರಾಧಾಕೃಷ್ಣ ಬ್ರದರ್ಸ್,
109. ಚೈನಾ ಬಜಾರ್ ರೋಡ್,
52—10 ಮದರಾಸು.



ವಜ್ರದ ಉಂಗುರಗಳು. (0—8—0)



ಈ ಉಂಗುರಗಳನ್ನು ಲಂಡನ್ ಪಟ್ಟಣದ ದೊಡ್ಡ ಕಂಪನಿಯವರಿಂದ ವಜ್ರದ ಕಲ್ಲುಗಳನ್ನು ಇಟ್ಟು ನೀಮ ಭಂಗಾರದಿಂದ ತಯಾರಿಸಿದೆ. ನೋಡಲು ಸಾಚಾ ವಜ್ರದ ಉಂಗುರಗಳಿಗೆ ಸರಿಸಮನಾಗಿರುವವು. ಒಣ್ಣಾ ಕಡದು. ಕ್ರಯ ಉಂಗುರ 1ಕ್ಕೆ 0—8—0 ಒಂದಾವರ್ತಿ 6 ಉಂಗುರಗಳನ್ನು ತರಿಸುವವರಿಗೆ ಒಂದು ಟೇಬಲ್ ಟೈಂಪೀಸನ್ನೂ, 12 ಉಂಗುರಗಳನ್ನು ತರಿಸುವವರಿಗೆ ಒಂದು ರೋಲ್ಡ್ ಗೋಲ್ಡ್ ಭಂಗಾರದ ಲೀವರ್ ಪಾಕೆಟ್ ವಾಚನ್ನೂ ಇನಾಮಾಗಿ ಕೊಡುವೆವು. ಸ್ವಲ್ಪವೇ ಇರುವವು. ಬೇಗನೇ ತರಿಸುವವರಿಗ ಮಾತ್ರ ಇನಾಮು ಸಿಕ್ಕುವವು. ವ್ಯಾಪಾರಸ್ಥರಿಗೆ ಒಳ್ಳೇ ಸಮಯ. ಗಡಿಯಾರಗಳಿಗೆ ಬಾಕ್ರಿಯದ 3 ವರುಷ ಗ್ಯಾರಂಟಿ ಕೊಡುವೆವು. 3 ಉಂಗುರಕ್ಕೆ ಕಡಿಮೆ ಕಳುಹಿಸುವದಿಲ್ಲ.

ವಿಳಾಸ — ಲೀಗಲ್ ಟ್ರೇಡಿಂಗ್ ಕಂಪೆನಿ,
52—19 ಪೋ ಬಾಕ್ಸ್ ನಂ 243. ಮದರಾಸು

ಡಬ್ಬಲ್ ಮತ್ತು ಸಿಂಗಲ್ ಬೋರ್ಟ್ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

**ಯನ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.**

**ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.**

24—17 12. ಬ್ರಾಡ್ವೇ. ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ)



# ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

## ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

**ಉತ್ತಮ ತರಹದ ಸಿಂಗಲ್‌ರೀಡ್ಸ್ ಹಾರ್ಮೋನಿಯಂಗಳು.**

| | |
|---|---|
| ಸಿಲ್ವರ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 50—8—0 |
| ... ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 40—0—0 |
| ...ನ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 37—8—0 |
| ...ಂ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 35—0—0 |
| ...ಚಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 32—8—0 |

**ಉತ್ತಮ ತರಹದ 14 ಕ್ಯಾರೆಟ್ಸ್ ಬಂಗಾರದ ನಿಬ್ಬು ಹಾಕಿದ ಫೌಂಟೆನ್ ಪೆನ್‌ಗಳು.**

| | |
|---|---|
| ಬ್ಲಾಕ್ ಬರ್ಡ್ ಫೌಂಟೆನ್ ಪೆನ್ 1ಕ್ಕೆ | 3—8—0 ಮತ್ತು 3—12—0 |
| ವರಲ್ಡ್ಸ್ ವಂಡರ್ ಫೌಂಟೆನ್ ಪೆನ್ 1ಕ್ಕೆ | 3—0—0 ಮತ್ತು 3—8—0 |
| ಕಾಂಪ್ಯಾಕ್ಟ್ ಸೆಫ್ಟ್ಯನ್ ಫೌಂಟೆನ್ ಪೆನ್ 1ಕ್ಕೆ | 4—8—0 |
| ವಾಟರ್ ಮನ್ ಫೌಂಟೆನ್ ಪೆನ್ 1ಕ್ಕೆ | 8—0—0 ಮತ್ತು 8—8—0 |
| ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌಂಟೆನ್ ಪೆನ್ 1ಕ್ಕೆ | 12—0—0 ಮತ್ತು 15—0—0 |

**ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು**

| | |
|---|---|
| ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ | 4—6—0 |
| ವೆಸ್ಟೆಂಡ್ ಕಂಪೆನಿಯ ಅಲಾರಂ ಟೈಂಪೀಸ್ 1ಕ್ಕೆ | 8—0—0 |
| ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ | 9—6—0 |
| ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ | 6—12—0 |
| ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ | 6—0—0 |

ಸಚಿತ್ರ ಕ್ಯಾಟಲಾಗ್ ಒಣ್ಣಿ 6 ಪೈ ಸ್ಟಾಂಪು ರವಾನಿಸಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು, ಮೈಸೂರು.

## ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ

| | | ರೂ |
|---|---|---|
| ಶೇರ್ ಬಂಡವಾಳ | — | 50 000 |
| ವಸೂಲಾದ ಶೇರ್ ಹಣಗಳು | — | 17 190 |
| ಜನರಿಂದ ಠೇವಣಾತಿ | — | 1 62 320 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇ ಹೆಚ್ಚಾಗಿ ಸಾಲಕೊಡಲ್ಪಡುವದು

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಚಲಾವಣೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ

ಪ್ರೆಸಿಡೆಂಟರು — ಕೋದಂಡ ಅಪ್ಪಯ್ಯನವರು ರಾವ್ ಬಹದ್ದೂರ್

ಟ್ರೆಜರರ್ — ಕೊಂಗಟ್ಟೀರ ತಮ್ಮಯ್ಯನವರು

ಸೆಕ್ರೆಟರಿ

ಸಿ ಯನ್ ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್

ತಾರೀಕು 1–7–1928

## ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲಿ ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮಿ ಪೇರಿಯಂಡ ಪೂವಯ್ಯನವರ ಒಪ್ಪಿಗೆಯ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮಿ ಪೇರಿಯಂಡ ಪೂವಯ್ಯನವರು

ಪೊನ್ನಂಪೇಟೆನಾಡ —ಮಿ ಕಾಳೇಂಗಡ ಚಿಣ್ಣಪ್ಪನವರು

ಶ್ರೀಮಂಗಲನಾಡು—ಮಿ ಅಜ್ಜಮಾಡ ಮಾದಪ್ಪನವರು

ಮರೆನಾಡು—ಮಿ ಕೇಕಿರ ಅಪ್ಪಯ್ಯನವರು.

ಸಬ್ ಏಜೆಂಟರುಗಳು

ವೀರರಾಜಪೇಟೆ—ಮಿ ಕಾಣತೀರ ನಂಜಪ್ಪನವರು,

ನಾಪೋಕ್ಲು—ಮಿ ಅರಯಡ ಸುಬ್ಬಯ್ಯನವರು,

ಗೋಣಿಕೊಪ್ಪಲು—ಮಿ ಒಮ್ಮಡ ಮಾದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮಿ ಏನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮಿ ಪಿ. ಜಿ ಮುದ್ದಯ್ಯನವರು,

ಹುದಿಕೇರಿ & ತಿತಿಮತ್ತಿ—ಮಿ ಜಿ ಮಾದಯ್ಯನವರು,

ಕೊಡಗಿನ ಎಲ್ಲಾ ಭಾಗಕ್ಕೂ—ಮಿ ಚಂಗಂಡ ಕುಟ್ಟಪ್ಪನವರು,

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ,

## ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವೆ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ. ಮೇನೇಜರ್,

"ಕೊಡಗು" ಮಡಿಕೇರಿ

12 bore Victor Cartridges Rs 10/- Per 100

**Mahomedally-Noorbhoy.**

**ARMS & AMMUNITION MART**

321 Abdul Rehman Street

53-3 BOMBAY. 3

ಕಟುಕಷಾಯ ಮಂಜೀಜ ರಕ್ಷೆ—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ ದಿನಾ ಬರುವ ಜ್ವರ 3–4 ದಿವಸಕ್ಕೊಂದು ಸಾರಿ ಬರುವ ಜ್ವರ ಸದಾ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ ಸೀಸೆ ಒಂದಕ್ಕೆ ರೂ 1–8–0 3ಕ್ಕೆ ರೂ 4–0–0 6ಕ್ಕೆ ರೂ 7–8–0 12ಕ್ಕೆ ರೂ 14

ಚಂದ್ರಪ್ರಭಾವಟಿ—ಇದು ಪ್ರಮೇಹ ಮೂತ್ರಕೃಚ್ಛ್ರ ಮೂತ್ರ ಹನಿಹನಿಯಾಗಿ ಹೋಗುವುದು ಮೂತ್ರಕೋಶದ ಉರಿ ಮೂತ್ರ ಹಿಂದಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೋಗುವಾಗ ಉರಿಯುವುದು ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹರಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು ವಸ್ತ್ರ ಹಳದಿಯಾಗುವುದು ದೇಹದಲ್ಲಿ ಉರಿ ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರಾಶಯದಲ್ಲಿ ಕಲ್ಲು ಈ ರೋಗ ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲಿ 1 3 6ಕ್ಕೆ ರೂ 1–4–0 3–8–0 6–12–0

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು ತಲೆತಿರುಗುವುದು, ತಲೆಭಾರ, ಕಣ್ಣುರಿ ಕಿವಿಯಿಂದ ಕೀವು ಸೋರುವುದು ಕಿವುಡುತನ ಕಣ್ಣು ನೋವು ಅಸಹ್ಯ ನಿದ್ದೆ ಬಾರದಿರುವುದು ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2–10–0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5–8–0

ನಮ್ಮ ಕೆಟಲಾಗು ತರಿಸಿ ನೋಡಿರಿ — ವಿಳಾಸ—ಮನೋಲ್ಲಾಸಿನಿ ಕಂಪೆನಿ

52–51 — 9. ಮಂಗಳೂರು.

**ತಕಾರಿಕೆ ಮಾಲುಗಳಿಗೆ ಮೋಸ ಹೋಗಬೇಡಿರಿ!**

ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ

ಅವಲೋಕಿಸಿ ನೋಡಿರಿ.

ಇನಾಮಿನ ಬಟ್ಟಲುಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ

ಎಲ್ಲಾ ಆರ್ಡರುಗಳನ್ನೂ ಥಳಕಿನ ರೀತಿಯಿಂದಲೂ, ತುರಿತವಾಗಿಯೂ ಗ್ಯಾರಂಟಿಯೊಡನೆ ಜಾರಿ ಮಾಡಲಾಗುವದು

**ಕೇಶವಜಿ ದೇವಚಂದ್,**

**ಜ್ವೆಲ್ಲರ್, (ಕೆಟಲಾಗ್ ಮುಫತ್).**

12—4 — 21 ಚೈನಾ ಬಜಾರ್‌ರೋಡ್, ಮದರಾಸು.

## ಎಂಪಯರ್ ಆಫ್ ಇಂಡಿಯಾ

### ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

**ಸ್ಥಾಪಿಸಲ್ಪಟ್ಟದ್ದು 1897**

1928ನೇ ಇಸವಿ ಫೆಬ್ರವರಿ 29ಕ್ಕೆ ಮುಗಿದಂತ ೨ ವರ್ಷಗಳಲ್ಲಿ ಕಂಪನಿಗೆ ಆದಂತ ಉತ್ಪತ್ತಿ

| | | |
|---|---|---|
| ಹೊಸ ಪಾಲಿಸಿಗಳು ಏರಿದೆ | ರೂ | 11,6,00,000 |
| ವರಮಾನ ಏರಿದೆ | ರೂ | 54 95 000 |
| ಕಂಪೆನಿ ಆಸ್ತಿ ಏರಿದೆ | ರೂ | 3,16 64,000 |

ಬೇಕಾಗಿದೆ — ಕೊಡಗು ದೇಶದ ಮುಖ್ಯ ಸ್ಥಳಗಳಲ್ಲಿ ಏಜಂಟರುಗಳು.

ಹೆಡ್ ಆಫೀಸು — ಎಂಪಯರ್ ಆಫ್ ಇಂಡಿಯಾ — ಲೈಫ್ ಬಿಲ್ಡಿಂಗ್, ಬೊಂಬಾಯಿ

ಬ್ರಾಂಚ್ ಆಫೀಸು — ಕಮರ್ಶಿಯಲ್ ಬೀದಿ — ಬೆಂಗಳೂರು.

24–14

ಸ್ಥಾಪನೆ–1874. — ಹೆಡ್ ಆಫೀಸು–ಬೊಂಬಾಯಿ.

## ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ

## ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

೧೯೨೮

### ಅತ್ಯುಚ್ಛ್ರಾಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ

ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

| | | | |
|---|---|---|---|
| 1925 | 13545 | ರೂ | 2,95,42 000 |
| 1926 | 17371 | ರೂ | 3 91 39 000 |
| 1927 | 21418 | ರೂ. | 4,68,04,075. |

— ಪ್ರೀಮಿಯಂ ಉತ್ಪತ್ತಿ —

| | | |
|---|---|---|
| 1925 | ರೂ | 92,66,000. |
| 1926 | ರೂ | 1 05,33,000. |
| 1927 | ರೂ | 1,21,53,000. |

ಇದುವರೆಗೆ ಏಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಏರಿದೆ.

ಕಂಪೆನಿಯ ಫಂಡು ೮ ಕೋಟಿ ರೂಪಾಯಿಗಳಿಗೆ ಏರಿದೆ

ಜೀವವಿಮೆ ಮಾಡಬೇಕೆಂದಿರುವವರು ಸಾವಕಾಶ ಮಾಡದೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್, ಪೇಟೆ ಪರೇಡ್, ಬೆಂಗಳೂರು. — 52–24 — ಎಲ್. ಆರ್. ಕೃಷ್ಣಸ್ವಾಮಯ್ಯರ್, ಬ್ರಾಂಚ್ ಸೆಕ್ರೆಟರಿ.


Printed & published by P. I Bell[illegible], at [illegible] Press, Mercara for "Kodagu" Ltd.

Reg. No. M. 1550.

If not delivered please return to the "KODAGU" OFFICE, MERCARA.

# ಕೊಡಗು.

[illegible] ||

ವಾರ್ಷಿಕ ಚಂದಾ ರೂ. ೩-೮-೧. ಸಂಪಾದಕ—ಚೆಂದ್ರಂಡ ಐ. ಬೆಳ್ಳಪ್ಪ.

ಪ್ರತಿ [illegible] ಪ್ರಕಟಿಸಲ್ಪಡುವದು.

ಸಂಪುಟ ೮] ಮಡಿಕೇರಿ, [illegible] ಶುಕ್ರವಾರ [[illegible]

## ESTATE REQUISITES

| | | | |
|---|---|---|---|
| 5 lbs Yates' hammer headed mammoties | Rs 3 0 0 Each | Weeding forks @ | Rs 1 4 0 Each |
| 1½ " " " " | " 2 14 0 " | Garden trowels " | Rs 1 4 0 " |
| 4 " " " " | " 2 12 0 " | Pick axes " | Rs 1 8 0 " |
| Felling axes at Rs 3 0 0 - | " 3 4 0 " | Bill hooks " | Rs 3 14 0 " |
| Grubbing mattocks at | " 3 4 0 " | Digging forks " | Rs 1 0 0 " |

## MONSOON EQUIPMENT.

| | | | |
|---|---|---|---|
| Planter boots | Rs 16 8 0 | Dales' dubbin per tin | Rs 0 5 0 |
| Marrs' oil (water proof) per tin | Rs 2 0 0 | Umbrellas | Rs 1 8 0 |

2-46

SPENCER & CO. LTD. General Merchants MERCARA.

Post Box 423,
TRIPLICANE, MADRAS

MANUFACTURES AND DEALS IN ALL —

(1) Gemset Jewels, gold and silver articles of all patterns
(2) Race Cups, Caskets, Medals, etc. for presentation purposes
(3) Trowels, Keys, Locks, etc. for ceremonial purposes

JEWELLER BY APPOINTMENT TO His Excellency THE GOVERNOR OF MADRAS

Catalogue free to Bonafide Enquirers

UNDERTAKES —

(1) Remaking or Remodelling of all sorts of old gemset jewels to latest patterns
(2) Electro plating, gilding and nickeling
(3) Buying old jewellery, or under taking to effect sale

# V. SUBRAMANIA IYER
# JEWELLER

52-4

Gold smith, Silver smith, & Dealer in all Gemset Jewels.

## ನೀವು ನಿರ್ಬಲಸ್ತರಾಗಿ ಯಾಕೆ ನರಳುವಿರಿ?

[illegible]

## ಸಾಲಾಮಿಸ್ರಿ ಮುರಬ್ಬ

[illegible]

ವರೆಗೆ ೦—೮—೦

ಡಿ. ಮುನ್ನಾಲಾಲ್,

12—10 [illegible] ಬೆಂಗಳೂರು ಸಿಟಿ

## ಅಪೂರ್ವ ಸಂದರ್ಭ.

[illegible]

## ಆತಂಕನಿಗ್ರಹ ಮಾತ್ರೆಗಳು

[illegible]

32 [illegible]

## ಕಾಮ ಶಾಸ್ತ್ರ

[illegible] ಗ್ರಂಥ [illegible]

ಆತಂಕನಿಗ್ರಹ ಔಷಧಾಲಯ,

52—10 ಚಿಕ್ಕಪೇಟೆ, ಬೆಂಗಳೂರು ಸಿಟಿ.

# ಕೊಡಗು.

ಸಂ ೧೯೨೮ ನೇ ಇಸವಿ

ಅಕ್ಟೋಬರ್ ತಾ ೫ ನೇ ಶುಕ್ರವಾರ.


## ಸಿಮ್ಲಾ ಕೃಷಿ ಪರಿಷತ್ತು.

ಹಿಂದೂಸ್ಥಾನದ ಕೃಷಿ ಕಸುಬಿನ ಪರಿಸ್ಥಿತಿಯನ್ನು ಅಜಮಾಯಿಸಿ ಅಭಿವೃದ್ಧಿಗೆ ಸಲಹೆ ಕೊಡಲು ನೇಮಕವಾದ ಕಮಿಟಿಯ ವರದಿಯು ಕೆಲವು ತಿಂಗಳು ಹಿಂದೆ ಪ್ರಕಟವಾದದ್ದು ವಾಚಕರಿಗೆ ತಿಳಿದಿದೆ. ಆ ವರದಿಯ ಶಿಪಾರಸ್ಸುಗಳಲ್ಲಿ ಯಾವ್ಯಾವದನ್ನು ಮುಂದಾಗಿ ಜಾರಿಗೆ ತರಬೇಕು ಎಂಬ ಮೊದಲಾದ ವಿಷಯಗಳನ್ನು ಚರ್ಚಿಸಲಿಕ್ಕೆ ಸಿಮ್ಲಾದಲ್ಲಿ ಈ ತಿಂಗಳ 1ನೇ ತಾರೀಕಿನಲ್ಲಿ ಒಂದು ಪರಿಷತ್ತು ಕೂಡಿದೆ. ಇದನ್ನು ಇಂಡಿಯಾ ಸರಕಾರದವರು ಸೇರಿಸಿರುವದಾಗಿದೆ. ಎಲ್ಲಾ ಪ್ರಾಂತೀಕ ಸರಕಾರಗಳ ಪ್ರತಿನಿಧಿಗಳೂ ಈ ಪರಿಷತ್ತಿಗೆ ಆಮಂತ್ರಿಸಲ್ಪಟ್ಟಿದ್ದಾರೆ. ಕೃಷಿ ಇಲಾಖೆಯ ಮಂತ್ರಿಗಳನೇಕರೂ ಹಾಜರಾಗಿದ್ದಾರೆ.

ಈ ಪರಿಷತ್ತನ್ನು ತೆರೆಯುವ ಸಮಾರಂಭವನ್ನು ವೈಸರಾಯರು ನೆರವೇರಿಸಿದರು. ಆ ಸಂಬಂಧದ ಭಾಷಣದಲ್ಲಿ ಅವರು ಕಮಿಶನಿನವರ ಒಳ್ಳೇ ಕೆಲಸಗಳನ್ನು ಪ್ರಶಂಸಿಸಿ ವರದಿಯ ಶಿಫಾರಸ್ಸುಗಳನ್ನು ಜಾರಿಗೆ ತರಲು ಎಲ್ಲಾ ಪ್ರಾಂತೀಕ ಸರಕಾರಗಳೂ ಒಗ್ಗಟ್ಟಿನಿಂದ ಪ್ರಯತ್ನಿಸಬೇಕೆಂತ ಹೇಳಿಕೊಂಡಿದ್ದಾರೆ. ಮಧ್ಯವರ್ತಿ ಸರಕಾರದವರು ಕೃಷಿಯ ಅಭಿವೃದ್ಧಿಗೆ ಅವಶ್ಯವಿರುವ ಅಜಮಾಯಿಸುವಿಕೆಯನ್ನು ಕೂಡಲೇ ಕೈಕೊಳ್ಳಬೇಕಾಗಿದೆಯೆಂದೂ, ಆ ಕೆಲಸವು ತೃಪ್ತಿಕರವಾಗಿ ಆಗಬೇಕಾದರೆ ಎಲ್ಲಾ ಪ್ರಾಂತ್ಯಗಳ ಪ್ರತಿನಿಧಿಗಳಿಂದ ಕೂಡಿದ ಮಧ್ಯವರ್ತಿ ಆಲೋಚನಾ ಸಭೆಯೊಂದು ಆಗಬೇಕೆಂಬ ವರದಿಯ ಶಿಫಾರಸ್ಸನ್ನು ಆದಷ್ಟು ಬೇಗನೇ ನೇಮಿಸಿಕೊಳ್ಳಬೇಕೆಂದೂ ವೈಸರಾಯರು ಸೂಚಿಸಿಕೊಟ್ಟರು. ವೈಸರಾಯರು ಹೇಳಿರುವಂತೆ ಭೂಮಿಯಿಂದ ಹೆಚ್ಚಿನ ಉತ್ಪತ್ತಿ ಮಾಡಿಕೊಳ್ಳಬೇಕಾದರೆ ವಿಜ್ಞಾನ ಶಾಸ್ತ್ರದ ಸಹಾಯಬೇಕು. ಯಾವ ಯಾವ ಮಣ್ಣಿಗೆ ಯಾವ ಯಾವ ತರದ ಗೊಬ್ಬರ ಆಗಬೇಕು, ಎಂಥ ಬೀಜ ಬೇಕು, ಯಾವ ತರದ ವ್ಯವಸಾಯವಾಗಬೇಕು ಎಂಬ ವಿಷಯಗಳನ್ನು ಅಜಮಾಯಿಸುತ್ತಲೇ ಇರಬೇಕು. ಈಗ ಕೃಷಿ ಕೆಲಸವು ಪುರಾತನ ಕಾಲದಿಂದ ನಡೆದು ಬಂದ ರೀತಿಯಲ್ಲೇ ನಡೆಯುತ್ತಲಿದೆ. ಇದು ಮಾರ್ಪಾಡಾಗಬೇಕಾದರೆ ಹೊಸ ಕ್ರಮಗಳಿಂದ ಪ್ರಯೋಜನವಿದೆಯೆಂಬದನ್ನು ಸರಕಾರದವರು ಪ್ರತ್ಯಕ್ಷಮಾಡಿ ತೋರಿಸಬೇಕು. ಅಜಮಾಯಿಸಿಕೆಯು ಮಧ್ಯವರ್ತಿ ಸಂಸ್ಥೆಯಿಂದ ನಡಿಸಲ್ಪಡಬೇಕಾದರೂ ಅಜಮಾಯಿಸುವಿಕೆಯ ಫಲಿತಾಂಶವನ್ನು ರೈತರ ಹೊಲ ಗದ್ದೆಗಳಲ್ಲಿ ಮಾಡಿ ತೋರಿಸಿದರೇನೇ ಕೃಷಿಕರು ಹೊಸ ಕ್ರಮಗಳನ್ನು ಕೈಕೊಂಡಾರು. ಆದ್ದರಿಂದ ಈ ಅಜಮಾಯಿಸುವಿಕೆಯ ಕಾರ್ಯದಲ್ಲಿ ಮಧ್ಯವರ್ತಿ ಸರಕಾರವೂ ಪ್ರಾಂತೀಕ ಸರಕಾರಗಳೂ ಸಹಕರಿಸಲೇಬೇಕು.

ಈ ಪರಿಷತ್ತಿನಲ್ಲಿ ಕೊಡಗಿಗೆ ಭಾಗದೊರಕುವದೋ ಎಂಬ ಯೋಚನೆಯು ನಮ್ಮ ದೇಶೀಯರಿಗೆ ಸಾಧಾರಣವಾಗಿ ಹುಟ್ಟುತ್ತದೆ. ಈ ಪರಿಷತ್ತಿಗೆ ಕೊಡಗಿನ ಪ್ರತಿನಿಧಿಗಳು ಯಾರೂ ಹೋಗಿರುವದಿಲ್ಲ. ಕೊಡಗಿನ ಸ್ಥಿತಿಯು ಅನೇಕ ವಿಷಯಗಳಲ್ಲಿ ವಿಶೇಷವಾಗಿದೆ. ಬೆಟ್ಟ ಸೀಮೆ, ಇಲ್ಲಿ ಭತ್ತದ ವ್ಯವಸಾಯವೇ ಮುಖ್ಯ. ಒಳ್ಳೇ ಮಳೆ ನೀರಿನ ಆಧಾರದಿಂದ ವ್ಯವಸಾಯ ನಡೆಯಬೇಕು, ಮಳೆಯು ಬಹಳ ಹೆಚ್ಚು. ಇಂಥಾ ಸಂದರ್ಭಗಳಲ್ಲಿ ಯಾವರೀತಿಯಿಂದ ಅಭಿವೃದ್ಧಿ ಮಾಡಿಕೊಳ್ಳಬೇಕೆಂಬದನ್ನು ಯೋಚಿಸಬೇಕು. ಈ ಪರಿಷತ್ತಿಗೆ ಪ್ರತಿನಿಧಿ ಹೋಗದಿದ್ದರೂ ಮುಂದೆ ನೇಮಕವಾಗಲಿಕ್ಕಿರುವ ಮಧ್ಯವರ್ತಿ ಆಲೋಚನಾ ಸಭೆಗಾದರೂ ಕೊಡಗಿನಿಂದ ಪ್ರತಿನಿಧಿಯು ನೇಮಿಸಲ್ಪಡಲೇ ಬೇಕು. ನಮ್ಮ ದೇಶಕ್ಕೆ ಮಾಂಟ್‌ಫರ್ಡ್ ಸುಧಾರಣೆಯ ಆಡಳಿತ ಕ್ರಮವಿದ್ದಿದ್ದರೆ ನಮ್ಮ ದೇಶವನ್ನು ಮಧ್ಯವರ್ತಿ ಸರಕಾರವು ಮರೆಯುತ್ತಿರಲಿಲ್ಲ. ಆದುದರಿಂದ ಬೇರೆ ಪ್ರಾಂತ್ಯಗಳ ಆಡಳಿತ ಕ್ರಮವನ್ನೇ ನಮ್ಮ ದೇಶದಲ್ಲೂ ಆದಷ್ಟು ಬೇಗನೇ ಸ್ಥಾಪಿಸಿಕೊಳ್ಳಲು ಸರ್ವರೂ ಪ್ರಯತ್ನಿಸಬೇಕಾಗಿದೆ.

ಕೃಷಿ ಕಮಿಶನಿನವರು ರೈತರ ಸ್ಥಿತಿಯು ಉತ್ತಮಗೊಳ್ಳಬೇಕಾದರೆ ಅವರ ವಿದ್ಯೆ, ಆರೋಗ್ಯ ಸ್ಥಿತಿ, ಆರ್ಥಿಕ ಸ್ಥಿತಿ ಸಹ ಅಭಿವೃದ್ಧಿಯಾಗಬೇಕೆಂತ ಬರೆದಿರುತ್ತಾರೆಂಬದನ್ನು ವೈಸ್‌ರಾಯರು ಪ್ರಶಂಸಿಸಿದ್ದಾರೆ. ಈ ಎಲ್ಲಾ ಬಾಬಿನ ಅಭಿವೃದ್ಧಿಯಾಗಬೇಕಾದರೆ ಕೃಷಿಕರಿಗೆ ತತ್ಕಾಲ ಧನ ಸಹಾಯ ಬೇಕು. ಧನ ಸಹಾಯವು ಯಾವ ಯಾವ ರೀತಿಯಿಂದ ಒದಗಿಸಲ್ಪಡಬಹುದೆಂಬದನ್ನು ಪರಿಷತ್ತಿನವರು ಪ್ರಥಮತಃ ಯೋಚಿಸಬೇಕು. ದೀರ್ಘಕಾಲ ವಾಯಿದೆಯುಳ್ಳ ಭೂಮಿ ಆಧಾರದ ಮೇಲೆ ಸಾಲಕೊಡುವ ಲ್ಯಾಂಡ್‌ಮೋರ್ಗೇಜ್ ಬ್ಯಾಂಕ್‌ಗಳು ಸ್ಥಾಪಿಸಲ್ಪಡಬೇಕು. ಬ್ಯಾಂಕಿನ ಅನುಕೂಲಗಳು ಎಲ್ಲೆಲ್ಲಿಯೂ ದೊರೆಯಬೇಕು. ರಕಾಬಿ ಸಾಲಗಳು ಸುಲಭ ಶರತ್ತಿನಿಂದ ಧಾರಾಳವಾಗಿ ಸಿಕ್ಕಬೇಕು. ಕೃಷಿಕರ ಅಭಿವೃದ್ಧಿಗೆ ಸಹಾಯವಾದ ಈ ಅನುಕೂಲಗಳನ್ನು ಮುಂದಾಗಿ ಮಾಡಿಕೊಳ್ಳಲು ಪರಿಷತ್ತಿನವರು ಸಲಹೆಕೊಟ್ಟಾರೆಂತ ನಂಬುತ್ತೇವೆ.

ಕೃಷಿಕರ ವಿರಾಮ ಕಾಲದಲ್ಲಿ ಬೇರೆ ಯಾವ ಕಸುಬನ್ನು ಕೈಕೊಳ್ಳಬಹುದೆಂಬದನ್ನು ಅವರಿಗೆ ತಿಳಿಸಿಕೊಡಬೇಕಾದದ್ದು ವ್ಯವಸಾಯಗಾರರ ಕ್ಷೇಮವನ್ನು ಬಯಸುವವರ ಕರ್ತವ್ಯವಾಗಿದೆ. ಸರ್ಕಾರದವರು ಮಹಾತ್ಮ ಗಾಂಧಿಯವರು ಎಬ್ಬಿಸಿದ ಚಳವಳವೆಂತ ದೂರ ಮಾಡದೆ, ಕೈನೂಲು ಕಸುಬಿಗೆ ಉತ್ತೇಜನ ಕೊಟ್ಟರೆ ಬಡ ರೈತರಿಗೆ ತುಂಬಾ ಸಹಾಯ ಮಾಡಿದಂತಾಗುವದು.

ಮುಖ್ಯ ಸಂಬಳದ ಉದ್ಯೋಗಸ್ಥರನ್ನು ನೇಮಿಸಿದ ಮಾತ್ರಕ್ಕೆ ಕೃಷಿ ಕಮಿಶನಿನ ಶಿಫಾರಸ್ಸುಗಳಿಂದ ಪ್ರಯೋಜನ ಹೊಂದಿದಂತಾಗುವದಿಲ್ಲ. ಕೃಷಿಕರ ಕಷ್ಟವನ್ನು ಆಯಾಯ ಸ್ಥಳಗಳಲ್ಲೇ ಅವಲೋಕಿಸುತ್ತಾ ಸಹಾನುಭೂತಿಯುಳ್ಳ ತೋರಿಸುವ ಕೃಷಿಕರ ಮನೆಬಾಗಿಲಿಗೆ ಹೋಗಿ ಬೋಧಿಸುವ ಉದ್ಯೋಗಸ್ಥರು ಬೇಕು. ಈ ವಿಷಯದ ಅವಶ್ಯಕತೆಯನ್ನು ಪರಿಷತ್ತೂ, ಸರಕಾರವೂ ಮರೆಯಲಾರವೆಂತ ನಂಬುತ್ತೇವೆ.

## ಬಂಗಾಳ ವಿದ್ಯಾರ್ಥಿಗಳ ಸಭೆ.

ಅಖಿಲ ಬಂಗಾಳ ವಿದ್ಯಾರ್ಥಿಗಳ ಕಾನ್‌ಫರೆನ್ಸು ಕಳೆದ ತಿಂಗಳು 22ರಲ್ಲಿ ಕಲ್ಕತ್ತಾದಲ್ಲಿ ನಡೆಯಿತು. ಯಾ ಸಭೆಯಲ್ಲಿ ವಿಖ್ಯಾತ ಮುಂದಾಳಾದ ಪಂಡಿತ ಜವಾಹರ್ ಲಾಲ್ ನೆಹರುರವರು ಅಧ್ಯಕ್ಷರಾಗಿದ್ದರು. ಉತ್ಸಾಹ ಮೂರ್ತಿಯಂತಿರುವ ಇವರು ವಿದ್ಯಾರ್ಥಿಗಳಲ್ಲಿ ತುಂಬುವ ಭಾಷಣ ಮಾಡದೆ ಇರುವರೇ. ವಿದ್ಯಾರ್ಥಿಗಳು ಅವಸರದಲ್ಲಿ ಕಾರ್ಯಕ್ಕೆ ಕೈ ಹಾಕಬಾರದಾದರೂ 'ಹಿಂದೂ ದೇಶವನ್ನು ಗರ್ವದ ಪರಕೀಯರ ಆಡಳಿತೆಯಿಂದ ತಪ್ಪಿಸುವ ವಿಧಾನದಲ್ಲಿ' ತರಬೇತು ಹೊಂದಬೇಕೆಂತಲೂ ಜನ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯ ಅಭಿವೃದ್ಧಿಗೆ ಅವರು ಮುತುವರ್ಜಿಯಿಂದ ಕೆಲಸ ಮಾಡಬೇಕೆಂತಲೂ ಮನತಾಗಿ ಹೇಳಿದ ಅಧ್ಯಕ್ಷರ ಮಾತುಗಳಿಂದ ಅಲ್ಲಿ ಸೇರಿದ್ದ ವಿದ್ಯಾರ್ಥಿಗಳಲ್ಲಿ ಉತ್ಸಾಹವು ತುಂಬಿತು. ಮುಖ್ಯ ರಾಜಕೀಯ ವಿಷಯಗಳನ್ನು ತಿಳಿವು ಠರಾವುಗಳನ್ನು ಪಾಸು ಮಾಡಲಾಯಿತು.

ವಿದ್ಯಾರ್ಥಿಗಳು ರಾಜಕೀಯ ಕಾರ್ಯಗಳಲ್ಲಿ ಕೈಹಾಕಿದರೆ ತಮ್ಮ ವಿದ್ಯಾಭ್ಯಾಸಕ್ಕೆ ಅಡ್ಡಿಯಾದೀತೆಂತಲೂ, ಆದರೆ ಅವರು ದೇಶದಲ್ಲಿ ನಡೆಯುವ ಸಮಾಚಾರಗಳನ್ನು ತಿಳಕೊಳ್ಳಬೇಕೆಂತಲೂ ಮುಂದಾಳುಗಳು ವಾಡಿಕೆಯಾಗಿ ಹೇಳುತ್ತಿದ್ದರು. ಆದರೆ ಈ ಕಾನ್‌ಫರೆನ್ಸಿನ ತೀರ್ಮಾನಗಳನ್ನು ನೋಡಿದರೆ ಆ ಕಾಲವು ಹೋಯಿತೆಂದೇ ತೋರುತ್ತದೆ. ಹಿಂದೂ ದೇಶದ ಧ್ಯೇಯವು ಸಂಪೂರ್ಣ ಸ್ವಾತಂತ್ರ್ಯವಾಗಿರಬೇಕೆಂದೂ ಬಂಗಾಳದಲ್ಲಿ ಪ್ರಾಥಮಿಕ ವಿದ್ಯೆಯನ್ನು ಖಡ್ಡಾಯವಾಗಿ ಕೊಡಬೇಕೆಂತಲೂ, ಬಂಗಾಳ ಆರ್ಡಿನೇನ್ಸ್ ಆಕ್ಟನ್ನು ಖಂಡಿಸಿಯೂ, ಸೈಮನ್ ಕಮಿಷನನ್ನು ಬಹಿಷ್ಕರಿಸಬೇಕೆಂದೂ ಠರಾವುಗಳನ್ನು ಮಂಜೂರು ಮಾಡಿರುವರು. ಇಷ್ಟು ಮಾತ್ರವಲ್ಲ, ವಿದ್ಯಾರ್ಥಿಗಳೆಲ್ಲರೂ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿಗೆ ಸೇರುವದು ಉತ್ತಮವೆಂದೂ ತೀರ್ಮಾನಿಸಿದರು.

ಈ ತೀರ್ಮಾನಗಳಿಂದ ಇಡೀ ಹಿಂದೂದೇಶದ ಯುವಕ ಸಮಾಜದಲ್ಲಿ ನವ ಉತ್ಸಾಹವು ಹುಟ್ಟದೆ ಇರದು. ಇಡೀ ದೇಶವೇ ರಾಜಕೀಯ ವಾತಾವರಣದಿಂದ ತುಂಬಿ ಎವಾಗ ಅದರಲ್ಲಿ ಜೀವಿಸುವ ವಿದ್ಯಾರ್ಥಿಗಳು ಜ್ಞಾನವನ್ನು ಆರ್ಜಿಸಲು ಕುತೂಹಲದಲ್ಲಿರುವ ಮತ್ತು ಉತ್ಸಾಹ ಭರಿತರಾಗಿರುವ ಕಾಲದಲ್ಲಿ ರಾಜಕೀಯ ಕಾರ್ಯಗಳಿಂದ ದೂರವಾಗಿರಬೇಕೆಂದು ಹೇಳುವದರಲ್ಲಿ ಪ್ರಯೋಜನವಿಲ್ಲ. ಪರಕೀಯರ ಆಡಳಿತೆಯಲ್ಲಿರುವ ಈ ದೇಶದ ಯುವಕರು ತಮ್ಮ ವಿದ್ಯಾಭ್ಯಾಸದ ಸಮಯದಲ್ಲೇ ಸ್ವಾತಂತ್ರ್ಯದ ಬೆಲೆಯನ್ನೂ ಅದನ್ನು ಸಾಧಿಸುವ ವಿಧಾನವನ್ನೂ ಅರಿತುಕೊಳ್ಳದೆ ಇರುವದರಿಂದಲೇ ಅವರು ಬರೇ ಸೇವಾವೃತ್ತಿಗೆ ತಯಾರಾಗುತ್ತಿರುವದಾಗಿದೆ. ದಾಸ್ಯತ್ವದಲ್ಲಿ ಮುಳುಗಿ ನರಳುತ್ತಿರುವ ಹಿಂದೂ ಮಾತೆಯು ಬಿಡುಗಡೆ ಹೊಂದಬೇಕಾದರೆ ಭಾವೀ ಜನಾಂಗದ ಯುವಕರು ಮುಂದುಬರಬೇಕಾಗಿದೆ. ಆದರೆ ಅವರು ಮೇರೆ ಮೀರದೆ ಹಿರಿಯರು ಹೇಳಿದಂತೆ 'ಅನುಭವಶಾಲಿಗಳಾದ ಮತ್ತು ಸುರಿತ ಧುರೀಣರಾದ ಮುಂದಾಳುಗಳಲ್ಲಿ ಕಾರ್ಯವನ್ನು ನಡೆಸುವದು ಉತ್ತಮವಾಗಿದೆ. ಹೇಗೂ ಹಿಂದೂ ದೇಶದ ಸ್ವಾತಂತ್ರ್ಯಕ್ಕೆ ಎಲ್ಲರೂ ಹೋರಾಡುವ ಕಾಲವು ಬಂದೊದಗಿದೆ.

## ಗ್ರಾಮಗಳ ಪುನರುದ್ಧಾರ.

(ಕಳೆದ ವಾರದಿಂದ ಮುಂದುವರಿದದ್ದು)

ಗ್ರಾಮಸ್ಥರಿಗೆ ಸಾಧ್ಯವಾದ ಮಟ್ಟಿಗೂ ಬ್ಯಾಂಕುಗಳಿಂದುಂಟಾಗುವ ಪ್ರಯೋಜನಗಳನ್ನು ತಿಳಿಯ ಹೇಳಿ ಅವರನ್ನು ಪರಸ್ಪರ ಸಹಾಯಕರನ್ನಾಗಿ ಮಾಡಿ ಹಣಕ್ಕೆ ಬದಲಾಗಿ ದವಸವನ್ನು ಬಂಡವಾಳಕ್ಕೆ ಕೊಡುವಂತೆ ಬೋಧಿಸಿದರೆ ಸಾಧ್ಯವಾಗುತ್ತದೆಂದು ಬ್ಯಾಂಕುಗಳನ್ನು ಏರ್ಪಡಿಸಬೇಕು. ಹತ್ತು ಮುಂದಿನಿಂತಲೂ ಕಡಿಮೆ ಇಲ್ಲದಂತೆ ಗ್ರಾಮಸ್ಥರು ಸೇರಿ ಬೇಕಾದಷ್ಟು ರೈತನು ತನಗೆ ಚೈತನ್ಯವಿದ್ದಷ್ಟು ದವಸವನ್ನು ವರ್ಷಕೊಂದಾವರ್ತಿ ಸುಗ್ಗಿ ಕಾಲದಲ್ಲಿ ಕೊಡತಕ್ಕದ್ದು. ಹೀಗೆ ಕೂಡಿದ ದವಸವನ್ನೆಲ್ಲಾ ಗ್ರಾಮದಲ್ಲಿ ಒಂದು ಒಳ್ಳೇ ಕಣಜವನ್ನು ಮಾಡಿ ಅದರಲ್ಲಿ ಕೂಡಿಡಬೇಕು. ಗ್ರಾಮದಲ್ಲಿ ಬುದ್ಧಿವಂತರಾಗಿ ಇರುವ ಕೆಲವರನ್ನು ಅಂದರೆ 5 ರಿಂದ 9 ಜನರ ವರೆಗೆ ಪಂಚಾಯತರನ್ನಾಗಿ ನೇಮಿಸಿ ಕಣಜವನ್ನು ಅವರ ವಶದಲ್ಲಿ ಡತಕ್ಕದ್ದು. ಬ್ಯಾಂಕಿಗೆ ದವಸವನ್ನು ಕೊಡುವವರು ಮೆಂಬರರೆನ್ನಿಸಿಕೊಳ್ಳುತ್ತಾರೆ. ಈ ಮೆಂಬರುಗಳು ತಮಗೆ ಬೇಕಾದಷ್ಟು ದವಸವನ್ನು ಈ ಪಂಚಾಯಿತರಿಂದ ಸಾಲವಾಗಿ ಪಡೆಯಬಹುದು. ಹೀಗೆ ಪಡೆದ ದವಸವನ್ನು ಆರು ತಿಂಗಳೊಳಗಾಗಿ ಕೊಟ್ಟುಬಿಡುವದಾದರೆ 1 ಬಟ್ಟಿಗೆ (80 ಸೇರು) 1 ಬಟ್ಟಿ (20 ಸೇರು), ಬಡ್ಡಿ ಕೊಡಬೇಕು. ಸಾಲ ತೀರಿಸುವದಕ್ಕೆ ಮೂರು ತಿಂಗಳ ಮೇಲಾದರೆ ಬಟ್ಟಿಗೆ ½ ಬಟ್ಟಿ (10 ಸೇರು) ಬಡ್ಡಿ ಕೊಡಬೇಕು. ಇ... ವರ್ಷವರ್ಷ ದವಸವನ್ನು ಕೂಡಹಾಕುತ್ತ ಬಂದರೆ ಬ್ಯಾಂಕಿನ ಮೆಂಬರುಗಳೆಲ್ಲರಿಗೂ ಮತ್ತು ಕಷ್ಟಕಾಲದಲ್ಲಿ ... ಎಲ್ಲರಿಗೂ ವರ್ಷವರ್ಷಕ್ಕೆ ಜೀವನವಾಗುವಷ್ಟು ದವಸವನ್ನು ಒದಗಿಸಬಹುದು. ಮತ್ತು ದವಸದ ಬಂಡವಾಳವು ಅಧಿಕವಾದರೆ ಅದರಲ್ಲಿ ಕೆಲವು ಭಾಗವನ್ನು ಧಾರಣೆ ಹೆಚ್ಚಾಗಿರುವ ಕಾಲದಲ್ಲಿ ಮಾರಿ ಹಣ ಮಾಡಿಕೊಂಡು ಆ ಹಣವನ್ನು ಪೋಸ್ಟಾಫೀಸು ಅಥವ ಕೋಆಪರೇಟಿವ್ ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟು ಮೆಂಬರುಗಳಿಗೆ ತಮ್ಮ ಜಮೀನು ನಾಗುವಳಿ ಮಾಡಿಕೊಳ್ಳುವದಕ್ಕೂ, ಕಂದಾಯವನ್ನು ಕಟ್ಟುವದಕ್ಕೂ ಅದು ಮನೆ ಖರ್ಚಿಗೆ ಉಪಯೋಗಿಸಿಕೊಳ್ಳುವದಕ್ಕೂ ಒಂದು ರೂಪಾಯಿಗೆ ತಿಂಗಳಿಗೆ ಎರಡು ಕಾಸಿನಂತೆ ಬಡ್ಡಿ ಹಾಕಿ ಸಾಲ ಕೊಡಬಹುದು. ಸಾಲವಾಗಿ ಪಡೆದ ದವಸ ಅಥವ ಹಣವನ್ನು ಮುಂದೆ ಬರುವ ಬೆಳೆ ಕೆಲಸದೊಳಗಾಗಿ ತೀರಿಸಿಬಿಡಬೇಕು.

ಹೀಗೆ ಏರ್ಪಾಡಾದ ಬ್ಯಾಂಕುಗಳಲ್ಲಿ ಕೂಡಿಟ್ಟ ದವಸವು ಮಳೆ ಇಲ್ಲದೆ, ಬೆಳೆ ಆಗದೆ ಹೋದ ಕಾಲದಲ್ಲಿ, ರೈತರು ಕಾಮವಲಾಗಿ ನಿಂತು ಕ್ಷಾಮ ಬಾಧೆಗೆ ಸಿಕ್ಕದಂತೆ ಕಾಪಾಡುವದರಲ್ಲಿ ಸಂದೇಹವಿಲ್ಲ. ಈ ಬ್ಯಾಂಕುಗಳು ಅಭಿವೃದ್ಧಿ ಬಂದು ದವಸ-ಮಾರಿ ಬಂದ ಹಣವನ್ನು ಧಾರಾಳವಾಗಿ ಮಾಡಿಕೊಂಡರೆ ಆ ಹಣವು ಮೆಂಬರುಗಳಿಗೆ ಸಮಯಕ್ಕೆ ಒದಗುವದು ಅಲ್ಲದೆ, ಗ್ರಾಮದಲ್ಲಿ ಪಾಠಶಾಲೆಗಳನ್ನು ಸ್ಥಾಪಿಸುವದಕ್ಕೂ, ಗ್ರಾಮದ ಆರೋಗ್ಯಾಭಿವೃದ್ಧಿಗೆ ಆಗಬೇಕಾದ ಏರ್ಪಾಡುಗಳನ್ನು ಮಾಡಿಕೊಳ್ಳುವದಕ್ಕೂ ಮತ್ತು ಅನೇಕ ವಿಧವಾಗಿ ಗ್ರಾಮವನ್ನು ಅಭಿವೃದ್ಧಿಗೆ ತಂದುಕೊಳ್ಳುವದಕ್ಕೆ ಉಪಯೋಗವಾಗುತ್ತದೆ. ಇದರಿಂದ ನಾಗರೀಕತೆಯು ಬೆಳೆದು ರೈತರು ಬುದ್ಧಿವಂತರಾಗಿ ಸುಖ ಜೀವನದಿಂದಿರುವದಕ್ಕೂ ಕಾರಣವಾಗುತ್ತದೆ. ಇಷ್ಟು ಅನುಕೂಲಗಳನ್ನು ಒದಗಿಸಿಕೊಡತಕ್ಕ ಈ ಬ್ಯಾಂಕುಗಳನ್ನು ನಮ್ಮ ದೇಶದಲ್ಲಿ ಎಲ್ಲಾ ಗ್ರಾಮಗಳಲ್ಲಿ ಯೂ ಸ್ಥಾಪಿಸಿಕೊಳ್ಳುವಂತೆ ಜಮೀನುದಾರರ ಸಂಘವೂ, ರೈತರ ಮುಂದಾಳುಗಳೂ ಸಾಹಸ ಪಡಬೇಕಾಗಿದೆ.

ನಮ್ಮ ಗ್ರಾಮವಾಸಿಗಳು ಒಗ್ಗಟ್ಟಾಗಿ ಕೆಲಸ ಮಾಡುವದರಲ್ಲಿ ಬಹಳ ಹಿಂದು ಬಿದ್ದಿದ್ದಾರೆ. ಇದಕ್ಕೆ ಅವರ ಮಂದಬುದ್ಧಿಯೇ ಕಾರಣ. ಆದಕಾರಣ ಜನಸಮುದಾಯದ ಹಿತಕ್ಕಾಗಿ ಮಾಡಬೇಕಾದ ಕೆಲಸಗಳನ್ನು ಅನುಸರಿಸಲು ಒಗ್ಗಟ್ಟಿನ ಬಲದ ರಹಸ್ಯವನ್ನು ಅವರಿಗೆ ಕಲಿಸಬೇಕು. ಈ ಉದ್ದೇಶದ ಫಲಿತಾಂಶವು ಒದಗಬೇಕಾದರೆ ಜನರನ್ನು ಪ್ರೋತ್ಸಾಹಿಸಲು ವಿಶೇಷ ಶ್ರದ್ಧೆ ಇರುವ ದೇಶಾಭಿಮಾನಿಗಳು ದೇಶದ ಅಭ್ಯುದಯವನ್ನು ಕೋರುವ ದೇಶವತ್ಸಲರು ಎಲ್ಲಾ ಗ್ರಾಮಗಳಲ್ಲಿಯೂ ಈ ಪರಸ್ಪರ ಸಹಾಯ ಶಿಕ್ಷಣವನ್ನು ರುಹಿಸುವ ... ಶಾಲೆಗಳಲ್ಲೂ ಅಲ್ಲಲ್ಲಿರುವ ಜಮೀನ್ದಾರರ ಸಂಘಗಳು, ಕೂಲಿಗರ ಸಂಘಗಳು, ಸಹಕಾರ ಸಂಘಗಳು ತಮ್ಮ ಪ್ರತಿನಿಧಿಗಳಿಗೆ ಯೋಗ್ಯವಾದ ವೇತನವನ್ನಿತ್ತು ಈ ಸಹಕಾರವನ್ನು ಹರಡಲು ಪ್ರಚಾರಕರನ್ನು ಊರಿಂದೂರಿಗೂ ಗ್ರಾಮದಿಂದ ಗ್ರಾಮಕ್ಕೂ ಕಳುಹಿಸಬೇಕು.

ಸಜೀವ

## ಮಹಾತ್ಮಗಾಂಧಿಯವರ ಸ್ವಾತ್ಮಚರಿತ್ರೆ.

೫ನೇ ಭಾಗದಲ್ಲಿ ೬ನೇ ಪ್ರಕರಣ

### ಆಶ್ರಮ ಸ್ಥಾಪನೆ

ಕುಂಭಮೇಳಕ್ಕೆ ಹೋಗುವುದಕ್ಕಿಂತ ಮುಂಚೆ ನಾನು ಒಮ್ಮೆ ಹರಿದ್ವಾರಕ್ಕೆ ಹೋಗಿದ್ದೆನು.

ಸತ್ಯಾಗ್ರಹಾಶ್ರಮವು ೧೯೧೫ನೆಯ ಇಸವಿ ಮೇ ೨೫ರಲ್ಲಿ ಸ್ಥಾಪಿತವಾಯಿತು. ನಾನು ಹರಿದ್ವಾರದಲ್ಲಿ ನೆಲೆಸಬೇಕೆಂದು ಶ್ರದ್ಧಾನಂದಜಿಯವರಿಗೆ ಇಷ್ಟವಿದ್ದಿತು. ಕಲ್ಕತ್ತೆಯಲ್ಲಿದ್ದ ನನ್ನ ಮಿತ್ರರಲ್ಲಿ ಕೆಲವರು ನಾನು ವೈದ್ಯನಾಥ ಧಾಮದಲ್ಲಿ ನಿಲ್ಲಬೇಕೆಂದು ಸೂಚಿಸಿದರು. ನಾನು ರಾಜಕೋಟೆಯನ್ನು ಆರಿಸಬೇಕೆಂದು ಇತರರು ಆಗ್ರಹಪೂರ್ವಕವಾಗಿ ಸಲಹೆ ಕೊಟ್ಟರು. ಆದರೆ ನಾನು ಅಹಮದಾಬಾದಿನ ಮೇಲೆ ಪ್ರಯಾಣಮಾಡುತ್ತಿದ್ದಾಗ ಅನೇಕ ಮಿತ್ರರು ನಾನು ಅಲ್ಲಿಯೇ ನೆಲೆಸಬೇಕೆಂದು ಒತ್ತಾಯ ಮಾಡಿ ಆಶ್ರಮದ ವೆಚ್ಚವನ್ನು ತಾವು ಕೂಡಿಸಿಕೊಡುವುದಲ್ಲದೆ ಇರಲು ಮನೆಯನ್ನೂ ಕೊಡಿಸುವೆವೆಂದು ಹೇಳಿದರು.

ನನಗೂ ಅಹಮದಾಬಾದಿನ ಮೇಲೆಯೇ ಇಷ್ಟವಿದ್ದಿತು. ನಾನು ಗುಜರಾತಿಯವನಾದುದರಿಂದ ಗುಜರಾತಿ ಭಾಷೆಯ ಮೂಲಕವೇ ದೇಶಕ್ಕೆ ಹೆಚ್ಚು ಸೇವೆಯನ್ನು ಮಾಡಲು ನನಗೆ ಸಾಧ್ಯವೆಂದು ನಾನು ಎಣಿಸಿದ್ದೆನು. ಇದಲ್ಲದೆ ಅಹಮದಾಬಾದು ಕೈಮಗ್ಗದ ಕೈಗಾರಿಕೆಯ ಪುರಾತನ ಕೇಂದ್ರವಾದುದರಿಂದ ಮನೆ ಕೈಗಾರಿಕೆಯ ಮತ್ತು ಕೈನೂಲಿಗೆಯ ಪುನರುಜ್ಜೀವನಕ್ಕೆ ಅದೇ ಅತ್ಯನುಕೂಲವಾದ ಕ್ಷೇತ್ರವಾಗಬಹುದೆಂಬ ನಿರೀಕ್ಷಣೆಯಿದ್ದಿತು. ಇವೂ ಅಲ್ಲದೆ ಆ ಪಟ್ಟಣವು ಗುಜರಾತಿನ ರಾಜಧಾನಿಯಾದುದರಿಂದ ಧನಿಕ ಪ್ರಜೆಗಳ ಸಹಾಯವು ಇತರ ಸ್ಥಳಗಳಿಗಿಂತ ಇಲ್ಲಿ ಹೆಚ್ಚಾಗಿ ದೊರಕುವುದೆಂಬ ಆಸೆಯಿದ್ದಿತು.

ಅಹಮದಾಬಾದಿನ ಮಿತ್ರರೊಡನೆ ನಡೆದ ವಿಷಯಗಳಲ್ಲಿ ಅಸ್ಪೃಶ್ಯತೆಯೂ ಸಹಜವಾಗಿ ಒಂದಾಗಿದ್ದಿತು. ಅವಕಾಶ ದೊರಕಿದರೆ ಯಾವನಾದರೂ ಯೋಗ್ಯನಾದ ಅಂತ್ಯಜನನ್ನು ಆಶ್ರಮಕ್ಕೆ ಸೇರಿಸುವೆನೆಂದು ಅವರಿಗೆ ಸ್ಪಷ್ಟವಾಗಿ ತಿಳಿಸಿದೆನು.

'ನಿಮ್ಮ ನಿಯಮಗಳನ್ನು ಪಾಲಿಸುವ ಅಂತ್ಯಜನು ದೊರೆಯುವುದೆಲ್ಲಿ?' ಎಂದೊಬ್ಬರು ವೈಷ್ಣವ ಮಿತ್ರರು ಆತ್ಮವಿಶ್ವಾಸದಿಂದ ಕೇಳಿದರು.

ಕಟ್ಟಕಡೆಗೆ ನಾನು ಆಶ್ರಮವನ್ನು ಅಹಮದಾಬಾದಿನಲ್ಲಿ ಸ್ಥಾಪಿಸಲು ನಿಶ್ಚಯಿಸಿದೆನು.

ವಾಸಸ್ಥಳವು ದೊರಕುವ ವಿಷಯದಲ್ಲಿ ಅಹಮದಾಬಾದಿನಲ್ಲಿದ್ದ ಬ್ಯಾರಿಸ್ಟರರಾದ ಶ್ರೀ ಜೀವನಲಾಲ ಮೆಹತಾರವರು ಎಲ್ಲರಿಗಿಂತಲೂ ಹೆಚ್ಚಾಗಿ ಸಹಾಯಿತ್ತರು. ಅವರು ಕೋಚರಬ (ಅಹಮದಾಬಾದಿನ ಒಂದು ಭಾಗ)ದಲ್ಲಿದ್ದ ತಮ್ಮ ಬಂಗಲೆಯನ್ನು ಬಾಡಿಗೆಗೆ ಕೊಡಲು ಒಪ್ಪಿದರು. ನಾವು ಅದನ್ನು ತೆಗೆದುಕೊಳ್ಳಲು ನಿಶ್ಚಯಿಸಿದೆವು.

ನಾವು ಮೊಟ್ಟಮೊದಲು ನಿರ್ಧರಿಸಬೇಕಾದ ವಿಷಯವು ಆಶ್ರಮಕ್ಕೆ ಇಡಬೇಕಾದ ಹೆಸರಾಗಿದ್ದಿತು. ನಾನು ನನ್ನ ಮಿತ್ರರ ಸಲಹೆಯನ್ನು ಕೇಳಿದೆನು. ಅವರು ಸೂಚಿಸಿದ ಹೆಸರುಗಳಲ್ಲಿ 'ಸೇವಾಶ್ರಮ', 'ತಪೋವನ' ಮುಂತಾದುವು ಇದ್ದುವು. 'ಸೇವಾಶ್ರಮ' ಎಂಬ ಹೆಸರೇನೋ ನನ್ನ ಇಷ್ಟಕ್ಕೆ ಬಂದಿತು. ಆದರೆ ಅದರಿಂದ ಯಾವ ವಿಧದ ಸೇವೆಯೆಂಬುದು ಸ್ಪಷ್ಟವಾಗುತ್ತಿರಲಿಲ್ಲ. ತಪೋವನ ಎಂಬ ಹೆಸರು ಅಹಂಕಾರವುಳ್ಳದಾಗಿ ತೋರಿತು. ಏಕೆಂದರೆ ತಪಸ್ಸು ನಮಗೆ ಪ್ರಿಯವಾಗಿದ್ದರೂ ನಾವು ತಪಸ್ವಿಗಳೆಂದು ಹೇಳಿಕೊಳ್ಳುವಂತಿರಲಿಲ್ಲ. ಸತ್ಯೋಪಾಸನೆಯೇ ನಮ್ಮ ಮತವಾಗಿದ್ದಿತು. ಸತ್ಯಶೋಧನೆಯೂ ಸತ್ಯಾಗ್ರಹವೂ ನಮ್ಮ ಉದ್ಯೋಗವಾಗಿದ್ದಿತು. ದಕ್ಷಿಣ ಆಫ್ರಿಕದಲ್ಲಿ ನಾನು ಪ್ರಯೋಗಿಸಿದ ಪದ್ಧತಿಯನ್ನು ಭರತಖಂಡಕ್ಕೆ ಪರಿಚಯಮಾಡಿಕೊಳ್ಳಬೇಕೆಂದಿದ್ದೆ. ಅದನ್ನು ನಡೆಸುವುದು ಎಷ್ಟು ದೂರ ಸಾಧ್ಯವೆಂಬುದನ್ನು ಪರೀಕ್ಷಿಸಬೇಕೆಂಬ ಇಚ್ಛೆಯು ನನಗಿದ್ದಿತು. ಆದುದರಿಂದ ನನ್ನ ಸಂಗಡಿಗರೂ ನಾನೂ ಸತ್ಯಾಗ್ರಹಾಶ್ರಮ ಎಂಬ ಹೆಸರನ್ನು ಆರಿಸಿದೆವು. ಏಕೆಂದರೆ ಆ ಹೆಸರಿನಲ್ಲಿ ನಮ್ಮ ಧ್ಯೇಯವೂ ಸೇವಾಪದ್ಧತಿಯೂ ಅಡಕವಾಗಿದ್ದುವು.

ಆಶ್ರಮದ ಆಡಳಿತಕ್ಕೆ ನಿಯಮಸಂಗ್ರಹವೊಂದು ಅವಶ್ಯಕವಾಗಿದ್ದಿತು. ಆದುದರಿಂದ ಅವುಗಳನ್ನು ಸಿದ್ಧಪಡಿಸಿ ಮಿತ್ರರ ಅಭಿಪ್ರಾಯಕ್ಕಾಗಿ ಕಳುಹಿಕೊಟ್ಟದಾಯಿತು. ನನಗೆ ತಲುಪಿದ ಅನೇಕ ಅಭಿಪ್ರಾಯಗಳಲ್ಲಿ ಸರ್ ಗುರುದಾಸ ಬ್ಯಾನರ್ಜಿಯವರು ಕೊಟ್ಟುದು ಇನ್ನೂ ನನ್ನ ನೆನಪಿನಲ್ಲಿದೆ. ಅವರು ನಿಯಮಗಳನ್ನೇನೋ ಒಪ್ಪಿದರು. ಆದರೆ ವ್ರತಗಳಲ್ಲಿ ನಮ್ರತೆಗೂ ಸ್ಥಾನ ಕೊಡಬೇಕೆಂದು ಸೂಚಿಸಿದರು. ಏಕೆಂದರೆ ಇಂದಿನ ತರುಣರಲ್ಲಿ ನಮ್ರತೆಯು ಇರಲೇ ಇಲ್ಲವೆಂದು ಅವರು ತಿಳಿದುಕೊಂಡಿದ್ದರು. ಈ ಕುಂದು ನನ್ನ ಗೋಚರಕ್ಕೆ ಬಂದಿದ್ದಿತಾದರೂ ನಮ್ರತೆಯನ್ನು ಒಂದು ವ್ರತವಾಗಿ ಮಾಡಿದರೆ ಅದು ನಮ್ರತೆಯಾಗಿ ನಿಲ್ಲದೆಂದು ನಾನು ಶಂಕಿಸಿದೆನು. ನಮ್ರತೆಯ ನಿಜವಾದ ಅರ್ಥವೇನೆಂದರೆ ನಿರಹಂಕಾರ. ಅಹಂಕಾರನಾಶವೆಂದರೆ ಮೋಕ್ಷ. ಮೋಕ್ಷವೇ ಒಂದು ವ್ರತವಾಗಲು ಸಾಧ್ಯವಿಲ್ಲ. ಆದರೆ ಅದರ ಸಾಧನೆಗಾಗಿ ಇತರ ವ್ರತಗಳು ಅವಶ್ಯಕವಿರಬಹುದು. ಮುಮುಕ್ಷುವಿನ ಅಥವಾ ಸೇವಕನ ಕಾರ್ಯಗಳಲ್ಲಿ ನಮ್ರತೆಯು ಅಥವಾ ನಿರಭಿಮಾನವು ಇರದಿದ್ದರೆ ಅವನಿಗೆ ಮೋಕ್ಷದ ಆಸೆಯಿಲ್ಲ, ಸೇವೆ ಮಾಡಬೇಕೆಂಬ ಇಚ್ಛೆಯೂ ಇಲ್ಲ. ನಮ್ರತೆಯಿಲ್ಲದ ಸೇವೆಯು ಸ್ವಾರ್ಥಪರತೆ ಅಹಂಕಾರ.

ಈ ಸಮಯದಲ್ಲಿ ನಮ್ಮ ಸಂಗಡದಲ್ಲಿ ಹದಿಮೂರು ಜನ ತಮಿಳರಿದ್ದರು. ಐದುಮಂದಿ ತಮಿಳು ಹುಡುಗರು ದಕ್ಷಿಣ ಆಫ್ರಿಕದಿಂದ ನನ್ನೊಡನೆ ಬಂದಿದ್ದರು. ಮಿಕ್ಕವರು ನಾಡಿನ ಬೇರೆ ಬೇರೆ ಕಡೆಯಿಂದ ಬಂದು ಸೇರಿದ್ದರು. ಒಟ್ಟು ನಾವು ಗಂಡಸರೂ ಹೆಂಗಸರೂ ಸುಮಾರು ಇಪ್ಪತ್ತೈದು ಮಂದಿ ಇದ್ದೆವು.

ಆಶ್ರಮ ಸ್ಥಾಪನೆಯಾದುದು ಹೀಗೆ. ಎಲ್ಲರೂ ಒಂದೇ ಅಡಿಗೆ ಮನೆಯಲ್ಲಿ ಊಟಮಾಡುತ್ತಿದ್ದೆವು. ಎಲ್ಲರೂ ಒಂದು ಕುಟುಂಬದಂತಿರಲು ಯತ್ನಿಸುತ್ತಿದ್ದೆವು.

---

## ರಾಗ ದ್ವೇಷಾದಿಗಳಿಂದ ದೇಹಾರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮ.

ಕಾಮ ಕ್ರೋಧ ಲೋಭ ಮೋಹ, ಮದ, ಮಾತ್ಸರ್ಯ ಇವುಗಳನ್ನು ಪೂರ್ವಿಕರು ಅರಿಷಡ್ವರ್ಗಗಳೆಂದು ಕರೆದಿದ್ದಾರೆ. ಎಂದರೆ ಈ ಆರೂ ನಮಗೆ ಶತ್ರುಸ್ವರೂಪವಾದುವೆಂದು ಅರ್ಥ! ಈ ಶತ್ರುಗಳು ನಮ್ಮ ಆತ್ಮಾಭಿವೃದ್ಧಿಯನ್ನು ಕುಂಠಿತಗೊಳಿಸಿ ನಮಗೆ ನರಕವನ್ನು ಉಂಟುಮಾಡುವುವೆಂದು ಮಾತ್ರ ತಿಳಿಯುವಂತಿದೆ. ಇವು ನಮ್ಮ ಇಹಪರಗಳೆರಡನ್ನೂ ಕೆಡಿಸಿ ನಮ್ಮ ಜೀವನವನ್ನೇ ಅಸಾಧ್ಯಕಗೊಳಿಸುವುವೆಂಬುದಕ್ಕೆ ಸಂಶಯವಿಲ್ಲ. ಆದುದರಿಂದ ಈ ಶತ್ರುಗಳನ್ನು ಸಾಧ್ಯವಿದ್ದಷ್ಟು ದೂರದಲ್ಲಿ ಇಟ್ಟಿರುವುದು ಮೇಲು! ನಮಗೆ ಲೋಕದಲ್ಲಿ ಶತ್ರುಗಳು ಉಂಟಾಗಬೇಕಾಗಿದ್ದರೂ ನಮ್ಮೊಳಗೇ ಅಡಗಿಕೊಂಡಿರುವ ಈ ವೈರಿಗಳ ಸಹಾಯವಿಲ್ಲದೆ ಬೇರಿಲ್ಲ. ನಮ್ಮೊಳಗೇ ಅವ್ಯಕ್ತವಾಗಿದ್ದು ಚಿಕಿತ್ಸೆಗೊಳಪಡಿಸುವ ಈ ದುಷ್ಟಶತ್ರುಗಳನ್ನು ಧ್ವಂಸಗೊಳಿಸಿದ್ದಾದರೆ, ಹೊರಗಿನ ಶತ್ರುಗಳು ಉಂಟಾಗುವ ಸಂಭವವಿಲ್ಲ.

ಇದಲ್ಲದೆ ಕೋಪ ಅಸೂಯೆ ದ್ವೇಷ, ಮತ್ಸರ ಕಾಮ ಮುಂತಾದ ವೃತ್ತಿಗಳು ನಮ್ಮಲ್ಲಿ ಉಲ್ಬಣಗೊಂಡಿರುವಾಗ ನಮ್ಮ ಆರೋಗ್ಯಕ್ಕೂ ಕುಂದುಂಟಾಗದಿರಲು ಸಾಧ್ಯವಿಲ್ಲ. ವ್ಯಸನದಿಂದುಂಟಾಗುವ ಇತರ ಎಲ್ಲಾ ವಿಕಾರಗಳಿಂದ ಉಂಟಾಗುವ ಪರಿಣಾಮಕ್ಕಿಂತಲೂ, ಕೋಪವಿಕಾರವು ಉದ್ರೇಕವಾದಾಗ ದೇಹದ ಮೇಲುಂಟಾಗುವ ಪರಿಣಾಮವು ಬಹು ಭಯಂಕರವಾಗಿರುವುದು. ಕೋಪವು ಅತಿಶಯವಾಗಿ ಉಲ್ಬಣಗೊಂಡಿತೆಂದರೆ, ದೇಹದ ಅಂಗಾಂಗಗಳು ಮಾಡುವ ಸ್ವಾಭಾವಿಕ ಕಾರ್ಯಗಳೇ ವ್ಯತ್ಯಾಸಗೊಳ್ಳುವುವು. ಕೋಪದ ಕಾಟದ ಪರಿಣಾಮವು ಮೆದುಳು ಮತ್ತು ಹೃದಯ ಇವುಗಳ ಮೇಲೆ ಎಲ್ಲಾ ಅಂಗಗಳಿಗಿಂತಲೂ ಹೆಚ್ಚಾಗಿ ಆಗುವುದೆಂದು ಪಾಶ್ಚಾತ್ಯ ವೈದ್ಯಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಕೋಪಾಧಿಕ್ಯದಿಂದ ಜ್ವರವೂ ಹೃದಯ ಮೆದುಳು ಮುಂತಾದ ಸೂಕ್ಷ್ಮಾಂಗಗಳ ಸಹಜಕಾರ್ಯಗಳಿಗೆ ವಿಘ್ನವೂ ಅನೇಕ ವೇಳೆಗಳಲ್ಲಿ ಒಬ್ಬಿದ ಮೂರ್ಛೆಯೂ ಉಂಟಾಗುವುದೆಂದು ಅವರ ಮತ. ಅಂತಹ ಕೋಪಾಕ್ರಾಂತ ಸ್ವಭಾವವು ಮೇಲಿಂದ ಮೇಲೆ ಉಂಟಾಗುತ್ತಿದ್ದರೆ ಅದರಿಂದ ಆರೋಗ್ಯದಲ್ಲಿ ಅತಿಸಾರ ನರಗಳ ದುರ್ಬಲತೆ ಕ್ಷಯ ಪಾರ್ಶ್ವವಾಯು ಮುಂತಾದ ರೋಗಗಳಿಗೆ ಅವಕಾಶವಾಗುವುದೆಂದೂ ಅವರ ಅಭಿಪ್ರಾಯ ಇದೆ. ಅತಿಯ ಕೋಪದಿಂದ ಕಾಲದಲ್ಲಿ ಕೂಸಿಗೆ ತಾಯಿಯು ಕೊಡುವ ಮೊಲೆಹಾಲು ಮಗುವಿಗೆ ಅನಾರೋಗ್ಯಕರವಾಗಿರುವುದೆಂದು ಹೇಳುವರು. ಅಷ್ಟು ಮಾತ್ರವಲ್ಲ—ರಾಗದ್ವೇಷಾದಿಗಳಿಂದ ಯುಕ್ತಳಾಗಿ ಕೊಡುವ ದಾದಿಯ ಅಥವ ತಾಯಿಯ ಮೊಲೆಹಾಲು ಜೀವ ವಿಷಮಯವೇ ಆಗಿ ಮಕ್ಕಳಿಗೆ ತಕ್ಷಣ ಮರಣವನ್ನುಂಟುಮಾಡಿದ ಉದಾಹರಣೆಯೂ ಉಂಟೆಂದು ಪ್ರೊಫೆಸರ್ ಬಾಯ್ಡ್ ಲೇಸಾರ್ಡ್ ಎಂಬ ವೈದ್ಯರು ಅಭಿಪ್ರಾಯಪಟ್ಟಿದ್ದಾರೆ. ಕೋಪಾಧಿಕ್ಯದಿಂದ ತನ್ನ ಬಾಯಲ್ಲಿನ ಜೊಲ್ಲು ಸಹ ವಿಷಪ್ರಾಯವಾಗುವುದೆಂದೂ ಅದನ್ನು ನುಂಗುವುದರಿಂದಲೇ ಅನಾರೋಗ್ಯವು ಉಂಟಾಗುವುದೆಂದೂ ಹೇಳಿಕೆಯುಂಟು. ಕೆಲವು ಪ್ರಾಣಿಗಳು ಸಾಮಾನ್ಯಕಾಲದಲ್ಲಿ ಕಚ್ಚಿದುದರಿಂದ ಉಂಟಾದ ಗಾಯಗಳು ವಾಸಿಯಾಗುವಷ್ಟು ಸುಲಭವಾಗಿಯೂ ಶೀಘ್ರವಾಗಿಯೂ, ಅವು ಕೋಪಾಕ್ರಾಂತವಾಗಿದ್ದಾಗ ಕಚ್ಚಿದುದರಿಂದ ಉಂಟಾಗುವ ಗಾಯಗಳು ವಾಸಿಯಾಗುವುದಿಲ್ಲವೆಂದು ಅವರು ಹೇಳುತ್ತಾರೆ.

ಕೋಪವು ಉದ್ರೇಕವಾದಾಗ ಮನುಷ್ಯನು ಕೇವಲ ಹುಚ್ಚನಂತೆಯೇ ವರ್ತಿಸಿ, ಏನೇನು ದುಷ್ಕಾರ್ಯಗಳನ್ನು ಮಾಡುವನೆಂದು ಹೇಳಸಾಧ್ಯವಿಲ್ಲ. ಕೋಪಾಧಿಕ್ಯದಿಂದ ಇತರರ ಪ್ರಾಣ ತೆಗೆಯಬಹುದು. ಅಥವ ತನ್ನ ಪ್ರಾಣವನ್ನೇ ತೆಗೆದುಕೊಳ್ಳಬಹುದು. ಬಾವಿಗೆ ಬಿದ್ದು ಆತ್ಮಹತ್ಯ ಮಾಡಿಕೊಳ್ಳಬಹುದು. ತಾಯಿ-ತಂದೆ-ಮಕ್ಕಳು ಮುಂತಾದವರನ್ನು ಕೊಂದುಬಿಡಲೂಬಹುದು. ಅಥವ ಹೇಳಲಾಗದ ಅನೇಕ ಅಕಾರ್ಯಗಳನ್ನು ಮಾಡಿಬಿಡಬಹುದು. ಕೋಪಿಯ ಪ್ರಾಣವು ಸದಾ ಅವನ ಕೈಯಲ್ಲೇ ಇರುತ್ತದೆನ್ನಲು ಅಡ್ಡಿಯಿಲ್ಲ. ಹುಚ್ಚನ ಕೈ ಕತ್ತಿಯಂತೆ, ಯಾವ ಹೊತ್ತಿನಲ್ಲಿ ಅದು ಅವನಿಗೇ ಮೃತ್ಯುವಾಗುವುದೆಂದು ಹೇಳಲಾಗದು. ಮೇಲಿಂದ ಮೇಲೆ ಕೋಪಗೊಳ್ಳುತ್ತ, ಪುನಃ ಪುನಃ ಆರೋಗ್ಯರಕ್ಷಣೆಗಾಗಿ ಔಷಧಿ ಗುಳಿಗೆಗಳನ್ನು ಸೇವಿಸುತ್ತಿರುವವನು ಬುದ್ಧಿವಂತರ ತರಗತಿಯಲ್ಲಿ ಸೇರಿಸಲು ಶಕ್ಯವಿಲ್ಲ. ಒಂದೆರಡು ಸಾರಿಯ ಕೋಪದಿಂದಲೂ, ನಮ್ಮ ಆಯುಷ್ಯದ ಕೆಲಭಾಗವು ವ್ಯರ್ಥವಾಗುವುದೆಂದರೆ ಅದರಲ್ಲಿ ಅತಿಶಯವೇನೂ ಇಲ್ಲ.

ಕೋಪದಿಂದ ಉಂಟಾಗುವ ದುಷ್ಪರಿಣಾಮಗಳನ್ನು ಕುರಿತು ವಿದುರನೀತಿಯಲ್ಲಿ—

(ಭಾಮಿನಿ ಷಟ್ಪದಿ)

ಕೋಪವೆಂಬುದನರ್ಥಸಾಧನ
ಕೋಪವೇ ಸಂಸಾರ ಬಂಧನ
ಕೋಪದಿಂದುರುತರದ ಸುಕೃತವು ಲಯವನೈದುವುದು
ಕೋಪವನು ವರ್ಜಿಸಲು ಬೇಹುದು
ಕೋಪವುಳ್ಳವನಾವನಾಗಲಿ
ಕಾಪುರುಷನಿದರಕೆ ಚಿಕಿತ್ಸೆಯದಾವುದು ವಿದುರ!

ಎಂದು ಹೇಳಿದೆ.

ಆದರೂ ಸಂಸಾರ ಯಾತ್ರೆಯಲ್ಲಿ ಕೋಪ ರೋಷಾದಿಗಳು ಬಾರದಂತೆ ಪ್ರಯಾಣ ಮಾಡಿಕೊಂಡು ಹೋಗುವುದು ಸುಲಭದ ಕೆಲಸವಲ್ಲ. ಆದರೆ, ಪರರ ಅಕಾರ್ಯಕ್ಕಾಗಿ ಪ್ರಾಪ್ತವಾದ ಕೋಪವು ಕ್ಷಣಕಾಲ ಮಾತ್ರವಿದ್ದು, ಆ ಕಾರ್ಯವನ್ನು ಕ್ರಮಗೊಳಿಸಿ ಉತ್ತರಕ್ಷಣದಲ್ಲಿಯೇ ಮಾಯವಾಗುವುದಾದರೆ ಅದರಿಂದ ಹೆಚ್ಚು ದುಷ್ಪರಿಣಾಮವಾಗಲಾರದು. 'ಉತ್ತಮಸ್ಯ ಕ್ಷಣಂ ಕೋಪಃ' ಎಂಬುದನ್ನು ಮರೆಯದೆ ಸರ್ವರೂ ದೀರ್ಘಕೋಪವನ್ನೂ—ದೀರ್ಘದ್ವೇಷವನ್ನೂ ನೀಗಿದರೆ ಇಹದಲ್ಲಿ ಆರೋಗ್ಯ ಭಾಗ್ಯ ಮನಶ್ಶಾಂತಿಗಳನ್ನೂ ಪರದಲ್ಲಿ ಸದ್ಗತಿಯನ್ನೂ ಗಳಿಸಿಕೊಳ್ಳಬಹುದು.

'ಸುಬೋಧ.

---

## ಪ್ರಪಂಚದ ವಿಚಿತ್ರ ಮಕ್ಕಳು

ಸ್ಲೋವೇಕಿಯದಲ್ಲಿ ಒಬ್ಬ ಐದು ವರ್ಷದ ಹುಡುಗನು ಗಣಿತದಲ್ಲಿ ಅದ್ಭುತ ನೈಪುಣ್ಯವನ್ನು ಪ್ರದರ್ಶಿಸುತ್ತಿರುವನು. ಇವನು ಶಾಲೆಗೆ ಹೋಗುವುದಕ್ಕಿಂತಲೂ ಮುಂಚಿನಿಂದ ಮಗ್ಗಿ ಕೋಷ್ಟಕಗಳಲ್ಲಿ ವಿಚಿತ್ರ ಪ್ರವೀಣತೆಯನ್ನು ಹೊಂದಿರುವನು. ಇವನನ್ನು ಕ್ರಿಸ್ತನ ಜನನಾನಂತರ ಈವರೆಗೆ ಎಷ್ಟು ದಿನಗಳಾದುವೆಂದು ಒಮ್ಮೆ ಕೇಳಿದಾಗ ಸ್ವಲ್ಪವೂ ವಿಳಂಬಮಾಡದೆ ಸರಿಯಾದ ಉತ್ತರವನ್ನು ಕೊಟ್ಟನು. ಯಾರ ಜನ್ಮದಿನವನ್ನು ಕೊಟ್ಟರೂ ಅವನು ಹುಟ್ಟಿ ಎಷ್ಟು ದಿನ ಎಷ್ಟು ನಿಮಿಷವಾಯಿತೆಂದು ತತ್‌ಕ್ಷಣವೇ ಹೇಳುವನು. ಇವನ ತಲೆಯು ಬಹು ದೊಡ್ಡದಾಗಿದ್ದು ಅದಕ್ಕೆ ಸಾಮಾನ್ಯ ಗಾತ್ರದ ದೊಡ್ಡವರ ಹ್ಯಾಟು ಸಣ್ಣದಾಗುತ್ತದೆ. ಅಮೇರಿಕದ ಒಬ್ಬ 8 ವರ್ಷದ ಹುಡುಗಿಯು 8 ಭಾಷೆಗಳಲ್ಲಿ ಮಾತನಾಡಬಲ್ಲವಳಾಗಿದ್ದು ಈಗಾಗಲೇ 3 ಪ್ರಬಂಧ ಪುಸ್ತಕಗಳನ್ನು ಬರೆದಿರುವಳು. ಇವಳು 3 ವರ್ಷ ಪ್ರಾಯದಲ್ಲಿ ಟೈಪ್‌ರೈಟರನ್ನು ಉಪಯೋಗಿಸಲಿಕ್ಕೂ 4 ವರ್ಷ ಪ್ರಾಯದಲ್ಲಿ ಎಸ್ಪರಾಂಟೋ ಮತ್ತು ಫ್ರೆಂಚ ಭಾಷೆಗಳಲ್ಲಿ ಮಾತನಾಡಲಿಕ್ಕೂ ಕಲಿತಿದ್ದು ಕವಿತೆಗಳನ್ನು ರಚಿಸಲು ಆರಂಭಿಸಿದ್ದಳು. ಲಂಡನಿನ ಒಂದು ಶತಮಾನದ ಹಿಂದಿನ ವರ್ತಮಾನ ಪತ್ರಿಕೆಯಿಂದ ಗೋಟಿಂಜನ್ ಯೂನಿವರ್ಸಿಟಿಯಲ್ಲಿ ಆಗ 10½ ವರ್ಷ ಪ್ರಾಯದ ವಿಚಿತ್ರ ಹುಡುಗನೊಬ್ಬನಿದ್ದು ಅವನು 8 ವರ್ಷ ಪ್ರಾಯದಲ್ಲಿ ಗ್ರೀಕ್ ಲೇಟಿನ್ ಫ್ರೆಂಚ್, ಇಂಗ್ಲಿಷ್, ಮತ್ತು ಇಟೇಲಿಯನ್ ಭಾಷೆಗಳನ್ನು ಬಲ್ಲವನಾಗಿದ್ದನಲ್ಲದೆ ಇನೀಡ ಮತ್ತು ಇಲಿಯಡ್ ಗ್ರಂಥಗಳನ್ನು ಭಾಷಾಂತರಿಸಲು ಸಮರ್ಥನಾಗಿದ್ದನೆಂದು ತಿಳಿದು ಬರುವುದು. ಇನ್ನೊಬ್ಬ ಐದು ವರ್ಷದ ಇಂಗ್ಲಿಷ್ ಹುಡುಗನು ಎಂತಹ ಮೋಡಿ ಬರವಣಿಗೆಯನ್ನಾದರೂ ಓದಬಲ್ಲವನಾಗಿದ್ದನಲ್ಲದೆ ಲೇಟಿನ್ ಮತ್ತು ಫ್ರೆಂಚ್ ಮೂಲ ಶಬ್ದಗಳನ್ನೆಲ್ಲಾ ಬಾಯಿಪಾಠ ಮಾಡಿಕೊಂಡಿದ್ದು ವ್ಯಾಕರಣದಲ್ಲಿ ಅಧಿಕ ಪಾಂಡಿತ್ಯವನ್ನು ಪ್ರದರ್ಶಿಸುತ್ತಿದ್ದನು. ಇವನು ಗ್ರೀಕ್ ಫಿಲಾಸಫಿಯಲ್ಲೂ ರೇಖಾಗಣಿತ ಪಾರಂಗತನೂ ಆಗಿದ್ದನು. ಲ್ಯೂಬೆಕ್ಕಿನ ಹಸ್ಸಿಯೆಂಬ ಜರ್ಮನ್ ಮಗು ಹುಟ್ಟಿದ ಹತ್ತು ತಿಂಗಳಲ್ಲೇ ಜರ್ಮನ್ ಭಾಷೆಯ ಸಕಲ ಶಬ್ದಗಳನ್ನೂ ಉಚ್ಚರಿಸುತ್ತಿದ್ದು, ಒಂದು ವರ್ಷದೊಳಗೇ ಪ್ರಪಂಚೋತ್ಪತ್ತಿಯ ಸಮಸ್ತ ಪ್ರಮುಖ ವಿದ್ಯಮಾನಗಳೊಡನೆ ಪರಿಚಯ ಮಾಡಿಕೊಂಡಿದ್ದಿತು. ಈ ಮಗುವು ಎರಡು ವರ್ಷ ಪ್ರಾಯದಲ್ಲಿ ಬೈಬಲಿನ ಹಳೆಯ ಒಡಂಬಡಿಕೆಗಳ ಸಮಗ್ರ ವಿಷಯಗಳನ್ನು ತಿಳಿದಿತ್ತಲ್ಲದೆ 3 ವರ್ಷ ಪ್ರಾಯದಲ್ಲಿ ಭೂಗೋಳಶಾಸ್ತ್ರ ಅಥವಾ ಪುರಾತನ ಚರಿತ್ರೆಗಳ ಯಾವ ಎಂತಹ ಪ್ರಶ್ನೆಗಳಿಗೂ ಉತ್ತರಕೊಡಬಲ್ಲುದಾಗಿದ್ದಿತು. 4 ವರ್ಷದ ಹುಡುಗನಾದಾಗ ಅವನು ಲೇಟಿನ ಕೂಡಲಿನ ಮಾತುಕತೆಯೊಡನೆ ನಾಲ್ಕು ಭಾಷೆಗಳಲ್ಲಿ ಸಂಭಾಷಿಸುತ್ತಿದ್ದನು. ಆದರೆ ಅವನು ೫ನೇ ವರ್ಷದಲ್ಲೇ ಕಾಲವಾದನು. ಇಂತಹ ಬಾಲ ನಿಪುಣರು ಬಾಲ್ಯದಲ್ಲೇ ಮರಣಹೊಂದುವ ಅಥವಾ ದೊಡ್ಡವರಾದಾಗ ತಮ್ಮ ನೈಪುಣ್ಯವನ್ನು ಕಳೆದುಕೊಳ್ಳುವ ಸಂಭವ ಹೆಚ್ಚಿರುವುದು. ಆದರೆ ಪ್ರಖ್ಯಾತ ಚರಿತ್ರಕಾರ ಮೆಕಾಲೆಯು 8 ವರ್ಷದಲ್ಲೇ ಚರಿತ್ರೆಯಲ್ಲಿ ವಿಶೇಷ ಪಾಂಡಿತ್ಯವುಳ್ಳವನಾಗಿದ್ದನು. ಕವಿವರ್ಯ ಟೆನ್ನಿಸನನು ಬಾಲ್ಯದಲ್ಲೇ ಕವಿಯಾಗಿದ್ದನು. ಬೈರನನು 10 ವರ್ಷದಲ್ಲೇ ಪ್ರೇಮ ಕಾವ್ಯವನ್ನು ರಚಿಸಿದ್ದನು. ಬೇಕನನು ಅದೇ ಪ್ರಾಯದಲ್ಲಿ ತತ್ವಶಾಸ್ತ್ರ ಪಾರಂಗತನಾಗಿದ್ದನು, ಮೋಜಾರ್ಟನು 6 ವರ್ಷದಲ್ಲೇ ಸಂಗೀತಜ್ಞನಾಗಿದ್ದನು, ದಾಂತೆ ಕವಿಯು 9 ವರ್ಷದಲ್ಲೇ ಚತುರ್ದಶಪದಿಗಳನ್ನು ರಚಿಸುತ್ತಿದ್ದನು. ವರ್ನೆಲನು 4 ವರ್ಷದಲ್ಲೇ

ಚಿತ್ರಕಲಾ ವಿಶಾರದನಾಗಿದ್ದನು, ವ್ಯಾಕರಣವೆಯು 6 ವರ್ಷದಲ್ಲೇ ಉಪದೇಶಕನಾಗಿದ್ದನು, ಟೆನ್ನೀಸ್ 6 ತಿಂಗಳಲ್ಲೇ ಮಾತನಾಡಲಾರಂಭಿಸಿ 7 ತಿಂಗಳಲ್ಲೇ ಲ್ಯಾಟಿನ್ ಭಾಷೆಯಲ್ಲಿ ಮಾತನಾಡುತ್ತಿದ್ದನು. ಹಿಂದೂ ದೇಶದವನಾದ ರಾಮಾನುಜನು 14 ವರ್ಷದವನಾಗಿದ್ದಾಗಲೇ ಗಣಿತ ಶಾಸ್ತ್ರದಲ್ಲಿ ಅದ್ಭುತ ಸಾಮರ್ಥ್ಯವನ್ನು ಪ್ರದರ್ಶಿಸಿದ್ದನು "ನವಯುಗ"


## ಕೆನರಾ ಹೈಸ್ಕೂಲ್ ಸೋಡ್ತಿ.

ಮಂಗಳೂರಲ್ಲಿರುವ ಕೆನರಾ ಹೈಸ್ಕೂಲಿನ ಮತ್ತು ಕೆನರಾ ಬಾಲಿಕೆಯರ ಸ್ಕೂಲಿನ ಸಹಾಯಾರ್ಥವಾಗಿ ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರ ಅಪ್ಪಣೆ ಪಡೆದು ಅತೀ ಮಹತ್ವದ ಒಂದು ಸೋಡ್ತಿಯನ್ನು ತೆಗೆಯಲು ನಿಶ್ಚೈಸಿಯದೆ, ಇದರ ಆಡಳಿತೆಯನ್ನು ಜವಾಬ್ದಾರಿಯುಳ್ಳ ಪ್ರಮುಖ ಗೃಹಸ್ಥರು ನಡಿಸುವರು

ಜುಮ್ಲಾ ಟಿಕೇಟಿನ ಮೌಲ್ಯ ಒಂದುಲಕ್ಷ ರೂಪಾಯಿ. ಈ ಪೈಕಿ ರೂಪಾಯಿ 15,000 ಖರ್ಚಿನ ಬಗ್ಗೆ ವಜಾ ಮಾಡಲಾಗುವದು. ರೂಪಾಯಿ 40,000 ಶಾಲೆಗಳ ಉಪಯೋಗದ ಬಗ್ಗೆ ವಿನಿಯೋಗಿಸಲ್ಪಡುವದು ಮತ್ತು 45,000 ರೂಪಾಯಿಗಳನ್ನು 3043 ಸೋಡ್ತಿ ಬಹುಮಾನಗಳಾಗಿ ಹಂಚಲಾಗುವದು. ಈ ಬಹುಮಾನಗಳ ತಪಶೀಲು ಕೆಳಗೆ ಕಾಣಿಸಿಯದೆ.

1ನೇ ಬಹುಮಾನ ರೂಪಾಯಿ 12500. 2ನೇ ಬಹುಮಾನ ರೂಪಾಯಿ 5000. ರೂಪಾಯಿ 1000ದರದ 2 ಬಹುಮಾನಗಳು. ರೂಪಾಯಿ 500 ದರದ 3 ಬಹುಮಾನಗಳು ರೂಪಾಯಿ 250 ದರದ 6 ಬಹುಮಾನಗಳು. ರೂಪಾಯಿ100 ದರದ 10 ಬಹುಮಾನಗಳು ರೂಪಾಯಿ 50 ದರದ 20 ಬಹುಮಾನಗಳು. ರೂಪಾಯಿ 20 ದರದ 100ಬಹುಮಾನಗಳು ರೂಪಾಯಿ 10ದರದ 800 ಬಹುಮಾನಗಳು. ರೂಪಾಯಿ 5ದರದ 2100 ಬಹುಮಾನಗಳು

ಟಿಕೇಟು ಮಾರಾಟವು ತಾ 4—1—29ಕ್ಕೆ ಮುಗಿಯುವದು ಮತ್ತು ಸೋಡ್ತಿಯು ತಾ. 26—1—29ರಲ್ಲಿ ತೆಗೆಯಲಾಗುವದು.

ಪ್ರತಿ ಒಂದು ಟಿಕೇಟಿನ ಬೆಲೆಯು ಬರೆ ಒಂದು ರೂಪಾಯಿ ಆಗಿರುತ್ತದೆ. 24 ಟಿಕೇಟುಗಳು ಮಾರಿದವರಿಗೆ ಪ್ರತಿಫಲವಾಗಿ ಒಂದು ಟಿಕೇಟು ಜಾಸ್ತಿ ಸಿಕ್ಕುವದಲ್ಲದೆ ಹೆಚ್ಚು ಟಿಕೇಟುಗಳು ಮಾರಿದವರಿಗೆ ವಿಶೇಷ ಬಹುಮಾನಗಳು ದೊರೆಯುವವು. ಈ ಶಿವಾಯಿ ಯೋಗ್ಯವಾದ ಎರಡು ಸಂಸ್ಥೆಗಳಿಗೆ ಮುಖ್ಯವಾಗಿ ಕೆನರಾ ಹೈಸ್ಕೂಲಿನ ಸಂಬಂಧವಾಗಿ ಈಗ ತೆರೆಯಲ್ಪಡಬೇಕಾಗಿ ನಿಶ್ಚೈಸಿದ ಕೈಗಾರಿಕ ಶಾಲೆಗೆ ಕೂಡ ಅವರು ಸಹಾಯ ಮಾಡಿದಂತಾಗುವದು ಅಪೇಕ್ಷೆಯುಳ್ಳ ಏಜಂಟರು ಸೋಡ್ತಿ ಕಮಿಟಿಯ ಹಾನರರಿ ಸೆಕ್ರೆಟರಿಯವರಿಗೆ ಕೆಳಗೆ ಕಾಣಿಸಿದ ವಿಳಾಸಕ್ಕೆ ಬರೆಯಬಹುದು. ಏಜೆಂಟರು ಎಲ್ಲಾ ಕಡೆಗಳಲ್ಲಿಯೂ ಕಮಿಟಿಯವರಿಗೆ ಬೇಕಾಗಿರುವರು

ಬಿ. ಮಂಜುನಾಥ ಬಾಳಿಗ,

ತಾ. 16—3—28. ಹಾನರರಿ ಸೆಕ್ರೆಟರಿ

6—6 ಕೆನರಾ ಹೈಸ್ಕೂಲ್ ಸೋಡ್ತಿ, ಬ್ರಿಟೋ ಗಲ್ಲಿ,

## ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಹಸನಾದ ವಜ್ರದ ಕಲ್ಲುಗಳನ್ನಿಟ್ಟು ಅಪರಂಜಿ ಭಂಗಾರಕ್ಕೆ ಸಮನಾದ ಗಿಲ್ಟಿಯ ಭಂಗಾರದಿಂದ ಕಟ್ಟಿಸ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವದು. ಇದರ ಒಣ್ಣವು ಕೆಡದಂತೆ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು

7 ಕಲ್ಲಿನ ಬಿಳಿಯ ಓಲೆ ಜೊತೆ 1ಕ್ಕೆ 2—0—0

" ಕೆಂಪು ಕಲ್ಲಿನ ಓಲೆ ಜೊತೆ 1ಕ್ಕೆ 2—8—0

ವಿಳಾಸ —ಕೆ. ನಾಥಮುನಿ ಅಂಡ್ ಸನ್ಸ್,

52—20 168, ಜೈನಾ ಬಜಾರ್, ಮದರಾಸು.

# ಕರ್ಣಿಕ

ಎ ಗ್ರೇಟ್ ಮಿ ಕ್ಶ್ಚರ್

ಮಲೇರಿಯಾ, ಇನ್‌ಫ್ಲುಯೆಂಝಾ, ಚಳಿಜ್ವರ, ಆಡವಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲ ಶುದ್ಧಿಯಾಗಿ ಜೀವರು ಒಂದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪. ಟಪ್ಪಾಲು ವೆಚ್ಚ ಬೇರೆ.

### ಸಾರಸಾಪರಿಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವುದಕ್ಕೆ ಇದು ಖಾತ್ರಿಯಾದ ಔಷಧ ಬೆಲೆ ೧ ಬಾಟ್ಲಿಗೆ ರೂ. ೧—೦—೦. ಟಪ್ಪಾಲು ವೆಚ್ಚ ಬೇರೆ.

ಕರ್ಣಿಕ ಬ್ರದರ್ಸ್

12—2 ದುಬಾಷ್ ಲೇನ್,

ಗಿರಿಗಾಂವ್, ಮುಂಬಾಯಿ.

## ಫ್ಯಾನ್ಸಿ ಲೀವರ್ ಪಾಕೇಟ್ ವಾಚ್.

(15 ಬಹುಮಾನಗಳು ಸಹಿತ ರೂ. 4—8—0)

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಿ ರಿಜಿಸ್ಟರಾಗಿದೆ

ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ಜೇಬಿಗೆ ಅಡಕವಾಗಿಯೂ ಇರುವಂತೆ ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು. ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ್ ಮಾಮೆಂಟು ಮಾಡಿರುವದು ಘಾಗಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ್ ಡೂಮ್ ಇರುವದು



ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವೆಂಟುಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿರಿ ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ —ಫೌಂಟೆನ್ ಪೇನ್ 1. ಹೇರಾಯಿಲ್ ಬಾಟಲ್ 1 ವಜ್ರದ ಗುಂಡಿಗಳು 4. ಪಾಕೆಟ್ ಕನ್ನಡಿ 1 ಗಡಿಯಾರದ ಸರಪಣಿ 1 ಸುವಾಸನೆ ಸೋಪು 1 ಪೇನಾ ಕತ್ತಿ 1 ರೋಲ್ಡ್ ಗೋಲ್ಡ್ ಭಂಗಾರದ ಉಂಗುರ 1 ರೋಲ್ಡ್ ಗೋಲ್ಡ್ ಭಂಗಾರದ ನೆಕ್‌ಲೇಸ್ ಎಂಬ ಕತ್ತಿನ ಹಾರ 1 ದಂತದ ಬಾಚಣಿಗೆ 1 ಕೈ ಗುಂಡಿಗಳ ಸೆಟ್ 1. ಕೈ ವಸ್ತ್ರ. ಈ 15 ಬಹುಮಾನಗಳು ಮತ್ತು ಖಾತ್ರಿಯಾದ 3 ವರುಷ ಗ್ಯಾರಂಟಿ ಸಹಿತ ಗಡಿಯಾರ 1ಕ್ಕೆ ಕ್ರಯ ರೂ 4—8—0

ವಿಳಾಸ — ವಿ. ಎಸ್. ವಾಚ್ ಕಂಪೆನಿ,

ಪೋಸ್ಟ್ ಬಾಕ್ಸ್, ನಂ 105,

52—8 ಮದರಾಸು.

## ಪುತ್ರ ಸಂತಾನದ ಎಣ್ಣೆ.

ಈ ಎಣ್ಣೆಯು ಒಬ್ಬ ದೊಡ್ಡ ಪಂಡಿತರಿಂದ ತಯಾರಿಸಿದ್ದು. ಹೆಂಗಸರಿಗೆ ಅನೇಕ ಕಾರಣಗಳಿಂದ ಗರ್ಭವು ನಿಲ್ಲುವದಿಲ್ಲ. ಕೆಲವರಿಗೆ 3—4 ತಿಂಗಳ ಕಾಲ ನಿಂತು ನಂತರ ಹೋಗಿಬಿಡುವದು ಇಂಥಾ ಹೆಂಗಸರು ಈ ಎಣ್ಣೆಯನ್ನು 15 ದಿನಗಳು ಸೇವಿಸುವುದರಿಂದ ಗರ್ಭವು ನಿಂತು ಪುತ್ರ ಸಂತಾನವಾಗುವುದು ಕೆಲವು ಹೆಂಗಸರಿಗೆ ಮುಟ್ಟಾಗುವ ಸಮಯದಲ್ಲಿಯೂ, ಮುಟ್ಟಾದ ನಂತರವೂ ಉಂಟಾಗುವ ಹೊಟ್ಟೆ ನೋವು ಮುಂತಾದವುಗಳನ್ನು ಖಂಡಿತ ಗುಣ ಪಡಿಸುವದು ಈ ಎಣ್ಣೆಯನ್ನು ಬೊಂಬಾಯಿ, ಮದರಾಸು ಆಧಿಪತ್ಯಗಳಲ್ಲಿ ಮಕ್ಕಳಿಲ್ಲದವರು ಉಪಯೋಗಿಸಿ ಪುತ್ರ ಸಂತಾನ ಪಡೆದಿರುವರು ಒಂದು ಬಾಟ್ಲಿಯನ್ನು ತರಿಸಿ ಪರೀಕ್ಷಿಸಿರಿ ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸುತ್ತೇವೆ



ಕ್ರಯ ಬಾಟಲ್ 1ಕ್ಕೆ 2—8—0

ವಿಳಾಸ —ಕೆ. ಎನ್ ರಾಧಾಕೃಷ್ಣ ಬ್ರದರ್ಸ್,

105. ಜೈನಾ ಬಜಾರ್ ರೋಡ್,

52—20 ಮದರಾಸು.

### ಏಕೆ ನರಳುತ್ತೀರಿ?

ಪ್ರಾಚೀನ ಋಷಿಗಳಿಂದ ಪ್ರಕಟಿತವಾದ ಆಯುರಾರೋಗ್ಯೈಶ್ವರ್ಯ ವರ್ಧಕವಾದ ಆರೋಗ್ಯವಿಧಿಗಳನ್ನು ತಿಳಿಯದೆ ಅಜ್ಞಾನಾಂಧಕಾರದಲ್ಲಿ ಮುಳುಗಿ ಅನೇಕ ತರಹಗಳ ವ್ಯಾಧಿಗಳಿಂದ ಏಕೆ ನರಳುವಿರಿ?

ಕ್ರಯವು! ಇಲ್ಲವೆ!!

ಉಚಿತವಾಗಿ ಕೊಡಲ್ಪಡುವ ನಮ್ಮ

ನಮ್ಮ ಔಷಧಗಳನ್ನು ವಿಕ್ರಯಿಸುವ ಏಜಂಟರು ಬೇಕಾಗಿರುವದು.

## ವೈದ್ಯ ವಿದ್ಯೆ

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ

52—8 ನಿವಾರಣೆ ಮಾಡಿಕೊಳ್ಳಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,

1/94 ಜೈನ ಬಜಾರು ರೋಡು, ಮದ್ರಾಸು

N. B.—ವೈದ್ಯಸಲಹೆಯು ಫೀಜಿಲ್ಲದೆ ಕೊಡಲಾಗುವುದು

## Sale of Sandalwood.

On 10th December 1928 at 12 noon about 137 tons of cleaned sandalwood will be sold in small lots in public auction at Fraserpet. For further particulars apply to—

The Chief Forest Officer,

3—1. Coorg, Mercara. P. O.

# 52 ವರುಷಗಳ ಅನುಭವಸಿದ್ಧ ಔಷಧಗಳು.

### ೧. ಮಹಾಮದನ ಕಾಮೇಶ್ವರೀ ಲೇಹ.

ಅಜೀರ್ಣ, ಎದೆನೋವು, ಸೊಂಟನೋವು, ಮಲಬದ್ಧತೆ, ನಿದ್ರೆಯಿಲ್ಲದೆ ಇರುವಿಕೆ ಮುಂತಾದವುಗಳನ್ನು ಗುಣಪಡಿಸಿ ರತಿ ಸುಖಕ್ಕೆ ಶಕ್ತಿಯನ್ನುಂಟುಮಾಡುವುದು

ಡಬ್ಬಿ 1ಕ್ಕೆ ರೂ 2—0—0 3 ಡಬ್ಬಿಗಳಿಗೆ ರೂ 5—12—0

### ೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರು ಕ್ರಮತಪ್ಪಿ ಮುಟ್ಟಾಗುವುದು ಬಿಡೋಸವು ಯದಲ್ಲಿ ಅತ್ಯಲ್ಪವಾಗಲೀ, ಅತಿರೇಕವಾಗಲಿ ರಕ್ತ ಸುರಿಯೋಣ, ಹೊಟ್ಟೆನೋವು, ಸೊಂಟನೋವು, ಬಿಳಿಜ್ವರ ನಾನಾಪ್ರಕಾರಗಳ ಪ್ರದರಗಳನ್ನು ಅತಿ ಶೀಘ್ರದಲ್ಲಿ ಗುಣಪಡಿಸಿ ಗರ್ಭಾಶಯ ಸಂಬಂಧ ರೋಗಗಳನ್ನು ಗುಣಪಡಿಸಿ, ಸಂತತಿಗೆ ಅನಾಯಕರವಾದ ದೋಷಗಳನ್ನು ಹೋಗಲಾಡಿಸುವುದು. 1 ಬಾಟ್ಲಿ ಮತ್ತು 1 ಡಬ್ಬಿ ಮಾತ್ರೆಗೆ 2—4—0.

### ೩. ಮೇಹಕುಠಾರ.

ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ, ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ 2—8—0. 3 ಕ್ಕೆ 7—0—0

### ೪. ಮಲೇರಿಯಾ (ಛಳಿಜ್ವರ) ಪಿಲ್ಸ್.

1. 2. 3 ಅಥವಾ 4 ದಿವಸಕ್ಕೊಮ್ಮೆ ಬರುವ ಜ್ವರ, ಮಲೇರಿಯ ಇವುಗಳ ಮೇಲೆ ಖಾತ್ರಿ. ಬಾಟ್ಲಿ 1 ಕ 0—12—0.

### ೫. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ

ಬಾಟ್ಲಿ 1 ಕ್ಕೆ 0—10—0 3 ಕ್ಕೆ 1—12—0

### ೬. ಇಚ್ಛಾಭೇದಿ.

ಆಯಾಸವನ್ನುಂಟುಮಾಡದ ಸುಖವಿರೇಚಕ.

ಬಾಟ್ಲಿ 1 ಕ್ಕೆ 0—12—0. 3 ಕ್ಕೆ 2—0—0.

**೭. ದಂತಕಾಂತಿ ಚೂರ್ಣ.** ಡಬ್ಬಿ 1ಕ್ಕೆ 3 ಆಣೆ

**೮. ಗಜಕರ್ಣ ಮುಲಾಮ್.** ಡಬ್ಬಿ 1ಕ್ಕೆ 6 ಆಣೆ.

N B ಇವುಗಳಲ್ಲದ ಬೇರೆ ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತ

ಎಸ್. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದೀಕ್ ಫಿಜಿಸಿಯನ್ಸ್,

1 ಮಂಗಳೂರು, ದ. ಕನ್ನಡ.

## ಕನ್ನಿ ಕರೀದಿಯನ್ನು ನೆನಪಿನಲ್ಲಿಡಿ! ಲೋಕವಿಖ್ಯಾತವಾದ "ಜಿಗ್ ಜೀಗ್"

ಟೈಂಪೀಸ್ ಸೈಜು 8×4½"

ಬೆಲೆ ರೂ. 3—0—0 ಮಾತ್ರ.

3 ವರ್ಷ ಖಾತ್ರಿಕೊಡುತ್ತೇವೆ.

ಈ ಟೈಂಪೀಸು ಬಹಳ ಉತ್ತಮವಾದ ಮತ್ತು ಬಲವಾದ ಆತಿಹಾಗಳಿಂದ ಮಾಡಲ್ಪಟ್ಟು, ಚಿತ್ರದಲ್ಲಿ ತೋರಿಸಿರುವಂತೆ ಸುಂದರವಾದ ಕೆತ್ತನೆಯ ಸ್ಪೆಂಡಿನೊಳಗೆ ಇರಿಸಲ್ಪಟ್ಟದೆ. ನೋಡಲು ಸುಂದರವಾಗಿಯೂ, ಸರಿಯಾದ ಗಂಟೆಯನ್ನು ತೋರಿಸುವುದಾಗಿಯೂ ಇರುವ ಈ ಟೈಂಪೀಸನ್ನು ಅನೇಕರು ಉಪಯೋಗಿಸಿ ತೃಪ್ತಿಹೊಂದಿದ್ದಾರೆ.

ಇಂಥಾ ಟೈಂಪೀಸಿಗೆ 3—0—0 ರೂ. ಮಾತ್ರ ಬೆಲೆ.

ಏಜಂಟರು.— ವೈಕ್ಯಲಕ್ಷ್ಮಿ ಅಂಡ್ ಕಂಪೆನಿ,

52—8 ಪೋಸ್ಟು ಬಾಕ್ಸ್ ನಂ. 265. ಮದ್ರಾಸು.

## ಸಣ್ಣ ಹುಡುಗರ ಸಲುವಾಗಿ

## ಡೋಂಗರೆ ಯವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ

ಕ್ರಯ ಬಾಟ್ಲಿ ಗೆ ೦—14—0. ೬. ಖ. 0—9—0

ಕೆ. ಟಿ. ಡೋಂಗರೆ ಕಂಪೆನಿ,

25—4 ಗಿರಗಾಂವ, ಮುಂಬಯಿ.



## Silks! Silks!! Silks!!!

Sarees with gold borders, body plain or spotted in various designs and colours.

| | | | | |
|---|---|---|---|---|
| 5 yds by 45 inches plain body | Rs. | 30/- | to Rs | 80/- |
| do spotted body | | 40/- | to „ | 90/- |
| 6 yds by 45 inches plain body | „ | 50/- | to „ | 100/- |
| do spotted body | „ | 60/- | to „ | 120/- |
| Headkerchief 44 by 44 inches price | „ | 12 - | to „ | 35/- |
| Gold Lace borders, Ribbons, price from | „ | 1/8/- | to „ | 5/- per yd |

***For further particulars, please write to:-***

**BHARADWAJ & CO.,**

BROCADE, EMBROIDARY & SILK MANUFACTURERS,

52-7 **Benares City.**



ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಲು ಸುಸಮಯ.

## ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ (ಮಾಸ ಪುಸ್ತಕ)

(ಎರಡನೆಯ ವರ್ಷಾರಂಭವಾಗಿದೆ.)

'ಹರಿದಾಸ ಸೇವಾ ಸಮಿತಿ' ಯವರಿಂದ ಬಹಳ ಶುದ್ಧ ರೀತಿಯಲ್ಲಿ ಪರಿಶೋಧಿಸಲ್ಪಟ್ಟು ಮಾಸ ಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಲಿರುವ 'ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ' ಯನ್ನು ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿರಿ! ಇದರಲ್ಲಿ ಜಗದ್ವಂದ್ಯರಾದ ಶ್ರೀ ಪುರಂದರದಾಸರು ಶ್ರೀ ಕನಕದಾಸರೇ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ನುಡಿದ ದಿವ್ಯ ಭಗವನ್ನಾಮ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ಕ್ರೌನ್ ಅಷ್ಟಪತ್ರದ ನಾಲ್ವತ್ತು ಪುಟಗಳ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಲಿವೆ. ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೆ ಹಾಸಲು ಉಚಿತ) ಸಾಮಾನ್ಯ ಪ್ರತಿ ರೂ. ೧—೪—೦ ಉತ್ತಮ ಪ್ರತಿ ರೂ. ೨—೪—೦

## ಪ್ರಥಮ ಸಂಪುಟದ ಬೈಂಡಾದ ಪ್ರತಿಗಳು.

| | ಸಾದಾ ಬೈಂಡು | ದಪ್ಪ ರಟ್ಟಿನ ಬೈಂಡು | ಕಿತ್ತಾನಾರು ಬೈಂಡು |
|---|---|---|---|
| ಸಾಮಾನ್ಯ ಪ್ರತಿ | ೧—೮—೦ | ೧—೧೨—೦ | ೨—೪—೦ |
| ಉತ್ತಮ ಪ್ರತಿ | ೨—೪—೦ | ೨—೮—೦ | ೩—೦—೦ |

ಅಂಚೆಹಾಸಲು ಪ್ರತ್ಯೇಕ.

ವಿಳಾಸ — ಸುಬೋಧ ಪ್ರಕಟನಾಲಯ,

ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.

12—10


ಕೊಡಗಿನವರಲ್ಲಿ ಬಿ. ಎ. ಪರೀಕ್ಷೆಯಲ್ಲಿ ಇಂಗ್ಲಿಷ್ ತೆಗೆದುಕೊಂಡವರ ಪೈಕಿ ಇಂಗ್ಲಿಷಿನಲ್ಲಿ ಎಲ್ಲರಿಗಿಂತಲೂ ಹೆಚ್ಚು ನಂಬರು ತೆಗೆದವರಿಗೆ ಕೊಡಲು ಮದ್ರಾಸು ಯುನಿವರ್ಸಿಟಿಯಲ್ಲಿ ಇಟ್ಟಿರುವ ಕೊರವಂಡ ಅಪ್ಪಯ್ಯ ದೇವಯ್ಯ ಇನಾಮು ಈ ವರ್ಷ ಮಿ. ಮಂಡೇಪಂಡ ಡಬ್ಲ್ಯು ಕಾಳಪ್ಪನವರಿಗೆ ದೊರೆತಿದೆ.

ಕಳೆದ ತಾ 26ರಲ್ಲಿ ತಿರುಪತ್ತೂರಿನಲ್ಲಿ ಗೌರಿ ಬಿಡುವ ಮೆರವಣಿಗೆಯ ಉತ್ಸವವನ್ನು ನೋಡಲು ಸೇರಿದ್ದ ಜನರ ಪೈಕಿ ವೀರಾಜಪೇಟೆಯ ಒಬ್ಬ ಮುಸಲ್ಮಾನ ಯುವಕನು ಒಬ್ಬ ಹೆಂಗಸಿನ ಕೈಯನ್ನು ಹಿಡಿದೆಳೆದಿದ್ದರಿಂದ ಹೊಡೆದಾಟ ಉಂಟಾಯಿತೆಂದೂ, ಈ ವಿಷಯ ಪೋಲೀಸಿನವರಿಗೆ ತಿಳಿಸಲಾಗಿದೆಯೆಂದೂ ವರ್ತಮಾನ

ಕಳೆದ ಶುಕ್ರವಾರ ರಾತ್ರಿ ಮ ತಿರುವೆಂಗಡ ಪಿಳ್ಳೆಯವರ ಆಶ್ರಯದಲ್ಲಿ ವೀರಾಜಪೇಟೆ ಗಣಪತಿ ಉತ್ಸವದ ಮೆರವಣಿಗೆಯು ಬಹು ಸಂಭ್ರಮದಿಂದ ನಡೆಯಿತೆಂದೂ, ಸುತ್ತುಮುತ್ತಲಿನ ಗ್ರಾಮಗಳಿಂದ ಸಾವಿರಗಟ್ಟಲೆ ಜನರು ನೆರೆದಿದ್ದರೆಂದೂ, ಗಲಾಟೆಯೇನೂ ಉಂಟಾಗದೆ ಎಲ್ಲವೂ ಶಾಂತವಾಗಿ ಮುಗಿಯಿತೆಂದೂ ತಿಳಿಯುತ್ತೇವೆ.

ದೇಶದ ಹಲವು ಭಾಗಗಳಲ್ಲಿ ಮಳೆಬೀಳದ್ದರಿಂದ ಗದ್ದೆಗಳಲ್ಲಿ ನೀರಿಲ್ಲದೆ ಒಣಗಿ, ಬೆಳೆಯು ಹಾಳಾಗುತ್ತಿದೆಯೆಂದು ಜನರು ಬೊಬ್ಬೆಯಿಡುತ್ತಿದ್ದಾರೆ. ಇನ್ನು ಒಂದೆರಡು ವಾರ ಮಳೆ ಬಾರದಿದ್ದರೆ ಕೊಡಗಿನಲ್ಲಿ ಕ್ಷಾಮವುಂಟಾಗುವದೋ ಎಂಬ ಸಂಶಯವಿದೆ. ಮಡಿಕೇರಿಗೆ ಆಗಾಗ್ಗೆ ಮೋಡ ಕವಿದುಕೊಂಡಿರುವದಾದರೂ ನಿನ್ನೆ ರಾತ್ರಿ ಸ್ವಲ್ಪ ಮಳೆ ಬಿತ್ತು.

ಶಾಂತಳ್ಳಿ ನಾಡು ತಾಲೋಕಿನಲ್ಲಿ ನಡೆದ ಜಮೀನ್ದಾರರ ಸಂಘದ ವಾರ್ಷಿಕ ಸಮ್ಮೇಳನದಲ್ಲಿ ಸ್ವಾಗತದ ಏರ್ಪಾಡು ಮಾಡಲಾಗಿ, ಉಳಿವರಿಯಾಗಿರುವ ಹಣದ ವಿಲೆವಾರಿ ಬಗ್ಗೆ ಈ ತಾರೀಕು 20ನೇ ಶನಿವಾರ ಸಾಕ್ವೋಕಿನಲ್ಲಿ ಮಧ್ಯಾಹ್ನ 1 ಗಂಟೆಗೆ ಮೀಟಿಂಗ್ ನಡೆಯುವುದೆಂದೂ, ಸ್ವಾಗತಕ್ಕೆ ಸಹಾಯ ಕೊಡುವವರೆಲ್ಲರೂ ದಯಮಾಡಿಸಬೇಕೆಂದೂ, ಸ್ವಾಗತ ಸಮಿತಿ ಸೆ. ಕೆ. ಪಿ. ಚಿನ್ನಪ್ಪನವರು ತಿಳಿಸಿರುತ್ತಾರೆ.

ಮಡಿಕೇರಿ ಮೈಸೂರಿನ ರಸ್ತೆಯ 5/5 ನೇ ಮೈಲು ತಾತ್ಕಾಲ ಸೇತುವೆಯು ಕುಸಿದಾಗಿ ಈ ತಾ. 1ರಿಂದ ವಾಹನಕ್ಕೆ ಬಿಡಲಾಗಿದೆಯೆಂದೂ, ಅದರ ಮೇಲೆ ಮೋಟಾರು ಲಾರಿ ಟಾರುಗಳು 8 ಮೈಲಿನ ದರಕ್ಕಿಂತ ಜೋರಾಗಿ ಓಡಿಸಕೂಡದೆಂದೂ, ಇದನ್ನು ಮೀರಿದರೆ ಸೇತುವೆಯು ಹೊಸದು ರಸ್ತೆಯು ಮೈಸಾಟಕ್ಕೆ ಮುಚ್ಚಲ್ಪಡಬೇಕಾಗುವುದೂ ಎಗ್ಸಿಕ್ಯೂಟಿವ್ ಇಂಜಿನಿಯರವರು ತಿಳಿಸಿರುತ್ತಾರೆ.

ಸರ್ಕಾರದವರಿಂದ ನೇಮಿಸಲ್ಪಟ್ಟ ಈ ಪ್ರಾಂತ್ಯದ ಎ ಕಮಿಟಿಯ ಮೀಟಿಂಗು ಕಳೆದ ತಾ 29ರಲ್ಲಿ ನಡೆ ... ಕ್ಷವಿಲ್ಲವೆಂತ ವಜ ಮಾಡಿದರು. ಈ ಹುಕುಂ ಆದ ಮಾರು ದಿನದ ನಂತರ ಸಬ್‌ಜಡ್ಜಿಯವರ ಕೋರ್ಟಿಗೆ ಮೇಲೆ ಒರದ ಮೇರೆ ಅರ್ಜಿ ದಾಖಲ್ ಮಾಡಿರುವದಾಗಿದೆ

## ಹಿಂದೂದೇಶ.

14 ರೂಪಾಯಿ ಸಂಬಳದ ಕ್ಲಾರ್ಕಿನ ಒಬ್ಬ ಕಸಬುಗನಿಗೆ ಒಂದು ಲಾಟರಿಯಲ್ಲಿ 125,000 ರೂಪಾಯಿ ದೊರೆತ್ತಿದೆ.

ಕಳೆದ ತಾ 30 ರಲ್ಲಿ ಲಯಲ್ಪುರದಲ್ಲಿ ನಡೆದ ಪಂಜಾಬು ರಾಜಕೀಯ ಪರಿಷತ್ತಿನಲ್ಲಿ ನೆಹರು ಕಮಿಟಿ ವರದಿಗೆ ಒಪ್ಪಿಗೆ ಕೊಡಬೇಕೆನ್ನುವ ಠರಾವು ಸೈಮನ್ ಕಮಿಷನನ್ನು ಬಹಿಷ್ಕರಿಸುವಂತೆಯೂ ಠರಾವುಗಳು ಮಂಜೂರು ಮಾಡಲಾದವು

ಪೂನಾ ಡಿಸ್ಟ್ರಿಕ್ಟಿನ ಸಾಸ್ವಾಡ್ ಮುನ್ಸಿಪಲ್ ಕಮಿಟಿಯವರ ಆಡಳಿತೆಯು ಅತೃಪ್ತಿಕರವಾದುದರಿಂದ ಬೊಂಬಾಯಿ ಸರ್ಕಾರದವರು ಸದರಿ ಕಮಿಟಿಯನ್ನು 1930 ನೇ ಮಾರ್ಚಿವರೆಗೆ ಡಿಸ್‌ಮಿಸ್ ಮಾಡಿ ಹೊಸ ಕಮಿಟಿಯನ್ನು ನೇಮಿಸಿದವರು.

ಸೂರತ್ತಿನಲ್ಲಿ ಗಣಪತಿ ಉತ್ಸವದ ಮೆರವಣಿಗೆಯಲ್ಲಿ ಹಿಂದೂ ಮುಸಲ್ಮಾನರಿಗೆ ಜಗಳವುಂಟಾಗಿ ಸುಮಾರು 100 ಹಿಂದೂಗಳಿಗೆ ಘಾಯವುಂಟಾಗಿದೆಯೆಂದೂ, ಒಬ್ಬನು ಮೃತನಾದನೆಂದೂ, 83 ಜನರು ಕೈದು ಮಾಡಲ್ಪಟ್ಟಿರುವರೆಂದೂ ವರ್ತಮಾನ

ಸೈಮನ್ ಕಮಿಷನು ಬೊಂಬಾಯಿಯಲ್ಲಿ ಇಳಿದಿಳಿಯುವಾಗ ಹರತಾಳವನ್ನು ಆಚರಿಸುವರ ಬದಲು ಕಮಿಷನನ್ನು ವಿರೋಧಿಸುವಂಥ ಮೆರವಣಿಗೆ, ಮೀಟಿಂಗು, ಮುಂತಾದವುಗಳನ್ನು ನಡೆಸಬೇಕೆಂದು ಬೊಂಬಾಯಿಯ ಕಾಂಗ್ರೆಸ್ ಕಮಿಟಿಯವರು ತೀರ್ಮಾನಿಸಿರುವರು.

ನೆಹರು ಕಮಿಟಿ ರಿಪೋರ್ಟಿನಿಂದ ತೃಪ್ತರಾಗದ ಕೆಲವು ಮುಸಲ್ಮಾನರು, ನೇರಿಸಲಿಳಿಸುವ ಮುಸಲ್ಮಾನರ ಕಾನ್‌ಫರೆನ್ಸನ್ನು ವಿರೋಧಿಸಿಯೂ, ಸರ್ವ ಪಾರ್ಟಿ ಪರಿಷತ್ತಿನಲ್ಲಿ ಒಪ್ಪಲ್ಪಟ್ಟ ನೆಹರು ರಚನೆಗೆ ಒಪ್ಪಿಗೆಯನ್ನು ಸೂಚಿಸಿಯೂ ಮಹ್ಮದಾಬಾದಿನ ಮಹಾರಾಜರು ತಮ್ಮ ಅಭಿಪ್ರಾಯವನ್ನು ಬಹಿರಂಗಪಡಿಸಿರುವರು.

ಬಂಗಾಳದ ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರು ಕಲ್ಕತ್ತಾದ ಶ್ರದ್ಧಾನಂದ ಪಾರ್ಕಿನಲ್ಲಿ ಏರ್ಪಡಿಸಿರುವ ಖಾದಿ ಪ್ರದರ್ಶನವನ್ನು ಲೇಟ್ ಸಿ. ಆರ್ ದಾಸ್‌ರವರ ಪತ್ನಿಯಾದ ಶ್ರೀಮತಿ ವಸಂತಿದೇವಿಯವರು ತಾ 1 ರಲ್ಲಿ ತೆರೆದರು. ನೆರೆದಿದ್ದವರ ಜಯಘೋಷದೊಡನೆ ಮಿ. ಸುಭಾಶ್ ಚಂದ್ರಬೋಸ್‌ರವರು ರಾಷ್ಟ್ರೀಯ ಬಾವುಟವನ್ನು ಮೇಲಕ್ಕೇರಿಸಿದರು.

ಪಂಡಿತ ಜವಾಹರ್‌ಲಾಲ್ ನೆಹರುರವರ ಅಧ್ಯಕ್ಷತೆಯಲ್ಲಿ ನಡೆದ ಡಿಸ್ಟ್ರಿಕ್ಟ್ ಕಾನ್‌ಫರೆನ್ಸಿನಲ್ಲಿ ಸೈಮನ್ ಕಮಿಷನನ್ನು ಬಹಿಷ್ಕರಿಸಬೇಕೆಂದೂ, ಸರ್ವಪಾರ್ಟಿ ಪರಿಷತ್ತಿನವರು ಸಿಫಾರಿ... ...ಮಾನ ರಾಜಕೀಯ ರಚನೆಯನ್ನು ಜನರ ತಿಳುವಳಿಕೆ ಬಗ್ಗೆ ವಿವರಿಸಲು ಈ ಅಕ್ಟೋಬರು ತಾ. 14 ನೇ ಆದಿತ್ಯವಾರ ಗೋಣಿಕೊಪ್ಪಲಿನಲ್ಲಿಯೂ, ತಾ 15 ನೇ ಸೋಮವಾರ ಹುದಿಕೇರಿಯಲ್ಲಿಯೂ ಪಕೇ ನಾಡು ಕಚೇರಿ ಬಳಿ ಮಧ್ಯಾಹ್ನ 1 ಗಂಟೆಗೆ ಪಬ್ಲಿಕ್ ಮೀಟಿಂಗುಗಳು ನಡೆಯುವವು. ಸರ್ವರೂ ದಯಮಾಡಿಸಬೇಕಾಗಿ ಕೋರಲಾಗಿದೆ

| | |
|---|---|
| ಯನ್. ಆರ್. ಸುಬ್ರಹ್ಮಯ್ಯ. | ಪಿ. ಜಿ. ಕುಶಾಲಪ್ಪ. |
| ಸಿ. ಯಸ್. ಉತ್ತಯ್ಯ. | ಪಾಂತ್ಯೇರಿ ನಂಜಪ್ಪ. |
| ಸಿ. ಯನ್. ವೆಂಕಪ್ಪಯ್ಯ, | ಜಮ್ಮಡ ಮಾದಪ್ಪ |
| ಚಿಟ್ಟಂಡ ಯಂ ಸುಬ್ಬಯ್ಯ | ಪಿ. ಐ. ಬೆಳ್ಯಪ್ಪ. |

## ಪೋಸ್ಟಲ್ ಮತ್ತು ಆರ್. ಯಂ ಯಸ್. ಯೂನಿಯನ್.

ಅಖಿಲ ಹಿಂದುಸ್ಥಾನದ ಪೋಸ್ಟಲ್ ಮತ್ತು ಆರ್. ಯಂ. ಯಸ್. ಯೂನಿಯನಿನ ಮೈಸೂರು ಶಾಖೆಗೆ ಸೇರಿದ ಮಡಿಕೇರಿ ಪೋಸ್ಟಾಫೀಸಿನವರ ಒಂದು ಮೀಟಿಂಗು ಕಳೆದ ತಾರೀಕು 14ನೇ ಶುಕ್ರವಾರದಿನ 6 ಗಂಟೆಗೆ ಪೋಸ್ಟಾಫೀಸಿನಲ್ಲಿ ಮ॥ ರಾ॥ ಕೃಷ್ಣಮೂರ್ತಿರಾವ್ ಬಿ. ಎ. ಬಿ. ಎಲ್. ಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಮೀಟಿಂಗಿಗೆ ಮಡಿಕೇರಿ ಪೋಸ್ಟಾಫೀಸಿನ ಎಲ್ಲಾ ಉದ್ಯೋಗಸ್ಥರು ಹಾಜರಿದ್ದರು. ಸಬ್ ಪೋಸ್ಟುಮಾಸ್ಟರಾದ ಮ. ಆರ್. ರಾಮಚಂದ್ರರಾಯರು ಆ ಸಭೆಯಲ್ಲಿದ್ದ ಮದ್ರಾಸ್ ಸರ್ಕಲ್ ಪ್ರಚಾರಕರಾದ ಮಿ. ಪಿ. ಎಸ್. ನಾರಾಯಣ್ ಬಿ. ಎ. ಯವರನ್ನು ಸಭೆಯವರಿಗೆ ಪರಿಚಿತ ಮಾಡಿಕೊಟ್ಟರು. ಅವರು ಮಾತನಾಡುವುದಕ್ಕಾಗಿರುವ ಘನವಾದ ಕಾರ್ಯದ ವಿಷಯ ಮಾತಾಡುವಂತೆ ಕೇಳಿಕೊಂಡರು.

ಅನಂತರ ಭಾಷಣಕಾರರು ಕೆಲವು ದಿನಗಳ ಹಿಂದೆ ಹೈದರಾಬಾದಿನಲ್ಲಿ ನಡೆದ ಪ್ರಾಂತೀಕ ಪರಿಷತ್ತನ್ನು ಕುರಿತು ಮಾತಾಡಿ ಈ ಯೂನಿಯನು ಈ ವರೆಗೆ ಎಷ್ಟು ಉಪಯೋಗಕರವಾದ ಕೆಲಸವನ್ನು ಮಾಡಿದೆಯೆಂದೂ ಇದಕ್ಕೆ ಸೇರುವುದು ಎಷ್ಟು ಪ್ರಯೋಜನಕಾರಿಯೆಂದೂ ಹೇಳಿ, ಮೆಂಬರಲ್ಲದವರು ಒಡನೆ ಮೆಂಬರರಾಗಬೇಕೆಂದೂ, ಮೆಂಬರರಾಗಿರುವವರು ಅತ್ಯಷ್ಟು ಜಾಗ್ರತೆಯಾಗಿ ಅವರ ಚಂದ ಹಣವನ್ನು ಪಾವತಿ ಮಾಡಬೇಕೆಂದೂ ಹೇಳಿದರು. ಮಡಿಕೇರಿಯ ಪೋಸ್ಟಾಫೀಸಿನ ಪ್ರತಿಯೊಂದು ದರ್ಜೆಯ ಕೆಲಸಗಾರರೂ ಈ ಯೂನಿಯನಿಗೆ ಸೇರುವುದು ಬಹಳ ಸಂತೋಷಕರ. ಎಲ್ಲರೂ ಸಹಕಾರಿ ಬೆನಿಫಿಟ್ ಫಂಡಿಗೆ ಸೇರಿ ಹಣವನ್ನು ಕೂಡಿಟ್ಟು ತಮ್ಮ ವೃದ್ಧಾಪ್ಯದಲ್ಲಾಗಲೀ ತಾನು ಮೃತಪಟ್ಟನಂತರವಾಗಲೀ ಉಪಯೋಗವಾಗುವಂತೆ ಮಾಡಿಕೊಳ್ಳಬೇಕು ಎಂದು ಮನಃಪೂರ್ವಕವಾದ ಉದ್ಗಾರವನ್ನು ಮಾಡಿ ಭಾಷಣವನ್ನು ಮುಕ್ತಾಯ ಮಾಡಿದರು.

## ಹಾಲು ಕರೆಯುವ ದನಗಳ ಎಚ್ಚರ.

(ಬೊಂಬಾಯಿ ಸರಕಾರಿ ಕೈಪಿಡಿಯಿಂದ)

1. ಕಾಲಕ್ಲೃಪ್ತಿ.— ಪ್ರಾಣಿಗಳು ಕ್ರಮವನ್ನನುಸರಿಸುವವು ಆಹಾರ,ಪಾನ ಮತ್ತು ವಿಶ್ರಾಂತಿಯನ್ನೂ ಸಾಧಾರಣವಾಗಿ ಒಂದೇ ಸಮಯದಲ್ಲಿ ತೆಗೆದುಕೊಳ್ಳುತ್ತವೆ. ಆದ್ದರಿಂದ ಕರಾವಿನ ದನಗಳ ಸಂಬಂಧದ ಎಲ್ಲಾ ಕೆಲಸಗಳನ್ನೂ ಕ್ಲೃಪ್ತಕಾಲಗಳಲ್ಲಿ ಮಾಡಬೇಕು ಕರಬಿಡುವದು, ಆಹಾರ ಕೊಡುವದು ಮೊದಲಾದ ಕೆಲಸಗಳನ್ನು ಸಮಯ ತಪ್ಪಿಸಿ ಮಾಡಬಾರದು

2. ಸಮ್ಮನೆ — ಕರ ಪಟ್ಟಿಯಲ್ಲಿ ಕಠಿಣ ವರ್ತನೆಯಿಂದ ಹಾನಿಯುಂಟು. ಅನಾವಶ್ಯಕ ಮತ್ತು ಅಸ್ವಾಭಾವಿಕವಾದ ಶಬ್ದಗಳು ನಾಯಿಬೊಗಳುವದು ಮುಂತಾದ್ದರಿಂದ ಹಾಲು ಕಡಿಮೆಯಾಗುತ್ತದೆ ಹಾಲು ಕೊಡುವ ದನಗಳ ಬಳಿ ಅಪರಿಚಿತಸ್ಥರನ್ನಾಗಲೀ, ನಾಯಿಗಳನ್ನಾಗಲೀ ಬಿಡಬಾರದು.

3 ಕಟ್ಟುವದು — ಅನಾವಶ್ಯಕ ದಯೆತೋರಿಸಿ ಉದ್ದ ಹಗ್ಗದಿಂದ ಕಟ್ಟಿ ಹಾಕಿದರೆ ಕೆಡಕುಗಳಿವೆ ಮಲಮೂತ್ರಗಳನ್ನು ಮಲಗುವಲ್ಲಿ ಮಾಡುತ್ತವೆ. ಆಹಾರದ ತೊಟ್ಟಿಯಲ್ಲಿ ಹಾಕುತ್ತವೆ. ಕೈ ಕಾಲುಗಳಿಗೆ ಸುತ್ತಿಕೊಳ್ಳುತ್ತವೆ. ಗಿಡ್ಡಾಗಿ ಕಟ್ಟುವದರಿಂದ ಈ ಕೆಡಕುಗಳಿರುವದಿಲ್ಲ ಹಸಗಳಿಗೆ ಹಗ್ಗ ಅಥವ ಸರಪಣಿಗಿಂತ ಮರದ ಅಥವ ಕಬ್ಬಿಣದ ತೆಕ್ಕೆಗಳು ಮೇಲು ಎಮ್ಮೆಗಳ ಕುತ್ತಿಗೆಗೆ ಕಟ್ಟಬೇಕು ಇವಕ್ಕೆ ಹಗ್ಗಕ್ಕಿಂತ ಸರಪಣಿಯೇ ಜಾರಿಯಾಗುತ್ತದೆ. ಹಗ್ಗ ಆಗಾಗ ಕುಂಬಾಗಿ ತುಂಡುತ್ತವೆ ಎಮ್ಮೆಗಳಿಗೆ ತಪ್ಪಿಸಿಕೊಂಡು ಕೆಡಕುಮಾಡಲು ಅವಕಾಶ ದೊರೆಯುತ್ತದೆ.

4 ಮೈಯ್ಯುಜ್ಜುವಿಕೆ ಮತ್ತು ತೊಳೆಯುವಿಕೆ —ಹಸಗಳ ಮೈಯ್ಯನ್ನು ನಿತ್ಯವೂ ಉಜ್ಜುವದರಿಂದ ಪ್ರಯೋಜನವಿದೆ ತೆಂಗಿನ ಬೀಲಗಳನ್ನು ಉಪಯೋಗಿಸಬಹುದು. ಹಸಗಳನ್ನು ಪೂರ್ತಿಯಾಗಿ ಸ್ನಾನಮಾಡಿಸಲೇ ಬಾರದು. ಸಗಣಿ ಮಣ್ಣು ಇದ ಭಾಗ ಮಾತ್ರ ತೊಳೆದುಕೊಂಡರೆ ಸಾಕು. ಎಮ್ಮೆಗಳನ್ನು ದಿವಸಕ್ಕೊಂದಾವರ್ತಿಯಾದರೂ ತೊಳೆಯಬೇಕು. ನೀರೊಳಗೆ ಕೂತುಕೊಳ್ಳಲು ಅವಕಾಶವಿದ್ದರೆ ಇನ್ನೂ ಮೇಲು ಎಮ್ಮೆಗಳ ಮೈಯ್ಯನ್ನು ಪರ್ಯಾಕ್ಷ ಮೂರಾವರ್ತಿ ಬೋಳಿಸಬೇಕು. ಹೇನಾಗುವದನ್ನು ತಪ್ಪಿಸಲಿಕ್ಕಾಗಿ ಹೀಗೆ ಮಾಡುವದು

5. ಹಾಸಿಗೆ —ಹತ್ತಿಬ ಹೊಟ್ಟು, ನೆಲೆಗಡಲೆ ತೊಪ್ಪೆ ಆಹಾರಕ್ಕೆ ಆಗದ ಹುಲ್ಲು ಮುಂತಾದ್ದನ್ನು ಮಲಗಲು ಹಾಸಿಗೆಯಾಗಿ ಉಪಯೋಗಿಸಬೇಕು. ಆರೋಗ್ಯನಿಯಮಗಳಿಗನುಸಾರವಾಗಿ ಹಾಲು ಕರೆಯಲು ಕೊಟ್ಟಿಗೆಯ ನೆಲವು ಸಿಮೆಂಟಿನಿಂದಾಗಲೀ,ಹಾಸುಗಲ್ಲಿನಿಂದಾಗಲೀ ಮುಚ್ಚಿರಬೇಕು ಅಂಥಾ ನೆಲವು ಚಳಿಗಾಲದಲ್ಲಿ ತುಂಬಾ ತಣ್ಣಗಿರುತ್ತದೆ. ಆದ್ದರಿಂದ ವಾಯುರೋಗವು ಕೆಚ್ಚಲಿನ ಬಾಯಿಲೆಗಳು ಬರುವಸಂಭವವುಂಟು. ಬೇರೆ ಹಾಸಿಗೆ ವಸ್ತು ಸಿಕ್ಕದಿದ್ದರೆ ಒಣಲು ಮಣ್ಣು ಗೊಯಿಗೆ ಅಥವಾ ಕಪ್ಪುಬಣ್ಣದ್ದಲ್ಲದ ಮಣ್ಣನ್ನೇ ಆದರೂ ಹಾಕಬೇಕು

6. ಕೊಟ್ಟಿಗೆಯ ಪರಿಶುದ್ಧತೆ.— ಹಾಲು ಪರಿಶುದ್ಧವಾಗಿರಬೇಕಾದರೆ ಕೊಟ್ಟಿಗೆಯೂ ಪರಿಶುದ್ಧವಾಗಿರಬೇಕು. ನೆಲದೊಳಕ್ಕೆ ಹೀರಿಕೊಳ್ಳಲು ಅವಕಾಶವಿಲ್ಲದ ಗಟ್ಟಿಯಾದ ಹಿಂದಕ್ಕೆ ಇಳಿಜಾರಾಗಿರುವ ನೆಲವಾಗಿ ಗಂಜಳವು ಹೋಗಲು ಒಂದು ಚರಂಡಿ ಸಹ ಉಳ್ಳದ್ದಾಗಿರಬೇಕು ಹಗಲು ಹೊತ್ತಿನಲ್ಲಿ ಸಗಣಿಯನ್ನು ಆಗಾಗ್ಯೆ ತೆಗೆಯಬೇಕು. ಚರಂಡಿಯನ್ನು ನೀರಿನಿಂದ ಆಗಿಂದಾಗ್ಯೆ ತೊಳೆಯಬೇಕು

7. ಕುಡಿಯುವ ನೀರು — ಹಾಲು ಕೊಡುವ ದನಗಳಿಗೆ ತುಂಬಾ ಪರಿಶುದ್ಧವಾದ ಕುಡಿಯುವ ನೀರು ಬೇಕು ಮೇಯಲಿಕ್ಕೆ ಬಿಡುವದಾದರೆ ಹಗಲು ಹೊತ್ತು ಮೂರು ಯಾ ನಾಲ್ಕು ಸಾರಿ ಕುಡಿಯಲು ಅವಕಾಶ ಕೊಡಬೇಕು. ಕುಡಿಯುವ ನೀರು ಪರಿಶುದ್ಧವಾಗಿರಬೇಕೆಂಬದು ಮುಖ್ಯ—ನಿಂತ ನೀರು, ಹಳ್ಳಗಳ ನೀರು ಕುಡಿಯಬಾರದು

8 ಕರಬಿಡುವುದು—ದಿವಸಕ್ಕೆ ಎರಡಾವರ್ತಿ ಕರಬಿಡಬೇಕು ಒಂದೇ ಸಮವಾದ ಎಡೆ ಬಿಟ್ಟು ಕರೆಯಬೇಕು. ಕರೆಯುವ ಮುಂಚೆ ಕೆಚ್ಚಲನ್ನು ತೊಳೆದು ಶುದ್ಧ ಮಾಡಿಕೊಳ್ಳಬೇಕು ಅವಶ್ಯವಿದ್ದಾಗ ಕರವನ್ನೇ ಮುಂಚೆ ಮೊಲೆ ಉಣ್ಣಲು ಬಿಡಬೇಕು ಒಂದು ತಿಂಗಳು ಅಥವ 6 ವಾರದನಂತರ ಕರವಿಗೆ ಹಾಲಿಗಿಂತ ಬೇರೆ ತಿಂಡಿಯೇ ಜಾರಿಯಾಗುವದರಿಂದ ಹಾಲು ಸೋರಿಸಿದ ಕೂಡಲೇ ಕರವನ್ನು ಕಟ್ಟಿಬಿಡಬೇಕು. ಹೇಗೂ ಆಖ್ಯೇರಿನಲ್ಲಿ ಬರುವ ಹಾಲನ್ನು ಕರವಿಗೆ ಬಿಡಬಾರದು. ಯಾಕೆಂದರೆ ಆ ಹಾಲಿನಲ್ಲೇ ಹೆಚ್ಚಿಗ ಸತ್ವವಿರುವದು ಮತ್ತು ಹಚ್ಚು ಕಾಲದ ವರೆಗೆ ಮೊಲೆಯುಣ್ಣಲು ಬಟ್ಟರೆ ತಾಯಿಗೆ ಹೆಚ್ಚು ಶ್ರಮವಾಗುತ್ತದೆ. ಮತ್ತು ಆಖ್ಯೇರಿನಲ್ಲಿ ಕರ, ಮೊಲೆಯುಣ್ಣುವ ಅಭ್ಯಾಸ ಮಾಡಿದರೆ ಹಸವು ಕರವಿಗಾಗಿ ಹಾಲನ್ನು ಕಟ್ಟಿಬಿಡುತ್ತದೆ.

ಕರವಿಗೆ ಒಂದು ಮೊಲೆಯನ್ನೇ ಬಿಡುವದಾದರೆ ಒಂದೊಂದು ಸಾರಿ ಕರೆಯುವಾಗ ಒಂದೊಂದು ಮೊಲೆಯನ್ನು ಬಿಡಬೇಕು ಇಲ್ಲವಾದರೆ ಕೆಚ್ಚಲು ಒಂದೇ ಕಡೆಯಾಗಿಬಿಡುತ್ತದೆ ಕರವಿಗೆ ಒಂದು ಮೊಲೆ ಬಿಡುವದಾದರೂ ಆಖ್ಯೇರಿ ಕರೆಯುವಿಕೆಯು ಕೈಯಿಂದ ಆಗಬೇಕೇ ಹೊರತು ಕರುವಿಗೆ ಬಿಡಬಾರದು

ಕರ ಬಿಡುವವರ ಮೈ ಬಟ್ಟೆ ತುಂಬಾ ಶುದ್ಧವಾಗಿರಬೇಕು ಆರೋಗ್ಯವಿಲ್ಲದವರು ಕರೆಯಬಾರದು. ಕ್ಷಯರೋಗ ಮತ್ತು ಅಸುಖಂಳ ಇರುವವರು ಮತ್ತು ಸನ್ನಿಪಾತದಿಂದ ತಕ್ಷಿಲ ವಾಸಿಯಾದವರು ಸಹ ದನಗಳ ಉಪಚಾರಕ್ಕಾಗಲೀ ಕರೆಯುವಿಕೆಗಾಗಲೀ ಹೋಗಬಾರದು

ಕರೆಯುವದು ಆದಷ್ಟು ಬೇಗನೆ ತೀರಬೇಕು. ದನವಿಗೆ ನೋವನ್ನುಂಟುಮಾಡುವಂತಿರಬಾರದು. ಹೆಬ್ಬೆಟ್ಟನ್ನು ಮಡಚಿಕೊಂಡು ಕರೆಯಬಾರದು. ಕರೆಯುವವರ ಕೈಬೆರಳಿನ ಉಗುರು ಉದ್ದವಾಗಿರಬಾರದು. ಕರೆಯುವಾಗ ಧಾನ್ಯದ ತಿಂಡಿ ಕೊಡುವ ಪದ್ಧತಿಯೂ, ಒದೆಯುವದನ್ನು ತಪ್ಪಿಸಲು ಕಾಲು ಕಟ್ಟುವ ಪದ್ಧತಿಯೂ ಇದೆ

9, ಆಹಾರ—ದನಗಳಿಗೆ ಕೊಡುವ ತಿಂಡಿಯು ಎರಡು ತರಹದ್ದು (ಎ) ಒರಟು ಅಥವಾ ತುಂಬತಕ್ಕೊಳ್ಳುವಂಥಾದ್ದು—(ಬಿ) ಸ್ವಲ್ಪವಾದರೂ ಹೆಚ್ಚು ಸತ್ವವಿರುವಂಥಾದ್ದು. ಇವು ಸ್ವಳಕ್ಕೆ ತಕ್ಕಂತೆ ಮಾರ್ಪಡುತ್ತದೆ. ದವಸ ಧಾನ್ಯಗಳು ಬೈಹುಲ್ಲು, ಜೋಳದ ಕಡ್ಡಿ, ಹಸಿ ಹುಲ್ಲು ಇವೇ ಒರಟು ತಿಂಡಿಗಳು ಹತ್ತೀ ಬೀಜ, ಬೇಳೆಯ ಚರಟು, ಗೋದಿ ತೌಡು ಹಿಂಡಿ, ನೆಲಗಡಲೆ ತೆಂಗಿನ ಕಾಯಿ, ಇವೇ ಮುಂತಾದವು ಸಾರವತ್ತಾದ ತಿಂಡಿ. ಕ್ರಯ ಮತ್ತು ದೊರಕುವಿಕೆಯನ್ನು ನೋಡಿ ಆರಿಸಿಕೊಳ್ಳಬೇಕು

ಸಾಧಾರಣವಾಗಿ ಆಹಾರ ನಿರ್ಣಯದ ಬಗ್ಯೆ ಈ ಕೆಳಗಿನ ವಿಷಯಗಳನ್ನು ನೆನಪಿನಲ್ಲಿಡಬಹುದು.

| | | ಮಳೆಗಾಲ | ಬೇಸಿಗೆಕಾಲ |
|---|---|---|---|
| ಒರಟು ತಿಂಡಿ | ಒಣಗಿದ್ದು | 10 ರಾತಲು | 20 ರಾತಲು |
| | ಹಸಿ | 30 ರಾತಲು | 10 ರಾತಲು |
| ಸಾರವತ್ತಾದ ತಿಂಡಿ | ಪೂರ್ತಿ ಹಾಲು (16ರಿಂದ 20ರಾತಲು) ಕೊಡುವಾಗ 6 ರಾತಲ | | |
| | ಅರ್ಧ ಹಾಲು (8ರಿಂದ 10 ರಾತಲು) ಕೊಡುವಾಗ 4 ರಾತಲು | | |

ಈ ಅಳತೆಯು ಸಾಧಾರಣ 100 ರಾತಲು ತೂಕವಿರುವ ರಾಸಿಗೆ—ಇನ್ನು, ತೂಕದ ಹೆಚ್ಚು ಕಡಿಮೆ ಮೇಲೆ ಆಹಾರವನ್ನು ಹೆಚ್ಚು ಕಡಿಮೆ ಮಾಡಿಕೊಳ್ಳಬೇಕು ಎಮ್ಮೆಗಳಿಗೆ ಆಹಾರ ಹೆಚ್ಚಿಗೆ ಬೇಕು. ಹತ್ತಿ ಬೀಜವು ಸಾರವತ್ತಾದ ಆಹಾರದ ಅರ್ಧಕ್ಕಿಂತ ಹೆಚ್ಚಾಗಕೂಡದು. ಎಲ್ಲ ತಿಂಡಿಗಳು ರುಚಿಯಾಗಿಯೂ, ರುಚಿಯಾಗಿಯೂ ಇರಬೇಕು. ಮುಗ್ಗು ಹಿಡಿದದ್ದು, ಕೊಳೆತದ್ದು ಆಗದು. ಆಹಾರವನ್ನು ದಿವಸಕ್ಕೆ ಎರಡಾವರ್ತಿ ಕೊಡಬೇಕು ಆಯಾ ಸಾರಿ ತಿಂದು ತೀರಿಸುವಷ್ಟೇ ಕೊಡಬೇಕು ತಿಂದು ಮಿಕ್ಕ ತಿಂಡಿಯನ್ನು ದನದ ಮುಂದೆ ಬಿಡಬಾರದು, ತೆಗೆದುಬಿಡಬೇಕು.

ಉಪ್ಪು, ಕಲ್ಲುಪ್ಪು ಸಿಕ್ಕುವದಾದರೆ ಒಂದೊಂದು ತುಂಡನ್ನು ಒಂದೊಂದು ರಾಸಿನ ಬಳಿ ಇಡಬೇಕು. ಇಲ್ಲವಾದರೆ ಸಾರವತ್ತಾದ ತಿಂಡಿಯ ಜೊತೆಯಲ್ಲಿ ಎರಡು ಔನ್ಸ್ ಉಪ್ಪಿನ ಪುಡಿಯನ್ನು ಸೇರಿಸಿಕೊಳ್ಳಬಹುದು.


ರು ಸೋಧಿ, ಕಮಿಟಿಯ ಹಾಸಲು ಕಾಣಿಸಿದ ವಿಳಾಸಕ್ಕೆ ಒಪ್ಪಿಸಬಹುದು. ಏಜೆಂಟರು ಎಲ್ಲಾ ಕಡೆಗಳಲ್ಲಿಯೂ ಕಮಿಟಿಯವರಿಗೆ ಬೇಕಾಗಿರುವರು

ಬಿ. ಮಂಜುನಾಥ ಬಾಳಿಗ,
ತಾ. 16—3—28. ಹಾನರರಿ ಸಕ್ರೆಟರಿ
6—6 ಕೆನರಾ ಹೈಸ್ಕೂಲ್ ಸೋಧಿ, ಬೈಟೋ ಗಲ್ಲಿ,

### ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಹೊಸದಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸಮನಾದ ಸೀಮೆಯ ಭಂಗಾರದಿಂದ ಕಟ್ಟಿಸಲ್ಪಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವದು. ಇದರ ಬಣ್ಣವು ಕೆಡದಂತೆ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು

7 ಕಲ್ಲಿನ ಬಿಳಿಯ ಓಲೆ ಜೊತೆ 1ಕ್ಕೆ 2—0—0
7 ಕೆಂಪು ಕಲ್ಲಿನ ಓಲೆ ಜೊತೆ 1ಕ್ಕೆ 2—8 —0
ವಿಳಾಸ —ಕೆ. ನಾಥಮುನಿ ಅಂಡ್ ಸನ್ಸ್,
52—20 169, ಜೈನಾ ಬಜಾರ್, ಮದರಾಸು.

# ಕರ್ಣಿಕ

ಎ ಗ್ರ್ಯಾಮಿ ಕ್ ಚರ್ ಸ್ಚರ್
ಮಲೇರಿಯಾ, ಇನ್‌ಫ್ಲುಯೆಂಝಾ, ಸಹುಕಜ್ವರ, ಅಡಿವಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲ ಶುದ್ಧಿಯಾಗಿ ಜ್ವರವು ಒಂದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪. ಟಪ್ಪಾಲು ವೆಚ್ಚ ಬೇರೆ.

**ಸಾ ರ ಸಾ ಪ ರಿ ಲಾ.**

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವುದಕ್ಕೆ ಇದು ಖಾತ್ರಿಯಾದ ಔಷಧ ಬೆಲೆ ೧ ಬಾಟ್ಲಿಗೆ ರೂ .೧—೦—೦. ಟಪ್ಪಾಲು ವೆಚ್ಚ ಬೇರೆ.

ಕರ್ಣಿಕ ಬ್ರದರ್ಸ
ಪಟಾಪ್ ಲೇನ್,
12— 2 ಗಿರಗಾಂವ. ಮುಂಬಾಯಿ.

ಪ್ರಬಲ್ಲ. ಅಲ್ಲದೆ 3—4 ತಿಂಗಳ ಕಾಲ ನಿಂತು ನಂತರ ಹೋಗಿಬಿಡುವದು ಇಂಥಾ ಹೆಂಗಸರು ಈ ಎಣ್ಣೆಯನ್ನು 15 ದಿನಗಳು ಸೇವಿಸುವುದರಿಂದ ಗರ್ಭವು ನಿಂತು ಪುತ್ರ ಸಂತಾನವಾಗುವುದು ಕೆಲವು ಹೆಂಗಸರಿಗೆ ಮುಟ್ಟಾಗುವ ಸಮಯದಲ್ಲಿಯೂ, ಮುಟ್ಟಾದ ನಂತರವೂ ಉಂಟಾಗುವ ಹೊಟ್ಟೆ ನೋವು ಮುಂತಾದವುಗಳನ್ನು ಖಂಡಿತ ಗುಣ ಪಡಿಸುವದು ಈ ಎಣ್ಣೆಯನ್ನು ಬೊಂಬಾಯಿ, ಮದರಾಸು ಅಧಿಪತ್ಯಗಳಲ್ಲಿ ಮಕ್ಕಳಿಲ್ಲದವರು ಉಪಯೋಗಿಸಿ ಪುತ್ರ ಸಂತಾನ ಪಡೆದಿರುವರು. ಒಂದು ಬಾಟ್ಲಿಯನ್ನು ತರಿಸಿ ಪರೀಕ್ಷಿಸಿರಿ. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸುತ್ತೇವೆ

ಕ್ರಯ ಬಾಟಲ್ 1ಕ್ಕೆ 2—8—0
ವಿಳಾಸ. —ಕೆ. ಎಸ್. ರಾಧಾಕೃಷ್ಣ ಬ್ರದರ್ಸ್,
109. ಜೈನಾ ಬಜಾರ್ ರೋಡ್,
ಮದರಾಸು.
52— 20

### ಏಕೆ ನರಳುತ್ತೀರಿ?

ಪ್ರಾಚೀನ ಋಷಿಗಳಿಂದ ಪ್ರಣೀತವಾದ ಆಯುರಾರೋಗ್ಯೈಶ್ವರ್ಯ ವರ್ಧಕವಾದ ಆರೋಗ್ಯವಿಧಿಗಳನ್ನು ತಿಳಿಯದೆ ಅಜ್ಞಾನಾಂಧಕಾರದಲ್ಲಿ ಮುಳುಗಿ ಅನೇಕ ತರಹಗಳ ವ್ಯಾಧಿಗಳಿಂದ ಏಕೆ ನರಳುವಿರಿ?

**ಶ್ರಯವು! ಇಲ್ಲಿದೆ!!**

ಉಚಿತವಾಗಿ ಕೊಡಲ್ಪಡುವ ನಮ್ಮ

ನಮ್ಮ ಔಷಧಿಗಳನ್ನು ವಿಕ್ರಿ ಮಾಡುವದಕ್ಕೆ **ವೈದ್ಯ ವಿದ್ಯೆ** ಏಜಂಟರು ಬೇಕಾಗಿರುವದು.

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52—8

**ರಾಜವೈದ್ಯ ನಾರಾಯಣಜಿ ಕೇಶವಜಿ,**
1/94 ಜೈನ ಬಜಾರು ರೋಡು, ಮದ್ರಾಸು
N. B. — ವೈದ್ಯಸಲಹೆಯು ಫೀಜಲ್ಲದೆ ಕೊಡಲಾಗುವದು.

೬. ಇಚ್ಛಾಭೇದಿ.
ಆಯಾಸವನ್ನುಂಟುಮಾಡದ ಸುಖವಿರೇಚಕ.
ಬಾಟ್ಲಿ 1 ಕ್ಕೆ 0—12—0. 3 ಕ್ಕೆ 2—0—0.
**೭. ದಂತಕಾಂತಿ ಚೂರ್ಣ.** ಡಬ್ಬಿ 1ಕ್ಕೆ 3 ಆಣೆ
**೮. ಗಜಕರ್ಣ ಮುಲಾಮ್.** ಡಬ್ಬಿ 1ಕ್ಕೆ 6 ಆಣೆ
N B ಇವುಗಳಲ್ಲದೆ ಬೇರೆ ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತ
**ಎನ್. ಗಣಪಯ್ಯ ಅಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಸಿಯನ್ಸ್,
1. ಮಂಗಳೂರು, ದ. ಕನ್ನಡ.

### ಕಮ್ಮಿ ಕರೀದಿಯನ್ನು ನೆನಪಿನಲ್ಲಿಡಿ!
### ಲೋಕವಿಖ್ಯಾತವಾದ " ಜಿಗ್ ಜೇಗ್ "



ಟೈಂಪೀಸ್ ಸೈಜು 8 × 4 ½"
ಬೆಲೆ ರೂ. 3—0—0 ಮಾತ್ರ.
3 ವರ್ಷ ಖಾತ್ರಿಕೊಡುತ್ತೇವೆ.

ಈ ಟೈಂಪೀಸು ಬಹಳ ಉತ್ತಮವಾದ ಮತ್ತು ಬಲವಾದ ಆತುಕಾರಗಳಿಂದ ಮಾಡಲ್ಪಟ್ಟು, ಚಿತ್ರದಲ್ಲಿ ತೋರಿಸಿರುವಂತೆ ಸುಂದರವಾದ ಕೆತ್ತನೆಯ ಸ್ಟೆಂಡ್‌ನೊಳಗೆ ಇರಿಸಲ್ಪಟ್ಟದೆ ನೋಡಲು ಸುಂದರವಾಗಿಯೂ, ಸರಿಯಾದ ಗಂಟೆಯನ್ನು ತೋರಿಸುವುದಾಗಿಯೂ ಇರುವ ಈ ಟೈಂಪೀಸನ್ನು ಅನೇಕರು ಉಪಯೋಗಿಸಿ ತೃಪ್ತಿಹೊಂದಿದ್ದಾರೆ.

ಇಂಥಾ ಟೈಂಪೀಸಿಗೆ 3—0—0 ರೂ. ಮಾತ್ರ ಬೆಲೆ.
ಏಜಂಟರು. — ಧನಲಕ್ಷ್ಮಿ ಅಂಡ್ ಕಂಪೆನಿ,
52—8 ಪೋಸ್ಟು ಬಾಕ್ಸು ನಂ. 265. ಮದ್ರಾಸ್

# ವರ್ತಮಾನ ಸಂಗ್ರಹ.

## ಒಳದೇಶ.

ಸೇತುವೆ ರಿಪೇರಿಯಾಗಿ ಮಡಿಕೇರಿ—ಮೂರ್ನಾಡು ಬಸ್ಸ್‌ಸರ್ವಿಸು ಎಂದಿನಂತೆ ಈ ತಾ. 1ರಿಂದ ಪುನಹ ನಡೆಯುತ್ತಿದೆ.

ಫ್ರೇಜರ್‌ಪೇಟೆಯ ಮಿ ಸರಾಫ್ ನಂಜುಂಡ ಶೆಟ್ಟಿಯವರು ಕಳೆದ ತಾ. 22ರಲ್ಲಿ ಶಿವಾಧೀನರಾದರೆಂದು ತಿಳಿಯಲು ವ್ಯಸನಪಡುತ್ತೇವೆ.

ಬರುವ ಗಣಪತಿ ರಥೋತ್ಸವ ಸಂಬಂಧ ಫ್ರೇಜರ್‌ಪೇಟೆಯಲ್ಲಿ ನವಂಬರು ತಾ 16ರಿಂದ 18ರ ವರೆಗೆ ವಾಡಿಕೆಯಂತೆ ಜಾನುವಾರುಗಳ ಒಂದು ಪ್ರದರ್ಶನವು ನಡೆಯುವದು.

ಈ ತಾ. 6ರಿಂದ ನವಂಬರು 22ರ ವರೆಗೆ ತಲಕಾವೇರಿ ಜಾತ್ರೆಗೆ ಪ್ಲೇಗ್ ಯಾ ವಾಂತಿಭೇದಿ ತಗಲಿದ ಪ್ರದೇಶಗಳಿಂದ ಜನರು ಬರುವದನ್ನು ಚೀಫ್‌ಕಮಿಷನರು ನಿರೋಧಪಡಿಸಿರುವರು.

ಕಳೆದ ಆಗೋಸ್ತು ತಿಂಗಳಲ್ಲಿ ಕೊಡಗು ಪ್ರಾಂತ್ಯದಲ್ಲಿ 263 ಜನನಗಳೂ, 374 ಮರಣಗಳೂ ಉಂಟಾದವು. ಇದರಲ್ಲಿ 184 ಮರಣಗಳು ಮಲೇರಿಯ ಜ್ವರದಿಂದಲೂ, 108 ಬೇರೆ ಜ್ವರಗಳಿಂದಲೂ ಸಂಭವಿಸಿದವು.

ದಕ್ಷಿಣ ಕೊಡಗು ಎತ್ಲೆಟಿಕ್ ಯೂನಿಯನ್ನಿನ ವಾರ್ಷಿಕ ಕೈಲ್‌ಮುಹೂರ್ತ ಸ್ಪೋರ್ಟ್ಸ್ ಈ ತಾ 7ರಲ್ಲಿ ಪೊನ್ನಂಪೇಟೆಯ ದಕ್ಷಿಣ ಕೊಡಗು ಜಿಮ್ಖಾನ ಮೈದಾನದಲ್ಲಿ ಮಿ. ಕೆ ಬಿ ತಿಮ್ಮಯ್ಯಂಗಾರವರ ಅಧ್ಯಕ್ಷತೆಯಲ್ಲಿ ನಡೆಯುವದು

ಕಮಿಷನರ್ ಮಿ. ಪ್ರೀಸ್ಟ್ಲೀಯವರ ಪತ್ನಿಯವರು ಕಳೆದ ಆದಿತ್ಯವಾರ ಕೊಡೆಕನಾಲ್‌ನಲ್ಲಿ ಹೆಣ್ಣು ಅವಳಿಜವಳಿ ಮಕ್ಕಳನ್ನು ಪ್ರಸವಿಸಿರುವದರಿಂದ ಪ್ರೀಸ್ಟ್ಲೀಯವರು ತಾ. 1ರಿಂದ ಹತ್ತು ದಿವಸ ರಜೆಯಲ್ಲಿ ಕೊಡೆಕನಾಲಿಗೆ ಹೋಗಿರುವರು.

ಕೊಡಗಿನಲ್ಲಿ ಮಲೇರಿಯಾ ಜ್ವರ ಸಿವಾರಣೋಪಾಯಗಳನ್ನು ಕಂಡುಹಿಡಿಯುವ ಪರಿಶೋಧನಾ ಕೆಲಸಕ್ಕೆ ಸಬ್ ಅಸಿಸ್ಟೆಂಟ್ ಸರ್ಜನರಾದ ಮಿ. ಅಜ್ಜಮಾಡ ಕಾಳಯ್ಯನವರು ಈ ತಿಂಗಳ 1ರಿಂದ ನೇಮಿಸಲ್ಪಟ್ಟಿರುವರಾಗಿ ತಿಳಿಯಬರುತ್ತದೆ.

ತನ್ನ ಚಿಕ್ಕತಾಯಿ ತಂಗೆವ್ವನೆಂಬವಳನ್ನು ಗುಂಡುಹೊಡೆದು ಕೊಂದನೆಂಬ ತಕ್ಸೀರಿನ ಮೇಲೆ ಕಳೆದ ಆಗೋಸ್ತು ತಾ. 30ರಲ್ಲಿ ಸೆಶ್ಶನ್ ಜಡ್ಜರಿಂದ ಫಾಶಿ ಶಿಕ್ಷೆಗೆ ಗುರಿಮಾಡಲ್ಪಟ್ಟಿದ್ದ ಕಾಟಕೇರಿಯ ನಾಣುಮನೆ ಪೊನ್ನಪ್ಪನೆಂಬವನು ಅಪ್ಪೀಲು ಮಾಡಿದಲ್ಲಿ ಚೀಫ್‌ಕಮಿಷನರಿಂದ ಬಿಡುಗಡೆ ಮಾಡಲ್ಪಟ್ಟಿರುವನು.

ಕೊಡಗಿನವರಲ್ಲಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದವರ ಪೈಕಿ ಇಂಗ್ಲಿಷಿನಲ್ಲಿ ಎಲ್ಲರಿಗಿಂತಲೂ ಹೆಚ್ಚು ನಂಬರು ತೆಗೆದವರಿಗೆ ಕೊಡಲು ಮದ್ರಾಸು ಯೂನಿವರ್ಸಿಟಿಯಲ್ಲಿ ಇಟ್ಟಿರುವ ಕೊರವಂಡ ಅಪ್ಪಯ್ಯ ದೇವಯ್ಯ ಇನಾಮು ಈ ವರ್ಷ ಮಿ. ಮಂಡೇಪಂಡ ಡಬ್ಲ್ಯು. ಕಾಳಪ್ಪನವರಿಗೆ ದೊರಕಿದೆ.

ಕಳೆದ ತಾ. 26ರಲ್ಲಿ ಅಮ್ಮತ್ತಿಯಲ್ಲಿ ಗೌರಿ ಬಿಡುವ ಮೆರವಣಿಗೆಯ ಉತ್ಸವವನ್ನು ನೋಡಲು ಸೇರಿದ್ದ ಜನರ ಪೈಕಿ ವೀರರಾಜಪೇಟೆಯ ಒಬ್ಬ ಮುಸಲ್ಮಾನ್ ಯುವಕನು ಒಬ್ಬ ಪರಸ್ತ್ರೀಯ ಕೈಯನ್ನು ಹಿಡಿಯಲೆತ್ನಿಸಿದ್ದರಿಂದ ಹೊಡೆದಾಟ ಉಂಟಾಯಿತೆಂದೂ, ಈ ವಿಷಯ ಪೋಲೀಸಿನವರಿಗೆ ತಿಳಿಸಲಾಗಿದೆಯೆಂದೂ ವರ್ತಮಾನ.

ಕಳೆದ ಶುಕ್ರವಾರ ರಾತ್ರಿ ಮಿ. ತಿರುವೆಂಗಡ ಪಿಳ್ಳೆಯವರ ಆಶ್ರಯದಲ್ಲಿ ವೀರರಾಜಪೇಟೆ ಗಣಪತಿ ಉತ್ಸವದ ಮೆರವಣಿಗೆಯು ಬಹು ಸಂಭ್ರಮದಿಂದ ನಡೆಯಿತೆಂದೂ, ಸುತ್ತುಮುತ್ತಲಿನ ಗ್ರಾಮಗಳಿಂದ ಸಾವಿರಗಟ್ಟಲೆ ಜನರು ಸೇರಿದ್ದರೆಂದೂ, ಗಲಾಟೆಯೇನೂ ಉಂಟಾಗದೆ ಎಲ್ಲವೂ ಶಾಂತವಾಗಿ ಮುಗಿಯಿತೆಂದೂ ತಿಳಿಯುತ್ತೇವೆ.

ದೇಶದ ಹಲವು ಭಾಗಗಳಲ್ಲಿ ಮಳೆಬೀಳದ್ದರಿಂದ ಗದ್ದೆಗಳಲ್ಲಿ ನೀರಿಲ್ಲದೆ ಒಣಗಿ, ಬೆಳೆಯು ಹಾಳಾಗುತ್ತಿದೆಯೆಂದು ಜನರು ಬೊಬ್ಬೆಯಿಡುತ್ತಿರುವರು ಇನ್ನು ಒಂದೆರಡು ವಾರ ಮಳೆ ಬಾರದಿದ್ದರೆ ಕೊಡಗಿನಲ್ಲಿ ಕ್ಷಾಮವುಂಟಾಗುವದೋ ಎಂಬ ಸಂಶಯವಿದೆ. ಮಡಿಕೇರಿಗೆ ಇಗಾಗ್ಗೆ ಮೋಡ ಕವಿದುಕೊಂಡಿರುವದಾದರೂ ನಿನ್ನೆ ರಾತ್ರೆ ಸ್ವಲ್ಪ ಮಳೆ ಬಿತ್ತು.

ಕಾಸರಗೋಡು ತಾಲೋಕಿನಲ್ಲಿ ನಡೆದ ಜಮೀನ್ದಾರರ ಸಂಘದ ವಾರ್ಷಿಕ ಸಮ್ಮೇಳನದಲ್ಲಿ ಸ್ವಾಗತದ ಸಮಿತಿಗಾಗಿ ಚುನಾವಣೆಯಾಗಿ, ಉಳಿದಿರುವ ಹಣದ ವಿಲೆವಾರಿ ಬಗ್ಗೆ ಈ ತಾರೀಕು 20ನೇ ಶನಿವಾರ ನಾಪೋಕ್ಲಿನಲ್ಲಿ ಮಧ್ಯಾಹ್ನ 1 ಗಂಟೆಗೆ ಮೀಟಿಂಗ್ ನಡೆಯುವುದೆಂದೂ, ಸ್ವಾಗತಕ್ಕೆ ಸಹಾಯ ಮಾಡಿದವರೆಲ್ಲರೂ ದಯಮಾಡಿಸಬೇಕೆಂದೂ, ಸ್ವಾಗತ ಸಮಿತಿ ಸೆ. ಕೆ ಪಿ ಚಿಣ್ಣಪ್ಪನವರು ತಿಳಿಸಿರುತ್ತಾರೆ.

ಮಡಿಕೇರಿ ಮೂರ್ನಾಡು ರಸ್ತೆಯ 5/5 ನೇ ಮೈಲು [illegible]ಕಲ ಸೇತುವೆಯು ತಯಾರಾಗಿ ಈ ತಾ. 1ರಿಂದ [illegible] ಬಿಡಲಾಗಿದೆಯೆಂದೂ, ಅದರ ಮೇಲೆ ದಾಟುವ [illegible]ಗಳು 8 ಮೈಲಿನ ದರಕ್ಕಿಂತ ಜೋರಾಗಿ [illegible]ದೆಂದೂ, ಇದನ್ನು ಮೀರಿದರೆ ಸೇತುವೆಯು [illegible] ರಸ್ತೆಯು ವಾಹನಗಳಿಗೆ ಮುಚ್ಚಲ್ಪಡಬೇಕಾ[illegible] ಎಗ್ಜಿಕ್ಯುಟಿವ್ ಇಂಜಿನಿಯರವರು ತಿಳಿಸಿರುತ್ತಾರೆ. [illegible]ರರವರಿಂದ ನೇಮಿಸಲ್ಪಟ್ಟ ಈ ಪ್ರಾಂತ್ಯದ [illegible]ಮಿಟಿಯ ಮೀಟಿಂಗು ಕಳೆದ ತಾ. 29ರಲ್ಲಿ ಮಡಿಕೇರಿಯಲ್ಲಿ ನಡೆಯಿತು ಅದರ ಮೆಂಬರುಗಳಾದ ಕಮಿಷನರ್ ಮಿ. ಪ್ರೀಸ್ಟ್ಲೀಯವರು, ಚೀಫ್ ಫಾರೆಸ್ಟ್ ಆಫೀಸರಾದ ಮಿ ರಾಬಿನ್‌ಸನ್ನರು, ಮಿ. ಪಿ ಟಿ ಕುಶಾಲಪ್ಪನವರು ಮತ್ತು ಮಿ ಪಿ. ಬಿ ಮೇದಪ್ಪನವರು ಇವರೆಲ್ಲರೂ ಹಾಜರಿದ್ದರು. ಇದಕ್ಕಾಗಿ ಬಂದಿದ್ದ ಮದ್ರಾಸಿನ ಎಕ್ಸೈಟಿಂಟ್ ಜನರಲರೂ ಹಾಜರಿದ್ದರು.

ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯವರಿಂದ ನೇಮಿಸಲ್ಪಟ್ಟ ರಾಜಕೀಯ ರಚನೆ ಪ್ರಚಾರಕ ಉಪಕಮಿಟಿಯ ಮೀಟಿಂಗು ತಾ. 29—9—28ರಲ್ಲಿ ಸಂಘದ ಹಾಲ್‌ನಲ್ಲಿ ನಡೆದು, ರಚನೆಯ ಪ್ರಚಾರಕ್ಕಾಗಿ ಈ ಕೆಳಗಿನ ಮೇರೆ ಪಬ್ಲಿಕ್ ಮೀಟಿಂಗುಗಳನ್ನು ನಡಿಸುವಂತೆ ತೀರ್ಮಾನಿಸಲಾಗಿದೆ. ಅಕ್ಟೋಬರು ತಾ. 14ರಲ್ಲಿ ಗೋಣಿಕೊಪ್ಪಲು, ತಾ. 15ರಲ್ಲಿ ಮಡಿಕೇರಿ, ತಾ. 24ರಲ್ಲಿ ವೀರರಾಜಪೇಟೆ, ತಾ. 25ರಲ್ಲಿ ಮೂರ್ನಾಡು, ತಾ 26ರಲ್ಲಿ ಮಡಿಕೇರಿ, ತಾ 27ರಲ್ಲಿ ನಾಪೋಕ್ಲು, ತಾ. 28ರಲ್ಲಿ ಕಾಗುಣಾದ; ನವಂಬರು ತಾ. 17ರಲ್ಲಿ ಶನಿವಾರಸಂತೆ, ತಾ. 18ರಲ್ಲಿ ಹೆಬ್ಬಾಲೆ, ಮತ್ತು 19ರಲ್ಲಿ ಸೋಮವಾರಪೇಟೆ

ಕೊಡ್ಲಿಪೇಟೆ ಸಮೀಪ ಇರುವ ಕೊಡ್ಲಿಕಲ್ಲು ಮಠದ ಕಾಲವಾದ ಗುರುಗಳ ಆರಾಧನೆಯನ್ನು ಅಲ್ಲಿಯ ಭಕ್ತರು ತಾರೀಕು 1 ರಲ್ಲಿ ಸದರಿ ಮಠದಲ್ಲಿ ನಡಿಸಿದರು ಒಂದು ಸಾವಿರಕ್ಕಿಂತ ಹೆಚ್ಚು ಜನರು ಸೇರಿದ್ದರಂತೆ ಗ್ರಾಮಸ್ಥರು ಮಠದ ಆಡಳಿತದಲ್ಲಿದ್ದ ಸಿದ್ಧಲಿಂಗ ಸ್ವಾಮಿ ಎಂಬವರನ್ನು ಬಲುಮೆಯಿಂದ ಹೊರಪಡಿಸಿ ಮಠವನ್ನು ಸ್ವಾಧೀನಪಡಿಸಿಕೊಂಡರೆಂತಲೂ, ಮುಂದಿನ ಗುರುಗಳನ್ನು ನೇಮಿಸುವ ಪರ್ಯಾಲೋಚನೆಯಲ್ಲಿದ್ದಾರೆಂತಲೂ, ಈ ಸಂದರ್ಭದಲ್ಲಿ ಶಾಂತತಾ ಭಂಗವಾಗಬಹುದೆಂತಲೂ, ಇದು ಕೊಡ್ಲಿಪೇಟೆ ಲಿಂಗಾಯ್ತರಿಗೆ ಸೇರಿದ ಮಠವೆಂತಲೂ, ಗ್ರಾಮಸ್ಥರ ಸ್ವಾಧೀನದಿಂದ ಮಠವನ್ನು ಮೇಲೆ ನಮೂದಿಸಿದ ಸಿದ್ಧಲಿಂಗಸ್ವಾಮಿಯವರಿಗೆ ಕೊಡಿಸಬೇಕೆಂತಲೂ ಕೊಡ್ಲಿಪೇಟೆ ಲಿಂಗಾಯ್ತರು ಸಬ್‌ಜಡ್ಜಿಯವರ ಕೋರ್ಟಿಗೆ ಅರ್ಜಿ ಹಾಕಿದ್ದರ ಮೇಲೆ ಸಬ್‌ಜಡ್ಜಿಯವರು ಮಠವನ್ನು ಜಪ್ತಿಮಾಡಿಸಿದ್ದಾರೆ. ಈ ವಿಷಯ ಸದರಿ ಕೋರ್ಟಿನಲ್ಲಿ ತನಿಖೆ ನಡೆಯುತ್ತಲಿದೆ. ಒಂದುವಾರಕ್ಕೆ ಮೊದಲು ಗ್ರಾಮಸ್ಥರು ಮಠವನ್ನು ಅಕ್ರಮ ಸ್ವಾಧೀನಪಡಿಸಿಕೊಂಡಿದ್ದರ ವಿಷಯದಲ್ಲಿ ಇದೇ ತರದ ಅರ್ಜಿಯನ್ನು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ ಕೊಡ್ಲಿಪೇಟೆಯವರು ಕೊಟ್ಟಿದ್ದರು ಆ ಅರ್ಜಿಮೇರೆ ಮಠವನ್ನು ಜಪ್ತಿಮಾಡಿದರು. ಎರಡು ದಿನಗಳ ಮೇಲೆ ಗ್ರಾಮಸ್ಥರ ಮನವಿಯನ್ನು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ತನಿಖೆಮಾಡಿ ಜಪ್ತಿಯನ್ನು ಖುಲಾಸ್ ಮಾಡಿ, ಅರ್ಜಿಯ ಮೇಲೆ ತನಿಖೆಯು ಆವಶ್ಯವಿಲ್ಲವೆಂತ ವಜಾ ಮಾಡಿದರು. ಈ ಹುಕುಂ ಆದ ಮೂರು ದಿನದ ನಂತರ ಸಬ್‌ಜಡ್ಜಿಯವರ ಕೋರ್ಟಿಗೆ ಮೇಲೆ ಬರೆದ ಮೇರೆ ಅರ್ಜಿ ದಾಖಲ್ ಮಾಡಲ್ಪಟ್ಟದ್ದಾಗಿದೆ

—— — -

## ಹಿಂದೂದೇಶ.

14 ರೂಪಾಯಿ ಸಂಬಳದ ಕ್ಲಾರ್ಕೊಬ್ಬ ಕಸಬರಿಗೆ ಒಂದು ಲಾಟರಿಯಲ್ಲಿ 125,000 ರೂಪಾಯಿ ದೊರೆತ್ತಿದೆ.

ಕಳೆದ ತಾ 30 ರಲ್ಲಿ ಲಯಲ್ಪುರದಲ್ಲಿ ನಡೆದ ಪಂಜಾಬು ರಾಜಕೀಯ ಪರಿಷತ್ತಿನಲ್ಲಿ ನೆಹರು ಕಮಿಟಿ ವರದಿಗೆ ಒತ್ತಾಸೆಯಾಗಿಯೂ, ಸೈಮನ್ ಕಮಿಷನನ್ನು ಬಹಿಷ್ಕರಿಸುವಂತೆಯೂ ಠರಾವುಗಳು ಮಂಜೂರು ಮಾಡಲಾದವು

ಪೂನಾ ಡಿಸ್ಟ್ರಿಕ್ಟಿನ ಸಾಸ್ವಾಡ ಮುನ್ಸಿಪಲ್ ಕಮಿಟಿಯವರ ಆಡಳಿತೆಯು ಅತೃಪ್ತಿಕರವಾದುದರಿಂದ ಬೊಂಬಾಯಿ ಸರ್ಕಾರದವರು ಸದರಿ ಕಮಿಟಿಯನ್ನು 1930 ನೇ ಮಾರ್ಚಿವರೆಗೆ ಸಸ್ಪೆಂಡ್ ಮಾಡಿ ಹೊಸ ಕಮಿಟಿಯನ್ನು ನೇಮಿಸಿರುವರು.

ಸೋಲಾಪುರದಲ್ಲಿ ಗಣಪತಿ ಉತ್ಸವದ ಮೆರವಣಿಗೆಯಲ್ಲಿ ಹಿಂದೂ ಮುಸಲ್ಮಾನರಿಗೆ ಜಗಳವುಂಟಾಗಿ ಸುಮಾರು 100 ಹಿಂದೂಗಳಿಗೆ ಘಾಯವುಂಟಾಗಿದೆಯೆಂದೂ, ಒಬ್ಬನು ಮೃತನಾದನೆಂದೂ, 38 ಜನರು ಕೈದು ಮಾಡಲ್ಪಟ್ಟಿರುವರೆಂದೂ ವರ್ತಮಾನ.

ಸೈಮನ್ ಕಮಿಷನು ಬೊಂಬಾಯಿಯಲ್ಲಿ ಬಂದಿಳಿಯುವಾಗ ಹರತಾಳವನ್ನು ಆಚರಿಸುವದರ ಜತೆ ಕಮಿಷನನ್ನು ವಿರೋಧಿಸುವಂಥ ಮೆರವಣಿಗೆ, ಮೀಟಿಂಗು, ಮುಂತಾದವುಗಳನ್ನು ನಡಿಸಬೇಕೆಂದು ಬೊಂಬಾಯಿಯ ಕಾಂಗ್ರೆಸ್ ಕಮಿಟಿಯವರು ತೀರ್ಮಾನಿಸಿರುವರು.

ನೆಹರು ಕಮಿಟಿ ರಿಪೋರ್ಟಿನಿಂದ ತೃಪ್ತರಾಗದ ಕೆಲವು ಮುಸಲ್ಮಾನರು, ಸರ್ವಪಕ್ಷೀಯ ಮುಸಲ್ಮಾನರ ಕಾನ್‌ಫರೆನ್ಸನ್ನು ವಿರೋಧಿಸಿಯೂ, ಸರ್ವ ಪಾರ್ಟಿ ಪರಿಷತ್ತಿನಲ್ಲಿ ಒಪ್ಪಲ್ಪಟ್ಟ ನೆಹರು ರಚನೆಗೆ ಒತ್ತಾಸೆಯನ್ನು ಸೂಚಿಸಿಯೂ ಮಹಮ್ಮದಾಬಾದಿನ ಮಹಾರಾಜರು ತಮ್ಮ ಅಭಿಪ್ರಾಯವನ್ನು ಬಹಿರಂಗಪಡಿಸಿರುವರು.

ಬಂಗಾಳದ ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರು ಕಲ್ಕತ್ತಾದ ಶ್ರದ್ಧಾನಂದ ಪಾರ್ಕಿನಲ್ಲಿ ಏರ್ಪಡಿಸಿರುವ ಖಾದಿ ಪ್ರದರ್ಶನವನ್ನು ಲೇಟ್ ಸಿ. ಆರ್ ದಾಸ್‌ರವರ ಪತ್ನಿಯಾದ ಶ್ರೀಮತಿ ವಸಂತಿದೇವಿಯವರು ತಾ 1 ರಲ್ಲಿ ತೆರೆದರು. ನೆರೆದಿದ್ದವರ ಜಯಘೋಷದೊಡನೆ ಮಿ. ಸುಭಾಸ್ ಚಂದ್ರಬೋಸ್‌ರವರು ರಾಷ್ಟ್ರೀಯ ಬಾವುಟವನ್ನು ಮೇಲಕ್ಕೇರಿಸಿದರು.

ಪಂಡಿತ ಜವಾಹಿರ್‌ಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಡಿಸ್ಟ್ರಿಕ್ಟ್ ಕಾನ್‌ಫರೆನ್ಸಿನಲ್ಲಿ ಸೈಮನ್ ಕಮಿಷನನ್ನು ಬಹಿಷ್ಕರಿಸಬೇಕೆಂದೂ, ಸರ್ವಪಾರ್ಟಿ ಪರಿಷತ್ತಿನವರು ಸಿಫಾರಸ್ಸು ಮಾಡಿರುವ ಮಿಶ್ರ ಚುನಾವಣೆಗೆ ಒತ್ತಾಸೆಯಾಗಿಯೂ, ಹಿಂದೂ ದೇಶದ ಆಡಳಿತ ರಚನೆಯ ಅಂತಿಮ ಧ್ಯೇಯವು ಸಂಪೂರ್ಣ ಸ್ವಾತಂತ್ರ್ಯವಾಗಿರಬೇಕೆಂದೂ ಠರಾವುಗಳು ಪಾಸಾದವು.

ಸೈಮನ್ ಕಮಿಷನು ಕಳೆದ ತಾ. 27 ರಲ್ಲಿ ಲಂಡನಿನಿಂದ ಹೊರಟಿತು. ಅದರ ಪ್ರಥಮ ಮೀಟಿಂಗು ಪೂನಾದಲ್ಲಿ ಈ ತಾ. 12 ರಲ್ಲಿ ಪ್ರಾರಂಭವಾಗುವದು. ಅಲ್ಲಿಂದ ಲಾಹೋರ್ ಕರಾಚಿ, ಪೆಶಾವರ್, ಡೆಲ್ಲಿ, ಲಕ್ನೌ, ಪಾಟ್ನಾ, ಶಿಲ್ಲಾಂಗ್, ಕಲ್ಕತ್ತಾ, ಬರ್ಮಾ ಮದ್ರಾಸ್ ಮತ್ತು ನಾಗಪುರಗಳನ್ನು ಸುತ್ತಿಕೊಂಡು 1929 ನೇ ಮಾರ್ಚ 25 ರಲ್ಲಿ ಡೆಲ್ಲಿಗೆ ಹೋಗಿ ಅಲ್ಲಿ ಏಪ್ರಿಲ್ 11 ರ ವರೆಗೆ ಇರುವರು. ಅವರು ಏಪ್ರಿಲ್ 13 ರಲ್ಲಿ ಇಂಗ್ಲೆಂಡಿಗೆ ವಾಪಸು ಹೊರಟು ಹೋಗುವರು.

—— —

## ವಿದೇಶ.

ಜಪಾನಿನ ಸರ್ಕಾರದವರು ಕೋರ್ಟುಗಳಲ್ಲಿ ಜ್ಯೂರಿ ಪದ್ಧತಿಯನ್ನು ಜಾರಿಗೆ ತಂದಿರುವರು ಆ ದೇಶದಲ್ಲಿ ಜ್ಯೂರಿ ಪದ್ಧತಿ ಇಷ್ಟರ ವರೆಗೆ ಉಪಯೋಗಿಸಲ್ಪಡಲೇ ಇಲ್ಲವಂತೆ.

ಈ ತಾ. 1ರಲ್ಲಿ ಬರ್ಮಿಂಗ್ಹ್ಯಾಮ್‌ನಲ್ಲಿ ಮಿ. ಜಾರ್ಜ್ ಲ್ಯಾನ್ಸ್‌ಬರಿಯವರಿಂದ ತೆರೆಯಲ್ಪಟ್ಟ ಲೇಬರ್ ಪಾರ್ಟಿಯವರ ಕಾನ್‌ಫರೆನ್ಸಿನಲ್ಲಿ, ಸದರಿ ಪಾರ್ಟಿಯ ಕಾರ್ಯಕಾರಿ ಮಂಡಳಿಯು ಸೈಮನ್ ಕಮಿಷನನ್ನು ನೇಮಿಸುವಿಕೆಯ ವಿಷಯ ಮಾಡಿದ ತೀರ್ಮಾನವನ್ನು ಪುನರಾಲೋಚಿಸಬೇಕೆಂಬ ಮಿ. ಫೆನ್ನರ್ ಬ್ರಾಕ್ವೆಯವರ ಠರಾವು ಬಹುಮತದಿಂದ ಸೋಲಿಸಲ್ಪಟ್ಟಿತು.

ಬರುವ ನವಂಬರು ತಿಂಗಳಲ್ಲಿ ಕಾಬೂಲಿನಲ್ಲಿ ನಡೆಯಲಿಕ್ಕಿರುವ ಪಠಾಣ ಜಾತಿಯ ಜನಾಂಗಗಳ ಕಾಂಗ್ರೆಸ್ಸಿನಲ್ಲಿ ಅಫಘಾನಿಸ್ತಾನದ ಅಧಿಕಾರವೇ ಹೆಚ್ಚು ಚಲಾಯಿಸಲ್ಪಟ್ಟು, ಆಶ್ರಿತ ರಾಜ್ಯಗಳನ್ನು ಇನ್ನೂ ಅಧೀನದಲ್ಲೇ ಇಡಲು ಪ್ರಯತ್ನಗಳು ನಡಿಸಲ್ಪಡುವವೆಂಬ ಕಾರಣದಿಂದ ಜ್ಯೆನಾದವರು ಈ ಕಾಂಗ್ರೆಸ್ಸಿನಲ್ಲಿ ಭಾಗ ತೆಗೆದುಕೊಳ್ಳಬಾರದೆಂದು ಬೈನಾದ ಕೆಸ್ಕು ಟಾಂಗ್ ಸಂಘವು ಅಲ್ಲಿಯ ರಾಷ್ಟ್ರೀಯ ಸರ್ಕಾರಕ್ಕೆ ಬರೆದುಕೊಂಡಿರುವದು.

—————

## ನೋಟೀಸು.

ಜಮೀನ್ದಾರರ ಸಂಘದ ಕಳೆದ ವಾರ್ಷಿಕ ಮಹಾಸಭೆಯಲ್ಲಿ ಮಂಜೂರಾಗಿರುವ ಕೊಡಗಿನ ರಾಜಕೀಯ ರಚನೆಯನ್ನು ಜನರ ತಿಳುವಳಿಕೆ ಬಗ್ಗೆ ವಿವರಿಸಲು ಈ ಅಕ್ಟೋಬರು ತಾ 14 ನೇ ಆದಿತ್ಯವಾರ ಗೋಣಿಕೊಪ್ಪಲಿನಲ್ಲಿಯೂ, ತಾ. 15 ನೇ ಸೋಮವಾರ ಮಡಿಕೇರಿಯಲ್ಲಿಯೂ ಹಳೇ ನಾಡು ಕಚೇರಿ ಬಳಿ ಮಧ್ಯಾಹ್ನ 1 ಗಂಟೆಗೆ ಪಬ್ಲಿಕ್ ಮೀಟಿಂಗುಗಳು ನಡೆಯುವವು ಸರ್ವರೂ ದಯಮಾಡಿಸಬೇಕಾಗಿ ಕೋರಲಾಗಿದೆ

| | |
|---|---|
| ಯನ್. ಆರ್. ಸುಬ್ಬಯ್ಯ. | ಪಿ ಟಿ ಕುಶಾಲಪ್ಪ. |
| ಸಿ. ಯಸ್. ಉತ್ತಯ್ಯ. | ಪಾಂತ್ಯೇರಿ ಸಣ್ಣಪ್ಪ. |
| ಸಿ. ಯನ್. ಪೊಂಕಪ್ಪಯ್ಯ. | ಚಮ್ಮಡ ಮಾದಪ್ಪ |
| ಬಿದ್ದಂಡ ಯಂ ಸುಬ್ಬಯ್ಯ. | ಪಿ. ಬಿ. ಬೆಳ್ಯಪ್ಪ. |

———

## ಪೋಸ್ಟಲ್ ಮತ್ತು ಆರ್. ಯಂ. ಯಸ್. ಯೂನಿಯನ್.

ಅಖಿಲ ಹಿಂದೂಸ್ಥಾನದ ಪೋಸ್ಟಲ್ ಮತ್ತು ಆರ್. ಯಂ. ಯಸ್. ಯೂನಿಯನ್ನಿನ ಮೈಸೂರು ಶಾಖೆಗೆ ಸೇರಿದ ಮಡಿಕೇರಿ ಪೋಸ್ಟಾಫೀಸಿನವರ ಒಂದು ಮೀಟಿಂಗು ಕಳೆದ ತಾರೀಕು 14ನೇ ಶುಕ್ರವಾರದಿನ 6 ಗಂಟೆಗೆ ಪೋಸ್ಟಾಫೀಸಿನಲ್ಲಿ ಮಿ ರಾ ಕೃಷ್ಣಮೂರ್ತಿರಾವ್ ಬಿ ಎ. ಬಿ ಎಲ್. ಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಮೀಟಿಂಗಿಗೆ ಮಡಿಕೇರಿ ಪೋಸ್ಟಾಫೀಸಿನ ಎಲ್ಲಾ ಉದ್ಯೋಗಸ್ಥರು ಹಾಜರಿದ್ದರು. ಸಬ್ ಪೋಸ್ಟ್‌ಮಾಸ್ಟರಾದ ಮಿ. ಆರ್. ರಾಮಶೇಷಗಿರಿರಾಯರು ಆ ಸಭೆಯಲ್ಲಿದ್ದ ಮದ್ರಾಸ್ ಸರ್ಕಲ್ ಪ್ರಚಾರಕರಾದ ಮಿ. ಪಿ. ಎಚ್. ಹರಿಸಾರನ್ ಬಿ. ಎ ಯವರನ್ನು ಸಭೆಯವರಿಗೆ ಪರಿಚಿತ ಮಾಡಿಕೊಟ್ಟು ಅವರು ಮಾಡಲುದ್ದೇಶಿಸಿರುವ ಪ್ರಸಂಗದ ಕಾರ್ಯದ ವಿಷಯ ಮಾತಾಡುವಂತೆ ಕೇಳಿಕೊಂಡರು

ಅನಂತರ ಭಾಷಣಕಾರರು ಕೆಲವು ದಿನಗಳ ಹಿಂದೆ ಹೈದರಾಬಾದಿನಲ್ಲಿ ನಡೆದ ಪ್ರಾಂತೀಯ ಪರಿಷತ್ತನ್ನು ಕುರಿತು ಮಾತಾಡಿ ಈ ಯೂನಿಯನು ಈ ವರೆಗೆ ಎಷ್ಟು ಉಪಯೋಗಕರವಾದ ಕೆಲಸವನ್ನು ಮಾಡಿದೆಯೆಂದೂ ಇದಕ್ಕೆ ಸೇರುವುದು ಎಷ್ಟು ಪ್ರಯೋಜನಕಾರಿಯೆಂದೂ ಹೇಳಿ, ಮೆಂಬರಲ್ಲದವರು ಒಡನೆ ಮೆಂಬರರಾಗಬೇಕೆಂದೂ, ಮೆಂಬರರಾಗಿರುವರು ಅತಿ ಜಾಗ್ರತೆಯಾಗಿ ಅವರ ಚಂದಾ ಹಣವನ್ನು ಪಾವತಿಮಾಡಬೇಕೆಂದೂ ಹೇಳಿದರು. ಮಡಿಕೇರಿಯ ಪೋಸ್ಟಾಫೀಸಿನ ಪ್ರತಿಯೊಂದು ದರ್ಜೆಯ ಕೆಲಸಗಾರರೂ ಈ ಯೂನಿಯನಿಗೆ ಸೇರಿರುವುದು ಬಹಳ ಸಂತೋಷಕರ. ಎಲ್ಲರೂ ಸಹಕಾರ ಬೆನಿಫಿಟ್ ಫಂಡಿಗೆ ಸೇರಿ ಹಣವನ್ನು ಕೂಡಿಟ್ಟು, ತಮ್ಮ ದಾರಿದ್ರ್ಯದ ಕಾಲಗಳಲ್ಲಿ ತಾನು ನಿವೃತ್ತ ಪಟ್ಟನಂತರವಾಗಲೀ ಉಪಯೋಗವಾಗುವಂತೆ ಮಾಡಿಕೊಳ್ಳಬೇಕು ಎಂದು ಮನಃಪೂರ್ವಕವಾದ ಉದ್ಗಾರದೊಡನೆ ಭಾಷಣವನ್ನು ಅಂತ್ಯ ಮಾಡಿದರು.

ಅನಂತರ ಮ. ರಾಮಶೇಷಗಿರಿರಾಯರು ಈ ಯೂನಿಯನಿನ ಮುಖಾಂತರ ತಮ್ಮ ಸಂಬಳ ಒಡ್ಡಿಯೂದ ಪ್ರಯೋಜನವನ್ನು ಮತ್ತು ಇನ್ನೂ ಅನೇಕ ಲಾಭಕರದ ಕಾರ್ಯಗಳನ್ನು ಕುರಿತು ಮಾತಾಡಿ ತನ್ನ ಕೈಯ್ಯಲ್ಲಾದಷ್ಟು ಪ್ರಯತ್ನ ಮಾಡಿ ಎಲ್ಲಾ ದರ್ಜೆಯ ಕೆಲಸಗಾರರನ್ನು ಇದಕ್ಕೆ ಮೆಂಬರರಾಗಿ ಮಾಡಲು ಪ್ರಯತ್ನಿಸುತ್ತೇನೆಂಬ ಭರವಸೆಯನ್ನು ಕೊಟ್ಟರು.

ಅಧ್ಯಕ್ಷರು ಅನಂತರ ಸಭೆಯವರಿಗೆ ತನ್ನನ್ನು ಇಂಥಾ ಸಂದರ್ಭದಲ್ಲಿ ಅಧ್ಯಕ್ಷರನ್ನಾಗಿ ಆರಿಸಿದ್ದಕ್ಕೋಸ್ಕರ ವಂದಿಸಿ, 'ಬರೇ 8 ವರ್ಷಗಳಲ್ಲಿ ಈ ಯೂನಿಯನ್ ಇಷ್ಟು ಮಹತ್ತರದ ಕೆಲಸಗಳನ್ನು ಮಾಡಿರುವುದು ಬಹಳ ಸ್ತುತ್ಯಾರ್ಹವಾಗಿದೆ. ಇಂಥಾ ಯೂನಿಯನಿಗಾಗಿ ಎಲ್ಲರೂ ಐಕ್ಯಮತ್ಯದಿಂದ ಕೆಲಸ ಮಾಡಿ ತಮಗೆ ಬೇಕಾಗಿರುವ ಪ್ರಯೋಜನಗಳನ್ನು ಹೊಂದಬೇಕು. ಮಡಿಕೇರಿಯಲ್ಲಿರುವ ಕೆಲಸಗಾರರಿಗೆ ಉಳಕೊಳ್ಳಲು ಚೊಕ್ಕಟವಾದ ಮನೆಗಳು ಇಲ್ಲದೆ ಇರುವುದರಿಂದ ಈ ಸೌಕರ್ಯವು ಒಡನೆ ಲಭಿಸುವಂತೆ ಉತ್ಸಾಹದಿಂದ ಕೆಲಸ ಮಾಡಬೇಕು. ಮಡಿಕೇರಿಯಂತ ಸ್ಥಳದಲ್ಲಿ ಯೂನಿಯನಿನ ಶಾಖೆಯೊಂದನ್ನು ತೆರೆದು ಆಗಿಂದಾಗ್ಯೆ ಮೀಟಿಂಗುಗಳನ್ನು ಮಾಡಿ ಈ ಮೂಲಕ ಹೊರಗಿನ ಎಲ್ಲಾ ಜನರ ಸಹಾನುಭೂತಿಯನ್ನು ಪಡೆಯಬೇಕು ಮತ್ತು ಈ ಪ್ರಾಂತ್ಯದ ಪೋಸ್ಟಾಫೀಸಿನ ಕೆಲಸಗಾರರೆಲ್ಲರೂ ರಜೆ ಇರುವ ಸಮಯಗಳಲ್ಲಿ ಇಂಥಾ ಮೀಟಿಂಗಿಗೆ ಬಂದು ಯೂನಿಯನಿನ ಕಾರ್ಯಕ್ಕೆ ಉತ್ತೇಜಕೊಡುವಂತೆ ಮಾಡಬೇಕು. ಅಲ್ಲದೆ ಎಲ್ಲರೂ ತಮ್ಮ ಹಾಲ್ ಹವಾಲ್‌ಗಳನ್ನು ಇಂಥಾ ಮೀಟಿಂಗುಗಳಲ್ಲಿ ಮರೆಮಾಚದೆ ಹೊರಪಡಿಸುವಂತೆ ಸ್ವಾತಂತ್ರ್ಯವನ್ನು ಕೊಡಬೇಕು. ಹೀಗೆ ಮಾಡಿದರೆ ಯೂನಿಯನಿನ ಕೆಲಸವು ಸರಾಗವಾಗಿ ನಡೆಯುವುದೆಂದು' ಹೇಳಿದರು.

ಕೊನೆಗೆ ಮ. ರಾಮಶೇಷಗಿರಿರಾಯರು ಅಧ್ಯಕ್ಷರಿಗೂ ಹೊರಗಿನಿಂದ ಬಂದಿದ್ದ ಅತಿಥಿಗಳಿಗೂ ವಂದನೆಗಳನ್ನರ್ಪಿಸಿದ ನಂತರ ಸಭೆಯು ಮುಕ್ತಾಯವಾಯಿತು.

---

## ಪತ್ರವ್ಯವಹಾರ

**ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]**

### ಕೊಡಗಿನ ಕೈಪಿಡಿ.

ಅಯ್ಯಾ,

ಮ. ಪಾಂಡಂಡ ಮುತ್ತಣ್ಣನವರು ಬರೆದ ಕೊಡಗಿನ ಕೈಪಿಡಿಯನ್ನು ತಯಾರು ಮಾಡುವಾಗ್ಯೆ ಅವರು ಅನೇಕರ ಅಭಿಪ್ರಾಯವನ್ನು ಕೇಳಿದಲ್ಲಿ ಕೆಲವು ಜನರು ತಪ್ಪು ಅಭಿಪ್ರಾಯ ಕೊಟ್ಟಿದ್ದರಿಂದ ಆ ಪುಸ್ತಕದಲ್ಲಿ ಕೆಲವು ತಪ್ಪುಗಳು ಕಂಡು ಬರುವದು ಪುಸ್ತಕ ಕರ್ತರ ತಪ್ಪಲ್ಲ. ಜನರ ತಿಳುವಳಿಕೆಗಾಗ್ಯೆ ಕೈಪಿಡಿಯನ್ನು ತಯಾರು ಮಾಡಿದ್ದಕ್ಕೆ ಅವರಿಗೆ ವಂದಿಸಬೇಕಾಗಿದೆ. ಆದರೆ ಕೈಪಿಡಿ ಪುಸ್ತಕದಲ್ಲಿ ದಕ್ಷಿಣ ಕೊಡಗು ಲೋಕಲ್ ಫಂಡು ಶಾಲೆಗಳ ಮತ್ತು ಕಟ್ಟಡಗಳ ವಿವರವನ್ನು ಓದಿ ನೋಡಿದೆನು. ಇಲ್ಲಿ (ಬಾಡಗ ಕುಟ್ಟಂದಿ) ವಿದ್ಯಾಭಿವೃದ್ಧಿಗೋಸ್ಕರ ತನುಮನಧನಗಳನ್ನರ್ಪಿಸಿ ಪ್ರೋತ್ಸಾಹಿಸಿದವರ ಹೆಸರನ್ನು ನೋಡಿದೆನು. ಕುಟ್ಟಂದಿ ಬಾಡಗ ಶಾಲೆಯನ್ನು ಮ. ಚೊಟ್ಟೆಪಂಡ ಸಂಜಪ್ಪನವರು ಕಟ್ಟಿಸಿದೆಂದು ನಮೂದಿಸಿದೆ. ಇದನ್ನು ಸಂಜಪ್ಪನವರು ಕಟ್ಟಿಸಿದಲ್ಲ. ಬಾಡಗ ಗ್ರಾಮಸ್ಥರೆಲ್ಲರು ಸೇರಿ ಕಟ್ಟಿಸಿದ್ದಾಗಿದೆ. ಸಟ್ಟಿಗೇರಿ ಶಾಲೆಯು ಮುಳವಂಡ ಕುಟುಂಬದವರು ಕಟ್ಟಿಸಿದ್ದಲ್ಲ. ಮ. ಮುತ್ತಣ್ಣನವರು ಇದನ್ನು ಯಾವ ಆಧಾರದ ಮೇಲೆ ಬರೆದರೋ ತಿಳಿಯದು. ಒಂದುವೇಳೆ ಜನರು ಕೊಟ್ಟ ತಪ್ಪು ಅಭಿಪ್ರಾಯದಿಂದ ಬರೆದಿದ್ದಲ್ಲಿ ತಿದ್ದಿ ಸರಿಪಡಿಸಿ 'ಕೊಡಗು' ಪತ್ರಿಕೆಯ ಮೂಲಕ ಸರ್ವರಿಗೂ ತಿಳುವಳಿಕೆ ಕೊಡಬೇಕಾಗಿ ಮುತ್ತಣ್ಣನವರನ್ನು ಕೇಳಿಕೊಳ್ಳುತ್ತೇನೆ

ಕೊಂಗಂಡ ಐ. ಮೇದಪ್ಪ.

---

### ತೊರಮುಕೇರಿಯ ಸಹಕಾರಿಸಂಘ.

ಅಯ್ಯಾ,

ತೊರಮುಕೇರಿ ಸಂಘವು ಅಂಜಿಗೇರಿನಾಡು ಸಂಘದಿಂದ ಬೇರ್ಪಡಿಸಲ್ಪಟ್ಟು 9—10 ವರ್ಷಗಳಾದರೂ ಇದನ್ನು ಒಡೆದು ಬೇರ್ಪಡಿಸಿದಂತೆಯೇ ಇದೆ ಅಲ್ಲದೆ ಇನ್ನೂ ಇದಕ್ಕೆ ಸಂಯೋಜಿಸಲ್ಪಟ್ಟ 3 ಗ್ರಾಮಗಳಿಗೆ ವ್ಯಾಪಿಸಿರುವದಿಲ್ಲ. ಇದನ್ನು ಒಡೆದು 3 ಗ್ರಾಮಗಳನ್ನು ಬೇರ್ಪಡಿಸಿಕೊಡಬೇಕೆಂದು ಸಹಕಾರಿಗಳ ಚಳವಳವು ಈಗ 2 ವರ್ಷಗಳಿಂದಲೇ ಇದ್ದರೂ ಸಂಬಂಧಪಟ್ಟ ಅಧಿಕಾರಿಗಳು ಇದರ ವಿಷಯ ಏನೊಂದೂ ವಿಚಾರಿಸದೆ, ನೋಡದಿರುವುದು ನಮ್ಮ ದುರ್ಭಾಗ್ಯವೇ ಸರಿ. ನಮ್ಮ ಪ್ರತಿ ಜನರಲ್ ಮೀಟಿಂಗುಗಳಲ್ಲಿ ರಠಾವು ಪಾಸಾಗುವುದು, ಅಲ್ಲದೆ ಇದು ಏನಾಗಿದೆಯೋ ಏನೋ ತಿಳಿಯುವದಿಲ್ಲ. ನಮ್ಮ ಸುಪರ್‌ವೈಸರು ಒಂದು ಈಗ ಒಡೆದು ಕೊಡುತ್ತೇನೆ, ನಾಳೆ ಒಡೆದು ಕಂಪ್ಲೀಟ್ ಮಾಡಿಕೊಡುತ್ತೇನೆ, ಇದು ಏನು ½ ಗಂಟೆಯ ಕೆಲಸ. ನೀವು ಸುಮ್ಮನೆ ಇರಿ ಎಂದು ಹೇಳುತ್ತಾ ತನ್ನ ಕಾಲವನ್ನು ಕಳೆದರು. ನಮ್ಮ ಸಂಘದ ಅನುಭವಸ್ಥ ಸೆಕ್ರೆಟರಿಯವರು ಇದಕ್ಕೆ ಮೊದಲೇ ರಾಜೀನಾಮೆ ಕೊಟ್ಟಂದಿನಿಂದ ಈ ವಿಷಯ ಚಳವಳವು ನಶಿಸಿ ಹೋಯಿತು. ಈಗ ಪ್ರೆಸಿಡೆಂಟರ ಮನೆಯಲ್ಲಿ ಸೆಕ್ರೆಟರಿ ಹೊಸಬರು ಬಂದು ಸಂಘದ ಚಳವಳ ಏನಿದ್ದರೂ ಗಮನಿಸದೆ ತಮ್ಮ ಅಭಿಪ್ರಾಯದಂತೆ ಮೀಟಿಂಗು ಮಾಡಿ ರಠಾವು ಬರೆದು ಗುಪ್ತದಿಂದಿರುವರು. ಈ ಸಂಘವು ಬೇರ್ಪಡಿಸದನ್ನು ನೋಡಿ ಗ್ರಾಮದ 2 ಮುಖ್ಯ ಮನೆತನದವರು (Family Society) "ಫ್ಯಾಮಿಲಿ ಸೊಸೈಟಿ"ಗಳನ್ನು ಏರ್ಪಾಡು ಮಾಡಲು ಆಲೋಚಿಸತೊಡಗಿದರು. ಮನೆ ಮನೆ ಸಂಘವಾದರೆ ಗ್ರಾಮಾಭಿವೃದ್ಧಿಗೆ ತೊಂದರೆಯೆಂದು ಗ್ರಾಮಸ್ಥರು ಇದನ್ನು ಮನ್ನಿಸದಿರುತ್ತಾರೆ. ಈಗ ಸಂಘವನ್ನು ಒಡೆದು ಕೊಡಲು ಅಧಿಕಾರಿಗಳು ನಿಗಾ ಇಡದಿದ್ದಲ್ಲಿ ಈ ಮನೆ ಸೊಸೈಟಿಗಳು ಪ್ರಾರಂಭಿಸಲ್ಪಡುವವು. ಆದುದರಿಂದ ಮೆಂಬರುಗಳ ಇಚ್ಛೆಯಂತೆ ಸಂಘವನ್ನು ಬೇರ್ಪಡಿಸಿ ಮೆಂಬರರ ಅನುಕೂಲಕ್ಕೆ ತಕ್ಕ ಏರ್ಪಾಡು ಮಾಡಲು ಅಧಿಕಾರಿಗಳನ್ನು ಬೇಡುತ್ತೇನೆ.

"ಒಬ್ಬ ಮೆಂಬರು".

---

### ಕಾವೇರಿ ಜಾತ್ರೆಗೆ ಬಸ್ಸ್ ಸರ್ವಿಸ್.

ಅಯ್ಯಾ,

ಈ ತಾ 16ನೇ ಮಂಗಳವಾರ ರಾತ್ರಿ ತುಲಾಸಂಕ್ರಮಣದ ತೀರ್ಥೋದ್ಭವವಾಗುವದೆಂದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಜಾತ್ರೆಗೆ ಕೊಡಗಿನ ಜನರು ಮಾತ್ರವಲ್ಲ, ಹೊರಪ್ರಾಂತ್ಯಗಳಿಂದಲೂ 'ದಕ್ಷಿಣ ಗಂಗೆ' ಯೆಂದು ಹೆಸರುಗೊಂಡಿರುವ ಪವಿತ್ರ ಕಾವೇರಿ ಸ್ನಾನಕ್ಕಾಗಿ ಹಲವು ಯಾತ್ರಿಕರು ಬರುವದು ವಾಡಿಕೆಯಾಗಿದೆ. ಇಂಥಾ ಯಾತ್ರಿಕರ ಅನುಕೂಲಕ್ಕಾಗಿ ಮಡಿಕೇರಿಯಿಂದ ಭಾಗಮಂಡಲಕ್ಕೆ ಆ ಸಂಕ್ರಮಣದ ಸಮಯದಲ್ಲಿ ಸ್ಪೆಶಲ್ ಬಸ್ಸ್ ಸರ್ವಿಸುಗಳನ್ನು ಈಗ ಸುಮಾರು ನಾಲ್ಕೈದು ವರ್ಷಗಳಿಂದಲೂ ನಡಿಸುತ್ತಿದ್ದುದರಿಂದ ಜನರಿಗೆ ಬಹಳ ಉಪಕಾರವಾಗುತ್ತಿತ್ತು. ಈ ವರ್ಷವೂ ಹಾಗೆಯೇ ಬಸ್ಸ್ ಸರ್ವಿಸುಗಳು ಇರುವವೆಂದು ಜನರು ನಂಬಿದ್ದಾರೆ. ಆದರೆ ಮಡಿಕೇರಿ ಭಾಗಮಂಡಲ ರಸ್ತೆಯು ಚೆನ್ನಾಗಿಲ್ಲದ ಕಾರಣ ಈ ವರ್ಷ ಬಸ್ಸ್ ನಡಿಸಲು ಲೈಸೆನ್ಸ್ ಕೊಡುವ ಸಂಭವವಿಲ್ಲವೆಂಬ ಸುದ್ದಿ ಹುಟ್ಟಿದೆ. ಇದು ಎಷ್ಟರ ಮಟ್ಟಿಗೆ ನಿಜವೆಂದು ಗೊತ್ತಿಲ್ಲ. ಇದು ನಿಜವಾದರೆ ಬಹು ಶೋಚನೀಯ.

ರಸ್ತೆಯು ಸರಿ ಇಲ್ಲವೆನ್ನುವ ಪಕ್ಷಕ್ಕೆ ಡಿ. ಪಿ. ಡಬ್ಲ್ಯು ಇಲಾಖೆಯವರಿಂದ ಪ್ರಯೋಜನವೇನೆಂದು ಕೇಳಬೇಕಾಗಿದೆ. ರಸ್ತೆಯನ್ನು ರಿಪೇರಿ ಮಾಡಿ ಜನರ ವ್ಯವಹಾರಕ್ಕೆ ಯೋಗ್ಯವಾದ ರೀತಿಯಲ್ಲಿ ಇಟ್ಟುಕೊಳ್ಳಬೇಕಾದದ್ದು ಈ ಇಲಾಖೆಯವರ ಕರ್ತವ್ಯವಲ್ಲವೇ? ಈ ರಸ್ತೆಯ ಮುಖ್ಯ ಪ್ರಯೋಜನವು ಈ ಜಾತ್ರೆಯ ಸಮಯದಲ್ಲಾಗಿದೆ. ಹೀಗಿರುವಾಗ್ಯೆ ಜಾತ್ರೆಯ ಕಾಲದಲ್ಲೇ ರಸ್ತೆ ಸರಿ ಇಲ್ಲವೆಂದು ಹೇಳುವದರ ಅರ್ಥವೇನು? ಇಷ್ಟರವರೆಗೆ ಡಿ. ಪಿ. ಡಬ್ಲ್ಯು. ಇಲಾಖೆಯವರಿಗೆ ರಿಪೇರಿ ಮಾಡಲು ಸಮಯ ಸಾಲದೆ ಹೋಯಿತೇ? ರಸ್ತೆಗಳು ಚೆನ್ನಾಗಿರುವ ಕಡೆಗಳಲ್ಲಿ ಡೊಂಕುಗಳನ್ನು ತೆಗೆಯುವ ಅವಶ್ಯಕತೆಯು ಹೆಚ್ಚಿಲ್ಲದಿದ್ದರೂ ಆ ಕೆಲಸವನ್ನು ಮಾಡುತ್ತಿರುವ ಈ ಇಲಾಖೆಯವರು, ಇದರ ಬದಲು ಭಾಗಮಂಡಲ ರಸ್ತೆ ರಿಪೇರಿ ಕಡೆಗೆ ಗಮನ ಕೊಡಬಹುದಿತ್ತಲ್ಲವೇ?

ಭಾಗಮಂಡಲಕ್ಕೆ ಬಸ್ಸ್ ಸರ್ವಿಸು ಇಲ್ಲದೆ ಹೋದರೆ ಯಾತ್ರಿಕರಿಗೆ ಉಂಟಾಗುವ ತೊಂದರೆಯು ಅಷ್ಟಿಷ್ಟಲ್ಲ. ಆದುದರಿಂದ ಅಧಿಕಾರಿಗಳು ಇದನ್ನು ಚಿತ್ತಕ್ಕೆ ತೆಗೆದುಕೊಂಡು ಅವಶ್ಯವಿದ್ದರೆ ರಸ್ತೆ ರಿಪೇರಿಯನ್ನು ಒಡನೆ ಮಾಡಿಸಿ ಬಸ್ಸ್ ನಡಿಸಲು ಅನುಕೂಲಪಡಿಸಿಕೊಡುವರೆಂದಾಗಿ ಆಶಿಸುವ

"ಒಂದು."

---

### ಕಿರಗಂದೂರು ದವಸ ಭಂಡಾರ

ಅಯ್ಯಾ ಎಡಿಟರವರೇ—

ತಮ್ಮ ತಾರೀಕು 28ನೇ ಸಪ್ಟಂಬರ್ 1928ರ ಪತ್ರಿಕೆಯಲ್ಲಿ ಕಿರಗಂದೂರು ದವಸ ಭಂಡಾರ ನಿದ್ರಿಸುತ್ತಿದೆಯೆಂದೂ, ಅಧಿಕಾರಿಗಳು ಇದಕ್ಕೆ ತಕ್ಕ ನಿಗಾ ಇಡಬೇಕೆಂದೂ ಸಹ ಸೂಚಿಸಿರುತ್ತೀರಿ. ಈ ದವಸ ಭಂಡಾರವನ್ನು ಯಾರೂ ಪರಸ್ಪರ ಸಂಘಗಳ ಆಕ್ಟು ಮೇರೆ ರಿಜಿಸ್ಟರು ಮಾಡಿಸಿರುವದಿಲ್ಲ. ರಿಜಿಸ್ಟರು ಮಾಡಬೇಕೆಂದು ಯಾರು ಕೇಳಿಕೊಂಡಿರುವದಿಲ್ಲ. ಆದ್ದರಿಂದ ಪರಸ್ಪರ ಸಂಘದ ಇಲಾಖೆಯವರಿಗೆ ಇದನ್ನು ವಿಚಾರಿಸುವ ಹಕ್ಕು ಇರುವದಿಲ್ಲ.

ಗಡಿನಾಡು ಬಳಿಗೇರಿ ಗ್ರಾಮದಲ್ಲಿ ಒಂದು ರಿಜಿಸ್ಟರಾದ ದವಸ ಭಂಡಾರವೂ ಕಿರಗಂದೂರು ಗ್ರಾಮದಲ್ಲಿ ಪರಸ್ಪರ ಲೇವಾದೇವಿ ಸಂಘವು ಇದೆ. ಆದರೆ ಮೇಲ್ಕಂಡ ಸಂಘಗಳು ತಮಗೆ ಕೆಲಸಗಳನ್ನು ಚೆನ್ನಾಗಿ ನಡಿಸುತ್ತಾರೆಂಬ ಸಂಗತಿ ಇಲ್ಲಿ ಬರೆಯಲು ಸಂತೋಷಪಡುತ್ತೇನೆ.

"ಸಹಕಾರಿ"

---

### ಕುತ್ತುನಾಡಿನ ಒಬ್ಬ ಗಂಬೀರ ರೈತರ ಬಾತ್ಮಿಗೆ ಜವಾಬು

ಅಯ್ಯಾ,

ತಾ. 18—9—28ರ 'ಲೋಕಪಾವನ' ಪತ್ರಿಕೆಯಲ್ಲಿ ಕುತ್ತುನಾಡಿನ ಒಬ್ಬ ಗಂಭೀರ ರೈತರೆಂಬವರು ಬೆಟ್ಟಿಯತ್ತುನಾಡಿನವರಿಗೂ, ಮನೆಯಪಂಡ ಮನೆಯವರಿಗೂ ಉಂಟಾಗುತ್ತಿರುವ ಕಲಹದಿಂದ ನಾವು ತಿರುಗಾಡುವ ದಾರಿಗೆ ಮುಸ್ಕೀಲ್ ಆಗದೆಂದು ವಗ್ಗೈರೆಯಾಗಿ ಮನೆಯಪಂಡ ಮನೆಯವರಿಗೆ ಒತ್ತಾಸೆ ಕೊಡುವ ಮತ್ತು ನಾಡಿನವರಾದ ನಮಗಳ ಮೇಲೆ ಸರ್ಕಾರದವರಿಗೆ ದ್ವೇಷವುಂಟಾಗುವಂಥಾ ಬಾತ್ಮಿಯನ್ನು ಬರೆದು ಪ್ರಕಟಪಡಿಸಿರುವದು ನೋಡಿದರೆ ವಿಸ್ಮಯವಾಗುತ್ತೆ.

ಬಾತ್ಮಿದಾರರು ಬರೆದಿರುವದು ನಿಜವಲ್ಲವೆಂಬುದು ಆ ಬರವಣಿಗೆಯಿಂದಲೇ ಖಂಡಿತವಾಗುತ್ತೆ. ಆ ದಿನ ಎಲ್ಲರ ಮನೆಯಲ್ಲು ಹುಬ್ಬ. 11 ಘಂಟೆಯ ಮೇಲೆ ಔಷಧ ದೊರೆಯುವದಿಲ್ಲವೆಂಬದು ಗೊತ್ತೇ ಇದೆ. ಆಸ್ಪತ್ರೆಯಿಂದ ಈ ಮಂದಿಗೆ 3 ಮೈಲು ಸಹ ಇರಲಾರದು. ಕಾಯಿಲೆಯವರಿಗೆ ಔಷಧ ತೆಗೆದುಕೊಂಡು ಹೋಗುವವರಿಗೆ ಇತರರು ಏನು ಮಾಡುತ್ತಾರೆಂಬದನ್ನು ನೋಡುವ ಆಗತ್ಯವೇನಿದೆ? "ಬಿ" ಎಂಬವರು ಅಲ್ಲಿಗಾಗಿ ದಾಟುವ ಸಮಯಕ್ಕೆ ಸರಿಯಾಗಿ ಇತರರು ಅಲ್ಲಿಗೆ ಬಂದರೆಂಬದು ಎಷ್ಟರ ಮಟ್ಟಿಗೆ ನಿಜವಾಗಿರಬಹುದು? ಇವರ ಅವಿವೇಕದಿಂದ ಕಾಯಿಲೆಸ್ಥರಿಗೆ ಅನ್ನ ನೀರಿಲ್ಲದೆ ಮಾಡಿದಕ್ಕೆ ನಾಡಿನವರು ಏನು ಮಾಡಬೇಕು? ಇವರು ಕಲಹ ಪ್ರಿಯರೆಂಬದಕ್ಕೆ ಬೇರೆ ಸಾಕ್ಷಿ ಬೇಕೇ? ನಾಡಿನವರು ಇಷ್ಟು ಅವಿವೇಕಿಗಳೂ, ದುಷ್ಪ್ರವರ್ತನೆಯವರೂ, ನಿರಾಕ್ಷೋಭರೂ ಆಗಿದ್ದರೆ ಮೂರನೆ ಪ್ಯಾರದ 6ನೇ ಪಂಕ್ತಿಯಲ್ಲಿ ಇವರ ಮನಸ್ಸಿನ ಆಶೆಯಂತೆ ಬರೆದಿರುವ ಅನೂನುಪ ಸ್ವಭಾವದ ಯೋಚನೆಯು ನಾಡಿನವರಾದ ನಮ್ಮಲ್ಲಿ ಇದ್ದಿದ್ದರೆ ಒಬ್ಬ ವ್ಯಕ್ತಿಯನ್ನು ಏನೂ ಮಾಡಲು ಅವರು ಅಸಮರ್ಥರಾಗಿರಲಿಲ್ಲ. ಬಾತ್ಮಿದಾರರಿಗಿಂತ ವಿವೇಕಿಗಳಾಗಿರದಿದ್ದರೆ ಕಲಹವುಂಟಾದ ಪ್ರಥಮ ವರ್ಷ ಹುತ್ರಿ ಮಂದಿನಿಂದ ನಾಡಿನವರಾದ ನಾವುಗಳು ಕೋಲು ಹೊಡಿಯದೆ ಬರುತ್ತಿದ್ದೆವೇ? ತಮ್ಮಲ್ಲಿ ನ್ಯಾಯವಿದ್ದರೆ ಸಾಧಿಸಿ ನ್ಯಾಯವನ್ನು ಹೊಂದಬೇಕೆಂಬದೇ ನಮ್ಮ ಧ್ಯೇಯವಾಗಿ ಇಟ್ಟುಕೊಂಡದ್ದರಿಂದಲೂ, ಒಂದು ಕುಟುಂಬದವರ ಮೇಲೆ ನೂರಾರು ಕುಟುಂಬದವರು ಅವಮಾನಕರವಾದ ಕೆಲಸಗಳಿಗೆ ಕೈಹಚ್ಚುವದು ನಾಗರೀಕತನದ ಪದ್ಧತಿಗೂ, ಧರ್ಮಕ್ಕೂ ವಿರುದ್ಧವೆಂಬದು ತಿಳಿದುಕೊಂಡಿದ್ದೇವೆ. ಕಳೆದ ಕ್ಯಾಲ್ ಮುಹೂರ್ತ ಹಬ್ಬದಲಾಗಾಯಿತು ಹುತ್ರಿ ಹಬ್ಬ ಕಳೆಯುವರೆಗೆ ನಮಗಳ ಮತ್ತು ಎದ್ರಿಯವರ ಕೂಟಗಳಲ್ಲಿ ಪೋಲೀಸ್ ಅಧಿಕಾರಿಗಳು ಇದ್ದು ಉತ್ಸವಕಾರ್ಯಗಳೆಲ್ಲ ನಡೆದಿರುವದರಿಂದ ಯಾರಲ್ಲಿ ನ್ಯಾಯವಿದೆ ಎಂಬದು ಮತ್ತು ಯಾರ ಯಾರ ವರ್ತನೆ ಹ್ಯಾಗೆ ಇದೆ ಎಂಬದು ಸರ್ಕಾರಕ್ಕೆ ಮಾತ್ರವಲ್ಲ ದೇಶಿಯರಿಗೂ ಸಹ ತಿಳಿಯದ ಸಂಗತಿಯಲ್ಲ.

ದೇಶೀಯರಿಗೆ ದೊಡ್ಡ ಉದ್ಯೋಗ ದೊರಕಬೇಕೆಂಬ ಜೇಶಿಯರ ಚಳವಳದಲ್ಲಿ ನಾಡ ಜನರಾದ ನಾವುಗಳು ಸಹಭಾಗಿಗಳಾಗಿರುತ್ತೇವೆಯೇ ಹೊರತು ಅಡ್ಡಿ ಬಂದವರಲ್ಲವೆಂಬದು ಸರ್ವರಿಗೂ ತಿಳಿಯದಲ್ಲ. ನ್ಯಾಯಕ್ಕೆ ಮಾತ್ರ ಅಧಿಕಾರಿಗಳು ನೇಮಿಸಲ್ಪಡುವದರಿಂದ ನಾವು ಅಡ್ಡಿಯಾಗಿದ್ದರೂ ಕೂಡ ನ್ಯಾಯವಿದ್ದಂತೆ ಪೈಸಲಾತಿಗಳನ್ನು ಕೊಟ್ಟು, ದೇಶದಲ್ಲಿ ನ್ಯಾಯರೀತಿಯಿಂದ ಶಾಂತಿಯನ್ನು ಸ್ಥಾಪಿಸಿ, ದೇಶದ ಜನಾಂಗಗಳ ಕೂಟಗಳ ಪೂರ್ವಪದ್ಧತಿಗನುಸಾರ ಪಂಚಾಯಿತಿ ಪದ್ಧತಿಗಳಿಂದ ನ್ಯಾಯವನ್ನು ಸ್ಥಾಪಿಸಿಕೊಳ್ಳುವಂತೆ ಮಾಡಿ ಜನರ ನೆಮ್ಮದಿಯನ್ನು ಹೆಚ್ಚಿಸಿ ದೇಶದ ಅಭ್ಯುದಯವನ್ನು ಬಯಸುವದೇ ಅವರ ಧ್ಯೇಯವಾಗಿರಬೇಕೇ ಹೊರತು ಇಲ್ಲದ ಸಲ್ಲದ ಬಾತ್ಮಿಗಳನ್ನು ಪ್ರಕಟಪಡಿಸಿದ ಮಾತ್ರಕ್ಕೆ ಪಕ್ಷಪಾತ ಪಕ್ಷಗಳನ್ನು ವಹಿಸಿಕೊಳ್ಳಲು ಸಾಧ್ಯವಾಗಲಿಕ್ಕಿಲ್ಲ ಎಂಬದನ್ನು ಅರಿತುಕೊಂಡವರಾಗಿದ್ದರೂ ಕೂಡ ಪಕ್ಷವನ್ನು ವಹಿಸಿ ಬರೆದಿರುತ್ತೀರೆಂಬದಾಗಿ ನಿಶ್ಶಂದೇಹವಾಗಿ ಹೇಳುತ್ತೇನೆ.

ಯಾರು ಕಲಹ ಪ್ರಿಯರೆಂಬುದು ಕೈಮುಡಿಕೆ ಮಂದಿನಲ್ಲಿ ಇದ್ದ ಉದ್ಯೋಗಸ್ಥರ ನಾಡವರ ಮತ್ತು ಪರನಾಡಿನವರ ತಿಳುವಳಿಕೆಗೆ ಬಂದೇ ಬಂದಿರುತ್ತೆ. 6ನೇ ಪ್ಯಾರದಲ್ಲಿ ದನ ಹುಡುಕುತ್ತ ಬಂದ ಇನ್ನೊಬ್ಬನ ವಿಷಯ ಬರೆದಿರುವದು ನೋಡಿದರೆ ಕೈಮುಡಿಕೆ ಮಂದಿನಲ್ಲಿ ಮಾಡಿದಂತೆಯೇ ಕಲಹವನ್ನು ಹೆಚ್ಚು ಹಾಕುತ್ತಿದ್ದರೆಂತಾಗಲೀ, ಇಲ್ಲನೇ ತಿರ ಕತ್ತಲಾಗುವ ವರೆಗೆ ನಾಡವರಾದ ನಾವು ಅಲ್ಲಿ ಇದ್ದಿದ್ದರೆ ಮೂರನೇ ಪ್ಯಾರದ ಪಂಕ್ತಿಯಲ್ಲಿ ಬರೆದಿರುವ ವಿಚಾರವಾಗಿ ಸಮಯ ಕಾಯುತ್ತಿದ್ದರೋ? ಎಂಬುದು ಸಹ ಹೇಳಲಿಕ್ಕಾಗುವದಿಲ್ಲ.

ಎದ್ರಿಯರಿಗೆ ನಾಡಿನ ನಾನಾ ಕಡೆಗಳಲ್ಲಿ ಕೊಪ್ಪಲುಗಳಿವೆ. ಅಹೋ ರಾತ್ರಿ ನಿರ್ಭಯವಾಗಿ ವಾಹನದ ಮೂಲಕ ದಾರಿಯಲ್ಲಿ ತಿರುಗಾಡುವದನ್ನು ಈ ವರೆಗೆ ಯಾರು ಅಡ್ಡಿ ಮಾಡಿರುವುದಿಲ್ಲವೆಂಬದಾಗಿ ಖಂಡಿತ ಹೇಳುತ್ತೇನೆ. ಬೇರೆ ಬಾಡಿಗೆದಾರರಿಗೆ ಅಡ್ಡಿ ಮಾಡಿದ್ದಲ್ಲಿ ಮುಂದಾಗಿ ಕುತ್ತುನಾಡಿನ ಭಕ್ತಸನ್ನಾಮಂಗಳು ಕಳೆದ ಜನವರಿ ತಿಂಗಳ ಆರಂಭದಲ್ಲಿ ನಿರಾತಂಕವಾಗಿ ನಾಡಿನ ಮಧ್ಯೆ ಒಳದಾರಿಗಳಾಗಿಯೂ, ರಸ್ತೆಗಳಾಗಿಯೂ ಪಾತೂರಿಗೆ ಮಿತಿ ಇಲ್ಲದ ಭಕ್ತ ಸಾಗಿಸುತ್ತಿದ್ದರೆಂಬದನ್ನು ಇತರರನ್ನು ಕೇಳಿ ತಿಳಿದುಕೊಳ್ಳಬಹುದು. ಹೀಗಿರುವಾಗ್ಯೆ ಒಬ್ಬ ವ್ಯಕ್ತಿಗೆ ತಿರುಗಾಡುವ ದಾರಿಗೆ ಅಡಚಣೆ ಮಾಡುತ್ತಾರೆಂತ ಅಬದ್ಧವಾದ ಬಾತ್ಮಿಗಳನ್ನು ಬರೆಯುವದು ಧರ್ಮವಲ್ಲ. ನ್ಯಾಯವಾದ ಸಂಗತಿಗಳನ್ನು ಬರೆಯುವಾಗ ತಮ್ಮ ಹೆಸರನ್ನು ಹಾಕಿ ಬರೆದಿದ್ದರೆ, ನಾವು ಬಹಳ ಸಂತೋಷಪಡುತ್ತಿದ್ದೇವಲ್ಲದೆ ನಮ್ಮ ಕುಂದು ಕೊರತೆಗಳನ್ನು ಸಹ ಸರಿಪಡಿಸಿಕೊಳ್ಳಲು ಅವಕಾಶವಾಗುತ್ತಿತ್ತು. ಪ್ರಿಯ ಮಿತ್ರರೇ, ದಯವಿಟ್ಟು ನಿಮ್ಮ ಹೆಸರನ್ನು ಪ್ರಕಟಪಡಿಸುವಂತೆ ಪತ್ರಿಕಾಕರ್ತರನ್ನು ಕೇಳಿಕೊಳ್ಳುವದಾಗಿ ನಂಬುತ್ತೇನೆ.

ಕೊಡಂದೇರ ಚಂಗಪ್ಪ.

## "ಔಷಧ ಸೀಸೆಗಳಿಗಿಂತಲೂ ಒಳ್ಳೇ ಜೀವನ ಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು"

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಡಾಕ್ಟರ್ ... ರಾವ್ ಇವರಿಂದ ಪ್ರಕಟಿಸಲ್ಪಡುವ 'ಆರೋಗ್ಯ ಚಂದ್ರಿಕೆ' ಎಂಬ ಆರೋಗ್ಯಬೋಧಕವಾದ ಮಾಸ ಪತ್ರಿಕೆಯು, ನಿಮಗೆ ಆರೋಗ್ಯ ದೃಢಕಾಯಂಗಳಿಗೆ ... ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟ ರೋಗ ನಿವಾರಣೆ ... ತಿಳಿಸುವದು

ಈ ಆರೋಗ್ಯ ಚಂದ್ರಿಕೆಯು ನಿಮ್ಮ ಮನೆಯಲ್ಲಿರುವದರಿಂದ, ಒಂದು ಕಾಲದಿಂದ ಶಸ್ತ್ರ ಚಿಕಿತ್ಸೆಯಲ್ಲಿಯೂ ಔಷಧ ಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೆ ಆರೋಗ್ಯ ಮಾರ್ಗಗಳನ್ನು ... ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಒಳಿಯಲ್ಲಿರುವಂತೆ ಮಾಡಿಸುತ್ತದೆ

ಆರೋಗ್ಯಚಂದ್ರಿಕೆ ಎಂಬೀ ಮಾಸ ಪತ್ರಿಕೆಯಲ್ಲಿ ಆಹಾರ ಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರ ಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು ಸೋಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು ... ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವವು ಆರೋಗ್ಯಚಂದ್ರಿಕೆಯನ್ನು ಸರ್ವದಾ ... ಬರಂತೆ ...

ವರ್ಷಕ್ಕೆ ಒಂದೇ ರೂಪಾಯಿಗಳನ್ನು ... ಈ ... ಕನ್ನಡ, ತೆಲುಗು, ತಮಿಳು, ಇಂಗ್ಲಿಷ್ ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಒಂದು ... ಟಪಾಲು ಹಾಸಲು ಕೂಡ ನೀವು ಕೊಡಬೇಕಾದುದಿಲ್ಲ

52—5 ಮ್ಯಾನೇಜರ್, ಆರೋಗ್ಯಚಂದ್ರಿಕೆ, 23 ತಂಬುಚೆಟ್ಟಿ ಬೀದಿ, ಮದರಾಸು.



# Arms, Ammunition and Shooting Requisites!!!



1926 Illustrated Catalogue Just Issued Free on Application

| | | | | |
|---|---|---|---|---|
| D B B L Rifles | Rs 120 | to | Rs 2750 |
| S B B L | 35 | to | 950 |
| D B B L Guns | 50 | to | 1350 |
| S B B L „ | 35 | to | 275 |
| D B M L „ | 45 | to | 135 |
| S B M L „ | 30 | to „ | 80 |
| B L Revolvers „ | 35 | to „ | 350 |
| Automatic Pistols „ | 30 | to „ | 150 |

Brilliant Search Light Lamp For Shooting Camping, Fishing and All such other Night Sports and work Rs 50 Free delivery

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS

**Largest Importers of Firearms and Ammunition**

**Cheapest priced firm in India,**

24—27 **210 Abdul Rehman Street, BOMBAY.**



## ಬಾಗಡಿ, ರುದ್ರಾಕ್ಷಿ ಅಂಚಿನ ಸೀರೆಗಳು.

ಈ ಸೀರೆಗಳು ಹಿಂಗಳೂರು ... ಸೀರೆಗಳಂತೆಯೇ

ಇರುವವು 18 ಮೊಳ ಉದ್ದವೂ 3 ಮೊಳ ಅಗಲವೂ ಇರುವವು ಸುಂದರವಾದ ಜರಿಯ ಸೆರಗೂ, ... ಬಾಗಡಿ ಅಂಚೂ ಇರುವದು ... ಎಂದಿಗೂ ಹೋಗದು ... ಇಷ್ಟವಿಲ್ಲದಿದ್ದರೆ ವಾಪಸು ತೆಗೆದುಕೊಳ್ಳುವೆವು

1ನೇ ನಂಬರು ಸೀರೆ 1ಕ್ಕೆ 7—12—0

2ನೇ ನಂಬರು ಸೀರೆ 1ಕ್ಕೆ 6—8—0

ವಿಳಾಸ — ... ನಾಥಮುನಿ ಅಂಡ್ ಸನ್ಸ್

168 ... ರೋಡು

52—20 ಮದರಾಸು



## ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚುಗಳು.



ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ... (ಸ್ಟ್ರಾಪ್ ಬೆಂಡ್) ... ಸರಿಯಾದ ಟೈಮನ್ನು ತೋರಿಸುವವು ಇದರ ಕೇಸು ಬಂಗಾರಕ್ಕೆ ಸಮಾನವಾಗಿರುವದು ಇದಕ್ಕೆ ... 5 ವರ್ಷ ಗ್ಯಾರಂಟಿ ಕೂಡ ಇದೆ ಈ ವಾಚಿನ ಈ ಚಿತ್ರದಲ್ಲಿ ಕಾಣುವ ... ವಾಚಿನ ಕ್ರಯ 4—14—0

ವಿಳಾಸ — [illegible]

51—20 [illegible]

ಡಬ್ಬಲ್ ಮತ್ತು ಸಿಂಗಲ್ ತೋಟದ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ವಿದ್ಯಾರ್ಥಿಗಳಿಗೂ ಬಡವರಿಗೂ) ಅನುಕೂಲವಾಗುವಂತೆ ಬಗೆ ಬಗೆಯ ಕ್ರಯದಲ್ಲಿ ಒದಗಿಸಿ ಕೊಡಲಾಗುವದು

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿದ್ದೇವೆ ... ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ

### ಎಸ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.

ದ ಹಿಂದೂಸ್ಥಾನದ ಬಹು ಹಳೆಯ ಕಂಪೆನಿ.

24—16 12 ... ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)



# ಎಂ. ಎಸ್. ಶಿದ್ದಪ್ಪ ಬ್ರದರ್ಸ್.

## ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

**ಉತ್ತಮ ತರಹದ ಸಿಂಗಲ್‌ರೀಡ್ಸ್ ಹಾರ್ಮೋನಿಯಂಗಳು.**

| | |
|---|---|
| ... ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 50—8—0 |
| ... ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 40—0—0 |
| ... ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 37—8—0 |
| ... ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 35—0—0 |
| ... ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 32—8—0 |

**ಉತ್ತಮ ತರಹದ 14 ಕ್ಯಾರೆಟ್ಸ್ ಬಂಗಾರದ ನಿಬ್ಬು ಹಾಕಿದ ಫೌಂಟನ್ ಪೆನ್‌ಗಳು**

| | |
|---|---|
| ಬ್ಲಾಕ್ ಬರ್ಡ್ ಫೌಂಟನ್ ಪೆನ್ | 1ಕ್ಕೆ 3—8—0 ಮತ್ತು 3—12—0 |
| ... ಫೌಂಟನ್ ಪೆನ್ | 1ಕ್ಕೆ 3—0—0 ಮತ್ತು 3—8—0 |
| ... ಸೆಲ್ಫ್ ... ಫೌಂಟನ್ ಪೆನ್ 1ಕ್ಕೆ | ...—8—0 |
| ವಾಟರ್ ಮನ್ ಫೌಂಟನ್ ಪೆನ್ | 1ಕ್ಕೆ 8—0—0 ಮತ್ತು 8—8—0 |
| ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌಂಟನ್ ಪೆನ್ | 1ಕ್ಕೆ 12—0—0 ಮತ್ತು 1...—0—0 |

**ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು**

| | |
|---|---|
| ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ | 4—...—0 |
| ವೆಸ್ಟ್‌ಕ್ಲಾಕ್ ಕಂಪೆನಿಯ ಅಲಾರಂ ಟೈಂಪೀಸ್ 1ಕ್ಕೆ | ...—...—0 |
| ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ | ...—...—0 |
| ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ | ...—12—0 |
| ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ | 6—0—0 |

ಸಚಿತ್ರ ಕ್ಯಾಟಲಾಗ್ ಬಗ್ಗೆ 6 ಪೈ ಸ್ಟಾಂಪು ರವಾನಿಸಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು, ಮೈಸೂರು.

## ಪ್ರಕಟಣೆ.

ಕೊಡಗು ಬ್ಯಾಂಕಿನ [illegible]

[illegible]

[illegible]

| | | |
|---|---|---|
| [illegible] | — | [illegible] |
| [illegible] | — | 17 1 30 |
| ಬಡಸಿಬಂದ [illegible] | — | 1 ( 7 320 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಲ್ಪಡುವದು

ಒಂದು ವರ್ಷ ವಾಯಿದೆ ಆಧಿನ ಠೇವಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ ೬–೦–೦ರ ದರದಲ್ಲಿ ಬಡ್ಡಿ ದೊರೆಯುತ್ತೆ ಚಲಿತ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 1ರ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟರು, ಟ್ರೆಜರರ್
ಕೋದಂಡ ಅಪ್ಪಯ್ಯನವರು ಕೊಂಗಟ್ಟೀರ ಅಪ್ಪಯ್ಯ
ರಾವ್ ಬಹದ್ದೂರ್ [illegible]ನವರು

ಸೆಕ್ರೆಟರಿ

[illegible] ವೆಂಕಪ್ಪಯ್ಯನವರು ಬಿ ಎ ಬಿ ಎಲ್

ತಾರೀಕ 1–7–19 8

---

## ನೋಟೀಸು.

ಈ ಸಂಗಿನ ಮಧ್ಯೆ [illegible] ಕೊಡಗು ಪತ್ರಿಕೆಯ ಚಂದಾ ಹಣವನ್ನು ವಸೂಲಾ ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ [illegible] ಏಜೆಂಟರುಗಳಿಗೆ ಏಜಂಟ್ ಮ. ಪೇರಿಯಂಡ ಪೂವಯ್ಯನವರ ಒಪಾಪ್ಪಾದ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮ ಪೇರಿಯಂಡ ಪೂವಯ್ಯನವರು.

ದಕ್ಷಿಣ ಕೊಡಗಿಗೆ—ಮ ಚಂಗಂಡ ಕುಟ್ಟಪ್ಪನವರು
ಪೊನ್ನಂಪೇಟೆನಾಡ—ಮ ಕಾಳೇಂಗಡ ಚಿಣ್ಣಪ್ಪನವರು
ಶ್ರೀಮಂಗಲನಾಡು—ಮ ಅಜ್ಜಮಾಡ ಮಾದಪ್ಪನವರು
ಮರೆನಾಡು—ಮ ಕೇಕಿರ ಅಪ್ಪಯ್ಯನವರು

ಸಬ್ ಏಜೆಂಟರುಗಳು

ವೀರರಾಜಪೇಟೆ—ಮ ಕೊಳಚೇರಿರ ನಂಜಪ್ಪನವರು
ಸಾಮ್ರೇಕಲ್ಲು—ಮ ಅರೆಯಡ ಸುಬ್ಬಯ್ಯನವರು
ಗೋಣಿಕೊಪ್ಪಲು—ಮ ಒಮ್ಮಡ ಮಾದಪ್ಪನವರು
ಅಮ್ಮತ್ತಿ—ಸಿದ್ದಾಪುರ—ಮ ಐನಂಡ ಮಾದಪ್ಪನವರು
ಪೊನ್ನಂಪೇಟೆನಾಡ—ಮ [illegible] ಮುದ್ದಮ್ಮಯ್ಯನವರು
ಮಡಿಕೇರಿ & ತಿತಿಮತ್ತಿ—ಮ [illegible] ಮಾದಮ್ಮಯ್ಯನವರು

ಮೇನೇಜರ್
ಕೊಡಗು ಲಿಮಿಟೆಡ್, ಮಡಿಕೇರಿ

---

## ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ನಾವ ಬರೆದು ರಿಜಿಸ್ಟ್ರಾರರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬದ್ರುದ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ ಮೇನೇಜರ್,
ಕೊಡಗು ಮಡಿಕೇರಿ

---

12 bore Victor Cartridges Rs 10/- Per 100

**Mahomedally-Noorbhoy.**

ARMS & AMMUNITION MART.

321 Abdul Rehman Street

52-4 BOMBAY. 3



ಕಟು ಕಷಾಯ ಮತ್ತು ಬೇಧ ರಕ್ತ — [illegible] ಗುಣವಾಗದಿರುವ ಮಲೆ ಜ್ವರ [illegible] ಬರುವ ಜ್ವರ [illegible] ಬರುವ ಜ್ವರ [illegible] ಜ್ವರ ಮತ್ತು [illegible] ಜ್ವರಗಳಿಗೆ [illegible] ರೂ 1–4–0 [illegible] ರೂ 4–0–0 [illegible] ರೂ 1–8–0 12ಕ್ಕೆ ರೂ 14

[illegible] ಚರ್ಮ ರೋಗ [illegible] ಬಾಧೆಗಳ [illegible] 1 3 [illegible] ರೂ 1–1–0 3–0 1–1–0

ರೋಮನಾಶಿನಿ — ಈ ಪುಡಿಯನ್ನು [illegible] ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1 1 [illegible] 1—8—0

ಮ. ಕೋಲ್ಲಾಸಿನಿ ತೈಲ — [illegible] ತಲೆಸುಡುವುದು, ತಲೆನೋವು, ಕಣ್ಣುರಿ [illegible] ನಿವಾರಣೆಯಾಗುವುದು [illegible] ಮೆದುಳಿಗೆ ತಂಪು ಶಕ್ತಿ [illegible] ಗುಣಮಾಡುತ್ತದೆ. ಉದುರುವ ಕೂದಲನ್ನು [illegible] ಕೂದಲನ್ನು [illegible] ಹೊಸ ಕೂದಲನ್ನು ಹುಟ್ಟಿಸುತ್ತದೆ [illegible] ರೂ 1 3 [illegible] 2–10–0 ಒಂದು ದೊಡ್ಡ ಸೀಸೆಗೆ ರೂ 2 3 ಸೀಸೆಗಳಿಗೆ 5–5–0

ನಮ್ಮ ಕೆಟಲಾಗು ತರಿಸಿ ನೋಡಿರಿ ವಿಳಾಸ—ಮನೋಲ್ಲಾಸಿನಿ ಕಂಪೆನಿ

52–5 9 ಮಂಗಳೂರು



ದಕಾರಿಕೆ ಮಾಲುಗಳಿಗೆ ಮೋಸ ಹೋಗಬೇಡಿ !

ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಹೊದ ಪ್ರತಿಫಲವಿದೆ

ಅಜವಾಯಿಸಿ ನೋಡಿರಿ




ಇನಾಮಿನ ಬಟ್ಟಲುಗಳು ನಮ್ಮಲ್ಲಿ ಸಿದ್ಧ ದೊರೆಯುತ್ತವೆ

ಎಲ್ಲಾ ಆರ್ಡರುಗಳನ್ನೂ ಭಲೋ ರೀತಿಯಿಂದಲೂ ತುರಿತವಾಗಿಯೂ ಗ್ಯಾರಂಟಿಯೊಡನೆ ಒಾರಿ ಮಾಡಲಾಗುವದು

ಕೇಶವಜಿಂನ್ ದೇವಚಂದ್,
ಜ್ಯುಲ್ಲರ್, (ಕೆಟಲಾಗ್ ಮುಫತ್).

12—5 21 ಚೈನಾ ಬಜಾರ್ ರೋಡ್, ಮದರಾಸು.



## ಎಂಪಯರ್ ಆಫ್ ಇಂಡಿಯಾ

### ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು 1897

1928ನೇ ಇಸವಿ ಫೆಬ್ರುವರಿ 2ಕ್ಕೆ ಆಖೈರಾದ 5 ವರ್ಷಗಳಲ್ಲಿ ಕಂಪನಿಗೆ ಆದ ಉತ್ಪತ್ತಿ

| | | |
|---|---|---|
| ಹೊಸ ಪಾಲಿಸಿಗಳು ಎಂಬಿವ | ರೂ | 11 6 00 000 |
| ವರಮಾನ ಎಂಬದೆ | ರೂ | 54 95 000. |
| ಕಂಪನಿ ಆ [illegible] | ರೂ | 3 15 ( 4 000 |

ಬೇಕಾಗಿವೆ ಕೊಡಗು ದೇಶದ ಮುಖ್ಯ ಸ್ಥಳಗಳಲ್ಲಿ ಏಜಂಟರುಗಳು

ಹೆಡ್ ಆಫೀಸು. ಬ್ರಾಂಚ್ ಆಫೀಸು.
ಎಂಪಯರ್ ಆಫ್ ಇಂಡಿಯಾ ಕಮರ್ಶಿಯಲ್ ಬೀದಿ
ಲೈಫ್ ಬಿಲ್ಡಿಂಗ್, ಬೊಂಬಾಯಿ 21–15 ಬೆಂಗಳೂರು



ಸ್ಥಾಪನೆ—1874 ಹೆಡ್ ಆಫೀಸು—ಬೊಂಬಾಯಿ.

## ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

## 1927

ಅತ್ಯುಚ್ಚಾಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ

ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

| | | |
|---|---|---|
| 1925 | 13545 | ರೂ 3 05,12 000 |
| 1926 | 17371 | ರೂ 3,91 39 000 |
| 192[illegible] | 21418 | ರೂ 4 68 04 075. |

—ಪ್ರೀಮಿಯಂ ಉತ್ಪತ್ತಿ—

| | |
|---|---|
| 1925 | ರೂ 92,66 000. |
| 1926 | ರೂ 1 05 55,000 |
| 1927 | ರೂ 1 21 53 000 |

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಮೀರಿದೆ

ಕಂಪನಿಯ ಫಂಡು [illegible] ಕೋಟಿ ರೂಪಾಯಿಗಳಿಗೆ ಮೀರಿದೆ

ಜೀವವಿಮೆ ಮಾಡಬೇಕೆಂದಿರುವವರು ಸಾವಕಾಶ ಮಾಡದೆ ಕೆಳಗೆ ಸಹಿ ಮಾಡಿರುವವರ ವಿಳಾಸಕ್ಕೆ ಬರೆದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್, ಎಲ್. ಆರ್. ಕೃಷ್ಣಸ್ವಾಮಯ್ಯರ್,
ಸೌತ್ ಪರೇಡ್ ಬೆಂಗಳೂರು 52—25 ಬ್ರಾಂಚ್ ಸೆಕ್ರೆಟರಿ.


Printed & published by P I Bellrappa, at "Kodagu" Press Mercara for "Kodagu" Ltd.

Reg. No. M. 1300.

If not delivered please return to "KODAGU" OFFICE, MERCARA.

# ಕೊಡಗು.

ಸತ್ಯೇನ ಧಾರ್ಯತೇ ಪೃಥ್ವೀ ಸತ್ಯೇನ ತಪತೇ ರವಿಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ವರ್ಷ ಚಂದಾ ರೂ. ೩-೮-೦.

ಸಂಪಾದಕ-ಪಂಡ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೮] ಮಡಿಕೇರಿ, ಸನ್ ೧೯೨೮ನೇ ಇಸವಿ ಅಕ್ಟೋಬರ್ ತಾರೀಕು ೧೨ ನೇ ಶುಕ್ರವಾರ [ಸಂಚಿಕೆ ೨೦

## ESTATE REQUISITES

| | | | | | |
|---|---|---|---|---|---|
| 5 lbs Yates' hammer headed mamooties | Rs 3 0 0 Each | Weeding forks | @ | Rs 1 4 0 | Each |
| 4½ " " " " | " 2 14 0 " | Garden trowels | " | Rs 1 4 0 | " |
| 4 " " " " | " 2 12 0 " | Pick axes | " | Rs 1 8 0 | " |
| Felling axes at Rs 3 0 0 & | " 3 4 0 " | Bill hooks | " | Rs 3 14 0 | " |
| Grubbing mattocks at | " 3 4 0 " | Digging forks | " | Rs 4 0 0 | " |

## MONSOON EQUIPMENT.

| | | | |
|---|---|---|---|
| Planter boots | Rs 16 8 0 | Dales' dubbin per tin | Rs 0 8 0 |
| Marrs' oil (water proof) per tin | Rs 2 0 0 | Umbrellas | Rs 4 8 0 |

52—37 **SPENCER & CO. LTD.** General Merchants **MERCARA.**

Post Box 423,
TRIPLICANE, MADRAS.

MANUFACTURES AND DEALS IN ALL—

(1) Gemset Jewels, gold and silver articles of all patterns.
(2) Race Cups Caskets, Medals, etc., for presentation purposes.
(3) Trowels, Keys, Locks etc for ceremonial purposes.

JEWELLER BY APPOINTMENT TO His Excellency THE GOVERNOR OF MADRAS.

Catalogue Free to Bonafide Enquirers

UNDERTAKES:—

(1) Remaking or Remodelling of all sorts of old gemset jewels to latest patterns.
(2) Electro plating, gilding and nickelling.
(3) Buying old jewellery, or undertaking to effect sale.

# V. SUBRAMANIA IYER
# JEWELLER

52—5

**Gold-smith, Silver-smith, & Dealer in all Gemset Jewels.**

## ನೀವು ನಿರ್ಬಲಸ್ತರಾಗಿ ಯಾಕೆ ನರಳುವಿರಿ?

ಇಪ್ಪತ್ತು ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

## ಸಾಲಂಮಿಶ್ರಿ ಮುರಬ್ಬ

ಸೇವನೆಯಿಂದ ಎಂಥಾ ಧಾತು ಜನ್ಯವಿಕಾರಗಳನ್ನೂ, ನರಗಳ ಶಕ್ತಿ ಕುಂದಿಹೋಗಿರುವದನ್ನೂ ಮೆದುಳಿನ ಬಲಹೀನತೆಯನ್ನೂ ಇಂಥಾ ರೋಗಗಳನ್ನೆಲ್ಲಾ ಯಕ್ತಿಣಾಯಂತೆ ವಾಯಿಮಾಡಿಸತಕ್ಕ ತನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸಿದೆ. ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ಮಹನೀಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ಯಾವಾಗಲೂ ನೋಡಬಹುದು. ಒಂದು ಡಬ್ಬಿ ೧೫ ದಿನಗಳ ಸೇವನೆಯಿಂದಲೇ ಇದರ ಗುಣವು ತೋರುವುದು. ೩ ೩ ಡಬ್ಬಿಗಳ ಸೇವನೆಯಿಂದ ಜನ್ಮಾಂತ್ಯದವರೆಗೂ ಸಂಪೂರ್ಣ ಗುಣವನ್ನುಂಟುಮಾಡುವದು ನಮ್ಮ ಟ್ರೇಡ್ ಮಾರ್ಕು ನೋಡಿ ಡಬ್ಬಿ ತೆಗೆದುಕೊಳ್ಳಿರಿ. ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಅವಶ್ಯಕವಿರುತ್ತೆ.

ಕ್ರಯ ಡಬ್ಬಿ ೧ಕ್ಕೆ ೨-೦-೦. ಟಪ್ಪಾಲು ಖರ್ಚು ೧ರಿಂದ ೩ ಡಬ್ಬಿಗಳ ವರೆಗೆ ೦-೮-೦.

**ಡಿ. ಮನ್ನಾಲಾಲ್,**

12—11 ಚಿಲ್ಲಿ ಸೇಟೀವಾ ಡಾಕ್ಟರು, ಸಾಲಂಮಿಶ್ರಿ ಮುರಬ್ಬ ಫಾರ್ಮಸಿ, ಬೆಂಗಳೂರು ಸಿಟಿ.

## ಅ ಪೂ ರ್ವ ಸಂ ದ ರ್ಭ.

ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸಬೇಕಾದರೆ ಇದೀಗ ಅಪೂರ್ವ ಸಂದರ್ಭ

## ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ, ದುರ್ಬಲತೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಪಡಿಸುವುವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ

ಧರ್ಮಾರ್ಥ! ಧರ್ಮಾರ್ಥ!!

## ಕಾ ಮ ಶಾ ಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಸುಕೊಳ್ಳಿರಿ.—

ಆತಂಕನಿಗ್ರಹ ಔಷಧಾಲಯ,
52—11 ಚಿಕ್ಕಪೇಟೆ, ಬೆಂಗಳೂರು ಸಿಟಿ.

# ಕೊಡಗು.

ಸ ೧೯೨೮ ನೇ ಇಸವಿ

ಅಕ್ಟೋಬರ್ ತಾ ೧೨ ನೇ ಶುಕ್ರವಾರ.


## ಗ್ರಾಮವಾಸಿಗಳ ಆಕಾಂಕ್ಷೆ.

ಸಂಯುಕ್ತ ಪ್ರಾಂತ್ಯದ ಗವರ್ನರರಾದ ಸರ್ ವಿಲಿಯಮ್ ಹೈಲಿಯವರು ಕಳೆದವಾರ ದೊಡ್ಡ ಜಮೀನ್ದಾರರು ಅವರಿಗೆ ಒಪ್ಪಿಸಿದ ಒಂದು ಅಭಿನಂದನಾ ಪತ್ರಕ್ಕೆ ಜವಾಬು ಕೊಡುವಾಗ 'ಗ್ರಾಮಾಂತರಗಳಲ್ಲಿ ವಾಸಮಾಡುವ ಜನರಿಗೆ ರಾಜನೀತಿ ಸಂಬಂಧವಾದ ಯೋಚನೆಗಳೇನೂ ಇಲ್ಲ. ವಿದ್ಯಾವಂತರು ರಾಜ್ಯಭಾರ ಸಂಬಂಧ ಹೋರಾಡುತ್ತಿರುತ್ತಾರೆ. ತಮ್ಮ ಜೀವನವನ್ನು ಉನ್ನತ ಸ್ಥಿತಿಗೆ ತಂದುಕೊಳ್ಳುವದೂ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳುವದೂ, ಗ್ರಾಮಾಂತರಗಳಲ್ಲಿ ರಸ್ತೆಗಳನ್ನು ಹೆಚ್ಚಿಸಿ ವ್ಯಾಪಾರಕ್ಕೆ ಅನುಕೂಲಪಡಿಸಿಕೊಳ್ಳುವದೂ, ಕೃಷಿಕರಿಗೆ ಬೇಕಾದ ಸಾಲವನ್ನು ಒದಗಿಸಿಕೊಳ್ಳುವದೂ, ರೋಗ ನಿವಾರಣೆಗೆ ಅನುಕೂಲಗಳನ್ನು ಪಡೆಯುವದೂ ವಿದ್ಯಾರ್ಜನೆಗೆ ಸಹಾಯ ದೊರಕಿಸಿಕೊಳ್ಳುವದೂ ಕಂದಾಯವನ್ನು ಕಡಿಮೆ ಮಾಡಿಸಿಕೊಳ್ಳುವದೂ, ಇವೇ ಮುಂತಾದವು ದೇಶದ ಹೆಚ್ಚಿನ ಜನರಾದ ಗ್ರಾಮಸ್ಥರ ಆಕಾಂಕ್ಷೆಯಾಗಿದೆ' ಎಂತ ಹೇಳಿದರು. 'ಪ್ರಾಯಬಂದ ಪ್ರತಿಯೊಬ್ಬ ಗಂಡಸಿಗೂ ಹೆಂಗಸಿಗೂ ವೋಟ್ ಕೊಡುವ ಹಕ್ಕು ಇರಬೇಕೆಂತ ಕೇಳುವ ಅಸಾಧ್ಯ ಕೋರಿಕೆಯನ್ನು ನೆರವೇರಿಸಲು ನಾವು ತಯಾರಿಲ್ಲ' ವೆಂತಲೂ ಹೇಳಿದ್ದಾರೆ. ಒಮ್ಮೆ ಇಷ್ಟರಿಂದ ಕಡೆಯಲ್ಲಿ ಗ್ರಾಮಾಂತರ ಜನರಲ್ಲಿ ಎಚ್ಚರಿಕೆಯುಂಟಾಗಿದೆ ಈಚೆಗೆ ಕೊಡಲ್ಪಟ್ಟ ರಾಜಕೀಯ ಮಾರ್ಪಾಡುಗಳಿಂದ ತಮ್ಮ ಕೋರಿಕೆಗಳನ್ನು ನೆರವೇರಿಸಿಕೊಳ್ಳಲು ಅನುಕೂಲ ದೊರೆತ್ತಿದೆ ಯೆಂತ ತಿಳಿದುಕೊಂಡಿರುತ್ತಾರೆ. ಈ ಕೋರಿಕೆಗಳನ್ನು ನೆರವೇರಿಸಿಕೊಳ್ಳುವದೇ ಅವರ ಮುಖ್ಯ ಉದ್ದೇಶವಾಗಿದೆಯೇ ಹೊರತು ದೇಶದಲ್ಲಿ ಯಾವ ತರದ ಆಡಳಿತ ರಚನೆ ಇದೆ ಎಂಬದನ್ನು ತಿಳಕೊಳ್ಳುವ ಅವಶ್ಯಕತೆ ಅವರಿಗಿಲ್ಲ. ಯಾವ ತರದ ಆಡಳಿತವೇ ಆಗಲೀ ಗ್ರಾಮವಾಸಿ ಕೃಷಿಕರ ಆಕಾಂಕ್ಷೆಗಳನ್ನು ಪೂರೈಸಿಕೊಡುವದೇ ಆಡಳಿತ ನಡಿಸುವವರ ಕರ್ತವ್ಯವಾಗಿರಬೇಕು ಎಂಬ ಮಾತುಗಳೂ ಇವೆ.

ಈ ಮಾತುಗಳಲ್ಲಿ ಒಂದಕ್ಕೊಂದು ವಿರೋಧದ ಅಭಿಪ್ರಾಯಗಳಿರುವದು ವಿಶದವಾಗಿದೆ. ಆದರೆ ಈ ಭಾಷಣದ ಸಾರಂಶವೇನೆಂದು ನೋಡಿದರೆ, ಗ್ರಾಮವಾಸಿಗಳಿಗೆ ಒಳ್ಳೇ ರುಚಿಕರವಾದ ಮಾತುಗಳನ್ನು ಆಡಿದರೆ ಸಾಕು, ಅಧಿಕಾರವು ಆಳರಸರಲ್ಲಿಯೂ ಧನಿಕರಲ್ಲಿಯೂ ಇದ್ದರಾಯಿತು ಎಂಬಂತೆ ಕಾಣುತ್ತದೆ. ವ್ಯವಸಾಯಗಾರರಿಗೂ, ಜನಸಮುದಾಯಕ್ಕೂ ಇರುವ ಅವಶ್ಯಕತೆಗಳನ್ನು ಗವರ್ನರವರು ಗುರ್ತಿಸಿಕೊಂಡಿರುತ್ತಾರೆ. ಆದರೆ ಅಂಥಾ ಅವಶ್ಯಕತೆಗಳನ್ನು ಸರ್ಕಾರದವರು ಈ ವರೆಗೆ ಒದಗಿಸಿಕೊಡಲಿಲ್ಲವೆಂಬುದೇ ಸರ್ಕಾರದವರ ಮೇಲಿರುವ ಆಕ್ಷೇಪವಾಗಿದೆ. ಕೃಷಿಕರೇ ಹೊಟ್ಟೆಗೆ ಕೊಡುವ ಉತ್ಪತ್ತಿಯನ್ನು ತಲೆ ಭಾರದ ಆಡಳಿತಕ್ಕೆ ಒಸುಳವಾಗಿ ಖರ್ಚು ಮಾಡಿ ಮತ್ತು ಸಾಮ್ರಾಜ್ಯದ ಭದ್ರತೆಗೆ ಬೇಕಾದ ಸೈನ್ಯಕ್ಕಾಗಿ ದುಂದು ವೆಚ್ಚ ಮಾಡಿ ಕಂದಾಯ ಕೆರುವ ಬಡ ಜನರ ಸುಖಕ್ಕೆ ಕೊಡಬೇಕಾದಷ್ಟು ಗಮನ ಕೊಡುತ್ತಿರುವದಿಲ್ಲವೆಂಬದು ಹಿಂದೂಸ್ಥಾನದವರಿಗೆ ಗೊತ್ತೇ ಇದೆ. ಬಡ ಜನರ ಸುಖವು ಹೆಚ್ಚಬೇಕಾದರೆ ಪ್ರಜಾಜನರ ಪ್ರತಿನಿಧಿಗಳ ಮೂಲಕ ನಡೆಯುವ ಸರ್ಕಾರ ಪದ್ಧತಿಯೇ ಇರಬೇಕೆಂತ ಪಾಶ್ಚಾತ್ಯ ದೇಶಗಳಲ್ಲಿ ಒಪ್ಪಲ್ಪಟ್ಟ ತತ್ವವಾಗಿದೆ. ಹಿಂದೂಸ್ಥಾನದಲ್ಲೂ ಈ ರೀತಿಯ ಸರ್ಕಾರದಿಂದ ಪ್ರಯೋಜನ ವಿದೆಯೆಂದು ಜನರು ತಿಳಿದುಕೊಳ್ಳುತ್ತಿದ್ದಾರೆಂತ ಹೈಲಿಯವರು ಒಂದು ಕಡೆ ಸೂಚಿಸಿ, ಯಾವತರದ ಆಡಳಿತವಿದ್ದೆಯೆಂಬದನ್ನು ಪ್ರಜೆಗಳು ಲಕ್ಷ್ಯಕ್ಕೆ ತೆಗೆದುಕೊಳ್ಳುವದಿಲ್ಲವೆಂತ ಇನ್ನೊಂದು ಕಡೆ ಹೇಳಿದ್ದಾರೆ. ಆಳರಸರೇ ಪ್ರಜೆಗಳ ತಂದೆ ತಾಯಿಗಳೆಂತ ಭಾವಿಸಿದ್ದ ಕಾಲವು ಕಳೆದು ಹೋಯಿತು. ಪ್ರಜಾಜನರಿಂದ ವೋಟು ಪಡೆದು ಪ್ರತಿನಿಧಿಗಳಾಗಿ ಕೌನ್ಸಿಲು ಸಭೆಗಳಿಗೆ ಹೋಗಿರುವವರು ಸರ್ಕಾರದವರ ನಡವಳಿಕೆಗಳನ್ನು ಟೀಕಿಸಿ ಬಿದ್ದರೆ ಆಳರಸರು ತಮ್ಮ ಮೊರೆಗೆ ಕಿವಿಕೊಡುವದಿಲ್ಲವೆಂಬದನ್ನು ಜನಸಮುದಾಯದವರು ತಿಳಿಯುತ್ತಿದ್ದಾರೆ. ಆದುದರಿಂದ ತಮ್ಮ ಕಷ್ಟನಿವಾರಣೆಯೇ ಪ್ರಜಾ ಜನರ ಮುಖ್ಯ ಉದ್ದೇಶವಾಗಿದ್ದರೂ ತಮ್ಮ ಕಷ್ಟ ನಿವಾರಣೆಗೆ ಆಡಳಿತ ಮಾರ್ಪಾಡೇ ದಾರಿ ಎಂಬದನ್ನು ತಿಳಕೊಳ್ಳುತ್ತಿದ್ದಾರೆ.

ಪ್ರಜೆಗಳ ಅನುಕೂಲಗಳನ್ನು ಹೆಚ್ಚಿಸಿ ಕೊಡಬೇಕಾದದ್ದು ಸರ್ಕಾರದವರ ಕರ್ತವ್ಯವೆಂದು ಒಪ್ಪಿಕೊಳ್ಳುವ ಗವರ್ನರವರು ಅಂಥಾ ಅನುಕೂಲಗಳನ್ನು ಸಬಲವಾಗಿ ಹೆಚ್ಚಿಸಿಕೊಳ್ಳಲಿಕ್ಕೆ ಪ್ರಜಾಜನರನ್ನೇ ಯಜಮಾನರನ್ನಾಗಿ ಮಾಡಿಕೊಳ್ಳಲು ಇರುವ ಉಪಾಯವಾದ ಪ್ರತಿಯೊಬ್ಬರಿಗೂ ವೋಟಿನ ಹಕ್ಕು ಕೊಡುವ ಮಾತ್ರ ಸಮ್ಮತಿಸುವದಿಲ್ಲವಂತೆ. ಬಡವ ಬಲ್ಲಿದನೆಂಬ ವ್ಯತ್ಯಾಸವಿಲ್ಲದೆ ಸರ್ವರಿಗೂ ಕ್ಷೇಮವಾಗಬೇಕಾದರೆ ಪ್ರಾಯಬಂದ ಪ್ರತಿಯೊಬ್ಬ ವ್ಯಕ್ತಿಗೂ ವೋಟಿನ ಹಕ್ಕು ಸಿಕ್ಕಲೇಬೇಕು. ಹಿಂದುಸ್ಥಾನದಲ್ಲಿ ಹುಟ್ಟಿ ಬೆಳೆದು ಇಲ್ಲಿಯ ಕಷ್ಟಸುಖಗಳನ್ನರಿತು, ತಮ್ಮ ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ಜೀವ ಸಹ ಕೊಡಲು ತಯಾರಾಗಿರುವ ದೇಶಭಕ್ತ ಮುಖಂಡರು ಸರ್ವಜನರಿಗೂ ವೋಟಿನ ಹಕ್ಕಿರಬೇಕೆಂತ ಹೇಳುತ್ತಿದ್ದಾರೆ. ಸರ್ವಜನರ ಹಿತವನ್ನೇ ಮಾಡಬೇಕಾದದ್ದು ಸರ್ಕಾರದ ಕರ್ತವ್ಯವೆನ್ನುವ ಸರ್ ಮಾಲ್ಕಂ ಹೈಲಿಯವರು ಈ ತತ್ವವನ್ನು ಅಂಗೀಕರಿಸುವದಿಲ್ಲವಂತೆ!

ಮಿಲಿಟರಿ ಖರ್ಚನ್ನು ಕಡಿಮೆಮಾಡಿ ಪ್ರತಿಯೊಬ್ಬನಿಗೂ ಬೇಕಾದ ಉಪ್ಪಿನ ಕರವನ್ನು ಕಡಿಮೆಮಾಡಲು, ಬಸ್ಸದ ಆಳರಸರು, ಭೂಮಿಯ ಮೇಲೆ ಏರುತ್ತಿರುವ ಕಂದಾಯವು ಹೆಚ್ಚಾಗಿದೆಯೆಂದು ಪ್ರಜೆಗಳು ಮೊರೆಯಿಡುತ್ತಿದ್ದರೂ ಇನ್ನೂ ಕಂದಾಯವನ್ನು ಹೆಚ್ಚಿಸಬೇಕೆನ್ನುವ ಆಳರಸರು, ಬಡ ಗರೀಬ ಜನರಿಗೆ ಒಂದು ತುತ್ತು ಅನ್ನ ದೊರಕುವಂತೆ ಕೊಡುವ ಯಾವ ಕೆಲಸಕ್ಕೆ ಸಹಾಯ ಕೊಡಲು ಅದನ್ನು ಒಳ್ಳೇ ದೃಷ್ಟಿಯಿಂದ ನೋಡುತ್ತ ಆಳರಸರು ಆಡುವ ಮಾತುಗಳಲ್ಲಿ ಜನಸಮುದಾಯದವರಿಗೆ ನಂಬಿಕೆ ಹುಟ್ಟುವದು ಹೇಗೆ? ತಮ್ಮ ಸೂತ್ರಗಳು ತಮ್ಮ ಪ್ರತಿನಿಧಿಗಳಿಗೆ ಸಿಕ್ಕಿದರೇನೇ ತಮಗೆ ಕ್ಷೇಮವೆಂತ ಜನರು ತಿಳಿಯುತ್ತಿದ್ದಾರೆ. ಆದುದರಿಂದ ಆಳರಸರ ತೀರ್ಮಾನಗಳನ್ನು ಒಪ್ಪಿಕೊಳ್ಳಲಿಕ್ಕಾಗಿಯೇ ಬಂದಿರುವ ಸೈಮನ್ ಕಮಿಷನನ್ನು ಬಹಿಷ್ಕರಿಸಲು ದೇಶದ ಜನರು ತಯಾರಾಗಿದೆ.

## ಜಮೀನ್ದಾರರ ಸಂಘದ ಪ್ರಚಾರ ಕೆಲಸ.

ಜಮೀನ್ದಾರರ ಸಂಘದ ಕಾರ್ಯಕಾರೀ ಮಂಡಳಿಯವರಿಂದ ನೇಮಿಸಲ್ಪಟ್ಟ ಉಪಕಮಿಟಿಯವರು ಸಂಘದ ಕಳೆದ ಮಹಾಸಭೆಯಲ್ಲಿ ಮಂಜೂರಾದ ಕೊಡಗಿನ ರಾಜಕೀಯ ರಚನೆಯ ಪ್ರಚಾರದ ಬಗ್ಗೆ ದೇಶದ ಹಲವು ಭಾಗಗಳಲ್ಲಿ ಪಬ್ಲಿಕ್ ಮೀಟಿಂಗುಗಳನ್ನು ನಡಿಸಲು ಏರ್ಪಾಡು ಮಾಡುವರಾಗಿ ತಿಳಿಯುತ್ತೇವೆ. ತಮ್ಮ ದೇಶದಲ್ಲಿ ಯಾವ ತರದ ಸರ್ಕಾರವಿರಬೇಕೆಂಬುದನ್ನು ಅರಿತುಕೊಳ್ಳಬೇಕಾದದ್ದು ದೇಶದ ಪ್ರತಿಯೊಬ್ಬನ ಕರ್ತವ್ಯವಾಗಿದೆ. ಈವರೆಗೆ ನಡೆಯುತ್ತಿರುವ ಸರ್ಕಾರ ಪದ್ಧತಿಯು ಹೇಗಿರಬೇಕೆಂಬದಕ್ಕೆ ಜನರ ಅಭಿಪ್ರಾಯವನ್ನು ಗಮನಕೊಡದೆ ಇದ್ದುದರಿಂದಲೇ ಅವರ ಸ್ಥಿತಿಯು ಹೀನಾವಸ್ಥೆಗೆ ಬಂದಿರುವದಾಗಿದೆ. ರಾಜಕೀಯ ಕಾರ್ಯವು ಬರೇ ವಿದ್ಯಾವಂತರ ಹಕ್ಕಲ್ಲ. ಪ್ರಜೆಗಳೆಲ್ಲರಿಗೂ ಸೇರಿದೆ. ಜನಸಾಮಾನ್ಯವು ಆಡಳಿತ ಕಾರ್ಯದಲ್ಲಿ ಏನೊಂದೂ ಅಭಿರುಚಿಯನ್ನು ತೋರಿಸುವದಿಲ್ಲವಾದದರಿಂದ ಹಿಂದೀಯರು ಇನ್ನೂ ಜವಾಬ್ದಾರಿ ಸರ್ಕಾರ ನಡೆಸಲು ತಯಾರಾಗಿಲ್ಲವೆಂದು ಆಳರಸರು ಹೇಳುತ್ತಿರುವರು. ಇಂಥಾ ನೆಪಗಳಿಗೆ ಅವಕಾಶಕೊಡದಂತೆ ಮಾಡಬೇಕಾದದ್ದು ದೇಶೀಯರ ಕರ್ತವ್ಯವಾಗಿದೆ. ಆದುದರಿಂದ ಸರ್ವರೂ ತಮಗೆ ಬೇಕಾದ ಆಡಳಿತ ಕ್ರಮವು ಯಾವ ತರಹದ್ದಾಗಿರಬೇಕೆಂಬದನ್ನು ತಿಳಕೊಳ್ಳತಕ್ಕದ್ದು.

ಪ್ರಜಾಸತ್ತಾತ್ಮಕ ಆಡಳಿತ ಪದ್ಧತಿಯನ್ನು ಸ್ಥಾಪಿಸುವುದೇ ಭೂಲೋಕದ ಈಗಿನ ಎಲ್ಲಾ ಜನಾಂಗಗಳ ಪ್ರಯತ್ನವಾಗಿದೆ. ಪ್ರಜೆಗಳಿಗೆ ಜವಾಬ್ದಾರಿಯಾದ ಸರ್ಕಾರವಿದ್ದರೇನೇ ಬಡು ಜನರ ಕ್ಷೇಮ ಪಾಲನೆಯಾಗುವದು. ಅಂಥಾ ಸರ್ಕಾರದ ರಚನೆಯು ಹೇಗಿರಬೇಕು, ಅದರಿಂದ ಎಷ್ಟು ಪ್ರಯೋಜನವಿದೆ ಎಂಬದು ಸರ್ವ ಪ್ರಜೆಗಳಿಗೂ ಗೊತ್ತಿರಬೇಕು. ಹಾಗೆ ಗೊತ್ತಿದ್ದರೇನೇ ಎಲ್ಲರೂ ಆ ತರಹದ ಸರ್ಕಾರವನ್ನು ಪಡೆಯಲು ಪ್ರಯತ್ನಿಸುವರು. ಸ್ವಾತಂತ್ರ್ಯ ಸರ್ಕಾರದ ಹೋರಾಟದಲ್ಲಿ ಎಲ್ಲರಿಗೂ ಒಂದೇ ಸಮವಾಗಿ ಭಾಗ ವಹಿಸಿಕೊಳ್ಳಲು ಸಾಧ್ಯವಿಲ್ಲದಿದ್ದರೂ ಹೆಚ್ಚಿನ ಭಾಗ ತೆಗೆದುಕೊಳ್ಳುವವರಿಗೆ ಬಾಕಿಯವರು ಸಹಾಯವನ್ನೂ ಉತ್ತೇಜನವನ್ನೂ ಕೊಡುವದು ಅವಶ್ಯವಾಗಿದೆ. ಜನಸಮುದಾಯದ ಸಂಪೂರ್ಣ ಬೆಂಬಲವಿರುವ ಯಾವ ಚಳವಳಿಯೇ ಆಗಲಿ ಜಯಹೊಂದದೆ ಇರಲಿಕ್ಕಿಲ್ಲ.

ಜನರಿಗೆ ಇಂಥಾ ತಿಳುವಳಿಕೆಯನ್ನು ಕೊಡಬೇಕಾದದ್ದು ದೇಶದ ಪ್ರಾಮುಖ್ಯ ರಾಜಕೀಯ ಸಂಸ್ಥೆಯಾದ ಜಮೀನ್ದಾರ ಸಂಘದ ಕೆಲಸವಾಗಿದೆ. ಸದರಿ ಸಂಘವು ತನ್ನ ಈ ಮುಖ್ಯ ಕಾರ್ಯವನ್ನು ಕೈಕೊಳ್ಳಲು ನಿಶ್ಚಯಿಸಿರುವದು ಶಕ್ಯದ್ದಾಗಿದೆ. ಗ್ರಾಮಸ್ಥರ ಅನುಕೂಲಕ್ಕಾಗಿಯೇ ಅಲ್ಲಲ್ಲಿ ಪ್ರಸ್ಥಳಗಳಲ್ಲಿ ಸಭೆ ಸೇರಲು ಏರ್ಪಡಿಸಿರುವದಾಗಿಯೂ ತಿಳಿಯುತ್ತೇವೆ. ಆದಕಾರಣ ಜನಸಮುದಾಯವು ಮೀಟಿಂಗುಗಳಲ್ಲಿ ಹೆಚ್ಚಾಗಿ ನೆರೆದು ಸಂಘದ ಕಾರ್ಯಕ್ಕೆ ಉತ್ತೇಜನ ಕೊಡುವದಲ್ಲದೆ ಇದರಿಂದ ಪ್ರಯೋಜನ ಹೊಂದುವರಾಗಿ ಆಶಿಸುತ್ತೇವೆ.

## ಓರಿಯಂಟಲ್ ಜೀವವಿಮೆ ಕಂಪೆನಿ.

ಈ ಜೀವವಿಮೆ ಕಂಪೆನಿಯ ಕಳೆದ ಮೂರು ವರ್ಷಗಳ ಆಡಳಿತ ಮತ್ತು ಲೆಕ್ಕಗಳ ವರದಿಯು ನಮ್ಮ ಕೈಸೇರಿದೆ. ವರದಿಯ ಕೆಲವು ಮುಖ್ಯಾಂಶಗಳನ್ನು ಇನ್ನೊಂದು ಕಡೆ ಕೊಟ್ಟಿರುತ್ತೇವೆ. ಈ ಮೊದಲಿನ ಮೂರು ವರ್ಷಗಳಲ್ಲಿ ಉಂಟಾಗಿದ್ದ ಸುಮಾರು 51 ಲಕ್ಷ ರೂಪಾಯಿ ಲಾಭವು ಈ ಕಾಲದಲ್ಲಿ ಸುಮಾರು 78 ಲಕ್ಷ ರೂಪಾಯಿಗೆ ಏರಿರುತ್ತದೆ. 1000 ರೂಪಾಯಿಗಳ ಜೀವಾಂತ್ಯ ವಿಮೆದಾರರಿಗೆ ವರ್ಷ 21 ರೂಪಾಯಿಯೂ, ಎಂಡೌಮೆಂಟ್ ವಿಮೆದಾರರಿಗೆ 18 ರೂಪಾಯಿಯೂ ಬೋನಸ್ಸು ಸಿಕ್ಕುವದಾಗಿ ಕಂಪೆನಿಯ ಡೈರೆಕ್ಟರ್‍ಸ್ ಜಯವರ್ಗ ತೋರಿಸುತ್ತದೆ. ವರದಿಯ ವರ್ಷದಲ್ಲಿ 1155 ಲಕ್ಷ ರೂಪಾಯಿಯ ಹೊಸ ಕೆಲಸವಾದದ್ದೂ ಒಂದು ದೊಡ್ಡ ಲಾಭದ ಕಾರಣವಾಗಿದೆ. ಇದು ವರೆಗೆ ಹಿಂದೂ ದೇಶದ ಬೇರೆ ಯಾವ ಜೀವವಿಮೆ ಕಂಪೆನಿಯೂ ಕೊಡದೆ ಇರುವ ಇಷ್ಟು ದೊಡ್ಡ ಬೋನಸ್ಸು ದೊರೆತದ್ದಕ್ಕೆ ವಿಮೆದಾರರಿಗೆ ತುಂಬಾ ತೃಪ್ತಿಯುಂಟಾಗದೆ ಇರದು. ಈ ಉತ್ತಮ ಅಭಿವೃದ್ಧಿಯು ವಿಮೆ ಮಾಡದವರಿಗೂ ಕೂಡ ಈ ಕಂಪೆನಿಯಲ್ಲೇ ವಿಮೆ ಮಾಡುವಂತೆ ಆತೆಯನ್ನು ಹುಟ್ಟಿಸದೆ ಇರಲಿಕ್ಕಿಲ್ಲವೆಂದು ಹೇಳಬಹುದು.

## ಜಮೀನ್ದಾರರ ಸಂಘದ ಕಮಿಟಿ.

ಜಮೀನ್ದಾರರ ಸಂಘದ ಕಾರ್ಯಕಾರೀ ಮಂಡಳಿ ಮೀಟಿಂಗು ಈ ತಾ 6ರಲ್ಲಿ ಸಂಘದ ಆಫೀಸಿನಲ್ಲಿ ನಡೆಯಿತು. ಈ ಕೆಳಗಿನ ಮೆಂಬರುಗಳು ಹಾಜರಿದ್ದರು. ಮೆಂಬರ್ 1 ಕೆ ಪಿ ಚಿಣ್ಣಪ್ಪನವರು 2 ಯ. ನಾ. ಮುದ್ದಪ್ಪನವರು 3 ಮಂಜಾಂದಿರ ದೇವಯ್ಯನವರ, 4 ಪಾಲಂದಿರ ಬೋಪಯ್ಯನವರು 5 ಯಂ ಯಂ ಸಿದ್ದೀಕ್‍ರವರು 6 ... ಪೊನ್ನಯ್ಯನವರು 7 ಪಿ ಐ ಬೆಳ್ಳಿಯಪ್ಪನವರು 8 ಸಿ ಯನ್ ವೆಂಕಪ್ಪಯ್ಯನವರು ಮತ್ತು 9 ಸೋಮಣ್ಣ ... ಸಣ್ಣಪ್ಪನವರು ಸಂಘದ ವೈಸ್ ಪ್ರಸಿಡೆಂಟರಾದ ಪಿ. ಸಿ ಯನ್. ಮೊಣ್ಣಯ್ಯನವರು ಅಧ್ಯಕ್ಷರಾಗಿದ್ದರು.

1 ಕಳೆದ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಲ್ಪಟ್ಟಿತು. ಮತ್ತು ರಾಜಕೀಯ ರಚನೆ ಪ್ರಚಾರಕ ಉಪ ಕಮಿಟಿಯ ತಾ 27—9—28 ರ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಲಾಯಿತು.

2 ಸಪ್ಟೆಂಬರು ತಿಂಗಳ ಲೆಕ್ಕ ಓದಿ ಮಂಜೂರು ಮಾಡಲಾಯಿತು.

3 "ರಾಜಕೀಯ ರಚನೆ ಪ್ರಚಾರಕ ಉಪಕಮಿಟಿಯವರಿಗಾಗಿ ಜನರಲ್ ಸೆಕ್ರೆಟರಿಯವರು ಕೇಳುವ ಮೇರೆಗೆ ಆಯಾ ಪ್ರಚಾರ ಕೆಲಸಕ್ಕಾಗಿ ಆ ಕಮಿಟಿಯ ಮೆಂಬರರು ಮಾಡುವ ಪ್ರಯಾಣದ ಬಸ್ಸುಚಾರ್ಜು, ಮೀಟಿಂಗುಗಳ ನೋಟೀಸು ಮತ್ತು ರಚನೆಯ ಪ್ರತಿಗಳ ಪ್ರಿಂಟಿಂಗು ಚಾರ್ಜು ಮೊದಲಾದ ಖರ್ಚಿಗಾಗಿ 250 ರೂಪಾಯಿಗಳನ್ನು ಕೊಡತಕ್ಕದ್ದು ಮತ್ತು ಇದರ ಲೆಕ್ಕವನ್ನು ಜನರಲ್ ಸೆಕ್ರೆಟರಿಯವರು ವಿವರವಾಗಿ ಬರೆದಿಡತಕ್ಕದ್ದು" ಎಂಬ ಠರಾವು ಬಹುಮತದಿಂದ ಮಂಜೂರಾಯಿತು.

4. ರಶೀತಿ ಪುಸ್ತಕಗಳ ವಿಷಯ ವಿಲೆವಾರಿಗೆ ಇನ್ನೊಂದು ಮೀಟಿಂಗಿಗೆ ಇಡಲಾಯಿತು.

ಸಿ ಯನ್. ವೆಂಕಪ್ಪಯ್ಯ,
(ಅಧ್ಯಕ್ಷರು.)

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ
ಅತ್ಯಂತ ದೊಡ್ಡದಾದ 'ಓರಿಯಂಟಲ್' ಕಂಪೆನಿಯ ಅಭಿವೃದ್ಧಿಯನ್ನು ನೋಡಿರಿ—

ಹೆಚ್ಚಿದ ಕೆಲಸ. | ಹೆಚ್ಚಿದ ಬೋನಸು.

| ತ್ರೈವಾರ್ಷಿಕ ಹೊಸ ಕೆಲಸ. | | ತ್ರೈವಾರ್ಷಿಕ ಪ್ರೀಮಿಯಂ ಆದಾಯ. | |
|---|---|---|---|
| 1919 — 1921 | 508 ಲಕ್ಷ | 1919 — 1921 | 197 ಲಕ್ಷ |
| 1922 — 1924 | 576 ಲಕ್ಷ | 1922 — 1924 | 236 ಲಕ್ಷ |
| 1925 — 1927 | 1155 ಲಕ್ಷ | 1925 — 1927 | 320 ಲಕ್ಷ |

1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ವ್ಯಾಪಾರದ ಫಲ.
ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

ವಿಮೆದಾರರಿಗೆ ಹೆಚ್ಚಾಗಿ ಸಿಕ್ಕಿರುವ ಬೋನಸು } 1000 ರೂಪಾಯಿಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ—ರೂ. 25.
1000 „ ಎಂಡೌಮೆಂಟ್ „ „ —ರೂ. 20.

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಚಿಂತೆಯಿಲ್ಲ.
ಪುನಹ ಒಂದು ಹೊಸ ಪಾಲಿಸಿಯನ್ನು 'ಓರಿಯಂಟಲ್' ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವುಂಟು.
ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು.

ಕಂಪೆನಿಯ ಸೂಚಕ ಪತ್ರದ ಒಂದು ಹೊಸ ಪ್ರತಿಯೂ ಮತ್ತು ಕಂಪೆನಿಯ ಪೂರ್ತಿ ಮಾಹಿತಿಯೂ ಹೆಡ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ, ಅಥವಾ ಇನ್ನಾವ ಬ್ರಾಂಚು ಆಫೀಸುಗಳಿಗಾಗಲೀ ಬರೆದಲ್ಲಿ ಒಡನೆ ನಿಮಗೆ ರವಾನಿಸಲ್ಪಡುವುವು—

ಓರಿಯಂಟಲ್ ಬಿಲ್ಡಿಂಗ್ಸ್,
ನಂ. 1. ಸೌತ್ ಪೆರೇಡ್, ಬೆಂಗಳೂರು.

ಯಲ್. ಆರ್. ಕೃಷ್ಣಸ್ವಾಮಿಯ್ಯರ್.
ಬ್ರಾಂಚ್ ಸೆಕ್ರಟರಿ.

## ಮಹಾತ್ಮಗಾಂಧಿಯವರ ಸ್ವಚರಿತ್ರೆ.

೫ನೇ ಭಾಗದಲ್ಲಿ ೧೦ನೇ ಪ್ರಕರಣ.

### ಒರೆಗಲ್ಲು

ಆಶ್ರಮವು ಸ್ಥಾಪಿತವಾಗಿ ಕೆಲವು ತಿಂಗಳು ಕಳೆಯುವುದರೊಳಗಾಗಿಯೇ ನಮಗೊಂದು ಪರೀಕ್ಷೆಯೊದಗಿತು. ಈ ತೆರನಾದ ಪರೀಕ್ಷೆಯನ್ನು ನಾನು ನಿರೀಕ್ಷಿಸಿಯೇ ಇರಲಿಲ್ಲ. ಶ್ರೀ ಅಮೃತಲಾಲ ಠಕ್ಕರರಿಂದ 'ಬಡವರಾದ ಪ್ರಾಮಾಣಿಕರಾದ ಅಸ್ಪೃಶ್ಯರ ಕುಟುಂಬ ಒಂದು ಆಶ್ರಮವನ್ನು ಸೇರಲೆಳಸುತ್ತದೆ. ಅವರನ್ನು ಸೇರಿಸುವಿರಾ?' ಎಂಬುದಾಗಿ ಪತ್ರ ಬಂದಿತು.

ನನಗೆ ಗಾಬರಿಯಾಯಿತು. ಅಂತ್ಯಜರ ಕುಟುಂಬ ಒಂದು—ಅದರಲ್ಲೂ 'ಠಕ್ಕರ್‌ಬಾಪಾ' ರವರಂತಹರ ಮಧ್ಯಸ್ಥಿಕೆಯಿಂದ—ಆಶ್ರಮವನ್ನು ಸೇರಲು ಅಷ್ಟು ಬೇಗ ಬರುವುದೆಂದು ನಾನು ಎಣಿಸಿಯೇ ಇರಲಿಲ್ಲ. ಪತ್ರವನ್ನು ನನ್ನ ಸಂಗಡಿಗರಿಗೆಲ್ಲಾ ಓದಿದೆನು. ಅವರು ಅದರಲ್ಲಿನ ವಿಷಯಕ್ಕೆ ಆದರದಿಂದ ಸಮ್ಮತಿಸಿದರು.

ಆ ಕುಟುಂಬದವರೆಲ್ಲರೂ ಆಶ್ರಮದ ನಿಯಮಗಳನ್ನು ಪಾಲಿಸಲು ಸಿದ್ಧರಾಗಿದ್ದರೆ, ಅವರನ್ನು ಸೇರಿಸಿಕೊಳ್ಳಲು ನಮ್ಮ ಒಪ್ಪಿಗೆಯನ್ನು ವ್ಯಕ್ತಪಡಿಸಿ ನಾನು ಶ್ರೀ ಅಮೃತಲಾಲ [illegible]ರಿಗೆ ಕಾಗದ ಬರೆದೆನು.

[illegible]ದುಧಾಭಾಯಿ, ಅವರ ಹೆಂಡತಿಯಾದ ದಾನೀಬೆಹೆನ್ [illegible] ಆಗತಾನೇ ಓಡಾಡುವುದನ್ನು ಕಲಿತಿದ್ದ ಅವರ ಮಗು [illegible]—ಇವರೇ ಈ ಕುಟುಂಬಕ್ಕೆ ಸೇರಿದವರು. ದುಧಾ[illegible]ಯು ಇದಕ್ಕೆ ಮುಂಚೆ ಮುಂಬಾಯಿಯಲ್ಲಿ ಉಪಾ[illegible]ರಾಗಿದ್ದರು. ಅವರೆಲ್ಲರೂ ಆಶ್ರಮದ ನಿಯಮಗಳಂ[illegible]ಲು ಒಪ್ಪಿದರು. ಅವರನ್ನು ಸೇರಿಸಿಕೊಂಡೆವು.

[illegible]ರೆ ಅವರನ್ನು ಸ್ವೀಕರಿಸಿದುದರಿಂದ ಆಶ್ರಮಕ್ಕೆ ಸ[illegible]ತ್ತಿದ್ದ ಮಿತ್ರರಲ್ಲಿ ಗಲಿಬಿಲಿ ಪ್ರಾರಂಭವಾಯಿತು. [illegible] ಉಪಯೋಗದ ವಿಚಾರವಾಗಿಯೇ ಮೊಟ್ಟಮೊದ[illegible] ಒದಗಿತು. ಈ ಬಾವಿಯು ಬಂಗಲೆಯ ಯಜಮಾ[illegible]ಧೀನದಲ್ಲಿಯೂ ಇದ್ದಿತು. ನಮ್ಮ ಕೊಡದ ನೀರು [illegible]ವುದರಿಂದ ತನಗೆ ಮೈಲಿಗೆಯಾಗುವುದೆಂದು ಕಿರಿಕಿರಿ[illegible] ಆಕ್ಷೇಪಣೆ ತೆಗೆದನು. ಆದುದರಿಂದ ಅವನು ನಮ್ಮನ್ನು ಬೈಯುವುದಕ್ಕೂ, ದುಧಾಭಾಯಿಯನ್ನು ಪೀಡಿಸುವುದಕ್ಕೂ ಮೊದಲು ಮಾಡಿದನು. ಬೈಗಳನ್ನು ಸಹಿಸಿಕೊಂಡಿರಬೇಕೆಂದೂ, ನೀರು ಸೇದುವುದನ್ನು ಏನೇ ಆಗಲಿ ಬಿಡಕೂಡದೆಂದೂ ನಾನು ಪ್ರತಿಯೊಬ್ಬರಿಗೂ ಹೇಳಿದೆನು. ನಾವು ಬೈಗಳನ್ನು ಕೇಳಿ ಸುಮ್ಮನಿದ್ದುದನ್ನು ನೋಡಿ ಅವನು ನಾಚಿಕೆಗೊಂಡು ನಮ್ಮ ತಂಟೆಗೆ ಬರುವುದನ್ನು ಬಿಟ್ಟನು.

ಆದರೆ ಧನ ಸಹಾಯವೆಲ್ಲಾ ನಿಂತು ಹೋಯಿತು. ಆಶ್ರಮದ ನಿಬಂಧನೆಗಳನ್ನನುಸರಿಸಲು ಯೋಗ್ಯನಾದ ಅಸ್ಪೃಶ್ಯನ ವಿಚಾರವಾಗಿ ಪ್ರಶ್ನೆ ಮಾಡಿದ ಮಿತ್ರರು ಅಂತಹವರಾರೂ ಬರುವರೆಂದು ನಿರೀಕ್ಷಿಸಿರಲಿಲ್ಲ.

ಹಣದ ಒತ್ತಾಸೆಯು ನಿಲ್ಲುತ್ತಲೇ ನಮಗೆ ಬಹಿಷ್ಕಾರ ಹಾಕುವ ವದಂತಿಯೂ ಕೇಳಿಬಂದಿತು. ನಾವು ಇದೆಲ್ಲಕ್ಕೂ ಸಿದ್ಧರಾಗಿದ್ದೆವು. ನಮಗೆ ಬಹಿಷ್ಕಾರ ಹಾಕಿ ಸಾಮಾನ್ಯ ಸೌಕರ್ಯಗಳನ್ನು ತಪ್ಪಿಸಿದರೂ ನಾವು ಅಮದಾಬಾದನ್ನು ಬಿಡುವುದಿಲ್ಲವೆಂದೂ ಹಾಗೆ ಮಾಡುವುದಕ್ಕೆ ಪ್ರತಿಯಾಗಿ ನಾವು ಹೊಲೆಗೇರಿಗೆ ಹೋಗಿ ಮೈದುಡಿತದಿಂದ ಬಂದ ಅಷ್ಟಿಷ್ಟರಲ್ಲಿಯೇ ಜೀವನ ನಡೆಸುವೆವೆಂದೂ ನಾನು ನನ್ನ ಸಂಗಡಿಗರಿಗೆ ಹೇಳಿದ್ದೆನು.

ನಮ್ಮ ಪರಿಸ್ಥಿತಿಯು ಎಷ್ಟಕ್ಕೆ ಬಂದಿತೆಂದರೆ ಒಂದು ದಿನ ಮಗನಲಾಲ ಗಾಂಧಿಯವರು "ಮುಂದಿನ ತಿಂಗಳ ವೆಚ್ಚಕ್ಕೆ ನಮ್ಮ ಬಳಿ ಹಣವಿಲ್ಲ.' ಎಂದು ಹೇಳಿದರು.

ನಾನು ಸಮಾಧಾನವಾಗಿ 'ಹಾಗಾದರೆ ನಾವು ಹೊಲೆಗೇರಿಗೆ ಹೋಗೋಣ" ಎಂದೆನು.

ಈ ರೀತಿಯ ಪರೀಕ್ಷೆಗೆ ಸಿಕ್ಕಲು ಇದೇ ನನಗೆ ಮೊದಲನೆಯ ಸಲವಾಗಿರಲಿಲ್ಲ. ಇಂತಹ ಸಂದರ್ಭಗಳಲ್ಲೆಲ್ಲಾ ದೇವರು ನನಗೆ ಕಡೆಗಳಿಗೆಯಲ್ಲಿ ಸಹಾಯವನ್ನು ಕಳುಹಿಸಿದ್ದಾನೆ. ಮಗನಲಾಲರು ನಮ್ಮ ಬೊಕ್ಕಸವು ಬರಿದಾಗಿದೆಯೆಂದು ಎಚ್ಚರಿಕೆಕೊಟ್ಟ ಕೆಲವು ದಿನದಮೇಲೆ ಒಂದು ದಿವಸ ಬೆಳಿಗ್ಗೆ ಒಬ್ಬ ಹುಡುಗನು ನನ್ನ ಬಳಿಗೆ ಬಂದು ಯಾರೋ ಸೇಠರೊಬ್ಬರು ಹೊರಗಡೆ ಮೋಟಾರು ಗಾಡಿಯಲ್ಲಿ ನನಗಾಗಿ ಕಾದಿರುವರೆಂದು ಹೇಳಿದನು. ನಾನು ಅವರನ್ನು ನೋಡಲು ಹೋದೆನು. "ನಾನು ಆಶ್ರಮಕ್ಕೆ ಸ್ವಲ್ಪ ಸಹಾಯವನ್ನೀಯಲು ಇಚ್ಛಿಸುತ್ತೇನೆ. ಅದನ್ನು ನೀವು ಸ್ವೀಕರಿಸುವಿರಾ?" ಎಂದು ಅವರು ಕೇಳಿದರು.

"ಅಗತ್ಯವಾಗಿ. ಮತ್ತು ಈಗ ನನಗೆ ಹಣದ ಅಭಾವದಿಂದ ದಾರಿಯೇ ತೋರದಂತಾಗಿದೆಯೆಂದು ಒಪ್ಪಿಕೊಳ್ಳಬೇಕು.' ಎಂದು ನಾನು ಹೇಳಿದೆನು.

ಅವರು "ನಾಳೆ ಬೆಳಿಗ್ಗೆ ಇಷ್ಟುಹೊತ್ತಿಗೆ ಇಲ್ಲಿಗೆ ಬರುತ್ತೇನೆ. ನೀವು ಇಲ್ಲಿ ಇರುವಿರಾ?" ಎಂದು ಕೇಳಿದರು. "ಆಗಲಿ" ಎಂದು ನಾನು ಹೇಳಲು, ಅವರು ಹೊರಟು ಹೋದರು. ಮರುದಿನ ಗೊತ್ತಾದ ಹೊತ್ತಿಗೆ ಸರಿಯಾಗಿ ಗಾಡಿಯು ಆಶ್ರಮದ ಬಳಿ ಬಂದು ನಿಂತಿತು. ಗಾಡಿಯ ಕೊಂಬಿನ ಸದ್ದಾಯಿತು. ಹುಡುಗರು ಆ ಸುದ್ದಿಯೊಡನೆ ನನ್ನ ಬಳಿಗೆ ಬಂದರು. ಸೇಠರು ಒಳಕ್ಕೆ ಬರಲಿಲ್ಲ. ನಾನೇ ಹೋಗಿ ಅವರನ್ನು ಕಂಡೆನು. ಅವರು ಹದಿಮೂರು ಸಾವಿರ ರೂಪಾಯಿಯ ನೋಟುಗಳನ್ನು ನನ್ನ ಕೈಯಲ್ಲಿಟ್ಟು ಹೊರಟುಹೋದರು.

ನಾನು ಈ ಒತ್ತಾಸೆಯೊದಗುವುದನ್ನು ನಿರೀಕ್ಷಿಸಿಯೇ ಇರಲಿಲ್ಲ. ಮತ್ತು ಸಹಾಯಮಾಡುವ ರೀತಿಯೊ! ಆ ಸಜ್ಜನರು ಇದಕ್ಕೆ ಮುಂಚೆ ಆಶ್ರಮದಲ್ಲಿ ಹೆಜ್ಜೆಯನ್ನೇ ಇಟ್ಟಿರಲಿಲ್ಲ. ನನಗೆ ನೆನಪಿರುವ ಮಟ್ಟಿಗೆ ನಾನು ಅವರನ್ನು ಒಂದು ಬಾರಿ ಮಾತ್ರ ನೋಡಿದ್ದೆನು. ಆಶ್ರಮವನ್ನು ನೋಡಿಕೊಂಡು ಹೋದುದಿಲ್ಲ, ವಿಚಾರ ಮಾಡಿದುದಿಲ್ಲ, ಸುಮ್ಮನೆ ಹಣಕೊಟ್ಟು ತೆರಳುವುದು! ಇದು ನನಗೆ ಅತ್ಯಂತ ಅಸಾಧಾರಣವಾದ ಅನುಭವವಾಗಿದ್ದಿತು. ಈ ಸಹಾಯದಿಂದ ನಾವು ಹೊಲೆಗೇರಿಗೆ ಹೋಗುವುದು ಬದಿಗೆ ನಿಂತಿತು. ಒಂದು ವರ್ಷ ನಾವು ನಿರಾತಂಕವಾಗಿರಲು ನಮಗೆ ಸೌಕರ್ಯ ಒದಗಿತು.

ಹೊರಗಡೆ ಚಂಡಮಾರುತವೆದ್ದಂತೆಯೇ ಆಶ್ರಮದೊಳಗಡೆಯೂ ಬಿರುಗಾಳಿ ಬೀಸಿತು. ದಕ್ಷಿಣ ಆಫ್ರಿಕದಲ್ಲಿ ಅಸ್ಪೃಶ್ಯಮಿತ್ರರು ನನ್ನ ಮನೆಗೆ ಬಂದು ನನ್ನೊಡನೆ ಊಟಮಾಡುತ್ತಿದ್ದರಾದರೂ ಆಶ್ರಮಕ್ಕೆ ಅಸ್ಪೃಶ್ಯರನ್ನು ಸೇರಿಸಿಕೊಳ್ಳುವುದು ನನ್ನ ಹೆಂಡತಿಗೂ ಇತರ ಹೆಂಗಸರಿಗೂ ಅಷ್ಟು ಇಷ್ಟ ಬಂದಂತೆ ಕಾಣಲಿಲ್ಲ. ದಾನೀ ಬೆಹೆನಿನ ವಿಷಯದಲ್ಲಿ ಇವರ ಅಪ್ರೀತಿಯಲ್ಲದಿದ್ದರೆ, ಇವರ ಔದಾಸೀನ್ಯವು ನನ್ನ ಸೂಕ್ಷ್ಮ ದೃಷ್ಟಿಗೆ ಬೀಳದಿರಲಿಲ್ಲ, ನನ್ನ ಚುರುಕು ಕಿವಿಗಳಿಗೆ ಕೇಳದಿರಲಿಲ್ಲ. ಹಣದ ತೊಂದರೆಯಿಂದ ನನಗೆ ಯಾವ ಚಿಂತೆಯೂ ಒದಗಿರಲಿಲ್ಲ. ಆದರೆ ಆಶ್ರಮದೊಳಗಿನ ಈ ಮನಸ್ತಾಪವು ನನ್ನ ಮನಸ್ಸನ್ನು [illegible]. ದಾನೀಬೆಹೆನು ಸಾಧಾರಣ ಸ್ತ್ರೀಯಾಗಿದ್ದಳು. ದುಧಾಭಾಯಿಯು ಅಲ್ಪಶಿಕ್ಷಣವನ್ನು ಪಡೆದವರಾಗಿದ್ದರೂ ಬುದ್ಧಿವಂತರಾಗಿದ್ದರು. ಅವರ ತಾಳ್ಮೆಯು

ನ್ನು ಕಂಡು ನನಗೆ ಸಂತೋಷವಾಯಿತು ಒಂದೊಂದು ಸ ಲವೇನೋ ಅವರು ರೇಗುತ್ತಿದ್ದರು ಆದರೂ ಅವರ ಸ್ವರಣೆ ಯು ವಿಶೇಷವಾಗಿ ಪ್ರಿಯವಾದುದು ನನ್ನ ಲಕ್ಷ್ಯಕ್ಕೆ ಬಂದಿತು ಸಣ್ಣ ಸಣ್ಣ ಅಪಮಾನಗಳನ್ನು ಸಹಿಸಬೇಕೆಂದು ನಾನು ಅವರ ಲ್ಲಿ ಕೇಳಿಕೊಂಡೆನು ಅವರು ಇದಕ್ಕೆ ಒಪ್ಪಿದುದಷ್ಟೇ ಅಲ್ಲ ದೆ ತಮ್ಮ ಹೆಂಡತಿಯೂ ಹಾಗೆಮಾಡುವಂತೆ ಪ್ರೇರಿಸಿದರು.

ಈ ಕುಟುಂಬವನ್ನು ಸೇರಿಸಿದುದರಿಂದ ಆಶ್ರಮಕ್ಕೆ ಲಾಭ ದಾಯಕವಾದ ಶಿಕ್ಷಣವು ದೊರೆಯಿತು ಆಶ್ರಮದಲ್ಲಿ ಅ ಸ್ಪೃಶ್ಯತೆಗೆ ಎಡೆಯಿಲ್ಲವೆಂದು ನಾವು ಹೊಟ್ಟಮೊದಲೇ ಪ್ರ ಪಂಚಕ್ಕೆ ಸಾರಿದೆವು ಆಶ್ರಮಕ್ಕೆ ಸಹಾಯಮಾಡುವವರ ಳಿಗೆ ಈ ರೀತಿಯೂ ಎಚ್ಚರಿಕೆ ಕೊಟ್ಟಂತಾಯಿತು ಇದರಿಂ ದ ಈ ವಿಷಯವನ್ನು ಕುರಿತು ಆಶ್ರಮದ ಕಾರ್ಯವು ಬಹು ಮ ಟ್ಟಿಗೆ ಸರಳವಾಯಿತು ದಿನವೂ ಏರುತ್ತಿರುವ ಆಶ್ರಮದ ವೆ ಚ್ಚವನ್ನು ವಹಿಸುವವರಲ್ಲಿ ಹೆಚ್ಚುಮಂದಿ ಪೂರ್ವಾಚಾರನಿಷ್ಠ ರಾದ ಹಿಂದುಗಳೆಂಬುದು ಅಸ್ಪೃಶ್ಯತೆಯು ಆಸ್ತಿಭಾರವೇ ಅಲು ಗಿದೆಯೆಂಬುವನ್ನು ಸ್ಪಷ್ಟವಾಗಿ ವ್ಯಕ್ತಗೊಳಿಸುತ್ತದೆ ವಾಸ್ತ ವಿಕವಾಗಿ ಈ ವಿಷಯವನ್ನು ಸಿದ್ಧಗೊಳಿಸುವ ಇತರ ಪ್ರಮಾ ಣಗಳೂ ಅನೇಕವಾಗಿವೆ ಆದರೂ ಅಸ್ಪೃಶ್ಯರೊಡನೆ ಸಹ ಪ ಙ್ಕ್ತಿ ಭೋಜನ ಮಾಡುವಷ್ಟು ದೂರ ಹೋಗುವ ಆಶ್ರಮ ಕ್ಕೆ ಸಹಾಯಿಸಲು ಸನಾತನೀ ಹಿಂದುಗಳು ಹಿಂಜರಿಯುವುದಿ ಲ್ಲವೆಂಬುದು ಅಲ್ಪ ಪ್ರಮಾಣವೇನೂ ಅಲ್ಲ.

ಈ ಪ್ರದಾನಸನ್ನಿವೇಶದಿಂದ ಉದ್ಭವಿಸಿದ ಕೆಲವು ನಾ ಜೂಕಿನ ಸಮಸ್ಯೆಗಳನ್ನು ಹೇಗೆ ಪೂರ್ಣಮಾಡಿದೆವು, ಅನಿ ರೀಕ್ಷಿತವಾದ ಕೆಲವು ಕಷ್ಟಗಳನ್ನು ಹೇಗೆ ಇದಿರಿಸಿದೆವು, ಇ ವೇ ಮುಂದಾದ ಸತ್ಯಶೋಧನೆಯ ವರ್ಣನೆಗೆ ಪ್ರಕೃತವಾದ ಮತ್ತು ಈ ಅಧ್ಯಾಯದ ವಿಷಯಕ್ಕೆ ಸಂಬಂಧಪಟ್ಟ ಎಷ್ಟೋ ವಿಚಾರಗಳನ್ನು ನಾನು ಬಿಟ್ಟುಬಿಡಬೇಕು. ಇದರಿಂದ ನನ ಗೆ ವಿಷಾದವಾಗುತ್ತದೆ ಮುಂದೆ ಬರಲಿರುವ ಅಧ್ಯಾಯಗಳ ಲ್ಲಿ ಈ ಕುಂದುಕ ಕಂಡುಬರುವುದು ನಾನು ಕೆಲವು ಮು ಖ್ಯವಾದ ವಿವರಗಳನ್ನು ಬಿಟ್ಟು ಬಿಡಬೇಕಾಗುವುದು ಏಕೆಂ ದರೆ ಈ ನಾಟಕದಲ್ಲಿನ ಪಾತ್ರಗಳಲ್ಲಿ ಹೆಚ್ಚುಮಂದಿ ಜೀವಂತ ರಾಗಿದ್ದಾರೆ ಅವರಿಗೆ ಸಂಬಂಧಪಟ್ಟ ಘಟನೆಗಳ ವರ್ಣನೆಯ ಲ್ಲಿ ಅವರ ಹೆಸರುಗಳನ್ನು ಅಪ್ಪಣೆಯಿಲ್ಲದೆ ಉಪಯೋಗಿಸುವು ದು ಯುಕ್ತವಲ್ಲ ಅವರ ಒಪ್ಪಿಗೆಯನ್ನು ಪಡೆಯುವುದು ಅಥವಾ ತಮಗೆ ಸಂಬಂಧಿಸಿದ ಅಧ್ಯಾಯಗಳನ್ನು ಪರಿಶೋಧಿ ಸುವುದಕ್ಕಾಗಿ ಹಗಲಿರುಳು ಅವರನ್ನು ಕರೆಸುವುದು ನಡೆಯು ವ ಮಾತಲ್ಲ. ಇದೂ ಅಲ್ಲದೆ ಇಂತಹ ಕ್ರಮವು ಈ ಆತ್ಮ ವೃತ್ತದ ಪರಿಮಿತಿಯಲ್ಲಿಲ್ಲ ಆದುದರಿಂದ ಮುಂದಿನ ಕಥೆ ಯನ್ನು ಅದು ನನ್ನ ಅಭಿಪ್ರಾಯದಲ್ಲಿ ಸತ್ಯ ಶೋಧಕರಿಗೆ ಲಾಭದಾಯಕವಾಗಿದ್ದರೂ ಅನಿವಾರ್ಯವಾದ ಅಸಂಪೂರ್ಣತೆ ಯಿಂದ ಹೇಳಬೇಕಾಗುವುದೆಂದು ಶಂಕಿಸುತ್ತೇನೆ ಅದು ಹೀ ಗೇ ಇರಲಿ ಈ ಇತಿಹಾಸವನ್ನು ಅಸಹಯೋಗಯುಗದ ವರೆ ಗೂ ತರಬೇಕೆಂದು ನನ್ನ ಇಷ್ಟ ಮತ್ತು ಆಸೆ. ಇದು ಕೈಗೂಡು ವುದು ದೇವರ ಚಿತ್ತ

---

## ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಹೊಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಬಂಗಾರಕ್ಕೆ ಸಮನಾದ ಸೀಮೆಯ ಬಂಗಾ ರದಿಂದ ಕಟ್ಟಡ ಕಟ್ಟಿರುವದು ಇದರ ಪ್ರ

ಕಾಶವು ನಾಚಲ ವಜ್ರದ ಕಲ್ಲುಗಳಿಗೆ ಸಂ ಯೂಗಿರುವದು. ಇದರ ಒಡ್ಡವು ಕೆಡದಂತೆ ಬಂಗಾರದ ಗಿಲೀಟು ಕೊಟ್ಟಿರುವದು ಇದ ನ್ನು ನೋಡಿದವರು ನಿಜವಾದ ವಜ್ರದ ಓಲೆ ಯೆಂದೇ ಹೇಳುವರು ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು

7 ಕಲ್ಲಿನ ಬಿಳಿಯ ಓಲೆ ಜೊತೆ 1ಕ್ಕೆ 2—0—0

7 ಕೆಂಪು ಕಲ್ಲಿನ ಓಲೆ ಜೊತೆ 1ಕ್ಕೆ 2—8—0

ವಿಳಾಸ—ಕೆ ಸಾಧಮುನಿ ಅಂಡ್ ಸನ್ಸ್,

52—21 168 ಜೈನಾ ಬಜಾರ್ ಮದರಾಸು

## ಫ್ಯಾನ್ಸಿ ಲೀವರ್ ಪಾಕೇಟ್ ವಾಚ್.

(15 ಬಹುಮಾನಗಳು ಸಹಿತ ರೂ. 4—8—0)

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಿ ರಿಜಿಷ್ಟರಾಗಿದೆ

ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ಜೇಬಿ ಗೆ ಅಡಕವಾಗಿಯೂ ಇರುವಂತೆ ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು ಮತ್ತು ಒಳ



ಗಡೆ ಕೆಂಪು ಕೆತ್ತಲ್ಪ ಟ್ಟ ಗಿಲ್ಟ್ ಮೂ ವ್ಮೆಂಟ್ ಮಾಡಿರು ವದು. ಧೂಳಿ, ಧೂ ಳು ಸೇರದಂತೆ ಹಿಂ ಭಾಗದಲ್ಲಿಯೂ ಗ್ಲಾಸ್ ಡೂಮ್ ಇರುವದು ಒಂ ದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿ ಸುವಂತೆ ಲೀವರ್ ಮೂವ್ಮೆಂಟುಗಳಿಂದ ಈ ಗಡಿಯಾರವನ್ನು ತಯಾರಿಸಿದೆ ನಮ್ಮ ಗಡಿಯಾರವನ್ನು ನಾವೇ ಹೊಗಳುವ ದರಿಂದ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿರಿ ರಿ ಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾ ಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿ ತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು ಬಹುಮಾನಗಳ ವಿವರ—ಫೌಂಟನ್ ಪೆನ್ 1 ಹೇರಾ ಯಿಲ್ ಬಾಟಲ್ 1 ವಜ್ರದ ಗುಂಡಿಗಳು 4 ಪಾಕೆಟ್ ಕನ್ನಡಿ 1 ಗಡಿಯಾರದ ಸರಪಣಿ 1 ಸುವಾಸನೆ ಸೋಪು 1 ಪೆನ್ನಾ ಕತ್ತಿ 1 ರೋಲ್ಡ್ ಗೋಲ್ಡ್ ಬಂಗಾರದ ಉಂಗುರ 1 ರೋ ಲ್ಡ್ ಗೋಲ್ಡ್ ಬಂಗಾರದ ನೆಕ್‌ಲೇಸ್ ಎಂಬ ಕತ್ತಿನ ಹಾರ 1 ದಂತದ ಬಾಚಣಿಗೆ 1 ಕೈ ಗುಂಡಿಗಳ ಸೆಟ್ 1 ಕ್ಯಾ ವ ಸ್ಟು ಈ 15 ಬಹುಮಾನಗಳು ಮತ್ತು ಖಾತ್ರಿಯಾದ 3 ವರುಷ ಗ್ಯಾರಂಟಿ ಸಹಿತ ಗಡಿಯಾರ 1ಕ್ಕೆ ಕ್ರಯ ರೂ 4—8—0

ವಿಳಾಸ—ವಿ. ಎಸ್. ವಾಚ್ ಕಂಪೆನಿ,

ಪೋಸ್ಟ್ ಬಾಕ್ಸ್, ನಂ 105

52—9 ಮದರಾಸು

## ಏಕೆ ನರಳುತ್ತೀರಿ?

ಪ್ರಾಚೀನ ಋಷಿಗಳಿಂದ ಪ್ರಣೀತವಾದ ಆಯುರಾ ರೋಗ್ಯೈಶ್ವರ್ಯವರ್ಧಕವಾದ ಆರೋಗ್ಯವಿಧಿ ಗಳನ್ನು ತಿಳಿಯದೆ ಅಜ್ಞಾನಾಂಧಕಾರ ದಲ್ಲಿ ಮುಳುಗಿ ಅನೇಕ ತರಹಗಳ ವ್ಯಾ ಧಿಗಳಿಂದ ಏಕೆ ನರಳುವಿರಿ?

ಕ್ರಯವು! ಇಲ್ಲದೆ!!

ಉಚಿತವಾಗಿ ಕೊಡಲ್ಪಡುವ ನಮ್ಮ

ನಮ್ಮ ಔಷಧಿಗಳನ್ನು ವಿಕ್ರಿ ಮಾಡು ವದಕ್ಕೆ **ವೈದ್ಯ ವಿದ್ಯೆ** ಏಜಂಟ ರು ಬೇ ಕಾಗಿ ರುವದು

ಎಂಬ ಪುಸ್ತಕವನ್ನು ಓದಿ, ಬಂದ ರೋಗಗ ಳನ್ನು ಪರಿಹಾರ ಮಾಡಿಕೊಂಡು ಭವಿ ಷ್ಯದಲ್ಲಿ ರೋಗಗಳು ಬಾರದಂತೆ

52—9 ನಿವಾರಣೆ ಮಾಡಿಕೊಳ್ಳಿರಿ

ರಾಜವೈದ್ಯ ನಾರಾಯಣಜಿ ಕೇಶವಜಿ,

1/14 ಜೈನ ಬಜಾರು ರೋಡು ಮದ್ರಾಸು

N B.—ವೈದ್ಯಸಲಹೆಯು ಫೀಜಿಲ್ಲದೆ ಕೊಡಲಾಗುವದು

## Sale of Sandalwood.

On 10th December 1928 at 12 noon about 137 tons of cleaned sandalwood will be sold in small lots in public auction at Fraserpet For further particulars apply to—

The Chief Forest Officer,

3—2 Coorg, Mercara P. O

---

## 52 ವರುಷಗಳ ಅನುಭವಸಿದ್ಧ ಔಷಧಗಳು.

### ೧. ಮಹಾಮದನ ಕಾಮೇಶ್ವರೀ ಲೇಹ.

ಅಜೀರ್ಣ, ಎದೆನೋವು, ಸೊಂಟನೋವು, ಮಲಬದ್ಧತೆ, ನಿದ್ರೆಯಿಲ್ಲದೆ ಇರುವಿಕೆ ಮುಂತಾದವುಗಳನ್ನು ಗುಣಪಡಿಸಿ ರ ತಿ ಸುಖಕ್ಕೆ ಶಕ್ತಿಯನ್ನುಂಟುಮಾಡುವುದು

ಡಬ್ಬಿ 1ಕ್ಕೆ ರೂ. 2—0—0 3 ಡಬ್ಬಿಗಳಿಗೆ ರೂ 5—12—0,

### ೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರು ಕ್ರಮತಪ್ಪಿ ಮುಟ್ಟಾಗುವುದು ರಜೋಕಾಲ ದಲ್ಲಿ ಅತ್ಯಲ್ಪವಾಗಲೀ, ಅತಿರೇಕವಾಗಲಿ ರಕ್ತ ಸುರಿಯೋ ಣ, ಹೊಟ್ಟೆನೋವು, ಸೊಂಟನೋವು, ಬಿಳಿಜ್ವರ ನಾನಾವರ್ಣ ಗಳ ಪ್ರದರಗಳನ್ನು ಅತಿ ಶೀಘ್ರದಲ್ಲಿ ಗುಣಮಾಡಿ ಗರ್ಭಾಶಯ ಸಂಬಂಧ ರೋಗಗಳನ್ನು ಗುಣಪಡಿಸಿ, ಸಂತತಿಗೆ ಅಪಾಯಕರ ವಾದ ದೋಷಗಳನ್ನು ಹೋಗಲಾಡಿಸುವುದು 1 ಬಾಟ್ಲಿ ಮತ್ತು 1 ಡಬ್ಬಿ ಮಾತ್ರೆಗೆ 2—4—0

### ೩. ಮೋಹಕಾಂಜನ.

ಇದು ಮುಖಸ್ನಾನದಿಂದ ಕೆಂಪು ಬಿಳಿದು, ಹಳದಿಯಂ ತೆ ಹೋಗತಕ್ಕ ಕೇಶವನ್ನೂ, ವ್ರಣವನ್ನೂ, ಉರಿಯನ್ನೂ, ಗುಣ ಪಡಿಸುತ್ತದೆ. ಡಬ್ಬಿ 1ಕ್ಕೆ 2—8—0 3ಕ್ಕೆ 7—0—0

### ೪. ಮಲೇರಿಯಾ (ಛಳಿಜ್ವರ) ಪಿಲ್ಸ್.

1. 2 3 ಅಥವಾ 4 ದಿವಸಕ್ಕೊಮ್ಮೆ ಬರುವ ಜ್ವರ, ಮ ಲೇಜ್ವರ ಇವುಗಳ ಮೇಲೆ ಖಾತ್ರಿ, ಬಾಟ್ಲಿ 1ರ 0—12—0

### ೫. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ ಕಫಕ್ಕೆ ಜ್ವರಕ್ಕೆ ರಾಮಬಾಣ

ಬಾಟ್ಲಿ 1ಕ್ಕೆ 0—10—0 3ಕ್ಕೆ 1—12—0

### ೬. ಇಚ್ಛಾಭೇದಿ.

ಆಯಾಸವನ್ನುಂಟುಮಾಡದ ಸುಖವಿರೇಚಕ.

ಬಾಟ್ಲಿ 1ಕ್ಕೆ 0—12—0 3ಕ್ಕೆ 2—0—0

೭. **ದಂತಕಾಂತಿ ಚೂರ್ಣ.** ಡಬ್ಬಿ 1ಕ್ಕೆ 3 ಆಣೆ

೮. **ಗಜಕರ್ಣ ಮುಲಾಮ್.** ಡಬ್ಬಿ 1ಕ್ಕೆ 6 ಆಣೆ

N B ಇವುಗಳಲ್ಲದೆ ಪೇಟೆ ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತ

ಎನ್. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದೀಕ್ ಫಿಜಿಸಿಯನ್ಸ್,

2. ಮಂಗಳೂರು, ದ. ಕನ್ನಡ

---

## ಕಮ್ಮಿ ಕರೀದಿಯನ್ನು ನೆನಪಿನಲ್ಲಿಡಿ!

## ಲೋಕವಿಖ್ಯಾತವಾದ "ಜಿಗ್ ಜೇಗ್"



ಟೈಂಪೀಸ್ ಸೈಜು 8×4½"

ಬೆಲೆ ರೂ. 3—0—0 ಮಾತ್ರ.

3 ವರ್ಷ ಖಾತ್ರಿಕೊಡುತ್ತೇವೆ.

ಈ ಟೈಂಪೀಸು ಬಹಳ ಉತ್ತಮವಾದ ಮತ್ತು ಒಳ್ಳೆಯ ಆತಿಹಾರಗಳಿಂದ ಮಾಡಲ್ಪಟ್ಟು, ಚಿತ್ರದಲ್ಲಿ ತೋರಿಸಿರುವಂತೆ ಸುಂದರವಾದ ಕೆತ್ತನೆಯ ಸ್ಟೆಂಡ್‌ನೊಳಗೆ ಇರಿಸಲ್ಪಟ್ಟಿದೆ ನೋಡಲು ಸುಂದರವಾಗಿಯೂ, ಸರಿಯಾದ ಗಂಟೆಯನ್ನು ತೋರಿಸುವುದಾಗಿಯೂ ಇರುವ ಈ ಟೈಂಪೀಸನ್ನು ಅನೇಕ ರು ಉಪಯೋಗಿಸಿ ತೃಪ್ತಿಹೊಂದಿದ್ದಾರೆ.

ಇಂಥಾ ಟೈಂಪೀಸಿಗೆ 3—0—0 ರೂ ಮಾತ್ರ ಬೆಲೆ.

ಏಜಂಟರು.—ಧೈರ್ಯಲಕ್ಷ್ಮಿ ಅಂಡ್ ಕಂಪೆನಿ,

52—9 ಪೋಸ್ಟು ಬಾಕ್ಸು ನಂ 265. ಮದ್ರಾಸು

---

## Silks! Silks!! Silks!!!

Sarees with gold borders body plain or spotted in various designs and colours

| | | | | |
|---|---|---|---|---|
| 5 yds by 45 inches plain body | Rs 30/- | to | Rs 80/- | |
| do spotted body | 40/- | to | 90/- | |
| 6 yds by 45 inches plain body | 50/- | to | 100/- | |
| do spotted body | 60/- | to | 150/- | |
| Headkerchief 44 by 45 inches price | 12 - | to | 35/- | |
| Gold Lace borders Ribbons price from | 1/8/- | to | 5/- | per yd |

*For further particulars, please write to:-*

**BHARADWAJ & CO.,**

**BROCADE, EMBROIDARY & SILK MANUFACTURERS,**

52—8 **Benares City.**

# ವರ್ತಮಾನ ಸಂಗ್ರಹ.

## ಒಳದೇಶ.

ಕಾವೇರಿ ಸಂಕ್ರಮಣ ಹಬ್ಬದ ದೆಸೆಯಿಂದ ನಮ್ಮ ಪತ್ರಿಕೆಯ ಆಫೀಸು ತಾ. 15 ರಿಂದ 18 ರ ವರೆಗೆ ಮೂರು ದಿವಸ ಮುಚ್ಚಲ್ಪಡುವದು.

ಕಾವೇರಿ ಜಾತ್ರೆಯ ಸಮಯದಲ್ಲಿ ಮಡಿಕೇರಿಯಿಂದ ವೀರಾಜಪೇಟೆಯಿಂದಲೂ ಭಾಗಮಂಡಲಕ್ಕೆ ಸ್ಪೆಶಲ್ ಬಸ್ಸುಗಳು ನಡಿಸಲ್ಪಡುವವು.

...ಗೋಣಿಕೊಪ್ಪಲಲ್ಲಿ ಮಿ. ಮನೆಯಪಂಡ ಚಿಣ್ಣಪ್ಪನವ...

ಪೊನ್ನಂಪೇಟೆ ನಾಡಿನ ಸಹಕಾರ ಯೂನಿಯನ್ನಿನ ಮೀಟಿಂಗೊಂದು ತಾ 8—10—28ರಲ್ಲಿ ನಡೆದು ಆ ನಾಡಿನ ಸಹಕಾರ ಸಂಘಗಳ ಸೆಕ್ರೆಟರಿಗಳಿಗೆ ತಮ್ಮ ಕೆಲಸದಲ್ಲಿ ತಕ್ಕ ತರಬೇತು ಕೊಡಲು ಅಸಿಸ್ಟೆಂಟ್ ಸೂಪರ್ ವೈಜರು ಈ ತಾ 1 ರಿಂದ ಒಂದು ವಾರದ ವರೆಗೆ ಪೊನ್ನಂಪೇಟೆ 'ಪೀಸ್ ಕ್ಲಬ್ಬಿ'ನಲ್ಲಿ ತರಬೇತು ಕ್ಲಾಸು ಇಡುವಂತೆಯೂ, ಇದಕ್ಕೆ ಸಹಕಾರ ಇನ್‌ಸ್ಪೆಕ್ಟರವರು ತಕ್ಕ ಸಹಾಯ ಕೊಡಬೇಕೆಂದು ಅವರನ್ನು ಕೇಳಿಕೊಳ್ಳುವಂತೆಯೂ, ಆ ನಾಡಿನ ಎಲ್ಲಾ ಸಂಘಗಳ ಸೆಕ್ರೆಟರಿಗಳನ್ನು ಸದರಿ ಕ್ಲಾಸಿಗೆ ಕಳುಹಿಸುವಂತೆ ಸಂಘಗಳನ್ನು ಕೇಳಿಕೊಳ್ಳುವಂತೆಯೂ ತೀರ್ಮಾನಿಸಲಾಗಿದೆಯೆಂದು ಆ ಯೂನಿಯನ್ನಿನ ಅಧ್ಯಕ್ಷರಾದ ಮಿ ಕೆ. ಸಿ. ಕರುಂಬಯ್ಯನವರು ...

ಅವರು ಅಲ್ಲಿಗೆ ಹೋಗುವರು ಕಮಿಷನನ್ನು ವಿರೋಧಿಸಿ ಕಪ್ಪು ಬಾವುಟಗಳೊಂದಿಗೆ ಮೆರವಣಿಗೆಗಳೂ ಪಬ್ಲಿಕ್ ಮೀಟಿಂಗುಗಳೂ ನಡಿಸಲ್ಪಡುವವು. ರಾಷ್ಟ್ರೀಯ ಮುಂದಾಳುಗಳಿಗೆ ಅಭಿವಂದನಾ ಪತ್ರಗಳು ಅರ್ಪಿಸಲ್ಪಡುವವು.

## ವಿದೇಶ.

ಆಸ್ಟ್ರೇಲಿಯಾದ ನ್ಯೂ ಸೌತ್ ವೇಲ್ಸಿನಲ್ಲಿ 63 ಮೈಲಿ ಅಗಲದಲ್ಲಿ ಬಿರುಗಾಳಿ ಬೀಸಿ, ದೊಡ್ಡ ಕಾಳ್ಗಿಚ್ಚು ಎದ್ದು ಹಲವು ಮನೆ ಮಠಗಳು ನಾಶವಾಗಿ ಸುಮಾರು ಒಂದು ಮಿಲಿಯ ಪೌಂಡುಗಳಷ್ಟು ನಷ್ಟ ಸಂಭವಿಸಿದೆಯಂತೆ.

ಚೈನಾದ ಕಾನ್ಸು ಎಂಬ ಪ್ರಾಂತ್ಯದಲ್ಲಿ ಕೇವಲ ಕ್ರೂರಿಗಳಾದ ಮಹಮ್ಮದೀಯರು ಸುಮಾರು 2,00,000 ಜನರನ್ನು ...

ಕೊಡಗು, ತಾರೀಕು ೧೨ನೇ ಅಕ್ಟೋಬರ್ ೧೯೨೮.


"ಔಷಧ ಸೇವನೆಗಳಿಗಿಂತಲೂ ಒಳ್ಳೇ ಜೀವನ ಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು"

ಆರೋಗ್ಯಚಂದ್ರಿಕೆಯು ನಿಮಗೆ ನಿಜವಾದ ಸಹಾಯವೇ ಇದು!

ಆನರಬಲ್. ಡಾಕ್ಟರ್ ಯು. ರಾಮರಾವ್ ಅವರಿಂದ ಪ್ರಕಟಿಸಲ್ಪಡುವ "ಆರೋಗ್ಯ ಚಂದ್ರಿಕೆ" ಎಂಬ ಆರೋಗ್ಯಬೋಧಕವಾದ ಹೊಸ ಪತ್ರಿಕೆಯು. ನಿಮಗೆ ಆರೋಗ್ಯ ದೃಢಪಡಿಸುವರಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟ ರೋಗ ನಿವಾರಣೆಯನ್ನೂ ಬೋಧಿಸುವುದು.

ಈ ಆರೋಗ್ಯ ಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ, ಒಹು ಕಾಲದಿಂದ ಪಟ್ಟ ಚಿಕಿತ್ಸೆಯಲ್ಲಿಯೂ ಔಷಧ ಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸುವುದು.

ಆರೋಗ್ಯಚಂದ್ರಿಕೆ ಎಂಬೀ ಹೊಸ ಪತ್ರಿಕೆಯಲ್ಲಿ ಆಹಾರ ಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರ ಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗೆ ... ಯೋಚನೆಗಳು, ಸೋಂಕು ರೋಗಗಳ ನಿವಾರಣೆ ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ... ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು, ಮುಂತಾಗಿ ... ಆರೋಗ್ಯ ವಿಷಯಗಳು ಇದರಲ್ಲಿರುವವು. ಆರೋಗ್ಯಚಂದ್ರಿಕೆಯನ್ನು ಸರ್ವದಾ ... ಗೃಹವೈದ್ಯ ...

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ, ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ ಕನ್ನಡ, ತೆಲುಗು ... ಇಂಗ್ಲಿಷ್ ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿನ ಪತ್ರಿಕೆಯು ಒಂದು ... ಬರುವುದು. ಹಾಸಲು ಕೂಡ ನೀವು ಕೊಡಬೇಕಾದುದಿಲ್ಲ.

52—6 ಮ್ಯಾನೇಜರ್, ಆರೋಗ್ಯಚಂದ್ರಿಕೆ, 323 ತಂಬುಚೆಟ್ಟಿ ಬೀದಿ, ಮದರಾಸು.



# ಕರ್ಪೂರ

ಎಸ್ಸೆನ್ಸ್ ಆಫ್ ಕ್ಯಾಂಫರ್

ಮಲೇರಿಯಾ, ಇನ್‌ಫ್ಲುಯೆಂಝಾ ಸನ್ನಿಪಾತ ಜ್ವರ ಅಡವಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲ ಶುದ್ಧಿಯಾಗಿ ಬೆವರು ಬಂದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ... ಟಪ್ಪಾಲು ವೆಚ್ಚ ಬೇರೆ.

## ಸೌಂದರ್ಯ ಪರಿಮಳ.

ಕೆಟ್ಟುಹೋದ ರಕ್ತವನ್ನು ಶುದ್ಧ ಮಾಡುವುದಕ್ಕೆ ಇದು ಖಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿಗೆ ರೂ. ೧—೦—೦. ಟಪ್ಪಾಲು ವೆಚ್ಚ ಬೇರೆ.

ಕರ್ನಾಟಕ ಬ್ರದರ್ಸ್
ದೇಸಾಯಿ ಲೇನ್
ಗಿರಗಾಂವ, ಮುಂಬಯಿ.

—3 52—71



## ಪುತ್ರ ಸಂತಾನದ ಎಣ್ಣೆ.



ಈ ಎಣ್ಣೆಯು ಒಬ್ಬ ದೊಡ್ಡ ಪಂಡಿತರಿಂದ ತಯಾರಿಸಿದ್ದು. ಹೆಂಗಸರಿಗೆ ಅನೇಕ ಕಾರಣಗಳಿಂದ ಗರ್ಭವು ನಿಲ್ಲುವದಿಲ್ಲ. ಕೆಲವರಿಗೆ 3—4 ತಿಂಗಳ ಕಾಲ ನಿಂತ ನಂತರ ಹೋಗಿಬಿಡುವದು. ಇಂಥಾ ಹೆಂಗಸರು ಈ ಎಣ್ಣೆಯನ್ನು 15 ದಿನಗಳು ಸೇವಿಸುವುದರಿಂದ ಗರ್ಭವು ನಿಂತು ಪುತ್ರ ಸಂತಾನವಾಗುವುದು. ಇದು ಹೆಂಗಸರಿಗೆ ಮುಟ್ಟಾಗುವ ಸಮಯದಲ್ಲಿಯೂ, ಮುಟ್ಟಿನ ನಾಶದಲ್ಲೂ ಉಂಟಾಗುವ ಹೊಟ್ಟೆ ನೋವು ಮುಂತಾದವುಗಳನ್ನು ಖಂಡಿತ ಗುಣ ಪಡಿಸುವದು. ಈ ಎಣ್ಣೆಯನ್ನು ಬೊಂಬಾಯಿ, ಮದರಾಸು ಆಸ್ಪತ್ರೆಗಳಲ್ಲಿ ಮಕ್ಕಳಿಲ್ಲದವರು ಉಪಯೋಗಿಸಿ ಪುತ್ರ ಸಂತಾನ ಪಡೆದಿರುವರು. ಒಂದು ಬಾಟ್ಲಿಯನ್ನು ತರಿಸಿ ಪರೀಕ್ಷಿಸಿ. ಉಪಯೋಗಿಸುವ ... ಔಷಧದ ಜೊತೆಯಲ್ಲಿ ಕಳುಹಿಸುತ್ತೇವೆ.

ಕ್ರಯ ಬಾಟಲ್ ... 2—8—0

ವಿಳಾಸ — ಕೆ. ಎಸ್. ರಾಧಾಕೃಷ್ಣ ಒಡೆಯರ್,
109. ಪೈಕಾರ ಬಜಾರ್ ರೋಡ್,
ಮದರಾಸ



ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಯವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳು ಶಕ್ತಿಯುತ, ... ದಷ್ಟಪುಷ್ಟ ... ಇದು ಮಧುರವಾಗಿರುವದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ — ೧—೧೪—೦; ೦—೯—೦.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.


...ಯಾತ್ರಿಕರ ... ಇರುವ ಬೇರೆ ಮೋಟರುಗಳೂ ಬರಬಹುದೆಂತಲೂ ತೀರ್ಮಾನಿಸಲಾಗಿದೆಯೆಂದು ಆ ಯೂನಿಯನ್ನಿನ ಅಧ್ಯಕ್ಷರಾದ ಮಿ. ಕೋಳುಮಾಡ ತಮ್ಮಯ್ಯನವರು ತಿಳಿಸಿರುತ್ತಾರೆ.

ತಾ. 1—10—28ರಲ್ಲಿ ನಡೆದ ಕೊಡವ ವಿದ್ಯಾಭಿವೃದ್ಧಿ ಸಂಘದ ಸೆಂಟ್ರಲ್ ಕಮಿಟಿಯ ಮೀಟಿಂಗಿನಲ್ಲಿ, ಈ ಕಮಿಟಿಯ ಮೆಂಬರತನಕ್ಕೆ ಮಿ. ಕೋದಂಡ ಎಂ. ದೇವಯ್ಯನವರು ಕೊಟ್ಟ ರಾಜಿನಾಮೆಯು ಅಂಗೀಕರಿಸಲ್ಪಟ್ಟು ಅವರ ಬದಲಿಗೆ ಮಿ. ಪಾಲೇಕಂಡ ಮುತ್ತಣ್ಣನವರನ್ನು ನೇಮಿಸಲಾಯಿತೆಂದೂ, ಬರುವ ತುಲಾಸಂಕ್ರಮಣದ ಜಾತ್ರೆಯಲ್ಲಿ ಭಾಗಮಂಡಲಕ್ಕೆ ಜಾತ್ರೆಗೆ ಬರುವ ಜನರಿಂದ ಚಂದಾವಸೂಲಾತಿ ಬಗ್ಗೆ ... ನೇಮಿಸುವಂತೆ ತೀರ್ಮಾನಿಸಲಾಯಿತೆಂದೂ ... ಮಿ ಪಿ. ಎ. ಕುಟ್ಟಪ್ಪನವರು ಬರೆದಿರುತ್ತಾರೆ.

... ಕೊಡಗಿನ ಶಾಲಾ ಸೂಪರ್ ವೈಜರಾದ ಮಿ. ಕಾ... ಈ ತಾ. 5ರಲ್ಲಿ ರಿಟೈರ್ ಆದರು. ಅವರ ಸ್ಥಳಕ್ಕೆ ... ಚಿಣ್ಣಪ್ಪನವರು ಸೂಪರ್‌ವೈಜರಾಗಿ ನೇಮಿಸಲ್ಪಟ್ಟರು. ಕಾಳಮ್ಮನವರು ರಿಟೈರ್ ಆದ ದಿನ ... ಗಿನ ಉಪಾಧ್ಯಾಯರು ವೀರಾಜಪೇಟೆ ಬೋರ್ಡ ... ಹಾಲ್‌ನಲ್ಲಿ ಸೇರಿ ತಿಂಡಿ ತೀರ್ಥಗಳನ್ನು ... ಕಾಳಮ್ಮನವರ ಗುಣಗಳನ್ನೂ, ಕೆಲಸಗಳನ್ನೂ ಕುರಿತು ... ಭಾಷಣ ಮಾಡಿ ಅವರನ್ನು ಬೀಳ್ಕೊಟ್ಟರೆಂದೂ, ... ದೇ ರೀತಿ ಪೊನ್ನಂಪೇಟೆಯಲ್ಲಿ ಕೆಲವು ಉಪಾಧ್ಯಾಯರು ...ನ್ನು ಸತ್ಕರಿಸಿದರೆಂದೂ ತಿಳಿಯುತ್ತೇವೆ.

...ಯಿತು.

ಸ್ವ ಬೃಹ್ಮಣ್ಯ ಭಾರತಿಯವರ ರಾಷ್ಟ್ರೀಯ ಪದ ಪುಸ್ತಕಗಳನ್ನು ಪೋಲೀಸಿನವರು ಬಲಾತ್ಕಾರದಿಂದ ಕೆಳಗಿಳಿಸುವ ... ವಿಷಯ ಮಿ ಸತ್ಯಮೂರ್ತಿಯವರು ಈ ತಾ 9 ರಲ್ಲಿ ಮದ್ರಾಸು ಕೌನ್ಸಿಲಿನಲ್ಲಿ 'ಅಡ್ಜರ್ನ್ ಮೋಶನ್' ತಂದದ್ದು ದೊಡ್ಡ ಬಹುಮತದಿಂದ ಪಾಸಾಯಿತು.

ಪಂಜಾಬ ಪ್ರಾಂತ್ಯದ ಮಂತ್ರಿಯಾಗಿದ್ದ ರಾಜಾ ಜಗನ್ನಾಥ್ ಬಕ್ಷ್ ಸಿಂಗ್ ಎಂಬವರ ಮೇಲೆ ನಿರಭಿಮಾನದ ಠರಾವು ಮಂಜೂರಾದ ನಂತರ, ಅವರು ರಾಜೀನಾಮೆ ಕೊಟ್ಟದ್ದಕ್ಕೆ ಆಗ್ರಾದ ರಾಜ ಕುಶಾಲ್‌ಪಾಲ್ ಸಿಂಗರವರನ್ನು ಮಂತ್ರಿಯನ್ನಾಗಿ ನೇಮಿಸಿದ್ದಾರೆ.

ಸಂಯುಕ್ತ ಸಂಸ್ಥಾನದಲ್ಲಿ ಪ್ರಾಂತೀಕ ಸರ್ವ ಪಾರ್ಟಿ ಪರಿಷತ್ತನ್ನು ನಡಿಸಬೇಕೆಂದು ಡಾಕ್ಟರು ಮುಂಜೇಯವರು ಸರ್ಕ್ಯುಲರನ್ನು ಕಳುಹಿಸಿರುವರು. ಈ ಪರಿಷತ್ತಿಗೆ ಪಂಡಿತ ಮೋತಿಲಾಲ್ ನೇಹರು, ಚಿಂತಾಮಣಿ, ಮತ್ತು ಯಂ ಆರ್. ಜಯಕರರಲ್ಲಿ ಯಾರಾದರೊಬ್ಬರು ಅಧ್ಯಕ್ಷರಾಗಿರಬೇಕೆಂದು ಸೂಚನೆಗಳು ಬಂದಿವೆಯಂತೆ.

ಸೈಮನ್ ಕಮಿಷನು ಪೂನಾಕ್ಕೆ ಬರುವ ಸಮಯದಲ್ಲಿ ಅಲ್ಲಿಯ ಜನರು ಅವರೊಂದಿಗೆ ಸಹಕರಿಸದಂತೆ ಭಾಷಣ ಮಾಡಲು ಡಾಕ್ಟರ್ ಅನ್ಸಾರಿ, ಪಂಡಿತ ಮೋತಿಲಾಲ್ ನೆಹರು ಮೊದಲಾದ ವಿಖ್ಯಾತ ಮುಖಂಡರು ಆಮಂತ್ರಿಸಲ್ಪಟ್ಟ ಮೇರೆ

...ಗ ಕಳೆದ ತಾ. 10ನೇ ಬುಧವಾರ ರೂಟು ಮಾಡಿ ತಿಳಿಸಿದರು. ಶನಿವಾರ ಎಲ್ಲಾ ಗ್ರಾಮಗಳ ಪಟೇಲರು ಬರುವದರಿಂದಲೂ, ಕೋರ್ಟು ದಿನವಾದುದರಿಂದಲೂ ಆ ದಿನವೇ ಮೀಟಿಂಗಿಗೆ ಅನುಕೂಲವೆಂದು ಅವರಿಗೆ ಉತ್ತರ ಕೊಟ್ಟೆನು. ಆದುದರಿಂದ ಸದರಿ ಮೀಟಿಂಗು ತಾ. 20ನೇ ಶನಿವಾರವೇ ನಡಯುವದು. ಮೆಂಬರುಗಳೆಲ್ಲರೂ ದಯಮಾಡಿಸಬೇಕಾಗಿ ಕೋರುತ್ತೇನೆ.

ತಾ. 11-10-28 ಕೆ ಪಿ. ಚಿಣ್ಣಪ್ಪ,
ಸ್ವಾಗತ ಸೆಕ್ರೆಟರಿ.

### ಮಡಿಕೇರಿ ಕಾನ್ವೆಂಟ್ ಹೈಸ್ಕೂಲು.

ಮಹನೀಯರೇ,

ನಮ್ಮ ಕೊಡಗು ದೇಶದಲ್ಲಿ ಒಂದೇ ಕಾನ್ವೆಂಟ್ ಸ್ಕೂಲ್ ಇದೆ ಎಂದು ಎಲ್ಲರಿಗೂ ತಿಳಿದು ಬಂದಿದೆ. ಅದರೆ ಈ ಶಾಲೆಯನ್ನು ನಾನು ನನ್ನ ಕಣ್ಣಿನಿಂದ ನೋಡದಿದ್ದುದರಿಂದ ಇನ್ನೇ ವೃತ್ತಾಂತ ಪತ್ರಿಕೆಯಲ್ಲಿ ಈ ಶಾಲೆಯ ವಿಷಯ ಬಳ್ಳಿಯಿಡು ಕೆಟ್ಟುದು ಬರೆದು ಬಂದದನ್ನು ತಿಳಿದುಕೊಳ್ಳಬೇಕಾಯಿತು. ಆದರೆ ಈ ವರ್ಷ ನಾನು ಅಲ್ಲಿಗೆ ಹೋಗಿದ್ದಾಗ ಅಲ್ಲಿಯ ವಿಸ್ತಾರವಾದ ಕಟ್ಟಡವನ್ನು ಮತ್ತು ಆ ಶಾಲೆಯ ಚೊಕ್ಕಟ ಸ್ಥಿತಿಯನ್ನು ನೋಡಿ ನನಗೆ ಅತ್ಯಂತ ಸಂತೋಷವಾಯಿತು. ವಿಶೇಷವಾಗಿ ಅಲ್ಲಿಯ ನಿಯಮಗಳನ್ನೂ ಮಕ್ಕಳ ಕಲಿಕೆಯನ್ನೂ ನೋಡಿ ನನಗೆ ಆಶ್ಚರ್ಯವಾಯಿತು. ಆದುದರಿಂದ

ನಾವು ಬುದ್ಧಾಗಿ ನೋಡುವುದಕ್ಕೆ ಮೊದಲು ಯಾವ ಮಾತು ಆಡಬಾರದೆಂದು ತಿಳಿದುಕೊಂಡೆನು.

ಆ ಶಾಲೆಯನ್ನು ಇಷ್ಟು ಒಳ್ಳೆ ಸ್ಥಿತಿಗೆ ತಂದಿರುವುದು ಅಲ್ಲಿಯ ಉಪಾಧ್ಯಾಯಿನಿಯರ ಕೆಲಸವಾಗಿದೆ. ಬೇರೆಯವರಿಂದ ಇದು ಸಾಗುತ್ತಿರಲಿಲ್ಲ. ಅವರು ಸಾಗರಗಳನ್ನು ದಾಟಿ ತಮ್ಮ ಬಂಧುಬಳಗದವರನ್ನೆಲ್ಲಾ ಬಿಟ್ಟು ಇಲ್ಲಿಗೆ ಬಂದು ನಮ್ಮ ಬಾಲಕಿಯರಿಗೆ (ಕೊಡಗು ಹುಡುಗಿಯರಿಗೆ) ತಕ್ಕ ವಿದ್ಯೆಯನ್ನು ಕಲಿಸುತ್ತಿರುವುದಕ್ಕೆ ನಾವು ಅವರನ್ನು ಎಷ್ಟು ವಂದಿಸಿದರೂ ಸಾಲದು. ಇದಕ್ಕೆ ಬದಲಾಗಿ ಅನೇಕವೇಳೆ ಅನೇಕ ಜನರು ಅವರ ವಿಷಯ ಮನಸ್ಸಿಗೆ ಬಂದ ಹಾಗೆಲ್ಲಾ ಈ ಪತ್ರಿಕೆಯಲ್ಲಿ ಬರೆಯುತ್ತಾರೆ. ಇದು ಒಂದು ದೊಡ್ಡ ತಪ್ಪಾಗಿ ನನಗೆ ಕಾಣುತ್ತದೆ.

ಕೆಲವು ಜನರು ಕಾನ್ವೆಂಟು ಹುಡುಗಿಯರಿಗೆ ಬಹಳ ಬಡಾಯಿ, ಅಪ್ಪಾ! ಅವರನ್ನು ನನಗೆ ಬೇಡ, ಆ ಹುಡುಗಿಯರನ್ನು ಮದುವೆಯಾದರೆ ಒಳ್ಳೇ ಸೀರೆ, ರಿಬ್ಬನ್ ಮತ್ತು ಬೂಟ್ಸ್ ಮುಂತಾದದನ್ನು ಕೊಟ್ಟು ನನ್ನ ಸಂಬಳವೆಲ್ಲಾ ತೀರಿ ಹೋಗಿ ನನಗೆ ಅನ್ನ ತಿನ್ನುವುದಕ್ಕೆ ಹಣವಿಲ್ಲದಾಗುವದು ಎಂದು ಸಹ ಹೇಳುವುದನ್ನು ನನ್ನ ಕಿವಿಯಿಂದಲೇ ಕೇಳಿರುತ್ತೇನೆ. ಇಂಥಾ ಉಡುಪುಗಳನ್ನು ಕೊಟ್ಟುಕೊಳ್ಳುವುದಕ್ಕೆ ಅಲ್ಲಿಯ ಉಪಾಧ್ಯಾಯಿನಿಯರು ಕಲಿಸಿದ ಬಹುದೆಂದು ಸಹ ಹೇಳುತ್ತಾರೆ. ಇದು ಅನ್ಯಾಯವಾಗಿ ಕಾಣುತ್ತದೆ. ಏಕೆಂದರೆ ಅಲ್ಲಿಯ ಉಪಾಧ್ಯಾಯಿನಿಯರು ಸನ್ಯಾಸ್ತ್ರೀಯರಾಗಿರುವುದರಿಂದ ದುಂದುಗಾರಿಕೆಯನ್ನು ತಮ್ಮ ವಿದ್ಯಾರ್ಥಿನಿಯರಿಗೆ ಕಲಿಸುವುದಿಲ್ಲವೆಂದು ನಾನು ತಿಳಿದಿರುತ್ತೇನೆ.

ತಾನು ಒಳ್ಳೆಯ ಬಟ್ಟೆಯನ್ನು ಹಾಕಿಕೊಳ್ಳಬೇಕು, ತಾನು ಸುಂದರಿಯಾಗಿ ಕಾಣಬೇಕು, ತನ್ನನ್ನು ಒಳ್ಳೆಯವನು ಮದುವೆಯಾಗಬೇಕೆಂಬ ಕುತೂಹಲವು ಭೂಲೋಕದಲ್ಲಿರುವ ಎಲ್ಲಾ ಹುಡುಗಿಯರಿಗೆ ಇರುತ್ತದೆ. ಈಗಿನ ಕಾಲದಲ್ಲಿ ನಲುವತ್ತು ಐವತ್ತು ವಯಸ್ಸಾದ ಮುದುಕಿಯರೇ ತೋಳು ಇಲ್ಲದ ಮತ್ತು ಎದೆ ಕಾಣುವ ರವಕೆಯನ್ನು ತೊಟ್ಟು, ಮಂಡಿಯ ಸಮಕ್ಕೆ ಸೀರೆಯನ್ನು ಉಟ್ಟು "ನಿಪ್ಪೆರ್ ತುಣಿ" ಹಾಕುವ ಹಾಗೆ ತಲೆಗೆ ವಸ್ತ್ರವನ್ನು ಕಟ್ಟಿಕೊಳ್ಳುವಾಗ ಒಳ್ಳೇ ಪ್ರಾಯದ ಹುಡುಗಿಯರು ಒಳ್ಳೇ ಬಟ್ಟೆಯನ್ನು ಧರಿಸಿಕೊಳ್ಳುವುದು ಆಶ್ಚರ್ಯವೋ?

ಕೆಲವು ಹುಡುಗಿಯರು ತಮ್ಮ ತಂದೆಗೆ ಸ್ವಲ್ಪ ಹೆಚ್ಚು ಕಾಸು ಬರುವುದು ಕಂಡು ಬಿಟ್ಟರೆ ತಮ್ಮ ತಂದೆತಾಯಿಗೆ ತುಂಬಾ ಹಣ ಇದೆ ಎಂದು ನೆನಸಿ "ಅಪ್ಪಯ್ಯಾ ಅಥವಾ "ನಮ್ಮ" ಅಥವ "ಮಮ್ಮವ್ವಯ್ಯಾ" ನಾಕ್ ಕಯಿಂಜ ಆಲತ ಪೊಡವು ಬೋಂಡಾ, ಪುದಿಯದಾಂಡು" ಎಂದು ಹೇಳುವಾಗ ಕೆಲವು ಬುದ್ಧಿ ಇಲ್ಲದ ತಾಯಿಯರು "ಅನ್ನನೇ ಅಡ ಮೋಳೇ" 'ಅಪ್ಪಯ್ಯ' ಅಥವಾ 'ಪಪ್ಪಯ್ಯ' ವೀರಾಜಪೇಟೆಕ್ ಪೋಪಕ ವಿಜ್ಞಾತ್ ಕೊಂಡರಿಚರನ ಎಂದು ಹೇಳಿ ಮರುದಿವಸವೇ ಅವರು ಹೇಳಿದ ಬಟ್ಟೆಯನ್ನು ತರಿಸಿಕೊಡ ವರು. ಆ ಹುಡುಗಿಯು ಹೊಸ ಸೀರೆಯನ್ನು ಶಾಲೆಯಲ್ಲಿ ತೋರಿಸುವಾಗ ಬೇರೆ ಹುಡುಗಿಯರಿಗೆ ಸಹ ಆಶೆ ಹುಟ್ಟಿ ಅವರು ಹೋಗಿ ತಮ್ಮ ತಂದೆತಾಯಿಯರನ್ನು ಪೀಡಿಸುವರು. ಆಗ ಇದೆಲ್ಲಾ ಉಪಾಧ್ಯಾಯಿನಿಯರು ಕಲಿಸುವಂಥಾದ್ದೋ!

ಇನ್ನು ಹಲವರು ಕಾನ್ವೆಂಟು ಹುಡುಗಿಯರಿಗೆ ಕೆಲಸವೇನೂ ಗೊತ್ತಿರುವುದಿಲ್ಲವೆಂದು ಹೇಳುತ್ತಾರೆ. ಇದು ನಿಜವಾಗಿ ಹುಡುಗಿಯರ ತಾಯಿಯರ ದೊಡ್ಡ ತಪ್ಪು. ಏಕೆಂದರೆ ತಮ್ಮ ಮಕ್ಕಳು ರಜದಲ್ಲಿ ಮನೆಗೆ ಹೋದ ಕೂಡಲೇ "ನೀನು ಅಡಿಗೆ ಮನೆಗೆ ಬರಬೇಡ, ಪುಸ್ತಕ ತೆಗೆದುಕೊಂಡು ಓದು ಪಿಟೀಲ್ ತೆಗೆದುಕೊಂಡು ಬಾರಿಸು. ಪದ ಹೇಳಿಕೊಂಡು ಇದ್ದರೆ ಸಾಕು. ಎಲ್ಲರ ಜೊತೆಯಲ್ಲಿ ಇಂಗ್ಲೀಷ್ ಮಾತಾಡು" ಎಂದು ಅನೇಕ ಹುಡುಗಿಯರ ತಾಯಿಯರು ಹೇಳುವರು. ಹೀಗ ಹೇಳುವಾಗ ಹುಡುಗಿಯರ ಬಡಾಯಿ ಹೆಚ್ಚಾಯಿತು. ಆಗ ಇದು "ಅಲ್ಪ ವಿದ್ಯಾ ಮಹಾಗರ್ವಿ" ಎಂದು ಹೇಳುವಹಾಗೆ ಆಗುತ್ತದೆ. ತುಂಬಾ ವಿದ್ಯೆ ಕಲಿತವರು ಒಂದು ಕಾಲಕ್ಕೂ ಹೀಗೆ ಮಾಡುವುದಿಲ್ಲ. ಇನ್ನೂ ಕೆಲವರು ತಮ್ಮ ಮಕ್ಕಳಿಗೆ "ನೀನು ಬೋರ್ಡಿಂಗಿನಲ್ಲಿ ಏನೊಂದೂ ಕೆಲಸಮಾಡಬೇಡ" ವೆಂದು ಹೇಳುವುದನ್ನು ಸಹ ನಾನು ಕೇಳಿರುತ್ತೇನೆ. ಇದು ಒಳ್ಳೆಯದಲ್ಲ. ಏಕೆಂದರೆ ಅವರು ಶಾಲೆಯಲ್ಲಿ ಒಳ್ಳೇ ಓದು ಬರಹ ಮಾತ್ರ ಕಲಿತರೆ ಸಾಲದು ಮನೆ ಕೆಲಸ ಸಹ ಕಲಿತರೆ ಅವರ ಮುಂದಿನ ಜೀವಮಾನಕ್ಕೆ ಒಳ್ಳೆ ಉಪಯೋಗವಾಗುತ್ತದೆ.

ಇವುಗಳಿಂದ ಇನ್ನು ಮುಂದಕ್ಕಾದರೂ ಆ ಶಾಲೆಯನ್ನು ಕುರಿತು ಕುಸ್ಸೇಕೆ ಮಾಡಿದ ಅದರ ಒಳ್ಳೆಯ ಕಾರ್ಯಕ್ಕೆ ಸಹಾಯ ಮಾಡಬೇಕೆಂಬುದೇ ನನ್ನ ಪ್ರಾರ್ಥನೆ.

"ಅಕ್ಕವಳು"

---

ಸಂಪಾಜೆ ಫಾರೆಸ್ಟು, ಹುಲ್ಲು ಕಾಡುಗಳ ಹಾವಳಿಯೂ.

ಅಯ್ಯಾ,

ಈ ಸಂಪಾಜೆ ಪ್ರಾಂತ್ಯದಲ್ಲಿ ಬಾಳಿ ಮಾಡಿಕೊಂಡಿರುವ ರೈತರಿಗೆ ದುಷ್ಟ ಜಂತುಗಳ ಹಾವಳಿ... ಒಸ್ಟ ಒಸ್ಟ ಹೆಚ್ಚುತ್ತಾ ಒಂದು ಅಹೋರಾತ್ರಿ ದುಃಖಗಳಿದದನ್ನೇ ಕೇಳಾಡುತ್ತಿರುವರೆಂದರೆ ಅತಿಶಯೋಕ್ತಿಯಾಗಲಾರದು.

ಕೆಲ ಕಾಲದಿಂದಲೇ ಅನೇಗಳ ಘಾಳಿಯೂ ಇದ್ದುದರ ಕುರಿತಾಗಿ ಆಗಾಗ್ಯೆ ವಾರ್ತಾಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದುದನ್ನು ವಾಚಕ ಮಹಾಶಯರು ಓದಿದ ನೆನಪಿರಬಹುದು. ಇತ್ತೀಚೆಗೆ ಹುಲಿ, ಚಿರತೆಗಳ ಹಾವಳಿಯು ಮಹತ್ತಾಗಿ ಪರಿಣಮಿಸಿದೆ. ಹುಲಿ ಚಿರತೆಗಳು ದಿನಂಪ್ರತಿ ಎಂಬಂತೆ ಅಲ್ಲಲ್ಲಿ ಜಾನುವಾರುಗಳನ್ನು ಕೊಲ್ಲುತ್ತಿರುವವು. ಇಂಥಾ ಭೀಕರ ಸ್ಥಿತಿಯು ಈ ಮಲೆನಾಡು ವಾಸಿಗಳಿಗುಂಟಾದುದರಿಂದ ಮಹತ್ತಾದ ವ್ಯಸನಕ್ಕೀಡಾಗಿರುವರು.

ದೃಷ್ಟಾಂತವಾಗಿ ಈ ಕಳೆದ ಒಂದು ತಿಂಗಳೊಳಗೆ ಒಂದು ಮೈಲು ವಾಸಲೆಯಲ್ಲಿ ಏಳೆಂಟು ದನಗಳನ್ನು ಹುಲಿ, ಚಿರತೆಗಳೇ ಕೊಂದು ತಿಂದಿರುವುದೆಂದರೆ ಎಷ್ಟೊಂದು ವ್ಯಸನಕರವಾಗಿದೆ. ಈ ತರದ ಅವಸ್ಥೆಯಾದರೆ ಮುಂದಿನ ಗತಿಯು ಹ್ಯಾಗಾಗುವುದೋ ದೇವರೇ ಬಲ್ಲ! ಈ ವರ್ಷ ಕೆಲ ರೈತರಿಗೆ ಬೇಸಾಯಕ್ಕೆ ಎತ್ತು ಕೊಂಡುಕೊಂಡೇ ಆಗಬೇಕಲ್ಲದೆ ಅನ್ಯಥಾ ಗತ್ಯಂತರವಿಲ್ಲ.

ವರ್ಷ ತೆಗೆದ ಎತ್ತುಗಳು ವರುಷಕ್ಕೆಂಬಂತೆ ಹುಲಿಬಾಯಿಗೆ ತುತ್ತಾಗುವುದರಿಂದ ಪ್ರತೀ ವರ್ಷ ಬೇಸಾಯಕ್ಕೆ ಎತ್ತು ಕ್ರಯಕ್ಕೆ ಕೊಳ್ಳುವುದೆಂದರೆ ಸಾಮಾನ್ಯವಾದ ನಷ್ಟವೆಂದೆಣಿಸಬಹುದೇ? ಇಡೀ ವರ್ಷದ ಕಾಯ ಕಷ್ಟದ ಫಲವು ದುಷ್ಟಜಂತುಗಳ ಪಾಲಿಗೆಂದರೆ ಸದಾ ಸಾಲವೆಂಬ ಸಂಕಲೆಯಿಂದ ಬಂಧಿಸಲ್ಪಟ್ಟವನಾಗಿ ನರಳುತ್ತಿರಬೇಕಾಗಿರುವುದೊಂದು ಮಹತ್ತಾದ ಕಷ್ಟ!

ಮಾತ್ರವಲ್ಲ, ಆಗಾಗ್ಯೆ ಮಲೇರಿಯಾ ಪೀಡಿತರಾಗಿ ನರಳುತ್ತಿರುವುದೊಂದು ಕಷ್ಟ!! ಪ್ರಯಾಸದಿಂದ ಬೆಳೆಸಿದ ಭತ್ತದ ಪೈರಿಗೆ ವೈರಿಯಾದ ಬಂಬುಚ್ಚಿಯದೊಂದು ಉಪದ್ರ!!! ಅಂತೂ ಇಂತೂ ಇಲ್ಲಿಯ ನಿವಾಸಿಕರ ಬಾಳು ಮನುಷ್ಯ ಬಾಳೆಂತ ಎಣಿಸಲಿಕ್ಕೂ ಕೂಡದಷ್ಟು ಕಷ್ಟತರವಾಗಿರುವುದು.

ಇಷ್ಟೆಲ್ಲಾ ಅನಾಹುತಕ್ಕೂ ಅತೀ ಸಮೀಪವಾಗಿ ಬಂದಿರುವ ರಿಜರ್ವ ಫಾರೆಸ್ಟುಗಳೇ ಕಾರಣವೆಂಬುದು ನಿರ್ವಿವಾದವಾಗಿದೆ. ಮೊದಲೇ ಘೋರಾರಣ್ಯವಾಗಿರುವ ಈ ಪ್ರಾಂತ್ಯದಲ್ಲಿ ಭೂಮಿಯು ಅತೀ ಸಮೀಪವಾಗಿ ಅರಣ್ಯವನ್ನು ರಿಜರ್ವ್ ಆಗಿಟ್ಟರೆ ಅದರ ಪಾಡೆಂತಿರಬಹುದೆಂದು ಬೇರೆ ವರ್ಣಿಸುವುದೇಕೆ? ಹಾಗೆಂದ ಮೇಲೆ ಇಲ್ಲಿಯ ನಿವಾಸಿಕರ ಸ್ಥಿತಿಗತಿಯನ್ನು ಹೇಳಬೇಕೇನು?

ಇಂಥಾ ದುಸ್ಥಿತಿಯಲ್ಲಿರುವ ಈ ಪ್ರಾಂತ್ಯದ ರೈತರ ಕಷ್ಟ ನಷ್ಟವನ್ನು ಮಾನ್ಯ ಸರಕಾರದವರೂ, ನ್ಯಾಯವಿಧಾಯಕ ಸಭೆಯ ಪ್ರತಿನಿಧಿ (ಯಂ. ಯಲ್. ಸಿ.) ಗಳವರೂ ಗಮನಕ್ಕೆ ತಕ್ಕೊಂಡು ಭೂಮಿಗೆ ಅತಿ ಸಮೀಪ ಮುತ್ತಿಕೊಂಡಿರುವ ರಿಜರ್ವಿನ ಲೈನನ್ನು ವರ್ಗಸ್ಥಳದಿಂದ ಕಡೇಪಕ್ಷ ಒಂದು ಮೈಲು ದೂರಕ್ಕಾದರೂ ಮುಂದರಿಸಿ ಗತಿಹಾಕುವಂತೆ ಸಮ್ಮಂಧಪಟ್ಟ ಅಧಿಕಾರಿಗಳಿಂದ ವ್ಯವಸ್ಥೆಮಾಡಿಸಬೇಕಾಗಿ ಬೇಡುವ

"ಊರ ನಿವಾಸಿ"

---

ಮೂರ್ನಾಡು ಆಸ್ಪತ್ರೆ

ಅಯ್ಯಾ,

ಮು. ರಾ ಸಿ. ಸುಬ್ಬಣ್ಣಯ್ಯನವರು ಡಿ. ಬೋರ್ಡು ಪ್ರೆಸಿಡೆಂಟರಿಗೆ ಶನಿವಾರ ಸಂತೆಯ ಆಸ್ಪತ್ರೆ ವಿಷಯವಾಗಿ ಬರೆದ ಪತ್ರವ್ಯವಹಾರದ ಜವಾಬನ್ನು ವಾಚಕ ಮಹಾಶಯರ ತಿಳುವಳಿಕೆ ಬಗ್ಯೆ ತಾ 28—8—28ರ ಕೊಡಗು ಪತ್ರಿಕೆಯಲ್ಲು ಪ್ರಕಟಿಸಿರುವದನ್ನು ನಾನು ಬಹು ಕುತೂಹಲದಿಂದ ಓದಿದೆನು. ಮು. ರಾ ಸುಬ್ಬಣ್ಣಯ್ಯನವರು ರಾಜಕೀಯ ವ್ಯವಹಾರದಲ್ಲು ಬಹು ಕಾಲದ ವರೆಗೆ ಅಗ್ರಗಣ್ಯರಾಗಿದ್ದರೆಂಬುದರಲ್ಲಿ ಸಂಶಯವೇನು? ಲೆಜಿಸ್ಲೇಟಿವ್ ಕೌನ್ಸಿಲಿನಲ್ಲೂ, ಡಿ ಬೋರ್ಡಿನಲ್ಲೂ, ಜಮಾನ್ದಾರರ ಸಂಘದಲ್ಲೂ ತಮ್ಮ ಜನರ ಪ್ರತಿನಿಧಿಯಾಗಿದ್ದು ಬಾರಿ ಬಾರಿಗೂ ತಮ್ಮ ತಾಲೋಕು ನಿವಾಸಿಗಳ ಪರವಾಗಿ ಸರಕಾರದವರೊಂದಿಗೆ ಹೋರಾಡುತ್ತಿದ್ದದ್ದು ತಕ್ಕ ಮಟ್ಟಿಗೆ ನಾನೂ ತಿಳಿದಿರುವೆನು. ಈಗ ಕೌನ್ಸಿಲಿನ ಹೊರಗೂ, ಡಿ. ಬೋರ್ಡಿನ ಹೊರಗೂ ವಿಶ್ರಾಂತಿ ಪಡೆಯುತ್ತಿರುವದಾದರೂ ತಮ್ಮ ಪ್ರೇಮವು ತಮ್ಮ ತಾಲೋಕು ಪ್ರಜಾಜನರಲ್ಲು ನಿರತವಾಗಿರುವದು ಬಹು ಶ್ರೇಯಸ್ಕರವು. ಆದರೆ ಸದರಿ ಮುಖಂಡರ ಪತ್ರವ್ಯವಹಾರದ ತಿರುಳು ಸ್ವಲ್ಪ ಸ್ವಾರ್ಥತೆಯನ್ನೊಳಕೊಂಡಿರುವಂತೆ ನನಗೆ ಕಂಡುಬರುವ ಕಾರಣ ಬಹಳ ವಿಷಾದಿಸಬೇಕಾಗಿದೆ. ಅಂಥಾ ಮುಖಂಡರು, ಆ ನಾಡು, ಈ ನಾಡು ಎಂಬ ಪಕ್ಷಪಾತದ ಒಣ ದೃಷ್ಟಿಯ ಅವಘಡಕ್ಕೆ ಯಾರು ತಾನೇ ಪಶ್ಚಾತ್ತಾಪಪಡದಿರುವರು.

ಶನಿವಾರಸಂತೆಗೊಂದು ಆಸ್ಪತ್ರೆಯ ಆವಶ್ಯಕತೆಯು ಕಂಡುಬಂದು ಸಾಧಾರಣ 25 ವರ್ಷಗಳಿಂದ ಸರಕಾರದವರಲ್ಲು ಸದರಿ ವಿಷಯ ಆಲೋಚಿಸುತ್ತಿರುತ್ತಾರಾಗಿಯೂ, ಮೂರ್ನಾಡು ಜನರು ಈಗ ಮಾತ್ರ ಸದರಿ ವಿಷಯದ ಚಳವಳಿ ಬ್ಬಿಸುತ್ತಿರುತ್ತಾರಾಗಿಯೂ ಪ್ರತಿಪಾದಿಸುತ್ತಾರೆ. ಶನಿವಾರ ಸಂತೆಯವರು ಬಹುಕಾಲ ಆಲೋಚನಾಪರರೂ, ದೂರದೃಷ್ಟಿಯವರೂ ಆಗಿರುವದರಿಂದ ತಮ್ಮ ಸಲಕರಣೆಗಳಲ್ಲು ಕೇವಲ 25 ವರ್ಷಗಳಿಂದ ವ್ಯವಹಾರಮಾಡ ತೊಡಗಿರಬಹುದು. ಆದರೆ ಮೂರ್ನಾಡಿನವರು ಗರೀಬರಾಗಿರುವದರಿಂದಲೂ, ವಿದ್ಯಾರಹಿತರಾಗಿರುವದರಿಂದಲೂ ಚಳವಳಿ ಬ್ಬಿಸುವದರ ಬದಲು ನಾನಾವಿಧದ ವ್ಯಾಧಿಗಳಿಗೂ ಮರಣಕ್ಕೂ ಈಡಾಗುತ್ತಿರುತ್ತಾರೆ. ನಿದ್ರಾವಸ್ಥೆಯಲ್ಲಿಯೇ ಕ್ಷಯಿಸುತ್ತಿರುವ ಈ ಮೂರ್ನಾಡಿನ ಮೇಲಣ ಕೃಪೆಯನ್ನು ಯಾವ ಪರ ಹೊರಬರುಗಳೂ ಇಡದಿರಲು ಈ ನಾಡಿನಿಂದಲೇ ಸದರಿ ಉದ್ದಿಶ್ಯ ಬಗ್ಗೆ ಡಿ. ಬೋರ್ಡಿಗೆ ಒಬ್ಬ ಪ್ರತಿನಿಧಿಯನ್ನು ಆರಿಸಿ ನಮ್ಮ ಉದ್ದಿಶ್ಯವನ್ನು ಈಗ ತಿಳಿಸುವದಾಗಿರುತ್ತದೆ. ಅಷ್ಟು ಮಾತ್ರಕ್ಕೆ ತಮ್ಮ 25 ವರ್ಷದ ದೂರ ದೃಷ್ಟಿಯು ಮೇಲು ಎಂಬದಾಗಿ ವಾದಿಸುವದುಂಟೇ? ಅಲ್ಲದೆ ಸದರಿ ಮಹಾನುಭವರ ಪತ್ರದಿಂದಲೇ ಅವರು ಧನಿಕರೂ, ಆತ್ಮನಿಷ್ಠೆಯವರೂ (Self-reliant) ಆಗಿರುತ್ತಾರೆಂಬದಾಗಿ ವೇದ್ಯವಾಗುತ್ತದೆ.

ಅಲ್ಲದೆ 15 ವರ್ಷಗಳ ಕೆಳಗೆ ರಾ. ಬಾ. ಮುಕ್ಕಾಟಿರ ಅಯ್ಯಪ್ಪನವರ ಅಧ್ಯಕ್ಷತೆಯಲ್ಲು ನಡೆದ ಜಮಾನ್ದಾರರ ಸಂಘದ ವಾರ್ಷಿಕ ಸಮ್ಮೇಳನದಲ್ಲು ಸದರಿ ಮೂರ್ನಾಡು ಆಸ್ಪತ್ರೆ ವಿಷಯ ಬಾಕ್ತಿದಾರನೇ ರರಾವು ತಂದಿರುತ್ತಾನೆ. ಗ್ಯೆ ಪ್ರಥಮ ಶ್ರೀಮಂಗಲಕ್ಕೆ ಆಸ್ಪತ್ರೆಯಾದ ನಂತರ ಮೂರ್ನಾಡಿಗೆ ಆಸ್ಪತ್ರೆ ಕೊಡಬಹುದು ಎಂಬದಾಗಿ ಮೆ. ಅಪ್ಪಾರಂಡ ಚಂಗಪ್ಪನವರು ವಾದಿಸಿರುತ್ತಾರೆ. ಹಾಗೆ ಚರ್ಚಿಸಲ್ಪಡುವಾಗ್ಯೆ ಶನಿವಾರಸಂತೆಯು ಮುಂದಿರಲಿಲ್ಲ. ಈ ಮಧ್ಯೆ ಅನೇಕ ಮೆಮೋರಿಯಲುಗಳನ್ನೂ ಮುಖ್ಯಾಧಿಕಾರಿಗಳಿಗೆ ಸಲ್ಲಿಸಿರುತ್ತೇವೆ. ಇದರ ವಿಷಯಗಳನ್ನು ಇಲ್ಲಿ ಚರ್ಚಿಸುವುದಿಲ್ಲ. ಶನಿವಾರಸಂತೆಗೊಂದು ಆಸ್ಪತ್ರೆ ಬೇಡವೆಂಬದಾಗಿ ನಾನು ಎಂದಿಗೂ ಹೇಳಲಾರೆನು. ಆದರೆ ಒಂದು ಸಂಗತಿಯನ್ನು ಕೇಳಲು ಹಿಂದು ಮುಂದು ಆದ ಮಾತ್ರಕ್ಕೆ ಸ್ಥಳಗಳ ಯೋಗ್ಯತೆಯೂ, ಅವಶ್ಯಕತೆಯೂ ಹೆಚ್ಚು ಕಮ್ಮಿಯಾಗಲಿಕ್ಕಿಲ್ಲ. ಖಂಡಿತವಾಗಿಯೂ ಶನಿವಾರಸಂತೆಗೂ ಮತ್ತು ಆ ರೀತಿಯ ಇತರ ಸ್ಥಳಗಳಿಗೂ ಆಸ್ಪತ್ರೆಯು ಆವಶ್ಯಕವು. ಪ್ರಕೃತಿಯಲ್ಲು ಆರೋಗ್ಯವೇ ಐಶ್ವರ್ಯಭಾಗ್ಯ.

ಮೂರ್ನಾಡು ನಡುನಾಡು, ಗರೀಬ ನಾಡು. ಕಾಫಿಯ ತೋಟಗಳೇ, ಏಲಕ್ಕಿ ತೋಟಗಳೇ ಇನ್ನು ಇತರ ಯಾವ ತರದ ಪ್ಲಾಂಟೇಷನಗಳಾಗಲಿ ಇರುವದಿಲ್ಲ. ನಿಜ, ಮೂರ್ನಾಡಿನಿಂದ ಹತ್ತು ಮೈಲಿ ದೂರದಲ್ಲು ಆಸ್ಪತ್ರೆ ಇರುತ್ತದೆ. ಆ ಹತ್ತು ಮೈಲು ದೂರದಲ್ಲಿರುವ ವೀರರಾಜೇಂದ್ರಪೇಟೆಯ ಆಸ್ಪತ್ರೆಯು ಅಲ್ಲಿಯ ಜನಸಮೂಹಕ್ಕೆ ಸಾಲದೆ ಸ್ವಂತ ಸ್ವಂತ ಚಿಕಿತ್ಸಾಲಯಗಳು ಹೊರಬೀಳುತ್ತಿವೆ. ಅಲ್ಲದೆ ಪ್ರವಾಹದಿಂದ ಹೊಳೆಯು ಕಟ್ಟಿ ಮೂರ್ನಾಡು ಎಂಬುವದು ಅದೆಷ್ಟೋ ಸಲ ಕೊಡಗಿನ "ಅಂಡಮಾನ್ಸ್" ಆಗಿ ಹೋಗುತ್ತಿರುತ್ತದೆ. ಟಪ್ಪಾಲು ಸಹ ಬಂಧಿಸಲ್ಪಡುತ್ತದೆ. ಮಧ್ಯ ದೇಶದಲ್ಲು ಯಾವಾಗಲೂ ಜನರುಗಳ ಸಮೂಹ ಇರತಕ್ಕದ್ದು ವಾಡಿಕೆಯಲ್ಲವೇ. ಮೂರ್ನಾಡು ಸೆಂಟರಿನಲ್ಲು ಸುಮಾರು 14000 ಜನರುಗಳಿಗಿರುವ ಅವಶ್ಯಕತೆಯು ಕಂಡುಬರುವಾಗ ಇಂಥಾ ಮಧ್ಯ ದೇಶವನ್ನು ನಿರಾಕರಿಸುವದುಂಟೇ? ಶನಿವಾರಸಂತೆಗೆ ಸೋಮವಾರಪೇಟೆಯು ಹೆಚ್ಚು ಕಮ್ಮಿ ಹತ್ತು ಮೈಲು. ಸಾದಾ ರಸ್ತೆಯಲ್ಲವೇ? ಆದರೂ ಶನಿವಾರಸಂತೆಯಿಂದ ಪ್ರತಿನಿತ್ಯ ಕಾಯಿಲಸ್ಥರು ಸೋಮವಾರಪೇಟೆಗೆ ಹೋಗಬೇಕಾಗಿ ನಾನು ಹೇಳಲಾರೆನು. ಇದು ಮೂರ್ನಾಡಿಗೆ ಹತ್ತು ಮೈಲು ದೂರದಲ್ಲು ವೀರರಾಜೇಂದ್ರಪೇಟೆ ಎಂಬ ತಮ್ಮ ವಾದವನ್ನು ಪ್ರತಿವಾದಿಸತಕ್ಕದ್ದಾಗಿರುತ್ತದೆ.

ಅಯ್ಯಾ, ಸುಬ್ಬಣ್ಣಯ್ಯನವರೇ! ನಾವುಗಳು ಈಗ ಶನಿವಾರಸಂತೆ, ಮೂರ್ನಾಡು ಎಂಬದಾಗಿ ನಮ್ಮ ಎಡಬಲ ಕಣ್ಣುಗಳನ್ನು ಆರೋಪಣೆಗೆ ತರುವದರಿಂದ ಯಾವ ಪ್ರಯೋಜನವೂ ಇರುವುದಿಲ್ಲ. ಹುಲ್ಲು ಮುಂಡದಲ್ಲು ಮಲಗಿರತಕ್ಕ ನಾಯಿಯ ಧ್ಯೇಯವನ್ನು (Dog in the manger) ನಾವುಗಳು ಪಾಲಿಸುವದರಿಂದ ನೋಟಕರಿಗೆ ಸಹ ಹೇಯವಾದೀತು. ಈ ಎರಡು ಸ್ಥಳಗಳಿಗೂ ಆಸ್ಪತ್ರೆಗಳು ಅವಶ್ಯಕವು. ಆದರೆ ಡಿ ಬೋರ್ಡು ಭಂಡಾರವು ಖಾಲಿಯಾಗಿರುವದಾಗಿ ವಾದಿಸುವರಷ್ಟೇ. (ಅದು ಯಾವಾಗಲೂ ಖಾಲಿಯೇ, ತುಂಬುವದಿಲ್ಲ!) ಆದ್ದರಿಂದ ಮೊತ್ತಕ್ಕೆ ಸರಿಯಾದ ಕೆಲಸವನ್ನು ಮಾಡಲು ಪ್ರಯತ್ನಿಸುವ. ಸದ್ಯಕ್ಕೆ ಮೂರ್ನಾಡಿಗೆ ಸ್ವಲ್ಪವೇ ಹಣ ಬೇಕಾಗುವದು. ಅಲ್ಲದೆ ಈಗ ನಮಗೆ ಒದಗತಕ್ಕ ಸ್ವಂತ ಹಣವನ್ನು ದೊರಕಿಸಿಕೊಳ್ಳಗೆ ಹೋದರೆ ನಮಗೆ ಎಂದೂ ಸಾಧ್ಯವಾಗಲಿಕ್ಕಿಲ್ಲ. ನಮ್ಮನ್ನು ಬೆನ್ನಲೆ ನೂಡತಕ್ಕ ಪ್ರಯತ್ನವನ್ನು ಸ್ವಲ್ಪ ಬಿಡಿ. ಇವತ್ತು ಮೂರ್ನಾಡು, ನಾಳೆ ಶನಿವಾರಸಂತೆ ಆದ್ದರಿಂದ ಈಗಿನ ಈ ಚಿಕ್ಕ ಮೊತ್ತದಿಂದ ಮೂರ್ನಾಡು ಫಲವನ್ನು ಸಾಧಿಸುವ ಅವಕಾಶವನ್ನು ಮಾಡಿ. ಶನಿವಾರಸಂತೆಗೆ ಆಸ್ಪತ್ರೆಯು ಈಗಲೇ ಅತ್ಯವಶ್ಯಕವೆಂದಾಗಿ ತಾವು ಗ್ರಹಿಸುವದಾದರೆ ತಾವು ತಮ್ಮ ತೋಟದೊಳಗೆ ತಮ್ಮ ಜನರಿಗೆ ಪ್ರತ್ಯೇಕವಾಗಿ ಒಂದು ಆಸ್ಪತ್ರೆಯನ್ನು ಇಡುವ ಆಲೋಚನೆಯನ್ನು ದಯಾಳುಗಳಾದ ತಾವು ತೋಟದ ಹೊರಗೆ ಶನಿವಾರಸಂತೆಯಲ್ಲು ಇಟ್ಟು ತಮ್ಮ ಕೃಪೆಯನ್ನು ತಮ್ಮ "ಪ್ರಜೆಗಳಲ್ಲು" ತೋರಿಸಿದ್ದೇ ಆದರೆ ಆ ಜನರು ಮಾತ್ರವಲ್ಲದೆ ನಾವು ಸಹ ತಮ್ಮನ್ನು ಎಂದಿಗೂ ಮರೆಯಲಿಕ್ಕಿಲ್ಲ. ತಾವುಗಳು ಧನಿಕರು, ಸುಧಾರಕರು, ಪ್ರಜಾಪಕ್ಷದವರು. ತನು, ಮನ, ಧನವೆಂಬೀ ತತ್ವವಲ್ಲವೇ ತ್ಯಾಗ ಭ್ಯಾಸ? ತಾವುಗಳು ಇಂಥಾ ಪ್ರಾಣರಕ್ಷಣೆಯ ಜನಾಂಗಾಭಿವೃದ್ಧಿಯ ಮೂಲ ತತ್ವವನ್ನು ಪಾಲಿಸಿದ್ದೇಯಾದರೆ ನಾವುಗಳು ಧನ್ಯರಾಗುವೆವು. ಆತ್ಮನಿಷ್ಠೆಯೇ ತಮ್ಮ ಧ್ಯೇಯ! ತಮ್ಮ ನಾಡು ಬೇರೆಯಲ್ಲ. ನಮ್ಮ ನಾಡು ಬೇರೆಯಲ್ಲ. ಎಲ್ಲರೂ ತಮ್ಮ ಸಹೋದರರು. ಇಹದ ಧರ್ಮ ಪಥದಲ್ಲೂ ಸುಖವಷ್ಟೇ? ಆದ್ದರಿಂದ ತಮ್ಮ ಪ್ರತಿವಾದಿತದ ಧ್ಯೇಯವನ್ನು ಸ್ವಲ್ಪ ಸುಧಾರಿಸುವರಾಗಿ ಕೋರುತ್ತೇನೆ.

-ಪಿ. ಯಂ. ಮುತ್ತಣ್ಣ

ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಲು ಸುಸಮಯ

# ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ (ಹೊಸ ಪುಸ್ತಕ)

## (ಎರಡನೆಯ ವರ್ಷಾರಂಭವಾಗಿದೆ.)

ಹರಿದಾಸ ಸೇವಾ ಸಮಿತಿ ಯವರಿಂದ ಬಹು ಶುದ್ಧ ರೀತಿಯಲ್ಲಿ ಪರಿಶೋಧಿಸಲ್ಪಟ್ಟು ಹೊಸ ಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಲಿರುವ ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ ಯನ್ನು ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿರಿ! ಇದರಲ್ಲಿ ಜಗತ್ಪ್ರಸಿದ್ಧರಾದ ಶ್ರೀ ಪುರಂದರದಾಸರು ಶ್ರೀ ಕನಕದಾಸರೇ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ಹಾಡಿದ ದಿವ್ಯ ಭಗವನ್ನಾಮ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ಕ್ರೌನ್ ಅಷ್ಟಪತ್ರದ ನಾಲ್ವತ್ತು ಪುಟಗಳ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿವೆ. ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೇ ಹಾಸಲು ಉಚಿತ) ಸಾಮಾನ್ಯ ಪ್ರತಿ ರೂ ೧—೬—೦ ಉತ್ತಮ ಪ್ರತಿ ರೂ ೨—೬—೦

## ಪ್ರಥಮ ಸಂಪುಟದ ಬೈಂಡಾದ ಪ್ರತಿಗಳು.

| | ಸಾದಾ ಬೈಂಡು | ದಪ್ಪ ರಟ್ಟಿನ ಬೈಂಡು | ಕಿತ್ತಾನಾದ ಬೈಂಡು |
|---|---|---|---|
| ಸಾಮಾನ್ಯ ಪ್ರತಿ | ೧—೪—೦ | ೧—೧—೦ | ೨—೪—೦ |
| ಉತ್ತಮ ಪ್ರತಿ | ೨—೬—೦ | ೨—೮—೦ | ೩—೦—೦ |

ಅಂಚೇಹಾಸಲು ಪ್ರತ್ಯೇಕ

ವಿಳಾಸ— ಸುಬೋಧ ಪ್ರಕಟನಾಲಯ,

12—11 ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ

# Arms, Ammunition and Shooting Requisites !!!



1925 Illustrated Catalogue Just Issued Free on Application !

| | | | | |
|---|---|---|---|---|
| D B B L Rifles | Rs | 120 to | Rs | 2750 |
| S B B L | | 35 to | | 950 |
| D B B L Guns | „ | 50 to | | 1350 |
| S B B L „ | | 35 to | | 275 |
| D B M L „ | | 45 to | | 165 |
| S B M L „ | „ | 30 to | „ | 80 |
| B L Revolvers | | 35 to | „ | 350 |
| Automatic Pistols | | 30 to | „ | 150 |

Brilliant Search Light Lamp For Shooting Camping Fishing and All such other Night Sports and work Rs 30 Free delivery

**Also swords, Daggers, Cartridges, Caps, Gunpowder and Shooting Requisites at the most competitive rates**

GOOLAMHUSAIN ALLIBHOY & SONS,

**Largest Importers of Firearms and Ammunition**

**Cheapest priced firm in India,**

24—4 210 Abdul Rehman Street, BOMBAY.

## ಬುಗುಡಿ, ರುದ್ರಾಕ್ಷಿ ಅಂಚಿನ ಸೀರೆಗಳು.

ಈ ಸೀರೆಗಳು ಬೆಂಗಳೂರು ಆರಲೀಕೋಟಿ ಸೀರೆಗಳಂತಿದ್ದು ಇರುವವು 18 ಮೊಳ ಉದ್ದ ಗ್ರಾ 3 ಮೊಳ ಅಗಲವೂ ಇರುವವು ಸುಂದರವಾದ ರೇಷ್ಮೆ ಯ ಸೆರಗು ರುದ್ರಾಕ್ಷಿ, ಬುಗುಡಿ ಅಂಚು ಇರುವದು ಎಂದಿಗೂ ಮಾಸಿಹೋಗದ ನೋಡಲು ಬಹು ಅಂದವಾಗಿರುವವು ಇಂ ದನ್ನು ತರಿ ನೋಡಿರಿ ಇಷ್ಟವಿಲ್ಲದಿದ್ದರೆ ವಾಪಸು ತೆಗೆದುಕೊಳ್ಳುವೆವು

1ನೇ ನಂಬರು ಸೀರೆ 1ಕ್ಕೆ 7—12—0

2ನೇ ನಂಬರು ಸೀರೆ 1ಕ್ಕೆ 6—8—0

ವಿಳಾಸ—ಕೆ ನಾಥಮುನಿ ಅಂಡ್ ಸನ್ಸ್

108 ಬ್ರಾಡ್ವೇ ಬಜಾರ್ ರೋಡ್

52—21 ಮದರಾಸು

## ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚುಗಳು.



ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟಿ ಸಾಮಾನಿನಿಂದ (ಸ್ವಿಸ್ ಮೇಡ್) ತಯಾರಿಸಿದೆ ಸರಿಯಾದ ಗಂಟೆಯನ್ನು ತೋರಿಸುವವು. ಇದರ ಕೇಸು ಬಂಗಾರದ ಸೇರಿಸಿದ ... ಪಾಯಿಂಟ್ ಕೊಡುವೆವು ... ಚಿತ್ರದ ... ರಿಸ್ಟ್ ... ತರಿಸಿಕೊಳ್ಳುವವರಿಗೆ ... 

4—14—0

ವಿಳಾಸ — ... 

— 21 ... ಮದರಾಸು

ಡಬ್ಬಲ್ ಮತ್ತು ಸಿಂಗಲ್ ಕೋವಿಗಳು ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ದೊರೆಯುವವು

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ ಇವುಗಳಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

**ಯಸ್. ವಿ. ರಾಮಾನುಜಂ ಚೆಟ್ಟಿ**

**ಅಂಡ್ ಕಂಪೆನಿ.**

ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.

24—19 12. ಬ್ರಾಡ್ವೇ, ಮದ್ರಾಸ್

(ಪತ್ರಗಳನ್ನು ಇಂಗ್ಲೀಷಿನಲ್ಲಿ ಬರೆಯುವದು ಉತ್ತಮ.)

# ಎಂ. ಎಸ್. ಶಿದ್ದಪ್ಪ & ಬ್ರದರ್ಸ್.

# ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

**ಉತ್ತಮ ತರಹದ ಸಿಂಗಲ್‌ರೀಡ್ಸ್ ಹಾರ್ಮೋನಿಯಂಗಳು.**

| | |
|---|---|
| ... ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | ೦—8—0 |
| ... ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 40—0—0 |
| ... ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 37—8—0 |
| ... ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 35—0—0 |
| ... ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 3?—8—0 |

**ಉತ್ತಮ ತರಹದ 14 ಕ್ಯಾರೆಟ್ಸ್ ಬಂಗಾರದ ನಿಬ್ಬು ಹಾಕಿದ ಫೌಂಟನ್ ಪೆನ್‌ಗಳು**

| | |
|---|---|
| ಬ್ಲಾಕ್ ಬರ್ಡ್ ಫೌಂಟನ್ ಪೆನ್ 1ಕ್ಕೆ | 3—8—0 ಮತ್ತು 3—12—0 |
| ಪರ್ಲ್ಸ್ ಪಂಚರ್ ಫೌಂಟನ್ ಪೆನ್ 1ಕ್ಕೆ | 3—0—0 ಮತ್ತು 3—8—0 |
| ಕಾಂಪ್ಯಾಕ್ಟ್ ಸೆಲ್ಫ್ ಫಿಲ್ಲಿಂಗ್ ಫೌಂಟನ್ ಪೆನ್ 1ಕ್ಕೆ | 4—?—0 |
| ವಾಟರ್ ಮನ್ ಫೌಂಟನ್ ಪೆನ್ 1ಕ್ಕೆ | 8—0—0 ಮತ್ತು 8—8—0 |
| ವಾಟರ್ ಮನ್ ಸೆಲ್ಫ್ ಫಿಲ್ಲಿಂಗ್ ಫೌಂಟನ್ ಪೆನ್ 1ಕ್ಕೆ | 12—0—0 ಮತ್ತು 15—0—0 |

**ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು**

| | |
|---|---|
| ಫ್ರಂಟ್ ಬೆಲ್ ಅಲಾರಂ ಟೈಂಪೀಸ್ 1ಕ್ಕೆ | 4—6—0 |
| ವೆಸ್ಟರ್ನ್ ಕಂಪನಿಯ ಅಲಾರಂ ಟೈಂಪೀಸ್ 1ಕ್ಕೆ | 8—0—0 |
| ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ | ?—6—0 |
| ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ | ?—12—0 |
| ಜರ್ಮನಿಯ ಅಲಾರಂ ಟೈಂಪೀಸ್ 1ಕ್ಕೆ | 6—0—0 |

ಸಚಿತ್ರ ಕ್ಯಾಟಲಾಗ್ ಬೇಕಾದರೆ 6 ಪೈ ಸ್ಟಾಂಪು ರವಾನಿಸಿ.

ಎಂ ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು, ಮೈಸೂರು.

ನಾವು ಖುದ್ದಾಗಿ ನೋಡುವುದಕ್ಕೆ ಮೊದಲು ಯಾವ ಮಾತು ಆಡಬಾರದೆಂದು ತಿಳಿದುಕೊಂಡೆನು.

ಆ ಶಾಲೆಯನ್ನು ಇಷ್ಟು ಒಳ್ಳೆ ಸ್ಥಿತಿಗೆ ತಂದಿರುವುದು ಅಲ್ಲಿಯ ಉಪಾಧ್ಯಾಯಿನಿಯರ ಕೆಲಸವಾಗಿದೆ. ಬೇರೆಯವರಿಂದ ಇದು ಸಾಗುತ್ತಿರಲಿಲ್ಲ. ಅವರು ಸಾಗರಗಳನ್ನು ದಾಟಿ ತಮ್ಮ ಬಂಧು ಬಳಗದವರನ್ನೆಲ್ಲಾ ಬಿಟ್ಟು ಇಲ್ಲಿಗೆ ಬಂದು ನಮ್ಮ ಬಾಲಕಿಯರಿಗೆ (ಕೊಡಗು ಹುಡುಗಿಯರಿಗೆ) ತಕ್ಕ ವಿದ್ಯೆಯನ್ನು ಕಲಿಸುತ್ತಿರುವುದಕ್ಕೆ ನಾವು ಅವರನ್ನು ಎಷ್ಟು ವಂದಿಸಿದರೂ ಸಾಲದು. ಇದಕ್ಕೆ ಬದಲಾಗಿ ಅನೇಕವೇಳೆ ಅನೇಕ ಜನರು ಅವರ ವಿಷಯ ಮನಸ್ಸಿಗೆ ಬಂದ ಹಾಗೆಲ್ಲಾ ಈ ಪತ್ರಿಕೆಯಲ್ಲಿ ಬರೆಯುತ್ತಾರೆ. ಇದು ಒಂದು ದೊಡ್ಡ ತಪ್ಪಾಗಿ ನನಗೆ ಕಾಣುತ್ತದೆ.

ಕೆಲವು ಜನರು ಕಾನ್ವೆಂಟ್ ಹುಡುಗಿಯರಿಗೆ ಬಹಳ ಬಡಾಯಿ, ಅಪ್ಪಾ! ಅವರನ್ನು ನನಗೆ ಬೇಡ, ಆ ಹುಡುಗಿಯರನ್ನು ಮದುವೆಯಾದರೆ ಒಳ್ಳೇ ಸೀರೆ, ರಿಬ್ಬನ್ ಮತ್ತು ಬೂಟ್ಸ್ ಮುಂತಾದದನ್ನು ಕೊಟ್ಟು ನನ್ನ ಸಂಬಳವೆಲ್ಲಾ ತೀರಿ ಹೋಗಿ ನನಗೆ ಅನ್ನ ತಿನ್ನುವುದಕ್ಕೆ ಹಣವಿಲ್ಲದಾಗುವದು ಎಂದು ಸಹ ಹೇಳುವುದನ್ನು ನನ್ನ ಕಿವಿಯಿಂದಲೇ ಕೇಳಿರುತ್ತೇನೆ. ಇಂಥಾ ಉಡುಪುಗಳನ್ನು ತೊಟ್ಟುಕೊಳ್ಳುವುದಕ್ಕೆ ಅಲ್ಲಿಯ ಉಪಾಧ್ಯಾಯಿನಿಯರು ಕಲಿಸಿರಬಹುದೆಂದು ಸಹ ಹೇಳುತ್ತಾರೆ. ಇದು ಅನ್ಯಾಯವಾಗಿ ಕಾಣುತ್ತದೆ. ಏಕೆಂದರೆ ಅಲ್ಲಿಯ ಉಪಾಧ್ಯಾಯಿನಿಯರು ಸನ್ಯಾಸ್ತ್ರೀಯರಾಗಿರುವುದರಿಂದ ದುಂದುಗಾರಿಕೆಯನ್ನು ತಮ್ಮ ವಿದ್ಯಾರ್ಥಿನಿಯರಿಗೆ ಕಲಿಸುವುದಿಲ್ಲವೆಂದು ನಾನು ತಿಳಿದಿರುತ್ತೇನೆ.

ತಾನು ಒಳ್ಳೆಯ ಬಟ್ಟೆಯನ್ನು ಹಾಕಿಕೊಳ್ಳಬೇಕು, ತಾನು ಸುಂದರಿಯಾಗಿ ಕಾಣಬೇಕು, ತನ್ನನ್ನು ಒಳ್ಳೆಯವನು ಮದುವೆಯಾಗಬೇಕೆಂಬ ಕುತೂಹಲವು ಭೂಲೋಕದಲ್ಲಿರುವ ಎಲ್ಲಾ ಹುಡುಗಿಯರಿಗೆ ಇರುತ್ತದೆ. ಈಗಿನ ಕಾಲದಲ್ಲಿ ನಲುವತ್ತು ಐವತ್ತು ವಯಸ್ಸಾದ ಮುದುಕಿಯರೇ ತೋಳು ಇಲ್ಲದ ಮತ್ತು ಎದೆ ಕಾಣುವ ರವಕೆಯನ್ನು ತೊಟ್ಟು, ಮಂಡಿಯ ಸಮಕ್ಕೆ ಸೀರೆಯನ್ನು ಉಟ್ಟು "ನಿಪ್ಪರ್ ತುಣಿ" ಹಾಕುವ ಹಾಗೆ ಕಲೆಗೆ ವಸ್ತ್ರವನ್ನು ಕಟ್ಟಿಕೊಳ್ಳುವಾಗ ಎಳ್ಳೇ ಪ್ರಾಯದ ಹುಡುಗಿಯರು ಒಳ್ಳೇ ಬಟ್ಟೆಯನ್ನು ಧರಿಸಿಕೊಳ್ಳುವುದು ಆಶ್ಚರ್ಯವೋ?

ಕೆಲವು ಹುಡುಗಿಯರು ತಮ್ಮ ತಂದೆಗೆ ಸ್ವಲ್ಪ ಹೆಚ್ಚು ಕಾಸು ಬರುವುದು ಕಂಡು ಬಿಟ್ಟರೆ ತಮ್ಮ ತಂದೆತಾಯಿಗೆ ತುಂಬಾ ಹಣ ಇದೆ ಎಂದು ನೆನಸಿ "ಅವ್ವಯ್ಯಾ ಅಥವಾ "ಮಮ್ಮ' ಅಥವ ಮಮ್ಮವ್ವಯ್ಯಾ" ನಾಕ್ ಕಯಿಂಜ ಕಾಲತ ಪೊಡಯ ಬೋಂಡ, ಪುದಿಯದಾಂಡು" ಎಂದು ಹೇಳುವಾಗ ಕೆಲವು ಬುದ್ಧಿ ಇಲ್ಲದ ತಾಯಿಯರು "ಅನ್ನನೇ ಅಡ ಮೋಳೆ," 'ಅಪ್ಪಯ್ಯ ಅಥವಾ 'ಪಪ್ಪಯ್ಯ' ವೀರಾಜಪೇಟೆ ಪೋಪಕ ಬಾತ್ ಕೊಂಡರಿಚರನ ಎಂದು ಹೇಳಿ ಮರು ದಿವಸವೇ ಅವರು ಹೇಳಿದ ಬಟ್ಟೆಯನ್ನು ತರಿಸಿಕೊಡುವರು. ಆ ಹುಡುಗಿಯು ಹೊಸ ಸೀರೆಯನ್ನು ಶಾಲೆಯಲ್ಲಿ ತೋರಿಸುವಾಗ ಬೇರೆ ಹುಡುಗಿಯರಿಗೆ ಸಹ ಆಶೆ ಹುಟ್ಟಿ ಅವರು ಹೋಗಿ ತಮ್ಮ ತಂದೆತಾಯಿಯರನ್ನು ಪೀಡಿಸುವರು. ಆಗ ಇದೆಲ್ಲಾ ಉಪಾಧ್ಯಾಯಿನಿಯರು ಕಲಿಸುವಂಥಾದ್ದೋ?

ಇನ್ನು ಹಲವರು ಕಾನ್ವೆಂಟ್ ಹುಡುಗಿಯರಿಗೆ ಕೆಲಸವೇನೂ ಗೊತ್ತಿರುವುದಿಲ್ಲವೆಂದು ಹೇಳುತ್ತಾರೆ. ಇದು ನಿಜವಾಗಿ ಹುಡುಗಿಯರ ತಾಯಿಯರ ದೊಡ್ಡ ತಪ್ಪು. ಏಕೆಂದರೆ ತಮ್ಮ ಮಕ್ಕಳು ರಜದಲ್ಲಿ ಮನೆಗೆ ಹೋದ ಕೂಡಲೇ "ನೀನು ಅಡಿಗೆ ಮನೆಗೆ ಬರಬೇಡ, ಪುಸ್ತಕ ತೆಗೆದುಕೊಂಡು ಓದು ಪಿಟೀಲ್ ತೆಗೆದುಕೊಂಡು ಬಾರಿಸು. ಪದ ಹೇಳಿಕೊಂಡು ಇದ್ದರೆ ಸಾಕು ಎಲ್ಲರ ಜೊತೆಯಲ್ಲಿ ಇಂಗ್ಲಿಷ್ ಮಾತಾಡು' ಎಂದು ಅನೇಕ ಹುಡುಗಿಯರ ತಾಯಿಯರು ಹೇಳುವರು. ಹೀಗ ಹೇಳುವಾಗ ಹುಡುಗಿಯರ ಬಡಾಯಿ ಹೆಚ್ಚಾಯಿತು. ಆಗ ಇದು "ಅಲ್ಪ ವಿದ್ಯಾ ಮಹಾಗರ್ವಿ" ಎಂದು ಹೇಳಿದಹಾಗೆ ಆಗುತ್ತದೆ. ತುಂಬಾ ವಿದ್ಯೆ ಕಲಿತವರು ಒಂದು ಕಾಲಕ್ಕೂ ಹೀಗೆ ಮಾಡುವುದಿಲ್ಲ. ಇನ್ನೂ ಕೆಲವರು ತಮ್ಮ ಮಕ್ಕಳಿಗೆ 'ನೀನು ಬೋರ್ಡಿಂಗಿನಲ್ಲಿ ಏನೊಂದೂ ಕೆಲಸಮಾಡಬೇಡ" ವೆಂದು ಹೇಳುವುದನ್ನು ಸಹ ನಾನು ಕೇಳಿರುತ್ತೇನೆ. ಇದು ಒಳ್ಳೆಯದಲ್ಲ. ಏಕೆಂದರೆ ಅವರು ಶಾಲೆಯಲ್ಲಿ ಬರೇ ಓದು ಬರಹ ಮಾತ್ರ ಕಲಿತರೆ ಸಾಲದು. ಮನೆ ಕೆಲಸ ಸಹ ಕಲಿತರೆ ಅವರ ಮುಂದಿನ ಜೀವನಕ್ಕೆ ಬಹಳ ಉತ್ತಮವಾಗುತ್ತದೆ.

ಆದುದರಿಂದ ಇನ್ನು ಮುಂದಕ್ಕಾದರೂ ಆ ಶಾಲೆಯನ್ನು ಕುರಿತು ಕೆಟ್ಟದಾಗಿ ಮಾತಾಡದ ಅದರ ಒಳ್ಳೆಯ ಕಾರ್ಯಕ್ಕೆ ಸಹಾಯ ಮಾಡಬೇಕೆಂಬುದೇ ನನ್ನ ಪ್ರಾರ್ಥನೆ.

'ಅತಿಥಿ"

---

## ಸಂಪಾಜೆ ಘಾಟಿನೂ, ದುಷ್ಟ ಜಂತುಗಳ ಹಾವಳಿಯೂ.

ಅಯ್ಯಾ,

ಈ ಸಂಪಾಜೆ ಪ್ರಾಂತ್ಯದಲ್ಲಿ ವಾಸ ಮಾಡಿಕೊಂಡಿರುವ ರೈತರಿಗೆ ದುಷ್ಟ ಜಂತುಗಳ ಹಾವಳಿಯು ದಿನೇ ದಿನೇ ಹೆಚ್ಚುತ್ತಾ ಒಂದು ಅಹೋರಾತ್ರಿ ದುಃಖಸಾಗರದಲ್ಲೇ ತೇಲಾಡುತ್ತಿರುವರೆಂದರೆ ಅತಿಶಯೋಕ್ತಿಯಾಗಲಾರದು.

ಕೆಲ ಕಾಲದಿಂದಲೇ ಆನೆಗಳ ಧಾಳಿಯೂ ಇದ್ದುದರ ಕುರಿತಾಗಿ ಆಗಾಗ್ಯೆ ವಾರ್ತಾಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದುದನ್ನು ವಾಚಕ ಮಹಾಶಯರು ಓದಿದ ನೆನಪಿರಬಹುದು. ಇತ್ತೀಚೆಗೆ ಹುಲಿ, ಚಿರತೆಗಳ ಹಾವಳಿಯು ಮಹತ್ತಾಗಿ ಪರಿಣಮಿಸಿದೆ. ಹುಲಿ ಚಿರತೆಗಳು ದಿನಂಪ್ರತಿ ಎಂಬಂತೆ ಅಲ್ಲಲ್ಲಿ ಜಾನುವಾರುಗಳನ್ನು ಕೊಲ್ಲುತ್ತಿರುವವು. ಇಂಥಾ ಭೀಕರ ಸ್ಥಿತಿಯು ಈ ಮಲೆನಾಡು ವಾಸಿಗಳಿಗುಂಟಾದುದರಿಂದ ಮಹತ್ತಾದ ವ್ಯಸನಕ್ಕೀಡಾಗಿರುವರು.

ದೃಷ್ಟಾಂತವಾಗಿ ಈ ಕಳೆದ ಒಂದು ತಿಂಗಳೊಳಗೆ ಒಂದು ಮೈಲು ವಾಸಲೆಯಲ್ಲಿ ಏಳೆಂಟು ರಾಸುಗಳನ್ನು ಹುಲಿ, ಚಿರತೆಗಳೇ ಕೊಂದು ತಿಂದಿರುವುವೆಂದರೆ ಎಷ್ಟೊಂದು ವ್ಯಸನಕರವಾಗಿದೆ. ಈ ತೆರದ ಅವಸ್ಥೆಯೊದರೆ ಮುಂದಿನ ಗತಿಯು ಹ್ಯಾಗಾಗುವುದೋ ದೇವರೇ ಬಲ್ಲ! ಈ ವರ್ಷ ಕೆಲ ರೈತರಿಗೆ ಬೇಸಾಯಕ್ಕೆ ಎತ್ತು ಕೊಂಡುಕೊಂಡೇ ಆಗಬೇಕಲ್ಲದೆ ಅನ್ಯಥಾ ಗತ್ಯಂತರವಿಲ್ಲ.

ವರ್ಷ ತೆಗೆದ ಎತ್ತುಗಳು ವರುಷಕ್ಕೆಂಬಂತೆ ಹುಲಿಬಾಯಿಗೆ ತುತ್ತಾಗುವುದರಿಂದ ಪ್ರತೀ ವರ್ಷ ಬೇಸಾಯಕ್ಕೆ ಎತ್ತು ಕ್ರಯಕ್ಕೆ ಕೊಳ್ಳುವುದೆಂದರೆ ಸಾಮಾನ್ಯವಾದ ನಷ್ಟವೆಂದೆಣಿಸಬಹುದೇ? ಇಡೀ ವರ್ಷದ ಕಾಯ ಕಷ್ಟದ ಫಲವು ದುಷ್ಟಜಂತುಗಳ ಪಾಲಿಗೆಂದರೆ ಸದಾ ಸಾಲವೆಂಬ ಸಂಕಲೆಯಿಂದ ಬಂಧಿಸಲ್ಪಟ್ಟವನಾಗಿ ನರಳುತ್ತಿರಬೇಕಾಗಿರುವುದೊಂದು ಮಹತ್ತಾದ ಕಷ್ಟ!

ಮಾತ್ರವಲ್ಲ, ಆಗಾಗ್ಯೆ ಮಲೇರಿಯಾ ಪೀಡಿತರಾಗಿ ನರಳುತ್ತಿರುವುದೊಂದು ಕಷ್ಟ!! ಪ್ರಯಾಸದಿಂದ ಬೆಳೆಸಿದ ಭತ್ತದ ಪೈರಿಗೆ ವೈರಿಯಾದ ಬಂಬುಚ್ಚಿಯದೊಂದು ಉಪದ್ರ!!! ಅಂತೂ ಇಂತೂ ಇಲ್ಲಿಯ ನಿವಾಸಿಕರ ಬಾಳು ಮನುಷ್ಯ ಬಾಳೆಂತ ಎಣಿಸಲಿಕ್ಕೂ ಕೂಡದಷ್ಟು ಕಷ್ಟತರವಾಗಿರುವುದು.

ಇಷ್ಟೆಲ್ಲಾ ಅನಾಹುತಕ್ಕೂ ಅತೀ ಸಮೀಪವಾಗಿ ಬಂದಿರುವ ರಿಜರ್ವ ಫಾರೆಸ್ಟ್‌ಗಳೇ ಕಾರಣವೆಂಬುದು ನಿರ್ವಿವಾದವಾಗಿದೆ. ಮೊದಲೇ ಘೋರಾರಣ್ಯವಾಗಿರುವ ಈ ಪ್ರಾಂತ್ಯದಲ್ಲಿ ಭೂಮಿಯ ಅತೀ ಸಮೀಪವಾಗಿ ಅರಣ್ಯವನ್ನು ರಿಜರ್ವ ಆಗಿಟ್ಟರೆ ಅದರ ಪಾಡೇನಿರಬಹುದೆಂದು ಬೇರೆ ವರ್ಣಿಸುವುದೇಕೆ? ಹಾಗೆಂದ ಮೇಲೆ ಇಲ್ಲಿಯ ನಿವಾಸಿಕರ ಸ್ಥಿತಿಗತಿಯನ್ನು ಹೇಳಬೇಕೇನು?

ಇಂಥಾ ದುಸ್ಥಿತಿಯಲ್ಲಿರುವ ಈ ಪ್ರಾಂತ್ಯದ ರೈತರ ಕಷ್ಟನಷ್ಟವನ್ನು ಮಾನ್ಯ ಸರಕಾರದವರೂ, ನ್ಯಾಯವಿಧಾಯಕ ಸಭೆಯ ಪ್ರತಿನಿಧಿ (ಯಂ. ಯಲ್. ಸಿ.) ಗಳವರೂ ಗಮನಕ್ಕೆ ತೆಗೆದುಕೊಂಡು ಭೂಮಿಗೆ ಅತಿ ಸಮೀಪ ಮುತ್ತಿಕೊಂಡಿರುವ ರಿಜರ್ವಿಯ ಲೈನನ್ನು ವರ್ಗಸ್ಥಳದಿಂದ ಕಡೇಪಕ್ಷ ಒಂದು ಮೈಲು ದೂರಕ್ಕಾದರೂ ಮುಂದರಿಸಿ ಗಡಿಯಾಕುವಂತೆ ಸಮ್ಬಂಧಪಟ್ಟ ಅಧಿಕಾರಿಗಳಿಂದ ವ್ಯವಸ್ಥೆಮಾಡಿಸಬೇಕಾಗಿ ಬೇಡುವ

"ಊರ ನಿವಾಸಿ."

---

## ಮೂರ್ನಾಡು ಆಸ್ಪತ್ರೆ.

ಅಯ್ಯಾ,

ಮ. ರಾ ನಿಡ್ಡ ಸುಬ್ಬಣ್ಣಯ್ಯನವರು ಡಿ. ಬೋರ್ಡು ಪ್ರೆಸಿಡೆಂಟರಿಗೆ ಶನಿವಾರ ಸಂತೆಯ ಆಸ್ಪತ್ರೆ ವಿಷಯವಾಗಿ ಬರೆದ ಪತ್ರವ್ಯವಹಾರದ ಜವಾಬನ್ನು ವಾಚಕ ಮಹಾಶಯರ ತಿಳುವಳಿಕೆ ಬಗ್ಗೆ ತಾ 28—8—28ರ ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಿರುವದನ್ನು ನಾನು ಬಹು ಕುತೂಹಲದಿಂದ ಓದಿದೆನು. ಮ. ರಾ. ಸುಬ್ಬಣ್ಣಯ್ಯನವರು ರಾಜಕೀಯ ವ್ಯವಹಾರದಲ್ಲು ಬಹು ಕಾಲದ ವರೆಗೆ ಅಗ್ರಗಣ್ಯರಾಗಿದ್ದರೆಂಬುದರಲ್ಲಿ ಸಂಶಯವೇನು? ಲೆಜಿಸ್ಲೇಟಿವ್ ಕೌನ್ಸಿಲಿನಲ್ಲೂ, ಡಿ. ಬೋರ್ಡಿನಲ್ಲೂ, ಜಮಾನ್‌ದಾರರ ಸಂಘದಲ್ಲೂ ತಮ್ಮ ಜನರ ಪ್ರತಿನಿಧಿಯಾಗಿದ್ದು ಬಾರಿ ಬಾರಿಗೂ ತಮ್ಮ ತಾಲೋಕು ನಿವಾಸಿಗಳ ಪರವಾಗಿ ಸರಕಾರದವರೊಂದಿಗೆ ಹೋರಾಡುತ್ತಿದ್ದದ್ದು ತಕ್ಕ ಮಟ್ಟಿಗೆ ನಾನೂ ತಿಳಿದಿರುವೆನು. ಈಗ ಕೌನ್ಸಿಲಿನ ಹೊರಗೂ, ಡಿ ಬೋರ್ಡಿನ ಹೊರಗೂ ವಿಶ್ರಾಂತಿ ಪಡೆಯುತ್ತಿರುವದಾದರೂ ತಮ್ಮ ಪ್ರೇಮವು ತಮ್ಮ ತಾಲೋಕು ಪ್ರಜಾಜನರಲ್ಲು ನಿರತವಾಗಿರುವದು ಬಹು ಶ್ರೇಯಸ್ಕರವು. ಆದರೆ ಸದರಿ ಮುಖಂಡರ ಪತ್ರವ್ಯವಹಾರದ ತಿರುಳು ಸ್ವಲ್ಪ ಸ್ವಾರ್ಥತೆಯನ್ನೊಳಕೊಂಡಿರುವಂತೆ ನನಗೆ ಕಂಡುಬರುವ ಕಾರಣ ಬಹಳ ವಿಷಾದಿಸಬೇಕಾಗಿದೆ. ಅಂಥಾ ಮುಖಂಡರು, ಆ ನಾಡು, ಈ ನಾಡು ಎಂಬ ಪಕ್ಷಪಾತದ ಒರೆ ದೃಷ್ಟಿಯ ಅವಘಡನಕ್ಕೆ ಯಾರು ತಾನೇ ಪಶ್ಚಾತ್ತಾಪಪಡದಿರುವರು.

ಶನಿವಾರಸಂತೆಗೊಂದು ಆಸ್ಪತ್ರೆಯ ಆವಶ್ಯಕತೆಯು ಕಂಡುಬಂದು ಸಾಧಾರಣ 25 ವರ್ಷಗಳಿಂದ ಸರಕಾರದವರಲ್ಲು ಸದರಿ ವಿಷಯ ಆಲೋಚಿಸುತ್ತಿರುತ್ತಾರಾಗಿಯೂ, ಮೂರ್ನಾಡು ಜನರು ಈಗ ಮಾತ್ರ ಸದರಿ ವಿಷಯದ ಚಳವಳವೆಬ್ಬಿಸುತ್ತಿರುತ್ತಾರಾಗಿಯೂ ಪ್ರತಿಪಾದಿಸುತ್ತಾರೆ. ಶನಿವಾರಸಂತೆಯವರು ಬಹುಸ್ಥ ಆಲೋಚನಾಪರರೂ, ದೂರದೃಷ್ಟಿಯವರೂ ಆಗಿರುವದರಿಂದ ತಮ್ಮ ಸಲಕರಣಗಳಲ್ಲು ಕೇವಲ 25 ವರ್ಷಗಳಿಂದ ವ್ಯವಹಾರವಾಡ ತೊಡಗಿರಬಹುದು. ಆದರೆ ಮೂರ್ನಾಡಿನವರು ಗರೀಬರಾಗಿರುವದರಿಂದಲೂ, ವಿದ್ಯಾರಹಿತರಾಗಿರುವದರಿಂದಲೂ ಚಳವಳವೆಬ್ಬಿಸುವದರ ಬದಲು ನಾನಾವಿಧದ ವ್ಯಾಧಿಗಳಿಗೂ ಮರಣಕ್ಕೂ ಈಡಾಗುತ್ತಿರುತ್ತಾರೆ. ನಿದ್ರಾವಸ್ಥೆಯಲ್ಲಿಯೇ ಕ್ಷಯಿಸುತ್ತಿರುವ ಈ ಮೂರ್ನಾಡಿನ ಮೇಲಣ ಕೃಪೆಯನ್ನು ಯಾವ ಪರ ಮುಖಂಡರುಗಳೂ ಇಡದಿರಲು ಈ ನಾಡಿನಿಂದಲೇ ಸದರಿ ಉದ್ದಿಶ್ಯ ಬಗ್ಗೆ ಡಿ. ಬೋರ್ಡಿಗೆ ಒಬ್ಬ ಪ್ರತಿನಿಧಿಯನ್ನು ಆರಿಸಿ ನಮ್ಮ ಉದ್ದಿಶ್ಯವನ್ನು ಈಗ ತಿಳಿಸುವದಾಗಿರುತ್ತದೆ. ಅಷ್ಟು ಮಾತ್ರಕ್ಕೆ ತಮ್ಮ 25 ವರ್ಷದ ದೂರ ದೃಷ್ಟಿಯು ಮೇಲು ಎಂಬದಾಗಿ ವಾದಿಸುವದುಂಟೇ? ಅಲ್ಲದೆ ಸದರಿ ಮಹಾಸಭವರ ಪತ್ರದಿಂದಲೇ ಅವರು ಧನಿಕರೂ, ಆತ್ಮನಿಷ್ಠೆಯುಳ್ಳವರೂ (Self-reliant) ಆಗಿರುತ್ತಾರೆಂಬದಾಗಿ ವೇದ್ಯವಾಗುತ್ತದೆ.

ಅಲ್ಲದೆ 15 ವರ್ಷಗಳ ಕೆಳಗೆ ರಾ. ಬಾ. ಮುಕ್ಕಾಟಿರ ಅಯ್ಯಪ್ಪನವರ ಅಧ್ಯಕ್ಷತೆಯಲ್ಲು ನಡೆದ ಜಮಾನ್‌ದಾರರ ಸಂಘದ ವಾರ್ಷಿಕ ಸಮ್ಮೇಳನದಲ್ಲು ಸದರಿ ಮೂರ್ನಾಡು ಆಸ್ಪತ್ರೆ ವಿಷಯ ಜಾಕ್ಮಿದಾರನೇ ರರಾವು ತಂದಿರುತ್ತಾನೆ. ಆಗ್ಯೆ ಪ್ರಥಮ ಶ್ರೀಮಂಗಲಕ್ಕೆ ಆಸ್ಪತ್ರೆಯಾದ ನಂತರ ಮೂರ್ನಾಡಿಗೆ ಆಸ್ಪತ್ರೆ ಕೊಡಬಹುದು ಎಂಬದಾಗಿ ಮೆ. ಅಪ್ಪಾರಂಡ ಚಂಗಪ್ಪನವರು ವಾದಿಸಿರುತ್ತಾರೆ. ಹಾಗೆ ಚರ್ಚಿಸಲ್ಪಡುವಾಗ್ಯೆ ಶನಿವಾರಸಂತೆಯು ಮುಂದಿರಲಿಲ್ಲ. ಈ ಮಧ್ಯೆ ಅನೇಕ ಮೆಮೋರಿಯಲುಗಳನ್ನೂ ಮುಖ್ಯಾಧಿಕಾರಿಗಳಿಗೆ ಸಲ್ಲಿಸಿರುತ್ತೇವೆ. ಇದರ ವಿಷಯಗಳನ್ನು ನಾನಿಲ್ಲಿ ಚರ್ಚಿಸುವದಿಲ್ಲ. ಶನಿವಾರಸಂತೆಗೊಂದು ಆಸ್ಪತ್ರೆ ಬೇಡವೆಂಬದಾಗಿ ನಾನು ಎಂದಿಗೂ ಹೇಳಲಾರೆನು. ಆದರೆ ಒಂದು ಸಂಗತಿಯನ್ನು ಕೇಳಲು ಇಂದು ಮುಂದು ಆತ ಮಾತ್ರಕ್ಕೆ ಸ್ಥಳಗಳ ಯೋಗ್ಯತೆಯೂ, ಅವಶ್ಯಕತೆಯೂ ಹೆಚ್ಚು ಕಮ್ಮಿಯಾಗಲಿಕ್ಕಿಲ್ಲ. ಖಂಡಿತವಾಗಿಯೂ ಶನಿವಾರಸಂತೆಗೂ ಮತ್ತು ಆ ರೀತಿಯ ಇತರ ಸ್ಥಳಗಳಿಗೂ ಆಸ್ಪತ್ರೆಯು ಆವಶ್ಯಕವು. ಈ ಪ್ರಕೃತಿಯಲ್ಲು ಆರೋಗ್ಯವೇ ಐಶ್ವರ್ಯಭಾಗ್ಯ.

ಮೂರ್ನಾಡು ನಡುನಾಡು, ಗರೀಬ ನಾಡು. ಕಾಫಿಯ ತೋಟಗಳೇ, ಯಾಲಕ್ಕಿ ತೋಟಗಳೇ ಇನ್ನು ಇತರ ಯಾವ ತರದ ಪ್ಲಾಂಟೇಷನ್ನಾಗಲಿ ಇರುವದಿಲ್ಲ. ನಿಜ, ಮೂರ್ನಾಡಿನಿಂದ ಹತ್ತು ಮೈಲಿ ದೂರದಲ್ಲು ಆಸ್ಪತ್ರೆ ಇರತ್ತದೆ. ಆ ಹತ್ತು ಮೈಲು ದೂರದಲ್ಲಿರುವ ವೀರಾಜೇಂದ್ರಪೇಟೆಯ ಆಸ್ಪತ್ರೆಯು ಅಲ್ಲಿಯಣ ಜನಸಮೂಹಕ್ಕೆ ಸಾಲದೆ ಸ್ವಂತ ಸ್ವಂತ ಚಿಕಿತ್ಸಾಲಯಗಳು ಹೊರಬೀಳುತ್ತಿವೆ. ಅಲ್ಲದೆ ಪ್ರವಾಹದಿಂದ ಹೊಳೆಯು ಕಟ್ಟಿ ಮೂರ್ನಾಡು ಎಂಬುವದು ಅದೆಷ್ಟೋ ಸಲ ಕೊಡಗಿನ "ಅಂಡಮಾನ್ಸ್" ಆಗಿ ಹೋಗುತ್ತಿರುತ್ತದೆ. ಟಪ್ಪಾಲು ಸಹ ಬಂಧಿಸಲ್ಪಡುತ್ತಿದ ಮಧ್ಯ ದೇಶದಲ್ಲು ಯಾವಾಗಲೂ ಜನರುಗಳ ಸಮೂಹ ಇರತಕ್ಕದ್ದು ವಾಡಿಕೆಯಲ್ಲವೇ. ಮೂರ್ನಾಡು ಸೆಂಟರಿನಲ್ಲು ಸುಮಾರು 14000 ಜನರುಗಳಿಗಿರುವ ಅವಶ್ಯಕತೆಯು ಕಂಡುಬರುವಾಗ ಇಂಥಾ ಮಧ್ಯ ದೇಶವನ್ನು ನಿರಾಕರಿಸುವದುಂಟೇ? ಶನಿವಾರಸಂತೆಗೆ ಸೋಮವಾರಪೇಟೆಯು ಹೆಚ್ಚು ಕಮ್ಮಿ ಹತ್ತು ಮೈಲು ಸಾಧಾರಣೆಯಲ್ಲವೇ? ಆದರೂ ಶನಿವಾರಸಂತೆಯಿಂದ ಪ್ರತಿನಿತ್ಯ ಕಾಯಿಲಸ್ಥರು ಸೋಮವಾರಪೇಟೆಗೆ ಹೋಗಬೇಕಾಗಿ ನಾನು ಹೇಳಲಾರೆನು. ಇದು ಮೂರ್ನಾಡಿಗೆ ಹತ್ತು ಮೈಲು ದೂರದಲ್ಲು ವೀರರಾಜೇಂದ್ರಪೇಟೆ ಎಂಬ ತಮ್ಮ ವಾದವನ್ನು ಪ್ರತಿಪಾದಿಸತಕ್ಕದ್ದಾಗಿರುತ್ತದೆ.

ಅಯ್ಯಾ, ಸುಬ್ಬಣ್ಣಯ್ಯನವರೇ! ನಾವುಗಳು ಈಗ ಶನಿವಾರಸಂತೆ, ಮೂರ್ನಾಡು ಎಂಬದಾಗಿ ನಮ್ಮ ಎಡಬಲ ಕಣ್ಣುಗಳನ್ನು ಆರೋಪಣೆಗೆ ತರುವದರಿಂದ ಯಾವ ಪ್ರಯೋಜನವೂ ಇರುವುದಿಲ್ಲ. ಹುಲ್ಲು ಮಂಡದಲ್ಲು ಮಲಗಿರತಕ್ಕ ನಾಯಿಯ ಧ್ಯೇಯವನ್ನು (Dog in the manger) ನಾವುಗಳು ಪಾಲಿಸುವದರಿಂದ ನೋಟಕರಿಗೆ ಸಹ ಹೇಯವಾದೀತು. ಈ ಎರಡು ಸ್ಥಳಗಳಿಗೂ ಆಸ್ಪತ್ರೆಗಳು ಅವಶ್ಯಕವು. ಆದರೆ ಡಿ. ಬೋರ್ಡು ಭಂಡಾರವು ಖಾಲಿಯಾಗಿರುವದಾಗಿ ವಾದಿಸುವರಷ್ಟೇ. (ಅದು ಯಾವಾಗಲೂ ಖಾಲಿಯೇ, ತುಂಬುವದಿಲ್ಲ) ಆದ್ದರಿಂದ ಮಾತ್ರಕ್ಕೆ ಸರಿಯಾದ ಕೆಲಸವನ್ನು ಮಾಡಲು ಪ್ರಯತ್ನಿಸುವ. ಸದ್ಯಕ್ಕೆ ಮೂರ್ನಾಡಿಗೆ ಸ್ವಲ್ಪವೇ ಹಣ ಬೇಕಾಗುವದು. ಅಲ್ಲದೆ ಈಗ ನಮಗೆ ಒದಗತಕ್ಕ ಸ್ವಂತ ಹಣವನ್ನು ದೊರಕಿಸಿಕೊಳ್ಳದೆ ಹೋದರೆ ನಮಗೆ ಎಂದೂ ಸಾಧ್ಯವಾಗಲಿಕ್ಕಿಲ್ಲ. ನಮ್ಮನ್ನು ಚಿಕ್ಕಲೆ ಮಾಡತಕ್ಕ ಪ್ರಯತ್ನವನ್ನು ಸ್ವಲ್ಪ ಬಿಡಿ. ಇವತ್ತು ಮೂರ್ನಾಡು, ನಾಳೆ ಶನಿವಾರಸಂತೆ ಆದ್ದರಿಂದ ಈಗಿನ ಈ ಚಿಕ್ಕ ಮೊತ್ತದಿಂದ ಮೂರ್ನಾಡು ಕೆಲಸವನ್ನು ಸಾಧಿಸುವ ಅವಕಾಶವನ್ನು ಮಾಡಿ. ಶನಿವಾರಸಂತೆಗೆ ಆಸ್ಪತ್ರೆಯು ಈಗಲೇ ಅತ್ಯವಶ್ಯಕವೆಂದಾಗಿ ತಾವು ಗ್ರಹಿಸುವದಾದರೆ ತಾವು ತಮ್ಮ ತೋಟದೊಳಗೆ ತಮ್ಮ ಜನರಿಗೆ ಪ್ರತ್ಯೇಕವಾಗಿ ಒಂದು ಆಸ್ಪತ್ರೆಯನ್ನು ಇಡುವ ಆಲೋಚನೆಯನ್ನು ದಯಾಳುಗಳಾದ ತಾವು ತೋಟದ ಹೊರಗೆ ಶನಿವಾರಸಂತೆಯಲ್ಲು ಇಟ್ಟು ತಮ್ಮ ಕೃಪೆಯನ್ನು ತಮ್ಮ "ಪ್ರಜೆಗಳಲ್ಲು" ತೋರಿಸಿದ್ದೇ ಆದರೆ ಆ ಜನರು ಮಾತ್ರವಲ್ಲದೆ ನಾವು ಸಹ ತಮ್ಮನ್ನು ಎಂದಿಗೂ ಮರೆಯಲಿಕ್ಕಿಲ್ಲ. ತಾವುಗಳು ಧನಿಕರು, ಸುಧಾರಕರು, ಪ್ರಜಾಪಕ್ಷದವರು. ತನು, ಮನ, ಧನವೆಂಬೀ ತತ್ವವಲ್ಲವೇ ತ್ಯಾಗ ಭ್ಯಾಸ? ತಾವುಗಳು ಇಂಥಾ ಪ್ರಾಣರಕ್ಷಣೆಯ ಜನಾಂಗಾಭಿವೃದ್ಧಿಯ ಮೂಲ ತತ್ವವನ್ನು ಪಾಲಿಸಿದ್ದೇಯಾದರೆ ನಾವುಗಳು ಧನ್ಯರಾಗುವೆವು. ಆತ್ಮ ನಿಷ್ಠೆಯೇ ತಮ್ಮ ಧ್ಯೇಯ! ತಮ್ಮ ನಾಡು ಬೇರೆಯಲ್ಲ, ನಮ್ಮ ನಾಡು ಬೇರೆಯಲ್ಲ. ಎಲ್ಲರೂ ತಮ್ಮ ಸಹೋದರರು. ಇಹದ ಧರ್ಮ ಪರದಲ್ಲೂ ಸುಖವಷ್ಟೇ? ಆದ್ದರಿಂದ ತಮ್ಮ ಪ್ರತಿವಾದಿತವ ಧ್ಯೇಯವನ್ನು ಸ್ವಲ್ಪ ಸುಧಾರಿಸುವದಾಗಿ ಕೋರುತ್ತೇನೆ.

ಪಿ. ಯಂ. ಮುತ್ತಣ್ಣ.

ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಲು ಸುಸಮಯ

## ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ (ಮಾಸ ಪುಸ್ತಕ)

### (ಎರಡನೆಯ ವರ್ಷಾರಂಭವಾಗಿದೆ.)

'ಹರಿದಾಸ ಸೇವಾ ಸಮಿತಿ' ಯವರಿಂದ ಬಹಳ ಶುದ್ಧ ರೀತಿಯಲ್ಲಿ ಪರಿಶೋಧಿಸಲ್ಪಟ್ಟು ಮಾಸ ಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಲಿರುವ 'ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ' ಯನ್ನು ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿರಿ! ಇದರಲ್ಲಿ ಜಗದ್ವಂದ್ಯರಾದ ಶ್ರೀ ಪುರಂದರದಾಸರು, ಶ್ರೀ ಕನಕದಾಸರೇ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ಹಾಡಿದ ದಿವ್ಯ ಭಗವನ್ನಾಮ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ಕ್ರೌನ್ ಅಷ್ಟಪತ್ರದ ನಾಲ್ವತ್ತು ಪುಟಗಳ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಲಿದೆ. ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೇ ಹಾಸಲು ಉಚಿತ) ಸಾಮಾನ್ಯ ಪ್ರತಿ ರೂ ೧-೪-೦ ಉತ್ತಮ ಪ್ರತಿ ರೂ ೨-೪-೦

## ಪ್ರಥಮ ಸಂಪುಟದ ಬೈಂಡಾದ ಪ್ರತಿಗಳು.

| | ಸಾದಾ ಬೈಂಡು | ದಪ್ಪ ರಟ್ಟಿನ ಬೈಂಡು | ಕಿತ್ತಾನಾರು ಬೈಂಡು |
|---|---|---|---|
| ಸಾಮಾನ್ಯ ಪ್ರತಿ | ೧-೪-೦ | ೧-೧೨-೦ | ೨-೪-೦ |
| ಉತ್ತಮ ಪ್ರತಿ | ೩-೪-೦ | ೩-೦-೦ | ೫-೦-೦ |

ಅಂಚೇಹಾಸಲು ಪ್ರತ್ಯೇಕ.

ವಿಳಾಸ— ಸುಬೋಧ ಪ್ರಕಟನಾಲಯ,

12-11 ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.



## ಬಂಗುಡಿ, ರುದ್ರಾಕ್ಷಿ ಅಂಚಿನ ಸೀರೆಗಳು.

ಈ ಸೀರೆಗಳು ಬೆಂಗಳೂರು ಅರಳೇಪೇಟೆ ಸೀರೆಗಳಂತೆಯೇ ಇರುವವು. 18 ಮೊಳ ಉದ್ದವೂ 3 ಮೊಳ ಅಗಲವೂ ಉಳ್ಳವು. ಸುಂದರವಾದ ರೇಷ್ಮೆಯ ಸೆರಗೂ ರುದ್ರಾಕ್ಷಿ, ಬಂಗುಡಿ ಅಂಚೂ ಇರುವದು. ಬಣ್ಣ ಎಂದಿಗೂ ಹೋಗದು. ನೋಡಲು ಬಹು ಲಕ್ಷಣವಾಗಿರುವವು. ಒಂದನ್ನು ತರಿಸಿ ನೋಡಿರಿ. ಇಷ್ಟವಿಲ್ಲದಿದ್ದರೆ ವಾಪಸು ತೆಗೆದುಕೊಳ್ಳುವೆವು.

1ನೇ ನಂಬರು ಸೀರೆ 1ಕ್ಕೆ 7—12—0
2ನೇ ನಂಬರು ಸೀರೆ 1ಕ್ಕೆ 6—8—0

ವಿಳಾಸ—ಕೆ. ನಾಥಮುನಿ ಅಂಡ್ ಸನ್ಸ್,
168 ಬ್ರೈಟ ಬಜಾರ್ ರೋಡ

52—21 ಮದರಾಸು.



## ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಸರಿಯಾದ ಗಂಟೆಯನ್ನು ತೋರಿಸುವವು. ಇದರ ಕೇಸು ಬಂಗಾರಕ್ಕೆ ಸಮಾನವಾಗಿರುವದು. ಇದಕ್ಕೆ ಫ್ಯಾಕ್ಟರಿಯವರ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ ಮಾತ್ರ ರೂ 4—14—0

ವಿಳಾಸ — [illegible]

[illegible]—21 ಪೋ. ಬಾ. 243 ಮದರಾಸು



# Arms, Ammunition and Shooting Requisites !!!



1934 Illustrated Catalogue Just Issued Free on Application !

| | | |
|---|---|---|
| D B B L Rifles | Rs 130 to | Rs 2750 |
| S B B L „ | 35 to | 950 |
| D B B L Guns | 50 to | 1150 |
| S B B L „ | 35 to | 275 |
| D B M L „ | 45 to | 135 |
| S B M L „ | 30 to „ | 80 |
| B L Revolvers | 35 to „ | 350 |
| Automatic Pistols | 30 to „ | 150 |

Brilliant Search Light Lamp For Shooting Camping Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24—4 210 Abdul Rehman Street, BOMBAY.

ಡಬ್ಬಲ್ ಮತ್ತು ಸಿಂಗಲ್ ಕೋವಿಗಳು ಮತ್ತು ಕೈ ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ವ್ಯಾಪಾರಸ್ಥರಿಗೂ ಬೇಟೆಗಾರರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ತಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಇದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಯನ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.
ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.
24—19 12, ಬ್ರಾಡ್ವೆ, ಮದ್ರಾಸ್
(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)



# ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

## ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

**ಉತ್ತಮ ತರಹದ ಸಿಂಗಲ್ ರೀಡ್ಸ್ ಹಾರ್ಮೋನಿಯಂಗಳು.**

| | |
|---|---|
| [illegible]ತಾರ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 50—8—0 |
| [illegible]ರಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 40—0—0 |
| [illegible]ನ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 37—8—0 |
| [illegible]ಂ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 35—0—0 |
| [illegible]ಜಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 32—8—0 |

**ಉತ್ತಮ ತರಹದ 14 ಕ್ಯಾರೆಟ್ಸ್ ಬಂಗಾರದ ನಿಬ್ಬು ಹಾಕಿದ ಫೌನ್ಟನ್ ಪೆನ್ನುಗಳು.**

| | |
|---|---|
| ಬ್ಲಾಕ್ ಬರ್ಡ್ ಫೌನ್ಟನ್ ಪೆನ್ 1ಕ್ಕೆ | 3—8—0 ಮತ್ತು 3—12—0 |
| ವರಲ್ಡ್ಸ್ ವಂಡರ್ ಫೌನ್ಟನ್ ಪೆನ್ 1ಕ್ಕೆ | 3—0—0 ಮತ್ತು 3—8—0 |
| ಕಾಂಪ್ಯಾಕ್ಟ್ ಸೆಲ್ಫ್ ಫಿಲ್ಲಿಂಗ್ ಫೌನ್ಟನ್ ಪೆನ್ 1ಕ್ಕೆ | 4—8—0 |
| ವಾಟರ್ ಮನ್ ಫೌನ್ಟನ್ ಪೆನ್ 5 1ಕ್ಕೆ | 8—0—0 ಮತ್ತು 8—8—0 |
| ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌನ್ಟನ್ ಪೆನ್ 1ಕ್ಕೆ | 12—0—0 ಮತ್ತು 15—0—0 |

**ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು**

| | |
|---|---|
| ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ | 4—0—0 |
| ವೆಸ್ಟ್‌ಕ್ಲಾಕ್ ಕಂಪನಿಯ ಅಲಾರಂ ಟೈಂಪೀಸ್ 1ಕ್ಕೆ | 8—0—0 |
| ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ | 9—6—0 |
| ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ | 6—12—0 |
| ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ | 6—0—0 |

ಸಚಿತ್ರ ಕ್ಯಾಟಲಾಗ್ ಬಗ್ಗೆ 6 ಪೈ ಸ್ಟ್ಯಾಂಪು ಕಳಿಸಿರಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು, ಮೈಸೂರು.

# ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ

| | | ರೂ |
|---|---|---|
| ಶೇರ್ ಬಂಡವಾಳ | — | 51,1?0 |
| ವಸೂಲಾದ ಶೇರ್ ಕ್ಯಾಪಿಟಲ್ | — | 17,?? |
| ಜಮೂಬಂದ ಠೇವಣಾತಿ | — | 1,62,??0 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೆ ಹೆಚ್ಚಾಗಿ ಸಾಲಕೊಡಲ್ಪಡುತ್ತದೆ.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ, ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿ ಮಾಡುತ್ತಾರೆ

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್, ಕೊಂಗೆಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1–7–1928.

## ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮಿ ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರು ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮಿ. ಪೇರಿಯಂಡ ಪೂವಯ್ಯನವರು.
ದಕ್ಷಿಣ ಕೊಡಗಿಗೆ—ಮಿ ಚಂಗಂಡ ಕುಟ್ಟಪ್ಪನವರು.
ಪೊನ್ನಂಪೇಟೆನಾಡು—ಮಿ. ಕಾಳೇಂಗಡ ಚಿಣ್ಣಪ್ಪನವರು.
ಶ್ರೀಮಂಗಲನಾಡು—ಮಿ ಅಜ್ಜಮಾಡ ಮಾದಪ್ಪನವರು.
ಮರೆನಾಡು—ಮಿ ಕೇಕಿರ ಅಣ್ಣಯ್ಯನವರು

ಸಬ್ ಏಜಂಟರುಗಳು

ವೀರರಾಜಪೇಟೆ—ಮಿ. ಕಾಸನೇರಿರ ಗಂಜಪ್ಪನವರು.
ಸಾಮೋಕ್ಕ—ಮಿ. ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮಿ ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮಿ. ದಾಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮಿ ಸಿ. ಜಿ ಮುದ್ದಪ್ಪಯ್ಯನವರು,
ಮಡಿಕೇರಿ ಕು ತಿತಿಮತ್ತಿ—ಮಿ ಜಿ ಮಾದಪ್ಪಯ್ಯನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

## ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮಿಂಬರನ್ನಿಯೂ ಇರಬೇಕಾದ ಅವರ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಒಡೆದು ರಜಿಸ್ಟ್ರಾರ‍್ರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡದಲ್ಲಿ ಮರಳಿ ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿನನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ.

12 bore Victor Cartridges Rs 10/- Per 100

**Mahomedally-Noorbhoy.**

ARMS & AMMUNITION MART,
321 Abdul Rehman Street
BOMBAY. 3.

52-5

**ಕಟುಕಷಾಯ ಮಲೇರಿಯ ರಕ್ಷೆ:**—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ ದಿನಾ ಬರುವ ಜ್ವರ, 1—3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿಯಾಗಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0; 3ಕ್ಕೆ ರೂ 4—0—0, 6ಕ್ಕೆ ರೂ 7—8—0, 12ಕ್ಕೆ ರೂ 14

**ಚಂದನ-ಸವ:**—ಇದು ಪ್ರಮೇಹ ಮೂತ್ರಕೃಚ್ಛ ಮೂತ್ರ ಹಸಿಹಸಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ, ಮೂತ್ರನಾಳದಲ್ಲಿ ಗಾಯ, ಮೂತ್ರ ಹೊಯ್ಯುವಾಗ ಉರಿಯುವದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದ ಮೂತ್ರ ಬರುವುದು, ಮೂತ್ರ ಚೀಲದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ನಿಗ್ರಹ, ಮೂತ್ರನಾಳದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳವನ್ನು ಶುಚ್ಚುವ ಸೋಂಕು ಇವುಗಳಿಗೆ ಪರಮ ಔಷಧ ಬೆಲೆ ಬಾಟ್ಲಿ 1, 3, 6ಕ್ಕೆ ರೂ 1—4—0 3—8—0; 6—12—0.

**ರೋಮನಾಶಿನಿ:**— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3—8—0.

**ಮನೋಲ್ಲಾಸಿನಿ ತೈಲ:**—ತಲೆಸೋವು, ತಲೆತಿರುಗುವುದು, ತಲೆವುರಿ, ಕಣ್ಣುರಿ ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0. ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ—ಮನೋಲ್ಲಾಸಿನಿ ಕಂಪೆನಿ.
9. ಮಂಗಳೂರು.

52—1

**ಕಳಾರಿಕೆ ಮಾಲುಗಳಿಗೆ ಮೋಸ ಹೋಗಬೇಡಿರಿ!**

ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ

ಆಜಮಾಯಿಸಿ ನೋಡಿರಿ.




ಇನಾಮಿನ ಬಟ್ಲುಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ.

ಎಲ್ಲಾ ಆರ್ಡರುಗಳನ್ನೂ ಚಲೋ ರೀತಿಯಿಂದಲೂ, ತುರತವಾಗಿಯೂ ಗ್ಯಾರಂಟಿಯೊಡನೆ ಜಾರಿ ಮಾಡಲಾಗುವದು.

ಕೇಶವಜೀ ದೇವಚಂದ್,
ಜ್ವೆಲ್ಲರ್, (ಕೆಟಲಾಗ್ ಮುಫತ್).
21 ಚೈನಾ ಬಜಾರ್‌ರೋಡ್, ಮದರಾಸು.

12—6

# EMPIRE OF INDIA LIFE ASSURANCE COMPANY, LIMITED.

(Established 1897.)

FOR THE YEAR ENDING 29th FEBRUARY 1928.

| | |
|---|---|
| New Business Exceeds .... .... .... | Rs. 1,16,00,000. |
| Income Exceeds .... .... .. .... | Rs. 54,95,000. |
| Assets Exceed . | Rs. 3,15,64,000. |

**Wanted: Agents in Important Places in Coorg**

HEAD OFFICE.
Empire of India Life Building,
BOMBAY.

BRANCH OFFICE.
152, Commercial Street,
BANGALORE.

21—16

ಹೆಡ್ ಆಫೀಸು—ಬೊಂಬಾಯಿ.

ಸ್ಥಾಪನೆ—1874.

# ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಆಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

## 1927

**ಅತ್ಯುಚ್ಛ್ರಾಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ**

ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

| | | | | | |
|---|---|---|---|---|---|
| 1925 | — | 12545 | — | ರೂ. | 2,96,42,000. |
| 1926 | — | 17371 | — | ರೂ. | 3,91,39,000 |
| 1927 | — | 21118 | — | ರೂ. | 4,68,04,075. |

— ಪ್ರೀಮಿಯಂ ಉತ್ಪತ್ತಿ —

| | | | |
|---|---|---|---|
| 1925 | — | ರೂ. | 92,66,000. |
| 1926 | — | ರೂ. | 1,05,33,000. |
| 1927 | — | ರೂ. | 1,21,53,000. |

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಮೀರಿದೆ.
ಕಂಪನಿಯ ಫಂಡು 8 ಕೋಟಿ ರೂಪಾಯಿಗಳಿಗೆ ಮೀರಿದೆ
ಜೀವವಿಮೆ ಮಾಡಬೇಕೆಂದಿರುವವರು ಸಾವಕಾಶ ಮಾಡದೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದುಕೊಳ್ಳಬಹುದು

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪರೇಡ್, ಬೆಂಗಳೂರು.

52—26

ಎಲ್. ಆರ್. ಕೃಷ್ಣಸ್ವಾಮಿಅಯ್ಯರ್,
ಬ್ರಾಂಚ್ ಸೆಕ್ರೆಟರಿ.

Printed & published by P. I Belliappa, at "Kodagu" Press, Mercara for "Kodagu" Ltd.

Reg. No. M. 1990.
If not delivered please return to
"KODAGU" OFFICE, MERCARA.

# ಕೊಡಗು.

[illegible]

ವಾರ್ಷಿಕ ಚಂದಾ ರೂ. ೩-೮-೦. ಸಂಪಾದಕ—ಹೆಂದ್ರಂಡ ಬಿ. ಚೆಕ್ಕಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೮] ಮಡಿಕೇರಿ, ಸನ್ ೧೯೩೦ನೇ ಇಸವಿ ಅಕ್ಟೋಬರ್ ತಾರೀಖು ೧೭ ನೇ ಶುಕ್ರವಾರ [ಸಂಚಿಕೆ ೨೦

## ESTATE REQUISITES

| | | | |
|---|---|---|---|
| 5 lbs Yates' hammer headed mamooties | Rs 13 0 0 Each. | Weeding forks @ | Rs 1 4 0 Each |
| 4½ " " " " | " 2 14 0 " | Garden trowels " | Rs 1 4 0 " |
| 4 " " " " | " 2 12 0 " | Pick axes " | Rs 1 8 0 " |
| Felling axes at Rs 3 0 0 & | " 3 4 0 " | Bill hooks " | Rs 3 14 0 " |
| Grubbing mattocks at | " 3 4 0 " | Digging forks " | Rs 4 0 0 " |

## MONSOON EQUIPMENT.

| | | | |
|---|---|---|---|
| Planter boots | Rs. 16 8 0 | Dales' dubbin per tin | Rs 0 8 0 |
| Marrs' oil (water proof) per tin | Rs. 2 0 0 | Umbrellas | Rs 4 8 0 |

52—38

**SPENCER & CO. LTD.** General Merchants **MERCARA.**

**Post Box 423,**
**TRIPLICANE, MADRAS.**

**MANUFACTURES AND DEALS IN ALL:—**

(1) Gemset Jewels, gold and silver articles of all patterns
(2) Race Cups, Caskets, Medals, etc., for presentation purposes
(3) Trovels, Keys, Locks etc., for ceremonial purposes.

JEWELLER
BY
APPOINTMENT
TO
His Excellency
THE GOVERNOR
OF MADRAS.

**Catalogue Free**
**to Bonafide Enquirers**

UNDERTAKES.—

(1) Remaking or Remodelling of all sorts of old gemset jewels to latest patterns.
(2) Electro plating, gilding and nickelling
(3) Buying old jewellery, or undertaking to effect sale.

# V. SUBRAMANIA IYER
# JEWELLER

52-6

**Gold-smith, Silver smith, & Dealer in all Gemset Jewels.**

## ನೀವು ನಿರ್ಬಲಸ್ತರಾಗಿ ಯಾಕೆ ನರಳುವಿರಿ?

ಇಪ್ಪತ್ತು ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

## ಸಾಲಾಮಿಸ್ರಿ ಮುರಬ್ಬ

ಸೇವನೆಯಿಂದ ಎಂಥಾ ಧಾತು ಜನ್ಯ ವಿಕಾರಗಳನ್ನು, ನರಗಳ ಶಕ್ತಿ ಕುಂದಿಹೋಗಿರುವದನ್ನೂ ಮೆದುಳಿನ ಬಲಹೀನತೆಯನ್ನೂ ಇಂಥಾ ರೋಗಗಳನ್ನೆಲ್ಲಾ ಯಕ್ಷಿಣಿಯಂತೆ ಮಾಯಮಾಡಿಸಲಿಕ್ಕೆ ತನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸುತ್ತದೆ ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ಮಹನೀಯರ ಅನುಭವಪೂರ್ವಕವಾದ ಸರ್ಟಿಫಿಕೇಟುಗಳನ್ನು ಯಾವಾಗ ತರಿಸಿ ನೋಡಬಹುದು. ಒಂದು ಡಬ್ಬಿ ೧೫ ದಿನಗಳ ಸೇವನೆಯಿಂದಲೇ ಇದರ ಗುಣವು ತೋರಿಬರುವುದು. ೩-೪ ಡಬ್ಬಿಗಳ ಸೇವನೆಯಿಂದ ಜನ್ಮಾಂತ್ರದವರಿಗೂ ಸಂಪೂರ್ಣ ಗುಣವನ್ನುಂಟುಮಾಡುವದು ನಮ್ಮ ಟ್ರೇಡ್ ಮಾರ್ಕ್ ನೋಡಿ ಡಬ್ಬಿ ತೆಗೆದುಕೊಳ್ಳಿರಿ. ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಅವಶ್ಯಕವಿರುತ್ತೆ.

ಕ್ರಯ ಡಬ್ಬಿ ೧ಕ್ಕೆ ೨-೦-೦. ಟಪ್ಪಾಲು ಖರ್ಚು ೧ರಿಂದ ೩ ಡಬ್ಬಿಗಳ ವರೆಗೆ ೦-೮-೦.

**ಡಿ. ಮನ್ನಾಲಾಲ್,**

12—12 ಡಿಲ್ಲಿ ನೇಟೀವ್ ಡಾಕ್ಟರು, ಸಾಲಾಮಿಸ್ರಿ ಮುರಬ್ಬ ಫಾರ್ಮಸಿ, ಬೆಂಗಳೂರು ಸಿಟಿ.

## ಅಪೂರ್ವ ಸಂದರ್ಭ.

ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸಬೇಕಾದರೆ ಇದೀಗ ಅಪೂರ್ವ ಸಂದರ್ಭ.

## ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ, ಮಲಬದ್ಧತೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಮಾಡುವುವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ! ಧರ್ಮಾರ್ಥ!!

## ಕಾಮಶಾಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ:—

ಆತಂಕನಿಗ್ರಹ ಔಷಧಾಲಯ,
52—12 ಚಿಕ್ಕಪೇಟೆ, ಬೆಂಗಳೂರು ಸಿಟಿ.

# ಕೊಡಗು.

[ಸಂ ೧೯೨೮ ನೇ ಇಸವಿ
ಅಕ್ಟೋಬರ್ ತಾ ೧೯ ನೇ ಶುಕ್ರವಾರ.


## ಸ್ಟೇಟ್ಯೂಟರಿ ಕಮಿಷನು.

ಹಿಂದೂದೇಶದ ಸ್ವಯಂ ನಿರ್ಣಯದ ತತ್ವಕ್ಕೆ ವಿರೋಧವಾಗಿ ನೇಮಿಸಲ್ಪಟ್ಟಿರುವ ಸ್ಟೇಟ್ಯೂಟರಿ ಕಮಿಷನು ಬೇಡವೆಂದು ಪ್ರಾರಂಭದಿಂದಲೇ ಹಿಂದೀಯರು ಎಷ್ಟು ಕೂಗಿಕೊಂಡರೂ ಸದರಿ ಕಮಿಷನು ಹಿಂದೂದೇಶಕ್ಕೆ ತನ್ನ ನಿಜವಾದ ಕಾರ್ಯವನ್ನು ನಡಿಸಲು ಎರಡನೇ ಸಾರಿ ಬಂದೇ ಬಂತು ಪರರಾಷ್ಟ್ರದವರಿಂದ ಆಳಲ್ಪಡುತ್ತಿರುವರೆಗೆ ಯಾವ ತರಹದ ಆತ್ಮಗೌರವ ಹಾನಿಗೂ ಭಾರತೀಯರು ತಲೆಬಗ್ಗಿಸಬೇಕಾಗುವದೆಂಬುದರಲ್ಲಿ ಒಂದಿನಿತೂ ಸಂಶಯವಿಲ್ಲ ಹಿಂದೂದೇಶದ ಸರ್ವಪಕ್ಷಗಳ ಲಕ್ನೋ ಪರಿಷತ್ತಿನಲ್ಲಿ ಪಾಸಾಗಿರುವ ನೆಹರು ಕಮಿಟಿಯವರ ಆಡಳಿತ ರಚನೆಯು ಹೊರಬಿದ್ದ ಮೇಲಂತೂ ಈ ಕಮಿಷನಿನ ಆವಶ್ಯಕತೆಯು ಏನೂ ಇಲ್ಲವೆಂದೇ ಎನ್ನಬೇಕಾಗಿದೆ 1919ರಲ್ಲಿ ಕೊಡಲ್ಪಟ್ಟ ರಾಜಕೀಯ ಸುಧಾರಣೆಗಳು ಇಂಡಿಯಾದಲ್ಲಿ ಎಷ್ಟರಮಟ್ಟಿಗೆ ನಡಿಸಲ್ಪಟ್ಟಿವೆ ಮತ್ತು ಇನ್ನು ಮುಂದೆ ಎಂಥಾ ಸುಧಾರಣೆಗಳನ್ನು ಕೊಡಬಹುದು ಎಂಬದನ್ನು ನಿಶ್ಚಯಿಸಲಿಕ್ಕೆ ಬಂದಿರುವ ಈ ಕಮಿಷನು ಪಕ್ಷಪಾತವಿಲ್ಲದೆ ತಮ್ಮ ಉದ್ದೇಶವನ್ನು ನೆರವೇರಿಸುವದಾದರೆ ಹಿಂದೀಯರ ದೊಡ್ಡ ಬಹುಮತದಿಂದ ಒಪ್ಪಲ್ಪಟ್ಟಿರುವ ನೆಹರು ಕಮಿಟಿಯ ರಚನೆಯನ್ನು ನೋಡಿಕೊಂಡರೆ ಸಾಕಾಗಿದೆ ದೇಶೀಯರ ದೃಷ್ಟಿಯಿಂದ ಇದಕ್ಕಿಂತ ಉತ್ತಮವಾದ ಮತ್ತು ಉಗಟಿನ ರಚನೆಯನ್ನು ತಯಾರಿಸಲು ಯಾವ ಕಮಿಟಿಗಾಗಲೀ ಕಮಿಷನಿಗಾಗಲೀ ಶಕ್ಯವಿಲ್ಲ ಸಾಧ್ಯವಿಲ್ಲವೆಂದೇ ಹೇಳಬೇಕಾಗಿದೆ ಹಿಂದೂದೇಶದ ಕಾಲಸ್ಥಿತಿಗಳನ್ನು ಚೆನ್ನಾಗಿ ಅರಿತಿರುವ ಹಿಂದೀಯರಿಂದ ಹಿಂದೀಯರಿಗಾಗಿ ತಯಾರಿಸಲ್ಪಟ್ಟಿರುವ ರಚನೆಗೆ ಬ್ರಿಟಿಷ್ ಪಾರ್ಲಿಮೆಂಟಿನವರು ತಕ್ಕಷ್ಟು ಗಮನವನ್ನೀಯದೆ ಹೋದರೆ ಸೈಮನ್ ಕಮಿಷನನ್ನು ನೇಮಿಸಿದರ ಉದ್ದೇಶವು ಬರೇ ತೋರಿಕೆಯದಲ್ಲದೆ ಮನಃಪೂರ್ವಕವಾದದಲ್ಲವೆಂಬುದು ಸ್ಪಷ್ಟವಾಗುತ್ತದೆ

ಈ ಕಮಿಷನಿಗೆ ಹಿಂದೂದೇಶದಲ್ಲಿ ಸಾಕಷ್ಟು ಸಹಕಾರ ದೊರೆಯೆಂದು ಸರ್ಕಾರದವರು ಹೇಳುತ್ತಿರುವ ಮಾತು ಎಷ್ಟರಮಟ್ಟಿಗೆ ನಿಜವೆಂಬುದು, ಈ ಕಮಿಷನಿನವರು ಈ ತಾ 12ರಲ್ಲಿ ಬೊಂಬಾಯಿಗೆ ಬಂದಿಳಿದಾಗಲೂ ನಂತರ ಪೂನಾಪಟ್ಟಣಕ್ಕೆ ತಲುಪಿದಾಗಲೂ ಅಲ್ಲಿಯ ಜನರು ಅವರಿಗೆ ತೋರಿಸಿದ ನಿರಾದರದಿಂದ ತಿಳಿಯಬರುವದು ಹಿಂದೂದೇಶದ ಹೆಬ್ಬಾಗಿಲಾದ ಬೊಂಬಾಯಿಯಲ್ಲಿ ಅವರಿಗೆ ಸ್ವಾಗತವನ್ನೀಯಲು ಅಲ್ಲಿಗೆ ಉಪನಗರದ ಮುನ್ಸಿಪಲ್ ಅಧ್ಯಕ್ಷರು ಬಂದೇ ಇರಲಿಲ್ಲ. ಈ ಎರಡು ಪಟ್ಟಣಗಳಲ್ಲಿಯೂ ಅಲ್ಲಿಯ ನಿವಾಸಿಗಳು ಹರತಾಳವನ್ನು ಆಚರಿಸಿ ಕಪ್ಪು ಬಾವುಟಗಳೊಂದಿಗೆ ಮೆರವಣಿಗೆಯನ್ನು ನಡಿಸಿ, ಕಮಿಷನಿನವರು ಬಂದಿಳಿದಾಗ 'ಸೈಮನರೇ, ಹಿಂದಕ್ಕೆ ಹೋಗಿರಿ' ಎಂಬ ಘೋಷದಿಂದ ಅವರನ್ನು ಎದುರುಗೊಂಡರು ಅಲ್ಲಲ್ಲಿ ಸಾರ್ವಜನಿಕ ಸಭೆಗಳು ಸೇರಿ ಸೈಮನರ ಮುಂದೆ ದೇಶೀಯರು ಯಾವ ಅಭಿಪ್ರಾಯವನ್ನೂ ಕೊಡದೆ ಕಮಿಷನಿನ ಬಹಿಷ್ಕಾರವನ್ನು ಸಂಪೂರ್ಣಗೊಳಿಸಬೇಕೆಂದು ತೀರ್ಮಾನಿಸಿದರು ಈ ತರಹದ ಅನಾದರವು ಸೈಮನರು ಹೋಗುವ ಕಡೆಗಳಲ್ಲೆಲ್ಲಾ ಅವರನ್ನು ಕಾಯುತ್ತಿದೆ. ಆದರೂ ಕೂಡ 'ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ' ವೆಂಬಂತೆ ಬ್ರಿಟಿಷರು ಹಿಂದೀಯರ ಬಹಿಷ್ಕಾರ ಚಳವಳದ ಜಯವನ್ನು ಒಪ್ಪಿಕೊಳ್ಳಲೊಲ್ಲರು ಅವರು ಹೇಗೆ ತಾನೇ ಒಪ್ಪಿಕೊಳ್ಳುವರು? ಹಾಗೆ ಒಪ್ಪಿದಾಕ್ಷಣ ಕಮಿಷನಿನ ಉದ್ದೇಶದ ಅಪಜಯವನ್ನು ಒಪ್ಪಿಕೊಂಡಂತಾಗುವದಲ್ಲಾ!

ಈ ಕಮಿಷನಿನವರು, ಮಧ್ಯವರ್ತಿ ಶಾಸನಸಭೆಗಳ ಕಮಿಟಿ ಮತ್ತು ಬೊಂಬಾಯಿ ಕೌನ್ಸಿಲಿನ ಕಮಿಟಿ ಮೆಂಬರುಗಳೊಡನೆ ಜನರ ಅಭಿಪ್ರಾಯ ತೆಗೆದುಕೊಳ್ಳುವ ಕೆಲಸವನ್ನು ತಾ. 15 ರಲ್ಲಿ ಪೂನಾದಲ್ಲಿ ಪ್ರಾರಂಭಿಸಿದರು ಆ ವೇಳೆಯಲ್ಲಿ ಆ ಸಭೆಯ ಅಧ್ಯಕ್ಷರಾದ ಸೈಮನರು ತಮ್ಮ ಕಾರ್ಯವನ್ನು ನಡಿಸುವ ಕ್ರಮವನ್ನು ಕುರಿತು ಕೆಲವು ಸೂಚನೆಗಳನ್ನು ಕೊಟ್ಟರು ಈ ಮೊದಲೇ ಸಂಸ್ಥೆಗಳಾಗಲೀ, ವ್ಯಕ್ತಿಗಳಾಗಲೀ ಬರಹ ಮೂಲಕ ಕಳುಹಿಸಿರುವ ಅಭಿಪ್ರಾಯಗಳನ್ನೆಲ್ಲಾ ಪ್ರಕಟಿಸುವ ಅವಶ್ಯವಿಲ್ಲವೆಂಬುದು ಸೂಚನೆಗಳ ಪೈಕಿ ಒಂದಾಗಿದೆ. ಬರೆದು ಕಳುಹಿಸಿರುವ ಅಭಿಪ್ರಾಯಗಳನ್ನು ಪ್ರಕಟಿಸದೆ ಹೋದರೆ, ಅವುಗಳನ್ನು ಕುರಿತು ಸ್ವತಂತ್ರ ತೀರ್ಮಾನಗಳನ್ನು ಪ್ರಕಟಿಸುವದರಿಂದ ವಾಚಕರಿಗೆ ಹೆಚ್ಚಿನ ಪ್ರಯೋಜನವಾಗಲಾರದು. ಅಲ್ಲದೆ ಈ ಮೀಟಿಂಗುಗಳಲ್ಲಿ ತಮಗೆ ಬೇಕಾದ ಕೆಲವು ಪತ್ರಿಕಾ ಪ್ರತಿನಿಧಿಗಳು ಮಾತ್ರ ಹಾಜರಿರಲು ಬಿಟ್ಟು, ಬಾಕಿ ಪಬ್ಲಿಕಿನವರಿಗೆ ಯಾರಿಗೂ ಅಲ್ಲಿಗೆ ಹೋಗಲು ಅವಕಾಶಕೊಡದೆ ಮೀಟಿಂಗುಗಳನ್ನು ಗುಟ್ಟಾಗಿ ನಡಿಸಲು ಯತ್ನಿಸುವದರ ಅರ್ಥವೇನೆಂದು ಗೊತ್ತಾಗುವದಿಲ್ಲ

ಅಭಿಪ್ರಾಯ ಕೊಡಲು ಬಂದವರನ್ನು ಪ್ರಶ್ನೆ ಕೇಳುವ ಹಕ್ಕು ಪಾಡಿಕೆಯಾಗಿ ಒಂದು ಕಮಿಟಿಯಲ್ಲಿ ಒಬ್ಬರಿಗೆ ಮಾತ್ರವಿರತಕ್ಕದೆಂದೂ ವಿಶೇಷ ಸಂದರ್ಭಗಳಲ್ಲಿ ಅಧ್ಯಕ್ಷರು ಬೇರೆ ಮೆಂಬರುಗಳಿಗೂ ಈ ಹಕ್ಕನ್ನು ಕೊಡಬಹುದೆಂದೂ ಸೂಚಿಸಿರುವರು ಪ್ರಾಂತೀಕ ಮತ್ತು ಮಧ್ಯವರ್ತಿ ಶಾಸನಸಭೆಗಳ ಕಮಿಟಿ ಮೆಂಬರುಗಳಿಗೂ ಕಮಿಷನಿನ ಮೆಂಬರುಗಳಿಗೂ ಅಭಿಪ್ರಾಯ ಕೇಳುವದರಲ್ಲಿ ಸಮ ಹಕ್ಕು ಇದೆ ಎಂಬ ಭಾವನೆಯು ನಿಜವಲ್ಲವೆಂಬುದು ಸೈಮನರ ಮೇಲಿನ ಸೂಚನೆಯಿಂದ ವಿಶದವಾಗುತ್ತದೆ ಇದೂ ಅಲ್ಲದೆ ಒಂದಕ್ಕಿಂತ ಹೆಚ್ಚು ಪ್ರಾಂತ್ಯಗಳಿಗೆ ಸಂಬಂಧಿಸಿದ ಕೋಮುವಾರು ಪ್ರತಿನಿಧಿತ್ವ ಹಿಂದುಳಿದ ಪಂಗಡಗಳ ಸ್ಥಿತಿ ಮುಂತಾದ ಕೆಲವು ಮುಖ್ಯ ವಿಷಯಗಳನ್ನು ಎಲ್ಲಾ ಕಡೆ ವಿಚಾರಿಸುವದರ ಬದಲು ಅಧ್ಯಕ್ಷರು ನಿಶ್ಚೈಸುವ ಯಾವದಾದರೊಂದು ಕಡೆ ಸಂಪೂರ್ಣವಾಗಿ ಅಭಿಪ್ರಾಯ ತೆಗೆದುಕೊಂಡರೆ ಸಾಕೆಂದು ಹೇಳಿರುವರು. ಇದು ಎಂದಿಗೂ ತೃಪ್ತಿಕರವಲ್ಲ. ಸೈಮನರ ಈ ತರಹದ ಕಾರ್ಯಕ್ರಮವು ನಿಬಂಧನೆಗಳಿಂದಲಾದರೂ ಅವರೊಂದಿಗೆ ಸಹಕರಿಸಲು ಮುಂದು ಬಂದಿರುವ ಕೆಲವು ಹಿಂದೀಯರಿಗೆ ಬೇಸರಿಕೆ ಹುಟ್ಟಿ, ತಮ್ಮ ತಪ್ಪನ್ನು ಇನ್ನಾದರೂ ತಿಳಿದುಕೊಂಡು ನೆಹರು ಕಮಿಟಿಯ ರಚನೆಯನ್ನೇ ತಮಗೆ ಕೊಡಬೇಕೆಂದು ಕಮಿಷನಿನ ಮುಂದೆ ಅಭಿಪ್ರಾಯ ಕೊಡುವರಾಗಿ ಬಯಸುತ್ತೇವೆ

## ಗ್ರಾಮಗಳ ಪುನರುದ್ಧಾರ.

(ಕಳೆದ ವಾರದಿಂದ ಮುಂದುವರಿದದ್ದು)

### ಸಾರ್ವಜನಿಕ ಸೇವೆ

ಮಾನವನ ಕರ್ತವ್ಯದಲ್ಲಿ, ಪರೋಪಕಾರವು ಒಂದಾಗಿದೆ ನಾವು ಮಾಡಬೇಕಾಗಿರುವ ಪರೋಪಕಾರಗಳಲ್ಲಿ ನಮಗಿಂತಲೂ ಹೀನಸ್ಥಿತಿಯಲ್ಲಿರುವವರನ್ನು ಒಳ್ಳೇ ಸ್ಥಿತಿಗೆ ತರುವುದಕ್ಕೋಸ್ಕರ ತನ್ನ ಶಕ್ತ್ಯಾನುಸಾರ ಪ್ರಯತ್ನ ಪಡತಕ್ಕದು ಬಹು ಮುಖ್ಯವಾಗಿರುವುದು "ಪರೋಪಕಾರಾರ್ಥಂ ಇದಂ ಶರೀರಂ" ಎಂಬಂಥ ನೀತಿಯು ನಮ್ಮ ಕಿವಿಗಳಲ್ಲಿ ಬಹಳ ಚಿಕ್ಕಂದಿನಲ್ಲೇ ಬಿದ್ದಿದ್ದರೂ ನಾವು ಕಾರ್ಯತಃ ಅದನ್ನು ನೆರವೇರಿಸುವುದಿಲ್ಲ ನೆರವೇರಿಸುವವರಾದರೂ ಬಹು ಕಡಿಮೆ ಕೋಟ್ಯಾನುಕೋಟಿ ಜನಭರಿತವಾದ ಹಿಂದೂಸ್ಥಾನದಲ್ಲಿ ಅಂಥಾ ಮಹನೀಯರ ಹೆಸರು ವಿರಳವು ಆ ಎಲ್ಲವೂ ಇತರ ಮಾನವರನ್ನು ತಮ್ಮ ಗೌರವ ಕಾರ್ಯಭಾರವನ್ನು ನಿರ್ವಹಿಸಲು ಹುರಿದುಂಬಿಸುತ್ತಿದೆ. ನಾಲ್ಕೈದು ಜನರ ಕೀರ್ತಿಯೇ ಅಖಿಳ ಹಿಂದೂಸ್ಥಾನವನ್ನು ಪ್ರಾಕಶ್ಯಕ್ಕೆ ಅರ್ಹವಾಗಿ ಮಾಡಿರುವಾಗ ಸ್ವರಾಜ್ಯ ರಣರಂಗದಲ್ಲಿ ತನು ಮನ ಧನಗಳನ್ನು ತೊರೆದು ಹೋರೆದಾಡುತ್ತಿರುವ ಆ ಮಹನೀಯರ ಕೀರ್ತಿಯು ಜಗತ್ತನ್ನೇ ಆವರಿಸಿಕೊಳ್ಳದೆ ಇರುವುದೇ

ನಾವು ಮಾಡುವ ದಾನಗಳಲ್ಲಿ ಅನೇಕ ದಾನಗಳು ಒಬ್ಬಿಬ್ಬರ ಅಥವ ಅಲ್ಪ ಸಂಖ್ಯೆಯ ಜನರಿಗೆ ಪ್ರಯೋಜನಕಾರಿಯಾಗಿರಬಹುದು, ಮತ್ತು ತಾತ್ಕಾಲಿಕ ಸುಖಪ್ರದಾಯಕಗಳಾಗಿಯೂ ಇರಬಹುದು ಆದರೆ ಅಜ್ಞ ಸಮಾಜದ ಅಭ್ಯುದಯಕ್ಕೂ ದೇಶಾಭಿವೃದ್ಧಿಗೂ ಕಾರಣಗಳಾದ ದಾನಗಳನ್ನು ಮಾಡಿದರೆ ಅಪಾರವಾದ ಶ್ರೇಯಸ್ಸು, ಶಾಶ್ವತವಾದ ಕೀರ್ತಿಯು ನಿರಂತರವಾದ ಕ್ಷೇಮವೂ ಲಭಿಸುವುದು

ಇಂಥಾ ಪ್ರಶಸ್ತ್ಯಕವಾದ ದಾನಗಳನ್ನು ಮಾಡಲು ಅರ್ಹನೆನಿಸಿ ಕಷ್ಟಪಟ್ಟು ಆರ್ಜಿಸಿದ ಧನವೇ ಪ್ರಾಮುಖ್ಯವಾದುದಲ್ಲ ನಮ್ಮ ಈ ಶರೀರವನ್ನೇ ಪರರ ಏಳಿಗೆಗೆ ಉಪಯೋಗಿಸಬೇಕಾದುದು ಸಹಜವಾದುದರಿಂದ ಅಂಥಾ ಸ್ವಾರ್ಥತ್ಯಾಗವುಳ್ಳ ಜೀವ ಮಾನವೇ ಮುಖ್ಯವಾದದು ನಾವು ಗಳಿಸಿದ ಹಣವನ್ನು ಯಾವುದಾದರೊಂದು ಧರ್ಮ ಕಾರ್ಯದಲ್ಲಿ ಸುಲಭ ರೀತಿಯಲ್ಲಿ ವಿನಿಯೋಗಿಸಲೂ ಬಹುದು ಆದರೆ ಅಂಥಾ ಧರ್ಮಕ್ಕೋಸ್ಕರ ನಮ್ಮ ಜೀವನಮಾನವನ್ನೇ ಅರ್ಪಿಸುವದು ಅವಕ್ಕಿಂತಲೂ ಶ್ರೇಷ್ಠವಾದುದಲ್ಲವೇ

ಪ್ರಪಂಚದಲ್ಲಿ ಅತ್ಯಂತ ಹೀನ ಸ್ಥಿತಿಯಲ್ಲಿರುವ ದೇಶಗಳು ಅನೇಕ ಇವೆ ಆ ದೇಶಗಳ ಜನರು ಕೇವಲ ಮೃಗಪ್ರಾಯರಾಗಿ ಜೀವಿಸುವರು. ಅವರಿಗೆ ವಿದ್ಯಾಬುದ್ಧಿಗಳೂ ಇಲ್ಲ ಯಾವ ನಾಗರೀಕತೆಯೂ ತಿಳಿಯದು. ಅಂಥಾ ಮಾನವ ವರ್ಗದ ಮಧ್ಯದಲ್ಲಿ ಸ್ವಾರ್ಥತ್ಯಾಗಿಗಳು ಕೆಲವರು, ವಾಸವಾಗಿದ್ದುಕೊಂಡು ಪಾಠಶಾಲೆಗಳನ್ನು ಏರ್ಪಡಿಸಿ ವಿದ್ಯಾದಾನವನ್ನಿತ್ತು ಅವರನ್ನು ನವನಾಗರೀಕತೆಯಲ್ಲಿ ಅನಕ್ಷರನನ್ನಾಗಿ ಮಾಡಿ ಉನ್ನತಸ್ಥಿತಿಗೆ ತರಲು ಪ್ರಯತ್ನಮಾಡಿರುವರು ಯೂರೋಪು ಖಂಡದಲ್ಲಿ ಈ ಉದ್ದೇಶದಿಂದ, ಅನೇಕ ಸಂಘಗಳು ಸ್ಥಾಪಿಸಲ್ಪಟ್ಟಿರುವವು ಈ ಸಂಘಗಳಿಂದ ಪಾಂಡಿತ್ಯ ಹೊಂದಿದ ಬೋಧಕರು ಆ ದೇಶಗಳಿಗೆ ಕಳುಹಿಸಲ್ಪಡುವರು. ಇಂಥಾ ಸಂಘಗಳಿಗೆ ಪಾದ್ರಿಗಳು (ಕ್ರಿಸ್ತ ಮತ ಬೋಧಕರು) ಸೇರಿರುವರು ಇವರ ಮುಖ್ಯೋದ್ದೇಶವು ದೇಶಾಂತರಗಳಿಗೆ ಹೋಗಿ ತಮ್ಮ ಮತವನ್ನು ಪ್ರಚುರಕ್ಕೆ ತರುವುದೂ, ಮತ್ತು ಇತರ ಉದ್ದೇಶಗಳನ್ನು ಸಾರ್ಥಕಪಡಿಸಿಕೊಳ್ಳುವುದಾದರೂ ತಾವು ನೆಲೆಗೊಂಡ ಸ್ಥಳಗಳಲ್ಲೆಲ್ಲಾ ಪಾಠಶಾಲೆಗಳನ್ನು ಸ್ಥಾಪಿಸಿ ಸಾಮಾನ್ಯವಾಗಿ ಎಲ್ಲರಿಗೂ ವಿದ್ಯೆಯು ಲಭಿಸುವಂತೆ ಮಾಡಿರುವರು ಹಿಂದೂಸ್ಥಾನದಲ್ಲಿ ಈ ಪಾದ್ರಿಗಳು ತಮ್ಮ ಬಲದಲ್ಲಿ ನಿರತರಾಗಿ ಅನೇಕರನ್ನು ಕ್ರಿಸ್ತ ಮತಾವಲಂಬಿಗಳನ್ನಾಗಿ ಮಾಡಿರುವರು. ಇದೆಲ್ಲದಕ್ಕೂ ಹಿಂದೂ ಜನಾಂಗವು ತಮ್ಮ ಉಪ ಪಂಗಡದವರನ್ನು ಕೀಳು ಜನರೆಂದೂ ಸ್ಪರ್ಶಾರ್ಹರಲ್ಲವೆಂದೂ ದೂರ ಮಾಡುವುದೇ ಮುಖ್ಯ ಕಾರಣ.

ಹೀಗೆ ಉಪೇಕ್ಷಿಸಲ್ಪಟ್ಟ ಮೂಢ ಜನರಿಗೆ ಈ ಪಾದ್ರಿಗಳು ಬೋಧನೆಯನ್ನು ಮಾಡಿ ಎಲ್ಲರಿಗೂ ವಿದ್ಯೆಯನ್ನು ಕಲಿಸಲು ಮಾರ್ಗವನ್ನು ತೋರಿಸಿ ನಾಗರೀಕತೆಯು ಪ್ರಸರಿಸಲು ಅವಕಾಶವನ್ನುಂಟು ಮಾಡಿ ಅವರ ಏಳಿಗೆಗೆ ಕಾರಣಭೂತರಾಗಿರುವರು [ಸಶೇಷ.]

## ಗೌಡ ವಿದ್ಯಾ ಸಂಘ.

1928ನೇ ಇಸವಿ ಸೆಪ್ಟಂಬರ್ ತಾ 30ರಲ್ಲು ನಡೆಸಿದ ಗೌಡ ವಿದ್ಯಾಭಿವೃದ್ಧಿನಿಧಿ ಸಂಘದ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸ್—

ಹಾಜರು—1 ಮ ಟಿ ಯಂ ಅನಂದಯ್ಯನವರು (ಪ್ರೆಸಿಡೆಂಟರು), 2 ಮ ವಿ ಎ ಪೂವಯ್ಯನವರು (ವೈಸ್ ಪ್ರೆಸಿಡೆಂಟರು), ಮ ಗಳಾದ 3 ಟಿ. ಬಿ. ಅಪ್ಪಯ್ಯನವರು 4 ಯನ್ ಸಂಣ್ಣಯ್ಯನವರು, 5 ವಿ. ಜೋಯಪ್ಪನವರು, 6 ಬಿ ಮುತ್ತಣ್ಣನವರು, 7. ಯಂ ಮಂದಣ್ಣನವರು, 8 ಕೆ ಯಂ. ಪುಟ್ಟಯ್ಯನವರು, 9 ಕೆ. ಪೊನ್ನಪ್ಪನವರು, 10. ಪಿ. ದೇವಪ್ಪನವರು, 11 ಟಿ. ಕಾಳಪ್ಪನವರು, (ಕಮಿಟಿ ಮೆಂಬರುಗಳು) 12. ಪಿ. ಸಣ್ಣಯ್ಯನವರು (ಸಾಧಾರಣ ಮೆಂಬರು)

1 ಕಳೆದ ಕಮಿಟಿ ಮೀಟಿಂಗಿನ ಪ್ರೊಸಿಡಿಂಗ್ಸ್ ಓದಿ ಮಂಜೂರು ಮಾಡಲಾಯಿತು

2. ಕಳೆದ ಜನರಲ್ ಮೀಟಿಂಗಿನ ವರೆಗೆ ಪೋಸ್ಟಾಪೀಸಿನಲ್ಲು ಡಿಪಾಜಿಟ್ಟು ಇದ್ದ ಅಸಲು ಮತ್ತು ಬಡ್ಡಿ

| | |
|---|---|
| ಮೊಬಲಗು | ರೂ 251 4 2 |
| (2) ಜನರಲ್ ಮೀಟಿಂಗಿನಲ್ಲು ಮತ್ತು ಆ ನಂತರ ವಸೂಲಾಗಿ ಅದರಲ್ಲು ಖರ್ಚು ಮಜಾ ಬಾತ ಪೋಸ್ಟಾಫೀಸಿಗೆ ಹಾಕಲು ಸಂಘದ ಖಜಾನ್ಜಿಯವರ ವಶ ಇರುವ ಮೊಬಲಗು | ರೂ 111 2 0 |
| (3) ಪೊನ್ನಟ್ಟಿರ ಸೋಮಯ್ಯನವರಿಂದ ಸಾಲದ ಬಾಬ್ತು ಸಲಿಕೆ ಬಂದದ್ದು | ರೂ. 70 0 0 |
| (4) ಸಂಘದ ಹಳೇ ಬೋರ್ಡಿಂಗ್ ಮನೆಯ ಬಾಡಿಗೆ ವಸೂಲು ಬಂದದು | ರೂ 37 1 9 |
| ಒಟ್ಟು | 472 7 11 |

3 ಜ ೦ ಟ್ಟಿ ಸಂಜಪ್ಪನವರು, ತೊಟಂಬೈಲು ಮುದ್ದಪ್ಪನವರು ಕೆದಂಬಾಡಿ ಸಂಜಪ್ಪನವರು, ಚೆದ್ಯಮನೆ ಕಾಳಪ್ಪನವರು, ಈ ದಿನದ ಮೀಟಿಂಗಿಗೆ ಬಂದು ಅವರ ಬಾಬ್ತು ಸಾಲದ ಬಾಕಿಯನ್ನು ಸಂಘಕ್ಕೆ ಪಾವತಿ ಮಾಡಬೇಕಾಗಿ ಅವರಿಗೆ ಕಾಗದದ ಮೂಲಕ ತಿಳಿಸಿದಾಗ್ಯೂ ಕೂಡ ಅವರು ಮೀಟಿಂಗಿಗೆ ಗೈರ್ಹಾಜರಾಗಿ ಯಾವ ಸಮಜಾಯಿಸಿಯನ್ನು ಕೊಡದೆ ಇರುವದರಿಂದ ಅವರುಗಳ ಮೇಲೆ ದಾವಾ ದಾಖಲು ಮಾಡುವಂತೆ ತೀರ್ಮಾನವಾಯಿತು

4 ಪೊರ್ಯನ ಅಪ್ಪಜ್ಜನವರಿಂದ ಮತ್ತು ದಂಬೆಕೋಡಿ ಬೋಪ್ಪಯ್ಯನವರಿಂದ ಸಂಘಕ್ಕೆ ಬರಬೇಕಾದ ಮೊಬಲಗುಗಳಿಗೆ ಮೆಂಬರು ಬಡ್ಡನ ಮುತ್ತಣ್ಣನವರು, ತೆಕ್ಕಡ ಕುಶಾಲಪ್ಪನವರಿಂದ ಬರಬೇಕಾದ ಬಾಕಿಗೆ ಪ್ರೆಸಿಡೆಂಟರೂ, ಮ ಟಿ ಯಂ ಅನಂದಯ್ಯನವರೂ ಸಹ ಅವರಿಂದ ಸಂಘಕ್ಕೆ ಲಿಖಿತಪಟ್ಟು ಬರೆಸಿಕೊಂಡು ಇನ್ನೊಂದು ಕಮಿಟಿ ಮೀಟಿಂಗಿಗೆ ಲಿಖಿತಪಟ್ಟುಗಳನ್ನು ಹಾಜರು ಪಡಿಸುವಂತೆ ತೀರ್ಮಾನವಾಯಿತು

5 ಬಳ್ಳಡ್ಕ ಮುದ್ದಯ್ಯನವರಿಗಾಗಿ ಅವರ ಮಗ ಬೋಜಪ್ಪನವರು ಅವರಿಂದ ಬರಬೇಕಾದ ಬಾಕಿ ಮೊಬಲಗಿಗೆ ಸಂಘಕ್ಕೆ ಬರೆದ ಕಾಗದ ಓದಲಾಗಿ ಕಾಗದದ ಮೇರೆ ಮೊಬಲಗು ಪಾವತಿ ಬಗ್ಗೆ ವಾಯಿದೆ ಮಂಜೂರು ಮಾಡಿ ಅವರ ಕಾಗದವನ್ನು ಸಂಘದ ರಿಕಾರ್ಡಿನಲ್ಲು ಫೈಲ್ ಮಾಡುವಂತೆ ತೀರ್ಮಾನವಾಯಿತು

6 ಮುಕ್ಕಾಟಿರ ಕರುಂಬಯ್ಯನವರು ಈ ದಿನದ ಮೀಟಿಂಗಿಗೆ ಹಾಜರಾಗಿ ವಿದ್ಯಾರ್ಥಿ ಬೋರ್ಡಿಂಗ್ ಲೆಕ್ಕವನ್ನು ಸಮಜಾಯಿಸಿ ಕೊಡಬೇಕಾಗಿ ಕಾಗದಮೂಲಕ ತಿಳಿಸದಾಗ್ಯೂ ಗೈರ್ಹಾಜರಾಗಿರುವುದರಿಂದಲೂ ಯಾವ ಸಮಜಾಯಿಸಿ ಲೆಕ್ಕ ಕೊಡದೆ ಇರುವದರಿಂದಲೂ ಅವರಿಗೆ ರಿಜಿಸ್ಟರ್ ನೋಟೀಸ್ ಕೊಟ್ಟು ದಾವಾ ದಾಖಲು ಮಾಡುವದೆಂದು ನಿರ್ಣೈಸಲಾಯಿತು

7 ಪೂಜಾರಿರ ಸಣ್ಣಯ್ಯನವರು ಈ ದಿನ ಮೀಟಿಂಗಿಗೆ ಹಾಜರಾಗಿ ಅವರಿಂದ ಬರಬೇಕಾದ ಸಾಲದ ಮೊಬಲಗು ಪಾವತಿ ಬಗ್ಗೆ ವಾಯಿದೆ ಕೊಡಬೇಕಾಗಿ ಕೇಳಿಕೊಂಡ ಮೇರೆ ಸಂಘದ ಲೆಕ್ಕ ಪ್ರಕಾರ ಅವರು ಈ ಮೊಬಲು ಸಲ್ಲಿ ಮಾಡಿ ಸಲ್ಲಿಸಿದಂದಿನಿಂದ 1929ನೇ ಇಸವಿ ಮಾರ್ಚಿ ಮಾಹೆ ಅಖೈರು ವರೆಗೆ ಆಗುವ ಪೂರ್ತಿ ಬಡ್ಡಿಯನ್ನು ಮಾರ್ಚ್ ಅಖೈರಿನಲ್ಲು ಪಾವತಿ ಮಾಡಬೇಕಾಗಿ ತೀರ್ಮಾನಿಸಿ ಅದಕ್ಕೆ ಅವರು ಕೂಡ ಒಪ್ಪಿ ಅವರಿಗೆ ಮಾರ್ಚಿ ವರೆಗೆ ವಾಯಿದೆ ಕೊಟ್ಟು ಅವರ ಮೇಲೆ ದಾಖಲು ಮಾಡುವ ದಾವವನ್ನು ವಾಯಿದೆ ವರೆಗೆ ನಿಲ್ಲಿಸಲು ತೀರ್ಮಾನವಾಯಿತು.

ಸಂಘದ ಹಳೇ ಬೋರ್ಡಿಂಗ್ ಮನೆಯ ಬಾಬ್ತು 1927ನೇ ಜನವರಿಯಿಂದ 1928ನೇ ಜೂನ್ ಅಖೈರ್ ವರೆಗಿನ ಬಾಡಿಗೆ ಪೈಕಿ ವಸೂಲಿಗೆ ಬಾಕಿಯಾಗಿರುವ ರೂ 61—5—0 ಪೈಕಿ 10 ರೂ ಎಂ. ಎ ಪೊನ್ನಪ್ಪನವರಿಂದಲೂ ಬಾಕಿ 51 11 0 ಕುಂಬು ಗೌಡನ ಮುದ್ದಪ್ಪನವರಿಂದಲೂ ವಸೂಲು ಬರತಕ್ಕದೆಂದು ತೀರ್ಮಾನವಾಯಿತು ಇವರುಗಳು ಸದರಿ ಮೊಬಲಗುಗಳನ್ನು ಸಂಘದ ಖಜಾನ್ಜಿಯವರಿಗೆ ಕೂಡಲೆ ಪಾವತಿ ಮಾಡುವದು

ಎಂ. ಎ. ಪೊನ್ನಪ್ಪ,
ಸೆಕ್ರೆಟರಿ

## ಮಹಾತ್ಮಗಾಂಧಿಯವರ ಸ್ವಚರಿತ್ರೆ

### ೧ನೇ ಭಾಗದಲ್ಲಿ ೧೧ನೇ ಪ್ರಕರಣ

### ಗಿರಿಮಿಟಿಯರ ವಿದೇಶ ಯಾತ್ರೆಯನ್ನು ನಿಲ್ಲಿಸುದು

ಈ ರೀತಿಯಾಗಿ ಆಶ್ರಮವು ಪ್ರೊಬ್ಬನೊಂದಿಗೆ ನಿಲ್ಲಲಿಯೇ ಅಂತರಂಗ ಮತ್ತು ಬಾಹ್ಯ ವಿಘ್ನಗಳನ್ನು ತಡೆಯಬೇಕಾಯಿತ. ಇದನ್ನು ಒಂದು ಕ್ಷಣ ಬಿಟ್ಟು ಈ ಸಮಯದಲ್ಲಿ ನನ್ನ ಗಮನಕ್ಕೆ ಬಂದ ಒಂದು ವಿಷಯವನ್ನು ಸಂಕ್ಷೇಪವಾಗಿ ವಿವರಿಸುತ್ತೇನೆ.

ಕರಾರು ಕೂಲಿಗಾರರೆಂದರೆ ಐದು ವರ್ಷ ಅಥವಾ ಕಡಮೆ ಕಾಲ ಕೆಲಸಮಾಡುತ್ತೇವೆಂದು ಒಪ್ಪಿ ಭರತಖಂಡದಿಂದ ಹೋದವರು. ೧೯೧೪ನೆಯ ಇಸವಿಯಲ್ಲಿ ಆದ ಸ್ಮಟ್ — ಗಾಂಧಿ ಒಪ್ಪಂದದ ಪ್ರಕಾರ ಕರಾರು ಕೂಲಿಗಾಗಿ ನೇಟಾಲನ್ನು ಪ್ರವೇಶಿಸಿದವರ ಮೇಲಿನ ಮೂರು ಪೌಂಡು ತೆರಿಗೆಯು ತೆಗೆದು ಹಾಕಲ್ಪಟ್ಟಿದ್ದಿತಾದರೂ ಭರತಖಂಡದಿಂದ ವಿದೇಶಕ್ಕೆ ಜೀವನಕ್ಕಾಗಿ ಹೋಗಿ ನೆಲೆಸುವವರ ವಿಷಯವಾಗಿ ತಿದ್ದುಪಾಟು ಆವಶ್ಯಕವಾಗಿದ್ದಿತು. ೧೯೧೬ನೆಯ ಮಾರ್ಚಿಯಲ್ಲಿ ಭಾರತಭೂಷಣ ಪಂಡಿತ ಮದನಮೋಹನ ಮಾಳವೀಯರವರು ಕರಾರು ಕೂಲಿತನವನ್ನು ತೆಗೆದು ಹಾಕಿಬಿಡಬೇಕೆಂಬುದಾಗಿ ಕೇಂದ್ರ ಶಾಸನ ಮಂಡಲಿಯಲ್ಲಿ ಗೊತ್ತುವಳಿಯನ್ನು ತಂದರು. ಲಾರ್ಡ್ ಹಾರ್ಡಿಂಜರು ಇದನ್ನು ಸ್ವೀಕರಿಸುತ್ತಾ ಈ ಪದ್ಧತಿಯನ್ನು ಕಾಲಕ್ರಮೇಣ ನಿರ್ಮೂಲಮಾಡಲು ಸಾರ್ವಭೌಮ ಸರಕಾರದವರು ಮಾತುಕೊಟ್ಟಿದ್ದಾರೆ ಎಂದು ತಿಳಿಸಿದರು. ಈ ರೀತಿಯ ಅಸ್ಪಷ್ಟವಾದ ಭರವಸೆಯ ಮಾತಿನಿಂದ ಭರತಖಂಡವು ತೃಪ್ತಿಪಟ್ಟುಕೊಳ್ಳಕೂಡದೆಂದೂ ಕರಾರು ಕೂಲಿತನವನ್ನು ಒಡನೆಯೇ ತೆಗೆದುಹಾಕಲು ಚಳವಳಿ ನಡೆಸಬೇಕೆಂದೂ ನನಗೆ ತೋರಿತು. ಭರತಖಂಡವು ಕೇವಲ ಔದಾಸೀನ್ಯದಿಂದ ಈ ಪದ್ಧತಿಯನ್ನು ಇರಗೊಟ್ಟಿದ್ದಿತು. ಈ ಪದ್ಧತಿಗಾಗಿ ಚಳವಳಿ ನಡೆಸಿ ಸಫಲರಾಗುವ ಕಾಲವು ಬಂದಿತೆಂದು ನಾನು ಅರಿತೆನು. ಮುಂದಾಳುಗಳಲ್ಲಿ ಕೆಲವರನ್ನು ನಾನು ಭೇಟಿಮಾಡಿದೆನು. ಈ ಪದ್ಧತಿಯನ್ನು ಒಡನೆಯೇ ತೆಗೆದುಹಾಕಬೇಕೆಂದು ಪ್ರತಿಭಟಿಸುವ [illegible] ಹಮತವಿದ್ದಿತೆಂಬುದನ್ನು ನಾನು ಕಂಡೆನು. ಇದು ಸತ್ಯಾಗ್ರಹಕ್ಕೆ ಒಳ್ಳೆ ವಿಷಯವಾಗಬಹುದೇ? ಎಂಬುದರಲ್ಲಿ ನನಗೆ ಸಂಶಯವಿರಲಿಲ್ಲ. ಆದರೆ ನಡೆಸುವ ರೀತಿಯು ನನಗೆ ಗೊತ್ತಿರಲಿಲ್ಲ.

ಇದರ ಮಧ್ಯೆ ವೈಸ್‍ರಾಯರು ಕಾಲಕ್ರಮೇಣ ನಿರ್ಮೂಲಮಾಡುವುದು ಎಂಬುದರ ಅರ್ಥವನ್ನು ವಿಶದಪಡಿಸಿದ್ದರು. ಬೇರೆ ಏರ್ಪಾಟನ್ನು ಮಾಡಲು ಬೇಕಾದಷ್ಟು ಕಾಲವು ಕಳೆದ ಮೇಲೆ ಈ ಪದ್ಧತಿಯನ್ನು ತೆಗೆದು ಹಾಕುವುದು ಎಂಬುದೇ ಇದರ ಅರ್ಥವಾಗಿದ್ದಿತು.

ಆದುದರಿಂದ ೧೯೧೭ನೆಯ ಫೆಬ್ರವರಿಯಲ್ಲಿ ಪಂಡಿತ ಮಾಳವೀಯರು ಈ ಪದ್ಧತಿಯನ್ನು ಒಡನೆಯೇ ತೆಗೆದುಹಾಕಬೇಕೆಂಬುದಾಗಿ ಶಾಸನವನ್ನು ತರಲು ಅಪ್ಪಣೆಯನ್ನು ಕೇಳಿದರು. ಲಾರ್ಡ್ ಚೆಮ್ಸ್‌ಫರ್ಡರು ಅಪ್ಪಣೆಯನ್ನು ಕೊಡಲಿಲ್ಲ. ಆದುದರಿಂದ ಅಖಿಲ ಭಾರತದಲ್ಲಿ ಚಳವಳಿಯನ್ನು ಹೂಡುವುದಕ್ಕಾಗಿ ಪ್ರಯಾಣ ಬೆಳೆಸಲು ನನಗೆ ಸಮಯವೊದಗಿತು.

ಇದನ್ನು ಆರಂಭಿಸುವುದಕ್ಕಿಂತ ಮುಂಚೆ ವೈಸ್‍ರಾಯರನ್ನು ಕಾಣುವುದು ಉಚಿತವೆಂದೆಣಿಸಿ ಅವರಿಗೆ ನನ್ನ ಅಭಿಮತವನ್ನು ತಿಳಿಸಲು ಅವರು ಒಪ್ಪಿದರು. ಮಿ (ಈಗ ಸರ್) ಜಾನ್ ಮ್ಯಾಫಿಯವರು ಅವರ ಖಾಸಗೀ ಕಾರ್ಯದರ್ಶಿಗಳಾಗಿದ್ದರು. ಅವರೊಡನೆ ನನಗೆ ಗಾಢಸಂಬಂಧವುಂಟಾಯಿತು. ಲಾರ್ಡ್ ಚೆಮ್ಸ್‌ಫರ್ಡರೊಡನೆ ನಡೆದ ಸಂಭಾಷಣೆಯು ತೃಪ್ತಿಕರವಾಗಿದ್ದಿತು. ಅವರು ನಿಶ್ಚಯಪೂರ್ವಕವಾಗಿ ಏನನ್ನೂ ಹೇಳದಿದ್ದರೂ ಸಹಾಯಮಾಡುವೆನೆಂದು ಮಾತುಕೊಟ್ಟರು.

ನಾನು ನನ್ನ ಪ್ರಯಾಣವನ್ನು ಮುಂಬಯಿಯಿಂದ ಪ್ರಾರಂಭಿಸಿದೆನು. ಮಿ. ಜಹಾಂಗೀರ್ ಪಟೇಲರು ಇಂಪೀರಿಯಲ್ ಸಿಟಿಜನ್‌ಶಿಪ್ ಅಸೋಸಿಯೇಷನ್ (ಅಧಿರಾಜ್ಯ ಪೌರತ್ವ ಮಂಡಲಿ)ನ ಹೆಸರಿನಲ್ಲಿ ಸಭೆಗೂಡಿಸುವ ಭಾರವನ್ನು ಹೊತ್ತರು. ಆ ಸಂಸ್ಥೆಯ ಕಾರ್ಯಕಾರಿಣೀ ಸಮಿತಿಯ ಸಭೆಯು ಮುಂದಿರಬೇಕಾದ ಪ್ರಸ್ತಾಪಗಳನ್ನು ನಿರ್ಧರಿಸುವುದಕ್ಕಾಗಿ ಮೊದಲು ಸೇರಿತು. ಡಾ. (ಈಗ ಸರ್) ಸ್ಟ್ಯಾನ್ಲೀ ರೀಡ್, ಶ್ರೀ (ಈಗ ಸರ್) ಲಲ್ಲೂಭಾಯಿ ಶ್ಯಾಮಲದಾಸ್, ಶ್ರೀ ನಟರಾಜನ್, ಮಿ. ಪೆಟಿಟ್ ಇವರು ಸಮಿತಿಯ ಕೂಟದಲ್ಲಿದ್ದರು. ಸರಕಾರದವರು ಎಷ್ಟು ದಿನಗಳೊಳಗಾಗಿ ಕರಾರು ಕೂಲಿಯ ಪದ್ಧತಿಯನ್ನು ನಿಲ್ಲಿಸಬೇಕೆಂಬ ವಿಚಾರವಾಗಿ ಚರ್ಚೆಯು ಪ್ರಮುಖವಾಗಿ ನಡೆಯಿತು. ಈ ಸಂಬಂಧವಾಗಿ ಮೂರು ಸೂಚನೆಗಳಿದ್ದುವು. ಅದನ್ನು ಜಾಗ್ರತೆಯಾಗಿ ನಿರ್ಮೂಲಮಾಡಬೇಕು, ಜುಲೈ ೩೧ ರೊಳಗಾಗಿ ನಿರ್ಮೂಲಮಾಡಬೇಕು, ಒಡನೆಯೇ ತೆಗೆದುಹಾಕಬೇಕು ಎಂದು. ನಿಶ್ಚಿತ ತಾರೀಖಿನೊಳಗಾಗಿ ನಿರ್ಮೂಲಮಾಡಬೇಕೆಂಬ ಸೂಚನೆ [illegible]ಪರವಾಗಿ ನನ್ನ ಅಭಿಮತವಿದ್ದಿತು. ಏಕೆಂದರೆ ಆ ದಿನ[illegible]ಗಾಗಿ ಸರಕಾರದವರು ನಮ್ಮ ಅಪೇಕ್ಷೆಯನ್ನು ನೆರವೇರಿಸದಿದ್ದರೆ ನಾವು ಮುಂದೆ ಮಾಡಬೇಕಾದುದೇನೆಂಬುದನ್ನು [illegible] ಸಬಹುದಾಗಿದ್ದಿತು. ಸರ್ ಲಲ್ಲೂಭಾಯಿಯವರು [illegible]ಯೇ ನಿರ್ಮೂಲಮಾಡಬೇಕೆಂಬ ಸೂಚನೆಯನ್ನು ಅ[illegible]ದಿಸಿದರು. ಒಡನೆಯೇ ಎಂದರೆ ಜುಲೈ ೩೧ಕ್ಕಿಂತ ಮುಂಚೆಯಾಗುವುದೆಂದು ಅವರು ಹೇಳಿದರು. 'ಜನಸಾಮಾನ್ಯಕ್ಕೆ ಒಡನೆಯೇ ಎಂಬುದರ ಅರ್ಥವಾಗಲಾರದು. ಅವರಿಂದ [illegible] ಕೆಲಸಮಾಡಿಸಬೇಕಾದರೆ ಅವರಿಗೆ ನಿಷ್ಕೃಷ್ಟವಾದ ಒಂದು ಪದವನ್ನು ಉಪಯೋಗಿಸಬೇಕು. ಒಡನೆಯೇ ಎಂಬುದನ್ನು ಪ್ರತಿಯೊಬ್ಬರೂ ತಮತಮಗೆ ತೋರಿದಂತೆ — ಸರಕಾರದವರು ಒಂದು ರೀತಿಯಲ್ಲಿ, ಜನರು ಒಂದು ರೀತಿಯಲ್ಲಿ — ಅರ್ಥಮಾಡುವರು. ಜುಲೈ ೩೧ ಎಂಬುದರಲ್ಲಿ ಯಾವ ಅಪಾರ್ಥಕ್ಕೂ ಅವಕಾಶವಿರುವುದಿಲ್ಲ. ಆ ದಿನದೊಳಗಾಗಿ ಏನೂ ಆಗದಿದ್ದರೆ ನಾವು ಮುಂದಿನ ಕ್ರಮವನ್ನು ಆರಂಭಿಸಬಹುದು' ಎಂದು ನಾನು ವಿವರಿಸಿದೆನು. ಈ ವಾದದ ಔಚಿತ್ಯವನ್ನು ಡಾ. ರೀಡರು ಕಂಡರು. ಕಡೆಗೆ ಸರ್ ಲಲ್ಲೂಭಾಯಿಯವರೂ ಒಪ್ಪಿದರು. ಕರಾರು ಕೂಲಿ ಪದ್ಧತಿಯನ್ನು ತೆಗೆದುಹಾಕಿರುವುದನ್ನು ಜುಲೈ ೩೧ನೆಯ ತಾರೀಖಿನೊಳಗಾಗಿ ಸರಕಾರದವರು ಪ್ರಕಟಿಸಬೇಕೆಂದು ನಾವು ನಿರ್ಧರಿಸಿದೆವು. ಸಾರ್ವಜನಿಕ ಸಭೆಯಲ್ಲಿ ಈ ಗೊತ್ತುವಳಿಗೆ ಒಪ್ಪಿಗೆಯು ದೊರೆಯಿತು. ತರುವಾಯದಲ್ಲೆಲ್ಲಾ ಇದೇ ಅರ್ಥದ ಗೊತ್ತುವಳಿಗಳನ್ನು ಸಭೆಗಳು ಅಂಗೀಕರಿಸಿದವು.

ಶ್ರೀಮತಿ ಜಾಯಿಜೀ ಪಟೇಲರ ಪ್ರಯತ್ನದಿಂದ ವೈಸ್‍ರಾಯರನ್ನು ಭೆಟ್ಟಿಮಾಡಲು ಒಂದು ಸ್ತ್ರೀಮಂಡಲಿಯನ್ನೇರ್ಪಡಿಸುವುದರಲ್ಲಿ ಶಕ್ತ್ಯ ನುಸಾರ ಪ್ರಯತ್ನವನ್ನು ಮಾಡಲಾಯಿತು. ಈ ಮಂಡಲಿಯಲ್ಲಿದ್ದ ಮುಂಬಯಿ ಮಹಿಳೆಯರಲ್ಲಿ ನನಗೆ ಲೇಡಿ ತಾತಾ ಮತ್ತು ದಿವಂ ದಿಲ್‍ಷಾದ ಬೇಗಂ ಇವರ ಹೆಸರು ಜ್ಞಾಪಕವಿದೆ. ಈ ಮಂಡಲಿಯು ವೈಸ್‍ರಾಯರನ್ನು ನೋಡಿದುದು ಸಫಲವಾಯಿತು. ವೈಸ್‍ರಾಯರು ಇವರಿಗೆ ಆಶಾಜನಕವಾದ ಉತ್ತರವನ್ನು ಕೊಟ್ಟರು.

ನಾನು ಕರಾಚಿ ಕಲ್ಕತ್ತೆ ಮುಂತಾದ ಅನೇಕ ಸ್ಥಳಗಳಿಗೆ ಹೋದೆನು. ಎಲ್ಲಾ ಕಡೆಗಳಲ್ಲಿಯೂ ದೊಡ್ಡ ಸಭೆಗಳು ಕೂಡಿದುವು. ಎಲ್ಲ ಕಡೆಗಳಲ್ಲಿಯೂ ಉತ್ಸಾಹವು ತುಂಬಿ ತುಳುಕಾಡುತ್ತಿದ್ದಿತು. ಚಳವಳಿಯು ಪ್ರಾರಂಭವಾದಾಗ ನಾನು ಇಷ್ಟನ್ನು ನಿರೀಕ್ಷಿಸಿರಲಿಲ್ಲ.

ಆ ಕಾಲದಲ್ಲಿ ನಾನು ಒಬ್ಬಂಟಿಗನಾಗಿ ಪ್ರಯಾಣ ಮಾಡುತ್ತಿದ್ದೆನು. [illegible] ಎದುರಿನ ನನಗೆ ಅಪೂರ್ವ ಅನುಭವಗಳು [illegible] ಸಿ.ಐ.ಡಿ. ಪೋಲೀಸರು ನನ್ನನ್ನು ಹಿಂಬಾಲಿಸುತ್ತಿದ್ದರು. ನಾನು ಅವರಿಂದ ಮುಚ್ಚಿಟ್ಟುಕೊಳ್ಳಬೇಕಾದುದೇನೂ ಇರಲಿಲ್ಲವಾದುದರಿಂದ ನನ್ನನ್ನು [illegible]ಪಡಿಸುತ್ತಿರಲಿಲ್ಲ. ನಾನು ಅವರನ್ನು ತೊಂದರೆಪಡಿಸುತ್ತಿರಲಿಲ್ಲ. ಆಗ ನನಗೆ ಮಹಾತ್ಮಾ ಎಂಬ ಬಿರುದು ಬಂದಿರಲಿಲ್ಲ. ಆದರೆ ನನ್ನ ಪರಿಚಯವುಳ್ಳ ಕಡೆಗಳಲ್ಲಿ ಈ ಕೂಗು ಜೀವಂತ ಸಾಮಾನ್ಯವಾಗಿದ್ದಿತು.

ಒಂದು ಸಲ ಗೂಢಚಾರರು ಅನೇಕ ನಿಲ್ದಾಣಗಳಲ್ಲಿ ನನ್ನ ಟಿಕೇಟನ್ನು ನೋಡಿ ಅದರ ಸಂಖ್ಯೆಯನ್ನು ಬರೆದುಕೊಂಡರು. ನಾನಾದರೋ ಅವರು ಕೇಳಿದ ಪ್ರಶ್ನೆಗಳಿಗೆಲ್ಲಾ ಸಿದ್ಧವಾಗಿ ಉತ್ತರಕೊಟ್ಟೆನು. ನನ್ನೊಡನೆ ಪ್ರಯಾಣಮಾಡುತ್ತಿದ್ದವರು ನನ್ನನ್ನು ಸಾಧುವೆಂದೋ ಫಕೀರನೆಂದೋ ಎಣಿಸಿದ್ದರು. ನನ್ನನ್ನು ಪ್ರತಿನಿಲ್ದಾಣದಲ್ಲಿಯೂ ತೊಂದರೆಪಡಿಸುತ್ತಿದ್ದುದನ್ನು ನೋಡಿ ಅವರು ರೇಗಿಕೊಂಡು ಗೂಢಚಾರರನ್ನು ಬೈದು 'ಏಕೆ ನಿಷ್ಕಾರಣ ಈ ಸಾಧುವನ್ನು ತೊಂದರೆಗೊಳಿಸುತ್ತೀರಿ?' ಎಂದು ಕೇಳಿದರು. ನನಗೆ 'ನೀವು ಈ ದುಷ್ಟರಿಗೆ ಟಿಕೇಟನ್ನು ತೋರಿಸಬೇಡಿ' ಎಂದರು.

ನಾನು ಸಾವಕಾಶವಾಗಿ ಅವರಿಗೆ 'ಟಿಕೇಟನ್ನು ತೋರಿಸಲು ನನಗೆ ಏನೂ ತೊಂದರೆ ಇರುವುದಿಲ್ಲ. ಅವರ ಕರ್ತವ್ಯವನ್ನು ಮಾಡುತ್ತಿದ್ದಾರೆ' ಎಂದೆನು. ಆದರೆ ಅವರಿಗೆ ಇದರಿಂದ ಸಮಾಧಾನವಾಗಲಿಲ್ಲ. ಅವರು ನನ್ನ ಪಕ್ಷವನ್ನು ವಹಿಸಿ [illegible] ರೀತಿಯಾಗಿ ದುರ್ಜನರಿಗೆ ಕಿರುಕುಳಕೊಡುವುದನ್ನು ಖಂಡಿಸಿದರು.

ಈ ಗೂಢಚಾರರಿಂದುಂಟಾದ ತೊಂದರೆಯು ಲೆಕ್ಕಕ್ಕೇ ಬರುವಂತಿರಲಿಲ್ಲ. ಮೂರನೆಯ ದರ್ಜೆಯಲ್ಲಿ ಪ್ರಯಾಣ ಮಾಡುವುದೇ ನನಗೆ ನಿಜವಾದ ತೊಂದರೆಯಾಗಿದ್ದಿತು. ಲಾಹೋರಿನಿಂದ ದಿಲ್ಲಿಗೆ ಹೋಗುವಾಗ ನನ್ನ ಅನುಭವಗಳು ಎಲ್ಲಕ್ಕಿಂತ ಕಠಿಣವಾಗಿಯೂ ಕಟುವಾಗಿಯೂ ಇದ್ದುವು. ನಾನು ಕರಾಚಿಯಿಂದ ಕಲ್ಕತ್ತೆಗೆ ಲಾಹೋರಿನ ಮೂಲಕ ಹೋಗುತ್ತಿದ್ದೆನು. ಲಾಹೋರಿನಲ್ಲಿ ನಾನು ಗಾಡಿಯನ್ನು ಬದಲಾಯಿಸಬೇಕಾಗಿದ್ದಿತು. ರೈಲಿನಲ್ಲಿ ಸ್ವಲ್ಪ ಸ್ಥಳವೂ ದೊರೆಯುವುದು ಅಸಾಧ್ಯವಾಯಿತು. ಗಾಡಿಗಳು ತುಂಬಿ ಬಿಟ್ಟಿದ್ದುವು. ಒಳಕ್ಕೆ ಹೋಗುವವರು ಕೇವಲ ತಮ್ಮ ದೇಹಬಲವನ್ನು ಉಪಯೋಗಿಸಿ ನುಗ್ಗುತ್ತಿದ್ದರು. ಬಾಗಿಲು ಬೀಗಹಾಕಿದ್ದರೆ ಕಿಟಿಕಿಯಲ್ಲಿ ನುಸುಳುತ್ತಿದ್ದರು. ಸಭೆಗೂಡುವುದೆಂದು ಗೊತ್ತಾದ ದಿನ ನಿಯಮಾಗಿ ನಾನು ಕಲ್ಕತ್ತೆಗೆ ಹೋಗಬೇಕಾಗಿದ್ದಿತು. ಈ ಗಾಡಿಯು ತಪ್ಪಿದರೆ ನಾನು ಅಲ್ಲಿಗೆ ಹೊತ್ತಿಗೆ ಸರಿಯಾಗಿ ಹೋಗುವುದಕ್ಕಾಗುತ್ತಿರಲಿಲ್ಲ. ನನಗೆ ಗಾಡಿಯಲ್ಲಿ ಸ್ಥಳಕೊಡುವ ಆಸೆಯನ್ನು ಇನ್ನೇನು ಬಿಟ್ಟಿದ್ದೆನೆಂದು ಹೇಳಬಹುದು. ನನಗೆ ಯಾರೂ ಸ್ಥಳವನ್ನು ಕೊಡಲೊಲ್ಲರು. ಅಷ್ಟು ಹೊತ್ತಿಗೆ ಸರಿಯಾಗಿ ಒಬ್ಬ ಕೂಲಿಯವನು ನನ್ನ ಪರಿಸ್ಥಿತಿಯನ್ನು ನೋಡಿ ನನ್ನ ಬಳಿಗೆ ಬಂದು 'ನನಗೆ ಹನ್ನೆರಡಾಣೆ ಕೊಡಿ. ನಾನು ನಿಮಗೆ ಎಡೆಮಾಡಿಕೊಡುತ್ತೇನೆ' ಎಂದನು. 'ನೀನು ನನಗೆ ಸ್ಥಳವನ್ನು ಕೊಡಿಸಿದ್ದೇ ಆದರೆ ನಿನಗೆ ಅಗತ್ಯವಾಗಿ ಹನ್ನೆರಡಾಣೆ ಕೊಡುತ್ತೇನೆ' ಎಂದು ನಾನು ಅವನಿಗೆ ಹೇಳಿದೆನು. ಆ ಯುವಕನು ಪ್ರಯಾಣಿಕರನ್ನು ಸ್ಥಳಕ್ಕಾಗಿ ಬೇಡುತ್ತ ಗಾಡಿಯಿಂದ ಗಾಡಿಗೆ ಹೋದನು. ಆದರೆ ಯಾರೂ ಅವನ ಮಾತನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಗಾಡಿಯು ಹೊರಟಿತೆಂಬಷ್ಟರಲ್ಲಿ ಕೆಲವರು ಪ್ರಯಾಣಿಕರು 'ಇಲ್ಲಿ ಜಾಗವಿಲ್ಲ. ಆದರೂ ನೀನು ಇವನ್ನು ಇಲ್ಲಿ ತಳ್ಳಬಹುದು. ಅವರು ನಿಂತುಕೊಳ್ಳಬೇಕಾಗುತ್ತದೆ' ಎಂದರು. ಕೂಲಿಯ ಯುವಕನು 'ಏನು ಹೇಳುತ್ತೀರಿ?' ಎಂದು ಕೇಳಿದನು. ನಾನು ಒಡನೆಯೇ ಒಪ್ಪಲು ಅವನು ನನ್ನನ್ನು ಕಿಟಕಿಯೊಳಗೆ ನೂಕಿದನು. ಹೀಗೆ ನಾನು ಗಾಡಿಯೊಳಗೆ ಹೋದೆನು. ಕೂಲಿಯು ಹನ್ನೆರಡಾಣೆಯನ್ನು ಸಂಪಾದಿಸಿದನು.

ಆ ರಾತ್ರಿಯು ಗಂಡಾಂತರವಾಗಿದ್ದಿತು. ಇತರ ಪ್ರಯಾಣಿಕರು ಹಾಗೂ ಹೀಗೂ ಕುಳಿತಿದ್ದರು. ನಾನು ಮೇಲಿನ ಹಲಗೆಯನ್ನು ಹಿಡಿದುಕೊಂಡು ಎರಡು ತಾಸು ನಿಂತಿದ್ದೆನು. ಈ ಮಧ್ಯೆ ಪ್ರಯಾಣಿಕರಲ್ಲಿ ಕೆಲವರು ನನ್ನನ್ನು ಸದಾ ಪೀಡಿಸುತ್ತಿದ್ದರು. 'ನೀವು ಇನ್ನೂ ಯಾಕೆ ಕುಳಿತುಕೊಂಡಿಲ್ಲ?' ಎಂದು ಕೇಳಿದರವರು. ಸ್ಥಳವಿಲ್ಲವೆಂದು ಅವರಿಗೆ ಹೇಳಲು ನಾನು ಪ್ರಯತ್ನಪಟ್ಟೆನು. ಅವರು ಮೇಲಿನ ಹಲಗೆಯಲ್ಲಿ ಕಾಲುಚಾಚಿಕೊಂಡು ಮಲಗಿದ್ದರೂ ನಾನು ನಿಂತಿರುವುದನ್ನು ಅವರು ಸಹಿಸಲೊಲ್ಲರು. ನನ್ನನ್ನು ಪೀಡಿಸಿ ಅವರು ಬೇಸರಪಡಲಿಲ್ಲ. ಅವರಿಗೆ ವಿನಯವಾಗಿ ಉತ್ತರಕೊಡಲು ನಾನೂ ಬೇಸರಗೊಳ್ಳಲಿಲ್ಲ. ಇದರಿಂದ ಅವರು ಕಟ್ಟಕಡೆಗೆ ಶಾಂತರಾದರು. ಅವರಲ್ಲಿ ಕೆಲವರು ನನ್ನ ಹೆಸರನ್ನು ಕೇಳಿದರು. ನಾನು ಹೇಳಲು ಅವರು ನಾಚಿಕೆಗೊಂಡರು. ನನ್ನ ಕ್ಷಮೆಯನ್ನು ಬೇಡಿ ನನಗೆ ಸ್ಥಳವನ್ನು ಬಿಟ್ಟುಕೊಟ್ಟರು. ಹೀಗೆ ತಾಳ್ಮೆಯು ಸಫಲವಾಯಿತು. ನನಗೆ ಅತ್ಯಂತ ಆಯಾಸವಾಗಿದ್ದಿತು. ತಲೆ ತಿರುಗುತ್ತಿದ್ದಿತು. ನನಗೆ ಸಹಾಯವು ಅತ್ಯಗತ್ಯವಾದಾಗ ಸಮಯಕ್ಕಾಗಿ ದೇವರು ನನಗೆ ನೆರವಿತ್ತನು.

ಈ ರೀತಿಯಾಗಿ ನಾನು ಹಾಗೂ ದಿಲ್ಲಿಯನ್ನೂ ಅಲ್ಲಿಂದ ಕಲ್ಕತ್ತೆಯನ್ನೂ ಸೇರಿದೆನು. ಕಲ್ಕತ್ತೆಯ ಸಭೆಗೆ ಅಧ್ಯಕ್ಷರಾಗಿದ್ದ ಕಾಸಿಂಬಜಾರಿನ ಮಹಾರಾಜರ ಅತಿಥಿಯಾಗಿ ನಿಂತೆನು. ನಾನು ಕರಾಚಿಯಲ್ಲಿದ್ದಂತೆಯೇ ಇಲ್ಲಿಯೂ ಅಪಾರ ಉತ್ಸಾಹವಿದ್ದಿತು. ಇಲ್ಲಿಯೂ [illegible]

ಜುಲೈ ೩೧ಕ್ಕೆ ಮುಂಚೆಯೇ ಸರಕಾರದವರು ಭರತಖಂಡದಿಂದ ಕರಾರು ಕೂಲಿಗಾರರ ವಲಸೆ ಹೋಗುವಿಕೆಯನ್ನು ನಿಲ್ಲಿಸಲ್ಪಟ್ಟಿತೆಂದು ಸಾರಿದರು.

ಈ ಪದ್ಧತಿಯನ್ನು ವಿರೋಧಿಸಿ [illegible] ಮೊದಲನೆ ಅರ್ಜಿಯನ್ನು ಬರೆದುದು ೧೮೯೪ರಲ್ಲಿ ಆಗ ನಾನು (ಸರ್ ಡಬ್ಲ್ಯು. ಡಬ್ಲ್ಯು. ಹಂಟರರು ಕರೆದಂತೆ) ಈ ಅರೆಗುಲಾಮಗಿರಿಯು ಎಂದಾದರೂ ಒಂದು ದಿನ ನಿರ್ಮೂಲವಾಗುವುದೆಂದು ಆಶಿಸಿದ್ದೆನು.

೧೮೯೪ರಲ್ಲಿ ಹೂಡಿದ ಈ ಚಳವಳಿಗೆ ಎಷ್ಟು ಜನ ನೆರವಿತ್ತರು. ಆದರೂ ಈ ವಿಷಯದ ಹಿಂದೆ ಸತ್ಯಾಗ್ರಹವಿದ್ದಿತೆಂದು ನಾನು ಹೇಳದಿರಲಾರೆನು.

ಈ ಚಳವಳಿಯನ್ನೂ ಇದರಲ್ಲಿ ಭಾಗಿಗಳಾದವರನ್ನೂ ಕುರಿತ ವಿವರಕ್ಕೆ ವಾಚಕರು ದಕ್ಷಿಣ ಆಫ್ರಿಕದ ಸತ್ಯಾಗ್ರಹದ ಇತಿಹಾಸವನ್ನು ಓದಬೇಕು.

---

## ಪ್ರಕಟನೆ.

ಕುಟ್ಟದಿಂದ ವೀರಾಜಪೇಟೆಗೂ ಹುದಿಕೇರಿಯಿಂದ ವೀರಾಜಪೇಟೆಗೂ ಮತ್ತು ವೀರಾಜಪೇಟೆಯಿಂದ ವಾಪಸು ಕುಟ್ಟಕ್ಕೂ ಮತ್ತು ಹುದಿಕೇರಿಗೂ ಸಹ ಹೋಗತಕ್ಕ ಬಸ್ಸುಗಳ ವೀರಾಜಪೇಟೆಯ ಏಜನ್ಸಿಯು ಈ ವರೆಗೆ ಮಿ. ತೊಂಡಚ್ಚೀರ ಚೆಂಗಪ್ಪನವರಿಗೆ ಕೊಟ್ಟದ್ದು ಸರಿಯಷ್ಟೆ. ಆದರೆ ಈ ತಾರೀಖು ಆಗಾಯಿತು ಸದರಿ ಚೆಂಗಪ್ಪನವರನ್ನು ವಜಾಮಾಡಿ ವೀರಾಜಪೇಟೆ ಏಜಂಟರಾಗಿ ಮಿ. ಪಟ್ಟಿಯಂಡ ಉತ್ತಯ್ಯನವರನ್ನು ಏರ್ಪಾಡು ಮಾಡಿರುವ ಸಂಗತಿ ಎಲ್ಲರ ತಿಳುವಳಿಕೆಬಗ್ಗೆ ಈ ಮೂಲಕ ಪ್ರಸಿದ್ಧಪಡಿಸಿದೆ. ಈ ತಾರೀಖು ಆಗಾಯಿತು ಸದರಿ ಸರ್ವಿಸಿನ ಟಿಕೇಟುಗಳನ್ನು ಮಿ. ಪಟ್ಟಿಯಂಡ ಉತ್ತಯ್ಯನವರಿಂದ ಹೊಂದಿಕೊಳ್ಳಬೇಕಾಗಿ ಕೇಳಿಕೊಳ್ಳಲಾಗಿದೆ. ಸದರಿ ಬಸ್ಸಿನಲ್ಲಿ ಪ್ರಯಾಣಮಾಡುವ ಹೆಂಗಸರ ಅನುಕೂಲಕ್ಕೆ ಸರಿಯಾಗಿ ವಿಶ್ರಾಂತಿ ತೆಗೆದುಕೊಳ್ಳಲು ವೀರಾಜಪೇಟೆ ಮಿ. ತಮ್ಮಂಗಡ ಪಿಳ್ಳೆಯವರ ಹಳೇ ಎಜೆಂಡಿ ಶಾಪಿನ ಎಂದರೆ ಹಾಲಿ ಮಿ. ಉತ್ತಯ್ಯನವರು ಇಟ್ಟಿರುವ ಅಮ್ಯುನಿಶನ್ ಶಾಪಿನ (Ammunition Shop) ಮಹಡಿಯ ಮೇಲೆಯೂ, ಗಂಡಸರಿಗೆ ಅಮ್ಯುನಿಶನ್ ಶಾಪಿನಲ್ಲಿ ಸಹ ಅನುಕೂಲಪಡಿಸಲಾಗುವದು.

ಮೇಲೆ ಸೂಚಿಸಿದ ಬಸ್ಸುಗಳಿಗೆ ಇನ್ನು ಮುಂದೆ ವೀರಾಜಪೇಟೆ ಕ್ಲಾಕ್ ಟವರ್ ಬಳಿ (Clock Tower) ಇರುವ ಗಣಪತಿ ದೇವಸ್ಥಾನದ ಎದುರಿನಲ್ಲಿ ಮತ್ತು ಮಿ. ಉತ್ತಯ್ಯನವರ ಅಮ್ಯುನಿಶನ್ ಶಾಪಿನಲ್ಲಿ ಸಹ ಟಿಕೇಟುಗಳು ಕೊಡಲ್ಪಡುವವು.

**ಪೊನ್ನಂಪೇಟೆ,** ಸಿ. ರಾಮ ನಂಬಿಯಾರ್,

7—9—28. ಮೇನೇಜರು,

4—3 ಯುನೈ ಯುನೈ. ಮೋಟಾರು ಸರ್ವಿಸ್

---

## A Dog Missing.
### Rs. 2/-present to the finder

'A white Spanish terrior with hair about ½ long all over the body & brown ears about 1½" high—tail about 2½" long black spot at the foot of the tail & 2 black spots at the back. The hair at the back is burnt & new hair is comming

I. K. Kuttappa
2—1 Chittimatti

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ

ಈ ಬಾಲಾಮೃತವನ್ನು ಸೇವಿಸುವದರಿಂದ ಮಕ್ಕಳ ಶಕ್ತಿಯೂ ತೂಕವೂ ಹೆಚ್ಚುವದು. ಮತ್ತು ಇದು ಮಧುರವಾಗಿರುವದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ

ಕ್ರಯ ಬಾಟ್ಲಿ ೧ಕ್ಕೆ 0—11—0 [illegible]

ಕೆ. ಟಿ. ಡೋಂಗರೆ ಕಂಪೆನಿ,
52—7 ಗಿರಗಾಂವ, ಮುಂಬಯಿ

### ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಹೊಸರಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸಮನಾದ [illegible] ರದಿಂದ ಕಟ್ಟಿಸಿ ಇಟ್ಟಿರುವದು. ಇದರ ಪ್ರಕಾಶವು ನಿಜವಾದ ವಜ್ರದ ಕಲ್ಲುಗಳಿಗೆ ಸರಿಯಾಗಿರುವದು. ಇದರ ಒಣ್ಣವು ಕೆಂಪದಂತೆ ಭಂಗಾರದ [illegible] ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ ಬಡವರೂ ಬಹಳವಾಗಿ ಉಪಯೋಗಿಸುತ್ತಿರುವರು

7 ಕಲ್ಲಿನ ಬಿಳಿಯ ಓಲೆ ಜೋಡೆ 1ಕ್ಕೆ 2—0—0
7 ಕೆಂಪು ಕಲ್ಲಿನ ಓಲೆ ಜೋಡೆ 1ಕ್ಕೆ 2—8—0

ವಿಳಾಸ—ಶ್ರೀ ಸಾಥಮುನಿ ಅಂಡ್ ಸನ್ಸ್,
52—22 168 ಪೈನಾ ಬಜಾರ ಮದರಾಸು

### ಫ್ಯಾನ್ಸಿ ಲೀವರ್ ಪಾಕೇಟ್ ವಾಚ್.

(15 ಬಹುಮಾನಗಳು ಸಹಿತ ರೂ 4—8—0)

[illegible]



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ [illegible] ಕೆಂಪು ಕಲ್ಲು [illegible] ಗ್ಲಾಸ್ ಡೂಮ್ ಇರುವದು [illegible]

[illegible]

[illegible] 1 [illegible] 3 ವರುಷ [illegible] ಗಡಿಯಾರ 1ಕ್ಕೆ ಕ್ರಯ ರೂ 4 8—0

[illegible] ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 105
[illegible] ಮದರಾಸ

### ಏಕೆ ನರಳುತ್ತೀರಿ?

[illegible] ಆಯುರ್ವೇದ [illegible]

ಕ್ರಯವು! ಇಲ್ಲವೆ!!

ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯ ವಿದ್ಯೆ

[illegible] ಪುಸ್ತಕವನ್ನು ಓದಿ [illegible] ರೋಗಗಳನ್ನು [illegible]

[illegible]—10 [illegible]

ರಾಜವೈದ್ಯ ನಾರಾಯಣಜಿ ಕೇಶವಜಿ,
[illegible]

N. B — [illegible]

## Sale of Sandalwood.

On 10th December 1928 at 12 noon about 137 tons of cleaned sandalwood will be sold in small lots in public auction at Fraserpet For further particulars apply to—

The Chief Forest Officer,
3—3 Coorg Mercara P. O

## 52 ವರುಷಗಳ ಅನುಭವಸಿದ್ಧ ಔಷಧಗಳು.

### ೧. ಮಹಾಮದನ ಕಾಮೇಶ್ವರೀ ಲೇಹ.

ಅಜೀರ್ಣ, ಎದೆನೋವು, ಸೊಂಟನೋವು, ಮಲಬದ್ಧತೆ ನಿದ್ರೆಯಿಲ್ಲದೆ ಇರುವಿಕೆ ಮುಂತಾದವುಗಳನ್ನು ಗುಣಪಡಿಸಿ ರತಿ ಸುಖಕ್ಕೆ ಶಕ್ತಿಯನ್ನುಂಟುಮಾಡುವುದು

ಡಪ್ಪಿ 1ಕ್ಕೆ ರೂ 2—0—0 3 ಡಬ್ಬಿಗಳಿಗೆ ರೂ 5—12—0

### ೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರು ಕ್ರಮತಪ್ಪಿ ಮುಟ್ಟಾಗುವುದು. ರಜೋಕಸ್ರಾವದಲ್ಲಿ ಅತ್ಯಲ್ಪವಾಗಲೀ, ಅತಿರೇಕವಾಗಲಿ ರಕ್ತ ಸುರಿಯೋಣ ಹೊಟ್ಟೆನೋವು ಸೊಂಟನೋವು. ಬಿಳಿಜ್ವರ ನಾನಾವರ್ಣಗಳ ಪ್ರದರಗಳನ್ನು ಅತಿ ಶೀಘ್ರದಲ್ಲಿ ಗುಣಮಾಡಿ ಗರ್ಭಾಶಯ ಸಂಬಂಧ ರೋಗಗಳನ್ನು ಗುಣಪಡಿಸಿ, ಸಂತತಿಗೆ ಅಪಾಯಕರವಾದ ದೋಷಗಳನ್ನು ಹೋಗಲಾಡಿಸುವುದು 1 ಬಾಟ್ಲಿ ಮತ್ತು 1 ಡಬ್ಬಿ ಮಾತ್ರೆಗೆ 2—4—0

### ೩. ಮೇಹಕುಠಾರ.

ಇದು ಮೂತ್ರಸ್ಥಾನದಿಂದ ಕೆಂಪು ಬಿಳಿದು, ಹಳದಿಯಾಗಿ ಹೋಗತಕ್ಕ ಕೀವನ್ನೂ ವ್ರಣವನ್ನೂ, ಉರಿಯನ್ನೂ, ಗುಣಪಡಿಸುತ್ತದೆ ಡಪ್ಪಿ 1ಕ್ಕೆ 2—8—0 3ಕ್ಕೆ 7—0—0

### ೪. ಮಲೇರಿಯಾ (ಛಳಿಜ್ವರ) ಪಿಲ್ಸ್.

1 2 3 ಅಥವಾ 4 ದಿವಸಕ್ಕೊಮ್ಮೆ ಬರುವ ಜ್ವರ ಛಳಿಜ್ವರ ಇವುಗಳ ಮೇಲೆ ಮಾತ್ರೆ. ಬಾಟ್ಲಿ 1ರ 0—12—0

### ೫. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ ಕಫಕ್ಕೆ, ಜ್ವರಕ್ಕೆ ರಾಮಬಾಣ
ಬಾಟ್ಲಿ 1ಕ್ಕೆ 0—10—0 3ಕ್ಕೆ 1—12—0

### ೬. ಇಚ್ಛಾಭೇದಿ.

ಆಯಾಸವನ್ನುಂಟುಮಾಡದ ಸುಖವಿರೇಚಕ
ಬಾಟ್ಲಿ 1ಕ್ಕೆ 0—12—0 3ಕ್ಕೆ 2—0—0

೭. ದಂತಕಾಂತಿ ಚೂರ್ಣ. ಡಪ್ಪಿ 1ಕ್ಕೆ 3 ಆಣೆ
೮. ಗಜಕರ್ಣ ಮುಲಾಮ್. ಡಬ್ಬಿ 1ಕ್ಕೆ 6 ಆಣೆ

N. B ಇವುಗಳಲ್ಲದೆ ಬೇರೆ ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತ

ಎನ್. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದೀಕ್ ಫಿಜಿಸಿಯನ್ಸ್,
ಮಂಗಳೂರು, ದ. ಕನ್ನಡ

### ಕಮ್ಮಿ ಕ್ರಯವನ್ನು ನೆನಪಿನಲ್ಲಿಡಿ!
### ಲೋಕವಿಖ್ಯಾತವಾದ "ಜಿಗ್ ಜೇಗ್"



ಟ್ರೆಂಫೀಸ್ ಸೈಜು 8 × 4½'
ಬೆಲೆ ರೂ. 3—0—0 ಮಾತ್ರ.
3 ವರ್ಷ ಖಾತ್ರಿಕೊಡುತ್ತೇವೆ.

ಈ ಟ್ರೆಂಫೀಸು ಬಹಳ ಉತ್ತಮವಾದ ಮತ್ತು ಬಿಳಿ ಅತಿಸಾರಗಳಿಂದ ಮಾಡಲ್ಪಟ್ಟು, ಚಿತ್ರದಲ್ಲಿ ತೋರಿಸಿರುವ ಸುಂದರವಾದ ಕೆತ್ತನೆಯ ಸ್ಟೆಂಡ್‌ನೊಳಗೆ ಇರಿಸಲ್ಪಟ್ಟು ನೋಡಲು ಸುಂದರವಾಗಿಯೂ, ಸರಿಯಾದ ಗಂಟೆ ತೋರಿಸುವುದಾಗಿಯೂ ಇರುವ ಈ ಟ್ರೆಂಫೀಸನ್ನು [illegible]ರು ಉಪಯೋಗಿಸಿ ತೃಪ್ತಿಹೊಂದಿದ್ದಾರೆ

ಇಂಥಾ ಟ್ರೆಂಫೀಸಿಗೆ 3—0—0 ರೂ ಮಾತ್ರ [illegible]

ಏಜಂಟರು — ಧನಲಕ್ಷ್ಮಿ ಅಂಡ್ ಕಂಪೆನಿ,
52—10 ಪೋಸ್ಟ್ ಬಾಕ್ಸ್ ನಂ. 265. ಮ[illegible]

## Silks! Silks!! Silks!!!

Sarees with gold border body plain or spotted in various designs and colours

| | | |
|---|---|---|
| 5 yds by 45 inches plain body | Rs 50/- to Rs 90/- | |
| do spotted body | 40/- to | 90/- |
| 6 yds by 45 inches plain body | 50/- to | 100/- |
| do spotted body | 60/- to | 120/- |
| Handkerchief 44 by 44 inches price | 12 - to | 35/- |
| Gold Lace borders Ribbons price from | 1/8/- to | 5/- per yd |

*For further particulars, please write to:-*

BHARADWAJ & CO.,
BROCADE, EMBROIDARY & SILK MANUFACTURERS,
52—9 Benares City.

# ವರ್ತಮಾನ ಸಂಗ್ರಹ.

## ಒಳದೇಶ.

ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ [illegible]ಲ್ಲಿ ಬಮಿನಾಹ್ದಾರರ ಸಂಘದ ಹಾಲ್‌ನಲ್ಲಿ ನಡೆಯುವದು

ಕಾವೇರಿ ಸಂಕ್ರಮಣದ ಸಮಯದಲ್ಲಿ ದೇಶದ ಎಲ್ಲಾ [illegible]ಗಗಳಿಗೂ ತಕ್ಕಷ್ಟು ಮಳೆ ಬಿದ್ದದ್ದರಿಂದ ವತ್ತದ ಬೆಳೆಗೆ [illegible]ಬಾ ಸಹಾಯವಾಗಿದೆ

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಮೀಟಿಂಗು ಒರುವ [illegible]ಬರು ತಾ 8ನೇ ಗುರುವಾರ ಮಡಿಕೇರಿ ಕೌನ್ಸಿಲ್ ಹಾ[illegible]ನಲ್ಲಿ ನಡೆಯುವದು

ತಾ 24—10—28 ರಲ್ಲು 'ಕೊಡಗು ಕಂಪೆನಿಯ [illegible]ಕ್ಟರುಗಳ ಮೀಟಿಂಗೊಂದು ವೀರಾಜಪೇಟೆ ಖನ್ನರ್[illegible]ರಿನಲ್ಲಿ ನಡೆಯುವದು

[illegible] ಗೋಣಿಕೊಪ್ಪಲಿನ ಮುತ್ತಣ್ಣ ಸನ್ಸ್ ರೈಸ್ [illegible] ದಿನ ರಾ|| ಬಾ|| ಕೇಟೋಳಿರ ಚಂಗಪ್ಪನವರಿಂದ ತೆರೆಯು[illegible]

ಅಂಡಮಾನ ದ್ವೀಪದಲ್ಲು ಪಾರೆಸ್ಟರಾಗಿದ್ದ ವೆ ಪುಟ್ಟ[illegible] ಯಂ ಪೂವೈಯ್ಯನವರು ರೇಂಜರ್ ತರಬೇತಿಗಾಗಿ [illegible]ಡೂನ್ ಪಾರೆಸ್ಟ ಕಾಲೇಜಿಗೆ ಕಳುಹಿಸಲ್ಪಡುತ್ತಾರೆಂತ [illegible]ಮಾನ

ಮದ್ರಾಸಿನ ಪೋಸ್ಟ ಮಾಸ್ಟರ್ ಜನರಲ್‌ರವರು ಇನ್ಸ್[illegible]ನ್ ಬಗ್ಗೆ ಈ ತಾ 18ರಲ್ಲಿ ಮಡಿಕೇರಿಗೆ ಬಂದಿರುವರು [illegible] ದಿನ ವಾಪಸು ಹೋಗುವರಾಗಿ ತಿಳಿಯುತ್ತೇವೆ

ಬರುವ ಹಾಕಿ ಟೂರ್ನಮೆಂಟು ಸಂಬಂಧ ಕೊಡಗು ಅ[illegible]ಟಿಕ್ ಎಸೋಸಿಯೇಶನಿನ ಮೀಟಿಂಗೊಂದು ಈ ತಾ 28ನೇ ಆ[illegible]ವಾರ ಬೆಳಗ್ಗೆ ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ನಡೆ[illegible]ವದು

ರೇಂಜರ್ ಮೆ ನೆಲ್ಲಮಕ್ಕಳ ಕರುಂಬೈಯ್ಯನವರು ಮ[illegible] ಫಾರೆಸ್ಟರುಗಳಾದ ಮೆ ಕಡೇಮಾಡ ಐಯ್ಯಪ್ಪನವರು [illegible] ವೆ ಕುಂದಿರ ಸೋಮೈಯ್ಯನವರು ಟೊಪೊಗ್ರಾಫಿ[illegible] (ಸ್ಥಳವರ್ಣನೆಯ) ಸರ್ವೆ ತರಬೇತಿಗಾಗಿ ಈ ತಾ 21 [illegible] ಮೂರು ತಿಂಗಳವರೆಗೆ ದಕ್ಷಿಣ ಕೊಯಮುತ್ತೂರಿನ [illegible] ಟ್ರಾಂಟನ್ನು ವರ್ಟಿಗೆ ಕಳುಹಿಸಲ್ಪಡುವರು

ತರಬೇತಿಗೆ ಕಳುಹಿಸಲ್ಪಡುವ ರೇಂಜರ್ ವೆ ನೆಲ್ಲಮ[illegible]ಳ ಕರುಂಬೈಯ್ಯನವರ ಬದಲು ಮೆ ಮಾಳೆಟ್ಟಿರ ಐಯ್ಯಣ್ಣ[illegible]ವರು ಪ್ರೇಜರ್‌ಪೇಟೆಯಿಂದ ಮುಕ್ಕೋಡ್ಲಿಗೆ ವರ್ಗಾಯಿಸಲ್ಪ[illegible]ರುವರು

ಈ ತಾ 14ರಲ್ಲಿ ಗೋಣಿಕೊಪ್ಪಲಲ್ಲಿ ಮೆ [illegible] ಬಿ[illegible]ಪ್ಪನವರ ಅಧ್ಯಕ್ಷತೆಯಲ್ಲಿಯೂ, ತಾ 15ರಲ್ಲಿ ಹುದಿ[illegible]ರಿಯಲ್ಲಿ ಮೆ ಇಟ್ಟಿರ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿಯೂ [illegible]ಮಿನಾಹ್ದಾರರ ಸಂಘದ ಆಶ್ರಯದಲ್ಲಿ ಸಾರ್ವಜನಿಕ ಮೀಟಿಂ[illegible]ಗಳು ನಡೆದವು. ಜಮಿನಾಹ್ದಾರರ ಸಂಘವು ತಯಾರಿಸಿರುವ [illegible]ಡಗಿನ ರಾಜಕೀಯ ರಚನೆಗೆ ಸಂಪೂರ್ಣ ಒಪ್ಪಿಗೆಯನ್ನಿತ್ತ[illegible]ಲ್ಲದೆ ಸೈಮನ್ ಕಮಿಷನನ್ನು ಬಹಿಷ್ಕರಿಸುವ ಮತ್ತು ನೆಹ[illegible] ಕಮಿಟಿ ವರದಿಗೆ ಒಪ್ಪಿಗೆಯನ್ನೀಯುವ ಠರಾವುಗಳು ಸ[illegible]ಸಮ್ಮತದಿಂದ ಮಂಜೂರು ಮಾಡಲ್ಪಟ್ಟವು

## ಹಿಂದೂದೇಶ.

ಬೊಂಬಾಯಿಯ ಹೊಸ ಗವರ್ನರಾದ ಸರ್ ಫ್ರೆಡ್ರಿಕ್ ಸೈಕ್ಸ್‌ರವರು ಡಿಸೆಂಬರು 7 ರಲ್ಲಿ ಬೊಂಬಾಯಿಗೆ ಬರುವರು

ಈ ವರ್ಷ ನೋಬೆಲ್ ಪ್ರೈಜ್ ಸರ್ ಜಗದೀಸ್ ಚಂದ್ರ ಬೋಸ್‌ರವರಿಗೆ ದೊರೆಯುವದೆಂದು ಸುದ್ದಿ ಇದೆ ಇದು [illegible]ವಾದರೆ ಹಿಂದೀಯರಿಗೆ ಈ ಬಹುಮಾನ ದೊರೆಯುವದು ಇದು ಎರಡನೇ ಸಾರಿಯಾಗುವದು

ಬಂಗಾಳದ ಒಬ್ಬ ಮಂತ್ರಿಯಾಗಿದ್ದ ಸರ್ ಪ್ರೊವಾಷ್ [illegible] ಮಿತ್ತರ್‌ರವರು ಅಲ್ಲಿಯ ಎಕ್ಸಿಕ್ಯೂಟಿವ್ ಮೆಂಬರಾಗಿ ನೇಮಿಸಲ್ಪಟ್ಟದ್ದರಿಂದ ಅವರ ಸ್ಥಳಕ್ಕೆ ನಾಟಿಪುರದ ರಾಜರು ಮಂತ್ರಿಯಾಗಿ ನೇಮಿಸಲ್ಪಟ್ಟಿರುವರು

ಉಪಾಧ್ಯಾಯರುಗಳ ಸಂಘಗಳ ಅಖಿಲಭಾರತ ಫೆಡರೇಶ[illegible] [illegible] ನಾಲ್ಕನೇ ಮಹಾಸಭೆಯು ಬೊಂಬಾಯಿಯಲ್ಲಿ ನವಂಬ[illegible] ತಾ 4ರಿಂದ 6ರ ವರೆಗೆ ನಡೆಯುವದು ಡಾಕ್ಟರ್ [illegible] ಯಸ್ ಅರುಂಡೇಲ್‌ರವರು ಅಧ್ಯಕ್ಷರಾಗಿರುವರು

ನ್ಯಾಯವಿಧಾಯಕ ಸಭೆಗಳ ಅಧ್ಯಕ್ಷರ ಮತ್ತು ಉಪ[illegible]ಕ್ಷರುಗಳ ವಾರ್ಷಿಕ ಕಾನ್ಫರೆನ್ಸು ಡೆಲ್ಲಿಯಲ್ಲಿ ಒರ[illegible]ಜನವರಿ ತಾ 5 ರಿಂದ 7 ರ ವರೆಗೆ ನಡೆಯುವದು ಎಸೆಂ[illegible] ಪ್ರೆಸಿಡೆಂಟರಾದ ಶ್ರೀಯುತ ವಿ. ಜೆ ಪಟೇಲರವರು [illegible]ನ್‌ಫರೆನ್ಸಿನ ಅಧ್ಯಕ್ಷರಾಗುವರು

ಬೊಂಬಾಯಿ ಗಿರಣಿಗಳಲ್ಲಿ ಈಗ ಎಂದಿನಂತೆ ಕೆಲಸವು [illegible]ಯುತ್ತಿದೆ. ಕೆಲಸಗಾರರ ಪ್ರತಿನಿಧಿಗಳ ಮತ್ತು ಗಿರಣಿ [illegible]ಲೀಕರ ಒಪ್ಪಂದದ ಮೇರೆ ಸರ್ಕಾರದವರು ಮುಷ್ಕರದ [illegible]ರಣಗಳನ್ನು ಕಂಡುಹಿಡಿದು ಅದಕ್ಕೆ ತಕ್ಕ ಪರಿಹಾರವನ್ನ [illegible]ಸಲು ಒಂದು ಕಮಿಟಿಯನ್ನು ನೇಮಿಸಿರುವರು

ಸುಭಾಸ್ ಚಂದ್ರ ಬೋಸರವರು ತಾ 9 ರಲ್ಲಿ ಪಾಥರ್ಘಾ[illegible]ಕ್ಕೆ ಹೋದಾಗ ಅಲ್ಲಿನ [illegible] ಮುನಿಸಿಪಾಲಿಟಿ [illegible] ಅವರಿಗೆ ಒಂದು ಬಿನ್ನಹ ಪತ್ರವನ್ನು [illegible] ಇದು ಬಿನ್ನಹ ಎನ್ನಿಟಿಗಿನಲ್ಲಿ ಬೋಸರವರು [illegible] ಉಪದೇಶಕ್ಕೆ ಉತ್ತೇಜನ ಕೊಡಬೇಕೆಂದೂ, ಬ್ರಿಟಿಶ್ ಸಾಮಾನಿನ [illegible] ಬಹಿಷ್ಕರಿಸಬೇಕೆಂದೂ [illegible]

ಬಂಗಾಲಿನ [illegible] ಈ ತಾ 9 ರ ರಾತ್ರಿ [illegible] ಒಂದು [illegible]ಯಿಂದ ಹೊರಬೀಳುತ್ತಿತ್ತು ಇದನ್ನು ಸಂಗ್ರಹಿಸಲು ಅಲ್ಲಿಯ ಗ್ರಾಮಸ್ಥರು ಸೇರಿದ್ದಾಗ ಅವರಲ್ಲಿ ಒಬ್ಬರ ದೀಪದಿಂದ [illegible]ಗೆ ಬೆಂಕಿಹಿಡಿದು 47 ಜನರು ಮೃತರಾದರು, 20 ಜನರಿಗೆ ಅಪಾಯಕರವಾದ ಗಾಯಗಳಾಗಿವೆ

ಮದ್ರಾಸು ಪ್ರಾಂತದ ಗವರ್ನರಾದ ಲಾರ್ಡ್ ಗಾಷೆನ್‌ರವರ ಉದ್ಯೋಗದ 5 ವರ್ಷ ಅವಧಿಯು ಮುಗಿದರೂ ಅವರಿಗೆ 6 ತಿಂಗಳು ಹೆಚ್ಚು ಅವಧಿ ಕೊಡಲಾಗಿದೆ ವೈಸರಾಯರಾದ ಲಾರ್ಡ್ ಐ[illegible]ನ್‌ರವರು ಬರುವ ಏಪ್ರಿಲ ತಿಂಗಳಲ್ಲಿ 6 ತಿಂಗಳು ರಜೆಯಲ್ಲಿ ಇಂಗ್ಲಂಡಿಗೆ ಹೋಗುವಾಗ್ಯೆ ಲಾರ್ಡ್ ಗಾಷೆನ್‌ರವರು ವೈಸರಾಯಿ ಕೆಲಸವನ್ನು [illegible] ನೋಡುವರೆಂದ ಸುದ್ದಿ ಇದೆ

ಡಲ್ಲಿ ಪ್ರಾಂತದ ಮಹಿಳೆಯರ ಪ್ರಾಂತಿಕ ಕಾನ್ಫರೆನ್ಸು ಈ ತಾ 13ರಲ್ಲಿ [illegible]ರತಿನಲ್ಲಿ ನಡೆಯಿತು ಪಂಜಾಬಿನ ಶ್ರೀಮತಿ ವಿದ್ಯಾವತಿ ದೇವಿಯವರು ಅಧ್ಯಕ್ಷರಾಗಿದ್ದರು. ಇಂಡಿಯಾದ ಉದ್ದೇಶವು ಸಂಪೂರ್ಣ ಸ್ವಾತಂತ್ರ್ಯವಾಗಿರಬೇಕೆಂದೂ ಪರದೆ ಪದ್ಧತಿಯನ್ನು ತೆಗೆದುಹಾಕಬೇಕೆಂದೂ ಹುಡುಗಿಯರಿಗೆ ಮೊದಲು [illegible] ಕಡ್ಡಾಯ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೊಡಬೇಕೆಂದೂ ಠರಾವುಗಳು ಮಂಜೂರು ಮಾಡಲಾದವು

ಬಾರ್ಡೋಲಿ ತಾಲೂಕು ವತ್ತು [illegible] ಡಿಸ್ಟ್ರಿಕ್ಟುಗಳ ಕಂದಾಯ ಹೆಚ್ಚಳವು ಎಷ್ಟರ ಮಟ್ಟಿಗೆ ನ್ಯಾಯವಾದದೆಂಬದನ್ನು ವಿಚಾರಿಸುವ ಬಗ್ಗೆ ಸರ್ಕಾರು ಇಂಡಿಯನ್ ಸಿವಿಲ್ ಸರ್ವೀಸ್ ಕಮಿಟಿ ಮೆ ಆರ್ ಯಸ್ ಬ್ರೂಮ್‌ಫೀಲ್ಡ್‌ರವರು ಮತ್ತು ಛಾರವಾಡದ ಕಲೆಕ್ಟರಾದ ಮೆ ಆರ್ ಎಂ ಮ್ಯಾಕ್ಸ್‌ವೆಲ್‌ರವರೂ ನೇಮಿಸಲ್ಪಟ್ಟಿರುವರು ಇವರು ತಮ್ಮ ವಿಚಾರದ ಕೆಲಸವನ್ನು ನವಂಬರು 1ರಲ್ಲಿ ಪ್ರಾರಂಭಿಸುವರು ಈ ಕಮಿಟಿಯು ಬಾರ್ಡೋಲಿಯ ಸತ್ಯಾಗ್ರಹ ಚಳವಳಿಯ ಪರಿಣಾಮವಾಗಿ ನೇಮಿಸಲ್ಪಟ್ಟದ್ದಾಗಿದೆ

ಸೈಮನ್ ಕಮಿಷನಿನವರು ಈ ತಾ 11ರ ರಾತ್ರಿ ಬೊಂಬಾಯಿ ಹಲ್ಲಿ ಬಂದಿಳಿದ ಅಲ್ಲಿಂದ ಪೂನಕ್ಕೆ ಬಂದರು ಎರಡು ಪಟ್ಟಣಗಳಲ್ಲಿಯೂ ಜನರು ಹರತಾಳವನ್ನು ಆಚರಿಸಿ ಕಪ್ಪು ಬಾವುಟಗಳ ಸಮೇತ [illegible] ಮೀಟಿಂಗುಗಳನ್ನು ನಡಿಸಿ ಕಮಿಷನ್ನು ಸಂಪೂರ್ಣ ಬಹಿಷ್ಕರಿಸಬೇಕೆಂದು ಠರಾವು ಪಾಸುಮಾಡಿದರು ಕಮಿಷನು [illegible] ಸೈಮನರ ಜೊತೆಕ್ಕೆ [illegible] ಆಗಿ [illegible] ಅವರಿಗೆ ಸ್ವಾಗತವನ್ನೀಡಿದರು ಈ ಕಮಿಷನ ಮಧ್ಯವರ್ತಿ ಶಾಸನ ಮಂಡಳಿಗಳ ಕಮಿಟಿ ಮತ್ತು ಬೊಂಬಾಯಿ ಕೌನ್ಸಿಲಿನ ಕಮಿಟಿಗಳೊಂದಿಗೆ [illegible] ಜಾಯಿಂಟ್ ಕಾನ್ಫರೆನ್ಸನ್ನು ತಾ 15 ರಲ್ಲಿ ಪೂನಾದಲ್ಲಿ ಪ್ರಾರಂಭಿಸಿರುವರು ಈಗಾಗಲೇ ಕೆಲವರ ಅಭಿಪ್ರಾಯ ತೆಗೆದುಕೊಳ್ಳಲಾಗಿದೆ

## ವಿದೇಶ.

ಚೈನಾದ ರಾಷ್ಟ್ರೀಯ ಸರಕಾರದ ಅಧ್ಯಕ್ಷರಾಗಿ ಜನರಲ್ ಚಿಯಾಂಗ್ ಕೈಶೇಕ್‌ರವರು ಆರಿಸಲ್ಪಟ್ಟಿರುವರು ಇವರು ಅಲ್ಲಿಯ ಮುಖ್ಯ ಸೇನಾಧಿಪತಿಯೂ ಆಗಿರುವರು

ಈ ತಾ 9ರಲ್ಲಿ ಚೀನಾ ಟೋಕಿಯೋ [illegible] ಮಹಾರಾಜನಾಗಿ [illegible] ಅವರಿಗೆ [illegible] ಚಕ್ರವರ್ತಿನಿ [illegible] ಅವರ ತಲೆಯ ಮೇಲೆ ಕಿರೀಟವನ್ನಿಟ್ಟರು

[illegible]ೊಡಗು ರೆಡ್‌ಕ್ರಾಸ ಸಂಘದವರು ತಾರೀಖು [illegible]೦—೨೮ರಲ್ಲು ಕುಕ್ಲೂರು ಗ್ರಾಮದ ಮಾಳೇಟಿರ ಮನೆಯಲ್ಲಿಯೂ, ತಾ. ೨೯—೧೦—೨೮ರಲ್ಲು ಸುಂಟಿಕೊಪ್ಪದಲ್ಲಿಯೂ, ತಾ ೧೬—೧೧—೨೮ರಿಂದ ೧೮—೧೧—೨೮ರ ವರೆಗೆ ಶ್ರೀ [illegible]ಟಿಯಲ್ಲಿಯೂ ಮೇಜಿಕ್ ಲ್ಯಾಂಟರ್ನ್ ಉಪನ್ಯಾಸ [illegible]ೆಂದೂ ಅಲ್ಲಿಗೆ ಎಲ್ಲರೂ ದಯಮಾಡಿಸಬೇಕೆಂದೂ [illegible]ದರ ಸೆಕ್ರೆಟರಿಯವರ ಕೋರಿಕೆ.

[illegible]ಳೆದ ಸೆಪ್ಟಂಬರ್ ತಿಂಗಳಲ್ಲಿ ನಡೆದ ಬಿ ಎ. ಪರೀಕ್ಷೆಯಲ್ಲಿ ಶ್ರೀಮತಿ ಕಂಬೇರಂಡ ಯನ್. ಮಾಚಮ್ಮನವರು ಮ[illegible] ಪುಲಿಯಂಡ ಜಿ. ಐಯ್ಯಪ್ಪನವರೂ, ಮತ್ತು, ಇಂಟ[illegible]ಮೀಡಿಯೇಟ್ ಪರೀಕ್ಷೆಯಲ್ಲಿ ಮೆ. ಕುಟ್ಟಂಡ ಡಿ ಅಚ್ಚಪ್ಪ[illegible]ಮತ್ತು, ಮೆ. ಕಾಳಮಂಡ ಚಿಟ್ಟಿಯಪ್ಪನವರು ಫೂರ್ಸ್[illegible]ಯೂ, ಮೆ. ಮನೆಯಪಂಡ ಯಂ. ಪೊನ್ನಪ್ಪನವರು [illegible] ನೆಲ್ಲಿರ ಪೂವ್ವಯ್ಯನವರು ಒಂದು ಭಾಗದಲ್ಲಿ [illegible]ಗ್ರೇಡ್ ಹೊಂದಿರುವರೆಂದು ತಿಳಿಯುತ್ತೇವೆ ಇವ[illegible] ಅಭಿನಂದನೆಗಳಿವೆ

[illegible] ತಾ. ೨೪ರಲ್ಲಿ ವೀರಾಜಪೇಟೆಯಲ್ಲಿಯೂ, ಮತ್ತು, [illegible]ಲ್ಲಿ ಮಡಿಕೇರಿಯಲ್ಲಿಯೂ ಸಾರ್ವಜನಿಕ ಸಭೆಗಳು [illegible]ೊಡಗಿನ ಭಾವಿ ರಾಜಕೀಯ ರಚನೆಯನ್ನು ಕುರಿತು [illegible]ರರ ಸಂಘದವರು ಮಂಜೂರುಮಾಡಿರುವ ಠರಾವಿ[illegible]ಗೆ [illegible] ಸಮ್ಮತಿಯನ್ನಿತ್ತು, ಸ್ವಯಂ ನಿರ್ಣಯದ ತ[illegible]ವಿರೋಧವಾಗಿ ನೇಮಿಸಲ್ಪಟ್ಟಿರುವ ಸೈಮನ್ ಕಮಿಷ[illegible] ಬಹಿಷ್ಕರಿಸುವಂತೆಯೂ, ನೆಹರು ಕಮಿಟಿಯ ವರದಿ ಮ[illegible]ಕ್ಷೀ ಕಾನ್‌ಫರೆನ್ಸಿನ ತೀರ್ಮಾನಗಳಿಗೆ ಒಪ್ಪಿಗೆಯ[illegible]ವಂತೆಯೂ, ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ [illegible] ಬಹುಮತ ಮೆಂಬರುಗಳು ಸೈಮನ್ ಕಮಿಷನ[illegible] ಬಹಿಷ್ಕರಿಸಲು ತೀರ್ಮಾನಿಸಿದಕ್ಕೆ ಸಂತೋಷವನ್ನು ಸೂ[illegible], ಮತ್ತು ಸೈಮನ್ ಕಮಿಷನಿನ ಮುಂದೆ ಅಭಿಪ್ರಾ[illegible]ಲು ಹೋಗುವವರು ಜನರ ಪ್ರತಿನಿಧಿಗಳಲ್ಲವೆಂತ[illegible]ವುಗಳು ಪಾಸಾದವು. ಆದರೆ ಮಡಿಕೇರಿಯಲ್ಲಿ [illegible]ೊಡಗನ್ನೊಳಗೊಂಡ ಕರ್ನಾಟಕ ಏಕೀಕರಣದ ಕ[illegible] ಬಹುಮತದಿಂದ ಸೋಲಿಸಲ್ಪಟ್ಟಿತು.

## ಹಿಂದೂದೇಶ.

[illegible]ಖಿಲಭಾರತ ಮಹಿಳೆಯರ ಕಾನ್‌ಫರೆನ್ಸ್ ಬರುವ ಜನ[illegible]ಗಳ ಎರಡನೇ ವಾರದಲ್ಲಿ ಪೂನಾದಲ್ಲಿ ನಡೆಯಲಿಕ್ಕಿದೆ.

[illegible]ರು ಕಮಿಟಿಯ ವರದಿಗೆ ಸಂಪೂರ್ಣ ಸಮ್ಮತಿಯ[illegible] ಠರಾವು ನಾಗಪುರ ಮುನ್ಸಿಪಾಲಿಟಿಯಲ್ಲಿ ಮಂ[illegible]ದೆ

[illegible]ಸ್ಸಾಮು ಪ್ರಾಂತ್ಯದ ಸರ್ವ ಪಕ್ಷ ಪರಿಷತ್ತು ಈ [illegible]ಲ್ಲಿ ಗೌಹತಿಯಲ್ಲಿ ಮಿ. ಫೂಕನ್‌ರವರ ಅಧ್ಯಕ್ಷತೆ[illegible]ಡೆಯುವದು.

[illegible]ಬರ. ೧೭ರಲ್ಲಿ ನಡೆಯಲಿಕ್ಕಿರುವ ಅಲ್ಲಾಹಬಾದು ಯುನಿವರ್ಸಿಟಿಯ ಕಾನ್ವೊಕೇಶನ್ ಭಾಷಣವನ್ನು ಸರ್ ಜಗದೀಶ್ ಚಂದ್ರಬೋಸ್‌ರವರು ಮಾಡುವರು

ಇಂಡಿಯನ್ ಪೀಪ್ಲ್ಸ್ ಫ್ಯಾಮಿನ್ ಟ್ರಸ್ಟ್ ಪಂಜಾಬಿನ ನೆರೆ ಹಾವಳಿಯಿಂದ ಸಂಕಟ ಪಡುತ್ತಿರುವವರ ಕಷ್ಟ ಪರಿಹಾರ್ಥವಾಗಿ ಒಂದು ಲಕ್ಷ ರೂಪಾಯಿಗಳನ್ನು ಉಚಿತವಾಗಿ ಕೊಟ್ಟಿದೆ.

ವಧ್ಯಪ್ರಾಂತ್ಯದ ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರು ಈ ವರ್ಷ ಮಿ ಅಬ್ಯಾಂಕರ್‌ರವರನ್ನು ಅಧ್ಯಕ್ಷರಾಗಿಯೂ, ಸರ್ ಜಮ್ನಲಾಲ್ ಬಜಾಜ್‌ರವರನ್ನು ಉಪ ಅಧ್ಯಕ್ಷರಾಗಿಯೂ ಆರಿಸಿಕೊಂಡಿರುವರು

ಕಳೆದವಾರ ಹಿಂದೂದೇಶದ ಪೂರ್ವ ಕರಾವಳಿಯಲ್ಲಿ ತುಂಬಾ ಮಳೆಬಿದ್ದು ಮದ್ರಾಸು—ಕಲ್ಕತ್ತಾ ರೈಲ್ವೆ ಲೈನಿನಲ್ಲಿ ಹಲವು ಕಡೆ ಸೇತುವೆಗಳೂ ರೈಲ್ವೆ ಕಂಬಿಗಳೂ ಕೊಚ್ಚಲ್ಪಟ್ಟು ರೈಲ್ವೆ ಸಂಚಾರಕ್ಕೆ ಭಂಗವುಂಟಾಗಿದೆ

ಬರ್ಮಾ ದೇಶದ ಸ್ವಭಾಷಾ ಶಾಲೆಗಳಲ್ಲಿ ಬೌದ್ಧಮತದ ವಿದ್ಯಾರ್ಥಿಗಳಿಗೆ ಅವರ ಮತ ಬೋಧನೆ ಕೊಡಬೇಕೊ, ಕೊಡಬೇಕಾದರೆ ಯಾವ ರೀತಿಯಲ್ಲಿ ಕೊಡಬೇಕೆಂಬದನ್ನು ವಿಚಾರಿಸುವ ಬಗ್ಗೆ ಸರಕಾರದವರು ಒಂದು ಕಮಿಟಿಯನ್ನು ನೇಮಿಸಿರುವರು

ಬಾರ್ಡೋಲಿಯಲ್ಲಿ ಕಂದಾಯ ಹೆಚ್ಚಿಸುವಿಕೆಯನ್ನು ವಿಚಾರಿಸುವ ಬಗ್ಗೆ ಸರಕಾರದವರು ನೇಮಿಸಿರುವ ಕಮಿಟಿಯನ್ನು ಬಾರ್ಡೋಲಿ ಸತ್ಯಾಗ್ರಹ ಚಳವಳದ ಮುಂದಾಳಾಗಿದ್ದ ಶ್ರೀಯುತ ವಲ್ಲಭಾಯಿ ಪಟೇಲರವರು ಒಪ್ಪಿರುವರೆಂದು ತಿಳಿಯಬರುತ್ತದೆ.

ತಾ ೨೩ರಲ್ಲಿ ಲಾಹೋರಿನಲ್ಲಿ ದಸರ ಮೆರವಣಿಗೆ ಹೋಗುತ್ತಿದ್ದ ಸಮಯದಲ್ಲಿ ಜನರ ಗುಂಪಿಗೆ ಒಂದು 'ಬಾಂಬ್' ಬಿದ್ದು 60 ಜನರಿಗೆ ಘಾಯವಾಗಿವೆ, 6 ಜನರು ಮೃತರಾಗಿರುವರು. 'ಬಾಂಬ್' ಎಸೆದವನು ಯಾರೆಂದು ಇನ್ನೂ ಗೊತ್ತಾಗಿರುವದಿಲ್ಲವಂತೆ.

ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಅಧ್ಯಕ್ಷರಾಗಿರುವ ಡಾಕ್ಟರ್ ಅನ್ಸಾರಿಯವರು ಈ ತಾ ೨೧ರಲ್ಲಿ ನಾಗಪುರದಲ್ಲಿ ದೊಡ್ಡ ಸಭೆಯ ಮುಂದೆ ಲೋಕಮಾನ್ಯ ತಿಲಕರವರ ಪ್ರತಿಮೆಯನ್ನು ತೆರೆದರು. ಈ ಸಂದರ್ಭದಲ್ಲಿ ಅಲ್ಲಿಯ ಮುನ್ಸಿಪಾಲಿಟಿಯವರು ಅನ್ಸಾರಿಯವರಿಗೆ ಒಂದು ಬಿನ್ನಹ ಪತ್ರವನ್ನು ಅರ್ಪಿಸಿದರು

ತಾ ೨೨ರಲ್ಲಿ ಕಲ್ಕತ್ತಾದಲ್ಲಿ ನಡೆದ ಬಂಗಾಳ ಕ್ರೈಸ್ತರ 51ನೇ ವಾರ್ಷಿಕ ಕಾನ್‌ಫರೆನ್ಸಿನಲ್ಲಿ ಅಧ್ಯಕ್ಷರಾಗಿದ್ದ ಪ್ರಿನ್ಸಿಪಾಲ್ ಜೆ ಆರ್ ಬೆನರ್ಜಿಯವರು ಕ್ರೈಸ್ತರು ರಾಜಕೀಯ ಚಳವಳದಲ್ಲಿ ಉದಾಸೀನರಾಗಿರುವದು ಯೋಗ್ಯವಲ್ಲ, [illegible]ವರು ನೇಶನಲ್ ಕಾಂಗ್ರೆಸ್ಸಿಗಾಗಲೀ, ನೇಶನಲ್ ಲಿಬರಲ್ ಫಡರೇಶನಿಗಾಗಲೀ ಸೇರತಕ್ಕದೆಂದೂ, ನೆಹರು ಕಮಿಟಿಯ ವರದಿಗೆ ಒತ್ತಾಸೆ ಕೊಡಬೇಕೆಂದೂ ಭಾಷಣ ಮಾಡಿದರು

## ವಿದೇಶ.

ಈ ವರ್ಷ ವಸ್ತು ವಿಜ್ಞಾನ ಶಾಸ್ತ್ರದ ನೋಬೆಲ್ ಪ್ರೈಜ್ ಇಂಡಿಯಾದ ಪ್ರೊಫೆಸರ್ ರಾಮನ್‌ರವರಿಗಾಗಲೀ, ಜಪಾನಿನ ಪ್ರೊಫೆಸರ್ ನಾಗಾಓಕರವರಿಗಾಗಲೀ ದೊರೆಯುವ ಸಂಭವವಿದೆಯೆಂದು ಸುದ್ದಿ

46 ವರ್ಷ ಪ್ರಾಯ ಮೀರಿದ ಸ್ತ್ರೀ ಪುರುಷರಿಗೆ ಓದುಬರಹ ಕಲಿಸಲು ತುರ್ಕಿಸ್ಥಾನದ ಸರಕಾರದವರು 12 ಸಾವಿರ ಉಪಾಧ್ಯಾಯರುಗಳನ್ನು ನೇಮಿಸುವ ಏರ್ಪಾಡು ಮಾಡುವರೆಂದು ಪ್ರಕಟವಾಗಿದೆ.

ಲಾರ್ಡ್‌ಬರ್ಕನ್‌ಹೆಡ್‌ರವರು ಇಂಡಿಯಾ ಸ್ಟೇಟ್ ಸೆಕ್ರೆಟರಿ ಪದವಿಗೆ ಕೊಟ್ಟ ರಾಜೀನಾಮೆಯು ರಾಜರಿಂದ ಅಂಗೀಕರಿಸಲ್ಪಟ್ಟಿದೆ ವೈಕೌಂಟ್ ಪೀಲ್‌ರವರು ಇಂಡಿಯಾದ ಸ್ಟೇಟ್ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟಿರುವರು

ಮೌಲಾನ ಮಹಮ್ಮದ್ ಆಲಿಯವರು ಲಂಡನಿನಿಂದ ಪ್ಯಾರಿಸ್‌ಗೆ ಹೋಗಿರುವರು. ಅವರು ತುರ್ಕಿ, ಈಜಿಪ್ಟ್, ಮೆಸಪೊಟೇಮ್ಯ ರಾಜ್ಯಗಳನ್ನು ಸುತ್ತಿಕೊಂಡು ಕಲ್ಕತ್ತಾ ಕಾಂಗ್ರೆಸ್ಸಿನ ಸಮಯಕ್ಕೆ ಇಂಡಿಯಾಕ್ಕೆ ಬರುವರು.

ರೀಗಾದ ಡಾಕ್ಟರೊಬ್ಬರು ಚಿನ್ನದಿಂದ ತಯಾರಿಸಿರುವ ಒಂದು ಔಷಧದ ಉಪಯೋಗದಿಂದ ಅಲ್ಲಿ ನಾಲ್ಕು ಜನ ಕುಷ್ಠ ರೋಗಿಗಳನ್ನು ಸಂಪೂರ್ಣ ಗುಣಪಡಿಸಿರುವರೆಂದೂ, ಇದರಿಂದ ಕುಷ್ಠ ರೋಗ ನಿವಾರಣೆಯ ಒಂದು ಉಪಾಯ ಕಂಡು ಹಿಡಿದಂತಾಗಿದೆಯೆಂದೂ ಪ್ರಕಟವಾಗಿದೆ

ಎರಡು ವರ್ಷಗಳ ಹಿಂದೆ ಸಿವಿಲ್ ಯುದ್ಧದ ದೆಸೆಯಿಂದ ಜನರು ಪಟ್ಟಣಬಿಟ್ಟು ಓಡುತ್ತಿದ್ದದರಿಂದ ಜನ ರಹಿತವಾಗುತಿದ್ದ ನಾಂಕಿನ್ ಪಟ್ಟಣವು ಈಗ ಚೈನಾದ ರಾಷ್ಟ್ರೀಯ ಸರಕಾರದ ಮುಖ್ಯ ಪಟ್ಟಣವಾದ ಕಾರಣ ಅಲ್ಲಿ ಮನೆ ಕಟ್ಟಲು ಜಾಗಕ್ಕೆ ತುಮುಲ ಬಹಳ ಜೋರಾಗಿದೆ ಐವತ್ತು ಸಾವಿರಕ್ಕಿಂತ ಹೆಚ್ಚು ಜನರು ತಮ್ಮ ಆಫೀಸಿನ ಕಟ್ಟಡಕ್ಕಾಗಿ ಜಾಗ ಹುಡುಕುತ್ತಿರುವದಲ್ಲದೆ ಲಕ್ಷಗಟ್ಟಲೆ ಜನರು ಮನೆಮಾರುಗಳಿಗಾಗಿ ಸ್ಥಳಕೊಂಡುಕೊಳ್ಳಲು ಪ್ರಯತ್ನಮಾಡುತ್ತಿದ್ದಾರೆ ಅಲ್ಲಿಯ ಜಾಗಕ್ಕೆ ಈಗ ಚಿನ್ನದಷ್ಟು ಬೆಲೆಯಾಗಿದೆಯಂತೆ!

Coorg Forest Department, South Division.

## Timber Sale Notice.

Mercara, the 6th October 1928.

It is hereby notified that the following quantities of 3rd class timbers lying in the Forest Depots of Tittimatti and Nagerhole Range will be sold by public auction at Tittimatti and Nagerhole on the 2nd and 19th November 1928 respectively at noon

| Species | Tittimatti | Nagerhole |
|---|---|---|
| Teak | 185 c ft | 1260 c. ft |
| Biti | 304 ,, | 38 ,, |
| Honne | 225 ,, | 166 ,, |
| Nandi | — | 559 ,, |
| Matti | 57 ,, | 665 ,, |
| Jungle wood | 21 ,, | — ,, |

and some sawn scantlings of different species

All the timber is open to inspection. For further particulars apply to Divisional Forest Officer, South Coorg, Mercara.

A R. BRAND,
1—1 Divisional Forest Officer

## ನೋಟೀಸ್.

1928ನೇ ಇಸವಿ ನವಂಬರು ತಾರೀಖು 10 ನೇ ಶನಿವಾರ ದಿನ ಮಧ್ಯಾಹ್ನ 1 ಗಂಟೆಗೆ ವೀರಾಜಪೇಟೆಯಲ್ಲಿ ಕಾರ್ಪೊರೇಷನ್ ಕಚ್ಚೇರಿ ಬಳಿ ವ್ಯಾಪಾರಸದಲ್ಲಿ ಶೇರುದಾರರ ಮಹಾಸಭೆಯು (ಜನರಲ್ ಮೀಟಿಂಗು) ಸೇರುವುದೆಂದು ಈ ಮೂಲಕ ತಿಳಿಸಲಾಗಿದೆ

ಮೀಟಿಂಗಿನಲ್ಲಿ ಈ ಕೆಳಗೆ ಕಂಡ ಕಾರ್ಯಗಳು ನಡೆಯುತ್ತವೆ

1 1927—1928ನೇ ವರ್ಷದ ಆಡಳಿತ ವರದಿಯನ್ನೂ, ಅದೇ ವರ್ಷದ ಆದಾಯ ವೆಚ್ಚ, ಬ್ಯಾಲೆನ್ಸ್ ಶೀಟ್, ಲಾಭನಷ್ಟಗಳ ಪಟ್ಟಿಗಳನ್ನೂ ಮತ್ತು ಆಡಿಟರರ ಸರ್ಟಿಫಿಕೇಟನ್ನೂ ಸಭೆಯ ಮುಂದೆ ಇಡುವುದು.

2 ಆಡಿಟರನ್ನು ನೇಮಿಸುವಿಕೆ

3 1927—1928ನೇ ವರ್ಷಕ್ಕೆ ಆಡಿಟರರಿಗೆ ಕೊಡಬೇಕಾದ ಫೀಜು ನಿಷ್ಕರ್ಷೆ ಮಾಡುವಿಕೆ

4 ಕೆಲಸದಿಂದ ನಿವೃತ್ತರಾಗುವ ಡೈರೆಕ್ಟರುಗಳ ಬದಲಿಗೆ ಬೇರೆಯವರ ಚುನಾವಣೆ

'ಕೊಡಗು ಲಿಮಿಟೆಡ್, ಮಡಿಕೇರಿ, 20—10—28. — ಓ. ಐ ಚೆಳ್ಳಪ್ಪ, ಮೇನೇಜರ್.

### ತಾಂಬೂಲಸೇವನೆಯಿಂದ ಹಲ್ಲುಗಳಿಗೆ ಉಂಟಾಗುವ ಕೆಡುಕುಗಳು

(6ನೇ ಪುಟದಿಂದ ಮುಂದುವರಿದುದು)

ಒಂದಾಗಿದೆಯೆಂಬ ಅಭಿಪ್ರಾಯವು ಎಲ್ಲರಿಗೂ ಹುಟ್ಟಿದೆ. ಹೆಚ್ಚು ಕಡಿಮೆ 100ಕ್ಕೆ 70—80 ಮಂದಿಗೆ ದಂತವ್ಯಾಧಿಗಳಿದ್ದೇ ಇರುವುವು. ತಾಂಬೂಲ ಸೇವನೆಯಲ್ಲಿರುವ ಅವಗುಣಗಳನ್ನು ಜನರಿಗೆ ತಿಳಿಸಿ ಆ ಪದ್ಧತಿಯನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡುವುದು ನಮ್ಮ ದೇಶದ ದಂತಚಿಕಿತ್ಸಕರ ಮತ್ತು ಎಲ್ಲಾ ವೈದ್ಯರ ಕರ್ತವ್ಯಗಳಲ್ಲಿ ಒಂದಾಗಿರಬೇಕೆಂದು ನನ್ನ ಉದ್ದೇಶವು. ಇದು ಯಾರಿಂದಲೂ ಸಾಗದ ಅತಿ ಮೂಢ ಪ್ರಯತ್ನವೆಂದು ಅನೇಕರು ಹಾಸ್ಯಮಾಡಬಹುದು ಆದರೆ ಬಹಳ ಪ್ರಧಾನವಾದ ನವೀನ ಸಂಸ್ಕಾರಗಳನ್ನು ಹೊಸದಾಗಿ ಆಚರಣೆಗೆ ಬರುವಂತೆ ಮಾಡುವ ಪ್ರಯತ್ನವೇನೋ ಮೊದಮೊದಲು ಅಸಾಧ್ಯವೇ! ಆದರೂ ಜನ ಕ್ಷೇಮಕ್ಕಾಗಿ ನಡೆಸಬೇಕಾದ ಪ್ರಯತ್ನವನ್ನು ನಾವು ನಡೆಸಿಯೇ ತೀರಬೇಕು. ನಾನು ಬಹು ಕಾಲದಿಂದ ಈ ಪ್ರಯತ್ನದಲ್ಲಿಯೇ ಇರುವೆನು. ಅನೇಕ ಕಡೆಗಳಲ್ಲಿ ನನ್ನ ಪ್ರಯತ್ನವು ಫಲಿಸಿಯೂ ಇದೆ. ಕೆಲವು ಕುಟುಂಬದವರು ತಾಂಬೂಲವನ್ನೇ ಪೂರ್ಣವಾಗಿ ತ್ಯಜಿಸಿಯೂ ಇರುವರು. ಹೀಗೆಯೇ ವೈದ್ಯವೃತ್ತಿಯಲ್ಲಿರುವವರೆಲ್ಲರೂ ಇದರಲ್ಲಿರುವ ದೋಷಗಳನ್ನು ತಮ್ಮಲ್ಲಿ ಚಿಕಿತ್ಸೆಗಾಗಿ ಬರತಕ್ಕವರಿಗೆ ತಿಳಿಸಿದರೆ ನಮ್ಮ ದೇಶದಲ್ಲಿ ದಂತವ್ಯಾಧಿಗಳು ಬಹಳ ಮಟ್ಟಿಗೆ ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ.

ಈ ನವೀನ ಸಂಸ್ಕಾರವು ಸಾಮಾನ್ಯವಾಗಿ ಈ ದೇಶದ ಜನಾರೋಗ್ಯವನ್ನು ಹೆಚ್ಚಿಸಲು ಬಹಳ ಮುಖ್ಯವಾಗಿದೆ. ಏಕೆಂದರೆ, ಹಲ್ಲು ಕೆಡುವುದರಿಂದಲೇ ಅಜೀರ್ಣ ಮುಂತಾದ ಜಠರವ್ಯಾಧಿಗಳು ತಲೆಯೆತ್ತುವುವು. ಬಾಯಿಹುಣ್ಣು ಮುಂತಾದ ವ್ಯಾಧಿಗಳೂ ಮಿತಿಮೀರಿ ಎಲೆ ಅಡಕೆಯನ್ನು ಅಗಿಯುವುದರಿಂದಲೇ ಬರುವುವು. ಹೆಚ್ಚೇಕೆ? ಇಂಡಿಯಾ ದೇಶದಲ್ಲಿ ಮರಣ ಸಂಖ್ಯೆಯು ಹೆಚ್ಚಿರುವುದಕ್ಕೆ ದಂತವ್ಯಾಧಿಗಳೂ, ಹಲ್ಲುಗಳ ದೌರ್ಬಲ್ಯವೂ ಕಾರಣಗಳೆಂದು ಧಾರಾಳವಾಗಿ ಹೇಳಬಹುದು. ಆದುದರಿಂದ ಈ ದೇಶದ ಜನರಲ್ಲಿ ಯಾವಾಗಲೂ ಎಲೆ ಅಡಕೆಯನ್ನಗಿಯುತ್ತಿರುವ ಕೆಟ್ಟ ವಾಡಿಕೆಯನ್ನು ಕಡಿಮೆಮಾಡುವುದಕ್ಕೆ ವೈದ್ಯವೃತ್ತಿಯಲ್ಲಿರುವವರೆಲ್ಲರೂ ಪ್ರಯತ್ನಿಸಿದರೆ ಬಹಳ ಮಟ್ಟಿಗೆ ಕ್ಷೇಮವುಂಟು

ಆ. ಚಂದ್ರಿಕೆ.

## ಪತ್ರವ್ಯವಹಾರ

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕೆಯವರು ಜವಾಬ್ದಾರರಲ್ಲ. ಸಂ.]

### ಮದ್ರಾಸಿನಲ್ಲಿರುವ ಕೊಡಗರ ಕೂಟ.

ಅಯ್ಯಾ,

ತಾ. 13—10—28ರಲ್ಲಿ ಕೊಡಗರೆಲ್ಲರು ಇವರ ಅಧ್ಯಕ್ಷರಾದ ಶ್ರೀಮತಿ ಕೋಂಗಂಡ ಬೋಳವ್ವ ಅಚ್ಚಯ್ಯನವರ ಏರ್ಪಾಡಿಗೆ ಸರಿಯಾಗಿ ಅಡಯಾರಿನಲ್ಲಿರುವ 'ಆಕ್‌ಕಾಟ' ತೋಟದಲ್ಲಿ ಸುಮಾರು 10 ಗಂಟೆಗೆ ವನ ಭೋಜನಕ್ಕೆ ಸೇರಿದರು. ಶ್ರೀಮತಿ ಕೋದಂಡ ಚಿನ್ನಮ್ಮ ಕಾರ್‍ಯಪ್ಪನವರು ಮಾ. ಶ್ರೀ. ತಿಮ್ಮಯ್ಯ ಪುಂಜ ಎಂ. ಎಲ್. ಸಿ. ಯವರೂ ಮಾ. ಶ್ರೀ. ನಾರ್ಬಂಗಡ ದೇವಯ್ಯ ಬಿ. ಎ. ಯವರೂ ನೆಂಟರಾಗಿ ಬಂದಿದ್ದರು. ಅನಾನುಕೂಲದ ಕಾರಣ ಈ ಸಭೆಯನ್ನು ಸಂಕ್ರಮಣ ಕಳೆದ ಮೇಲೆ ಮಾಡಬೇಕಾಗಿದ್ದರಿಂದ "ಕಣಿ" ಪೂಜೆಯನ್ನು ಮಾಡಲಿಲ್ಲ.

ಮಧ್ಯಾಹ್ನ 12-30ಕ್ಕೆ ಸರಿಯಾಗಿ "ನಿಯೋಕೋಮಲವಿಲಾಸ" ದವರು ಒಂದು ಅನ್ನ ಒದಗಿಸಿದರು. ರಸಭರಿತವಾಗಿತ್ತು. ವಾತ. ಕಥೆಯ ಮಧ್ಯೆ ಭೋಜನವಾಯಿತು. ತಾಂಬೂಲವನ್ನು ಸ್ವೀಕರಿಸಿದ ಮೇಲೆ ಮರದ ನೆರಳಿನಲ್ಲಿ ದುಪಟಿಗಳ ಮೇಲೆ ಎಲ್ಲರೂ ಆಸೀನರಾಗಿದ್ದರು. ಶ್ರೀಮತಿ ಅಚ್ಚಕ್ಕ ಅಚ್ಚಯ್ಯನವರು ಅವರ ವೀಣೆಯೊಡನೆ ಸಭಿಕರ ಮನವನ್ನಾನಂದಗೊಳಿಸುವಂತೆ ಗಾನ ಮಾಡಿದರು. ಶ್ರೀಮತಿ ಕಮಲ ಅಚ್ಚಯ್ಯನವರು ಫಿಡಲಿನೊಡನೆ ಸ್ವಾರಸ್ಯವಾಗಿ ಹಾಡಿದರು. ಮಿಸ್ ಅಚ್ಚಯ್ಯನವರು ಪುಟ್ಟ ಒಂದು ಇಂಗ್ಲಿಷ್ ಗಾನವನ್ನು ಹಾಡಿ ಎಲ್ಲರನ್ನು ಸಂತೋಷಪಡಿಸಿದರು. ಮಾ. ಶ್ರೀ. ಕೇಳಪಂಡ ಮಯ್ಯಣ್ಣನವರು ರಾಗಮಾಲೆಯಲ್ಲಿ ಬಹಳ ನವೀನವಾದ ಸ್ವರಗಳನ್ನು ನುಡಿದರು. ಮ. ತಿಮ್ಮಯ್ಯ ಪುಂಜರವರ ಗಾನವು ಬಹಳ ಸೊಗಸಾಗಿತ್ತು.

ಆ ಮೇಲೆ ಕೈ ಚಟುವಟಿಕೆ ಆಟ ಮೊದಲಾದ ಕೆಲವು ಆಟಗಳನ್ನಾಡಿ ಎಲ್ಲರೂ ಸಂತೋಷಪಟ್ಟರು. ಕೆಲವರ ಮನಸ್ಸು ಸ್ವಕಾಲಂಕಾರವು ಮೋಹಿಸಿ ಬೋರ್ಗರೆಯುತಿದ್ದ ಸಾಗರದ ದಡಕ್ಕೂ ದೂರದೂರದಲ್ಲಿರುವ ಬೆಟ್ಟ ನೆಲಗಳಿಗೂ ಕೊಂಡೊಯ್ದಿತು.

4-30 ಗಂಟೆಗೆ ಟೀ ಮತ್ತು ವಿ ಲಘು ಫಲಾಹಾರವಾಯಿತು. ಆ ಮೇಲೆ ಎಲ್ಲರೂ ಸಾಗರದ ದಡವನ್ನು ಸೇರಿದರು. ಹೆಂಗಸರು ಮಕ್ಕಳು ನೀರಿನಲ್ಲಿಳಿದಾಡಿದರು. ಹಲಕೆಲವರು ಸಾಗರ ಸ್ನಾನವನ್ನು ಗೈದರು.

ಸಾಯಂಕಾಲವು ಸಮೀಪಿಸುತ್ತಲೆ 'ಎಷ್ಟು ಬೇಗನೆ ಸಾಯಂಕಾಲವಾಯಿತು' ಎಂದೆಂದುಕೊಂಡು ಎಲ್ಲರು ಗೃಹಮುಖರಾಗಲು ಸಿದ್ಧರಾದರು. ಆ ಸಮಯದಲ್ಲಿ ಕೋದಂಡ ಚಿನ್ನಮ್ಮ ಕಾರ್‍ಯಪ್ಪನವರು ನೆಂಟರ ಪರವಾಗಿ ಅವರಿಗೆಲ್ಲ ಸತ್ಕಾರಕ್ಕೆ ಎಲ್ಲರನ್ನೂ ಮುಖ್ಯವಾಗಿ ಉಪಾಧ್ಯಕ್ಷರನ್ನು ವಂದಿಸಿದರು. ಈ ಉತ್ಸವವನ್ನು ಎಲ್ಲರ ಆಶೆಗೆ ಮೀರಿದಷ್ಟು ಚೆನ್ನಾಗಿ ನಡಿಸಿದ್ದಕ್ಕೆ ಮ. ಶ್ರೀ. ಗುಮ್ಮಟಿರ ಗಣಪತಿಯವರು ಹಾಸ್ಯ ರಸಭರಿತವಾದ ಒಂದು ಪತ್ರವನ್ನೋದಿ ಮಾ. ಶ್ರೀ. ಅಚ್ಚಯ್ಯನವರನ್ನು ಅವರ ಧರ್ಮಪತ್ನಿಯನ್ನು ಬಹಳ ವಂದಿಸಿದ್ದಲ್ಲದೆ ನೆಂಟರಿಷ್ಟರನ್ನೆಲ್ಲಾ ವಂದಿಸಿದರು.

ನ. ಟಿ. ಸುಬ್ಬಯ್ಯ,
ಗೌರವ ಕಾರ್ಯದರ್ಶಿ.

---

### ರಾತ್ರಿಕಾಲದಲ್ಲಿ ದನಗಳ ಹಾವಳಿ.

ಅಯ್ಯಾ,

ಪಬ್ಲಿಕ್ ರಸ್ತೆಯ ಬಾಜಿನಲ್ಲಿ ದನಕರುಗಳನ್ನು ಮೇಯಿಸುವುದರಿಂದ ಮೋಟಾರ್ ಬಸ್ಸುಗಳಲ್ಲಿ ಹೋಗುವ ಪ್ರಯಾಣಿಕರಿಗೆ ಬಹಳ ಅಡಚಣೆಗಳು ಆಗುತ್ತವೆ. ಆದ್ದರಿಂದ ದನದ ಮಾಲೀಕರು ರಸ್ತೆ ಬಾಜಿನಲ್ಲಿ ತಮ್ಮ ದನಕರುಗಳನ್ನು ಬಿಡ ಕೂಡದಾಗಿಯೂ ಬಿಟ್ಟರೆ ಅಂಥವರ ಮೇಲೆ ಕ್ರಿಮಿನಲ್ ಚಾರ್ಜಾಗುತ್ತದೆ ಎಂದನ್ನು ಪ್ರಕಟಿಸಿದ್ದು ನಾನು ಈ ಮೊದಲು ಪತ್ರಿಕೆಯಲ್ಲಿ ಓದಿದ ಸಂಗತಿಯು ಈಗ ಜ್ಞಾಪಕವಾಗುತ್ತೆ. ಟೌನು ಅಲ್ಲದ ರಸ್ತೆಯಲ್ಲಿ ಹಗಲು ಹೊತ್ತು ದನಗಳನ್ನು ಮೇಯಿಸಕೂಡದೆಂಬ ಕಾನೂನು ಇರುವಾಗ್ಗೆ ಮಡಿಕೇರಿ ಟೌನಿನ ಹಲವು ರಸ್ತೆಗಳಲ್ಲಿ ಪ್ರತಿ ದಿನ ರಾತ್ರಿ ಏಳು ಇಲ್ಲ ಎಂಟು ಗಂಟೆಯಿಂದ ಬೆಳಗ್ಗೆ ಆರು ಯಾ ಏಳು ಗಂಟೆಯ ವರೆಗೆ ರಸ್ತೆಯಲ್ಲಿ ಸಗಣಿ ಹಾಕಿಕೊಂಡು ಮಲಗಿಕೊಂಡು ಮತ್ತು ತಿರುಗಾಡಿಕೊಂಡು ಇರುವ ದನಕರುಗಳ ಮತ್ತು ಆಡುಗಳ ವಿಷಯದಲ್ಲಿ ಮುನ್ಸಿಪಾಲಿಟಿಯವರಾಗಲಿ ಅಥವ ಪೊಲೀಸ್ ಇಲಾಖೆಯವರಾಗಲಿ ಯಾವ ನಿಗ ತೆಗೆದುಕೊಳ್ಳದ ವಿಷಯದಲ್ಲಿ ತುಂಬಾ ವ್ಯಸನ ಪಡುತ್ತೇನೆ. ಪೇಟೆಯಲ್ಲಿ ದನಕರುಗಳನ್ನು ಸಾಕುವ ಮಾಲೀಕರು ಕರೆಯುವ ಹಸು ಎಮ್ಮೆಗಳನ್ನು ಮಾತ್ರ ರಾತ್ರಿ ಕಾಲದಲ್ಲಿ ಕಟ್ಟುವದೇ ವಿನಹ ದನಕರುಗಳನ್ನು ಮತ್ತು ಆಡುಗಳನ್ನು ಸಹ ಪೋಲಿ ಬಿಡುವದ್ದರಿಂದ ರಾತ್ರಿ ಕಾಲದಲ್ಲಿ ಬೆಳಕಿಲ್ಲದ ರಸ್ತೆಯಲ್ಲಿ ಹೋಗಲಿಕ್ಕೆ ಬಹಳ ಭಯವಾಗುತ್ತೆ. ಅಲ್ಲದೆ ಮಳೆ ಬಂದ ಸಮಯದಲ್ಲಿ ದನಗಳು ಮತ್ತು ಆಡುಗಳು ಸಹ ಮನೆ ಜಗಲಿಯನ್ನೇ ಕೊಟ್ಟಿಗೆಯಾಗಿ ಉಪಯೋಗಿಸುತ್ತವೆ. ಮುನ್ಸಿಪಲ್ ರಸ್ತೆಯಲ್ಲಾಗಲೀ ಅಥವಾ ಮುನ್ಸಿಪಲ್ ಜಾಗದಲ್ಲಿಯಾಗಲೀ ಕಂಡ ಹಂದಿಗಳನ್ನು ಗುಂಡು ಹೊಡೆಯಬೇಕೆಂಬದಾಗಿ ಕಾನೂನು ಮಾಡಿರುವಾಗ ರಾತ್ರಿ ಹೊತ್ತು ರಸ್ತೆಯಲ್ಲಿ ತಿರುಗಾಡುವ ದನಕರುಗಳ ಮತ್ತು ಆಡುಗಳ ವಿಷಯದಲ್ಲಿ ಮುನ್ಸಿಪಲ್ ಇಲಾಖೆಯವರು ಮಾಡಿದ ಕಾನೂನು ಏನೂ ಈ ವರೆಗೆ ಕಂಡು ಬರುವದಿಲ್ಲ. ಆದದ್ದರಿಂದ ಇನ್ನು ಮುಂದಾದರೂ ಇದಕ್ಕೆ ತಕ್ಕ ಬಂದೋಬಸ್ತು ಮಾಡುವ ಹಾಗೆ ಮುನ್ಸಿಪಲ್ ಇಲಾಖೆಯವರಾಗಲಿ ಅಥವ ಪೊಲೀಸ್ ಇಲಾಖೆಯವರಾಗಲಿ ನಿಗ ತೆಗೆದುಕೊಳ್ಳಬೇಕಾಗಿ ನನ್ನ ಕೋರಿಕೆ.

ಪಟ್ಟವಾಸಿ.

---

### ಅಮ್ಮತ್ತಿನಾಡಿನ ಸಹಕಾರಿ ಸಂಘ.

ಅಯ್ಯಾ ಎಡಿಟರವರೇ,

ಅಮ್ಮತ್ತಿನಾಡಿನ ಸ್ಥಳೀಯ ಸಹಕಾರಿ ಕೂಟದ ಸ್ಪೆಶ್ಯಲ್ ಕಮಿಟಿ ಮೀಟಿಂಗಿನ ಪ್ರೊಸಿಡಿಂಗ್ಸನ್ನು ವಾಚಕ ಮಹಾಶಯರ ತಿಳುವಳಿಕೆ ಒಗ್ಯೆ ಕಳುಹಿಸಿರುತ್ತೇನೆ.

1. ಅಕ್ಟೋಬರು ತಾರೀಕು 12ರಲ್ಲು ಮಾ. ಶ್ರೀ. ಕುಟ್ಟಂಡ ತಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಮೀಟಿಂಗಿನಲ್ಲು ಈ ನಾಡಿನ ಸಂಘಗಳ ಪ್ರತಿನಿಧಿಗಳೂ ಮೆಂಬರರು ಸಹ ಸೇರಿ 80 ಜನರೂ ಆ ನಾಡಿನ ಸುಪರ್ ವೈಜರೂ ಸಹ ಹಾಜರಿದ್ದರು. ಕೊಡಗು ಕೋಪರೇಟಿವ್ ಸಂಘಗಳ ರಿಜಿಸ್ಟ್ರರ ಆಫೀಸು ನಂಬರು 392 ರ ಸರ್ಕ್ಯುಲಾರಿನಲ್ಲಿ ನಮೂದಿಸಿರುವ ರಿಸರ್ವ್ ಫಂಡಿನ ಶೇಕಡ 50ರನ್ನಾದರೂ ಸದ್ಯಕ್ಕೆ ಸೆಂಟ್ರಲ್ ಬ್ಯಾಂಕಿನಲ್ಲಿಯಾಗಲೀ ಅಥವ ಭದ್ರವಾದ ಸಂಸ್ಥೆಯಲ್ಲಾಗಲೀ ಡಿಪಾಜಿಟ್ಟು ಇಡಬೇಕಾದ ಸಂಗತಿಯುಳ್ಳ ಒಂದ ಸರ್ಕ್ಯುಲಾರ್ ಓದಲಾಯಿತು.

2. ಇದು ಸಂಘಗಳಿಗೆ ನಷ್ಟಕರವೆಂದು ಕಂಡು ಬರುವದರಿಂದ ಈ ವಿಷಯದಲ್ಲಿ ದೇಶದ ಎಲ್ಲಾ ಸಹಕಾರಿ ಸಂಘಗಳ ಕಾನ್‌ಫರೆನ್ಸು ನಡಿಸುವದಕ್ಕೆ ನೋಟೀಸ್ ಕೊಡುವಂತೆ ತೀರ್ಮಾನವಾಯಿತು.

3. ಇದರ ಖರ್ಚಿಗಾಗಿ ಈ ಸಂಘದ ಡಿಪಾಜಿಟ್ಟಿನಿಂದ ಹತ್ತು ರೂಪಾಯಿ ಸೆಕ್ರೆಟರಿಯವರಿಗೆ ಕೊಡಲ್ಪಟ್ಟಿದೆ.

4. ಈ ಮೊಬಲಗಿನಲ್ಲಿ ಬರುವ ನವಂಬರು ತಾ. 14ನೆ ಬುಧವಾರ ವೀರರಾಜೇಂದ್ರಪೇಟೆ ರೀಡಿಂಗ್ ರೂಂ ಒಳ ಮೀಟಿಂಗಿಗೆ (ಕಾನ್‌ಫರೆನ್ಸ್) ಸೇರುವಂತೆ ಒಂದು ಸಾವಿರ ನೋಟೀಸು ಪ್ರಿಂಟು ಮಾಡಿಸುವಂತೆ ತೀರ್ಮಾನವಾಯಿತು.

5. ಈ ಕಾನ್‌ಫರೆನ್ಸಿಗೆ ರಿಜಿಸ್ಟ್ರಾರವರು ಅಧ್ಯಕ್ಷಸ್ಥಾನವನು ವಹಿಸಿಕೊಳ್ಳುವಂತೆ ಕೇಳಿಕೊಳ್ಳಬೇಕಾಗಿ ತೀರ್ಮಾನವಾಯಿತು.

ಅಮ್ಮತ್ತಿ, ಮಾಚಿಮಂಡ ಬಿದ್ಧಯ್ಯ,
13—10—28. ಗೌರವ ಕಾರ್ಯದರ್ಶಿ.

---

### ಶ್ರೀ ರಾಮಕೃಷ್ಣ ಸಂಸ್ಥೆಯೂ ವಿದ್ಯಾರ್ಥಿ ಭವನಗಳೂ.

ಮೇಲ್ಕಂಡ ಸಂಸ್ಥೆಗೆ ಸೇರಿದ ಶ್ರೀ ಶಾರದಾಶ್ರಮದ ಸ್ವಾಮಿಗಳು ಕೊಡಗಿನ ಕೆಲವು ವಿದ್ಯಾರ್ಥಿ ಭವನಗಳನ್ನು ವಹಿಸಿಕೊಂಡು ಅಭಿವೃದ್ಧಿಗೆ ತರುವ ವಿಷಯ ಮುತುವರ್ಜಿಯುಳ್ಳವರಿರುತ್ತಾರೆಂದು ತಿಳಿಯಲಾಯಿತು. ಈ ವಿಷಯ ಪ್ರಿಯ ವಾಚಕರಲ್ಲಿ ಕೆಲವು ಮಾತುಗಳು ನಿರರ್ಥಕವೆಂದು ಹೇಳಲಾಗದು. ಯಾಕೆಂದರೆ, ಈ ದೇಶದಲ್ಲಿ ಕೆಲವರಿಗೆ ಮಾತ್ರ ಈ ಸಂಸ್ಥೆಯ ಸ್ವಭಾವವೂ ಕೆಲಸಕಾರ್ಯಗಳೂ ಗೊತ್ತೇ ಹೊರತು ಹಲವರಿಗೆ ತಿಳಿದಿಲ್ಲವು. ಆ ಕಾರಣ ಸಾಧಾರಣ ಕಳೆದ ಧರ್ಮ ಸಂಸ್ಥೆಗಳನ್ನು ಕಡೆಗಣ್ಣಿನಿಂದ ನೋಡತಕ್ಕ ಆಧುನಿಕ ಜನಸಾಮಾನ್ಯರು ಇದರ ವಿಷಯಕ್ಕೂ ತಪ್ಪೋರೀತಿಯ ಉದಾಸೀನ ಭಾವವನ್ನಿಡುವದರಲ್ಲಿ ಸಂಶಯವಿಲ್ಲ. ಅಂಧನರು ಈ ಸಂಸ್ಥೆಯೆಂದರೆ ಒಂದೇ ವೇದವನ್ನು ಹರಡುವ ವಿಭೂತಿಧಾರಣರೂ, ಜಟಾಪಟಲರೂ, ಉಂಡಾಡಿಗಳೂ ಆದ ಸನ್ಯಾಸಿ ನಾಮ ಮಾತ್ರದವರ ಕೂಟವಲ್ಲವೆಂತಲೂ ಬದಲಾಗಿ ಇರುವ ದೇಶೀಯರ, ಯುಕೆ, ಇಂದೀ ಮಾನವ ವರ್ಗದ ದೈವಿಕ, ನೈತಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ಅಭಿವೃದ್ಧಿಗೆ ತರಲೋಸುಗ ಅಹರ್ನಿಶಿಯಲ್ಲಿ ಚಣಗಾರತಕ್ಕ ಕಾವಿಯುಳ್ಳ ಸಿಪಾಯಿ ದಂಡೆಂದೇ ತಿಳಿಯತಕ್ಕದ್ದು. ಭಾರತೋದ್ಧಾರದ ಧ್ಯೇಯವು ರಾಜಕೀಯ ಚಳವಳದ ಮಹಾತ್ಮರದೆಷ್ಟೋ ಅಷ್ಟೇ ಇವರದೂ ಇದೆ. ಆದರೆ ರಾಜಕೀಯರು ಹಲವುವೇಳೆ ಸರ್ಕಾರದವರ ವಿರೋಧಿಗಳೆಂದು ತೋರುವಲ್ಲಿ ಈ ಸಂಸ್ಥೆಯವರು ಅವರ ಸಹಾನುಭೂತಿಯಿಂದ, ಸಾವಧಾನವೃತ್ತಿಯಿಂದ ತಮ್ಮ ಮಹತ್ಕಾರ್ಯಗಳನ್ನು ನೆರವೇರಿಸಿಕೊಳ್ಳುವರು. ಇದಕ್ಕೆ ಇವರು ದೇಶದ ಇತರ ಕಡೆಗಳಲ್ಲಿ ತೆರೆದಿರತಕ್ಕ ಗುರುಕುಲವಾಸಗಳೂ, ವಿದ್ಯಾರ್ಥಿ ಭವನಗಳೂ, ಆಸ್ಪತ್ರೆಗಳೂ, ಕೈಗಾರಿಕೆ ಶಾಲೆಗಳೂ ನಿದರ್ಶನಗಳಾಗಿವೆ. ಹೀಗಿರುವಲ್ಲಿ ಈ ಸಂಸ್ಥೆಯವರು ನಮ್ಮ ರಾಷ್ಟ್ರದಲ್ಲಿ ಮಠವೊಂದನ್ನು ಸ್ಥಾಪಿಸಿಕೊಂಡು ನಮ್ಮ ಅಭಿವೃದ್ಧಿಯನ್ನು ಕೋರುವಾಗ ನಾವು ದೃಢಚಿತ್ತದಿಂದ ಸಹಕರಿಸುವದು ತಕ್ಕುದಿದೆ.

ಶಾಲಾ ವಿದ್ಯಾರ್ಥಿ ಭವನಗಳ ಸದ್ಯದ ಪರಿಸ್ಥಿತಿಯು ಪ್ರಜೆಗಳಿಗೆ ತೃಪ್ತಿಕರವಲ್ಲವೆಂಬ ಮಾತುಕಥೆಗಳಲ್ಲೂ, ಪತ್ರಿಕೆಗಳಲ್ಲೂ ಕೆಲವುವೇಳೆ ತಿಳಿದಿರುತ್ತೇವೆ. ಇದಕ್ಕೆ ಕಾರಣರು ಯಾರೆಂದು ಹೇಳಲಾಗುವುದಿಲ್ಲ. ಪೋಷಕರ ಜಿಪುಣತನವೇ? ಬಾಲಕರ ಉದಾಸೀನವೇ? ಬಾಲಕರ ಮೇಲ್ವಿಚಾರಕರ ತಪ್ಪು ಯಾವದೆಂದು ಹೇಳಲಾಗುವುದಿಲ್ಲ. ಹ್ಯಾಗೂ ಅದು ಸರಿಯಲ್ಲ ಎಂಬದು ಸರ್ವವೇದ್ಯವಾದ ಸಂಗತಿ. ಶಾಲಾ ಅಧಿಕಾರಿಗಳು ಇವುಗಳನ್ನು ಸುವ್ಯವಸ್ಥೆಯಲ್ಲಿ ಇಡಲಾರರೆಂಬದಲ್ಲ. ಅವರಿಗೊಂದು ಅಡಚಣೆಯುಂಟು. ಹಣದ ಅಭಾವವೇ ಆ ಅಡಚಣೆ. ಯಾವ ತರದ ಅಭಿವೃದ್ಧಿಗೂ ಹಣವು ಬೇಕು. ಶಾಲಾ ಅಧಿಕಾರಿಗಳಿಗೆ ತಕ್ಕಷ್ಟು ದ್ರವ್ಯ ಸಹಾಯವು ಸಿಗುವುದಿಲ್ಲ. ಶ್ರೀರಾಮಕೃಷ್ಣ ಸಂಸ್ಥೆಯಾದರೋ ಸರಕಾರದವರನ್ನೆ ಸಹಕರಿಸುತ್ತಾದರೂ ಹಣದ ಮಟ್ಟಿಗೆಗೂ, ಸೇವೆಯ ಮಟ್ಟಿಗೆಗೂ ಪ್ರಜಾವಲಂಬಿಯಾಗಿರುತ್ತೆ. ಆ ಕಾರಣ ಅದರ ಕಾರ್ಯಗಳು ಜಯ ಹೊಂದುವವು. ಅಲ್ಲದೆ ಮೇಲ್ಕಂಡ ಸಂಸ್ಥೆಯವರು ಹಲವು ಕಡೆ ಇಂಥಾ ಏರ್ಪಾಡುಗಳನ್ನು ಮಾಡಿಕೊಂಡು ನಡಿಸುತ್ತಿರುವ ಕಾರಣ ಅವರ ಪೂರ್ವಾನುಭವವು ಯಥೇಷ್ಟವಾಗಿದೆ. ಅದರ ದೆಸೆಯಿಂದ ನಮ್ಮ ದೇಶದಲ್ಲಿ ಅವರ ಪ್ರಯತ್ನವು ಸಫಲವಾಗುವುದೆಂಬದರಲ್ಲಿ ಸಂಶಯವಿಲ್ಲ.

ಮೇಲ್ಕಂಡ ವಿಷಯಕ್ಕೆ ಹಲವು ತರದ ವಾದ ವಿವಾದಗಳು ಹುಟ್ಟುತ್ತಿವೆ. ಒಂದೇನಂದರೆ—ಸದರಿ ಸಂಸ್ಥೆಯವರು ತಮ್ಮ ತತ್ವಗಳನ್ನು ಬಾಲಕರಲ್ಲಿ ಅಂಕುರಿಸುವರೆಂದು. ಇದರಲ್ಲಿ ವಿಶೇಷವೇನಿದೆ? ವೇದಾಂತ ಮತವೆಂಬ ಮತವೇ ಇಲ್ಲ. ಹಿಂದೂಮತದ ಸಾರಾಂಶವೇ ವೇದಾಂತ. ಕೊಡಗಿನ ಎಲ್ಲ ಬಾಲಕೀಯರೂ ಹಿಂದೂಮತದವರು, ಸಂಸ್ಥೆಯೂ ಹಿಂದೂ ಮತದ್ದು ಆದ ಮೇಲೆ ಅದರಲ್ಲಿ ಮಿಥ್ಯವಾದದ್ದೇನಿದೆ? ವಿದ್ಯಾರ್ಥಿ ಭವನಗಳು ಅವರ ವಶದಲ್ಲಿದ್ದರೆ ಅವರು ತಮ್ಮ ತತ್ವಗಳನ್ನು ಬೋಧಿಸುವರೆಂಬ ಶಂಕೆಯೇಕೆ? ಅದನ್ನು ಬೇಕಾದರೆ ನಾವು ನಿರೋಧಿಸಬಹುದು. ಕ್ರಿಸ್ತೀಯ ಸಂಸ್ಥೆಯವರ ವಿದ್ಯಾರ್ಥಿ ಭವನಗಳಲ್ಲಿ ಅಂಥ ಭೀತಿಗೆ ಕಾರಣವನ್ನು ನಾವು ಕಾಣಲಿಲ್ಲವಲ್ಲವೇ? ಪ್ರತಿ ಗೃಹಗಳ ಅತ್ಯಂತ ರತಕ್ಕ ಹೆಣ್ಣುಗಳ ಹೆರಬೇತನ್ನು ನಾವು ಕ್ರಿಸ್ತೀಯರಿಂದ ನೆರವೇರಿಸಿಕೊಳ್ಳಲು ಹಿಂಜರಿದಿಲ್ಲ, ಅಂದಮೇಲೆ ಹಿಂದೀಯರಿಂದ ನೆರವೇರಿಸಿಕೊಳ್ಳಲು ಹಿಂಜರಿದಲ್ಲು ಅದು ನಮ್ಮ ಅಧಮತನವೇ ಸರಿ! ಈ ಸಂಸ್ಥೆಯವರು ಹಿಂದೂ ತತ್ವಗಳನು ಪ್ರಚಾರಕ್ಕೆ ತಂದು ಈ ದೇಶದಲ್ಲಿ ಮತ್ತು ಅನ್ಯ ದೇಶಗಳಲ್ಲಿ ಮಠ ಸ್ಥಾಪನೆ ಮಾಡಿ ಮರ್‍ಯಾದಿತರಾಗಿರುವರು. ಇದರ ತತ್ವಗಳು ಸರ್ವ ಮತಸ್ಥರಿರುಳೆಂದು ಹಲವು ದೇಶೀಯ ಮತ್ತು ಅನ್ಯದೇಶೀಯ ಪಂಡಿತನೀಯರು ಕಲಿಬಾಗಿರುವರು. ಪ್ರತಿ ವ್ಯಕ್ತಿಯಲ್ಲಿ ಪುರುಷ ಮತ್ತು ಎಲ್ಲಾ ವ್ಯಕ್ತಿಗಳಲ್ಲೂ ಸಹೋದರತ್ವವನ್ನು ವೃದ್ಧಿಪಡಿಸುವುದೇ ಇವರ ಧ್ಯೇಯ. ಹೀಗಿರುವಲ್ಲಿ ನಮಗೆ ಅಹಿತವಾದ ಯಾವನ್ನೂ ಇವರು ನಮ್ಮ ಬಾಲ ಬಾಲಕಿಯರಿಗೆ ಬೋಧಿಸರು.

ಸದ್ಯದಲ್ಲಿ ಇವರು ಪೊನ್ನಂಪೇಟೆ ಶಾಲೆಯ ವಿದ್ಯಾರ್ಥಿ ಭವನವನ್ನೂ, ವೀರರಾಜಪೇಟೆಯದನ್ನೂ ವಹಿಸಿಕೊಳ್ಳುವದಲ್ಲದೆ ವೀರರಾಜಪೇಟೆಯಲ್ಲಿ ಬಾಲಕೀಯರ ಭವನ ಒಂದನ್ನು ತೆರೆಯುವರೆಂದು ತಿಳಿಯುತ್ತೇವೆ. ಇದರಿಂದ ಇಷ್ಟರ ವರೆಗೆ ನಮ್ಮ ಸರಕಾರದ ಹಣ ಸಂಕೋಚ ನಿಮಿತ್ತ ಅಸಾಧ್ಯವಾಗಿದ್ದ ಬಾಲಕರ ವಿಶಾಲವಾದ ಭವನವೂ, ಹೈಸ್ಕೂಲಿನ ಮೋಡಲ್ ಸೆಕ್ಷನ್ (ಲೆಕ್ಕದ ಶಾಖೆ) ಸಾಧ್ಯವಾಗುತ್ತೆ. ಈ ಸಂಸ್ಥೆಯವರು ಈ ನಿಮಿತ್ತ ಒಂದು ಕಟ್ಟಡವನ್ನು ಕೊಂಡುಕೊಳ್ಳಲಿರುತ್ತಾರೆ. ಆದರಿಂದ ಹೈಸ್ಕೂಲನ್ನು ಮೋಡಲ್ ಮತ್ತು ಗರ್ಲ್ ಶಾಲೆಗಳ ಕಟ್ಟಡಗಳಿಗೆ ವರ್ಗಾಯಿಸಿ ಬಾಲ ಬಾಲಕಿಯರ ಎರಡು ಭವನಗಳಿಗೆ ಎಡೆಯಾಗುವದಲ್ಲದೆ ಲೆಕ್ಕದ ಶಾಖೆಯನ್ನು ತೆರೆಯಲು ಸ್ಥಳ ದೊರೆಯುವದು. ಈ ವಿಷಯಕ್ಕೆ ಸರ್ಕಾರದವರೂ, ಶಾಲಾ ಅಧಿಕಾರಿಗಳೂ ಕೌನ್ಸಿಲ್ ಮೆಂಬರುಗಳೂ ನಿಗ ಇಟ್ಟು ಪ್ರಜಾ ಸೌಖ್ಯವನ್ನು ಬಯಸದಿರಲಾರರು.

ಇದರಲ್ಲಿ ಮತ್ತೊಂದು ಮಿಥ್ಯವಾದವೇನಂದರೆ, ವೀರರಾಜಪೇಟೆಯಲ್ಲಿ ಬಾಲಕಿಯರ ಭವನವೂ, ಲೆಕ್ಕದ ಶಾಖೆಯೂ ತೆರೆಯಲ್ಪಟ್ಟಲ್ಲಿ ಮಡಿಕೇರಿ ಬಾಲಿಕಾ ಶಾಲೆಯ ಮತ್ತು ಹೈಸ್ಕೂಲಿನ ವಿದ್ಯಾರ್ಥಿಗಳ ಸಂಖ್ಯೆಯು ಇಳಿಯುವದೆಂದು. ಇದು ಸ್ವಪ್ನದ ಭೀತಿಯೇ ಹೊರತು ಜಾಗ್ರತವಸ್ಥೆಯದಲ್ಲ. ಯಾಕಂದರೆ ಮಡಿಕೇರಿಯ ಮತ್ತು ಉತ್ತರ ಕೊಡಗಿನ ನಿವಾಸಿಗಳು ತಮ್ಮ ಮಕ್ಕಳನ್ನು ಮಡಿಕೇರಿಯಲ್ಲಿಯೇ ಇಡುವರು. ಇಲ್ಲಿ ವಿದ್ಯಾರ್ಜನೆ ಮಾಡುವ ದಕ್ಷಿಣ ಕೊಡಗಿನವರ. ಬಹಳ ಕಡಿಮೆ. ತಮ್ಮಲ್ಲಿಯ ಶಾಲೆಗಳಲ್ಲಿ ಸಂಖ್ಯೆ ಕಡಿಮೆಯಾಗಕೂಡದೆಂಬ ಈ ರೀತಿಯ ಸ್ವಾರ್ಥತೆಯ ವಾದವನ್ನು ಹೂಡುವದು ಸರಿಯಲ್ಲ.

ಮೇಲ್ಕಂಡ ವಿದ್ಯಾರ್ಥಿಭವನಗಳು ಈ ಸಂಸ್ಥೆಯವರ ವಶವಾಗುವದು ನಮ್ಮ ಭಾಗ್ಯವೆಂದೇ ಹೇಳಬೇಕು. ದೇಶದ ಬಾಲ ಬಾಲಿಕೆಯರ ಉತ್ತಮ ಶರಗತಿಗೆ ಇದೊಂದು ಪ್ರಥಮ ಸೋಪಾನವೆಂದೇ ಹೇಳಬೇಕು. ಈ ವಿಷಯ ಕೊಡಗು ಮಿತ್ರನವರು, ಶಾಲಾ ಅಧಿಕಾರಿಗಳು, ಪ್ರಜಾಪ್ರತಿನಿಧಿಗಳು ದಯವಿಟ್ಟು ನಿಗವಿಟ್ಟು ಸಂಸ್ಥೆಯವರಿಗೆ ಇದನ್ನು ವಹಿಸಿಕೊಡಬೇಕು. ವಾಚಕ ಮಹಾಶಯರು, ಲಿಖಿತವು ಲಂಬವಾದಲ್ಲು ವಿಷಯದ ಮಹತ್ವವನ್ನು ಗಮನಿಸಿ ನನಗೆ ಕ್ಷಮೆಯನ್ನೀಯಬೇಕು.

ಹಿತವಾದಿ.

ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಿರಿ, ಸಜ್ಜನರು

## ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ (ಮಾಸ ಪುಸ್ತಕ)

(ಎರಡನೆಯ ವರ್ಷಾರಂಭವಾಗಿದೆ.)

ಹರಿದಾಸ ಸೇವಾ ಸಮಿತಿ' ಯವರಿಂದ ಬಹಳ ಶುದ್ಧ ರೀತಿಯಲ್ಲಿ ಪರಿಶೋಧಿಸಲ್ಪಟ್ಟು ಮಾಸ ಸಂಚಿಕಾ ರೂಪ ಪ್ರಕಟವಾಗುತ್ತಲಿರುವ 'ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ' ಯನ್ನು ತಾವು ನೋಡಿರುವಿರಾ ಇಲ್ಲವಾದರೆ, ಇಂದೇ ಚಂದಾದಾರರಾಗಿರಿ! ಇದರಲ್ಲಿ ಜಗದ್ವಂದ್ಯರಾದ ಶ್ರೀ ಪುರಂದರದಾಸರು, ಶ್ರೀ ಕನಕದಾಸ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ನುಡಿದ ದಿವ್ಯ ಭಗವನ್ನಾಮ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ಕ್ರೌನ್ ಅಷ್ಟಪತ್ರದ ನಾಲ್ವತ್ತು ಪುಟಗಳ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿವೆ ಪ್ರತಿಯೊ ಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು

ವಾರ್ಷಿಕ ಚಂದಾ (ಅಂಚೇ ಹಾಸಲು ಉಚಿತ) ಸಾಮಾನ್ಯ ಪ್ರತಿ ರೂ. ೧–೪–೦ ಉತ್ತಮ ಪ್ರತಿ ರೂ ೨–೪–೦

## ಪ್ರಥಮ ಸಂಪುಟದ ಬೈಂಡಾದ ಪ್ರತಿಗಳು.

| | ಸಾದಾ ಬೈಂಡು | ದಪ್ಪ ರಟ್ಟಿನ ಬೈಂಡು | ಕಿತ್ತಾನಾದು ಬೈಂಡು |
|---|---|---|---|
| ಸಾಮಾನ್ಯ ಪ್ರತಿ | ೧–೪–೦ | ೧–೧೨–೦ | ೨–೪–೦ |
| ಉತ್ತಮ ಪ್ರತಿ | ೨–೪–೦ | ೨–೮–೦ | ೩–೦–೦ |

ಅಂಚೇಹಾಸಲು ಪ್ರತ್ಯೇಕ.

ವಿಳಾಸ— ಸುಬೋಧ ಪ್ರಕಟನಾಲಯ,

12–1 ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.



## ಬಾಗುಂಡಿ, ರುದ್ರಾಕ್ಷಿ ಅಂಚಿನ ಸೀರೆಗಳು.



ಈ ಸೀರೆಗಳು ಬೆಂಗಳೂರು ಅರಳೀಪೇಟೆ ಸೀರೆಗಳಂತೆಯೇ ಇರುವವು 18 ಮೊಳ ಉದ್ದವೂ 3 ಮೊಳ ಅಗಲವೂ ಇರುವವು. ಸುಂದರವಾದ ಲಕ್ಷ್ಮಿ ಮಾರಗ, ರುದ್ರಾಕ್ಷಿ, ಬಾಗುಡಿ ಅಂಚಿನವುಗಳು. ಒಟ್ಟು ಎರಡಿಗೂ ಹೆಚ್ಚಿಗದು ನೋಡಲು ಬಹು ಲಕ್ಷಣವಾಗಿರುವವು. ಬಂದ ನಂತರ ನೋಡಿ ಇಷ್ಟವಿಲ್ಲದಿದ್ದರೆ ವಾಪಸು ತೆಗೆದುಕೊಳ್ಳುವೆವು.

1ನೇ ನಂಬರು ಸೀರೆ 1ಕ್ಕೆ 7–12–0

2ನೇ ನಂಬರು ಸೀರೆ 1ಕ್ಕೆ 6–8–0

ವಿಳಾಸ—ಕೆ ನಾಥಮುನಿ ಅಂಡ್ ಸನ್ಸ್,

168 ಜೈನಾ ಬಜಾರ್ ರೋಡ್,

52–23 ಮದರಾಸು.



## ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚುಗಳು.



ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಖರೆ ಗಂಟೆಯನ್ನು ತೋರಿಸುವವು. ಇದರ ಕೇಸು ಭಂಗಾರಕ್ಕೆ ಸಮಾನವಾಗಿರುವದು. ಇದಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ಕರಿಸಿಕೊಳ್ಳುವವರಿಗೆ ಮಾತ್ರ ರೂ 4–1–0

ವಿಳಾಸ — ಲೀಗಲ್ ವಾಚ್ ಕಂ.,

52–23 ಪೋ ಬಾ, 263 ಮದರಾಸು.



# Arms, Ammunition and Shooting Requisites !!!



1928 Illustrated Catalogue Just Issued Free on Application !

| | | | |
|---|---|---|---|
| D B B L Rifles | Rs | 120 to | Rs 2750 |
| S B B L „ | „ | 35 to | 950. |
| D B B L Guns | „ | 50 to | „ 1350 |
| S B B L. „ | „ | 35 to | 275 |
| D B M L „ | „ | 45 to | 135 |
| S B M L „ | „ | 30 to „ | 80 |
| B. L Revolvers | „ | 35 to „ | 350 |
| Automatic Pistols | „ | 30 to „ | 150 |

Brilliant Search Light Lamp For Shooting Camping, Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates.

**GOOLAMHUSAIN ALLIBHOY & SONS,**

**Largest Importers of Firearms and Ammunition**

**Cheapest priced firm in India,**

24–6 210 Abdul Rehman Street, BOMBAY.

ಡಬ್ಬಲ್ ಮತ್ತು ಸಿಂಗಲ್ ತೋಟಾ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿವ ವಿದವ ಕ್ರಯದಲ್ಲಿ ಬದಗಿ ಕೊಡಲಾಗುವದು

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ತಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಅಷ್ಟರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ನೋಡಿರಿ.

**ಎಂ. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.**

ದ. ಹಿಂದೂಸ್ತಾನದ ಬಹು ಕಡಿಮೆ ಬೆಲೆಯ ಕಂಪೆನಿ.

24–21 12. ಚೈನಾಬಜಾರ್. ಮದ್ರಾಸ್

(ಪತ್ರಗಳನ್ನು ಇಂಗ್ಲೀಷಿನಲ್ಲಿ ಬರೆಯುವದು ಉತ್ತಮ.)



# ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

# ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

**ಉತ್ತಮ ತರಹದ ಸಿಂಗಲ್‌ರೀಡ್ಸ್ ಹಾರ್ಮೋನಿಯಂಗಳು.**

| | |
|---|---|
| ... ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 50–8–0 |
| ... ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 40–0–0 |
| ... ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 37–8–0 |
| ... ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 35–0–0 |
| ... ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 32–8–0 |

ಸಚಿತ್ರ ಕ್ಯಾಟಲಾಗ್ ಗೆ 6 ಪೈ ಸ್ಟ್ಯಾಂಪು ಕಳುಹಿಸಿ.

**ಉತ್ತಮ ತರಹದ 14" ಕ್ಯಾರೆಟ್ಸ್ ಬಂಗಾರದ ನಿಬ್ಬು ಹಾಕಿದ ಫೌಂಟನ್ ಪೆನ್‌ಗಳು.**

| | |
|---|---|
| ಬ್ಲಾಕ್ ಬರ್ಡ್ ಫೌಂಟನ್ ಪೆನ್ 1ಕ್ಕೆ | 3–9–0 ಮತ್ತು 3–12–0 |
| ಪರಲ್ಟ್ರಾ ಮೇಕರ್ ಫೌಂಟನ್ ಪೆನ್ 1ಕ್ಕೆ | 3–0–0 ಮತ್ತು 3–8–0 |
| ಕಾಂಪ್ಯಾಕ್ಟ್ ಸೆಲ್ಫ್ ಫಿಲ್ಲಿಂಗ್ ಫೌಂಟನ್ ಪೆನ್ 1ಕ್ಕೆ | 4–8–0 |
| ವಾಟರ್ ಮನ್ ಫೌಂಟನ್ ಪೆನ್ 1ಕ್ಕೆ | 8–0–0 ಮತ್ತು 8–8–0 |
| ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌಂಟನ್ ಪೆನ್ 1ಕ್ಕೆ | 12–0–0 ಮತ್ತು 15–0–0 |

**ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು**

| | |
|---|---|
| ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ | 4–8–0 |
| ವೆಸ್ಟ್ ಕ್ಲಾಕ್ ಕಂಪೆನಿಯ ಅಲಾರಂ ಟೈಂಪೀಸ್ 1ಕ್ಕೆ | 8–0–0 |
| ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ | 9–5–0 |
| ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ | 6–12–0 |
| ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ | 6–0–0 |

ಎಂ. ಎಸ್ ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ಮತ್ತು ಕ್ಲಾಕ್ ಗಳ ವ್ಯಾಪಾರಿಗಳು, ಮೈಸೂರು.

## ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್. ಕೋ ಅಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ

| | | ರೂ |
|---|---|---|
| ಶೇರ್ ಬಂಡವಾಳ | — | 30 000 |
| ವಸೂಲಾದ ಶೇರು ಹಣಗಳು | — | 17 131 |
| ಇಸ್ಕೂಲಿಂದ ಠೇವಣಾತಿ | — | 1 12 320 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

| | |
|---|---|
| ಪ್ರೆಸಿಡೆಂಟರು, | ಟ್ರೆಜರರ್ |
| ಕೋಳಿಮಾಡ ಅಪ್ಪಯ್ಯನವರು | ಕೊಂಗಟ್ಟೀರ ಅಪ್ಪಯ್ಯನವರು |
| ರಾವ್ ಬಹದ್ದೂರ್ | |

ಸೆಕ್ರೆಟರಿ

ಮೂಡೆಂಗ್ ವೆಂಕಟಯ್ಯನವರು ಬಿ.ಎ ಬಿ. ಎಲ್

ತಾರೀಕ 1—7—1928

## ನೋಟೀಸು.

ಈ ಕೆಳಗಿನ ಮಹನೀಯರು ಕೊಡಗು ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರು ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಏಜಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಪೇರಿಯಂಡ ಪೂವಯ್ಯನವರು

ದಕ್ಷಿಣ ಕೊಡಗಿಗೆ—ಮೆ ಚಂಗಂಡ ಕುಟ್ಟಪ್ಪನವರು

ಪೊನ್ನಂಪೇಟೆನಾಡ—ಮೆ ಕಾಳೇಂಗಡ ಚಿಣ್ಣಪ್ಪನವರು

ಶ್ರೀಮಂಗಲನಾಡ—ಮೆ ಅಜ್ಜಮಾಡ ಪೂದಪ್ಪನವರು

ಮರೆನಾಡು—ಮೆ ಕೇಕಡ ಅಪ್ಪಯ್ಯನವರು

ಸಬ್ ಏಜಂಟರುಗಳು

ವೀರರಾಜಪೇಟೆ—ಮ ಕಾಣತೀರ ನಾಣಪ್ಪನವರು,

ನಾಪೋಕ್ಲು—ಮೆ ಅರೆಯಡ ಸುಬ್ಬಯ್ಯನವರು

ಗೋಣಿಕೊಪ್ಪಲು—ಮ ಅಮ್ಮಣ ಪೂದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮ ಐನಂಡ ಪೂದಪ್ಪನವರು,

ಪೊನ್ನಂಪೇಟೆನಾಡು—ಮೆ ಪಿ ಎ ಸುಬ್ಬವೈಯ್ಯನವರು,

ಮ ಬಿಳೇರಿ & ತಿತಿಮತ್ತಿ—ಮ ಎ ಪೂದವೈಯ್ಯನವರು,

ಮೇನೇಜರ್

ಕೊಡಗು ಲಿಮಿಟೆಡ್, ಮಡಿಕೇರಿ

## ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನೂ ಇರಬೇಕಾದ ಅಮಿತ ಬಾಕಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಜಾರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ ಮೇನೇಜರ್

ಕೊಡಗು, ಮಡಿಕೇರಿ

12 bore Victor Cartridges Rs. 10/- Per 100

**Mahomedally-Noorbhoy.**

ARMS & AMMUNITION MART

321 Abdul Rehman Street

BOMBAY. 3.

52-7



ಕಟುಕಜ್ವಾರಿಯ ಮಾತ್ರೆಗಳು—ಇದು ಅಂಚಲ್ನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ಬಿಟ್ಟು ಬರುವ ಜ್ವರ ದಿನಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರಗೆಡ್ಡೆ ದೋಷದಿಂದ ಬರುವ ಜ್ವರಗಳನ್ನು ಗುಣ ಕೊಡುತ್ತದೆ ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14

ಕೇಂಟನಾಶಕ—ಇದು ಪ್ರಮೇಹ ಮೂತ್ರ ಕೃಚ್ಛ್ರ ಮೂತ್ರ ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೆಚ್ಚಾಗಿ ಉರಿಯುವುದು ಮೂತ್ರನಾಳದಿಂದ ಕೀವು ಬರುವುದು, ಹುಣ್ಣು ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ಕಟ್ಟುವುದು ದೇಹದಲ್ಲಿ ಉರಿ ಬಾಯಿಂದ ಸ್ವಪ್ನಾವಸ್ಥೆ, ಮುಂತಾದ ರೋಗಗಳಿಗೆ ಪರಮ ಔಷಧಿ ಬೆಲೆ 1 3 6ಕ್ಕೆ ರೂ 1—8—0 6—12—0

ರೋಮನಾಶಿನಿ—ಈ ಹುಡಿಯನ್ನು ಹಚ್ಚಿದರೆ ಕೂದಲು ಬೆಳೆಯುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿ ರೂ 1 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ—ತಲೆನೋವು, ತಲೆತಿರುಗುವುದು, ತಲೆಯ ಉಷ್ಣತೆಯಿಂದ ಕೀವು ಸೋರುವುದು ಕಿವುಡುತನ ಕಣ್ಣು ನೋವು ಅಪಸ್ಮಾರ ಜ್ಞಾಪಕ ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ,

52—3

9. ಮಂಗಳೂರು



## ಎಂಪಯರ್ ಆಫ್ ಇಂಡಿಯಾ

### ಲೈಫ್ ಅಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು 1897.

1928ನೇ ಇಸವಿ ಫೆಬ್ರವರಿ 29ಕ್ಕೆ ಅಂತ್ಯವಾದ 5 ವರ್ಷಗಳಲ್ಲಿ ಕಂಪನಿಗೆ ಆದ ಉತ್ಪತ್ತಿ

| | | |
|---|---|---|
| ಹೊಸ ಪಾಲಿಸಿಗಳು ಮೊಬಲಗು | ರೂ | 11,6,00,000 |
| ವರಮಾನ ಒಟ್ಟು | ರೂ. | 54,95,000. |
| ಕಂಪೆನಿ ಬಿಟ್ಟ ಮೊಬಲಗು | ರೂ | 3,15,64,000 |

ಬೇಕಾಗಿದೆ — ಕೊಡಗು ದೇಶದ ಮುಖ್ಯ ಸ್ಥಳಗಳಲ್ಲಿ ಏಜಂಟರುಗಳು.

| | | |
|---|---|---|
| ಹೆಡ್ ಆಫೀಸು | | ಬ್ರಾಂಚ್ ಆಫೀಸು |
| ಎಂಪಯರ್ ಆಫ್ ಇಂಡಿಯಾ | | ಕಮರ್ಶಿಯಲ್ ಬೀದಿ |
| ಲೈಫ್ ಬಿಲ್ಡಿಂಗ್, ಬೊಂಬಾಯಿ. | 24—18 | ಬೆಂಗಳೂರು |



ಕಳ್ಳಾರಿಕೆ ಮಾಲುಗಳಿಗೆ ಮೋಸ ಹೋಗಬೇಡಿರಿ!

ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ

ಅಜಮಾಯಿಸಿ ನೋಡಿರಿ.

ಇನಾಮಿನ ಬಟ್ಟಲುಗಳು ನಮ್ಮಲ್ಲಿ ವಿಕ್ರಯಕ್ಕೆ ದೊರೆಯುತ್ತವೆ

ಎಲ್ಲಾ ಆರ್ಡರುಗಳನ್ನೂ ಅಚ್ಚುಕಟ್ಟಾಗಿ ರೀತಿಯಿಂದಲೂ ತುರ್ತಾಗಿಯೂ ಗ್ಯಾರಂಟಿಯೊಡನೆ ಜಾರಿ ಮಾಡಲಾಗುವುದು

ಕೇಶವಜಿ ದೇವಚಂದ್,

ಜ್ಯುಯೆಲ್ಲರ್, (ಕೆಟಲಾಗ್ ಮುಫತ್)

12—6 21 ಚೈನಾ ಬಜಾರ್ ರೋಡ್, ಮದರಾಸು.

ಸ್ಥಾಪನೆ 1874 ಹೆಡ್ ಆಫೀಸು—ಬೊಂಬಾಯಿ



## ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ವ್ಯಾಪಾರದ ಫಲ.

## ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

| | |
|---|---|
| ಪಿ ತಿ ದಾರರಿಗೆ ಹೆಚ್ಚಾಗಿ ಸಿಕ್ಕುವ ಬೋನಸು | 1000 ರೂಪಾಯಿಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ—ರೂ |
| | 1000 ,, ಎಂಡೋಮೆಂಟ್ ,, ,, —ರೂ. |

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಚಿಂತೆಯಿಲ್ಲ

ಪುನಹ ಒಂದು ಹೊಸ ಪಾಲಿಸಿಯನ್ನು "ಓರಿಯಂಟಲ್" ಕಂಪನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವು

ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಓರಿಯಂಟಲ್ ಬಿಲ್ಡಿಂಗ್ಸ್,
ನಂ. 1. ಸೌತ್ ಪರೇಡ, ಬೆಂಗಳೂರು. 52—25

ಯಲ್. ಅರ್. ಕೃಷ್ಣಸ್ವಾಮ್ಯಯ್ಯರ್.
ಬ್ರಾಂಚ್ ಸೆಕ್ರೆಟರಿ.


Printed & published by P. I. Belliappa, at "Kodagu Press, Mercara" for "Kodagu" Ltd.

Kodagu. 1/11/28.

If not delivered please return to "KODAGU" OFFICE, MERCARA.

# ಕೊಡಗು.


ಸತ್ಯದ ಧೋರಣೆಯು [illegible] ಪ್ರಯತ್ನ [illegible] ॥ [illegible] ಸಂಪದಾ ॥

ವಾರ್ಷಿಕ ಚಂದಾ ರೂ. ೩–೮–೦.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ–ಪಂಡ್ಯಂಡ [?] ಐ. ಬೆಳ್ಯಪ್ಪ [?].

ಸಂಪುಟ ೮] ಮಡಿಕೇರಿ, ಸ[?] ೧೯೨೮ನೇ ಇಸವಿ ನವಂಬರ್ ತಾರೀಖು ೨ ನೇ ಶುಕ್ರವಾರ [ಸಂಚಿಕೆ ೨೩ [?]



## GENT'S OUTFITTING DEPARTMENT.

### NEW ARRIVALS!

| | | | |
|---|---|---|---|
| Bow Ties @ Rs 2–8–0 2–4–0 and 1–12–0 each | | Flash Garters to match @ 1–12–0 each. | |
| Wide-end Ties @ „ 2–8–0 2–0–0 and 1–8–0 „ | | Cashmier Socks @ 2–4–0 each. | |
| Cotton Handkerchieves @ 4–8–0 a dozen | | Kremntz Links „ @ 4–8–0 a set | |
| Woollen Stockings @ 3–8–0 a pair | | „ Studs @ 0–14–0 „ | |

52–40 **SPENCER & CO. LTD.** Gents Outfitting Specialists. **MERCARA.**

Post Box 423, TRIPLICANE, MADRAS.

**MANUFACTURES AND DEALS IN ALL:–**

(1) Gemset Jewels, gold and silver articles of all patterns
(2) Race Cups, Caskets, Medals, etc., for presentation purposes.
(3) Trovels, Keys, Locks, etc., for ceremonial purposes.

JEWELLER BY APPOINTMENT TO His Excellency THE GOVERNOR OF MADRAS.

Catalogue Free to Bonafide Enquirers

UNDERTAKES.–

(1) Remaking or Remodeling of all sorts of old gemset jewels to latest patterns.
(2) Electro plating, gilding and nickelling.
(3) Buying old jewellery, or undertaking to effect sale.

# V. SUBRAMANIA IYER JEWELLER

52–8

**Gold-smith, Silver smith, & Dealer in all Gemset Jewels.**

## ನೀವು ನಿರ್ಬಲಸ್ತರಾಗಿ ಯಾಕೆ ನರಳುವಿರಿ?

ಇಪ್ಪತ್ತು ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

## ಸಾಲಂಮಿಶ್ರಿ ಮುರಬ್ಬ

ಸೇವನೆಯಿಂದ ಎಂಥಾ ಧಾತು ಪುಷ್ಟಿ ವಿಕಾರಗಳನ್ನು, ನರಗಳ ಶಕ್ತಿ ಕುಂದಿಹೋಗಿ [illegible] ಮೆದುಳಿನ ಬಲಹೀನತೆಯನ್ನೂ ಇಂಥಾ ರೋಗಗಳನ್ನೆಲ್ಲಾ ಯುಕ್ತಿಗಾ [illegible] ವಾಯಹೊಂದಿಸತಕ್ಕ ತನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸುತ್ತದೆ. ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ಮಹನೀಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ಓದಿ ತಿಳಿದು ನೋಡಬಹುದು. ಒಂದು ಡಬ್ಬಿಯ [illegible] ದಿನಗಳ ಸೇವನೆಯಿಂದಲೇ ಇದರ ಗುಣವು ತೋರಿಬರುವುದು. [illegible] ಡಬ್ಬಿಗಳ ಸೇವನೆಯಿಂದ ಜನ್ಮಾಂತ್ಯದವರೆಗೂ ಸಂಪೂರ್ಣ ಗುಣವನ್ನುಂಟುಮಾಡುವದು ನಮ್ಮ ಟ್ರೇಡ್ ಮಾರ್ಕ್ ನೋಡಿ ಡಬ್ಬಿ ತೆಗೆದುಕೊಳ್ಳಿರಿ. ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಅವಶ್ಯಕವಿರುತ್ತೆ.

ಕ್ರಯ ಡಬ್ಬಿ ೧ಕ್ಕೆ ೨–೦–೦. ಟಪ್ಪಾಲು ಖರ್ಚು ೧ರಿಂದ ೩ ಡಬ್ಬಿಗಳವರೆಗೆ ೦–೮–೦.

ಡಿ. ಮುನ್ನಾಲಾಲ್,
ಡೆಪ್ಯೂಟಿ ಸೇಟೀವ್ ಡಾಕ್ಟರು, ಸಾಲಂಮಿಶ್ರಿ ಮುರಬ್ಬ ಫಾರ್ಮೆಸಿ, ಬೆಂಗಳೂರು ಸಿಟಿ

## ಅ ಪೂ ರ್ವ ಸಂ ದ ರ್ಭ .

ಹಾಳಾದ ದೇಹದಾರ್ಢ್ಯವನ್ನು ಪುನಃ ಪಡೆಯುವ [?] ಬೇಕಾದರೆ ಇದೀಗ ಅಪೂರ್ವ ಸಂದರ್ಭ.

## ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ, ಬಲಹೀನತೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಮಾಡುವುವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ–I ಧರ್ಮಾರ್ಥ II

## ಕಾ ಮ ಶಾ ಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ —

ಆತಂಕನಿಗ್ರಹ ಔಷಧಾಲಯ,
52–14 ಚಿಕ್ಕಪೇಟೆ, ಬೆಂಗಳೂರು ಸಿಟಿ.

# ಕೊಡಗು.

ಸಂ ೧೯೨೯ ನೇ ಇಸವಿ

ನವಂಬರ್ ತಾ. ೨೯ ನೇ ಶುಕ್ರವಾರ.


## ಕೋಮುವಾರು ಭಾವನೆ.

ಕೋಮುವಾರು ಭಾವನೆಯು ಸಾಧಾರಣದ ವಿಷಯವಲ್ಲ. ಅದು ಹಿಂದೂಸ್ಥಾನದ ರಾಜಕೀಯ ಸ್ವಾತಂತ್ರ್ಯದ ಹೋರಾಟದಲ್ಲಿ ಬಹು ಮುಖ್ಯವಾದ ಒಂದು ಸಂಗತಿಯಾಗಿದೆ. ಕೋಮುವಾರು ಯಾ ಜಾತಿವಾರು ಪ್ರತಿನಿಧಿತ್ವದ ಸಮಸ್ಯೆಯೇ ಹಿಂದೂದೇಶದ ಒಗ್ಗಟ್ಟಿಗೆ ದೊಡ್ಡ ಅಡಚಣೆಯಾಗಿದೆ ಎಂಬದನ್ನು ಒಪ್ಪದವರು ಬಹು ವಿರಳ. ಹಿಂದೂಮತೀಯರು ಒಟ್ಟಾಗಿ ಮುಂದುವರಿಯಬೇಕೆಂದೂ, ಹಿಂದೂ ರಾಷ್ಟ್ರವು ಭೂಲೋಕದ ಬೇರೆ ಜನಾಂಗಗಳೊಂದಿಗೆ ಸಮಾನತ್ವದಲ್ಲಿ ಗೌರವದಿಂದ ವರ್ತಿಸಬೇಕೆಂದೂ ಆಶಿಸುವ ದೇಶಭಕ್ತರ್‍ಯಾರೂ ಈ ತತ್ವವನ್ನು ಜಾರಿಗೆ ತರಲು ಒತ್ತಾಯಮಾಡಲಾರರು. ರಾಷ್ಟ್ರೀಯತ್ವವೂ ಕೋಮುವಾರು ತತ್ವವೂ ಒಂದಕ್ಕೊಂದು ವಿರೋಧವಾದವು. ಇವೆರಡನ್ನೂ ಒಮ್ಮೆಲೇ ಸಾಧಿಸಲು ಯತ್ನಿಸುವವರು ಜನಸಮುದಾಯವನ್ನು ಮೋಸಪಡಿಸುವರು ಅಥವಾ ತಮ್ಮನ್ನು ತಾವೇ ವಂಚಿಸಿಕೊಳ್ಳುವರು. ಈ ತತ್ವವು ಉತ್ತರ ಹಿಂದೂಸ್ಥಾನದಲ್ಲಿ ಹಿಂದೂ ಮುಸಲ್ಮಾನರಿಗೂ, ದಕ್ಷಿಣದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರಿಗೂ ಇರುವ ಒಗ್ಗಟ್ಟನ್ನು ಕೆಡಿಸಿ ಅವರ ಭಿನ್ನಭೇದಗಳನ್ನು ಹೆಚ್ಚಿಸುತ್ತಲಿದೆ.

ಜಾತಿವಾರು ಪ್ರತಿನಿಧಿತ್ವದ ತತ್ವವನ್ನು ಜಾರಿಗೆ ತರದೆ ಹೋದರೆ ನ್ಯಾಯವಿಧಾಯಕ ಸಭೆಗಳಲ್ಲೂ ಸ್ಥಳೀಯ ಸ್ವರಾಜ್ಯ ಸಂಸ್ಥೆಗಳಲ್ಲೂ ಕಿಂಚಿತ ಜನಸಂಖ್ಯೆ ಇರುವ ಜಾತಿಯವರಿಗೂ, ವಿದ್ಯಾಬುದ್ಧಿಯಲ್ಲಿ ಹಿಂದುಳಿದ ಪಂಗಡದವರಿಗೂ ಸಾಕಷ್ಟು ಪ್ರಾತಿನಿಧ್ಯವು ದೊರೆಯದೆ ಅವರ ಹಿತವನ್ನು ಕಾಯುವವರೇ ಇಲ್ಲದಾಗುವದರಿಂದ ಅವರು ಮತ್ತಷ್ಟೂ ಹೀನಸ್ಥಿತಿಗೆ ಬರುವರೆಂದು ವಾದಿಸಬಹುದು. ಈ ವಾದದಲ್ಲಿ ಸ್ವಲ್ಪ ಮಟ್ಟಿಗೆ ನಿಜವಿದೆ. ಆದರೆ ಪ್ರಾಯಕ್ಕೆ ಬಂದ ಪ್ರತಿಯೊಬ್ಬ ಗಂಡಸಿಗೂ ಹೆಂಗಸಿಗೂ ಓಟು ಕೊಡುವ ಹಕ್ಕು ದೊರೆತ್ತದ್ದೇ ಆದರೆ ಈ ಕುಂದು ಕೊರತೆಯನ್ನು ಬಹಳ ಮಟ್ಟಿಗೆ ಹೋಗಲಾಡಿಸಿಕೊಳ್ಳಬಹುದು. ಆಗ ಹೆಚ್ಚಿನ ಜನರ ಹಿತವನ್ನು ಬಯಸುವವರೇ ಜಾತಿಮತ ಭೇದಗಳನ್ನೆಣಿಸದೆ ಪ್ರಜಾಪ್ರತಿನಿಧಿ ಸಭೆಗಳಿಗೆ ಚುನಾಯಿಸಲ್ಪಡುವರು. ಓಟು ಪಡೆದು ಪ್ರತಿನಿಧಿಗಳಾದ ಮೇಲೆ ಅವರು ತಮ್ಮ ತಮ್ಮ ಜಾತಿಗಾಗಲೀ, ಪಂಗಡಕ್ಕಾಗಲೀ ಮಾತ್ರ ಸಹಾಯ ಮಾಡಲು ಯತ್ನಿಸಿದರೆ ಮೂರು ವರ್ಷಗಳ ನಂತರ ನಡೆಯುವ ಇನ್ನೊಂದು ಚುನಾವಣೆಯಲ್ಲಿ ಅಂಥವರಿಗೆ ಬುದ್ಧಿ ಕಲಿಸಬಹುದು. ಆದುದರಿಂದ ಯಾವ ಕೋಮಿಗೇ ಆಗಲಿ ಕೆಡಕು ಉಂಟಾಗುವ ಸಂಭವವು ಕಡಿಮೆಯಾಗುವದು.

ಒಂದು ವೇಳೆ, ಚಿಕ್ಕ ಕೋಮಿನವರಿಗೆ ಉಂಟಾಗಬಹುದಾದ ಕೆಡಕುಗಳನ್ನು ಪೂರ್ತಿಯಾಗಿ ಈ ಉಪಾಯದಿಂದ ನಿವಾರಿಸಲು ಸಾಧ್ಯವಿಲ್ಲದೆ ಹೋದರೂ, ದೇಶದ ಅಭ್ಯುದಯಕ್ಕೆ ಅಮೂಲ್ಯವಾಗಿರುವ ಒಗ್ಗಟ್ಟನ್ನು ಸಾಧಿಸಿಕೊಳ್ಳಲು ಸ್ವಲ್ಪಸ್ವಲ್ಪ ಕಷ್ಟಗಳನ್ನು ಅನುಭವಿಸಲು ಎಲ್ಲರೂ ತಯಾರಾಗಬೇಕು. ಕೋಮುವಾರು ಹಿತವನ್ನು ಕಾಯುವದಕ್ಕಾಗಿ ಪ್ರಜಾ ಪ್ರತಿನಿಧಿ ಸಂಸ್ಥೆಗಳಲ್ಲಿ ಕೋಮುವಾರು ಪ್ರತಿನಿಧಿತ್ವವನ್ನು ಕೊಡುತ್ತಾ ಬಂದರೆ ಅನೇಕ ಜಾತಿ ಮತಗಳಿರುವ ಭಾರತ ಭೂಮಿಯಲ್ಲಿ ಈ ತತ್ವವನ್ನು ಎಲ್ಲಾ ಜಾತಿಗಳನ್ನು ತೃಪ್ತಿಪಡಿಸುವಂತೆ ಜಾರಿಗೆ ತರಲು ಎಂದೂ ಸಾಧ್ಯವಿಲ್ಲ. ಆ ಚಿಕ್ಕ ಕೋಮುಗಳಿಗೆ ಪ್ರಾತಿನಿಧ್ಯ ಕೊಡಲು ಅವಕಾಶವಿಲ್ಲದಾಗುವಾಗ್ಯೆ ಅವರು ನ್ಯಾಯವಾಗಿ ಅತೃಪ್ತಿಯನ್ನೂ ಅಸಂತೋಷವನ್ನೂ ತೋರಿಸುವರು. ಆದುದರಿಂದ ಇಂಥಾ ಪ್ರತಿನಿಧಿತ್ವಕ್ಕೆ ಕೊನೆಯೇ ಇಲ್ಲದಾಗುವದು, ಮತ್ತು ಇದರಿಂದ ಹಿಂದುಳಿದವರ ಮತ್ತು ಕಮ್ಮಿ ಜನಸಂಖ್ಯೆಯ ಜಾತಿಗಳ ಹಿತವನ್ನು ಸಂಪೂರ್ಣ ಕಾಪಾಡಲು ಆಗುವದಿಲ್ಲ.

ಸರಕಾರಿ ಉದ್ಯೋಗಗಳಲ್ಲಿಯೂ ಕೋಮುವಾರು ತತ್ವವನ್ನು ಅನುಸರಿಸಬೇಕಾಗಿ ಕೆಲವರು ಹೋರಾಡುತ್ತಿರುವರು. ಜನಸಂಖ್ಯೆಗೆ ಅನುಸಾರವಾಗಿ ಉದ್ಯೋಗಗಳನ್ನು ಆಯಾಯ ಜಾತಿಯವರಿಗೆ ಕೊಡದೆ ಹೋದರೆ ವಿದ್ಯಾಭ್ಯಾಸದಲ್ಲಿ ಮುಂದುವರಿಯದ ದೊಡ್ಡ ಜನಸಂಖ್ಯೆ ಇರುವ ಜಾತಿಯವರಿಗೆ ಅನ್ಯಾಯವಾಗುತ್ತದೆಂತಲೂ, ಹಿಂದುಳಿದವರಿಗೆ ಮುಂದು ಬರಲು ಅವಕಾಶ ದೊರೆಯುವದಿಲ್ಲವೆಂತಲೂ ವಾದಿಸುವದುಂಟು. ಆದರೆ ಹಾಗೆ ಜನಸಂಖ್ಯೆಯ ಮೇರೆ ಮತ್ತು ಹಿಂದುಳಿದವರೆಂದು ಉದ್ಯೋಗಗಳನ್ನು ಕೊಡುವದಾದರೆ ಅರ್ಹತೆಯನ್ನು ಗಣನೆಗೆ ತರಲು ಸಾಧ್ಯವಿಲ್ಲ. ಅರ್ಹರಲ್ಲದವರಿಗೆ ಜವಾಬ್ದಾರಿಕೆಯ ಉದ್ಯೋಗಗಳನ್ನು ಕೊಟ್ಟರೆ ಕಾರ್ಯನಿರ್ವಾಹಕತ್ವವು ಎಷ್ಟರ ಮಟ್ಟಿಗೆ ಕೆಡುತ್ತದೆಂಬದು ಎಲ್ಲರಿಗೂ ತಿಳಿದ ವಿಷಯವಾಗಿದೆ. ದೇಶದ ಆಡಳಿತವನ್ನು ನಡಿಸುವ ಇಲಾಖೆಗಳಲ್ಲಿ ಕಾರ್ಯವು ಉತ್ತಮತರದಲ್ಲಾಗಿ ನಡಿಸಲ್ಪಡದೆ ಹೋದರೆ ಪ್ರಜಾ ಜನರಿಗೆ ಎಷ್ಟು ತೊಂದರೆಗಳುಂಟಾಗುತ್ತವೆಂಬುದನ್ನು ಹೇಳುವ ಅವಶ್ಯವಿಲ್ಲ. ಆದರೆ ಅರ್ಹರಾದವರಿಗೆ, ಅವರು ಯಾವ ಜಾತಿಯವರೇ ಆಗಿರಲಿ, ಅವರ ಯೋಗ್ಯತಾನುಸಾರ ಉದ್ಯೋಗಗಳನ್ನು ಕೊಡಲೇ ಬೇಕು. ಇಲ್ಲವಾದರೆ ಪಕ್ಷಪಾತವೆಂಬ ಜಾಡ್ಯವು ಆಡಳಿತ ಕ್ರಮವನ್ನು ಕೆಡಿಸುವದಲ್ಲದೆ ಕೋಮುವಾರು ಪ್ರತಿನಿಧಿತ್ವವನ್ನು ಕೇಳಲು ಅವಕಾಶಮಾಡಿಕೊಟ್ಟಂತಾಗುವದು.

ಈ ಸಂಬಂಧ ಮದ್ರಾಸು ಸರಕಾರದ ಮಾಜಿ ಮಂತ್ರಿಯಾದ ಮಿ. ಆರ್. ಯನ್. ಆರೋಕ್ಯಸ್ವಾಮಿ ಮೊದಲಿಯಾರರವರು—ಇಂಡಿಯನ್ ಕ್ರೈಸ್ತರಲ್ಲಿ ಅರ್ಹರಾದವರು ಇದ್ದರೂ ಅವರಿಗೆ ಹೈಕೋರ್ಟು ಮತ್ತು ಕೆಳಗಿನ ನ್ಯಾಯಶೀಲನ ಇಲಾಖೆಗಳಲ್ಲಿ ದೊಡ್ಡ ಉದ್ಯೋಗಗಳನ್ನು ಕೊಡದ್ದರಿಂದ ಅತೃಪ್ತಿಯನ್ನು ಸೂಚಿಸಲಿಕ್ಕಾಗಿ ಮೊನ್ನೆ ತಾನೇ ಮದ್ರಾಸಿನಲ್ಲಿ ನಡೆದ ಸಭೆಯಲ್ಲಿ ಕ್ರೈಸ್ತರಿಗೆ ಮಾಡಿದ ವಿನಂತಿಯ ಕೆಲವು ಮಾತುಗಳನ್ನು ಇಲ್ಲಿ ಬರೆಯುವದು ಯುಕ್ತವಾಗಿದೆ. ಅದೇನೆಂದರೆ—"ಸರಕಾರಿ ಉದ್ಯೋಗಗಳನ್ನು ಪಡೆಯುವದರಿಂದ ಹಿಂದೂದೇಶದ ಏಳಿಗೆಯನ್ನು ಸಾಧಿಸಿದಂತೆ ಆಗುವದಿಲ್ಲ. ಕೋಮುವಾರು ತತ್ವವನ್ನು ನಾಶಪಡಿಸಿ ರಾಷ್ಟ್ರೀಯ ಐಕ್ಯತೆಯನ್ನು ಪಡೆಯುವದರಿಂದ ಅದನ್ನು ಸಾಧಿಸಬಹುದು. ಕೋಮುವಾರು ಪ್ರತಿನಿಧಿತ್ವವು ಜಾತಿಗಳನ್ನು ಒಂದಕ್ಕೊಂದು ವಿರೋಧಿಸುವಂತೆ ಮಾಡುತ್ತದೆ. ಅದು ಕೆಲವು ಕಡೆಗಳಲ್ಲಿ ಕೆಲವರಿಗೆ ಲಾಭವನ್ನುಂಟುಮಾಡಬಹುದು. ಈ ವಿಷಯ ದೀರ್ಘಾಲೋಚನೆ ಮಾಡಿದವರು ಮತ್ತು ತಮ್ಮ ಸ್ವಂತ ಮತ್ತು ಕೋಮಿನ ಪ್ರಯೋಜನದ ಮುಂದೆ ದೇಶದ ಹಿತವನ್ನು ಇಟ್ಟವರು ಕೋಮುವಾರು ತತ್ವವನ್ನು ಹೋಗಲಾಡಿಸಿದರೆ ಎಷ್ಟು ಅಮೂಲ್ಯವಾದ ಫಲವನ್ನು ಪಡೆಯಬಹುದೆಂದು ತಿಳಿದುಕೊಂಡಿರಬೇಕು. ಈ ಉದ್ದೇಶದಿಂದ ಇಂಡಿಯನ್ ಕ್ರೈಸ್ತರು ಸ್ವರಾಜ್ಯಕ್ಕೆ ಹೋರಾಡುವ ಬೇರೆ ಹಿಂದೀಯರೊಂದಿಗೆ ಸೇರತಕ್ಕದ್ದು. ಹಿಂದೂದೇಶವು ಸ್ವರಾಜ್ಯ ಪಡೆದ ವಿನಹ ಯಾವ ಹಿಂದೀಯನಿಗೂ ತನ್ನ ಅತ್ಯುನ್ನತ ಪದವಿಗೆ ಏರಲು ಸಾಧ್ಯವಿಲ್ಲ ಮತ್ತು ಹಿಂದೂದೇಶಕ್ಕೆ ಜನಾಂಗಗಳ ಕೂಟದಲ್ಲಿ ಯೋಗ್ಯವಾದ ಸ್ಥಾನ ದೊರೆಯಲಾರದು. ಇಂಡಿಯನ್ ಕ್ರೈಸ್ತರು ತಮ್ಮ ಬೇರೆ ಹಿಂದೀ ಸಹೋದರರು ಹಿಂದೂದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವದನ್ನು ನೋಡುತ್ತಿರುವರು. ಅವರು ಆ ಹೋರಾಟದಲ್ಲಿ ಸ್ವಾರ್ಥತ್ಯಾಗ ಮಾಡಿ ಕಷ್ಟಪಟ್ಟು, ಅವಶ್ಯವಿದ್ದರೆ ನಶಿಸುವದನ್ನು ಕ್ರೈಸ್ತರು ನೋಡುತ್ತಾ ಅವರಿಗೆ ಉತ್ತೇಜನ ಮಾಡದೆ ಇರುವರೇ? ಅವರು ಬೇರೆಯವರೊಂದಿಗೆ ಈ ಹೋರಾಟದಲ್ಲಿ ಸೇರದಿರುವರೇ? ತಮ್ಮ ಸಹೋದರರು ಕಷ್ಟಪಟ್ಟು ಸಂಪಾದಿಸುವ ಫಲವನ್ನು ಮಾತ್ರ ಅನುಭವಿಸಲು ಕಾಯುತ್ತಿರುವರೇ? ಇದು ಯಾವ ಜಾತಿಗೂ ಯೋಗ್ಯವಾದದ್ದಲ್ಲ. ಎಲ್ಲಾ ಜಾತಿಗಳ ಮತ್ತು ಪಂಗಡಗಳ ಸಂಪೂರ್ಣ ಸಹಕಾರ ಮತ್ತು ಒಗ್ಗಟ್ಟಿನಿಂದಲೇ ಹಿಂದೂದೇಶದ ಸ್ವಾತಂತ್ರ್ಯದ ಧ್ಯೇಯವನ್ನು ಪಡೆಯಲು ಸಾಧ್ಯವೆಂಬುದನ್ನು ಎಲ್ಲರೂ ಜ್ಞಾಪಕದಲ್ಲಿಟ್ಟುಕೊಳ್ಳತಕ್ಕದ್ದು. ಆದುದರಿಂದ ಎಲ್ಲರೂ ತಾವು ಮತ್ತು ತಮ್ಮ ಜಾತಿಗಿಂತ ವಿಶಾಲವಾಗಿ ದೃಷ್ಟಿಸಿ ಸ್ವರಾಜ್ಯ ಪಡೆಯಲು ಹೋರಾಡುವವರ ಪಂಗಡ ಸೇರಬೇಕಾಗಿದೆ."

ಮೇಲಿನ ಅರ್ಥಗರ್ಭಿತವಾದ ಮತ್ತು ಗಂಭೀರವಾದ ಮಾತುಗಳು ಇಂಡಿಯನ್ ಕ್ರೈಸ್ತರಿಗೆ ಮಾತ್ರವಲ್ಲ ಹಿಂದೂದೇಶದ ಎಲ್ಲಾ ಕೋಮಿನವರಿಗೂ ಅನ್ವಯಿಸುತ್ತದೆ. ಯಾವ ಜಾತಿಯವರೇ ಆಗಲೀ ತಮ್ಮ ಜಾತಿಯ ಹಿತವನ್ನು ಮಾತ್ರ ಬಯಸುವ ಸ್ವಾರ್ಥತೆಯಲ್ಲಿ ಮುಳುಗಿದರೆ ಇಡೀ ದೇಶದ ಸ್ವಾತಂತ್ರ್ಯಕ್ಕೆ ಭಂಗವುಂಟಾಗುವದು. ಆದುದರಿಂದ ಮದ್ರಾಸಿನ ಒಬ್ಬ ದೇಶಭಕ್ತ ಕ್ರೈಸ್ತಮುಂದಾಳಿನ ಅಮೂಲ್ಯವಾದ ಮೇಲಿನ ಬುದ್ಧಿವಾದವನ್ನು ನಮ್ಮ ದೇಶಸ್ಥರೆಲ್ಲರೂ ಮನನಮಾಡಿಕೊಂಡು ಅದರಂತೆ ವರ್ತಿಸಲು ಯತ್ನಿಸುವರಾಗಿ ಆಶಿಸುತ್ತೇವೆ.

## ಹಾಲು ಮತ್ತು ಅದರ ಉತ್ಪನ್ನಗಳು.

ವಿವಿಧ ಮೃಗಗಳ ಹಾಲಿನ ಗುಣಗಳನ್ನು ಸಂಸ್ಕೃತ ಗ್ರಂಥಕಾರರು ವಿಸ್ತಾರವಾಗಿ ವಿವರಿಸಿರುವರು. ಸಾಮಾನ್ಯವಾಗಿ ಹಾಲು ತಂಪು, ಪುಷ್ಟಿಕರ, ಶಕ್ತಿವರ್ಧಕ ಮತ್ತು ಚೈತನ್ಯ ಕೊಡುವಂಥಾದ್ದೆಂದು ವರ್ಣಿಸಲಾಗಿದೆ. ಹಸುವಿನ ಹಾಲು ಸೇವಿಸಲಿಕ್ಕೆ ಆನಂದವಾಗಿಯೂ ಆರೋಗ್ಯಕರವಾಗಿಯೂ ಇದೆ. ಅದು ಜ್ಞಾಪಕ ಶಕ್ತಿಯನ್ನೂ, ಶರೀರ ಬಲವನ್ನೂ ಮತ್ತು ಆಯುಷ್ಯವನ್ನೂ ವೃದ್ಧಿಪಡಿಸುವದಲ್ಲದೆ ಇಂದ್ರಿಯ ಧಾತುವನ್ನು ಹೆಚ್ಚಿಸುತ್ತದೆ. ಎಮ್ಮೆಯ ಹಾಲು ಹಸುವಿನ ಹಾಲಿಗಿಂತ ಹೆಚ್ಚು ಸವಿಯಾಗಿಯೂ, ಮಂದವಾಗಿಯೂ, ತಂಪಾಗಿಯೂ ಇದೆಯೆಂದು ಹೇಳಲಾಗಿದೆ. ಅದು ನಿದ್ರೆ ತರಿಸುವಂತೆ ಮಾಡುತ್ತದೆ, ಹಸಿವನ್ನು ಕೆಡಿಸುತ್ತದೆ ಮತ್ತು ಶೀತವನ್ನುಂಟುಮಾಡುತ್ತದೆ. ಆಡಿನ ಹಾಲು ಸವಿಯಾಗಿಯೂ, ತಂಪಾಗಿಯೂ ಮತ್ತು ಒಗರಾಗಿಯೂ ಇರುತ್ತದೆ. ಅದು ಜೀರ್ಣಶಕ್ತಿಯನ್ನು ಹೆಚ್ಚಿಸುವದಲ್ಲದೆ ರಕ್ತಾತಿಸಾರ ಕಾಯಿಲೆಗಳಿಗೂ ಕ್ಷಯರೋಗಕ್ಕೂ ಮತ್ತು ಹೊಟ್ಟೆನೋವುಗಳಿಗೂ ಪ್ರಯೋಜನಕರವಾದದ್ದು. ಕುರಿಯ ಹಾಲು ಉಪ್ಪಾಗಿ ಸೇರದಂಥಾದ್ದು ಮತ್ತು ಸುಲಭದಲ್ಲಿ ಜೀರ್ಣವಾಗದು. ಕುದುರೆ ಹಾಲು ಉಪ್ಪಾಗಿದ್ದು ಸುಲಭದಲ್ಲಿ ಜೀರ್ಣವಾಗುವದು. ಕತ್ತೆಯ ಹಾಲು ಉಪ್ಪಾಗಿ ಸುಲಭದಲ್ಲಿ ಜೀರ್ಣವಾಗುವಂಥಾದ್ದು ಮತ್ತು ಜಲೋದರ ಮೂತ್ರವ್ಯಾಧಿಗಳಿಗೆ ಪ್ರಯೋಜನಕರವಾದದ್ದು. ಒಂಟೆಯ ಹಾಲು ಹಗುರ, ಸವಿ, ಉಪ್ಪು ಮತ್ತು ಭೇದಿಯಾಗುವಂಥಾದ್ದಲ್ಲದೆ, ಅದು ಜಲೋದರ ರೋಗಗಳಿಗೆ ಉಪಯುಕ್ತವಾಗುವದು. ಮನುಷ್ಯನ ಹಾಲು ಹಗುರ, ತಂಪು, ಪುಷ್ಟಿಕರ, ಶಕ್ತಿವರ್ಧಕವಾದದ್ದು ಮತ್ತು ಕಣ್ಣಿನ ಕಾಯಿಲೆಗಳಿಗೆ ಕಾಡಿಗೆಯಂತೆ ಉಪಯೋಗಕರವಾಗುವದು. ಮನುಷ್ಯನ ಹಾಲಲ್ಲದೆ ಬೇರೆ ಎಲ್ಲಾ ಹಾಲನ್ನು ಕುದಿಸಿ ತೆಗೆದುಕೊಳ್ಳಬೇಕು.

ಹಾಲನ್ನು ಆಹಾರವಾಗಿ ತೆಗೆದುಕೊಂಡರೆ ಅದು ಆರೋಗ್ಯಕರ ಮತ್ತು ಭೇದಿಯಾಗುವಂಥಾದ್ದು, ಮತ್ತು ಅದು ಮುಖ್ಯವಾಗಿ ಮಕ್ಕಳಿಗೂ, ಮುದುಕರಿಗೂ, ಕ್ಷಯರೋಗಿಗಳಿಗೂ ಅಥವಾ ವ್ಯಭಿಚಾರದಿಂದ ಬಲಕುಂದಿದವರಿಗೂ, ಹಾಲು ಕುಡಿಸುವ ಹೆಂಗಸರಿಗೂ, ಬಹು ಕಾಲದ ಜ್ವರವಿರುವ, ಮೂತ್ರ ವೇದನೆಯ, ಅಜೀರ್ಣದ, ಹೊಟ್ಟೆ ಬಾಧಿಸುವಿಕೆಯ, ಮೂತ್ರವ್ಯಾಧಿಯ ಕಾಯಿಲೆಗಳಿಂದ ನರಳುತ್ತಿರುವವರಿಗೂ ಯೋಗ್ಯವಾದದ್ದಾಗಿದೆ. ಉಪ್ಪು ಮತ್ತು ನೀರು ಸಹ ಸೇರಿಸಿದರೇ ಹಾಲನ್ನು ಬಹುಕಾಲದ ಹೊಟ್ಟೆನೋವಿನ ಕಾಯಿಲೆಗಳಿಗೆ ಮಾತ್ರೆಯಾಗಿ ಕೊಡುವದುಂಟು.

ಮಜ್ಜಿಗೆಯನ್ನು ನಾಲ್ಕು ತರಗಳಾಗಿ ವಿಂಗಡಿಸಿದ್ದಾರೆ: ನೀರು ಸೇರಿಸದ ಸ್ವಚ್ಛ ಮಜ್ಜಿಗೆ, ನಾಲ್ಕರಲ್ಲಿ ಒಂದು ಭಾಗ ನೀರು ಸೇರಿಸಿದ ಮಜ್ಜಿಗೆ, ಅರ್ಧವಾಲು ನೀರು ಸೇರಿಸಿದ ಮಜ್ಜಿಗೆ, ಮತ್ತು ಕುಂಬಾ ನೀರು ಸೇರಿಸಿದ ಮಜ್ಜಿಗೆ. ಮೊದಲನೇ ತರದನ್ನು ಔಷಧಿಯಾಗಿಯೂ, ಕಾಯಿಲಸ್ಥರ ಆಹಾರವಾಗಿಯೂ ಉಪಯೋಗಿಸುತ್ತಾರೆ. ಅದು ಒಗರು, ಹಗುರ, ತಂಪು, ಪುಷ್ಟಿಕರ, ಶಕ್ತಿವರ್ಧಕ ಮತ್ತು ಹಸಿವುಂಟುಮಾಡುವಂಥಾದ್ದು; ಮತ್ತು ಭೇದಿ, ಆಮಶಂಕೆ, ಅಜೀರ್ಣ, ಮೂತ್ರವ್ಯಾಧಿ ಮತ್ತು ವಿಷಸೇರುವಿಕೆಗಳಿಗೆ ಪ್ರಯೋಜನಕರವಾದದ್ದು. ಅದು ಬಲಹೀನರಾದವರಿಗೂ, ಕ್ಷಯರೋಗಿಗಳಿಗೂ, ಜ್ವರ ಮತ್ತು ಅಂಗ ದೌರ್ಬಲ್ಯದಿಂದ ಪೀಡಿತರಾದವರಿಗೂ ಯೋಗ್ಯವಾದದಲ್ಲ. ಮಜ್ಜಿಗೆಯನ್ನು ನಿತ್ಯವೂ ಉಪಯೋಗಿಸಿದರೆ ಆರೋಗ್ಯಕ್ಕೂ ಮತ್ತು ರೋಗಾದಿಗಳು ಬಾರದಂತೆ ತಡೆಯಲಿಕ್ಕೂ ಸಹಾಯವಾಗುವದು.

ಕುದಿಸಿ ತಣ್ಣಗಾದ ಹಾಲಿಗೆ ಸ್ವಲ್ಪ ಹುಳಿಯನ್ನಾಗಲಿ ಯಾ ಮೊಸರನ್ನಾಗಲಿ ಸೇರಿಸಿ ಮೊಸರು ಮಾಡುವದಾಗಿದೆ. 12 ಗಂಟೆಯ ಕಾಲದಲ್ಲಿ ಆಗ ಹಾಲು ಮಂದವಾದ ಬಿಳಿಯಾದ ಬೆಲ್ಲಿಯಾಗುವದು. ಅದು ತಂಪು, ಮನಸ್ಸಿಗೆ ಹಿತವಾದದ್ದು, ಜೀರ್ಣಶಕ್ತಿಯನ್ನು ಹೆಚ್ಚಿಸುವಂಥಾದ್ದು ಮತ್ತು ಹಿಂದೂದೇಶದ ಎಲ್ಲಾ ಜಾತಿಯವರಿಂದ ಆಹಾರವಾಗಿ ಉಪಯೋಗಿಸಲ್ಪಡುತ್ತಿದೆ. ಯಥೇಚ್ಛವಾಗಿ ತೆಗೆದುಕೊಂಡರೆ ಅದು ಪಿತ್ತವನ್ನೂ ನೆಗಡಿಯನ್ನೂ ಉಂಟುಮಾಡುತ್ತದೆ. ಅದು ಜ್ವರ, ಭೇದಿ, ಆಮಶಂಕೆ, ಮೂತ್ರವ್ಯಾಧಿ ಮತ್ತು ಊಟಕ್ಕೆ ಇಚ್ಛೆ ಇಲ್ಲದಿರುವಿಕೆಗೆ ಉಪಯೋಗಕರವಾದದ್ದು.

ಮೊಸರನ್ನು ಜೀರ್ಣಿಸುವದು ಕಷ್ಟ; ಆದರೆ ಅದು ಪುಷ್ಟಿಕರ ಮತ್ತು ಶಕ್ತಿವರ್ಧಕವಾದದ್ದು, ಮತ್ತು ಒಳ್ಳೇ ಜೀರ್ಣಶಕ್ತಿ ಇರುವವರಿಗೆ ಯೋಗ್ಯವಾದದ್ದು. ಹಾಲಿನ ಕೆನೆಯೂ ಜೀರ್ಣಿಸಲು ಕಷ್ಟವಾದದ್ದು; ಆದರೆ ಪುಷ್ಟಿಕರ, ನೋವುಹರ ಮತ್ತು ಆಶ್ವಾಸಕರವಾದದ್ದು. ಬೆಣ್ಣೆಯು ವರ್ಧಕ, ಒಗರು ಮತ್ತು ಚೈತನ್ಯ ಉಂಟುಮಾಡುವಂಥಾದ್ದು, ಮತ್ತು ಕ್ಷಯ, ಮೂಲವ್ಯಾಧಿ, ಮುಖದ ಪಾರ್ಶ್ವವಾಯುಗಳಿಗೆ ಪ್ರಯೋಜನಕರವಾದದ್ದು. ಅದು ಎಳೆಯವರಿಗೂ ಮುದುಕರಿಗೂ ಚೆನ್ನಾಗಿ ಒಗ್ಗುತ್ತದೆ.

ತುಪ್ಪವು ಆಹಾರವಾಗಿಯೂ ವೈದ್ಯದಲ್ಲಿಯೂ ಉಪಯೋಗಿಸಲ್ಪಡುತ್ತಿದೆ. ಹಸುವಿನ ತುಪ್ಪವು ಎಮ್ಮೆ ತುಪ್ಪಕ್ಕಿಂತ ಉತ್ತಮವಾದುದರಿಂದ ಅದನ್ನೇ ಹೆಚ್ಚಾಗಿ ರೋಗಿಗಳಿಗೆ ಉಪಯೋಗಿಸುತ್ತಾರೆ. ತುಪ್ಪವು ತಂಪು, ಪುಷ್ಟಿ ಮಾಡುವಂಥಾದ್ದು ಮತ್ತು ಹೊಟ್ಟೆಗೆ ಬಲ ಕೊಡುವಂಥಾದ್ದಾಗಿದೆ. ಅದು ದೇಹದ ಕೊಬ್ಬನ್ನೂ, ಮೂಳೆಯನ್ನೂ ಹೆಚ್ಚಿಸುವದಲ್ಲದೆ, ಸ್ವರವನ್ನೂ, ಸೌಂದರ್ಯವನ್ನೂ ಮತ್ತು ನೋಟವನ್ನೂ ಉತ್ತಮಗೊಳಿಸುತ್ತದೆ; ಮತ್ತು ಅದು ಕಣ್ಣುಬೇನೆ, ಹುಚ್ಚು, ಉಬ್ಬರ, ನೋವುಳ್ಳ ಬಾವು ಹುಣ್ಣು ಮತ್ತು ಗಾಯಗಳಿಗೆ ಉಪಯೋಗಕರವಾದದ್ದು.

'ಮ. ಆ. ಬ.'

## ಮಹಾತ್ಮಗಾಂಧಿಯವರ ಸ್ವಚರಿತ್ರೆ.

### ೫ನೇ ಭಾಗದಲ್ಲಿ ೧೩ನೇ ಪ್ರಕರಣ

### ಸಾಧುಶೀಲರಾದ ವಿಹಾರಿಗಳು.

ಮೌಲಾನಾ ಮಜಹರ್-ಉಲ್ ಹಕ್‌ರವರು ಲಂಡನ್ನಲ್ಲಿ ಬ್ಯಾರಿಸ್ಟರ್ ಪರೀಕ್ಷೆಗೆ ಓದುತ್ತಿದ್ದಾಗ ನನಗೆ ಅವರ ಗುರುತಾಗಿದ್ದಿತು. ೧೯೧೫ರಲ್ಲಿ ಮುಂಬಯಿಯಲ್ಲಿ ನೆರೆದ ಮಹಾಸಭೆಯಲ್ಲಿ —ಆ ವರ್ಷ ಅವರು 'ಮುಸ್ಲಿಮ್ ಲೀಗ' (ಮುಸಲ್ಮಾನರ ರಾಜಕೀಯ ಸಂಸ್ಥೆ) ಅಧಿವೇಶನದ ಅಧ್ಯಕ್ಷರಾಗಿದ್ದರು—ಅವರನ್ನು ನಾನು ಕಂಡಾಗ ಅವರು ಹಿಂದಿನ ಪರಿಚಯಕ್ಕೆ ಹೊಸ ಜೀವ ಕಳೆಯನ್ನಿತ್ತು, ನಾನು ಪಾಟ್ನಾಕ್ಕೆ ಹೋದಾಗಲೆಲ್ಲಾ ತಮ್ಮ ಮನೆಯಲ್ಲಿ ಇಳಿಯಬೇಕೆಂದು ನಿಮಂತ್ರಣ ಕೊಟ್ಟಿದ್ದರು. ನಾನು ಆಹ್ವಾನವನ್ನು ನೆನಪು ತಂದುಕೊಂಡು ಅವರಿಗೆ ನಾನು ಅಲ್ಲಿಗೆ ಬಂದ ಕೆಲಸವನ್ನು ತಿಳಿಸಿ ಕಾಗದವನ್ನು ಕಳುಹಿಸಿದೆನು. ಅವರು ಒಡನೆಯೇ ತಮ್ಮ ಮೋಟಾರಿನಲ್ಲಿ ಬಂದು ನಾನು ತಮ್ಮ ಆತಿಥ್ಯವನ್ನು ಸ್ವೀಕರಿಸಬೇಕೆಂದು ಒತ್ತಾಯಮಾಡಿದರು. ನಾನು ಅವರಿಗೆ ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿ ಮೊಟ್ಟಮೊದಲು ಹೊರಡುವ ರೈಲುಗಾಡಿಯಲ್ಲಿಯೇ ನನ್ನನ್ನು ಚಂಪಾರಣ್ಯಕ್ಕೆ ಕಳುಹಿಸಿ ಕೊಡಬೇಕೆಂದು ಬಿನ್ನಯಿಸಿದೆನು. 'ರೈಲ್ವೇ ವಿಷಯು ಸೂಚಿ'ಯಿಂದ ನನ್ನಂತಹ ಹೊರಗಿನವನಿಗೆ ಯಾವ ಪ್ರಯೋಜನವೂ ಆಗುವಂತಿರಲಿಲ್ಲ. ಅವರು ರಾಜಕುಮಾರ ಶುಕ್ಲರೊಡನೆ ಮಾತನಾಡಿ ನಾನು ಮೊದಲು ಮುಜಫ್ಫರಪುರಕ್ಕೆ ಹೋಗಬೇಕೆಂದು ಸೂಚಿಸಿದರು. ಆ ಸಂಜೆಯೇ ಅಲ್ಲಿಗೆ ಹೊರಡುವುದೊಂದು ರೈಲು ಗಾಡಿಯಿದ್ದಿತು. ಅವರು ನನ್ನನ್ನು ಅದರಲ್ಲಿ ಕಳುಹಿಸಿಕೊಟ್ಟರು.

ಆಚಾರ್ಯ ಕೃಪಲಾನಿಯವರು ಆಗ ಮುಜಫ್ಫರಪುರದಲ್ಲಿದ್ದರು. ನಾನು (ಸಿಂಧೂದೇಶದಲ್ಲಿರುವ) ಹೈದರಾಬಾದಿಗೆ ಹೋದಂದಿನಿಂದ ನನಗೆ ಅವರ ವಿಷಯವು ತಿಳಿದಿದ್ದಿತು. ಡಾ. ಚೋಯಿಥರಾಮರು ಅವರ ಮಹಾ ತ್ಯಾಗವೃತ್ತಿಯ ವಿಷಯವನ್ನೂ ಇವರ ಜೀವನದ ಸರಳತೆಯನ್ನೂ ಅವರು ಒದಗಿಸಿಕೊಟ್ಟ ಹಣದಿಂದ ತಾವು ನಡೆಸುತ್ತಿದ್ದ ಆಶ್ರಮದ ಸಂಗತಿಯನ್ನೂ ನನಗೆ ತಿಳಿಸಿದ್ದರು. ಅವರು ಮುಜಫ್ಫರಪುರದ ಸರಕಾರೀ ಪ್ರೌಢ ವಿದ್ಯಾಶಾಲೆಯ ಅಧ್ಯಾಪಕರಲ್ಲಿ ಒಬ್ಬರಾಗಿದ್ದು ನಾನು ಅಲ್ಲಿಗೆ ಹೋದಾಗ ತಾನು ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದರು. ನಾನು ಅಲ್ಲಿಗೆ ಬರುವೆನೆಂದು ಅವರಿಗೆ ತಾರು ಕಳುಹಿಸಿದ್ದೆನು. ರೈಲು ಅಲ್ಲಿಗೆ ಮಧ್ಯರಾತ್ರಿ ತಲುಪಿದರೂ ಅವರು ಅನೇಕ ವಿದ್ಯಾರ್ಥಿಗಳೊಡನೆ ಬಂದು ನನ್ನನ್ನು ನಿಲ್ದಾಣದಲ್ಲಿ ಇದಿರುಗೊಂಡರು. ಅವರು ತಾವೇ ಮನೆಮಾಡಿಕೊಂಡಿರಲಿಲ್ಲ; ಅಧ್ಯಾಪಕ ಮಲ್ಕಾನಿಯವರ ಮನೆಯಲ್ಲಿ ವಾಸಿಸುತ್ತಿದ್ದರು. ಆದುದರಿಂದ ಮಲ್ಕಾನಿಯವರೇ ನಿಜವಾಗಿಯೂ ನನಗೆ ಆತಿಥ್ಯ ನಡೆಸಿದರು. ಆ ಕಾಲದಲ್ಲಿ ಸರಕಾರದ ನೌಕರರು ನನ್ನಂತಹವರನ್ನು ಮನೆಯಲ್ಲಿಟ್ಟುಕೊಳ್ಳುವುದು ಅಸಾಧಾರಣ ವಿಷಯವಾಗಿದ್ದಿತು.

ಆಚಾರ್ಯ ಕೃಪಲಾನಿಯವರು ನನಗೆ ಬಿಹಾರದ—ಅದರಲ್ಲಿಯೂ ತಿರಹುತ್ ಪ್ರಾಂತ್ಯದ—ಅತಿ ಶೋಚನೀಯ ಅವಸ್ಥೆಯನ್ನು ವಿವರಿಸಿ ನನ್ನ ಕಾರ್ಯವೆಷ್ಟು ಕಠಿಣವೆಂಬುದನ್ನು ತಿಳಿಯ ಹೇಳಿದರು. ಅವರು ಬಿಹಾರಿಗಳೊಡನೆ ನಿಕಟ ಸಂಬಂಧವನ್ನು ಬೆಳಸಿದ್ದರು. ನಾನು ಬಿಹಾರಕ್ಕೆ ಹೋಗುವ ಉದ್ದೇಶವನ್ನು ಅವರು ಆಗಲೇ ಜನರಿಗೆ ತಿಳಿಸಿದ್ದರು.

ಬೆಳಿಗ್ಗೆ ವಕೀಲರ ಸಣ್ಣ ಗುಂಪೊಂದು ನನ್ನನ್ನು ಭೇಟಿ ಮಾಡಲು ಬಂದಿತು. ಅವರಲ್ಲಿ ರಾಮನವಮಿ ಪ್ರಸಾದರಿದ್ದುದು ನನಗೆ ಇನ್ನೂ ನೆನಪಿನಲ್ಲಿದೆ. ಏಕೆಂದರೆ ಅವರ ಶ್ರದ್ಧೆಯು ವಿಶೇಷವಾಗಿ ನನ್ನ ಮನಸ್ಸಿಗೆ ಅಂಟಿತು.

"ನೀವು ಮಾಡಬಂದಿರುವ ಕಾರ್ಯವನ್ನು ನೀವು ಇಲ್ಲಿ (ಅಧ್ಯಾಪಕ ಮಲ್ಕಾನಿಯವರ ಮನೆಯಲ್ಲಿ) ನಿಂತರೆ ಎಸಗಲಾಗುವುದಿಲ್ಲ. ನಮ್ಮಲ್ಲಿ ಯಾರ ಮನೆಗಾದರೂ ನೀವು ಬಂದು ನಿಲ್ಲಬೇಕು. ಗಯಾಬಾಬುಗಳು ಇಲ್ಲಿ ಪ್ರಸಿದ್ಧರಾದ ವಕೀಲರು. ನಿಮ್ಮನ್ನು ಅವರ ಮನೆಗೆ ಕರೆಯಲು ನಾನು ಅವರ ಪರವಾಗಿ ಇಲ್ಲಿಗೆ ಬಂದಿದ್ದೇನೆ. ನಮಗೆಲ್ಲರಿಗೂ ಸರಕಾರವನ್ನು ಕಂಡರೆ ದಿಗಿಲೆಂದು ಒಪ್ಪಿಕೊಳ್ಳುತ್ತೇವೆ. ಆದರೆ ನಮ್ಮ ಕೈಲಾದ ಸಹಾಯವನ್ನು ಮಾಡಲು ನಾವು ಸಿದ್ಧರಾಗಿದ್ದೇವೆ. ರಾಜಕುಮಾರ ಶುಕ್ಲರು ಹೇಳಿರುವುದೆಲ್ಲಾ ಬಹುಮಟ್ಟಿಗೆ ನಿಜ. ನಮ್ಮ ಮುಂದಾಳುಗಳು ಈ ದಿನ ಇಲ್ಲಿ ಇಲ್ಲದಿರುವುದು ದುರದೃಷ್ಟಕರವಾಗಿದ್ದಿತು. ನಾನು ಅವರಿಬ್ಬರಿಗೂ—ಬಾಬು ಬ್ರಜಕಿಶೋರ ಪ್ರಸಾದರಿಗೂ, ಬಾಬು ರಾಜೇಂದ್ರ ಪ್ರಸಾದರಿಗೂ—ತಂತಿ ಕಳುಹಿಸಿದ್ದೇನೆ. ಅವರು ಇಷ್ಟರಲ್ಲಿ ಬರುವರೆಂದು ನನ್ನ ನಿರೀಕ್ಷಣೆ. ಅವರು ನಿಮಗೆ ಬೇಕಾದ ವಿಷಯವನ್ನೆಲ್ಲಾ ತಿಳಿಸುವುದೂ, ಹೆಚ್ಚಾಗಿ ಸಹಾಯ ಮಾಡುವುದೂ ಖಂಡಿತ. ದಯೆಯಿಟ್ಟು ಗಯಾಬಾಬುಗಳ ಮನೆಗೆ ಬನ್ನಿ" ಎಂದರವರು.

ನಾನು ಒಪ್ಪಿದರೆ ಗಯಾಬಾಬುಗಳಿಗೆ ತೊಂದರೆಗೆ ಕಾರಣವಾಗಬಹುದೆಂದು ಒಂದು ಕ್ಷಣ ಶಂಕಿಸಿದೆನಾದರೂ ನಾನು ಈ ಆಹ್ವಾನವನ್ನು ನಿರಾಕರಿಸುವಂತಿರಲಿಲ್ಲ. ಗಯಾಬಾಬು ನನ್ನ ಸಂಕೋಚವನ್ನು ಪರಿಹರಿಸಿದರು. ಆದುದರಿಂದ ನಾನು ಅವರ ಮನೆಗೆ ಹೋದೆನು. ಅವರೂ ಅವರ ಮನೆಯವರೂ ನನ್ನ ಮೇಲೆ ವಾತ್ಸಲ್ಯಧಾರೆಯನ್ನು ಸುರಿಸಿದರು.

ಈಗ ಬ್ರಜಕಿಶೋರ ಬಾಬುಗಳು ದರ್ಭಾಂಗದಿಂದಲೂ, ರಾಜೇಂದ್ರ ಬಾಬುಗಳು ಪುರಿಯಿಂದಲೂ ಬಂದರು. ಬ್ರಜಕಿಶೋರ ಬಾಬುಗಳು ನಾನು ಲಖನೌನಲ್ಲಿ ನೋಡಿದ ಬಾಬು ಬ್ರಜಕಿಶೋರಬಾಬುಗಳಂತೆ ಕಾಣಲಿಲ್ಲ. ಈ ಬಾರಿ ಅವರಲ್ಲಿ ಕಂಡುಬಂದ ಬಿಹಾರೀ ನಮ್ರತೆಯೂ ಸರಳತೆಯೂ ಸಾಧುತನವೂ ಅಸಾಧಾರಣ ಶ್ರದ್ಧೆಯೂ ನನ್ನ ಮನಸ್ಸಿನಲ್ಲಿ ಛಾಪಿತವಾದುವು. ಇದರಿಂದ ನನ್ನ ಹೃದಯವು ಹರ್ಷಪೂರ್ಣವಾಯಿತು. ಬಿಹಾರೀ ವಕೀಲರು ಅವರಲ್ಲಿಟ್ಟಿದ್ದ ಗೌರವವನ್ನು ನೋಡಿ ನನಗೆ ಆಶ್ಚರ್ಯವೂ ಆನಂದವೂ ಉಂಟಾಯಿತು.

ಈ ಮಿತ್ರಮಂಡಲಿಯೊಡನೆ ನಾನು ಆ ಜೀವಮೈತ್ರಿಯಿಂದ ಬಂಧಿತನಾಗುತ್ತಿದ್ದೆನೆಂಬುದನ್ನು ನನಗೆ ಜಾಗ್ರತೆಯಾಗಿಯೇ ತೋರುತ್ತಾ ಬಂದಿತು. ಬ್ರಜಕಿಶೋರಬಾಬುಗಳು ನನಗೆ ವಸ್ತುಸ್ಥಿತಿಯನ್ನು ತಿಳಿಸಿದರು. ಅವರು ಬಡ ರೈತರ ಮೊಕದ್ದಮೆಗಳನ್ನು ತೆಗೆದುಕೊಳ್ಳುತ್ತಿದ್ದರು. ನಾನು ಅಲ್ಲಿಗೆ ಹೋದಾಗ ಇಂತಹ ಮೊಕದ್ದಮೆಗಳೆರಡು ನಡೆಯುತ್ತಿದ್ದುವು. ಇಂತಹುದಾವುದನ್ನಾದರೂ ಗೆದ್ದಾಗ ಅವರು ತಾವು ಈ ಬಡ ಜನರಿಗೆ ಅಷ್ಟು ಇಷ್ಟು ನೆರವಿತ್ತೆವೆಂದು ಸಮಾಧಾನಪಟ್ಟುಕೊಳ್ಳುತ್ತಿದ್ದರು. ಈ ಅರಿವಿಲ್ಲದ ರೈತರಿಂದ ಅವರು ರುಸುಮು (ಫೀಜು)ನ್ನು ತೆಗೆದುಕೊಳ್ಳುತ್ತಿರಲಿಲ್ಲವೆಂದಲ್ಲ. ವಕೀಲರು ರುಸುಮನ್ನು ತೆಗೆದುಕೊಳ್ಳದಿದ್ದರೆ ತಮ್ಮ ಸಂಸಾರವನ್ನು ನಡೆಸುವುದಕ್ಕೆ ಹಣವೇ ಇರುವುದಿಲ್ಲವೆಂದೂ ಬಡ ಒಕ್ಕಲಿಗರಿಗೆ ಸಫಲಸಹಾಯವನ್ನು ಮಾಡಲು ಆಗುವುದಿಲ್ಲವೆಂದೂ ತಪ್ಪು ತಿಳಿದುಕೊಂಡಿರುತ್ತಾರೆ. ಅವರು ತೆಗೆದುಕೊಳ್ಳುತ್ತಿದ್ದ ರುಸುಮುಗಳನ್ನು ಬಂಗಾಳದಲ್ಲಿಯೂ ಬಿಹಾರದಲ್ಲಿಯೂ ಬ್ಯಾರಿಸ್ಟರುಗಳಿಗೆ ಕೊಡಬೇಕಾಗಿದ್ದ ರುಸುಮನ್ನೂ ನೋಡಿ ನನಗೆ ದಿಗ್ಭ್ರಮೆಯಾಯಿತು.

"...ರಿಗೆ ಅವರ ಅಭಿಪ್ರಾಯಕ್ಕಾಗಿ ಹತ್ತುಸಾವಿರ ರೂಪಾಯಿಗಳನ್ನು ಕೊಟ್ಟೆವು," ಎಂದು ನನಗೆ ಹೇಳಿದರು. ನಾಲ್ಕು ಅಂಕೆಗಿಂತ ಕಡಿಮೆಯಂತೂ ಎಂದಿಗೂ ಲೆಕ್ಕಕ್ಕೇ ಇಲ್ಲ.

ಈ ವಿಷಯವನ್ನು ಕುರಿತು ನಾನು ಸಮುದ್ದೇಶ ಪೂರ್ವಕವಾದ ಒಳ್ಳೆಯ ಮಾತಿನಲ್ಲಿ ಮಾಡಿದ ವಾಗ್ದಂಡನೆಯನ್ನು ಈ ಮಿತ್ರರು ಅನ್ಯಥಾ ಎಣಿಸದೆ ಕಿವಿಗೊಟ್ಟು ಕೇಳಿದರು.

"ಮೊಕದ್ದಮೆಗಳನ್ನು ಓದಿದ ಮೇಲೆ ನನಗೆ ತೋರುವುದೇನೆಂದರೆ—ನಾವು ನ್ಯಾಯಸ್ಥಾನಗಳಿಗೆ ಹೋಗುವುದನ್ನು ನಿಲ್ಲಿಸಬೇಕು. ಇಂತಹ ವ್ಯಾಜ್ಯಗಳನ್ನು ಕೋರ್ಟಿಗೆ ಕೊಂಡೊಯ್ಯುವುದರಿಂದ ಯಾವ ಲಾಭವೂ ಫಲಿಸುವುದಿಲ್ಲ. ರೈತರು ಹೀಗೆ ಅತಿದು ಜರ್ಜರಿತರಾಗಿ ಭಯಾಕುಲರಾಗಿರುವಾಗ ನ್ಯಾಯಾಸ್ಥಾನಗಳಿಂದುಂಟಾಗುವ ಪ್ರಯೋಜನವೇನು? ದಿಗಿಲನ್ನು ತೊಲಗಿಸುವುದೇ ಇದಕ್ಕೆ ನಿಜವಾದ ಮದ್ದು. ತೀನ್ ಕಠಿಯಾ ಪದ್ಧತಿಯನ್ನು ಬಿಹಾರದ ಹೊರಗಟ್ಟುವ ವರೆಗೂ ನಾವು ಸುಮ್ಮನೆ ಕುಳಿತುಕೊಳ್ಳಲಾಗುವುದಿಲ್ಲ. ಎರಡು ದಿವಸದಲ್ಲಿ ಇಲ್ಲಿಂದ ಹೊರಡಬಹುದೆಂದು ನಾನು ತಿಳಿದುಕೊಂಡಿದ್ದೆನು. ಆದರೆ ಈ ಕೆಲಸವು ಎರಡು ವರ್ಷ ಹಿಡಿದರೂ ಹೆಚ್ಚಲ್ಲವೆಂಬುದು ನನಗೆ ಈಗ ಗೊತ್ತಾಗುತ್ತದೆ. ಅಗತ್ಯವಾದಗಿದರೆ ಅಷ್ಟು ಕಾಲವನ್ನೂ ಇಲ್ಲಿ ಕಳೆಯಲು ನಾನು ಸಿದ್ಧನಾಗಿದ್ದೇನೆ. ನನಗೆ ಮುಂದಿನ ಮಾರ್ಗವು ಅಷ್ಟು ಇಷ್ಟು ಕಾಣುತ್ತಾ ಇದೆ. ಆದರೆ ನಿಮ್ಮ ಒತ್ತಾಸೆಯು ನನಗೆ ಬೇಕು." ಎಂದು ಹೇಳಿದೆನು.

ಬಾಬು ಬ್ರಜಕಿಶೋರ ಪ್ರಸಾದರು ಅಸಾಧಾರಣ ಸ್ಥಿರ ಪ್ರಜ್ಞೆಯಿಂದಿದ್ದುದನ್ನು ಕಂಡೆನು. "ನಮ್ಮ ಕೈಲಾದ ಸಹಾಯವನ್ನೆಲ್ಲಾ ನಾವು ಮಾಡುವೆವು. ಆದರೆ ನಿಮಗೆ ಬೇಕಾದುದೆಂತಹುದೆಂಬುದನ್ನು ದಯೆಯಿಟ್ಟು ಹೇಳಿ" ಎಂದು ಅವರು ಶಾಂತಿಯಿಂದ ಹೇಳಿದರು.

ಹೀಗೆಯೇ ನಾವು ಮಧ್ಯರಾತ್ರಿಯ ವರೆಗೂ ಮಾತಾಡುತ್ತಾ ಕುಳಿತೆವು.

"ಕಾನೂನಿನ ಸಂಬಂಧವಾಗಿ ನಿಮಗಿರುವ ಪರಿಶ್ರಮದಿಂದ ನನಗೇನೂ ಉಪಯೋಗವಾಗುವುದಿಲ್ಲ. ನನಗೆ ಗುಮಾಸ್ತರ ಮತ್ತು ದ್ವಿಭಾಷಿಗಳ ಸಹಾಯವು ಬೇಕು. ಸೆರೆಮನೆಗೆ ಹೋಗಬೇಕಾಗಿ ಬರಬಹುದು. ಆದರೆ ನೀವು ಆ ಅಪಾಯಕ್ಕೆ ಸಿಕ್ಕುವುದು ನನಗೆ ಎಷ್ಟೇ ಇಷ್ಟವಿದ್ದರೂ ನೀವು ಎಷ್ಟು ದೂರ ಹೋಗುವ ಶಕ್ತಿಯುಳ್ಳವರೋ ಅಷ್ಟು ದೂರ ಮಾತ್ರ ಹೋಗಿರಿ. ನಿಮ್ಮ ಉದ್ಯೋಗವನ್ನು ಅನಿಶ್ಚಿತಕಾಲಪರ್ಯಂತ ಬಿಟ್ಟು ನೀವುಗಳು ಗುಮಾಸ್ತರಾಗಿರುವುದು ಕೂಡ ಸಣ್ಣದಲ್ಲ. ಇಲ್ಲಿ ಮಾತಾಡುವ ಹಿಂದಿಯ ಪ್ರಾಂತಿಕ ಭೇದವನ್ನು ತಿಳಿದುಕೊಳ್ಳುವುದು ನನಗೆ ಕಷ್ಟ. ಕೈಥಿಯಲ್ಲಿ ಅಥವಾ ಉರ್ದುವಿನಲ್ಲಿ ಬರೆದ ಪತ್ರಗಳನ್ನು ಓದಲು ನನಗೆ ಬರುವುದಿಲ್ಲ. ಅವುಗಳನ್ನು ನೀವು ನನಗೆ ಭಾಷಾಂತರ ಮಾಡಬೇಕಾಗುವುದು. ಈ ಕೆಲಸಕ್ಕೆಲ್ಲಾ ನಾವು ಸಂಬಳವನ್ನು ಕೊಡಲಾಗುವುದಿಲ್ಲ. ಇದೆಲ್ಲವನ್ನೂ ಪ್ರೇಮಪೂರ್ವಕವಾಗಿಯೂ ಸೇವಾಭಾವದಿಂದಲೂ ಮಾಡಬೇಕು" ಎಂದು ನಾನು ಅವರಿಗೆ ಹೇಳಿದೆನು.

ಬ್ರಜಕಿಶೋರಬಾಬುಗಳು ಇದೆಲ್ಲವನ್ನೂ ಒಡನೆಯೇ ತಿಳಿದುಕೊಂಡರು. ಅವರು ಈಗ ನನ್ನನ್ನೂ ಅವರ ಸಂಗಡಿಗರನ್ನೂ—ಒಬ್ಬರಾಗುತ್ತಲೊಬ್ಬರನ್ನು —"ಪಾಟಿಸವಾಲು" ಮಾಡಿದರು. ನಾನು ಹೇಳಿದುದೆಲ್ಲದರ ಫಲಿತಾರ್ಥವನ್ನು—ಎಷ್ಟು ದಿನ ಸೇವಾಕಾರ್ಯದಲ್ಲಿ ತೊಡಗಿರಬೇಕು, ಎಷ್ಟು ಜನ ಬೇಕು, ಸರದಿಯ ಮೇರೆ ಕೆಲಸಮಾಡಬಹುದೆ, ಇತ್ಯಾದಿ— ತಿಳಿದುಕೊಳ್ಳಲು ಯತ್ನಿಸಿದರು. ಇದಾದ ಮೇಲೆ ಅವರು ವಕೀಲರುಗಳಲ್ಲಿ ತ್ಯಾಗಶಕ್ತಿ ಎಷ್ಟಿದೆಯೆಂಬುದನ್ನು ಕುರಿತು ಅವರುಗಳನ್ನು ಪ್ರಶ್ನೆಮಾಡಿದರು.

ಕಡೆಗೆ ಅವರುಗಳು ನನಗೆ ಈ ರೀತಿಯಾಗಿ ಭರವಸೆಕೊಟ್ಟರು, "ನಮ್ಮಲ್ಲಿ (ಸಂಖ್ಯೆಯನ್ನು ತಿಳಿಸಿ) ಇಷ್ಟು ಜನ ನೀವು ಹೇಳಿದಂತೆ ಮಾಡುತ್ತೇವೆ. ನಮ್ಮಲ್ಲಿ ಕೆಲವರು ನಿಮಗೆ ಅಗತ್ಯವಾದಷ್ಟು ದಿನ ನಿಮ್ಮ ಬಳಿ ಇರುತ್ತೇವೆ. ಸೆರೆಮನೆಗೆ ಹೋಗುವುದು ನಮಗೆ ಹೊಸ ವಿಷಯ. ಆದರೂ ಅದು ನಮಗೆ ಒಂಟುವಂತೆ ನಾವು ಪ್ರಯತ್ನಪಡುತ್ತೇವೆ."

---

## ದಾರಿದ್ರ್ಯದ ಪರೀಕ್ಷೆಯು ಹೇಗೆ?

ದಾರಿದ್ರ್ಯ ಮತ್ತು ಐಶ್ವರ್ಯವೆಂಬುವು ಹೋಲಿಕೆಯ ಮಾತುಗಳು. ನಾನು ಒಬ್ಬ ಬಿಕ್ಷುಕನಿಗಿಂತ ಧನಿಕನಿರಬಹುದು. ಆದರೆ ಒಬ್ಬ ಕೋಟ್ಯಾಧೀಶನಿಗಿಂತ ಬಡವನಿರಲೂ ಬಹುದು. ಹಾಗೆಯೇ ದೇಶಗಳ ವಿಚಾರ. ಇಂಗ್ಲೆಂಡ್ ಹಿಂದೂಸ್ಥಾನಕ್ಕಿಂತ ಶ್ರೀಮಂತವಾಗಿರಬಹುದು. ಆದರೆ ಪ್ರತ್ಯನದಲ್ಲಿ ಅಮೇರಿಕಕ್ಕಿಂತ ಬಡತನದಲ್ಲಿದೆ. ದೇಶವನ್ನು ಕುರಿತು ಈ ಶಬ್ದ ಪ್ರಯೋಗಮಾಡುವಾಗ ಒಂದು ದೇಶದ ಸಾಮಾನ್ಯ ಮನುಷ್ಯನು, ಇನ್ನೊಂದು ದೇಶದ ಮನುಷ್ಯ ಸಾಮಾನ್ಯನಿಗಿಂತ ಬಡವನೋ ಧನಿಕನೋ ಎಂಬ ಅರ್ಥವನ್ನು ಅದು ಸೂಚಿಸುವುದು. ಈ ಅಂತರವು ಪ್ರಾಮುಖ್ಯ ಕಾರಣ. ಹಿಂದುಸ್ಥಾನದ ಒಟ್ಟು ಶ್ರೀಮಂತಿಕೆಯು ಇಂಗ್ಲೆಂಡ್ ದೇಶದ ಒಟ್ಟು ಶ್ರೀಮಂತಿಕೆಗಿಂತ ಅಧಿಕವಿದ್ದರೂ ಸಹ, ಸಾಮಾನ್ಯ ಹಿಂದೀಯನು ಸಾಮಾನ್ಯ ಆಂಗ್ಲೇಯನಿಗಿಂತ ಬಡವನೆನ್ನುವ ಕಾರಣವಿಷ್ಟೆ—ದೇಶದ ಉತ್ಪತ್ತಿಯಲ್ಲಿ ಒಬ್ಬ ಹಿಂದೀಯನ ಪಾಲಿಗೆ ಬರುವ ಸರಾಸರಿ ಉತ್ಪತ್ತಿಯು ಹಾಗೆಯೇ ಒಬ್ಬ ಆಂಗ್ಲೇಯನಿಗೆ ಬರುವ ಉತ್ಪತ್ತಿಗಿಂತ ಕಡಿಮೆಯಿರುವುದರಿಂದ!

ಹಿಂದೀಯನ ಜೀವನದ ಮಿತಿಯು ತೀರ ಕಡಿಮೆಯೆನ್ನುವ ಮಾತಿಗೂ ಇದೇ ಅರ್ಥ. ಆದರೆ ಈ ಮಾತುಗಳ ವ್ಯತ್ಯಾಸವಿಷ್ಟೆ. ಜೀವನದ ಮಿತಿಯು ಕಡಿಮೆಯೆಂದುದರಿಂದ ಬಡವರೆಂದಲ್ಲ, ಬಡವರಾದ್ದರಿಂದ ಜೀವನದ ಮಿತಿಯು ಕಡಿಮೆಯೆಂದು ಈ ಮಾತಿನ ಅಭಿಪ್ರಾಯ. ಇಲ್ಲಿ ಪ್ರತಿಯೊಬ್ಬನ ಉತ್ಪತ್ತಿಯು ಸಾಕಷ್ಟಿಲ್ಲವೆಂದು ಅದರ ಅರ್ಥ. ಸಾಕಷ್ಟೆಂಬುದು ಸಹ ಹೋಲಿಕೆಯ ಮಾತೇ. ನನಗೆ ಸಾಕಾಗುವ ಆಹಾರವು ಕೂಲಿಮಾಡುವವನಿಗೆ ಸಾಕಾಗದು, ನನ್ನ ಆಹಾರವೇ, ಅಗ್ನಿಮಾಂದ್ಯವಿದ್ದವನೊಬ್ಬನಿಗೆ ಹೆಚ್ಚಾಗಬಹುದು.

ಆದ್ದರಿಂದ ಹಿಂದೀಯನ ಜೀವನದ ಮಿತಿ ಯಾವುದೆಂದು ನಿರ್ಧರಿಸುವುದು ಅವಶ್ಯ. ಅದನ್ನು ತಿಳಿದರೆ ಮುಂದೆ ಅದನ್ನು ಈಗಿದ್ದ ಸ್ಥಿತಿಯಿಂದ ಹೇಗೆ ಸುಧಾರಿಸಬಹುದೆಂದು ಯೋಚಿಸಲು ಬರುವುದು.

ನಮ್ಮ ದೇಶದಲ್ಲಿ ಅರೆಹೊಟ್ಟೆ, ಅರೆಬಟ್ಟೆ, ಅಯೋಗ್ಯನಿವಾಸಗಳಿಂದ ನರಳುತ್ತಿರುವ ಸಾವಿರಾರು ಮಂದಿಯನ್ನು ಕಾಣಬಹುದು. ಅವರ ಜೀವನದ ಮಿತಿಯು ತೀರಾ ಕನಿಷ್ಠವಾಗಿದೆ. ಜೀವಹಿಡಿದಿರುವಷ್ಟೂ ಅವರಿಗಿಲ್ಲ. ಇನ್ನು ಕೆಲವರಿಗೆ ಜೀವನದ ಕನಿಷ್ಠ ಸೌಕರ್ಯವಿದ್ದರೂ ತೃಪ್ತಿಯಿಂದ ಜೀವಿಸುವುದು. ಅವರಿಗೆ ಬಾಳ್ವೆಪೂರ್ತಿಗಾಗದಷ್ಟು ಅನ್ನ, ಬಟ್ಟೆ, ಮನೆ, ಇನ್ನು ಅಲ್ಪ ಸ್ವಲ್ಪ ಇತರ ಅವಶ್ಯಕತೆಗಳವೆ.ಎಂದಂತಾಯಿತು. ಕೆಲವರು ಉಂಡು ತಿಂದು ಆಡಂಬರ ಮಾಡಬಲ್ಲರು. ಅವರಿಗೆ ಜೀವನದ ಮಿತಿಗಿಂತ ಎಷ್ಟೋ ಅಧಿಕವಾಗಿ ಇದೆ. ಇವರೇ ಶ್ರೀಮಂತರು.

ಆದ್ದರಿಂದ ಮಾನವರನ್ನು (೧) ಜೀವನದ ಮಿತಿಯನ್ನೇ ಇಲ್ಲವೆ ಅಷ್ಟು ಇಲ್ಲದವರು. (೨) ಸಾಕಷ್ಟು ಸೌಕರ್ಯವುಳ್ಳವರು (೩) ಸುಖದಿಂದ ಬದುಕಬಲ್ಲವರು ಎಂದು ಮೂರು ವಿಭಾಗ ಮಾಡಬಹುದು. ಎಲ್ಲಾ ದೇಶಗಳಿಗೂ ಇವೇ ದಾರಿದ್ರ್ಯ ಐಶ್ವರ್ಯಗಳ ನಿರ್ಧಾರ ಮಾರ್ಗಗಳು. ಜನರ ಈ ಅವಶ್ಯಕತೆಗಳು ದೇಶದೇಶಗಳಲ್ಲಿ ಬೇರಿರಬಹುದು, ಆದರೆ ಪರೀಕ್ಷಾಮಾತ್ರವು ಇದೇ. ಹಿಂದೀಯರ ಜೀವನದ ಮಿತಿಯು ಕಡಿಮೆಯೆನ್ನುವ ಮಾತಿನ ಅರ್ಥವೇನೆಂದರೆ-ಅವರಲ್ಲಿ ಅಧಿಕಾಂಶ ಜನರು ಮೊದಲನೇ ತರಗತಿಯವರೆಂದರ್ಥ. ಹೀಗಿರಲು ನಮ್ಮಲ್ಲಿನ ಅಧಿಕಾಂಶ ಜನರ ಸ್ಥಿತಿಯನ್ನು ಮೂರನೆ ತರಗತಿಗೆ ಎತ್ತಬಹುದೋ ಎಂದು ನಾವು ವಿಚಾರಿಸುವ. ಬರೇ ಎರಡನೆ ತರಗತಿಗೆ ಅಧಿಕಾಂಶ ಜನರನ್ನು ಮುಟ್ಟಿಸಿದರೂ ಸಹ, ನಮ್ಮ ಆರ್ಥಿಕ ಜೀವನವನ್ನು ಸಾಕಷ್ಟು ಸುಧಾರಿಸಿದಂತೆಯೇ ಸರಿ!

'ಸು'

ಹಿಂದೂದೇಶದ ಬಡತನಕ್ಕೆ ಪ್ರೊಫೆಸರ್ ಸಿ. ಯನ್ ವಕಿಲ್‌ರವರು ಈ ಕೆಳಗಿನ ಆರು ಕಾರಣಗಳನ್ನು ಕೊಟ್ಟಿರುವರು.

1. ವ್ಯವಸಾಯಗಾರರ ದೊಡ್ಡ ಸಮುದಾಯಕ್ಕೆ ಆರು ವಾರದ ಕಾಲ ಕಳೆದ ನಂತರ ಸಾಕಷ್ಟು ಕೆಲಸ ಇಲ್ಲದಿರುವಿಕೆ.

2. ದೊಡ್ಡ ಸಂಸಾರವನ್ನು ಸಾಕುವ ಹೊರೆಯನ್ನು ಒಬ್ಬನ ಮೇಲೆ ಹೊರಿಸುವ ಸಾಮಾಜಿಕ ಪದ್ಧತಿ.

3. ಸಾಧುಗಳೆಂದು ತಪ್ಪಾಗಿ ಕರೆಯಲ್ಪಡುವ ಕಾಯುಕಷ್ಟರಾದ ಬೇಡುವವರ ದೊಡ್ಡ ಸಂಖ್ಯೆ ಇರುವಿಕೆ.

4. ಬಲಹೀನ ಮಾಡುವ ವಾಯುಗುಣ.

5. ಎಲ್ಲವನ್ನೂ ಅದೃಷ್ಟಕ್ಕೆ ಬಿಟ್ಟು ದಾರಿದ್ರ್ಯವನ್ನು ಹೋಗಲಾಡಿಸಲು ದೃಢ ಮನಸ್ಸು ಇಲ್ಲದಿರುವಿಕೆ.

6. ತಪ್ಪು ವಿನ್ಯಾಖ್ಯಾನಕ್ರಮ.

ಈ ಕಾರಣಗಳನ್ನು ಕುರಿತು ಮಹಾತ್ಮ ಗಾಂಧಿಯವರು ಹೀಗೆಂದು ಹೇಳಿರುವರು ಇವುಗಳೆಲ್ಲವೂ ದಾರಿದ್ರ್ಯವನ್ನು ಒದಗಿಸುವ ಕಾರಣಗಳಾದರೂ ಮೊದಲಿನದಲ್ಲದೆ ಬಾಕಿ ಯಾವವೂ ಈ ಪ್ರಶ್ನೆಯ ಬೇರು ಮಟ್ಟಕ್ಕೆ ಹೋಗುವದಿಲ್ಲ ಆ ವರ ಒರವಣಿಗೆಯಲ್ಲಿ ಪರದೇಶೀಯರು ಹಿಂದೂದೇಶದಿಂದ ದೋಚಿಕೊಂಡು ಹೋಗುವದು ಬಡತನದ ಒಂದು ಕಾರಣವೆಂದು ಹೇಳಿರುವದರಲ್ಲಿ ಸಂಶಯವಿಲ್ಲ ಆದರೆ ಕಾರಣಗಳನ್ನು ಸಂಗ್ರಹಿಸುವದರಲ್ಲಿ ಪ್ರಾಮುಖ್ಯವಾದ ಕಾರಣವನ್ನು ಸೂಚಿಸುವದಕ್ಕೆ ಪ್ರೊಫೆಸರರವರು ಸ್ವಲ್ಪ ಹಿಂಜರಿದಂತೆ ಕಾಣುತ್ತದೆ ಈ ದೋಚಿಕೊಳ್ಳುವಿಕೆಯು ಸಂದರ್ಭಕ್ಕನುಸಾರವಾಗಿ ರೂಪವನ್ನು ಬದಲಾಯಿಸಿಕೊಳ್ಳುವ ಹಲವು ತಲೆಗಳುಳ್ಳ ರಾಕ್ಷಸನಂತಿದೆ ಪರದೇಶೀ ಸರ್ಕಾರದ ಸೌಕರ್ಯಸ್ವೈ... ಟರಿ, ಹಣ ಚಲಾವಣೆ, ರೈಲ್ವೆ ಮತ್ತು ರೆವಿನ್ಯು ಕತ್ತವು ಭೂಲೋಕವು ಇಂದಿನ ವರೆಗೆ ನೋಡದಂತ ದೋಚಿಕೊಳ್ಳುವಿಕೆಗೆ ಉತ್ತೇಜನ ಕೊಡುವಂಥಾದ್ದಾಗಿದೆ ಈ ದೋಚಿಕೊಳ್ಳುವಿಕೆಯು ನಡೆಯುವ ವರೆಗೆ ಹಿಂದೂದೇಶದ ದಾರಿದ್ರ್ಯವು ನೀಗುವದಿಲ್ಲ ... ನೋರೋಜಿಯವರು ಹೇಳಿದಂತೆ ಈ ... ಮುಗ್ಗದೆ ಹೋದರೆ ವಿಲ್ಲಿಯ ಗಟ್ಟಿ ಕೃಷಿಕರಿಗೆ ... ಆದ ಚರಕಾ ಅಥವಾ ಬೇರೆ ಯಾವ ... ಕಸುಬಾಗಲೀ ಸ್ವಲ್ಪ ಪರಿಹಾರ ಮಾತ್ರವಾಗುವದು ಆದುದರಿಂದ ಹಿಂದೂದೇಶದ ದಾರಿದ್ರ್ಯವನ್ನು ನೀಗಲಿಕ್ಕೆ ಉಪಾಯಗಳನ್ನು ಕಂಡು ಹಿಡಿಯುವವನು ... ಈ ... ವನ್ನು ... ವಿಷಯ ... .

## ಪ್ರಕಟನೆ.

ಕುಟ್ಟದಿಂದ ವೀರಾಜಪೇಟೆಗೂ ಮಡಿಕೇರಿಯಿಂದ ವೀರಾಜಪೇಟೆಗೂ ಮತ್ತು ವೀರಾಜಪೇಟೆಯಿಂದ ವಾಪಸು ಕುಟ್ಟಕ್ಕೂ ಮತ್ತು ಮಡಿಕೇರಿಗೂ ಸಹ ಹೋಗತಕ್ಕ ಬಸ್ಸುಗಳ ವೀರಾಜಪೇಟೆಯ ಏಜನ್ಸಿಯು ಈ ವರೆಗೆ ಮಿ ಪೊನ್ನಕಟ್ಟಿರ ಚಿಣ್ಣಪ್ಪನವರಿಗೆ ಕೊಟ್ಟದ್ದು ಸರಿಯಷ್ಟೆ ಆದರ ಈ ತಾರೀಕು ಲಾಗಾಯಿತು ಸದರಿ ಚಿಣ್ಣಪ್ಪನವರನ್ನು ವಜಮಾಡಿ ವೀರಾಜಪೇಟೆ ಏಜಂಟರಾಗಿ ಮಿ ಪಟ್ಟಿಯಂಡ ಉತ್ತಯ್ಯನವರನ್ನು ಏರ್ಪಾಡು ಮಾಡಿರುವ ಸಂಗತಿ ಎಲ್ಲರ ತಿಳುವಳಿಕೆಗ್ಗೆ ಈ ಮೂಲಕ ಪ್ರಸಿದ್ಧಪಡಿಸಿದೆ ಈ ಲಾಗಾಯಿತು ಸದರಿ ಸರ್ವಿಸಿನ ಟಿಕೇಟುಗಳನ್ನು ಮಿ ಪಟ್ಟಿಯಂಡ ಉತ್ತಯ್ಯನವರಿಂದ ಹೊಂದಿಕೊಳ್ಳಬೇಕಾಗಿ ಕೇಳಿಕೊಳ್ಳಲಾಗಿದೆ ಸದರಿ ಸ್ಟನಲ್ಲಿ ಪ್ರಯಾಣಮಾಡುವ ಹೆಂಗಸರ ಅನುಕೂಲಕ್ಕೆ ಸರಿಯಾಗಿ ವಿಶ್ರಾಂತಿ ತೆಗೆದುಕೊಳ್ಳಲು ವೀರಾಜಪೇಟೆ ಮಿ ತಿರುವೆಂಗಡಂ ಪಿಳ್ಳೆಯವರ ಹಳೇ ಬ್ರಾಂಡಿಶಾಪಿನ ಎಂದರೆ ಹಾಲಿ ಮಿ ಉತ್ತಯ್ಯನವರು ಇಟ್ಟಿರುವ ಅಮ್ಯುನಿಶನ್ ಶಾಪಿನ (Ammunition Shop) ಮಹಡಿಯ ಮೇಲೆಯೂ, ಗಂಡಸರಿಗೆ ಅಮ್ಯುನಿಶನ್ ಶಾಪಿನಲ್ಲಿ ಸಹ ಅನುಕೂಲಪಡಿಸಲಾಗುವದು.

ಮೇಲೆ ಸೂಚಿಸಿದ ಬಸ್ಸುಗಳಿಗೆ ಇನ್ನು ಮುಂದೆ ವೀರಾಜಪೇಟೆ ಕ್ಲಾಕ್ ಟವರ್ ಬಳಿ (Clock Tower) ಇರುವ ಗಣಪತಿ ದೇವಸ್ಥಾನದ ಎದುರಿನಲ್ಲಿ ಮತ್ತು ಮಿ ಉತ್ತಯ್ಯನವರ ಅಮ್ಯುನಿಶನ್ ಶಾಪಿನಲ್ಲಿ ಸಹ ಟಿಕೇಟುಗಳು ಕೊಡಲ್ಪಡುವವು.

**ಪೊನ್ನಂಪೇಟೆ,** ಸಿ ರಾಮ ನಂಬಿಯಾರ್,
7–9–28 ಮೇನೇಜರ.
4—4 ಯಸ್ ಯಸ್ ಯನ್ ಮೋಟಾರು ಸರ್ವಿಸ್

### ಏಕೆ ನರಳುತ್ತೀರಿ?

ಪ್ರಾಚೀನ ಋಷಿಗಳಿಂದ ಪ್ರಣೀತವಾದ ಆಯುರಾರೋಗ್ಯಶಕ್ತಿಯ ವರ್ಧಕವಾದ ಆರೋಗ್ಯವಿಧಿಗಳನ್ನು ತಿಳಿಯದೆ ಅಜ್ಞಾನಾಂಧಕಾರದಲ್ಲಿ ಮುಳುಗಿ ಅನೇಕ ತರಹಗಳ ವ್ಯಾಧಿಗಳಿಂದ ಏಕೆ ನರಳುವಿರಿ?

**ಶ್ರಯವು! ಇಲ್ಲದೆ!!**

ಉಚಿತವಾಗಿ ಕೊಡಲ್ಪಡುವ ಸಂಸ್ಕೃ

ನಮ್ಮ ಔಷಧಿಗಳನ್ನು ವಿಕ್ರಯ ಮಾಡುವದಕ್ಕೆ **ವೈದ್ಯ ವಿದ್ಯೆ** ಏಜಂಟರು ಬೇಕಾಗಿರುವದು.

ಎಂಬ ಪುಸ್ತಕವನ್ನು ಓದಿ ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ

52—12 ನಿವಾರಣೆ ಮಾಡಿಕೊಳ್ಳಿರಿ

ರಾಜವೈದ್ಯ ನಾರಾಯಣಜಿ ಕೇಶವಜಿ,
194 ಟ್ರಿಪ್ಲಿಕೇನ ಬಜಾರು ರೋಡು ಮದ್ರಾಸು
N. B — ವೈದ್ಯಸಲಹೆಯು ಫೀಜಿಲ್ಲದೆ ಕೊಡಲಾಗುವದು

ಹರಾಜು! ಹರಾಜು!

ಮಡಿಕೇರಿ ಮಹದೇವಪೇಟೆಯಲ್ಲಿ ಅಂಗಡಿ ತೆರೆದಿರುವ ದಿ ಬೊಂಬೈ ಹರಾಜು ಕಂಪೆನಿಯವರು ಇದೇ ತಿಂಗಳು ತಾ 1ರಿಂದ 10ರ ವರೆಗೆ ಜವಳಿ ಮತ್ತು ಕಟ್ಲರಿ ಗ್ಲಾಸ್‌ವೇರ್ ಇತ್ಯಾದಿ ಸಾಮಾನುಗಳು ಒಡಬಗ್ಗರಿಗೆ ಅನುಕೂಲ ಆಗುವ ಹಾಗೆ ಸುಲಭ ದರದಲ್ಲಿ ಬಹಿರಂಗವಾಗಿ ಹರಾಜು ಮಾಡುವರು, ಮಡಿಕೇರಿಯಲ್ಲಿ ಹರಾಜು ಪೂರೈಸಿದ ನಂತರ ಸೋಮವಾರಪೇಟೆ ವೀರಾಜಪೇಟೆ, ಗೋಣಿಕೊಪ್ಪಲು ಮೊದಲಾದ ಸ್ಥಳಗಳಲ್ಲಿ ಹರಾಜು ನಡಿಸಲ್ಪಡುವುದು ಪ್ರಕಟಣೆ

## 52 ವರುಷಗಳ ಅನುಭವಸಿದ್ಧ ಔಷಧಗಳು.

### ೧. ಮಹಾಮದನ ಕಾಮೇಶ್ವರೀ ಲೇಪ.

ಅಜೀರ್ಣ, ಎದೆನೋವು ಸೊಂಟನೋವು, ಮಲಬದ್ಧತೆ ನಿದ್ರೆಯಿಲ್ಲದೆ ಇರುವಿಕೆ ಮುಂತಾದವುಗಳನ್ನು ಗುಣಪಡಿಸಿ ... ತಿ ಸುಖಕ್ಕೆ ಶಕ್ತಿಯನ್ನುಂಟುಮಾಡುವುದು
ಡಬ್ಬಿ 1 ಕ್ಕೆ ರೂ 2—0—0 3 ಡಬ್ಬಿಗಳಿಗೆ ರೂ 5—1...

### ೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರು ಕ್ರಮತಪ್ಪಿ ಮುಟ್ಟಾಗುವುದು ರಜೋಸ್ರಾವದಲ್ಲಿ ಅತ್ಯಲ್ಪವಾಗಲೀ, ಅತಿರೇಕವಾಗಲಿ ರಕ್ತ ಸುರಿಯೋಣ, ಹೊಟ್ಟೆನೋವು, ಸೊಂಟನೋವು, ಒಳಜ್ವರ ನಾನಾವಿಧಗಳ ಪ್ರದರಗಳನ್ನು ಅತಿ ಶೀಘ್ರದಲ್ಲಿ ಗುಣಮಾಡಿ ಗರ್ಭಕೋಶ ಸಂಬಂಧ ರೋಗಗಳನ್ನು ಗುಣಪಡಿಸಿ, ಸಂತತಿಗೆ ಅಪಾಯಕರವಾದ ದೋಷಗಳನ್ನು ಹೋಗಲಾಡಿಸುವುದು. 1 ಬಾಟ್ಲಿ ಸಹ 1 ಡಬ್ಬಿ ಮಾತ್ರೆಗೆ 2—4—0

### ೩. ಮೋಹಕುಠಾರ.

ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯು ತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ, ಗುಣಪಡಿಸುತ್ತದೆ ಡಬ್ಬಿ 1 ಕ್ಕೆ 2–8–0 3 ಕ್ಕೆ 7—0—0

### ೪. ಮಲೇರಿಯಾ (ಛಳಿಜ್ವರ) ಪಿಲ್ಸ್.

1 2 3 ಅಥವಾ 4 ದಿವಸಕ್ಕೊಮ್ಮೆ ಬರುವ ಜ್ವರ, ಛಳಿಜ್ವರ ಇವುಗಳ ಮೇಲೆ ಮಾತ್ರೆ, ಬಾಟ್ಲಿ 1 ರ 0—12—0

### ೫. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ
ಬಾಟ್ಲಿ 1 ಕ್ಕೆ 0—10—0 3 ಕ್ಕೆ 1—12—0

### ೬. ಇಚ್ಛಾಭೇದಿ.

ಆಯಾಸವನ್ನುಂಟುಮಾಡದ ಸುಖವಿರೇಚಕ
ಬಾಟ್ಲಿ 1 ಕ್ಕೆ 0—12—0. 3 ಕ್ಕೆ 2—0—0

**೭. ದಂತಕಾಂತಿ ಚೂರ್ಣ.** ಡಬ್ಬಿ 1ಕ್ಕೆ ... 

**೮. ಗಜಕರ್ಣ ಮುಲಾಮು.** ಡಬ್ಬಿ 1ಕ್ಕೆ ...

N B ಇವುಗಳಲ್ಲದೆ ಬೇರೆ ಎಲ್ಲಾ ಸಮಾನು ದೊರೆಯುತ್ತ

**ಎನ್. ಗಣಪಯ್ಯ ಅಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಸಿಯನ್ಸ್,
5. ಮಂಗಳೂರು, ದ. ಕನ್ನಡ

## ಕೋವಿಗಳು, ಮತ್ತು ಅವುಗಳ ಸಾಹಿತ್ಯಗಳು.

ವಿಡ್ಲೀಗ್ ಕಂಪೆನಿಯ ' ನಾಕ್ ಎಬೌಟ್ ' ಎಂಬ 12 ನೇ ನಂಬರಿನ ಒಂಟಿ ಕೊಳದ ಕೋವಿಗೆ ರೂ 50

ಅಮೇರಿಕದ ಸ್ಟೀವನ್ಸ್ ಕಂಪೆನಿಯ 12 ನೇ ನಂಬರಿನ ಒಂಟಿ ಕೊಳದ ತೋಟದ ಕೋವಿಗೆ ರೂ 45

12 ನೇ ನಂಬರಿನ ಒಂಟಿ ಕೊಳದ ಅತಿ ಸುಭದ್ರದ ತೋಟದ ಕೋವಿಗೆ ರೂ 38

12ನೇ ನಂಬರಿನ ಜೋಡು ಕೊಳದ ಇಂಗ್ಲಿಷ್ ತೋಟದ ಕೋವಿಗೆ ರೂ 75

" "

'ಬೆಲ್ಜಿಯನ್' ತೋಟದ ಕೋವಿಗೆ ರೂ 60

ಹೊಗೆ ರಹಿತವಾದ 12 ನಂಬರಿನ ಇಂಗ್ಲಿಷ್ "ಎಲೇ" ಚಿಲ್ಲು ತುಂಬಿದ ತೋಟಗಳು 100 ಕ್ಕೆ ರೂ 11—0—0
ಅಮೇರಿಕನ್ ವೆಸ್ಟರನ್ " " 100 ಕ್ಕೆ ರೂ 9—8—0
ಬೆಲ್ಜಿಯನ್ 100 ಕ್ಕೆ ರೂ 9—0—0

ಎಲ್ಲಾ ತರದ ಕೋವಿಗಳು ರೈಫಲ್‌ಗಳು, ರಿವಾಲ್ವರ್‌ಗಳು ಪಿಸ್ತೂಲ್‌ಗಳು ಮತ್ತು ಚಿಲ್ಲು ಮದ್ದು ವಗೈರೆ ಅಲ್ಲದೆ ಬೇಟೆಗಾರರಿಗೆ ಬೇಕಾಗುವ ಎಲ್ಲಾ ಸಾಹಿತ್ಯಗಳು ಸುಲಭ ದರದಲ್ಲಿ ದೊರಕುತ್ತೆ

ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಂಪೆನಿಯ ಕೆಟಲಾಗೊಂದು ಮುಫತ್ತಾಗಿ ರವಾನಿಸಲ್ಪಡುವದು

Abdoolally Noorbhoy
Arms & Ammunition Dealers
248–250 Abdul Rehman Street
Bombay 3 Telegrams ' Guidance "

## Silks! Silks!! Silks!!!

Sarees with gold borders body plain or spotted in various designs and colours

| | | | | |
|---|---|---|---|---|
| 5 yds by 45 inches plain body | Rs 30/- | to | Rs 50/- | |
| do spotted body | 40/- | to | 90/- | |
| 6 yds by 45 inches plain body | 50/- | to | 100/- | |
| do spotted body | 60/- | to | 120/- | |
| Headkerchief 44 by 44 inches price | 12 - | to | 35/- | |
| Gold Lace borders Ribbons price from | 1/8/- | to | 5/- | per yd |

***For further particulars, please write to:-***

**BHARADWAJ & CO.,**
BROCADE, EMBROIDARY & SILK MANUFACTURERS,
52–11 **Benares City.**

## ಕಮ್ಮಿ ಕರೀದಿಯನ್ನು ನೆನಪಿನಲ್ಲಿಡಿ!
## ಲೋಕವಿಖ್ಯಾತವಾದ " ಜಿಗ್ ಜೇಗ್ "




ಟೈಂಪೀಸ್ ಸೈಜು 6 × 4½"
ಬೆಲೆ ರೂ. 3—0—0 ಮಾತ್ರ.
3 ವರ್ಷ ಖಾತ್ರಿಕೊಡುತ್ತೇವೆ.

ಈ ಟೈಂಪೀಸು ಬಹಳ ಉತ್ತಮವಾದ ಮತ್ತು ಬಲವಾದ ಅತಿಹಾರಗಳಿಂದ ಮಾಡಲ್ಪಟ್ಟು, ಚಿತ್ರದಲ್ಲಿ ತೋರಿಸಿರುವ ಸುಂದರವಾದ ಕೆತ್ತನೆಯ ಸ್ಟಾಂಡ್‌ನೊಳಗೆ ಇರಿಸಲ್ಪಟ್ಟು ನೋಡಲು ಸುಂದರವಾಗಿಯೂ ಸರಿಯಾದ ಗಂಟೆಯನ್ನು ತೋರಿಸುವುದಾಗಿಯೂ ಇರುವ ಈ ಟೈಂಪೀಸನ್ನು ಅನೇಕರು ಉಪಯೋಗಿಸಿ ತೃಪ್ತಿಹೊಂದಿದ್ದಾರೆ

ಇಂಥಾ ಟೈಂಪೀಸಿಗೆ 3—0—0 ರೂ. ಮಾತ್ರ ಬೆಲೆ
ಏಜಂಟರು — ಧೈರ್ಯಲಕ್ಷ್ಮಿ ಅಂಡ್ ಕಂಪೆನಿ,
52—12 ಪೋಸ್ಟು ಬಾಕ್ಸು ನಂ 265. ಮದ್ರಾಸು

# ವರ್ತಮಾನ ಸಂಗ್ರಹ.

## ಒಳದೇಶ.

ಬೆಂಗಳೂರಿನ ಕೊಡಗು ಎಸೋಸಿಯೇಶನಿನ 17ನೇ ವಾರ್ಷಿಕೋತ್ಸವವು ಈ ತಾ 4ರಲ್ಲಿ ಲಾಲ್ ಬಾಗಿನಲ್ಲಿ ನಡೆಯುವದು.

ಕೊಡಗು ಎತ್ಲೆಟಿಕ್ ಎಸೋಸಿಯೇಶನಿನ ಹಾಕಿ ಟೂರ್ನಮೆಂಟು ಮಡಿಕೇರಿ ಪ್ಯಾರೆಡ್ಸ್ ಕಾಂಪೌಂಡಿನಲ್ಲಿ ಈ ತಾ. 4ರಿಂದ ಪ್ರಾರಂಭವಾಗುವದು

ಸುಂಟಿಕೊಪ್ಪದ ಬಳಿ ಇರುವ ಒಲ್ಯಾಟ್ಸಿ ಕಾಫಿ ತೋಟದ ಯಜಮಾನರಾದ ಮೆ. ಆಂಡರ್‌ಸನ್‌ರವರು ತಮ್ಮ ಊರಾದ ಇಂಗ್ಲೆಂಡಿನಲ್ಲಿ ಕಳೆದ ತಾ 24ರಲ್ಲಿ ಮೃತರಾದರೆಂದು ತಿಳಿಯಬರುತ್ತದೆ.

ಮೆ ಕೋದಂಡ ಬಿದ್ದಯ್ಯನವರನ್ನು ಪೋಲೀಸು ಡಿಸ್ಟ್ರಿಕ್ಟ ಸುಪರಿಂಟೆಂಡೆಂಟರಾಗಿ ವಾಲ್ಟೇರಿಗೆ ವರ್ಗಾಯಿಸಲಾಗಿದೆಯೆಂದು ಕಳೆದ ವಾರ ಪ್ರಕಟವಾದ ವರ್ತಮಾನವು ನಿಜವಲ್ಲವೆಂದು ಈಚೆಗೆ ತಿಳಿಯುತ್ತೇವೆ

ಮಡಿಕೇರಿ ಮೋಡಲ್ ಸ್ಕೂಲಿನ ಮೆ. ಚೆನ್ನವೀರಪ್ಪನವರು ಸೋಮವಾರಪೇಟೆ ಶಾಲೆಯ ಹೆಡ್ಮಾಸ್ಟರರಾಗಿಯೂ, ಪೊನ್ನಂಪೇಟೆಯಿಂದ ಮೆ. ಬಾಚರಣಿಯಂಡ ಚಂಗಪ್ಪನವರು ಮಡಿಕೇರಿ ಮೋಡಲ್ ಶಾಲೆಗೂ ವರ್ಗಾಯಿಸಲ್ಪಟ್ಟರು

ಮಡಿಕೇರಿ ಹೈಸ್ಕೂಲಿನ ಉಪಾಧ್ಯಾಯರಾದ ಮೆ ಶಂಕರ ನಾರಾಯಣಯ್ಯನವರು ನಿನ್ನೆ ಯಿಂದ ಮೂರು ತಿಂಗಳು ರಜೆಯಲ್ಲಿ ಹೋಗಿರುವರೆಂದೂ, ಅವರ ಬದಲು ಮೆ. ಕೆದಂಬಾಡಿ ಸೋಮಯ್ಯನವರು ನೇಮಿಸಲ್ಪಟ್ಟಿರುವರೆಂದೂ ತಿಳಿಯುತ್ತೇವೆ

ರೆಡ್ ಕ್ರಾಸ್ ಸಂಘದವರು ಈ ತಾರೀಕು 5ನೇ ಸೋಮವಾರ ಪೊನ್ನಂಪೇಟೆಯಲ್ಲಿ ಆರೋಗ್ಯ ರಕ್ಷಣೆ ಸಂಬಂಧವಾಗಿ ಉಪನ್ಯಾಸ ಕೊಡುವದರಿಂದ ಅದಕ್ಕೆ ಎಲ್ಲರೂ ದಯಮಾಡಿಸಬೇಕೆಂದು ಅದರ ಕಾರ್ಯದರ್ಶಿಯವರ ಕೋರಿಕೆಯಾಗಿದೆ

ಪೊಳ್ಳಿಬೆಟ್ಟದ ಸಮೀಪವಿರುವ ಕೋಟೆಬೆಟ್ಟ ಕಂಪೆನೀ ಟದ ಸುಪರಿಂಟೆಂಡೆಂಟರಾದ ಮೆ. ವೆಬ್ಬರವರಿಗೂ, ಅಲ್ಲಿಯ ರೈಟರಾದ ಮೆ. ಅಳಮೇಂಡ ಪೊನ್ನಪ್ಪನವರಿಗೂ ಜಗಳವಾದ ಕಾರಣದಿಂದ ಹೊಡೆದಾಟವಾಗಿ ಎರಡು ಕಡೆಯವರೂ ಕೇಸು ಕೊಟ್ಟಿರುವರಾಗಿ ಸುದ್ದಿ ಇದೆ

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಆಫೀಸಿನ ಶಿರಸ್ತೆದಾರರಾದ ಮೆ ಕೋದಂಡ ಕಾಳಪ್ಪನವರು ಕಳೆದ ತಾ. 30ರಿಂದ ಒಂದು ತಿಂಗಳು ರಜೆಯಲ್ಲಿ ಹೋಗಿರುವದರಿಂದ ಅದೇ ಆಫೀಸಿನಲ್ಲಿದ್ದ ಮೆ. ಡಿ ಯನ್. ಕೃಷ್ಣಯ್ಯನವರು ಅವರ ಬದಲು ಶಿರಸ್ತೆ ಕೆಲಸವನ್ನು ನೋಡುತ್ತಿರುವರು

ಪೊನ್ನಂಪೇಟೆ ಹಾಕಿ ಟೂರ್ನಮೆಂಟಿನ ಆಖೈರು ಆಟವು ವೀರರಾಜಪೇಟೆ ಸ್ಕೂಲು ಟೀಮಿಗೂ, ವೀರರಾಜಪೇಟೆ ಪಬ್ಲಿಕ್ ಟೀಮಿಗೂ ನಡೆದು ಎರಡು ಕಡೆಯವರಿಗೂ ಸಮವಾದ ಗೋಲ್‌ಗಳಾದುದರಿಂದ ಆ ಟೀಮುಗಳು ಪುನಹ ಈ ತಾ. 3ರಲ್ಲಿ ಆಡುವರೆಂದು ತಿಳಿಯುತ್ತೇವೆ.

ಮಡಿಕೇರಿಯಲ್ಲಿರುವ ಕಾವೇರಿ ಪ್ರೆಸ್ಸಿನ ಪಾಲುದಾರರಲ್ಲಿ ಒಬ್ಬರಾದ ಮೆ. ಮುಕ್ಕಾಟಿರ ಯನ್. ಅಪ್ಪಣ್ಣನವರು ಪಾಲುದಾರಿಕೆಯ ಒಡೆಯುವಿಕೆಗೂ, ಲೆಕ್ಕಗಳ ಫೈಸಲಾತಿಗೂ ಬೇರೆ ಪಾಲುಗಾರರ ಮೇಲೆ ಸಬ್‌ಜಡ್ಜರ ಕೋರ್ಟಿನಲ್ಲಿ ಕೇಸು ದಾಖಲು ಮಾಡಿರುವರೆಂದೂ, ಇದರ ವಿಚಾರವು ಈ ತಾ. 6ಕ್ಕೆ ಇಡಲಾಗಿದೆಯೆಂದೂ ತಿಳಿಯುತ್ತೇವೆ

ಕಳೆದ ವಾರ ಪ್ರಕಟಿಸಿದವರಲ್ಲದೆ ಈ ಸಾಲಿಯ ಬಿ. ಎ. ಪರೀಕ್ಷೆಯಲ್ಲಿ ಭಾಗಮಂಡ್ಲ ಮೆ. ಗಂಗಾಧರಯ್ಯನವರೂ, ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಮೆ ಮುಕ್ಕಾಟಿರ ಎಂ. ಮುದ್ದಪ್ಪನವರು ಪೂರ್ತಿಯಾಗಿಯೂ, ಮೆ ಪಾಲೇಕಂಡ ಟಿ. ಸುಬ್ಬಯ್ಯನವರು ಒಂದು ಭಾಗದಲ್ಲಿಯೂ ತೇರ್ಗಡೆಯಾಗಿರುವರೆಂದು ಕೇಳಿ ಸಂತೋಷಪಡುತ್ತೇವೆ. ಈ ಸಂಬಂಧ ಕಳೆದವಾರದ ವರ್ತಮಾನದಲ್ಲಿ 'ಕಾಳಮಂಡ ಚಿಟ್ಯಪ್ಪನವರು ಎಂಬುದು 'ಕಾಳಮಾಡ ಚಿಟ್ಯಪ್ಪನವರು' ಎಂದ ಆಗಬೇಕು

ಕೊಡಗಿನ ಇಂಡಿಯನ್ ಪ್ಲಾಂಟರ್ಸ್ ಕೋ ಆಪರೇಟಿವ್ ಸೊಸೈಟಿಯ ಜನರಲ್ ಮೀಟಿಂಗೊಂದು ಕಳೆದ ಆದಿತ್ಯವಾರ ಜಮೀನ್ದಾರರ ಸಂಘದ ಹಾಲ್‌ನಲ್ಲಿ ರಾ. ಬಾ. ಕೇಟೋಳಿರ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂಘವನ್ನು ಉತ್ತಮ ರೀತಿಯಲ್ಲಿ ನಡಸಲಿಕ್ಕಾಗಿ ಇದರ ಶೇರನ್ನು ರೂ 100ರಿಂದ 5ಕ್ಕೆ ಇಳಿಸಿದಲ್ಲದೆ, ಇದಕ್ಕೆ ಮುಂದಕ್ಕಾಗಿ ಸೇರುವ ಪ್ಲಾಂಟರುಗಳು ತಮಗಿರುವ ಕಾಫಿ ತೋಟದ ಎಕ್ರೆ ಒಂದಕ್ಕೆ ಒಂದು ರೂಪಾಯಿ ಮೇರೆ ಮೂರು ವರ್ಷಗಳ ವರೆಗೆ ಶೇರು ಹಣ ಕೊಡಬೇಕೆಂದು ತೀರ್ಮಾನಿಸಿ ಇದಕ್ಕೆ ಸಂಬಂಧಿಸುವ ಬೈಲಾಗಳನ್ನು ತಯಾರಿಸಲು ಕಮಿಟಿಗೆ ಬಿಡಲಾಯಿತು. ಮೆ. ಅಪ್ಪಾರಂಡ ಚಂಗಪ್ಪನವರನ್ನು ಸಂಘದ ಅಧ್ಯಕ್ಷರಾಗಿಯೂ, ಹತ್ತು ಪ್ಲಾಂಟರುಗಳನ್ನು ಕಮಿಟಿ ಮೆಂಬರುಗಳಾಗಿಯೂ ಆರಿಸಲಾಯಿತು ನಂತರ ತಿಂಡಿ ತೀರ್ಥ ಹಂಚಲಾಯಿತು.

ಕೊಡಗು ಜಮೀನ್ದಾರರ ಸಂಘದ ಆಶ್ರಯದಲ್ಲಿ ಕಳೆದ ತಾ 27ರಲ್ಲಿ ನಾಪೋಕ್ಲಿನಲ್ಲಿಯೂ ತಾ. 28ರಲ್ಲಿ ಕಾರ್ಗುಂದದಲ್ಲಿಯೂ ಸಾರ್ವಜನಿಕ ಸಭೆಗಳು ನಡೆದಲ್ಲಿ ಜಮೀನ್ದಾರರ ಸಂಘವು ತಯಾರಿಸಿರುವ ಕೊಡಗಿನ ರಾಜಕೀಯ ರಚನೆಯನ್ನು ಸಂಪೂರ್ಣ ಒಪ್ಪಿಯೂ, ಈ ವಿಷಯವನ್ನು ಚೀಫ್ ಕಮಿಶನರಿಗೂ, ಮೈಸೂರಿನ ರಾಜರಿಗೂ ತಿಳಿಸ ಸಂತೆಯೂ ತೀರ್ಮಾನಿಸಿದಲ್ಲದೆ, ನೆಹರು ಕಮಿಟಿಯ ವರದಿಗಳ, ಸರ್ವಪಕ್ಷಗಳ ಲಕ್ನೋ ಪರಿಷತ್ತಿನ ನಿಶ್ಚಯಗಳಿಗೂ ಸಮ್ಮತಿಯನ್ನೀಯುವ, ಸ್ಟೇಟ್ಯುಟರಿ ಕಮಿಷನಿನೊಂದಿಗೆ ಎಲ್ಲಾ ವಿಧದಲ್ಲಿಯೂ ಅಸಹಕರಿಸುವ ಸ್ಥಳೀಯ ನ್ಯಾಯ ವಿಧಾಯಕ ಸಭೆಯ ಚುನಾಯಿತ ಹೆಚ್ಚಿನ ಮೆಂಬರುಗಳು ಸೈಮನ್ ಕಮಿಶನನ್ನು ಬಹಿಷ್ಕರಿಸಲು ತೀರ್ಮಾನಿಸಿದಕ್ಕೆ ಅವರನ್ನು ಅಭಿನಂದಿಸುವ ಮತ್ತು ಸೈಮನ್ ಕಮಿಷನಿಗೆ ಅಭಿಪ್ರಾಯ ಕೊಡುವವರು ಜನರ ಪ್ರತಿನಿಧಿಗಳಲ್ಲವೆಂಬ ಠರಾವುಗಳು ಮಂಜೂರಾದವು.

## ಹಿಂದೂದೇಶ.

ಪಂಡಿತ ಮೋತಿಲಾಲ್ ನೆಹರೂರವರು ಕಳೆದ ತಾ 28ರಲ್ಲಿ ಅಹ್ಮದಾಬಾದಿಗೆ ಹೋಗಿ ಮಹಾತ್ಮ ಗಾಂಧಿಯವರೊಂದಿಗೆ ಧೀರ್ಘ ಸಂಭಾಷಣೆಯನ್ನು ನಡಿಸಿ ಮರುದಿನ ಅಲ್ಲಾಹಬಾದಿಗೆ ಹೋದರು

ಅಖಿಲ ಭಾರತ ನೂಲುವವರ ಸಂಘದ ಕಮಿಟಿಯ ಮೀಟಿಂಗು ತಾ 30—10—28ರಲ್ಲಿ ಬೊಂಬಾಯಿಯಲ್ಲಿ ನಡೆದು ಖಾದಿ ಫಂಡಿಗೆ ಹಣ ಸಂಗ್ರಹಿಸುವ ಬಗ್ಗೆ ಇಡೀ ಹಿಂದೂದೇಶದಲ್ಲಿ ಸೂಕ್ತವ ಏರ್ಪಾಡು ಮಾಡಲು ತೀರ್ಮಾನಿಸಲಾಗಿದೆ

ಮೈಸೂರಿಯಂ ಎಗ್ಸಿಕ್ಯೂಟಿವ್ ಕೌನ್ಸಿಲಿನ ಆ ಮೆಂಬರಾಗಿದ್ದ ಮೆ ಯಸ್ ಆರ್. ದಾಸ್‌ರವರು ಕಳೆದ ತಾ 26ರಲ್ಲಿ ಕಲ್ಕತ್ತಾದಲ್ಲಿ ಸ್ವರ್ಗಸ್ಥರಾದರು ಇವರ ಮರಣಕ್ಕೆ ಹಲವು ದೊಡ್ಡ ಉದ್ಯೋಗಸ್ಥರೂ, ಜನಸಮುದಾಯದವರೂ ವ್ಯಸನವನ್ನು ಸೂಚಿಸುತ್ತಿರುವರು.

ಬಂಗಾಳದಲ್ಲಿ ಸೈಮನ್ ಕಮಿಷನಿಗೆ ಅಭಿಪ್ರಾಯ ಕೊಡಲು ಸಾಕ್ಷಿಗಳನ್ನು ಹೊಂದಿಸಲು ಕೆಲವರು ತಂಬಾ ಹಣ ಖರ್ಚು ಮಾಡುತ್ತಿರುವರೆಂದೂ, ಈ ತರಹದ ಏಜೆಂಟ ತನದಲ್ಲಿ ಕೆಲವರು ಹಣ ಸಂಪಾದಿಸುತ್ತಿರುವರೆಂದೂ 'ವಾಸ ಮತಿ' ಪತ್ರಿಕೆಯಲ್ಲಿ ಪ್ರಕಟವಾಗಿದೆಯಂತೆ

ಕಳೆದ ತಾರೀಕು 27ರಲ್ಲಿ ಜಾನ್ಸಿಪಟ್ಟಣದಲ್ಲಿ ನಡೆದ ಸಂಯುಕ್ತ ಪ್ರಾಂತ್ಯದ ರಾಜಕೀಯ ಪರಿಷತ್ತಿನಲ್ಲಿ ಅಧ್ಯಕ್ಷರಾಗಿದ್ದ ಪಂಡಿತ ಜವಹಿರ್‌ಲಾಲ್ ನೆಹರೂರವರು ಸಂಪೂರ್ಣ ಸ್ವಾತಂತ್ರ್ಯವೇ ಹಿಂದೂದೇಶದ ಧ್ಯೇಯವಿರಬೇಕೆಂದೂ, ಕೋಮುವಾರು ಭಾವನೆ ಪೂರ್ಣ ಹೋಗಬೇಕೆಂದು ಹೇಳಿದರು

ಅಖಿಲಭಾರತ ಮಾರ್ವಾರಿ ಪ್ರಥಮ ಕಾನ್‌ಫರೆನ್ಸ್ ಕಳೆದ ತಾ 27ರಲ್ಲಿ ಕಲ್ಕತ್ತಾದಲ್ಲಿ ನಡೆಯಿತು. ಸೇಠ್ ರಾಮ್ದೇಲ್ಲಿ ಗನೇರಿವಾಲಾರವರು ಅಧ್ಯಕ್ಷರಾಗಿದ್ದು ಹುಡುಗಿಯರ ಸಮ್ಮತಿ ಪ್ರಾಯವನ್ನು ಏರಿಸಬೇಕೆಂಬ ಮೆ. ಸಾರ್ಡರವರು ಅಸೆಂಬ್ಲಿಯಲ್ಲಿ ತಂದಿರುವ ಮಸೂದೆಯನ್ನೂ, ವಿಧವೆಗಳ ಪುನರ್ವಿವಾಹವನ್ನೂ ವಿರೋಧಿಸಿ ಭಾಷಣ ಮಾಡಿದರು.

ಬರೋಡ ಸಂಸ್ಥಾನದ ಕಾಂಗ್ರೆಸ್ಸಿನ 7ನೇ ಕಾನ್‌ಫರೆನ್ಸ್ ನವಂಬರು ತಾ 4ರಲ್ಲಿ ನವಸಾರಿ ಪಟ್ಟದಲ್ಲಿ ಪ್ರಾರಂಭವಾಗುವದು. ಮೆ ದರ್ಬಾರ್ ಗೋಪಾಲದಾಸ್‌ರವರು ಅಧ್ಯಕ್ಷರಾಗಿರುವರು ಇವರ ಪತ್ನಿಯಾದ ಭಕ್ತಿ ಲಕ್ಷ್ಮೀಬಾಯಿಯವರು ಸ್ವದೇಶಿ ಪ್ರದರ್ಶನವನ್ನು ತೆರೆಯುವರು. ಮಿಸಸ್ ಶಾರದ ಸಮಂತ ಮೆಹ್ತಾರವರು ಸ್ವಾಗತ ಅಧ್ಯಕ್ಷರಾಗಿರುವರು.

ಸೈಮನ್ ಕಮಿಷನು ಮತ್ತು ಸೆಂಟ್ರಲ್ ಇಂಡಿಯನ್ ಕಮಿಟಿಯು ಪೂನಾದಲ್ಲಿ ಫ್ರೀ ಜಾಯಿಂಟ್ ಕಾನ್‌ಫರೆನ್ಸನ್ನು ಮುಗಿಸಿ ತಾ 28—10—28ರಲ್ಲಿ ಅಲ್ಲಿಂದ ಪಂಜಾಬಿಗೆ ಹೊರಟರು ಅವರು ಲಾಹೋರಿಗೆ ಕಳೆದ ತಾ. 30ರಲ್ಲಿ ತಲುಪಿದಾಗ ಅಲ್ಲಿಯ ನಿವಾಸಿಗಳು ಕಪ್ಪು ಬಾವುಟಗಳೊಂದಿಗೆ ದೊಡ್ಡ ಮೆರವಣಿಗೆ ನಡೆಸಿ 'ಸೈಮನ್ನೇ ಹಿಂದಕ್ಕೆ ಹೋಗಿ' ಎಂಬ ಘೋಷವನ್ನು ಆಗಾಗ್ಯೆ ಮಾಡುತ್ತಿದ್ದರು. ಈ ಮೆರವಣಿಗೆಯ ಮುಂದಿನ ಸಾಲಿನಲ್ಲಿದ್ದ ಲಾಲಾ ಲಜಪತರಾಯ, ಡಾಕ್ಟರ್ ಸತ್ಯಪಾಲ, ಡಾಕ್ಟರ್ ಆಲಂ ಡಾ. ಗೋಪಿಚಂದ್, ಹಸ್ರತ್ ಮೊದಲಾದ ಮುಂದಾಳುಗಳಿಗೆ ಪೋಲೀಸು ಉದ್ಯೋಗಸ್ಥರು ದೊಣ್ಣೆಯಿಂದ ಪೆಟ್ಟು ಹೊಡೆದರೆಂದೂ, ಅವರಿಗೆ ಸ್ವಲ್ಪ ಗಾಯಗಳಾಗಿವೆಯೆಂದೂ ವರ್ತಮಾನ.

## ವಿದೇಶ.

ಜಪಾನಿನ ಸರಕಾರವು ಬರುವ ವರ್ಷ ಯುದ್ಧದ ಆಫೀಸಿಗೆ 4 ಮಿಲಿಯ ಮತ್ತು ನೌಕಾಸೈನ್ಯಕ್ಕೆ 4 ಮಿಲಿಯ ಹಣಗಳನ್ನು ಹೆಚ್ಚು ಖರ್ಚು ಮಾಡಲು ನಿರ್ಧರಿಸಿರುವರು

ಅಫ್ಘಾನಿಸ್ಥಾನವು ಅತಿವೇಗದಲ್ಲಿ ಅಭಿವೃದ್ಧಿಯಾಗುತ್ತಿದೆ ಅಲ್ಲಿಯ ಸರಕಾರವು ಸಕ್ಕರೆ ಕಾರ್ಖಾನೆಗೆ 11 ಲಕ್ಷ ರೂಪಾಯಿಗಳೂ, ಹತ್ತಿ ಬಟ್ಟೆ ಗಿರಣಿಗಳಿಗೆ ರೂ. 14 ಲಕ್ಷವೂ, ಉಣ್ಣೆಬಟ್ಟೆ ಗಿರಣಿಗಳಿಗೆ ರೂ. 16 ಲಕ್ಷವೂ, ಕಾಗದ ಕಾರ್ಖಾನೆಗೆ ರೂ 15 ಲಕ್ಷವೂ ವೆಚ್ಚ ಮಾಡಲು ತೀರ್ಮಾನಿಸಿದೆ.

ನಾಭಾದ ಮಾಜಿ ಮಹಾರಾಜರವರ ಮಗಳಾದ ಪ್ರಾಣ್ಸಿಸ್ ಎಂಬವಳು ಲಂಡನಿನಲ್ಲಿ ತನ್ನ ತಲೆಯ ಕೂದಲನ್ನು ಯೂರೋಪಿಯನರಂತೆ ಕತ್ತರಿಸಿರುವಳೆಂಬ ವರ್ತಮಾನವು ಅಲ್ಲಿಯ ಸಿಖ್ ಜನರಲ್ಲಿ ಅಸಮಾಧಾನವನ್ನುಂಟುಮಾಡಿದೆ. ಕೂದಲನ್ನು ತೆಗೆಯುವದು ಅವರ ಮತಕ್ಕೆ ವಿರೋಧವಾದುದರಿಂದ ಲಂಡನ್ನಿಗೆ ಹೋಗುವ ಸಿಖ್ ವಿದ್ಯಾರ್ಥಿಗಳು ತಮ್ಮ ಗಡ್ಡವನ್ನು ಬೋಳಿಸುವ ಬದಲು ತುದಿ ಮಾತ್ರ ಕತ್ತರಿಸಿಕೊಳ್ಳುತ್ತಾರಂತೆ.

## ನೋಟೀಸ್.

1928ನೇ ಇಸವಿ ನವಂಬರು ತಾರೀಕು 10 ನೇ ಶನಿವಾರ ದಿನ ಮಧ್ಯಾಹ್ನ 1 ಗಂಟೆಗೆ ವೀರರಾಜಪೇಟೆಯಲ್ಲಿ ತಾಲೋಕು ಕಚ್ಚೇರಿ ಬಳಿ ಮೈದಾನದಲ್ಲಿ ಶೇರುದಾರರ ಮಹಾಸಭೆಯು (ಜನರಲ್ ಮೀಟಿಂಗು) ಸೇರುವುದೆಂದು ಈ ಮೂಲಕ ತಿಳಿಸೋಣಾಗಿದೆ.

ಮೀಟಿಂಗಿನಲ್ಲಿ ಈ ಕೆಳಗೆ ಕಂಡ ಕಾರ್ಯಗಳು ನಡೆಯುತ್ತವೆ

1. 1927—1928ನೇ ವರ್ಷದ ಆಡಳಿತ ವರದಿಯನ್ನು, ಅದೇ ವರ್ಷದ ಆದಾಯ ವೆಚ್ಚ, ಬ್ಯಾಲೆನ್ಸ್ ಶೀಟ್, ಲಾಭನಷ್ಟಗಳ ಪಟ್ಟಿಗಳನ್ನೂ ಮತ್ತು ಆಡಿಟರವರ ಸರ್ಟಿಫಿಕೇಟನ್ನೂ ಸಹ ಸಭೆಯ ಮುಂದೆ ಇರಿಸುವುದು.

2. ಆಡಿಟರನ್ನು ನೇಮಿಸುವಿಕೆ

3. 1927—1928ನೇ ವರ್ಷಕ್ಕೆ ಆಡಿಟರವರಿಗೆ ಕೊಡಬೇಕಾದ ಫೀಜು ನಿಷ್ಕರ್ಷೆ ಮಾಡುವಿಕೆ

4. ಕೆಲಸದಿಂದ ನಿವೃತ್ತರಾಗುವ ಡೈರೆಕ್ಟರುಗಳ ಬದಲಿಗೆ ಬೇರೆಯವರ ಚುನಾವಣೆ.

'ಕೊಡಗು' ಲಿಮಿಟೆಡ್, ಪಿ. ಐ. ಬೆಳ್ಯಪ್ಪ,
ಮಡಿಕೇರಿ, 20—10—28. ಮೇನೇಜರ್.

## ನೋಟೀಸು.

ಜಮೀನ್ದಾರರ ಸಂಘದ ಕಳೆದ ವಾರ್ಷಿಕ ಮಹಾ ಸಭೆಯಲ್ಲಿ ಮಂಜೂರಾಗಿರುವ ಕೊಡಗಿನ ರಾಜಕೀಯ ರಚನೆಯನ್ನು ಜನರ ತಿಳುವಳಿಕೆ ಒಗ್ಗೆ ವಿವರಿಸಲು ಈ ನವಂಬರು ತಾ. 17ನೇ ಶನಿವಾರ ಮಧ್ಯಾಹ್ನ 1 ಗಂಟೆಗೆ ಶನಿವಾರಸಂತೆಯಲ್ಲಿಯೂ, ತಾ 18ನೇ ಆದಿತ್ಯವಾರ ಬೆಳಿಗ್ಯೆ 10½ ಗಂಟೆಗೆ ಫ್ರೇಜರ್‌ಪೇಟೆಯಲ್ಲಿಯೂ ಮತ್ತು ತಾ 19ನೇ ಸೋಮವಾರ ಮಧ್ಯಾಹ್ನ 1 ಗಂಟೆಗೆ ಸೋಮವಾರಪೇಟೆಯಲ್ಲಿಯೂ ಪಬ್ಲಿಕ್ ಮೀಟಿಂಗುಗಳು ನಡೆಯುವವು. ಸರ್ವರೂ ದಯಮಾಡಬೇಕಾಗಿ ಕೋರಲಾಗಿದೆ

| | |
|---|---|
| ಯನ್ ಆರ ಸುಬ್ರಹ್ಮಣ್ಯ. | ಪಿ. ಟಿ ಕುಶಾಲಪ್ಪ. |
| ಎ ಯಸ್. ಉತ್ತಯ್ಯ | ನಾಂಕ್ಷೇರಿ ಪೂ... |
| ಸಿ. ಯಸ್. ವೆಂಕಪ್ಪಯ್ಯ | ಬಮ್ಮತ ... |
| ಬಿದ್ದಂಡ ಯಂ ಸುಬ್ಬಯ್ಯ, | ಪಿ. ಐ. ಬೆಳ್ಯಪ್ಪ. |

ಯಂ ಅಬ್ದುಲ್ ಗಫೂರ್ ಖಾನ್.

## ಡಿಸ್ಟ್ರಿಕ್ಟ್ ಬೋರ್ಡಿನ ವಿದ್ಯಾ ಕಮಿಟಿಯ ಸಂಚಾರ ಕ್ರಮ ಪಟ್ಟಿ.

ನವಂಬರ್ 14ರಿಂದ 16ರ ವರೆಗೆ ಫ್ರೇಜರ್‌ಪೇಟೆ—ಹೆಬ್ಬಾಲೆ ಮತ್ತು ಫ್ರೇಜರ್‌ಪೇಟೆ ಶಾಲೆಗಳ ಪಂಚಾಯಿತದಾರರನ್ನು ಭೇಟಿಯಾಗುವುದು. ಅನಂತರ ಸುತ್ತುಮುತ್ತಲಿನ ಶಾಲೆಗಳ ಪಂಚಾಯಿತದಾರರ ಜೊತೆಯಲ್ಲಿ, ಈಗೂರು, ಹಾಕತ್ತೂರು ಯದಾವರಿ, ಬೆರವಾಲೆ, ಬೇಳೂರು, ಕಾರಮುಕ್ಕೊಲ್ಲಿ ಮತ್ತು ತಾಲ್ಲೂರೆ, ಚೆಟ್ಟಳ್ಳಿ, ಚಿಕ್ಕಕೋಳೂರು ಮತ್ತು ಗೆಜ್ಜಹನಕೋಡು ಗ್ರಾಮ ಗುಂಪುಗಳಲ್ಲಿ ಶಾಲೆಗಳನ್ನು ಸ್ಥಾಪಿಸುವುದನ್ನು ಕುರಿತು ಆಲೋಚಿಸುವುದು. ಇನ್ನಸ್ವಳ್ಳಿ ಮತ್ತು ತೋಳೂರು ಶೆಟ್ಟಳ್ಳಿ ಶಾಲೆಗಳಿಗೆ ಹುಡುಗಿಯರ ಮತ್ತು ಗೌಡಹಳ್ಳಿ ಶಾಲೆಯ ವಿಸ್ತರಣೆಯ ವಿಷಯ ಆಲೋಚಿಸುವಿಕೆ.

ನವಂಬರ್ 22ರಿಂದ 24ರ ವರೆಗೆ ಮಾದಾಪುರ—ಸೋಮವಾರಪೇಟೆ ಹುದುಗೂರು ಮತ್ತು ಕುಂಬಳದಾಳು ಗ್ರಾಮಗಳ ಸ್ಕೂಲು ಪಂಚಾಯಿತದಾರರನ್ನು ಭೇಟಿಯಾಗಿ ಅನಂತರ ಕಾಕೋಟುಪರಂಬು ಮತ್ತು ಮೈತಾಡಿ ಸ್ಕೂಲುಗಳನ್ನು ಸಂದರ್ಶಿಸುವುದು.

ಡಿಸೆಂಬರ್ 8ರಿಂದ 10ರ ವರೆಗೆ ವೀರರಾಜಪೇಟೆ—ಪೊನ್ನಂಪೇಟೆ ಸ್ಕೂಲ್, 8ರಲ್ಲಿ ಪಾಳ್ಯಮಾಡು, 10ರಲ್ಲಿ ಕರಡ ಬೈಯ್ಯಂಡಾಣೆ ಮತ್ತು ವಾರಾಣೆ ಶಾಲೆಗಳನ್ನು ಸಂದರ್ಶಿಸುವದು.

11ನೇ ಡಿಸೆಂಬರ್—ಹಾತೂರು. ಕೈಕೇರಿ. ಗೋಣಿಕೊಪ್ಪಲು ಮತ್ತು ಮಾಯಮುಡಿಗಾಗಿ ಪೊನ್ನಂಪೇಟೆಗೆ (ಮಾಯಮುಡಿ ಶಾಲೆಯನ್ನು ಸಂದರ್ಶಿಸುವುದು) ಮಧ್ಯಾಹ್ನ ತಿತಿಮತಿಗೂರಿನವರು ಶಾಲೆ ಬೇಕೆಂದು ಕೇಳಿಕೊಂಡಿರುವ ಕಾರಣ ಅವರನ್ನು ಭೇಟಿಯಾಗುವುದು.

12ನೇ ಡಿಸೆಂಬರ್—ಹುದಿಕೇರಿ, ಕೂಡಮಕೇರಿ, ಶ್ರೀಮಂಗಲ.

13ನೇ ಡಿಸೆಂಬರ್—ಮರೆನಾಡು.

20ನೇ ಡಿಸೆಂಬರ್—ಭಾಗಮಂಡ್ಲ ಮತ್ತು ಕೊಟ್ಟೂರು ಸ್ಕೂಲ್ ಇನ್ಸ್‌ಪೆಕ್ಟರ್

22ನೇ ಡಿಸೆಂಬರ್—ಕಂದಾಜೆ, ಕರಿಕೆ ಮತ್ತು ತೊಂಬು ಶಾಲೆಗಳು.

ಡಿ. ಬೋ ಮೆಂಬರುಗಳು ತಮ್ಮ ನಾಡಿನಲ್ಲಿ ಆದಷ್ಟು ಮಟ್ಟಿಗೆ ಎಲ್ಲಾ ಜನರನ್ನೂ, ಈ ಕಮಿಟಿಯು ಸ್ಕೂಲುಗಳನ್ನು ಸಂದರ್ಶಿಸುವ ವಿಷಯ ತಿಳಿಸಬೇಕಾಗಿ ಕೋರಲಾಗಿದೆ.

ಪಿ. ಎ. ಚಂಗಪ್ಪ.
ವೈಸ್ ಪ್ರೆಸಿಡೆಂಟ್.

## ನೋಟೀಸು.

ಇದರಿಂದ ಸಮಸ್ತ ಜನರಿಗೂ ಈ ಕೆಳಗೆ ಸೈನ್ ಮಾಡಿದವನು ತಿಳಿಯ ಪಡಿಸುವದೇನಂದರೆ —ಉತ್ತರ ಕೊಡಗು ತಾಲೋಕು ಸೋಮವಾರಪೇಟೆ ನಾಡು ದೊಡ್ಡ ಮಳ್ಳೆ ಗ್ರಾಮದ ಹಾರೋಹಳ್ಳಿಯೆಂಬ ಉಪ ಗ್ರಾಮದಲ್ಲು ಮತ್ತು ಚೌಡ್ಲು ಗ್ರಾಮದಲ್ಲು ಸನ್ 1925ನೇ ಸಂವತ್ಸರದ ಕಂದಾಯ ಬಾಕಿಗಾಗಿ ಕೆಲವು ಜಮೀನನ್ನು ನನಗೆ ನೆಂಟನಾದ ಒಬ್ಬ ಕಿಬ್ಬೆಟ್ಟದ ಪೂವೈಯ್ಯನೆಂಬವನಿಂದ ಹರಾಜು ಕರಿಸಿ ಹರಾಜಿನಲ್ಲಿ ಕೆಲವು ಭೂಮಿಯನ್ನು ಪಡೆದ ಮೇರೆ ಹರಾಜು ಬಾಪ್ತು ರೇವಣಾತಿ ಮೊಬಲಗನ್ನು ನಾನು ಪಾವತಿ ಮಾಡಿ ರೂಲ್ಸ್ ಮೇರೆ ಅವನ ಹೆಸರಿಗೆ ಜಮಾಬಂದಿ ಬಂದು, ಅದೇ ಭೂಮಿಯನ್ನು ನನ್ನ ಹೆಸರಿಗೆ 1926ನೇ ಸಂವತ್ಸರದಲ್ಲು ಜಮಾಬಂದಿ ವರ್ಗಾಯಿಸಿರುತ್ತಾನೆ ಈ ಭೂಮಿಯು ಸಹಕಾರಿ ಸಂಘಕ್ಕೆ ಗಿರ್ವಿ ಇದ್ದದ್ದರಿಂದ ಸಂಘದ ಸಾಲ ಕಟ್ಟದ ಹೊರ್ತು ಹರಾಜು ಮಂಜೂರ್ಮಾಡ ಕೂಡದಾಗಿ ಕೊಡಗು ಪರಸ್ಪರ ಸಂಘಟ ರಿಜಿಸ್ಟ್ರಾರವರು ಕೊಡಗು ಕಮಿಶನರ್ ಸಾಹೇಬರವರಿಗೆ ಫಿರ್ಯಾದು ಬರೆದ ಮೇರೆ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು ನನ್ನ ತಂದೆಯವರನ್ನು ನೋಟೀಸ್ ಮುಖಾಂತರ ಕರಿಸಿ ಸಾಲದ ಹಣವನ್ನು ಕಟ್ಟಬೇಕಾಗಿ ಹುಕುಂ ಮಾಡಿದ ರೀತಿ ಸದರಿ ಸಂಘದ ಸಾಲ 360 ರೂಪಾಯಿ ಚಿಲ್ಲರೆಯನ್ನು ನಾನು ಕಟ್ಟಿರುತ್ತೇನೆ ನಂತರ ಹರಾಜು ಮಂಜೂರ್ಮಾಡಿ ಕೊಡಬೇಕಾಗಿ ಕೇಳಿಕೊಂಡ ಮೇರೆ ಕೊಡಗು ಕಮಿಷನರ್ ಸಾಹೇಬರು ರೂಲ್ಸ್ ಮೇಲೆ ಹರಾಜಿನಲ್ಲು ಪಡೆದುಕೊಂಡವರ ಹೆಸರಿಗೆ ಸೇಲ್ ಸರ್ಟಿಫಿಕೇಟನ್ನು ಇದೇ ತಿಂಗಳಲ್ಲು ಸದರಿ ಪೂವೈಯ್ಯನಿಗೆ ಕೊಟ್ಟಿರುತ್ತಾರೆ ಈ ಭೂಮಿ ನನ್ನದಲ್ಲ ಕಾಳಪ್ಪನವರಿಗಾಗಿ ತೆಗೆದುಕೊಂಡದ್ದು ಎಂಬುದಾಗಿ 1926ರಲ್ಲು ನನ್ನ ಹೆಸರಿಗೆ ವರ್ಗ ರಾಜಿನಾಮೆ ಕೊಟ್ಟು ಜಮಾಬಂದಿಯನ್ನು ಮಾಡಿಸಿ ಕೊಟ್ಟು ಆ ಲಾಗಾಯ್ತಿನಿಂದ ಭೂಮಿಯ ಕಂದಾಯವನ್ನು ನಾನೇ ಪಾವತಿ ಮಾಡುತ್ತಾ ನನ್ನ ಸ್ವಾಧೀನ ಅನುಭವದಲ್ಲಿರುತ್ತೆ ಈಗ ಸೇಲ್ ಸರ್ಟಿಫಿಕೇಟ್ ಸಿಕ್ಕಿರುತ್ತದೆಂಬ ನೆವದ ಮೇಲೆ ಸದರಿ ಭೂಮಿಯನ್ನು ಅವನು ಪರಾಧೀನ ಮಾಡುತ್ತಾನಾಗಿ ತಿಳಿಯುತ್ತೇನೆ ನನ್ನ ಹೆಸರಲ್ಲು ಜಮಾಬಂದಿ ನಡೆದು ಕಂದಾಯ ಪಾವತಿ ಮಾಡುತ್ತಾ ನನ್ನ ಸ್ವಾಧೀನಾನುಭವದಲ್ಲಿರುವ ಭೂಮಿಯನ್ನು ಅವನಿಗೆ ಯಾವ ರೀತಿಯಿಂದಲೂ ಪರಾಧೀನ ಮಾಡುವ ಹಕ್ಕಿರುವದಿಲ್ಲ ಹಾಗೆ ಯಾರಾದರೂ ಪಡೆದುಕೊಂಡಿದ್ದರೆ ಯಾ ಪಡೆದುಕೊಂಡರೆ ಯಾವ ರಿಣಾವಟ್ಟು ಸಿಂಧು ಆಗಲಿಕ್ಕಿಲ್ಲ ಭೂಮಿಗೂ ನಷ್ಟ ಪಕ್ಕಿರುವದಿಲ್ಲ ಅನಾವಶ್ಯಕವಾಗಿ ಕೈಹಾಕಿದವರು ನಷ್ಟ ಎಲ್ಲಾ ನಷ್ಟಗಳಿಗೂ ಜವಾಬ್ದಾರರಾಗ ಬೇಕಾಗಿ ಈ ಮೂಲಕ ತಿಳಿಸಿದೆ.

ಸೋಮವಾರಪೇಟೆ — ಚೌಡ್ಲು ಕಾಳಪ್ಪ,

ತಾ 28—10—26 — ಎಂ ಎಲ್ ಸಿ & ಡಿ ಬಿ ಎಂ

2—1

---

## ಗೇಣಿ ಮಲೆಯೂ ಜಮ್ಮದ ಭೂಮಿಯೂ.

ಒಬ್ಬ ಕೊಡವನಿಗೆ 4 ಜನ ಗಂಡು ಮಕ್ಕಳು ಹೆಂಡತಿ ಹೆಣ್ಣು ಮಕ್ಕಳು ಸಹ ಇರುವರು ಇವನು ಜಮ್ಮದ ರೈತ ಇವನಿಗೆ ಇಲ್ಲವೆ ಇವನ ತಂದೆಗೆ 800 ಬಟ್ಟಿ ಐಯಿನ್ ಪಿತ್ರಾರ್ಜಿತ ಕಲಿಯೆಂಬ ಭೂಮಿಯಿಂದ ಜೀವನಾಂಶದ ಬಗ್ಗೆ ಒಳ ಕೆ ವರುಷಗಳ ಹಿಂದೆ ಅಂದಾಜು ಜಮ್ಮ ಉಂಬಳಿಯಿಂದ 80 ಬಟ್ಟಿ ಭೂಮಿ ಬಂದಿರುವುದು ಇದರ ಹುಟ್ಟುವಳಿಯಿಂದ ಇವನ ಇಡೀ ಸಂಸಾರದ ಜೀವನ ಬಹಳ ಕಷ್ಟದಿಂದಾಗುವುದು. ಇದಕ್ಕೆ ಮುಖ್ಯವಾಗಿ ಕಂಬಳಿ ಹುಳಗಳ ಕಾಟ ಒಂದು ಕಡೆ, ಅದರಲಿ ಇವನ ಹಿರಿ ಮಗನೊಬ್ಬನು ತಂದೆಯ ಹಾಟಿಯಲ್ಲಿಲ್ಲದೆ ಅಲ್ಲಿ ಇಲ್ಲಿ 'ರೈತ' ನೆನ್ನಿಸಿಕೊಂಡು ತಿರುಗಾಡುತ್ತಿರುವನು ತಂದೆ ತನಗೆ ಭೂಮಿ ಹಿಸೆ ಕೊಡಲಿಲ್ಲವೆಂಬ ಮನಸ್ತಾಪ ಒಂದು ಕಡೆ ಹೀಗಿರುತ್ತಾ ಈ ಮಗನು 21 ವರುಷದ ಅವಧಿ ಗೇಣಿಗೊಂದು ಗೇಣಿಮಲೆಯನ್ನು ವರುಷ 10 ಫಣಾನೆ ಗೇಣಿ ಮೊಬಲಗಿಗೆ ಟೆಂಡರು ಮೂಲಕ ತಂದೆಯ ಅನುಮತಿ ಇಲ್ಲದೆ ತನ್ನ ಸ್ವಂತ ಸಂಪಾದನೆಗಾಗಿ ಈಗ ಸುಮಾರು ಎರಡು ವರುಷಗಳ ಹಿಂದೆ ಪಡೆದನು ಈ ಮಲೆಯಲ್ಲಿ ಉತ್ಪತ್ತಿ ಕಡಿಮೆ. ಎರಡು ವರುಷಗಳ ಗೇಣಿ ಮೊಬಲಗು ಮಗನು ಪಾವತಿ ಕೊಡಲಿಲ್ಲ ಬಾಕಿ ಗೇಣಿ ಮೊಬಲಗು ರೂ 17(½) ಇದಕ್ಕೆ ಬಡ್ಡಿ ಜಾಮೀನುದಾರನು ಸಹ ಇರುವನು ಆದರೆ ಆಗ ಏನು? ಈ ಗೇಣಿ ಹಣ ಮಗನಿಂದಲಾಗಲಿ ಜಾಮೀನುದಾರನಿಂದಲಾಗಲಿ ವಸೂಲಿಲ್ಲ ಹಾಗಾದರೆ ವಸೂಲಿ ಹ್ಯಾಗಾಯಿತು ಅನ್ನುವಿರಾ? ಮೇಲೆ ಹೇಳಿದ 80 ಬಟ್ಟಿ ಜೀವನಾಂಶದ ಕುಟುಂಬದ ಪಿತ್ರಾರ್ಜಿತದ ಭೂಮಿಯಲ್ಲಿ ಗೇಣಿ ಬಾಕಿದಾರನಾದ ಮಗನಿಗೂ ಒಂದು ಹಿಸೆ ಇದೆಯಾಗಿ ಗೇಣಿ ವಸೂಲಾತಿಗೆ ಕಾಹಿಸ್ ಮಾಡಿದ ಕೊಡಗು ಫಾರೆಸ್ಟ್ ಇಲಾಖೆಯವರ ಕೋರಿಕೆಯನ್ನು ನೆರವೇರಿಸಿಕೊಡಲು ಸಂಬಂಧಪಟ್ಟ ಪಾರುಪತ್ಯಗಾರರೊಬ್ಬರು ಅಂದಾಜು 30 ಬಟ್ಟಿ ಉಂಬಳಿ ಭೂಮಿಯನ್ನು ತಂದೆಯ ಸಂಪಾದನೆಯಾದ ಅಂದಾಜು 15 ಬಟ್ಟಿ ನಾಟಿನ ಭೂಮಿಯನ್ನು ಇದಕ್ಕೆ ಸಂಬಂಧಪಟ್ಟ 2½ ಏಕ್ರೆ ಬಾಣೆ ಜಾಗವನ್ನು ಸಹ ಜಪ್ತಿಮಾಡಿ ಹರಾಜಿಗಿಟ್ಟರು ಕುಟುಂಬದಲ್ಲಿ ಐಯಿನ್ ಭೂಮಿ ಜೀವನಾಂಶಕ್ಕೆ ವಿಲೆಯಾಗಿರುವುದೇ ಶಿವಾಯಿ ಇಡೀ ಕುಟುಂಬದ ಬಾಣೆ ಜಾಗವೆಲ್ಲ ಇನ್ನು ಕುಟುಂಬದಲ್ಲಿ ಅನೇಕ ಕುತ್ತಿಯ ಮೆಂಬರುಗಳಿಗೂ ಈ ತಂದೆ ಮಕ್ಕಳಿಗೂ ಸಹ ಸಮುದಾಯದ ಹಕ್ಕಾಗಿ ಭಾಗವಾಗದಿರುವುದಾಗಿದೆ ಕುಟುಂಬದ ಪಟ್ಟೆದಾರನಾಗಿ ಅಲಾಯಿದ ಹಿರಿಯವ ಒಬ್ಬನು ಇದ್ದೇ ಇದ್ದಾನೆ. ಈ ಪಟ್ಟೆದಾರನಾಗಲಿ, ತಂದೆಯಾಗಲಿ, ಇವನ ಬೇರೆ ಮಕ್ಕಳಾಗಲಿ ಮೇಲೆ ವಿವರಿಸಿದ ಗೇಣಿ ಮಲೆಗೊಡವೆಗೆ ಹೋದವರಲ್ಲ ಆದಾಗ್ಯು ಹಿರಿಯವರು ಗಳಿಸಿದ ಉಂಬಳಿ ಭೂಮಿ ಆದರಿಂದಲೇ (ಜೀವನ ಹೋದೆಯ ಕಕ್ಕದಿದೆ) ಕಳಕೊಳ್ಳಬಾರದೆಂಬ ಇರಾದೆಯಿಂದ ತಂದೆಯಾದವನು ಗೇಣಿ ಮೊಬಲಗು ಕಟ್ಟಲು ವಾಯಿದೆಯಾಗಬೇಕು, ಭೂಮಿ ಹರಾಜುಮಾಡಬಾರದು ವಗೈರೆಯಾಗಿ ಅರ್ಜಿ ಕೊಟ್ಟರೂ ಏನೊಂದು ಹುಕುಂ ದೊರೆಯಲಿಲ್ಲ ತಂದೆಯಾದರೋ ಕಾನೂನ್ ಕಾಯಿದೆ ತಿಳಿಯದವನು ಹಳ್ಳಿಯವನು ತನ್ನ ದನಗಳನ್ನು ಮಾರಿಯೋ, ಗಿರವಿ ಇಟ್ಟೋ, ಒಂದಕ್ಕೆರಡು ಪ್ರೊನೋಟು ಬರಕೊಟ್ಟೋ ಹ್ಯಾಗೂ ಮಾಡಿ ರುಪಾಯಿ ಒಂದು ನೂರನ್ನು ಸಂಗ್ರಹಿಸಿ ತಂದೆಯಾದವನು ಪಾವತಿಮಾಡಿ ಇನ್ನಾದರು ಹರಾಜು ಮನ್ನಮಾಡಿ ಬಾಕಿ ಹಣ ಕಟ್ಟುತ್ತೇನೆಂದು ವಾಯಿದೆಯಾಗಬೇಕಾಗಿ ಅರ್ಜಿ ಮೂಲಕ ಬೇಡಿಕೊಂಡಾಗ್ಯೂ ಹರಾಜು ಬಾಕಿಯಾಗದಿದ್ದ ಕಾರಣ ಹರಾಜು ದಿನ ತನ್ನೊಬ್ಬ ಬೇರೆ ಮಗನ ಮೂಲಕ ಬೇಗ ಮಾಡಿ 40 ರುಪಾಯಿ ಪಾವತಿ ಕೊಡಿಸಿ ಇನ್ನಾದರೂ ಹರಾಜು ಮನ್ನಮಾಡಿ ಬಾಕಿ ಕಿಂಚಿತ ಮೊಬಲಗಿಗೆ ವಾಯಿದೆ ಕೊಡಬೇಕು, ಅದನ್ನು ಕಟ್ಟುವುದಾಗಿ ಬೇಡಿಕೊಂಡಾಗ್ಯು ಹರಾಜಾಗಿಯೇ ಹೋಯಿತು. ತಂದೆಯ ದುಃಖವಾದರೋ ಇಷ್ಟೆಂದು ಹೇಳಲಾಗದು ಹರಾಜು ಖಾಯಂ ಆಗುವುದರೊಳಗಾಗಿ ಅನೇಕ ಪ್ರಯತ್ನಗಳಿಂದ ಹರಾಜು ಮೊಬಲಗನ್ನು ಕಟ್ಟಿಸಿ ಸೊತ್ತನ್ನು ಉಳಿಸಿಕೊಂಡನು ಗೇಣಿಗೆ ಪಡೆದ ಮಗನಾದರೋ ಮನೆಯಲ್ಲಿ ಇಲ್ಲ ಯಾವ ತೊಂದರೆಗೊಳಪಡದೆ ಯಾರಾದರೊಬ್ಬರ ಕಾಫಿ ತೋಟದ ರೈಟ ನಾಗಿ ಸುಖದಿಂದಿರುವನು ಕೆ ಜಾಮೀನುದಾರನಾದರೋ ಕೊಂಚ ಎಚ್ಚತ್ತಿರುವವನಾಗಿ ಕಾಣುವನು ಯಾಕೆಂದರೆ ಇನ್ನು ಎರಡು ವರುಷದ ವರೆಗೆ ಗೇಣಿ ಮೊಬಲಗು ಕಟ್ಟದಿದ್ದರೆ ತಾನು ಜವಾಬು ಮಾಡಬೇಕಾಗುವುದೆಂದು ಕೊಡಗು ಫಾರೆಸ್ಟ್ ಇಲಾಖೆಯಿಂದ ಬಂದ ನೋಟೀಸಿಗೆ ಮೋಟ್ಯಂತರ ಉಳಿಸಿಕೊಂಡ ಭೂಸ್ಥಿತಿ ಜವಾಬುದಾರಿಕೆಯಿಂದಲೆ ಅಂಥ ಮೊಬಲಗು ವಸೂಲಾಗಬೇಕಾಗಿ ಅರ್ಜಿ ಬರಾಯಿಸಿರುವನಂತೆ ಇದಲ್ಲವೇ ಚಂದ!

ವಿದ್ಯಮಾನ ಹೀಗಿರಲಿ ಮುಖ್ಯವಾಗಿ ಆಲೋಚಿಸಬೇಕಾದ ಸಂಗತಿಗಳು ಯಾವವು ಎಂದು ನೋಡೋಣ. ಯಾಲಕ್ಕಿ ಮಲೆಗಳಿಂದ ಕೊಡಗು ದೇಶದಲ್ಲಿ ಶಾಹುಕಾರನಾರೂ ಉನ್ನತ ಸ್ಥಿತಿಗೆ ಬಂದವರ ಕಾಣದು ಏನೇ ಇತ್ತೀಚೆಗೆ ಯಾಲಕ್ಕಿಗೆ ಕೊಂಚ ಧಾರಣೆ ಹೆಚ್ಚು ಬರಲಾಗಿ ಜನರು ಕಂಠಾಟಿಯಾಗಿ ಮುಂದೇನಾಗಬಹುದೋ ಎಂಬ ಆಲೋಚನೆ ಮಾಡದೆ ಟೆಂಡರು ಮೊಬಲಗು ಒಂದಕ್ಕೆ ಎಂಟು ಹತ್ತರಷ್ಟು ಹೆಚ್ಚು ಮಾಡಿ ಗೇಣಿಗೆ ಮಲೆಗಳನ್ನು ಪಡೆದಿರುವರು ಅನುಭವಿಸಲಿಕ್ಕಿರುವ ಸುಖವೋ ದುಃಖವೋ, ಲಾಭವೋ ನಷ್ಟವೋ ಮುಂದೆ ನೋಡಲಿಕ್ಕೆ ಇದೆಯಷ್ಟೆ ಆದರೆ ಗೇಣಿ ಮೊಬಲಗನ್ನು ಸರ್ಕಾರದವರು ಮೇಲೆ ವಿವರಿಸಿದಂತೆ ವಸೂಲಾತಿ ಮಾಡಿರುವುದು ನೋಡಿದರೆ ಯಾರಿಗೆ ತಾನೇ ಆಶ್ಚರ್ಯ ಮತ್ತು ವಿಸ್ಮಯವನ್ನುಂಟುಮಾಡದಿರುವದು? ಜಮ್ಮ ಬಾಣೆ ರು ಉಂಬಳಿ ಇತ್ಯಾದಿ ಪೂರ ಕಂದಾಯ, ಇಲ್ಲವೆ ಭಾಗಾಂಶ ಕಂದಾಯ ಮಾಫಿಯಾಗಿರತಕ್ಕಂಥ ಜಮೀನನ್ನು ಕುರಿತಾಗಲಿ ಕೊಡವ ಜನಾಂಗದವರಲ್ಲಿ ಒಂಟಿ ಕುಟುಂಬದ ಆಸ್ತಿಯಾಗಿ ಇರುವ ಯಾವ ತರದ (ಜಮ್ಮ ಬಹಗೀರು ಉಂಬಳಿ ಇಲ್ಲವೆ ನಾಗಿಸ) ಜಮೀನು ಕುರಿತಾಗಲಿ ಪಾಲುವಂತಿಗೆ ಇಲ್ಲವೆ ಹಿಸೆಗೆ ಸಿವಿಲ ಕೋರ್ಟಿನಲ್ಲಿ ದಾವ ತರುವುದು ದೇಶದ ಕಾನೂನಿಂದ ಅತಂಕಿಸಲ್ಪಟ್ಟಿರುವುದಾಗಿ ತಿಳಿಯುತ್ತೆ ಹೀಗಿರುವುದರಿಂದಲೇ ಕೊಡವರೊಳಗೆ ಜೀವನಾಂಶದ ಪಾಲು ಎಂಬ ವಿಭಾಗಗಳು ಕಾರಣ ಇದು ಕೊಡವರಲ್ಲಿ ಬಹು ದಿನಗಳಿಂದಲೂ ಜಾರಿಯಲ್ಲಿರುವುದೂ ಅದನ್ನು ಕೋರ್ಟಿನವರು ಅಂಗೀಕರಿಸುವುದೂ ಎಲ್ಲರಿಗೂ ತಿಳಿದ ಸಂಗತಿಯಾಗಿದೆ ಕುಟುಂಬಸ್ಥರೊಳಗೆ ಏಕವಾಗಿ ಒಂದೇ ಅಡಿಗೆಯಲ್ಲಿರಲು ಕೂಡಿಬಾರದ ಕಾರಣ ತಾವಾಗಿ ಒಪ್ಪಿ ತಮ್ಮೊಳಗೆ ಕುಟುಂಬದ ಭೂಮಿಯನ್ನು ತಾರತಮ್ಯವರಿತು ರಾಜಿಯಿಂದ ಹಂಚಿಕೊಂಡು ಪ್ರತ್ಯೇಕ ಪ್ರತ್ಯೇಕವಾಗಿ ರೂಢಿಸುತ್ತಾ ಅನುಭವಿಸಿಕೊಂಡು ಬರುತ್ತಾರಾದಾಗ್ಯೂ ಅದು ಕಾನೂನುರೀತಿ ಖಂಡಿತವಾದ ಪಾಲಲ್ಲ ತನ್ನ ಹಿಸೆಗೆ ಬಂದ ಕುಟುಂಬ ಭೂಸ್ಥಿತಿಯು ತನ್ನ ಸ್ವಂತ ಆಸ್ತಿಯಾಯಿತೆಂದು ಹೇಳಲಾಗುವುದಿಲ್ಲ ಅದನ್ನು ಮಿಕ್ಕ ಕುಟುಂಬಸ್ಥರ ಅನುಮತಿ ಶಿವಾಯಿ ಯಾವ ವಿಧದ ಪರಾಧೀನ ಮಾಡುವ ಹಕ್ಕು ಇರುವುದಿಲ್ಲ ಪ್ರತ್ಯೇಕವಾಗಿ ತನ್ನ ಹೆಸರಿಗೆ ಪಟ್ಟೆ ಮಾಡಿಸಿಕೊಳ್ಳುವ ಹಕ್ಕು ಸ್ವತಂತ್ರ ಇರುವುದಿಲ್ಲ ಕುಟುಂಬದ ಸರ್ವ ಭೂಸ್ತಿಗೂ ಹಿರಿಯವನಾದವನೊಬ್ಬನೇ ಪಟ್ಟೆದಾರನ, ಅವನೇ ಸರ್ಕಾರಕ್ಕೆ ಜವಾಬುದಾರನು, ಆದ್ದರಿಂದಲೇ ಪರಸ್ಪರ ಸಹಾಯದ ಸಂಘದಿಂದಲಾಗಲಿ, ಲ್ಯಾಂಡ್ ಇಂಪ್ರೂವ್‌ಮೆಂಟು ಮತ್ತು ಎಗ್ರಿಕಲ್ಚರಲ್ ಲೋನ್ಸ್ ಆಕ್ಟುಗಳನ್ನನುಸರಿಸಿ ಸರ್ಕಾರದಿಂದಲಾಗಲಿ ಒಬ್ಬ ಕೊಡವ ಮೆಂಬರಿಗೆ ಸಾಲಕೊಡಬೇಕಾದರೆ ಪ್ರಥಮ ಆತನ ಕುಟುಂಬದ ಪಟ್ಟೆದಾರನ ಮತ್ತು ಸಮ್ಮತಿ ಕೊಡುವಷ್ಟು ಪ್ರಾಯ ಪ್ರಬುದ್ಧತೆಗೆ ಬಂದಿರುವ ಇತರ ಎಲ್ಲಾ ಮೆಂಬರುಗಳ ತಸಖಿಯಿಂದ ಅವರೆಲ್ಲರ ಒಪ್ಪಿಗೆ ಇಲ್ಲದೆ ಹೋದರೆ ಯಾವನೊಬ್ಬನಾಗಲಿ ತನ್ನ ಹಿಸೆಗೆ ಬಂದ ಜೀವನಾಂಶದ ಒಂಟಿ ಕುಟುಂಬ ಭೂಸ್ಥಿತಿಯನ್ನು ಗಿರ್ವಿಕೊಟ್ಟು ಸಾಲ ಪಡೆಯುವ ಹಕ್ಕು ಸ್ವತಂತ್ರ ಇರುವುದಿಲ್ಲ ಈ ವಿಷಯಗಳು ಕೊಡಗು ಫಾರೆಸ್ಟ್ ಇಲಾಖೆಯವರಿಗೂ, ಕಂದಾಯ ವಸೂಲ್ಮಾಡುವ ರೆವಿನ್ಯು ಇಲಾಖೆಯವರಿಗೂ ತಿಳಿಯದ ಸಂಗತಿ ಎಂಬದಾಗಿ ಯಾರಾದರು ಹೇಳಬಹುದೇ? ಜೀವನಾಂಶಕ್ಕೆ ಬಂದ ಕುಟುಂಬದ ಯಾವ ಮೆಂಬರು ತನ್ನ ಕಷ್ಟಾರ್ಜಿತದಿಂದ ಫಸಲು ರೂಢಿಸುತ್ತಾನೋ ಅಂಥ ಮೆಂಬರನದೆಂದು ಹಾಗೆ ರೂಢಿತವಾದ ಫಸಲು ಕೆಲವು ಮಟ್ಟಿಗೆ ಹೇಳಲ್ಪಡಬಹುದು ಅಂಥ ಫಸಲು ಅವನ ಸಾಲಕ್ಕೆ ಈಡಾಗಬಹುದು ಆದರೆ ಎಂದೆಂದಿಗೂ ಅವನ ಜೀವನಾಂಶದ ಹಿಸೆ ಭೂಮಿ ಅವನ ಸ್ವಂತವಾಗದು.

ಹೀಗಿರುವಲ್ಲಿ ಮೇಲೆ ಹೇಳಿದ ಗೇಣಿಗೆ ಮಲೆ ಪಡೆದ ಮಗನಿಗೆ ಎಲ್ಲಿಂದ ಬೇರೆ ಹಿಸೆ ಭೂಮಿ? ಅವನಿಗೆ ಹಿಸೆ ಕೊಟ್ಟವರ್ಯಾರು? ಅದು ಏನ್ ಪಿತ್ರಾರ್ಜಿತದ ಕುಟುಂಬದ ಒಂಟಿ ಸೊತ್ತಲ್ಲವೇ! ಅದರ ಪಟ್ಟೆ ಸಹ ಕುಟುಂಬದ ಹಿರಿಯವನ ಹೆಸರಿನಲ್ಲಿ ಅಲ್ಲವೇ? ಫಾರೆಸ್ಟ್ ಡಿಪಾರ್ಟ್‌ಮೆಂಟಿನವರಿಗೆ ಗಿರ್ವಿ ಏನಾದರೂ ಇತ್ತೇ? ಅಂಥಾ ಸೊತ್ತನ್ನು ಒಬ್ಬ ಮೆಂಬರನ ಸ್ವಂತ ಲೇವಾದೇವಿಗೆ ಈಡು ಮಾಡುವದಾಗುವದೇ? ಕುಟುಂಬಸ್ಥರ ಅನುಮತಿ ಇತ್ತೇ? ಜಹಗೀರು, ಜಮ್ಮ, ಉಂಬಳಿ ಭೂಮಿಯನ್ನು ಯಾವ ವಿಧದ ಪರಾಧೀನವಾಡಬೇಕಾದರೂ ಕುಟುಂಬದ ಎಲ್ಲಾ ಮೆಂಬರುಗಳು ಒಪ್ಪಿದರೂ ಕೂಡ ಕೊಡಗು ಕಮಿಷನರವರ ಅನುಮತಿ ಪಡೆದ ವಿನಹ ಆಗುವದಿಲ್ಲವೆಂಬುದು ದೇಶದ ರೆವಿನ್ಯೂ ಕಾನೂನಾಗಿದೆ ಪರಸ್ಪರ ಸಹಾಯ ಸಂಘಕ್ಕೂ, ಸರ್ಕಾರಕ್ಕೂ ಸಹ ಗಿರ್ವಿ ಕೊಡಬೇಕಾದ್ದಕ್ಕೆ ಸ್ಪೆಶಿಯಲ್ ಕಾನೂನಿದೆಯಾಗಿ ಕಾಣುತ್ತೆ ಯಾಲಕ್ಕಿ ಗೇಣಿಗೆ ಈಡು ಮಾಡಲು ಅಂಥ ಕಾನೂನಿದೆಯೇ? ಅದಲ್ಲ ಹೇಗಾದರೂ ಗೇಣಿ ಮೊಬಲಗು ವಸೂಲಾದರೆ ಸರಿ ಅನ್ನುವದೊಂದೇ ಕಾನೂನೋ?

ಈ ಮೊದಲು ಕೆಲವರು ತಮ್ಮ ಸಾಲ ನಿವಾರಣೆ ಬಗ್ಗೆ ಬೇರೆ ರಹ ಇಲ್ಲದಿದ್ದು ತಮ್ಮ ಜಮ್ಮದ ಸೊತ್ತನ್ನು ಸಾಗಿಗೆ ಕೇಳಿದರೆ ಗಿರ್ವಿ, ಭೋಗ್ಯ, ಮಾರಾಟ ವಗೈರೆ ವಿಧದ ಪರಾಧೀನ ಮಾಡಲು ಅಭ್ಯಂತರ ಇರದು ಸರ್ಕಾರಕ್ಕೆ ಒಂದಕ್ಕೆರಡು ಕಂದಾಯ ಬಂದಂತಾಗುವುದು ಆದ್ದರಿಂದ ಜಮ್ಮ ತೆಗೆದು ಹಾಕಿ ಸಾಗಿಗಿಳ್ಸಿ ಕೊಡಿ ಎಂಬದಾಗಿ ಅರ್ಜಿ ಬರಕೊಂಡಿದ್ದರಿಂದೂ ಅದಕ್ಕೆ ಜಮ್ಮದ ರೈತರ ಮೇಲೆ ತುಂಬ ಕರುಣವುಳ್ಳ ಘನ ಸರಕಾರ ತಮಗೆ ಹಣ ಮಾಡುವ ಇರಾದೆ ಇಲ್ಲ ತುಂಬ ಜಮ್ಮದ ರೈತರಿರಬೇಕೆಂಬದೇ ತಮ್ಮ ಕೇವಲ ಇರಾದೆ ಎಂಬದಾಗಿ ಹುಕುಂ ಇತ್ತರಾಗಿ ಸಹ ತಿಳಿಯಬರುತ್ತೆ. ಇರಲಿ ಗೇಣಿಗೆ ಮೇಲ್ಕಂಡಂತೆ ಜಮ್ಮದ ಪಿತ್ರಾರ್ಜಿತ ಬಾಬಿಯ ಕುಟುಂಬದ ಸೊತ್ತನ್ನು ಹರಾಜು ಮಾಡಿದ್ದೇ ಆದರೆ ಜಮ್ಮದ ರೈತರ ಸಂಖ್ಯೆ ಕಡಿಮೆಯಾದಂತಾಗುವುದಿಲ್ಲವೇ?

ಮೇಲೆ ಹೇಳಿದಂತೆ ಗೇಣಿ ಮೊಬಲಗು ಪೂರ್ತಿ ಕಟ್ಟಿದ್ದರಿಂದಲೂ, ಹರಾಜಿನಲ್ಲಿ ಸೊತ್ತನ್ನು ಗೇಣಿಗೆ ಮಲೆ ಪಡೆದವನ ಇನ್ನೊಬ್ಬ ತಮ್ಮನೇ ಪಡಕೊಂಡದ್ದರಿಂದಲೂ ಹರಾಜಾದ ಭೂಮಿ ಬಾಣೆ ಜಾಗ ಕುಟುಂಬಕ್ಕೆ ಉಳಿದು ಉಂಬಳಿದರ ಸಹ ಬಾಕಿಯಾಯಿತು ಮಾರನೆಯವನೊಬ್ಬನು ಹರಾಜಿನಲ್ಲಿ ಪಡಕೊಂಡಿದ್ದ ಪಕ್ಷ ತಂದೆ, ಇವನ ಸಂಸಾರದ ಪಾಡೇನಾಗಬೇಕಿತ್ತು? ಆತನ ಮುಂದಣ ಜೀವನ ಹ್ಯಾಗೆ? ಇವೇ ಮೊದಲಾದ ಸಂಗತಿಗಳು ತುಂಬ ಆಲೋಚಿಸಲ್ಪಡತಕ್ಕವುಗಳು

ಪಟ್ಟೆದಾರನಾದವನು ಯಾಕೆ ಸುಮ್ಮನಿದ್ದನು. ತನ್ನ ಪಟ್ಟೆಗಡಗಿದ ಕುಟುಂಬದ ಸೊತ್ತನ್ನು ಜಪ್ತಿ ಹರಾಜಿಗೆ ಮೇಲ್ಕಂಡ ಬಾಬಿನಲ್ಲಿ ಈಡಾಗಗೊಡದೆ ಮಾಡುವುದು ಕೆಲಸ ಅವನದಲ್ಲವೇ? ಎಂದೀ ಪ್ರಶ್ನೆಗಳು ಬರಬಹುದು. ಆದರೆ ಹಳ್ಳಿಗಾಡಿನಲ್ಲಿರುವ ತಿಳುವಳಿಕೆಯಿಲ್ಲದ ಕಾನೂನೇನೆಂಬದರಿಯದ ಗರೀಬನಾದ, ಸರ್ಕಾರವನ್ನೇ ಹೆತ್ತವರಂತೆ ನಂಬಿರುವ, ಸರ್ಕಾರಕ್ಕೆ ಸರ್ವದಾ ಹೆದರಿ ನಡೆಯುತ್ತಿರುವ ಬಡ ಪಾಪಿಯಾದ ಪಟ್ಟೇದಾರನಿಂದೇನು ಮಾಡಲಾದೀತು? ಹೇಳಿಕೊಂಡರೂ ಪಾರುಪತ್ಯಗಾರರು ಸಿವಿಲಿಗೆ ಹೋಗು ಅನ್ನುವರಂತೆ ಹಾಗಾದರೆ ಸಾಧಾರಣವಾಗಿ ಯಾರಿಗೆ ತಾನೆ ತಿಳಿಯಲಾದೀತು? ಯಾರೂ ಮುಂದಕ್ಕೆ ಪುಕಾರು ತರುವುದೇ ಇಲ್ಲ. ಹಾಗಾದರೆ ಈ ರೀತಿ ಜಪ್ತಿ ಹರಾಜು ತಿಳಿದ ಸರ್ಕಾರದವರು ಮಾಡಬಹುದೇ?

ಆದ್ದರಿಂದ ಈ ದೇಶದ ಮೂಲ ನಿವಾಸಿಗಳಾಗಿ ಖಾಯಂ ರೈತರಾಗಿರುವ ಜಮ್ಮಗಾರರ ಜಮ್ಮದ ಭೂಮಿಯು ಮೇಲ್ಕಂಡಂಥ ಸಂದರ್ಭಗಳಲ್ಲಿ ಇನ್ನು ಮುಂದೇನಾದರೂ ತಪ್ಪಿ ಹೋಗದ ರೀತಿ ಬಡ ರೈತರ ಹಿತಚಿಂತಕರೆನಿಸಿಕೊಳ್ಳುವ ಸರಕಾರವು ಜಾಗರೂಕತೆಯ ದೃಷ್ಟಿ ಇಡಬಾರದೆ ಇದಕ್ಕೆ ಇಲ್ಲವೆಂಬದೇ ಬರವಣಿಗೆಯ ತಾತ್ಪರ್ಯ.

ಕೊ. ಅ. ಸು.

ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಲು ಸುಸಮಯ.

## ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ (ಮಾಸ ಪುಸ್ತಕ)

### (ಎರಡನೆಯ ವರ್ಷಾರಂಭವಾಗಿದೆ.)

'ಹರಿದಾಸ ಸೇವಾ ಸಮಿತಿ' ಯವರಿಂದ ಬಹು ಶುದ್ಧ ರೀತಿಯಲ್ಲಿ ಪರಿಶೋಧಿಸಲ್ಪಟ್ಟು ಮಾಸ ಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಲಿರುವ 'ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ' ಯನ್ನು ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿರಿ! ಇದರಲ್ಲಿ ಜಗದ್ವಂದ್ಯರಾದ ಶ್ರೀ ಪುರಂದರದಾಸರು ಶ್ರೀ ಕನಕದಾಸರೇ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ರಚಿಸಿದ ದಿವ್ಯ ಭಗವನ್ನಾಮ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ಕ್ರೌನ್ ಅಷ್ಟಪತ್ರದ ನಾಲ್ವತ್ತು ಪುಟಗಳ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಲಿವೆ. ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೇ ಹಾಸಲು ಉಚಿತ) ಸಾಮಾನ್ಯ ಪ್ರತಿ ರೂ ೧—೪—೦ ಉತ್ತಮ ಪ್ರತಿ ರೂ ೨—೪—೦

### ಪ್ರಥಮ ಸಂಪುಟದ ಬೈಂಡಾದ ಪ್ರತಿಗಳು.

| | ಸಾದಾ ಬೈಂಡು. | ದಪ್ಪ ರಟ್ಟಿನ ಬೈಂಡು | ಕಿತ್ತಾಸಾದು ಬೈಂಡು |
|---|---|---|---|
| ಸಾಮಾನ್ಯ ಪ್ರತಿ | ೧—೪—೦ | ೧—೧೨—೦ | ೨—೬—೦ |
| ಉತ್ತಮ ಪ್ರತಿ | ೨—೪—೦ | ೨—೮—೦ | ೩—೦—೦ |

ಅಂಚೆಹಾಸಲು ಪ್ರತ್ಯೇಕ.

ವಿಳಾಸ — ಸಂಬೋಧ ಪ್ರಕಟನಾಲಯ,

12—2 ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.



# Arms, Ammunition and Shooting Requisites !!!



1928 Illustrated Catalogue Just Issued Free on Application !

| | | | |
|---|---|---|---|
| D·B B L Rifles | Rs | 120 to Rs | 2750 |
| S B B L | " | 35 to " | 950. |
| D B B L Guns | " | 50 to " | 1350 |
| S B B L. " | | 35 to " | 275 |
| D B M L " | " | 45 to | 135 |
| S B M L " | " | 30 to " | 80 |
| B L Revolvers | " | 35 to " | 350 |
| Automatic Pistols | " | 30 to " | 150 |

Brilliant Search Light Lamp For Shooting Camping, Fishing and All such other Night Sports and work Rs 30 Free delivery

**Also swords, Daggers, Cartridges, Caps, Gunpowder and Shooting Requisites at the most competitive rates.**

## GOOLAMHUSAIN ALLIBHOY & SONS

## Largest Importers of Firearms and Ammunition Cheapest priced firm in India,

44—7 **210 Abdul Rehman Street, BOMBAY.**



## ಫ್ಯಾನ್ಸಿ ಲೀವರ್ ಪಾಕೇಟ್ ವಾಚ್.

(15 ಬಹುಮಾನಗಳು ಸಹಿತ ರೂ 4—8—0)

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಡುತ್ತದೆ

ಈ ಗಡಿಯಾರವು ನೋಟಕ್ಕೆ ಗಾಂಭೀರ್ಯವಾಗಿಯೂ, ಬೇಡಿಗೆ ಅನುಕೂಲವಾಗಿಯೂ ಇರುವಂತೆ ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು. ಮತ್ತು ಒಳ



ಗಡೆ ಕಂಪು ಕೆತ್ತಲ್ಪಟ್ಟ ಗಿಲ್ಟ್ ಮೂಮೆಂಟ್ ಮಾಡಿರುವದು. ವಾಲಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ್ ಡೂಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂಮೆಂಟುಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ — ಫೌಂಟನ್ ಪೇನ್ 1 ಹೇರಾಯಿಲ್ ಬಾಟಲ್ 1 ವಜ್ರದ ಗುಂಡಿಗಳು 4 ಪಾಕೆಟ್ ಕನ್ನಡಿ 1 ಗಡಿಯಾರದ ಸರಪಣಿ 1 ಸುವಾಸನೆ ಸೋಪು 1. ಪೇನಾಕತ್ತಿ 1 ರೋಲ್ಡ್ ಗೋಲ್ಡ್ ಬಂಗಾರದ ಉಂಗುರ 1 ರೋಲ್ಡ್ ಗೋಲ್ಡ್ ಬಂಗಾರದ ನೆಕ್‌ಲೇಸ್ ಎಂಬ ಕತ್ತಿನ ಹಾರ 1 ದಂತದ ಬಾಚಣಿಗೆ 1, ಕೈ ಗುಂಡಿಗಳ ಸೆಟ್ 1 ಕೈ ವಸ್ತ್ರ ಈ 15 ಬಹುಮಾನಗಳು ಮತ್ತು ಖಾತ್ರಿಯಾದ 3 ವರುಷ ಗ್ಯಾರಂಟಿ ಸಹಿತ ಗಡಿಯಾರ 1ಕ್ಕೆ ಕ್ರಯ ರೂ 4 8—0

ವಿಳಾಸ — ವಿ. ಎಸ್. ವಾಚ್ ಕಂಪೆನಿ,

ಪೋಸ್ಟ್ ಬಾಕ್ಸ್ ನಂ 105,

52—12 ಮದರಾಸು

ಡಬ್ಬಲ್ ಮತ್ತು ಸಿಂಗಲ್ ಕೋಟದ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನಂಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

## ಯನ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.

**ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.**

21—22 12. ಬ್ರಾಡ್ವೆ, ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)



# ಎಂ.ಎಸ್.ಶಿದ್ದಪ್ಪ ಅಂಡ್ ಬ್ರದರ್ಸ್.

# ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

**ಉತ್ತಮ ತರಹದ ಸಿಂಗಲ್‌ರೀಡ್ಸ್ ಹಾರ್ಮೋನಿಯಂಗಳು.**

| | |
|---|---|
| ಡಿಲ್ ಬಹಾರ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 50—8—0 |
| [illegible] ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 40—0—0 |
| [illegible]ಕುನ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 37—8—0 |
| [illegible]ಸ್ಟೀಂ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 35—0—0 |
| [illegible]ಬಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 32—8—0 |

**ಉತ್ತಮ ತರಹದ 14 ಕ್ಯಾರೆಟ್ಟು ಬಂಗಾರದ ನಿಬ್ಬು ಹಾಕಿದ ಫೌಂಟನ್ ಪೆನ್‌ಗಳು.**

| | |
|---|---|
| ಬ್ಲಾಕ್ ಬರ್ಡ್ ಫೌಂಟನ್ ಪೆನ್ 1ಕ್ಕೆ | 3—8—0 ಮತ್ತು 3—12—0 |
| ಗರಲ್ಟ್ಸ್ ವಂಡರ್ ಫೌಂಟನ್ ಪೆನ್ 1ಕ್ಕೆ | 3—0—0 ಮತ್ತು 3—8—0 |
| ಕಾಂವ್ಯಾಕ್ಟ್ ಸೆಫ್ಟ್ರಿನ್ ಫೌಂಟನ್ ಪೆನ್ 1ಕ್ಕೆ | 4—8—0 |
| ವಾಟರ್ ಮನ್ ಫೌಂಟನ್ ಪೆನ್ 1ಕ್ಕೆ | 8—0—0 ಮತ್ತು 8—8—0 |
| ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌಂಟನ್ ಪೆನ್ 1ಕ್ಕೆ | 12—0—0 ಮತ್ತು 15—0—0 |

**ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು**

| | |
|---|---|
| ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ | 4—6—0 |
| ವೆಸ್ಟ್ಕ್ಲಾಕ್ ಕಂಪೆನಿಯ ಅಲಾರಂ ಟೈಂಪೀಸ್ 1ಕ್ಕೆ | 8—0—0 |
| ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ | 9—6—0 |
| ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ | 6—12—0 |
| ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ | 6—0—0 |

**ಸಚಿತ್ರ ಕ್ಯಾಟಲಾಗ್ ಬಗ್ಗೆ 6 ಪೈ ಸ್ಟಾಂಪು ರವಾನಿಸಿ.**

**ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,**

**ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು, ಮೈಸೂರು.**

[illegible]36

## ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್. ೧೯೨೮ನೇ ಜೂನ್ ೩೦ನೇ
ಆಖೈರು ಪ್ರಕಾರ ನಿಜಸ್ಥಿತಿ ಹೀಗಿದೆ.

| | | ರೂ. |
|---|---|---|
| ಶೇರ್ ಬಂಡವಾಳ | — | 50,000 |
| ವಸೂಲಾದ ಶೇರ್ ಮೊಬಲಗು | — | 17,193 |
| ಜಮಾ ಬಂದ ಠೇವಣಾತಿ | — | 1,02,320 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಲ್ಪಡುತ್ತದೆ.

ಒಂದು ವರ್ಷ ಗಾಯಿದೆ ಅಥವ ಹೆಚ್ಚಿನ ಗಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಗಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

| ಪ್ರೆಸಿಡೆಂಟರು, | ಟ್ರೆಜರರ್. |
|---|---|
| ಕೋದಂಡ ಅಪ್ಪಯ್ಯನವರು, | ಕೊಂಗಟ್ಟಿರ ಅಪ್ಪಯ್ಯ |
| ರಾವ್ ಬಹದ್ದೂರ್. | ನವರು. |

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಕು 1—7—1928


## ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮ. ಪೇರಿಯಂಡ ಪೂವಯ್ಯನವರ ಮತ್ತು ಚಾಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮ. ಪೇರಿಯಂಡ ಪೂವಯ್ಯನವರು.
ದಕ್ಷಿಣ ಕೊಡಗಿಗೆ—ಮ. ಚಾಗಂಡ ಕುಟ್ಟಪ್ಪನವರು,
ಪೊನ್ನಂಪೇಟೆನಾಡು—ಮ. ಕಾಳೇಂಗಡ ಚಿಣ್ಣಪ್ಪನವರು.
ಶ್ರೀಮಂಗಲನಾಡು—ಮ. ಅಜ್ಜಮಾಡ ಮಾದಪ್ಪನವರು.
ಮರೆನಾಡು—ಮ. ಕೇಕಡ ಅಪ್ಪಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮ. ಕಾಣಚೇರಿರ ಸಂಬಪ್ಪನವರು,
ಮೂನಾರ್ನಾಡು—ಮಡಯಂಡ ದೇವಯ್ಯನವರು,
ನಾಪೋಕ್ಲು—ಮ. ಟಿ. ಆರ್. ರಾಮಯ್ಯನವರು,
ಗೋಣಿಕೊಪ್ಪಲು—ಮ. ಬಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮ. ಪಿ. ಪಿ. ಪೊದ್ದಮ್ಮಯ್ಯನವರು,
ಮದಿಕೇರಿ & ತಿತಿಮತ್ತಿ—ಮ. ಜಿ. ಮಾದಮ್ಮಯ್ಯನವರು,

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

## ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ಪಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಜ್ಜಾರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ.





12 bore Victor Cartridges Rs 10/- Per 100
**Mahomedally-Noorbhoy.**
ARMS & AMMUNITION MART.
321 Abdul Rehman Street.
BOMBAY. 3.
52-8



**ಕಟುಕಷಾಯ ಮಲೇರಿಯ ರಕ್ಷೆ:**—ಇದು ಇಂಜಕ್ಷನ್ ಮತ್ತು ಕ್ವೈನೈನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಬಿಟ್ಟು ಬರುವ ಜ್ವರ, 3–4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1–8–0, 3ಕ್ಕೆ ರೂ. 4–0–0, 6ಕ್ಕೆ ರೂ 7–8–0, 12ಕ್ಕೆ ರೂ 14

**ಚಂದನ ಸನ:**—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಹಿಂಡಿದ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲು ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ, ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಬಾವು ಮುಂತಾದ ರೋಗಗಳಿಗೆ ಪರಮ ಔಷಧಿ. ಚಿಕ್ಕ ಬಾಟ್ಲು 1, 3, 6ಕ್ಕೆ ರೂ 1–4–0, 3–8–0, 6–12–0

**ರೋಮನಾಶಿನಿ:**— ಈ ಪುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0.

**ಮನೋಲ್ಲಾಸಿನಿ ತೈಲ:**—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ, ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2–10–0 ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5–9–0

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ—ಮನೋಲ್ಲಾಸಿನಿ ಕಂಪೆನಿ.
52—4 9. ಮಂಗಳೂರು.



# ಎಂಪಯರ್ ಆಫ್ ಇಂಡಿಯಾ
## ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
**ಸ್ಥಾಪಿಸಲ್ಪಟ್ಟದ್ದು 1897.**

1928ನೇ ಇಸವಿ ಫೆಬ್ರವರಿ 21ಕ್ಕೆ ಆಖೈರಾದ 5 ವರ್ಷಗಳಲ್ಲಿ ಕಂಪನಿಗೆ ಲಾಭದ ಉತ್ಪತ್ತಿ.

| | | |
|---|---|---|
| ಹೊಸ ಪಾಲಿಸಿಗಳು ವಿವರಿಸಿ | .... | ರೂ. 11,6,00,000. |
| ವರಮಾನ ವಿವರಿ | .... | ರೂ. 54,95,000. |
| ಕಂಪೆನಿ ಆಸ್ತಿ ವಿವರಿ | .. | ರೂ. 3,15,64,000. |

ಬೇಕಾಗಿದೆ: ಕೊಡಗು ದೇಶದ ಮುಖ್ಯ ಸ್ಥಳಗಳಲ್ಲಿ ಏಜಂಟರುಗಳು.

| ಹೆಡ್ ಆಫೀಸು. | | ಬ್ರಾಂಚ್ ಆಫೀಸು. |
|---|---|---|
| ಎಂಪಯರ್ ಆಫ್ ಇಂಡಿಯಾ | | ಕಮರ್ಷಿಯಲ್ ಬೀದಿ |
| ಲೈಫ್ ಬಿಲ್ಡಿಂಗ್, ಬೊಂಬಾಯಿ. | 24—19 | ಬೆಂಗಳೂರು. |



ರಕಾರಿಕೆ ಮಾಲುಗಳಿಗೆ ಮೋಸ ಹೋಗಬೇಡಿರಿ!
ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ.

ಅಜಮಾಯಿಸಿ ನೋಡಿರಿ.

ಇನಾಮಿನ ಬಟ್ಲುಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ.

ಎಲ್ಲಾ ಆರ್ಡರುಗಳನ್ನೂ ಚೆಲೋ ರೀತಿಯಿಂದಲೂ, ತುರಿತವಾಗಿಯೂ ಗ್ಯಾರೆಂಟಿಯೊಡನೆ ಜಾರಿ ಮಾಡಲಾಗುವದು.

ಕೇಶವಜಂದ್ ದೇವಚಂದ್,
ಜ್ವಲ್ಲರ್, (ಕೆಟಲಾಗ್ ಮುಫತ್).
12—9 21 ಚೈನಾ ಬಜಾರ್‌ರೋಡ್, ಮದರಾಸು.
ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ.



# ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ
# ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

**1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ವ್ಯಾಪಾರದ ಫಲ.**

## ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

| | |
|---|---|
| ವಿಮೆದಾರರಿಗೆ | 1000 ರೂಪಾಯಿಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ—ರೂ. 25. |
| ಹೆಚ್ಚಾಗಿ ಸಿಕ್ಕಿರುವ ಬೋನಸು | 1000 " " ಎಂಡೋಮೆಂಟ್ " " —ರೂ. 20. |

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಚಿಂತೆಯಿಲ್ಲ.
ಪುನಹ ಒಂದು ಹೊಸ ಪಾಲಿಸಿಯನ್ನು "ಓರಿಯಂಟಲ್" ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವುಂಟು
ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು.—

ಓರಿಯಂಟಲ್ ಬಿಲ್ಡಿಂಗ್ಸ್,
ನಂ. 1. ಮಹಾತ್ಮಾ ಗಾಂಧಿ ರೋಡ್, ಬೆಂಗಳೂರು. 52—29 ಯಲ್. ಆರ್. ಕೃಷ್ಣಸ್ವಾಮ್ಯಯ್ಯರ್.
ಬ್ರಾಂಚ್ ಸೆಕ್ರೆಟರಿ.


Printed & published by P. I. Bellappa, at "Kodagu" Press, Mercara for "Kodagu" Ltd.

Regd. No. M. 1550.
If not delivered please return to "KODAGU" OFFICE, MERCARA.

# ಕೊಡಗು.

ವಾರ್ಷಿಕ ಚಂದಾ ರೂ. ೩–೮–೦.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ–ಶಂಭ್ಯಂಡ ಬಿ. ಚಿಕ್ಕಣ್ಣ.

ಸಂಪುಟ ೮] ಮಡಿಕೇರಿ, ೧೯೨೮ನೇ ಇಸವಿ ನವಂಬರ್ ತಾರೀಕು ೯ ನೇ ಶುಕ್ರವಾರ [ಸಂಚಿಕೆ ೨೪

## GENT'S OUTFITTING DEPARTMENT.

### NEW ARRIVALS!

Bow Ties @ Rs. 2–8–0, 2–1–0 and 1–12–0 each
Wide-end Ties @ „ 2–8–0, 2–0–0 and 1–8–0 „
Cotton Handkerchieves @ 4–8–0 a dozen
Woollen Stockings @ 3–8–0 a pair

Flash Garters to match @ 1–12–0 each.
Cashmier Socks @ 2–4–0 each.
Kremntz Links @ 4–8–0 a set
„ Stud. @ 0–14–0 „

52–41

**SPENCER & CO. LTD.** Gents Outfitting Specialists **MERCARA.**

Post Box 423,
TRIPLICANE, MADRAS.

Catalogue Free
to Bonafide Enquirers

MANUFACTURES AND DEALS IN ALL:–

(1) Gemset Jewels, gold and silver articles of all patterns
(2) Race Cups, Caskets, Medals etc., for presentation purposes.
(3) Trovels, Keys, Locks etc., for ceremonial purposes.

JEWELLER
BY
APPOINTMENT
TO
His Excellency
THE GOVERNOR
OF MADRAS.

UNDERTAKES.–

(1) Remaking or Remodelling of all sorts of old gemset jewels to latest patterns.
(2) Electro plating, gilding and nickelling
(3) Buying old jewellery, or undertaking to effect sale.

# V. SUBRAMANIA IYER
# JEWELLER

**Gold-smith, Silver smith, & Dealer in all Gemset Jewels.**

## ನೀವು ನಿರ್ಬಲಸ್ಥರಾಗಿ ಯಾಕೆ ನರಳುವಿರಿ?

ಇಪ್ಪತ್ತು ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

## ಸಾಲಾಂಮಿಸ್ರಿ ಮುರಬ್ಬ

ಸೇವನೆಯಿಂದ ಎಾಧಾ ಧಾತು ಜನ್ಯವಿಕಾರಗಳನ್ನು, ನರಗಳ ಶಕ್ತಿ ಕುಂದಿಹೋಗಿರುವದನ್ನೂ ಮೆದುಳಿನ ಬಲಹೀನತೆಯನ್ನೂ ಇಂಥಾ ರೋಗಗಳನ್ನೆಲ್ಲಾ ಯಶ್ಚಿಣಾಗುಂತೆ ಹೋಯಹೊಂದಿಸತಕ್ಕ ಕನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸುತ್ತದೆ. ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ಮಹನೀಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ಯಾರೂ ತರಿಸಿ ನೋಡಬಹುದು. ಒಂದು ಡಬ್ಬ ೧೫ ದಿನಗಳ ಸೇವನೆಯಿಂದಲೇ ಇದರ ಗುಣವು ತೋರಿಬರುವುದು. ೩.೪ ಡಬ್ಬಗಳ ಸೇವನೆಯಿಂದ ಜನ್ಮಾಂತ್ರದವರಿಗೂ ಸಂಪೂರ್ಣ ಗುಣವನ್ನುಂಟುಮಾಡುವದು. ನಮ್ಮ ಟ್ರೇಡ್ ಮಾರ್ಕ್ ನೋಡಿ ಡಬ್ಬ ತೆಗೆದುಕೊಳ್ಳಿರಿ. ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಅವಶ್ಯಕವಿರುತ್ತೆ.

ಕ್ರಯ ಡಬ್ಬ ೧ಕ್ಕೆ ೩–೦–೦. ಟಪ್ಪಾಲು ಖರ್ಚು ೧ರಿಂದ ೩ ಡಬ್ಬಗಳವರೆಗೆ ೦–೮–೦.

ಡಿ. ಮನ್ನಾಲಾಲ್,
ಹೆಡ್ ನೇಟೀವ್ ಡಾಕ್ಟರು, ಸಾಲಾಮಿಸ್ರಿ ಮುರಬ್ಬ ಫಾರ್ಮಸಿ, ಬೆಂಗಳೂರು ಸಿಟಿ.

15

## ಅ ಪೂ ರ್ವ ಸಂ ದ ರ್ಭ.

ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸಬೇಕಾದರೆ ಇದೀಗ ಅಪೂರ್ವ ಸಂದರ್ಭ.

## ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ, ಮಲಬದ್ಧತೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಪಡಿಸುವುವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ! ಧರ್ಮಾರ್ಥ!!

## ಕಾ ಮ ಶಾ ಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ:—

52–15

ಆತಂಕನಿಗ್ರಹ ಔಷಧಾಲಯ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

# ಕೊಡಗು.

೧೯೨೮ ನೇ ಇಸವಿ
ನವಂಬರ್ ತಾ. ೯ ನೇ ಶುಕ್ರವಾರ.

## ಮುಂದಾಳುಗಳಿಗೆ ದೊಣ್ಣೆಪೆಟ್ಟು.

ಸೈಮನ್ ಕಮಿಶನು ಪೂನಾದಿಂದ ಹೊರಟು ಲಾಹೋರಿಗೆ ತಲಪಿದ ದಿನ ಅಲ್ಲಿಯ ಜನರು ಈ ಕಮಿಶನಿನ ಸಂಗಡ ತಮ್ಮ ಅಸಹಕಾರವನ್ನು ತೋರಿಸಲು ಕಪ್ಪು ಬಾವುಟಗಳೊಡನೆ ಮೆರವಣಿಗೆಯನ್ನೂ, ಸಭೆಗಳನ್ನೂ ಏರ್ಪಡಿಸಿಕೊಂಡಿದ್ದರು. ಇಂಥಾ ಮೆರವಣಿಗೆಯು ಸೈಮನರ ದೃಷ್ಟಿಗೆ ಬೀಳದಂತೆ ಕಮಿಶನಿನವರು ಬಂದು ಇಳಿಯುವ ರೈಲ್ವೆಸ್ಟೇಶನಿಗೆ ಹೋಗುವ ರಸ್ತೆಗೆ ಅಡ್ಡಲಾಗಿ ಮುಳ್ಳು ತಂತಿಯ ತಡೆಯನ್ನು ಹಾಕಿದ್ದಲ್ಲದೆ ಪೋಲೀಸಿನವರ ಪಹರೆ ಸಹ ಇಟ್ಟಿದ್ದರು. ಕೆಲವು ರಸ್ತೆಗಳಿಗಾಗಿ ಮೆರವಣಿಗೆಗಳು ಹೋಗಬಾರದೆಂತ ಮೆಜಿಸ್ಟ್ರೇಟರ ಹುಕ್ಕುಂ ಆಗಿತ್ತು. ಇಂಥಾ ಹುಕ್ಕುಮುಗಳನ್ನು ಉಲ್ಲಂಘಿಸುವ ಅಭಿಪ್ರಾಯವು ಮೆರವಣಿಗೆಯನ್ನು ಏರ್ಪಡಿಸಿದವರಲ್ಲಿ ಇರಲಿಲ್ಲ. ಮೆರವಣಿಗೆಯು ಮುಳ್ಳು ತಂತಿ ತಡೆಯ ವರೆಗೆ ಬಂದು ಅಲ್ಲಿ ನಿಂತಿದ್ದಾಗ ಪೋಲೀಸ್ ಸುಪರಿಂಟೆಂಡೆಂಟರವರೇ ಲಾಲಾ ಲಜಪತರಾಯ್ ಮುಂತಾದ ಮುಖಂಡರಿಗೆ ಪೋಲೀಸ್ ದೊಣ್ಣೆಗಳಿಂದ ಹೊಡೆದರು. ಕೆಲವರಿಗೆ ರಕ್ತಸ್ರಾವವಾಯಿತು ಇನ್ನು ಕೆಲವರಿಗೆ ಜಖಂ ಆಯಿತು. ಮೆರವಣಿಗೆಯವರು ಆಯುಧಗಳಿಲ್ಲದವರಾಗಿದ್ದು ಸಂಪೂರ್ಣ ಅಹಿಂಸಾಪರರಾಗಿದ್ದರೂ ನಿಷ್ಕಾರಣವಾಗಿ ಪೋಲೀಸಿನವರು ಮುಖಂಡರಿಗೆ ಹೊಡೆದು ಸರಕಾರದ ದಬ್ಬಾಳಿಕೆ ತತ್ವವನ್ನು ಕಾರ್ಯರೂಪದಿಂದ ತೋರಿಸಿದರು. ಹೀಗೆ ಹೊಡೆಯಲು ಮೆರವಣಿಗೆ ಕಡೆಯಿಂದ ಯಾರೋ ಒಂದು ಕಲ್ಲು ಎಸೆದರೆಂದೂ ಅಂಥಾ ಕಲ್ಲು ಒಬ್ಬ ಪೋಲೀಸ್ ಆಫೀಸರಿಗೆ ತಗಲಿತೆಂದೂ ಸರಕಾರದ ಪರವಾಗಿ ಯಾರೋ ಹೇಳಿದರು. ಲಜಪತರಾಯರಂಥ ಧರ್ಮಶೀಲರು ಈ ಹೇಳಿಕೆಯು ಪೂರ್ತಿ ಸುಳ್ಳೆಂದೂ ಮೆರವಣಿಗೆಯವರು ಪೋಲೀಸ್ ಜುಲುಮಿಗೆ ಏನೇನೂ ಕಾರಣ ಕೊಡಲಿಲ್ಲವೆಂತಲೂ ಹೇಳಿದ್ದಾರೆ. ಸರಕಾರದ ಕಡೆಯಿಂದ ಹೆಚ್ಚಿನ ರುಜುವಾತೇನೂ ಈ ವರೆಗೆ ಪ್ರಕಟವಾಗಿರುವದಿಲ್ಲ.

ಸೈಮನ್ ಕಮಿಶನಿಗೆ ಹಿಂದುಸ್ಥಾನದ ಎಲ್ಲಾ ಕಡೆಗಳಲ್ಲೂ ಸಂಪೂರ್ಣ ಸ್ವಾಗತ ಸಿಕ್ಕುತ್ತದೆಯೆಂತ ಕಮಿಶನಿನ ಮುಖಂಡರಾದ ಸೈಮನರು ಆಗಿಂದಾಗ್ಯೆ ಪ್ರಕಟಿಸಿಕೊಳ್ಳುತ್ತಾರೆ. ಈ ಹೇಳಿಕೆಗಳು ಎಷ್ಟರ ಮಟ್ಟಿಗೆ ಟೊಳ್ಳೆಂಬದನ್ನು ಪಂಜಾಬ್ ಸರಕಾರವು ಪ್ರಕಟಿಸಿತು. ಸೈಮನ್ ಕಮಿಶನಿಗೆ ಜನಸಮೂಹವು ಸ್ವಾಗತವನ್ನೀಯಲು ಬರುವದರ ಬದಲು "ಸೈಮನರೇ ವಾಪಸು ಹೋಗಿ" ಎಂಬ ಕೂಗೇ ಪಂಜಾಬಿನ ಜನರ ಗಾನವಾಗಿದೆಯೆಂತ ಪಂಡಿತ ಮದನ ಮೋಹನ ಮಾಳವೀಯರು ಹೇಳಿದ್ದಾರೆ. ಪೂನಾದಲ್ಲು ಜನರು ಗುಂಪು ಗುಂಪಾಗಿ ಇದೇ ರೀತಿಯಲ್ಲಿ ತಮ್ಮ ಮನೋಭಾವವನ್ನು ಸೂಚಿಸಿದರು. ಸರಕಾರವು ಸೈಮನ್ ಸಪ್ತಕರನ್ನು ಜಯಘೋಷದೊಡನೆ ಎದುರುಗೊಳ್ಳುವ ಬದಲು ಮುಳ್ಳು ತಂತಿಯಿಂದ ಸಂರಕ್ಷಿಸಿ ಕರಕೊಂಡು ಬರಬೇಕಾಗಿದೆ. ಇನ್ನಾದರೂ ಈ ಕಮಿಶನು ಹಿಂದುಸ್ಥಾನದವರಿಗೆ ಬೇಕಾಗಿಲ್ಲವೆಂತ ಕಮಿಶನಿಗೂ ಸರಕಾರಕ್ಕೂ ಗೊತ್ತಾಗದಿದ್ದರೆ ಆಶ್ಚರ್ಯವೇ ಸರಿ.

ಹಿಂದೂಸ್ಥಾನದ ಮುಖಂಡರಿಗೆ ಸೈಮನಿನ ಸ್ವಾಗತದಲ್ಲಿ ಈ ರೀತಿ ಲಟ್ಟಿ ಪ್ರಹಾರಗಳನ್ನು ಕೊಟ್ಟದ್ದಕ್ಕೆ ಹಿಂದೀಯರು ತಮ್ಮ ಆತ್ಮಗೌರವವನ್ನು ನೆನೆಸಿಕೊಂಡು ಸ್ವರಾಜ್ಯ ಸ್ಥಾಪನೆಗೆ ಮುಖಂಡರು ತೋರಿಸಿಕೊಡುವ ರೀತಿಯಲ್ಲಿ ಹೋರಾಡಲೇ ಬೇಕು. ಸ್ವತಂತ್ರ ದೇಶವಾಗಿದ್ದರೆ ಲಾಲಾ ಲಜಪತರಾಯರಂಥ ದೇಶಭಕ್ತ ಮುಖಂಡರಿಗೆ ದೇಶದ ಅತ್ಯುನ್ನತ ಪದವಿಯು ಸಿಕ್ಕುತ್ತಿತ್ತು. ಇಂಥವರಿಗೆ ಪರಾಧೀನದಲ್ಲಿರುವ ಈ ದೇಶದಲ್ಲಿ ಸರಕಾರದ ನೌಕರರಿಂದ ಹೀನ ತಪ್ಪು ಮಾಡಿದ ತುಚ್ಛ ಮನುಷ್ಯರಿಗೆ ಸಿಕ್ಕುವ ತಿರಸ್ಕಾರ. ಇಂಥಾ ಹೀನ ಸ್ಥಿತಿಯನ್ನು ಹಿಂದೂಸ್ಥಾನದವರು ಎಷ್ಟರವರೆಗೆ ಸಹಿಸಲು ಸಾಧ್ಯ. ಇಂಥಾ ಮುಖಂಡರಿಗಾದ ತಿರಸ್ಕಾರ ಬೇರೆ ಅಲ್ಲ. ನಮ್ಮ ಜನ್ಮಪ್ರಸಿದ್ಧ ಹಿರಿತನಕ್ಕೆ ಆಗುವ ತಿರಸ್ಕಾರ ಬೇರೆ ಅಲ್ಲ. ಹಿಂದೂಸ್ಥಾನಕ್ಕೆ ಸ್ವನಿರ್ಣಯದ ಹಕ್ಕಿದ್ದರೆ ಅಂಥ ನಿರ್ಣಯವನ್ನು ಮಾಡಲು ಅನರ್ಹರಾದವರಿಗೆ ಹಿಂದೂಸ್ಥಾನವನ್ನು ಗುಲಾಮಗಿರಿಯಲ್ಲೇ ಇನ್ನೂ ಕೆಲವು ಕಾಲ ಇಡಲು ಬಂದಿರುವ ಸೈಮನ್ ಕಮಿಶನಿನ ಹೆಸರಿನಲ್ಲಿ ಸರಕಾರಿ ಅಧಿಕಾರಿಗಳಿಂದ ಪ್ರಹಾರ!

ಸರಕಾರಿ ವರ್ತನೆಯಿಂದ ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವತಂತ್ರ ಬೇಕೆನ್ನುವವರ ಕೂಟವು ಹೆಚ್ಚಾಗುತ್ತಲಿದೆ. ಮೊನ್ನೆ ಡೆಲ್ಲಿಯಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಕಮಿಟಿಯಲ್ಲಿ ಹಿಂದೂಸ್ಥಾನವು ಬ್ರಿಟಿಷ್ ಸಾಮ್ರಾಜ್ಯದಿಂದ ಬಿಡುಗಡೆ ಹೊಂದಿ ವಿನಹ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವಿಲ್ಲ; ಹಿಂದೂಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವೇ ಕಾಂಗ್ರೆಸ್ಸಿನ ಧ್ಯೇಯವೆಂಬ ಠರಾವು ಪುನಃ ಮಂಜೂರಾಯಿತು. ನೆಹರು ಕಮಿಟಿಯವರಿಗೆ ಹಿಂದೂಸ್ಥಾನದಲ್ಲಿ ಎಲ್ಲ ಕಡೆಯಿಂದಲೂ ಒಪ್ಪಿಗೆ ದೊರೆತನಂತರ ಪುನಃ ಸಂಪೂರ್ಣ ಸ್ವಾತಂತ್ರ್ಯದ ಪಂಗಡಕ್ಕೆ ಹೆಚ್ಚಿಗೆ ಬಲಬರುವಂತೆ ಸರಕಾರದವರ ಲಾಹೋರಿನ ವರ್ತನೆಯಿಂದ ಆಗಿದೆ. ಆದರೂ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯಲು ನೆಹರು ವರದಿಯು ಸಹಾಯಕರವಾಗದೆಯೆಂಬ ಠರಾವು ಸಹ ಮಂಜೂರಾಗಿದೆ. ಸರಕಾರದ ಬಾಳಿಕೆಯು ಹೆಚ್ಚುತ್ತಿದ್ದರೂ ತತ್ಕಾಲ ಉಪನಿವೇಶನಗಳ ಸ್ವಾತಂತ್ರ್ಯಕ್ಕೆ ಹೋರಾಡುವದು ಯುಕ್ತವಾಗಿದೆ. ಉಪನಿವೇಶಗಳ ಸ್ವಾತಂತ್ರ್ಯವಾದರೂ ಹಿಂದೂಸ್ಥಾನಕ್ಕೆ ಸಿಕ್ಕಲೇ ಬೇಕೆಂಬದಕ್ಕೆ ಹಿಂದೂಸ್ಥಾನದ ಎಲ್ಲಾ ಪಕ್ಷದವರ ಒಪ್ಪಿಗೆ ಸಿಕ್ಕಿರುವದರಿಂದ ಈ ಒಗ್ಗಟ್ಟಿನ ತೀರ್ಮಾನವನ್ನು ತಿರಸ್ಕರಿಸಬಾರದು.

ಸಂಪೂರ್ಣ ಸ್ವಾತಂತ್ರ್ಯವೇ ಆಗಲೀ ಉಪನಿವೇಶಗಳ ಸ್ವಾತಂತ್ರ್ಯವೇ ಆಗಲೀ ಸಿಕ್ಕಬೇಕಾದರೆ ಸಮುದಾಯದ ಜನರು ಎಚ್ಚತ್ತು ತಮ್ಮ ಕರ್ತವ್ಯವನ್ನು ಮಾಡಲೇಬೇಕು. ಮುಂದಾಳುಗಳು ಎಷ್ಟೇ ಠರಾವುಗಳನ್ನು ಮಂಜೂರು ಮಾಡಿಕೊಂಡರೂ, ಎಷ್ಟು ಉಪನ್ಯಾಸ ಕೊಟ್ಟರೂ ಬ್ರಿಟಿಷ್ ಜನರು ಹಿಂದುಸ್ಥಾನವನ್ನು ತಮ್ಮ ಅಧೀನದಿಂದ ಬಿಟ್ಟುಕೊಡುವದಿಲ್ಲ. ಹಿಂದುಸ್ಥಾನವಿಲ್ಲದೆ ಬ್ರಿಟನ್ನಿಗೆ ಮಹತ್ವವೇನೂ ಉಳಿಯುವದಿಲ್ಲ. ಆದ್ದರಿಂದ ಅಂಥಾ ಜನರಿಂದ ಸ್ವಾತಂತ್ರ್ಯವನ್ನು ಪಡೆಯುವದು ಸುಲಭಸಾಧ್ಯವಲ್ಲ. ಜನಸಮುದಾಯಕ್ಕೆ ಈಗಿನ ಸ್ಥಿತಿಯು ಅಸಹ್ಯವಾಗಿ ತಮ್ಮ ದೇಶದೊಳಗಾದರೂ ತಾವು ಸ್ವಾತಂತ್ರ್ಯರಾಗದೆ ಬಿಡೆವು ಎಂಬ ದೃಢ ಕಲ್ಪವು ನೆಲೆಯೂರಬೇಕು. ಈ ತೀರ್ಮಾನವೊಂದಾದರೆ ಸಾಧಿಸುವ ರೀತಿಯನ್ನು ಸುಲಭದಲ್ಲೇ ನಿರ್ಣಯಿಸಿಕೊಳ್ಳಬಹುದು.

ಲಾಲಾ ಲಜಪತರಾಯರೇ ಮುಂತಾದವರಿಗೆ ದೇಶದ ಅನೇಕ ಕಡೆಗಳಿಂದ ಧನ್ಯವಾದಗಳು ಬಂದವು. ನಿರಪರಾಧಿಗಳ ಮೇಲೆ ಅಳರಸರ ತಾಬೆದಾರರು ಕೈ ಮಾಡಿದರೂ ಶಾಂತಾ ಭಂಗಕ್ಕೆ ಎಡೆಕೊಡದೆ ಇದ್ದದ್ದಕ್ಕೆ ಮಾತ್ರವಲ್ಲ; ತನ್ನ ಎದೆಯ ಮೇಲೆ ನೋವನ್ನುಂಟುಮಾಡಿದ ಹೊಡೆತವನ್ನು ತಿಂದರೂ ದೇಶದ ಜನರಿಗೆ ತಮ್ಮ ಅಧೀನ ಸ್ಥಿತಿಯನ್ನು ತಿಳಿಸಿಕೊಡಲು ಅವಕಾಶದೊರಕಿಸಿದ್ದಕ್ಕಾಗಿ ಧನ್ಯವಾದಗಳು. ಒಬ್ಬ ವ್ಯಕ್ತಿಯು ಸಮೀಪ ಬಂಧುವಿನ ಮೇಲೆ ಇನ್ನೊಬ್ಬನು ಕೈ ಮಾಡಿದರೆ ಅದರ ಮುಯ್ಯಿ ತೀರಿಸುವ ಸಂಕಲ್ಪ ಮಾಡುವದು ಮನುಷ್ಯ ಸ್ವಭಾವವಾಗಿದೆ. ಭಾರತ ಮಾತೆಯು ಸುಪುತ್ರರನೇಕರಿಗೆ ನಿಷ್ಕಾರಣವಾಗಿ ಹೊಡೆದು ನೋವನ್ನುಂಟುಮಾಡಲು ಎಡೆಕೊಡುವ ಈ ಸರಕಾರ ಪದ್ಧತಿಯನ್ನು ಮಾರ್ಪಡಿಸಿಕೊಂಡು ಪ್ರಜಾಸತ್ತಾತ್ಮಕ ಅಂದರೆ ಪಂಚಾಯತಿ ಸರಕಾರವನ್ನು ಸ್ಥಾಪಿಸಲು ಜನಸಮುದಾಯದವರು ಸಂಕಲ್ಪ ಮಾಡುವಂತೆ ಮಾಡಿದ ಲಜಪತರಾಯ್ ಮುಂತಾದ ಮುಖಂಡರಿಗೆ ಧನ್ಯವಾದಗಳು.

## ಕೊಡಗು ಶಾಸನ ಮಂಡಲಿ.

ಚೀಫ್ ಕಮಿಶನರ ಅಧ್ಯಕ್ಷತೆಯಲ್ಲಿ ತಾರೀಕು 8-11-28 ರಲ್ಲಿ 11 ಘಂಟೆಗೆ ಶಾಸನ ಮಂಡಲಿಯ ಅಧಿವೇಶನವು ಪ್ರಾರಂಭವಾಯಿತು. ಎಲ್ಲಾ ಸಭಿಕರೂ ಹಾಜರಿದ್ದರು. ಪ್ರೇಕ್ಷಕರೂ ಅನೇಕರಿದ್ದರು.

ಸವಾಲು ಜವಾಬುಗಳಾದ ನಂತರ ತಾ. 21—10—27ರ ಶಾಸನ ಮಂಡಲಿಯ ಅಧಿವೇಶನದಲ್ಲಿ ಮಂಜೂರಾದ ಮೂರು ತೀರ್ಮಾನಗಳ ಮೇಲೆ ಚೀಫ್ ಕಮಿಶನರ ತೀರ್ಮಾನವನ್ನು ಸಭೆಗೆ ತಿಳಿಸಿದರು. (1) ವೀರರಾಜಪೇಟೆ ಹೈಸ್ಕೂಲಿನಲ್ಲಿ ಮ್ಯಾಟ್ರಿಕ್ಯುಲೇಶನ್ ಭಾಗವನ್ನು ಕಲಿಸುವ ಏರ್ಪಾಡು ಮಾಡಲು 1928—29ರಲ್ಲಿ ಹಣವಿಲ್ಲವೆಂತ ಫೈನಾನ್ಸ್ ಕಮಿಟಿಯವರು ತೀರ್ಮಾನಿಸಿದರು (2) ವೀರರಾಜಪೇಟೆಯಲ್ಲಿ ಸಬ್ ಮ್ಯಾಜಿಸ್ಟ್ರೇಟರನ್ನು ನೇಮಿಸಲು 1928—29ರಲ್ಲಿ ಹಣವಿಲ್ಲವೆಂತ ಫೈನಾನ್ಸ್ ಕಮಿಟಿಯವರು ತೀರ್ಮಾನಿಸಿದರು. (3) ವೀರರಾಜಪೇಟೆ ಮುನ್ಸಿಫ್ ಕೋರ್ಟಿಗೆ ಲಾ ರಿಪೋರ್ಟುಗಳನ್ನು ತರಿಸಿಕೊಳ್ಳಲು ಮುನಸೀಫರಿಗೆ ಆರ್ಡರ್ ಕೊಡಲಾಗಿದೆ.

ಅನಂತರ ಠರಾವುಗಳ ಮೇಲೆ ಚರ್ಚೆ ಪ್ರಾರಂಭವಾಯಿತು.

ಸಿವಿಲ್ ಕೋರ್ಟುಗಳ ಡಿಕ್ರಿ ಸಾಲಕ್ಕಾಗಿ ಕೃಷಿಕನ ಕೃಷಿ ಉತ್ಪತ್ತಿಯನ್ನು ಜಪ್ತಿಮಾಡಿಸುವಾಗ್ಯೆ ಸಾಲಗಾರನ ಮತ್ತು ಆತನ ಕುಟುಂಬದ ಜೀವನಕ್ಕೆ ಬೇಕಾದಷ್ಟು ಧಾನ್ಯ ಬಿಡಬೇಕೆಂಬ ರೂಲ್ ಮಾಡಬೇಕು.

ಮೆ. ಸಿ. ಯಸ್. ಉತ್ತಯ್ಯನವರು ಈ ಠರಾವನ್ನು ಸೂಚಿಸುವಾಗ ಹೇಳಿದ್ದೇನೆಂದರೆ—ಸಾಹುಕಾರರ ಬಲೆಯಲ್ಲಿ ಬಿದ್ದವರು ಬಡವರಾಗಿದ್ದಾರೆ. ಪೂರ್ತಿ ಕೃಷಿ ಉತ್ಪತ್ತಿಯನ್ನು ಜಪ್ತಿಮಾಡಿದರೆ ಸಾಲಗಾರನಿಗೂ ಅವನ ಕುಟುಂಬಕ್ಕೂ ಏನೂ ಉಳಿಯುವದಿಲ್ಲ. ಜೀವನಕ್ಕೆ ಇಲ್ಲದಿದ್ದರೆ ಮೋಸದ ದಾರಿ ಹುಡುಕುತ್ತಾರೆ. ಇದರಿಂದ ಕಷ್ಟ ನಷ್ಟವಿದೆ. ಈ ರೂಲ್ ಮಾಡಿದರೆ ಕೃಷಿಕರಿಗೆ ಸಾಲವೇ ದೊರಕದು ಎಂಬ ವಾದವಿದೆ. ಕಡ ಹುಟ್ಟಿ ಬಡವ ಕೆಟ್ಟ ಎಂಬ ಗಾದೆಯಿದೆ. ಆದ್ದರಿಂದ ಸಾಲಕೊಡದಿರುವದು ಅವಶ್ಯವೋ ಎಂಬದು ಸಹ ಸಂಶಯವಿದೆ. ಸರಕಾರದ ಸಹಾಯದಾತರುವ ಕೃಷಿಕರಿಗೆ ಸರಕಾರವು ಸಹಾಯ ಕೊಡಬೇಕು. ಈಗಲೂ ಜಪ್ತಿಯಲ್ಲಿ ಆಮೀನರು ಜೀವನಕ್ಕೆ ಬಿಡುತ್ತಿದ್ದಾರೆ. ಬಿಡುವದೂ ಬಿಡದಿರುವದೂ ಅಮೀನರ ಚಿತ್ತಕ್ಕೆ ಬಿಡದೆ ರೂಲೇ ಮಾಡಬೇಕು.

ಮೆ. ಎ. ಬಿ. ಚಂಗಪ್ಪನವರು ಅನುಮೋದಿಸಿದರು.

ಫೈನಾನ್ಸ್ ಮೆಂಬರಾದ ಕಮಿಶನರು ಠರಾವಿಗೆ ವಿರೋಧಿಸಿದರು. ಬೇರೆ ಪ್ರಾಂತಗಳಲ್ಲಿ ಇಂಥಾ ರೂಲನ್ನು ಜಾರಿಗೆ ತಂದಿರುವಂತೆ ಕಾಣುವದಿಲ್ಲ. ನಿಬಂಧನೆ ಮಾಡಿದರೆ ಸಾಲ ಕೊಡುವವರು ಬಡ್ಡಿ ಹೆಚ್ಚಿಸುವ ಸಂಭವವಿದೆ. ಈಗಾಗಲೇ ಸಾಲಕೊಟ್ಟವರಿಗೆ ಅನ್ಯಾಯವಾಗುತ್ತದೆ.

ಮೆ. ಪಿ. ಬಿ. ಮೇದಪ್ಪನವರು—ಬೇರೆ ಕಡೆಗಳಲ್ಲಿ ಇಲ್ಲದಿದ್ದರೂ ಈ ದೇಶದಲ್ಲಿ ಮಾಡಬಾರದೆಂತ ಹೇಳುವದು ಸರಿಯಲ್ಲ. ಇಲ್ಲಿ ಬಡತನ ಹೆಚ್ಚು—ಕಷ್ಟ ಹೆಚ್ಚು— ಆವಿನರ ಸಹಾಯ ಒದ್ದಿದಂತ ಸಾಲಗಾರರಿಗೆ ದೊರಕುತ್ತದೆ. ಜಿದ್ದರು ಹಾಳಾಗುತ್ತಾರೆ. ಕಠಿಣ ಹೃದಯದ ಸಾಹುಕಾರರುಗಳು ಸಾಲಗಾರರಿಗೆ ಏನೂ ಬಿಡುವದಿಲ್ಲ. ಅಂಥವರ ಬಲೆಯಿಂದ ತಪ್ಪಿಸಲೇ ಈ ರೂಲ್ ಬೇಕಾಗಿರುವದು. ಸಹಕಾರಿ ಸಂಘಗಳಿಗೆ ಈ ರೂಲಿನಿಂದ ಸಹಾಯವಾಗುತ್ತದೆ. ಸಂಘಗಳಿಗೆ ಏನೂ ದೊರಕದಂತೆ ಬಾಚಿಕೊಡುವದು ಹೋಗದೆ ನಿಲ್ಲುತ್ತೆ. ಆದ್ದರಿಂದ ಠರಾವಿಗೆ ಒತ್ತಾಸೆ ಕೊಡುತ್ತೇನೆ.

ಮೆ. ಸಿ. ಯನ್. ವೆಂಕಪ್ಪಯ್ಯನವರು ಠರಾವಿಗೆ ವಿರೋಧಿಸಿ ಈ ದೇಶದಲ್ಲಿ ಸ್ಥಿರಸೊತ್ತು ಹಣದ ಡಿಕ್ರಿಗೆ ಒದಗುವದಿಲ್ಲ. ಸಾಲಕೊಟ್ಟವರಿಗೆ ವಸೂಲಿನ ದಾರಿ ಇದ್ದದೇ ಕೃಷಿ ಉತ್ಪತ್ತಿಯ ಮೂಲಕ ಕೃಷಿ ಉತ್ಪತ್ತಿಯಲ್ಲಿ ಸಾಲಗಾರನ ಕುಟುಂಬಕ್ಕೆಲ್ಲಾ ಜೀವನಕ್ಕೆ ಬಿಟ್ಟರೆ ಸಾಲಕೊಟ್ಟವನಿಗೆ ಏನೂ ಸಿಕ್ಕದಿರುವ ಸಂಭವವೇ ಹೆಚ್ಚು. ಕೃಷಿಕನಿಗೆ ಸಾಲ ಹುಟ್ಟದೆ ಹೋದರೆ ಕಷ್ಟವಾಗುತ್ತದೆ. ಸಹಕಾರಿ ಸಂಘಗಳಿಗೆ ಭೂಮಿ ಗಿರವಿ ಇದ್ದರೂ ಪಸಲು ಜಪ್ತಿಯಿಂದಲೇ ಸಾಲ ವಸೂಲ್ ಮಾಡುವ ಪದ್ಧತಿ ಇದೆ. ಪಸಲು ಜಪ್ತಿಯಾಗಬಾರದೆಂತಾದರೆ ಭೂಮಿಯೇ ಹರಾಜಾಗಬೇಕಾದೀತು. ಆದ್ದರಿಂದ ಕೃಷಿಕನ ಕ್ಷೇಮಕ್ಕಾಗಿಯೇ ಈ ಠರಾವು ಮಂಜೂರಾಗಬಾರದು ಎಂತ ಹೇಳಿದರು. ಮೆ. ಸಿ. ಯಸ್. ಉತ್ತಯ್ಯನವರು ಉತ್ತರಕೊಟ್ಟ ನಂತರ ಓಟಿಗೆ ಹಾಕಲಾಯಿತು. ಪರವಾಗಿ—ಮೆ. ಗಳಾದ ಸಿ. ಯಸ್. ಉತ್ತಯ್ಯನವರು, ಮೇದಪ್ಪನವರು, ಮಂದಣ್ಣನವರು—ವಿರೋಧವಾಗಿ—ಮೆ. ಗಳಾದ ಚಾ. ಕಾ. ನಪ್ಪನವರು, ಯನ್. ಮುದ್ದಪ್ಪನವರು, ಕಾಳಪ್ಪನವರು, ಯಮ್. ಬಿಣಪ್ಪನವರು, ಸೋಣಪ್ಪನವರು, ವೆಂಕಪ್ಪಯ್ಯನವರು, ತಿಮ್ಮಯ್ಯಪ್ಪಾಜರು, ಮಿಕ್ಕವರು ಯಾವ ಕಡೆಗೂ ಓಟ್ ಮಾಡಲಿಲ್ಲ.

ಠರಾವು ಮಂಜೂರಾಗಲಿಲ್ಲ.

2 ನೇ ಠರಾವು—ಅಳತೆ ತೂಕವನ್ನು ನಿರ್ಬಂಧಗೊಳಿಸುವ ಶಾಸನವನ್ನು ಮಾಡಬೇಕು.

ಮೆ. ಸಿ. ಯಸ್. ಉತ್ತಯ್ಯನವರು ಈ ಠರಾವಿನ ಪರವಾಗಿ ಹೇಳಿದ್ದೇನೆಂದರೆ—ಒಂದೊಂದು ಕಡೆ ಒಂದೊಂದು ಅಳತೆ ಇರುವದರಿಂದ ತುಂಬಾ ನಷ್ಟವಿದೆ. ಎಲ್ಲವನ್ನು ಒಂದೇ ಮಾಡಿದರೆ ಉತ್ತಮ. ಇದಕ್ಕೆ ಹೆಚ್ಚು ಕಷ್ಟವಿಲ್ಲ.

ಮೆ. ಕೆ. ಜಿ. ಕರುಂಬಯ್ಯನವರು ಅನುಮೋದಿಸಿದರು.

ಕಮಿಶನರು—ಈ ವಿಷಯ ಮೊದಲೇ ತೀರ್ಮಾನವಾಗಿ ಕೆಲವು ಕೆಲಸ ನಡೆದಿದೆ ಇದಕ್ಕೆ ಗಮನಕೊಡಲು ಸಮಯ ದೊರಕಲಿಲ್ಲ. ಮೂರು ತಿಂಗಳ ಒಳಗೆ ಯೋಚನೆಗೆ ತೆಗೆದುಕೊಳ್ಳುತ್ತೇವೆ. ಇನ್ನೂ ಹೆಚ್ಚಿನ ತನಿಖೆಯಾಗಬೇಕಾಗಿ ಕಂಟ್ರಾಕ್ಟ್ ಸೇರು ಇಟ್ಟರೆ ಹೆಚ್ಚು ಹಿಡಿಯುತ್ತದೆ. ಆದ್ದರಿಂದ ಒಂದು ಸೇರು ಅಳತೆ ಮಾಡಿದರೂ ಕಷ್ಟವಿದೆ. ಸರಕಾರದ ಸಹಾನುಭೂತಿ ಇದೆ. ಆದರೆ ಶಾಸನ ಮಾಡಲು ಸಾಧ್ಯವಿಲ್ಲವೆಂತ ಹೇಳಿದರು.

ಮೆ. ಪಿ. ಬಿ. ಮೇದಪ್ಪನವರು ಠರಾವಿಗೆ ವಿರೋಧಿಸಿ ಕೊಡಗಿನಲ್ಲಿ ಮಾತ್ರ ನಿರ್ಬಂಧ ಮಾಡಿದರೆ ಪ್ರಯೋಜನವಿಲ್ಲ. ಮೈಸೂರಿನಲ್ಲಿ ಇರುವ ಎಷ್ಟೋ ಅಳತೆಗಳ ಜೊತೆಗೆ ಕೊಡಗಿನ ಅಳತೆಯೊಂದು ಹೆಚ್ಚು ಸೇರಿಸಿದಂತೆ ಆಗುತ್ತದಷ್ಟೆ. ನೆರೆದೇಶಗಳ ಅಳತೆಯನ್ನು ಶಾಸನದಿಂದ ನಿರೋಧವೆಂತ ಮಾಡಲು ಸಾಧ್ಯವಿಲ್ಲವೆಂತ ಹೇಳಿದರು.

ಮೆ. ಎ. ಬಿ. ಚಂಗಪ್ಪನವರು ಠರಾವಿಗೆ ಒತ್ತಾಸೆ ಮಾತಾಡಿದರು.

ಮೆ. ಯನ್. ಮುದ್ದಪ್ಪನವರು ಸರಿ ಮಾತ್ರವಲ್ಲ ಅಳತೆಗಳನ್ನು ನಿರ್ಬಂಧ ಮಾಡಬೇಕು. ಇಲ್ಲವಾದರೆ ಮೋಸದ ತೂಕ ಅಳತೆ ಇಡುವವರಿಗೆ ಶಿಕ್ಷೆ ಮಾಡಲು ಸಾಧ್ಯವಾಗಲಿಲ್ಲ ಎಂತ ಮುಂತಾಗಿ ಹೇಳಿ ಠರಾವನ್ನು ಸ್ವೀಕರಿಸಿದರು.

ಮೆ. ಕುಶಾಲಪ್ಪನವರು ಕೊಡಗಿನ ಕೃಷಿಕರು ಕೃಷಿ ಉತ್ಪತ್ತಿಯನ್ನು ಮಾರಿಯೇ ಜೀವನ ನಡಿಸಬೇಕು. ಮೋಸದ ಉದ್ದೇಶವಿರುವ ವ್ಯಾಪಾರಿಗಳ ಬಲೆಯಿಂದ ಅವರನ್ನು ತಪ್ಪಿಸಿ ಸಹಾಯಕೊಡಬೇಕು. ಕೃಷಿಕರು ಚಾಲಾಕು ಇರುವವರಲ್ಲ. ಮೋಸದ ಅಳತೆಯಿಂದ ಲೂಟಿಯಾಗುತ್ತಲಿದೆ. ಆದ್ದರಿಂದ ಅಳತೆಯು ನಿಬಂಧನೆಗೆ ಒಳಗಾಗಲೇ ಬೇಕು ಎಂತ ಹೇಳಿದರು.

ಮೆ. ವೆಂಕಪ್ಪಯ್ಯನವರು ಪರವಿಷಯದಲ್ಲಿ ಕೃಷಿಕರಿಗೆ ಗು ಬಹುಕಾಲದಿಂದಲೇ ಇದೆ. ಏನಾದರೂ ಮಾಡುತ್ತೇನೆ!

(7ನೇ ಪುಟದಲ್ಲಿ ಮುಂದುವರಿದಿದೆ.)

## ಮಹಾತ್ಮಗಾಂಧಿಯವರ ಸ್ವಚರಿತ್ರೆ.

### ಸತ್ಯಶೋಧನೆ

೫ನೇ ಭಾಗದಲ್ಲಿ ೧೪ನೇ ಪ್ರಕರಣ.

ಚಂಪಾರಣ್ಯದ ರೈತರ ಸಂಸ್ಥಿತಿಯನ್ನು ವಿಮರ್ಶಿಸಿ ಅವರು ನೀಲಿಯ ಒಮಿಾನ್ದಾರರ ವಿಷಯವಾಗಿ ಹೇಳುತ್ತಿದ್ದ ಅಂಶೋಷಣೆಗಳನ್ನರಿಯುವುದು ನನ್ನ ಉದ್ದೇಶವಾಗಿದ್ದಿತು ಇದಕ್ಕಾಗಿ ನಾನು ಸಾವಿರಾರು ರೈತರನ್ನು ಕಾಣಬೇಕಾದುದು ಅವಶ್ಯಕವಾಗಿದ್ದಿತು. ವಿಮರ್ಶೆಯನ್ನು ಆರಂಭಿಸುವುದಕ್ಕೆ ಮುಂಚೆ ಈ ವ್ಯಾಜ್ಯದಲ್ಲಿ ಒಮಿಾನ್ದಾರರ ಪಕ್ಷವನ್ನು ತಿಳಿದುಕೊಳ್ಳುವುದೂ ಆ ಪ್ರಾಂತ್ಯ ವಿಭಾಗದ ಅಧಿಕಾರಿಗಳನ್ನು ಭೇಟಿ ಮಾಡುವುದೂ ಅತಿಮುಖ್ಯವೆಂದು ನಾನು ಯೋಚಿಸಿದೆನು ಇವರಿಗೆ ನನ್ನ ಆಶಯವನ್ನು ತಿಳಿಸಿ ಪತ್ರಬರೆದೆನು ಇವರೂ ನನ್ನನ್ನು ನೋಡಲು ಕಾಲವನ್ನು ನಿರ್ಣಯಿಸಿ ತಿಳಿಸಿದರು

ಒಮಿಾನ್ದಾರ ಸಂಘದ ಕಾರ್ಯದರ್ಶಿಗಳು ಮುಚ್ಚುಮರೆಯಿಲ್ಲದೆ ನಾನು ಹೊರಗಿನವನಾದೂ ಜಮಿಾನ್ದಾರರಿಗೂ ಅವರ ರೈತರಿಗೂ ಮಧ್ಯೆ ಬರುವುದಕ್ಕೆ ಯಾವ ಅಧಿಕಾರವೂ ಇಲ್ಲವೆಂದೂ, ಆದರೂ ನಾನೇನಾದರೂ ತಿಳಿಸಬೇಕಾಗಿದ್ದರೆ ಅದನ್ನು ಬರಹದ ಮೂಲಕ ಕಳುಹಬೇಕೆಂದೂ ನನಗೆ ಹೇಳಿದರು ಇದಕ್ಕೆ ನಾನು ಹೊರಗಿನವನೆಂದು ನನ್ನ ಎಣಿಕೆಯಲ್ಲವೆಂದೂ ರೈತರು ಹಾಗೆ ಇಷ್ಟಪಟ್ಟರೆ ನಾನು ಅವರ ಸ್ಥಿತಿಗತಿಗಳನ್ನು ವಿಚಾರಿಸಲು ನನಗೆ ಸಂಪೂರ್ಣ ಅಧಿಕಾರ ಉಂಟೆಂದೂ ಕಾರ್ಯದರ್ಶಿಗಳಿಗೆ ವಿನಯ ಪೂರ್ವಕವಾಗಿ ಹೇಳಿದೆನು.

ಪ್ರಾಂತ್ಯ ವಿಭಾಗದ ಅಧಿಕಾರಿಗಳನ್ನು ಬೆಟ್ಟಿಮಾಡಲು ಅವರು ನನ್ನನ್ನು ಬೆದರಿಸಹೊರಟರು ನಾನು ತಿರಹುತ್ ಪ್ರಾಂತ್ಯವನ್ನು ಬಿಟ್ಟು ಹೋಗಬೇಕೆಂದು ಸೂಚಿಸಿದರು

ನಾನು ಇದನ್ನೆಲ್ಲಾ ನನ್ನ ಜೊತೆಯವರಿಗೆ ತಿಳಿಸಿ 'ನಾನು ಮುಂದೆ ಹೋಗದಂತೆ ನನ್ನನ್ನು ಸರಕಾರದವರು ತಡೆಯುವ ಸಂಭವವುಂಟು ನಾನು ಎಣಿಸಿದುದಕ್ಕಿಂತ ಮುಂಚೆಯೇ ನಾನು ಸೆರೆಮನೆಗೆ ಹೋಗಬೇಕಾಗಬಹುದು ನನ್ನನ್ನು ಬಂಧಿಸ ಬೇಕೆಂದರೆ ನನ್ನ ಬಂಧನವು ಮೋತೀಹಾರಿಯಲ್ಲಿ, ಸಾಧ್ಯವಿದ್ದರೆ ಬೇತಿಯಾದಲ್ಲಿ, ಆಗುವುದು ಅತ್ಯುತ್ತಮ ಆದುದರಿಂದ ಆ ಸ್ಥಳಗಳಿಗೆ ನಾನು ಆದಷ್ಟು ಶೀಘ್ರದಿಂದ ಹೋಗುವುದು ಒಳ್ಳೆಯದು ' ಎಂದು ಹೇಳಿದೆ.

ಚಂಪಾರಣ್ಯವು ತಿರಹುತ್ ಪ್ರಾಂತ್ಯದ [illegible] ಜಿಲ್ಲೆ. ಮೋತೀಹಾರಿಯು ಅದರ ಮುಖ್ಯಪಟ್ಟಣ ರಾಜಕುಮಾರ ಶುಕ್ಲರ ಸ್ಥಳವು ಬೇತಿಯಾದ ಹತ್ತಿರವಿದ್ದಿತು ಅದರ ಸುತ್ತುಮುತ್ತಲಿನ ಕೋಥಿ (ನೀಲಿಯನ್ನು ಬೆಳೆಯಿಸುವ ತೋಟಗಳು)ಗಳಿಗೆ ಸೇರಿದ್ದ ರೈತರು ಆ ಜಿಲ್ಲೆಯಲ್ಲೆಲ್ಲಾ ಅತ್ಯಂತ ಬಡವರಾಗಿದ್ದರು ನಾನು ಅವರನ್ನು ನೋಡಬೇಕೆಂದು ರಾಜಕುಮಾರ ಶುಕ್ಲರಿಗೆ ತೀವ್ರವಾದ ಇಚ್ಛೆಯಿದ್ದಿತು. ನನ್ನ ಬಯಕೆಯೂ ಅಷ್ಟೇ ಪ್ರಬಲವಾಗಿದ್ದಿತು.

ಆದುದರಿಂದ ಅದೇ ದಿನ ನಾನು ನನ್ನ ಸಂಗಡಿಗರೊಡನೆ ಮೋತೀಹಾರಿಗೆ ಹೊರಟೆನು. ಬಾಬೂ ಗೋರಖ್‌ಪ್ರಸಾದರು ನಮಗೆ ಅವರ ಮನೆಯಲ್ಲಿ ಇಂಬುಗೊಟ್ಟರು ಅದೇಂದು ಧರ್ಮಶಾಲೆಯಾಯಿತು ನಾವೆಲ್ಲರೂ ಅದರಲ್ಲಿ ಹಿಡಿಸುವುದು ಕಷ್ಟವಾಗಿದ್ದಿತು ಮೋತೀಹಾರಿಯಿಂದ ಸುಮಾರು ಐದು ಮೈಲಿ ದೂರದಲ್ಲಿ ಒಬ್ಬ ರೈತನ ಮೇಲೆ ಅತ್ಯಾಚಾರ ನಡೆದ ವರ್ತಮಾನವು ನಮಗೆ ಆ ದಿನವೇ ಬಂದಿತು ಮಾರನೆಯ ದಿನ ಬೆಳಿಗ್ಗೆ ನಾನು ಧರಣೀಧರ ಪ್ರಸಾದರೊಡನೆ ಹೋಗಿ ಅವನನ್ನು ನೋಡಬೇಕೆಂದು, ಬರಬೇಕೆಂದು ನಿಶ್ಚಯವಾಯಿತು ಅದರಂತೆಯೇ ನಾವು ಆನೆಯ ಮೇಲೆ ಅಲ್ಲಿಗೆ ಹೊರಟೆವು ಗುಜರಾತಿನಲ್ಲಿ ಎತ್ತಿನ ಗಾಡಿಯು ಎಷ್ಟು ಸಾಧಾರಣವೋ ಚಂಪಾರಣ್ಯದಲ್ಲಿ ಆನೆಯು ಅಷ್ಟು ಸಾಮಾನ್ಯವಾದುದು ಹೇಳಬೇಕು. ನಾವು ಅರ್ಧ ದಾರಿ ಹೋಗುವಷ್ಟರಲ್ಲಿಯೇ ಪೊಲೀಸ್ ಅಧಿಕಾರಿಗಳ ಸೇವಕನೊಬ್ಬನು ನಮ್ಮ ಬಳಿಗೆ ಬಂದು ಸೂಪರಿಂಟೆಂಡೆಂಟ್ ಪೊಲೀಸ್ ಅಧಿಕಾರಿಗಳ ವಂದನೆಯನ್ನು ನನಗೆ ತಿಳಿಸಿದನು ಅದರ ಅರ್ಥವು ನನಗೆ ಗೊತ್ತಾಯಿತು. ಧರಣೀಧರಬಾಬುಗಳನ್ನು ಮುಂದಕ್ಕೆ ಹೋಗಲು ಬಿಟ್ಟು ನಾನು ಸೇವಕನು ತಂದಿದ್ದ ಬಾಡಿಗೆ ಗಾಡಿಯೊಳಗೆ ಕುಳಿತುಕೊಂಡೆನು. ಆಗ ಅವನು ನಾನು ಚಂಪಾರಣ್ಯವನ್ನು ಬಿಟ್ಟು ಹೋಗಬೇಕೆಂದು ಬರೆದಿದ್ದ ಆಜ್ಞಾಪತ್ರವನ್ನು ನನಗೆ ಕೊಟ್ಟು ನನ್ನ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋದನು ಆ ಆಜ್ಞಾಪತ್ರವು ನನಗೆ ತಲುಪಿದುದಕ್ಕೆ ರುಜುಮಾಡಬೇಕೆಂದು ಅವನು ನನ್ನನ್ನು ಕೇಳಲು ನಾನು ಅದನ್ನನುಸರಿಸಿ ರೈತರ ಸ್ಥಿತಿಗತಿಗಳನ್ನು ಪರಿಶೀಲಿಸುವ ತನಕ ಚಂಪಾರಣ್ಯವನ್ನು ಬಿಡುವ ಉದ್ದೇಶವು ನನಗಿಲ್ಲವೆಂದು ಅದರಲ್ಲಿ ಬರೆದೆನು. ಇದಾದ ಮೇಲೆ ನಾನು ಈ ಬಹಿಷ್ಕಾರ ನಿರೂಪವನ್ನು ಧಿಕ್ಕರಿಸಿದುದಕ್ಕಾಗಿ ನ್ಯಾಯಸ್ಥಾನಕ್ಕೆ ಮರುದಿನವೇ ಬರಬೇಕೆಂದು ನನಗೆ ಸಮನ್ಸ್ ಬಂದಿತು

ನಾನು ಆ ಇಡೀ ರಾತ್ರಿ ಎಚ್ಚರಿದ್ದು ಕಾಗದಗಳನ್ನು ಬರೆದು ಬಾಬೂ ಬ್ರಜ್‌ಕಿಶೋರ ಪ್ರಸಾದರಿಗೆ ಸಮಸ್ತ ಸೂಚನೆಗಳನ್ನು ಕೊಡುವುದರಲ್ಲಿಯೂ ಕಳೆದೆನು.

ಈ ಬಹಿಷ್ಕಾರ ಪತ್ರವೂ ಸಮನ್ಸೂ ನನಗೆ ಬಂದ ವೃತ್ತಾಂತವು ಕಾಳ್ಗಿಚ್ಚಿನಂತೆ ಹರಡಿತು. ಆ ದಿನ ಮೋತೀಹಾರಿಯು ಹಿಂದೆ ಎಂದೂ ನೋಡದ ದೃಶ್ಯವು ಕಂಡುಬಂದಿತೆಂದು ಜನರು ಹೇಳಿದರು. ಗೋರಖ್ ಬಾಬುಗಳ ಮನೆಯೂ ನ್ಯಾಯಸ್ಥಾನವೂ ಜನರಿಂದ ತುಂಬಿ ತುಳುಕುತ್ತಿದ್ದಿತು ಸೌಭಾಗ್ಯವಶಾತ್ ನಾನು ರಾತ್ರಿಯೇ ನನ್ನ ಕೆಲಸವನ್ನೆಲ್ಲ ಮುಗಿಸಿದ್ದುದರಿಂದ ಜನರ ಗುಂಪನ್ನು ತಡೆಯಲು ಸಾಧ್ಯವಾಯಿತು ನನ್ನ ಜೊತೆಯವರಿಂದ ಅತ್ಯಂತ ಸಹಾಯವಾಯಿತು ಅವರು ಜನರನ್ನು ಅಂಕೆಯಲ್ಲಿಡುವುದರಲ್ಲಿ ಉದ್ಯುಕ್ತರಾದರು ನಾನೆಲ್ಲಿ ಹೋದರೂ ನನ್ನ ಸಂಗಡ ಜನರು ಅಲ್ಲಿಗೆ ಬರುತ್ತಿದ್ದರು

ಡಿಸ್ಟ್ರಿಕ್ಟಧಿಕಾರಿಗಳ, ಮ್ಯಾಜಿಸ್ಟ್ರೇಟರು, ಪೊಲೀಸ್ ಸೂಪರಿಂಟೆಂಡೆಂಟರು, ನಾನು ಈ ಅಧಿಕಾರಿಗಳ ಮಧ್ಯೆ ಒಂದು ಸ್ನೇಹಿತಿಯ ವೈಖರಿಯು ಉದಿಸಿತು ನನ್ನ ಮೇಲೆ ಪ್ರಯೋಗಿಸಿದ ನೋಟೀಸ್ ಮುಂತಾದುವನ್ನು ನಾನು ಶಾಸನವಿಧಿಯ ಪ್ರಕಾರ ಪ್ರತಿರೋಧಿಸಬಹುದಾಗಿದ್ದಿತು ಇದಕ್ಕೆ ಬದಲಾಗಿ ನಾನು ಅವುಗಳನ್ನೆಲ್ಲಾ ಸ್ವೀಕರಿಸಿದೆನು ಅಧಿಕಾರಿಗಳ ವಿಷಯದಲ್ಲಿ ನನ್ನ ನಡತೆಯು ಅನಿರ್ವಚನೀಯವಾಗಿತ್ತು. ನಾನು ಅವರನ್ನು ವ್ಯಕ್ತಿಗತವಾಗಿ ವಿರೋಧಿಸಲಿಲ್ಲವೆಂದೂ ಅವರ ಆಜ್ಞೆಗಳನ್ನು ಸೌಜನ್ಯವಾಗಿ ವಿರೋಧಿಸುವುದೇ ನನ್ನ ಉದ್ದೇಶವೆಂದೂ ಅವರಿಗೆ [illegible] ಗೊತ್ತಾಯಿತು ಈ ರೀತಿಯಾಗಿ ಅವರ ಮನಸ್ಸು ನಿರಾತಂಕವಾಗಿ ಅವರು ನನ್ನನ್ನು ಹಿಂಸೆ ಪಡಿಸುವುದಕ್ಕೆ ಪ್ರತಿಯಾಗಿ ಜನರನ್ನು ಅಂಕೆಯಲ್ಲಿಡುವ ವಿಷಯದಲ್ಲಿ ನನ್ನ ಮತ್ತು ನನ್ನ ಸಂಗಡಿಗರ ಸಹಾಯವನ್ನು ಸಂತೋಷದಿಂದ ಉಪಯೋಗಿಸಿಕೊಂಡರು ಅವರ ತಮ್ಮ ಅಧಿಕಾರದರ್ಪವು ನಡೆಯಲಿಲ್ಲವೆಂದು ಕೂಡ ಇದರಿಂದ ಅವರ ಕಣ್ಣುಗಳಿಗೆ ಸ್ಪಷ್ಟವಾಯಿತು. ಜನರ ಆಗ ಕ್ಷಣಕಾಲವಾಗಿ ದಂಡನೆಯ ಭಯವನ್ನು ತ್ಯಜಿಸಿ ತಮ್ಮ ಹೊಸಮಿತ್ರನ ಪ್ರೇಮ ಶಕ್ತಿಗೆ ಮಣಿದಿದ್ದರು

ಚಂಪಾರಣ್ಯದಲ್ಲಿ ನನಗೆ ಯಾರ ಪರಿಚಯವೂ ಇರಲಿಲ್ಲವೆಂಬುದನ್ನು ನೆನಪಿನಲ್ಲಿಡಬೇಕು ರೈತರೆಲ್ಲಾ ವಿದ್ಯೆಯಿಲ್ಲದವರಾಗಿದ್ದರು ಚಂಪಾರಣ್ಯವು ಗಂಗಾನದಿಗೆ ಉತ್ತರದಲ್ಲಿ ಎಂದರೆ ದೂರದಲ್ಲಿ ಹಿಮಾಲಯ ಪರ್ವತದ ತಪ್ಪಲಿನಲ್ಲಿ ನೇಪಾಳಕ್ಕೆ ಅತಿಸಮೀಪದಲ್ಲಿದ್ದು ಭರತಖಂಡದ ಇತರ ಭಾಗದ ಸಂಸರ್ಗವಿಲ್ಲದೆ ಇದ್ದಿತು ಆ ಪ್ರಾಂತ್ಯದಲ್ಲಿ ಮಹಾಸಭೆಯು ಹೆಸರು ಗೊತ್ತಿರಲಿಲ್ಲವೆನ್ನಬಹುದು ಮಹಾಸಭೆಯ ಹೆಸರನ್ನು ಕೇಳಿದ್ದವರು ಕೂಡ ಅದಕ್ಕೆ ಸೇರುವುದಕ್ಕಾಗಲೀ ಅದರ ಹೆಸರನ್ನು ಹೇಳುವುದಕ್ಕಾಗಲೀ ಹೆದರಿ ಹಿಂದೆಗೆಯುತ್ತಿದ್ದರು ಈಗ ಹಾಗಿಲ್ಲ ಮಹಾಸಭೆಯೂ ಅದರ ಸದಸ್ಯರೂ ಮಹಾಸಭೆಯ ಹೆಸರನ್ನಲ್ಲದಿದ್ದರೂ ಅತ್ಯಂತ ವಾಸ್ತವಿಕವಾದ ಅದರ ಪ್ರಭಾವವನ್ನು ಹೊಕ್ಕಿದ್ದರು

ನನ್ನ ಜೊತೆಯವರ ಸಲಹೆಯನ್ನು ಕೇಳಿ ನಾನು ಯಾವ ಕಾಲವೂ ಮಹಾಸಭೆಯ ಹೆಸರಿನಲ್ಲಿ ಏನೊಂದು ಮಾಡದಿರಬೇಕೆಂದು ನಿರ್ಧರಿಸಿದ್ದೆನು ನಮಗೆ ಬೇಕಾಗಿದ್ದುದು ಕೆಲಸವಲ್ಲದೆ ಹೆಸರಲ್ಲ ಹುರುಳು ಬೇಕಾದುದು ಸಿಪ್ಪೆಯಲ್ಲ ಮಹಾಸಭೆಯ ಹೆಸರು ಸರಕಾರದವರಿಗೂ ಮತ್ತು ಅವರ ಸೂತ್ರಧಾರಿಗಳಾದ ಒಮಿಾನ್ದಾರರಿಗೂ ಅಸಹ್ಯವಾದುದಾಗಿತ್ತು. ಅವರ ಹೆಸರನ್ನು ಕ್ರೋಧದಿಂದಲೂ ತಿರಸ್ಕಾರದಿಂದಲೂ ಕಾಣುತ್ತಿದ್ದರು ಅವರ ದೃಷ್ಟಿಯಲ್ಲಿ ಮಹಾಸಭೆಯೆಂದರೆ ವಕೀಲರ ಕಿತ್ತಾಟ ಶಾಸನವಿಧಿಯ ಒಡಕುಗಳನ್ನು ಹುಡುಕಿ ಅಕ್ರಮ ಕಾರ್ಯನಡೆಸುವುದೂ, ಬಾಂಬುಗಳ, ಅರಾಜಕತೆಯ ಅತ್ಯಾಚಾರಗಳು, ದೈವದ್ರೋಹ, ಡಾಂಭಿಕತೆ, ಅಯಶಃ ಕಪಟನೀತಿ ಮೊದಲಾದುದಕ್ಕೆ ಹೆಸರಾಗಿದ್ದಿತು.. ಆದುದರಿಂದ ನಾವು ಅವುಗಳಿಗೆ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಬೇಕಾಗಿದ್ದಿತು ಆದುದರಿಂದ ನಾವು ಮಹಾಸಭೆಯ ಹೆಸರನ್ನು ಎತ್ತದಿರಲು ನೈತಿಕವಾಗಿ ಜನಗಳಿಗೆ ಮಹಾಸಭೆಯ ಬಗ್ಗೆ ಸಂಶಯ ಇರುವುದನ್ನು ಹೋಗಲಾಡಿಸಬೇಕಾಗಿತ್ತು ಅವರು ಮಹಾಸಭೆಯ ಕಾರ್ಯಕರ್ತರಾಗಿದ್ದರೂ ಮಹಾಸಭೆಯನ್ನು ಕಾಣಬೇಕಾಗಿದ್ದಿತ್ತು ಅದನ್ನು ಅವಲಂಬಿಸಬೇಕಾಗಿಲ್ಲ ಎಂಬುವೇ ನಮ್ಮ ಆಶಯವಾಗಿದ್ದಿತು.

ಆದುದರಿಂದ ನಮ್ಮ ಜನಗಳಿಗೆ ಮುಂಚೆ ಏನೂ ತಿಳಿಯದಂತೆ ನಮ್ಮ ಸಿದ್ಧತೆಗಳನ್ನು ಮಾಡಿದೆವು ನಮ್ಮ ಉದ್ದೇಶದ ಇತರರನ್ನಾಗಲಿ ಕಷ್ಟಪಡುವವರಿಗಾಗಲಿ ರೈತರ ಶಕ್ತಿಯನ್ನು ತಿಳಿಯುವಂತೆ ರಾಜಕೀಯ ವಿಷಯವಾಗಿ ಜನರ ಹೃದಯವನ್ನು ಕಲಕುವುದು ಸಾಧ್ಯವಿರಲಿಲ್ಲ ಅವರ ಮನಸ್ಸಿನಲ್ಲಿ ಕಲಕ್ಕಿಸುವ ರಾಜಕೀಯ ಪ್ರಚಾರವನ್ನು ನಾವು ಮಾಡಲಿಲ್ಲ ಚಂಪಾರಣ್ಯದ ಹೊರಗಿನ ರಾಜಕೀಯ ವಿಷಯವು ಅವರಿಗೆ ಗೊತ್ತಿರಲಿಲ್ಲ ಆದರೂ ನಾವು ಆ ಜನ್ಮವಿರಕ್ತರೋ ಎಂಬಂತೆ ಅವರು ನಮ್ಮನ್ನು ಬರಮಾಡಿಕೊಂಡರು. ಈ ರೀತಿಯಾಗಿ ನಾವು ರೈತರಿಗೆ ನನಗೆ ಈಶ್ವರನ ಅಹಿಂಸೆಯ, ಸತ್ಯದ ಸಾಕ್ಷಾತ್ಕಾರವಾಯಿತೆಂದು ಹೇಳಿದರೆ ಅದು ಅತಿಶಯೋಕ್ತಿಯಲ್ಲ

ಈ ಸಾಕ್ಷಾತ್ಕಾರಕ್ಕೆ ಸಿದ್ಧಿಗೆ ನನಗಿದ್ದ ಅಧಿಕಾರವೇನೆಂದು ನಾನು ಯೋಚಿಸಿದಾಗ ಜನಗಳಲ್ಲಿಟ್ಟಿದ್ದ ಪ್ರೇಮದ ಹೊರತು ಬೇರೆಯಾವ ಕಾಣುವುದಿಲ್ಲ. ಇದು ತಾನೆ ನನ್ನ ಅಹಿಂಸೆಯಲ್ಲಿ ನನಗಿರುವ ಅಚಲವಾದ ನಂಬಿಕೆ ಇನ್ನೇನೂ ಅಲ್ಲ.

ಚಂಪಾರಣ್ಯದಲ್ಲಿ ಕಳೆದ ಆ ದಿನವನ್ನು ನನ್ನ ಜೀವನದಲ್ಲಿ ಎಂದೂ ಮರೆಯಲಾಗುವುದಿಲ್ಲ ಅಲ್ಲಿನ ಜನಗಳೂ ನನಗೂ ಆ ದಿನವು ಅಪೂರ್ವವಾದುದು

ಶಾಸನವಿಧಿ ಪ್ರಕಾರವೇನೋ ನನ್ನ ವಿಚಾರಣೆಯಾಗಬೇಕಾಗಿದ್ದಿತು. ಆದರೆ ನಿಜವಾಗಿ ಸರಕಾರವೇ ಅಂದು ಪ್ರತಿವಾದಿಯ ಸ್ಥಾನದಲ್ಲಿದ್ದಿತು ಪ್ರಾಂತ್ಯವಿಭಾಗಾಧಿಕಾರಿಗಳು ನನಗಾಗಿ ಒಡ್ಡಿದ್ದ ಪ್ರಯತ್ನದ ಫಲವಾಗಿ ಸರಕಾರವನ್ನು ಅವಮಾನಗಳು ಸಿಕ್ಕಿದರು

---

## ಹಣ್ಣುಗಳಲ್ಲಿ ಕಿತ್ತಳೆಹಣ್ಣು ಬಹಳ ಶ್ಲಾಘ್ಯವಾದುದು.

ಕಿತ್ತಳೆಹಣ್ಣುಗಳು ಬಹಳ ರುಚಿಯಾಗಿರುವುದರೊಡನೆ ಒಳ್ಳೇ ವ್ಯಾಧಿನಿವಾರಕ ಶಕ್ತಿಯಿಂದ ಕೂಡಿವೆ

ಮಹೋದರಕ್ಕೆ ಕಿತ್ತಳೆಯ ಹಣ್ಣು ಬಹಳ ಉತ್ತಮವಾದ ಔಷಧಿಯೆಂದು ಡಾಕ್ಟರ್ ನೆಸ್ಲೀಸೂಕ್ ಎಂಬವರು ನಿರ್ಧರಿಸಿರುವರು

ಹಾಲು ಮತ್ತು ಕೋಳಿಮೊಟ್ಟೆ, ಇವುಗಳೊಡನೆ ಕಿತ್ತಳೆ ಹಣ್ಣಿನ ರಸವನ್ನು ಸೇರಿಸಿದರೆ, ಮಕ್ಕಳಿಗೆ ಅತ್ಯುತ್ತಮವಾದ ಆಹಾರವಾಗುವುದು

ಕಿತ್ತಳೆಯ ಹಣ್ಣಿನ ರಸದಲ್ಲಿ ಮೂಳೆಯನ್ನು ದೃಢಪಡಿಸುವ ಗುಣವಿರುವುದೆಂದು ಈಚೆಗೆ ರಸಾಯನ ಶಾಸ್ತ್ರಜ್ಞರ ಶೋಧನೆಗಳಿಂದ ಕಂಡುಬಂದಿದೆ. ಚಿಕ್ಕಮಕ್ಕಳ ಆಹಾರದೊಡನೆ ಕಿತ್ತಳೆಯ ಹಣ್ಣಿನ ರಸವನ್ನು ಸೇರಿಸಿ ಕೊಡುವುದರಿಂದ ಅವುಗಳ ಮೂಳೆಯು ಬೇಗನೆ ಚೆನ್ನಾಗಿ ಬಲಿಯುವುದು. ಆನೇಕಮಂದಿ ತಾಯಿಯರು ತಮ್ಮ ಮಕ್ಕಳಿಗೆ ಪ್ರತಿದಿನವೂ ಕಿತ್ತಳೆಯ ಹಣ್ಣಿನ ರಸವನ್ನು ಕೊಡುವರು ಚಿಕ್ಕ ವಯಸ್ಸಿನಲ್ಲಿ ಬಾಲಕರು ಆಹಾರಪೂರ್ವಕವಾಗಿ ಸೇವಿಸಿದ ಕಿತ್ತಳೆಯ ಹಣ್ಣುಗಳು, ಅವರು ವಯಸ್ಕರಾದ ಮೇಲೆ ಧೀರೋದಾತ್ತರಾಗಿ ಬಾಳಲು ಅನುಕೂಲಿಸುವಂತೆ, ಅವರ ಅಂಗಾಂಗಗಳು ಒಳ್ಳೇ ದಾರ್ಢ್ಯವನ್ನೂ ಪುಷ್ಟಿಯನ್ನೂ ತಾಳಲು ಅವಕಾಶ ಕೊಡುವುದು ಕಿತ್ತಳೆಯ ಹಣ್ಣನ್ನೇ ಸೇವಿಸಿದ ಮಕ್ಕಳು ಆ ಹಣ್ಣಿನ ರಸದಿಂದ ಮಾತ್ರವಲ್ಲದೆ ಅವರ ಇತರ ಆಹಾರಗಳಿಂದಲೂ ಶಾಕ್ತಿಯು ಎಂಬ ಅಂಶವನ್ನು ವಿಶೇಷವಾಗಿ ಪಡೆಯುವರು ಕಿತ್ತಳೆಯ ಹಣ್ಣುಗಳಲ್ಲಿರುವ ವಿಟಮಿನ್‌ಗಳು ಇತರ ಆಹಾರಪದಾರ್ಥಗಳಲ್ಲಿರುವ ಸಾರವನ್ನೆಲ್ಲ ದೇಹವು ಚೆನ್ನಾಗಿ ಸಂಗ್ರಹಿಸುವಂತೆ ಮಾಡುವುವು

'ಹೇಳಿದ್ದು ಅಂದ್ ಹೋಮಿಯೋಪಥಿ'

---

## ಇದನ್ನು ಓದಿ ನಗಬೇಡಿರಿ!!

[illegible] ನಗುವಿನ ವಿಷಯವಾಗಿ ಅನೇಕ ಶೋಧನೆ [illegible] ಮಾಡಿರುವರು

ಬೇರೆ ಎಲ್ಲಾ ಮಾರ್ಗಗಳಿಗಿಂತಲೂ, ಮನುಷ್ಯನ ಸ್ವಭಾವಗಳನ್ನು ಅವರವರು ನಗುವ ರೀತಿಯಿಂದ ಬಹಳ ಸುಲಭವಾಗಿ ಕಂಡುಕೊಳ್ಳಬಹುದು.

(1) ನಾನಾರೀತಿಯ ನಗೆಗಳಲ್ಲಿ ಹ ಹ್ಹ ಹ್ಹ! ಎಂದು ನಗುವುದೇ ಉತ್ತಮಗುಣಸೂಚಕವು ಹೀಗೆ ನಗುವುದು ನಿಷ್ಕಪಟಸ್ವಭಾವವನ್ನು ತೋರಿಸುವುದು.

(2) ' ಹೆ ಹ್ಹೆ ಹ್ಹೆ! ' ಎಂದು ನಗುವ ಮನುಷ್ಯನಲ್ಲಿ ಯಾವಾಗಲೂ ಕೋಪಸ್ವಭಾವವೂ ಮನೋವಿಕಾರವೂ ಹೆಚ್ಚಾಗಿರುವುದು.

(3) ಹಿ ಹ್ಹಿ ಹ್ಹಿ! ಎಂಬ ನಗೆಯು ರೀತಿಯು ಆ ಮನುಷ್ಯನು ಮನೋದಾರ್ಢ್ಯವಿಲ್ಲದ ಚಂಚಲ ಸ್ವಭಾವದವನೆಂದು ತೋರಿಸುವುದು

(4) ಯಾವಾಗಲೂ ಸಂತೋಷಚಿತ್ತನಾದವನು ನಗುವುದರಲ್ಲಿ ' ಹೊ ಹ್ಹೊ ಹ್ಹೊ! ' ಎಂಬ ಶಬ್ದವು ಬರುವುದು.

(5) ಎಲ್ಲಕ್ಕಿಂತಲೂ ಹೀನವಾಗಿ ಮನುಷ್ಯನ ಕಾಪಟ್ಯ ಮತ್ತು ಅಲ್ಪ ಸ್ವಭಾವವನ್ನು ತೋರಿಸತಕ್ಕ ನಗೆಯು ' ಹು ಹ್ಹು ಹ್ಹು ' ಎಂಬುದು

ನೀವು ಈ ಮೇಲೆ ಹೇಳಿದ ' ಹ ಹ್ಹ ಹ್ಹ ' ಎಂಬ ನಗೆಯನ್ನು ನೋಡಿದೊಡನೆ ಅಂತವನ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕು. ಅಂತವರನ್ನು ನಂಬಬಾರದು ದಾರಿಯಲ್ಲಿ ನಡೆಯಬೇಕು ನೀವು ಕೂಡ ನಿಮ್ಮ ನಗೆಯಲ್ಲಿ ಅಂತಹ ದೋಷಗಳೇನಾದರೂ ಕಂಡು ಬಂದರೆ, ಅದನ್ನು ತಿದ್ದಿಕೊಳ್ಳುವ ಪ್ರಯತ್ನ ಮಾಡಿರಿ " ಹ! ಹ್ಹ! ಹ್ಹ ' ಅಥವಾ 'ಹೊ! ಹ್ಹೊ ! ಹ್ಹೊ! ಎಂದು ನಗುವ ರೀತಿಯನ್ನು ಅಭ್ಯಾಸಿಸಿರಿ. "

---

## ಜ ಲ ಪಾ ನ .

ನೀರು ನಾನಾಪದಾರ್ಥವಾಗಿ ಆಹಾರಗಳ ವರ್ಗಕ್ಕೆ ಸೇರಿಸಲ್ಪಡುವುದಿಲ್ಲ ಆದರೂ ಶರೀರವೃದ್ಧಿಗೆ ಅವಶ್ಯಕವಾದ ವಸ್ತುಗಳಲ್ಲಿ ನೀರು ಬಹಳ ಮುಖ್ಯವಾದುದು ನಿಮ್ಮ ದೇಹದ ತೂಕದ ಮತ್ತು ಆಕೃತಿಯ ಆರುಭಾಗದಲ್ಲಿ ಐದು ಭಾಗವು ನೀರಾಂಶವಾಗಿದೆ ಶರೀರ ರಚನೆಯಲ್ಲಿ ಸೇರಿರುವ ಪದಾರ್ಥಗಳಲ್ಲಿ ಇತರ ವಸ್ತುಗಳನ್ನು ಗ್ರಹಿಸಿ ನರಗಳು, ಧಾತು, ಮಾಂಸಗಳೆಂದು ನಾನಾ ಬಗೆಯ ಕೆಲಸ ಮಾಡುವುದು ನೀರಾದರೋ ಬಂದಿಗಳ ರಕ್ತದಲ್ಲಿ ಆರೋಗ್ಯಶಾಲಿಯಾದ ಪುರುಷನ ಅಥವಾ ಸ್ತ್ರೀಯ ದೇಹದವಾಗಿನ ವೃತ್ತ ಮನಸ್ಸಿನಲ್ಲಿ ನಡೆಯುವ ವ್ಯಾಪಾರಗಳು ನೀರಿನ ಮತ್ತು ಏಕೀಕರಣ ಕೆಲಸಗಳನ್ನು ಮಾಡಲು ಸಮರ್ಥವಾಗಿದೆ. ನೀರೇ! ನೀರಿನಿಂದಲೇ ಜೀವನ ಪ್ರವರ್ತನೆಯು [illegible] ಎಲ್ಲಾ ಕೆಲಸಗಳೂ ನೀರು ಧಾರಾಳವಾಗಿ ಒದಗುತ್ತಿದ್ದರೆ ಮಾತ್ರ ಒಳ್ಳೆಯದು. ವಿಶೇಷ [illegible]

# ಕೊಡಗು.

**ಸನ್ ೧೯೨೮ ನೇ ಇಸವಿ**

**ನವಂಬರ್ ತಾ. ೯ ನೇ ಶುಕ್ರವಾರ.**

## ಮುಂದಾಳುಗಳಿಗೆ ದೊಣ್ಣೆಪೆಟ್ಟು.

ಸೈಮನ್ ಕಮಿಶನು ಪೂನಾದಿಂದ ಹೊರಟು ಲಾಹೋರಿಗೆ ತಲಪಿದ ದಿನ ಅಲ್ಲಿಯ ಜನರು ಈ ಕಮಿಶನಿನ ಸಂಗಡ ತಮ್ಮ ಅಸಹಕಾರವನ್ನು ತೋರಿಸಲು ಕಪ್ಪು ಬಾವುಟಗಳೊಡನೆ ಮೆರವಣಿಗೆಯನ್ನೂ, ಸಭೆಗಳನ್ನೂ ಏರ್ಪಡಿಸಿಕೊಂಡಿದ್ದರು. ಇಂಥಾ ಮೆರವಣಿಗೆಯು ಸೈಮನರ ದೃಷ್ಟಿಗೆ ಬೀಳದಂತೆ ಕಮಿಶನಿನವರು ಇಂದು ಇಳಿಯುವ ರೈಲ್ವೆಸ್ಟೇಶನಿಗೆ ಹೋಗುವ ರಸ್ತೆಗೆ ಅಡ್ಡಲಾಗಿ ಮುಳ್ಳು ತಂತಿಯ ತಡೆಯನ್ನು ಹಾಕಿದ್ದಲ್ಲದೆ ಪೋಲೀಸಿನವರ ಪಹರೆ ಸಹ ಇಟ್ಟಿದ್ದರು. ಕೆಲವು ರಸ್ತೆಗಳಿಗಾಗಿ ಮೆರವಣಿಗೆಗಳು ಹೋಗಬಾರದೆಂತ ಮೇಜಿಸ್ಟ್ರೇಟರ ಹುಕ್ಕುಂ ಆಗಿತ್ತು. ಇಂಥಾ ಹುಕ್ಕುಮುಗಳನ್ನು ಉಲ್ಲಂಘಿಸುವ ಅಭಿಪ್ರಾಯವು ಮೆರವಣಿಗೆಯನ್ನು ಏರ್ಪಡಿಸಿದವರಲ್ಲಿ ಇರಲಿಲ್ಲ. ಮೆರವಣಿಗೆಯು ಮುಳ್ಳು ತಂತಿ ತಡೆಯ ವರೆಗೆ ಬಂದು ಅಲ್ಲಿ ನಿಂತಿದ್ದಾಗ ಪೋಲೀಸ್ ಸುಪರಿಂಟೆಂಡೆಂಟರವರೇ ಲಾಲಾ ಲಜಪತರಾಯ್ ಮುಂತಾದ ಮುಖಂಡರಿಗೆ ಪೋಲೀಸ್ ದೊಣ್ಣೆಗಳಿಂದ ಹೊಡೆದರು. ಕೆಲವರಿಗೆ ರಕ್ತಸ್ರಾವವಾಯಿತು. ಇನ್ನು ಕೆಲವರಿಗೆ ಜಖಂ ಆಯಿತು. ಮೆರವಣಿಗೆಯವರು ಆಯುಧಗಳಿಲ್ಲದವರಾಗಿದ್ದು ಸಂಪೂರ್ಣ ಅಹಿಂಸಾಪರರಾಗಿದ್ದರೂ ನಿಷ್ಕಾರಣವಾಗಿ ಪೋಲೀಸಿನವರು ಮುಖಂಡರಿಗೆ ಹೊಡೆದು ಸರಕಾರದ ದಬ್ಬಾಳಿಕೆ ತತ್ವವನ್ನು ಕಾರ್ಯರೂಪದಿಂದ ತೋರಿಸಿದರು. ಹೀಗೆ ಹೊಡೆಯಲು ಮೆರವಣಿಗೆ ಕಡೆಯಿಂದ ಯಾರೋ ಒಂದು ಕಲ್ಲು ಎಸದರೆಂದೂ ಅಂಥಾ ಕಲ್ಲು ಒಬ್ಬ ಪೋಲೀಸ್ ಆಫೀಸರಿಗೆ ತಗಲಿತೆಂದೂ ಸರಕಾರದ ಪರವಾಗಿ ಯಾರೋ ಹೇಳಿದರು. ಲಜಪತರಾಯರಂಥ ಧರ್ಮಶೀಲರು ಈ ಹೇಳಿಕೆಯು ಪೂರ್ತಿ ಸುಳ್ಳೆಂದೂ ಮೆರವಣಿಗೆಯವರು ಪೋಲೀಸ್ ಜುಲುಮಿಗೆ ಏನೇನೂ ಕಾರಣ ಕೊಡಲಿಲ್ಲವೆಂತಲೂ ಹೇಳಿದ್ದಾರೆ. ಸರಕಾರದ ಕಡೆಯಿಂದ ಹೆಚ್ಚಿನ ರುಜುವಾತೇನೂ ಈ ವರೆಗೆ ಪ್ರಕಟವಾಗಿರುವದಿಲ್ಲ.

ಸೈಮನ್ ಕಮಿಶನಿಗೆ ಹಿಂದುಸ್ಥಾನದ ಎಲ್ಲಾ ಕಡೆಗಳಲ್ಲೂ ಸಂಪೂರ್ಣ ಸ್ವಾಗತ ಸಿಕ್ಕುತ್ತದೆಯೆಂತ ಕಮಿಶನಿನ ಮುಖಂಡರಾದ ಸೈಮನರು ಆಗಿಂದಾಗ್ಗೆ ಪ್ರಕಟಿಸಿಕೊಳ್ಳುತ್ತಾರೆ. ಈ ಹೇಳಿಕೆಗಳು ಎಷ್ಟರ ಮಟ್ಟಿಗೆ ಟೊಳ್ಳೆಂಬದನ್ನು ಪಂಜಾಬ್ ಸರಕಾರವು ಪ್ರಕಟಿಸಿತು. ಸೈಮನ್ ಕಮಿಶನಿಗೆ ಜನಸಮೂಹವು ಸ್ವಾಗತವನ್ನೀಯಲು ಬರುವದರ ಬದಲು "ಸೈಮನರೇ ವಾಪಸು ಹೋಗಿರಿ" ಎಂಬ ಕೂಗೇ ಪಂಜಾಬಿನ ಜನರ ಗಾನವಾಗಿದೆಯೆಂತ ಪಂಡಿತ ಮದನ ಮೋಹನ ಮಾಳವೀಯರು ಹೇಳಿದ್ದಾರೆ. ಪೂನಾದಲ್ಲು ಜನರು ಗುಂಪು ಗುಂಪಾಗಿ ಇದೇ ರೀತಿಯಲ್ಲಿ ತಮ್ಮ ಮನೋಭಾವವನ್ನು ಸೂಚಿಸಿದರು. ಸರಕಾರವು ಸೈಮನ್ ಸಪ್ತಕರನ್ನು ಜಯಘೋಷದೊಡನೆ ಎದುರುಗೊಳ್ಳುವ ಬದಲು ಮುಳ್ಳು ತಂತಿಯಿಂದ ಸಂರಕ್ಷಿಸಿ ಕರಕೊಂಡು ಬರಬೇಕಾಗಿದೆ. ಇನ್ನಾದರೂ ಈ ಕಮಿಶನು ಹಿಂದುಸ್ಥಾನದವರಿಗೆ ಬೇಕಾಗಿಲ್ಲವೆಂತ ಕಮಿಶನಿಗೂ ಸರಕಾರಕ್ಕೂ [illegible]ವಾಗದಿದ್ದರೆ ಆಶ್ಚರ್ಯವೇ ಸರಿ.

ಹಿಂದೂಸ್ಥಾನದ ಮುಖಂಡರಿಗೆ ಸೈಮನರ ಸ್ವಾಗತದಲ್ಲಿ ಈ ರೀತಿ ಲಟ್ಟಿ ಪ್ರಹಾರಗಳನ್ನು ಕೊಟ್ಟದ್ದಕ್ಕೆ ಹಿಂದೀಯರು ತಮ್ಮ ಆತ್ಮಗೌರವವನ್ನು ನೆನೆಸಿಕೊಂಡು ಸ್ವರಾಜ್ಯ ಸ್ಥಾಪನೆಗೆ ಮುಖಂಡರು ತೋರಿಸಿಕೊಡುವ ರೀತಿಯಲ್ಲಿ ಹೋರಾಡಲೇ ಬೇಕು. ಸ್ವತಂತ್ರ ದೇಶವಾಗಿದ್ದರೆ ಲಾಲಾ ಲಜಪತರಾಯರಂಥ ದೇಶಭಕ್ತ ಮುಖಂಡರಿಗೆ ದೇಶದ ಅತ್ಯುನ್ನತ ಪದವಿಯು ಸಿಕ್ಕುತ್ತಿತ್ತು. ಇಂಥವರಿಗೆ ಪರಾಧೀನವಲ್ಲಿರುವ ಈ ದೇಶದಲ್ಲಿ ಸರಕಾರದ ನೌಕರರಿಂದ ಹೀನ ತಪ್ಪು ಮಾಡಿದ ತುಚ್ಛ ಮನುಷ್ಯರಿಗೆ ಸಿಕ್ಕುವ ತಿರಸ್ಕಾರ. ಇಂಥಾ ಹೀನ ಸ್ಥಿತಿಯನ್ನು ಹಿಂದೂಸ್ಥಾನದವರು ಎಷ್ಟರವರೆಗೆ ಸಹಿಸಲು ಸಾಧ್ಯ. ಇ. ಥಾ ಮುಖಂಡರಿಗೆ ಆದ ತಿರಸ್ಕಾರ ಬೇರೆ ಅಲ್ಲ, ನಮ್ಮ ನಿನ್ನ ಸನ್ನಿತ್ತ ಭಾರತಮಾತೆಗೆ ಆಗುವ ತಿರಸ್ಕಾರ ಬೇರೆ ಅಲ್ಲ. ಹಿಂದೂಸ್ಥಾನಕ್ಕೆ ಸ್ವನಿರ್ಣಯದ ಹಕ್ಕಿದ್ದರೆ ಅಂಥ ನಿರ್ಣಯವನ್ನು ಮಾಡಲು ಅನರ್ಹರೆಂದು ಹಿಂದೂಸ್ಥಾನವನ್ನು ಗುಲಾಮಗಿರಿಯಲ್ಲೇ ಇನ್ನೂ ಕೆಲವು ಕಾಲ ಇಡಲು ಬಂದಿರುವ ಸೈಮನ್ ಕಮಿಶನಿನ ಹೆಸರಿನಲ್ಲಿ ಸರಕಾರಿ ಅಧಿಕಾರಿಗಳಿಂದ ಪ್ರಹಾರ!

ಸರಕಾರಿ ವರ್ತನೆಯಿಂದ ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವತಂತ್ರ ಬೇಕೆನ್ನುವವರ ಕೂಟವು ಹೆಚ್ಚಾಗುತ್ತಲಿದೆ. ಮೊನ್ನೆ ಡೆಲ್ಲಿಯಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಕಮಿಟಿಯಲ್ಲಿ ಹಿಂದೂಸ್ಥಾನವು ಬ್ರಿಟಿಷ್ ಸಾಮ್ರಾಜ್ಯದಿಂದ ವಿನಾಯಿಸಿಕೊಂಡ ವಿನಹ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವಿಲ್ಲ, ಹಿಂದೂ ಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವೇ ಕಾಂಗ್ರೆಸ್ಸಿನ ಧ್ಯೇಯವೆಂಬ ಠರಾವು ಪುನಃ ಮಂಜೂರಾಯಿತು. ನೆಹರು ಕಮಿಟಿಯವರಿಗೆ ಹಿಂದೂಸ್ಥಾನದಲ್ಲಿ ಎಲ್ಲಾ ಕಡೆಗಳಿಂದಲೂ ಒಪ್ಪಿಗೆ ದೊರೆತನಂತರ ಪುನಃ ಸಂಪೂರ್ಣ ಸ್ವಾತಂತ್ರ್ಯದ ಪಂಗಡಕ್ಕೆ ಹೆಚ್ಚಿಗೆ ಬಲಬರುವಂತೆ ಸರಕಾರದವರ ಶಾಸನೋಚಿತ ವರ್ತನೆಯಿಂದ ಆಗಿದೆ. ಆದರೂ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯಲು ನೆಹರು ವರದಿಯು ಸಹಾಯಕರವಾಗಿದೆಯೆಂಬ ಠರಾವು ಸಹ ಮಂಜೂರಾಗಿದೆ. ಸರಕಾರದ ಬಾಳಿಕೆಯು ಹೆಚ್ಚುತ್ತಿದ್ದರೂ ತತ್ಕಾಲ ಉಪನಿವೇಶಗಳ ಸ್ವಾತಂತ್ರ್ಯಕ್ಕೆ ಹೋರಾಡುವದು ಯುಕ್ತವಾಗಿದೆ. ಉಪನಿವೇಶಗಳ ಸ್ವಾತಂತ್ರ್ಯವಾದರೂ ಹಿಂದೂಸ್ಥಾನಕ್ಕೆ ಸಿಕ್ಕಲೇ ಬೇಕೆಂಬದಕ್ಕೆ ಹಿಂದೂಸ್ಥಾನದ ಎಲ್ಲಾ ಪಕ್ಷದವರ ಒಪ್ಪಿಗೆ ಸಿಕ್ಕಿರುವದರಿಂದ ಈ ಒಗ್ಗಟ್ಟಿನ ತೀರ್ಮಾನವನ್ನು ತಿರಸ್ಕರಿಸಬಾರದು.

ಸಂಪೂರ್ಣ ಸ್ವಾತಂತ್ರ್ಯವೇ ಆಗಲೀ ಉಪನಿವೇಶಗಳ ಸ್ವಾತಂತ್ರ್ಯವೇ ಆಗಲೀ ಸಿಕ್ಕಬೇಕಾದರೆ ಸಮುದಾಯದ ಜನರು ಒಟ್ಟಾಗಿ ತಮ್ಮ ಕರ್ತವ್ಯವನ್ನು ಮಾಡಲೇಬೇಕು. ಮುಂದಾಳುಗಳು ಎಷ್ಟೇ ಠರಾವುಗಳನ್ನು ಮಂಜೂರು ಮಾಡಿಕೊಂಡರೂ, ಎಷ್ಟು ಉಪನ್ಯಾಸ ಕೊಟ್ಟರೂ ಬ್ರಿಟಿಷ್ ಜನರು ಹಿಂದುಸ್ಥಾನವನ್ನು ತಮ್ಮ ಅಧೀನದಿಂದ ಬಿಟ್ಟುಕೊಡುವದಿಲ್ಲ. ಹಿಂದುಸ್ಥಾನವಿಲ್ಲದೆ ಬ್ರಿಟನ್ನಿಗೆ ಮಹತ್ವವೇನೂ ಉಳಿಯುವದಿಲ್ಲ. ಆದ್ದರಿಂದ ಅಂಥಾ ಜನರಿಂದ ಸ್ವಾತಂತ್ರ್ಯವನ್ನು ಪಡೆಯುವದು ಸುಲಭಸಾಧ್ಯವಲ್ಲ. ಜನಸಮುದಾಯಕ್ಕೆ ಈಗಿನ ಸ್ಥಿತಿಯು ಅಸಹ್ಯವಾಗಿ ತಮ್ಮ ದೇಶದೊಳಗಾದರೂ ತಾವು ಸ್ವಾತಂತ್ರ್ಯದಾಗದೆ ಬಡೆವು ಎಂಬ ದೃಢ ಕಲ್ಪವು ನೆಲೆಯಾಗಬೇಕು. ಈ ತೀರ್ಮಾನವೊಂದಾದರೆ ಸಾಧಿಸುವ ರೀತಿಯನ್ನು ಸುಲಭದಲ್ಲೇ ನಿರ್ಣಯಿಸಿಕೊಳ್ಳಬಹುದು.

ಲಾಲಾ ಲಜಪತರಾಯರೇ ಮುಂತಾದವರಿಗೆ ದೇಶದ ಅನೇಕ ಕಡೆಗಳಿಂದ ಧನ್ಯವಾದಗಳು ಬಂದವು. ನಿರಪರಾಧಿಗಳ ಮೇಲೆ ಆಳರಸರ ತಾಬೇದಾರರು ಕೈ ಮಾಡಿದರೂ ಶಾಂತಾಭಂಗಕ್ಕೆ ಎಡೆಕೊಡದೆ ಇದ್ದದ್ದಕ್ಕೆ ಮಾತ್ರವಲ್ಲ, ತನ್ನ ಎದೆಯ ಮೇಲೆ ನೋವನ್ನುಂಟುಮಾಡಿದ ಹೊಡೆತವನ್ನು ತಿಂದರೂ ದೇಶದ ಜನರಿಗೆ ತಮ್ಮ ಅಧೀನ ಸ್ಥಿತಿಯನ್ನು ತಿಳಿಸಿಕೊಡಲು ಅವಕಾಶದೊರಕಿಸಿದ್ದಕ್ಕಾಗಿ ಧನ್ಯವಾದಗಳು. ಒಬ್ಬ ವ್ಯಕ್ತಿಯ ಸಮೀಪ ಬಂಧುವಿನ ಮೇಲೆ ಇನ್ನೊಬ್ಬನು ಕೈ ಮಾಡಿದರೆ ಅದರ ಮುಯ್ಯಿ ತೀರಿಸುವ ಸಂಕಲ್ಪ ಮಾಡುವದು ಮನುಷ್ಯ ಸ್ವಭಾವವಾಗಿದೆ. ಭಾರತ ಮಾತೆಯ ಸುಪುತ್ರರನೇಕರಿಗೆ ನಿಷ್ಕಾರಣವಾಗಿ ಹೊಡೆದು ನೋವನ್ನುಂಟುಮಾಡಲು ಎಡೆಕೊಡುವ ಈ ಸರಕಾರ ಪದ್ಧತಿಯನ್ನು ಮಾರ್ಪಡಿಸಿಕೊಂಡು ಪ್ರಜಾಸತ್ತಾತ್ಮಕ ಅಂದರೆ ಪಂಚಾಯತಿ ಸರಕಾರವನ್ನು ಸ್ಥಾಪಿಸಲು ಜನಸಮುದಾಯದವರು ಸಂಕಲ್ಪ ಮಾಡುವಂತೆ ಮಾಡಿದ ಲಜಪತರಾಯ್ ಮುಂತಾದ ಮುಖಂಡರಿಗೆ ಧನ್ಯವಾದಗಳು.

---

## ಕೊಡಗು ಖಾಯಿದೆ ಮಂಡಲಿ.

ಚೀಫ್ ಕಮಿಶನರ ಅಧ್ಯಕ್ಷತೆಯಲ್ಲಿ ತಾರೀಕು 8.11.28 ರಲ್ಲಿ 11 ಘಂಟೆಗೆ ಖಾಯಿದೆ ಮಂಡಲಿಯ ಅಧಿವೇಶನವು ಪ್ರಾರಂಭವಾಯಿತು. ಎಲ್ಲಾ ಸಭಿಕರೂ ಹಾಜರಿದ್ದರು. ಪ್ರೇಕ್ಷಕರೂ ಅನೇಕರಿದ್ದರು.

ಸವಾಲು ಜವಾಬುಗಳಾದ ನಂತರ ತಾ. 21—10—27ರ ಖಾಯಿದೆ ಮಂಡಲಿಯ ಅಧಿವೇಶನದಲ್ಲಿ ಮಂಜೂರಾದ ಮೂರು ತೀರ್ಮಾನಗಳ ಮೇಲೆ ಚೀಫ್ ಕಮಿಶನರ ತೀರ್ಮಾನವನ್ನು ಸಭೆಗೆ ತಿಳಿಸಿದರು. (1) ವೀರರಾಜಪೇಟೆ ಹೈಸ್ಕೂಲಿನಲ್ಲಿ ಮ್ಯಾಥ್ ಮೇಟಿಕ್ ಭಾಗವನ್ನು ಕಲಿಸುವ ಏರ್ಪಾಡು ಮಾಡಲು 1928—29ರಲ್ಲಿ ಹಣವಿಲ್ಲವೆಂತ ಫೈನಾನ್ಸ್ ಕಮಿಟಿಯವರು ತೀರ್ಮಾನಿಸಿದರು. (2) ವೀರರಾಜಪೇಟೆಯಲ್ಲಿ ಸಬ್ ಮ್ಯಾಜಿಸ್ಟ್ರೇಟರನ್ನು ನೇಮಿಸಲು 1928—29ರಲ್ಲಿ ಹಣವಿಲ್ಲವೆಂತ ಫೈನಾನ್ಸ್ ಕಮಿಟಿಯವರು ತೀರ್ಮಾನಿಸಿದರು. (3) ವೀರರಾಜಪೇಟೆ ಮುನ್ಸಿಫ್ ಕೋರ್ಟಿಗೆ ಬರುವ ರಿಪೋರ್ಟುಗಳನ್ನು ತರಿಸಿಕೊಳ್ಳಲು ಮುನಸೀಫರಿಗೆ ಆರ್ಡರ್ ಕೊಡಲಾಗಿದೆ.

ಅನಂತರ ಠರಾವುಗಳ ಮೇಲೆ ಚರ್ಚೆ ಪ್ರಾರಂಭವಾಯಿತು.

ಸಿವಿಲ್ ಕೋರ್ಟುಗಳ ಡಿಕ್ರಿ ಸಾಲಕ್ಕಾಗಿ ಕೃಷಿಕನ ಕೃಷಿ ಉತ್ಪತ್ತಿಯನ್ನು ಜಪ್ತಿಮಾಡಿಸುವಾಗ್ಯೆ ಸಾಲಗಾರನ ಮತ್ತು ಆತನ ಕುಟುಂಬದ ಜೀವನಕ್ಕೆ ಬೇಕಾದಷ್ಟು ಧಾನ್ಯ ಬಿಡಬೇಕೆಂಬ ರೂಲ್ ಮಾಡಬೇಕು.

ಮೆ. ಸಿ. ಯಸ್. ಉತ್ತಯ್ಯನವರು ಈ ಠರಾವನ್ನು ಸೂಚಿಸುವಾಗ ಹೇಳಿದ್ದೇನೆಂದರೆ—ಧಾನ್ಯದಾರರ ಬಲಿಯಲ್ಲಿದ್ದವರು ಬಡವರಾಗಿದ್ದಾರೆ. ಪೂರ್ತಿ ಕೃಷಿ ಉತ್ಪತ್ತಿಯನ್ನು ಜಪ್ತಿಮಾಡಿದರೆ ಸಾಲಗಾರನಿಗೂ ಆವನ ಕುಟುಂಬಕ್ಕೂ ಏನೂ ಉಳಿಯುವದಿಲ್ಲ. ಜೀವನಕ್ಕೆ ಇಲ್ಲದಿದ್ದರೆ ಮೋಸದ ದಾರಿ ಹಿಡಿಯುತ್ತಾರೆ. ಇದರಿಂದ ಕಷ್ಟ ನಷ್ಟವಿದೆ. ಈ ರೂಲ್ ಮಾಡಿದರೆ ಕೃಷಿಕರಿಗೆ ಸಾಲವೇ ದೊರಕದು ಎಂಬ ವಾದವಿದೆ. ಕರು ಹುಟ್ಟಿ ಬಡವ ಕೆಟ್ಟ ಎಂಬ ಗಾದೆಯಿದೆ. ಆದ್ದರಿಂದ ಸಾಲಕೊಡದವರು ಆವಶ್ಯವೋ ಎಂಬದು ಸಹ ಸಂಶಯವಿದೆ. ಸರಕಾರದ ಖಾಯಿದೆಯಿಂದ ಕೃಷಿಕರಿಗೆ ಸರಕಾರವು ಸಹಾಯ ಕೊಡಬೇಕು. ಈಗಲೂ ಜಪ್ತಿಯಲ್ಲಿ ಆಯುಧಗಳು ಜೀವನಕ್ಕೆ ಬಿಡುತ್ತಿದ್ದಾರೆ. ಬಿಡುವದೂ ಬಿಡದಿರುವದೂ ಅಮೀನರ ಚಿತ್ತಕ್ಕೆ ಬಿಡದೆ ರೂಲೇ ಮಾಡಬೇಕು.

ಮೆ. ಎ. ಬಿ. ಚಂಗಪ್ಪನವರು ಅನುಮೋದಿಸಿದರು.

ಫೈನಾನ್ಸ್ ಮೆಂಬರಾದ ಕಮಿಶನರು ಠರಾವಿಗೆ ವಿರೋಧಿಸಿದರು. ಬೇರೆ ಪ್ರಾಂತ್ಯಗಳಲ್ಲಿ ಇಂಥಾ ರೂಲನ್ನು ಜಾರಿಗೆ ತಂದಿರುವಂತೆ ಕಾಣುವದಿಲ್ಲ. ನಿಬಂಧನೆ ಮಾಡಿದರೆ ಸಾಲ ಕೊಡುವವರು ಬಡ್ಡಿ ಹೆಚ್ಚಿಸುವ ಸಂಭವವಿದೆ. ಈಗಾಗಲೇ ಸಾಲಕೊಟ್ಟವರಿಗೆ ಅನ್ಯಾಯವಾಗುತ್ತದೆ.

ಮೆ. ಪಿ. ಬಿ. ಮೇದಪ್ಪನವರು—ಬೇರೆ ಕಡೆಗಳಲ್ಲಿ ಇಲ್ಲದಿದ್ದರೂ ಈ ದೇಶದಲ್ಲಿ ಮಾಡಬಾರದೆಂತ ಹೇಳುವದು ಸರಿಯಲ್ಲ. ಇಲ್ಲಿ ಬಡತನ ಹೆಚ್ಚು—ಕಷ್ಟ ಹೆಚ್ಚು— ಅಮೀನರ ಸಹಾಯ ಒ ದ್ದಿಪಂತ ಸಾಲಗಾರರಿಗೆ ನೋಡುತ್ತದೆ. ಹೆಡ್ಡರು ಹಾಳಾಗುತ್ತಾರೆ. ಕಠಿಣ ಹೃದಯದ ಸಾಹುಕಾರರುಗಳು ಸಾಲಗಾರರಿಗೆ ಏನೂ ಬಿಡುವದಿಲ್ಲ. ಅಂಥವರ ಹಿಡಿಯಿಂದ ತಪ್ಪಿಸಲೇ ಈ ರೂಲ್ ಬೇಕಾಗಿರುವದು. ಸಹಕಾರಿ ಸಂಘಗಳಿಗೆ ಈ ರೂಲಿನಿಂದ ಸಹಾಯವಾಗುತ್ತದೆ. ಸಂಘಗಳಿಗೆ ಏನೂ ದೊರಕದಂತೆ ಬಾಚಿಕೊಡುವದು ಹೋಗುವದು ನಿಲ್ಲುತ್ತೆ. ಆದ್ದರಿಂದ ಠರಾವಿಗೆ ಒತ್ತಾಸೆ ಕೊಡುತ್ತೇನೆ.

ಮೆ. ಸಿ. ಯನ್. ವೆಂಕಪ್ಪಯ್ಯನವರು ಠರಾವಿಗೆ ವಿರೋಧಿಸಿ ಈ ದೇಶದಲ್ಲಿ ಸ್ಥಿರಸೊತ್ತು ಹಣದ ಡಿಕ್ರಿಗೆ ಆಧಾರವಾಗುವದಿಲ್ಲ. ಸಾಲಕೊಟ್ಟವರಿಗೆ ವಸೂಲಿನ ದಾರಿ ಇರುವದೇ ಕೃಷಿ ಉತ್ಪತ್ತಿಯ ಮೂಲಕ. ಕೃಷಿ ಉತ್ಪತ್ತಿಯಲ್ಲಿ ಸಾಲಗಾರನ ಕುಟುಂಬಕ್ಕೆಲ್ಲಾ ಜೀವನಕ್ಕೆ ಬಿಟ್ಟರೆ ಸಾಲಕೊಟ್ಟವನಿಗೆ ಏನೂ ಸಿಕ್ಕದಿರುವ ಸಂಭವವೇ ಹೆಚ್ಚು. ಕೃಷಿಕನಿಗೆ ಸಾಲ ಹುಟ್ಟದೆ ಹೋದರೆ ಕಷ್ಟವಾಗುತ್ತದೆ. ಸಹಕಾರಿ ಸಂಘಗಳಿಗೆ ಬಾಕಿ ಇದ್ದರೂ ವಸೂಲು ಜಪ್ತಿಯಿಂದಲೇ ಸಾಲ ವಸೂಲ್ ಮಾಡುವ ಪದ್ಧತಿ ಇದೆ. ವಸೂಲು ಜಪ್ತಿಯಾಗಬಾರದೆಂತಾದರೆ ಭೂಮಿಯೇ ಹರಾಜಾಗಬೇಕಾದೀತು. ಆದ್ದರಿಂದ ಕೃಷಿಕನ ಕ್ಷೇಮಕ್ಕಾಗಿಯೇ ಈ ಠರಾವು ಮಂಜೂರಾಗಬಾರದು ಎಂತ ಹೇಳಿದರು. ಮೆ. ಸಿ. ಯಸ್. ಉತ್ತಯ್ಯನವರು ಉತ್ತರಕೊಟ್ಟ ನಂತರ ಓಟಿಗೆ ಹಾಕಲಾಯಿತು. ಪರವಾಗಿ—ಮೆ. ಗಳಾದ ಸಿ. ಯಸ್. ಉತ್ತಯ್ಯನವರು, ಮೇದಪ್ಪನವರು, ಮಂದಣ್ಣನವರು—ವಿರೋಧವಾಗಿ—ಮೆ. ಗಳಾದ ಚಾ. ಕಾ. ಸ್ವಾಮಿ, ಯನ್. ಮುದ್ದಪ್ಪನವರು, ಕ. ಕಾಲಪ್ಪನವರು, ಯಮ ಚೆಂಗಪ್ಪನವರು, ಸುಬ್ಬಪ್ಪನವರು, ವೆಂಕಪ್ಪಯ್ಯನವರು, ತಿಮ್ಮಯ್ಯಪ್ಪೂಜಾರು, ಮಿಕ್ಕವರು ಯಾವ ಕಡೆಗೂ ಓಟ್ ಮಾಡಲಿಲ್ಲ.

ಠರಾವು ಮಂಜೂರಾಗಲಿಲ್ಲ.

2 ನೇ ಠರಾವು—ಅಳತೆ ತೂಕವನ್ನು ನಿರಖುಮಾಡುವ ಖಾನೂನನ್ನು ಮಾಡಬೇಕು.

ಮೆ. ಸಿ. ಯಸ್. ಉತ್ತಯ್ಯನವರು ಈ ಠರಾವಿನ ಪರವಾಗಿ ಹೇಳಿದ್ದೇನೆಂದರೆ—ಒಂದೊಂದು ಕಡೆ ಒಂದೊಂದು ಅಳತೆ ಇರುವದರಿಂದ ತುಂಬಾ ನಷ್ಟವಿದೆ. ಎಲ್ಲವನ್ನು ತೂಕವೇ ಮಾಡಿದರೆ ಉತ್ತಮ. ಇದಕ್ಕೆ ಹೆಚ್ಚು ಕಷ್ಟವಿಲ್ಲ.

ಮೆ. ಕೆ. ಪಿ. ಕರುಂಬಯ್ಯನವರು ಅನುಮೋದಿಸಿದರು.

ಕಮಿಶನರು—ಈ ವಿಷಯ ಮೊದಲೇ ತೀರ್ಮಾನವಾಗಿ ಕೆಲವು ಕೆಲಸ ನಡೆದಿದೆ. ಇದಕ್ಕೆ ಗಮನಕೊಡಲು ಸಮಯ ದೊರಕಲಿಲ್ಲ. ಮೂರು ತಿಂಗಳ ಒಳಗೆ ಯೋಚನೆಗೆ ತೆಗೆದುಕೊಂಡೆ. ಇನ್ನೂ ಹೆಚ್ಚಿನ ತನಿಖೆ ಮಾಡಬೇಕಾಗಿ ಕಂಡುಬಂತು. ಸೇರು ಕಟ್ಟಿದರೆ ಹೆಚ್ಚು ಹಿಡಿಯುತ್ತದೆ. ಆದ್ದರಿಂದ ಒಂದೇ ನಿರಖು ಅಳತೆ ಮಾಡಿದರೂ ಕಷ್ಟವಿದೆ. ಸರಕಾರದ ಸಹಾನುಭೂತಿ ಇದೆ. ಆದರೆ ಖಾನೂನು ಮಾಡಲು ಸಾಧ್ಯವಿಲ್ಲವೆಂತ ಹೇಳಿದರು.

ಮೆ. ಪಿ. ಬಿ. ಮೇದಪ್ಪನವರು ಠರಾವಿಗೆ ವಿರೋಧಿಸಿ ಕೆಲವು ಕಡೆಯಲ್ಲಿ ಮಾತ್ರ ನಿರಖು ಮಾಡಿದರೆ ಪ್ರಯೋಜನವಿಲ್ಲ. ಇಂದಿಯಾದಲ್ಲಿ ಇರುವ ಎಷ್ಟೋ ಅಳತೆಗಳ ಜೊತೆಗೆ ಕೊಡಗಿನ ಅಳತೆಯೊಂದು ಹೆಚ್ಚು ಸೇರಿಸಿದಂತೆ ಆಗುತ್ತದಷ್ಟೆ. ನೆರೆ ದೇಶಗಳ ಅಳತೆಯನ್ನು ಖಾನೂನಿಗೆ ವಿರೋಧವೆಂತ ಮಾಡಲು ಸಾಧ್ಯವಿಲ್ಲವೆಂತ ಹೇಳಿದರು.

ಮೆ. ಎ. ಬಿ. ಚಂಗಪ್ಪನವರು ಠರಾವಿಗೆ ಒತ್ತಾಸೆಯನ್ನು ಮಾತಾಡಿದರು.

ಮೆ. ಯನ್. ಮುದ್ದಪ್ಪನವರು ಪರ ಮಾತ್ರವಲ್ಲ, ಎಲ್ಲಾ ಅಳತೆಗಳನ್ನು ನಿರಖುಮಾಡಬೇಕು. ಇಲ್ಲವಾದರೆ ಮೋಸದ ತೂಕ ಅಳತೆ ಇಡುವವರಿಗೆ ಶಿಕ್ಷೆ ಮಾಡಲು ಸಾಧ್ಯವಾಗುವದಿಲ್ಲ ಎಂತ ಮುಂತಾಗಿ ಹೇಳಿ ಠರಾವನ್ನು ಪುಷ್ಟೀಕರಿಸಿದರು.

ಮೆ. ಕುಶಾಲಪ್ಪನವರು ಕೊಡಗಿನ ಕೃಷಿಕರು ಕೃಷಿ ಉತ್ಪತ್ತಿಯನ್ನು ಮಾರಿಯೇ ಜೀವನ ನಡಿಸಬೇಕು. ಮೋಸದ ಅಭ್ಯಾಸವಿರುವ ವ್ಯಾಪಾರಿಗಳ ಬಲೆಯಿಂದ ಅವರನ್ನು ತಪ್ಪಿಸಲು ಸಹಾಯ ಕೊಡಬೇಕು. ಕೃಷಿಕರು ಚಾಪೆಯಲ್ಲಿ ಇರುವವರು ಮೋಸದ ಅಳತೆಯಿಂದ ಲೂಟಿಯಾಗುತ್ತಲಿದೆ. ಆದ್ದರಿಂದ ಅಳತೆಯು ನಿಬಂಧನೆಗೆ ಒಳಗಾಗಲೇ ಬೇಕು ಎಂತ ಹೇಳಿದರು.

ಮೆ. ವೆಂಕಪ್ಪಯ್ಯನವರು ಪರಿಷತ್ತಿನಲ್ಲಿ ರೈತರ ಕಷ್ಟವು ಬಹುಕಾಲದಿಂದಲೇ ಇದೆ. ವಿರೋಧ ಮಾಡುತ್ತೇನೆ

(7ನೇ ಪುಟದಲ್ಲಿ ಮುಂದುವರಿದಿದೆ.)

## ಮಹಾತ್ಮಗಾಂಧಿಯವರ ಸ್ವಚರಿತ್ರೆ.

### ಸತ್ಯಶೋಧನೆ.

೫ನೇ ಭಾಗದಲ್ಲಿ ೧೪ನೇ ಪ್ರಕರಣ

ಚಂಪಾರಣ್ಯದ ರೈತರ ಪರಿಸ್ಥಿತಿಯನ್ನು ವಿಮರ್ಶಿಸಿ ಅವರು ನೀಲಿಯ ಜಮೀನ್ದಾರರ ವಿಷಯವಾಗಿ ಹೇಳುತ್ತಿದ್ದ ಆರೋಪಣೆಗಳನ್ನರಿಯುವುದು ನನ್ನ ಉದ್ದೇಶವಾಗಿದ್ದಿತು. ಇದಕ್ಕಾಗಿ ನಾನು ಸಾವಿರಾರು ರೈತರನ್ನು ಕಾಣುವುದು ಆವಶ್ಯಕವಾಗಿದ್ದಿತು. ವಿಮರ್ಶೆಯನ್ನು ಆರಂಭಿಸುವುದಕ್ಕೆ ಮುಂಚೆ ಈ ವ್ಯಾಜ್ಯದಲ್ಲಿ ಜಮೀನ್ದಾರರ ಪಕ್ಷವನ್ನು ತಿಳಿದುಕೊಳ್ಳುವುದೂ ಆ ಪ್ರಾಂತ್ಯ ವಿಭಾಗದ ಅಧಿಕಾರಿಗಳನ್ನು ಭೇಟಿ ಮಾಡುವುದೂ ಅತಿಮುಖ್ಯವೆಂದು ನಾನು ಎಣಿಸಿದೆನು. ಇಬ್ಬರಿಗೂ ನನ್ನ ಆಶಯವನ್ನು ತಿಳಿಸಿ ಪತ್ರಬರೆದೆನು. ಇಬ್ಬರೂ ನನ್ನನ್ನು ನೋಡಲು ಕಾಲವನ್ನು ನಿರ್ಣಯಿಸಿ ತಿಳಿಸಿದರು.

ಜಮೀನ್ದಾರ ಸಂಘದ ಕಾರ್ಯದರ್ಶಿಗಳು ಮುಚ್ಚುಮರೆಯಿಲ್ಲದೆ ನಾನು ಹೊರಗಿನವನೆಂದೂ ಜಮೀನ್ದಾರರುಗಳ ಅವರ ರೈತರುಗಳ ಮಧ್ಯೆ ಬರುವುದಕ್ಕೆ ಯಾವ ಅಧಿಕಾರವೂ ಇಲ್ಲವೆಂದೂ, ಆದರೂ ನಾನೇನಾದರೂ ತಿಳಿಸಬೇಕಾಗಿದ್ದರೆ ಅದನ್ನು ಬರಹದ ಮೂಲಕ ಕೊಡಬೇಕೆಂದೂ ನನಗೆ ಹೇಳಿದರು. ಇದಕ್ಕೆ ನಾನು ಹೊರಗಿನವನೆಂದು ನನ್ನ ಎಣಿಕೆಯಲ್ಲವೆಂದೂ ರೈತರು ಹಾಗೆ ಇಷ್ಟಪಟ್ಟರೆ ನಾನು ಅವರ ಸ್ಥಿತಿಗತಿಗಳನ್ನು ವಿಚಾರಿಸಲು ನನಗೆ ಸಂಪೂರ್ಣ ಅಧಿಕಾರ ಉಂಟೆಂದೂ ಕಾರ್ಯದರ್ಶಿಗಳಿಗೆ ವಿನಯಪೂರ್ವಕವಾಗಿ ಹೇಳಿದೆನು.

ಪ್ರಾಂತ್ಯ ವಿಭಾಗದ ಅಧಿಕಾರಿಗಳನ್ನು ಭೇಟಿಮಾಡಲು ಅವರು ನನ್ನನ್ನು ಬೆದರಿಸತೊಡಗಿ ನಾನು ತಿರಹುತ್ ಪ್ರಾಂತ್ಯವನ್ನು ಬಿಟ್ಟು ಹೋಗಬೇಕೆಂದು ಸೂಚಿಸಿದರು.

ನಾನು ಇದನ್ನೆಲ್ಲಾ ನನ್ನ ಜೊತೆಯವರಿಗೆ ತಿಳಿಸಿ "ನಾನು ಮುಂದೆ ಹೋಗದಂತೆ ನನ್ನನ್ನು ಸರಕಾರದವರು ತಡೆಯುವ ಸಂಭವವುಂಟು. ನಾನು ಎಣಿಸುದಕ್ಕಿಂತ ಮುಂಚೆಯೇ ನಾನು ಸೆರೆಮನೆಗೆ ಹೋಗಬೇಕಾಗಬಹುದು. ನನ್ನನ್ನು ಬಂಧಿಸುವುದೇ ಆದರೆ ನನ್ನ ಬಂಧನವು ಮೋತೀಹಾರಿಯಲ್ಲಿ, ಸಾಧ್ಯವಿದ್ದರೆ ಬೇತಿಯಾದಲ್ಲಿ ಆಗುವುದು ಅತ್ಯುತ್ತಮ. ಆದುದರಿಂದ ಆ ಸ್ಥಳಗಳಿಗೆ ನಾನು ಆದಷ್ಟು ತ್ವರಿತದಿಂದ ಹೋಗುವುದು ಒಳ್ಳೆಯದು" ಎಂದು ಹೇಳಿದೆನು.

ಚಂಪಾರಣ್ಯವು ತಿರಹುತ್ ಪ್ರಾಂತ್ಯ ವಿಭಾಗದ ಒಂದು ಜಿಲ್ಲೆ. ಮೋತೀಹಾರಿಯು ಅದರ ಮುಖ್ಯಪಟ್ಟಣ. ರಾಜಕುಮಾರ ಶುಕ್ಲರ ಸ್ಥಳವು ಬೇತಿಯಾದ ಹತ್ತಿರವಿದ್ದಿತು. ಅದರ ಸುತ್ತಮುತ್ತಲಿನ ಕೋಠಿ (ನೀಲಿಯನ್ನು ಶೇಖರಿಸುವ ಜಾಗ)ಗಳಿಗೆ ಸೇರಿದ್ದ ರೈತರು ಆ ಜಿಲ್ಲೆಯಲ್ಲೆಲ್ಲಾ ಅತ್ಯಂತ ಬಡವರಾಗಿದ್ದರು. ನಾನು ಅವರನ್ನು ನೋಡಬೇಕೆಂದು ರಾಜಕುಮಾರ ಶುಕ್ಲರಿಗೆ ತೀವ್ರವಾದ ಇಚ್ಛೆಯಿದ್ದಿತು. ನನ್ನ ಬಯಕೆಯೂ ಅಷ್ಟೇ ಪ್ರಬಲವಾಗಿದ್ದಿತು.

ಆದುದರಿಂದ ಅದೇ ದಿನ ನಾನು ನನ್ನ ಸಂಗಡಿಗರೊಡನೆ ಮೋತೀಹಾರಿಗೆ ಹೊರಟೆನು. ಬಾಬೂ ಗೋರಖಪ್ರಸಾದರು ನಮಗೆ ಅವರ ಮನೆಯಲ್ಲಿ ಇಳಿಸಿಕೊಟ್ಟರು. ಅದೊಂದು ಧರ್ಮಶಾಲೆಯಾಯಿತು. ನಾವೆಲ್ಲರೂ ಅದರಲ್ಲಿ ಹಿಡಿಸುವುದು ಕಷ್ಟವಾಗಿದ್ದಿತು. ಮೋತೀಹಾರಿಯಿಂದ ಸುಮಾರು ಐದು ಮೈಲಿ ದೂರದಲ್ಲಿ ಒಬ್ಬ ರೈತನ ಮೇಲೆ ಅತ್ಯಾಚಾರ ನಡೆಸಿದ ವರ್ತಮಾನವು ನಮಗೆ ಆ ದಿನವೇ ಬಂದಿತು. ಮಾರನೆಯ ದಿನ ಬೆಳಿಗ್ಗೆ ನಾನು ಧರಣೀಧರ ಪ್ರಸಾದರೊಡನೆ ಹೋಗಿ ಅವನನ್ನು ನೋಡಿಕೊಂಡು ಬರಬೇಕೆಂದು ನಿಶ್ಚಯವಾಯಿತು. ಅದರಂತೆಯೇ ನಾವು ಆನೆಯ ಮೇಲೆ ಅಲ್ಲಿಗೆ ಹೊರಟೆವು. ಗುಜರಾತಿನಲ್ಲಿ ಎತ್ತಿನ ಗಾಡಿಯು ಎಷ್ಟು ಸಾಧಾರಣವೋ ಚಂಪಾರಣ್ಯದಲ್ಲಿ ಆನೆಯು ಅಷ್ಟು ಸಾಮಾನ್ಯವೆಂದು ಹೇಳಬೇಕು. ನಾವು ಅರ್ಧ ದಾರಿ ಹೋಗುವಷ್ಟರಲ್ಲಿಯೇ ಪೋಲೀಸ್ ಅಧಿಕಾರಿಗಳ ಸೇವಕನೊಬ್ಬನು ನಮ್ಮ ಬಳಿಗೆ ಬಂದು ಸೇರಿ ಪೋಲೀಸ್ ಅಧಿಕಾರಿಗಳ ವಂದನೆಯನ್ನು ನನಗೆ ತಿಳಿಸಿದನು. ಅದರ ಅರ್ಥವು ನನಗೆ ಗೊತ್ತಾಯಿತು. ಧರಣೀಧರಬಾಬುಗಳನ್ನು ಮುಂದಕ್ಕೆ ಹೋಗುವುದಕ್ಕೆ ಬಿಟ್ಟು ನಾನು ಸೇವಕನು ತಂದಿದ್ದ ಬಾಡಿಗೆ ಗಾಡಿಯೊಳಗೆ ಕುಳಿತುಕೊಂಡೆನು. ಆಗ ಅವನು ನಾನು ಚಂಪಾರಣ್ಯವನ್ನು ಬಿಟ್ಟು ಹೋಗಬೇಕೆಂದು ಬರೆದಿದ್ದ ಆಜ್ಞಾಪತ್ರವನ್ನು ನನಗೆ ಕೊಟ್ಟು ನನ್ನ ಸ್ಥಳಕ್ಕೆ ನನ್ನನ್ನು ಕರೆದೊಯ್ದನು. ಆ ಆಜ್ಞಾಪತ್ರವು ನನಗೆ ತಲುಪಿದುದಕ್ಕೆ ಸಹಿಮಾಡಬೇಕೆಂದು ಅವನು ನನ್ನನ್ನು ಕೇಳಲು ನಾನು ಅದನ್ನನುಸರಿಸಿ ರೈತರ ಸ್ಥಿತಿಗತಿಗಳನ್ನು ಪರಿಶೀಲಿಸುವ ತನಕ ಚಂಪಾರಣ್ಯವನ್ನು ಬಿಡುವ ಉದ್ದೇಶವು ನನಗಿಲ್ಲವೆಂದು ಅದರಲ್ಲಿ ಬರೆದೆನು. ಇದಾದ ಮೇಲೆ ನಾನು ಈ ಬಹಿಷ್ಕಾರ ನಿರೂಪವನ್ನು ಧಿಕ್ಕರಿಸಿದುದಕ್ಕಾಗಿ ವಿಚಾರಣೆಗೆ ಮರುದಿನವೇ ಬರಬೇಕೆಂದು ನನಗೆ ಸಮನ್ಸ್ ಬಂದಿತು.

ನಾನು ಆ ಇರುಳೆಲ್ಲಾ ಎಚ್ಚರವಿದ್ದು ಕಾಗದಗಳನ್ನು ಬರೆಯುವುದರಲ್ಲಿಯೂ ಬಾಬೂ ವ್ರಜಕಿಶೋರ ಪ್ರಸಾದರಿಗೆ ಸಲಹೆಗಳನ್ನು ಕೊಡುವುದರಲ್ಲಿಯೂ ಕಳೆದೆನು.

ಎಚ್ಚರಿಕೆ ಪತ್ರವೂ ಸಮನ್ಸೂ ನನಗೆ ಬಂದ ವೃತ್ತಾಂತವು ಕಾಡುಕಿಚ್ಚಿನಂತೆ ಹರಡಿತು. ಆ ದಿನ ಮೋತೀಹಾರಿಯು ಹಿಂದೆ ಎಂದೂ ನೋಡದ ದೃಶ್ಯವು ಕಂಡುಬಂದಿತೆಂದು ಹೇಳಿಯಿತು. ಗೋರಖಬಾಬುಗಳ ಮನೆಯೂ ನ್ಯಾಯಸ್ಥಾನವೂ ಜನರಿಂದ ತುಂಬಿ ತುಳುಕುತ್ತಿದ್ದಿತು. ಸೌಭಾಗ್ಯವಶಾತ್ ನಾನು ರಾತ್ರಿಯೇ ನನ್ನ ಕೆಲಸವನ್ನೆಲ್ಲಾ ಮುಗಿಸಿದ್ದುದರಿಂದ ಜನರ ಗುಂಪನ್ನು ತಡೆಯಲು ಸಾಧ್ಯವಾಯಿತು. ನನ್ನ ಜೊತೆಯವರಿಂದ ಅತ್ಯಂತ ಸಹಾಯವಾಯಿತು. ಅವರು ಜನರನ್ನು ಅಂಕೆಯಲ್ಲಿಡುವುದರಲ್ಲಿ ಉದ್ಯುಕ್ತರಾದರು. ಏಕೆಂದರೆ ನಾನೆಲ್ಲಿ ಹೋದರೂ ಜನಗಳು ನನ್ನನ್ನು ಹಿಂಬಾಲಿಸುತ್ತಿದ್ದರು.

ಜಿಲ್ಲಾಧಿಕಾರಿಗಳ, ಮ್ಯಾಜಿಸ್ಟ್ರೇಟರು, ಪೋಲೀಸ್ ಸುಪರಿಂಟೆಂಡೆಂಟರು, ನಾನು— ಈ ನಮ್ಮಗಳ ಮಧ್ಯೆ ಒಂದು ರೀತಿಯ ಮೈತ್ರಿಯು ಉದಿಸಿತು. ನನ್ನ ಮೇಲೆ ಪ್ರಯೋಗಿಸಿದ 'ನೋಟೀಸ್' ಮುಂತಾದುವನ್ನು ನಾನು ಕಾನೂನಿನ ಪ್ರಕಾರವಾಗಿಯೇ ವಿರೋಧಿಸಬಹುದಾಗಿದ್ದಿತು. ಇದಕ್ಕೆ ಬದಲಾಗಿ ನಾನು ಅವುಗಳನ್ನೆಲ್ಲಾ ಸ್ವೀಕರಿಸಿದೆನು. ಅಧಿಕಾರಿಗಳ ವಿಷಯದಲ್ಲಿ ನನ್ನ ನಡತೆಯು ಅನಿರ್ವಚನೀಯವಾಗಿತ್ತು. ನಾನು ಅವರನ್ನು ವ್ಯಕ್ತಿಗತವಾಗಿ ವಿರೋಧಿಸಲಿಲ್ಲವೆಂದೂ ಅವರ ಆಜ್ಞೆಗಳನ್ನು ಸವಿನಯವಾಗಿ ವಿರೋಧಿಸುವುದೇ ನನ್ನ ಉದ್ದೇಶವೆಂದೂ ಅವರಿಗೆ ಅರಿವಾಯಿತು. ಈ ರೀತಿಯಾಗಿ ಅವರ ಮನಸ್ಸು ನಿರಾತಂಕವಾಗಿ ಅವರು ನನ್ನನ್ನು ಪೀಡಿಸುವುದಕ್ಕೆ ಪ್ರತಿಯಾಗಿ ಜನರ ಗುಂಪನ್ನು ಅಂಕೆಯಲ್ಲಿಡುವ ಕೆಲಸಕ್ಕೆ ನನ್ನ ಮತ್ತು ನನ್ನ ಸಂಗಡಿಗರ ಸಹಾಯವನ್ನು ಸಂತೋಷದಿಂದ ಉಪಯೋಗಿಸಿಕೊಂಡರು. ಆದರೆ ತಮ್ಮ ಅಧಿಕಾರದರ್ಪವು ಸಡಲಿತೆಂಬುದು ಕೂಡ ಇದರಿಂದ ಅವರ ಕಣ್ಣಿಗೆ ವ್ಯಕ್ತವಾಯಿತು. ಜನರು ಆ ಕ್ಷಣಿಕವಾಗಿ ದಂಡನೆಯ ಭಯವನ್ನು ತ್ಯಜಿಸಿ ತಮ್ಮ ಹೊಸಮಿತ್ರನ ಪ್ರೇಮಶಕ್ತಿಗೆ ಮಣಿದಿದ್ದರು.

ಚಂಪಾರಣ್ಯದಲ್ಲಿ ನನಗೆ ಯಾರ ಪರಿಚಯವೂ ಇರಲಿಲ್ಲವೆಂಬುದನ್ನು ನೆನಪಿನಲ್ಲಿಡಬೇಕು. ರೈತರೆಲ್ಲಾ ಏನೂ ಅರಿಯದವರಾಗಿದ್ದರು. ಚಂಪಾರಣ್ಯವು ಗಂಗಾನದಿಗೆ ಉತ್ತರದಲ್ಲಿ ಬಹು ದೂರದಲ್ಲಿ ಹಿಮವತ್ಪರ್ವತದ ತಪ್ಪಲಿನಲ್ಲಿ ನೇಪಾಳಕ್ಕೆ ಅತಿಸಮೀಪದಲ್ಲಿದ್ದು ದೇಶದ ಇತರ ಭಾಗದ ಸಂಪರ್ಕವಿಲ್ಲದೆ ಇದ್ದಿತು. ಆ ಪ್ರಾಂತ್ಯದಲ್ಲಿ ಮಹಾಸಭೆಯು ಹೆಸರೇ ಗೊತ್ತಿರಲಿಲ್ಲವೆನ್ನಬಹುದು. ಮಹಾಸಭೆಯ ಹೆಸರನ್ನು ಕೇಳಿದ್ದವರು ಕೂಡ ಅದಕ್ಕೆ ಸೇರುವುದಕ್ಕಾಗಲಿ ಅದರ ಹೆಸರನ್ನು ಉಚ್ಚರಿಸುವುದಕ್ಕಾಗಲಿ ಹೆದರಿ ಹಿಂದೆಗೆಯುತ್ತಿದ್ದರು. ಈಗ ಇದು ಮಹಾಸಭೆಯೂ ಅದರ ಸದಸ್ಯರೂ ಮಹಾಸಭೆಯ ಹೆಸರಿನಲ್ಲಿಲ್ಲದಿದ್ದರೂ ಅತ್ಯಂತ ವಾಸ್ತವಿಕವಾಗಿ ಆ ಪ್ರಾಂತವನ್ನು ಹೊಕ್ಕಿದ್ದರು.

ನನ್ನ ಜೊತೆಯವರ ಸಲಹೆಯನ್ನು ಕೇಳಿಕೊಂಡು ನಾನು ಯಾವ ಕೆಲಸವೂ ಮಹಾಸಭೆಯ ಹೆಸರಿನಲ್ಲಿ ನಡೆಯಬಾರದೆಂದು ನಿರ್ಧರಿಸಿದ್ದೆನು. ನಮಗೆ ಬೇಕಾಗಿದ್ದುದು ಕೀರ್ತಿಯಲ್ಲ, ಕಾರ್ಯ, ಹೆಸರಲ್ಲ, ತಿರುಳು. ಏಕೆಂದರೆ ಸರಕಾರವೂ ಮತ್ತು ಅವರ ಸೂತ್ರಧಾರಿಗಳಾದ ಜಮೀನ್ದಾರರೂ ಮಹಾಸಭೆಯನ್ನು ಕ್ರೋಧದಿಂದಲೂ ತಿರಸ್ಕಾರದಿಂದಲೂ ಕಾಣುತ್ತಿದ್ದರು. ಅವರ ದೃಷ್ಟಿಯಲ್ಲಿ ಮಹಾಸಭೆಯೆಂದರೆ ವಕೀಲರ ಕಿತ್ತಾಟ, ಕಾನೂನಿನ ಒಡಕುಗಳನ್ನು ಹುಡುಕಿ ಆಕ್ರಮ ಕಾರ್ಯನಡೆಸುವುದು, ಅನಾಯಕತ್ವದ ಅಕೃತ್ಯಗಳು, ವ್ಯವಹಾರ ಚಾತುರ್ಯ, ಅನಾಥವಿಧ್ವಂಸ—ಇವೆಲ್ಲಕ್ಕೂ ತೌರುಮನೆಯಾಗಿದ್ದಿತು. ಆದುದರಿಂದ ನಾವು ಅವರಿಬ್ಬರ ತಪ್ಪು ತಿಳುವಳಿಕೆಯನ್ನೂ ಹೋಗಲಾಡಿಸಬೇಕಾಗಿದ್ದಿತು. ಆದುದರಿಂದ ನಾವು ಮಹಾಸಭೆಯ ಹೆಸರನ್ನು ಎತ್ತದಿರಲೂ ರೈತರಿಗೆ ಜನಗಳಿಗೆ ಮಹಾಸಭೆಯೆಂಬ ಸಂಸ್ಥೆಯ ಇರುವನ್ನು ಹೇಳದಿರಲೂ ನಿಶ್ಚಯಿಸಿದೆವು. ಅವರು ಮಹಾಸಭೆಯ ಅಂತಃಕರಣವನ್ನರಿತು ಅದನ್ನನುಸರಿಸಿದರೆ ಸಾಕು, ಅಕ್ಷರಶಃ ಅದನ್ನು ಅವಲಂಬಿಸಬೇಕಾದುದಿಲ್ಲ ಎಂಬುದೇ ನಮ್ಮ ಅಭಿಪ್ರಾಯವಾಗಿದ್ದಿತು.

ಆದುದರಿಂದ ನಮ್ಮ ಆಗಮನಕ್ಕೆ ಮುಂಚೆ ದಾರಿ ತೆಯನ್ನು ಸಿದ್ಧಗೊಳಿಸಲು ಮಹಾಸಭೆಯ ಪರವಾಗಿ ಗುಪ್ತಚಾರರನ್ನಾಗಲಿ ಇತರರನ್ನಾಗಲಿ ಕಳುಹಿಸಲಿಲ್ಲ. ರಾಜಕುಮಾರ ಶುಕ್ಲರಿಗೆ ಸಾವಿರಾರು ಮಂದಿ ರೈತರ ಹೃದಯವನ್ನು ಹೊಗುವುದು ಸಾಧ್ಯವಿರಲಿಲ್ಲ. ಅವರ ಮಧ್ಯೆ ರಾಜಕೀಯ ಕಾರ್ಯವೇನನ್ನೂ ಇನ್ನೂ ಮಾಡಿರಲಿಲ್ಲ. ಚಂಪಾರಣ್ಯದ ಹೊರಗಿನ ಲೋಕವು ಅವರಿಗೆ ಗೊತ್ತಿರಲಿಲ್ಲ. ಆದರೂ ನಾವು ಆ ಜನ್ಮಮಿತ್ರರೋ ಎಂಬಂತೆ ಅವರು ನಮ್ಮನ್ನು ಬರಮಾಡಿಕೊಂಡರು. ಈ ರೀತಿಯಾಗಿ ನಾವು ಸೇರಿದಾಗ ನನಗೆ ಈಶ್ವರನ, ಅಹಿಂಸೆಯ ಮತ್ತು ಸತ್ಯದ ಸಾಕ್ಷಾತ್ಕಾರವಾಯಿತೆಂದು ಹೇಳಿದರೆ ಅದು ಅಕ್ಷರಶಃ ನಿಜವೇ ಹೊರತು ಅತಿಶಯೋಕ್ತಿಯಲ್ಲ.

ಈ ಸಾಕ್ಷಾತ್ಕಾರ ಸಿದ್ಧಿಗೆ ನನಗಿದ್ದ ಅಧಿಕಾರವೇನೆಂದು ನಾನು ಯೋಚಿಸಿದರೆ ನಾನು ಜನರಲ್ಲಿಟ್ಟಿದ್ದ ಪ್ರೇಮವನ್ನುಳಿದು ಬೇರೊಂದೂ ಕಾಣುವುದಿಲ್ಲ. ಇದು ತಾನೆ ಏನು? ಅಹಿಂಸೆಯಲ್ಲಿ ನನಗಿರುವ ಅಚಲಶ್ರದ್ಧೆಯಲ್ಲದೆ ಇನ್ನೇನೂ ಅಲ್ಲ.

ಚಂಪಾರಣ್ಯದಲ್ಲಿ ಕಳೆದ ಆ ದಿನವನ್ನು ನನ್ನ ಜೀವನದಲ್ಲಿ ಎಂದೂ ಮರೆಯಲಾಗುವುದಿಲ್ಲ. ಅಲ್ಲಿನ ಜನರಿಗೂ ನನಗೂ ಆ ದಿನವು ಅಪೂರ್ವವಾದ ಸುದಿನ.

ಕಾನೂನಿನ ಪ್ರಕಾರವೇನೋ ನನ್ನ ವಿಚಾರಣೆಯಾಗಬೇಕಾಗಿದ್ದಿತು. ಆದರೆ ನಿಜವಾಗಿ ಸರಕಾರವೇ ಬಂದು ಪ್ರತಿವಾದಿಯ ಸ್ಥಾನದಲ್ಲಿದ್ದಿತು. ಪ್ರಾಂತ್ಯವಿಭಾಗಾಧಿಕಾರಿಗಳು ನನಗಾಗಿ ಒಡ್ಡಿದ್ದ ಪ್ರಯತ್ನದ ಫಲವಾಗಿ ಸರಕಾರವನ್ನು ಆಡಿದಬಲೆಗೆ ಸಿಕ್ಕಿಸಿದರು.

---

## ಹಣ್ಣುಗಳಲ್ಲಿ ಕಿತ್ತಳೆಹಣ್ಣು ಬಹಳ ಶ್ಲಾಘ್ಯವಾದುದು.

ಕಿತ್ತಳೆಹಣ್ಣುಗಳು ಬಹಳ ರುಚಿಯಾಗಿರುವುದರೊಡನೆ ಒಳ್ಳೇ ವ್ಯಾಧಿನಿವಾರಕ ಶಕ್ತಿಯಿಂದ ಕೂಡಿವೆ.

ಮಹೋದರಕ್ಕೆ ಕಿತ್ತಳೆಯ ಹಣ್ಣು ಬಹು ಉತ್ತಮವಾದ ಔಷಧಿಯೆಂದು ಡಾಕ್ಟರ್ ನೆಸ್ಪೋರೋಕ್ ಎಂಬವರು ನಿರ್ಧರಿಸಿರುವರು.

ಹಾಲು ಮತ್ತು ಕೋಳಿಮೊಟ್ಟೆ, ಇವುಗಳೊಡನೆ ಕಿತ್ತಳೆ ಹಣ್ಣಿನ ರಸವನ್ನು ಸೇರಿಸಿದರೆ, ಮಕ್ಕಳಿಗೆ ಅತ್ಯುತ್ತಮವಾದ ಆಹಾರವಾಗುವುದು.

ಕಿತ್ತಳೆಯ ಹಣ್ಣಿನ ರಸದಲ್ಲಿ ಮೂಳೆಯನ್ನು ದೃಢಪಡಿಸುವ ಗುಣವಿರುವುದೆಂದು ಈಚೆಗೆ ರಸಾಯನ ಶಾಸ್ತ್ರಜ್ಞರ ಶೋಧನೆಗಳಿಂದ ಕಂಡುಬಂದಿದೆ. ಚಿಕ್ಕಮಕ್ಕಳ ಆಹಾರದೊಡನೆ ಕಿತ್ತಳೆಯ ಹಣ್ಣಿನ ರಸವನ್ನು ಸೇರಿಸಿ ಕೊಡುವುದರಿಂದ, ಅವುಗಳ ಮೂಳೆಯು ಬೇಗನೆ ಚೆನ್ನಾಗಿ ಬಲಿಯುವುವು. ಅನೇಕಮಂದಿ ತಾಯಿಯರು ತಮ್ಮ ಮಕ್ಕಳಿಗೆ ಪ್ರತಿದಿನವೂ ಕಿತ್ತಳೆಯ ಹಣ್ಣಿನ ರಸವನ್ನು ಕೊಡುವರು. ಚಿಕ್ಕ ವಯಸ್ಸಿನಲ್ಲಿ ಬಾಲಕರು ಆಶಾಪೂರ್ವಕವಾಗಿ ಸೇವಿಸಿದ ಕಿತ್ತಳೆಯ ಹಣ್ಣುಗಳು, ಅವರು ವಯಸ್ಕರಾದ ಮೇಲೆ ಧೀರೋದಾತ್ತರಾಗಿ ಬಾಳಲು ಅನುಕೂಲಿಸುವಂತೆ, ಅವರ ಅಸ್ಥಿಪಂಜರಗಳು ಒಳ್ಳೇ ದಾರ್ಢ್ಯವನ್ನೂ, ಪುಷ್ಟಿಯನ್ನೂ ತಾಳಲು ಅವಕಾಶ ಕೊಡುವುವು. ಕಿತ್ತಳೆಯ ಹಣ್ಣನ್ನೇ ಸೇವಿಸಿದ ಮಕ್ಕಳು ಆ ಹಣ್ಣಿನ ರಸದಿಂದ ಮಾತ್ರವಲ್ಲದೆ ಅವರ ಇತರ ಆಹಾರಗಳಿಂದಲೂ ಕಾಲ್ಸಿಯಂ ಎಂಬ ಭಾಗವನ್ನು ವಿಶೇಷವಾಗಿ ಪಡೆಯುವರು. ಕಿತ್ತಳೆಯ ಹಣ್ಣುಗಳಲ್ಲಿರುವ ವಿಟಮಿನ್‌ಗಳು, ಇತರ ಆಹಾರಪದಾರ್ಥಗಳಲ್ಲಿರುವ ಸಾರವನ್ನೆಲ್ಲ ದೇಹವು ಚೆನ್ನಾಗಿ ಸಂಗ್ರಹಿಸುವಂತೆ ಮಾಡುವುವು.

'ಹೋಮ್' ಅಂಡ್ ಹೋಮಿಯೋಪತಿ

## ಇದನ್ನು ಓದಿ ನಗಬೇಡಿರಿ!!

ಮನುಷ್ಯನ ನಗೆಯ ವಿಷಯವಾಗಿ ಅನೇಕ ಶೋಧನೆ ... ಪಂಡಿತನೊಬ್ಬ ... ಬರೆದಿರುವನು.

ಬೇರೆ ಎಲ್ಲಾ ಮಾರ್ಗಗಳಿಗಿಂತಲೂ, ಮನುಷ್ಯನ ಸ್ವಭಾವಗಳನ್ನು ಅವರವರು ನಗುವ ರೀತಿಯಿಂದ ಬಹಳ ನಿರ್ಣಯವಾಗಿ ಕಂಡುಕೊಳ್ಳಬಹುದು.

(1) ನಾನಾಂತರದ ನಗೆಗಳಲ್ಲಿ 'ಹ ಹ್ಹ ಹ್ಹ!' ಎಂದು ನಗುವುದೇ ಉತ್ತಮಗುಣಸೂಚಕವು. ಹಾಗೆ ನಗುವವನು ನಿಷ್ಕಪಟಸ್ವಭಾವವನ್ನು ತೋರಿಸುವುದು.

(2) 'ಹಿ ಹ್ಹಿ ಹ್ಹಿ!' ಎಂದು ನಗುವ ಮನುಷ್ಯನಲ್ಲಿ ಯಾವಾಗಲೂ ಕೋಪಸ್ವಭಾವವೂ ಮನೋವಿಕಾರವೂ ಹೆಚ್ಚಾಗಿರುವುದು.

(3) 'ಹಿ ಹ್ಹಿ ಹ್ಹಿ!' ಎಂಬ ನಗೆಯ ರೀತಿಯು ಆ ಮನುಷ್ಯನ ಮನೋದಾರ್ಢ್ಯವಿಲ್ಲದ ಚಂಚಲ ಸ್ವಭಾವದವನೆಂದು ತೋರಿಸುವುದು.

(4) ಯಾವಾಗಲೂ ಸಂತೋಷಚಿತ್ತನಾದವನು ನಗುವುದರಲ್ಲಿ 'ಹೊ ಹ್ಹೊ ಹ್ಹೋ!" ಎಂಬ ಶಬ್ದವು ಬರುವುದು.

(5) ಎಲ್ಲಕ್ಕಿಂತಲೂ ಹೀನವಾಗಿ ಮನುಷ್ಯನ ಕಾಪಟ್ಯ ಮತ್ತು ಅಲ್ಪ ಸ್ವಭಾವವನ್ನು ತೋರಿಸತಕ್ಕ ನಗೆಯು 'ಹು ಹ್ಹು ಹ್ಹು" ಎಂಬುದು.

ನೀವು ಈ ಮೇಲೆಹೇಳಿದ 'ಹು ಹ್ಹು ಹ್ಹು" ಎಂಬ ನಗೆಯನ್ನು ನೋಡಿದೊಡನೆ, ಅಂತವನ ವಿಷಯದಲ್ಲಿ ಬಹಳ ಎಚ್ಚರದಿಂದಿರಬೇಕು. ಆತನವರನ್ನು ನಂಬಬಾರದು. ದೂರದಲ್ಲಿರಿಸಬೇಕು. ನೀವು ಕೂಡ, ನಿಮ್ಮ ನಗೆಯಲ್ಲಿ ಅಂತಹ ದೋಷಗಳೇನಾದರೂ ಕಂಡು ಬಂದರೆ, ಅದನ್ನು ತಿದ್ದಿಕೊಳ್ಳುವ ಪ್ರಯತ್ನ ಮಾಡಿರಿ. "ಹ! ಹ್ಹ! ಹ್ಹ!' ಅಥವಾ 'ಹೊ! ಹ್ಹೊ! ಹ್ಹೊ!' ಎಂದು ನಗುವ ರೀತಿಯನ್ನು ಅಭ್ಯಾಸಮಾಡಿರಿ."

## ಜಲ ಪಾನ.

ನೀರು ಸಾಮಾನ್ಯವಾಗಿ ಆಹಾರಗಳ ವರ್ಗಕ್ಕೆ ಸೇರಿಸಲ್ಪಡುವುದಿಲ್ಲ. ಆದರೂ ಶರೀರಪುಷ್ಟಿಗೆ ಅವಶ್ಯವಾದ ವಸ್ತುಗಳಲ್ಲಿ ನೀರು ಬಹಳ ಮುಖ್ಯವಾದುದು. ನಿಮ್ಮ ದೇಹದ ತೂಕದ, ಮತ್ತು ಆಕೃತಿಯ ಆರ ಭಾಗದಲ್ಲಿ ಐದು ಭಾಗವು ಜಲಾಂಶವಾಗಿದೆ. ಶರೀರ ರಚನೆಯಲ್ಲಿ ಸೇರಿರುವ ಪದಾರ್ಥಗಳಲ್ಲಿ ಇತರ ವಸ್ತುಗಳನ್ನು ಗ್ರೇಯಿನ್‌ಗಳು, ಡ್ರಾಮುಗಳು, ಪೌಂಡುಗಳೆಂದು ಮಾತ್ರ ಲೆಖ್ಖ ಮಾಡುವರು. ನೀರಾದರೋ ಬಂದಿಗೆಗಳ ಲೆಕ್ಕದಲ್ಲಿ ಆರೋಗ್ಯಶಾಲಿಯಾದ ಪುರುಷನ ಅಥವಾ ಸ್ತ್ರೀಯ ದೇಹವಾಗಿರುವುದು. ಮನುಷ್ಯರ ದೇಹದಲ್ಲಿ ನಡೆಯುವ ಸ್ವಾಭಾವಿಕಗಳಾದ ಮತ್ತು ವಿಶೇಷ ತರದ ಕೆಲಸಗಳನ್ನು ಮಾಡಲು ಸಹಕಾರಿಯಾದುದು ನೀರೇ. ಜೀರ್ಣರಸ ಮುಂತಾದ ದ್ರವಪದಾರ್ಥಗಳಲ್ಲಿ ಮುಖ್ಯವಾಗಿ ಈ ವಸ್ತುವೇ ಅಧಿಕವಾಗಿರುವುದು. ಆದುದರಿಂದ, ದೇಹದ ಎಲ್ಲಾ ಕೆಲಸಗಳಿಗೂ ನೀರು ಧಾರಾಳವಾಗಿ ಒದಗುತ್ತಿದ್ದರೆ ಮಾತ್ರ ಒಳ್ಳೆಯದು. ಮಾನುಗಳು ಹೇಗೆ ನೀರಿನಲ್ಲಿಯೋ ಹಾ

ದುಕಬಲ್ಲವೋ ಹಾಗೆಯೇ ನಮ್ಮ ರಕ್ತನಾಳಗಳೂ ನೀರಿನೊಳಗೇ ಇದ್ದು ಕೆಲಸ ಮಾಡಿದರೆ ಅವು ತಮ್ಮ ಕೆಲಸಗಳನ್ನು ಸಾಂಗವಾಗಿ ನಡೆಸಬಲ್ಲವು.

ಮನುಷ್ಯನು ಆರೋಗ್ಯವಂತನಾಗಿ ಬಾಳಬೇಕಾದರೆ ಕಾಲುವೆಯಲ್ಲಿ ನೀರು ಯಾವರೀತಿಯಲ್ಲಿ ಅವಿಛಿನ್ನವಾಗಿ ಹರಿಯುತ್ತಿರುವುದೋ, ಹಾಗೆಯೇ ದೇಹದ ಕಾಲುವೆಗಳಲ್ಲಿ ಶುದ್ಧವಾದ ನೀರು ಪ್ರವಹಿಸುತ್ತಿರಬೇಕು ಇದರಿಂದ ನಾಳಗಳಲ್ಲಿ ವಿಷಪದಾರ್ಥಗಳು ತಗ್ಗುವುದಕ್ಕೆ ಅವಕಾಶವು ತಪ್ಪಿ, ಆ ನಾಳಗಳ ಶಕ್ತಿಯು ತಗ್ಗದೆ ಒಂದೇ ಸ್ಥಿತಿಯಲ್ಲಿರುವುದು

ಬಿಸಿಲು ಹೆಚ್ಚಾಗಿರುವ ಪ್ರದೇಶಗಳಲ್ಲಿ ವಾಸಮಾಡುತ್ತಿರುವ ಪ್ರತಿಯೊಬ್ಬರೂ ದಿನ ಒಂದಕ್ಕೆ ಸುಮಾರು ಎಂಟು ಲೋಟಾ ನೀರನ್ನು ಕುಡಿಯಬೇಕು ಒಂದು ಊಟಕ್ಕೂ, ಮತ್ತೊಂದು ಊಟಕ್ಕೂ ನಡುವೆ ಇರುವ ಅವಕಾಶ ಕಾಲದಲ್ಲಿ ನೀರನ್ನು ಕುಡಿದರೆ ಮೇಲು ಸಾರು, ಹಣ್ಣಿನ ರಸಗಳು, ಹಾಲು ಜಲಾಂಶವು ಹೆಚ್ಚಾಗಿರುವ ತರಕಾರಿಗಳು. ಈ ಮುಂತಾದ ದ್ರವಮಿಶ್ರದ ಆಹಾರಪದಾರ್ಥಗಳೆಲ್ಲ ಈ ನೀರಿನ ಭಾಗಗಳನ್ನು ಒದಗಿಸುತ್ತವೆ

ಆದರೆ ನೀರನ್ನು ಕುಡಿಯುವ ವಿಷಯದಲ್ಲಿ ಕೆಲವು ನಿಯಮಗಳನ್ನು ಮಾತ್ರ ನೆನಪಿನಲ್ಲಿಡಬೇಕು ಒಂದೇ ಸಲಕ್ಕೆ ಹೆಚ್ಚಾಗಿ ನೀರನ್ನು ಕುಡಿಯಬಾರದು ಮತ್ತು ನೀವು ಕುಡಿಯುವ ನೀರು ಬಹಳ ಬಿಸಿಯಾಗಿಯಾಗಲಿ ತಣ್ಣಗಾಗಿಯಾಗಲಿ ಇರಕೂಡದು ಊಟಮಾಡುತ್ತಿರುವಾಗ ಅಡಿಗಡಿಗೆ ನೀರನ್ನು ಕುಡಿದರೆ ನೀವು ತಿನ್ನುವ ಆಹಾರಪದಾರ್ಥಗಳು ಜೀರ್ಣಿಸುವುದಕ್ಕಾ, ಜೊಲ್ಲುರಸದೊಡನೆ ಸೇರುವುದಕ್ಕೂ ಅವಕಾಶವು ತಪ್ಪಿ ಅವು ನೀರಿನಲ್ಲಿ ಕರಗಿಹೋಗುವುದರಿಂದ ಆಗ ಜಲಪಾನ ಮಾಡಬಾರದು ಭೋಜನಕಾಲದಲ್ಲಿ ಒಂದು ಲೋಟಾ ನೀರಿಗಿಂತ ಹೆಚ್ಚಾಗಿ ಕುಡಿಯಬಾರದು

ನೀರನ್ನು ಬಹಳ ಕಡಿಮೆಯ ಪ್ರಮಾಣದಲ್ಲಿ ಸೇವಿಸಿದರೆ ನಮ್ಮ ಆಹಾರವು ಅಲ್ಲಲ್ಲಿಯೇ ತಂಗಿ ಸ್ವಾಭಾವಿಕವಾಗಿ ಏರ್ಪಟ್ಟಿರುವ ದೇಹನಿರ್ಮಲೀಕರಣಕಾರ್ಯವು ಸರಿಯಾಗಿ ನಡೆಯಲು ಅವಕಾಶವಿಲ್ಲದೆ ಶರೀರವು ವಿಷಮಿಶ್ರವಾಗುವುದು

ಆ. ಚ

---

## ನೋಟೀಸು.

ಇದರಿಂದ ಸಮಸ್ತ ಜನರಿಗೂ ಈ ಕೆಳಗೆ ಸ್ಥಿನ್ ಮಾಡಿದವನು ತಿಳಿಯ ಪಡಿಸುವದೇನಂದರೆ —ಉತ್ತರ ಕೊಡಗು ತಾಲೋಕು ಸೋಮವಾರಪೇಟೆ ನಾಡು ದೊಡ್ಡ ಮಳ್ತೆ ಗ್ರಾಮದ ಹಾರೋಹಳ್ಳಿಯೆಂಬ ಉಪ ಗ್ರಾಮದಲ್ಲು ಮತ್ತು ಚೌಡ್ಲು ಗ್ರಾಮದಲ್ಲು ಸನ್ 1925ನೇ ಸಂವತ್ಸರದ ಕಂದಾಯ ಬಾಕಿಗಾಗಿ ಕೆಲವು ಜಮೀನನ್ನು ನನಗೆ ನೆಂಟನಾದ ಒಬ್ಬ ತಿಬ್ಬೆಟ್ಟದ ಪೂವೈಯ್ಯನೆಂಬವನಿಂದ ಹರಾಜು ಕರೀದಿ ಹರಾಜಿನಲ್ಲಿ ಕೆಲವು ಭೂಮಿಯನ್ನು ಪಡೆದ ಮೇರೆ ಹರಾಜು ಖರ್ಚು ರೇವಣಾತಿ ಮೊಬಲಗನ್ನು ನಾನು ಪಾವತಿ ಮಾಡಿ ರೆ೯ಲ್ ಮೇರೆ ಆ ಜಮೀನಿಗೆ ಉಪಯೋಗಿ ಒಂದು, ಅದೇ ಭೂಮಿಯನ್ನು ನನ್ನ ಹೆಸರಿಗೆ 1926ನೇ ಸಂವತ್ಸರದಲ್ಲು ೭ ಮೂಲದಿ ವರ್ಗಾಯಿಸಿರುತ್ತಾನೆ ಈ ಭೂಮಿಯು ಸಹಕಾರ ಸಂಘಕ್ಕೆ ಗಿರ್ವಿ ಇದ್ದದ್ದರಿಂದ ಸಂಘದ ಸಾಲ ಕಟ್ಟದ ಹೊರತು ಹರಾಜು ಮಂಜೂರಿನ್ಸ್ಮಾಡ ಕೂಡದಾಗಿ ಕೊಡಗು ಪರಸ್ಪರ ಸಂಘದ ರಿಜಿಸ್ಟ್ರಾರವರು ಕೊಡಗು ಕಮಿಶನರ್ ಸಾಹೇಬರವರಿಗೆ ಪ್ರಿಯಾರು ಒಡದ ಮೇರೆ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು ನನ್ನ ತಂದೆಯವರನ್ನು ನೋಟೀಸ್ ಮುಖಾಂತರ ಕರಸಿ ಸಾಲದ ಹಣವನ್ನು ಕಟ್ಟಬೇಕಾಗಿ ಹುಕುಂ ಮಾಡಿದ ರೀತಿ ಸದರಿ ಸಂಘದ ಸಾಲ 360 ರೂಪಾಯಿ ಚಿಲ್ಲರೆಯನ್ನು ನಾನು ಕಟ್ಟಿರುತ್ತೇನೆ ನಂತರ ಹರಾಜು ಮಂಜೂರ್ಮಾಡಿ ಕೊಡಬೇಕಾಗಿ ಕೇಳಿಕೊಂಡ ಮೇರೆ ಕೊಡಗು ಕಮಿಷನರ್ ಸಾಹೇಬರು ರೂಲ್ಸ್ ಪ್ರಕಾರ ಹರಾಜಿನಲ್ಲು ಪಡೆದುಕೊಂಡವರ ಹೆಸರಿಗೆ ಸೇಲ್ ಸರ್ಟಿಫಿಕೇಟನ್ನು ಇದೇ ತಿಂಗಳಲ್ಲು ಸದರಿ ಪೂವೈಯ್ಯನಿಗೆ ಕೊಟ್ಟಿರುತ್ತಾರೆ. ಈ ಭೂಮಿ ನನ್ನದಲ್ಲ, ಕಾಳಪ್ಪನವರಿಗಾಗಿ ತೆಗೆದುಕೊಂಡದ್ದು ಎಂಬುದಾಗಿ 1926ರಲ್ಲು ನನ್ನ ಹೆಸರಿಗೆ ವರ್ಗಾಜಿನಾಮೆ ಕೊಟ್ಟು ಒಪ್ಪಂದಿಯನ್ನು ಮಾಡಿಸಿ ಕೊಟ್ಟು ಆ ತಾರೀಖಿನಿಂದ ಭೂಮಿಯ ಕಂದಾಯವನ್ನು ನಾನೇ ಪಾವತಿ ಮಾಡುತ್ತಾ ನನ್ನ ಸ್ವಾಧೀನ ಅನುಭವದಲ್ಲಿರುತ್ತೆ ಈಗ ಸೇಲ್ ಸರ್ಟಿಫಿಕೇಟ್ ಸಿಕ್ಕಿರುತ್ತದೆಂಬ ನೆವದ ಮೇಲೆ ಸದರಿ ಭೂಮಿಯನ್ನು ಅವನು ಪರಾಧೀನ ಮಾಡುತ್ತಾನಾಗಿ ತಿಳಿಯುತ್ತೇನೆ. ನನ್ನ ಹೆಸರಿನಲ್ಲು ಜಮಾಬಂದಿ ನಡೆದು ಕಂದಾಯ ಪಾವತಿ ಮಾಡುತ್ತಾ ನನ್ನ ಸ್ವಾಧೀನಾನುಭವದಲ್ಲಿರುವ ಭೂಮಿಯನ್ನು ಅವನಿಗೆ ಯಾವ ರೀತಿಯಲ್ಲೂ ಪರಾಧೀನ ಮಾಡುವ ಹಕ್ಕಿರುವದಿಲ್ಲ ಹಾಗೆ ಯಾರಾದರೂ ಪಡೆದುಕೊಂಡಿದ್ದರೆ ಯಾ ಪಡೆದುಕೊಂಡರೆ ಯಾವ ಲಿಕಾಪಟ್ಟು ಸಿಂಧು ಆಗಲಿಕ್ಕಿಲ್ಲ. ಭೂಮಿಗೂ ನಿಜ ಹಕ್ಕಿರುವದಿಲ್ಲ ಅನಾವಶ್ಯಕವಾಗಿ ಕ್ರಯಾಕರದವರು ನನ್ನ ಎಲ್ಲಾ ನಷ್ಟಗಳಿಗೂ ಜವಾಬ್ದಾರರಾಗ ಬೇಕಾಗಿ ಈ ಮೂಲಕ ತಿಳಿಸಿದೆ

ಸೋಮವಾರಪೇಟೆ, ಚೌಡ್ಲು ಕಾಳಪ್ಪ,

ತಾ 28—10—28 ಯಂ ಎಲ್ ಸಿ ೭ ಡಿ ಜ ಯಂ

2—2

---

## ನೋಟೀಸು.

ಹಾಸನ ಡಿಸ್ಟ್ರಿಕ್ಟ್ ಮಂಜರಾಬಾದು ತಾಲೋಕಿನಲ್ಲಿ ಸುಬ್ರಹ್ಮಣ್ಯದಿಂದ 24 ಮೈಲಿ ದೂರದಲ್ಲಿರುವ ಶುಕ್ರವಾರ ಸಂತೆ ಸುಬ್ರಹ್ಮಣ್ಯ ಮತ್ತು ಮಣಗೂರು ಮಲ್ಲಿಪಟ್ಣ ಈ ರಸ್ತೆಗಳ ಜಂಕ್ಷನ್ ಅಂದರೆ ಉಚ್ಚಂಗಿಕೂಡು ರಸ್ತೆ ಒಳಿ ಸುಬ್ರಹ್ಮಣ್ಯದ ಜಾತ್ರೆಗೆ ಮುಂಚಿತವಾಗಿ 1928ನೇ ಇಸ್ವಿ ನವಂಬರ್ 28ನೇ ಬುಧವಾರದ ಆರಾಭ್ಯ ಡಿಸಂಬರ್ 2ನೇ ಭಾನುವಾರದ ವರಿವಿಗೆ ದನಗಳಪ್ರದರ್ಶನವನ್ನು ನಡಸುತ್ತಾರಾಗಿಯೂ ಆ ಕಾಲದಲ್ಲಿ ಸೇರುವ ದನಗಳ ಮೇಲೆ ಸುಂಕ ವಸೂಲು ಮಾಡುವದಿಲ್ಲವಾಗಿಯೂ ಈ ಸ್ಥಳದಲ್ಲಿ ಮೇವಿನ ಸೌಕರ್ಯ ಮತ್ತು ನೀರಿನ ಸಂಗಂ ಅನುಕೂಲವಾಗಿರುತ್ತಾಗಿಯೂ ದನ ಮತ್ತು ಜಾನುವಾರುಗಳಿಗೆ ವೈದ್ಯ ಸಹಾಯವೂ ಒದಗಿಸುತ್ತೆಯಾಗಿಯೂ ಜನಗಳಿಗೆ ಈ ಮೂಲಕ ತಿಳುವಳಿಕೆ ಕೊಟ್ಟಿದೆ ಲಾಯಕ್ಕಾದ ರಾಸುಗಳಿಗೆ ಬಹುಮಾನವೂ ಕೊಡಲ್ಪಡುತ್ತದೆ ಹೆಚ್ಚಿಗೆ ವಿಚಾರ ತಿಳಿಯಬೇಕಾದಲ್ಲಿ ಹಾಸನದ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರಿಗೆ ಬರದು ತಿಳಿದುಕೊಳ್ಳಬಹುದು

ಎನ್ ಎಸ್ ನಂಜುಂಡಯ್ಯ

3—1 ಪ್ರೆಸಿಡೆಂಟ್ ಡಿಸ್ಟ್ರಿಕ್ಟ್ಬೋರ್ಡ್

ತಾ 10—10—28 ಹಾಸನ

---

## ನೋಟೀಸ್.

1928ನೇ ಇಸವಿ ನವಂಬರು ತಾರೀಕು 10 ನೇ ಶನಿವಾರ ದಿನ ಮಧ್ಯಾಹ್ನ 1 ಗಂಟೆಗೆ ವೀರಾಜಪೇಟೆಯಲ್ಲಿ ತಾಲೋಕು ಕಚ್ಚೇರಿ ಬಳಿ ಮೈದಾನದಲ್ಲಿ ಶೇರುದಾರರ ಮಹಾಸಭೆಯು (ಜನರಲ್ ಮೀಟಿಂಗು) ಸೇರುವುದೆಂದು ಈ ಮೂಲಕ ತಿಳಸೋಣಾಗಿದೆ

ಮೀಟಿಂಗಿನಲ್ಲಿ ಈ ಕೆಳಗೆ ಕಂಡ ಕಾರ್ಯಗಳು ನಡಯತ್ತವೆ

1 1927—1928ನೇ ವರ್ಷದ ಆಡಳಿತ ವರದಿಯನ್ನು ಅದೇ ವರ್ಷದ ಆದಾಯ ವೆಚ್ಚ ಬ್ಯಾಲೆನ್ಸ್ ಶೀಟ್, ಲಾಭನಷ್ಟಗಳ ಪಟ್ಟಿಗಳನ್ನು ಮತ್ತು ಆಡಿಟರವರ ಸರ್ಟಿಫಿಕೇಟನ್ನು ಸಭೆಯ ಮುಂದೆ ಇರಿಸುವುದು

2 ಆಡಿಟರನ್ನು ನೇಮಿಸುವಿಕೆ

3 1927—1928ನೇ ವರ್ಷಕ್ಕೆ ಆಡಿಟರವರಿಗೆ ಕೊಡಬೇಕಾದ ಫೀಜು ನಿಷ್ಕರ್ಷೆ ಮಾಡುವಿಕೆ

4 ಕೆಲಸದಿಂದ ನಿವೃತ್ತರಾಗುವ ಡೈರಕ್ಟರುಗಳ ಬದಲಿಗೆ ಬೇರೆಯವರ ಚುನಾವಣೆ

ಕೊಡಗು ಲಿಮಿಟೆಡ್, ಪಿ. ಐ ಬೆಳ್ಯಪ್ಪ,

ಮಡಿಕೇರಿ, 20—10—28 ಮೇನೇಜರ್

---

## ನೋಟೀಸು.

ಜಮೀನ್ದಾರರ ಸಂಘದ ಕಳೆದ ವಾರ್ಷಿಕ ಮಹಾ ಸಭೆಯಲ್ಲಿ ಮಂಜೂರಾಗಿರುವ ಕೊಡಗಿನ ರಾಜಕೀಯ ರಚನೆಯನ್ನು ಜನರ ತಿಳುವಳಿಕೆ ಬಗ್ಗೆ ವಿವರಿಸಲು ಈ ನವಂಬರು ತಾ 17ನೇ ಶನಿವಾರ ಮಧ್ಯಾಹ್ನ 1 ಗಂಟೆಗೆ ಶನಿವಾರಸಂತೆಯಲ್ಲಿಯೂ ತಾ 18ನೇ ಆದಿತ್ಯವಾರ ಬೆಳಿಗ್ಗೆ 10½ ಗಂಟೆಗೆ ಫ್ರೇಜರ್‌ಪೇಟೆಯಲ್ಲಿಯೂ ಮತ್ತು ತಾ 19ನೇ ಸೋಮವಾರ ಮಧ್ಯಾಹ್ನ 1 ಗಂಟೆಗೆ ಸೋಮವಾರಪೇಟೆಯಲ್ಲಿಯೂ ಪಬ್ಲಿಕ್ ಮೀಟಿಂಗುಗಳು ನಡೆಯುವವು ಸರ್ವರೂ ದಯಮಾಡಿಸಬೇಕಾಗಿ ಕೋರಲಾಗಿದೆ

ಯನ್ ಆರ್ ಸುಬ್ಬಯ್ಯ ಪಿ ಟಿ ಕುಶಾಲಪ್ಪ

ಸಿ ಯಸ್ ಉತ್ತಯ್ಯ ಸಾಂತ್ಯೇರ ನಣ್ಣಪ್ಪ

ಸಿ ಯನ್ ವೆಂಕಪ್ಪಯ್ಯ ಜಮ್ಮಡ ಮೊಣ್ಣಪ್ಪ

ಬಿದ್ದಂಡ ಯಂ ಸುಬ್ಬಯ್ಯ ಪಿ ಐ ಬೆಳ್ಯಪ್ಪ

ಯಂ ಅಬ್ದುಲ್ ಗಫೂರ್ ಖಾನ್.

---

OFFICE OF THE PRESIDENT DISTRICT BOARD,
Hassan Dated 30th October 1928

## NOTICE

The Second Annual Cattle show will be held from Wednesday the 28th November 1928 to Sunday the 2nd December 1928 (both days inclusive) at the junction of the Sukrvarsanthe Hethur Suorahmanya and the Malapatna Uchangi Vanagur roads beyond Hethur towards Bisle in the Manjarbad Taluk before proceeding to the Subrahmanya Jatra No fees will be levied on the cattle assembling at the fair and prizes will be awarded to cattle selected for the award by the Judges Water and fodder are also available at the place Medical, Veterinary staff will be on duty The distance from this junction to Subrahmanya is only 24 miles

For further particulars apply to the President District Board Hassan

N S NANJUNDIAH,

3—1 President District Board, Hassan

---


## ಕೋವಿಗಳು, ಮತ್ತು ಅವುಗಳ ಸಾಹಿತ್ಯಗಳು.



ಇಂಗ್ಲೇಂಡ್ ಕಂಪೆನಿಯ ನಾಕ್ ಎಬೌಟ್" ಎಂಬ 12 ನೇ ನಂಬರಿನ ಒಂಟಿ ಕೊಳದ ಕೋವಿಗೆ ರೂ 30

ಅಮೇರಿಕದ ಸ್ಟೀವನ್ಸ್ ಕಂಪೆನಿಯ 12 ನೇ ನಂಬರಿನ ಒಂಟಿ ಕೊಳದ ತೋಟದ ಕೋವಿಗೆ ರೂ 45

12 ನೇ ನಂಬರಿನ ಒಂಟಿ ಕೊಳದ ಅತಿ ಸುಲಭ ಕ್ರಯದ ತೋಟದ ಕೋವಿಗೆ ರೂ 8

12ನೇ ನಂಬರ್ ಜೋಡು ಕೊಳದ 'ಇಂಗ್ಲಿಷ್ ತೋಟದ ಕೋವಿಗೆ ರೂ ".

" ಬೆಲ್ಜಿಯನ್' ತೋಟದ ಕೋವಿಗೆ ರೂ. 60

ಹೊಗೇ ರಹಿತವಾದ 12 ನಂಬರಿನ ಇಂಗ್ಲಿಷ್ ಎಲೀ ಚಿಲ್ಲು ತುಂಬಿದ ತೋಟಗಳು 100 ಕ್ಕೆ ರೂ 11—0—0

ಅಮೇರಿಕನ್ ವೆಸ್ಟರನ್ " 100 ಕ್ಕೆ ರೂ 9—8—0

ಬೆಲ್ಜಿಯನ್ 100 ಕ್ಕೆ ರೂ. 9 0—0

ಎಲ್ಲಾ ತರದ ಕೋವಿಗಳು ರೈಫಲ್‌ಗಳು, ರಿವಾಲ್ವರ್‌ಗಳು ಪಿಸ್ತೂಲ್‌ಗಳು ಮತ್ತು ಚಿಲ್ಲು ಮದ್ದು ವಗೈರೆ ಅಲ್ಲದೆ ಬೇಟೆಗಾರರಿಗೆ ಬೇಕಾಗಿರುವ ಎಲ್ಲಾ ಸಾಹಿತ್ಯಗಳು ಸುಲಭ ದರದಲ್ಲಿ ದೊರಕುತ್ತೆ

ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಂಪೆನಿಯ ಕೆಟಲಾಗೊಂದು ಮುಫತ್ತಾಗಿ ರವಾನಿಸಲ್ಪಡುವುದು

Abdoolally Noorbhoy
Arms & Ammunition Dealers
248–250 Abdul Rehman Street
Bombay 3 Telegrams 'Guidance"

2


---


**Silks! Silks!! Silks!!!**

Sarees with gold borders body plain or spotted in various designs and colours

| | | |
|---|---|---|
| 5 yds by 45 inches plain body | Rs 30/– to Rs | 80/– |
| do spotted body | 40/– to | 90/– |
| 6 yds by 45 inches plain body | 50/– to | 100/– |
| do spotted body | 60/– to | 120/– |
| Headkerchief 44 by 44 inches price | 12 – to | 35/– |
| Gold Lace borders Ribbons price from | 1/8/– to | 5/– per yd |

*For further particulars, please write to:-*

**BHARADWAJ & CO.,**
**BROCADE, EMBROIDARY & SILK MANUFACTURERS,**
**Benares City.**

52–12

ತಾ.9–11–28

# ಕೊಡಗು ಕೌನ್ಸಿಲಿನಲ್ಲಿ

## ಸೈಮನ್ಸ್ ಕಮಿಷನಿಗೆ ಬಹಿಷ್ಕಾರವಾಯಿತು.

### ಕೊಡಗು ಸಂಪೂರ್ಣ ಜವಾಬ್ದಾರಿ ಸರ್ಕಾರಕ್ಕೆ ತಯಾರಿದೆಯೆಂದು ಒಪ್ಪಲಾಯಿತು.

**ಜಮೀನ್ದಾರರ ಸಂಘವು ತಯಾರಿಸಿದ ಸ್ವತಂತ್ರ ಕರ್ಣಾಟಕ ಪ್ರಾಂತ್ಯವಾಗುವವರೆಗೆ ಕೊಡಗಿನಲ್ಲಿರಬೇಕಾದ ಪ್ರಜಾ ಜವಾಬ್ದಾರಿ ಸರ್ಕಾರದ ರಚನೆಯ ಠರಾವು ಮಂಜೂರಾಯಿತು.**

ಸೈಮನ್ ಕಮಿಷನು ಕೊಡಗು ಕೌನ್ಸಿಲಿನ ಸಹಕಾರ ಇರುವ ವರೆಗೆ ಈ ಕೌನ್ಸಿಲಿಗೆ ಸದರಿ ಕಮಿಷನಿನಲ್ಲಿ ಏನೂ ಇಲ್ಲವೆಂದು ಮಿ. ಎ. ಬಿ. ಚಂಗಪ್ಪನವರು ತಂದ ಠರಾವು ವ್ಯತ್ಯಾಸವಾಡಿ ಸೈಮನ್ ಕಮಿಷನಿನಲ್ಲಿ ಏನೊಂದೂ ನಂಬಿಕೆಯಿಲ್ಲವೆಂದು ಮಿ. ಸಿ. ಯಮ್. ಉತ್ತಯ್ಯನವರು ಸೂಚಿಸಿದ ಉಪಠರಾವು ಬಹುಮತದಿಂದ ಪಾಸಾಯಿತು.

ಈ ದೇಶವು ಸಂಪೂರ್ಣ ಪ್ರಜಾಜವಾಬ್ದಾರಿ ಸರ್ಕಾರಕ್ಕೆ ತಯಾರಾಗಿದೆ, ದೊಡ್ಡ ಪ್ರಾಂತ್ಯಗಳಿಗೆ ಕೊಡುವ ಸುಧಾರಣೆಗಳನ್ನೇ ಇಲ್ಲಿಗೂ ಕೊಡಬೇಕು ಎಂಬ ಮಿ. ಎ. ಬಿ. ಚಂಗಪ್ಪನವರ ಠರಾವೂ, ಕೊಡಗನ್ನು ಒಳಕೊಂಡ ಸ್ವತಂತ್ರ ಕರ್ನಾಟಕ ಪ್ರಾಂತ್ಯವಾಗುವ ವರೆಗೆ ಕೊಡಗಿನಲ್ಲಿ ಜಾರಿಗೆ ತರಬೇಕಾದ, ಜಮೀನ್ದಾರರ ಸಂಘದವರು ತಯಾರಿಸಿದ ರಚನೆಯನ್ನು ಒಳಕೊಂಡ, ಮಿ. ಪಿ. ಐ. ಬೆಳ್ಯಪ್ಪನವರು ತಂದ ಠರಾವೂ ಬಹುಮತದಿಂದ ಮಂಜೂರಾಯಿತು. ಕರ್ನಾಟಕ ಏಕೀಕರಣವಾಗಬೇಕೆಂಬ ಠರಾವು ನಾಳೆಗೆ ಚರ್ಚಿಸಲ್ಪಡುವದು.

## ವರ್ತಮಾನ ಸಂಗ್ರಹ.

### ಒಳದೇಶ.

### ಕೊಡಗು ಬಾಯಿಂದೆ ಮಂಡಳಿ.

(೭ನೇ ಪುಟದಿಂದ ಮುಂದುವರಿದದ್ದು.)

ತ ಸರಕಾರವು ಹೇಳುತ್ತಾ, ಬಂದು ಈಗ ಹೇಳುವದು ನೋಡಿ ಒಟ್ಟಿಗೆ ಹಾಕಲಾಗಿ ಎಲ್ಲಾ ಉದ್ಯೋಗಸ್ಥರಲ್ಲದ ಮೆಂಬರುಗಳು ಪರವಾಗಿಯೂ ಸರಕಾರಿ ಮೆಂಬರುಗಳು ಮಾತ್ರ ವಿರೋಧವಾಗಿಯೂ ಓಟ್ ಮಾಡಿದರು. ಠರಾವು ಮಂಜೂರಾಯಿತು.

(೯) ಕೊಡಗಿನಲ್ಲಿ ಬಡತನಕ್ಕೆ ಕಾರಣವನ್ನು ಕಂಡುಹಿಡಿದು ಇದರ ನಿವಾರಣೆಗೆ ಚಿಕ್ಕ ಭೂಮಿ ಹಿಡುವಳಿಗಳನ್ನು ಚಿಕ್ಕ ಚಿಕ್ಕ ಭಾಗಗಳಾಗಿ ಮಾಡದೆ ಇರುವದೇ ಮುಂತಾದ ಸಲಹೆಗಳನ್ನು ಕೊಡುವ ಬಗ್ಗೆ ಒಂದು ಕಮಿಟಿ ನೇಮಕವಾಗಬೇಕು.

ಮಿ. ಎ. ಬಿ. ಚಂಗಪ್ಪನವರು ಈ ಠರಾವನ್ನು ಸೂಚಿಸುವಾಗ ಹೇಳಿದ್ದೇನೆಂದರೆ, ದೇಶದ ಜನರ ಹೆಚ್ಚಿನ ಭಾಗ ದಿನೇ ದಿನೇ ಬಡವರಾಗುತ್ತಿದ್ದಾರೆ. ಮಳೆ ಬೆಳೆ ಸರಿಯಾಗಿ ಆಗದಿರುವದು, ದನಗಳ ಬಾಯಿಬೇನೆ, ಭೂಮಿಯ ಪಾಲುಗಳು ಬಹಳ ಚಿಕ್ಕದಾಗಿ ಇರುವಿಕೆ, ವಗೈರೆ ಕಾರಣಗಳು ಇವೆ. ಸಹಕಾರಿ ಸಂಘಗಳಿಗೇನೇ ಮೆಂಬರುಗಳು 4½ ಲಕ್ಷಕ್ಕೆ ಬಾಕಿದಾರರಾಗಿ ಭೂಮಿ ಗಿರ್ವಿ ಕೊಟ್ಟಿರುತ್ತಾರೆ. ಬೆಳೆದದ್ದೆಲ್ಲ ಬಟ್ಟೆಗೆ ಸಾಲದು. ಜನರು ಮನೆಯಲ್ಲಿ ಎರಡನೇ ಕಸುಬು ಇಟ್ಟುಕೊಳ್ಳದೆ ಇರುವದು ಒಂದು ಕಾರಣ. ಕೃಷಿ ಇಲಾಖೆಯೇ ಇಲ್ಲ. ಮಲೇರಿಯಾ ಜ್ವರವು ಇನ್ನೊಂದು ಕಾರಣವಾಗಿದೆ.

ಮಿ. ಉತ್ತಯ್ಯನವರು ಅನುಮೋದಿಸಿದರು.

ಕಮಿಶನರು ಬಡತನಕ್ಕೆ ಕಾರಣವಿಲ್ಲ. ಯಾಕೆಂದರೆ ಜನರಿಗೆ ಕೆಲಸಕ್ಕೆ ಅವಕಾಶವಿಲ್ಲವೆಂತ ಹೇಳಲಾಗುವದಿಲ್ಲ. ದನಗಳ ಬಾಯಿಬೇನೆ, ಮಲೇರಿಯ ವಗೈರೆ ಕಾರಣಗಳಿವೆ




ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಯವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಆಯುಷ್ಯ, ತೂಕವೂ ಹೆಚ್ಚುವುದು. ಮತ್ತು ಇದು ಸಿಹಿಯಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ದು ಬಾಟ್ಲಿ ೧ಕ್ಕೆ 0–14–0. ಟ. ಖ 0–9–0.

ಕೆ. ಟಿ. ಡೋಂಗರೆ ಕಂಪೆನಿ,

52–10 ಗಿರಗಾಂವ, ಮುಂಬಯಿ.

"ಔಷಧ ಸೀಸೆಗಳಿಗಿಂತಲೂ ಬರೇ ಜೀವನ ಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು"

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರಬಲ್, ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯ ಚಂದ್ರಿಕೆ" ಎಂಬ ಆರೋಗ್ಯಬೋಧಕವಾದ ಮಾಸ ಪತ್ರಿಕೆಯು, ನಿಮಗೆ ಆರೋಗ್ಯ ದೃಢಕಾಯರಾಗಿ ಜೀವಿಸುವ ಮಾರ್ಗವನ್ನೂ ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟ ರೋಗ ವಿಚಾರವನ್ನೂ ಬೋಧಿಸುವುದು.

ಈ ಆರೋಗ್ಯ ಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ, ಬಹು ಕಾಲದಿಂದ ಶಸ್ತ್ರ ಚಿಕಿತ್ಸೆಯಲ್ಲಿಯೂ ಔಷಧ ಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಎಂಬೀ ಮಾಸ ಪತ್ರಿಕೆಯಲ್ಲಿ ಆಹಾರ ಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರ ಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವುವು. ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ.

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ, ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ ಕನ್ನಡ, ತೆಲುಗು, ತಮಿಳು, ಇಂಗ್ಲಿಷ್ ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಒಂದು ಸೇರುವುದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾದುದಿಲ್ಲ.

52–10 ಮ್ಯಾನೇಜರ್, ಆರೋಗ್ಯಚಂದ್ರಿಕೆ, 323 ತಂಬುಶೆಟ್ಟಿ ಬೀದಿ, ಮದರಾಸು.

ಕರ್ಣಿಕ

ಎಗ್ವ್ಯು ಮಿಕ್ಸ್ಚರ್

ಮಲೇರಿಯಾ, ಇನ್‌ಫ್ಲ್ಯುಯೆಂಝಾ ಸನ್ನಿಕಜ್ವರ ಆಡವಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲ ಶುದ್ಧಿಯಾಗಿ ಬೆವರು ಬಂದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪ ಟಪ್ಪಾಲು ವೆಚ್ಚ ಬೇರೆ.

ಸಾರಸಾ ಪರಿಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವುದಕ್ಕೆ ಇದು ಖಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿಗೆ ರೂ. ೧–೦–೦ ಟಪ್ಪಾಲು ವೆಚ್ಚ ಬೇರೆ.

ಕರ್ಣಿಕ ಬ್ರದರ್ಸ್

12–7 ದುಬಾಷ್ ಲೇನ್.

ಗಿರಗಾಂವ, ಮುಂಬಾಯಿ.


### ಅಮ್ಮತ್ತಿನಾಡಿನ ಯೂನಿಯನ್.

ಅಮ್ಮತ್ತಿನಾಡಿನ ಸ್ಥಳೀಯ ಸಹಕಾರಿ ಕೂಟದ ಕಮಿಟಿಯವರು ಈ ತಾರೀಕು 29ರಲ್ಲು ನಡಿಸಿದ ಮೀಟಿಂಗಿನ ಪ್ರೊಸಿಡಿಂಗ್ಸ್. ಈ ಮೀಟಿಂಗಿಗೆ ಸೂ. ಶ್ರೀ. ಮುಕ್ಕಾಟಿರ ಚೀಯಣ್ಣನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು.

(1) ತಾ 17–10–28ರಲ್ಲು ಕೊಡಗು ಕೇ. ಬ. ಸಂಘಗಳ ರಿಜಿಸ್ಟ್ರಾರವರಿಂದ (ರಿಸರ್ವ್ ಫಂಡಿನ ಶೇಕಡ 50ರಷ್ಟನ್ನಾದರೂ ಕೊಡಗು ಸೆಂಟ್ರಲ್ ಬ್ಯಾಂಕಿನಲ್ಲಾಗಲೀ ಅಥವ ಇತರ ಭದ್ರವಾದ ಸಂಸ್ಥೆಯಲ್ಲಾಗಲೀ ಇಡಬೇಕಾಗಿ ಬಂದ ಸರ್ಕ್ಯುಲರಿನ ವಿಷಯ ಚರ್ಚಿಸಲು ಕೊಡಗಿನ ಎಲ್ಲಾ ಸಹಕಾರಿ ಸಂಘಗಳ ಕಾನ್ಫರೆನ್ಸು ಬರುವ ನವಂಬರು 14ನೇ ದಿನ ಮರ್ಕಾರ ಬಿ. ಟಿ. ರೀಡಿಂಗ್ ರೂಂ ಬಳಿ ನಡಿಸಬೇಕೆಂಬದಾಗಿ ರಿಜಿಸ್ಟ್ರಾರವರಿಗೆ ಬರದದ್ದಕ್ಕೆ "ದೇಶದ ಎಲ್ಲಾ ಸಹಕಾರಿ ಸಂಘಗಳ ಕಾನ್ಫರೆನ್ಸು ನಡಿಸುವದಕ್ಕೆ ಇದು ಸಮಯವಲ್ಲ. ಎಲ್ಲಾ ಯೂನಿಯನ್ನಿನವರನ್ನು ಕೇಳಿ ಮಾಡಬೇಕಾಗಿದೆ. ಅನೇಕ ವಿಷಯಗಳು ದೇಶದ ಕಾನ್ಫರೆನ್ಸಿನಲ್ಲಿ ಚರ್ಚಿಸುವವು ಇವೆ ಯಾದರೂ ಯೋಗ್ಯರಾದ ಸಹಕಾರಿ ಮುಖ್ಯಸ್ಥರನ್ನು ಕರೆಸಿ ಅವುಗಳನ್ನೆಲ್ಲಾ ಇತ್ಯರ್ಥ ಪಡಿಸಬಹುದು. ದೇಶದ ಸಹಕಾರಿ ಕಾನ್ಫರೆನ್ಸನ್ನು ಬರುವ ಫೆಬ್ರವರಿ ಯಾ ಮಾರ್ಚಿ ತಿಂಗಳ

ಲ್ಲಿ ಸ್ಕೂಲಿನ "ಎ" ಟೀಮು "ಸಿ" ಟೀಮನ್ನು ಸೋಲಿಸಿತು. ತಾ. ೪ರಲ್ಲಿ ಸುಂಟಿಕೊಪ್ಪ ಟೀಮು ಸ್ಕೂಲ್ "ಡಿ" ಟೀಮನ್ನು ಸೋಲಿಸಿತು. ತಾ. ೬ರಲ್ಲಿ ಸ್ಕೂಲಿನ "ಬಿ" ಟೀಮಿನವರು ಫಾರೆಸ್ಟ್ ಟೀಮಿನವರಿಂದ ಸೋಲಿಸಲ್ಪಟ್ಟರು. ತಾ. ...ರಲ್ಲಿ ಎಲಿಮೆಂಟರಿ ಶಾಲೆಗಳ ಟೀಮು ಕಾಸ್ಮೋಪಾಲಿಟನ್ ಕ್ಲಬ್ ಟೀಮಿನಿಂದ ಸೋಲಿಸಲ್ಪಟ್ಟಿತು. ತಾ. ೮ರಲ್ಲಿ ಸ್ಕೂಲಿನ "ಎ" ಟೀಮಿನವರು ಕಾಸ್ಮೋಪಾಲಿಟನ್ ಟೀಮನ್ನು ಸೋಲಿಸಿದರು, ತಾ. ೯ರಲ್ಲಿ ಪೊಲೀಸ್ ಟೀಮು ಸುಂಟಿಕೊಪ್ಪ ಟೀಮನ್ನು ಸೋಲಿಸಿದರು. ಪಂಥದಾಟವು ಇನ್ನೂ ನಡೆಯುತ್ತಿದೆ.

ಗಳಿಗೆ ಸಹ ಹೋಗುತ್ತದೆ. ಆಗ ಸರಕಾರದ ಭಾಗದಿಂದ ಕಡ್ಡಾಯ ಸಹ ಸಾಗಿಸಲು ಅನುಕೂಲವಾಗುತ್ತದೆ. ಸ್ವಂತ ಉಪಯೋಗಕ್ಕೆ ಸಾಗಿಸುವಾಗ ಮೋಸಕ್ಕೆ ಎಡೆಯೇ ಇಲ್ಲ. ಸರಕಾರದ ಮಾಲನ್ನು ಧರ್ಮಸ್ಥತೆಯಿಂದ ಕಾಪಾಡಲು ಉಪಾಯಗಳನ್ನು ರೈತರ ಪ್ರತಿನಿಧಿಗಳು ಹೇಳಿಕೊಡಬೇಕೆಂಬದು ಆಶ್ಚರ್ಯಕರವಾಗಿದೆ. ಸರಕಾರಕ್ಕೆ ಫಾರೆಸ್ಟ್ ಇಲಾಖೆಯು ಕಾವಲಿಗೆ ಇದೆ ಎಂತ ಹೇಳಿ ಠರಾವಿಗೆ ಒತ್ತಾಸೆ ಕೊಟ್ಟರು.

ಮಿ. ಮೇದಪ್ಪನವರು ಸಹ ಒತ್ತಾಸೆ ಕೊಟ್ಟರು. ಫಾರೆಸ್ಟ್ ಇಲಾಖೆ ಮಲ್ಲದೆ ಪಟ್ಟೇದಾರರು ಸರಕಾರದ ಕಾವಲಿಗೆ ಇದ್ದಾರೆಂತ ಹೇಳಿದರು.

### ಹುತ್ತರಿ ಹಬ್ಬ.

ಅಯ್ಯ,

ಭರತ ಖಂಡದ ನಿವಾಸಿಗಳು ಆಚರಿಸುವ ಮುಖ್ಯ ಹಬ್ಬ ಹುಣ್ಣಿಮೆಗಳನ್ನು ಅವರವರ ಮತಾನುಸಾರ ಒಂದೇ ದಿನ ಆಚರಿಸುವದು ನಮಗೆಲ್ಲರಿಗೂ ಗೊತ್ತಿದೆ. ಆದರೆ ಕೊಡಗು ದೇಶದ ನಿವಾಸಿಗಳಾದ ಕೊಡಗರು ಹುತ್ತರಿ ಹಬ್ಬವನ್ನು [illegible] ಪೊಳದು, ನಾಡುಪೊಳದು ಎಂಬ ಎರಡು ಹೆಸರಿನಲ್ಲಿ ಕೆಲವು ನಾಡವರು ಒಂದನೆ ದಿನದಲ್ಲಿಯೂ, ಇನ್ನು ಕೆಲವು ನಾಡವರು ಎರಡನೆ ದಿನದಲ್ಲಿಯೂ, ಕೆಲವು ನಾಡವರು ದೇವರ

ಜಾವದಲ್ಲೂ, ಇನ್ನು ಕೆಲವರು ರಾತ್ರಿಯೂ ಆಚರಿಸುತ್ತಾರೆ. ಇದು 1633 ರಿಂದ 1834ರ ವರೆಗೆ ನಮ್ಮನ್ನಾಳುತ್ತಿದ್ದ ಲಿಂಗಾಯಿತ ಅರಸರ ಆಳಿಕೆಯ ಫಲಿತಾಂಶವಾಗಿದೆ. ಯಾಕೆಂದರೆ—ಆ ಕಾಲದಲ್ಲಿ ಪ್ರತಿಯೊಂದು ಕುಟುಂಬದ ರೈತನು ಅರಸರ ಊಳಿಗದಲ್ಲಿ ಚಾವಡಿಕಾರನಾಗಿಯೂ, ಸುಭೇದಾರ ಮುಂತಾದ ಉದ್ಯೋಗದಲ್ಲಿರುತ್ತಿದ್ದುದರಿಂದ ಹುತ್ತರಿ ಹಬ್ಬಕ್ಕೆ ಸರದಿ ಮೇರೆ ರಜಾ ಕೊಡುತ್ತಿದ್ದರು. ಮೊದಲನೆ ದಿನ ವಾಡಿಕೆಯಾಗಿ ಅರಮನೆಯಲ್ಲಿಯೂ ಸುತ್ತುಮುತ್ತಲಿನ ನಾಡೊಳಗೂ ಹುತ್ತರಿಯು ಆಚರಿಸಲ್ಪಟ್ಟನಂತರ, ಎರಡನೆ ದಿನ ಇನ್ನುಳಿದ ಇತರ ನಾಡುಗಳಲ್ಲಿ ಆಚರಿಸಲ್ಪಡುತ್ತಿತ್ತು. ರಾಜರ ಕಾಲಕೆ ತೊಂದರೆ ಇಲ್ಲದ ರೀತಿ ನೌಕರರಿಗೆ ರಜಾ ಕೊಡಲೋಸುಗ ಈ ರೀತಿ ನಾಡು ಮತ್ತು ಅರಮನೆ ಹೊಳದುಗಳು ಏರ್ಪಾಡಾದವು ಎಂಬದಕ್ಕೆ ಯಾವ ಸಂಶಯವೂ ಇಲ್ಲ. ಕೊಡಗರ ಒಂದೇ ಒಂದು ಮುಖ್ಯ ಹಬ್ಬವು ಈ ರೀತಿಯಾಗಿ ಈಗ ನಡಿಸಲ್ಪಡುವುದು ಅನಾಗರೀಕತೆಯ ಗುರುತಾಗಿದೆ. ಇಂಥಾ ವಿಷಯಗಳನ್ನು ಜನಾಂಗದವರೆಲ್ಲರ ಅಭಿಮತದಿಂದ ತಿದ್ದುಪಡಿ ಮಾಡಿಕೊಳ್ಳುವುದಕ್ಕೆ ಯಾವ ಅಟಂಕವೂ ಇಲ್ಲ. ಈ ಚಿಕ್ಕ ಜನಾಂಗದವರ ಹುತ್ತರಿ ಹಬ್ಬಕ್ಕೆ ಮಹತ್ವವನ್ನು ಕೊಡಲು ಅದನ್ನು ಒಂದೇ ದಿನ ಆಚರಿಸಲ್ಪಡುವಂತೆ ಮಾಡಲು ಯಾರ ಬಾಗಲನ್ನು ತಟ್ಟಬೇಕಾದದ್ದೂ, ಯಾರಿಗೆ ಕೈಮುಗಿಯಬೇಕಾದದ್ದೂ, ಯಾರ ಪ್ರಾಣವನ್ನು ಧಾರೆ ಎರೆಯಬೇಕಾದದ್ದೂ ಇಲ್ಲ. ನಾವು ನೆನಸಿದ ರೀತಿ ಮಾಡಬಹುದು. ಕೊಡವರೆಲ್ಲರೂ ಈ ಲೇಖನದ ಸಾರಾಂಶವನ್ನು ಅಂಗೀಕರಿಸಿ ಒಂದೇ ದಿನ ಹಬ್ಬವನ್ನು ಆಚರಿಸಬೇಕಾಗಿ ನಂಬಿ ವಿಜ್ಞಾಪಿಸಿಕೊಳ್ಳುತ್ತೇನೆ.

ಕಡಗದಾಳು. ಕೊರವಂಡ ಪೊನ್ನಪ್ಪ.

---

## ಮದರಾಸು ಕೊಡಗರು ಮತ್ತು ಸ್ವಾಮಿ ಶಾಂಭವಾನಂದರು

ತಮ್ಮ ಸಂಘದ ಕಾರ್ಯ ನಿಮಿತ್ತ ಸದ್ಯಕ್ಕೆ ಮದರಾಸಿಗೆ ಬಂದಿದ್ದ ಸ್ವಾಮಿ ಶಾಂಭವಾನಂದರ ಕೆಲಸವನ್ನು ಮೆಚ್ಚಿ ಸಂತೋಷವನ್ನು ಸೂಚಿಸುವ ಬಗ್ಗೆ ಮೆ. ಬಿದ್ದಂಡ ಕುಟ್ಟಪ್ಪ ಎಂ. ಎ. ಯವರು ಮದರಾಸಿನಲ್ಲಿರುವ "ಕೋಮಲವಿಲಾಸ" ಎಂಬ ಹೋಟೇಲಿನಲ್ಲಿ ಅವರಿಗೆ ಕಳೆದ ತಾರೀಖು 28ನೇ ಆದಿತ್ಯವಾರ ಒಂದು ಟೀಪಾರ್ಟಿಯನ್ನು ಕೊಟ್ಟರು. ಮದರಾಸಿನಲ್ಲಿರುವ ಹಲವು ಕೊಡಗರು ಹಾಜರಿದ್ದರು. ಮದರಾಸಿನಲ್ಲಿರುವ ಕೊಡಗರ ಸಂಘದ ಅಧ್ಯಕ್ಷರಾದ ಶ್ರೀಮತಿ ಕೊಂಗಂಡ ಬೋಂದಮ್ಮ ಅಚ್ಚಯ್ಯನವರೂ ಕೂಡ ಹಾಜರಿದ್ದರು.

ಫಲಹಾರ ತಾಂಬೂಲಾದಿಗಳೆಲ್ಲಾ ತೀರಿದ ನಂತರ ಮೆ. ಕುಟ್ಟಪ್ಪನವರು ಸ್ವಾಮಿ ಶಾಂಭವಾನಂದರ ಕೆಲಸವನ್ನು ಕುರಿತು ಬಹು ಶ್ಲಾಘನೀಯವಾಗಿ ಮಾತಾಡಿದರು. ಬಹು ಕಷ್ಟದಿಂದ ಕಟ್ಟಿದ ಪೊನ್ನಂಪೇಟೆ ಶಾರದಾಶ್ರಮವು ಶ್ರೀ ಶಾಂಭವಾನಂದರ ಪ್ರಯತ್ನದಿಂದಲೇ ಆದದ್ದೆಂದೂ, ಅದಕ್ಕೆ ನಾವುಗಳೆಲ್ಲರೂ ಅವರಿಗೆ ಕೃತಜ್ಞರಾಗಿರಬೇಕೆಂದೂ, ಮತ್ತು ತನ್ನ ಯೌವನದಲ್ಲಿಯೇ ಪ್ರಪಂಚ ಸುಖವನ್ನೆಲ್ಲಾ ತ್ಯಜಿಸಿ ದೇವಸೇವೆ, ದೇಶಸೇವೆಗೆಂದು ಹೊರಟಿರುವ ಶಾಂಭವಾನಂದರಿಗೆ ನಾವು ಎಷ್ಟು ವಂದಿಸಿದರೂ ಸಾಲದೆಂದು ಮೊದಲಾಗಿ ಬಹು ಭಕ್ತಿಪೂರ್ವಕವಾಗಿ ಮಾತಾಡಿದರು. ಅಲ್ಲದೆ ತನ್ನ ಸಾವಿರಾರು ಕೆಲಸಗಳನ್ನು ಹಿಂದಿಟ್ಟು ತನ್ನ ದೇಶದ ಜನರ ಕೂಟಕ್ಕೆ ಬಂದದ್ದಕ್ಕೆ ಶಾಂಭವಾನಂದರಿಗೆ ವಂದಿಸಿದರು.

ಆ ಮೇಲೆ ಸ್ವಾಮಿ ಶಾಂಭವಾನಂದರು ತನ್ನ ದೇಶದ ಜನರೆಲ್ಲರನ್ನು ಕಾಣಲಿಕ್ಕೂ ಮತ್ತು ಪರಿಚಯ ಮಾಡಿಕೊಳ್ಳಲಿಕ್ಕೂ ಸಹ ಅನುಕೂಲಪಡಿಸಿದ್ದಕ್ಕೆ ಮೆ. ಕುಟ್ಟಪ್ಪನವರಿಗೆ ವಂದಿಸಿದ ನಂತರ ತಾನು ಕೊಡಗಿನಲ್ಲಿ ಮಾಡುತ್ತಿರುವ ಮತ್ತು ಹಳ್ಳಿಹಳ್ಳಿಗಳಲ್ಲಿ ಜನೋಭಿವೃದ್ಧಿಗಾಗಿ ಮಾಡಲಿಚ್ಛಿಸುವ ಕೆಲಸದ ವಿಷಯ ಸ್ವಲ್ಪ ಮಾತಾಡಿದರು. ತಾನು ಮಾಡುವ ಮತ್ತು ಮಾಡಲಿಚ್ಛಿಸುವ ಕೆಲಸವು ಎಂದೂ ತನ್ನೊಬ್ಬನಿಂದ ಆಗದ್ದೆಂದೂ, ಎಲ್ಲರೂ ಒಗ್ಗಟ್ಟಿನಿಂದ ಸಹಾಯಮಾಡಿದ್ದೇ ಆದರೆ ಈ ಕೆಲಸಗಳೆಲ್ಲವೂ ಬಹು ಸುಲಭದಲ್ಲಿಯೇ ಆಗುವುದೆಂದೂ, ಆದದ್ದರಿಂದ ಸಕಲರೂ ಅವರವರ ಕೈಯಿಂದಾಗುವಷ್ಟು ಸಹಾಯವನ್ನು ಖಂಡಿತವಾಗಿಯೂ ಮಾಡಬೇಕೆಂದೂ ಕೇಳಿಕೊಂಡರು. ಈ ಸಂದರ್ಭ ಮೆ. ಬಿ. ಕುಟ್ಟಪ್ಪನವರು ತಿಂಗಳಿಗೆ ಐದು ರೂಪಾಯಿಯಂತೆ ಈ ವೇದಾಂತ ಸಂಘಕ್ಕೆ ದ್ರವ್ಯ ಸಹಾಯ ಕೊಡುತ್ತೇನೆಂದು ಮಾಡಿದ ವಾಗ್ದಾನವನ್ನು ಕೂಡ ಹೇಳಿ ಮೆ. ಕುಟ್ಟಪ್ಪನವರಿಗೆ ಅದಕ್ಕಾಗಿ ವಂದಿಸಿದರು.

ಆ ಮೇಲೆ ಅಲ್ಲಿ ನೆರೆದಿದ್ದವರಲ್ಲಿ ಕೆಲವರು ವೇದಾಂತ ಸಂಘದ ಮತ್ತು ಆ ಸಂಘದ ನಿಯಮ, ಕೆಲಸ ಮೊದಲಾದ ವಿಷಯ ಹಲವು ಪ್ರಶ್ನೆಗಳನ್ನು ಕೇಳಿದರು. ಶಾಂಭವಾನಂದರು ಅವರೆಲ್ಲರಿಗೂ ಸಾವಧಾನವಾಗಿ ತೃಪ್ತಿಯಾಗುವಂತೆ ಆ ಪ್ರಶ್ನೆಗಳಿಗೆಲ್ಲಾ ಉತ್ತರವನ್ನಿತ್ತರು. ಅದಾದ ನಂತರ ಮೆ. ಕೊಂಗಂಡ ಅಚ್ಚಯ್ಯನವರು ಅಲ್ಲಿ ನೆರೆದಿದ್ದವರೆಲ್ಲರ ಪರವಾಗಿ ಶಾಂಭವಾನಂದರಿಗೆ ವಂದಿಸಿ, ಅವರ ಸಂಘವನ್ನೂ ಸಂಘದ ಕೆಲಸವನ್ನೂ ಮತ್ತು ಸ್ವಾಮಿ ವಿವೇಕಾನಂದರ ಕೆಲಸವನ್ನೂ ಬಹಳ ಹೊಗಳಿ, ಇಂಥಾ ಪರೋಪಕಾರವನ್ನು ಮಾಡುತ್ತಿರುವ ಸಂಘಕ್ಕೆ ದೇವರು ಒಳ್ಳೆಯದು ಮಾಡಲೆಂದು ಪ್ರಾರ್ಥಿಸಿದರು.

ಗಣಪತಿ.

---

## ಕೊಡಗಿನಲ್ಲಿ ವಿಶೇಷಗಳು

ಅಯ್ಯಾ,

ಕೊಡಗು ದೇಶವು ನಾಲ್ಕು ಕಡೆಗಳಲ್ಲಿಯೂ ಬೆಟ್ಟಗುಡ್ಡಗಳಿಂದ ಸುತ್ತಲ್ಪಟ್ಟಿರುವದರಿಂದ ಇಲ್ಲಿಯ ಹವಾ, ಜನರ ನಡತೆ, ನೀತಿಯೂ ಒಂದು ವಿಶೇಷ ತರದ್ದಾಗಿದೆಂದು ಎಲ್ಲರೂ ತಿಳಿದ ಸಂಗತಿಯಾಗಿದೆ. ತದೋಪಾದಿಯಲ್ಲಿ ಇಲ್ಲಿಯ ಜನರ ಬುದ್ಧಿಯೂ, ವಿದ್ಯೆಯೂ ಕಾನೂನು ಕಾಯಿದೆಯೂ ಬಹು ವಿಶೇಷ ತರವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಈ ದೇಶದಲ್ಲಿ ವಿದ್ಯೆಯೆಂದರೆ ಇಂಗ್ಲಿಷ್ ಕಲಿಯುವದೇ ವಿದ್ಯೆಯೆಂದು ನೂರಕ್ಕೆ ತೊಂಬತ್ತೊಂಭತ್ತು ಜನರ ಆಲೋಚನೆಯಾಗಿದೆ. ಇದು ಎಂದಿಗೂ ಅಲ್ಲ. ಇಂಗ್ಲಿಷ್ ವಿದ್ಯೆಯನ್ನು ನಾವು ಎಷ್ಟು ಕಲಿತರೂ ನಾವು ವಿದ್ಯಾವಂತರಾಗಲಾರೆವು. ಪರದೇಶದವರ ವಿದ್ಯೆ, ನಡತೆ, ನೀತಿಯನ್ನು ನಾವು ಎಷ್ಟು ಕಲಿತರೂ ನಮಗೆ ಅದರಿಂದ ಸುಖ ಎಂದಿಗೂ ದೊರೆಯಲಾರದು. ಆ ವಿದ್ಯೆಯು ನಮ್ಮನ್ನು ಮೃಗಗಳಿಗೂ ಪಕ್ಷಿಗಳಿಗೂ ಮಧ್ಯೆ ಇರುವ ಬಾವಲಿಯಂತೆ ಮಾಡುವದು. ಅದಕಾರಣ ದೇಶೀಯ ವಿದ್ಯೆಯನ್ನು ಕಲಿಯುವದು ಪ್ರತಿಯೊಬ್ಬನ ಸ್ವಧರ್ಮವೆಂದು ಒತ್ತಿ ಹೇಳುತ್ತೇನೆ. ಹಣಗಾರನಾದ ಪ್ರತಿಯೊಬ್ಬನು ದೊಡ್ಡ ಮನುಷ್ಯನೂ, ಎಲ್ಲರ ಗೌರವಕ್ಕೆ ಯೋಗ್ಯನೆಂದು ಹೆಚ್ಚಿನ ಜನರ ಯೋಚನೆಯಾಗಿದೆ. ಇದು ಸರಿಯಲ್ಲವೆಂಬುದು ಅನುಭವದಿಂದ ಜನಸಮುದಾಯಕ್ಕೆ ತಿಳಿದೇ ಇದೆ. ಇವುಗಳಿಗಿಂತಲೂ ವಿಶೇಷವಾದವುಗಳು ಕಾನೂನು ಮತ್ತು ಕಾಯಿದೆಗಳಾಗಿವೆ. ಚೀಫ್ ಕಮಿಶನರ್ ಸಾಹೇಬರವರು ದೂರ ದೇಶದಲ್ಲಿರುವವರಾದುದರಿಂದ ಹೆಚ್ಚಿನ ಸಂಗತಿಗಳು ಅವರ ಗಮನಕ್ಕೆ ಹೋಗುವದೇ ಅಪರೂಪವಾಗಿದೆ. ದೇಶದಲ್ಲಿ ಉತ್ಪತ್ತಿಯಾದದನ್ನೆಲ್ಲಾ ಇಂಜಿನೀಯರ್ ಇಲಾಖೆಯಲ್ಲಿ ಖರ್ಚುಮಾಡುವದರಿಂದ ಈ ಇಲಾಖೆಗೆ ಹೆಚ್ಚು ಗಮನಕೊಡಬೇಕಾದದ್ದು ನ್ಯಾಯವಾದ ಸಂಗತಿಯಾಗಿರುವದು. ಈ ಮೊದಲು ಇಂಜಿನೀಯರ್ ಇಲಾಖೆಯಲ್ಲಿ ಮಡಿಕೇರಿ ಒಂದೇ ಸಬ್ ಡಿವಿಜನ್ ಇದ್ದಾಗ ಈ ಸಬ್ ಡಿವಿಜನನ್ನು ದಕ್ಷಿಣ ಕೊಡಗಿನಲ್ಲಿ ಇಡಬೇಕೆಂದು ಕೌನ್ಸಿಲ್ ಮೆಂಬರುಗಳು ಹೋರಾಡಿದರೂ ಸ್ಟೋರ್ ಮಡಿಕೇರಿಯಲ್ಲಿರುವದರಿಂದ ದಕ್ಷಿಣ ಕೊಡಗಿನಲ್ಲಿ ಸಬ್ ಡಿವಿಜನ್ ಇಡಲಿಕ್ಕೆ ಆಗುವುದಿಲ್ಲವೆಂದೂ, ಎಗ್ಸಿಕ್ಯೂಟಿವ್ ಇಂಜಿನೀಯರ್ ಸ್ಟೋರ್ ನೋಡಿಕೊಳ್ಳುವದಕ್ಕೆ ಆಗುವದಿಲ್ಲವೆಂದೂ ಹೇಳುತ್ತಿದ್ದರು. ಆದರೆ ಈಗ ಸುಮಾರು 6—7 ತಿಂಗಳ ಹಿಂದೆ ಒಬ್ಬ ಆಫೀಸರೇ ಇಂಜಿನೀಯರ ಕೆಲಸವನ್ನೂ ಸಬ್ ಡಿವಿಜನ್ ಕೆಲಸವನ್ನೂ ಹ್ಯಾಗೆ ನೋಡಿಕೊಂಡರು? ಇದರಿಂದ ಒಬ್ಬನೇ ಎರಡು ಕೆಲಸಗಳನ್ನು ನೋಡಿಕೊಳ್ಳಬಹುದೆಂದು ಗೊತ್ತಾಗುವದಿಲ್ಲವೇ? ಚಾರ್ಜ್ ಎಲವೆನ್ಸ್ ಕೊಟ್ಟರೆ ಎರಡು ಕೆಲಸಗಳನ್ನೂ ಒಬ್ಬನೇ ಮಾಡಬಹುದೆಂದೂ, ಚಾರ್ಜ್ ಎಲವನ್ಸ್ ಕೊಡದಿದ್ದರೆ ಮಾತ್ರ ಎರಡು ಕೆಲಸಗಳನ್ನೂ ಒಬ್ಬನಿಂದ ಮಾಡಲಿಕ್ಕೆ ಆಗುವುದಿಲ್ಲವೆಂದೂ ಹೇಳಿದ ಹಾಗೆ ಆಗುವುದಿಲ್ಲವೋ? ಕೌನ್ಸಿಲ್ ಮೆಂಬರುಗಳು ಈ ವಿಷಯಕ್ಕೆ ಹೆಚ್ಚು ಗಮನ ಕೊಡುವರಾಗಿ ನಂಬುತ್ತೇನೆ.

ಕೊಡಗು ಸರ್ಕಾರದ ಇಲಾಖೆಗಳಲ್ಲಿ ಇನ್ನೊಂದು ವಿಶೇಷವೇನೆಂದರೆ—ಸರ್ಕಾರಿ ಉದ್ಯೋಗಸ್ಥರ ಮಕ್ಕಳಿಗೇನೇ ಸರ್ಕಾರಿ ಆಫೀಸುಗಳಲ್ಲಿ ಉದ್ಯೋಗ ಕೊಡುವದು ವಾಡಿಕೆಯಾಗಿದೆ. ಉದ್ಯೋಗಕ್ಕೆ ಬೇರೆ ಸ್ಕೂಲ್ ಫೈನಲ್ ಪಾಸಾದ ಅರ್ಜಿದಾರರೂ ಇದ್ದರೂ ಉದ್ಯೋಗಸ್ಥರ ಮಕ್ಕಳು ಸ್ಕೂಲ್ ಫೈನಲ್ ನಾಪಾಸಾಗಿ ಇದ್ದರೂ ಉದ್ಯೋಗಸ್ಥರ ಮಕ್ಕಳಿಗೇನೇ ಕೆಲಸ ಸಿಕ್ಕುವ ಸಂಭವ ಹೆಚ್ಚು. ಇದಕ್ಕೆ ಉದಾಹರಣೆಗಳನ್ನು ಕೊಡಬಹುದು. ಆದರೆ ವ್ಯಕ್ತಿ ಕುರಿತು ಬರೆಯುವದು ಯುಕ್ತವಲ್ಲದ್ದರಿಂದ ಬಾಕಿ ಮಾಡುತ್ತೇನೆ. ಅಂಥಾ ಸಂದರ್ಭಗಳಲ್ಲಿ ಚೀಫ್ ಕಮಿಶನರ್ ಸಾಹೇಬರವರಿಗೆ ಬರೆದು (Exemption) ಮಂಜೂರಾತಿ ತರಿಸಿಕೊಳ್ಳುತ್ತಾರೆ. ಇದು ಯಾವ ನ್ಯಾಯವೋ ಗೊತ್ತಾಗುವದಿಲ್ಲ. ಮೂವತ್ತು ವರ್ಷ ಸರ್ವೀಸ್ ಆದವರನ್ನು ಪೆಂಶನ್ ಕೊಟ್ಟು ಕಳುಹಿಸಬೇಕೆಂದೂ ಇದಕ್ಕೆ ಮೊದಲು ಕೂಗಾಟ ಕೇಳುತಿತ್ತು. ಆದರೆ ಇದಕ್ಕೆ ಅಧಿಕಾರಿಗಳು ಗಮನಕೊಟ್ಟಂತೆ ಕಾಣುವದಿಲ್ಲ. ಈ ಸಂಗತಿಗಳನ್ನೆಲ್ಲಾ ಪಕ್ಷಪಾತವಿಲ್ಲದ ನಮ್ಮ ಚೀಫ್ ಕಮಿಶನರ್ ಸಾಹೇಬರವರು ಸತ್ಯ ಸಂಗತಿಯನ್ನು ಚೆನ್ನಾಗಿ ಪರಿಶೋಧಿಸಿ ನ್ಯಾಯತೀರ್ಪನ್ನು ಕೊಡದೆ ಇರಲಾರರೆಂದು ನಾನು ನಂಬುತ್ತೇನೆ.

"ದೇಶ ಹಿತೈಷಿ"

---

## ಡಿಸ್ಟ್ರಿಕ್ಟ್ ಬೋರ್ಡಿನ ಅವಸ್ಥೆ.

ಅಯ್ಯಾ,

ಈಗಿನ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಚುನಾಯಿತ ಬಹುಮತವಿರುವುದರಿಂದ ದೇಶಕ್ಕೆ ಬಹಳ ಪ್ರಯೋಜನವಾಗುವುದೆಂದೂ, ನ್ಯಾಯವರಿತು ಕೆಲಸಕಾರ್ಯವು ವಿಲೆವಾರಿಯಾಗುವುದೆಂದೂ ಇದ್ದಂಥಾ ಭರವಸೆಯು ಇತ್ತೀಚೆಗೆ ಸಂಪೂರ್ಣ ಬಯಲಾಯಿತು. ಕಳೆದ ಮೀಟಿಂಗಿನಲ್ಲಿ ಅದರ ಸೂಚನೂ(?) ಸ್ಪಷ್ಟವಾಯಿತು. ಚುನಾಯಿತ ಪ್ರತಿನಿಧಿಗಳು ನ್ಯಾಯವರಿತು ಹೋರಾಡಿ ಕಾರ್ಯಸಾಧನೆಯಿಂದ ತಮ್ಮ ಗೌರವವನ್ನು, ಸಾಮರ್ಥ್ಯವನ್ನೂ ಗಳಿಸುವುದರ ಬದಲು ಮೌನವನ್ನು ತಾಳಿ ಸ್ವಾರ್ಥಸಾಧನೆಯಿಂದ ಗೌರವ ಸಿಗುವುದೆಂಬ ಪೊಳ್ಳು ವ್ರತವನ್ನು ವಹಿಸಿದಂತೆ ಕಂಡಿತು. ಘನವಾದ ತತ್ವಗಳ ಮೇಲೆ ಪಂಗಡ (ಪಾರ್ಟಿ) ವಹಿಸಿದ್ದಿದ್ದರೆ ಅನ್ನೊಂದು ಹಾಸ್ಯಾಸ್ಪದವಾಗುತ್ತಿರಲಿಲ್ಲ. ಪ್ರಜಾಪಕ್ಷ ಒಂದು, ಸರಕಾರ ಪಕ್ಷ ಒಂದು ಯೆಂಬ ಎರಡು ಪಂಗಡಕ್ಕೆ ಮಾತ್ರ ಈಗಿನ ಬೋರ್ಡಿನಲ್ಲಿ ಎಡೆಯಿರುವುದಾದರೂ ನಮ್ಮ ಪ್ರತಿನಿಧಿಗಳ ವ್ಯಕ್ತಿಯೊಂದರ ಒಂದು ಪಂಗಡವೆಂದೆಣಿಸಿಕೊಂಡ ಹಾಗೆ ತಿಳಿದು ಬರುತ್ತದೆ. ಪ್ರತಿಯೊಬ್ಬ ಮೆಂಬರನು ಅವನವನ ಓಟುದಾರರನ್ನು ಮಾತ್ರ ಮೆಚ್ಚಿಸುವುದಕೋಸ್ಕರ ಅವರ ನಾಡಿಗೆ ಸಂಬಂಧವಾದ ಠರಾವುಗಳನ್ನು ಮಂಡಿಸಿದರೆ ಕರ್ತವ್ಯವನ್ನು ಮಾಡಿದ ಹಾಗಾಯಿತೆಂದು ತಪ್ಪು ಭಾವನೆಯನ್ನು ತಾಳಿಕೊಂಡಂತಿದೆ. ಅನೇಕ ಠರಾವುಗಳನ್ನು ಅನುಮೋದಿಸುವವರೂ, ಪುಷ್ಟೀಕರಿಸುವವರೂ ಇಲ್ಲದ್ದನ್ನು ನೋಡಿದರೆ ಮೆಂಬರರು ತಮ್ಮ ಜವಾಬ್ದಾರಿಕೆಯನ್ನು ಸಂಪೂರ್ಣ ಅಲ್ಲಗಳೆದು ಕಾಣುತ್ತದೆ. ಅಷ್ಟಲ್ಲದೆ ಚುನಾಯಿತ ಬಹುಮತವಿರುವ ಬೋರ್ಡನ್ನೇ ಪರಿಹಾಸ್ಯಕ್ಕೊಳಗಾಗುವಂತೆ ಮಾಡಿದಂತಾಗಿದೆ. ಕಳೆದ ಒಂದೆರಡು ವರ್ಷದ ಇವರ ಅನುಭವದಿಂದ ಮೆಂಬರರಿಗೆ ನಾಕಷ್ಟು ಮಾಹಿತಿಯನ್ನೂ ಕಾರ್ಯದಕ್ಷತೆಯನ್ನೂ ಪಡೆದುಕೊಳ್ಳುವರೆಂತಿದ್ದ ಓಟುದಾರರ ನಿರೀಕ್ಷಣೆಯು ಸಫಲವಾಗಲಿಲ್ಲ.

ಕಳೆದ ಮೀಟಿಂಗಿನ ಕಾರ್ಯಕ್ರಮದ ಪಟ್ಟಿಯನ್ನು ನೋಡಿದರೆ ಮೇಲ್ಕಾಣಿಸಿದ ಸಂಗತಿಗಳು ವಾಚಕರಿಗೆ ವಿಶದವಾಗದಿರವು. ಅನೇಕ ಠರಾವುಗಳ ಪೈಕಿ ಒಂದೆರಡಕ್ಕೆ ಮಾತ್ರ ಇಲ್ಲಿ ಪ್ರಾಮುಖ್ಯತೆಯ ಸೂಚನೆಯನ್ನು ಕೊಡತಕ್ಕದಿದೆ. ಮನೆ ಕಂದಾಯ ಯಾ ಕಸಬು ತೆರಿಗೆಯನ್ನು ಡಿ. ಬೋರ್ಡಿನವರು ಹಾಗೂ ಸರಕಾರವು ಕ್ರಮವಾಗಿ ವಸೂಲಿ ಮಾಡುತ್ತಿವೆ. ಪುಕಾರು ಕೇವಲ ಪುರಾತನದಿದೆ. ಭೂಸೆಸ್ಸನ್ನು ಹಳ್ಳಿಯೆಂಬ ನೆಪದಿಂದ ಒಂದಕ್ಕೆರಡಾಗಿ ಏರಿಸಿದ ಕಾಲದಿಂದಲೇ ಕಸಬು ತೆರಿಗೆಯನ್ನು ಸಹ ಅದರಿಂದ ತಪ್ಪಿಸಿಕೊಂಡಿರತಕ್ಕ ತೋಟದ ಮ್ಯಾನೇಜರುಗಳಿಗೂ ಸೂಪರಿಂಡೆಂಟೆಂಟರುಗಳಿಗೂ ವ್ಯಾಪಿಸುವಂತೆ ಮಾಡಬೇಕೆಂದು ಚುನಾಯಿತ ಮೆಂಬರರ ಹೋರಾಟವನ್ನೂ ಸರಕಾರದ ಉದಾಸೀನವನ್ನು ತಿಳಿಯದಿರುವ ವಾಚಕರು ಇರಲಾರರು. ಈ ಬಾಬಿನಿಂದ ಡಿ. ಬೋರ್ಡಿಗೆ ಆಗಾಯಿತಿನಿಂದ ವರ್ಷಂಪ್ರತಿ ಸುಮಾರು ಆರುಸಾವಿರ ರೂಪಾಯಿಗಳ ನಷ್ಟವಾಗುತ್ತಿದೆ. ಅಲ್ಲದೆ ಭೂಕರಗಳನ್ನು ಒಂದಕ್ಕೆರಡಾಗಿ ಏರಿಸಿದಂತೆ ಪುರಾತನ ದರದಲ್ಲಿರುವ ಕಸಬು ತೆರಿಗೆಯನ್ನು ಸಹ ವ್ಯವಸ್ಥೆಪಡಿಸಿದರೆ ಇನ್ನೊಂದು ನಾಲ್ಕು ಸಾವಿರ ರೂಪಾಯಿ ವರ್ಷ ಗಟ್ಲೆ ಡಿ. ಬೋರ್ಡಿಗೆ ಆದಾಯವು ಹೆಚ್ಚಬಹುದು. ಅಂದರೆ ಭೂಮಿದಾರರಿಗೆ ಮಾತ್ರ ಸೆಸ್ಸನ್ನು ಇಮ್ಮಡಿಯಾಗಿ ಮಾಡಿ ಡಿ. ಬೋರ್ಡು ಹೊಟ್ಟೆ ಹೊರೆಕೊಳ್ಳುತ್ತಿದೆ. ಭೂಮಿದಾರರಲ್ಲದ ಇತರ ತೆರಿಗೆದಾರರ ಕಸಬು ತೆರಿಗೆಯನ್ನು ಪುರಾತನ ದರದಲ್ಲಿಯೇ ಇಟ್ಟು ಅದನ್ನು ಸಹ ಅನೇಕ ಇಲಾಖೆಯವರಿಗೆ ವ್ಯಾಪಿಸಗೊಡದೆ ಮಾಡಿಕೊಂಡು ಡಿ. ಬೋರ್ಡಿಗೆ ಪ್ರತಿ ವರ್ಷ ಸುಮಾರು ಹತ್ತು ಸಾವಿರ ರೂಪಾಯಿ ನಷ್ಟಪಡಿಸುತ್ತಿರುವುದು ಅನ್ಯಾಯವೆಂದೂ ಶೋಚನೀಯಕರವೆಂದೂ ಯಾರು ತಾನೆ ಹೇಳುವದಿಲ್ಲ. ವರ್ಷಕ್ಕೆ ಹತ್ತು ಸಾವಿರ ರೂಪಾಯಿ ನಷ್ಟಪಡದಿದ್ದರೆ ಕಳೆದ ಏಳೆಂಟು ವರ್ಷಗಳಿಂದ ನಮ್ಮ ಅನೇಕ ಸಂಕಟಗಳನ್ನು ಪರಿಹರಿಸಿಕೊಳ್ಳಬಹುದಾಗಿತ್ತು. ಬೇಕಾದ ಕಡೆಯಲ್ಲಾ ಆಸ್ಪತ್ರೆಗಳೂ ರಸ್ತೆಗಳೂ ಆಗುತ್ತಿದ್ದವಲ್ಲದೆ ಮರೆನಾಡು(?) ಸಾಧ್ಯ ಅಧೋಗತಿಯಲ್ಲಿರತಕ್ಕಂಥಾ ಭೂಭಾಗವು ಸಹ ಉದ್ಧಾರವಾಗುತ್ತಿತ್ತು.

ಈ ಲೇಖಕನು ಮೆಂಬರರನೇಕರನ್ನು ಅವರ ಕೋಚಿಕೆಯ(?) ವರ್ತನೆಯನ್ನು ಕುರಿತು ವಿಚಾರಿಸಿದಲ್ಲಿ ಠರಾವು ಮಂಡಿಸಿದವರು ವಿಷಯವನ್ನು ಚೆನ್ನಾಗಿ ವಿವರಿಸಲಿಲ್ಲವೆಂತಲೂ ಆದಕಾರಣ ಅನುಮೋದಿಸಲಿಕ್ಕೂ ಪುಷ್ಟೀಕರಿಸಲಿಕ್ಕೂ ಅವರಿಗೆ ಸಾಧ್ಯವಾಗಲಿಲ್ಲವೆಂತಲೂ ತಿಳಿಯಲಾಯಿತು. ಅದಕ್ಕಿಂತಲೂ ಹಾಸ್ಯಾಸ್ಪದವಾದ ಮತ್ತು ಅಯೋಗ್ಯವಾದ ನೆಪವು ಸಿಕ್ಕುವುದು ಕಷ್ಟ. ಪ್ರತಿಯೊಬ್ಬ ಮೆಂಬರನಿಗೂ ಕಾರ್ಯಕ್ರಮದ ಪಟ್ಟಿಯನ್ನು ಒಂದೆರಡು ವಾರಕ್ಕೆ ಮುಂದಾಗಿ ಇರಿಸಿ ಕಳುಹಿಸಿಕೊಡುವುದರ ಅರ್ಥವೇನು? ಅದರಲ್ಲಿ ನಮೂದಿಸಿರತಕ್ಕ ವಿಷಯಗಳನ್ನು ಕುರಿತು ಸಾಧಿಸಿ ಸಂಪೂರ್ಣ ಮಾಹಿತಿಯನ್ನು ಪಡಕೊಂಡು ಮೀಟಿಂಗಿನಲ್ಲಿ ಮೆಂಬರರು ತಮ್ಮ ಕರ್ತವ್ಯವನ್ನು ನೆರವೇರಿಸಬೇಕಲ್ಲದೆ ಸುಮ್ಮನೆ ನೆಪಗಳನ್ನು ಹೂಡಿ ಬೇಜವಾಬುದಾರಿಯ ವರ್ತನೆಯಿಂದ ಕಾಗೆಯು ನವಿಲೆಂದೆಣಿಸಿಕೊಳ್ಳಲಿಕ್ಕೆ ಎಂದೆಂದೂ ಸಾಧ್ಯವಿಲ್ಲ. ಡಿ. ಬೋರ್ಡಿನ ಫೈಲುಗಳಲ್ಲೂ(?) ಸ್ಥಳೀಯ ಪತ್ರಿಕೆಗಳಲ್ಲೂ ಕಸಬು ತೆರಿಗೆಯ ಹೋರಾಟದ ವಿಷಯವಾಗಿ ನಾಕಷ್ಟು ದಾಖಲೆಗಳು ಮೆಂಬರರಿಗೆ ಸಿಕ್ಕುತ್ತಿತ್ತು. ಅನೇಕ ವರ್ಷದ ಹೋರಾಟದಿಂದ ಡಿ. ಬೋರ್ಡಿಗೆ ಚುನಾಯಿತ ಬಹುಮತವು ದೊರೆತದರ ಪ್ರತಿಫಲವೇನು? ಚುನಾಯಿತ ಮೆಂಬರನೊಬ್ಬನು ವೈಸ್ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟುದರ ಪರಿಣಾಮವೇನು? ಇಷ್ಟಲ್ಲದೆ ಪ್ರೆಸಿಡೆಂಟರು ಸಹ ಚುನಾಯಿತ ಮೆಂಬರಾಗಿರಬೇಕೆಂದು ಈ ಮೆಂಬರರು ಕೇಳುವುದರ ಅರ್ಥವೇನು? ಬರೇ ಹೆಸರಿಗೋಸ್ಕರ ಪದವೀಧರರಾಗಿಬಿಡಬೇಕೆಂಬ ಪೈಪೋಟಿಯೋ? ಮುಂದೆ ಒದಗುವ ಡಿ. ಬೋರ್ಡು ಮೀಟಿಂಗಿನಲ್ಲಿ ಮಾಡಿದ ತಪ್ಪನ್ನು ನೇರವಡಿಸಿದರೆ ಸರಿ, ಇಲ್ಲವಾದರೆ ಚುನಾಯಿತ ಮೆಂಬರರೆಲ್ಲರು ರಾಜಿನಾಮೆಯನ್ನೊಪ್ಪಿಸಿ ದೇಶವನ್ನು ಹಾಗಾದರೂ ಉದ್ಧರಿಸಬೇಕೆಂದು ಈ ಮೂಲಕ ಸೂಚನೆ ಇದೆ. ಬರುವ ಮೀಟಿಂಗು ನೋಡಿಕೊಂಡನಂತರ ಮುಂದಿನ ಚಳವಳಿ ಕೈಗೊಳ್ಳಲಾಗುವುದು.

"**ನೊಂದವ.**"

ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಲು ಸುಸಮಯ.

# ಶ್ರೀ ಕರ್ನಾಟಕ ಹರಿದಾಸ ಕೀರ್ತನ ತರಂಗಿಣಿ (ಮಾಸ ಪುಸ್ತಕ)

## (ಎರಡನೆಯ ವರ್ಷಾರಂಭವಾಗಿದೆ.)

'ಹರಿದಾಸ ಸೇವಾ ಸಮಿತಿ' ಯವರಿಂದ ಬಹಳ ಶುದ್ಧ ರೀತಿಯಲ್ಲಿ ಪರಿಶೋಧಿಸಲ್ಪಟ್ಟು ಮಾಸ ಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಲಿರುವ 'ಶ್ರೀ ಕರ್ನಾಟಕ ಹರಿದಾಸ ಕೀರ್ತನ ತರಂಗಿಣಿ' ಯನ್ನು ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿರಿ! ಇದರಲ್ಲಿ ಜಗದ್ವಂದ್ಯರಾದ ಶ್ರೀ ಪುರಂದರದಾಸರು, ಶ್ರೀ ಕನಕದಾಸರೇ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ಹಾಡಿದ ಭಗವನ್ನಾಮ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ಕ್ರೌನ್ ಅಷ್ಟಪತ್ರದ ನಾಲ್ವತ್ತು ಪುಟಗಳ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಲಿವೆ. ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೇ ಹಾಸಲು ಉಚಿತ) ಸಾಧಾರಣ ಪ್ರತಿ ರೂ. ೧–೪–೦ ಉತ್ತಮ ಪ್ರತಿ ರೂ. ೨–೪–೦

## ಪ್ರಥಮ ಸಂಪುಟದ ಬೈಂಡಾದ ಪ್ರತಿಗಳು.

| | ಸಾದಾ ಬೈಂಡು | ದಪ್ಪ ರಟ್ಟಿನ ಬೈಂಡು | ಕಿರ್‍ಗಿನಾರು ಬೈಂಡು |
|---|---|---|---|
| ಸಾಧಾರಣ ಪ್ರತಿ | ೧–೪–೦ | ೧–೧೨–೦ | ೨–೪–೦ |
| ಉತ್ತಮ ಪ್ರತಿ | ೨–೪–೦ | ೨–೮–೦ | ೩–೦–೦ |

ಅಂಚೇಹಾಸಲು ಪ್ರತ್ಯೇಕ.

ವಿಳಾಸ:— ಸುಬೋಧ ಪ್ರಕಟನಾಲಯ,

12–3 ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.



## ಏಕೆ ನರಳುತ್ತೀರಿ?

ಪ್ರಾಚೀನ ಋಷಿಗಳಿಂದ ಪ್ರಣೀತವಾದ ಆಯುರ್ವೇದ ದೀರ್ಘಾಯುಷ್ಯವರ್ಧನವಾದ ಆರೋಗ್ಯವಿಧಿಗಳನ್ನು ತಿಳಿಯದೆ ಅಜ್ಞಾನಾಂಧಕಾರದಲ್ಲಿ ಸಿಲುಕಿ ಅನೇಕ ತರಹಗಳ ವ್ಯಾಧಿಗಳಿಂದ ಏಕೆ ನರಳುವಿರಿ?

**ಶ್ರೇಯವು! ಇಲ್ಲದೆ!!**

ಉಚಿತವಾಗಿ ಕೊಡಲ್ಪಡುವ ನಮ್ಮ

ನಮ್ಮ ಔಷಧಿಗಳನ್ನು ಬಿಕ್ರಿ ಮಾಡುವದಕ್ಕೆ

## ವೈದ್ಯ ವಿದ್ಯೆ

ಏಜಂಟ್ರು ಬೇಕಾಗಿರುವದು.

ಎಂಬ ಪುಸ್ತಕವನ್ನು ಓದಿ, ಬಾಧ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52–13

ರಾಜವೈದ್ಯ ನಾರಾಯಣಜಿ ಕೇಶವಜಿ,

134 ಬ್ರಾಡ್ವೇ ಬಜಾರು ರೋಡು ಮದ್ರಾಸು

N. B. — ವೈದ್ಯ ಸಲಹೆಯು ಶುಲ್ಕವಿಲ್ಲದೆ ಕೊಡಲಾಗುವದು



# Arms, Ammunition and Shooting Requisites !!!



19·6 Illustrated Catalogue Just Issued Free on Application !

| | | | | |
|---|---|---|---|---|
| D· B B L· Rifles | Rs | 120 | to Rs· | 2750· |
| S B. B· L | " | 35 | to " | 950. |
| D· B· B L· Guns | " | 50 | to " | 1350· |
| S· B B L. | " | 35 | to | 275 |
| D· B M· L· | " | 45 | to | 135· |
| S B· M L | " | 30 | to " | 80 |
| B. L Revolvers | " | 35 | to " | 350 |
| Automatic Pistols | " | 30 | to " | 150 |

Brilliant Search Light Lamp For Shooting Camping, Fishing and All such other Night Sports and work Rs 30 Free delivery

**Also swords, Daggers, Cartridges, Caps, Gunpowder and Shooting Requisites at the most competitive rates.**

GOOLAMHUSAIN ALLIBHOY & SONS,

**Largest Importers of Firearms and Ammunition**

**Cheapest priced firm in India,**

24–6 **210 Abdul Rehman Street, BOMBAY.**

ಡಬ್ಬಲ್ ಮತ್ತು ಸಿಂಗಲ್ ಬ್ಯಾರಲ್ ಮತ್ತು ಕೋವಿ ಕತ್ತಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

**ಯಸ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.**

ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.

24–23 12. ಬ್ರಾಡ್ವೇ. ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)



# ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

## ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

**ಉತ್ತಮ ತರಹದ ಸಿಂಗಲ್‌ರೀಡ್ಸ್ ಹಾರ್ಮೋನಿಯಂಗಳು.**

| | |
|---|---|
| ಬಹಾರ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 50–8–0 |
| ಕೋಕಿಲಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 40–0–0 |
| ಮೋಹನ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 37–8–0 |
| ಸ್ಟೀಂ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 35–0–0 |
| ರಾಜಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ | 32–8–0 |

**ಉತ್ತಮ ತರಹದ 14 ಕ್ಯಾರೆಟ್ಟು ಬಂಗಾರದ ನಿಬ್ಬು ಹಾಕಿದ ಫೌನ್‌ಟೆನ್ ಪೆನ್‌ಗಳು.**

| | |
|---|---|
| ಬ್ಲಾಕ್ ಬರ್ಡ್ ಫೌನ್‌ಟೆನ್ ಪೆನ್ 1ಕ್ಕೆ | 1–8–0 ಮತ್ತು 3–12–0 |
| ಸರ್ಲ್ಯಾಂಡ್ ನಂಬರ್ ಫೌನ್‌ಟೆನ್ ಪೆನ್ 1ಕ್ಕೆ | 3–0–0 ಮತ್ತು 3–8–0 |
| ಕಾನ್‌ವೆಂಟ್ ಸೆಲ್ಫ್ ಫಿಲಿಂಗ್ ಫೌನ್‌ಟೆನ್ ಪೆನ್ 1ಕ್ಕೆ | 4–8–0 |
| ವಾಟರ್ ಮನ್ ಫೌನ್‌ಟೆನ್ ಪೆನ್ 1ಕ್ಕೆ | 8–0–0 ಮತ್ತು 8–8–0 |
| ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌನ್‌ಟೆನ್ ಪೆನ್ 1ಕ್ಕೆ | 12–0–0 ಮತ್ತು 15–0–0 |

**ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು**

| | |
|---|---|
| ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ | 4–8–0 |
| ವೆಸ್ಟಂಡ್ ಕಂಪೆನಿಯ ಅಲಾರಂ ಟೈಂಪೀಸ್ 1ಕ್ಕೆ | 8–0–0 |
| ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ | 9–5–0 |
| ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ | 6–12–0 |
| ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ | 6–0–0 |

27 ಸಚಿತ್ರ ಕ್ಯಾಟಲಾಗ್ ಬಗ್ಗೆ 6 ಕಾಸಿನ ಸ್ಟಾಂಪು ಕಳಿಸಿರಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು, ಮೈಸೂರು.

## ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

| | ರೂ. |
|---|---|
| ಶೇರ್ ಬಂಡವಾಳ — | 50,000 |
| ವಸೂಲಾದ ಶೇರ್ ಹಣಗಳು — | 17 190 |
| ಇಡಲ್ಪಟ್ಟ ಠೇವಣಾತಿ — | 1,62,320 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅದವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೪ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ವೈಸ್ ಚೇರ್ಮನ್, ಕೊಂಗಾಂಡ್ರ ಅಪ್ಪಯ್ಯನವರು.

ಸೆಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್

ತಾರೀಕು 1—7—1928

## ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಮತ್ತು ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು.
ದಕ್ಷಿಣ ಕೊಡಗಿಗೆ—ಮೆ. ಚಂಗಂಡ ಕುಟ್ಟಪ್ಪನವರು,
ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚೆಣ್ಣಪ್ಪನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಮರೆನಾಡು—ಮೆ ಕೇಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು

ವೀರರಾಜಪೇಟೆ—ಮೆ ಕಾಣಚೇರಿರ ನಂಜಪ್ಪನವರು,
ಮೂರ್ನಾಡು—ಪಡೆಯಂಡ ಪೇಮೈಯ್ಯನವರು,
ಸಾಪೋಕ್ಲು—ಮೆ. ಟಿ. ಆರ್ ರಾಮೈಯ್ಯನವರು,
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ. ಜಿ ಮುದ್ದವ್ವೈಯ್ಯನವರು,
ಹುದಿಕೇರಿ & ತಿತಿಮತ್ತಿ—ಮೆ. ಬಿ. ಮಾದಮ್ಮಯ್ಯನವರು,

ಸೂಚನೆ —ಪ್ರಿಂಟು ಆದ ರಶೀತಿ ಪಡೆಯದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

## ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್,
"ಕೊಡಗು" ಮಡಿಕೇರಿ.



12 bore Victor Cartridges Rs 10/- Per 100

**Mahomedally-Noorbhoy.**
ARMS & AMMUNITION MART.
321 Abdul Rehman Street.
BOMBAY. 3.

52-9

ಕಟುಕಶ್ಯಾಯ ಮಂಜಿಷ ರಸ್ಸ:—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಂಪ್ರತಿ ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ತೋರುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ. 4—0—0, 6ಕ್ಕೆ ರೂ 7—8—0, 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವದು ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸ್ವಾಧೀನವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಮತ್ತು ನ ರೋಗ ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲಿ 1, 3, 6ಕ್ಕೆ ರೂ. 1—4—0 3—4—0 6—12—0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವುಳ್ಳ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿಯಿಂದ ಕೀವು ಸೋರುವುದು ತಿವುರುವಿಕೆ, ಕಣ್ಣು ನೋವು, ಅಪರಾತ್ರಿ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೊಡವು ಇಲ್ಲದೆ ಸ್ವರ್ಣ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—5—0

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ—ಮನೋಲ್ಲಾಸಿನಿ ಕಂಪನಿ.
9. ಮಂಗಳೂರು.

52—5

## EMPIRE OF INDIA
## LIFE ASSURANCE COMPANY, LIMITED.

(Established 1897.)

A Monthly payment of Rs 12/8/- will secure a With Profit Assurance as shown below which will further increase by Bonus Additions.

| Age next Birthday. | Assurance payable at Death | | | | Endowment Assurances payable at Death or at end of | | |
|---|---|---|---|---|---|---|---|
| | Whole Life | Premiums Limited to | | | | | |
| | | 15 Years | 20 Years | 25 Years | 20 Years | 25 Years | 30 Years |
| | Rs | Rs | Rs | Rs | Rs | Rs | Rs |
| 25 | 5,820 | 3,550 | 4,250 | 4,800 | 3,010 | 3,800 | 4,520 |
| 30 | 5,140 | 3,290 | 3,930 | 4,390 | 2,930 | 3 620 | 4,220 |
| 35 | 4,480 | 3,030 | 3,600 | 3 970 | 2,810 | 3,400 | 3,870 |

Wannted —Agents at Mercara, Somwarpet and Siddapur.

HEAD OFFICE.
Empire of India Life Building,
BOMBAY.

24—20.

BRANCH OFFICE.
152, Commercial Street,
BANGALORE.

ಕಳಾರಿಕೆ ಮಾಲುಗಳಿಗೆ ಮೋಸ ಹೋಗಬೇಡಿರಿ!

ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ.

ಅಜಮಾಯಿಸಿ ನೋಡಿರಿ.

ಇನಾಮಿನ ಬಟ್ಟಲುಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ.

ಎಲ್ಲಾ ಆರ್ಡರುಗಳನ್ನೂ ಭಲೋ ರೀತಿಯಿಂದಲೂ, ತುರಿತವಾಗಿಯೂ ಗ್ಯಾರಂಟಿಯೊಡನೆ ಜಾರಿ ಮಾಡಲಾಗುವದು

ಕೇಶವಜಿ ದೇವಚಂದ್,
ಜ್ಯುವೆಲ್ಲರ್, (ಕೆಟಲಾಗ್ ಮುಫತ್).
21 ಚೈನಾ ಬಜಾರ್ ರೋಡ್, ಮದರಾಸು.

12—10

ಸ್ಥಾಪನೆ—1874.

ಹೆಡ್ ಆಫೀಸು—ಬೊಂಬಾಯಿ.

## ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

**1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ವೈವಾಟದ ಫಲ.**

## ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

ವಿಮೆದಾರರಿಗೆ ಹೆಚ್ಚಾಗಿ ಸಿಕ್ಕಿರುವ ಬೋನಸು { 1000 ರೂಪಾಯಿಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ—ರೂ. 25
1000 ,, ಎಂಡೋಮೆಂಟ್ ,, ,, —ರೂ. 20.

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಚಿಂತೆಯಿಲ್ಲ. ಪುನಹ ಒಂದು ಹೊಸ ಪಾಲಿಸಿಯನ್ನು "ಓರಿಯಂಟಲ್" ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವುಂಟು. ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಓರಿಯಂಟಲ್ ಬಿಲ್ಡಿಂಗ್ಸ್,
ನಂ. 1. ಸೌತ್ ಪರೇಡ್, ಬೆಂಗಳೂರು.

52-30

ಯಲ್. ಆರ್. ಕೃಷ್ಣಸ್ವಾಮೈಯ್ಯರ್.
ಬ್ರಾಂಚ್ ಸೆಕ್ರಟರಿ.

Printed & published by P. I. Belliappa, at "Kodagu" Press, Mercara for "Kodagu" Ltd.

"KODAGU" OFFICE, MERCARA.
If not delivered please return to

# ಕೊಡಗು.

[illegible]

ವಾರ್ಷಿಕ ಚಂದಾ ರೂ. ೩-೮-೦.

ಪ್ರತಿ ಶುಕ್ರವಾರ, ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ–ಪಂದ್ಯಂಡ ಐ. ಬೆಳ್ಯಪ್ಪ.



## GENT'S OUTFITTING DEPARTMENT.

### NEW ARRIVALS!

Bow Ties @ Rs 2–8–0, 2–4–0, and 1–12–0 each
Wide-end Ties @ „ 2–8–0, 2–0–0 and 1–8–0 „
Cotton Handkerchieves @ 4–8–0 a dozen.
Woollen Stockings @ 3–8–0 a pair

Flash Garters to match @ 1–12–0 each.
Cashmier Socks @ 2–4–0 each.
Kremntz Links @ 4–8–0 a set.
„ Studs @ 0–14–0 „

52–42 **SPENCER & CO. LTD.** Gents Outfitting Specialists. **MERCARA.**

Post Box 423,
TRIPLICANE, MADRAS.

**MANUFACTURES AND DEALS IN ALL:—**

(1) Gemset Jewels, gold and silver articles of all patterns
(2) Race Cups Caskets, Medals, etc. for presentation purposes.
(3) Trovels, Keys, Locks, etc, for ceremonial purposes.

JEWELLER BY APPOINTMENT TO His Excellency THE GOVERNOR OF MADRAS.

Catalogue Free to Bonafide Enquirers

**UNDERTAKES:—**

(1) Remaking or Remodelling of all sorts of old gemset jewels to latest patterns.
(2) Electro plating, gilding and nickel-ling
(3) Buying old jewellery, or under-taking to effect sale.

## V. SUBRAMANIA IYER
## JEWELLER

52–10

**Gold-smith, Silver smith, & Dealer in all Gemset Jewels.**

## ನೀವು ನಿರ್ಬಲಸ್ತರಾಗಿ ಯಾಕೆ ನರಳುವಿರಿ?

ಇಪ್ಪತ್ತು ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

### ಸಾಲಂಮಿಸ್ರಿ ಮುರಬ್ಬ

ಸೇವನೆಯಿಂದ ಎಧಾ ಧಾತು ಜನ್ಯವಿಕಾರಗಳನ್ನು, ನರಗಳ ಶಕ್ತಿ ಕುಂದಿಹೋಗಿರುವದನ್ನು ಮೆದುಳಿನ ಬಲಹೀನತೆಯನ್ನೂ ಇಂಥಾ ರೋಗಗಳನ್ನೆಲ್ಲಾ ಯುಕ್ತಿಗನುಗುಣವಾಗಿ ನಾಶಮಾಡಿಕೊಂಡಿರುವದಕ್ಕೆ ತನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸುತ್ತದೆ. ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ಮಹನೀಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ಯಾರೂ ತರಿಸಿ ನೋಡಬಹುದು. ಒಂದು ಡಬ್ಬಿ ೧೫ ದಿನಗಳ ಸೇವನೆಯಿಂದಲೇ ಇದರ ಗುಣವು ತೋರಿಬರುವುದು. ೨-೩ ಡಬ್ಬಿಗಳ ಸೇವನೆಯಿಂದ ಜನ್ಮಾಂತ್ಯದವರೆಗೂ ಸಂಪೂರ್ಣ ಗುಣವನ್ನುಂಟುಮಾಡುವದು ನಮ್ಮ ಟ್ರೇಡ್ ಮಾರ್ಕು ನೋಡಿ ಡಬ್ಬಾ ತೆಗೆದುಕೊಳ್ಳಿರಿ. ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಅವಶ್ಯಕವಿರುತ್ತೆ.

ಕ್ರಯ ಡಬ್ಬಿ ೧ಕ್ಕೆ ೨–೦–೦. ಟಪ್ಪಾಲು ಖರ್ಚು ೧೦ಂದ ೩ ಡಬ್ಬಾಗಳವರೆಗೆ ೦–೮–೦.

**ಡಿ. ಮುನ್ನಾಲಾಲ್,**
ಡೆಲ್ಲಿ ಸೇಟೀವ್ ಡಾಕ್ಟರು, ಸಾಲಂಮಿಸ್ರಿ ಮುರಬ್ಬ ಫಾರ್ಮಸಿ, ಬೆಂಗಳೂರು ಸಿಟಿ.

### ಅ ಪೂ ರ್ವ ಸಂ ದ ರ್ಭ.

ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸಬೇಕಾದರೆ ಇದೀಗ ಅಪೂರ್ವ ಸಂದರ್ಭ.

## ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ, ಮಲಬದ್ಧತೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಮಾಡುವುವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ! ಧರ್ಮಾರ್ಥ!!

### ಕಾ ಮ ಶಾ ಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ:—

52–16 ಆತಂಕನಿಗ್ರಹ ಔಷಧಾಲಯ, ಚಿಕ್ಕಪೇಟೆ, ಬೆಂಗಳೂರು ಸಿಟಿ.

# ಕೊಡಗು.

ಸಂ ೧೯೨೮ ನೇ ಇಸವಿ

ನವಂಬರ್ ತಾ. ೧೬ನೇ ಶುಕ್ರವಾರ.


## ಕೌನ್ಸಿಲ್ ಅಧಿವೇಶನ.

ಕಳೆದವಾರ ನಡೆದ ಕೊಡಗು ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ ಅತ್ಯಂತ ಮಹತ್ವದ ತೀರ್ಮಾನಗಳಾದವು. ಹಿಂದೂಸ್ಥಾನವು ಹೆಚ್ಚಿನ ರಾಜಕೀಯ ಸುಧಾರಣೆಗೆ ಅರ್ಹವಾಗಿದೆಯೋ ಎಂಬುದನ್ನು ಅಜಮಾಯಿಸಲಿಕ್ಕೆ ಬಂದಿರುವ ಸೈಮನ್ ಕಮಿಶನನ್ನು ಬಹಿಷ್ಕರಿಸಬೇಕೆಂಬ ಠರಾವು ಮಂಜೂರಾಯಿತು. ಹಿಂದೂ ದೇಶದ ಬೇರೆ ಪ್ರಾಂತೀಕ ಕೌನ್ಸಿಲುಗಳಲ್ಲಿ ಪ್ರಾರಂಭದಲ್ಲಿ ಬಹಿಷ್ಕಾರದ ಠರಾವು ಪಾಸಾಗಿದ್ದರೂ ಈಚೆಗೆ 9 ಪ್ರಾಂತ್ಯಗಳ ಪೈಕಿ 8 ಪ್ರಾಂತ್ಯಗಳ ಕೌನ್ಸಿಲುಗಳು ಈ ಕಮಿಷನಿನೊಂದಿಗೆ ಸಹಕರಿಸಲು ಕಮಿಟಿಗಳನ್ನು ನೇಮಿಸಿವೆ. ಈ ರೀತಿ ಬೇರೆ ಪ್ರಾಂತ್ಯಗಳಲ್ಲಿ ಸಹಕಾರ ದೊರಕಿದ ಎಷ್ಟೋ ಸಮಯದ ನಂತರ ರಾಯಲ್ ಕಮಿಷನು ಈ ದೇಶದ ಕೌನ್ಸಿಲಿನಲ್ಲಿ ಬಹಿಷ್ಕರಿಸಲ್ಪಟ್ಟದ್ದು ಮಹತ್ವದ ವಿಷಯವೇ ಸರಿ. ಈ ಕೌನ್ಸಿಲಿನಲ್ಲಿ ಒಬ್ಬಿಬ್ಬ ಚುನಾಯಿತ ಮೆಂಬರರು ಕಮಿಷನಿನೊಂದಿಗೆ ಸಹಕರಿಸದೆ ಇರುವದು ಹಾನಿಕರವೆಂದೇ ವಾದಿಸಿದರು. ಈ ದೇಶದ ಮುಂದಿನ ರಾಜಕೀಯ ರಚನೆಯ ವಿಷಯದಲ್ಲಿ ಕಮಿಷನಿನ ಮೆಂಬರುಗಳಂಥ ಅನುಭವಸ್ಥರ ಮತ್ತು ಬುದ್ಧಿಶಾಲಿಗಳ ಸಲಹೆಯನ್ನು ತೆಗೆದುಕೊಳ್ಳಬಹುದಿತ್ತೆಂದೂ, ಬಹಿಷ್ಕರಿಸುವದರಿಂದ ನಮ್ಮ ಪ್ರಾಂತ್ಯಕ್ಕೆ ಏನೊಂದೂ ಪ್ರಯೋಜನದ ಪರಿಹಾರವು ದೊರೆಯಲಾರದೆಂದೂ ಅವರ ವಾದವಾಗಿದೆ. ದೇಶದವರು ತಮ್ಮ ಭವಿಷ್ಯತ್ತು, ಸರಕಾರದ ವಿಷಯ, ತಮ್ಮೊಳಗೆ ತೀರ್ಮಾನಿಸಿಕೊಳ್ಳದೆ ಸೈಮನ ಕಮಿಷನಿನ ಸಹಾಯ ನಿರೀಕ್ಷಿಸುವದು ಒರೇ ತಿರುಕನ ಸ್ವಪ್ನವೇ ಸರಿ. ಯಾರೇ ಆಗಲಿ ಈ ಪ್ರಾಂತ್ಯದ ಭಾವಿಸರ್ಕಾರವನ್ನು ಈ ಕೆಳಗಿನ ಮೂರು ವಿಧಾನಗಳಲ್ಲಿ ಯಾವದಾದರೂ ಒಂದು ರೀತಿಯಲ್ಲಿ ನಡಿಸಬೇಕು. ಪ್ರತ್ಯೇಕ ಪ್ರಾಂತೀಕ ಸರ್ಕಾರವಾಗಿರುವದು, ಯಾ ಮದ್ರಾಸು ಪ್ರಾಂತ್ಯದೊಂದಿಗೆ ಸೇರಿಕೊಳ್ಳುವದು, ಅಥವಾ ಇತರ ಕನ್ನಡ ಜಿಲ್ಲೆಗಳೊಂದಿಗೆ ಸೇರಿ ಪ್ರತ್ಯೇಕ ಕರ್ನಾಟಕ ಪ್ರಾಂತ್ಯವನ್ನು ನಿರ್ಮಿಸುವದು. ಇವಲ್ಲದೆ ಬೇರೆ ಉಪಾಯಗಳೇನೂ ತೋರುವದಿಲ್ಲ.

ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿ ಇಟ್ಟುಕೊಳ್ಳಬೇಕೆಂಬುದಕ್ಕೆ ಸರ್ಕಾರದ ಉತ್ಪತ್ತಿಯು ಖರ್ಚಿಗೆ ಸಾಲದು ಎಂಬುದು ಒಂದು ದೊಡ್ಡ ಅಡಚಣೆಯಾಗಿದೆ. ಹಣದ ಅಭಾವವನ್ನು ನಿವಾರಿಸಿಕೊಳ್ಳಲು ಸೈಮನ್ ಕಮಿಷನಿನ ಸಹಾಯ ದೊರಕೀತೆಂತ ಆಶಿಸುವವರು ಇದ್ದಾರರು. ಪ್ರತ್ಯೇಕವಾಗಿರುವಾಗ ಪ್ರಜಾಜವಾಬ್ದಾರಿ ಸರ್ಕಾರ ಕೊಡಲಾಗುವದಿಲ್ಲವೆಂತ ಸೈಮನ್ ಕಮಿಷನಿನಿಂದ ಹೇಳಿಸಿಕೊಳ್ಳುವ ಅವಶ್ಯಕತೆ ಇಲ್ಲ. ಪ್ರಜಾಜವಾಬ್ದಾರಿ ಸರ್ಕಾರಕ್ಕೆ ದೇಶವು ತಯಾರಿದೆ ಎಂಬುದಕ್ಕೆ ದೇಶ ಹಿತೈಷಿಗಳೆಲ್ಲರೂ ಒಪ್ಪುತ್ತಾರೆ. ಅಂಥಾ ಆಡಳಿತ ಪದ್ಧತಿಯನ್ನು ಬೇರೆಯೇ ಇದ್ದು ನಡಿಸಿಕೊಳ್ಳಲು ಸಾಧ್ಯವೋ ಯಾ ಬೇರೆ ಪ್ರಾಂತ್ಯದೊಡನೆ ಸೇರಿಯೇ ನಡಿಸಿಕೊಳ್ಳಬೇಕೋ ಎಂಬುದು ವಾದಾಸ್ಪದದ ವಿಷಯವಾಗಿದೆ. ಇದನ್ನು ದೇಶದ ಜನರು ತಮಗೆ ಯುಕ್ತವಾದ ರೀತಿ ತೀರ್ಮಾನಿಸಿಕೊಳ್ಳಬೇಕೇ ಹೊರತು, ಜನರ ಅಪೇಕ್ಷೆಗೆ ವಿರೋಧವಾಗಿ ಸೈಮನ್ ಕಮಿಷನಿನವರು ಬಾಧಿತವಾಗಿಯೂ ನಿರ್ಧಾರವನ್ನು ಮಾಡಲಾರರಾಗಿ ಸಾಧಾರಣ ಬುದ್ಧಿಗೆ ತಿಳಿಯುವ ಸಂಗತಿಯಾಗಿದೆ. ಈ ವಿಷಯದಲ್ಲಿ ದೇಶದ ಜನರು ಒಗ್ಗಟ್ಟಿನ ತೀರ್ಮಾನಕ್ಕೆ ಬರದಿದ್ದರೆ ಮುಂದಾಳುಗಳು ದೇಶದ ಜನಸಮುದಾಯಕ್ಕೆ ತಿಳುವಳಿಕೆ ಕೊಟ್ಟರೆ ಪ್ರಯೋಜನವಾಗುವದೇ ಹೊರತು ರಾಯಲ್ ಕಮಿಷನಿನ ಮುಂದೆ ಹೋದರೇನೂ ಪ್ರಯೋಜನವಾಗಲಿಕ್ಕಿಲ್ಲ.

ಸೈಮನ್‌ಕಮಿಷನನ್ನು ಬಹಿಷ್ಕರಿಸಬೇಕೆಂದು ಕೊಡಗಿನಲ್ಲಿ ಪ್ರಥಮತಃ ಜಮೀನ್ದಾರರ ಸಂಘವು ತನ್ನ ವಿಶೇಷ ಮಹಾಸಭೆಯಲ್ಲಿ ತೀರ್ಮಾನಿಸಿತು. ಆ ನ್ಯಾಯವಾದ ಮತ್ತು ಆತ್ಮಗೌರವದ ತೀರ್ಮಾನವನ್ನು ಅಂಗೀಕರಿಸಿ, ಖಾಯಿದೆ ಮಂಡಲಿಯ ಹತ್ತು ಚುನಾಯಿತ ಮೆಂಬರುಗಳು ಕೌನ್ಸಿಲಿನ ಕಳೆದ ಬಜೆಟ್ ಮೀಟಿಂಗಿಗೆ ಹೋಗದೆ ರಾಯಲ್ ಕಮಿಷನಿನ ನೇಮಿಸುವಿಕೆಯಿಂದ ತಮಗುಂಟಾದ ಅತೃಪ್ತಿಯನ್ನು ತೋರಿಸಿದರು. ಅಷ್ಟು ಮಾತ್ರವಲ್ಲ, ಜನರ ಆ ಪ್ರತಿನಿಧಿಗಳೇ ಈ ಸಾರಿಯ ಮೀಟಿಂಗಿನಲ್ಲು ಸಂಪೂರ್ಣ ಬಹಿಷ್ಕಾರದ ಠರಾವನ್ನು ಮಂಜೂರುಮಾಡಿಸಿ ಜಮೀನ್ದಾರರ ಸಂಘದ ಮತ್ತು ದೇಶದ ಮರ್ಯಾದೆಯನ್ನು ಕಾಪಾಡಿದ್ದು ಅಭಿನಂದನೀಯ ಸಂಗತಿಯಾಗಿದೆ. ಈ ತೀರ್ಮಾನವು ದೇಶದಲ್ಲಿ ಮತ್ತಷ್ಟು ಉತ್ಸಾಹವನ್ನು ಹುಟ್ಟಿಸದೆ ಇರದು.

ಸ್ವತಂತ್ರ ಕರ್ನಾಟಕ ಪ್ರಾಂತ್ಯದೊಡನೆ ಕೊಡಗು ಸೇರಿಕೊಳ್ಳುವದು ಉತ್ತಮವೆಂಬ ಠರಾವೂ ಬಹುಮತದಿಂದ ಪಾಸಾಯಿತು. ಈ ದೇಶದಲ್ಲಿ ಪ್ರತ್ಯೇಕ ಸರ್ಕಾರ ನಡೆಸಲು ಸಾಧ್ಯವಿಲ್ಲವೆಂತಾದರೆ ಬೇರೆ ಪ್ರಾಂತ್ಯದೊಡನೆ ಸೇರಿಕೊಳ್ಳಬೇಕಾಗುತ್ತದೆ. ಅಂಥಾ ಬೇರೆ ಪ್ರಾಂತ್ಯವು ಭಾಷೆಯನ್ನು ಹೊಂದಿದ್ದರೆ ದೇಶದ ಅಭಿವೃದ್ಧಿಗೆ ಅತ್ಯಂತ ಸಹಾಯಕರವೆಂಬುದನ್ನು ಎಲ್ಲರೂ ಒಪ್ಪಲೇಬೇಕು. ದೇಶಭಕ್ತಿಗೆ ಭಾಷಾಪ್ರೇಮವು ಒಂದು ಮೆಟ್ಟಲಾಗಿದೆ. ಕರ್ನಾಟಕ ರಾಜ್ಯವೆಂಬ ಭಾವನೆಯು ಮನಸ್ಸಿನಲ್ಲಿ ಹುಟ್ಟಿತೆಂದರೆ ಕರ್ನಾಟಕ ರಾಜ್ಯದ ಪ್ರಾಚೀನ ಇತಿಹಾಸವೂ, ಸಂಸ್ಕೃತಿಯೂ ಜನರನ್ನು ಹುರಿದುಂಬಿಸಿ ಗತವೈಭವವನ್ನು ಪುನಃ ಸ್ಥಾಪಿಸಲು ಅನುಕೂಲಿಸುತ್ತದೆ. ಕರ್ನಾಟಕ ರಾಜ್ಯದಲ್ಲಿ ಆಡಳಿತವು ಪೂರ್ತಿ ಕನ್ನಡ ಭಾಷೆಯಲ್ಲೇ ನಡೆಯುವದರಿಂದ ಪ್ರಜಾಜನರು ತಮ್ಮ ಹವಾಲುಗಳನ್ನು ಅಧಿಕಾರಿಗಳಿಗೆ ಹೇಳಿಕೊಳ್ಳಲು ಈಗಿನಂತೆ ಇಂಗ್ಲಿಷು ಕಲಿತವರ ಆಶ್ರಯ ಹುಡುಕಬೇಕಾದ ಅವಶ್ಯವಿರುವದಿಲ್ಲ. ಅಂಥಾ ಪ್ರಾಂತ್ಯವಾಯಿತೆಂದಾದರೆ ಕನ್ನಡ ಭಾಷೆಯ ಪುಸ್ತಕಗಳಲ್ಲಿ ತಿಳಿಯದ ವಿಷಯವಿಲ್ಲವೆಂತಾಗುವದರಲ್ಲಿ ಸಂಶಯವಿಲ್ಲ. ಆಗ ಜನರು ಈಗಿನಂತೆ ನಿಸ್ಸಹಾಯಕರಾಗಿ ದಿಕ್ಕುತೋರದೆ ಕೂರುವದರ ಬದಲು ಜೀವಕಳೆ ತುಂಬಿದವರಾಗಿ ಉತ್ಸಾಹದಿಂದ ಸಾರ್ವಜನಿಕ ಕಾರ್ಯಗಳಲ್ಲಿ ಕೈಹಾಕಲು ತುಂಬಾ ಸಹಾಯವಾಗುತ್ತದೆ.

ಕರ್ನಾಟಕ ಮಾತೆಯು ವಿಶ್ವರೂಪು ಜನರ ಮುಂದೆ ಇನ್ನೂ ಕಾಣಿಸಿಕೊಳ್ಳದೆ ಇರುವದರಿಂದ ಜನರು ಕರ್ನಾಟಕ ಪ್ರಾಂತ್ಯದ ವಿಷಯದಲ್ಲಿ ಅಷ್ಟೊಂದು ಉತ್ಸಾಹಿಗಳಾಗಿರುವದಿಲ್ಲ. ಈ ದೇಶವು ಕೆಲವು ಶತಮಾನಗಳಿಂದ ಬೇರೆ ಸರ್ಕಾರವುಳ್ಳದ್ದಾಗಿರುವದರಿಂದ ಅಂಥಾ ವ್ಯಕ್ತಿತ್ವವನ್ನು ಉಳಿಸಿಕೊಳ್ಳಬೇಕೆಂಬ ಕಾಂಕ್ಷೆಯು ಅನೇಕರಲ್ಲಿ ಇನ್ನೂ ಇರುವದು ಸ್ವಭಾವಿಕವಾಗಿದೆ. ಆದುದರಿಂದ ಜಮೀನ್ದಾರರ ಸಂಘವು ಈಗ ಬೇರೆ ಇರುವ ಕೊಡಗಿಗೆ, ಸಂಪೂರ್ಣ ಪ್ರಜಾಜವಾಬ್ದಾರಿ ಸರಕಾರದ ರಚನೆಯನ್ನು ತಯಾರಿಸಿರುವದಾಗಿದೆ. ಆ ರಚನೆಯು ಕಾಯಿದೆ ಮಂಡಲಿಯಲ್ಲಿ ಮಂಜೂರಾದುದರ ಮಹತ್ವವನ್ನು ಹೇಳಿ ಪೂರೈಸಕೂಡದು. ಇಲ್ಲಿಯ ಜನರು ಬ್ರಿಟಿಷ ಸರ್ಕಾರದಲ್ಲಿ ತುಂಬಾ ಭರವಸೆ ಇಟ್ಟಿದ್ದರು. ಅವರ ದೇಶವನ್ನು ಬ್ರಿಟಿಷರ ಅಧೀನಕ್ಕೆ ಬಿಟ್ಟುಕೊಟ್ಟಾಗ ಬ್ರಿಟಿಷರು ಕೊಟ್ಟ ಭಾಷೆಗಳನ್ನು ಸರಕಾರವು ತೃಣೀಕರಿಸ ತ್ತಾ ಬಂದದ್ದರಿಂದಲೂ, ಪ್ರಪಂಚವನ್ನೆಲ್ಲಾ ಈಗ ಆವರಿಸಿಕೊಂಡಿರುವ ಪ್ರಜಾಜವಾಬ್ದಾರಿ ಸರಕಾರದ ಪದ್ಧತಿಯ ಪ್ರವಾಹವು ಕೊಡಗಿಗೂ ತಲುಪಿದ್ದರಿಂದಲೂ, ಶಾಂತಿಯನ್ನು ಕೊಟ್ಟ ಸರ್ಕಾರವಿದ್ದರೂ ಬಡತನವು ಹೆಚ್ಚುತ್ತಿರಲು ಪರಾಧೀನತೆಯೇ ಕಾರಣವೆಂಬದನ್ನು ಜನರು ತಿಳಿಯುತ್ತಾ ಬಂದದ್ದರಿಂದಲೂ ಕೊಡಗು ನಿವಾಸಿಗಳು ತಮ್ಮ ಜನ್ಮಸಿದ್ಧಹಕ್ಕಾದ ತಮ್ಮನ್ನು ತಾವೇ ಆಳಿಕೊಳ್ಳುವ ಸ್ವಾತಂತ್ರ್ಯವನ್ನು ಪಡೆಕೊಳ್ಳಬೇಕೆಂತ ತೀರ್ಮಾನಿಸಿರುತ್ತಾರೆ. ಜನರ ಈ ತೀರ್ಮಾನಕ್ಕೆ ಕೌನ್ಸಿಲಿನಲ್ಲಿ ಒಪ್ಪಿಗೆ ಸಿಕ್ಕಿದ್ದು ಬಹಳ ತೃಪ್ತಿಕರವಾಗಿದೆ. ಪರಾಧೀನತೆಯನ್ನು ತಪ್ಪಿಸಿಕೊಂಡು ಸ್ವತಂತ್ರರಾಗಬೇಕೆಂಬ ಜನರ ಸಂಕಲ್ಪವು ಫಲರೂಪಕ್ಕೆ ಬರಲು ಬಹಳ ದೂರವಿಲ್ಲವೆಂತ ನಮಗೆ ಅನ್ನಿಸುತ್ತದೆ. ಕೌನ್ಸಿಲ್ ತೀರ್ಮಾನದಿಂದ ಮಾತ್ರ ಜನರು ತಮ್ಮ ಕೆಲಸ ತೀರಿತೆಂದು ಸುಮ್ಮನೆ ಕೂರಬಾರದು. ತಮ್ಮ ಅಭಿಲಾಷೆಯನ್ನು ಕೌನ್ಸಿಲ್ ಸರ್ಕಾರಕ್ಕೆ ತಿಳಿಸಿದಕ್ಕೆ ಮಾತ್ರ ತೃಪ್ತರಾಗಿ, ತಮ್ಮ ಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯವನ್ನು ಪಡೆಯಲು ಜನರು ಇನ್ನಷ್ಟು ಉತ್ಸಾಹದಿಂದ ಕೆಲಸ ಮಾಡಬೇಕಾಗಿದೆ. ಸ್ವತಂತ್ರರಾಗಲು ಜನಸಮುದಾಯವು ದೃಢಸಂಕಲ್ಪ ಮಾಡಿದರೆ ಅದಕ್ಕೆ ಎದುರು ನಿಲ್ಲಲು ಯಾರಿಂದಲೂ ಸಾಧ್ಯವಿಲ್ಲ.

ಖಾಯಿದೆ ಮಂಡಲಿಯಲ್ಲಾದ ಮೇಲಿನ ಮೂರು ಮಹತ್ವದ ತೀರ್ಮಾನಗಳಿಗೆ ಜಮೀನ್ದಾರರ ಸಂಘವೇ ಮುಖ್ಯಕಾರಣವೆಂದರೆ ಅತಿಶಯೋಕ್ತಿಯಾಗಲಾರದು. ಈ ಮೂರು ಠರಾವುಗಳೂ ಸಂಘದ ಕಳೆದ ಮಹಾಸಭೆಯಲ್ಲಿ ಸರ್ವಸಮ್ಮತದಿಂದ ಅಂಗೀಕರಿಸಲ್ಪಟ್ಟ ಮೇಲೆ ಸಂಘದವರು ಇವುಗಳನ್ನು ದೇಶದಲ್ಲೆಲ್ಲಾ ಪ್ರಚಾರ ಮಾಡುವ ಕೆಲಸವನ್ನು ಕೈಕೊಂಡು ದೇಶನಿವಾಸಿಗಳಲ್ಲರಿಗೆ ತಿಳುವಳಿಕೆಕೊಟ್ಟು, ಅವರ ಮಂಜೂರಾತಿಯನ್ನು ಪಡೆಯುತ್ತಿರುವರು. ಕೌನ್ಸಿಲಿನಲ್ಲಿ ಜನರ ಪ್ರತಿನಿಧಿಗಳಿಗೆ ಉಂಟಾದ ವಿಶೇಷವಾದ ಜಯವು ಸಂಘದ ಪ್ರಚಾರ ಕೆಲಸದ ಫಲಿತಾಂಶವೆಂಬುದಕ್ಕೆ ಸಂಶಯವಿಲ್ಲ. ಇದರಿಂದ ಜಮೀನ್ದಾರರ ಸಂಘವು ಕೊಡಗು ದೇಶದ ಪ್ರಾಮುಖ್ಯ ರಾಜಕೀಯ ಸಂಸ್ಥೆಯೆಂಬದನ್ನು ಪೃಥ್ವೀಕರಿಸಿದೆಯೆಂದು ಹೇಳಬಹುದಾಗಿದೆ.

---

## ಕೊಡಗು ಖಾಯಿದೆ ಮಂಡಲಿ.

### ತಿದ್ದುಪಡಿ.

3. "ರಿಜೀಮೆಂಟು ಜಾಗದಿಂದ ಮರಸಾಗಿಸಲು ಮಾಲೀಕನ ಪಾಸೇ ಸಾಕೆಂತ ಮಾಡಬೇಕು" ಎಂಬ ಠರಾವನ್ನು ಕಳೆದ ವಾರ ಪ್ರಕಟಿಸಿದಂತೆ ಮೆ. ಎ. ಬಿ. ಜಂಗಪ್ಪನವರು ಸೂಚಿಸಿದ್ದೂ ಅಲ್ಲ ಮತ್ತು ಮೆ. ಸಿ. ಯಸ್. ಉತ್ತಯ್ಯನವರು ಅನುಮೋದಿಸಿದ್ದೂ ಅಲ್ಲ. ಅದನ್ನು ಮೆ. ಸಿ. ಯಸ್. ಉತ್ತಯ್ಯನವರು ಸೂಚಿಸಿದ್ದೂ, ಮೆ. ಪಿ. ಐ. ಬೆಳ್ಳಪ್ಪನವರು ಅನುಮೋದಿಸಿದ್ದೂ ಆಗಿದೆ.

(ಕಳೆದ ವಾರದಿಂದ ಮುಂದುವರಿದದ್ದು)

6. 2 ನೇ ಮತ್ತು 3 ನೇ ತರಗತಿಯ ಸಾಕ್ಷಿಗಳ ಬತ್ತವನ್ನು ಒಂದು ರೂಪಾಯಿ ಮತ್ತು ಎಂಟಾಣೆಗೆ ಏರಿಸಬೇಕೆಂಬ ಠರಾವನ್ನು ಮೆ. ಸಿ. ಯಸ್. ಉತ್ತಯ್ಯನವರು ಚರ್ಚೆಗೆ ತರಲೇ ಇಲ್ಲ.

7. 'ಕಾಫಿಪಲ್ಪರ್‌ಗಳಿಂದಲೂ, ಭೂತಾಳಿನಾರು ತೆಗೆಯುವ ಯಂತ್ರದಿಂದಲೂ ಕೊಳಕುನೀರು ಹೊಳೆಗಳನ್ನೂ ತೋಡುಗಳನ್ನೂ ಕೆಡಿಸದಂತೆ ಮಾಡಿಕೊಡಬೇಕು.'

ಮೆ. ಚಾ. ಕಾಳಪ್ಪನವರು ಈ ಠರಾವನ್ನು ಸೂಚಿಸುತ್ತ ಹೇಳಿದ್ದೇನೆಂದರೆ—ಇಂಥಾ ಕೊಳೆನೀರು ಹೊಳೆಗಳಿಗೂ ತೋಡುಗಳಿಗೂ ಸೇರಿ ನೀರನ್ನು ಕೆಡಿಸಿಬಿಡುತ್ತದೆ. ದೊಡ್ಡ ಹೊಳೆಗಳಿಗೆ ವಿಶೇಷ ಕೆಡಕಾಗದಿದ್ದರೂ ಚಿಕ್ಕ ಚಿಕ್ಕ ತೋಡುಗಳಿಗೆ ತುಂಬಾ ಕೇಡು ಇದೆ. ಮನುಷ್ಯರಿಗೂ ಮೃಗಗಳಿಗೂ ಕುಡಿಯಲಿಕ್ಕೆ ನೀರಿಲ್ಲದೆ ಹೋಗುತ್ತದೆ. ಪ್ಲಾಂಟರುಗಳು ಹೇಗಾದರೂ ತಮ್ಮ ಜಾಗದಲ್ಲೇ ಇಂಥಾ ನೀರನ್ನು ಕಟ್ಟಿಕೊಳ್ಳಬೇಕು.

ಮೆ. ಮುದ್ದಪ್ಪನವರು ಈ ಠರಾವನ್ನು ಅನುಮೋದಿಸುತ್ತ ವಿಷಹಿಡಿಯಲಿಕ್ಕೆ ಹೊಳೆಗಳಿಗೆ ವಿಷ ಹಾಕಬಾರದೆಂತ ಸೂಚಿಸುವಾಗ ಈ ತರದಲ್ಲಿ ನೀರನ್ನು ವಿಷಮಾಡುವದನ್ನು ಸಹಿಸುವದು ನ್ಯಾಯವಲ್ಲವೆಂತ ಹೇಳಿದರು.

ಕಮಿಶನರು—ಇಂಥಾ ಕೊಳೆನೀರು ಹರಿಯುವ ನೀರು ಸೇರುವದರಿಂದ ಆರೋಗ್ಯಕ್ಕೆ ಕೆಡಕಿಲ್ಲವೆಂತ ಸಿವಿಲ್ ಸರ್ಜನರು ಅಭಿಪ್ರಾಯ ಪಟ್ಟಿರುತ್ತಾರೆ, ಎಂದು ಹೇಳಿದರು.

ಮೆ. ನಿಕಲ್ಸ್‌ರು—ಕಾಫಿತೋಟಗಾರರೇ ಈ ಠರಾವನ್ನು ಸೂಚಿಸದ್ದು ಆಶ್ಚರ್ಯಕರ. ಇದು 60 ವರ್ಷಗಳಿಂದ ಜಾರಿಯಲ್ಲಿದೆ. ಈ ವರೆಗೆ ಯಾರ ಆಕ್ಷೇಪಣೆಯೂ ಇಲ್ಲ. ಕೊಳೆನೀರು ಸೇರಿದ ಒಂದು ಮೈಲಿನೊಳಗೆ ಜನ ನೀರನ್ನು ಉಪಯೋಗಿಸುವದು ನಾನು ನೋಡಿದ್ದೇನೆ. ನೀರಿನಲ್ಲಿ ಮಲೇರಿಯಾ ಸೊಳ್ಳೆ ಮರಿಮಾಡುವದಿಲ್ಲವೆಂತ ಕರ್ನಲ್ ಯಾಂಗ್ ಎಂಬ ಎಕ್ಸ್‌ಪರ್ಟರು ಅಭಿಪ್ರಾಯಪಟ್ಟಿದ್ದಾರೆ, ಅಂದರು.

ಮೆ. ಮೇದಪ್ಪನವರು—ಈ ಕೊಳೆನೀರಿನಿಂದ ಮಲೇರಿಯಾ ಜ್ವರವನ್ನು ಕಡಿಮೆಮಾಡಿದಾತೆಯೋ ಆದರೂ ಇದ್ದ ಠರಾವಿಗೆ ವಿರೋಧಿಸುತ್ತೇನೆಂತ ಹೇಳಿದರು.

ಮೆ. ಉತ್ತಯ್ಯನವರು—ಹೊಳೆ, ತೋಡುಗಳಿಂದ ಕುಡಿಯಲಿಕ್ಕೆ ನೀರು ತೆಗೆದುಕೊಳ್ಳುವದು ದಕ್ಷಿಣಕೊಡಗಿನಲ್ಲಿ ಹಾಗೆ ತೆಗೆದುಕೊಳ್ಳುವಲ್ಲಿ ಸಹ ಜನರು ಫಿಲ್ಟರ್ ಮಾಡಿಕೊಳ್ಳಬೇಕು. ಪ್ಲಾಂಟರುಗಳು ಈ ನೀರನ್ನು ತಡೆಯುವದು ಸಾಧ್ಯವೇ ಇಲ್ಲವೆಂತ ಹೇಳಿ ಠರಾವಿಗೆ ವಿರೋಧಿಸಿದರು.

ಮೆ. ಟಿಪ್ಪಿಂಗರು—ನೀರು ವಿಷವಾಗುತ್ತೆಂತ ಹೇಳಿ ಆಧಾರವಿಲ್ಲ. ಅಂಥಾದ್ದು ಈ ವರೆಗೆ ಆಗಾಯಿಲ್ಲವೆಂತ ಹೇಳಿ ಠರಾವಿಗೆ ವಿರೋಧಿಸಿದರು.

ಒಟಿಗೆ ಹಾಕಲಾಗಿ, ಮೆ. ಗಳಾದ ಕಾಳಪ್ಪನವರೂ, ಮುದ್ದಪ್ಪನವರೂ, ಕುಶಾಲಪ್ಪನವರೂ, ಸಣ್ಣಪ್ಪನವರೂ, ಮೊಣ್ಣಯ್ಯನವರೂ, ಬೆಳ್ಳಪ್ಪನವರೂ ಮತ್ತು ಕರುಂಬಯ್ಯನವರಾವಿನ ಪರವಾಗಿಯೂ, ಚಿಣ್ಣಪ್ಪನವರೂ, ಮಂದಣ್ಣನವರೂ, ಉತ್ತಯ್ಯನವರೂ, ಜಂಗಪ್ಪನವರೂ, ಪೂಜಾರಿ ಮೇದಪ್ಪನವರೂ, ಯ ರೋಪಿಯನರೂ, ಸರಕಾರಿ ಮೆಂಬರರೂ ವಿರೋಧವಾಗಿಯೂ ಓಟ್ ಮಾಡಿ ಠರಾವು ಸಾಬಿತಾಯಿತು.

8. 'ಗದ್ದೆಗಳ ಸಮೀಪವಿರುವ ರಿಜರ್ವ್ ಫಾರೆಸ್ಟಿನಲ್ಲಿ ಲಂತಾನ ತೆಗೆಯುವ ಏರ್ಪಾಡು ಮಾಡಬೇಕು' ಎಂಬ ಠರಾವನ್ನು ಮೆ. ಕಾಳಪ್ಪನವರು ಸಭೆಯ ಮುಂದೆ ಇಡುತ್ತ ಗದ್ದೆಗಳ ಸಮೀಪ ಲಂತಾನ ತೆಗೆಯದೆ ಇದ್ದರೆ ಕಾಡುಮೃಗಗಳ ಹಾವಳಿ ಹೆಚ್ಚಿ ರೈತನಿಗೆ ಬೆಳೆ ಸಿಕ್ಕುವದೇ ಕಷ್ಟ. ಮಡಿಕೇರಿನಲ್ಲಿ ಲಂತಾನ ತೆಗೆದು ಕುಮ್ರಿ ವ್ಯವಸಾಯ ಮಾಡಿದ್ದಾರೆ. ಇದರಿಂದ ಪ್ರಯೋಜನವಾಗಿದೆ. ಹಾಗೆಯೇ ಬೇರೆ ಕಡೆಗಳಲ್ಲೂ ಮಾಡಬೇಕು—ಎಂದು ಮುಂತಾಗಿ ನುಡಿದರು.

ಮೆ. ಸಣ್ಣಪ್ಪನವರು ಅನುಮೋದಿಸಿದರು.

ಫಾರೆಸ್ಟ್ ಆಫೀಸರು—ಕೆಲಸಕ್ಕೆ ಒಪ್ಪುತ್ತೇನೆ. ಇತರರ ಸಹಾಯವಿಲ್ಲದೆ ಫಾರೆಸ್ಟ್ ಇಲಾಖೆಯವರಿಂದ ಸಾಧ್ಯವಿಲ್ಲ. ಸ್ವಂತ ಜಾಗಗಳಿಂದಲೂ ತೆಗೆಯದೆ ಫಾರೆಸ್ಟಿನಿಂದ ತೆಗೆದು ಪ್ರಯೋಜನವಿಲ್ಲ. ಹೀಗೆ ಲಂತಾನ ತೆಗೆದಲ್ಲಿ ಏನಾದರೂ ಪ್ರಯೋಜನ ಮಾಡಿಕೊಳ್ಳದಿದ್ದರೆ ಖರ್ಚು ಅಪರಿಮಿತವಾಗುತ್ತದೆ. ಬರೇ ಕಾಲು ಮೈಲು ಮಾತ್ರ ತೆಗೆಯುವದಾದರೂ 50000 ರೂ. ಬೇಕಾಗುತ್ತದೆ. ಕುಮ್ರಿ ವ್ಯವಸಾಯ ಮಾಡಿದರೆ ಖರ್ಚು ಹುಟ್ಟುತ್ತದೆ. ಸ್ಟೇಷನಲ್ಲಿ ಈ ಕೆಲಸ ನಡಿಸುತ್ತಿರುವದರಿಂದ ಠರಾವಿನ ಅವಶ್ಯಕತೆ ಕಾಣುವದಿಲ್ಲವೆಂತ ಹೇಳಿದರೂ ಠರಾವಿಗೆ ಸಹಾನುಭೂತಿ ತೋರಿಸಿದರು.

ಮೆ. ಉತ್ತಯ್ಯನವರು ಠರಾವನ್ನು ವಿರೋಧಿಸಿದರು. ಠರಾವಿನ ಪರವಾಗಿ ಮೆ. ಕಾಳಪ್ಪನವರೂ, ಸ್ವಾಮಿಅಹಮದರೂ, ಮುದ್ದಪ್ಪನವರೂ, ಕುಶಾಲಪ್ಪನವರೂ, ಬೆಳ್ಳಪ್ಪನವರೂ, ಸಣ್ಣಪ್ಪನವರೂ, ಮೊಣ್ಣಯ್ಯನವರೂ, ಚಿಣ್ಣಪ್ಪನವರೂ, ಮಂದಣ್ಣನವರೂ, ಕರುಂಬಯ್ಯನವರೂ, ವಿರೋಧವಾಗಿ ಉತ್ತಯ್ಯನವರು ಮಾತ್ರವೂ ಓಟ್ ಕೊಟ್ಟು ಠರಾವು ಮಂಜೂರಾಯಿತು.

(3 ನೇ ಪುಟದ 3 ನೇ ಕಾಲಮಿನಲ್ಲಿ ಮುಂದುವರಿದಿದೆ

## ಮಹಾತ್ಮಗಾಂಧಿಯವರ ಸ್ವಚರಿತ್ರೆ.

ಸತ್ಯಶೋಧನೆ.

೫ನೇ ಭಾಗದಲ್ಲಿ ೧೫ನೇ ಪ್ರಕರಣ.

### ಮೊಕದ್ದಮೆಯನ್ನು ನಿಲ್ಲಿಸಿದುದು.

ವಿಚಾರಣೆಯು ಪ್ರಾರಂಭವಾಯಿತು. ಸರಕಾರದ ವಕೀಲರೂ ಮ್ಯಾಜಿಸ್ಟ್ರೇಟರೂ ಇತರ ಅಧಿಕಾರಿಗಳೂ ದಿಕ್ಕು ತೋಚದವರಂತಿದ್ದರು. ಏನುಮಾಡಬೇಕೆಂದು ಅವರಿಗೆ ಹೊಳೆಯಲಿಲ್ಲ. ಮೊಕದ್ದಮೆಯನ್ನು ಮುಂದಕ್ಕೆ ಹಾಕಬೇಕೆಂದು ಸರಕಾರೀ ವಕೀಲರು ಮ್ಯಾಜಿಸ್ಟ್ರೇಟರನ್ನು ಒತ್ತಾಯಪಡಿಸುತ್ತಿದ್ದರು. ಆದರೆ ನಾನು ಅಡ್ಡಬಂದು "ಚಂಪಾರಣ್ಯವನ್ನು ಬಿಟ್ಟು ಹೋಗಬೇಕೆಂಬ ಆಜ್ಞೆಯನ್ನು ಉಲ್ಲಂಘಿಸಿದ ತಪ್ಪನ್ನು ನಾನು ಒಪ್ಪಿಕೊಳ್ಳಬಯಸುತ್ತೇನೆ." ಎಂದು ಹೇಳಿ ಕೆಳಗಿನ ಸಂಕ್ಷಿಪ್ತ ಹೇಳಿಕೆಯನ್ನು ಓದಿದೆನು.

"ಕ್ರಿ. ಪ್ರೊ. ಕೋಡಿನ ೧೪೪ನೆಯ ನಿಬಂಧನೆಯ ಮೇರೆಗೆ ಹೊರಡಿಸಿದ ಆಜ್ಞೆಯನ್ನು ನಾನು ಉಲ್ಲಂಘಿಸಿರುವಂತೆ ತೋರುತ್ತಿದೆಯಷ್ಟೆ. ಅತಿಗಂಭೀರ ಪರಿಣಾಮವುಳ್ಳ ಈ ವರ್ತನೆಯನ್ನು ನಾನು ಅನುಸರಿಸಿದುದೇಕೆಂದು ವ್ಯಕ್ತಪಡಿಸಲು ನ್ಯಾಯಸ್ಥಾನದ ಅಪ್ಪಣೆ ಪಡೆದು ಸಂಕ್ಷಿಪ್ತವಾಗಿ ಹೇಳಲೆಳಸುತ್ತೇನೆ. ಇದು ಇಲ್ಲಿನ ಅಧಿಕಾರಿಗಳಿಗೂ ನನಗೂ ಇರುವ ಮತಭೇದದ ವಿಷಯವೆಂದು ತೋರುತ್ತದೆ. ಜನಸೇವೆಯನ್ನೂ ರಾಷ್ಟ್ರಸೇವೆಯನ್ನೂ ಮಾಡಬೇಕೆಂಬ ಉದ್ದೇಶದಿಂದ ನಾನು ಈ ಸಾ[illegible]ನೊಳಗೆ ಕಾಲಿಟ್ಟಿದ್ದೇನೆ. ನೀಲಿಯ ಜಮೀನ್ದಾರರು ತಮ್ಮೊಡನೆ ನ್ಯಾಯವಾದ ರೀತಿಯಲ್ಲಿ ವರ್ತಿಸುವುದಿಲ್ಲವೆಂದು ಇಲ್ಲಿಯ ರೈತರು ಹೇಳುತ್ತಾರೆ. ಇಲ್ಲಿಗೆ ಬಂದು ಈ ರೈತರಿಗೆ ನೆರವೀಯಬೇಕೆಂಬುದಾಗಿ ನನ್ನನ್ನು ಬಹುವಾಗಿ ಒತ್ತಾಯಪಡಿಸಿದುದರಿಂದಲೇ ನಾನು ಇಲ್ಲಿಗೆ ಬಂದುದು. ಇಲ್ಲಿನ ಸ್ಥಿತಿಗತಿಯನ್ನು ಅರಿತುಕೊಳ್ಳದೆ ನಾನು ಯಾವ ಸಹಾಯವನ್ನೂ ಮಾಡುವಂತಿರಲಿಲ್ಲ. ಆದುದರಿಂದ ನಾನು ಸಾಧ್ಯವಾದರೆ ಸರಕಾರದ ಮತ್ತು ಜಮೀನ್ದಾರರ ಒತ್ತಾಸೆಯನ್ನು ಹೊಂದಿ ಇಲ್ಲಿಯ ವಿಷಯಗಳನ್ನು ತಿಳಿದುಕೊಳ್ಳಲು ಬಂದಿದ್ದೇನೆ. ನನಗೆ ಇನ್ನಾವ ಉದ್ದೇಶವೂ ಇಲ್ಲ. ನಾನು ಇಲ್ಲಿಗೆ ಬಂದುದರಿಂದ ಯಾವರೀತಿಯಲ್ಲಾಗಲಿ ಪ್ರಜಾಶಾಂತಿಗೆ ಭಂಗವಾಗಿ ಪ್ರಾಣಹಾನಿಯುಂಟಾಗುವುದೆಂದು ನಾನು ನಂಬಲಾರೆನು. ಇಂತಹ ವಿಷಯಗಳಲ್ಲಿ ನನಗೆ ಹೆಚ್ಚಿನ ಅನುಭವವುಂಟೆಂದು ಹೇಳಬಲ್ಲೆನು. ಆದರೆ ಸರಕಾರದವರು ಬೇರೆ ರೀತಿಯಾಗಿ ಆಲೋಚಿಸಿದ್ದಾರೆ. ಅವರ ಕಷ್ಟವು ನನಗೆ ಸಂಪೂರ್ಣವಾಗಿ ಗೊತ್ತಿದೆ. ಅವರು ತಮಗೆ ಬಂದ ಸಮಾಚಾರದ ಆಧಾರದ ಮೇಲೆಯೇ ಪ್ರವರ್ತಿಸಬೇಕಾಗುತ್ತದೆಂಬುದನ್ನು ಕೂಡ ನಾನು ಒಪ್ಪಿಕೊಳ್ಳುತ್ತೇನೆ. ಕಾನೂನಿಗೆ ಅನುಸಾರವಾಗಿ ನಡೆವ ಪ್ರಜೆಯೊಬ್ಬನು ನಾನಾದುದರಿಂದ ನನಗೆ ಕೊಟ್ಟ ಆಜ್ಞೆಯನ್ನು ಪಾಲಿಸಬೇಕೆಂದೇ ನನ್ನ ಮನಸ್ಸಿಗೆ ಮೊಟ್ಟಮೊದಲು ತೋರುವುದು ಸಹಜ. ಈ ಸಂದರ್ಭದಲ್ಲಿ ಆದುದೂ ಅಂತೆಯೇ. ಆದರೆ ನಾನು ಇಲ್ಲಿ ಯಾರ ಸಲುವಾಗಿ ಬಂದೆನೋ ಅವರ ವಿಷಯದಲ್ಲಿ ನನ್ನ ಕರ್ತವ್ಯವನ್ನು ಉಲ್ಲಂಘಿಸದೆ ನಾನು ಹಾಗೆ ಮಾಡುವಂತಿರಲಿಲ್ಲ. ಈ ಸಮಯದಲ್ಲಿ ನಾನು ಅವರ ಮಧ್ಯದಲ್ಲಿರುವುದರಿಂದಲೇ ಅವರ ಸೇವೆಯನ್ನು ಮಾಡುವುದು ಸಾಧ್ಯವೆಂದು ನನಗೆ ತೋರುತ್ತದೆ. ಆದುದರಿಂದ ನಾನು ಸ್ವಂತ ಇಚ್ಛೆಯಿಂದ ಹಿಂತಿರುಗುವುದು ಶಕ್ಯವಿರಲಿಲ್ಲ. ಈ ಕರ್ತವ್ಯ ಸಂಗ್ರಾಮದಲ್ಲಿ ನನ್ನನ್ನು ಈ ಜನರ ಮಧ್ಯದಿಂದ ಹೊರಕ್ಕೆ ಹಾಕುವ ಭಾರವನ್ನು ಸರಕಾರದವರ ಮೇಲೆ ಹೊರಿಸುವುದು ಮಾತ್ರ ನನಗೆ ಸಾಧ್ಯವಿದ್ದಿತು. ಭರತಖಂಡದ ಸಾರ್ವಜನಿಕ ಜೀವನದಲ್ಲಿ ನನ್ನಂತಹ ಸ್ಥಾನವನ್ನು ಹೊಂದಿರುವವರು ಇತರರಿಗೆ ಮೇಲ್ಪಂಕ್ತಿಯನ್ನು ಹಾಕುವಾಗ ಅತ್ಯಂತ ಎಚ್ಚರದಿಂದಿರಬೇಕೆಂದು ನನಗೆ ಗೊತ್ತು. ಇಂದು ನಾವು ಅತಿ ಸಂಕೀರ್ಣ ರಾಜಕೀಯ ವ್ಯವಸ್ಥೆಯಲ್ಲಿ ಜೀವಿಸುತ್ತಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ, ನನ್ನೆದುರಿಗಿರುವ ಈ ಸಂದರ್ಭಗಳಲ್ಲಿ, ಆತ್ಮಗೌರವವುಳ್ಳ ಮನುಷ್ಯರಿಗಿರುವ ನಿರಪಾಯವಾದ ಮಾನಕರವಾದ ಮಾರ್ಗವು ನಾನನುಸರಿಸಲು ನಿಶ್ಚಯಿಸಿರುವ ಮಾರ್ಗವೊಂದೇ ಎಂದು ನನ್ನ ದೃಢ ವಿಶ್ವಾಸ. ಆಜ್ಞೆಯನ್ನು ಉಲ್ಲಂಘಿಸುವುದರ ಫಲವಾದ ಶಿಕ್ಷೆಯನ್ನು ಸದ್ದಿಲ್ಲದೆ ಸಹಿಸುವುದೇ ಆ ಮಾರ್ಗ. ನನಗೆ ವಿಧಿಸುವ ಶಿಕ್ಷೆಯನ್ನು ಯಾವ ರೀತಿಯಲ್ಲಾದರೂ ತಗ್ಗಿಸಬೇಕೆಂಬ ಉದ್ದೇಶದಿಂದಲ್ಲ ನಾನು ಈ ಹೇಳಿಕೆಯನ್ನು ಕೊಟ್ಟಿರುವುದು. 'ನನಗೆ ಕೊಟ್ಟ ಆಜ್ಞೆಯನ್ನು ಉಲ್ಲಂಘಿಸುವುದರ ಕಾರಣವು ಕಾನೂನಿನ ತಿರಸ್ಕಾರಬುದ್ಧಿಯಿಲ್ಲ; ಹಾಗೆ ಮಾಡಿದುದು ನಮ್ಮ ಆತ್ಮನನ್ನಾಳುವ ಉತ್ಕೃಷ್ಟತರ ನಿಯಮವನ್ನು—ಅಂತರಾತ್ಮನ ಆಜ್ಞೆಯನ್ನು—ಪಾಲಿಸುವುದಕ್ಕಾಗಿಯೇ' ಎಂಬುದನ್ನು ತಿಳಿಸುವುದು ಈ ಹೇಳಿಕೆಯ ಉದ್ದೇಶ."

ಈಗ ವಿಚಾರಣೆಯನ್ನು ಮುಂದಕ್ಕೆ ಹಾಕಲು ಅಗತ್ಯವೇ ಇರಲಿಲ್ಲ. ಆದರೆ ಮ್ಯಾಜಿಸ್ಟ್ರೇಟರೂ ಸರಕಾರದ ವಕೀಲರೂ ಈ ರೀತಿಯಾದ ಹೇಳಿಕೆಯನ್ನು ನಿರೀಕ್ಷಿಸಿರಲಿಲ್ಲವಾದುದರಿಂದ ಮ್ಯಾಜಿಸ್ಟ್ರೇಟರು ತೀರ್ಪನ್ನು ಹೇಳಲು ಬೇರೆ ದಿವಸವನ್ನು ಗೊತ್ತುಮಾಡಿದರು. ಈ ಮಧ್ಯೆ ನಾವು ಎಲ್ಲಾ ವಿವರವನ್ನೂ ವೈಸ್ರಾಯರಿಗೂ ಪಂಡಿತ ಮದನಮೋಹನ ಮಾಳವೀಯರಿಗೂ ಇತರರಿಗೂ ತಂತಿಯ ಮೂಲಕ ತಿಳಿಸಿದೆವು.

ನನಗೆ ವಿಧಿಸಿದ ಶಿಕ್ಷೆಯನ್ನು ನಾನು ನ್ಯಾಯಸ್ಥಾನಕ್ಕೆ ಹೋಗಿ ತಿಳಿದುಕೊಳ್ಳುವುದಕ್ಕೆ ಮುಂಚೆಯೇ ಮ್ಯಾಜಿಸ್ಟ್ರೇಟರು ಬಿಹಾರಪ್ರಾಂತದ ಗವರ್ನರರು ನನ್ನ ಮೇಲಿನ ಮೊಕದ್ದಮೆಯನ್ನು ನಿಲ್ಲಿಸಲು ಅಪ್ಪಣೆಮಾಡಿದ್ದರೆಂದು ಪತ್ರಬರೆದರು. ಜಿಲ್ಲಾಧಿಕಾರಿಗಳು ನಾನು ರೈತರ ಪರಿಸ್ಥಿತಿಯ ವಿಮರ್ಶೆಯನ್ನು ಮಾಡಲು ಯಾವ ಅಡಚಣೆಯೂ ಇಲ್ಲವೆಂದೂ, ಅಧಿಕಾರಿಗಳಿಂದ ಯಾವ ಸಹಾಯ ಬೇಕಾದರೂ ದೊರಕುವುದೆಂದೂ ನನಗೆ ಕಾಗದ ಬರೆದರು. ಇಷ್ಟು ಶೀಘ್ರವಾಗಿ ಇಂತಹ ಶುಭಪರಿಣಾಮವುಂಟಾಗುವುದೆಂದು ನಾವು ಯಾರೂ ನಿರೀಕ್ಷಿಸಿರಲಿಲ್ಲ.

ನಾನು ಜಿಲ್ಲಾಧಿಕಾರಿಗಳಾದ ಮಿ. ಹೇಕಾಕರನ್ನು ಹೋಗಿ ಕಂಡೆನು. ಅವರು ನ್ಯಾಯತತ್ಪರರಾದ ಸಜ್ಜನರಂತೆ ಕಂಡರು. ನನಗೆ ಬೇಕಾದ ಪತ್ರಗಳನ್ನು ನೋಡಲು ನಾನು ಕೇಳಬಹುದೆಂದೂ ಇಷ್ಟಬಂದಾಗ ನಾನು ಅವರನ್ನು ಭೇಟಿಮಾಡಬಹುದೆಂದೂ ಅವರು ನನಗೆ ಹೇಳಿದರು. ಈ ರೀತಿಯಾಗಿ ದೇಶಕ್ಕೆ ಕಾನೂನಿನ ವಿನಯಭಂಗದಲ್ಲಿ ಪ್ರಥಮ ಪ್ರತ್ಯಕ್ಷ ಪಾಠವು ದೊರಕಿತು. ಈ ಸ್ಥಳದಲ್ಲಿಯೂ ವೃತ್ತಪತ್ರಗಳಲ್ಲಿಯೂ ಈ ವಿಷಯವನ್ನು ಕುರಿತು ಚರ್ಚೆ ನಡೆಯಿತು. ನನ್ನ ವಿಮರ್ಶಾಕಾರ್ಯವು ಅನಿರೀಕ್ಷಿತ ಪ್ರಕಟನಾ ಸೌಕರ್ಯವನ್ನು ಪಡೆಯಿತು.

ಈ ವಿಮರ್ಶಾಕಾರ್ಯಕ್ಕೆ ಸರಕಾರವು ತಟಸ್ಥವಾಗಿರುವುದು ಅವಶ್ಯಕವಾಗಿದ್ದಿತು. ಆದರೆ ವೃತ್ತಪತ್ರಿಕೆಗಳ ಸುದ್ದಿಗಾರರಿಂದಾಗಲಿ ಸಂಪಾದಕೀಯ ಲೇಖನಗಳಿಂದಾಗಲಿ ಇದಕ್ಕೆ ಬೆಂಬಲವು ಬೇಕಾಗಿರಲಿಲ್ಲ. ವಾಸ್ತವಿಕವಾಗಿ ಚಂಪಾರಣ್ಯದ ಪರಿಸ್ಥಿತಿಯು ಎಷ್ಟು ಸೂಕ್ಷ್ಮವಾಗಿಯೂ ಕ್ಲಿಷ್ಟವಾಗಿಯೂ ಇದ್ದಿತೆಂದರೆ ಪ್ರಬಲವಾದ ಟೀಕೆಯಾಗಲಿ ಬಣ್ಣಗಟ್ಟಿದ ವರದಿಯಾಗಲಿ ನಾನು ಸಾಧಿಸುತ್ತಿದ್ದ ಕಾರ್ಯವನ್ನು ಸುಲಭವಾಗಿ ಹದಗೆಡಿಸಬಹುದಾಗಿದ್ದಿತು. ಆದುದರಿಂದ ನಾನು ಮುಖ್ಯವಾದ ವೃತ್ತಪತ್ರಗಳ ಸಂಪಾದಕರಿಗೆ "ಪ್ರಕಟನೆಗೆ ಅವಶ್ಯಕವಾದ ವಿಷಯಗಳನ್ನೆಲ್ಲಾ ನಿಮಗೆ ಕಳುಹಿಸಿ ಇಲ್ಲಿನ ಪರಿಸ್ಥಿತಿಯ ನಿರಂತರ ಪರಿಚಯವನ್ನು ಮಾಡಿಕೊಡುವೆನು. ದಯವಿಟ್ಟು ಸುದ್ದಿಗಾರರನ್ನು ಇಲ್ಲಿಗೆ ಕಳುಹಿಸಿಕೊಡುವ ಶ್ರಮವನ್ನು ವಹಿಸಬೇಡಿ." ಎಂದು ಪತ್ರ ಬರೆದೆನು.

ಸರಕಾರದವರು ನಾನಲ್ಲಿರುವುದಕ್ಕೆ ಅಡ್ಡಿ ಪಡಿಸದಿರುವುದನ್ನು ಕಂಡು ಚಂಪಾರಣ್ಯದ ಜಮೀನ್ದಾರರು ಕೋಪಗೊಂಡಿದ್ದರೆಂದು ನನಗೆ ಗೊತ್ತಿದ್ದಿತು. ಅಧಿಕಾರಿಗಳಿಗೆ ಕೂಡ ಅವರು ಬಾಯಿಬಿಟ್ಟು ಏನನ್ನೂ ಹೇಳಲಾಗದಿದ್ದರೂ, ಇದು ಇಷ್ಟವಿದ್ದಿರಲಾರದೆಂದೂ ನನಗೆ ತಿಳಿದಿದ್ದಿತು. ಆದುದರಿಂದ ವೃತ್ತಪತ್ರಗಳಲ್ಲಿ ಅವಾಸ್ತವವಾದ ಅಥವಾ ತಪ್ಪು ಅಭಿಪ್ರಾಯ ಕೊಡುವ ಸುದ್ದಿಗಳು ಪ್ರಕಟವಾದರೆ ಅವುಗಳಿಂದ ಇವರ ಸಿಟ್ಟಿನ ಉರಿಯು ಇನ್ನೂ ಏರುವ ಸಂಭವವಿದ್ದಿತು. ಮತ್ತು ಅವರು ಆ ಸಿಟ್ಟನ್ನು ನನ್ನ ಮೇಲೆ ತೀರಿಸಿಕೊಳ್ಳದೆ, ಪಾಪ, ಆ ಭಯಭೀತರಾದ ರೈತರ ಮೇಲೆ ತೀರಿಸಿಕೊಳ್ಳುವುದರಲ್ಲಿ ಯಾವ ಸಂಶಯವೂ ಇರಲಿಲ್ಲ. ಇದರಿಂದ ನನ್ನ ಸತ್ಯಶೋಧನೆಗೆ ದೊಡ್ಡ ಅಡಚಣೆಯು ಒದಗುತ್ತಿದ್ದಿತು.

ನಾನು ಇಷ್ಟು ಜಾಗರೂಕತೆಯಿಂದಿದ್ದರೂ ಜಮೀನ್ದಾರರು ನನಗೆ ವಿರೋಧವಾಗಿ ಅತಿ ವಿಷಮಯವಾದ ಚಳವಳಿಯನ್ನು ಹೂಡಿದರು. ನನ್ನ ಮತ್ತು ನನ್ನ ಜೊತೆಯಲ್ಲಿ ಕೆಲಸಮಾಡುತ್ತಿದ್ದವರ ವಿಷಯವಾಗಿ ಎಷ್ಟೋ ರೀತಿಯ ಸುಳ್ಳುಗಳು ವೃತ್ತಪತ್ರಗಳಲ್ಲಿ ಪ್ರಕಟವಾದುವು. ಆದರೆ ನಾನು ಅತ್ಯಂತ ಎಚ್ಚರಿಕೆಯಿಂದಿದ್ದುದರಿಂದಲೂ ಕೇವಲ ಸಣ್ಣ ವಿಚಾರವನ್ನು ಮೊದಲುಗೊಂಡು ಎಲ್ಲಾ ವಿಷಯದಲ್ಲಿಯೂ ಸತ್ಯವನ್ನೇ ಸಾಧಿಸಿದುದರಿಂದಲೂ ಅವರೆಸೆದ ಬಾಣಗಳು ನಿರರ್ಥಕಗಳಾದುವು.

ಬ್ರಜಕಿಶೋರ ಬಾಬುಗಳ ಮೇಲೆ ಮಸಿಯೆರಚುವುದರಲ್ಲಿ ಜಮೀನ್ದಾರರು ತಮ್ಮ ಪ್ರಯತ್ನವನ್ನೆಲ್ಲಾ ವ್ಯಯಮಾಡಿದರು. ಆದರೆ ಅವರ ನಿಂದೆಯು ಹೆಚ್ಚಾದಷ್ಟೂ ಬಾಬುಗಳಲ್ಲಿ ಜನರ ಮನ್ನಣೆಯು ಏರುತ್ತಾ ಹೋಯಿತು.

ಇಂತಹ ನಾಜೂಕಾದ ಸಂದರ್ಭದಲ್ಲಿ ಇತರ ಪ್ರಾಂತಗಳಿಂದ ನಾಯಕರನ್ನು ಕರೆಯುವುದು ಉಚಿತವೆಂದು ನಾನು ಎಣಿಸಲಿಲ್ಲ. ಪಂಡಿತ ಮಾಳವೀಯರು "ನಿಮಗೆ ಬೇಕಾದಾಗ ನೀವು ತಿಳಿಸಿದರೆ ಸಾಕು. ನಾನು ಬರುವೆನು." ಎಂದು ಹೇಳಿ ಕಳುಹಿಸಿದ್ದರು. ಆದರೆ ನಾನು ಅವರಿಗೆ ತೊಂದರೆಕೊಡಲಿಲ್ಲ. ಆ ರೀತಿಯಾಗಿ ಈ ಸಂಗ್ರಾಮವು ರಾಜಕೀಯ ಸ್ವರೂಪವನ್ನು ಹೊಂದದಂತೆ ನಾನು ತಡೆದೆನು. ಆದರೆ ನಾನು ಆಗಾಗ ನಾಯಕರಿಗೂ ಮುಖ್ಯವಾದ ವೃತ್ತಪತ್ರಗಳಿಗೂ ವರದಿಯನ್ನು ಕಳುಹಿಸಿಕೊಡುತ್ತಿದ್ದೆನು. ಇದು ಪ್ರಕಟನೆಗಲ್ಲ, ಅವರ ತಿಳುವಳಿಕೆಗಾಗಿ. ಅಂತಿಮಫಲವು ರಾಜಕೀಯವಾಗಿದ್ದಾಗ್ಯೂ ಕಾರಣವು ರಾಜಕೀಯವಲ್ಲದಿದ್ದರೆ ಅದಕ್ಕೆ ರಾಜಕೀಯ ಸ್ವರೂಪವನ್ನು ಕೊಡುವುದರಿಂದ ಅದು ಕೆಡುವುದೆಂದೂ ಅಂತಹ ಸ್ವರೂಪವನ್ನು ಕೊಡದೆ ಅದನ್ನು ನಿಜಪರಿಮಿತಿಯಲ್ಲಿಯೇ ಇಟ್ಟರೆ ಅದು ಲಾಭಹೊಂದುವುದೆಂದೂ ನಾನು ಅನುಭವದಿಂದ ಕಂಡಿದ್ದೆನು. ಯಾವ ವಿಷಯದಲ್ಲಾಗಲಿ ನಿಸ್ವಾರ್ಥಬುದ್ಧಿಯಿಂದ ಮಾಡಿದ ಲೋಕಸೇವೆಯಿಂದ ಕಟ್ಟಕಡೆಗೆ ದೇಶಕ್ಕೆ ರಾಜಕೀಯ ಲಾಭವುಂಟಾಗುವುದೆಂಬುದನ್ನು ಚಂಪಾರಣ್ಯ ಸಂಗ್ರಾಮವು ಸಿದ್ಧಪಡಿಸಿತು.

---

## ಕೊಡಗು ಕಾಯಿದೆ ಮಂಡಲಿ.

(2ನೇ ಪುಟದಿಂದ ಮುಂದುವರಿದುದು.)

9. ವೀರಾಜಪೇಟೆ ಮುನ್ಸಿಪಲ್ ಕೌನ್ಸಿಲಿನಲ್ಲಿ ಕೊಡವರಿಗೆ 3 ಮೆಂಬರುಗಳ ಸ್ಥಳಗಳನ್ನು ಕಾಯ್ದಿಡಬೇಕೆಂಬ ಠರಾವನ್ನು ಮಿ ಎ. ಬಿ. ಚಂಗಪ್ಪನವರು ಸೂಚಿಸದೇನೇ ವಾಪಸು ತೆಗೆದುಕೊಂಡರು.

10. 'ಕೊಡಗು ಲ್ಯಾಂಡ್ ಮತ್ತು ರೆವಿನ್ಯು ರೆಗ್ಯುಲೇಶನ್ನಿನಲ್ಲಿ ಕಂದಾಯ ಬಾಕಿಯಾದರೆ ಭೂಮಿಯನ್ನು ಮಾರಾಟ ಮಾಡುವದರ ಬದಲು ಗೇಣಿಗೆ ಕೊಟ್ಟು ವಸೂಲು ಮಾಡಬೇಕು' ಎಂಬ ಠರಾವನ್ನು ಮಿ. ಸಯ್ಯದ್ ಅಹ್ಮದ್‌ರವರು ಚರ್ಚೆಗೆ ಮುಂಚೆಯೇ ವಾಪಸು ತೆಗೆದುಕೊಂಡರು.

11. 'ಕೊಡವರ ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ಜೀವನಾಂಶ ಪಾಲನ್ನು ಕೇಳಿದಂತೆ ಮಾಡಲು ಮತ್ತು ಕೊಟ್ಟದನ್ನು ವಜ ಮಾಡಲು ತಕ್ಕ ಏರ್ಪಾಡು ಮಾಡಬೇಕು' ಎಂಬ ಠರಾವನ್ನು ಮಿ. ಸಿ. ಯಸ್. ಉತ್ತಯ್ಯನವರು ಚರ್ಚೆಗೆ ಇಡದೆ ವಾಪಸು ತೆಗೆದುಕೊಂಡರು.

12. 'ಚಿಕ್ಲಿ ಹೊಳೆ ನಾಲೆಯ ಅಣೆಕಟ್ಟನ್ನು ಎತ್ತರಿಸಿ ಹೆಚ್ಚಿನ ಜಮೀನುಗಳಿಗೆ ನೀರು ಸರಬರಾಯಿ ಮಾಡಿಕೊಡಬೇಕು.' ಎಂಬ ಠರಾವನ್ನು ಮಿ. ಸಂಣಪ್ಪನವರು ಸೂಚಿಸಿ, ಈ ಕಟ್ಟೆಯನ್ನು ಎತ್ತಿದರೆ ಇನ್ನೂ ಸಾವಿರಾರು ಎಕರೆಗಳಿಗೆ ನೀರು ಬಂದೀತೆಂತ ತಿಳಿಯುತ್ತೇನೆ, ಜಮೀನು ಫಲವತ್ತಾಗಿದೆ, ಸರಕಾರಕ್ಕೆ ಹೆಚ್ಚಿನ ಉತ್ಪತ್ತಿಯೂ ಬರುತ್ತದೆ, ಎಂತ ಹೇಳಿದರು.

ಮಿ ಯಂ. ಚಿಣ್ಣಪ್ಪನವರು ಅನುಮೋದಿಸಿದರು.

ಕಮಿಶನರು ಈವಿಷಯವನ್ನು ಅಜಮಾಯಿಸುತ್ತೇನೆ ಎಂತ ಹೇಳಿದ ನಂತರ ಠರಾವು ವಾಪಸು ತೆಗೆದುಕೊಳ್ಳಲಾಯಿತು.

13. 'ಬೆಳೆ ಕಾಪಾಡುವ ಬಗ್ಗೆ ಕೊಡುವ ಬ್ರೀಚ್‌ಲೋಡಿಂಗ್ ಕೋವಿ ಲೈಸೆನ್ಸುಗಳಿಗೆ ಚಾಪಾಕಾಗದ ತೆಗೆದುಕೊಳ್ಳುವ ಪದ್ಧತಿಯನ್ನು ನಿಲ್ಲಿಸಬೇಕೆಂತ' ಮಿ. ಸಂಣಪ್ಪನವರು ಸೂಚಿಸಿದ್ದನ್ನು ಮಿ. ಮುದ್ದಪ್ಪನವರು ಅನುಮೋದಿಸಿದರು.

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಪಸಲು ಕಾಪಾಡುವ ಕೋವಿಗಳ ಲೈಸೆನ್ಸಿಗೆ ಸ್ಟಾಂಪು ತೆಗೆದುಕೊಳ್ಳುವದೇ ಇಲ್ಲವೆಂದರು. ಠರಾವನ್ನು ಓಟಿಗೆ ಹಾಕಲಿಲ್ಲ.

14. 'ಪಸಲು ಕಾಪಾಡಲು ಹಂಗಾಮಿ ಲೈಸೆನ್ಸು ಕೊಡುವ ಪದ್ಧತಿಯನ್ನು ನಿಲ್ಲಿಸಬೇಕು.' ಎಂಬ ಠರಾವನ್ನು ಸೂಚಿಸಿ ಮಿ ಸಂಣಪ್ಪನವರು ಅಂದದ್ದೇನೆಂದರೆ—ಈ ವಿಷಯ 1924ರಲ್ಲೇ ಈ ಕೌನ್ಸಿಲಿನಲ್ಲಿ ಠರಾವು ಪಾಸಾದರೂ ಇನ್ನೂ ಎಲ್ಲಾ ಹಂಗಾಮಿ ಲೈಸೆನ್ಸುಗಳನ್ನು ಖಾಯಂ ಮಾಡಲಿಲ್ಲ. ಗೇರಿಕಾಡು, ಹಿತ್ತಲಲ್ಲಿ ಲಂತಾನ ತೆಗೆಯಲಿಲ್ಲವೆಂಬ ಕಾರಣದಿಂದ ಇನ್ಕಾರ ಮಾಡುತ್ತಾರೆ. ಕೋವಿ ಇಟ್ಟುಕೊಂಡ ಇತರ ರೈತರಿಗೂ ಇದೇ ಶರತ್ತು ಇಡದೆ ಹಂಗಾಮಿ ಲೈಸೆನ್ಸಿಗೆ ದರ್ಖಾಸ್ತುಮಾಡಿದವರಿಗೆ ಮಾತ್ರ ನಿರ್ಬಂಧಪಡಿಸುವದು ಸರಿಯಲ್ಲ.

ಮಿ. ಕಾಳಪ್ಪನವರು ಅನುಮೋದಿಸಿದರು.

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು—1924ರಲ್ಲಿ ಠರಾವನ್ನು ಒಪ್ಪಿಕೊಂಡ ಮೇರೆ ಹೆಚ್ಚಿನ ಹಂಗಾಮಿಯ ಲೈಸೆನ್ಸುಗಳೆಲ್ಲಾ ಖಾಯಂ ಮಾಡಲ್ಪಟ್ಟಿವೆ. ಈಗ ಹೊಸಬರಿಗೆ ಹಂಗಾಮಿ ಲೈಸೆನ್ಸು ಕೊಡುವದೇ ಇಲ್ಲ. ಲೈಸೆನ್ಸು ಕೊಡುವಾಗ ಲಂತಾನದ ಒತ್ತಾಯ ಪಡಿಸುವದಿದೆ—ಎಂತ ಹೇಳಿದರು. ಠರಾವು ವಾಪಸು ತೆಗೆದುಕೊಳ್ಳಲಾಯಿತು.

15. 'ಫೆಬ್ರವರಿ ಮಾರ್ಚಿ ತಿಂಗಳಲ್ಲಿರುವ ಕಂದಾಯ ಕಿಸ್ತುಗಳನ್ನು ಮಾರ್ಚಿಗೂ ಏಪ್ರಿಲಿಗೂ ಮುಂದರಿಸಬೇಕು' ಎಂಬ ಠರಾವನ್ನು ಮಿ ಸಣ್ಣಪ್ಪನವರು ಸೂಚಿಸಿ, ಸಂಜರಾಯಪಟ್ಟಣ ತಾಲೋಕಿನಲ್ಲಿ ಬೆಳೆ ವಂದಾಗಿ ಒಂದನೂ ಗುತ್ತೆ ಬರುವದು ಫೆಬ್ರವರಿ ಮಾರ್ಚಿ ತಿಂಗಳಲ್ಲೇ, ಮತ್ತು ಬೆಳೆ ಬಂದಾಗ ಧಾರಣೆಯೂ ಇರುವುದಿಲ್ಲವೆಂತ ಹೇಳಿದರು.

ಮಿ. ಕಾಳಪ್ಪನವರು ಅನುಮೋದಿಸಿದರು.

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಠರಾವನ್ನು ವಿರೋಧಿಸಿ ಹೇಳಿದ್ದೇನೆಂದರೆ—ಫೆಬ್ರವರಿ, ಮಾರ್ಚಿಯಲ್ಲಿ ಕ್ರಯಕಸವೆಯಾಗಿರುವದಿಲ್ಲವೆಂತ ವರದಿಯಿಂದ ಕಾಣುತ್ತದೆ. ಫೆಬ್ರವರಿಯಲ್ಲಿ ಕಂದಾಯದ ಸ್ವಲ್ಪ ಭಾಗ ಮಾತ್ರ ಕಟ್ಟಬೇಕಾದದ್ದಾಗಿದೆ.

ಮಿ. ಎ. ಬಿ. ಚಂಗಪ್ಪನವರು ಸಹ ವಿರೋಧಿಸಿದರು ಜನರಿಗೇನೇ ಕಾತು ಇಡುವದು ಉತ್ತಮ. ಕಂದಾಯ ಕಟ್ಟಲು ತಡವಾದಷ್ಟು ಕಂದಾಯ ಕಟ್ಟಲು ದುಡ್ಡು ಇಲ್ಲದೆ ಹೋದೀತು. ಸಾಲಗಾರರು ಬಾಚಿಕೊಂಡು ಹೋದರೆ ಏನೂ ಉಳಿಯುವದಿಲ್ಲವೆಂತ ಅವರು ವಾದಿಸಿದರು.

ಮಿ. ಉತ್ತಯ್ಯನವರೂ ವಿರೋಧಿಸಿದರು.

ಪರವಾಗಿ ಮಿ. ಸಣ್ಣಪ್ಪನವರೂ, ಕಾಳಪ್ಪನವರೂ, ವಿರೋಧವಾಗಿ ಸರಕಾರಿ ಮೆಂಬರರು, ಯೂರೋಪಿಯನ ಮೆಂಬರ, ಮೇದಪ್ಪನವರು, ಚಂಗಪ್ಪನವರು, ಮಂದಣ್ಣನವರು, ಉತ್ತಯ್ಯನವರು, ಪೂಂಚರು ಮತ್ತು ಮುದ್ದಪ್ಪನವರು ಓಟು ಕೊಟ್ಟರು. ಠರಾವು ನಾಪಾಸಾಯಿತು.

16 'ಇನ್ನೂ ಇಬ್ಬರು ಕೋಆಪರೇಟಿವ್ ಇನ್ಸ್‌ಪೆಕ್ಟರನ್ನು ನೇಮಿಸಬೇಕು' ಎಂಬ ರಠಾವಿಗೆ ಮೆ. ಉತ್ತಯ್ಯನವರು ಮದ್ರಾಸಿನ ಹೋಲಿಕೆ ಕೊಟ್ಟು ವಾದಿಸಿದರು.

ಮೆ. ಪಿ. ಐ. ಬೆಳ್ಯಪ್ಪನವರು ಅನುಮೋದಿಸಿದರು.

ಕಮಿಷನರು—ಆವಶ್ಯಕತೆಯನ್ನು ಸರಕಾರದವರು ಒಪ್ಪುತ್ತಾರೆ. ಫೈನೇನ್ಸ್ ಕಮಿಟಿಯ ಮುಂದೆ ಯೋಜನೆಗೆ ಇಡಲಾಗುತ್ತದೆ ಎಂತ ತಿಳಿಸಿದ ನಂತರ ಠರಾವು ವಾಪಸು ತೆಗೆದುಕೊಳ್ಳಲಾಯಿತು.

17. 'ಪೈಸಾರಿ ಕೆರೆಯ ಗೋಡನ್ನು ಮತ್ತು ಕಾಡುಗಳಿಂದ ಗೋಡುಮಣ್ಣನ್ನು ತೆಗೆದುಕೊಳ್ಳಲು ಬಿಡಬೇಕು' ಎಂಬ ಠರಾವನ್ನು ಮೆ. ಸಣ್ಣಪ್ಪನವರು ವಿವರಿಸಿದನಂತರ ಮೆ. ಚಿಣ್ಣಪ್ಪನವರು ಅನುಮೋದಿಸಿದರು.

ಡಿ. ರೇಜಿಸ್ಟ್ರೇಟರು—1920 ರಿಂದಲೇ ಕೆರೆಗಳ ಗೋಡು ತೆಗೆದುಕೊಳ್ಳಲು ಬಿಡುತ್ತಲಿದೆ ಕೆರೆ ಏರಿ ಮಾತ್ರ ಮುಟ್ಟಬಾರದು ಪೈಸಾರಿ ಕಾಡಿನಿಂದ ಗೋಡು ಮಣ್ಣು ತೆಗೆದುಬಿಟ್ಟರೆ ಕಾಡೆಲ್ಲಾ ನಿಸ್ಸಾರವಾಗಿ ಹಿರೇ ಲಂಟಾನ ತುಂಬಿ ಹೋದೀತು ಎಂದು ಹೇಳಿದರು. ಮೆ ಟಿಪ್ಪಿಂಗರು ಸಹ ಕಾಡು ಮಣ್ಣು ತೆಗೆಯುವದಕ್ಕೆ ವಿರೋಧಿಸಿದರು.

ಠರಾವಿನ ಮೊದಲನೇ ಭಾಗ ವಾಪಸು ತೆಗೆದುಕೊಳ್ಳಲಾಯಿತು. ಎರಡನೇ ಭಾಗ ಓಟಿಗೆ ಹಾಕಲಾಗಿ ಕಾಳಪ್ಪನವರೂ, ಕುಶಾಲಪ್ಪನವರೂ, ಮುದ್ದಪ್ಪನವರೂ, ಸಣ್ಣಪ್ಪನವರೂ, ವೆಂಕಪ್ಪಯ್ಯನವರೂ, ಬೆಳ್ಯಪ್ಪನವರೂ, ಕರುಂಬಯ್ಯನವರೂ ಪರವಾಗಿಯೂ, 4 ಜನ ಸರಕಾರಿ ಮೆಂಬರರೂ, ಇಬ್ಬರು ಯುರೋಪಿಯನರೂ, ಚಂಗಪ್ಪನವರು, ಪುಂಜರವರು, ಉತ್ತಯ್ಯನವರು, ಮಂದಣ್ಣನವರು ವಿರೋಧವಾಗಿಯೂ ಓಟುಮಾಡಿದರು. ಠರಾವು ಪಾಸಾಯಿತು.

18 ಲಂಟಾನ ನಾಶಪಡಿಸಲು ಕಾರ್ಯತಃ ಕೈಕೊಳ್ಳಬಹುದಾದ ವಿಧಾನಗಳನ್ನು ಸೂಚಿಸಲು ಉದ್ಯೋಗಸ್ಥರಲ್ಲದವರ ಒಬ್ಬ ಮತದಿಂದ ಈ ಕೌನ್ಸಿಲು ಮೆಂಬರುಗಳ ಒಂದು ಕಮಿಟಿಯನ್ನು ನೇಮಿಸಬೇಕೆಂಬ' ಠರಾವನ್ನು ಮೆ. ಪಿ ಟಿ. ಕುಶಾಲಪ್ಪನವರು ಸೂಚಿಸಿದಾಗ ಹೇಳಿದ್ದೇನೆಂದರೆ—ಹಲವು ವರ್ಷಗಳಿಂದ ಲಂಟಾನ ಕೀಳುತ್ತಾ ಬಂದರೂ, ನಾಲ್ಕರಲ್ಲಿ ಒಂದು ಭಾಗ ಲಂಟಾನವು ನಾಶವಾಗಿರುವದಿಲ್ಲ. ಕಿತ್ತದ್ದಕ್ಕಿಂತ ಹೆಚ್ಚಾಗಿ ಲಂಟಾನವು ಹೊಸದಾಗಿ ತುಂಬುತ್ತಾ ಇದೆ. ಸರ್ಕಾರದಲ್ಲಿ ಹಣವಿಲ್ಲವಂತೆ. ಜನರಿಗೆ ಬಡತನ, ಮರಣಸಂಖ್ಯೆ ಹೆಚ್ಚುತ್ತಿದೆ ಹುಲ್ಲುಗಾವಲು ಇಲ್ಲದೆ ದನಗಳು ಕ್ಷೀಣವಾಗುತ್ತಿವೆ. ಎಲ್ಲಾ ಕಮಿಟಿಗಳು ಲಂಟಾನ ತೆಗೆಯಬೇಕೆಂದು ಹೇಳಿದರೂ, ನಾಶಪಡಿಸುವ ರೀತಿಯನ್ನು ಸ್ಪಷ್ಟವಾಗಿ ಸೂಚಿಸಿರುವದಿಲ್ಲ. ಆದುದರಿಂದ ಕಾರ್ಯತಃ ಆಚರಿಸಬಹುದಾದ ವಿಧಾನಗಳನ್ನು ಕಂಡುಹಿಡಿಯುವದು ಅವಶ್ಯ.

ಮೆ ಯಂ. ಚಿಣ್ಣಪ್ಪನವರು ಅನುಮೋದಿಸಿದರು.

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು—ಲಂಟಾನದ ಕೆಡಕನ್ನು ಒಪ್ಪುತ್ತೇನೆ. ಮೆ. ಹ್ಯಾರಿಸ್‌ರವರು 15 ವರ್ಷಗಳ ಹಿಂದೆ ಪ್ರಯತ್ನಿಸಿದ್ದು ಜನರ ನಿರುತ್ಸಾಹದಿಂದ ಜಯವಾಗಲಿಲ್ಲ. ಆಗ ಉದ್ಯೋಗಸ್ಥರು ರೈತರನ್ನು ಪೀಡಿಸಿದರೆಂದು ಪುಕಾರುಗಳುಂಟಾದವು ಉದ್ಯೋಗಸ್ಥರ ಉತ್ಸಾಹವೂ ಕಡಿಮೆಯಾಯಿತು ಈಗ ನಿಧಾನವಾಗಿ ಎಚ್ಚರದಿಂದ ಈ ಕೆಲಸವು ನಡೆಸಲಾಗುತ್ತಿದೆ. ಹಣದ ಅಡಚಣೆ ಇದೆ. ಜನರು ಸಹಕರಿಸುವ ರಿಂದಲೂ ಒಳ್ಳೆಯದಿದೆ. ಕೀಳುವ ವಿಧಾನವು ಎಲ್ಲರಿಗೂ ಗೊತ್ತಿದೆ. ಯಾವ ಕಮಿಟಿಯೂ ಹೊಸ ವಿಧಾನವನ್ನು ಸೂಚಿಸಲಾರದು. ಆದುದರಿಂದ ವಿರೋಧಿಸುತ್ತೇನೆ, ಎಂದು ಹೇಳಿದರು.

ಮೆ. ಉತ್ತಯ್ಯನವರು—ಈ ವಿಷಯದಲ್ಲಿ ಜನರನ್ನು ಸ್ವಲ್ಪ ಮಟ್ಟಿಗೆ ಬಲತ್ಕಾರಿಸಬೇಕಾಗುತ್ತೆ. ಕೂಡಲೆ ಜಾರಿಗೆ ತರಬಹುದಾದಂಥ ರೀತಿಗಳನ್ನು ಸೂಚಿಸಲು ಕಮಿಟಿ ಬೇಕು, ಅಂದರು.

ಲಂಟಾನದ ಕೆಡಕನ್ನು ಎಲ್ಲರೂ ಒಪ್ಪಿದರೂ, ಅದನ್ನು ನಾಶಪಡಿಸಲು ಕೀಳುವದೊಂದೇ ದಾರಿಯಾದುದರಿಂದ ಕಮಿಟಿಯು ಆವಶ್ಯವಿಲ್ಲವೆಂದು ಮೆ. ಮುದ್ದಪ್ಪನವರು ಹೇಳಿದರು.

ಮೆ. ಎ. ಬಿ. ಚಂಗಪ್ಪನವರು—ಈ ವಿಷಯಕ್ಕೆ ಮಾಡುವ ಖರ್ಚು ಪ್ರಯೋಜನಕರವಾದದ್ದು. ಲಂಟಾನ ತೆಗೆದ ಜಾಗವನ್ನು ವ್ಯವಸಾಯಮಾಡಿ ಲಂಟಾನವನ್ನು ನಾಶಪಡಿಸಲು ಜನರೂ, ಸರ್ಕಾರವೂ ಪ್ರಯತ್ನಿಸಬೇಕು, ಎಂದು ಹೇಳಿದರು.

ಸರ್ಕಾರದವರು ಸಾಕಷ್ಟು ಉತ್ತೇಜನ ಕೊಡುತ್ತಿದ್ದಾರೆ; ಹೊಸ ವಿಧಾನ ಕಂಡುಹಿಡಿಯುವ ಹಾಗಿಲ್ಲವಾದುದರಿಂದ ಹಣ ವೃಥಾ ಕಳೆಯಬಾರದೆಂದು ಹೇಳಿ ಮೇದಪ್ಪನವರು ವಿರೋಧಿಸಿದರು.

ಮೆ. ಹ್ಯಾರಿಸ್‌ರವರ ವಿಧಾನವು ಒಳ್ಳೆಯದಾದರೂ ಅದನ್ನು ಜಾರಿಗೆ ತಂದ ಉದ್ಯೋಗಸ್ಥರು ಕ್ರಮವಾಗಿ ನಡಿಸದೆ ಜನರನ್ನು ಪೀಡಿಸತೊಡಗಿದರು. ರೆವಿನ್ಯೂ ರೂಲ್ಸುಗಳನ್ನು ಇದಕ್ಕೆ ಉತ್ತೇಜನಕರವಾಗಿ ಎಷ್ಟರ ಮಟ್ಟಿಗೆ ಉಪಯೋಗಿಸುತ್ತಿದ್ದಾರೆಂದು ಅಜಮಾಯಿಸಬೇಕು; ಎಂದು ಮೆ. ಕುಶಾಲಪ್ಪನವರು ಜವಾಬು ಕೊಟ್ಟರು.

ಲಂಟಾನ ಕೀಳುವವರಿಗೆ ರಿಯಾಯಿತಿಗಳು ಚೆನ್ನಾಗಿ ಕೊಡಲ್ಪಡುತ್ತಿವೆಯೆಂದೂ, ಇನ್ನು ಯಾವ ತರಹದಲ್ಲಿ ರಿಯಾಯಿತಿ ಕೊಡಬಹುದೆಂಬದನ್ನು ಮೆಂಬರುಗಳು ಸೂಚಿಸಬಹುದೆಂದೂ, ಅದಕ್ಕೆ ಕಮಿಟಿ ಅಗತ್ಯವಿಲ್ಲವೆಂದೂ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಪ್ರತ್ಯುತ್ತರ ಕೊಟ್ಟರು.

ಓಟಿಗೆ ಹಾಕಲಾಗಿ ಸಯ್ಯದ್ ಅಹ್ಮದ್‌ರವರು, ಕುಶಾಲಪ್ಪನವರು, ಚಿಣ್ಣಪ್ಪನವರು, ವೆಂಕಪ್ಪಯ್ಯನವರು, ಬೆಳ್ಯಪ್ಪನವರು, ಕರುಂಬಯ್ಯನವರು, ಉತ್ತಯ್ಯನವರು, ಮತ್ತು ಎ. ಬಿ. ಚಂಗಪ್ಪನವರು ಪರವಾಗಿಯೂ, ಕಾಳಪ್ಪನವರು, ಮಂದಣ್ಣನವರು, ಮುದ್ದಪ್ಪನವರು, ಪುಂಜರು, ಮೇದಪ್ಪನವರು, ಇಬ್ಬರು ಯುರೋಪಿಯನರು ಮತ್ತು 4 ಉದ್ಯೋಗಸ್ಥರು ವಿರೋಧವಾಗಿಯೂ ಓಟುಮಾಡಿದ್ದರಿಂದ ಠರಾವು ಪಾಸಾಗಲಿಲ್ಲ.

19. 'ಫಾರೆಸ್ಟು ಹಡ್ಲುಗಳನ್ನು ಪಡೆಕೊಂಡವರು ಅದರಲ್ಲಿರುವ ಮರಗಳನ್ನು ಸರ್ಕಾರಕ್ಕೆ ಮರದ ಬೆಲೆ ಕೊಡದೆ ಕಡಿದು ಮಾರಲು ಬಿಡಬೇಕು' ಎಂಬ ಸೂಚನೆಯನ್ನು ಮೆ. ಕುಶಾಲಪ್ಪನವರು ಚರ್ಚೆಗೆ ಇಡದೆ ವಾಪಸು ತೆಗೆದುಕೊಂಡರು.

20 "ಅಂತ್ಯಜರ ಹಿತವನ್ನು ಸಾಧಿಸಲಿಕ್ಕಾಗಿ ಕಮಿಷನರ ಕೈಕೆಳಗೆ ಒಂದು ಲೇಬರ್ ಇಲಾಖೆಯನ್ನು ಮಾಡಬೇಕು ಮತ್ತು ಅಂತ್ಯಜರಿಗೆ ಕೃಷಿ ವ್ಯವಸಾಯಮಾಡಲು ಕೊಡಲಿಕ್ಕಾಗಿ ಭೂಮಿಯನ್ನು ಪ್ರತ್ಯೇಕ ಇಡಬೇಕು" ಎಂಬ ಠರಾವನ್ನು ಮೆ. ಪುಂಜರವರು ಸೂಚಿಸಿ ಹೀಗೆಂದರು—ಇಂಥಾ ಇಲಾಖೆಗಳು ಬೇರೆಪ್ರಾಂತ್ಯಗಳಲ್ಲಿವೆ. ಮದ್ರಾಸಿನಲ್ಲಿ ಕಳೆದ 5 ವರ್ಷಗಳಿಂದ ಪ್ರಯತ್ನಿಸಿ ಜಯಪ್ರದವಾಗಿದೆ. (ಮದ್ರಾಸು ಇಲಾಖೆಯ ಕೆಲಸವನ್ನು ವಿವರವಾಗಿ ಓದಿ ಹೇಳಿದರು.) ಸರ್ಕಾರದವರು ಅಂತ್ಯಜರ ಸಹಾಯಕ್ಕೆ ಬರಲೇ ಬೇಕು. ಕಮಿಷನರು, ಅಸಿಸ್ಟ್ಯಾಂಟ್ ಕಮಿಷನರು, ಸುಭೇದಾರರು ಮೊದಲಾದ ಉದ್ಯೋಗಸ್ಥರು ಈ ಇಲಾಖೆಯ ಕೆಲಸವನ್ನು ಕತ್ತಾಳ ನಡಿಸಬಹುದು. ಇದಕ್ಕೆ ಹೆಚ್ಚಿನ ಹಣಬೇಡ ನಮ್ಮ ದೇಶದಲ್ಲಿ ಅವರಿಗಾಗಿ ಏನೊಂದು ಕೆಲಸವನ್ನು ಮಾಡಿರುವದಿಲ್ಲ. ಅವರನ್ನು ಮರೆತರೆ ಅವರು ಪರಪ್ರಾಂತ್ಯಗಳಿಗೆ ಹೋಗಿಬಿಡುವ ಸಂಭವವಿದೆ.

ಮೆ. ಕರುಂಬಯ್ಯನವರು ಅನುಮೋದಿಸಿದರು.

"ಈಗ ಅನುಕೂಲಗಳು ಇದ್ದರೂ ಅವುಗಳನ್ನು ಅವರು ಉಪಯೋಗಿಸಿಕೊಳ್ಳುವದಿಲ್ಲ. ಸರ್ಕಾರವು ಸಹಾಯಮಾಡುತ್ತಿದೆ. ಖಾಸಗಿ ಸಂಸ್ಥೆಗಳು ಕೆಲಸಮಾಡಬೇಕಾಗಿವೆ. ಹೊಸ ಇಲಾಖೆಯು ಆವಶ್ಯವಿಲ್ಲ. ಕಮಿಷನರು ಇನ್ನೂ ಹೆಚ್ಚು ಕೆಲಸಮಾಡಲಾರರು." ಎಂದು ಹೇಳಿ ಕಮಿಷನರು ಸಹಾನುಭೂತಿ ತೋರಿಸಿದರು.

ಲೇಬರ್ ಫಂಡುಗಳಿಂದ ಉತ್ಪತ್ತಿಯಾಗುವ ಹಕ್ಕು ಸಾರೂಪಾಯಿಗಳನ್ನು ಇದಕ್ಕೆ ಉಪಯೋಗಿಸಬಹುದು, ಮತ್ತು ಉದ್ಯೋಗಸ್ಥರು ಕೆಲಸಮಾಡಬಹುದೆಂದು ಹೇಳಿ ಮೆ. ಮೇದಪ್ಪನವರು ಉತ್ತಾಹ ಕೊಟ್ಟರು.

ಇದಕ್ಕೆ ಸರ್ಕಾರದವರು ಹಣ ಕಂಡುಹಿಡಿಯಬೇಕು, ಮುಂದಕ್ಕೆ ತಳ್ಳಬಾರದೆಂದು ಹೇಳಿ ಮೆ ಉತ್ತಯ್ಯನವರೂ ಉತ್ತಾಹಕೊಟ್ಟರು. ಮೆ ವೆಂಕಪ್ಪಯ್ಯನವರೂ ಉತ್ಸಾಹಯಾಗಿ ಮಾತಾಡಿದರು

ಅಧ್ಯಕ್ಷರೂ ಸಹಾನುಭೂತಿಯನ್ನು ತೋರಿಸಿದರ.

ಠರಾವಿಗೆ ಯಾರೂ ವಿರೋಧಿಸದ್ದರಿಂದ ಬಹುಮತದ ಪಾಸಾಯಿತು.

ಎರಡನೇ ದಿನ.

21. "ಗಂಧದ ಉತ್ಪತ್ತಿಯನ್ನು ಫಾರೆಸ್ಟು ಇಲಾಖೆಯಿಂದ ಬೇರ್ಪಡಿಸಿ, ರೆವಿನ್ಯೂ ಇಲಾಖೆಯ ಉತ್ಪತ್ತಿಗೆ ಸೇರಿಸಿ, ಅದು ದೇಶದ ಅಭಿವೃದ್ಧಿಯ ಕೆಲಸಗಳಿಗೆ ಉಪಯೋಗಿಸಬೇಕು" ಎಂದು ಮೆ. ಎ. ಬಿ. ಚಂಗಪ್ಪನವರು ಸೂಚಿಸುವಾಗ ಹೇಳಿದ್ದೇನೆಂದರೆ—ಈಗ ಹೆಚ್ಚಾಗಿ ದೊರೆಯುವ ಪೈಸಾರಿ ಮತ್ತು ಖಾಸಗಿ ಜಾಗಗಳಲ್ಲಿರುವ ಗಂಧದ ಉತ್ಪತ್ತಿಯ ಮೇಲೆ ಫಾರೆಸ್ಟ್ ಇಲಾಖೆಯವರಿಗೆ ಹಕ್ಕಿಲ್ಲ. ಅದನ್ನು ರೆವಿನ್ಯೂ ಇಲಾಖೆಯವರೇ ಕೇಳಬಹುದು. ಖಾಸಗಿ ಜಾಗಗಳಲ್ಲಿ ಸಣ್ಣ ಮರಗಳನ್ನೂ ಸಹ ಕೇಳುತ್ತಿದ್ದಾರೆ. ಫಾರೆಸ್ಟು ಇಲಾಖೆಯ ಸಿಬ್ಬಂದಿಯು ಬಹು ಹೆಚ್ಚಾಗಿದೆ.

ಮೆ. ಉತ್ತಯ್ಯನವರು ಅನುಮೋದಿಸಿ ಹೀಗೆಂದರು—ಚಿನ್ನದ ಗಣಿಯಂತಿದ್ದ ಫಾರೆಸ್ಟು ಇಲಾಖೆ ಈಗ ದೊಡ್ಡ ಕಷ್ಟವಾಗಿ ತುಂಬಾ ಹಣ ವ್ಯಯವಾಗುತ್ತಿದೆ. ಇದು ಗಂಧದ ಉತ್ಪತ್ತಿಯನ್ನು ಉಪಯೋಗಿಸಬಾರದು. ಮೊದಲಿದ್ದ ಕಂಟ್ರಾಕ್ಟು ಪದ್ಧತಿಯನ್ನು ಜಾರಿಗೆ ತರಬೇಕು.

ಫಾರೆಸ್ಟ್ ಮೆಂಬರು—ಇದು ಬಡ್ಜೆಟ್ಟಿನ ತತ್ವಕ್ಕೆ ವಿರುದ್ಧ. ಫಾರೆಸ್ಟು ಇಲಾಖೆಯಲ್ಲಿ ಖರ್ಚುಕಳೆದು ಉಳಿವು ಇದ್ದೇ ಇರುತ್ತದೆ. ರೀಜನರೇಶನ್ ಕೆಲಸವು ದೇಶದ ಅಭಿವೃದ್ಧಿಗಾಗಿದೆ. ಎಲ್ಲಾ ಉತ್ಪತ್ತಿಯು ಸರ್ಕಾರದ ಜಮೆಗೆ ಬರುತ್ತದೆ. ಗಂಧದ ಹಣವನ್ನು ಇಂಥಾ ಕೆಲಸಕ್ಕೆಂದು ಪ್ರತ್ಯೇಕ ಇಡುವದು ಸರಿಯಲ್ಲ. ಆದುದರಿಂದ ಠರಾವನ್ನು ವಿರೋಧಿಸುತ್ತೇನೆ—ಅಂದರು.

ನಮಗೆ ಎರಡು ಬಡ್ಜೆಟ್ ಬೇಕೆಂತಲ್ಲ. ಗಂಧದ ಉತ್ಪತ್ತಿಯು ದೇಶದ ಅಭಿವೃದ್ಧಿ ಕೆಲಸಕ್ಕೇ ಉಪಯೋಗಿಸಲ್ಪಡಬೇಕಲ್ಲದೆ ಫಾರೆಸ್ಟು ಇಲಾಖೆಯ ಖರ್ಚಿಗೆ ಹೋಗಬಾರದೆಂದು ಮೆ. ಚಂಗಪ್ಪನವರು ಉತ್ತರ ಕೊಟ್ಟರು.

ಗಂಧದ ಉತ್ಪತ್ತಿಗಿಂತ ಹೆಚ್ಚು ಫಾರೆಸ್ಟು ಇಲಾಖೆಯ ಉಳಿವರಿ ಇದೆ ಎಂದು ಫಾರೆಸ್ಟು ಮೆಂಬರು ಪ್ರತ್ಯುತ್ತರ ಕೊಟ್ಟಮೇಲೆ ಠರಾವು ಓಟಿಗೆ ಹಾಕಲ್ಪಟ್ಟಿತು. ಕಾಳಪ್ಪನವರು, ಸಯ್ಯದ್ ಅಹ್ಮದ್‌ರವರು, ಮುದ್ದಪ್ಪನವರು, ಕುಶಾಲಪ್ಪನವರು, ಚಿಣ್ಣಪ್ಪನವರು, ಸಣ್ಣಪ್ಪನವರು, ವೆಂಕಪ್ಪಯ್ಯನವರು, ಬೆಳ್ಯಪ್ಪನವರು, ಕರುಂಬಯ್ಯನವರು, ಉತ್ತಯ್ಯನವರು, ಮತ್ತು ಎ. ಬಿ. ಚಂಗಪ್ಪನವರು ಪರವಾಗಿಯೂ, ಆಫೀಸರುಗಳು ಮತ್ತು ಯುರೋಪಿಯನರು ವಿರೋಧವಾಗಿಯೂ ಓಟು ಕೊಟ್ಟು ಬಾಕಿಯವರು ಯಾವಕಡೆಗೂ ಓಟುಕೊಡದ್ದರಿಂದ ಠರಾವು ಮಂಜೂರಾಯಿತು.

(ಮುಂದುವರಿಯುವುದು.)


## ಕೋವಿಗಳು, ಮತ್ತು ಅವುಗಳ ಸಾಹಿತ್ಯಗಳು.



ಮಿಡ್ಲೇಂಡ್ ಕಂಪೆನಿಯ "ನಾಕ್ ಎಬೌಟ್" ಎಂಬ 12 ನೇ ನಂಬರಿನ ಒಂಟಿ ಕೊಳದ ಕೋವಿಗೆ ರೂ 30

ಅಮೇರಿಕದ ಸ್ಟೀವನ್ಸ್ ಕಂಪೆನಿಯ 12 ನೇ ನಂಬರಿನ ಒಂಟಿ ಕೊಳದ ತೋಟದ ಕೋವಿಗೆ ರೂ 4[illegible]

12 ನೇ ನಂಬರಿನ ಒಂಟಿ ಕೊಳದ ಅತಿ ಸುಲಭ ಕ್ರಯದ ತೋಟದ ಕೋವಿಗೆ ರೂ 35

12ನೇ ನಂಬರಿನ ಜೋಡು ಕೊಳದ 'ಇಂಗ್ಲಿಷ್' ತೋಟದ ಕೋವಿಗೆ ರೂ. 75

" " " " 'ಬೆಲ್ಜಿಯನ್' ತೋಟದ ಕೋವಿಗೆ ರೂ. 60

ಹೊಗೇ ರಹಿತವಾದ 12 ನಂಬರಿನ ಇಂಗ್ಲಿಷ್ "ಎಲೇ" ಚಲ್ಲು ತುಂಬಿದ ತೋಟಗಳು 100 ಕ್ಕೆ ರೂ. 1[illegible]—0—0
ಅಮೇರಿಕನ್ ವೆಸ್ಟರನ್ " " " 100 ಕ್ಕೆ ರೂ. 9—8—0
ಬೆಲ್ಜಿಯನ್ 100 ಕ್ಕೆ ರೂ. 9—0—0

ಎಲ್ಲಾ ತರದ ಕೋವಿಗಳು, ರೈಫಲ್‌ಗಳು, ರಿವಾಲ್ವರ್‌ಗಳು, ಪಿಸ್ತೂಲ್‌ಗಳು ಮತ್ತು ಚಲ್ಲು ಮದ್ದು ವಗೈರೆ ಅಲ್ಲದೆ ಬೇಟೆಗಾರರಿಗೆ ಬೇಕಾಗಿರುವ ಎಲ್ಲಾ ಸಾಹಿತ್ಯಗಳು ಸುಲಭ ದರದಲ್ಲಿ ದೊರಕುತ್ತೆ.

ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಂಪೆನಿಯ ಕೆಟಲಾಗೊಂದು ಮುಫತ್ತಾಗಿ ರವಾನಿಸಲ್ಪಡುವುದು.

Abdoolally Noorbhoy,
Arms & Ammunition Dealers,
248—250 Abdul Rehman Street,
Bombay 3. Telegrams "Guidance"

3

## Silks! Silks!! Silks!!!

Sarees with gold borders, body plain or spotted in various designs and colours.

| | | | | |
|---|---|---|---|---|
| 5 yds by 45 inches plain body | Rs. 30/- | to | Rs. | 80/- |
| do. spotted body | " 40/- | to | " | 90/- |
| 6 yds by 45 inches plain body | " 50/- | to | " | 100/- |
| do. spotted body | " 60/- | to | " | 120/- |
| Headkerchief 44 by 44 inches price | " 12 - | to | " | 35/- |
| Gold Lace borders, Ribbons, price from | " 1/8/- | to | " | 5/- per yd. |

***For further particulars, please write to:-***

**BHARADWAJ & CO.,**
**BROCADE, EMBROIDARY & SILK MANUFACTURERS,**
**Benares City.**

52—13

10–11–'28. ಕೊಡಗು ಖಾಯಿದೆ ಮಂಡಲಿಯಲ್ಲಿ

## ಕರ್ನಾಟಕ ಏಕೀಕರಣವು ಒಪ್ಪಲಾಯಿತು.

### ಸ್ತ್ರೀಯರಿಗೆ ಓಟು ಕೊಡುವ ಮತ್ತು ಕೌನ್ಸಿಲಿಗೆ ಮೆಂಬರಾಗಿ ಬರುವ ಹಕ್ಕು ಇರಬೇಕೆಂದು ನಿಶ್ಚೈಸಲಾಯಿತು.

'ಭಾಷಾನುವಾರು ಆಗಲಿಕ್ಕಿರುವ ಸ್ವಾತಂತ್ರ್ಯ ಕರ್ನಾಟಕ ಪ್ರಾಂತ್ಯದೊಳಗ ಕೊಡಗು ದೇಶವು ಸೇರಿಕೊಳ್ಳತಕ್ಕ' ಎಂದು ಮಿ. ಪಿ. ಐ. ಬೆಳ್ಯಪ್ಪನವರು ಸೂಚಿಸಿದ ಠರಾವು ಒಮ್ಮತದಿಂದ ಪಾಸಾಯಿತು.

ಕೊಡಗಿನ ಚುನಾವಣೆ ರೂಲ್ಸ್‌ನಲ್ಲಿ ಹೆಂಗಸರು ಓಟು ಕೊಡಲು ಇರುವ ಅಡಚಣೆಯನ್ನು ತೆಗೆದು ಹಾಕಿ ಗಂಡಸರಂತೆ ಅವರಿಗೂ ಓಟಿನ ಹಕ್ಕು ಕೊಡಬೇಕೆಂಬ ಮತ್ತು ಲೆಜಿಸ್ಲೇಟಿವ್ ಕೌನ್ಸಿಲಿಗೆ ಮೆಂಬರುಗಳಾಗಿ ಗಂಡಸರಂತೆಯೇ ಚುನಾಯಿಸಲ್ಪಡುವ ಮತ್ತು ನೇಮಿಸಲ್ಪಡುವ ಹಕ್ಕು ಅವರಿಗೆ ಇರಬೇಕೆಂಬ ಮೆ ಪೂಜಾರವರ ಠರಾವುಗಳು ಏಕಮತದಿಂದ ಮಂಜೂರಾದವು.

## ವರ್ತಮಾನ ಸಂಗ್ರಹ.

### ಒಳದೇಶ.

ಕಳೆದ ವಾರ ಪಾವೇರಾಂ ಬಸ್ಸು ಗೋಣಿಕೊಪ್ಪಲು ...ಯಲಿ ಒಬ ...

ದೇವರ ಕಲಾಪ್ತ ಹಬ್ಬವು, ತಾ. 27ನೇ ಮಂಗಳವಾರ ರೋಹಿಣಿ ನಕ್ಷತ್ರದಲ್ಲಿ ದೇವ ಪೋಳುದು—ರಾತ್ರಿ 8 ಗಂಟೆಗೆ ನೆರಿ ಕಟ್ಟುವದು, 9 ಗಂಟೆಗೆ ಕದಿ ಕುಯ್ಯುವದು, 10 ಗಂಟೆಗೆ ಊಟಮಾಡುವ ಶುಭ ಮುಹೂರ್ತವು. ಮೂರನೆ ದಿನ ತಾ. 28ನೇ ...

ಸೈಮನ್ ಕಮಿಷನಿನವರು ಪಂಜಾಬು ಮೀಟಿಂಗನ್ನು ಮುಗಿಸಿಕೊಂಡು ಸಿಂಧು ಪ್ರಾಂತ್ಯದವರ ಅಭಿಪ್ರಾಯ ತೆಗೆದುಕೊಳ್ಳಲಿಕ್ಕಾಗಿ ಈ ತಾ. 11ರಲ್ಲಿ ಕರಾಚಿಗೆ ಬಂದರು. ಅವರು ಒಂದಾಗ್ಯೆ ರೈಲ್ವೆಸ್ಟೇಶನಿನಲ್ಲಿ ಸಾವಿರಗಟ್ಟಲೆ ಜನರು ನೆರೆದು 'ಹಿಂದಕ್ಕೆ ಹೊರಡಿ' 'ಸಾಯಿಮನ್ ಗೋಬಾಕ್' ಎಂದು ಕೂಗುತ್ತಾ ಕಪ್ಪುಬಾವುಟೆಗಳ ಸಹಿತ ಬೀದಿಗಳಲ್ಲಿ ಮೆರವಣಿಗೆ ಹೋಗಿ, ನಂತರ ಪಬ್ಲಿಕ್ ಮೀಟಿಂಗು ಮಾಡಿ ಕಮಿಷನಿನ ನೇಮಿಸುವಿಕೆಯನ್ನು ಖಂಡಿಸಿ ಠರಾವುಗಳನ್ನು ಪಾಸುಮಾಡಿದರು.

### ವಿದೇಶ.

ಮಿ. ಹೂವರ್‌ರವರು ಅಮೇರಿಕದ ಯುನೈಟೆಡ್ ಸ್ಟೇಟ್ಸ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು

"ವೆಸ್ಟ್ರಿಸ್" ಎಂಬ ಹಡಗು ಮುಳುಗಿ ಹೋಗಿ ಅದರಲ್ಲಿದ್ದ 339 ಜನರ ಪೈಕಿ 100 ಜನರು ಕಾಣದೆ ಆಗಿರುವರು.

ಫ್ರಾನ್ಸ್ ದೇಶದಲ್ಲಿ ಪ್ರಧಾನ ಮಂತ್ರಿ ಯಂ. ಪಾಯಿಂಕೇರ್‌ರವರು ಹೊಸ ಮಂತ್ರಿ ಮಂಡಳಿಯನ್ನು ನೇಮಿಸಿರುವರು ಅದಕ್ಕೆ ಯಂ. ಬ...




# ಎಂ. ಎಸ್. ಶಿದ್ದಪ್ಪ ಬ್ರದರ್ಸ್.

## ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

### ೧೯೨೯ನೇ ಇಸವಿಯ ಶಿದ್ದಪ್ಪಾಸ್ ನೋಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929ನೇ ಇಸವಿಯ ಶಿದ್ದಪ್ಪಾಸ್ ನೋಡಲ್ ಪಾಕೆಟ್ ಡೈರಿಗಳು.

| | | | |
|---|---|---|---|
| ನೇ ನಂ ದೊಡ್ಡ ಸೈಜು ಪಾಕೆಟ್ ಡೈರಿ ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿದ್ದು 6½"×4" 1ಕ್ಕೆ | 0 | 12 | 0 |
| ಪರಸ್ಥಳಕ್ಕೆ ಪೋಸ್ಟೇಜು | 0 | 3 | 0 |
| ನೇ ನಂ ದೊಡ್ಡ ಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್ ಡೈರಿ 6½"×4" 1ಕ್ಕೆ | 0 | 10 | 0 |
| ಪರಸ್ಥಳಕ್ಕೆ ಪೋಸ್ಟೇಜು | 0 | 3 | 0 |
| ನೇ ನಂ ಚಿಕ್ಕ ಸೈಜು ಪಾಕೆಟ್ ಡೈರಿ ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿದ್ದು 5"×2½" 1ಕ್ಕೆ | 0 | 7 | 0 |
| ಪರಸ್ಥಳಕ್ಕೆ ಪೋಸ್ಟೇಜು | 0 | 2 | 0 |
| ನೇ ನಂ ಚಿಕ್ಕ ಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್ ಡೈರಿ 5"×2½" 1ಕ್ಕೆ | 0 | 5 | 0 |
| ಪರಸ್ಥಳಕ್ಕೆ ಪೋಸ್ಟೇಜು | 0 | 2 | 0 |

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪೂರ್ತಾ ಮೊಬಲಗು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1ಡೈರಿ ಬಿಟ್ಟಿಗೆ ಕೊಡಲಾಗುತ್ತೆ. ವಿ ಪಿ ಮೂಲಕ ಡಜನ್ ಗಟ್ಲೆ ತರಿಸಿಕೊಳ್ಳುವವರು ಡಜನ್ 1ಕ್ಕೆ 2–0–0 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929ನೇ ಇಸವಿಯ ಸಚಿತ್ರ ಕ್ಯಾಲೆಂಡರುಗಳು.

| | | | |
|---|---|---|---|
| ಶೀಟ್ ಕ್ಯಾಲೆಂಡರ್ 50ಕ್ಕೆ | 1 | 2 | 0 |
| " " 100ಕ್ಕೆ | 2 | 0 | 0 |
| 3"×4½" ಪಾಕೆಟ್ ಕ್ಯಾಲೆಂಡರ್ 12ಕ್ಕೆ | 0 | 9 | 0 |
| " " 50ಕ್ಕೆ | 2 | 4 | 0 |
| " " 100ಕ್ಕೆ | 4 | 6 | 0 |

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ 10"×14" ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರ್

| | | | |
|---|---|---|---|
| 3ಕ್ಕೆ | 0 | 6 | 0 |
| " " 6ಕ್ಕೆ | 0 | 14 | 0 |
| " " 12ಕ್ಕೆ | 1 | 6 | 0 |

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರ್ತಾ ಮೊಬಲಗು ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಖಂಡಿತವಾಗಿ ರವಾನಿಸುವುದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮಣಿಯಾರ್ಡರನ್ನು ಬಂದವರ್ಸ್ಗದಂತೆ ವಾಪಸು ಮಾಡತ್ತೆ.

ಮಾದರಿ ಕ್ಯಾಲೆಂಡರು ಅಪೇಕ್ಷಿಸುವವರು 0–5–0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆಯ ಕ್ಯಾಲೆಂಡರುಗಳನ್ನು ಪೋಸ್ಟು ಮೂಲಕ ಫ್ರೀಯಾಗಿ ಕಳುಹಿಸಲಾಗುತ್ತೆ.

52–28

ಮನಿಯಾರ್ಡರ್ ರವಾನಿಸುವ ವಿಳಾಸ.—

ಎಂ. ಎಸ್ ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು


... ಲೆಯೂ ಸ್ಟೇಟು ಕುಲಶಾಂತ್ರ್ ಎಂಬಲ್ಲಿರುವ ಮ...ಹ ಕಾರ್ಯಪ್ಪನವರು ಬಹಳ ಚೆನ್ನಾಗಿ 'ಹಾಕಿ' ಆಟವನ್ನು ಕಲಿಸಿಕೊಡುತ್ತಾರೆ. ಇವರು ಯೂರೋಪಿ..., ಇಂಡಿಯನರಿಂದ ಆದ ಪಂಥದಾಟದಲ್ಲಿ ಇಂಡಿ...ಮಿನ ಕ್ಯಾಪ್ಟನ್‌ಗಿದ್ದರು. ಯೂರೋಪಿಯನರ ...ಡಿಯನ್ ಟೀಮನ್ನು ಇವರಿಗೆ ಎಂದೂ ಸೋಲಿಸಿ...ದರೂ ಈ ವರ್ಷ ...ವರನ್ನು 3 ಗೋಲುಗಳಿಂದ ...ನ್ ಟೀಮಿನವರು ಸೋಲಿಸಿರುವರೆಂದೂ, ಕಾರ್ಯ... ಬಹಳ ಚೆನ್ನಾಗಿ ...ರೆಂದೂ ಅಲ್ಲಿಯ ಸ್ಥಳೀಕ ...ಲ್ಲಿ ಪ್ರಕಟವಾಗಿದೆ.

... ವೃಶ್ಚಿಕ ಮಾಸ 1ಕ್ಕೆ ... ನವಂಬರು ತಾ. ...ಮವಾರ ಕೃತ್ತಿಕಾ ನಕ್ಷತ್ರ... ಮಾಡಿ...

ಸಬಲ್ಲಭಾಯ್ ಪಟೇಲ್‌ರವರ ಹೆಸರನ್ನು ... ನಿಚ್ಚಿನ ಪ್ರಾಂತೀಕ ಲಿಬರಲ್ ಸಂಘಗಳು ಸೂಚಿಸಿವೆ.

ಅಫಘಾನಿಸ್ಥಾನದ ಪ್ರಜೆಗಳೆಲ್ಲರೂ 'ಹ್ಯಾಟ್'ನ್ನು ಧರಿಸಬೇಕೆಂದು ಅಲ್ಲಿಯ ಅರಸರು ಹುಕುಂ ಮಾಡಿರುವರು. ಸಿಖ್ಖ ಜನರ ಮತಕ್ಕೆ ಇದು ವಿರೋಧವಾದುದರಿಂದ ಅವರನ್ನು ಬಲತ್ಕರಿಸಬಾರದೆಂದು ಹಿಂದೂ ದೇಶದ ಸಿಖ್ಖ ಜನರ ಸಂಘವು ಅಮೀರರಿಗೆ ವಿನಂತಿ ಮಾಡಿಕೊಂಡಿರುವದು.

ತಾ. 12 ರಲ್ಲಿ ಸೂರ್ಯ ಗ್ರಹಣವಾದುದರಿಂದ ಕುರುಕ್ಷೇತ್ರದಲ್ಲಿ ಸುಮಾರು ಏಳು ಲಕ್ಷ ಜನರು ಗಂಗಾ ಸ್ನಾನ ಮಾಡಿದರು. ತುಮುಕು ಬಹಳ ಜೋರಾಗಿದ್ದದರಿಂದ ಹಲವರಿಗೆ ಜಖಂ ಉಂಟಾಯಿತು. ಇಬ್ಬರು ಮೃತರಾದರು ಈ ಜಾತ್ರೆಯಲ್ಲಿ ತಕ್ಕ ಏರ್ಪಾಡುಗಳನ್ನು ಮಾಡಲು ಪಂಜಾಬು ಸರ್ಕಾರದವರು ಐದು ಲಕ್ಷ ರೂಪಾಯಿಗಳನ್ನು ...

... ಗಳಲ್ಲಿ ಮಾತ್ರ ಮಂಜೂರುಮಾಡಲಾಗುವುದೆಂಬ ತೀರ್ಮಾನವಾಯಿತು.

ಪಿ. ಐ. ಕುಟ್ಟಪ್ಪ,
ಗೌ. ಕಾರ್ಯದರ್ಶಿ.

### ಕಲಕತ್ತೆಯ ಸೇವಾದಳದ ಪರಿಷತ್ತು.

'ಹಿಂದುಸ್ಥಾನೀ ಸೇವಾದಳ'ದ ಅಖಿಲ ಭಾರತೀಯ ಮಂಡಳದ ನಿರ್ಣಯದ ಮೇರೆಗೆ ಬಂಗಾಳದ ಕರುಣಾ ಮುಖಂಡರಾದ ಶ್ರೀ. ಸುಭಾಷಚಂದ್ರಬೋಸರವರು ಸೇವಾದಳದ ಕಲಕತ್ತೆಯಲ್ಲಿ ಕೂಡುವ (ರಾಷ್ಟ್ರೀಯ ಸಪ್ತಾಹದಲ್ಲಿ ಡಿಸೆಂಬರು 1928) ವಾರ್ಷಿಕ ಅಧಿವೇಶನದ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

16. 'ಇನ್ನೂ ಇಬ್ಬರು ಕೋಅಪರೇಟಿವ್ ಇನ್ಸ್‌ಪೆಕ್ಟರನ್ನು ನೇಮಿಸಬೇಕು' ಎಂಬ ಠರಾವಿಗೆ ಮೆ. ಉತ್ತಯ್ಯನವರು ಮದ್ರಾಸಿನ ಹೋಲಿಕೆ ಕೊಟ್ಟು ವಾದಿಸಿದರು.

ಮೆ. ಪಿ. ಐ. ಬೆಳ್ಳಪ್ಪನವರು ಅನುಮೋದಿಸಿದರು.

ಕಮಿಷನರು—ಅವಶ್ಯಕತೆಯನ್ನು ಸರಕಾರದವರು ಒಪ್ಪುತ್ತಾರೆ. ಫೈನೇನ್ಸ್ ಕಮಿಟಿಯ ಮುಂದೆ ಯೋಚನೆಗೆ ಇಡಲಾಗುತ್ತದೆ ಎಂತ ತಿಳಿಸಿದ ನಂತರ ಠರಾವು ವಾಪಸು ತೆಗೆದುಕೊಳ್ಳಲಾಯಿತು.

17. 'ಪೈಸಾರಿ ಕೆರೆಯ ಗೋಡನ್ನು ಮತ್ತು ಕಾಡುಗಳಿಂದ ಗೋಡುಮಣ್ಣನ್ನು ತೆಗೆದುಕೊಳ್ಳಲು ಬಿಡಬೇಕು' ಎಂಬ ಠರಾವನ್ನು ಮೆ. ಸಣ್ಣಪ್ಪನವರು ವಿವರಿಸಿದನಂತರ ಮೆ. ಚಿಣ್ಣಪ್ಪನವರು ಅನುಮೋದಿಸಿದರು.

ಡಿ ಮೇಜಿಸ್ಟ್ರೇಟರು—1920 ರಿಂದಲೇ ಕೆರೆಗಳ ಗೋಡು ತೆಗೆದುಕೊಳ್ಳಲು ಬಿಡುತ್ತಲಿದೆ. ಕೆರೆ ಏರಿ ಮಾತ್ರ ಮುಟ್ಟಬಾರದು. ಪೈಸಾರಿ ಕಾಡಿನಿಂದ ಗೋಡು ಮಣ್ಣು ತೆಗೆದುಬಿಟ್ಟರೆ ಕಾಡೆಲ್ಲಾ ನಿಸ್ಸಾರವಾಗಿ ಬರೇ ಲಂಟಾನ ತುಂಬಿಹೋದೀತು ಎಂದು ಹೇಳಿದರು. ಮೆ. ಟಿಪ್ಪಿಂಗರು ಸಹ ಕಾಡು ಮಣ್ಣು ತೆಗೆಯುವದಕ್ಕೆ ವಿರೋಧಿಸಿದರು.

ಠರಾವಿನ ಮೊದಲನೇ ಭಾಗ ವಾಪಸು ತೆಗೆದುಕೊಳ್ಳಲಾಯಿತು. ಎರಡನೇ ಭಾಗ ಓಟಿಗೆ ಹಾಕಲಾಗಿ ಕಾಳಪ್ಪನವರು, ... [illegible]

ದು, ಕರುಂಬಯ್ಯನವರು, ಉತ್ತಯ್ಯನವರು, ಮತ್ತು ಎ ಬಿ. ಜಂಗಪ್ಪನವರು ಪರವಾಗಿಯೂ, ಕಾಳಪ್ಪನವರು, ಮಂದಣ್ಣನವರು, ಮುದ್ದಪ್ಪನವರು, ಪೂಂಜರು, ಮೇದಪ್ಪನವರು, ಇಬ್ಬರು ಯೂರೋಪಿಯನರು ಮತ್ತು 4 ಉದ್ಯೋಗಸ್ಥರು ವಿರೋಧವಾಗಿಯೂ ಓಟುಮಾಡಿದ್ದರಿಂದ ಠರಾವು ಪಾಸಾಗಲಿಲ್ಲ.

19. 'ಫಾರೆಸ್ಟು ಹಸ್ಲುಗಳನ್ನು ಪಡಕೊಂಡವರು ಅದರಲ್ಲಿರುವ ಮರಗಳನ್ನು ಸರಕಾರಕ್ಕೆ ಮುಂದ ಬೆಲೆ ಕೊಡದೆ ಕಡಿದು ಹೊರಲು ಬಿಡಬೇಕು' ಎಂಬ ಸೂಚನೆಯನ್ನು ಮೆ. ಕುಶಾಲಪ್ಪನವರು ಚರ್ಚೆಗೆ ಇಡದೆ ವಾಪಸು ತೆಗೆದುಕೊಂಡರು.

20. "ಅಂತ್ಯಜರ ಹಿತವನ್ನು ಸಾಧಿಸಲಿಕ್ಕಾಗಿ ಕಮಿಷನರ ಕೈಕೆಳಗೆ ಒಂದು ಲೇಬರ್ ಇಲಾಖೆಯನ್ನು ಮಾಡಬೇಕು ಮತ್ತು ಅಂತ್ಯಜರಿಗೆ ಕೃಷಿ ವ್ಯವಸಾಯಮಾಡಲು ಕೊಡಲಿಕ್ಕಾಗಿ ಭೂಮಿಯನ್ನು ಪ್ರತ್ಯೇಕ ಇಡಬೇಕು" ಎಂಬ ಠರಾವನ್ನು ಮೆ. ಪೂಂಜರವರು ಸೂಚಿಸಿ ಹೀಗೆಂದರು—ಇಂಥಾ ಇಲಾಖೆಗಳು ಬೇರೆಪ್ರಾಂತ್ಯಗಳಲ್ಲಿವೆ. ಮದ್ರಾಸಿನಲ್ಲಿ ಕಳೆದ 5 ವರ್ಷಗಳಿಂದ ಪ್ರಯತ್ನಿಸಿ ಜಯಪ್ರದವಾಗಿದೆ. (ಮದ್ರಾಸು ಇಲಾಖೆಯ ಕೆಲಸವನ್ನು ವಿವರವಾಗಿ ಓದಿ ಹೇಳಿದರು.) ಸರಕಾರದವರು ಅಂತ್ಯಜರ ಸಹಾಯಕ್ಕೆ ಬರಲೇ ಬೇಕು. ಕಮಿಷನರು, ಅಸಿಸ್ಟಾಂಟ್ ಕಮಿಷನರು, ಸುಭೇದಾರರು ಮೊದಲಾದ ಉದ್ಯೋಗಸ್ಥರು ಈ ಇಲಾಖೆಯ ಕೆಲಸವನ್ನು ಕತ್ತಾ... [illegible]

ಠರಾವಿಗೆ ಯಾರೂ ವಿರೋಧಿಸದ್ದರಿಂದ ಬಹುಮತ್ತದ ಪಾಸಾಯಿತು.

ಎರಡನೇ ದಿನ.

21. "ಗಂಧದ ಉತ್ಪತ್ತಿಯನ್ನು ಫಾರೆಸ್ಟು ಇಲಾಖೆಯಿಂದ ಬೇರ್ಪಡಿಸಿ. ರೆವಿನ್ಯೂ ಇಲಾಖೆಯ ಉತ್ಪತ್ತಿಗೆ ಸೇರಿಸಿ, ಅದು ದೇಶದ ಅಭಿವೃದ್ಧಿಯ ಕೆಲಸಗಳಿಗೆ ಉಪಯೋಗಿಸಬೇಕು" ಎಂದು ಮೆ. ಎ. ಬಿ. ಜಂಗಪ್ಪನವರು ಸೂಚಿಸುವಾಗ ಹೇಳಿದ್ದೇನೆಂದರೆ—ಈಗ ಹೆಚ್ಚಾಗಿ ದೊರೆಯುವ ಪೈಸಾರಿ ಮತ್ತು ಖಾಸಗಿ ಜಾಗಗಳಲ್ಲಿರುವ ಗಂಧದ ಉತ್ಪತ್ತಿಯ ಮೇಲೆ ಫಾರೆಸ್ಟ್ ಇಲಾಖೆಯವರಿಗೆ ಹಕ್ಕಿಲ್ಲ. ಅದನ್ನು ರೆವಿನ್ಯೂ ಇಲಾಖೆಯವರೇ ಕೇಳಬಹುದು. ಖಾಸಗಿ ಜಾಗಗಳಲ್ಲಿ ಸಣ್ಣ ಗಿಡಗಳನ್ನೂ ಸಹ ಕೇಳುತ್ತಿದ್ದಾರೆ. ಫಾರೆಸ್ಟು ಇಲಾಖೆಯ ಸಿಬ್ಬಂದಿಯು ಬಹು ಹೆಚ್ಚಾಗಿದೆ.

ಮೆ. ಉತ್ತಯ್ಯನವರು ಅನುಮೋದಿಸಿ ಹೀಗೆಂದರು—ಪೂರ್ವದ ಗಣಿಯಂತಿದ್ದ ಫಾರೆಸ್ಟು ಇಲಾಖೆ ಈಗ ದೊಡ್ಡ ತೂತಾಗಿ ತುಂಬಾ ಹಣ ವ್ಯಯವಾಗುತ್ತಿದೆ. ಇದು ಗಂಧದ ಉತ್ಪತ್ತಿಯನ್ನು ಉಪಯೋಗಿಸಬಾರದು. ಮೊದಲಿದ್ದ ಕಂಟ್ರಾಕ್ಟು ಪದ್ಧತಿಯನ್ನು ಜಾರಿಗೆ ತರಬೇಕು.

ಫಾರೆಸ್ಟ್ ಮೆಂಬರು—ಇದು ಬಜೆಟ್ಟಿನ ತತ್ವಕ್ಕೆ ವಿರುದ್ಧ. ಫಾರೆಸ್ಟು ಇಲಾಖೆಯಲ್ಲಿ ಖರ್ಚುಕಳೆದು ಉಳುವ... [illegible]




ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲು ೧ಕ್ಕೆ 0—14—0. ಟಿ. ಖ. 0—9—0.

ಕೆ. ಟಿ. ಡೋಂಗರೆ ಕಂಪನಿ,

52—11 ಗಿರಗಾಂವ, ಮುಂಬಯಿ.


OFFICE OF THE PRESIDENT, DISTRICT BOARD, Hassan, Dated 30th October 1928.

NOTICE.

The Second Annual Cattle show will be held from Wednesday the 28th November 1928 to Sunday the 2nd December 1928 (both days inclusive), at the junction of the Sukrvarsanthe-Hethur-Subrahmanya and the Mallipatna-Uchangi, Vanagur roads, beyond Hethur, towards Bisle in the Manjirbad Taluk before proceeding to the Subramanya Fair. No fees will be levied on the cattle assembling at the Fair, and prizes will be awarded to cattle selected for the award by the Judges. Water and fodder are also available at the place. Medical, Veterinary staff will be on duty. The distance from this junction to Subrahmanya is only 24 miles.

For further particulars apply to the President, District Board, Hassan.

N. S. NANJUNDIAH,

3—2 *President, Distsict Board, Hassan.*

ನೋಟೀಸು.

ಹಾಸನ ಡಿಸ್ಟ್ರಿಕ್ಟ್ ಮಂಜರಾಬಾದು ತಾಲೋಕಿನ್ಲಿ ಸುಬ್ರಹ್ಮಣ್ಯದಿಂದ 24 ಮೈಲಿ ದೂರದಲ್ಲಿರುವ ಶುಕ್ರವಾರಸಂತೆ, ಸುಬ್ರಹ್ಮಣ್ಯ ಮತ್ತು ವಣಗೂರು ಮಲ್ಲಿಪಟ್ಣ ರಸ್ತೆಗಳ ಜಂಕ್ಷನ್ ಅಂದರೆ ಉಚ್ಚಂಗಿಕೂಡು ರಸ್ತೆ ಬಳಿ ಸುಬ್ರಹ್ಮಣ್ಯದ ಜಾತ್ರೆಗೆ ಮುಂಚಿತವಾಗಿ 1928ನೇ ಇಸ್ವಿ ನವಂಬರ್ 28ನೇ ಬುಧವಾರದ ಲಾಗಾಯ್ತು ಡಿಸೆಂಬರ್ 2ನೇ ಭಾನುವಾರದ ವರಿವಿಗೆ ದನಗಳಪ್ರದರ್ಶನವನ್ನು ನಡೆಸುತ್ತಾರಾಗಿಯೂ ಆ ಕಾಲದಲ್ಲಿ ಸೇರುವ ದನಗಳ ಮೇಲೆ ಸುಂಕ ವಸೂಲು ಮಾಡುವದಿಲ್ಲವಾಗ್ಯೂ ಈ ಸ್ಥಳದಲ್ಲಿ ಮೇವಿನ ಸೌಕರ್ಯ ಮತ್ತು ನೀರಿನ ಸಂಗತಿ ಚೆನ್ನಾಗಿರುತ್ತಾಗಿಯೂ, ಜನ ಮತ್ತು ಜಾನ್ವಾರುಗಳಿಗೆ ವೈದ್ಯ ಸಹಾಯವೂ ಏರ್ಪಡಿಸುತ್ತೆಯಾಗಿಯೂ ಜನಗಳಿಗೆ ಈ ಮೂಲಕ ತಿಳುವಳಿಕೆ ಕೊಟ್ಟಿದೆ. ಆಯಕ್ತಾದ ರಾಸುಗಳಿಗೆ ಬಹುಮಾನವೂ ಕೊಡಲ್ಪಡುತ್ತದೆ. ಈ ಬಗ್ಗೆ ವಿಚಾರ ತಿಳಿಯಬೇಕಾದಲ್ಲಿ ಹಾಸನದ ಡಿಸ್ಟ್ರಿಕ್ಟುಬೋರ್ಡ್ ಪ್ರೆಸಿಡೆಂಟರವರಿಗೆ ಬರೆದು ತಿಳಿದುಕೊಳ್ಳಬಹುದು.

ಎನ್. ಎಸ್. ನಂಜುಂಡಯ್ಯ

3—2 ಪ್ರೆಸಿಡೆಂಟ್ ಡಿಸ್ಟ್ರಿಕ್ಟುಬೋರ್ಡ್

ತಾ. 30—10—28. ಹಾಸನ

ನೋಟೀಸು.

ಜಮೀನ್ದಾರರ ಸಂಘದ ಕಳೆದ ವಾರ್ಷಿಕ ಮಹಾ ಸಭೆಯಲ್ಲಿ ಮಂಜೂರಾಗಿರುವ ಕೊಡಗಿನ ರಾಜಕೀಯ ರಚನೆಯನ್ನು ಜನರ ತಿಳುವಳಿಕೆ ಬಗ್ಗೆ ವಿವರಿಸಲು ಈ ನವಂಬರು ತಾ. 17ನೇ ಶನಿವಾರ ಮಧ್ಯಾಹ್ನ 1 ಗಂಟೆಗೆ ಶನಿವಾರಸಂತೆಯಲ್ಲಿಯೂ, ತಾ 18ನೇ ಆದಿತ್ಯವಾರ ಬೆಳಗ್ಗೆ 10½ ಗಂಟೆಗೆ ಶ್ರೀಮಂಗಲ... ಪೇಟೆಯಲ್ಲಿಯೂ ಮತ್ತು ತಾ. 19ನೇ ಸೋಮವಾರ ಮಧ್ಯಾಹ್ನ 1 ಗಂಟೆಗೆ ಸೋಮವಾರಪೇಟೆಯಲ್ಲಿಯೂ ಪಬ್ಲಿಕ್ ಮೀಟಿಂಗುಗಳು ನಡೆಯುವವು. ಸರ್ವರೂ ದಯಮಾಡಿಸಬೇಕಾಗಿ ಕೋರಲಾಗಿದೆ.

| | |
|---|---|
| ಯನ್. ಆರ್. ಸುಬ್ಬಯ್ಯ. | ಪಿ. ಟಿ. ಕುಶಾಲಪ್ಪ. |
| ಸಿ. ಯಸ್. ಉತ್ತಯ್ಯ. | ಪಾಂಡ್ಯೇರಿ ಸಣ್ಣಪ್ಪ. |
| ಸಿ. ಯನ್. ವೆಂಕಪ್ಪಯ್ಯ. | ಜನ್ಮಡ ಮಾದಪ್ಪ. |
| ಬದ್ದಂಡ ಯಂ. ಸುಬ್ಬಯ್ಯ. | ಪಿ. ಐ. ಬೆಳ್ಯಪ್ಪ. |

ಯಂ. ಅಬ್ದುಲ್ ಗಫೂರ್ ಖಾನ್.


ಹೊಸ ಅಂಗಡಿ! ಸುಲಭ ಕ್ರಯ!

ಬೇಟೆಗಾರರೇ ಇತ್ತ ನೋಡಿರಿ!

ಒಳ್ಳೇ ನಮೂನೆಯ ಬ್ರೀಚ್ ಲೋಡಿಂಗ್ (ತೋಟ) ಮತ್ತು ಮಸ್ಲ್ ಲೋಡಿಂಗ್ (ಕೇಪು) ಜೋಡು ಮತ್ತು ಒಂಟಿ ಕೊಳವಿನ ಕೋವಿಗಳೂ, ಅವುಗಳಿಗೆ ಬೇಕಾದ ಉತ್ತಮ ತರಹದ ತೋಟಗಳು, ಕೇಪು, ಚಲ್ಲು ಮತ್ತು ಮದ್ದು ಯಾವಾಗಲೂ ದೊರೆಯುವ ಈ ಹೊಸ ಅಂಗಡಿಯನ್ನು ವೀರಾಜಪೇಟೆಗೆ ಬಂದಾಗ ಒಮ್ಮೆ ನೋಡದೆ ಹೋಗಬೇಡಿರಿ. ಹೆಚ್ಚಿನ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಬಿ. ಐ. ಉತ್ತಯ್ಯ,

ಕೋವಿ, ಮದ್ದು, ಚಿಲ್ಲು ವಗೈರೆ

ವ್ಯಾಪಾರಿ,

6—5 ವೀರಾಜಪೇಟೆ.


...ಲಾಯಿತು.

ಮೆ. ಹ್ಯಾರಿಸ್‌ರವರ ವಿಧಾನವು ಒಳ್ಳೇಯವಾದರೂ ಅದನ್ನು ಬರಿಗ ತಂದ ಉದ್ಯೋಗಸ್ಥರು ಕ್ರಮವಾಗಿ ನಡಿಸದೆ ಜನರನ್ನು ಹೊಡೆಯತೊಡಗಿದರು. ರೆವಿನ್ಯೂ ರೂಲ್ಸುಗಳನ್ನು ಇದಕ್ಕೆ ಉತ್ತೇಜನಕರವಾಗಿ ಎಷ್ಟರ ಮಟ್ಟಿಗ ಉಪಯೋಗಿಸುತ್ತಿದ್ದಾರೆಂದು ಆಜಮಾಯಿಸಬೇಕು; ಎಂದು ಮೆ. ಕುಶಾಲಪ್ಪನವರು ಜವಾಬು ಕೊಟ್ಟರು.

ಲಂಟಾನ ಕೀಳುವವರಿಗೆ ರಿಯಾಯಿತಿಗಳು ಚೆನ್ನಾಗಿ ಕೊಡಲ್ಪಡುತ್ತಿವೆಯೆಂದೂ, ಇನ್ನು ಯಾವ ತರಹದಲ್ಲಿ ರಿಯಾಯಿತಿ ಕೊಡಬಹುದೆಂಬದನ್ನು ಮೆಂಬರುಗಳು ಸೂಚಿಸಬಹುದೆಂದೂ, ಅದಕ್ಕೆ ಕಮಿಟಿ ಅಗತ್ಯವಿಲ್ಲವೆಂದೂ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಪ್ರತ್ಯುತ್ತರ ಕೊಟ್ಟರು.

ಓಟಿಗೆ ಹಾಕಲಾಗಿ ಸಯ್ಯದ್ ಅಹ್ಮದ್‌ರವರು, ಕುಶಾಲಪ್ಪನವರು, ಚಿಣ್ಣಪ್ಪನವರು, ವೆಂಕಪ್ಪಯ್ಯನವರು, ಬೆಳ್ಯಪ್ಪನವ...


SILKS! SILKS!! Silks!!!

Sarees with gold borders, body plain or spotted in various designs and colours.

| | | | | |
|---|---|---|---|---|
| 5 yds by 45 inches plain body | Rs. 30/— | to | Rs. 80/— | |
| do spotted body | ,, 40/— | to | ,, 90/— | |
| 6 yds. by 45 inches plain body | ,, 50/— | to | ,, 100/— | |
| do. spotted body | ,, 60/— | to | ,, 120/— | |
| Headkerchief 44 by 44 inches price | ,, 12 — | to | ,, 35/— | |
| Gold Lace borders. Ribbons. price from | ,, 1/8/— | to | ,, 5/— | per yd. |

*For further particulars, please write to:-*

BHARADWAJ & CO.,

BROCADE, EMBROIDARY & SILK MANUFACTURERS,

52—13 Benares City.

ತಾ. 10-11-'28. ಕೊಡಗು ಶಾಸನ ಸಭೆಯಲ್ಲಿ

# ಕರ್ನಾಟಕ ಏಕೀಕರಣವು ಒಪ್ಪಲಾಯಿತು.

## ಸ್ತ್ರೀಯರಿಗೆ ಓಟು ಕೊಡುವ ಮತ್ತು ಕೌನ್ಸಿಲಿಗೆ ಮೆಂಬರಾಗಿ ಬರುವ ಹಕ್ಕು ಇರಬೇಕೆಂದು ನಿಶ್ಚೈಸಲಾಯಿತು.

ಭಾಷಾನುಸಾರ ಆಗಲಿಕ್ಕಿರುವ ಸ್ವಾತಂತ್ರ್ಯ ಕರ್ನಾಟಕ ಪ್ರಾಂತ್ಯದೊಳಗೆ ಕೊಡಗು ದೇಶವು ಸೇರಿಕೊಳ್ಳತಕ್ಕದ್ದು' ಎಂದು ಮಿ. ಪಿ ಐ. ಬೆಳ್ಯಪ್ಪನವರು ಸೂಚಿಸಿದ ಠರಾವು ಬಹುಮತದಿಂದ ಪಾಸಾಯಿತು

ಕೊಡಗಿನ ಚುನಾವಣೆ ರೂಲ್ಸ್‌ನಲ್ಲಿ ಹೆಂಗಸರು ಓಟು ಕೊಡಲು ಇರುವ ಅಡಚಣೆಯನ್ನು ತೆಗೆದು ಹಾಕಿ ಗಂಡಸರಂತೆ ಅವರಿಗೂ ಓಟಿನ ಹಕ್ಕು ಕೊಡಬೇಕೆಂಬ ಮತ್ತು ಲೆಜಿಸ್ಲೇಟಿವ್ ಕೌನ್ಸಿಲಿಗೆ ಮೆಂಬರುಗಳಾಗಿ ಗಂಡಸರಂತೆಯೇ ಹೆಂಗಸರೂ ಚುನಾಯಿಸಲ್ಪಡುವ ಮತ್ತು ನೇಮಿಸಲ್ಪಡುವ ಹಕ್ಕು ಅವರಿಗೆ ಇರಬೇಕೆಂಬ ಮಿ ಪೂಜಾರವರ ಠರಾವುಗಳು ವಿರೋಧವಿಲ್ಲದೆ ಮಂಜೂರಾದವು

# ವರ್ತಮಾನ ಸಂಗ್ರಹ.

## ಒಳದೇಶ.

ಕಳೆದ ವಾರ ಪಾಪಾರಾಂ ಬಸ್ಸು ಗೋಣಿಕೊಪ್ಪಲು ...ಟಿಯಲ್ಲಿ ಒಬ್ಬ ಮುದುಕಿಗೆ ತಗಲಿ ಅವಳು ತಕ್ಷಣವೇ ...ತಳಾದಳೆಂದು ವರ್ತಮಾನ.

ದೇಶಭಕ್ತರಾದ ಪರದಂಡ ಮನೆಯ ಪಟ್ಟೆದಾರರಾಗಿದ್ದ ಬೆಳ್ಯಪ್ಪನವರು ಈ ತಾ 11 ರಲ್ಲಿ ಸ್ವರ್ಗಸ್ಥರಾದರೆಂದು ...ಯಲು ವ್ಯಸನಪಡುತ್ತೇವೆ

"ಕೊಡಗು" ಕಂಪನಿಯ ಶೇರುದಾರರ ವಾರ್ಷಿಕ ಜನ ...ಮೀಟಿಂಗು ಈ ತಾ. 10ರಲ್ಲಿ ವೀರರಾಜಪೇಟೆಯಲ್ಲಿ ನಡೆ...ತು. ಇದರ ವಿವರವು ಬರುವ ವಾರ ಪ್ರಕಟಿಸಲಾಗು...

ಅಮವಾಸೆಯೂ, ಸೂರ್ಯಗ್ರಹಣವೂ ಆದ ಕಳೆದ ...ಮವಾರ ದೇಶದ ಕೆಲವು ಕಡೆಗಳಿಗೆ ಸ್ವಲ್ಪ ಮಳೆ ಬಿತ್ತು ...ದ ಬೆಳೆಗೆ ಮಳೆಯು ಸಾಲದಿರುವ ಈ ಸಮಯದಲ್ಲಿ ಇ... ಸ್ವಲ್ಪ ಸಹಾಯವಾಯಿತು

ಮ ಕೊಳುವಂಡ ದ ಮೈಯ್ಯನವರು ತಮ್ಮ 63ನೇ ವ...ಸಲ್ಲಿ ಗುಂಟ್ಲು ನೋವಿನಿಂದ ಈ ತಾ 12ನೇ ಸೋಮ... ಸಾಯಂಕಾಲ ಅವ ಮಡಿಕೇರಿ ಭವನದಲ್ಲಿ ಶಿವಾಧೀ...ದಕ್ಕೆ ವಿಷಾದಿಸುತ್ತೇವೆ.

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಆಫೀಸಿನಲ್ಲಿದ್ದ ಮಿ. ಮ...ಡ ಡಬ್ಲ್ಯು. ಕಾಳಪ್ಪ ಬಿ ಎ. ಯವರು ಡೇರಾಡೂನಿ ಸರ್ವೆ ಆಫ್ ಇಂಡಿಯಾ ತರಬೇತಿಗೆ ಆರಿಸಲ್ಪಟ್ಟವರಲ್ಲಿ ...ರುವರೆಂದು ತಿಳಿದು ಸಂತೋಷಪಡುತ್ತೇವೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲ್ ಮೀಟಿಂಗು ಈ ತಾ ...ಗ್ಗೆ ಪ್ರಾರಂಭವಾಗಿ ತಾ 10ರ ಮಧ್ಯಾಹ್ನ ಮುಗಿಯಿ...ಶದರ್ಶಕ್ಕಾಗಿ ಬಂದಿದ್ದ ಚೀಫ್ ಕಮಿಷನರವರು ಪತ್ನಿಸ ತಾ. 14ರಲ್ಲಿ ವಾಪಸು ಬೆಂಗಳೂರಿಗೆ ಹೋದರು

...ನ್ನಂಪೇಟೆ ಹಾಕಿ ಟೂರ್ನವೆಂಟಿನ ಅಖೈರು ಆಟದ ...ರಾಜಪೇಟೆ ಪಬ್ಲಿಕ್ ಟೀಮಿನವರು ವೀರರಾಜಪೇಟೆ ಸ್ಪೈ... ಟೀಮಿನವರನ್ನು ಸೋಲಿಸಿ ಒಟ್ಲನ್ನು ಪಡೆದರು. ಡಿ... ಫಾರೆಸ್ಟ್ ಆಫೀಸರಾದ ಮಿ. ಸಿ ಯಂ ಕುಶಾಲಪ್ಪ ...ಗೆದ್ದವರಿಗೆ ಒಟ್ಲನ್ನು ಕೊಟ್ಟರು

...ಡಗು ಎತ್ಲೆಟಿಕ್ ಎಸೋಸಿಯೇಶನಿನ ಹಾಕಿ ಟೂರ್ನ...ಲ್ಲಿ ತಾ. 10ರಲ್ಲಿ ಸೆಂಟ್ರಲ್ ಹೈಸ್ಕೂಲಿನ ಎ ಟೀಮು ...ಟೀಮನ್ನು ಸೋಲಿಸಿತು. ತಾ 14 ರಲ್ಲಿ ನಡೆದ ...ಆಟದಲ್ಲಿ ಫಾರೆಸ್ಟು ಟೀಮಿನವರು ಸೆಂಟ್ರಲ್ ಹೈ...ಎ ಟೀಮಿನವರನ್ನು ಸೋಲಿಸಿ ಒಟ್ಲನ್ನು ಗೆದ್ದರು ...ಲ್ಸರ್‌ಸನ್‌ರವರು ಜಯಶೀಲರಾದವರಿಗೆ ಒಟ್ಲನ್ನು

...ರಿಶ್ಚಿಯನ್ ಸಂಘದವರು ತಾ 13ರ ರಾತ್ರಿ, ಅಮ್ಮತ್ತಿ...ನಲ್ಲಿ ಮಾಯಾ ಲಾಂದ್ರದ ಮೂಲಕ ಸೊಳ್ಳೆ...ಉಂಟಾಗುವ ಮಲೇರಿಯ ಜ್ವರ, ಕುಡುಕತನದಿಂದ ...ವ ಕಷ್ಟನಷ್ಟಗಳು ಮತ್ತು ಶಿಶುಪಾಲನೆಗಳನ್ನು ಬ...ನವಾಗಿ ತೋರಿಸಿ ಜನರ ಮನಸ್ಸಿಗೆ ಚೆನ್ನಾಗಿ ನಾ... ಮಾಡಿದರೆಂದೂ, ಸುಮಾರು 400 ಜನರು ಸೇರಿದಿದ್ದ ...ಹಲವು ಪಟ್ಟೆದಾರರೂ ಹಾಜರಿದ್ದರೆಂದೂ ತಿಳಿಯು...

...ಯಾ ಸ್ಟೇಟ್ ಕುಲಶಾಂತುರ್ ಎಂಬಲ್ಲಿರುವ ಮಿ ...ದ ಕಾರ್ಯಪ್ಪನವರು ಬಹಳ ಚೆನ್ನಾಗಿ ಹಾಕಿ ಆ...ವನೆಂದೆನ್ನಿಸಿಕೊಂಡಿದ್ದಾರೆ. ಇವರು ಯೂರೋಪಿ... ಇಂಡಿಯನರಿಗೂ ಆದ ಪಂದ್ಯದಾಟದಲ್ಲಿ ಇಂಡಿ...ಯನ ಕ್ಯಾಪ್ಟನ್ನಾಗಿದ್ದರು. ಯೂರೋಪಿಯನರ ...ಯನ್ ಟೀಮನ್ನು ಈವರೆಗೆ ಎಂದೂ ಸೋಲಿಸಿ...ದಿರಲು ಈ ವರ್ಷ ...ವರನ್ನು 3 ಗೋಲುಗಳಿಂದ ...ನ್ ಟೀಮಿನವರು ಸೋಲಿಸಿರುವರೆಂದೂ ಕಾರ್ಯ... ಬಹಳ ಚೆನ್ನಾಗಿ ಆ...ರೆಂದೂ ಅಲ್ಲಿಯ ಸ್ಥಳೀಕ ...ಲ್ಲಿ ಪ್ರಕಟವಾಗಿದೆ

...ವೃಶ್ಚಿಕ ಮಾಸ ...ನೆ ನವೆಂಬರು ತಾ ...ರಿಯವಾರ ಕೃತ್ತಿಕಾ ನಕ್ಷತ್ರದಲ್ಲು ಪಾಡಿಸುಬ್ರಾಯ ದೇವರ ಕಲಾವೃತ್ತಿ ಹಬ್ಬವೂ, ತಾ. 27ನೇ ಮಂಗಳವಾರ ರೋಹಿಣಿ ನಕ್ಷತ್ರದಲ್ಲಿ ದೇವ ಪೊಳುದು—ರಾತ್ರಿ 8 ಗಂಟೆಗೆ ನೆರೆ ಕಟ್ಟುವದು, 9 ಗಂಟೆಗೆ ಕದರು ಕುಯ್ಯುವದು. 10 ಗಂಟೆಗೆ ಊಟಮಾಡುವ ಶುಭ ಮುಹೂರ್ತವೂ, ಮಾರನೆ ದಿನ ತಾ. 28ನೇ ಬುಧವಾರ ಮೃಗಶಿರ ನಕ್ಷತ್ರದಲ್ಲು ನಾಡು ಪೊಳುದು—ರಾತ್ರಿ, 9 ಗಂಟೆಗೆ ನರೆ ಕಟ್ಟುವದು, 10 ಗಂಟೆಗೆ ಕದರು ಕೊಯ್ಯುವದು, 11 ಗಂಟೆಗೆ ಊಟ ಮಾಡುವ ಶುಭ ಮುಹೂರ್ತವೂ ಎಂದು ನಿಶ್ಚೈಸಲಾಗಿದೆಯೆಂತ ತಿಳಿಯಬರುತ್ತದೆ.

ಮಡಿಕೇರಿ ಕಾನ್ವೆಂಟ್ ಹೈಸ್ಕೂಲಿನ ಇನಾಮು ಹಂಚುವ ವಾರ್ಷಿಕ ಉತ್ಸವವು ಈ ತಾ 13ರ ಸಾಯಂಕಾಲ ಮಿಸ್ಟರ್ ಮತ್ತು ಮಿಸೆಸ್ ಪೀಯರ್ಸ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು ಮಹಿಳೆಯರೂ, ಮಹನೀಯರೂ ತುಂಬಾ ನೆರೆದಿದ್ದರು. 'ದಯೆಯು ಬಹುಮಾನಿಸಲ್ಪಟ್ಟದ್ದು' ಎಂಬ ಚಿಕ್ಕದೊಂದು ಇಂಗ್ಲಿಷ್ ನಾಟಕವು ಅಲ್ಲಿಯ ವಿದ್ಯಾರ್ಥಿನಿಯರಿಂದ ಅಭಿನಯಿಸಲ್ಪಟ್ಟು, ಸಂಗೀತ ಮೊದಲಾದವು ಮುಗಿದ ನಂತರ ಹೆಡ್ ಮಿಸ್ಟ್ರೆಸ್‌ರವರು ಶಾಲೆಯ ವರದಿಯನ್ನು ಓದಿದರು. ನಂತರ ಮಿಸೆಸ್ ಪೀಯರ್ಸ್‌ರವರು ವಿದ್ಯಾರ್ಥಿಗಳಿಗೆ ಇನಾಮುಗಳನ್ನು ಹಂಚಿದರು.

ಮೈಸೂರಿನ ಯಂ. ಯಸ್ ಶಿವಪ್ಪ ಅಂಡ್ ಬ್ರದರ್ಸ್‌ರವರ ಷೀಟ್ ಕ್ಯಾಲೆಂಡರ್, ಪಾಕೆಟ್ ಕ್ಯಾಲೆಂಡರ್ ಮತ್ತು ಶ್ರೀಮಹಾವಿಷ್ಣುವಿನ ಸುದರ್ಶನ ಪ್ರದಾನಮಾಡುವ ಪರಮೇಶ್ವರನ ಬಣ್ಣದ ಪಿಕ್ಚರ್ ಕ್ಯಾಲೆಂಡರ್‌ಗಳ ಪ್ರತಿಗಳು ನಮಗೆ ತಲುಪಿವೆ. ಪೋಸ್ಟೇಜಿನ ಖರ್ಚಿಗೆ 5 ಆಣೆ ರವಾನಿಸಿದವರಿಗೆ ಈ ಮೂರು ನಮೂನೆಯ ಕ್ಯಾಲೆಂಡರುಗಳನ್ನು ಮಾದರಿಗಾಗಿ ರವಾನಿಸುತ್ತಾರಾಗಿ ಅವರು ತಿಳಿಸಿರುತ್ತಾರೆ

## ಹಿಂದೂದೇಶ.

ಅಂತ್ಯ ಜರ ಸ್ಥಿತಿಯನ್ನು ಅಭಿವೃದ್ಧಿಪಡಿಸಲು ಮುಂಬಾಯಿ ಸರ್ಕಾರದವರು ಒಂದು ಕಮಿಟಿಯನ್ನು ನೇಮಿಸಿರುವರು.

ಸೈಮನ್ ಕಮಿಷನು ಕರಾಚಿ ಮೀಟಿಂಗನ್ನು ಮುಗಿಸಿಕೊಂಡು ತಾ 13ರ ರಾತ್ರಿ ಕ್ವೆಟ್ಟಾಕ್ಕೆ ಹೊರಟು ಹೋದರು.

ಮದ್ರಾಸು ಮುನ್ಸಿಪಾಲಿಟಿಯ ಅಧ್ಯಕ್ಷರ ಪದವಿಗೆ ಸ್ವರಾಜ್ಯ ಪಕ್ಷದವರು ಸಾಮಿ ವೆಂಕಟಾಚಲಂ ಚೆಟ್ಟಿಯವರನ್ನು ಉಮೇದುವಾರರಾಗಿ ನಿಲ್ಲಿಸಿರುವರೆಂದು ಸುದ್ದಿ.

ಬರುವ ಡಿಸಂಬರಿನಲ್ಲಿ ಕಲ್ಕತ್ತಾದಲ್ಲಿ ನಡೆಯಲಿಕ್ಕಿರುವ ಮುಸ್ಲಿಮ್ ಲೀಗಿನ ಮಹಾಸಭೆಗೆ ಮಹಮ್ಮದಾಬಾದಿನ ಮಹಾರಾಜರವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಮಿ ವಿ. ಯಸ್ ಶ್ರೀನಿವಾಸ ಶಾಸ್ತ್ರಿಯವರು ಹಿಂತಿರುಗಿದ ಮೇಲೆ ದಕ್ಷಿಣ ಆಫ್ರಿಕದಲ್ಲಿ ಇಂಡಿಯನ್ ಏಜಂಟರಾಗಿ ಸರ್ ಕೆ. ವಿ ರೆಡ್ಡಿಯವರನ್ನು ನೇಮಿಸಲಾಗುವದೆಂದು ವದಂತಿ ಇದೆ

ಡಿಸೆಂಬರು 1 ಮತ್ತು 2 ರಲ್ಲಿ ಪೂನಾದಲ್ಲಿ ನಡೆಯಲಿಕ್ಕಿರುವ ಬೊಂಬಾಯಿ ಪ್ರಾಂತ್ಯದ ಯುವಕರ 2 ನೇ ಕಾನ್‌ಫರೆನ್ಸಿನ ಅಧ್ಯಕ್ಷರಾಗಿರಲು ಪಂಡಿತ ಜವಹರ್ ಲಾಲ್ ನೆಹರು ಒಪ್ಪಿರುವರು

ನೇಶನಲ್ ಲಿಬರಲ್ ಫೆಡರೇಶನಿನ 11ನೇ ಮಹಾಸಭೆಯು ಡಿಸೆಂಬರು 26—27 ಮತ್ತು 28ರಲ್ಲಿ ಅಲ್ಲಾಹಾಬಾದಿನಲ್ಲಿ ನಡೆಯುವದು. ಇದರ ಅಧ್ಯಕ್ಷ ಪದವಿಗೆ ಸರ್ ಚಿಮನ್ಲಾಲ್ ಸೆಟಲ್ವಾದ್‌ರವರ ಹೆಸರನ್ನು ಹನ್ನೆರಡು ಪ್ರಾಂತೀಕ ಲಿಬರಲ್ ಸಂಘಗಳು ಸೂಚಿಸಿವೆ.

ಅಫ್ಘಾನಿಸ್ಥಾನದ ಪ್ರಜೆಗಳೆಲ್ಲರೂ "ಹ್ಯಾಟ್" ನ್ನು ಧರಿಸಬೇಕೆಂದು ಅಲ್ಲಿಯ ಅರಸರು ಹುಕುಂ ಮಾಡಿರುವರು. ಸಿಕ್ಖ ಜನರ ಮತಕ್ಕೆ ಇದು ವಿರೋಧವಾದುದರಿಂದ ಅವರನ್ನು ಬಲಾತ್ಕರಿಸಬಾರದೆಂದು. ಹಿಂದೂ ದೇಶದ ಸಿಕ್ಖ ಜನರ ಸಂಘವು ಅಮೀರರಿಗೆ ವಿನಂತಿ ಮಾಡಿಕೊಂಡಿರುವದು

ತಾ. 12 ರಲ್ಲಿ ಸೂರ್ಯ ಗ್ರಹಣವಾದುದರಿಂದ ಕುರುಕ್ಷೇತ್ರದಲ್ಲಿ ಸುಮಾರು ಏಳು ಲಕ್ಷ ಜನರು ಗಂಗಾ ಸ್ನಾನ ಮಾಡಿದರು. ನೂಕುನುಗ್ಗಲು ಬಹಳ ಜೋರಾಗಿದ್ದುದರಿಂದ ಹಲವರಿಗೆ ಅಪಾಯ ಉಂಟಾಯಿತು ಇಬ್ಬರು ಮೃತರಾದರು ಈ ಜಾತ್ರೆಯಲ್ಲಿ ತಕ್ಕ ಏರ್ಪಾಡುಗಳನ್ನು ಮಾಡಲು ಪಂಜಾಬು ಸರ್ಕಾರದವರು ಐದು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರು.

ಸೈಮನ್ ಕಮಿಷನಿನವರು ಪಂಜಾಬು ಮೀಟಿಂಗನ್ನು ಮುಗಿಸಿಕೊಂಡು ಸಿಂಧು ಪ್ರಾಂತ್ಯದವರ ಅಭಿಪ್ರಾಯ ತೆಗೆದುಕೊಳ್ಳಲಿಕ್ಕಾಗಿ ಈ ತಾ. 11ರಲ್ಲಿ ಕರಾಚಿಗೆ ಬಂದರು ಅವರು ಬಂದಾಗ್ಯೆ ರೈಲ್ವೆ ಸ್ಟೇಶನಿನಲ್ಲಿ ಸಾವಿರಗಟ್ಟಲೆ ಜನರು ಸೇರಿದು 'ಹಿಂದಕ್ಕೆ ಹೋಗಿರಿ' 'ಸಾಯಿಮನ್ ಗೋ ಬ್ಯಾಕ್' ಎಂದು ಕೂಗುತ್ತಾ ಕಪ್ಪುಬಾವುಟೆಗಳ ಸಮೇತ ಬೀದಿಗಳಲ್ಲಿ ಮೆರವಣಿಗೆ ಹೋಗಿ, ನಂತರ ಪಬ್ಲಿಕ್ ಮೀಟಿಂಗು ಮಾಡಿ ಕಮಿಷನಿನ ನೇಮಿಸುವಿಕೆಯನ್ನು ಖಂಡಿಸಿ ಠರಾವುಗಳನ್ನು ಪಾಸುಮಾಡಿದರು.

## ವಿದೇಶ.

ಮಿ ಹೂವರ್‌ರವರು ಅಮೇರಿಕದ ಯುನೈಟೆಡ್ ಸ್ಟೇಟಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು

"ವೆಸ್ಟ್ರಿಸ್" ಎಂಬ ಹಡಗು ಮುಳುಗಿ ಹೋಗಿ ಅದರಲ್ಲಿದ್ದ 339 ಜನರ ಪೈಕಿ 100 ಜನರು ಕಾಣದೆ ಆಗಿರುವರು

ಫ್ರಾನ್ಸ್ ದೇಶದಲ್ಲಿ ಪ್ರಧಾನ ಮಂತ್ರಿ ಯಂ. ಪಾಯಿಂಕೇರ್‌ರವರು ಹೊಸ ಮಂತ್ರಿ ಮಂಡಳಿಯನ್ನು ನೇಮಿಸಿರುವರು ಅದಕ್ಕೆ ಯಂ ಬ್ರಿಯಾಂಡ್‌ರವರೂ ಸೇರಿರುವರು.

ಸಿಸಿಲಿಯಲ್ಲಿ ಎಟ್ನಾ ಜ್ವಾಲಾಮುಖಿಯು ಹೊರಟಿದ್ದು ಅದರ ಲಾವಾದಿಂದ 700 ಮನೆಗಳು ನಾಶವಾಗಿ 3000 ಜನರು ಮನೆಗಳಿಲ್ಲದೆ ಅಲೆದಾಡುತ್ತಿರುವರಂತೆ 2500 ಎಕ್ರೆ ಕಿತ್ತಳೆ ತೋಟವು ಲಾವಾದಿಂದ ಮುಚ್ಚಲ್ಪಟ್ಟಿದೆಯಂತೆ

1929 ರಲ್ಲಿ ಜಿನೇವಾದಲ್ಲಿ ನಡೆಯಲಿಕ್ಕಿರುವ ಉಪಾಧ್ಯಾಯರುಗಳ ಅಖಿಲ ಪ್ರಪಂಚ ಕಾನ್ಫರೆನ್ಸಿಗೆ ಇಂಡಿಯದ ಪ್ರತಿನಿಧಿಗಳಾಗಿ ಪಾಟಿಯಾಲದ ವಿದ್ಯಾ ಇಲಾಖೆಯ ಮಂತ್ರಿಗಳಾದ ಸರ್ದಾರ್ ಮುಕ್ಬುಲ್ ಮಹಮ್ಮದ್‌ರವರು ಮತ್ತು ಡಾಕ್ಟರ್ ಸಿ. ವಿ. ರಾಮನ್‌ರವರು ಆರಿಸಲ್ಪಟ್ಟಿರುವರೆಂದು ವರ್ತಮಾನವಿದೆ.

ಜಪಾನಿನ ಹೊಸ ಚಕ್ರವರ್ತಿಯವರಾದ ಹಿರೋಹಿತೋ ವರು ಪಟ್ಟಕ್ಕೇರಿದ ಸಮಾರಂಭವು ಈ ತಾ 10ರಲ್ಲಿ ಕಿಯೋಟೋದಲ್ಲಿ ಬಹು ಸಂಭ್ರಮದಿಂದ ನಡೆಯಿತು ಆ ದೇಶದ ಹಲವು ಪಟ್ಟಣಗಳಲ್ಲೆಲ್ಲಾ ಆ ರಾತ್ರಿ ಲಾಂದ್ರ ಮೆರವಣಿಗೆಗಳು. ನಡೆಸಲ್ಪಟ್ಟು ಜನರು ಬಹು ಉತ್ಸಾಹದಿಂದ ರಾಷ್ಟ್ರೀಯ ಗೀತೆಗಳನ್ನು ಹಾಡಿ ಸಂತೋಷವನ್ನು ಸೂಚಿಸಿದರು.

## ಕೊಡಗು ವಿದ್ಯಾಭಿವೃದ್ಧಿ ಸಂಘ.

ಇದೇ ನವಂಬರ್ ತಿಂಗಳು 1 ನೇ ತಾರೀಖಿನಲ್ಲಿ ನಡೆದ ಕೊಡಗು ವಿದ್ಯಾಭಿವೃದ್ಧಿ ಸಂಘದ ಸೆಂಟ್ರಲ್ ಕಮಿಟಿಯ ಮೀಟಿಂಗಿನ ವಿವರ —

(1) 1926—1927 ನೇ ಮತ್ತು 1927—28 ನೇ ವರ್ಷಗಳ ಆಡಿಟರ ರಿಪೋರ್ಟನ್ನು ಓದಿ ಅಂಗೀಕರಿಸಲಾಯಿತು. ಅನಂತರ ಕಮಿಟಿಯವರು ಆಡಿಟರುಗಳ ಸಹಾಯಕ್ಕೆ ತಮ್ಮ ವಂದನೆಗಳನ್ನು ಅರ್ಪಿಸಿದರು.

(2) ಕಳೆದ ಕಾವೇರಿಸಂಕ್ರಮಣದ ದಿವಸ ಭಾಗಮಂಡಲದಲ್ಲಿ ಮಿ. ಮಗಳಾದ ಪಿ ಯಂ ದೇವೈಯ್ಯ ಮತ್ತು ಕೆ ಎ ಅಪ್ಪಯ್ಯ ಎಂಬಿಬ್ಬ ವಿದ್ಯಾರ್ಥಿಗಳು ಕೂಡಿಸಿದ್ದ ಚಂದಾ ಹಣವನ್ನು ಲೆಕ್ಕಮಾಡಲಾಗಿ, ಅದು ರೂ. 19—14—6 ಆಗಿ ಕಂಡುಬಂತು ಕಮಿಟಿಯವರು, ಈ ಇಬ್ಬರು ವಿದ್ಯಾರ್ಥಿಗಳ ಸಹಾಯಕ್ಕೂ, ಉತ್ಸಾಹಕ್ಕೂ ಮೆಚ್ಚಿ ಅವರಿಗೆ ತಮ್ಮ ವಂದನೆಗಳನ್ನು ಅರ್ಪಿಸಿದರು. ಅಲ್ಲದೆ ಯಾತ್ರಿಕರಿಗೆ, ಈ ಚಂದಾವನ್ನು ಯಾತಕ್ಕಾಗಿ ಎತ್ತುತ್ತಿದ್ದರೆಂಬುದು ತಿಳಿದಿಲ್ಲವಾದುದರಿಂದಲೇ ಚಂದಾಮೊತ್ತವು ಬಹಳ ಕಡಿಮೆಯಾಗಲು ಕಾರಣವಾಗಿದೆ ಇನ್ನು ಬರುವ 12 ನೇ ತಾರೀಖಿನಲ್ಲಿ ಭಾಗಮಂಡಲದಲ್ಲಿ ಸೇರುವ ಯಾತ್ರೀಕರಿಂದ ಚಂದಾವಸೂಲು ಮಾಡಲು ಇಬ್ಬರನ್ನು ನಿಷಮಿಸುವದಾಗಿಯೂ, ಮತ್ತು ಯಾತ್ರಿಕರು, ಈ ವಿಷಯ ಇನ್ನೂ ಸ್ವಲ್ಪ ಉದಾರಭಾವದಿಂದ ಹಣ ಸಹಾಯ ಮಾಡಬೇಕೆಂದು ಕೇಳಿಕೊಳ್ಳುವಂತೆಯೂ ಅಭಿಪ್ರಾಯ. ಪಟ್ಟರು.

(3) ವೇತನಗಳಿಗೂ ಸಾಲಕ್ಕಾಗಿಯೂ ಬಂದ ಅರ್ಜಿಗಳು ಓದಲಾಗಿ, ವೇತನಗಳೂ, ಸಾಲಗಳು ವರ್ಷಕ್ಕೊಂದಾವೃತ್ತಿಯೇ ಎಂದರೆ, ಜುಲಾಯಿ ಮತ್ತು ಆಗೋಸ್ಟು ತಿಂಗಳುಗಳಲ್ಲಿ ಮಾತ್ರ ಮಂಜೂರುಮಾಡಲಾಗುವುದೆಂದು ತೀರ್ಮಾನವಾಯಿತು.

ಬಿ ಐ ಕುಟ್ಟಪ್ಪ,
ಗೌ ಕಾರ್ಯದರ್ಶಿ.

## ಕಲಕತ್ತೆಯ ಸೇವಾದಳದ ಪರಿಷತ್ತು.

'ಹಿಂದುಸ್ಥಾನೀ ಸೇವಾದಳ'ದ ಅಖಿಲ ಭಾರತೀಯ ಮಂಡಳದ ನಿರ್ಣಯದ ಮೇರೆಗೆ ಬಂಗಾಲದ ತರುಣ ಮುಖಂಡರಾದ ಶ್ರೀ ಸುಭಾಸಚಂದ್ರಬೋಸ್‌ರವರು ಸೇವಾದಳದ ಕಲಕತ್ತೆಯಲ್ಲಿ ಕೂಡುವ (ರಾಷ್ಟ್ರೀಯ ಸಪ್ತಾಹದಲ್ಲಿ (ಡಿಸೆಂಬರು 1928) ವಾರ್ಷಿಕ ಅಧಿವೇಶನದ ಅಧ್ಯಕ್ಷರನ್ನಾಗಿ ಆರಿಸಲ್ಪಟ್ಟಿರುವರು.

ಮಧ್ಯ ಪ್ರಾಂತ ಸಭೆಯ ಸ್ವಾಗತ ಮಂಡಳಿಯ ಕಾರ್ಯದರ್ಶಿಗಳಾದ ಶ್ರೀ. ಬಿ ಸಿ. ಬೋಸರವರು ಸೇವಾದಳದ ಪ...

...ನ ಸಲುವಾಗಿ ಎಲ್ಲ ವ್ಯವಸ್ಥೆಯನ್ನು ಮಾಡುವೆವೆಂದು ದಿದ್ದಾರೆ.

ಸಂಯುಕ್ತ ಪ್ರಾಂತ್ಯದ ಸೇವಾದಳದ ಮಂಡಳಿಯವರು ನ...ಬರು 12ನೇ ತಾರೀಕಿನಿಂದ 30ನೇ ತಾರೀಕಿನ ವರೆಗೆ 30 ...ರ ಸಲುವಾಗಿ ಕಾನಪೂರದಲ್ಲಿ ಒಂದು ಶಿಬಿರವನ್ನು ತೆರೆ... ಸ್ವಯಂಸೇವಕರಿಗೆ ಶಿಕ್ಷಣವನ್ನು ಕೊಡ ಮಾಡಿದ್ದಾರೆ.

ಈ ಪಥಕವು ಡಿಸೆಂಬರು 1ನೇ ತಾರೀಕಿನ ದಿವಸ ಕಾನ...ರದಿಂದ ಮಹಾಸಭೆಯ ಸಲುವಾಗಿ ಸೇವಾದಳದ ಬಾಂ...ನ ಸಹ ಹೊರಟು ದಾರಿಯಲ್ಲಿ ಪ್ರಚಾರಕ ಕಾರ್ಯವನ್ನು ...ಡುತ್ತ ಡಿಸೆಂಬರು 14ನೇ ತಾರೀಕಿಗೆ ಕಲಕತ್ತೆಗೆ ಮುಟ್ಟ...ಲಿದ್ದಿರುತ್ತದೆ

ಮ ಹೆಚ್ಚಿ,

ರಾ. ವೆ. ಕರಗುದರಿ,
ದಲದ ಪ್ರಕಟನಾ ಕಾರ್ಯದರ್ಶಿ.

## ಪತ್ರವ್ಯವಹಾರ

[ವಾಚಕರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

### ಬೆಂಗಳೂರು ಕೊಡಗರ ವಾರ್ಷಿಕೋತ್ಸವ

ಇದೇ ತಾರೀಕು 1ರಲ್ಲಿ ಬೆಂಗಳೂರು ಲಾಲ್ ಬಾಗಿನಲ್ಲಿ ಬೆಂಗಳೂರಿನಲ್ಲಿರುವ ಕೊಡಗರೆಲ್ಲರೂ ಎಂದರೆ 100 ಜನರಿಗೆ ಮೇಲೆ ಸೇರಿ 17 ನೇ ವಾರ್ಷಿಕೋತ್ಸವವನ್ನು ನಡಸಿದರು ...ಲ್ಲ ಒಂದುಗಳಾಗಿ ಮಾ ಶ್ರೀ ಎ ಬಿ ಪಾದಪ್ಪನವರೂ, ಅ...ವರ ಪತ್ನಿಯವರೂ ಮತ್ತು ಇತರರೂ ಇದ್ದು ಉತ್ಸಾಹವನ್ನು ಹೆಚ್ಚಿಸಿದರು

ಈ ವರ್ಷ ಸಂಘದ ಪ್ರೆಸಿಡೆಂಟರಾಗಿ ಮೆ ಕೋಡಂ...ಡ ಮಾಚಯ್ಯನವರೂ, ಉಪ ಪ್ರೆಸಿಡೆಂಟರಾಗಿ ಮೆ ಕಲ್ಲ...ಚಂಡ ಕರುಂಬಯ್ಯನವರೂ, ಕಾರ್ಯದರ್ಶಿಯಾಗಿ ಮೆ ಐಚೆ...ಟ್ಟಿರ ಪೊನ್ನಪ್ಪನವರೂ, ಕಮಿಟಿ ಮೆಂಬರುಗಳಾಗಿ ಮೆ ಗಳಾ...ದ ಕೊಡಂದೇರ ಮಂದಣ್ಣನವರೂ, ಕೋದಂಡ ಮಾದಪ್ಪನವರೂ, ಪುಟ್ಟಿಚಂಡ ಉತ್ತಯ್ಯನವರೂ ಚುನಾಯಿಸಲ್ಪಟ್ಟರು

ಮೇಲ್ಕಂಡ ಉತ್ಸವವು ರಸಭರಿತವಾದ ಮತ್ತು ತೃಪ್ತಿಕರವಾದ ಭೋಜನ ಉಪಚಾರಗಳಿಂದಲೂ ಪಂದ್ಯದಾಟವೇ (Sports) ಮೊದಲಾದ ವಿನೋದಗಳಿಂದಲೂ ಕೂಡಿ ಪರಮಾನಂದವಾಗಿತ್ತು. ಈ ಪಂದ್ಯಾಟದಲ್ಲಿ ಅನೇಕ ಯುವಕರು ಮತ್ತು ಯುವತಿಯರು ಭಾಗಗಳನ್ನು ತೆಗೆದುಕೊಂಡರು. ಅನಂತರ ಮಿಸಸ್ ಮಾದಪ್ಪನವರು ಹರ್ಷದಿಂದ ಇನಾಮುಗಳನ್ನು ಕೊಟ್ಟರು ಮಾ ಶ್ರೀ ಮಾಳೆಟ್ಟಿರ ಅಪ್ಪಯ್ಯನವರಿಗೆ ಚೇಂಪಿಯನ್ (Chan pion) ಪದವಿ ಸಿಕ್ಕಿತು.

ಆ ವೇಳೆ ಸಂಘದ ಪ್ರೆಸಿಡೆಂಟರಾದ ಮಾ ಶ್ರೀ ... ಮಾಚಯ್ಯನವರು ಸಂಘದ ಒಟ್ಟಿನ ಕೆಲವು ವಿಷಯಗಳನ್ನು ಕುರಿತು ಕರ್ಣಾನಂದಕರವಾದ ಭಾಷಣಮಾಡಿ ಸಮಾರಂಭವನ್ನು ಮುಕ್ತಾಯಗೊಳಿಸಿದರು

ಹಾಜರಿದ್ದ ಕೊಡಗ

### ವಿದ್ಯಾರ್ಥಿಗಳ ಸಂಕಟ.

ಮಹನೀಯರೇ,

ನಿಮಗೆ 'ವಿದ್ಯಾರ್ಥಿಗಳ ಸಂಕಟ' ವೆಂಬ ಶಿರೋನಾಮವನ್ನು ನೋಡುವಾಗ ಆಶ್ಚರ್ಯವಾಗಬಹುದು 'ಅಯ್ಯೋ! ವಿದ್ಯಾರ್ಥಿಗಳಿಗೇನು ಸಂಕಟವಪ್ಪಾ' ಎಂದು ನೀವು ಆಲೋಚಿಸಬಹುದು ಇಲ್ಲಿ ಸಂಕಟವೆಂದರೆ ಮೈಗೆ ಒದಗುವ (Physical Pain) ಸಂಕಟವೆಂಬರ್ಥವಲ್ಲ ಮನಸ್ಸಿಗೆ ಬರುವಂಥಾದ್ದು (Mental Pain) ಎಂದರ್ಥ

ವಿದ್ಯಾರ್ಥಿಗಳು ಸ್ವಲ್ಪ ಚೆನ್ನಾಗಿ ಹೊರಟರೆ ನಿಮಗೆ ಅಗದು ಚೆನ್ನಾಗಿ ಹೊರಡುವುದು ಅಂದರೆ ದೊಡ್ಡ ಕ್ರಯದ ಬಟ್ಟೆಯನ್ನು ಹಾಕುವುದೆಂದರ್ಥವಲ್ಲ ಕಮ್ಮಿ ಕ್ರಯದ ಶುಭ್ರವಾದ ಮತ್ತು ಮಡಚಿದ ಗುರುತುಗಳು ಚೆನ್ನಾಗಿ ಕಾಣುವಂತಹ ಬಟ್ಟೆಯೆಂದು ತಿಳಿಯಿರಿ ನೀವು ಏಕೆ ಹೀಗೆ ನಮ್ಮ ಮೇಲೆ ದುರಾಲೋಚನೆ ಮಾಡುವಿರೋ ತಿಳಿಯದು ಕೊಡವ ಹುಡುಗರು ಪಂಚೆಯುಟ್ಟರೆ ನಿಮಗೆ ಸಹಿಸಲಾರದಷ್ಟು ಸಿಟ್ಟು ಬಂದುಬಿಡುತ್ತದೆ! ಕೊಡವರು ಹಿಂದುಗಳಲ್ಲವೋ ಫರಂಗಿಗಳೋ? ಹಿಂದುಗಳ ಉಡುಪೇನು? ಒಂದು ಪಂಚೆ, ಒಂದು ಷರ್ಟ್, ಒಂದು ಧೋತಿ ಫರಂಗಿಯವರದೋ? ಒಂದು ಸುರಾಲು, ಒಂದು ಬನಿಯನ್, ಒಂದು ಷರ್ಟ್, ಒಂದು ಕೋಟು, ಒಂದು ನೇಣು ಮತ್ತು ಒಂದು ಟುಕ್ಕಿ! ನಿಮಗೆ ಈ ಎರಡು ಉಡುಪುಗಳಲ್ಲಿ ಯಾವ ಉಡುಪು ಚಲೋದಾಗಿ ತೋರುವುದು? ಹಿಂದುಗಳದಲ್ಲವೇ? ಹಿಂದುಗಳ ಉಡುಪು ಎಷ್ಟು ಕಮ್ಮಿ ಬೆಲೆಗೆ ಸಿಕ್ಕುತ್ತದೆ! ಅಲ್ಲದೆ ಆ ಉಡುಪನ್ನುಟ್ಟರೆ ನಮ್ಮ ದೇಹಪುಷ್ಟಿಯು ಹೇಗೆ ಅಭಿವೃದ್ಧಿಯಾಗುವುದೆಂದು ನೀವು ಬಲ್ಲಿರಾ?

ಮಹನೀಯರೇ ಈ ಯೌವನ ಕಾಲದಲ್ಲಿ ನಮ್ಮ ಇಷ್ಟದಂತೆ ನಡೆಯಬೇಕು' ಎಂದು ನಮ್ಮ ಮತ್ತು ಎಲ್ಲಾ ಯೌವನಸ್ಥರ ಅಭಿಲಾಷೆ. ಈ ಅಭಿಲಾಷೆಯು ಹದಿನೈದರಿಂದ ಇಪ್ಪತ್ತೈದು ವರ್ಷ ಪ್ರಾಯದ ವರೆಗೆ ಮಾತ್ರ ಇರುವುದು ಈ ಕಾಲದಲ್ಲಿ ನಾವು ಇತರರಿಗೆ ಏನೂ ಕೇಡು ಮಾಡುವುದಿಲ್ಲ ನಮ್ಮ ದೇಹಪೋಷಣೆಗೇನೇ ನಾವು ಹೆಚ್ಚು ಗಮನವನ್ನು ಕೊಡುತ್ತೇವೆ ಇದರ ಸಂಗಡಲೇ ನಾವು ನಮ್ಮ ವಿದ್ಯೆಗೆ ಅದಕ್ಕಿಂತಲೂ ಹೆಚ್ಚಾದ ಗಮನವನ್ನು ಕೊಡುವೆವು ಇದನ್ನು ... ನಿಮಗೇಕೆ ಸಿಟ್ಟು? ನಮ್ಮ ಹಿರಿಯರಾದ ನೀವು ನಾವು ... ಆಡುವ ಆಟಗಳಿಗಿಂತ ... ದೊಡ್ಡವಾದ ಮತ್ತು ಕೆಡಕನ್ನುಂಟುಮಾಡುವ ಆಟವನ್ನು ಆಡುತ್ತೀರಿ ನಿಮ್ಮ ಕಾಲದಲ್ಲಿ ನಾವು ... ದರೂ ಒಂದೊಂದು ಸಲ ... ನೀವು ಮಾಡಿದ ಕೆಡಕನ್ನು ನಿಮ್ಮ ನಾಲಗೆಯೇ ಹೇಳಿದೆ ... ಆಗ ನೀವು ಮಾಡಿದ ಕೆಲಸಗಳು ಈಗ ಮಾಡಲ್ಪಟ್ಟರೆ ಅದಕ್ಕೆ ತಕ್ಕ ಶಿಕ್ಷೆ ... 'ಪುಸ್ತಕ' ಗಳಲ್ಲಿಯೂ ಸಿಕ್ಕುವುದಿಲ್ಲ

ನೀವು ನಮ್ಮ ತಪ್ಪನ್ನೇನಾದರೂ ಕಂಡರೆ ನಮಗೆ ತಿಳಿಯದಂತೆ ನಮ್ಮ ತಂದೆತಾಯಿಗಳಿಗೆ ಒಂದೆರಡನ್ನು ಸೇರಿಸಿ ಹೇಳುತ್ತೀರಿ ತಂದೆತಾಯಿಗಳು ನಮಗೆ ಅದನ್ನು ತಿಳಿಸಿ ವು ... ದೂ ಇಲ್ಲ ಅವರ ಮನಸ್ಸಿನಲ್ಲಿ ನೀವು ಹೇಳಿದ್ದು ನಿಜವೋ ಸುಳ್ಳೋ ಎಂಬ ಸಂಶಯವು ಹುಟ್ಟುತ್ತದೆ ಸಂಶಯವೂ ಒಂದು ತರದ ರೋಗವು ಅಂತೂ ಇಂತೂ ನಮ್ಮ ಮಾತಾಪಿತೃಗಳು ಕಡೆಗೆ ಆ ಸಂಶಯದಿಂದಲೇ ಕೊರಗಿ ಕೊರಗಿ ಬೆಂದು ಬೆಂಡಾಗುತ್ತಾರೆ ದಯವಿಟ್ಟು ಇಂಥಾದಕ್ಕೆ ಎಡೆ ಕೊಡಬೇಡಿ

"ಮನನೊಂದ ವಿದ್ಯಾರ್ಥಿ"

### 'ಪುತ್ತರಿ ನಮ್ಮೆ

ಮಹನೀಯರೇ—

ಬಹು ಅನಾದಿಕಾಲದಿಂದಲೂ ಅರಮನೆ ಪೊಳಿದು ಕೃತ್ತಿಕಾ ನಕ್ಷತ್ರದಲ್ಲೂ, ನಾಡುಪೊಳಿದು ರೋಹಿಣೀ ನಕ್ಷತ್ರದಲ್ಲೂ ನಡೆದುಬರುತ್ತಿದ್ದದ್ದು ತಮಗೆಲ್ಲರಿಗೂ ಗೊತ್ತಿರುವ ಸಂಗತಿ ಆದರೆ ಇತ್ತೀಚೆಗೆ ಪೊಳಿದು ನಿಷ್ಕರ್ಷಿಸುವ ಅಧಿಕಾರವು ಅರಮನೆಪೊಳಿದು ... ಇರುವ ನಾಡಿನ ದೇವಸ್ಥಾನದಲ್ಲಿ ನಡೆಯುವ ಮೇಲ್ಕಾರಿಕ ತೆಗೆದುಕೊಂಡೋ ಏ...ನೋ ಈಗ 6—7ವರ್ಷಗಳಿಂದ ಅರಮನೆಪೊಳಿದು ರೋಹಿಣೀ ನಕ್ಷತ್ರದಲ್ಲೂ, ನಾಡುಪೊಳಿದು ಮೃಗಶಿರ ನಕ್ಷತ್ರದಲ್ಲೂ ನಡಿಸುವಂತೆ ಮುಹೂರ್ತ ಪಟ್ಟಿ ಕಳುಹಿಸುತ್ತಾ, ಅದರಂತೆಯೇ ನಾಡುಪೊಳಿದು ದಿನದವರು ಆಚರಿಸುವಂತೆ ಒಂದು ತರದ ಒತ್ತಾಯದ ದಾರಿಗೆ ಇಳಿಸಿದ್ದೂ, ಅದರಂತೆಯೇ ನಾಡುಪೊಳಿದಿನದವರು ಮೃಗಶಿರ ನಕ್ಷತ್ರದಲ್ಲಿ ಪೊಳಿದು ಕೊಯ್ದರೂ ಕೊಯ್ದ ನೆಲ್ಲನ್ನು ಪೊಳಿದಿನ ಕದಿರು ತೆಗೆಯುವದಕ್ಕೆ ಹೊಸ ಅಕ್ಕಿಯ ಅನ್ನ ಊಟಮಾಡಲು ಕೃತ್ತಿಕಾ, ರೋಹಿಣೀ ನಕ್ಷತ್ರಗಳಲ್ಲಿ ಮಾತ್ರ ಶುಭ ಮುಹೂರ್ತಗಳು ಇರುವದಲ್ಲದೆ ಮೃಗಶಿರ ನಕ್ಷತ್ರದಲ್ಲಿ ಯಾವ ಶುಭ ಮುಹೂರ್ತವೂ ಇರಲು ಯಾವ ಕಾರಣವೂ ಇಲ್ಲವೆಂದು ಧೃಢವಾಗಿ ಹೇಳುತ್ತೇನೆ ಮೃಗಶಿರ ನಕ್ಷತ್ರದಲ್ಲೂ ಪೊಳಿದಿಗೆ ಶುಭ ಮುಹೂರ್ತ ಇರುವದಾದರೆ ಪೊಳಿದಿಗೆ ಶುಭ ಮುಹೂರ್ತವೆಂಬುದೇ ಸುಳ್ಳುಮಾತ್ರವಲ್ಲ, ಯಾವ ಕೆಲಸಕ್ಕೂ ಯಾವ ನಕ್ಷತ್ರದಲ್ಲಾದರೂ ಅವಶ್ಯವಿದ್ದರೆ ಶುಭಮುಹೂರ್ತ ಸಿಕ್ಕುತ್ತದೆಂಬುದು ಧೃಢವಾಯಿತು ಆದ್ದರಿಂದ ಮೃಗಶಿರ ನಕ್ಷತ್ರದಲ್ಲಿ ನಾಡುಪೊಳಿದನ್ನು ಆಚರಿಸುವ ಮಹನೀಯರೆಲ್ಲರೂ ನಾವು ಈ ಮೊದಲು ಆಚರಿಸುತ್ತಿದ್ದ ರೋಹಿಣೀ ನಕ್ಷತ್ರದಲ್ಲೇ ಕದಿರುತೆಗೆಯುವ ಏರ್ಪಾಡು ಮಾಡಬೇಕಾಗಿ ನಾಡುಪೊಳಿದಿನದವರೆಲ್ಲರನ್ನೂ ಈ ಮೂಲಕ ಕೋರುತ್ತೇನೆ ಇಷ್ಟು ಮಾತ್ರವಲ್ಲ, ಇಂತಹ ನಮ್ಮ ಹಬ್ಬವನ್ನು ದೇಶದವರೆಲ್ಲಾ ಒಂದೇ ದಿನ ಆಚರಿಸಿದಂತೆಯೂ ಆಗುತ್ತದೆಯಾದ್ದರಿಂದ ಇದಕ್ಕೆ ಎಲ್ಲರೂ ಗಮನವಿಡಬೇಕಾಗಿ ಕೇಳಿಕೊಳ್ಳುತ್ತೇನೆ

ಬಿ ಪಿ ಮಾದಪ್ಪ

### ಕೊಡಗು ಸರಕಾರದವರಲ್ಲಿ ಒಂದು ವಿನಂತಿ

ಈ ನಮ್ಮ ಕೊಡಗು ದೇಶವು ಬಹಳ ಚಿಕ್ಕದು ಜನಸಂಖ್ಯೆ ಬಹಳ ಕಡಿಮೆ. ಆದಾಗ್ಯೂ ಕಮ್ಮಿಯೇ ಆದ್ದರಿಂದಲೇ ದೊಡ್ಡ ಪ್ರಾಂತ್ಯಗಳಿಗೆ ಕೊಡಲ್ಪಟ್ಟಿರುವ ರಾಜ್ಯಾಧಿಕಾರದ ಕ್ರಮಗಳು ಇದಕ್ಕೆ ಕೊಡಲ್ಪಟ್ಟಿರುವುದಿಲ್ಲವೆಂದೂ, ಇನ್ನು ಕೊಡಬಹುದಾದ ಸಂದರ್ಭಗಳು ತೋರುವುದಿಲ್ಲವೆಂದೂ ತಿಳಿದವರು ಹೇಳುವರು ಆದರೆ ಪ್ರಾಥಮಿಕ ವಿದ್ಯೆಯಲ್ಲಿಯೂ, ಕೆಲವು ... ಸಂಗಡ ... ಇಲ್ಲದೆ ದೇಶದ ಸಾನಾ ತರದ ಜನಾಂಗದವರು ಅಂದರೆ ಕೊಡಗರು, ಬೇರೆ ಹಿಂದು ಜನರು, ಮುಸಲ್ಮಾನರು, ಕ್ರೈಸ್ತರು ವಗೈರೆ ಬೇರೆ ಬೇರೆ ಮತಸ್ಥರು ಪರಸ್ಪರ ... ಆಗಿ ಇರುವದರಲ್ಲಿಯೂ ಬೇರೆ ಪ್ರಾಂತ್ಯಗಳಿಗಿಂತಲೂ ಕೊಡಗು ಮುಂದಾಗಿಯೇ ಇದೆ ಎಂಬದಾಗಿ ಹಲವರು ಹೇಳುತ್ತಿರುವುದು ಕೆಲವು ಮಟ್ಟಿಗೆ ನಿಜವೆಂದೇ ಹೇಳಬಹುದು ಇದಾಗ್ಯೂ ಇತ್ತೀಚೆಗಾಗಿ ಹಿಂದು ಮಹಮ್ಮದೀಯರೊಳಗೆ ಆಗಾಗ್ಯೆ ಹಲವು ಕಡೆ ತೋರ್ಪಡುವ ವೈಮನಸ್ಯಗಳು, ಜಗಳಗಳು ಈ ನಮ್ಮ ಚಿಕ್ಕ ಪ್ರಾಂತ್ಯಕ್ಕೂ ಬಂದು ಬಿಡುವದೋ! ಅನ್ನುವಂತೆ ಒಂದೆರಡು ಕಡೆ ಹಬ್ಬಗಳ ಸಂಬಂಧವಾಗಿ ಗಲಾಟೆ ಎದ್ದದ್ದು ಸಾಮಾನ್ಯವಾಗಿ ಗೊತ್ತಿರುವ ಸಂಗತಿಯಾಗಿದೆ ಇದಕ್ಕೆ ಯಾವ ಆಸ್ಪದವೂ ಇರಕೂಡದೆಂದೇ ದೇಶ ಹಿತೈಷಿಗಳಾದವರ ಕೋರಿಕೆ ಇರಬೇಕಲ್ಲವೇ? ಈ ಸಂದರ್ಭದಲ್ಲಿ ಕೊಡಗು ಸರಕಾರದವರ ಗಮನಕ್ಕೆ ತರತಕ್ಕ ಒಂದು ಸಂಗತಿ ಯಾವದೆಂದರೆ—ಈ ದೇಶದಲ್ಲಿ ವಾಸಿಸುತ್ತಿರುವ ಮಹಮ್ಮದೀಯರಲ್ಲಿ ವಿಶೇಷವಾಗಿ ಮಲಬಾರು ಪ್ರಾಂತ್ಯದಿಂದ ಬಂದಿರುವ, ಇನ್ನೂ ಬರುತ್ತಿರುವ ಮಾಪಿಳ್ಳೆಯರು ಒಂದೊಂದು ಕಡೆ ನವೀನವಾಗಿ 'ಪಳ್ಳಿ' (ಮಸೀದಿ)ಯನ್ನು ಕಟ್ಟಿದ್ದಾರೆ ಇನ್ನೂ ಕಟ್ಟುವರು. ಇವರು ಸಾಧಾರಣವಾಗಿ ಪೇಟೆ, ಪಟ್ಟಣಗಳ ಪಬ್ಲಿಕ್ ರೋಡಿನ ಬಾಜಿನಲ್ಲಿಯೇ ಕಟ್ಟುವುದು ವಾಡಿಕೆ ನಾಪೋಕ್ಲುಪೇಟೆ, ಮೂನಾ...ಮುಪೇಟೆ ರೋಡು ಬಾಜಿನಲ್ಲಿ ಇತ್ತೀಚಾಗಿ ಕಟ್ಟುವುದು ಕಾಣುತ್ತದೆ ಮಾಪಿಳ್ಳೆಯರು ಜಾಗ ಸಂಪಾದಿಸಿ ಹ್ಯಾಗೆ 'ಪಳ್ಳಿ' ಕಟ್ಟಿಕೊಳ್ಳುವ ಸ್ವತಂತ್ರ ಅವರಿಗಿದೆಂದು ಹಾಗೋ 'ಪಳ್ಳಿ' ಕಟ್ಟಿದ ಕೂಡಲೆ ಬಂತು, ಹಿಂದು ಮಹಮ್ಮದೀಯರ ಮನಸ್ತಾಪ, ಕಲಹ ಯಾಕೆ ಅನ್ನುವಿರೋ? ಬಹಳ ಕಾಲದಿಂದ ಮಾಮೂಲ್ ಅನುಸರಿಸಿ ಹಿಂದು ಜನರು ತಮ್ಮ ಮದುವೆ ಹಬ್ಬ ಇತ್ಯಾದಿ ಕಾರ್ಯಗಳಲ್ಲಿ ಕೊಂಬು, ಕೊಟ್ಟು, ಓಲಗ ಇತ್ಯಾದಿಗಳಿಂದೊದರೆ ಭಾಜ ಬಜಂತ್ರಿಗಳಿಂದ ... ಗುವುದಕ್ಕೆ ಅಡ್ಡಿ ಬಂತು 'ಪಳ್ಳಿ' ಕಟ್ಟಿಯಾಗುವವರೆಗೂ ಯಾರಿಂದಲೂ ಯಾವ ತರದ ಅಟಕ ಇಲ್ಲದಿದ್ದದ್ದು ಪಳ್ಳಿ ಕಟ್ಟಿಯಾಗುತ್ತಲೇ ಪ್ರಾರ್ಥನೆ ಮಾಡುತ್ತಿರುವ, ಕೆಲವು ... ಮಾಡದಿರುವ ಸಮಯದಲ್ಲಿ ಸಹ 'ಹಾ, ಸದ್ದು ನಿಲ್ಲಿಸಿ' ... ಬ ಕೂಗು ಮಾಪಿಳ್ಳೆಯರಿಂದ ಬರಲಿಕ್ಕಾಯಿತು ಅವರ ... ಹೊಸ ಹಕ್ಕು "ಈಸ್‌ಮೆಂಟ್" ಎಂಬ ಹಕ್ಕಿಗೆ ವಿರೋಧವಿದ್ದು ಹೊಸದಾಗಿ ಹಕ್ಕು ಪಡಿಯಲು ನೋಡುವ... ಮಾಪಿಳ್ಳೆಯರು ಬಹಳ ಕಾಲಾಯ್ಯಿನಿಂದ ಅನುಸರಿಸಿ ಬ... ಹಕ್ಕನ್ನು ಪಡೆದಿರುವವರು ಹಿಂದುಗಳು 'ಲಾ' ಪ್ರಕಾರ ನೋಡಿದರೆ ಮೊದಲಾಗಿ ಹಿಂದುಗಳ ಹಕ್ಕೇ ಶ್ರೇಷ್ಠ, ... ಖಾಯಂ ಮಾಡಲ್ಪಡತಕ್ಕದಿದೆ ಹೊಸ ಹಕ್ಕಿನವರಿಗೆ ... ಮಾಡುವ ಯಾವ ಸ್ವತಂತ್ರಕ್ಕೂ ಕಾರಣವಿರದು. ಹ್ಯಾ... ಹಿಂದುಗಳು ತಮ್ಮ ಹಕ್ಕನ್ನು ಜರಗಿಸಿದರೆ ದೊಂಬಿಗೆ ಕಾ...ವಾಯಿತು ಸರಕಾರದವರು ಮುಖ್ಯ, ದೊಂಬಿಯಾಗದ... ನೋಡುವುದು ತಮ್ಮ ಕೆಲಸವೆಂತಲೂ, ಮತ ಸಂಬಂಧವಾ...ಕ್ಕೆ ತಾವು ಕೈಹಾಕುವದಿಲ್ಲವೆಂತಲೂ ಅನ್ನಬಹುದು ... ಲೀಸಿನವರ ಪ್ರಧಮದ್ಯ ಕೆಲಸ "ಪ್ರಿವೆನ್ಷನ್" (Preve...) ವಿಫಲಹೋದರೆ 'ಡಿಟೆಕ್ಷನ್' (Detection) ಆದ್ದರಿಂದ ... ದೇಶದಲ್ಲಿ ಇನ್ನು ಮುಂದಾದರೂ ಇಂಥ 'ಪಳ್ಳಿ' ಕಟ್ಟ... ಸಂದರ್ಭದಲ್ಲಿ ಮುಂದಾಗಿ ಪೋಲೀಸು ಇಲಾಖೆಗೆ ಬರ... ಡು ಅವರ ಮಂಜೂರಾತಿ ಪಡಕೊಂಡು ಇಂಥ ದೊಂಬಿ ಕ... ಹಿಂದು ಮಹಮ್ಮದೀಯರೊಳಗೆ ಮನಸ್ತಾಪಗಳು ಬಾರ... ಯಾರಿಗೂ ಅಟಂಕವಾಗದಂತ ಸ್ಥಳದಲ್ಲಿ 'ಪಳ್ಳಿ' ಕಟ್ಟಿ...ವಂತೆ ಕೊಡಗು ಸರ್ಕಾರದವರು ಎಚ್ಚರ ತೆಗೆದುಕೊಳ್ಳಬೇ... ದದ್ದು ಬಹಳ ಅವಶ್ಯವೆಂದೆಷ್ಟು ಹೇಳಿದರೂ ಸಾಲದು ... ಮ್ಯುನಿಸಿಪಾಲಿಟಿಯಾಗಲಿ ಯಾ ಬೇರೆ ಕಡೆಯಲ್ಲಾಗಲಿ ... ಳ್ಳಿ ಯಂಥಹ ಒಂದು ಪಬ್ಲಿಕ್ ಕಟ್ಟಡ ಆಗಬೇಕಾದರೆ ... ದಾಗಿ ಸಂಬಂಧಪಟ್ಟ ಸರಕಾರದವರನ್ನು ಕೇಳಿಯೇ ಕಟ್ಟ... ಕೋಡ ರೂಲ್ಸ್ ಸಹ ಇರಬೇಕಾಗಿ ತೋರುತ್ತದೆ ತಮ್ಮ ... ಥನೆ ಕಾಲದಲ್ಲಿಯಾಗಲಿ ಇಲ್ಲವೆ ತಮ್ಮ 'ಪಳ್ಳಿ' ಮು... ಗಲಿ ಯಾವ ಶಬ್ದವೂ ಗಲಾಟೆಯೂ ಆಗಬಾರದೆಂಬವರು ... ದೂ ಕೂಡ ಯಾಕೆ ಪಬ್ಲಿಕ್ ರಸ್ತೆ ಬಾಜಿನಲ್ಲಿ ಸಮೀಪ... 'ಪಳ್ಳಿ' ಕಟ್ಟಿ ಬೇರೆ ಜನರ ಹಕ್ಕಿಗೆ ಭಂಗಪಡಿಸಬೇಕೋ ... ಗೊತ್ತಾಗುವುದಿಲ್ಲ ಹಾಗೆ ಅಟಂಕಿಸುವುದರಲ್ಲಿ ಅವ... ಯಾವ ನ್ಯಾಯವೂ ಕಾಣದು ಅಂಥ 'ಪಳ್ಳಿ' ಯನ್ನು ... ಕರದ ಶಬ್ದ ಗೌಜು ಗಲಾಟೆಗೊಳಪಡದ ಅರಾಯದ ಜ...ಲ್ಲಿ ಕಟ್ಟಿಕೊಳ್ಳುವುದು ಅವರ ಕೆಲಸವಾಗಿದೆಂದು ಹೇಳ...ದ್ದಿಲ್ಲ ಹಾಗ ಕಟ್ಟಿಕೊಂಡಲ್ಲಿ ಯಾರ ಮನಸ್ತಾಪ ... ಬ, ಕಲಹಕ್ಕು ಕಾರಣವಿಲ್ಲದೆ ಪೋಲೀಸ್, ಮೇಜಿಸ್ಟ್ರೇಟ್... ಕಾಪಾಡಬೇಕೆಂದ ನಿಮ್ಮ ಏಗೆ ಭಂಗವಿಲ್ಲದಂತಾಗುವುದ... ದ್ದರಿಂದ ಸರ್ಕಾರದವರು ಈ ಮೇಲಣ ಬಾಬಿನಲ್ಲಿ ... ತುಂಬ ಗಮನವನ್ನೀಯುವರಾಗಿ ಕೋರೋಣಾಗಿದೆ

"ಕೊ ಅ ..."


ಲೋಕಪ್ರಿಯವಾದ ಉತ್ಕೃಷ್ಟ ಗುಣಕೊಡುವ
ಸರ್ಟಿಫಿಕೇಟ್ ದೊರೆತ ಜಗತ್ಪ್ರಸಿದ್ಧ

## ಕಲ್ಪತರು ತಾಯಿತ.

ಅರ್ಧಾತ—ವಾಂಛಿತ ಫಲ, ಕಾರ್ಯ ಸುಖವಾಗ... ವಿವಾಹವಾಗಲೀ, ಸಂತತಿಯಾಗಲೀ ಉದ್ಯೋಗ... ಯಲ್ಲಿ ಲಾಭವಾಗಲೀ, ಪರೀಕ್ಷೆಯಲ್ಲಿ ಯಶಸ್ವಿ ... ನೌಕರಿ ಹತ್ತಲೀ, ಪಗಾರ ಬೆಳೆಯಲೀ, ಪ್ರತಿಕೂಲ... ನರ ಮನಸ್ಸು ತಮಗೆ ನೆಟ್ಟಗೆ ಆಗಲೀ ಭೂತ ಪಿಶಾ...ಧೆ, ಗ್ರಹಪೀಡೆ ಆಗದಿರಲೀ, ಕೌಟುಂಬಿಕ ಸುಖವಾಗಲಿ ವಗೈರೆ ಪ್ರಾಪಂಚಿಕ ಅಡಚಣೆಗಳು ನಿಮ್ಮ ಮನಸ್ಸಿನ ... ಆಗುವ ಅಪೇಕ್ಷೆಯು ನಿಮಗೆ ಇರುವುದು ಸಹಜ... ವ ತ್ತು ಈ ಎಲ್ಲ ಮಾತುಗಳ ಅನುಭವವು ನಿಮಗೆ ... ದ್ದ "ಕಲ್ಪತರು ತಾಯಿತ" ವನ್ನು ತರಿಸಿದರೆ ... ಹುದು.. ತಾಯಿತ ನಂ ೧ ಕ್ರಯ ರೂ ೧೦, ... ೨ ಕ್ರಯ ರೂ. ೬, ತಾ. ನಂ ಕ್ರಯ ರೂ. ೩ ... ಟಿ ಬೇರೆ ಮಾಹಿತಿ ಸಂಗಡ ತಮ್ಮ ಸ್ಪಷ್ಟ ಬರೆಯಿರಿ.

ವಿಳಾಸ—ಮ್ಯಾನೇಜರ್ ಕಲ್ಪತರು ತಾಯಿತ,
ಪೋ. ಸಂಕೇಶ್ವರ,
ಬೆಳಗಾವಿ

ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಲು ಸುಸಮಯ.

# ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ (ಮಾಸ ಪುಸ್ತಕ)

## (ಎರಡನೆಯ ವರ್ಷಾರಂಭವಾಗಿದೆ.)

'ಹರಿದಾಸ ಸೇವಾ ಸಮಿತಿ' ಯವರಿಂದ ಬಹಳ ಶುದ್ಧ ರೀತಿಯಲ್ಲಿ ಪರಿಶೋಧಿಸಲ್ಪಟ್ಟು ಮಾಸ ಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಲಿರುವ 'ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ' ಯನ್ನು ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿರಿ! ಇದರಲ್ಲಿ ಜಗದ್ವಂದ್ಯರಾದ ಶ್ರೀ ಪುರಂದರದಾಸರು, ಶ್ರೀ ಕನಕದಾಸರೇ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ನುಡಿದ ದಿವ್ಯ ಭಗವನ್ನಾಮ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ಕ್ರೌನ್ ಅಷ್ಟಪತ್ರದ ನಾಲ್ವತ್ತು ಪುಟಗಳ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಲಿವೆ. ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೇ ಹಾಸಲು ಉಚಿತ) ಸಾಮಾನ್ಯ ಪ್ರತಿ ರೂ. ೧—೪—೦ ಉತ್ತಮ ಪ್ರತಿ ರೂ. ೨—೪—೦

## ಪ್ರಥಮ ಸಂಪುಟದ ಬೈಂಡಾದ ಪ್ರತಿಗಳು.

| | ಸಾದಾ ಬೈಂಡು | ದಪ್ಪ ರಟ್ಟಿನ ಬೈಂಡು | ಕಿತ್ತಾನಿಯ ಬೈಂಡು |
|---|---|---|---|
| ಸಾಮಾನ್ಯ ಪ್ರತಿ | ೧—೪—೦ | ೧—೧೨—೦ | ೨—೪—೦ |
| ಉತ್ತಮ ಪ್ರತಿ | ೨—೪—೦ | ೨—೮—೦ | ೩—೦—೦ |

ಅಂಚೇಹಾಸಲು ಪ್ರತ್ಯೇಕ.

ವಿಳಾಸ.— ಸಂಬೋಧ ಪ್ರಕಟನಾಲಯ,
ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.

12—4



## ಏಕೆ ನರಳುತ್ತೀರಿ?

ಪ್ರಾಚೀನ ಋಷಿಗಳಿಂದ ಪ್ರಣೀತವಾದ ಆಯುರ್ವೇದ ರೋಗನಿವೃತ್ತಿಯ ವರ್ಧಕವಾದ ಆರೋಗ್ಯವಿಧಿಗಳನ್ನು ತಿಳಿಯದೆ ಅಜ್ಞಾನಾಂಧಕಾರದಲ್ಲಿ ಮುಳುಗಿ ಅನೇಕ ತರಹಗಳ ವ್ಯಾಧಿಗಳಿಂದ ಏಕೆ ನರಳುವಿರಿ?

ಕ್ರಯವು! ಇಲ್ಲದೆ!!

ಉಚಿತವಾಗಿ ಕೊಡಲ್ಪಡುವ ನಮ್ಮ

ನಮ್ಮ ಔಷಧಿಗಳನ್ನು ಬಿಕ್ರಿ ಮಾಡುವುದಕ್ಕೆ

### ವೈದ್ಯ ವಿದ್ಯೆ

ನಿಜಾಂಶದ ಕಾಗದ

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ಸಿದ್ಧತೆ ಮಾಡಿಕೊಳ್ಳಿರಿ.

52—14

ರಾಜವೈದ್ಯ ನಾರಾಯಣಜಿ ಕೇಶವಜಿ,
1/3 4 ಚೈನ ಬಜಾರು ರೋಡು, ಮದ್ರಾಸು
N. B. — ವೈದ್ಯಸಲಹೆಯು ಫೀಜಿಲ್ಲದೆ ಕೊಡಲಾಗುವುದು.



# Arms, Ammunition and Shooting Requisites!!!



1928 Illustrated Catalogue Just Issued Free on Application!

| | | | | |
|---|---|---|---|---|
| D· B· B· L· Rifles | Rs· | 120 | to Rs· | 2750· |
| S B. B. L· | „ | „ 35 | to „ | 950. |
| D· B· B· L· Guns | „ | 50 | to „ | 1350· |
| S· B· B· L. | „ | 35 | to „ | 275· |
| D· B· M· L· | „ | 45 | to „ | 135· |
| S· B· M· L· | „ | 30 | to „ | 80· |
| B. L Revolvers | „ | 35 | to „ | 350· |
| Antomatic Pistols | „ | 30 | to „ | 150· |

Brilliant Search Light Lamp For Shooting Camping, Fishing and All such other Night Sports and work Rs· 39 Free delivery

Also swords, Daggers, Cartridges, Caps, Gunpowder and Shooting Requisites the most competitive rates.

## GOOLAMHUSAIN ALLIBHOY & SONS,
**Largest Importers of Firearms and Ammunition**
**Cheapest priced firm in India,**

24—9 210 Abdul Rehman Street, BOMBAY.



Try!! Try!!

## KING & CO.,
SUNTIKOPPA.

for
Foreign Liquor Arms &
Ammunitions, High Grade
Cigarettes, Sports Materials, Court
Stamp papers, Printed Labour
Bonds, Sewing Machines etc etc

ಕಿಂಗ್ ಅಂಡ್ ಕೊ.,
ಸುಂಟಿಕೊಪ್ಪ.

ನಮ್ಮ ಕಂಪೆನಿಯಲ್ಲಿ ಎಲ್ಲಾ ಪರದೇಶದ ಸಾರಾಯಿ ಎಂದರೆ ಬ್ರಾಂದಿ, ವಿಸ್ಕಿ, ವೈನ್ ಬೀರು ಮೊದಲಾದುವು ಬಿಕ್ರಿ ಮಾಡಲ್ಪಡುತ್ತದೆ. ಅಲ್ಲದೆ ಅತ್ಯುತ್ಕೃಷ್ಟವಾದ ಕೋವಿ, ಕೋವಿ ಮದ್ದು, ಕೋವಿಚಿಗಳು, ಚೆಲ್ಲು ವಗೈರೆ ಬಹಳ ಸುಲಭ ದರದಲ್ಲಿ ಸಿಕ್ಕುತ್ತದೆ. ಎಲ್ಲರೂ ಬಂದು ನೋಡಿ ನಮ್ಮಲ್ಲಿ ಬಂದು ವ್ಯಾಪಾರ ಮಾಡಿದಲ್ಲಿ ಪೂರ್ತಿ ಮಾಹಿತಿಯು ಗೊತ್ತಾಗುವುದು.

12—1



# ಔಷಧ ಸೀಸೆಗಳಿಗಿಂತಲೂ ಬರೇ ಜೀವನ ಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು."

## ಆರೋಗ್ಯಚಂದ್ರಿಕೆಯು ನಿನುಗೆ ಮಾಡುವ ಸಹಾಯವೇ ಇದು!

**ಆನರರಿ. ಡಾಕ್ಟರ್** ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯ ಚಂದ್ರಿಕೆ" ಎಂಬ ಆರೋಗ್ಯಬೋಧಕವಾದ ಮಾಸ ಪತ್ರಿಕೆಯು, ನಿಮಗೆ ಆರೋಗ್ಯ ದೃಢಕಾಯರಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟ ರೋಗ ವಿಚಾರವನ್ನೂ ಬೋಧಿಸುವುದು.

**ಈ ಆರೋಗ್ಯ ಚಂದ್ರಿಕೆಯು** ನಿಮ್ಮ ಮನೆಯಲ್ಲಿರುವುದರಿಂದ, ಬಹು ಕಾಲದಿಂದ ಶಸ್ತ್ರ ಚಿಕಿತ್ಸೆಯಲ್ಲಿಯೂ ಔಷಧ ಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

**ಆರೋಗ್ಯಚಂದ್ರಿಕೆ** ಎಂಬೀ ಮಾಸ ಪತ್ರಿಕೆಯಲ್ಲಿ ಆಹಾರ ಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರ ಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವವು. ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ವೈದ್ಯನೆಂದು ಭಾವಿಸಿರಿ.

**ವರ್ಷಕ್ಕೆ** ಒಂದೂವರೆ ರೂಪಾಯಿಗಳನ್ನು ಮಾತ್ರ, ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ ಕನ್ನಡ, ತೆಲುಗು, ತಮಿಳು, ಇಂಗ್ಲಿಷ್ ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದು ಬೀಳುವುದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾದುದಿಲ್ಲ.

52—1 ಮ್ಯಾನೇಜರ್, ಆರೋಗ್ಯಚಂದ್ರಿಕೆ, 323 ತಂಬುಶೆಟ್ಟಿ ಬೀದಿ, ಮದರಾಸು.



# ಕರ್ಣಿಕ

ಎಗ್ಮೋ ಮಿಕ್ಸ್ಚರ್

ಮಲೇರಿಯಾ, ಇನ್‌ಫ್ಲುಯೆಂಝಾ ಮುಂತಾದ ಜ್ವರಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲ ಶುದ್ಧವಾಗಿ ಬೇಗನೆ ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪. ಟಪ್ಪಾಲು ವೆಚ್ಚ ಬೇರೆ.

## ಸಾರಸಾಪರಿಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವುದಕ್ಕೆ ಇದು ಖಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿಗೆ ರೂ. ೧—೦—೦. ಟಪ್ಪಾಲು ವೆಚ್ಚ ಬೇರೆ.

ಕರ್ಣಿಕ ಬ್ರದರ್ಸ್
12—8 ಮುಖಾದೇವಿ ಲೇನ್,
ಗಿರಗಾಂವ, ಮುಂಬಾಯಿ.

## ಪ್ರಕಟಣೆ.

**ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.**

| | | ರೂ. |
|---|---|---|
| ಶೇರ್ ಬಂಡವಾಳ | — | 50,000 |
| ವಸೂಲಾದ ಶೇರ್ ಮೊಬಲಗು | — | 17,193 |
| ಜಮಾಬಂದ ಠೇವಣಾತಿ | — | 1,62,320 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

| ಪ್ರೆಸಿಡೆಂಟರು, | ಟ್ರೆಜರರ್. |
|---|---|
| ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್. | ಕೊಂಗಟ್ಟಿರ ಅಪ್ಪಯ್ಯನವರು. |

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1-7-1928.


## ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಮತ್ತು ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರು ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು,

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು.

ಮತ್ತು ದಕ್ಷಿಣ ಕೊಡಗಿಗೆ—ಮೆ. ಚಂಗಂಡ ಕುಟ್ಟಪ್ಪನವರು.

ಪೊನ್ನಂಪೇಟೆನಾಡು—ಮೆ ಕಾಳೇಂಗಡ ಚಿಣ್ಣಪ್ಪನವರು.

ಶ್ರೀಮಂಗಲನಾಡು—ಮೆ ಅಜ್ಜಮಾಡ ಪೂದಪ್ಪನವರು.

ಮರೆನಾಡು—ಮೆ. ಕೀಕಿರ ಅಪ್ಪಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕಾಣತೇರಿರ ಸಂಬಪ್ಪನವರು,

ಮೂರ್ನಾಡು—ಮಣವಟ್ಟಿರ ದೇವಯ್ಯನವರು,

ನಾಪೋಕ್ಲು—ಮೆ. ಟಿ. ಆರ್. ರಾಮಯ್ಯನವರು,

ಗೋಣಿಕೊಪ್ಪಲು—ಮೆ. ಚಮ್ಮಡ ಮೊದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮೆ. ಐಸಂತ ಪೂದಪ್ಪನವರು,

ಪೊನ್ನಂಪೇಟೆನಾಡು—ಮೆ ಪಿ. ಜಿ ಮುದ್ದಪ್ಪಯ್ಯನವರು,

ಹುದಿಕೇರಿ & ತಿತಿಮತ್ತಿ—ಮೆ. ಪಿ. ಪೂದಪ್ಪಯ್ಯನವರು,

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ,

## ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಹೊಸತು ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಕ್ಯಾಶ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ ಮೇನೇಜರ್,

"ಕೊಡಗು" ಮಡಿಕೇರಿ.

**12 bore Victor Cartridges Rs. 10/- Per 100**

# Mahomedally-Noorbhoy.

**ARMS & AMMUNITION MART.**

**321 Abdul Rehman Street.**

52-10 **BOMBAY. 3.**

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ಚಳಿ ಬರುವ ಜ್ವರ, 3-4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಶೀಘ್ರ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1-8-0, 3ಕ್ಕೆ ರೂ 4-0-0, 6ಕ್ಕೆ ರೂ 7-8-0, 12ಕ್ಕೆ ರೂ 14.

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ದುರ್ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆ, ಸಾಮರ್ಥ್ಯವಿಲ್ಲದಿರುವದು ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಚಿಕ್ಕ ಬಾಟ್ಲು 1, 3, 6ಕ್ಕೆ ರೂ. 1-4-0, 3-8-0, 6-12-0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3-8-0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಹುರಿ, ಕಣ್ಣು ತಿರುಗುವ ಹೇನು ಸೋರುವುದು ಕೆಪ್ಪತನ, ಕಣ್ಣು ನೋವು, ಅಪಸ್ಮಾರ ಹಿಡಿದು ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳೆಲ್ಲ ಖಂಡಿತ ಗುಣವಾಗುತ್ತವೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2-10-0 ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5-9-0

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ.—ಮನೋಲ್ಲಾಸಿನಿ ಕಂಪೆನಿ.

52-6

9. ಮಂಗಳೂರು.

# EMPIRE OF INDIA
# LIFE ASSURANCE COMPANY, LIMITED.

(Established 1897.)

A Monthly payment of Rs 12/8/- wi l secure a With Profit Assurance as shown below which will further increase by Bonus Additions.

| Age next Birthday | Assurance payable at Death | | | | Endowment Assurances payable at Death or at end of | | |
|---|---|---|---|---|---|---|---|
| | Whole Life | Premiums Limited to | | | | | |
| | | 15 Years | 20 Years | 25 Years | 20 Years | 25 Years | 30 Years |
| | Rs | Rs | Rs. | Rs | Rs | Rs | Rs. |
| 25 | 5,820 | 3,550 | 4,250 | 4 800 | 3,010 | 3,800 | 4,520 |
| 30 | 5 140 | 3,290 | 3 930 | 4,390 | 2,930 | 3,620 | 4,220 |
| 35 | 4 480 | 3,030 | 3 600 | 3,970 | 2 810 | 3,400 | 3,870 |

Wannted —Agents at Mercara, Somwarpet and Siddapur.

| HEAD OFFICE | | BRANCH OFFICE. |
|---|---|---|
| Empire of India Life Building, | | 152, Commercial Street, |
| BOMBAY. | 21—21. | BANGALORE. |

ಠಕಾರಿಕೆ ಮಾಲುಗಳಿಗೆ ಮೋಸ ಹೋಗಬೇಡಿರಿ!

ನಮ್ಮ ಒಡವೆಗಳಿಗೆ ಕೊಡುವ ಗ್ಯಾರಂಟಿ ಸರಿಯಾದ ಪ್ರತಿಫಲವಿದೆ.

ಆಜಮಾಯಿಸಿ ನೋಡಿರಿ.

ಇನಾಮಿನ ಬಟ್ಟಲುಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ.

ಎಲ್ಲಾ ಆರ್ಡರುಗಳನ್ನೂ ಭಲೋ ರೀತಿಯಿಂದಲೂ, ತುರಿತವಾಗಿಯೂ ಗ್ಯಾರಂಟಿಯೊಡನೆ ಜಾರಿ ಮಾಡಲಾಗುವದು

ಕೇಶವಜಿಂದ್ ದೇವಚಂದ್,

ಜ್ಯುವೆಲ್ಲರ್, (ಕೆಟಲಾಗ್ ಮುಫತ್).

12—11 21 ಚೈನಾ ಬಜಾರ್‌ರೋಡ್, ಮದರಾಸು.

ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ.

# ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

**1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ವ್ಯವಹಾರದ ಫಲ.**

# ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

| | |
|---|---|
| ವಿಮೆದಾರರಿಗೆ | 1000 ರೂಪಾಯಿಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ—ರೂ. 25. |
| ಹೆಚ್ಚಾಗಿ ಸಿಕ್ಕಿರುವ ಬೋನಸು | 1000 ,, ಎಂಡೌಮೆಂಟ್ ,, ,, —ರೂ. 20. |

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಚಿಂತೆಯಿಲ್ಲ.

ಹೊಸತು ಒಂದು ಹೊಸ ಪಾಲಿಸಿಯನ್ನು 'ಓರಿಯಂಟಲ್' ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವುಂಟು

ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಓರಿಯಂಟಲ್ ಬಿಲ್ಡಿಂಗ್ಸ್.

ನಂ. 1. ಸೌತ್ ಪರೇಡ್, ಬೆಂಗಳೂರು. 52-31 ಯಲ್. ಆರ್. ಕೃಷ್ಣಸ್ವಾಮಯ್ಯರ್.

ಬ್ರಾಂಚ್ ಸೆಕ್ರೆಟರಿ.


Printed & published by P. I. Belliappa, at "Kodagu" Press, Mercara for "Kodagu" Ltd.

If not delivered please return to "KODAGU" OFFICE MERCARA.

# ಕೊಡಗು.

ಸತ್ಯೇನ ಧಾರ್ಯತೇ ಪೃಥ್ವೀ ಸತ್ಯೇನ ತಪತೇ ರವಿಃ || ಸತ್ಯೇನ ವಾತಿ ವಾಯುಶ್ಚ ಸರ್ವಂ ಸತ್ಯೇ ಪ್ರತಿಷ್ಠಿತಂ ||

ವಾರ್ಷಿಕ ಚಂದಾ ರೂ. ೩-೮-೦.    ಸಂಪಾದಕ-ಕಂದ್ಯಂಡ ಐ. ಬೆಳ್ಳಪ್ಪ.

ಪ್ರತಿ ಸಪ್ತವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

[ಸಂಪುಟ ೮]    ಮಡಿಕೇರಿ, ೧೯೨೮ನೇ ಇಸವಿ ನವಂಬರ್ ತಾರೀಕು ೨೩ನೇ ಶುಕ್ರವಾರ    [ಸಂಚಿಕೆ ೩೬

## GENT'S OUTFITTING DEPARTMENT.

### NEW ARRIVASL!

Bow Ties @ Rs 2-8-0 2-4-0 and 1-12-0 each
Wide-end Ties @ 2-8-0 2-0-0 and 1-6-0 ,,
Cotton Handkerchieves @ 4-8-0 a dozen
Woollen Stockings @ 3-8-0 a pair

Flash Garters to match @ 1-12-0 each
Cashmere Socks @ 2-4-0 each
Kremntz Links @ 4-8-0 a set
,, Studs @ 0-14-0 ,,

52-43 **SPENCER & CO. LTD.** Gents Outfitting Specialists **MERCARA.**

Post Box 423.
TRIPLICANE, MADRAS

Catalogue Free to Bonafide Enquirers

JEWELLER BY APPOINTMENT TO His Excellency THE GOVERNOR OF MADRAS.

**MANUFACTURES AND DEALS IN ALL —**

(1) Gemset Jewels, gold and silver articles of all patterns
(2) Race Cups Caskets, Medals, etc for presentation purposes
(3) Trovels Keys, Locks etc for ceremonial purposes

UNDERTAKES —

(1) Remaking or Remodelling of all sorts of old gemset jewels to latest patterns.
(2) Electro plating gilding and nickel ling
(3) Buying old jewellery, or under taking to effect sale

## V. SUBRAMANIA IYER
## JEWELLER

52-11

**Gold smith, Silver smith, & Dealer in all Gemset Jewels.**

## ನೀವು ನಿರ್ಬಲಸ್ಥರಾಗಿ ಯಾಕೆ ನರಳುವಿರಿ?

ಅಪ್ರತಿಮ ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

### ಸಾಲಂಮಿಸ್ರಿ ಮುರಬ್ಬ




ಸೇವನೆಯಿಂದ ಎಂತಾ ವಾತು ಜನ್ಯ ವಿಕಾರಗಳನ್ನು ನರಗಳ ಶಕ್ತಿ ಕುಂದಿಹೋಗಿರುವದನ್ನೂ ಮೆದುಳಿನ ಬಲಹೀನತೆಯನ್ನೂ ಇಂತಾ ರೋಗಗಳನ್ನೆಲ್ಲಾ ಯುಕ್ತಿಯಾಗುಂತೆ ಹೋಗಮಾಡಿಸತಕ್ಕ ತನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸುತ್ತದೆ. ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ಮಹನೀಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ಯಾರೂ ತರಿಸಿ ನೋಡಬಹುದು. ಒಂದು ಡಬ್ಬಿ ೧೫ ದಿನಗಳ ಸೇವನೆಯಿಂದಲೇ ಇದರ ಗುಣವು ತೋರಿಬರುವುದು. ೨೩ ಡಬ್ಬಿಗಳ ಸೇವನೆಯಿಂದ ಎಷ್ಟು ನಿಶ್ಶಕ್ತರಾದವರಿಗೂ ಸಂಪೂರ್ಣ ಗುಣವನ್ನುಂಟುಮಾಡುವದು. ನಮ್ಮ ಟ್ರೇಡ್ ಮಾರ್ಕ ನೋಡಿ ಡಬ್ಬಿ ತೆಗೆದುಕೊಳ್ಳಿರಿ. ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಅವಶ್ಯಕವಿರುತ್ತೆ.

ಕ್ರಯ ಡಬ್ಬಿ ೧ಕ್ಕೆ ೨-೦-೦ ಟಪಾಲು ಖರ್ಚು ೧ರಿಂದ ೩ ಡಬ್ಬಿಗಳ ವರೆಗೆ ೦-೮-೦

**ಡಿ. ಮನ್ನಾಲಾಲ್,**

2-5 ಪೆನ್ಷಿ ಸೇಟೀವ್ ದಾಕ್ತರು. ಸಾಲಂಮಿಸ್ರಿ ಮುರಬ್ಬ ವರ್ಕ್ಸ್, ಬೆಂಗಳೂರು ಸಿಟಿ

### ಅಪೂರ್ವ ಸಂದರ್ಭ.

ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸಬೇಕಾದರೆ ಇದೀಗ ಅಪೂರ್ವ ಸಂದರ್ಭ

## ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ ಮುಪ್ಪುತ್ತಿ ನರಗಳ ದೌರ್ಬಲ್ಯ ಇವುಗಳನ್ನು ಬೇಗನೆ ಗುಣಪಡಿಸುತ್ತವೆ
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ! ಧರ್ಮಾರ್ಥ!!

### ಕಾಮ ಶಾಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ —

ಆತಂಕನಿಗ್ರಹ ಔಷಧಾಲಯ,
52-1 ಚಿಕ್ಕಪೇಟೆ ಬೆಂಗಳೂರು ಸಿಟಿ

# ಕೊಡಗು.

ಸಂ ೧೯೨೮ ನೇ ಇಸವಿ

ನವೆಂಬರ್ ತಾ. ೨೩ನೇ ಶುಕ್ರವಾರ.


## ದಿವಂಗತ ಲಾಲಾ ಲಜಪತರಾಯರು.

ಹಿಂದೂ ದೇಶದ ಮುಂದಾಳುಗಳಲ್ಲಿ ಪ್ರಮುಖರಾದ, ದೇಶಪ್ರೇಮಿಯರಾದ ಲಾಲಾ ಲಜಪತರಾಯರು ಮೊನ್ನೆ ಶನಿವಾರ ಬೆಳಿಗ್ಗೆ ಅಕಸ್ಮಾತ್ ಮರಣಹೊಂದಿದರೆಂದು ತಿಳಿಸಲು ತುಂಬಾ ವ್ಯಸನಪಡುತ್ತೇವೆ. ಇವರು ಮೃತರಾದ ಹಿಂದಿನ ದಿನ ಎಂದಿನಂತೆಯೇ ತಮ್ಮ ಕೆಲಸ ಕಾರ್ಯಗಳನ್ನು ಮಾಡಿರುತ್ತಾರೆ. ರಾತ್ರಿಯಲ್ಲಿ ಎದೆ ಕೈಯಲ್ಲಿ ನೋವು ಉಂಟಾದ್ದರಿಂದ ಡಾಕ್ಟರನ್ನು ಕರೆಸಿದ್ದರು. 11 ಘಂಟೆ ವರೆಗೆ ಡಾಕ್ಟರು ಇದ್ದು ಹೋದರು. ಅನಂತರ ಇವರ ಮೊಮ್ಮಗ ಭಾರತ ಭೂಷಣನೆಂಬವರು ಕಾಲು ತಿಕ್ಕುತ್ತಾ ಕೂತಿದ್ದವರನ್ನು ಮಲಗಿಕೊಳ್ಳಲು ಲಾಲಾಜಿಯವರು ಹೇಳಿದರು. ಒಂದು ಘಂಟೆ ವರೆಗೆ ಲಜಪತರಾಯರಿಗೆ ನಿದ್ರೆಯೇ ಬರಲಿಲ್ಲ. ಅನಂತರ ಬೆಳಿಗ್ಗೆ ಆರೂವರೆ ಘಂಟೆಗೆ ಎದ್ದರು. ಆಗ ಉಸಿರಾಡುವದು ಕಷ್ಟವಾಗಿತ್ತು. ಹತ್ತಿರವಿದ್ದ ಮೊಮ್ಮಗನು ತನ್ನ ತಂದೆಯನ್ನು ಕರೆದುಕೊಂಡು ಬರುವುದರ ಒಳಗೆ ಜೀವ ಹೋಗಿತ್ತು. ಲಾಲಾಜಿಯವರು 1865ನೇ ಇಸ್ವಿಯಲ್ಲಿ ಹುಟ್ಟಿ, 1885ರಲ್ಲಿ ಲಾಯರ್ ಕೆಲಸ ಪ್ರಾರಂಭಮಾಡಿ, ಅಂದಿನಿಂದಲೂ ದೇಶಸೇವೆ ಮಾಡುತ್ತಿದ್ದು, ದೇಶಕ್ಕಾಗಿಯೇ ಜೀವಕೊಟ್ಟರು.

ಈ ತಾರೀಕು 9ರ ಸಂಚಿಕೆಯಲ್ಲಿ "ಮುಖಂಡರಿಗೆ ದೊಣ್ಣೆಪೆಟ್ಟು" ಎಂಬ ಲೇಖನವನ್ನು ಬರೆಯುವಾಗ ಆ ದೊಣ್ಣೆ ಪೆಟ್ಟಿನಿಂದ ಲಾಲಾಜಿಯವರ ಮರಣದ ವಾರ್ತೆಯನ್ನು ಇಷ್ಟು ಬೇಗನೇ ತಿಳಿಸಬೇಕಾದೀತೆಂದು ಯೋಚಿಸಿರಲಿಲ್ಲ. ಲಾಲಾಜಿಯವರ ಹೃದಯ ಇರುವ ಎದೆಯ ಭಾಗಕ್ಕೇನೇ ಪೋಲೀಸ್ ಆಫೀಸರ ಏಟು ಬಿತ್ತೆಂತ ವಾಚಕರಿಗೆ ಈ ಮೊದಲು ತಿಳಿದಿದೆ. ಈಗ ಬಾಯಿಲೆಯಿಲ್ಲದೆ ಹೃದಯದ ಕೆಲಸ ನಿಂತದ್ದರಿಂದಲೇ ಅವರ ಮರಣವಾಯಿತು. ಆ ಪೆಟ್ಟಿನಿಂದಲೇ ಅವರ ಮರಣವಾಯಿತೆಂತ ಹೇಳಲಿಕ್ಕೆ ಸಾಧ್ಯವಿಲ್ಲವಾದರೂ ಆ ಪೆಟ್ಟು ತಿಂದಂದಿನಿಂದ ಹಿಂದುಸ್ಥಾನದ ಹೀನಸ್ಥಿತಿಯನ್ನು ಕುರಿತು ಅವರ ಮನಸ್ಸಿಗೆ ತುಂಬಾ ನೋವಾಯಿತೆಂತಲೂ, ಆ ಬೇಸರವೇ ಇಷ್ಟು ಮರಣಕ್ಕೆ ಕಾರಣವಾಯಿತೆಂತಲೂ ಅವರ ಪುತ್ರರು ತಿಳಿಸಿರುತ್ತಾರೆ. ಲಾಲಾಜಿಯವರು ಹಿಂದುಸ್ಥಾನದ ಸ್ವಾತಂತ್ರ್ಯ ಹೋರಾಟದ ಯುದ್ಧಭೂಮಿಯಲ್ಲೇ ಕಾದಾಡುತ್ತಾ ಮಡಿದಂತೆಯೇ ಆಯಿತು. 'ಪಂಜಾಬಿನ ಸಿಂಹ' ನೆಂಬ ಧೀರನಾಮಧೇಯವನ್ನು ಪಡೆದಿದ್ದ ಇವರಿಗೆ ದೇಶಸೇವೆ ಕಾರ್ಯದಲ್ಲೇ ಮರಣ ದೊರೆತದ್ದು ಯೋಗ್ಯವೇ ಆಯಿತು.

ಇವರು ಪ್ರಪಂಚ ವಿಖ್ಯಾತಿಯನ್ನು ಪಡೆದವರಾಗಿರುತ್ತಾರೆ. ಇವರ ಮರಣವಾರ್ತೆಯನ್ನು ತಿಳಿದ ಪ್ರಪಂಚದ ಎಲ್ಲಾ ಕಡೆಗಳಿಂದಲೂ ಇವರ ಗುಣ ಕಥನಗಳು ಪ್ರಕಟವಾಗುತ್ತಲಿವೆ. ಇವರು ಸರಕಾರದೊಂದಿಗೆ ಅನುಕರದಿಂದ ಹೋರಾಡುತ್ತಿದ್ದವರಾದರೂ ಇವರ ಧ್ಯೇಯವು ಮತ್ತು ಉದ್ದೇಶವು ನಿಷ್ಕಪಟವಾದ್ದರಿಂದ ವೈಸರಾಯರೇ ಮುಂತಾದ ಪ್ರಮುಖ ಸರಕಾರಿ ಉದ್ಯೋಗಸ್ಥರೂ ಇವರ ಮರಣದಿಂದ ತಮಗೆ ಉಂಟಾದ ವ್ಯಸನವನ್ನು ಅವರ ಕುಟುಂಬಕ್ಕೆ ತಿಳಿಸಿರುತ್ತಾರೆ. ಇವರ ಜನ ಪ್ರೀಯತೆಯನ್ನು ಸೂಚಿಸಿದ ಇನ್ನೊಂದು ವಿಷಯವಿದೆ. ಇವರ ದೇಹವನ್ನು ರುದ್ರ ಭೂಮಿಗೆ ಕೊಂಡೊಯ್ಯುವಾಗ 80,000 ದ ಮೇಲೆ ಒಂದು ಲಕ್ಷದವರೆಗೆ ಜನರು ಜಾತಿ ಮತ ಭೇದವಿಲ್ಲದೆ ಜೊತೆಯಲ್ಲಿ ಸಾಲುಗಟ್ಟಿ ಹೋದರಂತೆ. ಇಂಥಾ ಗೌರವವು ರಾಜಾಧಿ ರಾಜರಿಗೂ ದೊರಕುವದು ಅಪರೂಪ.

ಇವರ ಅಸಾಧಾರಣ ದೇಶಭಕ್ತಿಯನ್ನು ವರ್ಣಿಸಲೇ ಸಾಧ್ಯವಿಲ್ಲವೆಂತ ಇತರ ಪತ್ರಿಕೆಗಳ ಬರೆಯುತ್ತಿವೆ. ಇವರ ದೇಶಭಕ್ತಿಯು ಒಂದೇ ರೂಪದಲ್ಲಿ ಕಾರ್ಯರೂಪಕ್ಕೆ ಬಂದದ್ದಲ್ಲ. ರಾಜಕೀಯ, ಸಾಮಾಜಿಕ, ಆರ್ಥಿಕ, ವಿದ್ಯಾ, ಧಾರ್ಮಿಕ ಶಾಖೆಗಳನ್ನೆಲ್ಲಾ ಇವರ ಕಾರ್ಯಗಳು ವ್ಯಾಪಿಸಿಕೊಂಡಿವೆ. ಪಂಜಾಬು ಪ್ರಾಂತ್ಯದಲ್ಲಿ ಮುಸಲ್ಮಾನ್ ಜನಸಂಖ್ಯೆ ಹೆಚ್ಚು ಉಳ್ಳದ್ದರಿಂದಲೂ ಮುಸಲ್ಮಾನರಲ್ಲಿ ದೇಶಭಕ್ತಿಯು ಕಡಿಮೆ ಇರಲು ಕಾರಣವಾದ್ದರಿಂದಲೂ ಅದು ಸಾರ್ವಜನಿಕ ಕಾರ್ಯದಲ್ಲಿ ಹಿಂದೆ ಬಿದ್ದ ಪ್ರಾಂತ್ಯವಾಗಿತ್ತು. ಅಲ್ಲಿನ ರಾಜಕೀಯ ಚಳವಳಿವೆಂದರೆ ಲಾಲಾಜಿಯವರ ಚಳವಳಿ. ಅವರು ಬಿತ್ತಿ ಬೆಳಸಿದ ದೇಶಭಕ್ತಿಯ ಬೀಜವು ಪಂಜಾಬಿನಲ್ಲಿ ಬೇರೂರಿಕೊಂಡು ಈಗ ಸಾರ್ವಜನಿಕ ಕಾರ್ಯದಲ್ಲಿ ಪಂಜಾಬು ಯಾವ ಪ್ರಾಂತ್ಯಕ್ಕಿಂತಲೂ ಹಿಂದೆ ಬೀಳುವಂತಿಲ್ಲವೆಂಬುವದಕ್ಕೆ ಮೊನ್ನೆ ಜಯಪ್ರದವಾಗಿ ನಡೆದ ಸೈಮನ್ ಬಹಿಷ್ಕಾರವೇ ಸಾಕ್ಷಿ. ಪಂಜಾಬಿನ ಕೆಲವು ಪ್ರಾಂತ್ಯವನ್ನು ಯುರೋಪಿಯನ್ ಜನರ ವಸತಿಯನ್ನಾಗಿ ಮಾಡಿಕೊಳ್ಳಲು ನಡೆದ ಪ್ರಯತ್ನಕ್ಕೆ ಇವರು ಎದುರು ನಿಂತದ್ದರಿಂದ ಬ್ರಿಟಿಷ್ ಅಧಿಕಾರಿಗಳಿಗೆ ಇವರ ಮೇಲಿನ ದ್ವೇಷವು ಅತಿಯಾಗಿ ಹೆಚ್ಚಿ ಇವರನ್ನು ವಿಚಾರವಿಲ್ಲದೆ ಕಾರಾಗೃಹಕ್ಕೆ ತಳ್ಳಿದರು. ಪಂಜಾಬ್ ಸರಕಾರದ ಆ ಅನ್ಯಾಯದ ವರ್ತನೆಯಿಂದ ಲಾಲಾಜಿಯವರ ಹೆಸರು ಹಿಂದುಸ್ಥಾನದ ಹಳ್ಳಿಹಳ್ಳಿಗಳಲೆಲ್ಲಾ ಹಬ್ಬಿ ಅವರ ಹೆಸರು ತಿಳಿಯದವರಿಲ್ಲದಾಯಿತು. ಅವರ ಸಾಕ್ಷಿ ಇಲ್ಲದ ಊರಿಲ್ಲವೆಂತ ಆಯಿತು. ಅಖಿಲ ಹಿಂದುಸ್ಥಾನದ ಕೂಗು ಬಲವಾದ್ದರಿಂದ ಸರಕಾರದವರು ಲಾಲಾಜಿಯವರನ್ನು ಬಿಡುಗಡೆ ಮಾಡಿದರು. ಹಿಂದುಸ್ಥಾನದಲ್ಲಿ ಸ್ವತಂತ್ರ ಪ್ರಿಯರು ತಮ್ಮ ಇಷ್ಟಾನುಸಾರ ಕೆಲಸ ನಡಿಸುವದು ಸಾಧ್ಯವಿಲ್ಲವೆಂತ ತಿಳಿದ, ಇವರು ಅಮೇರಿಕಾ ದೇಶದಲ್ಲಿ ಕೆಲವು ಕಾಲ ವಾಸವಿದ್ದು ಅಲ್ಲಿ ಹಿಂದುಸ್ಥಾನದ ಮೇಲೆ ಕನಿಕರ ಹುಟ್ಟುವಂತೆ ಕೆಲಸ ಮಾಡಿದರು. ಅಲ್ಲಿ ಇವರು ಮಾಡಿದ ಕೆಲಸದಿಂದ ಇವರ ಹೆಸರು ಪ್ರಪಂಚಕ್ಕೆಲ್ಲಾ ತಿಳಿಯಿತು. ಅಮೇರಿಕಾದಿಂದ ಬಂದಮೇಲೆ ಇವರು ಕಲ್ಕತ್ತಾ ಕಾಂಗ್ರೆಸ್ಸಿನ ವಿಶೇಷ ಅಧಿವೇಶನದ ಅಧ್ಯಕ್ಷ ಸ್ಥಾನವನ್ನು ವಹಿಸಿದರು. ಅಗಲೇ ಅಸಹಕಾರದ ಧ್ಯೇಯವನ್ನು ಕಾಂಗ್ರೆಸ್ಸಿನವರು ಕೈಕೊಂಡದ್ದಾಗಿದೆ. ಹಿಂದುಸ್ಥಾನದ ಗೌರವನ್ನು ಕಾಪಾಡಲಿಕ್ಕಾಗಿ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಇವರು ಮಾಡಿದ ವಾದಗಳು ಮಹತ್ವದ್ದಾಗಿವೆ.

ಇವರು ಮತೋದ್ಧಾರಕ್ಕಾಗಿ ಮಾಡಿದ ಕೆಲಸಗಳೂ ವಿಶೇಷವಾಗಿವೆ. ಸ್ವಾಮಿ ದಯಾನಂದ ಸರಸ್ವತಿಯವರಿಂದ ಸ್ಥಾಪಿತವಾದ ಆರ್ಯ ಸಮಾಜದ ಬೆಳವಣಿಗೆಗಾಗಿ ತುಂಬಾ ಕೆಲಸ ಮಾಡಿದರು. ಉತ್ತರ ಹಿಂದೂಸ್ಥಾನದಲ್ಲಿ ಮುಸಲ್ಮಾನರಿಂದ ಹಿಂದುಗಳಿಗೆ ಆಗುತ್ತಿದ್ದ ಹಿಂಸೆಯನ್ನು ನೋಡಿ ಸಹಿಸಲಾರದೆ ಹಿಂದೂ ಮಹಾಸಭೆಗೆ ಬಹಳ ಮುತುವರ್ಜಿಯಿಂದ ಕೆಲಸಮಾಡಿದರು. ಮುಸಲ್ಮಾನರಿಂದ ಪೆಟ್ಟು ತಿಂದು ಹೇಡಿಗಳಾಗಿದ್ದ ಹಿಂದೂ ಜನರು ತಮ್ಮ ಗೌರವ ರಕ್ಷಣೆಗಾಗಿ ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕೆಂಬ ಹಿಂದೂ ಮಹಾಸಭೆಯ ಧ್ಯೇಯಕ್ಕೆ ತುಂಬಾ ಉತ್ತೇಜನಕೊಟ್ಟರು. ಇದರಿಂದ ಮುಸಲ್ಮಾನರಿಗೆ ಇವರ ಮೇಲೆ ಕೆಲವು ಸಲ ಕ್ರೋಧವೇ ಬಂತು. ಆದರೆ ಈಚಗೆ ಇವರ ಉದ್ದೇಶವನ್ನು ಮುಸಲ್ಮಾನರು ಸರಿಯಾಗಿಯೇ ತಿಳಿದುಕೊಂಡರು. ಡಾಕ್ಟರ್ ಅನ್ಸಾರಿಯಂಥ ಪ್ರಮುಖ ಮುಸಲ್ಮಾನರು ಮೊನ್ನೆ ನಡೆದ ಮದ್ರಾಸ್ ಮೀಟಿಂಗಿನಲ್ಲಿ ಲಾಲಾಜಿಯವರು ನಿಜವಾಗಿಯೂ ಮುಸಲ್ಮಾನರ ಸ್ನೇಹಿತರೆಂತ ತಿಳಿಸಿದರು. ನೆಹರು ಕಮಿಟಿ ರಿಪೋರ್ಟಿನಲ್ಲಿ ಹಿಂದೂ ಮುಸಲ್ಮಾನರ ಭೇದಗಳನ್ನು ಪರಿಹರಿಸಿಕೊಳ್ಳಲು ಸೂಚಿಸಿರುವ ಉಪಾಯಗಳಿಗೆ ಇವರು ಸಂಪೂರ್ಣ ಉತ್ತೇಜನ ಕೊಟ್ಟು ಕೆಲಸಮಾಡಿದ್ದರಿಂದಲೇ ಹಿಂದೂ ಮುಸಲ್ಮಾನ್ ಭೇದವು ಹೆಚ್ಚಾಗಿದ್ದ ಪಂಜಾಬಿನಲ್ಲಿಯೂ ನೆಹರು ಕಮಿಟಿಗೆ ಮತ್ತಾಸೆ ಸಿಕ್ಕಿರುವದಾಗಿದೆ. ಅನ್ಯಾಯಕ್ಕೆ ಗುರಿಯಾದವರ ಕಷ್ಟ ನಿವಾರಣೆಗೆ ಅವರು ಒದ್ದ ಕಂಕಣರಾಗಿದ್ದರು. ಅವರು ಈ ಸ್ವಭಾವದಿಂದಲೇ ಹಿಂದುಗಳ ಅಭಿವೃದ್ಧಿಗಾಗಿ ಬಹಳ ಕೆಲಸ ಮಾಡಿದರು.

ದಬ್ಬಾಳಿಕೆಗೆ ಒಳಗಾದವರನ್ನು ಉದ್ಧಾರ ಮಾಡುವ ಉದ್ದೇಶದಿಂದಲೇ ಅವರು ಸಮಾಜ ಸುಧಾರಕರೂ ಆದದ್ದು. ಪಂಚಮರ ಉದ್ಧಾರಕ್ಕಾಗಿ ಅವರು ಬಹಳವಾಗಿ ಕೆಲಸ ಮಾಡಿದರು. ವಿಧವಾ ವಿವಾಹ, ಬಾಲ್ಯ ವಿವಾಹ ನಿಷೇಧ ಮುಂತಾದ ಹಿಂದೂ ಸಮಾಜ ಸುಧಾರಣೆಗೂ ಪ್ರಯತ್ನ ಮಾಡಿದರು.

ವಿದ್ಯಾಭಿವೃದ್ಧಿಯಂತೂ ಅವರ ಇಷ್ಟದ ಕಾರ್ಯವಾಗಿತ್ತು. ದಯಾನಂದ ವೇದಿಕ್ ಕಾಲೇಜ್ ಎಂಬ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿದವರೇ ಇವರು. ವಿದ್ಯೆಯ ವಿಷಯದಲ್ಲಿ ಇವರು ಒಂದು ದೊಡ್ಡ ಗ್ರಂಥವನ್ನು ಬರೆದಿದ್ದಾರೆ. ಈಗಲೂ ವಿದ್ಯಾರ್ಥಿಗಳ ಮೇಲೆ ಇವರಿಗೆ ಪ್ರೇಮವಿದ್ದದ್ದರಿಂದಲೇ ಇವರ ಮೃತ ದೇಹವನ್ನು ನೋಡಲು ವಿದ್ಯಾರ್ಥಿಗಳು ಸಾವಿರ ಗಟ್ಟಲೆಯಲ್ಲಿ ನೆರೆದರು.

ಇವರು ಉಪನ್ಯಾಸಕರು ಮಾತ್ರವಲ್ಲ ಪತ್ರಿಕಾ ಕರ್ತರಾಗಿಯೂ ಯಶಸ್ಸು ಪಡೆದಿರುತ್ತಾರೆ. ಮರಣದ ವರೆಗೆ 'ಪೀಪಲ್' ಎಂಬ ವಾರ ಪತ್ರಿಕೆಯನ್ನು ಪ್ರಕಟಿಸುತ್ತಲಿದ್ದರು.

ಸರ್ವತೋಮುಖವಾದ ಇವರ ಕಾರ್ಯಗಳು ಸುಮಾರು 40 ವರ್ಷಗಳ ವರೆಗೆ ನಡೆದವು. ಇಷ್ಟು ದೀರ್ಘಕಾಲ ದೇಶಸೇವೆ ಮಾಡಿದ ಸುಪುತ್ರರು ಹಿಂದುಸ್ಥಾನದಲ್ಲಿ ಅಪರೂಪ. ಹಿಂದುಸ್ಥಾನಕ್ಕೆ ಸ್ವರಾಜ್ಯ ಸೂರ್ಯನ ಉದಯವಾಗಬೇಕಾದ ಈ ಕಾಲದಲ್ಲಿ ಇವರು ಕಾಲವಾದದ್ದು ಹಿಂದುಸ್ಥಾನದ ದುರ್ದೈವವೇ ಸರಿ. ಕಳೆದ ಸ್ವಲ್ಪ ಕಾಲದಲ್ಲಿ ಹಿಂದುಸ್ಥಾನವು ಅನೇಕ ಪ್ರಮುಖ ಮುಂದಾಳುಗಳನ್ನು ಕಳಕೊಂಡಿತು. ಲಜಪತರಾಯರಂಥ ಧೀರರ ಸ್ಥಾನವನ್ನು ವಹಿಸಿಕೊಳ್ಳಲು ಇನ್ನೊಬ್ಬರು ದೊರೆಯುವದು ಕಷ್ಟ. ಆದರೂ ಇಂಥವರಿಗೆ ಜನ್ಮವಿತ್ತ ಹಿಂದೂಸ್ಥಾನವು ಬಹು ಕಾಲ ಗುಲಾಮಗಿರಿಯಲ್ಲಿ ಇರಲಾರದೆಂತ ಧೈರ್ಯದಿಂದ ಹೇಳಬಹುದು. ಇವರ ಗುಣಗಳು ಸುಮ್ಮನೇ ನಿಷ್ಪ್ರಯೋಜನವಾಗಲಾರದು. ಇವರನ್ನು ಹಿಂಬಾಲಿಸುವ ಅನೇಕ ಯುವಕರು ಮುಂದೆ ಬಂದೇ ಬರುವರು. ಇವರ ಮರಣಕ್ಕಾಗಿ ದುಃಖಪಡುತ್ತಾ, ಕೂಡದೆ ಇವರು ಕೈಕೊಂಡ ಸ್ವರಾಜ್ಯ ಸ್ಥಾಪನೆಯ ಕಾರ್ಯವನ್ನು ಸಫಲಗೊಳಿಸಿ ಇವರ ಜೀವಾತ್ಮಕ್ಕೆ ಶಾಂತಿಯನ್ನು ಕೊಡುವ ಮಹತ್ಕಾರ್ಯವು ಹಿಂದುಸ್ಥಾನದ ಜನರಿಗೆ ಸೇರಿದ.

---

## ಕೊಡಗು ಶಾಸನ ಸಭೆ ಮಂಡಲಿ.

(ಕಳೆದ ವಾರದಿಂದ ಮುಂದುವರಿದದ್ದು)

22. "ಸರ್ಕಾರಿ ಪೈಸಾರಿ ಜಾಗಗಳಲ್ಲಿಯೂ, ... ಜಾಗಗಳಲ್ಲಿಯೂ ಇರುವ ಮರದ ಉತ್ಪತ್ತಿಯನ್ನು ... ರೆವಿನ್ಯೂಗೆ ಸೇರಿಸಿ ಅದನ್ನು ದೇಶದ ಅಭಿವೃದ್ಧಿ ಕೆಲಸಗಳಿಗೆ ಉಪಯೋಗಿಸಬೇಕು" ಎಂಬ ಠರಾವನ್ನು ಮೆ. ಎ. ಬಿ ... ಪ್ಪನವರು ವಾಪಸು ತೆಗೆದುಕೊಂಡರು.

23. 'ಮೋಟಾರು ಬಸ್ಸು ಮತ್ತು ಕಾರುಗಳ ... ಹೊಸ ರೂಲ್ಸಿನ ಮೇರೆ ಹಾಕಿರುವ ತೆರಿಗೆಯ ಉತ್ಪತ್ತಿ... ರಸ್ತೆಗಳ ಕಿರುವುಗಳನ್ನು ಸಟ್ಟಗೆ ಮಾಡಲಿಕ್ಕೂ, ಸೇತುವೆ... ಕಟ್ಟಲಿಕ್ಕೂ ಮಾತ್ರ ಉಪಯೋಗಿಸತಕ್ಕದ್ದು" ಎಂಬ ... ಎ. ಬಿ ಚಂಗಪ್ಪನವರ ಠರಾವು ಇನ್ನೊಂದು ವಿಮೆಂಟಿಗೆ ... ಡಲಾಯಿತು.

24. "ಮುನ್ಸಿಪಾಲಿಟಿಯೊಳಗೆ ಸುಂಕವನ್ನು ನಿಲ್ಲಿಸಬೇಕು" ಎಂಬ ಠರಾವನ್ನು ಮೆ ಎ. ಬಿ ಚಂಗಪ್ಪನವರು ವಾಪಸು ತೆಗೆದುಕೊಂಡರು

25. "ಕೊಡಗು ಚುನಾವಣೆ ರೂಲ್ಸಿನ 8ನೇ ರೂಲು ಸೆಕ್ಷನ್ (ಬಿ) ಕಲಮಿನ ಮೇರೆ ಹೆಂಗಸರು ಓಟು ಕೊಡುವ ಅಡಚಣೆಯನ್ನು ತೆಗೆದು ಹಾಕಿ ಅವರಿಗೂ ಗಂಡಸರಂತೆ ಓಟು ಕೊಡುವ ಹಕ್ಕು ಕೊಡಬೇಕು." ಎಂಬ ಠರಾವನ್ನು ಮೆ. ಪಿ. ಆರ್. ತಿಮ್ಮಯ್ಯ ಪೂಜಾರವರು ಸೂಚಿಸಿ ಹೇಗೆಂದರು. ಬ್ರಿಟಿಷ್ ಪಾರ್ಲಿಮೆಂಟಿನವರು ಮಾತ್ರವಲ್ಲ ಹಿಂದೂದೇಶದ ಹಲವು ಪ್ರಾಂತ್ಯಗಳವರು, ಹೆಂಗಸರಿಗೆ ಓಟಿನ ಹಕ್ಕು ಕೊಟ್ಟಿರುವರು. ನಮ್ಮ ಪ್ರಾಂತ್ಯದ ಸ್ತ್ರೀಯರು ಪ್ರಾಥಮಿಕ ವಿದ್ಯೆಯಲ್ಲಿ ಮಾತ್ರವಲ್ಲ ಉಚ್ಚ ವಿದ್ಯೆಯಲ್ಲೂ ಬೇರೆ ಪ್ರಾಂತಗಳಿಗಿಂತ ಮುಂದುವರಿದಿರುವರು. ಇಲ್ಲಿಯ ಹೆಂಗಸರಿಗೆ ... ತಿಳುವಳಿಕೆ ಇದೆ. ಹೆಂಗಸರಿಗೆ ಈ ಹಕ್ಕು ಕೊಟ್ಟರೆ ... ಪಟ್ಟಿಯು ಬಹಳ ದೊಡ್ಡದೇನು ಆಗುವಂತಿಲ್ಲ. ಈ ಹಕ್ಕನ್ನು ಕೊಡಲು ಸೈಮನ್ ಕಮಿಷನು ಬಂದಿರುವ ಈ ಸಮಯ

ಮೆ. ಪಿ ಬಿ ಮೇದಪ್ಪನವರು ಅನುಮೋದಿಸಿದರು.

ಈ ವಿಷಯವನ್ನು ಇಂಡಿಯಾ ಸರ್ಕಾರದವರು ಆಯಾ ಸ್ಥಳೀಕ ಕೌನ್ಸಿಲುಗಳಿಗೆ ಬಿಟ್ಟಿರುತ್ತಾರೆಂದೂ, ಸರ್ಕಾರದವರು ಇದರಲ್ಲಿ ಭಾಗ ತೆಗೆದುಕೊಳ್ಳುವದಿಲ್ಲವೆಂದೂ ಫೈನಾನ್ಸ್ ಮೆಂಬರರು ಹೇಳಿದರು.

ಉದ್ಯೋಗಸ್ಥರಲ್ಲದ ಮೆಂಬರುಗಳೆಲ್ಲರೂ ಪರವಾಗಿ ಓಟು ಕೊಟ್ಟರು. ಉದ್ಯೋಗಸ್ಥ ಮೆಂಬರುಗಳು ಯಾವ ಕಡೆಗೂ ಓಟು ಕೊಡದ್ದರಿಂದ ಠರಾವು ವಿರೋಧವಿಲ್ಲದೆ ಪಾಸಾಯಿತು.

26 'ಈ ಕೌನ್ಸಿಲಿಗೆ ಸ್ತ್ರೀಯರು ಮೆಂಬರುಗಳಾಗಿ ಚುನಾಯಿಸಲ್ಪಡಲು ಯಾ ನೇಮಿಸಲ್ಪಡಲು ಇರುವ ಅಡಚಣೆಯನ್ನು ತೆಗೆದುಹಾಕಬೇಕು' ಎಂಬ ಠರಾವನ್ನು ಸಭೆಯ ಮುಂದಿಟ್ಟು ಮೆ. ಪೂಜಾರವರು ಹೇಳಿದ್ದೇನೆಂದರೆ—ಬೇರೆ ಕಡೆಗಳಲ್ಲಿ ಸ್ತ್ರೀಯರು ಎಲ್ಲಾ ಅಧಿಕಾರಕ್ಕೂ ಬಂದಿರುತ್ತಾರೆ. ನಮ್ಮ ಈ ದೇಶದ ಹೆಂಗಸರು ಬೇರೆ ಪ್ರಾಂತ್ಯಗಳ ಸ್ತ್ರೀಯರಿಗಿಂತ ತಿಳುವಳಿಕೆಯಲ್ಲಿ ಕಡಿಮೆ ಇಲ್ಲ. ಸ್ತ್ರೀ ಮೆಂಬರುಗಳು ಕೌನ್ಸಿಲಿನಲ್ಲಿದ್ದರೆ ಸ್ತ್ರೀಯರ ಅಭಿಪ್ರಾಯವೂ ಗೊತ್ತಾಗುವದು.

ಮೆ. ಸಿ ಯಸ್. ಉತ್ತಯ್ಯನವರು ಅನುಮೋದಿಸಿದರು.

ಸರ್ಕಾರದವರು ಮೊದಲಿನ ಠರಾವಿನ ಕಡೆಗೆ ಇದ್ದಂತೆಯೇ ಇದಕ್ಕೂ ಇರುವರೆಂದು ಕಮಿಷನರು ಹೇಳಿದರು

ಮೆ. ಟಿಪ್ಪಿಂಗ್ ರೊಬ್ಬರು ವಿನಹ ಬಾಕಿ ಎಲ್ಲಾ ಉದ್ಯೋಗಸ್ಥರಲ್ಲದ ಮೆಂಬರುಗಳು ಪರವಾಗಿ ಓಟುಕೊಟ್ಟರು. ಉದ್ಯೋಗಸ್ಥರು ಯಾವ ಕಡೆಗೂ ಓಟುಕೊಡಲಿಲ್ಲ. ಠರಾವು ಪಾಸಾಯಿತು

27 'ಸೇಂದಿ ಅಂಗಡಿಗಳನ್ನು ಸರ್ಕಾರಿ ರಸ್ತೆ ಬದಿ... ಬೇಕು ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಎರಡು ಯಾ ... ರು ಬೇರೆ ಅಂಗಡಿಗಳು ಇರುವಲ್ಲಿ ಇಡಬೇಕು' ಎಂಬ ಠರಾವನ್ನು ಮೆ. ಎ ಬಿ ಚಂಗಪ್ಪನವರು ಸೂಚಿಸಿದಾಗ—ಪ್ರತ್ಯೇಕ ಸ್ಥಳದಲ್ಲಿ ಅಂಗಡಿ ಇದ್ದರೆ ಕುಡಿಯುವದು ಕಡಿಮೆಯಾಗುವದು, ಕ್ರಿಮಿನಲ್ ಕೇಸ್‍ಗಳು ಕಡಿಮೆಯಾಗುವವು, ಕಳವು ಮಾಡಿದ ಮಾಲುಗಳನ್ನು ಅಂಗಡಿಯವರು ತೆಗೆದುಕೊಳ್ಳುವದಿಲ್ಲವದು ಎಂದು ಮುಂತಾಗಿ ಮಾತಾಡಿದರು.

ಮೆ ಪಿ. ಬಿ. ಮೇದಪ್ಪನವರು ಅನುಮೋದಿಸಿದರು

ಕೆಲವು ಅಂಗಡಿಗಳನ್ನು ವಿಚಾರಿಸಿ, ಸರ್ಕಾರದವರ ಅಭಿಪ್ರಾಯಕ್ಕೆ ಒಪ್ಪಿಕೊಳ್ಳುತ್ತಾರೆಂದು ಕಮಿಷನರು ಹೇಳಿದ ನಂತರ ಠರಾವು ವಾಪಸು ತೆಗೆದುಕೊಳ್ಳಲಾಯಿತು

28. 'ಊರುಡುವೆಗಳಲ್ಲಿ ಮರ ಇಲ್ಲದ ಕಡೆಗಳಲ್ಲಿ ಸ್ವಂತ ಉಪಯೋಗಕ್ಕೆ ಪೈಸಾರಿಯಿಂದ ಮರ ತೆಗೆದುಕೊಳ್ಳಲು ಬಿಡಬೇಕು' ಎಂಬ ಠರಾವನ್ನು ಮೆ. ಯಸ್ ... ನವರು ಮುಂದಿಟ್ಟು ಹೇಳಿದ್ದೇನೆಂದರೆ—ಊರುಡುವೆಯಲ್ಲಿ ಮರ ಇಲ್ಲದೆ ಇರುವಾಗ ಊರುಡುವೆಯ ಉದ್ದೇಶವೇ ತಪ್ಪುತ್ತಾಯಿತು. ಅಂಥಾ ಕಡೆಗಳಲ್ಲಿ ಊರುಡುವೆಯಿಂದ ದೊರೆಯುವಂತೆ ಪೈಸಾರಿಯಿಂದ ಮರ ತೆಗೆಯಲು ಬಿಡದೆ ಇಲ್ಲವಾದರೆ ಜನರಿಗೆ ಕಷ್ಟವಾಗಿ ಊರುಗಳು ಜನರಹಿತವಾಗುವವು.

ಮೆ. ಚಾ. ಕಾಳಪ್ಪನವರು ಅನುಮೋದಿಸಿದರು.

...ದುವೆಯಿಂದ ಜನರು ಸಿಕ್ಕಿಬಿದ್ದು ಮರಕಡಿದದ ...ಗ ಅಲ್ಲಿ ಮರ ಇಲ್ಲದಾಗಿರುವದಾಗಿದೆ; ಈ ರಿಯಾ...ಗ ...ನ್ನು ಪೈಸಾರಿಗೂ ಕೊಡಲಿಕ್ಕಾಗುವದಿಲ್ಲ; ಬಾಣೆಯಿಂ...ಳ ತನಿಖೆಮಾಡಿ ರಿಯಾಯಿತಿ ತೋರಿಸಬಹುದು, ಎಂ...ಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಹೇಳಿದರು.

...ಮರಗಳಿಲ್ಲದ ಊರುಡುವೆಗಳಿವೆ. ಅಂಥಾ ಕಡೆಗಳಲ್ಲಿ ...ಟ್ಟು ಹೋದಾಗ ಮಾತ್ರ ಪೈಸಾರಿಯಿಂದ ಮರ ತೆಗೆ...ಲು ಬಿಡುತ್ತಾರೆ. ಬದಲು ರೈತರಿಗೆ ಅವಶ್ಯಬಿದ್ದಾ...ತೆಗೆಯಲು ಬಿಡಬೇಕೆಂದು ಸಣ್ಣಪ್ಪನವರು ಉತ್ತರ...ರು.

...ಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು—ಠರಾವನ್ನು ವಿರೋಧಿ...ನೆಂದೂ, ತನಿಖೆಮಾಡುವ ಮಾತನ್ನೂ ವಾಪಸು ತೆಗೆದು...ರೆಂದೂ ಹೇಳಿದರು.

...ಟಿಗೆ ಹಾಕಿದಲ್ಲಿ, ಕರುಂಬೈಯ್ಯನವರು, ಬೆಳ್ಯಪ್ಪನವ...ಂಕಪ್ಪೈಯ್ಯನವರು, ಸಣ್ಣಪ್ಪನವರು, ಕುಶಾಲಪ್ಪನವರು, ...ಪ್ಪನವರು ಮತ್ತು ಕಾಳಪ್ಪನವರು ಠರಾವಿಗೆ ಪರವಾಗಿ ...ನಾಲ್ಕು ಉದ್ಯೋಗಸ್ಥರು, ಇಬ್ಬರು ಯೂರೋಪಿಯ...ಪ್ರಾಂಚರವರು ಮತ್ತು ಎ. ಬಿ. ಜಂಗಪ್ಪನವರು ವಿರೋಧ...ಯೂ ಓಟುಮಾಡಿದ್ದರಿಂದ ಠರಾವು ಪಾಸಾಗಲಿಲ್ಲ.

...೯. "ಗ್ರಾಮ ದೇವತೆಗಳಿಗೆ ಕೊಡಲ್ಪಟ್ಟಿರುವ ಭೂಮಿಗಳ...ನ್ನು ಆಯಾಯ ದೇವತೆಗಳ ಹೆಸರಿನಲ್ಲೇ ದಾಖಿಲು ಮಾ...ು" ಎಂಬ ಠರಾವನ್ನು ಮೆ. ಸಣ್ಣಪ್ಪನವರು ಸೂಚಿಸಿ, ಇ...ಗೆ ದೇವತೆಗಳಿಗೆ ಕೊಟ್ಟ ಭೂಮಿಯ ಪಟ್ಟೆಯು ಅದನ್ನು ...ವಿಸುತ್ತಾ ಬಂದವರ ಹೆಸರಿಗೆ ವರ್ಗಾಯಿಸಲ್ಪಟ್ಟಿದೆ, ...ಸರಿಯಲ್ಲ. ನ್ಯಾಯಕ್ಕೂ ಅದು ದೇವತೆಗಳ ಹೆಸರಿನ...ಇರಬೇಕು ಎಂದು ಮೊದಲಾಗಿ ಮಾತಾಡಿದರು.

ಮೆ. ಪಿ. ಬಿ. ಬೆಳ್ಯಪ್ಪನವರು ಅನುಮೋದಿಸಿದರು.

...ಕೆಲವು ಕಡೆಗಳಲ್ಲಿ ದೇವತೆಗಳಿಗೆ ಕಂದಾಯ ಮಾತ್ರ ತು... ಇನ್ನು ಕೆಲವು ಕಡೆಗಳಲ್ಲಿ ಭೂಮಿಯೇ ಹಕ್ಕಿದೆ... ಸನ್ನದುಗಳು ಕಾಣುವುದೇ ಇಲ್ಲ. ಅದನ್ನು ತನಿಖೆ...ತ್ತೇವೆ ಎಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಹೇಳಿದರ... ಸಣ್ಣಪ್ಪನವರು ಠರಾವನ್ನು ವಾಪಾಸು ತೆಗೆದುಕೊಂಡರು.

30. 'ಪೋಲೀಸು ಆಫೀಸರುಗಳು ಗ್ರಾಮಗಳಿಗೆ ಹೋ...ಗ ಲೈಸೆನ್ಸು ಕೋವಿಗಳನ್ನು ಇನ್ಸ್‌ಪೆಕ್ಟ್ ಮಾಡುವ...ಮಾಡಬೇಕು' ಎಂಬ ಠರಾವನ್ನು ಮೆ. ಸಣ್ಣಪ್ಪನವರು ಚ...ವ ಮುಂಚೆಯೇ ವಾಪಸು ತೆಗೆದುಕೊಂಡರು

31. '2ನೇ ಮತ್ತು 3ನೇ ದರ್ಜೆಯ ಮ್ಯಾಜಿಸ್ಟ್ರೇಟರು ...ಕ್ರಿಮಿನಲ್ ಕೇಸುಗಳಲ್ಲಿ ಸಾಕ್ಷಿಗಳ ವಾಂಗ್ಮೂಲಗಳ ...ಕನ್ನಡದಲ್ಲಿ ಬರಕೊಳ್ಳತಕ್ಕದು' ಎಂಬ ಠರಾವನ್ನು ಮೆ. ...ಪ್ಪನವರು ಸೂಚಿಸಿದರು. ಆಗ ಅವರು ಮಾತಾಡಿದ್ದೇ...—ಮೊದಲು ವಾಂಗ್ಮೂಲಗಳು ಕನ್ನಡದಲ್ಲೇ ಬರಕೊ...ಡುತ್ತಿದ್ದವು. ಈಗ ಸುಮಾರು 20 ವರ್ಷಗಳಿಂದ ಇಂ...ಗ್ಲೀಷಿನಲ್ಲಿ ಬರೆಯುವದಾಗಿದೆ. ಕೆಲವು ಸಾರಿ ಮ್ಯಾಜಿಸ್ಟ್ರೇ...ಸರಿಯಾಗಿ ತರ್ಜುಮೆ ಮಾಡಿ ಬರಕೊಳ್ಳುವದಿಲ್ಲ. ಇಂ...ಗ್ಲೀಷಿನಲ್ಲಾದರೆ ಕಕ್ಷಿಗಾರರಿಗೆ ಅದನ್ನು ಓದಿ ತಿಳಕೊಳ್ಳಲು ಕ...ಷ್ಟ. ಆದುದರಿಂದ ಕನ್ನಡದಲ್ಲಿ ಬರಕೊಳ್ಳುವದು ಅಗತ್ಯ.

ಮೆ. ಸಿ. ಕರುಂಬೈಯ್ಯನವರು ಅನುಮೋದಿಸಿದರು.

ಫೈನಾನ್ಸ್ ಮೆಂಬರು—ಪಬ್ಲಿಕಿನವರಿಂದಾಗಲೀ, ಬಾರ್ ಎಸೋಸಿಯೇಷನಿನಿಂದಾಗಲೀ ಸರ್ಕಾರಕ್ಕೆ ಫಿರ್ಯಾದುಗಳು ಬಂದಿರುವದಿಲ್ಲ. ಫಿರ್ಯಾದು ಬಂದಾಗ ಯೋಚಿಸಬಹುದು. ಧೀ...ರ್ಘಕಾಲದ ಪದ್ಧತಿಯನ್ನು ಈಗ ಬದಲಾಯಿಸಲು ವಿರೋಧಿ...ಸುತ್ತೇನೆ, ಎಂದು ಹೇಳಿದರು.

'ಬಾರ್ ಎಸೋಸಿಯೇಷನಿನಲ್ಲಿ ಅತೃಪ್ತಿ ಇದೆಯೆಂದೂ, ...ಠರಾವಿಗೆ ಉತ್ತೇಜನ ಕೊಡುತ್ತೇನೆಂದೂ ಮೆ. ಉತ್ತೈ...ಯ್ಯನವರು ಹೇಳಿದರು

ಮ್ಯಾಜಿಸ್ಟ್ರೇಟರುಗಳು ಸರಿಯಾಗಿ ಬರಕೊಳ್ಳುತ್ತಾರೆ. ಕನ್ನಡದಲ್ಲಿ ಬರದರೆ ಲಾಯರುಗಳಿಗೆ ತೊಂದರೆ ಇದೆ, ಮ...ತ್ತು ಅಪ್ಪೀಲು ಮಾಡಿದಾಗ ಮೇಲಿನ ಕೋರ್ಟುಗಳಿಗೂ ತೊಂದರೆಯಾಗುತ್ತೆ, ಎಂದು ಹೇಳಿ ಮೆ. ಮೇದಪ್ಪನವರು ಠ...ರಾವನ್ನು ವಿರೋಧಿಸಿದರು.

...ವ್ಯಾಜ್ಯಗಳು ಕಕ್ಷಿಗಾರರ ಹಿತಕ್ಕಲ್ಲದೆ ಲಾಯರುಗಳ ಪ್ರ...ಯೋಜನಕ್ಕಲ್ಲವಾದುದರಿಂದ ಕೈಫೇತುಗಳನ್ನು ಕನ್ನಡದಲ್ಲಿ ...ಬರಕೊಳ್ಳುವದು ಉತ್ತಮವೆಂದು ಮೆ. ವೆಂಕಪ್ಪಯ್ಯನ...ವರು ಹೇಳಿದರು.

...ಠರಾವಿಗೆ ಪರವಾಗಿ ಮೆ. ಗಳಾದ ಉತ್ತೈಯ್ಯನವರು, ಕ...ರುಂಬೈಯ್ಯನವರ, ಬೆಳ್ಯಪ್ಪನವರು, ವೆಂಕಪ್ಪೈಯ್ಯನವರು, ಸ...ಣ್ಣಪ್ಪನವರು, ಚಿಣ್ಣಪ್ಪನವರು, ಕುಶಾಲಪ್ಪನವರು, ಮುದ್ದಪ್ಪನ...ವರು, ಕಾಳಪ್ಪನವರೂ, ವಿರೋಧವಾಗಿ ನಾಲ್ಕು ಉ...ದ್ಯೋಗಸ್ಥರು, ಇಬ್ಬರು ಯೂರೋಪಿಯನರು, ಮೇದಪ್ಪನವ...ರು, ಪ್ರಾಂಚರು, ಓಟು ಕೊಟ್ಟರು. ಠರಾವು ಪಾ...ಸಾಯಿತು.

... "ಬಜೆಟ್ಟನ್ನು ಸರಿಪಡಿಸಲಿಕ್ಕೆ ಉಪಾಯವನ್ನು ಕಂ...ಡುಹಿಡಿಯಲು ಕಮಿಷನರು ಮತ್ತು ಇಬ್ಬರು ಉದ್ಯೋಗಸ್ಥರ ...ಕೌನ್ಸಿಲ್ ಮೆಂಬರುಗಳುಳ್ಳ ಒಂದು ಕಮಿಟಿಯನ್ನು ನೇ...ಮಿಸಬೇಕು" ಎಂಬ ಠರಾವನ್ನು ಮೆ. ಎ. ಬಿ. ಜಂಗಪ್ಪನವ...ರು ತೆಗೆದುಕೊಂಡರು.

33. "ಸರ್ಕಾರದ ಉತ್ಪತ್ತಿಯನ್ನು ಹೆಚ್ಚಿಸುವ ಮತ್ತು ಖರ್ಚನ್ನು ಕಡಿಮೆಮಾಡುವ ವಿಷಯ ವಿಚಾರಿಸಿ ಸಿಫಾರಸ್ಸು ಮಾಡಲು ಕಮಿಷನರು ಅಧ್ಯಕ್ಷರಾಗಿ ಇಬ್ಬರು ಚುನಾಯಿತ ಕೌನ್ಸಿಲು ಮೆಂಬರುಗಳುಳ್ಳ ಒಂದು ಕಮಿಟಿಯನ್ನು ನೇಮಿಸ ಬೇಕು" ಎಂಬ ಠರಾವನ್ನು ಮೆ. ಉತ್ತೈಯ್ಯನವರು ವಾಪಸು ತೆಗೆದುಕೊಂಡರು.

ಸೈಮನ್ ಕಮಿಷನ್ ಬಹಿಷ್ಕಾರ.

34. 'ಸೈಮನ್ ಕಮಿಷನು ಕೊಡಗು ಕೌನ್ಸಿಲಿನ ಸಹ ಕಾರ ಕೇಳದೆ ಇರುವ ವರೆಗೆ ಈ ಕೌನ್ಸಿಲಿಗೆ ಸದರಿ ಕಮಿಷನಿನಲ್ಲಿ ವಿಶ್ವಾಸವಿಲ್ಲ' ಎಂಬ ಠರಾವನ್ನು ಮೆ. ಎ. ಬಿ. ಜಂಗಪ್ಪನವರು ಸೂಚಿಸುವಾಗ ಹೇಳಿದ್ದೇನೆಂದರೆ—ಇಡೀ ಹಿಂದೂದೇಶದಲ್ಲಿ ಬಹಿಷ್ಕಾರದ ಚಳವಳ ನಡೆದಿದೆ. ನಾನು ಲೀಡರಪಕ್ಷಕ್ಕೆ ಸೇರಿದವನಲ್ಲ. ನಾನು ಒಬ್ಬ ಮುದ್ದುಗಾರ. ಲಾರ್ಡ್ ಬರ್ಕನ್ ಹೆಡ್ ಇವರುಗಳ ಭಾಷಣಗಳನ್ನು ಓದಿದ್ದೇನೆ. ಇತ್ತೀಚೆಗೆ ಇಂಡಿಯನ್ ಕೌನ್ಸಿಲ್ ಕಮಿಟಿಗಳಿಗೆ ತುಂಬಾ ರಿಯಾಯಿತಿ ತೋರಿಸಿದ್ದರೂ, 'ಇಂಡಿಯನ್ ಕಮಿಟಿಗೆ ಸೈಮನ್ ಕಮಿಷನಿನೊಂದಿಗೆ ಸರಿಸಮಾನತ್ವ ಕೊಟ್ಟಿರುವದಿಲ್ಲ. ಅವರಲ್ಲೂ ನಮ್ಮ ಕೌನ್ಸಿಲನ್ನು ಸಂಪೂರ್ಣ ಮರೆತಿರುತ್ತಾರೆ. ಇಲ್ಲಿಂದ ಕಮಿಟಿ ಕಳುಹಿಸಲು ಸ್ಥಳೀಯ ಸರ್ಕಾರದವರು ಏನೊಂದೂ ಪ್ರಯತ್ನ ನಡೆಸಿರುವಂತೆ ಕಾಣುವದಿಲ್ಲ.

ಮೆ. ಸಿ. ಯಸ್. ವೆಂಕಪ್ಪೈಯ್ಯನವರು ಅನುಮೋದಿಸಿದರು.

"ಸೈಮನ್ ಕಮಿಷನಿನಲ್ಲಿ ಈ ಕೌನ್ಸಿಲಿಗೆ ವಿಶ್ವಾಸವಿಲ್ಲ' ವೆಂಬ ಉಪಠರಾವನ್ನು ಮೆ. ಸಿ. ಯಸ್. ಉತ್ತೈಯ್ಯನವರು ಸಭೆಯ ಮುಂದಿಟ್ಟು ಹೀಗೆಂದರು—ಇಡೀ ಭೂಲೋಕದಲ್ಲೇ ಈಗ ರಾಜಕೀಯ ಮತ್ತು ಸಾಮಾಜಿಕ ಸುಧಾರಣೆಗಳುಂಟಾಗುತ್ತಿವೆ ಎಲ್ಲರನ್ನೂ ಸಹೋದರರಾಗಿ ಕಾಣುವದು ಹಿಂದೀಯರ ಸ್ವಭಾವವಾಗಿದೆ. ಬ್ರಿಟಿಷ್ ಆಡಳಿತೆಯಿಂದ ಇಂಡಿಯಾಕ್ಕೆ ಪ್ರಯೋಜನಗಳುಂಟಾಗಿವೆ. ಸಿವಿಲ್ ಸರ್ವಿಸಿನವರೂ ಒಳ್ಳೇ ಕೆಲಸಮಾಡಿರುತ್ತಾರೆ. ಬ್ರಿಟಿಷ್ ಆಡಳಿತವು ನಿರಂಕುಶ ಪ್ರಭುತ್ವಕ್ಕಿಂತ ಒಳ್ಳೇಯದು. ಆದರೆ ಬ್ರಿಟಿಷ್ ಸಾಮ್ರಾಜ್ಯದೊಳಗಿನ ಪ್ರಜಾಪ್ರಭುತ್ವ ಸರ್ಕಾರವು ಈಗಿನ ಬ್ರಿಟಿಷ್ ಸರ್ಕಾರಕ್ಕಿಂತ ಉತ್ತಮವಾದದ್ದು. ಅದರ ಹಿಂದೀಯರು ಪ್ರಜಾಪ್ರಭುತ್ವ ಸರ್ಕಾರಕ್ಕೆ ತಯಾರಾಗಿರುವರೆಂಬದನ್ನು ವಿಚಾರಿಸುವ ಹಕ್ಕು ಹಿಂದೀಯರಿಗೇ ಇರಬೇಕು. ಆದುದರಿಂದ ಹಿಂದೀಯರನ್ನು ರಾಯಲ್ ಕಮಿಷನಿನ ಮೆಂಬರುಗಳಾಗಿ ನೇಮಿಸಬೇಕಾಗಿತ್ತು. ಇಲ್ಲವಾದರೆ ಇಂಡಿಯನ್ ಪ್ರತಿನಿಧಿಗಳಿಗೂ, ಸೈಮನ್ ಕಮಿಷನಿಗೂ ರೌಂಡ್ ಟೇಬಲ್ ಕಾನ್‌ಫರೆನ್ಸು ಆಗಬೇಕು.

ಮೆ. ಪಿ. ಬಿ. ಬೆಳ್ಯಪ್ಪನವರು ಉಪ ಠರಾವನ್ನು ಅನುಮೋದಿಸಿದರು.

ಫೈನಾನ್ಸ್ ಮೆಂಬರು—ಒಂದು ವಿನಹ ಬಾಕಿ ಎಲ್ಲಾ ಪ್ರಾಂತಿಕ ಕೌನ್ಸಿಲುಗಳು ಕಮಿಷನಿನೊಂದಿಗೆ ಸಹಕರಿಸಲು ತೀರ್ಮಾನಿಸಿರುವವು. ಕೊಡಗು ಬಹುದೂರವಾಗಿರುವದರಿಂದಲೂ, ಕಮಿಷನಿಗೆ ಬಹಳ ಕೆಲಸವಿರುವದರಿಂದಲೂ, ಕಮಿಷನಿನವರು ಈ ದೇಶವನ್ನು ತತ್ಕಾಲ ಬಿಟ್ಟಿರಬಹುದು. ಕ್ರಮೇಣ ಈ ಪ್ರಾಂತ್ಯವನ್ನೂ ಗಣನೆಗೆ ತೆಗೆದುಕೊಳ್ಳದೆ ಇರಲಾರರು. ಆದುದರಿಂದ ಕಮಿಷನಿನಲ್ಲಿ ವಿಶ್ವಾಸವಿಲ್ಲವನ್ನುವದರ ಬದಲು ಇಲ್ಲಿಂದ ಪ್ರತಿನಿಧಿಗಳನ್ನು ಕಳುಹಿಸಲು ಅನುಕೂಲ ಕೊಡುವಂತೆ ಅವರನ್ನು ಕೋರುವದು ಉತ್ತಮವೆಂದು ಮಂತ್ರಾಗಿ ಹೇಳಿದರು.

ಮೆ. ಸಿ. ಯಸ್. ವೆಂಕಪ್ಪೈಯ್ಯನವರು—ಈ ಉಪ ಠರಾವು ಇದ್ದುದರಿಂದಲೇ ನಾನು ಠರಾವನ್ನು ಅನುಮೋದಿಸಿದ್ದೆ. ಸೈಮನ್ ಕಮಿಷನಿನ ನೇಮಕದಿಂದ ನಮ್ಮ ಆತ್ಮ ಗೌರವಕ್ಕೆ ಕುಂದುಕ ಉಂಟಾಗಿದೆ ಪಬ್ಲಿಕ್ ಅಭಿಪ್ರಾಯವನ್ನು ತಿರಸ್ಕರಿಸಿದರು. ಕಮಿಷನಿನಲ್ಲಿ ಹಿಂದೀಯ ಮೆಂಬರುಗಳನ್ನು ನೇಮಿಸಿದ ಮಾತ್ರಕ್ಕೆ ತೃಪ್ತಿಯಾಗಲಾರದು. ಹಿಂದೂ ದೇಶದ ಆಡಳಿತ ಕ್ರಮವನ್ನು ಹಿಂದೀಯರೇ ನಿಶ್ಚೈಸಬೇಕು. ನಮ್ಮ ಯೋಗ್ಯತೆಯನ್ನು ಪರಕೀಯರು ಪರೀಕ್ಷಿಸುವದೆಂದರೆ ನಮಗೆ ತುಂಬಾ ನಾಚಿಕೆಗೇಡು. ಬ್ರಿಟಿಷ್ ಸರಕಾರದವರು ಹಿಂದೀಯರಿಗೆ ಸ್ವರಾಜ್ಯ ಕೊಡಲು ವಾಗ್ದಾನ ಮಾಡಿರುವರು. ಅವರೆ ಮಾಂಟೇಗ್ಯು ಚೆಲ್ಮ್ಸ್‌ಫರ್ಡ ಸುಧಾರಣೆಯ ಪ್ರಸ್ತಾಪನೆಯಲ್ಲಿ ಹಿಂದೀಯರಿಗೆ ಹೆಚ್ಚಿನ ಸುಧಾರಣೆ ಕೊಡುವದನ್ನು ನಿಶ್ಚೈಸುವ ಹಕ್ಕು ಬ್ರಿಟಿಷ್ ಪಾರ್ಲಿಮೆಂಟಿಗೆ ಇದೆ ಎಂಬದನ್ನು ಇಂಡಿಯಾದ ಪ್ರಾದೇಶಿಕ ಧುರೀಣರು ವಿರೋಧಿಸುವರು. ನಾವು ಸಂಪೂರ್ಣ ಪ್ರಜಾಪ್ರಭುತ್ವ ಸರ್ಕಾರಕ್ಕೆ ಯೋಗ್ಯರಾಗಿದ್ದೇವೆ—ಎಂದು ಮಾತಾಡಿದರು.

ಮೆ. ಯಸ್. ಮುದ್ದಪ್ಪನವರು ಹೇಳಿದ್ದೇನೆಂದರೆ—ಹಿಂದೂ ದೇಶದ ಎಲ್ಲಾ ಪಾರ್ಟಿಗಳು ಕಮಿಷನನ್ನು ಬಹಿಷ್ಕರಿಸಲು ತೀರ್ಮಾನಿಸಿರುವರು. ಹಿಂದೀಯರ್ಯಾರೂ ಕಮಿಷನಿನ ಮೆಂಬರಾಗಿ ನೇಮಿಸಲ್ಪಡದೆ ಇರುವದು ತುಂಬಾ ಅತೃಪ್ತಿಕರ. ಬ್ರಿಟಿಷರ ಸಂಬಂಧವನ್ನೇ ತಪ್ಪಿಸಲು ನಾನು ಒಪ್ಪುವದಿಲ್ಲ. ಆದರೆ ಬ್ರಿಟಿಷರೊಂದಿಗೆ ನಮಗೆ ಸರಿಸಮಾನತ್ವ ಇರಬೇಕು ಹಿಂದೀಯರನ್ನು ಕಮಿಷನಿಗೆ ನೇಮಿಸಿದ್ದರೆ ಅದನ್ನು ಬಹಿಷ್ಕರಿಸುತ್ತಿರಲಿಲ್ಲ. ಬೇರೆ ಪ್ರಾಂತೀಕ ಕೌನ್ಸಿಲುಗಳಲ್ಲಿ ಉದ್ಯೋಗಸ್ಥರ ಒತ್ತಾಸೆಯಿಂದ ಕಮಿಷನನ್ನು ಸಹಕರಿಸಲು ತೀರ್ಮಾನಿಸಿರುವದಾಗಿದೆ ಅಲ್ಲಿಯ ಕೌನ್ಸಿಲು ಕಮಿಟಿಗಳಿಗೆ ಜನರ ಮುಂದಾಳುಗಳ ಒತ್ತಾಸೆ ಇಲ್ಲ.

ಮೆ. ಪಿ. ಬಿ. ಮೇದಪ್ಪನವರು—ಇಂಡಿಯಾ ಸರ್ಕಾರವು ಬ್ರಿಟಿಷ್ ಪಾರ್ಲಿಮೆಂಟಿಗೆ ಜವಾಬ್ದಾರಿಯಾಗಿದೆ. ಆದುದರಿಂದ ಬ್ರಿಟಿಷ್ ಪಾರ್ಲಿಮೆಂಟು ನಮಗೆ ಪರಕೀಯವಾಗುವದಿಲ್ಲ. ಕಮಿಷನಿನಲ್ಲಿ ಹಿಂದೀಯರಿಲ್ಲವೆಂಬುದರಲ್ಲಿ ಅರ್ಥವಿಲ್ಲ. ಪಂಜಾಬು ಕಮಿಟಿಯು ರಿಯಾಯಿತಿ ಕೇಳಿದ ಮೇಲೆ ಸ್ಥಿತಿಯು ಬದಲಾಗಿದೆ. ಬೇರೆ ಕೌನ್ಸಿಲುಗಳಲ್ಲಿ ಸಹಕಾರದ ಠರಾವು ಚಿಕ್ಕ ಬಹುಮತದಿಂದ ಮಾತ್ರ ಪಾಸಾದದ್ದಲ್ಲ. ಮದ್ರಾಸಿನಲ್ಲಿ ದೊಡ್ಡ ಬಹುಮತವಿತ್ತು. ಇತ್ತೀಚೆಗೆ ಇಂಡಿಯಾದ ಹಲವು ಮುಖಂಡರು ಸಹಕರಿಸುತ್ತಿರುವರು. ಈ ಸಂದರ್ಭವನ್ನು ನಾವು ಕಳಕೊಳ್ಳಬಾರದು. ಮಾಂಟೇಗ್ಯು ಚೆಲ್ಮ್ಸ್‌ಫರ್ಡ್ ಸುಧಾರಣೆಯ ಸಮಯದಲ್ಲಿ ನಮ್ಮನ್ನು ಮರೆತುಬಿಟ್ಟರು. ಆಗಿನಂತೆ ಈಗ ನಾವು ಸುಮ್ಮನಾಗಬಾರದು. ಕೊಡಗಿನ ಸ್ಥಿತಿಯು ವಿಶೇಷವಾದದ್ದು. ಇಲ್ಲಿ ನಮ್ಮ ಅಭಿಪ್ರಾಯ ಸೂಚಿಸಲು ನ್ಯಾಯವಾದ ರಾಜಕೀಯ ಸಂಸ್ಥೆಯೊಂದೂ ಇಲ್ಲ. ಠರಾವಿನ ಉದ್ದೇಶವು ಕಮಿಷನಿನೊಂದಿಗೆ ಸಹಕರಿಸಲು ಇಲ್ಲಿಂದ ಒಂದು ಕಮಿಟಿಮಾಡಬೇಕೆಂಬುದೆಂದೇ ನನಗೆ ತೋರುತ್ತದೆ. ನಮ್ಮ ಪ್ರಾಂತ್ಯದ ಉತ್ಪತ್ತಿಯು ಬಹಳ ಕಡಿಮೆಯಾದುದರಿಂದ ಸೈಮನರಂಥ ಬುದ್ಧಿವಂತರ ಆಲೋಚನೆ ತೆಗೆದುಕೊಳ್ಳುವದು ಅವಶ್ಯ. ಆದುದರಿಂದ ಠರಾವಿಗೆ ನನ್ನ ಸಹಾನುಭೂತಿ ಇದೆ. ಆದರ ಉಪಠರಾವನ್ನು ವಿರೋಧಿಸುತ್ತೇನೆ—ಅಂದರು.

ಮೆ. ಪಾರುವಂಗಡ ಕುಶಾಲಪ್ಪನವರು ಹೇಳಿದ್ದೇನೆಂದರೆ—ಸದರಿ ಕಮಿಷನಿನಲ್ಲಿ ಹಿಂದೀಯರು ಇರಗೊಡದೆ ಮಾಡಿದ್ದಕ್ಕೆ ಕೊಡಗು ದೇಶವು ಬಹಳ ವಿಷಾದಿಸುತ್ತದೆ. ಇಂಡಿಯಾದ ಮುಂದಾಳುಗಳ ಇರಾದೆಗೆ ಸರಕಾರವು ಕಿವಿಗೊಟ್ಟಿದ್ದರೆ ಸಾಮ್ರಾಜ್ಯಕ್ಕೆ ಬಹಳ ಕ್ಷೇಮವಾಗುತ್ತಿತ್ತಲ್ಲದೆ ನಮಗೆ ತಕ್ಕದಾದ ರಾಜಕೀಯ ರಚನೆ ಸಿಗುವುದೆಂಬ ಭರವಸೆಯು ಇರುತ್ತಿತ್ತು. ಇಂತಹ ಪರಿಸ್ಥಿತಿಗೆ ಸರಕಾರವೇ ಜವಾಬ್ದಾರರಲ್ಲದೆ ನಾವು ಮಾತ್ರ ಅಲ್ಲ. ಇಂಡಿಯಾ ಎಸೆಂಬ್ಲಿಯ ಪ್ರತಿನಿಧಿಗಳು ಬಹಿಷ್ಕರಿಸಿದ ಮೇಲ್ಪಂಕ್ತಿಯನ್ನು ಅನುಸರಿಸತಕ್ಕದ್ದು ನಮ್ಮ ಕರ್ತವ್ಯವಲ್ಲದೆ ವಿಶೇಷವೇನೂ ಇರುವದಿಲ್ಲ. ಈ ದೇಶವು ಕಳೆದ ಸುಮಾರು ಒಂದುನೂರು ವರ್ಷದ ಈ ಸರಕಾರದ ಆಡಳಿತದಿಂದ ಪ್ರಯೋಜನಕ್ಕಿಂತಲೂ ಮಿಗಿಲಾಗಿ ಅನ್ಯಾಯವನ್ನು ಅನುಭವಿಸುತ್ತಿದೆ. ನಮ್ಮನ್ನುದ್ಧಾರಿಸಬೇಕೆಂದು ಹಿರೀಕರು ಕರೆತಂದದಕ್ಕೆ ಈ ಸರಕಾರವು ಇತ್ತೀಚೆಗೆ ದೇಶವನ್ನು ಮೂಲೆಗೊತ್ತಿ ಮಟ್ಟಗೋಲು ಹಿಡಿಸುತ್ತಿದೆ ಎಂದರೆ ಅತಿಶಯವಲ್ಲ. ಕತ್ತಿ ಕೋವಿಯ ರಿಯಾಯಿತಿ ಇಟ್ಟಂದಿನಿಂದೀಚೆಗೆ ದೇಶದ ಹಿತವನ್ನು ಮರೆತು ದಬ್ಬಾಳಿಕೆ ಎಷ್ಟೋ ಆಗುತ್ತಿದೆ ತಾವಾಗಿ ನಮ್ಮ ಪವಿತ್ರ ನಿರಿಯ ಕಂದಾಯದ ಸನ್ನದು ನಿಯಮಗಳನ್ನು ಅಲ್ಲಗಳೆದು ಮೇಲಿಂದ ಮೇಲೆ ಕಂದಾಯ ಹೇರುತ್ತಿರುವದು, ಗೋವಧೆಗೆ ಎಡೆಗೊಡುತ್ತಿರುವದು, ಈಚೆಗೆ ರಾಜಕೀಯ ಮಾರ್ಪಾಡುಗಳು ತೂರಿದಾಗ ಈ ದೇಶವನ್ನು ಹಿಂದ ಹಾಕಿದ್ದು ಇತ್ಯಾದಿ ಅನ್ಯಾಯಗಳನ್ನು ನಾವು ಮರೆಯತಕ್ಕವಲ್ಲ. ಈ ಮಧ್ಯೆ ಸೈಮನ್ ಕಮಿಷನರ ಪರೀಕ್ಷೆಯಲ್ಲಿ ನಮ್ಮನ್ನು ಸೋಲಿಸುವ ಕಾರಣಗಳು ಕಾಣುತ್ತಿವೆ. ಇವೆಲ್ಲ ನಾವು ರಾಜಭಕ್ತರೆಂದು ಮಗ್ನರಾಗಿದ್ದುದರಿಂದ ಕಾರಣವಾಗಿದೆ. ಕೆಟ್ಟ ಮೇಲೆ ನಮಗ ಬುದ್ಧಿ ಹುಟ್ಟಿದೆ. ನಮ್ಮ ದೇಶವು ಹಿಂದೂ ದೇಶದೊಡನೆ ಸ್ವರಾಜ್ಯ ಸಂಗ್ರಾಮದಲ್ಲಿ ಒಂದಾಗಿದೆ. ಜವಾಬ್ದಾರೀ ಸರಕಾರವು ಕೂಡಲೇ ದೊರಕದೆ ಹೋದರೆ ಬ್ರಿಟಿಷ್ ಸಾಮ್ರಾಜ್ಯಕ್ಕೆ ಧಕ್ಕೆಯಾಗುತ್ತದೆ. ಅದಕ್ಕೆ ಎಡೆಕೊಡದೆ ಸರಕಾರವು ಕಣ್ತೆರೆದು ಸುಧಾರಣೆಯಿಂದ ಭದ್ರಪಡಿಸಬೇಕೆಂಬ ದೇಶದ ಅಭಿಪ್ರಾಯವನ್ನು ಇಷ್ಟು ಬಗೆಯಾಗಿ ನಾನು ಹೇಳುವುದಾಗಿದೆ.

'ಸೈಮನ್ ಕಮಿಷನಿನವರು ಉತ್ತಮತರದ ಆಡಳಿತ ಕ್ರಮವನ್ನು ಕೊಡುವರು ಬುದ್ಧಿವಂತರ ಆಲೋಚನೆಯನ್ನು ಬಿಡಬಾರದು ಬಹಿಷ್ಕಾರದಿಂದ ಗಳಿಯುವದನ್ನು ಹಿಂದಕ್ಕೆ ಬಿಟ್ಟಂತಾಗುವುದು. ಮೆ. ಮೇದಪ್ಪನವರ ಶಾಂತ ಸ್ವಭಾವದ ಭಾಷಣಕ್ಕೆ ಒಪ್ಪುತ್ತೇನೆ' ಎಂದು ಮೆ. ಟಿಪ್ಪಿಂಗ್ ರವರು ಹೇಳಿದರು.

ಮೆ. ಎ. ಬಿ. ಜಂಗಪ್ಪನವರು—ನಾವು ಈಗಾಗಲೇ ತಡವಾಗಿದ್ದೇವೆ. ಕಮಿಷನು ಕೆಲಸ ಪ್ರಾರಂಭಿಸಿದೆ. ನಮ್ಮ ಅಧ್ಯಕ್ಷರು, ಕಮಿಷನು ಮೊದಲು ಬಂದ ಸಮಯದಲ್ಲಿ ಇಲ್ಲಿ ಇದ್ದಿದ್ದರೆ ಇಲ್ಲಿಂದ ಕಮಿಟಿ ನೇಮಿಸಲು ಪ್ರಯತ್ನಿಸುತ್ತಿದ್ದರು. ನಮ್ಮಲ್ಲಿ ಬಹುಮತ ಚುನಾಯಿತ ಮೆಂಬರುಗಳು ಕಮಿಷನಿನೊಂದಿಗೆ ಸಹಕರಿಸದೆ ಇರುವದು ಸರಿಯಲ್ಲ. ಅದರಿಂದ ನಮ್ಮ ವಿಷಯಗಳೇನೂ ಕಮಿಷನಿಗೆ ಗೊತ್ತಾಗುವದಿಲ್ಲ. ಕಮಿಷನಿನೊಂದಿಗೆ ಸಹಕರಿಸಬೇಕು ಮಾಂಟೆಗ್ಯು ಚೆಮ್ಸ್ ಫರ್ಡರವರ ಮುಂದೆ ನಮ್ಮ ಹವಾಲುಗಳನ್ನು ಹೇಳಿಕೊಂಡದ್ದರಿಂದ ಈ ಕೌನ್ಸಿಲು ದೊರೆಯಿತು. ನಮ್ಮ ಸರ್ಕಾರಕ್ಕೆ ಹಣವಿಲ್ಲ. ನಾವು ಈಗ ಸಹಕರಿಸಿದರೆ ಇಂಡಿಯಾ ಸರ್ಕಾರವು ನಮ್ಮ ಸರ್ಕಾರವನ್ನು ನಡಿಸಲು ಹಣ ಕೊಡಬಹುದು ಎಂದು ಉತ್ತರ ಕೊಟ್ಟರು.

'ಠರಾವು ಸಹಕಾರವಾಗಿದ್ದರೆ ಸರ್ಕಾರವು ಒಪ್ಪುತ್ತಿತ್ತು. ಇದು ಅವಿಶ್ವಾಸವಾದ್ದರಿಂದ ಅದಕ್ಕೆ ವಿರೋಧಿಸುತ್ತೇನೆ' ಎಂದು ಕಮಿಷನರು ಪ್ರತ್ಯುತ್ತರ ಕೊಟ್ಟರು.

ಮೊದಲು ಮೆ. ಉತ್ತಯ್ಯನವರ ಉಪಠರಾವು ಓಟಿಗೆ ಹಾಕಲಾಗಿ, 1. ಉತ್ತಯ್ಯನವರು, 2. ಬೆಳ್ಯಪ್ಪನವರು, 3 ಕರುಂಬಯ್ಯನವರು, 4. ವೆಂಕಪ್ಪಯ್ಯನವರು, 5. ಸಣ್ಣಪ್ಪನವರು, 6. ಚಿಣ್ಣಪ್ಪನವರು, 7. ಕುಶಾಲಪ್ಪನವರು, 8. ಮುದ್ದಪ್ಪನವರು, 9. ಕಾಳಪ್ಪನವರು ಮತ್ತು 10. ಸಯ್ಯದ್ ಅಹ್ಮದ್ ರವರು ಪರವಾಗಿಯೂ, ನಾಲ್ಕು ಉದ್ಯೋಗಸ್ಥರು, ಇಬ್ಬರು ಯೂರೋಪಿಯನರು, 7. ಮೇದಪ್ಪನವರು, 8 ಎ. ಬಿ. ಚಂಗಪ್ಪನವರು ಮತ್ತು 9. ಪುಂಜರವರು ವಿರೋಧವಾಗಿಯೂ ಓಟುಕೊಟ್ಟು, ಮಂದಣ್ಣನವರು ಯಾವ ಕಡೆಗೂ ಓಟುಕೊಡದರಿಂದ 'ಸೈಮನ್ ಕಮಿಷನಿನ ಮೇಲೆ ವಿಶ್ವಾಸವಿಲ್ಲ'ವೆಂಬ ಉಪಠರಾವು ಪಾಸಾಯಿತು.

ಉಪಠರಾವು ಪಾಸಾದುದರಿಂದ ಮೆ. ಚಂಗಪ್ಪನವರ ಮೊದಲಿನ ಠರಾವು ಸ್ವತಂತ್ರವಾದ ಕಾರಣ ಅದನ್ನು ಓಟಿಗೆ ಹಾಕಲಿಲ್ಲ.

### ಕೊಡಗಿಗೆ ಹೆಚ್ಚಿನ ಸುಧಾರಣೆಗಳು.

35. "ಕೊಡಗು ದೇಶವು ಸಂಪೂರ್ಣ ಪ್ರಜಾಜವಾಬ್ದಾರಿ ಸರ್ಕಾರಕ್ಕೆ ಯೋಗ್ಯವಾಗಿದೆ ಮತ್ತು ದೊಡ್ಡ ಪ್ರಾಂತ್ಯಗಳಿಗೆ ಕೊಡುವ ಸುಧಾರಣೆಗಳನ್ನು ಈ ಪ್ರಾಂತ್ಯಕ್ಕೂ ಕೊಡಬೇಕು" ಎಂಬ ಠರಾವನ್ನು ಸಭೆಯ ಮುಂದಿಟ್ಟು ಮೆ. ಎ. ಬಿ. ಚಂಗಪ್ಪನವರು ಅಂದದ್ದೇನೆಂದರೆ—ನಮ್ಮ ಪ್ರಾಂತ್ಯದವರು ವಿದ್ಯಾಭ್ಯಾಸದಲ್ಲಿ ಬೇರೆ ಯಾವ ಪ್ರಾಂತ್ಯದವರಿಗೂ ಹಿಂದೆಬಿದ್ದಿರುವದಿಲ್ಲ. ನಮ್ಮ ಹಿತವನ್ನು ಸರ್ಕಾರದವರು ಕಾಪಾಡುವರೆಂದು ನಂಬಿದ್ದೆವು. ಆದರೆ ಅವರು ನಮ್ಮ ಕೈಬಿಟ್ಟರು. ನಮ್ಮನ್ನು ಕಾಡು ಜನರಂತೆ ಎಣಿಸಿದರು. ಸೈಮನ್ ಕಮಿಷನು ನಮ್ಮ ಕೌನ್ಸಿಲನ್ನು ಕೌನ್ಸಿಲಂತೆ ಕಾಣಲಿಲ್ಲ. ನಾವು ಜವಾಬ್ದಾರಿ ಸರ್ಕಾರಕ್ಕೆ ಯೋಗ್ಯರಾಗಿದ್ದರೂ, ನಾವು ಬಹು ರಾಜಭಕ್ತಿಯುಳ್ಳವರಾದುದರಿಂದ ನಮಗೆ ಹೆಚ್ಚಿನ ಸುಧಾರಣೆ ದೊರೆಯಲಿಲ್ಲ. ಅಳುವ ಮಗುವಿಗೇ ಹಾಲು ದೊರೆಯುವದಾಗಿದೆ. ನಮ್ಮ ದೇಶದ ಸರ್ಕಾರದ ಉತ್ಪತ್ತಿಯು ಚಿಕ್ಕದಾದರೆ ಅದಕ್ಕೆ ಸರಿಯಾದ ಖರ್ಚು ಮಾಡಿಕೊಳ್ಳಬಹುದು.

ಮೆ. ಸಿ ಯಸ್. ಉತ್ತಯ್ಯನವರು ಠರಾವನ್ನು ಅನುಮೋದಿಸಿ ಹೀಗೆಂದರು —ಇಂಪೀರಿಯಲ್ ಸರ್ಕಾರದವರು ಜವಾಬ್ದಾರಿ ಸರ್ಕಾರ ಕೊಡಲು ಮಾತುಕೊಟ್ಟಿರುವರು. ಆದ್ದರಿಂದ ನಾವು ತಯಾರಾಗಿದ್ದೇವೋ ಎಂದು ನೋಡಬೇಕು. ಅದಕ್ಕೆ ನಾವು ಯೋಗ್ಯರಾಗಿದ್ದೇವೆ ಎಂಬುದರಲ್ಲಿ ಸಂಶಯವಿಲ್ಲ. ಬೇರೆಕಡೆಗಳಂತೆ ನಮ್ಮಲ್ಲಿ ಕೋಮುವಾರು ಪಂಗಡಗಳಿಲ್ಲ. ಕೊಡವರು, ಕೊಡವೇತರರು ಎಂಬ ಪಂಗಡದ ಮಾತು ಕೆಲವರಿಂದ ಕೇಳಬಹುದು. ಅದು ಬಹು ಸ್ವಲ್ಪ ಮಂದಿಯ ಮಾತು. ಅದರಲ್ಲಿ ತಿರುಳಿಲ್ಲ. ದೇಶವು ಒಗ್ಗಟ್ಟಾಗಿಯೇ ಇದೆ. ಒಟ್ಟಿಗೆ ಸರಿಯಾಗಿ ಕೋಟನ್ನು ಕತ್ತರಿಸಿಕೊಳ್ಳಬಹುದಾದುದರಿಂದ ಹಣದ ಅಭಾವದ ಮಾತು ಅಡಚಣೆಯಾಗುವಂತಿಲ್ಲ. ದೊಡ್ಡ ಸಂಬಳದ ಮಂತ್ರಿಗಳು ಬೇಕಾಗಿಲ್ಲ. ಉತ್ಪತ್ತಿಗೆ ಸರಿಯಾಗಿ ಸಂಬಳಕೊಡಬಹುದು.

ಇದು ಸ್ಟೇಟ್ಯೂಟರಿ ಕಮಿಷನಿಗೆ ಸೇರಿದ ವಿಷಯವಾದುದರಿಂದ ನನಗೆ ಏನೂ ಹೇಳಲಿಕ್ಕಿಲ್ಲವೆಂದು ಕಮಿಷನರು ಅಂದರು.

ಮೆ. ಯನ್. ಮುದ್ದಪ್ಪನವರು—ನಾನು ಈ ಠರಾವಿಗೆ ವಿರೋಧಿಸುವೆನಾದರೂ ನಾವು ಸ್ವರಾಜ್ಯಕ್ಕೆ ಅರ್ಹರಲ್ಲವೆಂದು ಹೇಳುವದಿಲ್ಲ. ಆದರೆ ನಮಗೆ ಪ್ರತ್ಯೇಕ ಸರ್ಕಾರ ನಡಿಸಲು ಸಾಧ್ಯವಿಲ್ಲವೆಂದು ನನ್ನ ಅಭಿಪ್ರಾಯ. ಬೇರೆ ಪ್ರಾಂತ್ಯಗಳಿಗೆ ಕೊಟ್ಟಿರುವ ದ್ವಿಮುಖಿ ಸರ್ಕಾರವನ್ನು ನಮ್ಮ ಇಲ್ಲಿ ನಡಿಸಲು ಎಂದಿಗೂ ಆಗಲಿಕ್ಕಿಲ್ಲ. ಬೇರೆ ಇರುವದಾದರೆ ನಮಗೊಂದು ಕೌನ್ಸಿಲೂ, ಮಂತ್ರಿಗಳೂ, ಸಿಬ್ಬಂದಿಯೂ ಬೇಕು. ಅದರ ಖರ್ಚು ತಡೆಯಲಾರೆವು. ನಾವು ಕಾಡು ಜನರಂತೆ ಎಣಿಸಲ್ಪಟ್ಟಿರುವದಿಲ್ಲ. ಪ್ರತ್ಯೇಕ ಸರ್ಕಾರ ನಡಿಸಲಿಕ್ಕಾಗುವದೋ ಎಂಬ ಸಂಶಯವು ಸರ್ಕಾರಕ್ಕೂ ಇದೆ. ಮದ್ರಾಸು ಪ್ರಾಂತ್ಯಕ್ಕೆ ಸೇರಿಕೊಳ್ಳುವದರಿಂದಲೇ ನಮಗೆ ಅಭಿವೃದ್ಧಿ. ಬೇರೆ ಇದ್ದರೆ ದೊಡ್ಡ ಉದ್ಯೋಗಸ್ಥರನ್ನು ವರ್ಗಾಯಿಸಲಿಕ್ಕಾಗುವದಿಲ್ಲ. ಉತ್ಪತ್ತಿ ಕಡಿಮೆ. ಅದರಲ್ಲೂ ಅಬ್ಕಾರಿ ಉತ್ಪತ್ತಿಯನ್ನು ಕ್ರಮೇಣ ಬಿಡಬೇಕಾಗಿದೆ. ಕಾಫಿಯ ಮೇಲೆ ಕಂದಾಯ ಹೆಚ್ಚಿಸಿ ದೊರೆಯಬಹುದಾದ 50 ಸಾವಿರ ರೂಪಾಯಿಯೂ ಸೆಕ್ರೆಟೆರಿಯಟ್ ಮೊದಲಾದ ಹೆಚ್ಚು ಖರ್ಚಿಗೆ ಸಾಲದು. ಈಗ ಪ್ರತ್ಯೇಕ ಸರ್ಕಾರ ಒಪ್ಪಿಕೊಂಡು ಸಂಶರ ವಾಪಸು ಮಾಡುವದು ಎರಡರಷ್ಟು ಕೆಟ್ಟದ್ದು. ಹೈಕೋರ್ಟು, ಜಡ್ಜಿಗಳನ್ನು ಇಡುವದು ಮೊದಲಾದ ತೊಂದರೆಗಳನ್ನು ನಿವಾರಿಸಲಿಕ್ಕಾಗುವದಿಲ್ಲ. ಗಟ್ಟಿಗ ಉದ್ಯೋಗಸ್ಥರ ಅಭಿಪ್ರಾಯ ಸಿಕ್ಕುವದು ಕಷ್ಟ. ನಮ್ಮ ಇಲ್ಲಿಯ ವೈದ್ಯ ಇಲಾಖೆಯ ಉದ್ಯೋಗಸ್ಥರು ಅಷ್ಟು ಉತ್ತಮ ದರ್ಜೆಯವರಲ್ಲ. ನಾವು ಹಲವು ಸಂಸ್ಥೆಗಳಿಗಾಗಿ ಬೇರೆ ಪ್ರಾಂತ್ಯಗಳಿಗೆ ವಂತಿಗೆ ಕೊಡಬೇಕಾಗುವದು. ಸಣ್ಣ ಪ್ರದೇಶವಾದುದರಿಂದ ಮಂತ್ರಿಗಳು ಮತ್ತು ಉದ್ಯೋಗಸ್ಥರು ಪಕ್ಷಪಾತವಿಲ್ಲದೆ ಕೆಲಸ ಮಾಡಲು ಅಸಾಧ್ಯ. ಪ್ರಜಾ ಜವಾಬ್ದಾರಿ ಸರ್ಕಾರವು ಕೆಲವರ ಕೈವಶವಾದರೆ ಅದರಿಂದ ನಿರಂಕುಶ ಪ್ರಭುತ್ವಕ್ಕಿಂತಲೂ ಕೆಡುಕುಂಟಾಗುವದು. ಆದುದರಿಂದ ದೊಡ್ಡ ಪ್ರಾಂತ್ಯದೊಂದಿಗೆ ಸೇರಿಕೊಳ್ಳುವದು ಉತ್ತಮ. ಇಲ್ಲವಾದರೆ ಈಗ ಇರುವ ಹಾಗೆ ಇರುವದು ಒಳ್ಳೇದು—ಎಂದು ಮುಂತಾಗಿ ಮಾತಾಡಿದರು.

ಈಗ ತಾನೇ ಸೈಮನ್ ಕಮಿಷನಿನಲ್ಲಿ ವಿಶ್ವಾಸವಿಲ್ಲವೆಂಬ ಠರಾವು ಪಾಸಾಯಿತು. ಆ ಠರಾವನ್ನು ತಂದವರೇ ಈಗ ಹೆಚ್ಚಿನ ಸುಧಾರಣೆಯ ಠರಾವನ್ನು ತಂದಿರುವರು. ಮೆಂಬರುಗಳು ಜವಾಬ್ದಾರಿಯನ್ನು ಅರಿತುಕೊಂಡಂತೆ ಕಾಣುವದಿಲ್ಲವೆಂದು ಮೆ. ಪುಂಜರವರು ಹೇಳಿದರು.

ಮೆ. ಪಿ ಬಿ ಮೇದಪ್ಪನವರು ಮಾತಾಡಿದ್ದೇನೆಂದರೆ—ನಮಗೆ ಹಲವು ತರದ ಕಷ್ಟಗಳಿರುವದರಿಂದಲೇ ಸೈಮನ್ ಕಮಿಷನಿನೊಂದಿಗೆ ಸಹಕರಿಸಬೇಕಾಗಿತ್ತು. ನಮಗೆ 5 ವರ್ಷದಿಂದ ಎಡ್ವೈಸರಿ ಕೌನ್ಸಿಲಿನ ಅನುಭವ ಮಾತ್ರವಿದೆ. ದೊಡ್ಡ ಪ್ರಾಂತ್ಯಗಳಿಗೆ ಜವಾಬ್ದಾರಿ ಕೌನ್ಸಿಲಿನ ಅನುಭವವು 1919 ರಿಂದಲೇ ಇದೆ. ಈ ಕೌನ್ಸಿಲು ದ್ವಿಮುಖಿ ಸರ್ಕಾರಕ್ಕೆ ವಿರೋಧವಿದೆ. ಅದು ಬಹು ಕೆಟ್ಟದ ಅನುಭವ. ಠರಾವಿನ ಮೇರೆ ದೊಡ್ಡ ಪ್ರಾಂತ್ಯಗಳಿಗೆ ಈಗ ಕೊಟ್ಟಿರುವ ಮಾರ್ಪಾಡುಗಳು ಎಂದು ಅರ್ಥವಾಗುತ್ತವೆ. ಕೆಲವರು, ಒಂದು ದಿನ ಮದ್ರಾಸಿಗೆ ಸೇರುವ, ಇನ್ನೊಂದು ದಿನ ಮೈಸೂರಿಗೆ ಸೇರುವ, ಮತ್ತೊಂದು ದಿನ ಕರ್ನಾಟಕ್ಕೆ ಸೇರುವ, ಎನ್ನುತ್ತಾ ಬದಲಾಗುತ್ತಿದ್ದಾರೆ. 1923 ರಲ್ಲಿ ಮದ್ರಾಸಿಗೆ ಸೇರುವದರ ವಿಷಯ ಚೆನ್ನಾಗಿ ಚರ್ಚಿಸಿ, ಪ್ರತ್ಯೇಕ ಇರುವಂತೆ ತೀರ್ಮಾನಿಸಲ್ಪಟ್ಟಿದೆ.

ಮೆ. ಸಿ. ಯನ್. ವೆಂಕಪ್ಪಯ್ಯನವರು ಅಂದದ್ದೇನೆಂದರೆ—ಜಮೀನ್ದಾರರ ಸಂಘದಿಂದ ಮಂಜೂರಾದ, ಇನ್ನು ಮುಂದೆ ಚರ್ಚೆಗೆ ಬರುವ ಮೆ. ಬೆಳ್ಯಪ್ಪನವರ ಠರಾವಿಗೆ ನನಗೆ ಸಂಪೂರ್ಣ ವಿಶ್ವಾಸ ಇರುವದಾದರೂ ಆ ಠರಾವಿನಲ್ಲಿ ಕೆಲವು ತಪಸೀಲ್‌ಗಳಿಗೆ ಈ ಸಭೆಯಲ್ಲಿ ಕೆಲವರು ಒಪ್ಪಲಾರರೆಂತ ತಿಳಿದು ಒಂದದ್ದರಿಂದ ಈ ದೇಶವು ಪೂರ್ಣ ಪ್ರಜಾಜವಾಬ್ದಾರಿಸರಕಾರಕ್ಕೆ ಅರ್ಹವಾಗಿದೆ ಎಂತ ಇರುವ ಈ ಠರಾವನ್ನು ಮಂಜೂರ್ ಮಾಡಿಕೊಳ್ಳುವದಕ್ಕೆ ವಿಶ್ವಾಸ ಕೊಡುವದಾಗಿದೆ. ಮೆ. ಮುದ್ದಪ್ಪನವರು ಸ್ವರಾಜ್ಯ ಬೇಡವೆಂತ ಹೇಳುವದಿಲ್ಲವೆಂತಲೂ ಆದರೆ ಕೊಡಗು ಪ್ರತ್ಯೇಕವಾಗಿರಬೇಕಾದರೆ ಒಬ್ಬರ ಆಳಿಕೆಯಲ್ಲಿ ಈಗ ಇರುವಂತೆಯೇ ಇರುವದೇ ಮೇಲೆಂತ ಹೇಳಿದ್ದು ಬಹಳ ವ್ಯಸನಕರ. ಪ್ರತ್ಯೇಕ ಸರಕಾರ ನಡಿಸಲು ಹಣ ಸಾಲದೆಂತ ಅನ್ನುತ್ತಾರೆ. ಒಬ್ಬರ ನಿರಂಕುಶ ಪ್ರಭುತ್ವದಲ್ಲಿ ನಡೆಯುವ ಖರ್ಚನ್ನೇ ಪ್ರಜಾಪ್ರತಿನಿಧಿಗಳ ಅನುಮತಿಯಿಂದ ಖರ್ಚುಮಾಡಿ ಎಂತ ನಾವು ಕೇಳುವದಾಗಿದೆ. ಮದ್ರಾಸಿಗೆ ಸೇರಲು ದೇಶದಲ್ಲಿ ಬಲವಾದ ವಿರೋಧವಿದೆ. ಆದರಿಂದಲೇ ತತ್ಕಾಲ ಪ್ರತ್ಯೇಕವಾಗಿಯೇ ಇದ್ದು ಪ್ರಜಾಜವಾಬ್ದಾರಿ ಸರಕಾರ ನಡಿಸಬೇಕೆಂತ ನಾವು

(೬ ನೇ ಪುಟದಲ್ಲಿ ಮುಂದುವರಿದಿದೆ)


# ಕರ್ಣಿಕ

ಎಗ್ಸ್ಟಿಮಿಕ್ಸ್ಚರ್

ಮಲೇರಿಯಾ, ಇನ್‌ಫ್ಲುಯೆಂಝಾ, ನಡುಕ್ಕ... ಆಡವಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲ ಶುದ್ಧಿಯಾಗಿ ಬೆವರು... ದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ... ಟಪ್ಪಾಲು ವೆಚ್ಚ ಬೇರೆ.

## ಸಾರಸಾಪರಿಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವ... ಇದು ಖಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿ... ರೂ. ೧—೦—೦. ಟಪ್ಪಾಲು ವೆಚ್ಚ ಬೇರೆ.

ಕಣ್ಣ ಕ ಬ್ರದರ್ಸ್

12—8

ದುಬಾಷ್ ಲೇನ್,

ಗಿರಗಾಂವ, ಮುಂಬಾಯಿ.



## ಬುಗುಡಿ, ರುದ್ರಾಕ್ಷಿ ಅಂಚಿನ ಸೀರೆಗಳು

ಈ ಸೀರೆಗಳು ಬೆಂಗಳೂರು ಅರಳೇಪೇಟೆ ಸೀರೆಗಳು... ಇರುವವು 18 ಮೊಳ ಉದ್ದವೂ ... ಅಗಲವೂ ಇರುವವು ಸೆಂದರವಾದ... ಯ ಸೆರಗೂ, ರುದ್ರಾಕ್ಷಿ ಬುಗುಡಿ ... ಇರುವದು. ಬಣ್ಣ ಎಂದಿಗೂ ಹೋ... ನೋಡಲು ಬಹು ಲಕ್ಷಣವಾಗಿರುವವು... ದನ್ನು ತರಿಸಿ ನೋಡಿರಿ. ಇಷ್ಟವಿಲ್ಲದಿದ್ದ... ಪಸು ತೆಗೆದುಕೊಳ್ಳುವೆವು.



1ನೇ ನಂಬರು ಸೀರೆ 1ಕ್ಕೆ 7—12—0

2ನೇ ನಂಬರು ಸೀರೆ 1ಕ್ಕೆ 6—8—0

ವಿಳಾಸ:—ಕ. ನಾಥಮುನಿ ಅಂಡ್ ಸನ್ಸ್,

168 ಜೈನಾ ಬಜಾರ್ ರೋಡ್,

52—21 ಮದರಾಸು.



## Xmas & New Year Presents!

### Toys for Children!

A set comprising of tiny, bright and beautiful tumblers, pots, spoons, etc. made of brass and bell metal, are quite suitable for the amusement and play of children.

Small set 37 articles Rs. 2—8—0 Medium set 32 articles Rs. 3—8—0.

Big set of 32 articles Rs. 4—8—0.

Securely packed in neat card board boxes. Postage extra.

Silk Sarees, Jackets, Headkerchieves, Embroidary Hand Bags & Money Purses-a Speciality

*Send your orders to:-*

**BHARADWAJ & CO.,**

**BROCADE, EMBROIDARY & SILK MANUFACTURERS,**

52—14 **Benares City.**



## "ಔಷಧ ಸೀಸೆಗಳಿಗಿಂತಲೂ ಬರೇ ಜೀವನ ಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು."

### ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರಬಲ್. ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯ ಚಂದ್ರಿಕೆ"... ಆರೋಗ್ಯಬೋಧಕವಾದ ಮಾಸ ಪತ್ರಿಕೆಯು, ನಿಮಗೆ ಆರೋಗ್ಯ ದೃಢಕಾಯರಾಗಿ ಜೀವಿಸುವ ಮಾರ್ಗವನ್ನೂ, ... ಡಾಕ್ಟರುಗಳಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟ ರೋಗ ವಿಚಾರವನ್ನೂ ಬೋಧಿಸುವುದು.

ಈ ಆರೋಗ್ಯ ಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ, ಬಹು ಕಾಲದಿಂದ ಶಸ್ತ್ರ ಚಿಕಿತ್ಸೆಯಲ್ಲಿಯೂ ಔಷಧ ಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಾಗಿ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಎಂಬೀ ಮಾಸ ಪತ್ರಿಕೆಯಲ್ಲಿ ಆಹಾರ ಕ್ರಮ, ರೋಗನಿವಾರಣೋಪಾಯಗಳು, ಶಿಶುಪೋಷಣೆ, ರೋಗಿಗಳ ಉಪಚಾರ ಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿತಂದೆಗಳು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವುವು. ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿ...

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ ಕನ್ನಡ, ತೆಲುಗು, ... ಇಂಗ್ಲೀಷ್ ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದು ... ವುದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾದುದಿಲ್ಲ.

52—11 **ಮ್ಯಾನೇಜರ್, ಆರೋಗ್ಯಚಂದ್ರಿಕೆ, 323 ತಂಬುಚೆಟ್ಟಿ ಬೀದಿ, ಮದರಾಸು.**

## ಸೂಚನೆ.

...ತ್ತರಿ ಹಬ್ಬದ ರಜೆಯ ದೆಸೆಯಿಂದ “ಕೊಡ... ಪತ್ರಿಕೆಯು ಈ ತಾ. 30ರ ಸಂಚಿಕೆಯು ಪ್ರಕಟಿ...ವದಿಲ್ಲವೆಂದು ಈ ಮೂಲಕ ವಾಚಕ ಮಹಾ...ಗೆ ತಿಳಿಸಲಾಗಿದೆ.

ಮೇನೇಜರು.

# ವರ್ತಮಾನ ಸಂಗ್ರಹ.

## ಒಳದೇಶ.

...ಶದ ಹಲವು ಕಡೆಗಳಿಗೆ ಕಳೆದ ಸೋಮವಾರ ಮತ್ತು ...ವಾರ ತಕ್ಕ ಮಟ್ಟಿಗೆ ಮಳೆ ಬಿದ್ದು ವ್ಯವಸಾಯಗಾರ...ಲ್ಪ ಸಮಾಧಾನವುಂಟಾಯಿತು.

...ಪ್ಯುಟಿ ಡೈರೆಕ್ಟರ್ ಮತ್ತು ರಿಜಸ್ಟ್ರಾರಾದ ಮೆ. ಕೆ ... ಸುಬ್ರಾಯರವರ ಪತ್ನಿಯವರು ಕಳೆದ ಶನಿವಾರ ರಾ...ಗಂಟೆಗೆ ಶಿವಾಧೀನರಾದರೆಂದು ತಿಳಿಸಲು ವ್ಯಸನಪಡು...

...ಮಂಗಲನಾಡಿನ ಸಹಕಾರಿ ಸಂಘಗಳ ಸೆಕ್ರೆಟರಿಗಳ...ು ಈ ತಾ 1 ರಿಂದ 10ರ ವರೆಗೆ ಮಡಿಕೇರಿಯಲ್ಲಿ ನ...ಂತಲೂ, 24 ಜನರು ತರಬೇತು ಹೊಂದಿದರೆಂತಲೂ ತಿ...ಕ್ಕೇವೆ

...ಳೆದ ಕೌನ್ಸಿಲು ಮೀಟಿಂಗಿನಲ್ಲಿ ಮೆ. ಗಳಾದ ಪಿ ಟಿ

...ಗೆ ಇನಾಮುಗಳನ್ನು ಹಂಚಿದರು. ಕಳೆದ ವರ್ಷದ ಪ್ರದರ್ಶನದಲ್ಲಿ ಸುಮಾರು 4 ಸಾವಿರ ರಾಸುಗಳು ಮಾತ್ರ ನೆರೆದಿದ್ದವೆಂತಲ್, ಈ ವರ್ಷ ಸುಮಾರ 6 ಸಾವಿರ ಬಂದಿದ್ದವೆಂತಲೂ ವರ್ತಮಾನ

ಜಮೀನ್ದಾರರ ಸಭಾ ಪ್ರಚಾರಕ ಕಮಿಟಿಯವರು ಈ ತಾ 17ರಲ್ಲಿ ಶನಿವಾರಸಂತೆಯಲ್ಲಿಯೂ, ತಾ 18ರಲ್ಲಿ ಫ್ರೇಜರ್‌ಪೇಟೆಯಲ್ಲಿಯೂ, ತಾ 19ರಲ್ಲಿ ಸೋಮವಾರಪೇಟೆಯಲ್ಲಿಯೂ ನಡೆಸಿದ ಪಬ್ಲಿಕ್ ಮೀಟಿಂಗುಗಳಲ್ಲಿ ಸಂಘವು ತಯಾರಿಸಿರುವ ಕೊಡಗಿನ ಮುಂದಿನ ರಾಜಕೀಯ ರಚನೆಗೆ ಸಂಪೂರ್ಣ ಒಪ್ಪುವ, ಸೈಮನ್ ಕಮಿಷನನ್ನು ಬಹಿಷ್ಕರಿಸುವ, ನೆಹರು ಕಮಿಟಿ ವರದಿಗೆ ಒತ್ತಾಸೆ ಕೊಡುವ, ಕೊಡಗು ಕೌನ್ಸಿಲಿನವರು ಸೈಮನ್ ಕಮಿಷನಿನ ಬಹಿಷ್ಕಾರ ರಠಾವನ್ನು ಮಂಜೂರು ಮಾಡಿದಕ್ಕೆ ಸಂತೋಷ ಸೂಚಿಸುವ, ಮತ್ತು ಸೈಮನ್ ಕಮಿಷನಿನ ಮುಂದೆ ಅಭಿಪ್ರಾಯ ಕೊಡಲು ಹೋಗುವವರು ಜನರ ಪ್ರತಿನಿಧಿಗಳಲ್ಲವೆಂದು ಪ್ರಸಿದ್ಧ ಪಡಿಸುವ ರಠಾವುಗಳು ಸರ್ವಸಮ್ಮತದಿಂದ ಮಂಜೂರಾದವು.

## ಹಿಂದೂದೇಶ.

ಪಂಜಾಬಿನ ಗವರ್ನರವರು 5ನೇ ಅಖಿಲಭಾರತ ಓರಿಯಂಟಲ್ ಕಾನ್‌ಫರೆನ್ಸನ್ನು ಈ ತಾ. 19ರಲ್ಲಿ ಲಾಹೋರಿನಲ್ಲಿ ತೆರೆದರು.

ಆಂಧ್ರದೇಶದ ಪ್ರಾಂತೀಕ ಕಾನ್‌ಫರೆನ್ಸು ಈ ತಾ 17 ...

ಉತ್ತರ ಮತ್ತು ಮಧ್ಯ ಚೈನಾದಲ್ಲಿ ಘೋರವಾದ ಕ್ಷಾಮ ಉಂಟಾಗಿದೆ. ಸುಮಾರು 12 ಮಿಲ್ಲಿಯ ಜನರು ಕ್ಷಾಮಪೀಡಿತರಾಗಿದ್ದಾರೆ. ಕ್ರಮೇಣ 20 ಮಿಲ್ಲಿಯ ಜನರು ಇದರ ಬಾಧೆಗೆ ಸಿಕ್ಕುವಂತಿದೆಯಂತೆ. ಈಗ ಅವರ ಕಷ್ಟ ಪರಿಹಾರಕ್ಕೆ 40 ಮಿಲಿಯ ಡಾಲರುಗಳು ಬೇಕಾಗಿವೆಯಂತೆ.

## ಹುತ್ರಿಹಬ್ಬದ ಮುಹೂರ್ತ ಪಟ್ಟಿ.

ಸನ್ 1928ನೇ ಇಸವಿ ನವಂಬರು ತಾರೀಖು 26ನೇ ಸೋಮವಾರ ದಿನ ಕೃತಿಕ ನಕ್ಷತ್ರದಲ್ಲು ಪಾಡಿ ಸುಬ್ರಾಯ ದೇವರ (ಇಗ್ಗುತ್ತಪ್ಪ ದೇವರ) ಕಲಾಡ್ಚ ಹಬ್ಬವಾಗುತ್ತೆ.

ಇದೇ ನವಂಬರು ತಾರೀಖು 27ನೇ ಮಂಗಳವಾರ ದಿನ ರೋಹಿಣಿ ನಕ್ಷತ್ರದಲ್ಲು ದೇವರ ಪೊಳುದು. ಸದರಿ ರಾತ್ರೆ 8 ಗಂಟೆಗೆ ನೆರೆಕಟ್ಟುವುದು, 9 ಘಂಟೆಗೆ ಕದಿರು ಕುಯ್ಯುವುದು, 10 ಘಂಟೆಗೆ ಊಟಮಾಡುವ ಶುಭಮುಹೂರ್ತ.

ಮೂರಣೆ ದಿನ ಅಂದರೆ ನವಂಬರು ತಾರೀಖು 28ನೇ ಬುಧವಾರ ದಿನ ಮೃಗಶಿರ ನಕ್ಷತ್ರದಲ್ಲು ನಾಡುಪೊಳುದು. ಸದರಿ ದಿನ ರಾತ್ರೆ 9 ಘಂಟೆಗೆ ನೆರೆಕಟ್ಟುವುದು, 10 ಘಂಟೆಗೆ ಕದಿರು ಕುಯ್ಯುವುದು, 11 ಘಂಟೆಗೆ ಊಟಮಾಡುವ ಶುಭಮುಹೂರ್ತ.

ಮುಕ್ತ್ರಾಯಿ ಇಲಾಖೆ, ಕೆ. ಚಂಗಪ್ಪ,



## ಕೊಡಗು ಪಾಯಿಂಟೆ ಮಂಡಲಿ.

(4ನೇ ಪುಟದಿಂದ ಮುಂದುವರಿದದ್ದು)

...ವವಾಗಿದೆ ಹೀಗೆ ನಡಿಸುವಾಗ ಬರುವ ಅನುಭವ ... ದೊಡ್ಡ ಪ್ರಾಂತ್ಯದೊಡನೆ ಸೇರಬೇಕೆಂತ ತೋರಬಹು... ಆಗ ಭಾಷಾವಾರು ಪ್ರಾಂತ್ಯವಾಗುವ ಕರ್ನಾಟಕಕ್ಕೆ ...ಸ್ಸಬಹುದು ಗಜೆಟೆಡ್ ಉದ್ಯೋಗಸ್ಥರನ್ನು ವ...ಯಿಸಬೇಕೆಂತ ಕೇಳಿದರೆ ಈಗಿನ ಸರಕಾರವು ಒಪ್ಪುವುದಿ... ಸ್ವಜಾತಿಸ್ವಾತಂತ್ರ್ಯವಿರುವ ಸರಕಾರವಾದರೆ ಸೇವಾಪ್ರಾಂ...ತದ ಆಫೀಸರುಗಳನ್ನು ಆಡಲು ಒಡಲು ಮಾಡಿಕೊಳ್ಳ...ದು ಮತ್ತು ಅಧಿಕಾರಿಗಳು ಮಂತ್ರಿಗಳ ಅಧೀನದಲ್ಲಿ...ರಿಂದ ಕಡಿಕೆಗ ಎಷ್ಟೆ ಕಡಿಮೆ ಪ್ರಜಾಜಮಾಬ್ದಾರಿ ಸ...ವನ್ನು ಪಡೆಯಲು ಒಂದು ನಿಮಿಷವಾದರೂ ತಡಮಾ...ಡು ಅದರಿಂದ ಆಗುವ ಅಲ್ಪ ಸ್ವಲ್ಪ ತೊಂದರೆಗಳ...ನ ವಹಿಸಬೇಕು ಮ. ಮೇದಪ್ಪನವರು ಮದ್ರಾಸಿಗೆ ...ರಿದ, ಕರ್ನಾಟಕಕ್ಕೆ ಸೇರಬಾರದ, ಎಂತ ಹೇಳು... ಪ್ರತ್ಯೇಕ ಆಡಳಿತ ನಡೆಸಲು ಹಣ ಸಾಲದೆಂತಲೂ ...ತ್ತಾರೆ ಸೈಮನ್ ಕಮಿಶನ್ ಮುಂದೆ ಹೋಗಿದ್ದ...ತರದ ಸುಧಾರಣೆ ಆಗಬಹುದೆಂತ ಅವರು ಹೇಳುತ್ತಿದ್ದ...ತ ಕಣ್ಣೀರು ಸುರಿಸುತ್ತಾರೆ ಪ್ರತ್ಯೇಕ ಸಂಸ್ಥಾ...ು ಹಣಸಾಲದಿದ್ದರೆ ಕಮಿಶನು ಇಂಗ್ಲೆಂಡಿನಿಂದ ಹಣ ಕೊಡುವದಿಲ್ಲ. ನಮ್ಮ ರಾಜಕೀಯ ರಚನೆಯನ್ನು ...ನಿರ್ಮಾಣ ಮಾಡಿಕೊಳ್ಳಬೇಕೇ ಹೊರತು ಬೇರೆಯವರಿಂದ ...ಯದಲ್ಲಿ ಸಹಾಯ ಸಿಕ್ಕೀತೆಂಬದು ಪ್ರಯೋಜನವಿಲ್ಲ ...ಯಷ್ಟೆ

...ಮೆ. ಪಿ ಟಿ ಕುಶಾಲಪ್ಪನವರು—ಪ್ರಜಾಜವಾಬ್ದಾರಿ...ರವು ಹೆಚ್ಚು ಖರ್ಚಿನದೇ ಆದರೂ ನಾವು ಅದನ್ನು ...ಬೇಕು ಇದೇ ಭೂಲೋಕವೇ ಅದನ್ನು ನಡಸಲು ...ಕ್ಕೆ ಸುತ್ತಿದೆ. ಈ ತರಹದ ಸರ್ಕಾರದಲ್ಲಿ ಎಲ್ಲಾ ಜನ ...ಸರಿಸುವದರಿಂದ ಅದನ್ನು ಒಯಸ್ಸದವಾಗಿ ನಡಿಸಲು ...ಾಗುವದು. ಜವಾಬ್ದಾರಿಯ ಕೌನ್ಸಿಲು ಸರ್ಕಾರ... ಕೊಡುವದರಿಂದ ಬ್ರಿಟಿಷ್ ಸಾಮ್ರಾಜ್ಯದ ಭದ್ರತೆಯ...ವದು —ಅಂದರು.

...ಎ ಬಿ ಚಂಗಪ್ಪನವರು—ರಾಯರುಗಳು ಅನಾವ...ಂಪರೆಗಳನ್ನು ಒಕ್ಕುತ್ತಾರೆ ನಮಗ ಹಣ ಸಾಲ...ದರೆ ನಮ್ಮಲ್ಲಿಂದ ಮೊದಲು ತೆಗೆದುಕೊಂಡು ಹೋ...ವರಿಯನ್ನು ಇಂಡಿಯನ್ ಸರ್ಕಾರದವರು ವಾಪಸು ...ಡುದು. ಪ್ರಯತ್ನಿಸಿ ಪ್ರತ್ಯೇಕ ಸರ್ಕಾರ ನಡಿಸಲು

ಸಾಧ್ಯವಿಲ್ಲವೆಂದು ತೋರಿದರೆ ದೊಡ್ಡ ಪ್ರಾಂತ್ಯದೊಂದಿಗೆ ಸೇರಿಕೊಳ್ಳಬಹುದು ಆದರೆ ಈಗ ಇರುವ ಹಾಗೆಯೇ ಇರುವದು ಒಳ್ಳೆಯದೆಂದು ಕೇಳಿ ನನಗೆ ಆಶ್ಚರ್ಯವಾಯಿತು— ಎಂದು ಉತ್ತರ ಕೊಟ್ಟರು.

ರಠಾವು ಓಟಿಗೆ ಹಾಕಲಾಗಿ ಮೆ. ಗಳಾದ—1 ಚಂಗಪ್ಪನವರು, 2 ಉತ್ತಯ್ಯನವರು, 3 ಕರುಂಬಯ್ಯನವರು, 4 ಮಂದಣ್ಣನವರು, 5. ಬೆಳ್ಯಪ್ಪನವರು, 6 ವೆಂಕಟಯ್ಯನವರು, 7 ಸಣ್ಣಪ್ಪನವರು, 8 ಚಿಣ್ಣಪ್ಪನವರು, 9 ಕುಶಾಲಪ್ಪನವರು, 10 ಸಯ್ಯದ್ ಅಹ್ಮದ್‌ರವರು ಮತ್ತು 11, ಕಾರಪ್ಪನವರು ಪರವಾಗಿಯೂ, 1 ನಿಕಲ್ಸ್‌ರವರು 2. ಟಿಪ್ಪಿಂಗ್‌ರವರು ಮತ್ತು 3 ಮುದ್ದಪ್ಪನವರು ವಿರೋಧವಾಗಿಯೂ ಓಟುಕೊಟ್ಟರು ಉದ್ಯೋಗಸ್ಥರೂ, ಮೇದಪ್ಪನವರು ಮತ್ತು ಪೂಂಬಿವರು ಯಾರ ಕಡಗೂ ಓಟುಕೊಡಲಿಲ್ಲ ರಠಾವು ಪಾಸಾಯಿತು.

(ಮುಂದುವರಿಯುವುದು)

## “ಕೊಡಗು” ಕಂಪೆನಿಯ ಜನರಲ್ ಮೀಟಿಂಗು.

ಕೊಡಗು ಕಂಪೆನಿಯ ಶೇರುದಾರರ ವಾರ್ಷಿಕ ಜನರಲ್ ಮೀಟಿಂಗು ಇದೇ ತಿಂಗಳು 10ರಲ್ಲಿ ವೀರರಾಜಪೇಟೆ ತಾಲೂಕು ಕಚ್ಚೇರಿ ಮೈದಾನದ ಒಳಿ ನಡೆಯಿತು ಡೈರೆಕ್ಟರುಗಳ ಬೋರ್ಡಿನ ಅಧ್ಯಕ್ಷರಾದ ಮ. ಸಿ ಯನ್ ವೆಂಕಪ್ಪಯ್ಯನವರೇ ಮೀಟಿಂಗಿನ ಅಧ್ಯಕ್ಷರಾಗಿದ್ದರು

1 ಡೈರೆಕ್ಟರುಗಳ ರಿಪೋರ್ಟನ್ನು ಓದಿ ಚರ್ಚಿಸಲಾಯಿತು.

ಮೆ. ಬಿ ಯಂ. ಸುಬ್ಬಯ್ಯನವರು ಡಿಪ್ರಿಸಿಯೇಶನ್ ಫಂಡಿನ ಹಣವನ್ನು ಬೇರಾಗಿಡ ಇಡಬೇಕೆಂದು ಹೇಳಿದ್ದಕ್ಕೆ ಅಧ್ಯಕ್ಷರು ಈ ವಿಷಯ ಆಡಿಟರನ್ನು ಕೇಳಿ ಪತ್ರಿಕೆಯ ಮುಖಾಂತರ ವಿವರಿಸುತ್ತೇನೆಂದು ಹೇಳಿದರು

ಮೆ ಸುಬ್ಬಯ್ಯನವರು ಪತ್ರಿಕೆಯ ಚಂದಾಹಣ ಬಾಕಿ ಇರುವುದನ್ನು ಶೀಘ್ರವಾಗಿ ವಸೂಲು ಮಾಡಬೇಕೆಂದು ಕೇಳಿಕೊಂಡರು. ಡೈರೆಕ್ಟರುಗಳು ಈ ವಿಷಯ ಏಜೆಂಟರುಗಳ ಮೂಲಕ ವಸೂಲಾತಿಗ ಆದಷ್ಟು ಪ್ರಯತ್ನ ಪಡುವರೆಂದೂ, ಆದರೆ ಇಂಥಾ ಪತ್ರಿಕೆಯ ಕಾರ್ಯಗಳಲ್ಲಿ ಚಂದಾ ಹಣವು ಪೂರ್ತಿ ವಸೂಲಾಗದೆ ಸ್ವಲ್ಪ ಬಾಕಿಯಾಗಿಯೇ ಹೋಗುವದು ಸಾಮಾನ್ಯವೆಂದೂ ಹೇಳಿದರು.

ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ.

ಆರ್ಡರ್ ಮಾಡಿ ನೋಡಿರಿ.

ಇನಾಮಿನ ಬಟ್ಟಲುಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ

ಎಲ್ಲಾ ಆರ್ಡರುಗಳನ್ನೂ ಭಲೋ ರೀತಿಯಿಂದಲೂ, ತುರತವಾಗಿಯೂ ಗ್ಯಾರಂಟಿಯೊಡನೆ ಜಾರಿ ಮಾಡಲಾಗುವದು.

ಕೇಶವಜೀ ದೇವಚಂದ್,
ಜ್ಯುಲ್ಲರ್ (ಕೆಟಲಾಗ್ ಮುಫತ್).
12—12 21 ಚೈನಾ ಬಜಾರ್ ರೋಡ್, ಮದರಾಸು.



ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ.

# ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

**1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ವ್ಯಾಪಾರದ ಫಲ**

## ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

ವಿಮೆದಾರರಿಗೆ ಹೆಚ್ಚಾಗಿ ಸಿಕ್ಕರುವ ಬೋನಸು: 1000 ರೂಪಾಯಿಂಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ—ರೂ. 25; 1000 ,, ಎಂಡೋಮೆಂಟ್ ,, —ರೂ. 20

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಚಿಂತೆಯಿಲ್ಲ.
ಪುನಹ ಒಂದು ಹೊಸ ಪಾಲಿಸಿಯನ್ನು "ಓರಿಯಂಟಲ್" ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವುಂಟು
ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಓರಿಯಂಟಲ್ ಬಿಲ್ಡಿಂಗ್ಸ್,
ನಂ. 1. ಸೌತ್ ಪರೇಡ್, ಬೆಂಗಳೂರು.

52—32

**ಯಲ್. ಆರ್. ಕೃಷ್ಣಸ್ವಾಮ್ಯಯ್ಯರ್.**
ಬ್ರಾಂಚ್ ಸೆಕ್ರೆಟರಿ.


Printed & published by P. I. Cheiliappa, at "Kodagu" Press, Mercara for "Kodagu" Ltd.

If not delivered please return to
"KODAGU" OFFICE, MERCARA.

# ಕೊಡಗು.

ಸತ್ಯೇನ ಧರ್ಮದಯಯಾ ವಿದ್ಯಾ ಶ್ರೀಃ ಪ್ರಯತ್ನತಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ವಾರ್ಷಿಕ ಚಂದಾ ರೂ. ೩–೮–೦.

ಸಂಪಾದಕ–ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೮] ಮಡಿಕೇರಿ, ೧೯೩೮ನೇ ಇಸವಿ ಡಿಸೆಂಬರ್ ತಾರೀಖು ೧೬ನೇ ಶುಕ್ರವಾರ [ಸಂಚಿಕೆ ೨೮

## JUST ARRIVED.

**Guns.**

12 Bore D. B. B. L. Guns @ Rs. 145, 140, 130 & 100 each.
12 " S. B. B. L. Guns @ " 70, & 52–8–0 each.
12 " D. B. M. L. " @ " 70 each

**Cartridges.**

Eley's Shot Cartridges Rs 12–8–0 per 100
" Lg. & Sg " " 14–0–0 " "

Ball Cartriges Rs 16–0–0 per 100
Lethal Bullet " 32–0–0 " "
12bore Ballistite " 16–0–0 " "
1 lb tin F F Gun Powder Rs 1–14–0
½ " " " " 1– 0–0
¼ " " " " 0–10–0
Boxes of 250 M L Caps " 1–0–0 each.

**Selling fast. Buy requirements early.**

52–45 **SPENCER & CO. LTD.** Arms & Ammunition Dealers. **MERCARA.**

Post Box 423,
TRIPLICANE, MADRAS.

**MANUFACTURES AND DEALS IN ALL:—**

(1) Gemset Jewels, gold and silver articles of all patterns.
(2) Race Cups, Caskets, Medals, etc., for presentation purposes.
(3) Trovels, Keys, Locks, etc., for ceremonial purposes.

JEWELLER
BY
APPOINTMENT
TO
His Excellency
THE GOVERNOR
OF MADRAS.

Catalogue Free
to Bonafide Enquirers

UNDERTAKES:—

(1) Remaking or Remodelling of all sorts of old gemset jewels to latest patterns.
(2) Electro-plating, gilding and nickel-ling
(3) Buying old jewellery, or under-taking to effect sale.

# V. SUBRAMANIA IYER
# JEWELLER

52–13

**Gold-smith, Silver-smith, & Dealer in all Gemset Jewels.**

## ನೀವು ನಿರ್ಬಲಸ್ತರಾಗಿ ಯಾಕೆ ನರಳುವಿರಿ?

ಇಪ್ಪತ್ತು ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

## ಸಾಲಂಮಿಸ್ರಿ ಮುರಬ್ಬ

ಸೇವನೆಯಿಂದ ಎಂಥಾ ಧಾತು ಜನ್ಮವಿಕಾರಗಳನ್ನು, ನರಗಳ ಶಕ್ತಿ, ಕುಂದಿಹೋಗಿರುವದನ್ನು ಮೆದುಳಿನ ಬಲಹೀನತೆಯನ್ನು ಇಂಥಾ ರೋಗಗಳನ್ನೆಲ್ಲಾ ಯಕ್ಕಿಗಾಗುಂತೆ ಹೋಗಲಾಡಿಸಕಕ್ಕ ತನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸುತ್ತದೆ. ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ಮನುಷ್ಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ಯಾರೂ ತರಿಸಿ ನೋಡಬಹುದು. ಒಂದು ಡಬ್ಬಿ ೧೫ ದಿನಗಳ ಸೇವನೆಯಿಂದಲೇ ಇದರ ಗುಣವು ತೋರಬರುವುದು. ೩-೩ ಡಬ್ಬಿಗಳ ಸೇವನೆಯಿಂದ ಜನ್ಮಾಂತ್ಯದವರೆಗೂ ಸಂಪೂರ್ಣ ಗುಣವನ್ನುಂಟುಮಾಡುವದು ನಮ್ಮ ಟ್ರೇಡ್ ಮಾರ್ಕು ನೋಡಿ ಡಬ್ಬಿ ತೆಗೆದುಕೊಳ್ಳಿರಿ. ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಅವಶ್ಯಕವಿರುತ್ತೆ.

ಕ್ರಯ ಡಬ್ಬಿ ೧ಕ್ಕೆ ೨–೦–೦. ಟಪ್ಪಾಲು ಖರ್ಚು ೧ರಿಂದ ೩ ಡಬ್ಬಿಗಳವರೆಗೆ ೦–೮–೦.

**ಡಿ. ಮನ್ನಾಲಾಲ್,**

12–7 ಡೆಲ್ಲಿ ಸೇಟೀವ್ ದಾಕ್ಟರು, ಸಾಲಂಮಿಸ್ರಿ ಮುರಬ್ಬ ಫಾರ್ಮಸಿ, ಬೆಂಗಳೂರು ಸಿಟಿ.

## ಅ ಪೂ ರ್ವ ಸಂ ದ ರ್ಭ.

ಹಾಳಾದ ಪೌರುಷವನ್ನು ಪುನಃ ಸಂಪಾದಿಸಬೇಕಾದರೆ ಇದೀಗ ಅಪೂರ್ವ ಸಂದರ್ಭ.

## ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ, ಮಲಬದ್ಧತೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಪಡಿಸುವವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ! ಧರ್ಮಾರ್ಥ!!

## ಕಾ ಮ ಶಾ ಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ:—

ಆತಂಕನಿಗ್ರಹ ಔಷಧಾಲಯ,
52–19 ಚಿಕ್ಕಪೇಟೆ, ಬೆಂಗಳೂರು ಸಿಟಿ.

# ಕೊಡಗು.

ಸನ್ ೧೯೨೮ ನೇ ಇಸವಿ

ಡಿಸೆಂಬರ್ ತಾ. ೧೪ನೇ ಶುಕ್ರವಾರ.


## ಬರುವ ಕಾಂಗ್ರೆಸ್ ಮಹಾಸಭೆ.

ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ 43 ನೇ ಅಧಿವೇಶನವು ಈ ತಾ. 29 ರಿಂದ 31 ರವರೆಗೆ ಕಲ್ಕತ್ತಾದಲ್ಲಿ ನಡೆಯುವದು. ಅಖಿಲ ಭಾರತ ಖಿಲಾಫತ್ ಮಂಡಲಿಯೂ ಅಸೆಂಬ್ಲಿಯಲ್ಲಿ ಸ್ವರಾಜ್ಯ ಪಾರ್ಟಿಯ ಮುಂದಾಳಾಗಿರುವ ಪಂಡಿತ ಮೋತಿಲಾಲ್ ನೆಹರುರವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು. ಹಿಂದೂ ದೇಶದ ಮುಂದಿನ ರಾಜಕೀಯ ರಚನೆಯನ್ನು ಕುರಿತು ನೆಹರು ಕಮಿಟಿಯವರು ಬರೆದಿರುವ ವರದಿಯ ದೆಸೆಯಿಂದ ಪಂಡಿತ ನೆಹರುರವರ ಹೆಸರೇ ಈಗ ಇಡೀ ಹಿಂದೂ ದೇಶದಲ್ಲಿ ಮಾತ್ರವಲ್ಲ, ಭೂಲೋಕದಲ್ಲೇ ಎಲ್ಲರ ಬಾಯಿಯಲ್ಲಿರುವದಾಗಿದೆ. ಇಂಥಾ ಪ್ರಪಂಚ ಪ್ರಸಿದ್ಧ ಮುಖಂಡರನ್ನು ಹಿಂದೂ ದೇಶದ ರಾಜಕೀಯ ಬಿಕ್ಕಟ್ಟಿನ ಪರಿಸ್ಥಿತಿಯ ಕಾಲದಲ್ಲಿ ಕಾಂಗ್ರೆಸ್ ಮಹಾ ಸಭೆಯ ಅಧ್ಯಕ್ಷರಾಗಿ ಆರಿಸಿದ್ದು ಯೋಗ್ಯವಾಗಿದೆ. ಇವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಸಭೆಯು ಜಯಪ್ರದವಾಗುವದೆಂಬುದರಲ್ಲಿ ಸಂದೇಹವಿಲ್ಲ.

ಈ ವರ್ಷದ ಅಧಿವೇಶನದಲ್ಲಿ ಹಿಂದುಸ್ಥಾನದ ಭಾವಿ ರಾಜಕೀಯ ರಚನೆ ಯಾವ ತರಹದ್ದಿರಬೇಕೆಂಬ ಮಹತ್ವದ ವಿಷಯವು ತೀರ್ಮಾನಿಸಲ್ಪಡತಕ್ಕದಿದೆ. ಕಳೆದ ವರ್ಷ ನಡೆದ ಮದ್ರಾಸು ಕಾಂಗ್ರೆಸ್ಸಿನಲ್ಲಿ ಹಿಂದೂದೇಶದ ರಾಜಕೀಯ ರಚನೆಯನ್ನು ನಿರ್ಧರಿಸಲು ಸರ್ವ ಪಕ್ಷದ ಪ್ರತಿನಿಧಿಗಳನ್ನು ಸೇರಿಸಬೇಕೆಂತ ತೀರ್ಮಾನವಾಯಿತು. ಅದೇ ಮೇರೆ ಕಾಂಗ್ರೆಸ್ಸಿನ ಆ ವರ್ಷದ ಅಧ್ಯಕ್ಷರಾದ ಡಾಕ್ಟರ್ ಅನ್ಸಾರಿಯವರ ಅಧ್ಯಕ್ಷತೆಯಲ್ಲಿಯೇ ಸರ್ವಪಕ್ಷದ ಪರಿಷತ್ತೊಂದು ನಡೆದು ಈ ವರ್ಷದ ಕಾಂಗ್ರೆಸ್ಸಿಗೆ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವ ಪಂಡಿತ ಮೋತಿಲಾಲ್ ನೆಹರುರವರ ಪ್ರೆಸಿಡೆಂಟ್‌ತನದಲ್ಲಿ ರಾಜಕೀಯ ರಚನೆಯನ್ನು ತಯಾರಿಸಲು ಒಂದು ಕಮಿಟಿಯು ನೇಮಕವಾಗಿ ಅದರ ವರದಿಯು ಪ್ರಕಟವಾದದ್ದನ್ನು ಈ ಮೊದಲೇ ವಾಚಕರಿಗೆ ನಾವು ವಿವರಿಸಿದ್ದೇವೆ. ಹಲವು ಜಾತಿ ಮತ ಭೇದಗಳಿರುವ ಹಿಂದೂಸ್ಥಾನದಲ್ಲಿ ಐಕ್ಯ ಮತ್ಯದ ರಾಜಕೀಯ ರಚನೆಯು ಹಿಂದೀಯರಿಂದ ತಯಾರಿಸಲ್ಪಡುವದು ಅಸಾಧ್ಯವೆಂತ ಯೋಚಿಸಿದ್ದ ಹಿಂದೂದೇಶದ ಸ್ವರಾಜ್ಯ ವಿರೋಧಿಗಳಿಗೂ ಕೂಡ ಈ ವರದಿಯು ಆಶ್ಚರ್ಯವನ್ನುಂಟು ಮಾಡಿತು. ಮೇಲೆ ಹೇಳಿದಂತೆ ಈ ಕಮಿಟಿಯವರು ಭರತಖಂಡದ ಎಲ್ಲಾ ಮುಖ್ಯ ಸಂಗಡಗಳ ಪ್ರತಿನಿಧಿಗಳಾಗಿದ್ದರೂ ಒಮ್ಮತದ ವರದಿಯನ್ನು ತಯಾರಿಸಿ ಹಿಂದೂದೇಶದ ಅಭಿವೃದ್ಧಿಯ ಶತ್ರುಗಳಿಗೆ ತಕ್ಕ ಜವಾಬನ್ನು ಕೊಟ್ಟು ಹಿಂದೂಸ್ಥಾನದ ಗೌರವವನ್ನು ಉಳಿಸಿದರು.

ವರದಿಯನ್ನು ತಯಾರಿಸಿದವರು ದೇಶದ ನಿಜವಾದ ಪ್ರತಿನಿಧಿಗಳೆಂಬದು ಅದಕ್ಕೆ ಸಿಕ್ಕಿದ ಸರ್ವಮಾನ್ಯತೆಯಿಂದ ಪ್ರತ್ಯಕ್ಷವಾಯಿತು. ಕೆಲವು ಅಂಶಗಳಲ್ಲಿ ಭಿನ್ನಾಭಿಪ್ರಾಯಗಳು ಈಚೆಗೆ ತಲೆದೋರಿವೆ. ಮುಸಲ್ಮಾನ್ ಸಹೋದರರಲ್ಲಿ ಕೆಲವರು ತಮ್ಮ ಮತದವರ ಕ್ಷೇಮಚಿಂತನೆಯನ್ನು ಕಾಪಾಡಲು ತಕ್ಕಷ್ಟು ಭದ್ರತೆಗಳು ಈ ವರದಿಯಲ್ಲಿ ಇಲ್ಲವೆಂತ ಹೇಳುತ್ತಿರುವದು ವಿವಾದಕರ. ಡಾಕ್ಟರ್ ಅನ್ಸಾರಿ, ಮಹಮ್ಮದಾಬಾದಿನ ರಾಜರಂಥ ಮುಸಲ್ಮಾನ್ ಮುಖಂಡರ, ರಚನೆಯಿಂದ ತೃಪ್ತರಾಗಿರುವಾಗ ಮಹಮ್ಮದೀಯರ ಕ್ಷೇಮಕ್ಕೆ ಈ ವರದಿಯಿಂದ ಕೆಡುಕಿದೆಯೆಂತ ಹೇಳಲು ಎಳ್ಳಷ್ಟು ಎಡೆ ಇಲ್ಲ. ಈಗ ನಡೆಯುವ ಕಾಂಗ್ರೆಸ್ಸಿನ ಸಮಯದಲ್ಲೇ ಕಲ್ಕತ್ತಾದಲ್ಲಿ ಸೇರಲಿಕ್ಕಿರುವ ಮುಸ್ಲಿಮ್ ಲೀಗಿನಲ್ಲಿ ನೆಹರು ವರದಿಗೆ ಸಮ್ಮತಿ ಸಿಕ್ಕಬಹುದೆಂತ ನಂಬುತ್ತೇವೆ. ಕಾಂಗ್ರೆಸ್ಸಿನಲ್ಲಿ ನೆಹರು ರಿಪೋರ್ಟು ಒಪ್ಪಲಾಗುವದೆಂಬದಕ್ಕೆ ಸಂಶಯ ತೋರುವದಿಲ್ಲ. ಕಾಂಗ್ರೆಸ್ಸಿನಲ್ಲಿ ಸಮ್ಮತಿ ಸಿಕ್ಕವಾಗಲೇ ಮುಸ್ಲಿಮ್‌ಲೀಗಿನಲ್ಲಿ ನೆಹರು ಮುಂತಾದವರ ವರದಿಯ ರಚನೆಯನ್ನು ಸಾಧಿಸಿಕೊಳ್ಳುವದೊಂದೇ ಕೆಲಸ ಉಳಿಯುತ್ತದೆ. ಹಿಂದೂ ಮುಸಲ್ಮಾನರೊಳಗಿರುವ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಲಿಕ್ಕಿರುವ ಚಳವಳದ ಶಕ್ತಿಯನ್ನೂ, ಸಮಯವನ್ನೂ ಹಿಂದೂಸ್ಥಾನದ ಸ್ವಾತಂತ್ರ್ಯವನ್ನು ಕಸಕೊಂಡಿರುವ ಪರಕೀಯರಿಂದ ಬಿಡಿಸಿಕೊಳ್ಳಲು ಸರ್ವರೂ ಒಗ್ಗಟ್ಟಿನಿಂದ ಉಪಯೋಗಿಸಬಹುದು.

ವರದಿಗೆ ವಿರೋಧವಿರುವ ಇನ್ನೊಂದು ಅಭಿಪ್ರಾಯ ಯಾವದೆಂದರೆ:- 'ಹಿಂದೂಸ್ಥಾನಕ್ಕೆ ಬ್ರಿಟಿಷ್ ಸಾಮ್ರಾಜ್ಯದೊಳಗಿನ ಸ್ವಾತಂತ್ರ್ಯ ಸಾಕೆಂತ ಇರುವ ವರದಿಯ ನಿರ್ಣಯವು ತೃಪ್ತಿಕರವಲ್ಲ; ಬ್ರಿಟಿಷ್ ಸಾಮ್ರಾಜ್ಯದ ಸಂಬಂಧ ವಿಲ್ಲದಸ್ವಾತಂತ್ರ್ಯವೇ ಬೇಕು' ಎಂಬದೇ ಆಗಿದೆ. ಈ ತತ್ವವನ್ನು ಹಿಡಿದು ಚಳವಳ ನಡಿಸುತ್ತಿರುವವರ ಪೈಕಿ ಯಸ್. ಶ್ರೀನಿವಾಸ ಅಯ್ಯಂಗಾರರು ಒಬ್ಬ ಮುಖಂಡರಾಗಿದ್ದಾರೆ. ಕಾಂಗ್ರೆಸ್ಸಿನವರು ಮದ್ರಾಸಿನ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯದ ನಿರ್ಣಯವನ್ನು ಪಾಸು ಮಾಡಿರುವಾಗ್ಯೆ ಅದಕ್ಕಿಂತ ಕಡಿಮೆಯ ಧ್ಯೇಯವನ್ನು ಕಾಂಗ್ರೆಸ್ಸಿನವರು ಅಂಗೀಕರಿಸಬಾರದೆಂಬದೇ ಈ ಪಕ್ಷದವರ ವಾದವಾಗಿದೆ. ಪಂಡಿತ ಜವಾಹರ್ ಲಾಲ್ ನೆಹರುರವರೂ ಸಹ ಸಂಪೂರ್ಣ ಸ್ವಾತಂತ್ರ್ಯವನ್ನೇ ಸಾಧಿಸಬೇಕೆನ್ನುವವರಾಗಿದ್ದಾರೆ. ಆದರೆ ಅವರು ನೆಹರು ವರದಿಗೆ ವಿಶೇಷವಾಗಿ ವಿರೋಧ ಚಳವಳ ನಡಿಸುತ್ತಿರುವದಿಲ್ಲ. ಕಾಂಗ್ರೆಸ್ಸಿನ ಮುಂದಾಳುಗಳು ಯಾರೂ ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯಕ್ಕೆ ವಿರೋಧಿಸುವದಿಲ್ಲ. ಪಂಡಿತ ಮೋತಿಲಾಲ್ ನೆಹರುರವರೂ ಸಹ ಸಂಪೂರ್ಣ ಸ್ವಾತಂತ್ರ್ಯಕ್ಕೆ ವಿರೋಧಿಗಳಲ್ಲ. ಆದರೆ ಧ್ಯೇಯದ ವಿಷಯದಲ್ಲಿ ದೇಶದಲ್ಲಿ ಮತ ಭೇದಗಳಿರಬಾರದೆಂಬದಕ್ಕಾಗಿಯೇ ಹೆಚ್ಚಿನ ಮುಖಂಡರೆಲ್ಲಾ ನೆಹರು ವರದಿಯನ್ನು ಅಂಗೀಕರಿಸುವದಾಗಿದೆ. ಒಗ್ಗಟ್ಟಿನಿಂದ ಸಾಮ್ರಾಜ್ಯ ಸ್ವಾತಂತ್ರ್ಯವನ್ನು ಸಂಪಾದಿಸಿದರೆ ಸಂಪೂರ್ಣ ಸ್ವಾತಂತ್ರ್ಯವನ್ನು ಅನಂತರ ಪಡಕೊಳ್ಳುವದು ಕಷ್ಟವಾಗಲಾರದು.

ಈ ವಾದ ಬಲವಾಗಿ ಹುಟ್ಟುವ ಮುಂಚೆಯೇ ಪಂಡಿತ ಮೋತಿಲಾಲ್ ನೆಹರುರವರನ್ನು ಈ ಸಾರಿಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆರಿಸಿಕೊಂಡಿದ್ದರು. ಈ ವಾದ ಹುಟ್ಟಿದನಂತರ ದೇಶದವರಿಗೆ ತನ್ನ ಅಭಿಪ್ರಾಯವು ಸಮ್ಮತವಿಲ್ಲವೆಂತಾದರೆ ತನ್ನ ಅಧ್ಯಕ್ಷ ಪದವಿಯನ್ನು ಬಿಡಲು ತಯಾರಿದ್ದೇನೆಂತಲೂ ತನ್ನ ಮೇಲೆ ನಂಬಿಗೆ ಇದೆಯೋ ಎಂಬದನ್ನು ತಿಳಿಸಬೇಕೆಂತಲೂ ಮೋತಿಲಾಲರು ದೇಶದವರಲ್ಲಿ ವಿನಂತಿ ಮಾಡಿಕೊಂಡರು. ಅದಕ್ಕೆ ಉತ್ತರವಾಗಿ ಹಿಂದೂಸ್ಥಾನದ 20 ಪ್ರಾಂತೀಕ ಕಾಂಗ್ರೆಸ್ ಕಮಿಟಿಗಳ ಪೈಕಿ 17 ಇವರಲ್ಲಿ ವಿಶ್ವಾಸವನ್ನು ಸೂಚಿಸಿದ್ದರಿಂದ ತಾನು ಅಧ್ಯಕ್ಷಸ್ಥಾನವನ್ನು ಬಿಡುವ ಅವಶ್ಯವಿಲ್ಲವೆಂತ ಇವರು ತಿಳಿಸಿರುತ್ತಾರೆ. ಈ ಸೂಚನೆಯಿಂದ ಕಾಂಗ್ರೆಸ್ ಮಹಾ ಸಭೆಯಲ್ಲೂ ಸಹ ಇವರ ಮುಂದಾಳುತನದಲ್ಲಿ ರಚಿಸಲ್ಪಟ್ಟ ರಾಜಕೀಯ ರಚನೆಯು ಅಂಗೀಕರಿಸಲ್ಪಟ್ಟೀತೆಂತ ಧೈರ್ಯದಿಂದ ಹೇಳಬಹುದು

ಕಾಂಗ್ರೆಸ್ಸಿನಲ್ಲಿ ಚರ್ಚೆಗೆ ಬರುವ ಇನ್ನೊಂದು ಮುಖ್ಯ ವಿಷಯವು ಸೈಮನ್ ಕಮಿಷನಿನ ಬಹಿಷ್ಕಾರವನ್ನು ಇನ್ನು ಯಾವ ಯಾವ ರೀತಿಯಿಂದ ಬಲಪಡಿಸಬೇಕೆಂಬದಾಗಿದೆ. ಈ ವಿಷಯದಲ್ಲಿ ಕಾಂಗ್ರೆಸ್ಸಿನ ತೀರ್ಮಾನವನ್ನು ನಡಿಸಲು ದೇಶವು ತಯಾರಾಗಬೇಕು.

ಕಲ್ಕತ್ತಾದಲ್ಲಿ ಹಿಂದೂಸ್ಥಾನದ ಎಲ್ಲಾ ಭಾಗಗಳಿಂದಲೂ ದೇಶಭಕ್ತರು ಸೇರಿ ಮಾಡುವ ಚರ್ಚೆ ತೀರ್ಮಾನಗಳು ದೇಶದ ಅಭ್ಯುದಯಕ್ಕೆ ಸಹಕಾರಿಯಾಗುವಂತೆ ಮಾಡಲು ದೇವರ ಕೃಪೆಯಾಗಲಿ ಎಂತ ಪ್ರಾರ್ಥಿಸುತ್ತೇವೆ. ಪ್ರಪಂಚದ ಜನಸಂಖ್ಯೆಯ ಐದನೇ ಒಂದು ಭಾಗವನ್ನು ಒಳಕೊಂಡ ಹಿಂದೂಸ್ಥಾನವು ಪಾರತಂತ್ರ್ಯದಿಂದ ತಪ್ಪಿಸಿಕೊಳ್ಳಲು ಮಾಡುವ ಪ್ರಯತ್ನಕ್ಕೆ ದೇವರು ಸಹಾಯ ಮಾಡದೆ ಇರಲಾರನು. ಕಾಂಗ್ರೆಸ್ಸಿನ ಕಾರ್ಯಗಳಲ್ಲಿ ದೇಶದವರೆಲ್ಲರೂ ಭಾಗಿಗಳಾಗುವದು ಸಾಧ್ಯವೂ ಇಲ್ಲ; ಅವಶ್ಯವೂ ಇಲ್ಲ. ಆದರೆ ದೇಶದ ಪರಾಧೀನತೆಯನ್ನು ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವಿರುವ ದಾರಿಗಳನ್ನು ಕಂಡುಹಿಡಿಯಲು ದೇಶದ ಮುಂದಾಳುಗಳಿಗೆ ಸಾಧ್ಯವಾಗಲಿ ಎಂತ ದೇಶದವರೆಲ್ಲರೂ ದೇವರಲ್ಲಿ ಪ್ರಾರ್ಥಿಸಿಕೊಳ್ಳಬೇಕೆಂತ ಕೋರುತ್ತೇವೆ

---

## ಮಹಾತ್ಮಗಾಂಧಿಯವರ ಸ್ವಚರಿತ್ರೆ.

### ೫ನೇ ಭಾಗದಲ್ಲಿ ೧೮ನೇ ಪ್ರಕರಣ.

### ಗ್ರಾಮ ವ್ಯವಸ್ಥಾ ಪ್ರವೇಶ.

ನಾವು ಪ್ರತಿಯೊಂದು ಶಾಲೆಯ ಆಡಳಿತವನ್ನೂ ಸಾಧ್ಯವಾದ ಮಟ್ಟಿಗೆ ಒಬ್ಬ ಹೆಂಗಸು ಮತ್ತು ಒಬ್ಬ ಗಂಡಸಿಗೆ ವಹಿಸಿದೆವು. ಈ ಸ್ವಯಂಸೇವಕರು ಔಷಧೋಪಚಾರದ ಮತ್ತು ಗ್ರಾಮನೈರ್ಮಲ್ಯದ ವ್ಯವಸ್ಥೆಯನ್ನು ನೋಡಿಕೊಳ್ಳಬೇಕಾಗಿದ್ದಿತು. ಸ್ತ್ರೀವರ್ಗಕ್ಕೆ ಸಂಬಂಧಪಟ್ಟ ಕೆಲಸವನ್ನು ಹೆಂಗಸರೇ ಮಾಡಬೇಕಾಗಿದ್ದಿತು.

ಔಷಧೋಪಚಾರದ ಕೆಲಸವು ಬಹು ಸುಲಭವಾಗಿದ್ದಿತು. ಹರಳೆಣ್ಣೆ, ಕ್ವಿನೈನ್ (ಜ್ವರದ ಗುಳಿಗೆ) ಮತ್ತು ಗಂಧಕದ ಮುಲಾಮು ಈ ಔಷಧಗಳು ಮಾತ್ರ ಸ್ವಯಂಸೇವಕರ ವಶದಲ್ಲಿರುತ್ತಿದ್ದುವು. ರೋಗಿಯ ಮನುಷ್ಯನ ನಾಲಿಗೆಯು ಬೆಳ್ಳಗಾಗಿದ್ದರೆ ಅಥವಾ ಅವನು ತನಗೆ ಅಜೀರ್ಣವೆಂದು ಹೇಳಿದರೆ ಅವನಿಗೆ ಹರಳೆಣ್ಣೆಯನ್ನು ಕೊಡುತ್ತಿದ್ದರು. ಜ್ವರವಿದ್ದವರಿಗೆ ಮೊದಲು ಸ್ವಲ್ಪ ಹರಳೆಣ್ಣೆಯನ್ನು ಕೊಟ್ಟು ಆ ಮೇಲೆ ಕ್ವಿನೈನನ್ನು ಕೊಡುತ್ತಿದ್ದರು. ಕುರು, ಕಜ್ಜಿ ಮುಂತಾದವುಗಳಿಂದ ಪೀಡಿತರಾದವರಿಗೆ ಆ ಭಾಗಗಳನ್ನು ಚೆನ್ನಾಗಿ ತೊಳೆದು ಗಂಧಕದ ಮುಲಾಮನ್ನು ಹಚ್ಚುತ್ತಿದ್ದರು. ಯಾವ ಔಷಧವನ್ನೂ ಮನೆಗೆ ತೆಗೆದುಕೊಂಡು ಹೋಗುವುದಕ್ಕೆ ಕೊಡುತ್ತಿರಲಿಲ್ಲ. ಹೆಚ್ಚಿನ ರೋಗವಿದ್ದ ಕಡೆ ಡಾ॥ ದೇವರ ಸಲಹೆಯಂತೆ ನಡೆಯುತ್ತಿದ್ದರು. ಅವರು ಪ್ರತಿಯೊಂದು ಕೇಂದ್ರಕ್ಕೂ ವಾರಕ್ಕೊಂದು ಬಾರಿ ಗೊತ್ತಾದ ದಿನ ಹೋಗುತ್ತಿದ್ದರು.

ಎಷ್ಟೋ ಮಂದಿ ಈ ಸುಲಭವಾದ ಚಿಕಿತ್ಸಾಕ್ರಮವನ್ನು ಉಪಯೋಗಿಸಿಕೊಂಡರು. ಅಲ್ಲಿ ಹರಡಿದ್ದ ಕಾಯಿಲೆಗಳು ಕಡಿಮೆಯಾಗಿದ್ದುವೆಂದೂ ಅವುಗಳ ನಿವಾರಣೆಗೆ ಸಾಧಾರಣ ಚಿಕಿತ್ಸೆಯು ಸಾಕಾಗಿತ್ತೆಂದೂ ದೊಡ್ಡ ವೈದ್ಯರ ಸಹಾಯವೇನೂ ಬೇಕಾಗಿರಲಿಲ್ಲವೆಂದೂ ನೆನಪಿನಲ್ಲಿಟ್ಟುಕೊಂಡರೆ ಈ ಕಾರ್ಯ ವ್ಯವಸ್ಥೆಯು ವಿಚಿತ್ರವಾಗಿ ಕಾಣಲಾರದು. ಜನಗಳಿಗಾದರೋ ಈ ಏರ್ಪಾಡು ಅತ್ಯನುಕೂಲವಾಗಿದ್ದಿತು.

ಗ್ರಾಮನೈರ್ಮಲ್ಯದ ಕೆಲಸವು ಕಠಿಣವಾಗಿದ್ದಿತು. ಜನರು ತಾವೇ ಏನು ಮಾಡಲೂ ಸಿದ್ಧರಾಗಿರಲಿಲ್ಲ. ಹೊಲದ ಕೂಲಿಗಾರರು ಕೂಡ ಸ್ವಂತವಾಗಿ ಝಾಡಮಾಲಿ ಕೆಲಸವನ್ನು ಮಾಡಲು ಸಿದ್ಧರಾಗಿರಲಿಲ್ಲ. ಆದರೆ ಡಾ. ದೇವರು ಸುಲಭವಾಗಿ ಎದೆಗುಂದುವವರಾಗಿರಲಿಲ್ಲ. ಒಂದು ಹಳ್ಳಿಯಲ್ಲಿ ಆದರ್ಶ ನೈರ್ಮಲ್ಯವು ಕಂಗೊಳಿಸುವಂತೆ ಅವರೂ ಸ್ವಯಂಸೇವಕರೂ ತಮ್ಮ ಶಕ್ತಿಯನ್ನೆಲ್ಲಾ ಉಪಯೋಗಿಸಿದರು. ಅವರು ಬೀದಿಗಳನ್ನೂ, ಅಂಗಳಗಳನ್ನೂ ಗುಡಿಸಿದರು. ಭಾವಿಗಳನ್ನು ಶುದ್ಧಿ ಮಾಡಿದರು. ಸುತ್ತಮುತ್ತಲಿನ ಗುಂಡಿಗಳನ್ನು ಮುಚ್ಚಿದರು. ಗ್ರಾಮಸ್ಥರು ತಮ್ಮಲ್ಲಿಯೇ ಸ್ವಯಂಸೇವಕರನ್ನು ಏರ್ಪಡಿಸುವಂತೆ ಒಲವಿನಿಂದ ಪ್ರೇರಿಸಿದರು. ಈ ಮಧುರ ಅನುಭವಗಳೊಡನೆ ಜನರ ಔದಾಸೀನ್ಯದ ಕಟುವಾದ ಅನುಭವಗಳೂ ಬರೆಯದೆ ಇರಲಿಲ್ಲ. ಕೆಲವು ಹಳ್ಳಿಯ ಜನರು ತಮಗೆ ಈ ರೀತಿಯ ಕೆಲಸವು ಇಷ್ಟವಿಲ್ಲವೆಂಬುದನ್ನು ಬಾಯಿಬಿಟ್ಟು ಹೇಳಿದುದು ನನಗೆ ಜ್ಞಾಪಕವಿದೆ.

ಇಂದಿಗೆ ಮುಂಚೆ ಎಷ್ಟೋ ಸಭೆಗಳಲ್ಲಿ ನಾವು ವರ್ಣಿಸಿರುವ ಅನುಭವವೊಂದನ್ನು ಇಲ್ಲಿ ವಿವರಿಸಿದರೆ ಅಪ್ರಸಂಗವಾಗಲಾರದು. ಭಿತಿಹರ್ವಾ ಎಂಬುದೊಂದು ಸಣ್ಣ ಹಳ್ಳಿ. ಅಲ್ಲಿ ನಮ್ಮ ಶಾಲೆಯಿದ್ದಿತು. ಅದರ ಹತ್ತಿರಲೇ ಇದ್ದ ಇನ್ನೂ ಸಣ್ಣ ಹಳ್ಳಿಯೊಂದಕ್ಕೆ ನಾನು ಹೋದಾಗ ಬಹು ಕೊಳಕಾದ ಬಟ್ಟೆಗಳನ್ನುಟ್ಟುಕೊಂಡ ಕೆಲವು ಹಾಗಸರನ್ನು ನಾನು ಕಂಡೆನು. ಅವರು ತಮ್ಮ ಬಟ್ಟೆಗಳನ್ನೇಕೆ ಒಗೆಯುವುದಿಲ್ಲವೆಂದು ಕೇಳಲು ನಾನು ಕಸ್ತೂರಿಬಾಯಿಯನ್ನು ಕೇಳಿದೆನು. ಆಕೆಯು ಅವರಲ್ಲಿ ಒಬ್ಬಳೊಡನೆ ಮಾತನಾಡಲು ಆ ಹೆಂಗಸು ಕಸ್ತೂರಿಬಾಯಿಯನ್ನು ತನ್ನ ಗುಡಿಸಿಲಿನೊಳಕ್ಕೆ ಕರೆದುಕೊಂಡು ಹೋಗಿ "ನೋಡಿ ಇಲ್ಲಿ ಬೇರೆ ಬಟ್ಟೆಯುಟ್ಟುಕೊಳ್ಳುವದಕ್ಕೆ ಪೆಟ್ಟಿಗೆಯೂ ಇಲ್ಲ, ಮಾಡವೂ ಇಲ್ಲ. ನಾನುಟ್ಟುಕೊಂಡಿರುವ ಸೀರೆಯೊಂದೇ ನನಗಿರುವುದು. ನಾನು ಅವನ್ನು ಒಗೆಯುವುದು ಹೇಗೆ? ಮಹಾತ್ಮಜಿಯವರಿಗೆ ಹೇಳಿ ನನಗಿನ್ನೊಂದು ಸೀರೆಯನ್ನು ತಂದುಕೊಡಬೇಕೆಂದು. ಆಗ ನಾನು ನಿತ್ಯವೂ ಮಿಂದು ಒಗೆದ ಬಟ್ಟೆಯನ್ನುಡುವೆನೆಂದು ಮಾತುಕೊಡುತ್ತೇನೆ." ಎಂದಳು.

ಇಂತಹ ಗುಡಿಸಲು ಇದೊಂದೇ ಅಲ್ಲ. ಹಿಂದೂಸ್ಥಾನದ ಎಷ್ಟೋ ಹಳ್ಳಿಗಳಲ್ಲಿ ಇಂತಹವು ಇವೆ. ಭರತಖಂಡದ ಲೆಕ್ಕವಿಲ್ಲದಷ್ಟು ಗುಡಿಸಲುಗಳಲ್ಲಿ ಜನರು ಒಂದು ಸಾಮಾನಿಲ್ಲದೆ ಮಾನಕ್ಕಾಗಿ ಮೈಮೇಲೆ ಹಾಕಿಕೊಂಡಿರುವ ಚಿಂದಿಯನ್ನು ಬಿಟ್ಟು ಬೇರೆ ಬಟ್ಟೆಯೊಂದಿಲ್ಲದೆ ಜೀವನ ನಡೆಸುತ್ತಾರೆ.

ಇನ್ನೊಂದು ಅನುಭವವನ್ನು ಇಲ್ಲಿ ತಿಳಿಸುತ್ತೇನೆ. ಚಂಪಾರಣ್ಯದಲ್ಲಿ ಹುಲ್ಲಿಗೂ, ಬಿದಿರಿಗೂ ಬರವಿಲ್ಲ. ಭಿತಿಹರ್ವಾದಲ್ಲಿ ಈ ಸಾಮಗ್ರಿಗಳಿಂದ ಶಾಲೆಯ ಗುಡಿಸಲನ್ನು ಕಟ್ಟಿದ್ದರು. ಯಾರೋ ಒಬ್ಬರು—ಹತ್ತಿರವಿದ್ದ ಜಮೀನ್ದಾರರ ಆಳುಗಳಲ್ಲಿ ಕೆಲವರಿರಬಹುದು—ಆ ಗುಡಿಸಲಿಗೆ ಎಂದೋ ರಾತ್ರಿ ಬೆಂಕಿ ಹಚ್ಚಿದರು. ಇನ್ನೊಂದು ಗುಡಿಸಲನ್ನು ಬಿದಿರಿನಿಂದಲೂ, ಹುಲ್ಲಿನಿಂದಲೂ ಕಟ್ಟುವುದು ಉಚಿತವಲ್ಲವೆಂದು ತೋರಿತು.

...ಲೆಯನ್ನು ಶ್ರೀ ಸೋಮಣ್ಣರು ಸರಿಯಾದ ಒಂದು ಮನೆ ...ನ್ನೇ ಕಟ್ಟಬೇಕೆಂದು ನಿಶ್ಚಯಿಸಿದರು. ಅವರು ಪಡುತ್ತಿ... ಶ್ರಮವನ್ನು ನೋಡಿ ಇತರರನೇಕರು ಅವರೊಡನೆ ಸೇರಿದ... ಹೀಗೆ ಒಂದು ಇಟ್ಟಿಗೆಯ ಮನೆಯು ಶೀಘ್ರದಲ್ಲಿಯೇ ...ವಾಯಿತು. ಇನ್ನು ಅದನ್ನೇನೂ ಸುಟ್ಟುಹಾಕುವ ಭ...ಏರಲಿಲ್ಲ.

ಈ ರೀತಿಯಾಗಿ ಸ್ವಯಂಸೇವಕರು ತಮ್ಮ ಶಾಲೆಗಳು, ...ಮ ನೈರ್ಮಲ್ಯ ವ್ಯವಸ್ಥೆ, ಔಷಧೋಪಚಾರ—ಇವುಗಳಿಂ... ಹಳ್ಳಿಯ ಜನರ ವಿಶ್ವಾಸವನ್ನೂ ಮನ್ನಣೆಯನ್ನೂ ಸಂಪಾ... ಅವರ ಮೇಲೆ ಸತ್ಪ್ರಭಾವವನ್ನು ಬೀರಲು ಶಕ್ಯರಾ...

ಆದರೆ ಈ ಗ್ರಾಮೋಜ್ಜೀವನ ಕಾರ್ಯವನ್ನು ಚಿರಸ್ಥಾಯಿ... ...ದ ಅಸ್ತಿಭಾರದ ಮೇಲೆ ನಿಲ್ಲಿಸಬೇಕೆಂಬ ನನ್ನ ಆಶೆಯು ...ಗೂಡಲಿಲ್ಲವೆಂದು ನಾನು ವಿಷಾದ ಪೂರ್ವಕವಾಗಿ ಒಪ್ಪಿ...ಳ್ಳಬೇಕು. ಸ್ವಯಂಸೇವಕರು ಕೆಲವು ಕಾಲ ಮಾತ್ರ ನಿಲ್ಲ... ಬಂದಿದ್ದರು. ಹೊರಗಿನಿಂದ ಇನ್ನೂ ಹೆಚ್ಚು ಮಂದಿ ...ರಕಲಿಲ್ಲ. ಸದಾ ನಿಂತು ಪ್ರತಿಫಲವಿಲ್ಲದೆ ಕೆಲಸಮಾಡು... ...ಜನರಾರೂ ವಿಹಾರದಲ್ಲಿಯೇ ದೊರಕಲಿಲ್ಲ. ಚಂಪಾರ...ದಲ್ಲಿ ನನ್ನ ಕೆಲಸವು ಮುಗಿದೊಡನೆಯೇ ಈ ಮಧ್ಯೆ ಬೇರೆ... ಹೊಂಚುಹಾಕುತ್ತಿದ್ದ ಕಾರ್ಯವು ನನ್ನನ್ನು ಸೆಳೆದೊಯ್ದಿ... ಆದರೂ ಚಂಪಾರಣ್ಯದಲ್ಲಿ ನಾಲ್ಕಾರು ತಿಂಗಳು ಮಾ... ಕೆಲಸವು ಎಷ್ಟು ಆಳವಾಗಿ ಬೇರೂರಿಕೊಂಡಿರೆ ಅದರ ಪ್ರ...ಪವು ಇಂದು ಕೂಡ ಅಲ್ಲಿ ಒಂದಲ್ಲದಿದ್ದರೆ ಇನ್ನೊಂದು ...ಪದಲ್ಲಿ ಕಾಣಬರುವುದು.

---



# ಜಯಕರ್ನಾಟಕ.

(ಸಚಿತ್ರ ಮಾಸಪತ್ರಿಕೆ.)

**ಸಂಪಾದಕರು—ಆಲೂರು ವೆಂಕಟರಾಯರು.**
**ಬಿ. ಎ. ಎಲ್‌ಎಲ್ ಬಿ.**

**...ರ್ಷಿಕ ವರ್ಗಣಿ ರೂ. ೫—೮—೦ (ಅಂಚೆವೆಚ್ಚ ಸೇರಿ.)**

**...೭ನೇ ಸಂಚಿಕೆ ಪ್ರಾರಂಭವಾಯಿತು.**

...ರ್ಕ ಹ. ೧೫ ಗೌರಿ ಹುಣ್ಣಿವೆ. ತಾ ೨೬-೧೧-೩೮. ೧ ಈ ವರ್ಷ ೧೨ ಫುಟಗಳನ್ನು ಹೆಚ್ಚಿಗೆ ಬೆಳೆಸಿರುವೆವು ...ಟ್ಟು ಫುಟಗಳು ೭೨. ೨. ದಪ್ಪಕಾಗದಲ್ಲಿ ಮುದ್ರಣ. ೩. ಉಂ...ಾದ ಮುದ್ರಣಕ್ಕೋಸ್ಕರ ಇನ್ನು ಮುಂದೆ ಜಯಕರ್ನಾಟ... ಮಂಗಳೂರಿನಲ್ಲಿ ಮುದ್ರಿಸುವೆವು. ೪. ವರ್ಷ ಮಧ್ಯ... ಚಂದಾದಾರರಾಗುವವರಿಗೆ ವರ್ಷಾರಂಭದಿಂದಲೇ ಸಂ...ಗಳು ಕೊಡಲ್ಪಡುವವು

...ಒಂದನೇ ಸಂಚಿಕೆಯಲ್ಲಿ ಒಂದ ಕೆಲವು ವಿಷಯಗಳು.

೧. ವಾಶ್ಚಾತ್ಯರ ಪ್ರಗತಿಯ ಕಲ್ಪನೆ, ೨. ಕರ್ನಾಟಕ ...ಟಕಗಳು, ೩. ನವೀನ ವೃತ್ತಗಳು, ೪. ರೂಪಗುಣ ಪ್ರ...ಂಸೆ, ೫. ಭಾರತೀಯ ಸಂಗೀತ ಶಾಸ್ತ್ರ, ೬. ಅಂಚೆವೆಚ್ಚ. (...re less)

ವ್ಯವಹಾರ ಮಾಡತಕ್ಕ ವಿಳಾಸ.—

**ವ್ಯವಸ್ಥಾಪಕ ಜಯಕರ್ನಾಟಕ,**
ಸಾಧನಕೇರಿ, ಧಾರವಾಡ.



---

## ಕೊಡಗು ಶಾಸನಸಭೆ ಮಂಡಲಿ.

(ಕಳೆದ ವಾರದಿಂದ ಮುಂದುವರಿದದ್ದು)

೪೦ 'ಮಡಿಕೇರಿ ಹೈಸ್ಕೂಲಿನ ಹೆಡ್ ಮಾಸ್ಟರ್ ಕೆಲಸ...ನ್ನ, ಕೊಡಗಿನ ಶಾಲೆಗಳ ಇನ್‌ಸ್ಪೆಕ್ಟರ ಕೆಲಸವನ್ನೂ ನೋ... ಒಬ್ಬ ಉದ್ಯೋಗಸ್ಥನನ್ನು ನೇಮಿಸಬೇಕು" ಎಂಬ ರ...ವನ್ನು ಮೆ ಎ. ಬಿ. ಚಂಗಪ್ಪನವರು ಸಭೆಯ ಮುಂದಿಟ್ಟ...ದ್ದೇನೆಂದರೆ—ಈಗ ಸ್ಕೂಲುಗಳಲ್ಲಿ ಡಿಸಿಪ್ಲಿನ್ ಚೆನ್ನಾಗಿ... ಇಂಗ್ಲಿಷ್ ಹುಡುಗರಿಗೆ ಇಂಗ್ಲಿಷ್‌ನವರೇ ಹೇಗೆ ಹೆ...ಸ್ಟರಾಗಬೇಕೆಂದು ಹೇಳುತ್ತಾರೋ ಹಾಗೆಯೇ ಕೊಡಗಿ... ವಿದ್ಯಾರ್ಥಿಗಳಿಗೆ ಕೊಡಗಿನವರೇ ಹೆಡ್ಮಾಸ್ಟರಾಗಬೇಕ... ಅವರು ಇಂಗ್ಲೆಂಡಿನಲ್ಲಿ ತರಬೇತಾಗಿದ್ದವರಾದರೆ ಒಳ್ಳೇ... ಈಗಿನ ಇನ್‌ಸ್ಪೆಕ್ಟರಿಗೆ ಎರಡು ಸರ್ಕಾರದವರು ಸಂಬ...ಳ, ಪೆನ್ಶನ್ ಕೊಡಬೇಕಾಗಿದೆ. ಇದರ ಲೆಕ್ಕ ಸರಿ ...ಗುವದಿಲ್ಲ. ಹಳೇ ಏರ್ಪಾಡಿನ ಮೇರೆ ಮಡಿಕೇರಿ ಹೈ...ಲಿನ ಹೆಡ್ಮಾಸ್ಟರೂ, ಶಾಲಾ ಇನ್‌ಸ್ಪೆಕ್ಟರೂ ಒಬ್ಬರೇ ಆ...ಗ ಕೆಲಸವು ಚೆನ್ನಾಗಿ ನಡೆಯುತ್ತಿತ್ತು. ಮಡಿಕೇರಿ ಹ...ಸ್ಕೂಲ್ ಗ್ರೇಡು ದೊಡ್ಡದು, ಇವೆರಡು ಉದ್ಯೋಗಗ... ಪ್ರತ್ಯೇಕ ಪ್ರತ್ಯೇಕ ಸಂಬಳ ಕೊಡುವದು ನಮ್ಮ ಸರ್ಕಾ...ನಷ್ಟ. ಬೇಕಾದರೆ ಇನ್ನೊಬ್ಬ ಸಬ್ ಅಸಿಸ್ಟಂಟ್ ಇ...ಕ್ಟರನ್ನು ನೇಮಿಸಿ ಸೂಪರ್‌ವೈಸರುಗಳನ್ನು ತೆಗೆದು ಹಾ...ಕುದು.

ಮೆ. ಮಂದಣ್ಣನವರು ಠರಾವನ್ನು ಅನುಮೋದಿಸಿದರು.

ಮೆ. ಯೇಟ್ಸ್‌ರವರು ಠರಾವನ್ನು ವಿರೋಧಿಸಿ ಹೀಗೆಂದ... —ಇದು ಹೊಸ ವಿಷಯವೇನೂ ಅಲ್ಲ. 1924ರಲ್ಲಿ ಈ ...ವು ಈ ಸಭೆಯ ಮುಂದೆ ಬಂದಿತ್ತು. ಈಗ ಹೆಚ್ಚಿನ ಕಾ...ಣವೇನೂ ಕೊಡಲ್ಪಟ್ಟಿರುವದಿಲ್ಲ. ನಾನು ಈಗ 13 ವ...ಳಿಂದ ಇನ್‌ಸ್ಪೆಕ್ಟರ್ ಕೆಲಸ ನೋಡುತ್ತಿರುವಲ್ಲಿ ಶಾಲೆ... ಡಿಸಿಪ್ಲಿನ್ ಹಾಳಾಗಿ ಕಾಣುವದಿಲ್ಲ. ಇನ್ನೊಬ್ಬ ಸ...ಬ್ ಅಸಿಸ್ಟೆಂಟ್ ಇನ್‌ಸ್ಪೆಕ್ಟರನ್ನು ನೇಮಿಸಬೇಕೆಂಬುದು ರಿಾವಿನ ಹೊರಗಿನ ಸಂಗತಿಯಾಗಿದ್ದುದರಿಂದ ಅದಕ್ಕೆ ಒಪ್ಪಲಾರೆ. ಹಳೇ ಏರ್ಪಾಡು ಒಳ್ಳೇದಲ್ಲದ್ದರಿಂದಲೇ ಅದನ್ನು ಬದಲಾಯಿಸಿದ್ದಾಗಿದೆ. ಆಗ್ಯೆ ಸ್ಕೂಲುಗಳ ಸಂಖ್ಯೆ ಈಗಿನದರ ಅರ್ಧದಷ್ಟೂ ಇರಲಿಲ್ಲ. ಹೆಡ್‌ಮಾಸ್ಟರು ಇನ್‌ಸ್ಪೆಕ್ಷನ್ ಕೆಲಸ ಮಾಡುವದು ರಜೆ ಕಾಲದಲ್ಲೋ ಅಥವಾ ಶಾಲೆಗಳಿರುವಾಗಲೋ ಎಂಬುದನ್ನು ವಿವರಿಸಿರುವದಿಲ್ಲ. ರಜೆ ಕಾಲದಲ್ಲಿ ಸಾಧ್ಯವಿಲ್ಲ. ಸ್ಕೂಲು ಇರುವಾಗ ಅದರ ಖರ್ಚು ಹೆಚ್ಚಾಗುತ್ತದೆ. ವೀರಾಜಪೇಟೆ ಹೈಸ್ಕೂಲಿನ ಮೇಲ್ವಿಚಾರ ಕಷ್ಟವಾಗುತ್ತೆ. ಟ್ರೈನಿಂಗ್ ಸ್ಕೂಲಿನ ತೊಂದರೆ ಬೇರೆ ಇದೆ. ಈಗ ಅದಕ್ಕೆ ಇಂಡಿಯಾ ಸರ್ಕಾರದ ಕಟ್ಟಡವಿದೆ. ಕೊಡಗಿಗೆ ಪ್ರತ್ಯೇಕ ಟ್ರೈನಿಂಗ್ ಶಾಲೆ ಬೇಕಾಗುತ್ತೆ. ಅದಕ್ಕೆ ಖರ್ಚು ಹೆಚ್ಚು. ಬೆಂಗಳೂರಿನಲ್ಲಿಯಾದರೆ ವಿಶಾಲ ತರಬೇತು ದೊರೆಯುತ್ತೆ. ಈಗ ಬೆಂಗಳೂರಿನ ಶಾಲೆಯಲ್ಲಿ ಕೊಡಗಿನ ಉಪಾಧ್ಯಾಯರುಗಳಿಗೆ ಹೆಚ್ಚಿನ ಅವಕಾಶ ದೊರೆಯುತ್ತದೆ. ಈಗ ಇನ್‌ಸ್ಪೆಕ್ಟರಿಂದ ಕೊಡಗಿನ ಮಕ್ಕಳಿಗೆ ಬೆಂಗಳೂರಿನಲ್ಲಿ ತುಂಬಾ ಸಹಾಯ ದೊರೆಯುತ್ತದೆ.

ಈಗ ಅಧಿಕಾರವನ್ನು ಒಬ್ಬನಲ್ಲಿಡದೆ ಹಂಚುವ ಕಾಲವಾದುದರಿಂದ ಈ ಠರಾವಿಗೆ ವಿರೋಧಿಸುತ್ತೇನೆಂದು ಮೆ. ಉತ್ತಯ್ಯನವರು ಹೇಳಿದರು.

ನಾವೂ ಇಂಡಿಯಾ ಸರ್ಕಾರದ ಪ್ರಜೆಗಳಾದುದರಿಂದ ಟ್ರೈನಿಂಗ್ ಶಾಲೆಯ ಕಟ್ಟಡಕ್ಕೆ ಅವರಿಂದ ಸಹಾಯ ದೊರೆಯಬಹುದು. ಈಗ ನಮ್ಮ ಮಕ್ಕಳಿಗೆ ಬೆಂಗಳೂರು ಶಾಲೆಗಳಲ್ಲಿ ಅನುಕೂಲವಿರುವದಾದರೂ ಅವಕ್ಕೆ ನಾವು ಎವಶ್ಟವಷ್ಟು ಖರ್ಚು ಕೊಡುತ್ತಿದ್ದೇವೆ. ಎರಡು ಕೆಲಸಗಳನ್ನು ಒಬ್ಬರೇ ನೋಡುವದು ಉತ್ತಮವಲ್ಲವಾದರೂ ನಾವು ಎರಡೂ ದರಲ್ಲೂ ಪ್ರತ್ಯೇಕವಾಗಿರಬೇಕೆಂದು ನನ್ನ ಇರಾದೆ, ಎಂದು ಮೆ. ಚಂಗಪ್ಪನವರು ಜವಾಬುಕೊಟ್ಟರು.

ಈ ಠರಾವಿಗೆ ಮೆ ಎ ಬಿ ಚಂಗಪ್ಪನವರು ಮತ್ತು ಮಂದಣ್ಣನವರು ಮಾತ್ರ ಓಟುಮಾಡಿದ್ದರಿಂದ ಠರಾವು ಪಾಸಾಗಲಿಲ್ಲ.

41. 'ಒಂದು ಗ್ರಾಮದಲ್ಲಿ ಹುಡುಗರ ಮತ್ತು ಹುಡುಗಿಯರ ಶಾಲೆಗಳು ಪ್ರತ್ಯೇಕವಾಗಿದ್ದರೆ ಅವುಗಳನ್ನು ಜೊತೆಸೇರಿಸಿ ಒಬ್ಬ ಹೆಡ್‌ಮಾಸ್ಟರ ಕೈಕೆಳಗೆ ಇಡತಕ್ಕದ್ದು' ಎಂಬ ಠರಾವನ್ನು ಮೆ ಎ. ಬಿ ಚಂಗಪ್ಪನವರು ಸೂಚಿಸಿದಾಗ ಹೇಳಿದ್ದೇನೆಂದರೆ—ಕೆಲವು ಕಡೆ ಹುಡುಗರ ಮತ್ತು ಹುಡುಗಿಯರ ಶಾಲೆಗಳು ಬಹಳ ಸಮೀಪವಿವೆ. ಎರಡರಲ್ಲೂ ತಕ್ಕ ಹಾಜರಾತಿ ಇರುವದಿಲ್ಲ. ಒಟ್ಟಿಗೆ ಸೇರಿಸಿದರೆ ಹಾಜರಾತಿ ಚೆನ್ನಾಗಿ ಆಗುವದು. ಹುಡುಗಿಯರಿಗೆ ಇಂಗ್ಲಿಷ್ ಕಲಿಸಲು ಇಂಗ್ಲಿಷ್ ಗೊತ್ತಿರುವ ಉಪಾಧ್ಯಾಯಿನಿಯರಿಲ್ಲ. ಒಟ್ಟಿಗೆ ಸೇರಿಸಿದರೆ ಖರ್ಚು ಕಡಿಮೆಯಾಗುತ್ತೆ. ಬೇರೆ ದೇಶಗಳಲ್ಲಿ ಸಣ್ಣ ಹೆಣ್ಣು ಮತ್ತು ಗಂಡು ಮಕ್ಕಳು ಒಟ್ಟಿಗೆ ವಿದ್ಯೆ ಕಲಿಯುತ್ತಾರೆ.

ಮೆ. ಉತ್ತಯ್ಯನವರು ಅನುಮೋದಿಸಿದರು.

ಮೆ. ಯೇಟ್ಸ್‌ರವರು ಮಾತಾಡಿದ್ದೇನೆಂದರೆ—ಒಟ್ಟಿಗೆ ಸೇರಿಸುವದು ಒಳ್ಳೇದಲ್ಲ. ಹುಡುಗರ ಶಾಲೆಗಳಿಗೆ ಹುಡುಗಿಯರು ಹೋಗುವದೇ ಕಡಿಮೆ. ಎರಡು ಶಾಲೆಗಳನ್ನು ಸೇರಿಸಿ ಹೆಡ್‌ಮಿಸ್ಟ್ರೆಸ್ ಕೈಕೆಳಗೆ ಇಡಬೇಕೆಂಬ ಅಭಿಪ್ರಾಯವೋ? ಹುಡುಗಿಯರಿಗೆ ಇಂಗ್ಲಿಷು ಕಲಿಸುವದು ಅವಶ್ಯ. ಕ್ರಮೇಣ ಇಂಗ್ಲಿಷು ಕಲಿತ ಉಪಾಧ್ಯಾಯಿನಿಯರೂ ದೊರೆಯುವರು. ವೀರಾಜಪೇಟೆ ಪ್ರೈಮರಿ ಶಾಲೆಗಳಲ್ಲಿ ಒಂದೊಂದರಲ್ಲಿ 200 ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳಿರುವಾಗ ಜೊತೆಸೇರಿಸುವದು ಅಸಾಧ್ಯ. ಹುಡುಗಿಯರ ಶಾಲೆ ಕ್ರಮೇಣ ಬೇರೆ. ಈ ಸ್ಥಿತಿಯು ಇಂಗ್ಲೆಂಡಿನಲ್ಲಿ 40—50 ವರ್ಷಗಳ ಹಿಂದೆ ಇತ್ತು. ಈಗ ಬದಲಾಗಿದೆ.

ಮೆ. ಚಂಗಪ್ಪನವರು ಠರಾವನ್ನು ವಾಪಸು ತೆಗೆದುಕೊಂಡರು.

42. 'ಕೊಡಗಿನಲ್ಲಿ ಭತ್ತದಿಂದ ಸಾರಾಯಿ ತಯಾರಿಸಲು ಬೇಕಾಗುವ ಏರ್ಪಾಡುಗಳನ್ನು ಸರ್ಕಾರದವರು ಮಾಡಬೇಕು' ಎಂಬ ಠರಾವನ್ನು ಮೆ. ಸಿ. ಯಸ್. ಉತ್ತಯ್ಯನವರು ಸೂಚಿಸಿ ಹೇಳಿದ್ದೇನೆಂದರೆ—ಭತ್ತದ ಸಾರಾಯಿ ಬೇಕೆಂದು ದೇಶದ ಹೆಚ್ಚಿನ ಜನರ ಕಾಂಕ್ಷೆಯಾಗಿದೆ. ಭತ್ತದ ಸಾರಾಯಿಯಿಂದ ಕ್ರಯ ಕಡಿಮೆಯಾಗುತ್ತೆ. ಸ್ಥಳೀಯ ಕೈಗಾರಿಕೆಗೆ ಉತ್ತೇಜನ ಕೊಟ್ಟಂತಾಗುತ್ತದೆ. ಭತ್ತಕ್ಕೆ ಒಳ್ಳೇ ಧಾರಣೆ ಸಿಕ್ಕುತ್ತದೆ. ಸ್ಕಾಟ್ಲೆಂಡಿನವರು ವಿಸ್ಕಿಯನ್ನೂ, ಇಂಗ್ಲಿಷಿನವರು ಬೀಯರನ್ನೂ, ಫ್ರಾನ್ಸಿನವರು ವೈನನ್ನೂ ಪ್ರೀತಿಸುವಂತೆಯೇ ಕೊಡಗಿನವರು ಭತ್ತದ ಸಾರಾಯವನ್ನು ಪ್ರೀತಿಸುತ್ತಾರೆ. ಇದು ಮಲೇರಿಯ ಜ್ವರಕ್ಕೂ, ವಾತಭೇದಿಗೂ, ದನಗಳ ಕಾಯಿಲೆಗಳಿಗೂ ಒಳ್ಳೇ ಔಷಧಿಯೆಂದು ಜನರ ನಂಬಿಗೆ. ಸಾರಾಯಿಯ ಶಕ್ತಿ (ಅಮಲು) ಯನ್ನು ಹೆಚ್ಚಿಸಬೇಕು. ಹಾಗೆ ಮಾಡಿದರೆ ಕುಡುಕತನ ಹೆಚ್ಚುವದೆಂದು ಹೇಳುವದು ವಾದಾಸ್ಪದದ ಸಂಗತಿ. ಶಕ್ತಿ ಕಡಿಮೆ ಮಾಡಿರುವದರಿಂದ ಕುಡುಕತನವು ಹೆಚ್ಚಿ ಜನರು ಹೆಚ್ಚು ಹಣ ವ್ಯಯ ಮಾಡುತ್ತಿದ್ದಾರೆ. ಅಲ್ಲದೆ ಕದ್ದು ಕಾಸಿಯು ಮಾಡುವದು ಹೆಚ್ಚಾಗಿದೆ. ಇದು ನಿಜವೆ ವ್ಹಿಸ್ಕಿಯೆಂದು ಹೆಸರುಗೊಂಡಿದೆ. ನಾನು ಇಲ್ಲಿ ಹೆಚ್ಚಿನ ಜನರ ಅಭಿಪ್ರಾಯವನ್ನು ಸೂಚಿಸುವದಾಗಿದೆ. ಈಗ ಕೊಡಗಿನಲ್ಲಿ ಎಲ್ಲಿಯೂ ಮದ್ಯನಿಷೇಧದ ಚಳವಳವು ಕಂಡುಬರುವದಿಲ್ಲ. ಕುಡಿಕತನವನ್ನು ಶಾಸನದ ಮೂಲಕ ನಿಲ್ಲಿಸಬಾರದು. ಜನರ ಮಾನಸಿಕ ಮತ್ತು ಧಾರ್ಮಿಕ ಗುಣಗಳು ಬದಲಾವಣೆ ಹೊಂದಿ ಅವರಾಗಿಯೇ ನಿಲ್ಲಿಸಬೇಕು. ಭತ್ತದ ಸಾರಾಯ ಮಾಡಿದರೆ ಸರ್ಕಾರದ ಉತ್ಪತ್ತಿ ಕಡಿಮೆಯಾಗುವದಿಲ್ಲ. ಶಕ್ತಿ ಹೆಚ್ಚಿದರೆ ಉತ್ಪತ್ತಿ ಎರಡರಷ್ಟಾಗುವದು. ಕದ್ದು ಮಾಡುವದು ಸಂಪೂರ್ಣ ನಿಂತುಹೋಗುವದು.

ಮೆ ಎ ಬಿ ಚಂಗಪ್ಪನವರು ಠರಾವನ್ನು ಅನುಮೋದಿಸಿ ಹೀಗೆಂದರು—ಸಾರಾಯಿಯ ಶಕ್ತಿ ಕಡಿಮೆಮಾಡಿದ್ದರಿಂದ ಬಡವರು ಮತ್ತಷ್ಟು ಬಡತನಕ್ಕೆ ಇಳಿಯುತ್ತಿದ್ದಾರೆ. ನ್ಯಾಯವಾದ ಕ್ರಯಕ್ಕೆ ಭತ್ತದ ಸಾರಾಯಿ ಸಿಕ್ಕುವದಾದರೆ ಕದ್ದು ಮಾಡುವದು ನಿಂತುಹೋಗುವದು. ಪೂರ್ತಿ ಮದ್ಯನಿಷೇಧಮಾಡುವದಕ್ಕೆ ನಾನು ಒಪ್ಪುತ್ತೇನೆ. ಆದರೆ ಪರದೇಶದಿಂದ ಹಾನಿಕರವಾದ ಸಾರಾಯಿ ತರುವದರ ಬದಲು ಇಲ್ಲಿಯೇ ಭತ್ತದ ಸಾರಾಯಿ ಮಾಡಿಕೊಳ್ಳುವದು ಲೇಸು. ಮೊದಲು ಮಳೆಗಾಲದಲ್ಲಿ ಬೆಸಿಗ್ಯೆ ದನಗಳಿಗೆ 'ಪೊಳಕಂಜಿ' ಯಾ ಭತ್ತದ ಸಾರಾಯ ಕೊಡುವದು ನಾಲ್ಕುನಾಡಿನಲ್ಲಿ ವಾಡಿಕೆಯಾಗಿತ್ತು. ಈಗ ಅದನ್ನು ನಿಲ್ಲಿಸಿದ್ದರಿಂದಲೇ ದನಗಳಿಗೆ ಕಾಯಿಲೆ ಹೆಚ್ಚಿ ಕ್ಷೀಣಗತಿಯನ್ನು ಹೊಂದುತ್ತಿರುವದಾಗಿದೆ.

ಕಮಿಷನರು ಹೇಳಿದ್ದೇನೆಂದರೆ—ಠರಾವಿನ ಅಭಿಪ್ರಾಯ ಒಳ್ಳೇಯದೆ. ಸಾರಾಯವನ್ನು ಯು. ಪಿ 30° ರಿಂದ 35° ಕ್ಕೆ ಇಳಿಸಿದ್ದರಿಂದ ಕದ್ದು ಭತ್ತದ ಸಾರಾಯ ಮಾಡುವದು ಹೆಚ್ಚಿದೆ. ನನಗೆ ನಾಲ್ಕುನಾಡಿನ ಭತ್ತದ ಸಾರಾಯಿ ನೋಡಲಿಕ್ಕೆ ಸಿಕ್ಕಿತ್ತ. ಅದು ವಾಡಿಕೆಯಾಗಿ ಯು. ಪಿ. 10° ರಿಂದ 20° ರ ವರೆಗೆ ಇರುತ್ತದೆ. ಕದ್ದು ಮಾಡುವದನ್ನು ನಿಲ್ಲಿಸಬೇಕಾದರೆ ಶಾಸನದ ಬಲದಿಂದ ಆಗಬೇಕು, ಇಲ್ಲವೇ ಜನರಿಗೆ ಬೇಕಾದದನ್ನು ಕೊಡಬೇಕು. ಇದು ಕಾಡುಪ್ರದೇಶವಾದುದರಿಂದ ಶಾಸನದ ಬಲದಿಂದ ನಿಲ್ಲಿಸಲಿಕ್ಕಾಗುವದಿಲ್ಲ. ಮತ್ತು ದೊಡ್ಡ ಸಿಬ್ಬಂದಿ ಬೇಕಾಗುತ್ತೆ.

ವಾಡಿಕೆಯಾಗಿ ಬಡವರೇ ಸಾರಾಯಿ ಕುಡಿಯುವದು. ಪೂರ್ತಿ ಮದ್ಯನಿಷೇಧಮಾಡಿದರೆ ಒಳ್ಳೇದು. ಇದು ಸಾಧ್ಯವಿಲ್ಲದೆ ಇರುವಾಗ ಜನರಿಗೆ ಒಳ್ಳೇ ಸಾರಾಯವನ್ನೇ ಕೊಡತಕ್ಕದ್ದು' ಎಂದು ಮೆ. ಪೂಣಚ್ಚನವರು ಹೇಳಿದರು.

ಭತ್ತದ ಸಾರಾಯ ಮಾಡುವ ಏರ್ಪಾಡು ಸರ್ಕಾರದವರು ಮಾಡಿದರೆ ಜನರ ಈ 'ಮನೆ ಕೈಗಾರಿಕೆ' [illegible] ಭತ್ತದ ಸಾರಾಯಿಯೇ ಅಂಗಡಿಗಳಲ್ಲಿ [illegible] ಎಂದ ಅದೇ ತರಹವನ್ನು ಮನೆಗಳಲ್ಲಿ ಮಾಡುವದು [illegible] ಕಡಿಮೆಯಾಗಲಿಕ್ಕಿಲ್ಲ. ಇದರಿಂದ ದೇಶದಲ್ಲಿ [illegible] ಹೆಚ್ಚುವದೆಂಬ ದರದಲ್ಲಿ ಸಂಶಯವಿಲ್ಲ. ಆದುದರಿಂದ ಠರಾವನ್ನು ವಿರೋಧಿಸುತ್ತೇನೆಂದು ಮೆ. [illegible] ಹೇಳಿದರು.

ಮೆ ಮುದ್ದಪ್ಪನವರು ಹೇಳಿದ್ದೇನೆಂದರೆ—ಭತ್ತದ ಸಾರಾಯವನ್ನು ಅಂಗಡಿಗಳಲ್ಲಿ ಸುಲಭ ಕ್ರಯಕ್ಕೆ ಮಾರಿದರೂ, ಅದಕ್ಕಿಂತಲೂ ಸುಲಭ ವೆಚ್ಚದಲ್ಲಿ ಮನೆಯಲ್ಲಿ ಮಾಡಿಕೊಳ್ಳಬಹುದಾದ ಕಾರಣ, ಈ ಏರ್ಪಾಡಿನಿಂದ ಕದ್ದು ಮಾಡುವದನ್ನು ನಿಲ್ಲಿಸಲಿಕ್ಕಾಗುವದಿಲ್ಲ. ಅಂಗಡಿಯ ಸಾರಾಯಿಗೆ ರಂಗು ಹಾಕಿ, ಬೇರೆ ಮಾಡುವದರಿಂದ ಪ್ರತ್ಯೇಕಿಸಬಹುದೆಂದು ಹೇಳಬಹುದು. ಆದರೆ ಇದು ಎಷ್ಟರ ಮಟ್ಟಿಗೆ ಸಾಧ್ಯವಾದೀತೆಂದು ಹೇಳಲಾರೆ. ಕುಡಿಕತನವು ಕೆಟ್ಟದ್ದೆಂದು ಎಲ್ಲರೂ ಒಪ್ಪುತ್ತಾರೆ. ಹಾಗಿರುವಾಗ ಅಂಥಾ ಅಭ್ಯಾಸವನ್ನು ಹೆಚ್ಚಿಸುವ ಕೈಗಾರಿಕೆಗೆ ಉತ್ತೇಜನಕೊಡುವದು ಯೋಗ್ಯವಲ್ಲ. ಪೂರ್ತಿ ಮದ್ಯನಿಷೇಧ ಮಾಡಲು ಸಾಧ್ಯವಿಲ್ಲದಿದ್ದರೂ ಸ್ಥಳೀಯ ಜನರ ಅಭಿಪ್ರಾಯವನ್ನನುಸರಿಸಿ ಅದನ್ನು ನಿಲ್ಲಿಸುವದು ಉತ್ತಮ.

'ಸಾರಾಯಿಯ ಶಕ್ತಿಯಿಂದಲೂ, ರಂಗಿನಿಂದಲೂ ಅಂಗಡಿ ಸಾರಾಯವನ್ನು ಖಾಸಗಿ ಸಾರಾಯಿಯಿಂದ ಪ್ರತ್ಯೇಕಿಸಬಹುದು. ಭತ್ತದ ಸಾರಾಯವಾದರೆ ಕ್ರಯಕ್ಕೆ ತಕ್ಕ ಮೌಲ್ಯ ಸಿಕ್ಕಿದಂತಾಗುವದು. ಈಗ ವಾಡಿಕೆಯಾಗಿ ಕದ್ದುಮಾಡಿದ ಕಡೆ ರಲ್ಲಿ ಬಡವರು ಸಿಕ್ಕಿಬೀಳುತ್ತಾರೆ, ಐಶ್ವರ್ಯವಂತರು ತಪ್ಪಿಸಿಕೊಳ್ಳುತ್ತಾರೆ. ಈಗ ಮಾರಾಟವಾಗುವ ಸಾರಾಯಿ ಒಳ್ಳೇಯದಲ್ಲ, ಮತ್ತು ಅಳತೆಯು ಸಹ ಸರಿಯಾಗಿರುವದಿಲ್ಲ. ಇದು ಒಂದು ತರಹದ ಸುಲಿಗೆಯೇ ಆಗಿಬಿಟ್ಟಿದೆ' ಎಂದು ಮೇದಪ್ಪನವರು ಹೇಳಿದರು.

'ಈಗ ಇರುವ ಕುಂದು ಕೊರತೆಗಳಿಗೆಲ್ಲಾ ಸರ್ಕಾರದವರು ತಕ್ಕಷ್ಟು ನಿಗಾ ಕೊಡಬೇಕು. ಈ ವಿಷಯವನ್ನು ಸರ್ಕಾರದವರು ಸವಿಸ್ತಾರವಾಗಿ ಆಲೋಚಿಸಲಿ—ಎಂದು ಹೇಳಿ ಮೆ. ಉತ್ತಯ್ಯನವರು ಠರಾವನ್ನು ವಾಪಸು ತೆಗೆದುಕೊಂಡರು.

43. ಮುಖ್ಯವಾಗಿ ಗ್ರಾಮಾಂತರಗಳಲ್ಲಿ ದೇಶೀಯ ಮತ್ತು ಆಯುರ್ವೇದಿಕ್ ಔಷಧಿಗಳಿಗೆ ಉತ್ತೇಜನಕೊಡಲು ಸರ್ಕಾರದವರು ತಕ್ಕ ಏರ್ಪಾಡು ಮಾಡತಕ್ಕದ್ದು' ಎಂಬ ಠರಾವನ್ನು ಮೆ. ಉತ್ತಯ್ಯನವರು ಸೂಚಿಸಿ ಹೀಗೆಂದರು—ದೇಶದ ಜನರ ಆರೋಗ್ಯವು ಬಹಳ ಮಟ್ಟಿಗೆ ಕೆಟ್ಟುಹೋಗಿ ಮರಣ ಸಂಖ್ಯೆಯು ಹೆಚ್ಚುತ್ತಲಿದೆ. ಗ್ರಾಮಾಂತರಗಳಲ್ಲಿ ವಾಸವಿರುವವರಿಗೆ ಆಸ್ಪತ್ರೆಗಳ ಅನುಕೂಲ ದೊರೆಯುವದು ಕಷ್ಟ. ಅಲ್ಲದೆ ದೇಶೀಯ ಮತ್ತು ಆಯುರ್ವೇದಿಕ್ ಔಷಧಗಳಲ್ಲಿ ಗ್ರಾಮವಾಸಿಗಳಿಗೆ ವಿಶ್ವಾಸ ಹೆಚ್ಚು. ಆದುದರಿಂದ ಆ ಔಷಧಿಗಳಿಗೆ ಉತ್ತೇಜನಕೊಡಬೇಕು.

ಫೈನಾನ್ಸ್ ಮೆಂಬರು—'ಆಯುರ್ವೇದಿಕ' ಔಷಧಿಗಳಿಗೆ ಸರ್ಕಾರವು ವಿರೋಧವಿಲ್ಲ. ಅವುಗಳಿಗೆ ಉತ್ತೇಜನ ಕೊಡಲು ಯಾವ ತರಹದ ಏರ್ಪಾಡುಗಳನ್ನು ಮಾಡಬೇಕೆಂದು ತಿಳಿಸಿದರೆ ಹಾಗೆ ಮಾಡಲು ಯತ್ನಿಸಬಹುದು ಠರಾವಿಗೆ ಒಪ್ಪುತ್ತೇನೆ' ಎಂದು ಹೇಳಿದರು.

44. 'ಮಂಜೂರಾದ ಬಡ್ಜೆಟ್ಟಿನಿಂದ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿಗೆ ಹಣ ದೊರೆಯುವಂತೆ ಪಿ. ಡಬ್ಲ್ಯು. ಇಲಾಖೆಯನ್ನು ಪುನರ್ವ್ಯವಸ್ಥೆಮಾಡಲು ವಿಧಾನಗಳನ್ನು ಸೂಚಿಸಲಿಕ್ಕಾಗಿ ಕಮಿಷನರು, ಎಗ್ಸಿಕ್ಯುಟಿವ್ ಇಂಜಿನಿಯರು ಮತ್ತು ಮೂವರು ಉದ್ಯೋಗಸ್ಥರಲ್ಲದ ಮೆಂಬರುಗಳುಳ್ಳ ಒಂದು ಕಮಿಟಿಯನ್ನು ನೇಮಿಸತಕ್ಕದ್ದು' ಎಂಬ ಠರಾವನ್ನು ಸೂಚಿಸಿದಾಗ ಮೆ. ಎ. ಬಿ. ಚಂಗಪ್ಪನವರು ಹೇಳಿದ್ದೇನೆಂದರೆ—ಪಿ. ಡಬ್ಲ್ಯು. ಇಲಾಖೆಯವರ ಈಗಿನ ಕೆಲಸವು ತೃಪ್ತಿಕರವಲ್ಲ. ಹೊಸ ಕೆಲಸಗಳೇನೂ ನಡಿಸಲ್ಪಡುತ್ತಿಲ್ಲ. ರಸ್ತೆಗಳು ಬಹಳ ಹಾಳಾಗಿವೆ. ಕೊಡಗಿನ ರಸ್ತೆಗಳು ಈಗ ಬರೇ ಬೇಸಿಗೆ ಕಾಲದ ರಸ್ತೆಗಳಾಗಿ ಬಿಟ್ಟಿವೆ. ಮಡಿಕೇರಿ ಪಟ್ಟಣ, ವೀರಾಜಪೇಟೆ—ಮೂರ್ನಾಡು ರಸ್ತೆ, ವೀರಾಜಪೇಟೆ—ಗೋಣಿಕೊಪ್ಪಲು ರಸ್ತೆ ಮತ್ತು ಸೇತುವೆಗಳು, ಸಿದ್ದಾಪುರ—ಗದ್ದಿಗೆ ರಸ್ತೆ, ವೀರಾಜಪೇಟೆ—ನಾಲ್ಕುನಾಡು ರಸ್ತೆ, ಇವುಗಳ ಹೀನ ಸ್ಥಿತಿಯನ್ನು ವರ್ಣಿಸಬಾರದು. ರಸ್ತೆಬದಿಗಳ ಕಾಡನ್ನು ಕೂಡ ಕಡಿಯುವದಿಲ್ಲ. ಇವುಗಳೆಲ್ಲವನ್ನು ಪರಿಹರಿಸಲು ಕಮಿಟಿ ಅವಶ್ಯವಾಗಿದೆ.

ಮೆ. ಪಿ. ಐ. ಬೆಳ್ಯಪ್ಪನವರು ಅನುಮೋದಿಸಿದರು.

ಸೂಚಕರು ಹೇಳಿದ ತೊಂದರೆಗಳಿಗೆ ನನ್ನ ಸಹಾನುಭೂತಿ ಇದೆ. ಆದರೆ ವರ್ಷ ವರ್ಷ ತೊಂದರೆಗಳು ಹೆಚ್ಚುತ್ತಿವೆ. ಈಗ ಹಣದ ಬೆಲೆಯು ಕಡಿಮೆಯಾಗಿದೆ. ಹತ್ತು ವರ್ಷಗಳ ಮೊದಲು ರಸ್ತೆಗಳಿಗೆ ಮಾಡುತ್ತಿದ್ದದಕ್ಕಿಂತ ಈಗ ಹೆಚ್ಚು ಖರ್ಚು ಮಾಡಲ್ಪಡುತ್ತಿದೆ. ಬಸ್ಸು ಮತ್ತು ಕಾರು ವ್ಯಾಪಾರಗಳು ಹೆಚ್ಚಾದ್ದರಿಂದ ರಸ್ತೆಗಳು ಬೇಗನೆ ಹಾಳಾಗುತ್ತಿವೆ. ಸೇತುವೆಗಳೂ ಬೇಗನೆ ಕೆಡುತ್ತಿವೆ. ಬೇರೆ ಪ್ರಾಂತ್ಯಗಳಲ್ಲಿ ರಸ್ತೆಗಳಿಗೆ ಖರ್ಚು ಮಾಡುವಷ್ಟು ಇಲ್ಲಿ ಮಾಡುವದಿಲ್ಲ. 1920 ರಲ್ಲಿ 3 ಸಬ್ ಡಿವಿಜನುಗಳಿದ್ದವು. ನಂತರ ಒಂದಕ್ಕೆ ಇಳಿಸಲಾಯಿತು. ಈಗ ಪುನಃ ಎರಡಾಗಿವೆ. ಮೇಲು ಉಸ್ತುವಾರಿಯನ್ನು ಕಡಿಮೆ ಮಾಡುವದು ಒಳ್ಳೇಯದಲ್ಲ. ಈ ವಿಷಯಕ್ಕೆ ಗಮನ ಕೊಡಲಾಗುವದೆಂದು ನಾನು ಮಾತು ಕೊಡುತ್ತೇನೆ. ಆದರೆ ಠರಾವನ್ನು ವಿರೋಧಿಸುತ್ತೇನೆ.

ಓಟಿಗೆ ಹಾಕಲಾಗಿ ಕರುಂಬಯ್ಯನವರು, ಉತ್ತಯ್ಯನವರು, ಚಂಗಪ್ಪನವರು, ಮೇದಪ್ಪನವರು, ಬೆಳ್ಯಪ್ಪನವರು, ಪೊನ್ನಪ್ಪಯ್ಯನವರು, ಕಣ್ಣಪ್ಪನವರು, ಮುದ್ದಪ್ಪನವರು, ಸಯ್ಯದ್ ಅಹ್ಮದ್‌ರವರು, ಕುಶಾಲಪ್ಪನವರು, ಮತ್ತು ಕಾಳಪ್ಪನವರು ಠರಾವಿನ ಪರವಾಗಿಯೂ, ಎಲ್ಲಾ ಉದ್ಯೋಗಸ್ಥರು ಮತ್ತು ನಿಕಲ್ಸ್‌ರವರು ವಿರೋಧವಾಗಿಯೂ ಓಟು ಕೊಟ್ಟದ್ದರಿಂದ ಠರಾವು ಪಾಸಾಯಿತು

### ಕರ್ನಾಟಕ ಏಕೀಕರಣ.

"ಭವಿಷ್ಯಾನುವಾದು ಆಗಲಿಕ್ಕಿರುವ ಸ್ವಾತಂತ್ರ್ಯ ಕರ್ನಾಟಕ ಪ್ರಾಂತ್ಯದೊಳಗೆ ಕೊಡಗು ಸೇರಿಕೊಳ್ಳಲಿಚ್ಛೈಸುತ್ತದೆಂಬದನ್ನು ಚೀಫ್‌ಕಮಿಷನರು ಇಂಡಿಯಾ ಸರ್ಕಾರಕ್ಕೆ ತಿಳಿಸತಕ್ಕದ್ದು" ಎಂಬ ಠರಾವನ್ನು ಸಭೆಯ ಮುಂದಿಟ್ಟು ಮೆ. ಪಿ. ಐ. ಬೆಳ್ಯಪ್ಪನವರು ಮಾತಾಡಿದ್ದೇನೆಂದರೆ—ಈ ವಿಷಯವು ದೇಶದಲ್ಲಿ ಈಗ 3 ವರ್ಷಗಳಿಂದ ಚರ್ಚಿಸಲ್ಪಡುತ್ತಿದ್ದು ದಿನೇ ದಿನೇ ಪ್ರಾಬಲ್ಯವನ್ನು ಪಡೆಯುತ್ತಿದೆ. ಇನ್ನೂ ಕೆಲವರು ಬೇರೆ ಪ್ರಾಂತ್ಯದೊಂದಿಗೆ ಸೇರಲು ಹೆದರುತ್ತಾರೆ. ಆದರೆ ಅವರ ಭಯವು ಸಕಾರಣವಲ್ಲ.

ಈ ಚಿಕ್ಕ ಪ್ರಾಂತ್ಯವನ್ನು ನಮ್ಮ ಸಣ್ಣ ಉತ್ಪತ್ತಿಯಿಂದ ಜನರಿಗೆ ಸಾಕಷ್ಟು ಪ್ರಯೋಜನವಾಗುವಂತೆ ಪ್ರತ್ಯೇಕವಾಗಿ ಆಳಲು ಬಹಳ ಕಷ್ಟ. ಗಂಧದ ಉತ್ಪತ್ತಿಯು ಯಾವಾಗಲೂ ಒಂದೇ ರೀತಿ ಇರಲಾರದು. ಕುಡಿಕತನವನ್ನು ನಿಲ್ಲಿಸಬೇಕಾದರೆ ಅಬ್ಕಾರಿ ಉತ್ಪತ್ತಿಯನ್ನು ಕ್ರಮೇಣ ಬಿಡಬೇಕಾಗುತ್ತದೆ. ಕೊಡಗಿನ ಮೂರು ಮುಖ್ಯ ಉತ್ಪತ್ತಿಗಳ ಪೈಕಿ ಇವು ಎರಡಾಗಿವೆ. ಈಗಿನ ಸರ್ಕಾರದ ಖರ್ಚು ಸ್ವಲ್ಪ ಕಡಿಮೆ ಮಾಡಬಹುದಾದರೂ, ಜವಾಬ್ದಾರಿ ಸರ್ಕಾರ ಸ್ಥಿತಿಯಲ್ಲಿ ಖರ್ಚು ಸ್ವಲ್ಪ ಹೆಚ್ಚಬಹುದು. ಆದುದರಿಂದ ಆದಾಯ ಹೆಚ್ಚವನ್ನು ಸಂಪಡಿಸುವದು ಕಷ್ಟ. ಹೈಕೋರ್ಟಿನ ತೊಂದರೆ ಇದೆ. ಕೊಡಗಿಗೇ ಪ್ರತ್ಯೇಕ ಹೈಕೋರ್ಟು ಇಡಲು ಸಾಧ್ಯವಿಲ್ಲ. ಆದುದರಿಂದಲೇ ತತ್ಕಾಲ ಮದ್ರಾಸು ಹೈಕೋರ್ಟನ್ನು ಒಪ್ಪಿಕೊಳ್ಳುವದು ಉತ್ತಮವೆಂದು ನಾನು ಮೊದಲು ಸೂಚಿಸಿದ್ದಾಗಿದೆ.

ದೊಡ್ಡ ಉದ್ಯೋಗಸ್ಥರನ್ನು ವರ್ಗಾವರ್ಗಿ ಮಾಡದ್ದರಿಂದ ಜನರಿಗೆ ಉಂಟಾಗುತ್ತಿರುವ ಕಷ್ಟ ... ಸರಿಸಲಾರದೆ ವರ್ಗಾವರ್ಗಿ ಮಾಡಬೇಕೆಂಬ ಚಳವಳಿ ಎದ್ದಿತು. ಆದಕ್ಕೆ ಸರ್ಕಾರವು ಗಮನ ಕೊಡದ್ದು ವ್ಯಸನಕರ. ಈ ತತ್ವಕ್ಕೆ ಸರ್ಕಾರದವರು ಒಪ್ಪಿದರೂ, ಇಷ್ಟು ಚಿಕ್ಕ ಪ್ರಾಂತ್ಯದಲ್ಲಿ ಅದನ್ನು ಜಾರಿಗೆ ತರಲು ಕಷ್ಟ ಸಾಧ್ಯವಾದುದರಿಂದಲೇ ಅವರು ಸುಮ್ಮನಾದರೆಂದು ಕಾಣುತ್ತೆ. ಏಕೀಕರಣವು ಇದಕ್ಕೆ ಸುಲಭ ಉಪಾಯವಾಗುತ್ತೆ. ನಮಗೆ ಪ್ರೌಢ ವಿದ್ಯಾಭ್ಯಾಸದ ಆವಶ್ಯಕತೆಯು ದೊಡ್ಡದಾಗಿದೆ. ಇಲ್ಲಿ ಒಂದು ಕಾಲೇಜನ್ನು ಸ್ಥಾಪಿಸಿ ನಡೆಸಲು ಸಾಧ್ಯವಾಗಿಲ್ಲ. ಕರ್ನಾಟಕ ಪ್ರಾಂತ್ಯವಾದರೆ ಕ

(5ನೇ ಪುಟದಲ್ಲಿ ಮುಂದುವರಿದಿದೆ)


## ಚಿಲಿಯನ್ ನೈಟ್ರೇಟ್ ಆಫ್ ಸೋಡಾ
ಎಂಬುದೇ

ಎಲ್ಲಾ ಬೆಳೆಗಳಿಗೂ ಯೋಗ್ಯವಾದ ಸಾರಜನಕ ಗೊಬ್ಬರವು, ಪ್ರಪಂಚದಲ್ಲೆಲ್ಲಾ ಇದೇ ಸಸ್ಯಾದಿಗಳನ್ನು ... ಯದಾಗಿ ಬೆಳೆಸುವ ಮತ್ತು ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಫಸಲನ್ನು ಕೊಡುವ ಸಾಧನವೆಂದು ಖ್ಯಾತಿಯನ್ನು ಪಡೆದಿದೆ.

ಚಿಲಿಯನ್ ನೈಟ್ರೇಟ್ ಒಫ್ ಸೋಡಾವು ಗಿಡಗಳ ಬೇರುಗಳನ್ನು ಹೆಚ್ಚು ಆಳದ ವರೆಗೂ ಪಸರಿಸುವಂತೆ ಮಾಡ... ರಿಂದ ಮಳೆ ಕಡಿಮೆಯಾದಾಗ್ಯೂ ಗಿಡಗಳಿಗೆ ಹೆಚ್ಚಿನ ತೊಂದರೆಯಾಗಲಾರದು.

ಚಿಲಿಯನ್ ನೈಟ್ರೇಟ್ ಒಫ್ ಸೋಡಾ ಉಪಯೋಗದಿಂದ ಗಿಡಗಳು ಚೆನ್ನಾಗಿ ಬಲಿತು, ಹುಳ ವಗೈರೆ ರೋಗ... ಥಕ್ಕನೆ ಎಡೆಕೊಡಲಾರವು. ಇದು ಹೊರತು ಚಿಲಿಯನ್ ನೈಟ್ರೇಟ್ ಒಫ್ ಸೋಡಾದಲ್ಲಿ ಬೆಳೆಗಳನ್ನೂ ಮಣ್ಣನ್ನೂ ... ಗೊಳಿಸುವ ಇನ್ನೂ ಅನೇಕ ಗುಣಗಳಿರುತ್ತವೆ. ಚಿಲಿಯನ್ ನೈಟ್ರೇಟ್ ಒಫ್ ಸೋಡಾವು ಬೇರೆ ಸಾರಜನಕ ಗೊಬ್ಬರ... ಮಣ್ಣಿನಲ್ಲಿ ಏಸಿಡ್ (acid) ಉಂಟಾಗುವಂತೆ ಮಾಡುವದಾಗಲೀ ಮಣ್ಣಿನ ಶಕ್ತಿಯನ್ನು ಯಾವ ವಿಧದಿಂದಲೂ ಕುಂ... ದಾಗಲೀ ಇಲ್ಲ.

ಚಿಲಿಯನ್ ನೈಟ್ರೇಟ್ ಒಫ್ ಸೋಡಾವನ್ನು ರಾಣಿಪೇಟೆಯಲ್ಲಿರುವ ಮೆಸರ್ಸ್ 'ಪೆರಿ' ಕಂಪೆನಿಯವರು ಸಂಸ್ಥಾನ... ರುವ ಯಾವ ರೈಲ್ವೇ ಸ್ಟೇಶನಿಗಾದರೂ 80 ರಾತ್ತಲಿನ ಚೀಲ 1ರ ರೂಪಾಯಿ 6—4—0ರಂತೆ ಪದಗಿಸಿ ಕೊಡುವದಲ್ಲದೆ, ... ಕೇರಿ ಮತ್ತು ವೀರಾಜಪೇಟೆಯಲ್ಲಿರತಕ್ಕ ಅವರ ಡಿಪೋಗಳಲ್ಲಿ ದರ ರೂ. 6—15—0ರಂತೆ ದೊರೆಯುತ್ತದೆ.

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ವಿಷಯ ದರ್ಮಾರ್ಥವಾಗಿ ಹಂಚುವ ಪತ್ರಿಕೆಗಳು ವಗೈರೆಗಳಿಗೆ ಈ ಕೆಳಗಿನ ... ಸದಾರರಿಗೆ ಬರಿಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ,
ಇಂಡಿಯನ್ ಡೆಲಿಗೇಶನ್,
ಪೋ. ಬಾ. ನಂ. 469, ಕಲ್ಕತ್ತಾ.

(2) ಮಿಸ್ಟರ್ ಯಂ. ಯಂ. ಬೆಳ್ಯಪ್ಪ,
ಚಿಲಿಯನ್ ನೈಟ್ರೇಟ್ ಕಮಿಟಿ
ಮಡಿಕೇರಿ.

2

## Xmas & New Year Presents!
### Toys for Children!

A set comprising of tiny, bright and beautiful tumblers, pots, spoons, etc. made of brass and bell metal, are quite suitable for the amusement and play of children.

Small set 32 articles Rs. 2—8—0. Medium set 32 articles Rs 3—8—0.

Big set of 32 articles Rs. 4—8—0.

Securely packed in neat card board boxes. Postage extra.

Silk Sarees, Jackets, Headkerchieves, Embroidary Hand Bags & Money Purses-a Speciality

*Send your orders to:-*

**BHARADWAJ & CO.,**

**BROCADE, EMBROIDARY & SILK MANUFACTURERS,**

52—16 **Benares City.**

## ಕೋವಿಗಳು, ಮತ್ತು ಅವುಗಳ ಸಾಹಿತ್ಯಗಳು.

ವಿಲ್ಲೆಂಡ್ ಕಂಪೆನಿಯ "ನಾಕ್ ಎಬೌಟ" ಎಂಬ 12 ನೇ ನಂಬರಿನ ಒಂಟಿ ಕೊಳದ ಕೋವಿಗೆ ರೂ.

ಅಮೇರಿಕದ ಸ್ಟೀವನ್ಸ್ ಕಂಪೆನಿಯ 12 ನೇ ನಂಬರಿನ ಒಂಟಿ ಕೊಳದ ತೋಟದ ಕೋವಿಗೆ ರೂ.

12 ನೇ ನಂಬರಿನ ಒಂಟಿ ಕೊಳದ ಅತಿ ಸುಲಭ ಕ್ರಯದ ತೋಟದ ಕೋವಿಗೆ ರೂ.

12ನೇ ನಂಬರಿನ ಜೋಡು ಕೊಳದ 'ಇಂಗ್ಲಿಷ್' ತೋಟದ ಕೋವಿಗೆ ರೂ.

" " " " 'ಬೆಲ್ಜಿಯನ್' ತೋಟದ ಕೋವಿಗೆ ರೂ.

ಹೊಗೆ ರಹಿತವಾದ 12 ನಂಬರಿನ ಇಂಗ್ಲಿಷ್ "ಎಲೇ" ಚಿಲ್ಲು ತುಂಬಿದ ತೋಟಗಳು 100 ಕ್ಕೆ ರೂ. 1—
ಅಮೇರಿಕನ್ ವೇಸ್ಟರನ್ " " " 100 ಕ್ಕೆ ರೂ. 9—
ಬೆಲ್ಜಿಯನ್ 100 ಕ್ಕೆ ರೂ. 9—

ಎಲ್ಲಾ ತರದ ಕೋವಿಗಳು, ರೈಫಲ್‌ಗಳು ರಿವಾಲ್ವರ್‌ಗಳು, ಪಿಸ್ತಲ್‌ಗಳು ಮತ್ತು ಚಿಲ್ಲು ಮದ್ದು ವಗೈರೆ ಬೇಟೆಗಾರರಿಗೆ ಬೇಕಾಗಿರುವ ಎಲ್ಲಾ ಸಾಹಿತ್ಯಗಳು ಸುಲಭ ದರದಲ್ಲಿ ದೊರಕುತ್ತೆ.

ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಂಪೆನಿಯ ಕೆಟಲಾಗೊಂದು ಮುಫತ್ತಾಗಿ ರವಾನಿಸಲ್ಪಡುವುದು.

Abdoolally Noorbhoy,
Arms & Ammunition Dealers,
248—250 Abdul Rehman Street,
Bombay 3. Telegrams "Guidance."

5

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

## ಟಿ. ರಾಮರಾವ್,

**ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.**





ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮಾಫೋನ್‌ಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಬೆಳ್ಳಿಯ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಒಟ್ಟಾಗಿಯೂ, ಚಿಲ್ಲರೆಯಾಗಿಯೂ ಯಾವಾಗಲೂ ದೊರೆಯುತ್ತವೆ. ನಮ್ಮಲ್ಲಿ 8 ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ "ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು.

21—2




## ವರ್ತಮಾನ ಸಂಗ್ರಹ.

ಈ ತಾ. 9 ರಲ್ಲಿ ನಾಗಪುರದಲ್ಲಿ ನಡೆದ ಮಧ್ಯ ಪ್ರಾಂತ್ಯದ ಸರ್ವ ಪಕ್ಷೀಯ ಪರಿಷತ್ತಿನಲ್ಲಿ ನೆಹರು ಕಮಿಟಿಯ ವರದಿ

ಬ್ರಿಟಿಷ್ ಚಕ್ರವರ್ತಿಯವರ ಕಾಯಿಲೆಯು ಏನೊಂದೂ ಗುಣವಿಲ್ಲ. ಅವರ ಬಲಹೀನತೆಯ ವಿಷಯ ಕುತೂಹಲವು

ಕೊಡಗು, ತಾರೀಖು ೧೪ನೇ ಡಿಸೆಂಬರ್ ೧೯೨೮.


## ಸಣ್ಣ ಹುಡುಗರ ಸಲುವಾಗಿ

# ಡೋಂಗರೆ ಇವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತಾರೆ.

ಕ್ರಯ ಬಾಟ್ಲಿ ೧ಕ್ಕೆ 0—14 ೦. ಟ. ಖ. 0—9—0.

ಕೆ. ಟಿ. ಡೋಂಗರೆ ಕಂಪೆನಿ,

52—14 ಗಿರಗಾಂವ, ಮುಂಬಯಿ.

## ಪಿಗ್ಮಿ ಗ್ರಾಮೋಫೋನ್

ಎಂಬ ಹಾಡುಗಾರಿಕೆಯ ಯಂತ್ರವು.

ಮೊದಲಿನ ಕ್ರಯ 35 ರೂ. ಈಗಿನ ಕ್ರಯ 8—8—0.

ಈ ಯಂತ್ರವು ವಿಲಾಯತಿಯಲ್ಲಿ ತಯಾರಾದದ್ದು. ಇಂಗ್ಲೀಷು, ಕನ್ನಡ, ಹಿಂದೂಸ್ಥಾನಿ, ಇಂಗ್ಲೀಷು ವಾದ್ಯ ಮುಂತಾದ ಪದಗಳನ್ನು ಹೇಳುವುದು. ಲಗ್ನದ ಮನೆ, ನಾಟಕಶಾಲೆ ಮುಂತಾದ ಜನಕೂಡುವ ಸ್ಥಳದಲ್ಲಿ ಉಪಯೋಗಿಸಲು ಬಹು ಚೆನ್ನಾಗಿದೆ. ನೋಟಕ್ಕೆ ಲಕ್ಷಣವಾಗಿರುವಂತೆಯೂ, ಕ್ರಯದಲ್ಲಿ ಸುಲಭವಾಗಿಯೂ ಇರುವಂತೆ ಬಹು ಬಲಿಷ್ಠವಾದ ಸಾಮಾನುಗಳಿಂದ ಈ ಯಂತ್ರವನ್ನು ತಯಾರಿಸಿದೆ. ಸುಂದರವಾದ ಮೆಟಲ್ ಹಾರನ್ ಎಂಬ ಪದ ಹೇಳುವ ಕೊಳವೆ ಇದೆ. ನಿಧಾನವಾಗಿಯೂ, ಜಾಗ್ರತೆಯಾಗಿಯೂ ಪದ ಹೇಳಿಸಲು ಕೀಲು ಇದೆ. ಈ ಯಂತ್ರವನ್ನು ಎಲ್ಲಿ ಬೇಕಾದರೂ ಕೈಯಲ್ಲಿ ಹಿಡಿದುಕೊಂಡು ಹೋಗಲು ಅನುಕೂಲವಾದಂಥಾ ಸುಂದರವಾದ ಕೈ ಪೆಟ್ಟಿಗೆಯಲ್ಲಿಟ್ಟಿದೆ.

ಡಬ್ಬಲ್ ಸೈಡ್ ಎರಡು ಕಡೆಯೂ ಪದ ಇರುವ

1 ರೆಕಾರ್ಡ್ ಸಹಿತ ಕ್ರಯ ರೂ. 8—8—0.

ಹೆಚ್ಚಿಗೆ ರೆಕಾರ್ಡ್ ಬೇಕಾದರೆ, ರೆಕಾರ್ಡ್ ,,

ಪ್ರತ್ಯೇಕ 1ಕ್ಕೆ 2—0—0

ವಿಳಾಸ:—ಲೀಗಲ್ ಟ್ರೇಡಿಂಗ್ ಕಂಪೆನಿ,

52—26 ಪೋ. ಬಾ 243, ಮದರಾಸು.

## ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು, ಅಪರಂಜಿ ಭಂಗಾರಕ್ಕೆ ಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವದು. ಇದರ ಬಣ್ಣವು ಕೆಡದಂತೆ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್ದಾರರೂ ಒಹಳವಾಗಿ ಉಪಯೋಗಿಸುತ್ತಿರುವರು.

7 ಕಲ್ಲಿನ ಬಿಳಿಯ ಓಲೆ ಜೊತೆ 1 ಕ್ಕೆ 2—0—0

7 ಕೆಂಪು ಕಲ್ಲಿನ ಓಲೆ ಜೊತೆ 1 ಕ್ಕೆ 2—8—0

ವಿಳಾಸ.—ಕೆ. ನಾಥಮುನಿ ಅಂಡ್ ಸನ್ಸ್,

52—26 168. ಜೈನಾ ಬಜಾರ್, ಮದರಾಸು

# ಕರ್ಣಿಕ

## ಎಗ್ಯು ಮಿಕ್ಶ್ಚರ್

ಮಲೇರಿಯಾ, ಇನ್‌ಫ್ಲ್ಯುಯೆಂಝಾ ನಡುಕಜ್ವರ ಅಡವಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲ ಶುದ್ಧಿಯಾಗಿ ಬೆವರು ಬಂದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪. ಟಪ್ಪಾಲು ವೆಚ್ಚ ಬೇರೆ.

## ಸಾರಸಾಪರಿಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವುದಕ್ಕೆ ಇದು ಖಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿಗೆ ರೂ. ೧—೦—೦. ಟಪ್ಪಾಲು ವೆಚ್ಚ ಬೇರೆ.

ಕರ್ಣಿಕ ಬ್ರದರ್ಸ್

12—10 ದುಬಾಷ್ ಲೇನ್,

ಗಿರಗಾಂವ್, ಮುಂಬಾಯಿ.

## ಪುತ್ರ ಸಂತಾನದ ಎಣ್ಣೆ.

ಈ ಎಣ್ಣೆಯು ಒಬ್ಬ ದೊಡ್ಡ ಪಂಡಿತರಿಂದ ತಯಾರಿಸಿದ್ದು. ಹೆಂಗಸರಿಗೆ ಅನೇಕ ಕಾರಣಗಳಿಂದ ಗರ್ಭವು ನಿಲ್ಲುವುದಿಲ್ಲ. ಕೆಲವರಿಗೆ 3—4 ತಿಂಗಳ ಕಾಲ ನಿಂತು ನಂತರ ಹೋಗಿಬಿಡುವದು. ಇಂಥಾ ಹೆಂಗಸರು ಈ ಎಣ್ಣೆಯನ್ನು 15 ದಿನಗಳು ಸೇವಿಸುವುದರಿಂದ ಗರ್ಭವು ನಿಂತು ಪುತ್ರ ಸಂತಾನವಾಗುವುದು ಕೆಲವು ಹೆಂಗಸರಿಗೆ ಮುಟ್ಟಾಗುವ ಸಮಯದಲ್ಲಿಯೂ, ಮುಟ್ಟಾದ ನಂತರವೂ ಉಂಟಾಗುವ ಹೊಟ್ಟೆ ನೋವು ಮುಂತಾದವುಗಳನ್ನು ಖಂಡಿತ ಗುಣಪಡಿಸುವದು. ಈ ಎಣ್ಣೆಯನ್ನು ಬೊಂಬಾಯಿ, ಮದರಾಸು ಆಧಿಪತ್ಯಗಳಲ್ಲಿ ಮಕ್ಕಳಿಲ್ಲದವರು ಉಪಯೋಗಿಸಿ ಪುತ್ರ ಸಂತಾನ ಪಡೆದಿರುವರು. ಒಂದು ಬಾಟ್ಲಿಯನ್ನು ತರಿಸಿ ಪರೀಕ್ಷಿಸಿರಿ. ಉಪಯೋಗಿಸುವ ವಿಧ, ಔಷಧದ ಜೊತೆಯಲ್ಲಿ ಕಳುಹಿಸುತ್ತೇವೆ.

ಕ್ರಯ ಬಾಟಲ್ 1 ಕ್ಕೆ 2—8—0.

ವಿಳಾಸ:—ಕೆ. ಎಸ್. ರಾಧಾಕೃಷ್ಣ ಬ್ರದರ್ಸ್,

52—26 109. ಜೈನಾ ಬಜಾರ್ ರೋಡ್, ಮದರಾಸು.


... ಗಳು ಕೊಡಲಾದವಲ್ಲದೆ, ಒಂದನೇಯದಾಗಿ ಪಾಸಾದದಕ್ಕೆ ಮೆ ಯಂ. ಚಂಗಪ್ಪನವರಿಗೆ ಒಂದು ಚಿನ್ನದ ಪದಕವೂ ಕೊಡಲಾಯಿತೆಂದು ತಿಳಿದು ಸಂತೋಷಪಡುತ್ತೇವೆ.

ವೈನಾಡು ಕೊಡಗರು ಕಳೆದ ತಾ 27 ರಲ್ಲಿ ವೆ. ಬೊಪ್ಪಂಡ ಕುಟ್ಟೆಯ್ಯನವರ ಮನೆಯಲ್ಲಿ ಸೇರಿ ಕದಿರು ತೆಗೆದು ಔತಣದಲ್ಲಿ ಭಾಗಿಗಳಾದರೆಂದೂ, ಮದ್ರಾಸಿನ ಕೊಡಗರು ಈ ತಾ 1 ರಲ್ಲಿ ವೆ. ಕೊಂಗಂಡ ಅಚ್ಚಯ್ಯನವರ ಭವನದಲ್ಲಿ ಅವರು ಕೊಟ್ಟ ಹುತ್ತರಿ ಊಟವನ್ನು ಸ್ವೀಕರಿಸಿದರೆಂದೂ, ಬೊಂಬಾಯಿ ಕೊಡಗರು ಈ ತಾ. 9 ರಲ್ಲಿ ಅಲ್ಲಿಯ ಕೊಡಗು ಸಂಘದ ಆಶ್ರಯದಲ್ಲಿ ಹುತ್ತರಿ ಹಬ್ಬವನ್ನು ಆಚರಿಸಿದರೆಂದೂ ಬಾತ್ಮಿಗಳು ಬಂದಿವೆ. ಸ್ಥಳ ಸಂಕೋಚದಿಂದ ಅವುಗಳನ್ನು ವಿವರವಾಗಿ ಪ್ರಕಟಿಸಲು ಸಾಧ್ಯವಾಗಲಿಲ್ಲ.

## ಹಿಂದೂದೇಶ.

ಭೋಪಾಲ ಸಂಸ್ಥಾನದಲ್ಲಿ ಜೋರಾದ ಮಳೆ, ಬಿರುಗಾಳಿ ಉಂಟಾಗಿ ತುಂಬಾ ನಷ್ಟ ಸಂಭವಿಸಿದೆ

ತಮ್ಮ ಸರಹದ್ದಿನೊಳಗೆ ಸೇಂದಿ ಯಾ ಸಾರಾಯಿ ಅಂಗಡಿಗಳನ್ನು ಇಡಕೂಡದೆಂದು ಹೌರ ಮುನ್ಸಿಪಾಲಿಟಿಯವರು ನಿಶ್ಚೈಸಿರುವರು.

ಕರ್ನಾಟಕ ಸರ್ವ ಪಕ್ಷೀಯ ಪರಿಷತ್ತು ವಿಜಾಪುರದಲ್ಲಿ ಈ ತಾ. 16 ರಲ್ಲಿ ನಡೆಯುವದು. ಡಾಕ್ಟರ್ ಅನಿಬೆಸೆಂಟರವರು ಅಧ್ಯಕ್ಷರಾಗಿರುವರು.

ಲೋಕಪ್ರಖ್ಯಾತರಾದ ಗಾಮ ಮತ್ತು ಕಲ್ಲು ಎಂಬವರ ಕುಸ್ತಿಯ ಪ್ರದರ್ಶನವೂ, ಹಳ್ಳಿಯ ಆಟಗಳೂ ಕಾಂಗ್ರೆಸ್ ವಾರದಲ್ಲಿ ಕಲ್ಕತ್ತಾದಲ್ಲಿ ನಡೆಯುವವು.

ಪಂಡಿತ ಮೋತಿಲಾಲ್ ನೆಹರುರವರು ಕಲ್ಕತ್ತಾಕ್ಕೆ ಹೋಗುವಾಗ್ಯೆ ಅವರಿಗೆ ಸ್ವಾಗತ ಪತ್ರವನ್ನು ಒಪ್ಪಿಸಲು ಹೌರಾದ ಮುನ್ಸಿಪಾಲಿಟಿಯವರು ತೀರ್ಮಾನಿಸಿರುವರು.

ಮಿಸೆಸ್ ಕಮಲಾದೇವಿ ಚಟೋಪಾಧ್ಯಾಯರವರು ಜಿನೀವಾದಲ್ಲಿ ನಡೆಯಲಿಕ್ಕಿರುವ ಪ್ರಪಂಚದ ವಿದ್ಯಾಸಂಘಗಳ ಕೂಟಕ್ಕೆ ಅಖಿಲ ಭಾರತ ಉಪಾಧ್ಯಾಯರುಗಳ ಸಂಘದ ಪ್ರತಿನಿಧಿಯಾಗಿ ನೇಮಿಸಲ್ಪಟ್ಟಿರುವರು. ಅವರು ಬರುವ ಮೇ ತಿಂಗಳಲ್ಲಿ ಯೂರೋಪಿಗೆ ಹೋಗುವರು. ಅವರು ಬರ್ಲಿನ್ ಪಟ್ಟಣದಲ್ಲಿ ನಡೆಯುವ ಜನಾಂಗಗಳ ಪರಸ್ಪರ ಸ್ತ್ರೀಯರ ಕಾನ್‌ಫರನ್ಸಿಗೂ, ಜನಾಂಗಗಳ ಪರಸ್ಪರ ಲೇಬರ್ ಕಾನ್‌ಫರೆನ್ಸಿಗೂ ಹೋಗಲಿಕ್ಕಿರುವರು.

ಕಲ್ಕತ್ತಾದಲ್ಲಿ ಈ ತಾ. 22 ರಿಂದ 28ರ ವರೆಗೆ ಸರ್ವಪಕ್ಷೀಯ ಪರಿಷತ್ತೂ, 29 ರಿಂದ 31ರ ವರೆಗೆ ಇಂಡಿಯನ್ ನೇಶನಲ್ ಕಾಂಗ್ರೆಸ್ ಮಹಾಸಭೆಯೂ ಕೂಡುವವು. ಖಾದಿ, ಲಲಿತಕಲಾ, ಗೀತಾ ಪ್ರದರ್ಶನಗಳೂ ಆಗುವವು. ಸ್ತ್ರೀ ಸಮ್ಮೇಳನವೂ ಜರಗುವದು. ಕಾಂಗ್ರೆಸ್ ಚಪ್ಪರದಲ್ಲಿ ಇಪ್ಪತ್ತು ಸಾವಿರ ಜನರು ಸೇರಯಲು ಜಾಗ ತಯಾರಿಸಿರುವರು. ಅಧ್ಯಕ್ಷರಾದ ಪಂಡಿತ ಮೋತಿಲಾಲ್ ನೆಹರುರವರು ಈ ತಾ. 21ರಲ್ಲಿ ಅಲ್ಲಿಗೆ ಹೋಗುವಾಗ ಅವರನ್ನು 34 ಕುದುರೆಗಳಿಂದ ಎಳೆಯಲ್ಪಡುವ ರಥದಲ್ಲಿ ಕುಳ್ಳಿರಿಸಿ 2000 ಸ್ವಯಂಸೇವಕರು ಮತ್ತು 50 ಕುದುರೆ ಸವಾರರೊಂದಿಗೆ ಅತಿ ವೈಭವದಿಂದ ಮೆರವಣಿಗೆ ನಡಿಸುವ ಏರ್ಪಾಡು ಮಾಡಿದ್ದಾರೆ ಆ ದಿನವೇ ಮಹಾತ್ಮ ಗಾಂಧಿಯವರೂ, ಸೈಮನ್ ಕಮಿಷನೂ ಕಲ್ಕತ್ತೆಗೆ ತಲಪುವರಂತೆ.

## ವಿದೇಶ.

ಜಿ. ಅಮೀರ್ ಅಲಿಯವರ ಉಮ್ಮವಾರಿಯಲ್ಲಿದ್ದ ಲಂಡನ್ ಮುಸ್ಲಿಮ್‌ಲೀಗ್ ಬರಖಾಸ್ತು ಮಾಡಲ್ಪಟ್ಟು ಅದರ ಉಳಿದ ಹಣವು ಅಲ್ಲಿಯ ಮುಸ್ಲಿಮ್ ಶ್ಮಶಾನ ಫಂಡಿಗೆ ಕೊಡಲಾಗಿದೆ

ಇಂಪೀರಿಯಲ್ ಪ್ರೆಸ್ಸ್ ಕಾನ್‌ಫರೆನ್ಸೊಂದನ್ನು 1930 ನೇ ಜೂನಿನಲ್ಲಿ ಲಂಡನ್ ಪಟ್ಟಣದಲ್ಲಿ ನಡಸುವ ಏರ್ಪಾಡುಗಳಾಗುತ್ತಿವೆ. ಇದಕ್ಕೆ ಬ್ರಿಟಿಷ್ ಚಕ್ರಾಧಿಪತ್ಯದಿಂದೆಲ್ಲಾ ಪ್ರತಿನಿಧಿಗಳನ್ನು ಆಹ್ವಾನಿಸುವರಂತೆ.




ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಐ ರಾತ್ರಿ ಗಂಟೆಯನ್ನು ತೋರಿಸುವವು ಇದರ ಕೇಸು ಭಂಗಾರಕ್ಕೆ ಸರಿಸಮಾನವಾಗಿರುವದು. ಇದಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ ಮಾತ್ರ ರೂ. 4—14—0.

ವಿಳಾಸ —ಲೀಗಲ್ ವಾಚ್ ಕಂಪೆನಿ,

52—26 ಪೋ. ಬಾ. 243 ಮದರಾಸು.


## ಕೊಡಗಿನಲ್ಲಿ ಸಹಕಾರ ಚಳವಳಿ.

ವೀರರಾಜಪೇಟೆ ಮೈಸ್ಕ್ಯಾಲ್ ಡಿಬೇಟಿಂಗ್ ಸೊಸೈಟಿಯ ಪರವಾಗಿ ವಾರ್ಲಿಮೊಂಟ್ ಮಾದರಿಯಲ್ಲಿ "ಕೊಡಗಿನಲ್ಲಿ ಸಹಕಾರ ಚಳವಳಿವು ಪ್ರಯೋಜನಕಾರಿಯಾಗಿದೆ, ಪ್ರ ಇಲ್ಲ' ಎಂಬುದನ್ನು ಕುರಿತು ಬೋರ್ಡ್ ಸ್ಕೂಲ್ ಹಾಲಿನಲ್ಲಿ ಕಳೆದ ತಾ. 15 ರಲ್ಲಿ ಒಂದು ವಾಗ್ವಾದವು ನಡೆಯಿತು. ಮ. ಶ್ರೀ. ಎ ಬಿ ಚಂಗಪ್ಪ ಯಂ. ಎಲ್. ಸಿ. ಯವರು ಸ್ಪೀಕರಾ (ಅಧ್ಯಕ್ಷ) ಗಿದ್ದರು.

ಮೆ. ಪಿ. ಯಂ, ಚಂಗಪ್ಪನವರು ಸಹಕಾರ ಚಳವಳಿಯಿಂದ ಕೊಡಗಿನಲ್ಲಿ ಬಹಳ ಮಟ್ಟಿಗೆ ಜನಜಾಗ್ರತಿಯುಂಟಾಗಿದೆಯೆಂದೂ, ಮೆ. ಎ.೦. ಯಂ. ಮುತ್ತಣ್ಣರವರು ಬಿ. ಎ. ಬಿ. ಎಲ್, ಅದಕ್ಕೆ ವಿರೋಧಿಸಿಯೂ ಮಾತನಾಡಿದರು

ಸದರಿ ದಿನ ಮಧ್ಯಾಹ್ನ 2—30 ಕ್ಕೆ ಸಭೆಯು ನೆರೆದನಂತರ ನಿರ್ಣಯಗಳ ಕುರಿತು ಪ್ರಶ್ನೋತ್ತರಗಳು ನಡೆದು ಮುಂದೆ ಪರ್ಚಗೆ ಇರತಕ್ಕ ನಿರ್ಣಯಗಳನ್ನು ಠರಾಯಿಸಿಕೊಂಡದ್ದಾಯಿತು. ಅನಂತರ ಆ ದಿನದ ಚರ್ಚೆಯು ಆರಂಭವಾಯಿತು

ಮೆ. ಪಿ. ಯಂ. ಚಂಗಪ್ಪನವರು ಸಹಕಾರದ ಉದ್ದೇಶ, ಗಳಾದ ಪರಸ್ಪರ ಸಹಾಯ, ವಿತರಣೆ, ಇತ್ಯಾದಿಗಳನ್ನು ವಿವರಿಸಿ, ಸಹಕಾರ ಚಳವಳಿವು ಕೈಗೂಡಿಕೆ ಕಾರ್ಯನಗಳ ಎ.ಟ

ವೈಸರಾಯ್ಸ್ ಪೆಂಟರು—'ಆಯುರ್ವೇದಿಕ್' ಔಷಧಿಗಳಿಗೆ | ಚಿಲಿಯನ್ ನೈಟ್ರೇಟ್ ಆಫ್ ಸೋಡಾ

ಕೊಡಗು, ತಾರೀಕು ೧೪ನೇ ಡಿಸೆಂಬರ್ ೧೯೩೮.

(4ನೇ ಪುಟದಿಂದ ಮುಂದುವರಿದದ್ದು.)

ನ್ನಡ ವಿಶ್ವವಿದ್ಯಾಲಯವನ್ನು ಏರ್ಪಡಿಸಿ, ಕನ್ನಡ ವಾಙ್ಮಯವನ್ನು ಅಭಿವೃದ್ಧಿಗೊಳಿಸಬಹುದು. ಇದು ಕನ್ನಡಿಗರಾದ ನಮ್ಮೆಲ್ಲರ ಕರ್ತವ್ಯ. ಕೃಷಿ ಇಲ್ಲದೆ ನಮ್ಮ ದೇಶವು ವ್ಯಾಪಾರದಲ್ಲಿ ಬಹಳ ಹಿಂದೆ ಬಿದ್ದಿದೆ. ವ್ಯಾಪಾರವಿಲ್ಲದೆ ದೇಶದ ಐಶ್ವರ್ಯವು ಹೆಚ್ಚಲಾರದು. ನೀರಿನ ಕಾಮಗಾರಿ ಏನೊಂದೂ ಇಲ್ಲಿ ಇಲ್ಲ. ಹಾರಂಗಿ ಮುಂತಾದ ದೊಡ್ಡ ಕೆಲಸಗಳಿಗೆ ಹಣವಿಲ್ಲ. ಇಷ್ಟರ ವರೆಗೆ ನಾವು ಬರೇ ಮಳೆನೀರನ್ನೇ ನಂಬಿದ್ದರಿಂದ ನಮಗೆ ಕಳೆದ ನಾಲ್ಕೈದು ವರ್ಷಗಳಲ್ಲಿ ಕಷ್ಟ ಸಂಭವಿಸಿದ್ದಾಗಿದೆ. ನೀರಿನ ಕಾಮಗಾರಿಗಳನ್ನು ಮಾಡಿಕೊಳ್ಳದೆ ಹೋದರೆ ವ್ಯವಸಾಯದ ಭೂಮಿಯು ಹೆಚ್ಚು ವರದ ಬದಲು ಕ್ರಮೇಣ ಕಡಿಮೆಯಾಗುವದು. ಗಟ್ಟದ ಉದ್ಯೋಗಸ್ಥರ (ಎಕ್ಸ್‌ಪರ್ಟ್ಸ್) ಅಭಿಪ್ರಾಯ ಸಿಕ್ಕುವದು ನಮಗೆ ಈಗ ಕಷ್ಟ. ದೊಡ್ಡ ಪ್ರಾಂತ್ಯವಾದರೆ ಈ ಕಷ್ಟವು ನಿವಾರಣೆಯಾಗುವದು. ಇಂಡಿಯಾ ಸರ್ಕಾರದವರು ನಮಗೆ ಹಣ ಕೊಡಬಹುದೆಂದು ಕೇವಲ ಭ್ರಾಂತಿ. 1880 ರಿಂದ 1922 ರ ವರೆಗೆ ಇಂಡಿಯಾ ಸರ್ಕಾರದವರು ಸುಮಾರು 80 ಲಕ್ಷ ಉಳಿತಾಯ ಇಲ್ಲಿಂದ ತೆಗೆದುಕೊಂಡು ಹೋಗಿದ್ದರೂ, ನಾವು ಎಷ್ಟು ಕೂಗಿಕೊಂಡರೂ ಈ ವರೆಗೂ ಒಂದು ಕಾಸೂ ವಾಪಸು ಕೊಡಲಿಲ್ಲ.

ಬೇರೆ ಕರ್ನಾಟಕ ಪ್ರದೇಶಗಳಲ್ಲಿ ಏಕೀಕರಣದ ಚಳವಳಿಯು ಪ್ರಬಲವಾಗಿ ನಡೆಯುತ್ತಿದೆ. ನೆಹರು ಕಮಿಟಿಯವರೂ, ಜಗದು ಒಪ್ಪಿದರೆ ಮತ್ತು ಆದಾಯ ವೆಚ್ಚ ನಿಭಾಯಿಸಿಕೊಳ್ಳುವುದಾದರೆ ಕರ್ನಾಟಕ ಪ್ರಾಂತ್ಯ ಮಾಡಬಹುದೆಂದು ಶಿಫಾರಸ್ಸು ಮಾಡಿರುವರು. ಈ ಚಳವಳಿಗೆ ಉತ್ಸಾಹ ಕೊಡಬೇಕಾದದ್ದು ನಮ್ಮ ಕರ್ತವ್ಯ. ಈ ದೇಶದ ಪ್ರಾಮುಖ್ಯ ರಾಜಕೀಯ ಸಂಸ್ಥೆಯಾದ ಜಮೀನ್ದಾರರ ಸಂಘದ ಆಶ್ರಯದಲ್ಲಿ ಕೂಡಿದ ಎಲ್ಲಾ ಪಾರ್ಟಿಗಳ ಪ್ರತಿನಿಧಿಗಳ ಕಮಿಟಿಯಲ್ಲಿಯೂ ಈ ಠರಾವು ಒಪ್ಪಲಾಗಿದೆ. ಎಲ್ಲಾ ಪಾರ್ಟಿಗಳ ಪ್ರತಿನಿಧಿಗಳ ಕಮಿಟಿ ಆಗಲಿಲ್ಲವೆಂದು ನಿನ್ನೆ ಹೇಳಿದ ಮೆ. ಮೇದಪ್ಪನವರು ಅವ್ವಾನಿಸಲ್ಪಟ್ಟರೂ ಸದರಿ ಕಮಿಟಿ ಮೀಟಿಂಗಿಗೆ ಬರಲಿಲ್ಲ.

ಇದಲ್ಲದೆ, ಈ ಮೊದಲು ಪಾಸಾದ ರಾಜಕೀಯ ರಚನೆಗೂ ಒಪ್ಪುವದು ಅಸಂಭವವೆಂದು ಕೆಲವರು ಹೇಳಬಹುದು. 35ನೇ ಠರಾವಿಗೆ ಒಪ್ಪಿದ್ದರಿಂದ ಕೊಡಗು ಸಂಪೂರ್ಣ ಜವಾಬ್ದಾರಿ ಸರ್ಕಾರಕ್ಕೆ ತಯಾರಿದೆಯೆಂದು ತೋರಿಸಿದಂತಾಯಿತು. ಆದರೆ ಪ್ರತ್ಯೇಕ ಸರ್ಕಾರ ನಡಿಸುವದು ಬಹು ಕಷ್ಟ ಮತ್ತು ಹೆಚ್ಚಿನ ಪ್ರಯೋಜನಕಾರಿಯಲ್ಲವಾದುದರಿಂದ ಏಕೀಕರಣವಾಗಬೇಕೆಂದು ಹೇಳಬಹುದಾಗಿದೆ. ಏಕೀಕರಣವಾಗಲು ಸ್ವಲ್ಪ ಕಾಲ ಹಿಡಿಯುವ ಕಾರಣ ಅಷ್ಟರವರೆಗೆ ಈಗಿನ ಸರ್ಕಾರದ ಆಡಳಿತದಲ್ಲಿರುವದು ಇಷ್ಟ ಇದುದರಿಂದಲೂ, ಏಕೀಕರಣಕ್ಕೆ

ಇನ್ನು ಕೆಲವರು ಒಪ್ಪದ್ದರಿಂದ ಅವರಿಗೆ ಪ್ರತ್ಯೇಕ ಸರ್ಕಾರ ನಡಿಸುವ ಎಡೆಕೊಟ್ಟು ಅನುಮತಿಯಿಂದ ಆಧಾರವನ್ನು ನಮ್ಮ ಕಡೆ ಸೇರಿಸಿಕೊಳ್ಳಲಿಕ್ಕಾಗಿಯೂ ತತ್ಕಾಲಕ್ಕೆ ಜವಾಬ್ದಾರಿ ಸರ್ಕಾರದ ಹೊಸ ರಚನೆಯನ್ನು ಸೂಚಿಸಿರುವದಾಗಿದೆ.

ಮೆ. ಕರುಂಬಯ್ಯನವರು ಠರಾವನ್ನು ಅನುಮೋದಿಸಿ ಹೇಳಿದ್ದೇನೆಂದರೆ—ಕೊಡಗಿನಲ್ಲಿ ಈಗ ಮೂರು ತರಹದ ಅಭಿಪ್ರಾಯವಿದೆ. ಕೊಡಗು ಈಗ ಇರುವ ಹಾಗೆ ಪ್ರತ್ಯೇಕ ಸರ್ಕಾರವುಳ್ಳದ್ದಾಗಿಯೇ ಇರಬೇಕು ಎಂಬುದು ಒಂದು ಅಭಿಪ್ರಾಯ. ಕೊಡಗನ್ನು ಮದ್ರಾಸು ಪ್ರಾಂತ್ಯಕ್ಕೆ ಸೇರಿಸಬೇಕು ಎಂಬುದು 2 ನೇದು. ಕೊಡಗನ್ನು ಸ್ವಾತಂತ್ರ್ಯ ಕರ್ನಾಟಕ ಪ್ರಾಂತ್ಯಕ್ಕೆ ಸೇರಿಸಬೇಕು ಎಂಬುದು 3 ನೇದು. ಒಂದನೇ ಅಭಿಪ್ರಾಯದಂತೆ ನಡಿಸಲು ಸಾಧ್ಯವಿಲ್ಲವೆಂಬುದಕ್ಕೆ ಈ ಠರಾವಿನ ಸೂಚಕರು ಸಾಕಷ್ಟು ಕಾರಣಗಳನ್ನು ಕೊಟ್ಟಿರುವದರಿಂದ ನಾನು ಅವುಗಳನ್ನು ಪುನಃ ಹೇಳುವ ಅವಶ್ಯವಿಲ್ಲ. 2 ನೇ ಅಭಿಪ್ರಾಯವನ್ನು ಜಾರಿಗೆ ತರುವದೆಂದರೆ ಅದಕ್ಕೆ ಒತ್ತಾಸೆಕೊಡುವವರು ಬಹಳ ಕಡಿಮೆ. ಭಾಷೆಯ ಅಡಚಣೆಯು ದೊಡ್ಡದಾಗಿದೆ. ಅಲ್ಲದೆ ಆ ಪ್ರಾಂತ್ಯವನ್ನೇ ಭಾಷಾವಾರು ವಿಂಗಡಿಸಬೇಕೆಂಬ ಪ್ರಯತ್ನಗಳು ನಡೆಯುತ್ತಿವೆ. ಹಾಗಾದರೆ ನಮಗೆ ಉಳಿದದ್ದೇ 3ನೇ ಅಭಿಪ್ರಾಯ ಅಂದರೆ ಕರ್ನಾಟಕ ಏಕೀಕರಣದ್ದು. ಭಾಷೆಯ ಮತ್ತು ವಾಙ್ಮಯದ ಅನುಕೂಲವು ಇದಕ್ಕೆ ದೊಡ್ಡ ಉತ್ತೇಜನ ಕೊಡುತ್ತಿದೆ. ಇದನ್ನೇನೇ ಹೆಚ್ಚಿನ ಜನರು ಒಪ್ಪುವದಾಗಿದೆ. ಅದರಲ್ಲಿ ಸ್ವಾತಂತ್ರ್ಯ ಕರ್ನಾಟಕ ಪ್ರಾಂತ್ಯಕ್ಕೆ ಕೊಡಗನ್ನು ಸೇರಿಸಬೇಕೆಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಏಕೀಕರಣದ ವಿಷಯ ಸರ್ಕಾರದವರು ಯಾವ ಅಭಿಪ್ರಾಯವನ್ನೂ ಕೊಡುವಂತಿಲ್ಲ. ಆದರೆ ಕರ್ನಾಟಕ ಪ್ರಾಂತ್ಯಕ್ಕೆ ಯಾವ ಯಾವ ಪ್ರದೇಶಗಳನ್ನು ಸೇರಿಸುವದೆಂಬುದನ್ನು ತಿಳಿಯಲು ನಾನು ಇಚ್ಛೈಸುತ್ತೇನೆಂದು ಕಮಿಷನರು ಹೇಳಿದರು.

ಠರಾವು ಓಟಿಗೆ ಹಾಕಲಾಗಿ 1. ಕುಶಾಲಪ್ಪನವರು, 2. ವೆಂಕಪ್ಪಯ್ಯನವರು, 3. ಬೆಳ್ಯಪ್ಪನವರು, 4. ಕರುಂಬಯ್ಯನವರು, 5 ಮುದ್ದಪ್ಪನವರು, 6. ಉತ್ತಯ್ಯನವರು, 7 ... ಣ್ಣಪ್ಪನವರು ಮತ್ತು 8. ಸಯ್ಯದ್ ಅಹ್ಮದ್‌ರವರು ಪರವಾಗಿಯೂ, 1 ನಿಕಲ್ಸ್‌ರವರು, 2. ಮೇದಪ್ಪನವರು, 3 ... ಚಂಗಪ್ಪನವರು ಮತ್ತು 4 ಮಂದಣ್ಣನವರು ವಿರೋಧವಾಗಿಯೂ ಓಟುಮಾಡಿ, 1 ಸರ್ಕಾರಿ ಮೆಂಬರುಗಳು, 5 ಪೂ... ವರು ಮತ್ತು 6 ಕಾಳಪ್ಪನವರು ಯಾವ ಕಡೆಗೂ ಓಟುಕೊಡದ್ದರಿಂದ ಠರಾವು ಬಹುಮತದಿಂದ ಪಾಸಾಯಿತು.

ಮಧ್ಯಾಹ್ನ 1 ಗಂಟೆಗೆ ಮೀಟಿಂಗು ಮುಕ್ತಾಯವಾಯಿತು.

ಬದನ್ನು ಚೀಫ್‌ಕಮಿಷನರು ಇಂಡಿಯಾ ಸರ್ಕಾರಕ್ಕೆ ತಿಳಿಸತಕ್ಕದ್ದು" ಎಂಬ ಠರಾವನ್ನು ಸಭೆಯ ಮುಂದಿಟ್ಟು ಮೆ. ಪಿ. ಐ. ಬೆಳ್ಯಪ್ಪನವರು ಮಾತಾಡಿದ್ದೇನೆಂದರೆ—ಈ ವಿಷಯವು ದೇಶದಲ್ಲಿ ಈಗ 3 ವರ್ಷಗಳಿಂದ ಚರ್ಚಿಸಲ್ಪಡುತ್ತಿದ್ದು ದಿನೇ ದಿನೇ ಪ್ರಾಬಲ್ಯವನ್ನು ಪಡೆಯುತ್ತಿದೆ. ಇನ್ನೂ ಕೆಲವರು ಬೇರೆ ಪ್ರಾಂತ್ಯದೊಂದಿಗೆ ಸೇರಲು ಹೆದರುತ್ತಾರೆ. ಆದರೆ ಅವರ ಭಯವು ಸಕಾರಣವಲ್ಲ.

ಈ ಚಿಕ್ಕ ಪ್ರಾಂತ್ಯವನ್ನು ನಮ್ಮ ಸಣ್ಣ ಉತ್ಪತ್ತಿಯಿಂದ ಜನರಿಗೆ ಸಾಕಷ್ಟು ಪ್ರಯೋಜನವಾಗುವಂತೆ ಪ್ರತ್ಯೇಕವಾಗಿ ಆಳಲು ಬಹಳ ಕಷ್ಟ. ಗಂಧದ ಉತ್ಪತ್ತಿಯು ಯಾವಾಗಲೂ ಒಂದೇ ರೀತಿ ಇರಲಾರದು. ಕುಡಿತವನ್ನು ನಿಲ್ಲಿಸಬೇಕಾದರೆ ಅಬ್ಕಾರಿ ಉತ್ಪತ್ತಿಯನ್ನು ಕ್ರಮೇಣ ಬಿಡಬೇಕಾಗುತ್ತದೆ. ಕೊಡಗಿನ ಮೂರು ಮುಖ್ಯ ಉತ್ಪತ್ತಿಗಳ ಪೈಕಿ ಇವು ಎರಡಾಗಿವೆ. ಈಗಿನ ಸರ್ಕಾರದ ಖರ್ಚು ಸ್ವಲ್ಪ ಕಡಿಮೆ ಮಾಡಬಹುದಾದರೂ, ಜವಾಬ್ದಾರಿ ಸರ್ಕಾರ ಸಿಕ್ಕಿದಾಗ ಖರ್ಚು ಸ್ವಲ್ಪ ಹೆಚ್ಚಬಹುದು. ಆದುದರಿಂದ ಆದಾಯ ವೆಚ್ಚವನ್ನು ಸಂಪಾದಿಸುವದು ಕಷ್ಟ. ಹೈಕೋರ್ಟಿನ ತೊಂದರೆ ಇದೆ. ಕೊಡಗಿಗೇ ಪ್ರತ್ಯೇಕ ಹೈಕೋರ್ಟು ಇಡಲು ಸಾಧ್ಯವಿಲ್ಲ. ಆದುದರಿಂದಲೇ ತತ್ಕಾಲ ಮದ್ರಾಸು ಹೈಕೋರ್ಟನ್ನು ಒಪ್ಪಿಕೊಳ್ಳುವದು ಉತ್ತಮವೆಂದು ನಾನು ಮೊದಲು ಸೂಚಿಸಿದ್ದಾಗಿದೆ.

ದೊಡ್ಡ ಉದ್ಯೋಗಸ್ಥರನ್ನು ವರ್ಗಾವರ್ಗಿ ಮಾಡದ್ದರಿಂದ ಜನರಿಗೆ ಉಂಟಾಗುತ್ತಿರುವ ಕಷ್ಟವನ್ನು ಸಹಿಸಲಾರದೆ ವರ್ಗಾವರ್ಗಿ ಮಾಡಬೇಕೆಂಬ ಚಳವಳಿ ಎದ್ದಿತು. ಅದಕ್ಕೆ ಸರ್ಕಾರವು ಗಮನ ಕೊಡದ್ದು ವ್ಯಸನಕರ. ಈ ತತ್ವಕ್ಕೆ ಸರ್ಕಾರದವರು ಒಪ್ಪಿದರೂ, ಇಷ್ಟು ಚಿಕ್ಕ ಪ್ರಾಂತ್ಯದಲ್ಲಿ ಅದನ್ನು ಜಾರಿಗೆ ತರಲು ಅಸಾಧ್ಯವಾದುದರಿಂದಲೇ ಅವರು ಸುಮ್ಮನಾದದ್ದೆಂದು ಕಾಣುತ್ತೆ. ಏಕೀಕರಣವು ಇದಕ್ಕೆ ಸುಲಭ ಉಪಾಯವಾಗುತ್ತೆ. ನಮಗೆ ಪ್ರೌಢ ವಿದ್ಯಾಭ್ಯಾಸದ ಅಡಚಣೆಯು ದೊಡ್ಡದಾಗಿದೆ. ಇಲ್ಲಿ ಒಂದು ಕಾಲೇಜನ್ನೂ ಕಟ್ಟಿ ಇಡಲು ಸಾಧ್ಯವಾಗಿಲ್ಲ. ಕರ್ನಾಟಕ ಪ್ರಾಂತ್ಯವಾದರೆ ಕ

(5ನೇ ಪುಟದಲ್ಲಿ ಮುಂದುವರಿದಿದೆ)


# "ಔಷಧ ಸೀಸೆಗಳಿಗಿಂತಲೂ ಬರೇ ಜೀವನ ಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು."

**ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!**

ಆನರಬಲ್. ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯ ಚಂದ್ರಿಕೆ" ... ಆರೋಗ್ಯಬೋಧಕವಾದ ಮಾಸ ಪತ್ರಿಕೆಯು, ನಿಮಗೆ ಆರೋಗ್ಯ ದೃಢಕಾಯರಾಗಿ ಜೀವಿಸುವ ಮಾರ್ಗವನ್ನೂ, ... ಡಾಕ್ಟರುಗಳಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟ ರೋಗ ವಿಚಾರವನ್ನೂ ಬೋಧಿಸುವುದು.

ಈ ಆರೋಗ್ಯ ಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ, ಬಹು ಕಾಲದಿಂದ ಶಸ್ತ್ರ ಚಿಕಿತ್ಸೆಯಲ್ಲಿಯೂ ... ಷಧ ಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ... ಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಎಂಬೀ ಮಾಸ ಪತ್ರಿಕೆಯಲ್ಲಿ ಆಹಾರ ಕ್ರಮ, ರೋಗನಿವಾರಣೋಪಾಯಗಳು, ... ಪೋಷಣೆ, ರೋಗಿಗಳ ಉಪಚಾರ ಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಆಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿ ತಂದೆ ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವುವು. ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿ...

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ, ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ ಕನ್ನಡ, ತೆಲುಗು, ತಮಿಳು, ಇಂಗ್ಲಿಷ್ ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದು ... ವುದು. ಟಪಾಲು ದಾಕಲು ಕೂಡ ನೀವು ಕೊಡಬೇಕಾದುದಿಲ್ಲ.

52—13 ಮ್ಯಾನೇಜರ್, ಆರೋಗ್ಯಚಂದ್ರಿಕೆ, 323 ತಂಬುಶೆಟ್ಟಿ ಬೀದಿ, ಮದರಾಸು.



'ಬೆಲ್ಜಿಯನ್' ತೋಟದ ಕೋವಿಗ

ಹೊಗೇ ರಹಿತವಾದ 12 ನಂಬರಿನ ಇಂಗ್ಲಿಷ್ "ಎಲೇ" ಚಿಲ್ಲು ತುಂಬಿದ ತೋಟಗಳು 100 ಕ್ಕೆ ರೂ ...
ಅಮೇರಿಕನ್ ವೇಸ್ಟರನ್ " " " 100 ಕ್ಕೆ ರೂ ...
ಬೆಲ್ಜಿಯನ್ 100 ಕ್ಕೆ ರೂ. ...

ಎಲ್ಲಾ ತರದ ಕೋವಿಗಳು, ರೈಫಲ್‌ಗಳು, ರಿವಾಲ್ವರ್‌ಗಳು, ಪಿಸ್ತೂಲ್‌ಗಳು ಮತ್ತು ಚಿಲ್ಲು ಮದ್ದು ವಗೈರೆ ಬೇಟೆಗಾರರಿಗೆ ಬೇಕಾಗಿರುವ ಎಲ್ಲಾ ಸಾಹಿತ್ಯಗಳು ಸುಲಭ ದರದಲ್ಲಿ ದೊರಕುತ್ತೆ.

ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಂಪನಿಯ ಕೆಟಲಾಗೊಂದು ಮುಫತ್ತಾಗಿ ರವಾನಿಸಲ್ಪಡುವುದು.

5

Abdoolally Noorbhoy,
Arms & Ammunition Dealers,
248—250 Abdul Rehman Street
Bombay 3. Telegrams "Guidance"



ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!

# ಟಿ. ರಾಮರಾವ್,

**ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.**



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮಾಫೋನ್‌ಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಬೆಳ್ಳಿಯ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಒಟ್ಟಾಗಿಯೂ, ಚಿಲ್ಲರೆಯಾಗಿಯೂ ಯಾವಾಗಲೂ ದೊರೆಯುತ್ತವೆ. ನಮ್ಮಲ್ಲಿ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ "ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಪಡೆಯಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತ ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಮುಖೇನ ಬರೆದು ಈಗಲೇ ತಿಳಿಯಬಹುದು.

24—2

# ವರ್ತಮಾನ ಸಂಗ್ರಹ.

## ಒಳದೇಶ.

ಬೆಂಗಳೂರು ಸಿಟಿ ಮುನ್ಸಿಪಾಲಿಟಿಯ ಕಮಿಷನರಾಗಿದ್ದ ಕೋದಂಡ ರಾಮಯ್ಯನವರು ಈಗ ಸರ್ಕಾರದವರಿಂದ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ಮೆ. ಪಂಡೇಟಿರ ಅಪ್ಪಯ್ಯನವರ ಪತ್ನಿಯವರು ಅವಳಿ ಮಕ್ಕಳನ್ನು ಹೆತ್ತು 17 ದಿವಸಗಳಲ್ಲಿ ನಿನ್ನೆ ರಾತ್ರಿ ಮಡಿಕೇರಿಯಲ್ಲಿರುವ ಅವರ ಭವನದಲ್ಲಿ ಶಿವಾಧೀನರಾದರೆಂದು ತಿಳಿಸ ವ್ಯಸನಪಡುತ್ತೇವೆ.

ಕೊಡಗಿನ ಸರ್ಕಾರಿ ಉದ್ಯೋಗಸ್ಥರಿಗಾಗಿ ಮದ್ರಾಸು ಯುನಿವರ್ಸಿಟಿಯ ಟೆಸ್ಟ್ ಪರೀಕ್ಷೆಯು ಈ ತಾ. 11 ರಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಪ್ರಾರಂಭವಾಗಿದೆ. ಅದು ತಾ. 15 ರವರೆಗೆ ನಡೆಯುವದು.

ಕೋಟಿಬೆಟ್ಟದ ಮೆ. ಬೆಳ್ಯಪ್ಪನವರಿಗೂ, ಮೆ. ಅಳಮಂಡ ತಿಮ್ಮಪ್ಪನವರಿಗೂ ನಡೆಯುತ್ತಿದ್ದ ಕ್ರಿಮಿನಲ್ ಮೊಕದ್ದಮ್ಮೆ ಕೋರ್ಟಿನ ಹೊರಗೆ ರಾಜಿಯಿಂದ ತೀರ್ಮಾನವಾಗಿದೆಯೆಂದು ತಿಳಿಯಬರುತ್ತದೆ.

ಈ ತಿಂಗಳ ಆಖೈರು ವಾರದಲ್ಲಿ ಕಲ್ಕತ್ತಾದಲ್ಲಿ ನಡೆಯುವ ಸರ್ವಪಕ್ಷೀಯ ಪರಿಷತ್ತಿಗೂ, ಇಂಡಿಯನ್ ನೇಶನಲ್ ಕಾಂಗ್ರೆಸ್ಸಿಗೂ ಡೆಲಿಗೇಟರುಗಳಾಗಿಯೂ, ಪ್ರೇಕ್ಷಕರಾಗಿಯೂ ಕೊಡಗಿನಿಂದ ಆರೇಳು ಜನರು ಹೋಗುವರೆಂದು ವರ್ತಮಾನವಿದೆ.

ಕೊಡಗು ಜಿಲ್ಲಾ ಕಾಂಗ್ರೆಸ್ ಮಂಡಲಿಯವರು ಸೈಮನ್ ಕಮಿಷನನ್ನು ಬಹಿಷ್ಕರಿಸುವ ಠರಾವನ್ನು ಮಂಜೂರು ಮಾಡಿದ್ದರಿಂದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರ ಸದರಿ ಜಿಲ್ಲಾ ಮಂಡಲಿಯ ಸದಸ್ಯರನ್ನು ಅಭಿನಂದಿಸಿ ಠರಾವು ಪಾಸುಮಾಡಿರುವರು.

ಮೈಸೂರಿನಿಂದ ವೀರರಾಜಪೇಟೆಗೆ ಓಡುತ್ತಿದ್ದ ಶ್ರೀ ಚಾಮುಂಡಿ ಮೋಟಾರು ಸರ್ವಿಸಿನ ಬಸ್ಸು ತಾ. 29—11—28 ರ ಹುಣಸೂರು ರಸ್ತೆಯಲ್ಲಿ ಮಗುಚಿ ಬಿತ್ತೆಂತಲೂ, ಪ್ರಯಾಣಿಕರಿಗೆ ಅಲ್ಪ ಸ್ವಲ್ಪ ನೋವಲ್ಲದೆ ಅನಾಹುತವೇನೂ ಆಗಲಿಲ್ಲವೆಂತಲೂ ವರ್ತಮಾನ.

ನಾಪೋಕ್ಲು ಗ್ರಾಮದ ಮೆ. ಸಂಣೈಯ್ಯ ಪಟೇಲರವರ ಮನೆಯಲ್ಲಿ ಈ ತಾ. 8ರಲ್ಲಿ ಬಾಲಣ್ಣನೆಂಬವರ ಹೆಂಡತಿ ಆತ್ಮಹತ್ಯ ಮಾಡಿಕೊಂಡಳೆಂದೂ, ಅವಳ ಶವವು ಮಡಿಕೇರಿ ಆಸ್ಪತ್ರೆಯಲ್ಲಿ ಪರೀಕ್ಷಿಸಲ್ಪಟ್ಟಿತೆಂದೂ, ಕೇಸನ್ನು ಪೋಲೀಸಿನವರು ವಿಚಾರ ಮಾಡುತ್ತಿರುವರೆಂದೂ ತಿಳಿಯುತ್ತೇವೆ.

ಈ ತಾ. 2ರಲ್ಲಿ ನಡೆದ ಕಲ್ಕತ್ತಾ ಅಷ್ಟಾಂಗ ಆಯುರ್ವೇದಿಕ್ ಕಾಲೇಜಿನ ಕಾನ್ವೊಕೇಶನ್‌ನಲ್ಲಿ, ಆ ಕಾಲೇಜಿನ ಆಖೈರು ಪರೀಕ್ಷೆಯಲ್ಲಿ ತೇರ್ಗಡೆಯಾದದಕ್ಕೂ, ಸಂಕರ ಗಾವ ಕೆಲಸ ಮಾಡಿದದಕ್ಕೂ ಮೆ. ಮಂಡೇಟ್ಟಿರ ಚಂಗಪ್ಪನವರಿಗೂ ಮೆ. ಕೊಂಗಂಡ ಚಿಟ್ಟಿಯಣ್ಣನವರಿಗೂ ಪ್ರತ್ಯೇಕ ಡಿಗ್ರಿಗಳು ಕೊಡಲಾದವಲ್ಲದೆ, ಒಂದನೇಯದಾಗಿ ಪಾಸಾದದಕ್ಕೆ ಮೆ. ಯಂ. ಚಂಗಪ್ಪನವರಿಗೆ ಒಂದು ಚಿನ್ನದ ಪದಕವೂ ಕೊಡಲಾಯಿತೆಂದು ತಿಳಿದು ಸಂತೋಷಪಡುತ್ತೇವೆ.

ಮೈಸೂರು ಕೊಡಗರು ಕಳೆದ ತಾ 27 ರಲ್ಲಿ ಮೆ. ಬೊಪ್ಪಂಡ ಕುಟ್ಟಯ್ಯನವರ ಮನೆಯಲ್ಲಿ ಸೇರಿ ಕದಿರು ತೆಗೆದು ಔತಣದಲ್ಲಿ ಭಾಗಿಗಳಾದರೆಂದೂ, ಮದ್ರಾಸಿನ ಕೊಡಗರು ಈ ತಾ 1 ರಲ್ಲಿ ಮೆ. ಕೊಂಗಂಡ ಅಚ್ಚಯ್ಯನವರ ಭವನದಲ್ಲಿ ಅವರು ಕೊಟ್ಟ ಹುತ್ತರಿ ಊಟವನ್ನು ಸ್ವೀಕರಿಸಿದರೆಂದೂ, ಬೊಂಬಾಯಿ ಕೊಡಗರು ಈ ತಾ. 9 ರಲ್ಲಿ ಅಲ್ಲಿಯ ಕೊಡಗು ಸಂಘದ ಆಶ್ರಯದಲ್ಲಿ ಹುತ್ತರಿ ಹಬ್ಬವನ್ನು ಆಚರಿಸಿದರೆಂದೂ ವಾರ್ತೆಗಳು ಬಂದಿವೆ. ಸ್ಥಳ ಸಂಕೋಚದಿಂದ ಅವುಗಳನ್ನು ವಿವರವಾಗಿ ಪ್ರಕಟಿಸಲು ಸಾಧ್ಯವಾಗಲಿಲ್ಲ.

## ಹಿಂದೂದೇಶ.

ಭೋಪಾಲ ಸಂಸ್ಥಾನದಲ್ಲಿ ಜೋರಾದ ಮಳೆ, ಬಿರುಗಾಳಿ ಉಂಟಾಗಿ ತುಂಬಾ ನಷ್ಟ ಸಂಭವಿಸಿದೆ.

ತಮ್ಮ ಸರಹದ್ದಿನೊಳಗೆ ಸೇಂದಿ ಮತ್ತು ಸಾರಾಯಿ ಅಂಗಡಿಗಳನ್ನು ಇಡಕೂಡದೆಂದು ಪುಣೆ ಮುನ್ಸಿಪಾಲಿಟಿಯವರು ನಿಶ್ಚೈಸಿರುವರು.

ಕರ್ನಾಟಕ ಸರ್ವಪಕ್ಷೀಯ ಪರಿಷತ್ತು ವಿಜಾಪುರದಲ್ಲಿ ಈ ತಾ. 16 ರಲ್ಲಿ ನಡೆಯುವದು. ಡಾಕ್ಟರ್ ಅನಿಬೆಸೆಂಟರವರು ಅಧ್ಯಕ್ಷರಾಗಿರುವರು.

ಲೋಕವಿಖ್ಯಾತರಾದ ಗಾಮ ಮತ್ತು ಕಲ್ಲು ಎಂಬವರ ಕುಸ್ತಿಯ ಪ್ರದರ್ಶನವೂ, ಹಳ್ಳಿಯ ಆಟಗಳೂ ಕಾಂಗ್ರೆಸ್ ವಾರದಲ್ಲಿ ಕಲ್ಕತ್ತಾದಲ್ಲಿ ನಡೆಯುವವು.

ಪಂಡಿತ ಮೋತಿಲಾಲ್ ನೆಹರೂರವರು ಕಲ್ಕತ್ತಕ್ಕೆ ಹೋಗುವಾಗ್ಯೆ ಅವರಿಗೆ ಸ್ವಾಗತ ಪತ್ರವನ್ನು ಒಪ್ಪಿಸಲು ಹೌರಾದ ಮುನ್ಸಿಪಾಲಿಟಿಯವರು ತೀರ್ಮಾನಿಸಿರುವರು.

ಈ ತಾ. 9 ರಲ್ಲಿ ನಾಗಪುರದಲ್ಲಿ ನಡೆದ ಮಧ್ಯ ಪ್ರಾಂತ್ಯದ ಸರ್ವಪಕ್ಷೀಯ ಪರಿಷತ್ತಿನಲ್ಲಿ ನೆಹರು ಕಮಿಟಿಯ ವರದಿಯನ್ನು ಒಪ್ಪಿ ಠರಾವು ಪಾಸುಮಾಡಲಾಯಿತು.

ಕಾಂಗ್ರೆಸ್ ಸಮಯದಲ್ಲಿ ಕಲ್ಕತ್ತಾದಲ್ಲಿ ನಡೆಯಲಿಕ್ಕಿರುವ ರಾಷ್ಟ್ರಭಾಷಾ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಲು ಮಹಾತ್ಮಗಾಂಧಿಯವರು ಒಪ್ಪಿರುವರು.

ರಾಜದ್ರೋಹದ ಲೇಖನವನ್ನು ಪ್ರಕಟಿಸಿದರೆಂಬ ಕಾರಣದಿಂದ ಕಲ್ಕತ್ತಾದ "ಫಾರ್‌ವರ್ಡ್" ಪತ್ರಿಕೆಯ ಸಂಪಾದಕನನ್ನು ಮತ್ತು ಮುದ್ರಕರನ್ನು ದಸ್ತಗಿರಿಮಾಡಿ ಜಾಮೀನು ಮೇಲೆ ಬಿಟ್ಟಿರುವರು.

ನೇಶನಲ್ ಲಿಬರಲ್ ಫೆಡರೇಶನಿನ 11 ನೇ ಕಾನ್ಫರೆನ್ಸನ್ನು ಈ ತಾ 30 ಮತ್ತು 31 ರಲ್ಲಿ ಅಲಹಾಬಾದಿನಲ್ಲಿ ಸರ್ ಚಿಮನ್‌ಲಾಲ್ ಸೆಟಲ್ವಾಡ್‌ರವರ ಅಧ್ಯಕ್ಷತೆಯಲ್ಲಿ ನಡಿಸುವಂತೆ ತೀರ್ಮಾನಿಸಿರುವರು.

ಮದ್ಯನಿಷೇಧದ ಚಳವಳಿಯನ್ನು ನಡಿಸುತ್ತಿರುವ ಸಂಘಗಳಿಗೆ ಸಹಾಯ ಕೊಡಲು ಮದ್ರಾಸು ಸರ್ಕಾರದವರು ಬರುವ ವರ್ಷದ ಬಜೆಟ್ಟಿನಲ್ಲಿ ಕೆಲವು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡುವರಾಗಿ ವರ್ತಮಾನ.

ಸೈಮನ್ ಕಮಿಷನು ತಾ. 12ರಲ್ಲಿ ಪಾಟ್ನಾಕ್ಕೆ ಹೋದಾಗ್ಯೆ ಅಲ್ಲಿಯೂ ಸುಮಾರು 7000 ಜನರು ಕಪ್ಪು ಬಾವಟೆಗಳಿಂದ ಬಹಿಷ್ಕಾರದ ಮೆರವಣಿಗೆಯನ್ನು ನಡಿಸಿದರು. ಆದರೆ ಪೋಲೀಸಿನವರ ಗಲಾಟೆಯೇನೂ ಆಗಲಿಲ್ಲವಂತೆ.

ಬೊಂಬಾಯಿ ಕ್ವಾಡ್ರ್ಯಾಂಗ್ಯುಲರ್ ಕ್ರಿಕೆಟ್ ಪಂದ್ಯದಾಟದ ಆಖೈರಿನಲ್ಲಿ ಪಾರ್ಸಿಟೀಮಿನವರು ಯೂರೋಪಿಯನ್ ಟೀಮಿನವರನ್ನು ಸೋಲಿಸಿರುವರು. 1912 ರಿಂದ ಪ್ರಾರಂಭವಾದ ಈ ಟೂರ್ನಮೆಂಟಿನಲ್ಲಿ ಪಾರ್ಸಿಯವರು ಗೆದ್ದದ್ದು ಇದು ಮೂರನೇ ಸಾರಿಯಾಗಿದೆ.

ಬರುವ ಫೆಬ್ರವರಿಯಲ್ಲಿ ಮದ್ರಾಸಿನಲ್ಲಿ ನಡೆಯಲಿಕ್ಕಿರುವ ಅಖಿಲಭಾರತ ಬ್ರಾಹ್ಮಣೇತರ ಕಾನ್ಫರೆನ್ಸಿನ ಅಧ್ಯಕ್ಷಸ್ಥಾನವನ್ನು ವಹಿಸಲು ಬಂಗಾಳ ಶಾಸನಸಭೆ ಮಂಡಲಿಯ ಪ್ರೆಸಿಡೆಂಟರಾದ ಸಾಂತೋಷದ ರಾಜ ಮನ್ಮಥನಾಥ್ ರಾಯ್ ಚೌಧ್ರಿಯವರನ್ನು ಕೇಳಿಕೊಳ್ಳಲಾಗಿದೆಯಂತೆ.

ನೆಹರು ಕಮಿಟಿಯ ಸಪ್ಲಿಮೆಂಟರಿ ರಿಪೋರ್ಟು ಪ್ರಕಟವಾಗಿದೆ. ಅದರಲ್ಲಿ ಪ್ರಾಂತ್ಯಗಳಿಗೆ ಉಳಿದ ಹಕ್ಕು ಕೊಡುವ ಮತ್ತು ಮುಸಲ್ಮಾನರಿಗೆ ಪ್ರತ್ಯೇಕ ಪ್ರತಿನಿಧಿತ್ವ ಕೊಡುವದರ ವಿಷಯ ಏನೊಂದೂ ಬದಲಾಯಿಸಲಿಲ್ಲ. ಆಶ್ರಿತ ಸಂಸ್ಥಾನಗಳ ಸರ್ಕಾರದ ವಿಷಯ ತಮ್ಮ ಅಭಿಪ್ರಾಯವನ್ನು ವಿವರಿಸಿರುವರು.

ಭಾರತೀಯ ಪತ್ರವ್ಯವಸಾಯಕರ ಸಂಘದ ಆಶ್ರಯದಲ್ಲಿ ಕಲ್ಕತ್ತಾದಲ್ಲಿ ಈ ತಾ. 10 ರಲ್ಲಿ ನಡೆದ ಬಂಗಾಳ ಪತ್ರವ್ಯವಸಾಯಕರ ಕಾನ್ಫರೆನ್ಸಿನಲ್ಲಿ ಸೈಮನ್ ಕಮಿಷನಿನ ಬಹಿಷ್ಕಾರ ಚಳವಳಿಯನ್ನು ಬಲಪಡಿಸಬೇಕೆಂದು ಪಂಡಿತ ಮೋತಿಲಾಲ್ ನೆಹರುರವರು ಮಾಡುವ ವಿನಂತಿಗೆ ಸಂಪೂರ್ಣ ಒಪ್ಪಿಗೆ ಕೊಡಲಾಗಿದೆ. ಮಿಸೆಸ್ ಸರೋಜಿನೀದೇವಿಯವರು ಕಾನ್ಫರೆನ್ಸಿನ ಅಧ್ಯಕ್ಷರಾಗಿದ್ದರು.

ಮಿಸೆಸ್ ಕಮಲಾದೇವಿ ಚಟ್ಟೋಪಾಧ್ಯಾಯರವರು ಜಿನೇವಾದಲ್ಲಿ ನಡೆಯಲಿಕ್ಕಿರುವ ಪ್ರಪಂಚದ ವಿದ್ಯಾಸಂಘಗಳ ಕೂಟಕ್ಕೆ ಅಖಿಲ ಭಾರತ ಉಪಾಧ್ಯಾಯರುಗಳ ಸಂಘದ ಪ್ರತಿನಿಧಿಯಾಗಿ ನೇಮಿಸಲ್ಪಟ್ಟಿರುವರು. ಅವರು ಬರುವ ಮೇ ತಿಂಗಳಲ್ಲಿ ಯೂರೋಪಿಗೆ ಹೋಗುವರು. ಅವರು ಬರ್ಲಿನ್ ಪಟ್ಟಣದಲ್ಲಿ ನಡೆಯುವ ಜನಾಂಗಗಳ ಪರಸ್ಪರ ಸ್ತ್ರೀಯರ ಕಾನ್ಫರೆನ್ಸಿಗೂ, ಜನಾಂಗಗಳ ಪರಸ್ಪರ ಲೇಬರ್ ಕಾನ್ಫರೆನ್ಸಿಗೂ ಹೋಗಲಿಕ್ಕಿರುವರು.

ಕಲ್ಕತ್ತಾದಲ್ಲಿ ಈ ತಾ. 22 ರಿಂದ 28ರ ವರೆಗೆ ಸರ್ವಪಕ್ಷೀಯ ಪರಿಷತ್ತೂ, 29 ರಿಂದ 31ರ ವರೆಗೆ ಇಂಡಿಯನ್ ನೇಶನಲ್ ಕಾಂಗ್ರೆಸ್ ಮಹಾಸಭೆಯೂ ಕೂಡುವವು. ಖಾದಿ, ಲಲಿತಕಲಾ, ಗೀತಾ ಪ್ರದರ್ಶನಗಳೂ ಆಗುವವು. ಸ್ತ್ರೀ ಸಮ್ಮೇಳನವೂ ಜರಗುವದು. ಕಾಂಗ್ರೆಸ್ ಚಪ್ಪರದಲ್ಲಿ ಇಪ್ಪತ್ತು ಸಾವಿರ ಜನರು ಸೇರಲು ಜಾಗ ತಯಾರಿಸಿರುವರು. ಅಧ್ಯಕ್ಷರಾದ ಪಂಡಿತ ಮೋತಿಲಾಲ್ ನೆಹರುರವರು ಈ ತಾ. 21ರಲ್ಲಿ ಅಲ್ಲಿಗೆ ಹೋಗುವಾಗ ಅವರನ್ನು 34 ಕುದುರೆಗಳಿಂದ ಎಳೆಯಲ್ಪಡುವ ರಥದಲ್ಲಿ ಕುಳ್ಳಿರಿಸಿ 2000 ಸ್ವಯಂಸೇವಕರು ಮತ್ತು 50 ಕುದುರೆ ಸವಾರರೊಂದಿಗೆ ಅತಿ ವೈಭವದಿಂದ ಮೆರವಣಿಗೆ ನಡಿಸುವ ಏರ್ಪಾಡು ಮಾಡಿದ್ದಾರೆ. ಆ ದಿವಸವೇ ಮಹಾತ್ಮ ಗಾಂಧಿಯವರೂ, ಸೈಮನ್ ಕಮಿಷನೂ ಕಲ್ಕತ್ತೆಗೆ ತಲಪುವರಂತೆ.

## ವಿದೇಶ.

ಮೌ. ಅಮೀರ್ ಅಲಿಯವರ ಉಸ್ತುವಾರಿಯಲ್ಲಿದ್ದ ಲಂಡನ್ ಮುಸ್ಲಿಮ್‌ಲೀಗ್ ಬರಕಾಸ್ತು ಮಾಡಲ್ಪಟ್ಟು ಅದರ ಉಳಿದ ಹಣವು ಅಲ್ಲಿಯ ಮಸ್ಜೀದಿ ಕಟ್ಟಡದ ಫಂಡಿಗೆ ಕೊಡಲಾಗಿದೆ.

ಇಂಪೀರಿಯಲ್ ಪ್ರೆಸ್ ಕಾನ್ಫರೆನ್ಸೊಂದನ್ನು 1930 ನೇ ಜೂನಿನಲ್ಲಿ ಲಂಡನ್ ಪಟ್ಟಣದಲ್ಲಿ ನಡಿಸುವ ಏರ್ಪಾಡುಗಳಾಗುತ್ತಿವೆ. ಇದಕ್ಕೆ ಬ್ರಿಟಿಷ್ ಚಕ್ರಾಧಿಪತ್ಯದಿಂದೆಲ್ಲಾ ಪ್ರತಿನಿಧಿಗಳನ್ನು ಆಹ್ವಾನಿಸುವರಂತೆ.

ಬ್ರಿಟಿಷ್ ಚಕ್ರವರ್ತಿಯವರ ಕಾಯಿಲೆಯು ಏನೊಂದೂ ಗುಣವಿಲ್ಲ. ಅವರ ಬಲಹೀನತೆಯ ವಿಷಯ ಕುತೂಹಲವು ಹೆಚ್ಚುತ್ತಲಿದೆ. ಪ್ರಿನ್ಸ್ ಆಫ್ ವೇಲ್ಸ್‌ರವರು ತಾ. 11 ರ ರಾತ್ರಿ ಲಂಡನಿಗೆ ತಲಪಿ ರಾಜರನ್ನು ನೋಡಿದರು. ಅರಮನೆಯ ಮುಂದೆ ಯಾವಾಗಲೂ ಜನರು ಕಾಯಿಲದ ವಿಷಯ ತಿಳಿಯಲು ಗುಂಪು ಗುಂಪಾಗಿ ಕಾಯುತ್ತಿರುತ್ತಾರೆ.

## ಕೊಡಗು ಕಿತ್ತಳೆ ಸಸಿ ಬೇಕು.

ಕೊಡಗು ಕಿತ್ತಳೇ ಹಣ್ಣಿನ 1½—2 ಅಡಿ ಎತ್ತರವಿರುವ 500–1000 ಹಸನಾದ ಸಸಿಗಳು ನಮಗೆ 1929ನೇ ಜೂನ್ ತಿಂಗಳು ಪ್ರಾರಂಭದಲ್ಲಿ ಬೇಕು. ಆ ಕಾಲಕ್ಕೆ ಕ್ರಯಕ್ಕೆ ಸಸಿಗಳನ್ನು ಸಿದ್ಧವಾಗಿ ಕೊಡುವವರು ದರವನ್ನೂ, ತಮ್ಮ ವಿಳಾಸವನ್ನೂ ನಮಗೆ ತಿಳಿಯ ಪಡಿಸಬಹುದು.

ಜಿ. ಕಲ್ಲಪಿಳ್ಳೆ ಎಂ. ಎ. (ಆನರ್ಸ್) ಎಲ್‌ಎಲ್‌ಬಿ.
ಅಡ್ವೊಕೇಟ್ & ಜಮೀನ್‌ದಾರ್,
4—1 ಗೊರೂರು, ಹಾಸನ.

## ಟಪ್ಪಾಲು ಮೂಲಕ ಹಣ ಸಾಲವಾಗಿ ಸಿಕ್ಕುತ್ತೆ.

ಬಡ್ಡಿಯ ದರ ಅಗ್ಗ. ಕಂತುಗಳು ಸುಲಭ. ಹೆಚ್ಚು ವಿಷಯಕ್ಕೆ ಜವಾಬಿಗೆ ಸ್ಟಾಂಪಿಟ್ಟು ಬರೆಯಿರಿ.

ವಿಳಾಸ:—ಮಾರುತಿ ಬ್ಯಾಂಕರ್,
"ದತ್ತವಿಲಾಸ" ಬಸವನಗುಡಿ,
3—1 ಬೆಂಗಳೂರು.

## ಪ್ರಕಟನೆ.

ನನ್ನ ಅಕ್ಕ ಅಮ್ಮಣ್ಣಿಯಮ್ಮನು ತನಗೆ ತವರು ಮನೆಯಿಂದ ಜೀವನಕ್ಕೆ ಸಿಕ್ಕಿದ ಬೇಟೋಳಿಯಲ್ಲಿರುವ ಭೂಮಿಯನ್ನು ಮಾರುವ ಏರ್ಪಾಡು ಮಾಡುತ್ತಿರುವುದಾಗಿ ತಿಳಿದು ಸದರಿ ಭೂಮಿಯನ್ನು ಯಾರಾದರೂ ಕ್ರಯ ವಗೈರೆಗೆ ತೆಗೆದುಕೊಂಡರೆ ಅದು ಊರ್ಜಿತವಾಗಲಿಕ್ಕಿಲ್ಲ. ಒಂದು ವೇಳೆ ಪಡಕೊಂಡರೂ, ಅವರು ನನಗೆ ಉಂಟಾಗುವ ನಷ್ಟಕ್ಕೆ ಬಾಧ್ಯರಾಗಬೇಕಾಗುತ್ತೆ. ಈ ಭೂಮಿ ಸಂಗತಿಯಲ್ಲಿ ಈ ಹಿಂದಲೇ ಲೋ. ವಾ. ಪತ್ರಿಕೆಯಲ್ಲಿ ಬಂದಿರುವ ನಾಂ ಪ್ರಚುರ ಪಡಿಸಿರುವ ವಿಷಯ ನೋಡಿರಿ.

23—11—1928. ಕೆ. ನಾಂಜಪ್ಪ,
ಸ್ಕೂಲ್ ಮಾಸ್ಟರ್,
2—2 ವೀರರಾಜಪೇಟೆ.

## ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಬರಾಬರು ಗಂಟೆಯನ್ನು ತೋರಿಸುವವು. ಇದರ ಕೇಸು ಭಂಗಾರದಕ್ಕೆ ಸಮಾನವಾಗಿರುವವು. ಇದಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ ಮಾತ್ರ ರೂ. 4—14—0.

ವಿಳಾಸ:—ಲೀಗಲ್ ವಾಚ್ ಕಂಪೆನಿ,
52—26 ಪೋ. ಬಾ. 243 ಮದರಾಸು.

### ಕೊಡಗಿನಲ್ಲಿ ಸಹಕಾರ ಚಳವಳಿ.

ವೀರರಾಜಪೇಟೆ ಹೈಸ್ಕೂಲ್ ಡಿಬೇಟಿಂಗ್ ಸೊಸೈಟಿಯ ಪರವಾಗಿ ಪಾರ್ಲಿಮೆಂಟ್ ಮಾದರಿಯಲ್ಲಿ "ಕೊಡಗಿನಲ್ಲಿ ಸಹಕಾರ ಚಳವಳಿವು ಪ್ರಯೋಜನಕಾರಿಯಾಗಿದೆ, ಯಾ ಇಲ್ಲ" ಎಂಬುದನ್ನು ಕುರಿತು ಮೋಹನ್ ಸ್ಕೂಲ್ ಹಾಲಿನಲ್ಲಿ ಕಳೆದ ತಾ. 15 ರಲ್ಲಿ ಒಂದು ವಾಗ್ವಾದವು ನಡೆಯಿತು. ಮ. ಶ್ರೀ. ಎ. ಬಿ. ಚಂಗಪ್ಪ ಯಂ. ಎಲ್. ಸಿ. ಯವರು ಸ್ಪೀಕರಾ (ಅಧ್ಯಕ್ಷ) ಗಿದ್ದರು.

ಮೆ. ಪಿ. ಯಂ. ಚಂಗಪ್ಪನವರು ಸಹಕಾರ ಚಳವಳಿಯಿಂದ ಕೊಡಗಿನಲ್ಲಿ ಬಹಳ ಮಟ್ಟಿಗೆ ಜನಜಾಗ್ರತಿಯುಂಟಾಗಿದೆಯೆಂದೂ, ಮೆ. ಸಿ. ಯಂ. ಮುತ್ತಣ್ಣರವರು ಬಿ. ಎ., ಬಿ. ಎಲ್., ಅದಕ್ಕೆ ವಿರೋಧಿಸಿಯೂ ಮಾತನಾಡಿದರು.

ಸದರಿ ದಿನ ಮಧ್ಯಾಹ್ನ 2—30 ಕ್ಕೆ ಸಭೆಯು ಸೇರಿದನಂತರ ನಿರ್ಣಯಗಳ ಕುರಿತು ಪ್ರಶ್ನೋತ್ತರಗಳು ನಡೆದು ಮುಂದೆ ಚರ್ಚೆಗೆ ಇರತಕ್ಕ ನಿರ್ಣಯಗಳನ್ನು ಭರಾಯಿಸಿಕೊಂಡದ್ದಾಯಿತು. ಅನಂತರ ಆ ದಿನದ ಚರ್ಚೆಯು ಆರಂಭವಾಯಿತು.

ಮೆ. ಪಿ. ಯಂ. ಚಂಗಪ್ಪನವರು ಸಹಕಾರದ ಉದ್ದೇಶಗಳಾದ ಪರಸ್ಪರ ಸಹಾಯ, ಮಿತವ್ಯಯ ಇತ್ಯಾದಿಗಳನ್ನು ವಿವರಿಸಿ, ಸಹಕಾರ ಚಳವಳಿವು ಕೈಗಾರಿಕೆ ಕಾರ್ಖಾನೆಗಳ ಮೂಲ

# ಚಿಲಿಯನ್ ನೈಟ್ರೇಟ್ ಆಫ್ ಸೋಡಾ



(4ನೇ ಪುಟದಿಂದ ಮುಂದುವರಿದದ್ದು.)

ಸ್ವತ ವಿಶ್ವವಿದ್ಯಾಲಯವನ್ನು ಏರ್ಪಡಿಸಿ, ಕನ್ನಡ ವಾಙ್ಮಯವನ್ನು ಅಭಿವೃದ್ಧಿಗೊಳಿಸಬಹುದು. ಇದು ಕನ್ನಡಿಗರಾದ ನಮ್ಮೆಲ್ಲರ ಕರ್ತವ್ಯ. ಶ್ರುತ್ಯೆ ಇಲ್ಲದೆ ನಮ್ಮ ದೇಶವು ವ್ಯಾಪಾರದಲ್ಲಿ ಬಹಳ ಹಿಂದೆ ಬಿದ್ದಿದೆ. ವ್ಯಾಪಾರವಿಲ್ಲದೆ ದೇಶದ ಐಶ್ವರ್ಯವು ಹೆಚ್ಚಲಾರದು. ನೀರಿನ ಕಾಮಗಾರಿ ಒಂದೂ ಇಲ್ಲಿ ಇಲ್ಲ. ಹಾರಂಗಿ ಮುಂತಾದ ದೊಡ್ಡ ಹೊಳೆಗಳಿಗೆ ಪಣವಿಲ್ಲ. ಇಷ್ಟರ ವರೆಗೆ ನಾವು ಒಳ್ಳೇ ಮಳೆ ನೀರನ್ನೇ ನಂಬಿದ್ದುದರಿಂದ ನಮಗೆ ಕಳೆದ ನಾಲ್ಕೈದು ವರ್ಷಗಳಲ್ಲಿ ಕಷ್ಟ ಸಂಭವಿಸಿದ್ದಾಗಿದೆ. ನೀರಿನ ಕಾಮಗಾರಿಗಳನ್ನು ಮಾಡಿಕೊಳ್ಳದೆ ಹೋದರೆ ವ್ಯವಸಾಯದ ಭೂಮಿಯು ಹೆಚ್ಚು ಕಡಿಮೆ ಒಡನೆ ಕ್ರಮೇಣ ಕಡಿಮೆಯಾಗುವದು. ಗಟ್ಟಿಗ ಉದ್ಯೋಗಸ್ಥರ (ಎಕ್ಸ್‌ಪರ್ಟ್ಸ್) ಅಭಿಪ್ರಾಯ ಸಿಕ್ಕುವದು ನಮಗೆ ಈಗ ಕಷ್ಟ. ದೊಡ್ಡ ಪ್ರಾಂತ್ಯವಾದರೆ ಈ ಕಷ್ಟವು ನಿವಾರಣೆಯಾಗುವದು. ಇಂಡಿಯಾ ಸರ್ಕಾರದವರು ನಮಗೆ ಹಣ ಕೊಡಬಹುದೆಂದು ಕೇವಲ ಭ್ರಾಂತಿ. 1880 ರಿಂದ 1922 ರ ವರೆಗೆ ಇಂಡಿಯಾ ಸರ್ಕಾರದವರು ಸುಮಾರು 80 ಲಕ್ಷ ರೂಪಾಯಿ ಇಲ್ಲಿಂದ ತೆಗೆದುಕೊಂಡು ಹೋಗಿದ್ದರೂ, ನಾವು ಎಷ್ಟು ಕೂಗಿಕೊಂಡರೂ ಈ ವರೆಗೂ ಒಂದು ಕಾಸೂ ವಾಪಸು ಕೊಡಲಿಲ್ಲ.

ಬೇರೆ ಕರ್ನಾಟಕ ಪ್ರದೇಶಗಳಲ್ಲಿ ಏಕೀಕರಣದ ಚಳವಳಿ ಪ್ರಬಲವಾಗಿ ನಡೆಯುತ್ತದೆ. ನೆಹರು ಕಮಿಟಿಯವರೂ, ಜನರು ಒಪ್ಪಿದರೆ ಹಣ್ಣು ಆದಾಯ ಹೆಚ್ಚು ನೋಡಿಕೊಳ್ಳಬಹುದಾದರೆ ಕರ್ನಾಟಕ ಪ್ರಾಂತ್ಯ ಮಾಡಬಹುದೆಂದು ಸಿಫಾರಸ್ಸು ಮಾಡಿರುವರು. ಈ ಚಳವಳಿಗೆ ಒತ್ತಾಸೆ ಕೊಡಬೇಕಾದದ್ದು ನಮ್ಮ ಕರ್ತವ್ಯ. ಈ ದೇಶದ ಹ್ಯಾಸೂಮಿಟ್ಟು ರಾಜಕೀಯ ಸಂಸ್ಥೆಯಾದ ಬಿ.ಎ. ನಾಗರ ಸಂಘದ ಅಧ್ಯಯನದಲ್ಲಿ ಕೂಡಿದ ಎಲ್ಲಾ ಪಾರ್ಟಿಗಳ ಪ್ರತಿನಿಧಿಗಳ ಕಮಿಟಿಯಲ್ಲಿಯೂ ಈ ಠರಾವು ಒಪ್ಪಲಾಗಿದೆ. ಎಲ್ಲಾ ಪಾರ್ಟಿಗಳ ಪ್ರತಿನಿಧಿಗಳ ಕಮಿಟಿ ಆಗಲಿಲ್ಲವೆಂದು ನಿನ್ನೆ ಹೇಳಿದ ಪಿ. ಮೇದಪ್ಪನವರು ಆಹ್ವಾನಿಸಲ್ಪಟ್ಟರೂ ಸದರಿ ಕಮಿಟಿ ಮೀಟಿಂಗಿಗೆ ಬರಲಿಲ್ಲ.

ಇದಕ್ಕೆ, ಈ ಮೊದಲು ನಾನಾದ ರಾಜಕೀಯ ರಚನೆಗೂ ಒಪ್ಪುವದು ಅಸಂಬದ್ಧವೆಂದು ಕೆಲವರು ಹೇಳುತ್ತಾರೆ. 35ನೇ ಠರಾವಿಗೆ ಒಪ್ಪಿದ್ದರಿಂದ ಕೊಡಗು ಸಂಪೂರ್ಣ ಜವಾಬ್ದಾರಿ ಸರ್ಕಾರಕ್ಕೆ ತಯಾರಿದೆಯೆಂದು ತೋರಿಸಿದಂತಾಯಿತು. ಆದರೆ ಪ್ರತ್ಯೇಕ ಸರ್ಕಾರ ನಡೆಸುವದು ಬಹು ಕಷ್ಟ ಮತ್ತು ಹೆಚ್ಚಿನ ಪ್ರಯೋಜನಕಾರಿಯಲ್ಲವಾದುದರಿಂದ ಏಕೀಕರಣವಾಗಬೇಕೆಂದು ಹೇಳುವದಾಗಿದೆ. ಏಕೀಕರಣವಾಗಲು ಸ್ವಲ್ಪ ಕಾಲ ಹಿಡಿಯುವ ಕಾರಣ ಅಷ್ಟರವರೆಗೆ ಈಗಿನ ಸರ್ಕಾರದ ಆಡಳಿತದಲ್ಲಿರುವದು ನಷ್ಟ ಇಲ್ಲದಿರುವದಲ್ಲ, ಏಕೀಕರಣಕ್ಕೆ ಒದನ್ನು ಬೇಕಾ ಕಮಿಷನರು ಇಂಡಿಯಾ ಸರ್ಕಾರಕ್ಕೆ ತಿಳಿಸತಕ್ಕದ್ದು" ಎಂಬ ಠರಾವನ್ನು ಸಭೆಯ ಮುಂದಿಟ್ಟ ಮೆ. ಪಿ. ಐ. ಬೆಳ್ಯಪ್ಪನವರು ಮಾತಾಡಿದ್ದೇನೆಂದರೆ—ಈ ವಿಷಯವು ದೇಶದಲ್ಲಿ ಈಗ 3 ವರ್ಷಗಳಿಂದ ಚರ್ಚಿಸಲ್ಪಡುತ್ತಿದ್ದು ದಿನೇ ದಿನೇ ಪ್ರಾಬಲ್ಯವನ್ನು ಪಡೆಯುತ್ತಿದೆ. ಇನ್ನೂ ಕೆಲವರು ಬೇರೆ ಪ್ರಾಂತ್ಯದೊಂದಿಗೆ ಸೇರಲು ಹೆದರುತ್ತಾರೆ. ಆದರೆ ಆ ಭಯವು ಸಕಾರಣವಲ್ಲ.

ಈ ಚಿಕ್ಕ ಪ್ರಾಂತ್ಯವನ್ನು ನಮ್ಮ ಸಣ್ಣ ಉತ್ಪತ್ತಿಯಿಂದ ಜನರಿಗೆ ಸಾಕಷ್ಟು ಪ್ರಯೋಜನವಾಗುವಂತೆ ಪ್ರತ್ಯೇಕವಾಗಿ ಆಳಲು ಬಹಳ ಕಷ್ಟ. ಗಂಧದ ಉತ್ಪತ್ತಿಯು ಯಾವಾಗಲೂ ಒಂದೇ ರೀತಿ ಇರಲಾರದು. ಕುಡಿತವನ್ನು ನಿಲ್ಲಿಸದೇ ಕಾದರೆ ಅಬ್ಕಾರಿ ಉತ್ಪತ್ತಿಯನ್ನು ಕ್ರಮೇಣ ಬಿಡಬೇಕಾಗುತ್ತದೆ. ಕೊಡಗಿನ ಮೂರು ಮುಖ್ಯ ಉತ್ಪತ್ತಿಗಳ ಪೈಕಿ ಇವು ಎರಡಾಗಿವೆ. ಈಗಿನ ಸರ್ಕಾರದ ಖರ್ಚು ಸ್ವಲ್ಪ ಕಡಿಮೆ ಮಾಡಬಹುದಾದರೂ, ಜವಾಬ್ದಾರಿ ಸರ್ಕಾರ ಸಿಕ್ಕಿದಾಗ ಖರ್ಚು ಸ್ವಲ್ಪ ಹೆಚ್ಚಬಹುದು. ಆದುದರಿಂದ ಆದಾಯ ಹೆಚ್ಚವನ್ನು ಸರಿಪಡಿಸುವದು ಕಷ್ಟ. ಹೈಕೋರ್ಟಿನ ತೊಂದರೆ ಇದೆ. ಕೊಡಗಿಗೇ ಪ್ರತ್ಯೇಕ ಹೈಕೋರ್ಟು ಇಡಲು ಸಾಧ್ಯವಿಲ್ಲ. ಆದುದರಿಂದಲೇ ತತ್ಕಾಲ ಮದ್ರಾಸು ಹೈಕೋರ್ಟನ್ನು ಒಪ್ಪಿಕೊಳ್ಳುವದು ಉತ್ತಮವೆಂದು ನಾನು ಮೊದಲು ಸೂಚಿಸಿದ್ದಾಗಿದೆ.

ದೊಡ್ಡ ಉದ್ಯೋಗಸ್ಥರನ್ನು ವರ್ಗಾವರ್ಗಿ ಮಾಡದ್ದರಿಂದ ಜನರಿಗೆ ಉಂಟಾಗುತ್ತಿರುವ ಕಷ್ಟವನ್ನು ನಿಲಿಸಲಾರದೆ ವರ್ಗಾವರ್ಗಿ ಮಾಡಬೇಕೆಂಬ ಚಳವಳಿ ಎದ್ದಿತು. ಆದಕ್ಕೆ ಸರ್ಕಾರವು ಗಮನ ಕೊಡದ್ದು ವ್ಯಸನಕರ. ಈ ತತ್ವಕ್ಕೆ ಸರ್ಕಾರದವರು ಒಪ್ಪಿದರೂ, ನಮ್ಮ ಚಿಕ್ಕ ಪ್ರಾಂತ್ಯದಲ್ಲಿ ಅದನ್ನು ಜಾರಿಗೆ ತರಲು ಶಕ್ಯ ಸಾಧ್ಯವಾದುದರಿಂದಲೇ ಅವರು ಸುಮ್ಮನಾದದ್ದೆಂದು ಕಾಣುತ್ತೆ. ಏಕೀಕರಣವು ಇದಕ್ಕೆ ಸುಲಭ ಉಪಾಯವಾಗುತ್ತೆ. ನಮಗೆ ಪ್ರೌಢ ವಿದ್ಯಾಭ್ಯಾಸದ ಅಡಚಣೆಯು ದೊಡ್ಡದಾಗಿದೆ. ಇಲ್ಲಿ ಒಂದು ಕಾಲೇಜನ್ನು ಕಟ್ಟಿ ಇಡಲು ಸಾಧ್ಯವಾಗಿಲ್ಲ. ಕರ್ನಾಟಕ ಪ್ರಾಂತ್ಯವಾದರೆ ಕ

ಇನ್ನು ಕೆಲವರು ಒಪ್ಪದ್ದರಿಂದ ಅವರಿಗೆ ಪ್ರತ್ಯೇಕ ಸರ್ಕಾರ ನಡೆಸುವ ಎಡೆಕೊಟ್ಟು ಅನುಭವದಿಂದ ಅಭಿಪ್ರಾಯವನ್ನು ನಮ್ಮ ಕಡೆ ಸೇರಿಕೊಳ್ಳಲಿಕ್ಕಾಗಿಯೂ ತತ್ಕಾಲಕ್ಕೆ ಜವಾಬ್ದಾರಿ ಸರ್ಕಾರದ ಹೊಸ ರಚನೆಯನ್ನು ಸೂಚಿಸಿರುವದಾಗಿದೆ.

ಮೆ. ಕರುಂಬೈಯ್ಯನವರು ಠರಾವನ್ನು ಅನುಮೋದಿಸಿ ಹೇಳಿದ್ದೇನೆಂದರೆ—ಕೊಡಗಿನಲ್ಲಿ ಈಗ ಮೂರು ತರಹದ ಅಭಿಪ್ರಾಯದವರಿದ್ದಾರೆ. ಕೊಡಗು ಈಗ ಇರುವ ಹಾಗೆ ಪ್ರತ್ಯೇಕ ಸರ್ಕಾರವುಳ್ಳದ್ದಾಗಿಯೇ ಇರಬೇಕು ಎಂಬದು ಒಂದು ಅಭಿಪ್ರಾಯ. ಕೊಡಗನ್ನು ಮದ್ರಾಸು ಪ್ರಾಂತ್ಯಕ್ಕೆ ಸೇರಿಸಬೇಕು ಎಂಬದು 2 ನೇದು. ಕೊಡಗನ್ನು ಸ್ವಾತಂತ್ರ್ಯ ಕರ್ನಾಟಕ ಪ್ರಾಂತ್ಯಕ್ಕೆ ಸೇರಿಸಬೇಕು ಎಂಬದು 3 ನೇದು. ಒಂದನೇ ಅಭಿಪ್ರಾಯದಂತೆ ನಡೆಸಲು ಸಾಧ್ಯವಿಲ್ಲವೆಂಬದಕ್ಕೆ ಈ ಠರಾವಿನ ಸೂಚಕರು ಸಾಕಷ್ಟು ಕಾರಣಗಳನ್ನು ಕೊಟ್ಟಿರುವದರಿಂದ ನಾನು ಅವುಗಳನ್ನು ಪುನಹ ಹೇಳುವ ಅವಶ್ಯವಿಲ್ಲ. 2 ನೇ ಅಭಿಪ್ರಾಯವನ್ನು ಜಾರಿಗೆ ತರುವದೆಂದರೆ ಅದಕ್ಕೆ ಒಪ್ಪಿಕೊಳ್ಳುವವರು ಬಹಳ ಕಡಿಮೆ. ಭಾಷೆಯ ಅಡಚಣೆಯು ದೊಡ್ಡದಾಗಿದೆ. ಅಲ್ಲದೆ ಆ ಪ್ರಾಂತ್ಯವನ್ನೇ ಭಾಷಾವಾರು ವಿಂಗಡಿಸಬೇಕೆಂಬ ಪ್ರಯತ್ನಗಳು ನಡೆಯುತ್ತಿವೆ. ಹಾಗಾದರೆ ನಮಗೆ ಉಳಿದದ್ದೇ 3ನೇ ಅಭಿಪ್ರಾಯ ಅಂದರೆ ಕರ್ನಾಟಕ ಏಕೀಕರಣದ್ದು. ಭಾಷೆಯ ಮತ್ತು ವಾಙ್ಮಯದ ಅನುಕೂಲವು ಇದಕ್ಕೆ ದೊಡ್ಡ ಉತ್ತೇಜನ ಕೊಡುತ್ತೆ. ಇದಕ್ಕೇನೇ ಹೆಚ್ಚಿನ ಜನರು ಒಪ್ಪುವದಾಗಿದೆ. ಆದರೂ ಸ್ವಾತಂತ್ರ್ಯ ಕರ್ನಾಟಕ ಪ್ರಾಂತ್ಯಕ್ಕೆ ಕೊಡಗನ್ನು ಸೇರಿಸಬೇಕೆಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಏಕೀಕರಣದ ವಿಷಯ ಸರ್ಕಾರದವರು ಯಾವ ಅಭಿಪ್ರಾಯವನ್ನೂ ಕೊಡುವದಿಲ್ಲ. ಆದರೆ ಕರ್ನಾಟಕ ಪ್ರಾಂತ್ಯಕ್ಕೆ ಯಾವ ಯಾವ ಪ್ರದೇಶಗಳನ್ನು ಸೇರಿಸುವದೆಂಬದನ್ನು ತಿಳಿಯಲು ನಾನು ಇಚ್ಛೈಸುತ್ತೇನೆಂದು ಕಮಿಷನರು ಹೇಳಿದ್ದ

ಠರಾವು ಓಟಿಗೆ ಹಾಕಲಾಗಿ 1. ಕುಶಾಲಪ್ಪನವರು, 2. ವೆಂಕಪ್ಪಯ್ಯನವರು, 3. ಬೆಳ್ಯಪ್ಪನವರು, 4. ಕರುಂಬೈಯ್ಯನವರು, 5 ಮುದ್ದಪ್ಪನವರು, 6. ಉತ್ತಯ್ಯನವರು, 7 ...ಣ್ಣಪ್ಪನವರು ಮತ್ತು 8. ಸೆಯ್ಯದ್ ಅಹ್ಮದ್‌ರವರು ಪರವಾಗಿಯೂ, 1 ನಿಕಲ್ಸ್‌ರವರು, 2. ಮೇದಪ್ಪನವರು, 3 ಎ. ಚಂಗಪ್ಪನವರು ಮತ್ತು 4. ಮಂದಣ್ಣನವರು ವಿರೋಧವಾಗಿಯೂ ಓಟುಮಾಡಿ, 4 ಸರ್ಕಾರಿ ಮೆಂಬರುಗಳು, 5. ಪೂವಯ್ಯನವರು ಮತ್ತು 6. ಕಾಳಪ್ಪನವರು ಯಾವ ಕಡೆಗೂ ಓಟುಕೊಡದ್ದರಿಂದ ಠರಾವು ಬಹುಮತದಿಂದ ಪಾಸಾಯಿತು.

ಮಧ್ಯಾಹ್ನ 1 ಗಂಟೆಗೆ ಮೀಟಿಂಗು ಮುಕ್ತಾಯವಾಯಿತು.

(5ನೇ ಪುಟದಲ್ಲಿ ಮುಂದುವರಿದಿದೆ.)


## "ಔಷಧ ಸೀಸೆಗಳಿಗಿಂತಲೂ ಬರೇ ಜೀವನ ಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು."

### ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರಬಲ್. ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯ ಚಂದ್ರಿಕೆ" ಎಂಬ ಆರೋಗ್ಯಬೋಧಕವಾದ ಮಾಸ ಪತ್ರಿಕೆಯು, ನಿಮಗೆ ಆರೋಗ್ಯ ದೃಢಕಾಯರಾಗಿ ಜೀವಿಸುವ ಮಾರ್ಗವನ್ನೂ, ... ಡಾಕ್ಟರುಗಳಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟ ರೋಗ ವಿಚಾರವನ್ನೂ ಬೋಧಿಸುವುದು.

ಈ ಆರೋಗ್ಯ ಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ, ಬಹು ಕಾಲದಿಂದ ಶಸ್ತ್ರ ಚಿಕಿತ್ಸೆಯಲ್ಲಿಯೂ ... ಷದ ಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಎಂಬೀ ಮಾಸ ಪತ್ರಿಕೆಯಲ್ಲಿ ಆಹಾರ ಕ್ರಮ, ರೋಗನಿವಾರಣೋಪಾಯಗಳು, ಪೋಷಣೆ, ರೋಗಿಗಳ ಉಪಚಾರ ಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವವು. ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿ.

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮತ್ತು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ ಕನ್ನಡ, ತೆಲುಗು, ತಮಿಳು, ಇಂಗ್ಲಿಷ್ ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದು ಬೀಳುವುದು. ಟಪಾಲು ಹಾಕಲು ಕೂಡ ನೀವು ಕೊಡಬೇಕಾದುದಿಲ್ಲ.

52—13 ಮ್ಯಾನೇಜರ್, ಆರೋಗ್ಯಚಂದ್ರಿಕೆ, 323 ತಂಬುಶೆಟ್ಟಿ ಬೀದಿ, ಮದರಾಸು.



'ಬೆಲ್ಜಿಯನ್' ತೋಟದ ಕೋವಿಗೆ

ಹೊಗೇ ರಹಿತವಾದ 12 ನಂಬರಿನ ಇಂಗ್ಲಿಷ್ "ಎಲೇ" ಚಿಲ್ಲು ತುಂಬಿದ ತೋಟಗಳು 100 ಕ್ಕೆ ರೂ 1...
ಅಮೇರಿಕನ್ ವೇಸ್ಟೆರನ್ " " " 100 ಕ್ಕೆ ರೂ.
ಬೆಲ್ಜಿಯನ್ 100 ಕ್ಕೆ ರೂ.

ಎಲ್ಲಾ ತರದ ಕೋವಿಗಳು, ರೈಫಲ್‌ಗಳು, ರಿವಾಲ್ವರ್‌ಗಳು, ಪಿಸ್ತೂಲ್‌ಗಳು ಮತ್ತು ಚಿಲ್ಲು ಮದ್ದು ವಗೈರೆ ಬೇಟೆಗಾರರಿಗೆ ಬೇಕಾಗಿರುವ ಎಲ್ಲಾ ಸಾಹಿತ್ಯಗಳು ಸುಲಭ ದರದಲ್ಲಿ ದೊರಕುತ್ತೆ.

ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಂಪೆನಿಯ ಕೆಟಲಾಗೊಂದು ಮುಫತ್ತಾಗಿ ರವಾನಿಸಲ್ಪಡುವುದು.

Abdoolally Noorbhoy.
Arms & Ammunition Dealers.
248–250 Abdul Rehman Street
Bombay 3. Telegrams "Guidance"

5



ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ

## ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮೊಫೋನ್‌ಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಬೆಳ್ಳಿಯ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಒಟ್ಟಾಗಿಯೂ, ಚಿಲ್ಲರೆಯಾಗಿಯೂ ಯಾವಾಗಲೂ ದೊರೆಯುತ್ತವೆ. ನಮ್ಮಲ್ಲಿ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ "ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯ ಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತ ಕಳುಹಿಸುತ್ತೇವೆ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಮುಖೇನ ಬರೆದು ಈಗಲೇ ತಿಳಿಯಬಹುದು

24—2

# ವರ್ತಮಾನ ಸಂಗ್ರಹ.

## ಒಳದೇಶ.

ಬೆಂಗಳೂರು ಸಿಟಿ ಮುನ್ಸಿಪಾಲಿಟಿಯ ಕಮೀಷನರಾಗಿದ್ದ ಕೋದಂಡ ರಾಮಯ್ಯನವರು ಈಗ ಸರ್ಕಾರದವರಿಂದ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ಮೆ. ಪಂಡೀಟಿರ ಅಪ್ಪಯ್ಯನವರ ಪತ್ನಿಯವರು ಅವಳ ಗಸ್ಟು ಹತ್ತು 17 ದಿವಸಗಳಲ್ಲಿ ನಿನ್ನೆ ರಾತ್ರಿ ಮಡಿಕೇರಿಯಲ್ಲಿರುವ ಅವರ ಭವನದಲ್ಲಿ ಶಿವಾಧೀನರಾದರೆಂದು ತಿಳಿಸ ವ್ಯಸನಪಡುತ್ತೇವೆ.

ಕೊಡಗಿನ ಸರ್ಕಾರಿ ಉದ್ಯೋಗಸ್ಥರಿಗಾಗಿ ಮದ್ರಾಸು ಯಲ್ ಟೆಸ್ಟು ಪರೀಕ್ಷೆಯು ಈ ತಾ. 11 ರಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಪ್ರಾರಂಭವಾಗಿದೆ ಅದು ತಾ. 15 ವರೆಗೆ ನಡೆಯುವದು.

ಕೋಟಿಬೆಟ್ಟದ ಮೆ. ಪೆಬ್ರವರಿಗೂ, ಮೆ. ಅಳಮಂಡ ಪ್ಪನವರಿಗೂ ನಡೆಯುತ್ತಿದ್ದ ಕ್ರಿಮಿನಲ್ ಮೊಕದ್ದಮ್ಮೆ ಕೋರ್ಟಿನ ಹೊರಗೆ ರಾಜಿಯಿಂದ ತೀರ್ಮಾನವಾಗಿದೆ ಎಂದು ತಿಳಿಯಬರುತ್ತದೆ

ಈ ತಿಂಗಳ ಆಖೈರು ವಾರದಲ್ಲಿ ಕಲ್ಕತ್ತಾದಲ್ಲಿ ನಡೆಯುವ ಸರ್ವಪಕ್ಷೀಯ ಪರಿಷತ್ತಿಗೂ, ಇಂಡಿಯನ್ ನೇಶನಲ್ ಕಾಂಗ್ರೆಸ್ಸಿಗೂ ಡೆಲಿಗೇಟರುಗಳಾಗಿಯೂ, ಪ್ರೇಕ್ಷಕರಾಗಿಯೂ ಕೊಡಗಿನಿಂದ ಆರೇಳು ಜನರು ಹೋಗುವರೆಂದು ವರ್ತಮಾನವಿದೆ.

ಕೊಡಗು ಡಿಸ್ಟ್ರಿಕ್ಟ್ ಮಂಡಲಿಯವರು ಸೈಮನ್ ಕಮಿಷನನ್ನು ಬಹಿಷ್ಕರಿಸುವ ಠರಾವನ್ನು ಮಂಜೂರು ಮಾಡಿದ್ದರಿಂದ ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರು ಸದರಿ ಮಂಡಲಿಯ ಸದಸ್ಯರನ್ನು ಅಭಿನಂದಿಸಿ ಠರಾವು ಪಾಸು ಮಾಡಿರುವರು

ಮೈಸೂರಿನಿಂದ ವೀರರಾಜಪೇಟೆಗೆ ಬರುತ್ತಿದ್ದ ಶ್ರೀ ಚಾಮುಂಡಿ ಮೋಟಾರು ಸರ್ವಿಸಿನ ಬಸ್ಸು ತಾ. 29—11—28 ರ ರಾತ್ರಿ ಒಳ ರಸ್ತೆಯಲ್ಲಿ ಮಗುಚಿ ಬಿತ್ತೆಂತಲೂ, ಪ್ರಯಾಣಿಕರಿಗ ಅಲ್ಪಸ್ವಲ್ಪ ನೋವಲ್ಲದೆ ಅಪಾಯವೇನೂ ಆಗಲಿಲ್ಲವೆಂತಲೂ ವರ್ತಮಾನ.

ಸಂಪಾಜೆ ಗ್ರಾಮದ ಮೆ. ಸಂಣ್ಣಯ್ಯ ಪಟೇಲರವರ ಮನೆಯಲ್ಲಿ ಈ ತಾ. 8ರಲ್ಲಿ ಬಾಲಣ್ಣನೆಂಬವರ ಹೆಂಡತಿ ಆತ್ಮಹತ್ಯ ಮಾಡಿಕೊಂಡಳೆಂದೂ, ಅವಳ ಶವವು ಮಡಿಕೇರಿ ಆಸ್ಪತ್ರೆಯಲ್ಲಿ ಪರೀಕ್ಷಿಸಲ್ಪಟ್ಟಿತೆಂದೂ, ಕೇಸನ್ನು ಪೋಲೀಸಿನವರು ವಿಚಾರ ಮಾಡುತ್ತಿರುವರೆಂದೂ ತಿಳಿಯುತ್ತೇವೆ

ಈ ತಾ. 2ರಲ್ಲಿ ನಡೆದ ಕಲ್ಕತ್ತಾ ಅಗ್ರಿಕಲ್ಚರಲ್ ಕಾಲೇಜಿನ ಕಾನ್ವೊಕೇಶನ್‌ನಲ್ಲಿ, ಆ ಕಾಲೇಜಿನ ಆಖೈರು ಪರೀಕ್ಷೆಯಲ್ಲಿ ತೇರ್ಗಡೆಯಾದದಕ್ಕೂ, ನಂತರ ಗಾರ್ಡನ ಕೆಲಸ ಮಾಡಿದಕ್ಕೂ ಮೆ. ಮಂಡೇಟ್ಟಿರ ಚಂಗಪ್ಪನವರಿಗೂ ಮೆ. ಕೊಂಗಂಡ ಚಿಟ್ಟಿಯಣ್ಣನವರಿಗೂ ಪ್ರತ್ಯೇಕ ಡಿಗ್ರಿಗಳು ಕೊಡಲ್ಪಟ್ಟದಲ್ಲದೆ ಒಂದನೇಯದಾಗಿ ಪಾಸಾದದಕ್ಕೆ ಮೆ. ಯಂ. ಚಂಗಪ್ಪನವರಿಗೆ ಒಂದು ಚಿನ್ನದ ಪದಕವೂ ಕೊಡಲಾಯಿತೆಂದು ತಿಳಿದು ಸಂತೋಷಪಡುತ್ತೇವೆ.

ವೈನಾಡು ಕೊಡಗರು ಕಳೆದ ತಾ 27 ರಲ್ಲಿ ಮೆ. ಬೊಳ್ಳಿಯಂಡ ಕುಟ್ಟಯ್ಯನವರ ಮನೆಯಲ್ಲಿ ಸೇರಿ ಕದಿರು ತೆಗೆದು ಹಬ್ಬದಲ್ಲಿ ಭಾಗಿಗಳಾದರೆಂದೂ, ಮದ್ರಾಸಿನ ಕೊಡಗರು ಈ ತಾ 1 ರಲ್ಲಿ ಮೆ. ಕೊಂಗಂಡ ಅಚ್ಚಯ್ಯನವರ ಭವನದಲ್ಲಿ ಅವರು ಕೊಟ್ಟ ಹುತ್ತರಿ ಊಟವನ್ನು ಸ್ವೀಕರಿಸಿದರೆಂದೂ, ಬೊಂಬಾಯಿ ಕೊಡಗರು ಈ ತಾ. 9 ರಲ್ಲಿ ಅಲ್ಲಿಯ ಕೊಡಗು ಸಂಘದ ಆಶ್ರಯದಲ್ಲಿ ಹುತ್ತರಿ ಹಬ್ಬವನ್ನು ಆಚರಿಸಿದರೆಂದೂ ವಾರ್ತೆಗಳು ಬಂದಿವೆ. ಸ್ಥಳ ಸಂಕೋಚದಿಂದ ಅವುಗಳನ್ನು ವಿವರವಾಗಿ ಪ್ರಕಟಿಸಲು ಸಾಧ್ಯವಾಗಲಿಲ್ಲ.

---

## ಹಿಂದೂದೇಶ.

ಭೋಪಾಲ ಸಂಸ್ಥಾನದಲ್ಲಿ ಜೋರಾದ ಚಳಿ, ಬಿರುಗಾಳಿ ಉಂಟಾಗಿ ತುಂಬಾ ನಷ್ಟ ಸಂಭವಿಸಿದೆ.

ತಮ್ಮ ಸರಹದ್ದಿನೊಳಗೆ ಸೇಂದಿ ಯ ಸಾರಾಯಿ ಅಂಗಡಿಗಳನ್ನು ಇಡಕೂಡದೆಂದು ಹಾರ್ವ ಮುನ್ಸಿಪಾಲಿಟಿಯವರು ನಿಶ್ಚೈಸಿರುವರು.

ಕರ್ನಾಟಕ ಸರ್ವ ಪಕ್ಷೀಯ ಪರಿಷತ್ತು ವಿಜಾಪುರಲ್ಲಿ ಈ ತಾ. 16 ರಲ್ಲಿ ನಡೆಯುವದು. ಡಾಕ್ಟರ್ ಅನಿಬೆಸೆಂಟರವರು ಅಧ್ಯಕ್ಷರಾಗಿರುವರು.

ಲೋಕವಿಖ್ಯಾತರಾದ ಗಾಮ ಮತ್ತು ಕಲ್ಲು ಎಂಬವರ ಕುಸ್ತಿಯ ಪ್ರದರ್ಶನವೂ, ಹಳ್ಳಿಯ ಆಟಗಳೂ ಕಾಂಗ್ರೆಸ್ ವಾರದಲ್ಲಿ ಕಲ್ಕತ್ತಾದಲ್ಲಿ ನಡೆಯುವವು

ಪಂಡಿತ ಮೋತಿಲಾಲ್ ನೆಹರುರವರು ಕಲ್ಕತ್ತಾಕ್ಕೆ ಹೋಗುವಾಗ್ಯೆ ಅವರಿಗೆ ಸ್ವಾಗತ ಪತ್ರವನ್ನು ಒಪ್ಪಿಸಲು ಹೌರಾದ ಮುನ್ಸಿಪಾಲಿಟಿಯವರು ತೀರ್ಮಾನಿಸಿರುವರು.

ಈ ತಾ. 9 ರಲ್ಲಿ ನಾಗಪುರದಲ್ಲಿ ನಡೆದ ಮಧ್ಯ ಪ್ರಾಂತ್ಯದ ಸರ್ವ ಪಕ್ಷೀಯ ಪರಿಷತ್ತಿನಲ್ಲಿ ನೆಹರು ಕಮಿಟಿಯ ವರದಿಯನ್ನು ಒಪ್ಪಿ ಠರಾವು ಪಾಸುಮಾಡಲಾಯಿತು.

ಕಾಂಗ್ರೆಸ್ ಸಮಯದಲ್ಲಿ ಕಲ್ಕತ್ತಾದಲ್ಲಿ ನಡೆಯಲಿಕ್ಕಿರುವ ರಾಷ್ಟ್ರಭಾಷಾ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಲು ಮಹಾತ್ಮ ಗಾಂಧಿಯವರು ಒಪ್ಪಿರುವರು.

ರಾಜದ್ರೋಹದ ಲೇಖನವನ್ನು ಪ್ರಕಟಿಸಿದರೆಂಬ ಕಾರಣದಿಂದ ಕಲ್ಕತ್ತಾದ "ಫಾರ್‌ವರ್ಡ್" ಪತ್ರಿಕೆಯ ಸಂಪಾದಕರನ್ನೂ ಮುದ್ರಕರನ್ನೂ ದಸ್ತಗಿರಿ ಮಾಡಿ ಜಾಮೀನು ಮೇಲೆ ಬಿಟ್ಟಿರುವರು.

ನೇಶನಲ್ ಲಿಬರಲ್ ಫೆಡರೇಶನಿನ 11 ನೇ ಕಾನ್‌ಫರೆನ್ಸನ್ನು ಈ ತಾ. 30 ಮತ್ತು 31 ರಲ್ಲಿ ಅಲಹಾಬಾದಿನಲ್ಲಿ ಸರ್ ಚಿಮನ್‌ಲಾಲ್ ಸೆಟಲ್ವಾಡ್‌ರವರ ಅಧ್ಯಕ್ಷತೆಯಲ್ಲಿ ನಡಿಸುವಂತೆ ತೀರ್ಮಾನಿಸಿರುವರು.

ಮದ್ಯನಿಷೇಧದ ಚಳವಳಿಯನ್ನು ನಡಿಸುತ್ತಿರುವ ಸಂಘಗಳಿಗೆ ಸಹಾಯ ಕೊಡಲು ಮದ್ರಾಸು ಸರ್ಕಾರದವರು ಬರುವ ವರ್ಷದ ಬಡ್ಜೆಟ್ಟಿನಲ್ಲಿ ಕೆಲವು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡುವರಾಗಿ ವರ್ತಮಾನ.

ಸೈಮನ್ ಕಮಿಷನು ತಾ. 12ರಲ್ಲಿ ಪಾಟ್ನಾಕ್ಕೆ ಹೋದಾಗ್ಯೆ ಅಲ್ಲಿಯೂ ಸುಮಾರು 7000 ಜನರು ಕಪ್ಪು ಬಾವಟೆಗಳಿಂದ ಬಹಿಷ್ಕಾರದ ಮೆರವಣಿಗೆಯನ್ನು ನಡಿಸಿದರು. ಆದರೆ ಪೋಲೀಸಿನವರ ಗಲಾಟೆಯೇನೂ ಆಗಲಿಲ್ಲವಂತೆ.

ಬೊಂಬಾಯಿ ಕ್ವಾಡ್ರ್ಯಾಂಗ್ಯುಲರ್ ಕ್ರಿಕೆಟ್ ಪಂಥದಾಟದ ಆಖೈರಿನಲ್ಲಿ ಪಾರ್ಸಿಟೀಮಿನವರು ಯೂರೋಪಿಯನ್ ಟೀಮಿನವರನ್ನು ಸೋಲಿಸಿರುವರು. 1912 ರಿಂದ ಪ್ರಾರಂಭವಾದ ಈ ಟೂರ್ನಮೆಂಟಿನಲ್ಲಿ ಪಾರ್ಸಿಯವರು ಗೆದ್ದದ್ದು ಇದು ಮೂರನೇ ಸಾರಿಯಾಗಿದೆ.

ಬರುವ ಫೆಬ್ರವರಿಯಲ್ಲಿ ಮದ್ರಾಸಿನಲ್ಲಿ ನಡೆಯಲಿಕ್ಕಿರುವ ಅಖಿಲಭಾರತ ಬಹಿಷ್ಕಾರದ ಕಾನ್‌ಫರೆನ್ಸಿನ ಅಧ್ಯಕ್ಷಸ್ಥಾನವನ್ನು ವಹಿಸಲು ಬಂಗಾಳ ಶಾಸನ ಮಂಡಲಿಯ ಪ್ರೆಸಿಡೆಂಟರಾದ ಸಾಂಟೋಷದ ರಾಜ ಮನ್ಮಥನಾಥ ರಾಯಚೌಧರಿಯವರನ್ನು ಕೇಳಿಕೊಳ್ಳಲಾಗಿದೆಯಂತೆ.

ನೆಹರು ಕಮಿಟಿಯ ಸಪ್ಲಿಮೆಂಟರಿ ರಿಪೋರ್ಟು ಪ್ರಕಟವಾಗಿದೆ. ಅದರಲ್ಲಿ ಪ್ರಾಯಬಂದವರಿಗೆಲ್ಲಾ ಓಟಿನ ಹಕ್ಕು ಕೊಡುವ ಮತ್ತು ಮುಸಲ್ಮಾನರಿಗೆ ಪ್ರತ್ಯೇಕ ಪ್ರತಿನಿಧಿತ್ವ ಕೊಡುವದರ ವಿಷಯ ಏನೊಂದೂ ಬದಲಾಯಿಸಿರುವದಿಲ್ಲ. ಆಶ್ರಿತ ಸಂಸ್ಥಾನಗಳ ಸರ್ಕಾರದ ವಿಷಯ ತಮ್ಮ ಅಭಿಪ್ರಾಯವನ್ನು ವಿವರಿಸಿರುವರು.

ಭಾರತೀಯ ಪತ್ರವ್ಯವಸಾಯಕರ ಸಂಘದ ಆಶ್ರಯದಲ್ಲಿ ಕಲ್ಕತ್ತಾದಲ್ಲಿ ಈ ತಾ. 10 ರಲ್ಲಿ ನಡೆದ ಬಂಗಾಳ ಪತ್ರವ್ಯವಸಾಯಕರ ಕಾನ್ಫರೆನ್ಸಿನಲ್ಲಿ ಸೈಮನ್ ಕಮಿಷನಿನ ಬಹಿಷ್ಕಾರ ಚಳವಳಿಯನ್ನು ಬಲಪಡಿಸಬೇಕೆಂದೂ ಪಂಡಿತ ಮೋತಿಲಾಲ್ ನೆಹರುರವರು ವಹಿಸುವ ವಿಷಯಕ್ಕೆ ಸಂಪೂರ್ಣ ಬೆಂಬಲ ಕೊಡಲಾಗಿದೆ ಮಿಸೆಸ್ ಸರಳದೇವಿಯವರು ಕಾನ್‌ಫರೆನ್ಸಿನ ಅಧ್ಯಕ್ಷರಾಗಿದ್ದರು

ಮಿಸೆಸ್ ಕಮಲದೇವಿ ಚಟ್ಟೋಪಾಧ್ಯಾಯರವರು ಬರುವ ವಾರದಲ್ಲಿ ನಡೆಯಲಿಕ್ಕಿರುವ ಪ್ರಪಂಚದ ವಿದ್ಯಾಸಂಘಗಳ ಕೂಟಕ್ಕೆ ಅಖಿಲ ಭಾರತ ಉಪಾಧ್ಯಾಯರುಗಳ ಸಂಘದ ಪ್ರತಿನಿಧಿಯಾಗಿ ನೇಮಿಸಲ್ಪಟ್ಟಿರುವರು. ಅವರು ಬರುವ ಮೇ ತಿಂಗಳಲ್ಲಿ ಯೂರೋಪಿಗೆ ಹೋಗುವರು. ಅವರು ಬರ್ಲಿನ್ ಪಟ್ಟಣದಲ್ಲಿ ನಡೆಯುವ ಜನಾಂಗಗಳ ಪರಸ್ಪರ ಸ್ತ್ರೀಯರ ಕಾನ್‌ಫರೆನ್ಸಿಗೂ, ಜನಾಂಗಗಳ ಪರಸ್ಪರ ಲೇಬರ್ ಕಾನ್‌ಫರೆನ್ಸಿಗೂ ಹೋಗಲಿಕ್ಕಿರುವರು.

ಕಲ್ಕತ್ತಾದಲ್ಲಿ ಈ ತಾ. 22 ರಿಂದ 28ರ ವರೆಗೆ ಸರ್ವಪಕ್ಷೀಯ ಪರಿಷತ್ತೂ, 29 ರಿಂದ 31ರ ವರೆಗೆ ಇಂಡಿಯನ್ ನೇಶನಲ್ ಕಾಂಗ್ರೆಸ್ ಮಹಾಸಭೆಯೂ ಕೂಡುವವು. ಖಾದಿ, ಲಲಿತಕಲಾ, ಗೀತಾ ಪ್ರದರ್ಶನಗಳೂ ಆಗುವವು. ಸ್ತ್ರೀ ಸಮ್ಮೇಳನವೂ ಜರಗುವದು. ಕಾಂಗ್ರೆಸ್ ಚಪ್ಪರದಲ್ಲಿ ಇಪ್ಪತ್ತು ಸಾವಿರ ಜನರು ಸೇರಲು ಜಾಗ ತಯಾರಿಸಿರುವರು. ಅಧ್ಯಕ್ಷರಾದ ಪಂಡಿತ ಮೋತಿಲಾಲ್ ನೆಹರುರವರು ಈ ತಾ. 21ರಲ್ಲಿ ಅಲ್ಲಿಗೆ ಹೋಗುವಾಗ ಅವರನ್ನು 34 ಕುದುರೆಗಳಿಂದ ಎಳೆಯಲ್ಪಡುವ ರಥದಲ್ಲಿ ಕುಳ್ಳಿರಿಸಿ 2000 ಸ್ವಯಂಸೇವಕರು ಮತ್ತು 50 ಕುದುರೆ ಸವಾರರೊಂದಿಗೆ ಅತಿ ವೈಭವದಿಂದ ಮೆರವಣಿಗೆ ನಡಿಸುವ ಏರ್ಪಾಡು ಮಾಡಿದ್ದಾರೆ ಆ ದಿವಸವೇ ಮಹಾತ್ಮ ಗಾಂಧಿಯವರೂ, ಸೈಮನ್ ಕಮಿಷನೂ ಕಲ್ಕತ್ತೆಗೆ ತಲಪುವರಂತೆ.

---

## ವಿದೇಶ.

ಮೆ. ಅಮೀರ್ ಅಲಿಯವರ ಉಯ್ಯಿಲಿಯಲ್ಲಿಟ್ಟ ಲಂಡನ್ ಮುಸ್ಲಿಮ್ ಲೀಗ್ ಬರಕಾಸ್ತು ಮಾಡಲ್ಪಟ್ಟು ಅದರ ಉಳಿದ ಹಣವು ಅಲ್ಲಿಯ ಮಸ್ಜಿದ್ ಕಟ್ಟಡ ಫಂಡಿಗೆ ಕೊಡಲಾಗಿದೆ.

ಇಂಪೀರಿಯಲ್ ಪ್ರೆಸ್ ಕಾನ್‌ಫರೆನ್ಸೊಂದನ್ನು 1930 ನೇ ಇಸವಿಯಲ್ಲಿ ಲಂಡನ್ ಪಟ್ಟಣದಲ್ಲಿ ನಡಿಸುವ ಏರ್ಪಾಡುಗಳಾಗುತ್ತಿವೆ. ಇದಕ್ಕೆ ಬ್ರಿಟಿಷ್ ಚಕ್ರಾಧಿಪತ್ಯದಿಂದೆಲ್ಲಾ ಪ್ರತಿನಿಧಿಗಳನ್ನು ಆಹ್ವಾನಿಸುವರಂತೆ.

ಬ್ರಿಟಿಷ್ ಚಕ್ರವರ್ತಿಯವರ ಕಾಯಿಲೆಯು ಏನೊಂದೂ ಗುಣವಿಲ್ಲ. ಅವರ ಬಲಹೀನತೆಯು ವಿಷಯ ಕುತೂಹಲವು ಹೆಚ್ಚುತ್ತಲಿದೆ. ಪ್ರಿನ್ಸ್ ಆಫ್ ವೇಲ್ಸ್‌ರವರು ತಾ. 11 ರ ರಾತ್ರಿ ಲಂಡನಿಗೆ ತಲಪಿ ರಾಜರನ್ನು ನೋಡಿದರು. ಅರಮನೆಯ ಮುಂದೆ ಯಾವಾಗಲೂ ಜನರು ಕಾಯಿಲದ ವಿಷಯ ತಿಳಿಯಲು ಗುಂಪು ಗುಂಪಾಗಿ ಕಾಯುತ್ತಿರುತ್ತಾರೆ.

---

## ಕೊಡಗು ಕಿತ್ತಳೆ ಸೊಸಿ ಬೇಕು.

ಕೊಡಗು ಕಿತ್ತಳೆ ಹಣ್ಣಿನ 1½—2 ಅಡಿ ಎತ್ತರವಿರುವ 500—1000 ಹಸನಾದ ಸೊಸಿಗಳು ನಮಗೆ 1929ನೇ ಜೂನ್ ತಿಂಗಳು ಪ್ರಾರಂಭದಲ್ಲಿ ಬೇಕು. ಆ ಕಾಲಕ್ಕೆ ಕ್ರಯಕ್ಕೆ ಸೊಸಿಗಳನ್ನು ಸಿದ್ಧವಾಗಿ ಕೊಡುವವರು ದರವನ್ನೂ, ತಮ್ಮ ವಿಳಾಸವನ್ನೂ ನಮಗೆ ತಿಳಿಯ ಪಡಿಸಬಹುದು.

**ಟಿ. ಕಲ್ಲಪಿಳ್ಳೆ ಎಂ. ಎ. (ಆನರ್ಸ್) ಎಲ್‌ಎಲ್‌ಬಿ.**
ಅಡ್ವೊಕೇಟ್ & ಜಮೀನ್‌ದಾರ್,
1—1 ಗೊರೂರು, ಹಾಸನ.

---

## ಟಪ್ಪಾಲು ಮೂಲಕ ಹಣ ಸಾಲವಾಗಿ ಸಿಕ್ಕುತ್ತೆ.

ಬಡ್ಡಿಯ ದರ ಅಗ್ಗ. ಕಂತುಗಳು ಸುಲಭ. ಹೆಚ್ಚು ವಿಷಯಕ್ಕೆ ಒಂದಾಣೆ ಸ್ಟ್ಯಾಂಪಿಟ್ಟು ಬರೆಯಿರಿ.

ವಿಳಾಸ:—ಮಾರುತಿ ಬ್ಯಾಂಕರ್,
"ದತ್ತವಿಲಾಸ" ಬಸವನಗುಡಿ,
3—1 ಬೆಂಗಳೂರು.

---

## ಪ್ರಕಟನೆ.

ನನ್ನ ಅಕ್ಕ ಅಮ್ಮಣ್ಣಯಮ್ಮನು ತನಗೆ ತವರು ಮನೆಯಿಂದ ಜೀವನಕ್ಕೆ ಸಿಕ್ಕಿದ ಬೇಟೋಳಿಯಲ್ಲಿರುವ ಭೂಮಿಯನ್ನು ಮಾರುವ ಏರ್ಪಾಡು ಮಾಡುತ್ತಿರುವದಾಗಿ ತಿಳಿದೆನು ಸದರಿ ಭೂಮಿಯನ್ನು ಯಾರಾದರೂ ಕ್ರಯ ವಗೈರೆಗೆ ತೆಗೆದುಕೊಂಡರೆ ಅದು ಊರ್ಜಿತವಾಗಲಿಕ್ಕಿಲ್ಲ. ಒಂದು ವೇಳೆ ಪಡಕೊಂಡರೂ, ಅಂಥವರು ನನಗೆ ಉಂಟಾಗುವ ನಷ್ಟನಷ್ಟಕ್ಕೆ ಬಾಧ್ಯರಾಗಬೇಕಾಗುತ್ತೆ. ಈ ಭೂಮಿ ಸಂಗತಿಯಲ್ಲಿ ಈ ಹಿಂದಲೇ ಲೋ. ಪಾ. ಪತ್ರಿಕೆಯಲ್ಲಿ ಒಂದೆರಡು ಸಾರಿ ಪ್ರಚುರ ಪಡಿಸಿರುವ ವಿಷಯ ನೋಡಿರಿ.

23—11—1928 ಕೆ. ಮಂಜಪ್ಪ.
ಸ್ಕೂಲ್ ಮಾಸ್ಟರ್,
2—2 ವೀರರಾಜಪೇಟೆ.

---

## ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಸರಿಯಾದ ಗಂಟೆಯನ್ನು ತೋರಿಸುವವು ಇದರ ಕೇಸು ಭಂಗಾರಕ್ಕೆ ಸರಿಸಮನಾಗಿರುವದು. ಇದಕ್ಕೆ ಖಾತ್ರಿಯಾಗ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ ಮಾತ್ರ ರೂ. 4—14—0.

ವಿಳಾಸ:—ಟೈಗರ್ ವಾಚ್ ಕಂಪೆನಿ,
52—26 ಪೋ. ಬಾ. 243 ಮದರಾಸು.

---

### ಕೊಡಗಿನಲ್ಲಿ ಸಹಕಾರ ಚಳವಳಿ.

ವೀರರಾಜಪೇಟೆ ಹೈಸ್ಕೂಲ್ ಡಿಬೇಟಿಂಗ್ ಸೊಸೈಟಿಯ ಪರವಾಗಿ ಪಬ್ಲಿಕ್ ಮೀಟಿಂಗ್ ಮಾಡುವಲ್ಲಿ "ಕೊಡಗಿನಲ್ಲಿ ಸಹಕಾರ ಚಳವಳಿಯು ಪ್ರಯೋಜನಕಾರಿಯಾಗಿದೆ. ಯಾ ಇಲ್ಲ' ಎಂಬುದನ್ನು ಕುರಿತು ಡೋಪರ್ ಸ್ಕೂಲ್ ಹಾಲಿನಲ್ಲಿ ಕಳೆದ ತಾ. 15 ರಲ್ಲಿ ಒಂದು ವಾಗ್ವಾದವು ನಡೆಯಿತು. ಮ. ಶ್ರೀ. ಎ ಬಿ. ಚಂಗಪ್ಪ ಯಂ. ಎಲ್. ಸಿ. ಯವರು ಸ್ಪೀಕರಾ (ಅಧ್ಯಕ್ಷ) ಗಿದ್ದರು.

ಮೆ. ಪಿ. ಯಂ. ಚಂಗಪ್ಪನವರು ಸಹಕಾರ ಚಳವಳಿಯಿಂದ ಕೊಡಗಿನಲ್ಲಿ ಬಹಳ ಮಟ್ಟಿಗೆ ಜನಜಾಗೃತಿಯುಂಟಾಗಿದೆಯೆಂದೂ, ಮೆ. ಯಂ. ಯಂ. ಮುತ್ತಣ್ಣರವರು ಬಿ. ಎ., ಬಿ. ಎಲ್., ಅದಕ್ಕೆ ವಿರೋಧಿಯಾಗಿಯೂ ಮಾತನಾಡಿದರು.

ಸದರಿ ದಿನ ಮಧ್ಯಾಹ್ನ 2—30 ಕ್ಕೆ ಸಭೆಯು ಸೇರಿದನಂತರ ನಿರ್ಣಯಗಳ ಕುರಿತು ಪ್ರಶ್ನೋತ್ತರಗಳು ನಡೆದು ಮುಂದೆ ಬರುವ ಇತರಕ್ಕ ನಿರ್ಣಯಗಳನ್ನು ಘರಾಯಿಸಿಕೊಂಡಾಯಿತು. ಅನಂತರ ಆ ದಿನದ ಚರ್ಚೆಯು ಆರಂಭವಾಯಿತು.

ಮೆ. ಪಿ. ಯಂ. ಚಂಗಪ್ಪನವರು ಸಹಕಾರದ ಉದ್ದೇಶಗಳಾದ ಪರಸ್ಪರ ಸಹಾಯ, ವಿಶ್ವಾಸ ಇತ್ಯಾದಿಗಳನ್ನು ವಿವರಿಸಿ, ಸಹಕಾರ ಚಳವಳಿಯು ಕೈಗಾರಿಕೆ ಕಾರ್ಖಾನೆಗಳ ಮೂಲ

ಮೂಸರಾದ ಧನಿಕರಗ ಊಳಿಗವೆಸಗುತ್ತಿದ್ದ ಜನರು ಆ ಧನಿಕರು ತಮಗೆ ಕೊಡತಕ್ಕ ಕಿರುಕುಳವನ್ನು ತಾಳಲಾರದೆ ತಾವಲ್ಲಾ ಒಗ್ಗಟ್ಟಾಗಿ ವಂತಿಗೆಯಿಂದ ಅಲ್ಪ ಸ್ವಲ್ಪ ಮೂಲಧನವನ್ನು ನಿರ್ಮಿಸಿ ಅದರಿಂದ ಸಮುದಾಯವಾಗಿ ಹೊಟ್ಟೆ ಹೊರೆಕೊಳ್ಳುವ ಉದ್ದಿಶ್ಯ ಉಂಟಾದ ಒಂದು ನೂತನ ಕೂಟ. ಇದು ಮೊದಲು ರಾಕ್‍ಡೇಲ್ ಪಾಯನಿಯರುಗಳಿಂದ ಹೊರಟಿತೆಂದೂ, ಸಹಕಾರದ ಸಂಘಗಳು ಜರ್ಮನಿ, ಐರ್ಲೆಂಡು ಇತ್ಯಾದಿ ದೇಶಗಳಲ್ಲಿ ಬೇರೆ ಬೇರೆ ರಚನೆಯಿಂದಿದೆಯೆಂದೂ ಸಹಕಾರದ ಚರಿತ್ರೆಯನ್ನು ವಿವರಿಸಿದರು

ಅನಂತರ "ಕೊಡಗಿಗೆ ಸಹಕಾರವು 1909 ರಲ್ಲಿ ಮೊದಲು ಕಾಲಿಟ್ಟಿತು. ತದನಂತರ ಈ ಸಮಯಕ್ಕೆ ಕೊಡಗಿನಲ್ಲಿ 240 ಸಂಘಗಳೂ, ಒಂದು ಸೆಂಟ್ರಲ್‍ಬೇಂಕೂ ಮತ್ತು 6 ಲಕ್ಷ ರೂಪಾಯಿಗಳ ಲೇವಾದೇವಿಯೂ ನಡೆಯುತ್ತದೆ. ಈ ಮಹಾಂತರ ಈ ಮೊದಲು ಖಾಸಗಿ ಧನಿಕರ ಕೈಯೊಳಗ ಸಿಕ್ಕಿ ವಿಪರೀತ ಬಡ್ಡಿಯನ್ನು ತೆತ್ತು, ತೆತ್ತು ಅಧೋಗತಿಗಿಳಿಯುತ್ತಿದ್ದ ಕೃಷಿಕಾವಳಿಯನ್ನು ಈ ಸಂಸ್ಥೆಯು ಬದುಕಿಸಿದಲ್ಲದೆ ವ್ಯವಸಾಯ, ವ್ಯಾಪಾರದ ಸೌಕರ್ಯಗಳನ್ನು ಕೊಂಡುಕೊಳ್ಳಲಿಕ್ಕೂ, ಬಾಕುವಾರುಗಳನ್ನು ಒದಗಿಸಿಕೊಳ್ಳಲಿಕ್ಕೂ ಧನಸಹಾಯವೂ ಡಿ ಸುಲಭ ಬಡ್ಡಿ ಸುಲಭ ಕಂತುಗಳಲ್ಲಿ ಅವರಿಂದ ಮರುಪಾವತಿ ಪಡೆದು ಜನಸಾಮಾನ್ಯಕ್ಕೆ ಯಥೇಷ್ಟ ಸೇವೆಯನ್ನು ಮಾಡಿದೆ. ಅಲ್ಲದೆ ಪೂರ್ವದಂತೆ ಕೋರ್ಟುಕಚೇರಿಗೆ ಹಣ ಸುರಿಯುವ ಮತ್ತು ಲಾಯರುಗಳಿಗೆ ಶಕ್ತಿಮೀರಿ ಕೊಡುವ ಪದ್ಧತಿಗಳಿಲ್ಲದೆ ಸುಲಭವಾಗಿ ವ್ಯವಹಾರಗಳು ಜಾರಿಗೆ ಬರುವುದರಿಂದ ಕೃಷಿಕಾವಳಿಗೆ ಹೆಚ್ಚಿನ ನಷ್ಟವಿಲ್ಲ. ತತ್ಕಾಲಕ್ಕೆ ಹಲವು ಧವಸ ಭಂಡಾರಗಳು, ಒಂದು ವ್ಯಾಪಾರದ ಮತ್ತು ಕೆಲವು ಲಂತಾನ ಸಂಘಗಳು ಜಾರಿಯಲ್ಲಿವೆ. ಶೀಘ್ರದಲ್ಲಿ ಬೇರೆ ಮೊದರಿಯ ಕೆಲವು ಸಂಘಗಳು ನಿರ್ಮಾಣವಾಗಲಿಕ್ಕಿವೆ. ಸಹಕಾರ ಸಂಘಗಳು ಯಥೇಷ್ಟ ಪ್ರಯೋಜನವನ್ನು ಮಾಡಿವೆಂಬುದು ಪ್ರತಿಯೊಬ್ಬರ ಅನುಭವದಲ್ಲೇ ಇದೆಯಾದ ಕಾರಣ ಅದನ್ನಿಲ್ಲಿ ಹೆಚ್ಚು ಒತ್ತಿ ಹೇಳಬೇಕಾದ ಆವಶ್ಯವಿಲ್ಲ ' ಎಂದು ಮೊದಲಾಗಿ ಅಂದರು.

ಅನಂತರ ಮೆ. ಪಿ. ಯಂ. ಚಂಗಪ್ಪನವರನ್ನು ಅನುಮೋದಿಸಿ ಮೆ. ಟಿ. ಯಂ. ಕಾರ್‍ಯಪ್ಪನವರು—' ಸಹಕಾರ ಸಂಘಗಳು ಈ ನಮ್ಮ ದೇಶಕ್ಕೆ ಶುಭವನ್ನುಂಟುಮಾಡಿವೆಂಬುದು ಸ್ವಭಾವ ಸಿದ್ಧವಾಗಿರುವ ಕಾರಣ ಈ ಸಭೆಯಲ್ಲಿ ಯಾರೂ ಅದನ್ನು ವಿರೋಧಿಸಲಿಕ್ಕಿಲ್ಲ. ಅದರ ಹುಟ್ಟಿನಲ್ಲಿ ಅದು ಧನಿಕರ ಕಿರಿಯಿಂದ ಬಡಕೂಲಿಯವರನ್ನು ಬದುಕಿಸಲು ಜನ್ಮವೆತ್ತಿತು ಆದರೆ ಈಗ ಅದು ಲೇವಾದೇವಿ ವ್ಯವಸಾಯ, ವ್ಯಾಪಾರ, ಕೈಗಾರಿಕೆ ಇತ್ಯಾದಿ ವಿಷಯಗಳಲ್ಲೂ ಹರಡಿಕೊಂಡಿದೆ.

ಕೊಡಗಿನಲ್ಲಿ ಸಹಕಾರ ಸಂಘಗಳ ಆಗಮನದ ಪೂರ್ವದಲ್ಲಿ ಬಡವನಾದ ಒಬ್ಬನು ಸಾಲವೊಂದಲು ಅತಿ ಪ್ರಯಾಸವಿತ್ತು. ಹಲವು ಸಾರಿ ಹಣಗಾರನ ಬಳಿ ಹೋಗಿ ನಯಭಯಗಳಿಂದ ಹೇಳಿಕೊಂಡು ಆತನ ಊಳಿಗಗಳನೆಸಗಿದರೂ ಸಾಲವು ದೊರಕುವುದು ದುಸ್ತರವಾಗಿತ್ತು. ದೊರತಿದರೂ ಯಥೇಷ್ಟ ಬಡ್ಡಿ ತೆರಬೇಕಿತ್ತು. ಮರುಪಾವತಿಗೆ ರಶೀತಿಯಾಗಲಿ, ದಾಖಲೆಯಾಗಲಿ ಇಲ್ಲದೆ ಸಾಲವಂತನಿಗೂ, ಮೂಲವಂತನಿಗೂ ಮನಸ್ತಾಪ ಒಂದಲ್ಲಿ ಕರಾರಿನ ಮೇಲೆ ನಮೂದುಳ್ಳ ಪೂರ್ತಿ ಹಣ ವಸೂಲಾಗುತ್ತಿತ್ತು. ಅಲ್ಲದೆ ಕೋರ್ಟು ಖರ್ಚು ವಗೈರೆ ಸಾಲಗಾರನು ಹೊರಬೇಕಿತ್ತು. ಆದರೆ ಸಹಕಾರ ಸಂಘಗಳಲ್ಲಿ ಇಂತ ಅಕ್ರಮ ಕೆಲಸಗಳಿಗೆ ಎಡೆಯಿಲ್ಲ. ಸಾಲಿಗನ ಮೇಲೆ ಕೋರ್ಟು ಖರ್ಚು ಸಹ ಬೀಳುವುದಿಲ್ಲ. ಒಂದು ಸಂಘದ ಮೆಂಬರುಗಳು ತಮ್ಮ ಕಷ್ಟ ಸುಖಗಳಲ್ಲಿ ಸಮಭಾಗಿಗಳಾಗುತ್ತಾರೆ.

ಸಹಕಾರ ಸಂಘಗಳು ದೂರದ ಗ್ರಾಮವಾಸಿಗೆ ಹಲವು ಮಟ್ಟಿಗೆ ವಿದ್ಯೆಯನ್ನು ಕೊಟ್ಟಿದೆ. ಈಗಲೀಗ ಮಹಾಸಭೆ ಮತ್ತು ಪಂಚಾಯಿತ ಸಭೆಯೆಂಬಲ್ಲಿ ಹೆಚ್ಚಿನ ಅಧಿಕಾರವು ಮಹಾಸಭೆಯಲ್ಲಿದೆ. ಅದು ಕಾಯಿಟೆ ಮಾಡುವ ಮತ್ತು ಹಣದ ಭಂಡಾರದ ಮೇಲೆ ಹೆಚ್ಚು ಅಧಿಕಾರವುಳ್ಳ ಮುಖ್ಯಾಂಶವೆಂದೂ, ಪಂಚಾಯಿತ ಸಭೆಯು ಕಾರ್ಯನಿರ್ವಾಹಕ ಅಂಗವೆಂದೂ ತಿಳಿದಿದೆ ಅವರ ಓಟಿನ ಹಕ್ಕು ಮತ್ತು ಪ್ರಾಮುಖ್ಯತೆ ಹಣದ ಲೆಕ್ಕವಿಡುವ ವಿಧಾನ ಹಣ ಉಳಿಸಿ ಶೇವಣಾತಿ, ಇವುಗಳನ್ನು ಅರಿತುಕೊಂಡು ಆಚರಣೆಗೆ ತರುವ ಅಪೇಕ್ಷೆ ಇತ್ಯಾದಿಗಳನ್ನುಂಟುಮಾಡಿದೆ. ಅವಿದ್ಯಾವಂತರನ್ನು ಪ್ರಜಾಪ್ರತಿನಿಧಿ ಸರಕಾರದ ತತ್ವಗಳ ಬಗ್ಗೆ ತಂಬೇತುಮಾಡಲು ಇನೇ ಪ್ರತ್ಯಕ್ಷ ದಾರಿಯಾಗಿದೆ. ಸದಾ ಕಾಲವು ಪ್ರಜಾಪ್ರತಿನಿಧಿ ಸಂಕಾರವನ್ನು ಬಯಸುವ ನನ್ನಂತವರ್‍ಯಾರು ಇಂಥಾ ಸಂಸ್ಥೆಯನ್ನು ವಿರೋಧಿಸಲಿಕ್ಕಿಲ್ಲೆಂದು" ಹೇಳಿದರು.

ತದನಂತರ ಮೆ. ಯು. ಯಂ ಮಲ್ಲಣ್ಣ ಬಿ. ಎ. ಬಿ. ಎಲ್. ರವರು ಮೇಲಿನ ಠರಾವನ್ನು ವಿರೋಧಿಸಿ ಹೀಗೆಂದು ಹೇಳಿದರು

"ಮೊದಲು ಮಾತನಾಡಿದವರು ಸಹಕಾರದ ಮಹಿಮೆಯನ್ನು ಮತ್ತು ಅದು ಬೇರೆ ದೇಶಗಳಲ್ಲಿ ಹೊಂದಿದ ಉಚ್ಚಸ್ಥಿತಿಗಳನ್ನು ವಿವರಿಸಿದರು. ಅದರೆ ಅದು ನಮ್ಮ ಕೊಡಗಿಗೆ ಯಾವ ರೀತಿ ಪ್ರಯೋಜನ ಕೊಟ್ಟಿದೆ ನೋಡೋಣ 25 ವರುಷಗಳಿಂದ ಸಹಕಾರವು ಇಲ್ಲಿ ನೆಲಸಿದ್ದರೂ ಈಗಾಗಲೇ ಸಂಘಗಳ ಸಂಖ್ಯೆಯು 240 ಆಗಿಯೂ, ಇನ್ನೂ ವಿಸ್ತಾರದಲ್ಲಿಯೂ ಇದೆ. ಅಂದರೆ ಜನರಲ್ಲಿ ಸಾಲಕೊಳ್ಳುವ ಚಟವು ಬೆಳೆಯುತ್ತಲೇ ಇದೆ. 6 ಲಕ್ಷ ರೂಪಾಯಿಗಳು ಲೇವಾದೇವಿಯಲ್ಲಿವೆ; ಇದು ಶುಭಲಕ್ಷಣವಲ್ಲ. ಸಹಕಾರ ಸಂಸ್ಥೆಯು ಸಾಲಿಗರಿಲ್ಲದೆ ಮಾಡಿದ್ದರೆ ನಾನು ಅದನ್ನು ಹೊಗಳುತ್ತಿದ್ದೆ. ಅಲ್ಲದೆ ಹಲವು ಸಂಘಗಳ ಕಾರ್ಯನಿರ್ವಾಹಕರು ಹಲವು ರೀತಿಗಳ ಅನಾಚಾರದಿಂದ ಜನರನ್ನು ಪೀಡಿಸುವುದನ್ನು ತಿಳಿದಿರುವೆನು. ಕೆಲವರು ಮೆಂಬರುಗಳಿಗೆ ಅವರ ಶಕ್ತಿಮೀರಿದ ಸಾಲಗಳನ್ನು ಕೊಡಿಸಿ ಅವರ ಸೊತ್ತು ಹರಾಜು ಕಾಲಗಳಲ್ಲಿ ತಾವೇ ಅವುಗಳನ್ನು ಕೂಗಿ ತೆಗೆಯುವರು. ಕೆಲವರು ಮಂಜೂರ್ಮಾಡಿದ ಸಾಲಗಳನ್ನು ತಮ್ಮ ಸಾಲಕ್ಕೆ (ಹೆಚ್ಚಿನ ಬಡ್ಡಿಯದು) ವಜಾ ಹಾಕುವರು. ಹಲವು ವೇಳೆ ಸಾಲ ಮಂಜೂರಾದಲ್ಲಿ ಐದೈದು ರೂಪಾಯಿಯಿಂದ ಸಾಲವು ಪಾವತಿಯಾಗುವುದು. ಇದೆಲ್ಲ ಪೂರ್ವದ ಖಾಸಗಿ ಧನಿಕರ ಆಚರಣೆಯನ್ನು ಮೀರಿದ ಅತ್ಯಾಚಾರಗಳಲ್ಲವೇ? ನಾನೊಂದು ಸಂಘಕ್ಕೆ ಮೆಂಬರಾಗತಕ್ಕ ಅರ್ಜಿಕೊಂಡಲ್ಲು ಒಂದೂವರೆ ತಿಂಗಳ ನನ್ನ ಅರ್ಜಿಯನ್ನು ಆಲೋಚನೆಗೆ ತರಲಿಲ್ಲ ನಾನು ನನ್ನ ಅರ್ಜಿಯನ್ನು ವಾಪಸು ಹೊಂದಿಕೊಂಡೆ. ಇಂಥಾ ಕುಂದುಕಗಳನ್ನು ನೀಗಿ, ವ್ಯಾಪಾರಕ್ಕೂ ಮತ್ತು ಕೈಗಾರಿಕೆಗೂ ಸಂಘಗಳನೇರ್ಪಡಿಸುವರೆ ನನ್ನಿಂದ ಅಡ್ಡಿಯಿಲ್ಲ. ಈಗಿನ ಲೇವಾದೇವಿ ಸಂಘಗಳನ್ನು ಖಂಡಿತ ನಾನು ಅಂಗೀಕರಿಸುವುದಿಲ್ಲ."

ಇವರಿಗೆ ಒತ್ತಾಸೆಯಾಗಿ ಮೆ. ಅಜ್ಜಮಾಡ ಬೋಪೈಯ್ಯನವರು "ಸದರಿ ಸಹಕಾರ ಚಳವಳವು ತಲೆದೋರುತ್ತಿದ್ದ, ಉದ್ದೇಶವಾದದ್ದು ಪಾಶ್ಚಾತ್ಯರಲ್ಲಿ. ಅದು ಪೂರ್ವಾತ್ಯರಿಗೆ ಪ್ರಯೋಜನಕ್ಕೆ ಬರಲಿಕ್ಕಿಲ್ಲ. ಅನರಷ್ಟು ನಾವು ವಿದ್ಯೆಯನ್ನೂ, ಏಕೀಭಾವವನ್ನೂ ಉಳ್ಳವರಲ್ಲವಾದ ಕಾರಣ ನಮಗೆ ಇದು ಆಗತ್ಯವಿಲ್ಲ. ಇವು ನಮ್ಮ ಅವಿಭಕ್ತ ಕುಟುಂಬ ಪದ್ಧತಿಯನ್ನು ಹಾಳುಮಾಡಿವೆ ಇವುಗಳನ್ನು ತೆಗೆದುಹಾಕುವುದೇ ಉತ್ತಮ" ವೆಂದರು.

ನಂತರ ಮೆ. ಯಂ. ಎ. ಚಂಗಪ್ಪನವರು "ಹಲವು ಸಂಘಗಳ ಪಂಚಾಯಿತರು ತಮ್ಮ ಕೆಲಸಗಳನ್ನು ಸರಿಯಾಗಿ ಮಾಡದೆ ಹಲವು ಅಕ್ರಮಗಳು ನಡೆಯುತ್ತವೆ. ಸಂಘವಿಲ್ಲದಿದ್ದರೆ ಸಾಲವಿಲ್ಲ, ಆ ಕಾರಣ ಸಂಘಗಳವಶ್ಯವಿಲ್ಲ" ವೆಂದರು

ಆ ಮೇಲೆ ಮೆ' ಯಂ. ನಾಣೈಯ್ಯನವರು "ಸಂಘಗಳು ತಮ್ಮ ಕೆಲಸಗಳನ್ನು ಸರಿಯಾಗಿ ನಡಿಸಿಲ್ಲವಾದರೆ ಅದು ಸಂಘದ ಸದಸ್ಯರ ತಪ್ಪು. ಅದು ಸಂಸ್ಥೆಯ ತಪ್ಪೆಂದು ಹೇಳಲಾಗದು. ತಪ್ಪನ್ನು ತಿದ್ದಿಕೊಂಡು ಸಂಘವನ್ನು ಊರ್ಜಿತಗೊಳಿಸಬೇಕು" ಎಂದರು.

ಮೆ. ಗಳಾದ ಯಂ. ಕೆ. ಚಂಗಪ್ಪನವರು, ಟಿ. ಬಿ. ಕಾಳಪ್ಪನವರು ಯು. ಬಿ. ದೇವೈಯ್ಯನವರು ಠರಾವಿನ ಪರವಾಗಿ ಮಾತನಾಡಿದರು.

ಮೆ ಪಿ. ಬಿ. ಮುತ್ತಣ್ಣನವರು—"ಖಾಸಗಿ ಧನಿಕರಿಂದ ದೇಶವು ದುಸ್ಥಿತಿಗೆ ಒಂದು ಈಗ ಸಂಘಗಳಿಂದ ಉದ್ಧಾರವಾಯಿತು. ಅಲ್ಲದೆ ಸಂಘಗಳಿಂದ ಹಣದ ಬೆಲೆ ಮತ್ತು ನಿಯಮದ ಲೇವಾದೇವಿ ಇವುಗಳನ್ನು ಜನರರಿತ" ರೆಂದು ಹೇಳಿದರು.

ಮೆ. ಗಳಾದ ಕೆ. ಭವಾನಿಶಂಕರ್, ಬಿ. ಪಿ. ಸೋಮೈಯ್ಯನವರು ವಿರೋಧಿಸಿದರು.

ಮೆ. ಬಿ. ಯಂ. ಚಂಗಪ್ಪನವರು—"ಸ್ಥಳೀಕ ಸಾಹುಕಾರರು ತೀಕಡ ಶಾಲಿಯಾನ 75ರಷ್ಟು ಬಡ್ಡಿ ಎತ್ತುತ್ತಿದ್ದರಾಗಿಯೂ ನಾಲ್ಕು ರೂಪಾಯಿಗೆ ಕೆಲವು ತಿಂಗಳಿಗೆ 3 ಬಟ್ಟಿ ಬತ್ತ ಕೊಡುತ್ತಿದ್ದರೆಂದೂ,ಸಂಘಗಳಿಂದ ಸುಲಭರೀತಿಯ ಸಹಾಯವು ದೊರಕಲವಕಾಶವಾಯಿತೆಂದೂ" ಹೇಳಿದರು

ಮೆ. ಯಸ್. ಐ ಚಣ್ಣಪ್ಪನವರು "ಈಗಿನ ಗ್ರಾಮ ಸಂಘಗಳನ್ನು ನೋಡಿದರೆ ಲೇವಾದೇವಿಯು ಮಾಪಿಳ್ಳೆಯವರಿಂದ ಸಂಘದ ಕೈಗೆ ದಾಟಿದಂತೆಯಾಗಿ ಮುಂದಿಗಿಂತಲೂ ಕಠಿಣತರಕ್ಕೆ ಬಂದಿದೆ. ನಗರ ಸಂಘಗಳು ತಕ್ಕ ಮಟ್ಟಿಗೆ ಚೆನ್ನಾಗಿವೆ. ಗ್ರಾಮ ಸಂಘಗಳನ್ನು ಖಂಡಿತ ತೆಗೆದುಹಾಕಬೇಕು ' ಎಂದು ಹೇಳಿದರು.

ಮೆ' ಕೆ. ಯಸ್. ಮುತ್ತಣ್ಣನವರು "ಗ್ರಾಮ ಸಂಘಗಳಲ್ಲಿಯೂ ಬೈಲಾಗಳಿರುವ ಕಾರಣ ಪಂಚಾಯಿತರು ಹೆಚ್ಚು ಕಡಿಮೆ ಮಾಡಲಾಗುವದಿಲ್ಲ. ಅನುಭವರಹಿತರು ಮಾತ್ರ ಸಂಘಗಳನ್ನು ದೂರುವರು" ಎಂದು ಹೇಳಿದರು.

ಮೆ. ಕೆ. ಪಿ. ಕರುಂಬೈಯ್ಯನವರು—"ಸಂಘಗಳು ಕಾಣುವ ಹಾಗೆ ಯಾವ ಉಪಯೋಗಕ್ಕೂ ಬಂದಿರುವದಿಲ್ಲವಾದ ಕಾರಣ ತೆಗೆದುಹಾಕಬೇಕು ' ಎಂದು ಹೇಳಿದರು

ನಂತರ ಮೆ. ಪಿ. ಯಂ. ಚಂಗಪ್ಪನವರು "ಈಗಿನ ಸಹಕಾರ ಸಂಘಗಳಲ್ಲಿ ಕುಂದುಕಗಳಿಲ್ಲದ ಇಲ್ಲ. ಕುಂದುಕಗಳು ಎಲ್ಲಾ ಸಂಸ್ಥೆಯಲ್ಲಿಯೂ ಇರುತ್ತವೆ. ಆದರೆ ಸಂಘಗಳಿಂದ ಜನ ಸಾಮಾನ್ಯಕ್ಕೆ ಯಥೇಷ್ಟ ಪ್ರಯೋಜನವಾಯಿತೆಂಬದು ಅವಿವಾದದ ಮಾತು. ಸಂಘಗಳಲ್ಲಿ ಬಡವರು ಮಾತ್ರವಲ್ಲ, ಲಕ್ಷಗಟ್ಟಲೆ ಧನಿಕರಾದ ಶ್ರೀಮಂತರೂ ಇರುತ್ತಾರೆ. ಈ ರೀತಿ ಧಾತರಿಗೂ, ದರಿದ್ರರಿಗೂ ಇದರಲ್ಲಿ ಮಿಳಿತವುಂಟು. ಮುಂದೆ ವ್ಯವಸಾಯ ವೃದ್ಧಿಗೆ ಕಾರಣ ಕರ್ತ್ಯವಾಗತಕ್ಕ ಬೇಂಕ್ ಒಂದನ್ನು ನಿರ್ಮಿಸುವ ಆಲೋಚನೆಯು ಇದೆ. ವ್ಯಾಪಾರ, ಕೈಗಾರಿಕೆ, ವರ್ತಕ ಸಂಘಗಳನ್ನು ಏರ್ಪಡಿಸಲು ಮನಸ್ಸಿಡಲಾಗಿದೆ. ಕೊಡಗಿನಲ್ಲಿ 1905 ಕ್ಕೆ ಮೊದಲು ಸಹಕಾರವಿರಲಿಲ್ಲವೆಂದು ನಾನು ಹೇಳುವದಿಲ್ಲ. ಆದರೆ ಈಗಿನ ರೀತಿಯ ಸುವ್ಯವಸ್ಥೆಯ ಸಂಘಗಳಿರಲಿಲ್ಲವೆನ್ನುತ್ತೇನೆ. ಸಂಘಗಳು ಜನರಿಗೆ ಪ್ರಜಾ ಪ್ರತಿನಿಧಿ ಸರಕಾರದ ಮೂಲ ತತ್ವಗಳನ್ನು ಅಭ್ಯಾಸ ಮಾಡಲು ಪ್ರಥಮ ಶಾಲೆಯಾಗಿವೆ. ಇರುವ ಸಂಘಗಳ ಜೊತೆಗೆ ಸಂಘಗಳೂ, ಸರಕಾರ ಸಿಬ್ಬಂದಿಯೂ ಹೆಚ್ಚಿ ಶೀಘ್ರೋದ್ಧಾರವಾಗಲೆಂದು ನಾನು ಹಾರೈಸುತ್ತೇನೆ" ಎಂದು ಜವಾಬು ಕೊಟ್ಟರು.

ಅನಂತರ ಓಟು ತೆಗೆಯಲಾಗಿ ಠರಾವಿನ ಪರವಾಗಿ ೫ ಓಟು, ವಿರೋಧವಾಗಿ 42 ಓಟೂ ಲೆಕ್ಕಿಸಲ್ಪಟ್ಟು ರದ್ದು ಮಂಜೂರಾಯಿತು

ಅಧ್ಯಕ್ಷರಿಗೆ ವಂದನಾರ್ಪಣೆಯನಂತರ ಸಭೆಯು ಬರಖಾಸ್ತು ಆಯಿತು.

ಹಾಜರಿದ್ದವ.

## ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

### ಮೋಟಾರು ಬಸ್ಸುಗಳು.

ಕೊಡಗಿನಲ್ಲಿ ಅನೇಕ ಮೋಟಾರು ಬಸ್ಸುಗಳು ಇತ್ತಿಚಿಟ್ಟದಿಂದ ಕೊಡ್ಲಿಪೇಟೆಯವರೆಗೂ, ಕುಶಾಲನಗರದಿಂದ ಸುಂಟಿಕೊಪ್ಪ ವಾಜೆಯವರೆಗೂ ಓಡಾಡುತ್ತಿವೆ. ಇವುಗಳಿಗಾಗಿ ಇನ್ಸ್‍ಪೆಕ್ಟರೂ ನೇಮಿಸಲ್ಪಟ್ಟಿರುವರು. ಈ ಬಸ್ಸುಗಳು ತಮ್ಮಿಷ್ಟಾನುಸಾರ ಓಡಲಾಗದು, ಘಂಟೆಗೆ ಇಷ್ಟೇ ಮೈಲುಗಳೆಂದು ನಿರುಕ್ಕಿದೆ. ಆದರೂ ಕೆಲವರು ಘಂಟೆಗೆ ಇಪ್ಪತ್ತು, ಮೂವತ್ತು ಮೈಲು ಬಿಡುವುದೂ ಉಂಟು. ಅಲ್ಲದೆ ಬಸ್ಸುಗಳಲ್ಲಿ ಬೀಡಿ ಸಿಗರೇಟು ಮೊದಲಾದವುಗಳನ್ನು ಸೇದಕೂಡದೆಂದೂ ಖಾನೂನು ಇದೆ. ಡ್ರೈವರುಗಳು ಕೆಲಸಮಾಡುತ್ತಿರುವ ಇಂಜಿನುಗಳ ಹತ್ತಿರವೇ ಕುಳಿತುಕೊಂಡು ಬೀಡಿ ಸಿಗರೇಟು ಮೊದಲಾದವುಗಳನ್ನು ಸೇದಿಕೊಂಡು ಬಸ್ಸುಗಳನ್ನು ಬಿಡುತ್ತಾರೆ. ಬಸ್ಸುಗಳನ್ನು ಜೋರಾಗಿ ಬಿಡುವುದರಿಂದಲೂ, ಜೋರಾಗಿ ಬಿಡುತ್ತಾ ಇಂಜಿನಿನ ಒಳಗೆ ಬೀಡಿ ಸಿಗರೇಟು ಬೆಂಕಿಕಡ್ಡಿ ಮೊದಲಾದವುಗಳ ಕಿಡಿಗಳು ಬಿದ್ದೊಡನೇ ಬಸ್ಸಿಗೆ ಬೆಂಕಿಹಿಡಿದು ಪ್ರಾಣಾಪಾಯಕ್ಕೆ ಕಾರಣಗಳಾಗಬಹುದೆಂದು ತಿಳಿದು ಈ ಖಾನೂನುಗಳನ್ನು ಮಾಡಿದ್ದಾಗಿದೆ. ಸಮ್ಮಂಧಪಟ್ಟ ಅಧಿಕಾರಿಗಳು ಈ ವಿಷಯ ತಕ್ಕ ನಿರ್ಬಂಧಗಳನ್ನು ಮಾಡಿ ಜನರಕ್ಷಣೆಯಾಗತಕ್ಕ ಕೆಲಸಗಳನ್ನು ಜಾರಿಗೆತರುವರೆಂದು ನಂಬಲಾಗಿದೆ.

ಪ್ರಯಾಣಿಕ.


# 52 ವರುಷಗಳ ಅನುಭವಸಿದ್ಧ ಔಷಧಗಳು.

### ೧. ಮಹಾಮದನ ಕಾಮೇಶ್ವರೀ ಲೇಹ.

ಅಜೀರ್ಣ, ಎದೆನೋವು ಸೊಂಟನೋವು, ಮಲಬದ್ಧತೆ, ನಿದ್ರೆಯಿಲ್ಲದೆ ಇರುವಿಕೆ ಮುಂತಾದವುಗಳನ್ನು ಗುಣಪಡಿಸಿ ರತಿ ಸುಖಕ್ಕೆ ಶಕ್ತಿಯನ್ನುಂಟುಮಾಡುವುದು.
ಡಬ್ಬಿ 1 ಕ್ಕೆ ರೂ. 2—0—0. 3 ಡಬ್ಬಿಗಳಿಗೆ ರೂ. 5—12—0.

### ೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರು ಕ್ರಮತಪ್ಪಿ ಮುಟ್ಟಾಗುವುದು, ರಜೋಸಮಯದಲ್ಲಿ ಅತ್ಯಲ್ಪವಾಗಲೀ, ಅತಿರೇಕವಾಗಲಿ ರಕ್ತ ಸುರಿಯೋಣ, ಹೊಟ್ಟೆನೋವು, ಸೊಂಟನೋವು, ಒಳಜ್ವರ ನಾನಾವರ್ಣಗಳ ಪ್ರದರಗಳನ್ನು ಅತಿ ಶೀಘ್ರದಲ್ಲಿ ಗುಣಮಾಡಿ ಗರ್ಭಾಶಯ ಸಂಬಂಧ ರೋಗಗಳನ್ನು ಗುಣಪಡಿಸಿ, ಸಂತತಿಗೆ ಅಪಾಯಕರವಾದ ದೋಷಗಳನ್ನು ಹೋಗಲಾಡಿಸುವುದು. 1 ಬಾಟ್ಲಿ ಮತ್ತು 1 ಡಬ್ಬಿ ಮಾತ್ರೆಗೆ 2—4—0.

### ೩. ಮೇಹಕುಠಾರ.

ಇದು ಮೂತ್ರಸ್ಥಾನದಿಂದ ಕೆಂಪು, ಬಿಳುಪು, ಹಳದಿಯಾಗಿ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ, ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ 2—8—0. 3 ಕ್ಕೆ 7—0—0.

### ೪. ಮಲೇರಿಯಾ (ಛಳಿಜ್ವರ) ಪಿಲ್ಸ್.

1. 2 3. ಅಥವಾ 4 ದಿನಕೊಮ್ಮೆ ಬರುವ ಜ್ವರ, ಮಲೆಜ್ವರ ಇವುಗಳ ಮೇಲೆ ಖಾತ್ರಿ. ಬಾಟ್ಲಿ 1 ರ 0—12—0.

### ೫. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ.
ಬಾಟ್ಲಿ 1 ಕ್ಕೆ 0—10—0 3 ಕ್ಕೆ 1—12—0.

### ೬. ಇಛ್ಛಾಭೇದಿ.

ಆಯಾಸವನ್ನುಂಟುಮಾಡದ ಸುಖವಿರೇಚಕ.
ಬಾಟ್ಲಿ 1 ಕ್ಕೆ 0—12—0. 3 ಕ್ಕೆ 2—0—0.

**೭. ದಂತಕಾಂತಿ ಚೂರ್ಣ.** ಡಬ್ಬಿ 1 ಕ್ಕೆ 3 ಆಣೆ

**೮. ಗಜಕರ್ಣ ಮುಲಾಮ್.** ಡಬ್ಬಿ 1ಕ್ಕೆ 6 ಆಣೆ.

N. B. ಇವುಗಳಲ್ಲದೆ ಬೇರೆ ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ

**ಎನ್. ಗಣಪಯ್ಯ ಅಂಡ್ ಸನ್ಸ್,**
**ಆಯುರ್ವೇದೀಕ್ ಫಿಜಿಸಿಯನ್ಸ್,**
52—6 **ಮಂಗಳೂರು, ದ. ಕನ್ನಡ.**

ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಲು ಸುಸಮಯ.

## ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ (ಮಾಸ ಪುಸ್ತಕ)

### (ಎರಡನೆಯ ವರ್ಷಾರಂಭವಾಗಿದೆ.)

'ಹರಿದಾಸ ಸೇವಾ ಸಮಿತಿ' ಯವರಿಂದ ಬಹಳ ಶುದ್ಧ ರೀತಿಯಲ್ಲಿ ಪರಿಶೋಧಿಸಲ್ಪಟ್ಟು ಮಾಸ ಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಲಿರುವ 'ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ' ಯನ್ನು ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿರಿ! ಇದರಲ್ಲಿ ಜಗದ್ವಂದ್ಯರಾದ ಶ್ರೀ ಪುರಂದರದಾಸರು, ಶ್ರೀ ಕನಕದಾಸರೇ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ಹಾಡಿದ ದಿವ್ಯ ಭಗವನ್ನಾಮ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ಕ್ರಾನ್ ಅಷ್ಟಪತ್ರದ ನಾಲ್ಕು ಫಾರಂ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಲಿವೆ. ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೇ ಹಾಸಲು ಉಚಿತ) ಸಾಧಾರಣ ಪ್ರತಿ ರೂ. ೧—೪—೦ ಉತ್ತಮ ಪ್ರತಿ ರೂ. ೨—೪—೦

## ಪ್ರಥಮ ಸಂಪುಟದ ಬೆಂಡಾದ ಪ್ರತಿಗಳು.

| | ಸಾದಾ ಬೈಂಡು | ದಪ್ಪ ರಟ್ಟಿನ ಬೈಂಡು | ಕಿತ್ತಾನಾರು ಬೈಂಡು |
|---|---|---|---|
| ಸಾಧಾರಣ ಪ್ರತಿ | ೧—೪—೦ | ೧—೧೨—೦ | ೨—೪—೦ |
| ಉತ್ತಮ ಪ್ರತಿ | ೨—೪—೦ | ೨—೮—೦ | ೩—೦—೦ |

ಅಂಚೇಹಾಸಲು ಪ್ರತ್ಯೇಕ.

ವಿಳಾಸ:— ಸುಬೋಧ ಪ್ರಕಟನಾಲಯ,
ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.

12-7

## ಏಕೆ ನರಳುತ್ತೀರಿ?

ಪ್ರಾಚೀನ ಋಷಿಗಳಿಂದ ಪ್ರಣೀತವಾದ ಆಯುರಾರೋಗ್ಯೈಶ್ವರ್ಯವರ್ಧಕವಾದ ಆರೋಗ್ಯವಿಧಿಗಳನ್ನು ತಿಳಿಯದೆ ಅಜ್ಞಾನಾಂಧಕಾರದಲ್ಲಿ ಮುಳುಗಿ ಅನೇಕ ತರಹಗಳ ವ್ಯಾಧಿಗಳಿಂದ ಏಕೆ ನರಳುವಿರಿ?

ಶ್ರೇಯವು! ಇಲ್ಲದೆ!!

ಉಚಿತವಾಗಿ ಕೊಡಲ್ಪಡುವ ನಮ್ಮ

ನಮ್ಮ ಔಷಧಿಗಳನ್ನು ಬಿಕ್ರಿ ಮಾಡುವದಕ್ಕೆ

### ವೈದ್ಯ ವಿದ್ಯೆ

ಏಜಂಟರು ಬೇಕಾಗಿರುವರು.

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52—17

ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಜೈನ ಬಜಾರು ರೋಡು, ಮದ್ರಾಸು.

N. B. — ವೈದ್ಯಸಲಹೆಯು ಫೀಜಿಲ್ಲದೆ ಕೊಡಲಾಗುವದು.

# Arms, Ammunition and Shooting Requisites !!!



1928 Illustrated Catalogue Just Issued Free on Application !

| | | | | | |
|---|---|---|---|---|---|
| D. B. B. L. Rifles | Rs. | 120 | to | Rs. | 2750. |
| S. B. B. L. " | " | 35 | to | " | 950. |
| D. B. B. L. Guns | " | 50 | to | " | 1350. |
| S. B. B. L. " | " | 35 | to | " | 275. |
| D. B. M. L. " | " | 45 | to | " | 135. |
| S. B. M. L. " | " | 30 | to | " | 80 |
| B. L. Revolvers | " | 35 | to | " | 350 |
| Automatic Pistols | " | 30 | to | " | 150. |

Brilliant Search Light Lamp For Shooting Camping, Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites the most competitive rates.

## GOOLAMHUSAIN ALLIBHOY & SONS.

Largest Importers of Firearms and Ammunition

Cheapest priced firm in India,

24-12 210 Abdul Rehman Street BOMBAY.

Try !! Try

## KING & CO.,
SUNTICOPPA.

for
Foreign Liquor, Arms & Ammunitions, High-Grade Cigarettes, Sports Materials, Court-Stamp papers, Printed Labour Bonds, Sewing Machines, etc., etc

### ಕಿಂಗ್ ಅಂಡ್ ಕೊ.,
ಸುಂಟಿಕೊಪ್ಪ.

ನಮ್ಮ ಕಂಪೆನಿಯಲ್ಲಿ ಎಲ್ಲಾ ಪರದೇಶೀಯ ಸಾರಾಯಿ ಎಂದರೆ ಬ್ರಾಂಡಿ, ವಿಸ್ಕಿ, ಜಿನ್, ಬೀರು ಮೊದಲಾದುವು ಬಿಕ್ರಿ ಮಾಡಲ್ಪಡುತ್ತವೆ. ಅಲ್ಲದೆ ಅತ್ಯುತ್ಕೃಷ್ಟವಾದ ಕೋವಿ, ಕೋವಿ ಮದ್ದು, ತೋಟಗಳು, ಚಿಲ್ಲು ವಗೈರೆ ಬಹಳ ಸುಲಭ ದರದಲ್ಲಿ ಸಿಕ್ಕುತ್ತದೆ. ಎಲ್ಲರೂ ಒಂದು ಸಲ ನಮ್ಮಲ್ಲಿ ಒಂದು ವ್ಯಾಪಾರ ಮಾಡಿದಲ್ಲಿ ಪೂರ್ತಿ ಮಾಹಿತಿಯು ಗೊತ್ತಾಗುವುದು.

12—4

# ಎಂ. ಎಸ್. ಶಿದ್ದಪ್ಪ ಬ್ರದರ್ಸ್.

## ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

### ೧೯೨೯ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು.

| | |
|---|---|
| ನಂ. ದೊಡ್ಡ ಸೈಜು ಪಾಕೆಟ್ ಡೈರಿ ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿದ್ದು 6½"×4" 1ಕ್ಕೆ | 0 12 0 |
| ಪರಸ್ಥಳಕ್ಕೆ ಪೋಸ್ಟೇಜು | 0 3 0 |
| ನಂ. ದೊಡ್ಡ ಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್ ಡೈರಿ 6½"×4" 1ಕ್ಕೆ | 0 10 0 |
| ಪರಸ್ಥಳಕ್ಕೆ ಪೋಸ್ಟೇಜು | 0 3 0 |
| ನಂ. ಚಿಕ್ಕ ಸೈಜು ಪಾಕೆಟ್ ಡೈರಿ ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿದ್ದು 5"×2½" 1ಕ್ಕೆ | 0 7 0 |
| ಪರಸ್ಥಳಕ್ಕೆ ಪೋಸ್ಟೇಜು | 0 2 0 |
| ನಂ. ಚಿಕ್ಕ ಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್ ಡೈರಿ 5"×2½" 1ಕ್ಕೆ | 0 5 0 |
| ಪರಸ್ಥಳಕ್ಕೆ ಪೋಸ್ಟೇಜು | 0 2 0 |

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪೂರ್ತಾ ಹಣಬಲಗು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ಕರಿಸಿಕೊಳ್ಳುವವರಿಗೆ 1ಡೈರಿ ಹೆಚ್ಚಿಗೆ ಕೊಡಲಾಗುತ್ತೆ. ವಿ. ಪಿ. ಮೂಲಕ ಡಜನ್ ಗಟ್ಲೆ ತರಿಸಿಕೊಳ್ಳುವವರು ಡಜನ್ 1ಕ್ಕೆ 2—0—0 ರೂಪಾಯಿ ಮೊದಲು ಅಡ್ವಾನ್ಸ್ ರವಾನಿಸಬೇಕು.

1929ನೇ ಇಸವಿಯ ಸಚಿತ್ರ ಕ್ಯಾಲೆಂಡರುಗಳು.

| | | | |
|---|---|---|---|
| ಶೀಟ್ ಕ್ಯಾಲೆಂಡರ್ | 50ಕ್ಕೆ | | 1 2 0 |
| " | " | 100ಕ್ಕೆ | 2 0 0 |
| 3"×4½" ಪಾಕೆಟ್ ಕ್ಯಾಲೆಂಡರ್ | 12ಕ್ಕೆ | | 0 9 0 |
| " | " | 50ಕ್ಕೆ | 2 4 0 |
| " | " | 100ಕ್ಕೆ | 4 6 0 |

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ 10"×14" ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಚಿತ್ರದ

| | | | |
|---|---|---|---|
| ಕ್ಯಾಲೆಂಡರ್ | 3ಕ್ಕೆ | | 0 8 0 |
| " | " | 6ಕ್ಕೆ | 0 14 0 |
| " | " | 12ಕ್ಕೆ | 1 6 0 |

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರ್ತಾ ಹಣಬಲಗು ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಖಂಡಿತವಾಗಿ ರವಾನಿಸುವುದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮಣಿಯಾರ್ಡರನ್ನು ಹೋದವರ್ಷದಂತೆ ವಾಪಸು ಮಾಡುತ್ತೆ.

ಮಾದರಿ ಕ್ಯಾಲೆಂಡರು ಅಪೇಕ್ಷಿಸುವವರು 0—5—0 ರ ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆಯ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ಕಳುಹಿಸಲಾಗುತ್ತೆ.

52—31

ಮಣಿಯಾರ್ಡರ್ ರವಾನಿಸುವ ವಿಳಾಸ.— ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

# ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

| | | ರೂ |
|---|---|---|
| ಶೇರ್ ಬಂಡವಾಳ | — | 50,000 |
| ವಸೂಲಾದ ಶೇರ್ ಹಣ | — | 17,190 |
| ಬಂದಿರುವ ಠೇವಣಾತಿ | — | 1,62,370 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5-0-0ರ ದರದಲ್ಲಿ ಬಡ್ಡಿ ಕೊಡಲಾಗುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ಕೊಡಲಾಗುತ್ತೆ.

ವರ್ತಕರ್ಕೂ ಅಂಡಾವರ್ತಿ ಕೊಡಿ ಸರ್ಟಿಫಿಕೆಟ್ ಬೇಕಾದವರು ಲೆಕ್ಕ ಅಜಮಾಯಿಸಿಕೆ ಮಾಡಬಹುದು.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್

ಟ್ರೆಷರರ್ ಚೆಂಗಪ್ಪ ರವರು

ಸೆಕ್ರೆಟರಿ

ಸಿ. ಯನ್ ವೆಂಕಪ್ಪಯ್ಯನವರು, ಬಿ.ಎ ಬಿ.ಎಲ್

ತಾರೀಖು 1–7–1928

## ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡಿದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ ಪೇರಿಯಂಡ ಪೂವಯ್ಯನವರ ಮತ್ತು ಚೆಂಗಂಡ ಕುಟ್ಟಪ್ಪನವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯ ಬೇಕಾಗಿ ಕೋರಿಕೆ

ಏಜೆಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು

ಮತ್ತು—ಮೆ ಚೆಂಗಂಡ ಕುಟ್ಟಪ್ಪನವರ,

ಪೊನ್ನಂಪೇಟೆನಾಡ —ಮೆ. ಕಾಳಿಂಗಡ ಬಿದ್ದಪ್ಪನವರು

ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು

ಮರೆನಾಡು—ಮೆ ಕೇಕಡ ಅಪ್ಪಯ್ಯನವರು

ಸಬ್ ಏಜೆಂಟರುಗಳು

ವೀರಾಜಪೇಟೆ—ಮೆ. ಕಾಟುಮಣಿಯಂಡ ಸುಬ್ಬಪ್ಪನವರು,

ಮೂರ್ನಾಡು—ಮೆ ಮಂಡೇಪಂಡ ದೇವಯ್ಯನವರು,

ನಾಪೋಕ್ಲು—ಮೆ. ಟಿ ಆರ್ ರಾಮಯ್ಯನವರು,

ಗೋಣಿಕೊಪ್ಪಲು—ಮೆ. ಬಿದ್ದಂಡ ಮಾದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮೆ ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ ಪಿ. ಬಿ ಸಬ್ಬಯ್ಯನವರು

ಹುದಿಕೇರಿ & ಶ್ರೀಮಂಗಲ—ಮೆ. ಬಿ ಮಾಚಯ್ಯನವರು

ಸೂಚನೆ —ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಹಣ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್

"ಕೊಡಗು" ಲಿಮಿಟೆಡ್, ಮಡಿಕೇರಿ,

## ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಸಾಲ ಸಹಾಯಕ ಸಂಘದ ಉಪನಿಬಂಧನೆಗಳು. ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಂಗಳೂ, ಕಾಶ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್, "ಕೊಡಗು" ಮಡಿಕೇರಿ



12 bore Victor Cartridges Rs. 10/- Per 100

**Mahomedally-Noorbhoy.**

ARMS & AMMUNITION MART.

321 Abdul Rehman Street.

BOMBAY. 3.

52-13

ಕಟುಂಕಳ್ಳಾಯ ಮಾತ್ರೆಗಳು —ಇವು ಇನ್‌ಫ್ಲುಯನ್ಜ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೇರಿಯ ಜ್ವರ, ... ದೋಷದಿಂದ ಬರುವ ಜ್ವರಗಳಿಗೆ ... ರೂ 1-... ರೂ 4-0-0 ... ರೂ 7-8-0 12ಕ್ಕೆ ರೂ 14

ಚಂದನ ಸವ —ಇದು ಪ್ರಮೇಹ ಮೂತ್ರ ಕೃಚ್ಛ್ರ ಮೂತ್ರ ... ಮೂತ್ರನಾಳದಲ್ಲಿ ... ತಕ್ಷಣ ಗುಣವಾಗುವುದು ... ಬಾಟಲ್ 1 3 ಕ್ಕೆ ರೂ ...

ರೋಮನಾಶಿನಿ.— ಈ ಹುಡಿಯನ್ನು ನೀರಿನಲ್ಲಿ ಕಲಸಿ ... ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿ ... 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು ತಲೆತಿರುಗುವುದು, ತಲೆಭಾರ, ... ಉಪಯೋಗಿಸುವುದರಿಂದ ... ರೂ 1, 3 ... 1-10-0 ಒಂದು ಡಜನ್ ... ರೂ 7, 3 ...

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ—ಮನೋಲ್ಲಾಸಿನಿ ಕಂಪೆನಿ

52—9 9. ಮಂಗಳೂರು

EMPIRE OF INDIA
LIFE ASSURANCE COMPANY, LIMITED.
(Established 1897.)

A Monthly payment of Rs 12/8/- will secure a With Profit Assurance as shown below which will further increase by Bonus Additions

| Age next birthday | Assurance payable at Death: Whole Life | Premiums Limited to 15 Years | 20 Years | 25 Years | Endowment Assurances payable at Death or at end of 20 Years | 25 Years | 30 Years |
|---|---|---|---|---|---|---|---|
| | Rs | Rs | Rs | Rs | Rs | Rs | Rs |
| 25 | 5 820 | 3 50 | 4 250 | 4 800 | 3 010 | 3 800 | 4 520 |
| 30 | 5 140 | 3 290 | 3 930 | 4 390 | 2 950 | 3 620 | 4 220 |
| 35 | 4 481 | 3 050 | 3 600 | 3 970 | 2 810 | 3 400 | 3 870 |

Wannted —Agents at Mercara, Somwarpet and Siddapur

HEAD OFFICE
Empire of India Life Building,
BOMBAY

21—24

BRANCH OFFICE
152, Commercial Street
BANGALORE

ರಿಸಾರಿಕೆ ಸಾಮಾನುಗಳಿಗೆ ಬೇರೆ ಕಡೆ ಹೋಗಬೇಡಿರಿ!

ನಿಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ

ಅಜಮಾಯಿಸಿ ನೋಡಿರಿ




ಇನಾಮಿನ ಬಟ್ಟಲುಗಳು ನಮ್ಮಲ್ಲಿ ವಿಕ್ರಯಕ್ಕೆ ದೊರೆಯುತ್ತವೆ

ಎಲ್ಲಾ ಆರ್ಡರುಗಳನ್ನೂ ಥಳಥಳ ರೀತಿಯಿಂದಲೂ ತುರ್ತವಾಗಿಯೂ ಗ್ಯಾರಂಟಿಯೊಡನೆ ಜಾರಿ ಮಾಡಲಾಗುವುದು

ಕೇಶವಚಂದ್ ದೇವಚಂದ್,
ಜ್ಯುಲ್ಲರ್, (ಕೆಟಲಾಗ್ ಮುಫತ್).

12—2

21 ಚೈನಾ ಬಜಾರ್‌ರೋಡ್, ಮದರಾಸು.

ಸ್ಥಾಪನೆ 1874.

ಹೆಡ್ ಆಫೀಸು—ಬೊಂಬಾಯಿ

# ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ವೈವಾಟದ ಫಲ.

ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

ವಿಮೆದಾರರಿಗೆ ಬೋನಸು ಸಿಕ್ಕಿರುವ ಬೋನಸು:
1000 ರೂಪಾಯಿಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ- ರೂ.
1000 ,, ಎಂಡೌಮೆಂಟ್ ,, ,, —ರೂ.

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ವಿಮೆ ಮಾಡಿದ್ದರೂ ಚಿಂತೆಯಿಲ್ಲ.
ಮತ್ತು ಒಂದು ಹೊಸ ಪಾಲಿಸಿಯನ್ನು "ಓರಿಯಂಟಲ್" ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವುಂಟು
ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು.
ಹೆಚ್ಚಿನ ಸೂಚಿಕೆಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಓರಿಯಂಟಲ್ ಬಿಲ್ಡಿಂಗ್ಸ್,
No. 1. ಸೌತ್ ಪರೇಡ್, ಬೆಂಗಳೂರು.

52–34

ಯಲ್. ಆರ್. ಕೃಷ್ಣಸ್ವಾಮಿಯ್ಯರ್.
ಬ್ರಾಂಚ್ ಸೆಕ್ರಟರಿ.

Printed & published by P I Belliappa, at "Kodagu" Press, Mercara for Kodagu Ltd.

"KODAGU" OFFICE MERCARA.
If not delivered please return to

# ಕೊಡಗು.

[illegible]

ವಾರ್ಷಿಕ ಚಂದಾ ರೂ. ೩-೮-೦ | ಸಂಪಾದಕ—ಪಂಡ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

[ಸಂಪುಟ ೮] ಮಡಿಕೇರಿ, ಸನ್ ೧೯೨೮ನೇ ಇಸವಿ ಡಿಸೆಂಬರ್ ತಾರೀಖು ೭ನೇ ಶುಕ್ರವಾರ [ಸಂಚಿಕೆ ೨೯

## JUST ARRIVED.

**Guns.**

12 Bore D B B L Guns @ Rs 145 140 130 & 100 each
12 S B B L Guns @ 70 & 52-8-0 each
12 D B M L @ 70 each

**Cartridges.**

Eley s Shot Cartridges Rs 12-8-0 per 100
Lg & Sg 14-0-0 ,

Ball Cartriges Rs 16-0-0 per 100
Lethal Bullet 32-0-0
12bore Ballistite 16-0-0 ,
1 lb tin F F Gun Powder Rs 1-14-0
1- 0-0
0-10-0
Boxes of 250 M L Caps 1- 0-0 each

**Selling fast. Buy requirements early.**

52-46 SPENCER & CO. LTD. Arms & Ammunition Dealers MERCARA.

Post Box 423,
TRIPLICANE, MADRAS

MANUFACTURES AND DEALS IN ALL —

(1) Gemset Jewels, gold and silver articles of all patterns
(2) Race Cups Caskets, Medals, etc , for presentation purposes
(3) Trovels Keys, Locks etc, for ceremonial purposes.

JEWELLER BY APPOINTMENT TO His Excellency THE GOVERNOR OF MADRAS

Catalogue Free to bonafide Enquirers

UNDERTAKES—

(1) Remaking or Remodelling of all sorts of old gemset jewels to latest patterns.
(2) Electro plating gilding and nickelling
(3) Buying old jewellery or undertaking to effect sale

# V. SUBRAMANIA IYER
# JEWELLER

52-14

**Gold-smith, Silver smith, & Dealer in all Gemset Jewels.**

## ನೀವು ನಿರ್ಬಲಸ್ತರಾಗಿ ಯಾಕೆ ನರಳುವಿರಿ?

ಇಪ್ಪತ್ತು ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

## ಸಾಲಂಮಿಶ್ರಿ ಮುರಬ್ಬ

ಸೇವನೆಯಿಂದ ಎಂಥಾ ಧಾತು ನಷ್ಟವಿಕಾರಗಳನ್ನು, ನರಗಳ ಶಕ್ತಿ ಕಡಿಮೆಯಾಗಿರುವದನ್ನೂ ಮೆದುಳಿನ ದುರ್ಬಲತೆಯನ್ನೂ ಇಂಥಾ ರೋಗಗಳನ್ನೆಲ್ಲಾ ಯಕೃತ್ ಗುಂತೆ ಮಾಯಮಾಡುವದಕ್ಕೆ ತನ್ನ ವಿಚಿತ್ರವಾದ ಬಲ ಶಕ್ತಿಯನ್ನು ತೋರಿಸುತ್ತದೆ. ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ಮಹನೀಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ಓದಿ ತಿಳಿ ಸಿ ನೋಡಬಹುದು ಒಂದು ಡಬ್ಬಿ ೧೫ ದಿನಗಳ ಸೇವನೆಯಿಂದಲೇ ಇದರ ಗುಣವು ತೋರಿಬರುವುದು ೨-೩ ಡಬ್ಬಿಗಳ ಸೇವನೆಯಿಂದ ಎಷ್ಟು ಮಾತ್ರದವರಿಗೂ ಸಂಪೂರ್ಣ ಗುಣವನ್ನುಂಟುಮಾಡುವದು ನಮ್ಮ ಟ್ರೇಡ್ ಮಾರ್ಕ ನೋಡಿ ಡಬ್ಬಿ ತೆಗೆದುಕೊಳ್ಳಿರಿ ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಅವಶ್ಯಕವಿರುತ್ತೆ

ಕ್ರಯ ಡಬ್ಬಿ ೧ಕ್ಕೆ ೨-೦-೦ ಟಪ್ಪಾಲು ಖರ್ಚು ೧ರಿಂದ ೩ ಡಬ್ಬಿಗಳ ವರೆಗೆ ೦-೮-೦.

**ಡಿ. ಮುನ್ನಾಲಾಲ್,**

12-8 ಡೆಪ್ಲಿ ಸೆಟ್ಲೇರ್ ಡಾಕ್ಟರು ಸಾಲಂಮಿಶ್ರಿ ಮುರಬ್ಬ ಫಾರ್ಮಸಿ, ಬೆಂಗಳೂರು ಸಿಟಿ

**ಅ ಪೂ ರ್ವ ಸಂ ದ ರ್ಭ.**

ಹಾಳಾದ ಆರೋಗ್ಯವನ್ನು ಪುನಃ ಸಂಪಾದಿಸಬೇಕಾದರೆ ಇದೀಗ ಅಪೂರ್ವ ಸಂದರ್ಭ

## ಆತಂಕನಿಗ್ರಹ ಮಾತ್ರೆಗಳು

ಮೈದುಃಖ ಅಶಕ್ತಿ ಮುಪ್ಪು ನರಗಳ ದೌರ್ಬಲ್ಯಾದಿಗಳನ್ನು ಹೋಗಲಾಡಿಸುವವು
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ! ಧರ್ಮಾರ್ಥ!

## ಕಾ ಮ ಶಾ ಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ —

ಆತಂಕನಿಗ್ರಹ ಔಷಧಾಲಯ
12-20 ಚಿಕ್ಕಪೇಟೆ, ಬೆಂಗಳೂರು ಸಿಟಿ

# ಕೊಡಗು.

ಸನ್ ೧೯೨೮ ನೇ ಇಸವಿ
ಡಿಸೆಂಬರ್ ತಾ. ೭ನೇ ಶುಕ್ರವಾರ.


## ಸುಬ್ರಹ್ಮಣ್ಯ ಭಾರತೀಯವರ ಕವಿತೆ.

ತಮಿಳು ನಾಡಿನಲ್ಲಿ ಸುಮಾರು 20 ವರ್ಷಗಳಿಗಿಂತ ಹೆಚ್ಚಾಗಿ ಪ್ರಕಟವಾಗುತ್ತಿದ್ದು ಜನರ ಪ್ರೀತಿಯನ್ನು ವಿಶೇಷ ರೀತಿಯಿಂದ ಪಡೆದಿದ್ದ ಸುಬ್ರಹ್ಮಣ್ಯ ಭಾರತಿಯವರ ಕವಿತೆಗಳಿರುವ ಮಾರಾಟಕ್ಕೆ ಇದ್ದ ಪುಸ್ತಕಗಳನ್ನು ಕಳೆದ ಅಕ್ಟೋಬರ್ ತಿಂಗಳಲ್ಲಿ ಮದ್ರಾಸ್ ಪೋಲೀಸಿನವರು ಜಪ್ತಿ ಮಾಡಿದರು. ಇಪ್ಪತ್ತು ವರ್ಷಗಳಿಂದ ಪ್ರತಿಯೊಬ್ಬ ತಮಿಳುನಾಡಿನವನಿಗೂ ಓದಲಿಕ್ಕೆ ದೊರೆಯುತ್ತಿದ್ದು ಮದ್ರಾಸ್ ಸರಕಾರದ ಆಕ್ಷೇಪಣೆಗೆ ಗುರಿಯಾಗದೆ ಇದ್ದದ್ದು ಅಕಸ್ಮಾತ್ ಜಪ್ತಿಗೆ ಗುರಿಯಾಗಲು ಕಾರಣವೇನೆಂದರೆ—ಹಿಂದೆ ಸರಕಾರದವರು ಸುಬ್ರಹ್ಮಣ್ಯ ಭಾರತಿಯವರ ಕವಿತೆಗಳು ರಾಜದ್ರೋಹದ ಅಭಿಪ್ರಾಯಗಳುಳ್ಳವಾಗಿವೆಯೆಂತ ತೀರ್ಮಾನ ಮಾಡಿದರ. ಹಾಗೆ ಯಾವದಾದರೊಂದು ಪ್ರಾಂತೀಕ ಸರಕಾರವು ತೀರ್ಮಾನಿಸಿದರೆ ಬ್ರಿಟಿಷ್ ಹಿಂದುಸ್ಥಾನದಲ್ಲಿ ಎಲ್ಲೇ ಇದ್ದರೂ ಅಂಥಾ ಪುಸ್ತಕಗಳನ್ನು ಜಪ್ತಿ ಮಾಡಿ ಸರಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂಬ ಒಂದು ನಿಯಮವಿದೆಯಂತೆ. ಈ ನಿಯಮವನ್ನನುಸರಿಸಿ ಮದ್ರಾಸ್ ಸರಕಾರವು ಈ ರಾಷ್ಟ್ರಗೀತೆಗಳನ್ನು ಜಪ್ತಿ ಮಾಡಿದ್ದಾಗಿದೆ.

ಮದ್ರಾಸ್ ಸರಕಾರದ ಈ ಕೃತ್ಯವನ್ನು ಖಂಡಿಸುವ ಠರಾವು ಮದ್ರಾಸ್ ಕೌನ್ಸಿಲಿನಲ್ಲಿ ಕಳೆದ ಅಕ್ಟೋಬರ್ ತಿಂಗಳಲ್ಲಿ ಚರ್ಚಿಸಲ್ಪಟ್ಟು ಸರಕಾರಿ ಮೆಂಬರುಗಳು ವಿನಹ ಇತರ ಎಲ್ಲಾ ಮೆಂಬರುಗಳ ಸಮ್ಮತಿಯಿಂದ ಮಂಜೂರಾಯಿತು. ಮದ್ರಾಸ್ ಸರಕಾರದ ಪರವಾಗಿ ಕೌನ್ಸಿಲಿನಲ್ಲಿ ಉತ್ತರಕೊಟ್ಟ ಮೆಂಬರರು ಜನರ ಪ್ರತಿನಿಧಿಗಳ ಆಕ್ಷೇಪಣೆಗೆ ಜವಾಬು ಕೊಡಲು ಸಾಧ್ಯವೇ ಆಗಲಿಲ್ಲ. ಹಿಂದೆ ಸರಕಾರದ ಅಪೇಕ್ಷೆ ಮೇರೆ ಜಪ್ತಿ ಮಾಡಿಸಿದ್ದಾಗಿದೆಯೆಂತ ಮಾತ್ರ ಹೇಳಿದರು. ಅಕ್ಟೋಬರ್ 9ರಲ್ಲೇ ಈ ಠರಾವು ಪಾಸಾದರೂ ಮದ್ರಾಸ್ ಸರಕಾರದವರು ಜಪ್ತಿ ಮಾಡಲ್ಪಟ್ಟ ಪುಸ್ತಕಗಳನ್ನು ಇನ್ನೂ ವಾಪಸು ಕೊಟ್ಟಿರುವದಿಲ್ಲ.

ಹೀಗೆ ಜಪ್ತಿ ಮಾಡಲ್ಪಟ್ಟದ್ದು 200 ಪ್ರತಿಗಳು. ಈ ಕವಿತೆಯನ್ನು ಬರೆದ ಕವಿ ಸುಬ್ರಹ್ಮಣ್ಯ ಭಾರತಿಯವರು 1921 ರಲ್ಲೇ ಮೃತರಾಗಿದ್ದಾರೆ. ಅವರ ಬಡ ವಿಧವೆ ಮತ್ತು ಮಕ್ಕಳ ಉದರಪೋಷಣೆಗಾಗಿ ಮದ್ರಾಸ್ ಹಿಂದೀ ಕಾರ್ಯಾಲಯದವರು ಈ ಕವಿತೆಗಳನ್ನು ಪ್ರಿಂಟ್ ಮಾಡಿ ಮಾರಾಟಕ್ಕೆ ಇಟ್ಟಿದ್ದರು. ಈ ರೀತಿ ಬಡ ಹೆಂಗಸು ಮಕ್ಕಳ ಅನ್ನವಾಗಿದ್ದ ಪುಸ್ತಕಗಳನ್ನು ಮದ್ರಾಸ್ ಸರಕಾರದವರು ಇನ್ನೂ ವಾಪಸು ಕೊಟ್ಟಿರುವದಿಲ್ಲ. ಮಾರಾಟಕ್ಕೆ ಇದ್ದ ಪುಸ್ತಕಗಳನ್ನು ಜಪ್ತಿ ಮಾಡಿದನಂತರ ದೇಶದಲ್ಲೆಲ್ಲಾ ಆಕ್ಷೇಪಣೆಯ ಕೋಲಾಹಲವು ಹಬ್ಬಿದ್ದರಿಂದ ಪುಸ್ತಕಗಳನ್ನು ಬೇರೆ ಕಡೆಗಳಿಂದ ಜಪ್ತಿ ಮಾಡಿಸುವದನ್ನು ಸರಕಾರವು ನಿಲ್ಲಿಸಿದ್ದರೂ ಜಪ್ತಾದ ಪುಸ್ತಕಗಳನ್ನು ಇನ್ನೂ ಕೊಟ್ಟಿರುವದಿಲ್ಲ. ಎಂಥಾ ನಾಚಿಕೆಗೇಡಿನ ಸಂಗತಿ!

ತಮಿಳು ಸಾಹಿತ್ಯಕ್ಕೆ ಸಂಬಂಧಪಡುವ ಈ ವಿಷಯವನ್ನು ನಾವು ಯಾಕೆ ಗಣನೆಗೆ ತೆಗೆದುಕೊಳ್ಳಬೇಕೆಂತ ವಾಚಕರಿಗೆ ಸಂಶಯ ಬರಬಹುದು. ಯಾವ ಪ್ರಾಂತ್ಯದ ಸರಕಾರವಾದರೂ ಅಕ್ರಮ ನಡಿಸಿದರೆ ಅಂಥಾ ಅಕ್ರಮವನ್ನು ಖಂಡಿಸುವ ಹಕ್ಕು ಮತ್ತು ಅವಶ್ಯಕತೆಯು ಆ ಪ್ರಾಂತ್ಯದವರಿಗೆ ಮಾತ್ರವಲ್ಲ. ಬೇರೆ ಪ್ರಾಂತ್ಯದವರಿಗೂ ಅಷ್ಟೇ ಪ್ರಸಂಶಕ್ಕೇನೇ ಇದೆ. ಮದ್ರಾಸ್ ಸರಕಾರದ ಈ ಅತ್ಯಾಚಾರವನ್ನು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಖಂಡಿಸಿದ್ದಾರೆ ಮಹಾತ್ಮ ಗಾಂಧಿಯವರು ಸಹ ತಮ್ಮ "ಯಂಗ್ ಇಂಡಿಯಾ" ಪತ್ರಿಕೆಯ ಕಳೆದ ವಾರದ ಸಂಚಿಕೆಯಲ್ಲಿ ಖಂಡಿಸಿದ್ದಾರೆ. ಈ ಅತ್ಯಾಚಾರಕ್ಕೆ ತಕ್ಕ ಪರಿಹಾರವನ್ನು ಮದ್ರಾಸ್ ಸರಕಾರವು ಒಂದು ನಿಮಿಷ ತಡವಿಲ್ಲದೆ ಮಾಡಬೇಕೆಂತ ನಾವು ಸಹ ಹೇಳುತ್ತೇವೆ.

ಸರಕಾರದ ಆಡಳಿತದಲ್ಲಿ ಸುಧಾರಣೆಯಾಗಿದೆ. ಕೆಲವು ಇಲಾಖೆಗಳು ಚುನಾಯಿತ ಮಂತ್ರಿಗಳಿಗೇನೇ ಸಿಕ್ಕಿದೆ ಎಂತ ಹೇಳಿಕೊಳ್ಳುವ ಮಾತಿನಲ್ಲಿ ಏನೂ ಹುರುಳಿಲ್ಲವೆಂಬದನ್ನೂ ಇದರಿಂದ ತಿಳಿದುಕೊಳ್ಳಬಹುದು. ಈ ಪುಸ್ತಕಗಳನ್ನು ಜಪ್ತಿಮಾಡಿಸುವದು ಅಥವಾ ಬಿಡುವದು ಪೋಲೀಸು ಇಲಾಖೆಯ ಅಧಿಕಾರಿಗಳ ಆಗಿನ ಮಂತ್ರಿಯಾದ ಕೃಷ್ಣನಾಯರರವರ ಹುಕುಮಿಗೆ ಒಳಪಟ್ಟಿತ್ತು. ಆದರೂ ಅವರ ತಿಳುವಳಿಕೆಗೆ ಬರದೇನೇ ಈ ಪುಸ್ತಕಗಳು ಜಪ್ತಿಮಾಡಲ್ಪಟ್ಟವು. ಬ್ರಿಟಿಷ್ ಅಧಿಕಾರಿಗಳ ಇಚ್ಛಾನುಸಾರ ಮಂತ್ರಿಗಳ ಇಲಾಖೆಗಳೂ ನಡೆಯುವವೆಂಬದನ್ನು ನಿದರ್ಶಿಸಲಿಕ್ಕೆ ಇದಕ್ಕಿಂತ ಬೇರೆ ಆಧಾರ ಬೇಡ.

"ರಾಜದ್ರೋಹ" ಎಂಬ ಹೆಸರನ್ನು ಯಾವದಾದರೊಂದು ಪ್ರಾಂತೀಕ ಸರಕಾರ ಕೊಟ್ಟರಾಯಿತು. ಬೇರೆ ಪ್ರಾಂತ್ಯಗಳ ಸರಕಾರಗಳು ರಾಜದ್ರೋಹವೆಂತ ಭಾವಿಸದಿದ್ದರೂ ಒಂದು ಪ್ರಾಂತ್ಯದ ಅಭಿಪ್ರಾಯವನ್ನೇ ಅಂಗೀಕರಿಸಿಕೊಳ್ಳಬೇಕಂತೆ "ರಾಜದ್ರೋಹ"ವು ಇರಲಿ, ಇಲ್ಲದಿರಲಿ, ಯಾಕಾದರೂ ಆಂದರಾಯಿತು ರಾಜದ್ರೋಹವಿದ್ದಿದ್ದರೆ ಮದ್ರಾಸ್ ಸರಕಾರವು ಈ ವರೆಗೆ ಸುಮ್ಮನೆ ಕೂರುತ್ತಿತ್ತೇ? ಅಷ್ಟು ಮಾತ್ರವಲ್ಲ. ಮದ್ರಾಸ್ ಸರಕಾರದ ವಿದ್ಯಾ ಇಲಾಖೆಯು ಭಾರತಿಯವರ ಪದ್ಯಗಳನ್ನು ಶಾಲೆಗಳಲ್ಲಿ ಟೆಕ್ಸ್ಟ್‌ಬುಕ್ಕುಗಳಾಗಿ ಸಹ ಕಲಿಸಲು ಇಟ್ಟಿದ್ದರು. ಹೀಗಿರುತ್ತಾ ಹಿಂದೆ ಸರಕಾರದ ಅಭಿಪ್ರಾಯವನ್ನು ಹಿಂದು ಮುಂದು ಯೋಚಿಸದೆ ಅಂಗೀಕರಿಸಿದ್ದರಿಂದ ಮದ್ರಾಸ್ ಸರಕಾರದ ಗೌರವವೂ ಬಹಳವಾಗಿ ಕಡಿಮೆಯಾಗಿ ಹೋಯಿತು.

ಸುಬ್ರಹ್ಮಣ್ಯ ಭಾರತಿಯವರ ಕೆಲವು ಪದ್ಯಗಳನ್ನು ಹಾಡಿದ್ದನ್ನು ಕೇಳುವ ಸುಯೋಗವು ನಮಗೆ ದೊರೆತಿತ್ತು. ಅವರ ಪದ್ಯಗಳಲ್ಲಿ ದೇಶಭಕ್ತಿಯು ತುಂಬಿ ತುಳುಕುತ್ತಿರುವದೇನೋ ನಿಜ. ಆದರೆ ದೇಶಭಕ್ತಿ ಇರುವದೇ ರಾಜದ್ರೋಹವೆಂತ ಅರ್ಥಮಾಡುವದಾದರೆ ಹಿಂದುಸ್ಥಾನದ ಪ್ರತಿಯೊಬ್ಬನೂ ಇಂಥಾ ಅಭಿಪ್ರಾಯಕ್ಕೆ ವಿರೋಧಿಸಿ ದೇಶಭಕ್ತಿಯನ್ನು ತೋರಿಸಬೇಕು ತನ್ನ ದೇಶವು ಸ್ವಾತಂತ್ರ್ಯವನ್ನು ಪಡೆಯಬೇಕು; ಗುಲಾಮಗಿರಿಯಿಂದ ತಪ್ಪಿಸಿಕೊಳ್ಳಬೇಕು; ಎಂತ ಪ್ರತಿಯೊಬ್ಬನ ಮನಸಿನಲ್ಲಿಯೂ ಹುಟ್ಟಲೇ ಬೇಕು. ಈ ಭಾವ ಹುಟ್ಟುವಂತ ಪದ್ಯಗಳನ್ನು ಭಾರತೀಯವರು ಕವನ ಮಾಡಿದ್ದಾರೆ. ಇವರ ನಾಲಿಗೆಯಲ್ಲಿ ಸರಸ್ವತಿಯು ನಲಿದಾಡುತ್ತಿದ್ದಳು ಎಂತ ಶ್ರೀಯುತ ಸತ್ಯಮೂರ್ತಿಯವರು ತಮ್ಮ ಕೌನ್ಸಿಲ್ ಭಾಷಣದಲ್ಲಿ ಹೇಳಿದರು. ಸ್ವತಂತ್ರ ರಾಜ್ಯದಲ್ಲಿ ಇವರು ಜನ್ಮತಾಳಿದ್ದರೆ ಇವರಿಗೆ ಸರಕಾರದ ಗೌರವವು ಅನೋಘವಾಗಿ ದೊರೆಯುತ್ತಿತ್ತು. ಗುಲಾಮಗಿರಿಯಲ್ಲಿರುವ ಹಿಂದುಸ್ಥಾನದಲ್ಲಿ ಇವರು ಹುಟ್ಟಿದ್ದರಿಂದ ಜೈಲಿಗೆ ಬಿದ್ದು ಬಡತನದಲ್ಲಿ ಸಾಯಬೇಕಾಯಿತು. ಇವರ ಕವಿತೆಯನ್ನು ಇವರ ಬಡ ಕುಟುಂಬದವರು ಉಪಯೋಗಿಸಲಿಕ್ಕೆ ಸಹ ಅವಕಾಶವಿಲ್ಲದಂತಾಗಿದೆ. ಇಂಗ್ಲೆಂಡಿನ ಸ್ವಾತಂತ್ರ್ಯವನ್ನು ಕೊಂಡಾಡಿದ ಕವಿಗಳು ಮಹಾಕವಿಗಳೆನ್ನಿಸಿಕೊಂಡು ಸರಕಾರದ ಬಿರುದುಗಳನ್ನು ಪಡೆದಿದ್ದಾರೆ. ಹಿಂದುಸ್ಥಾನದ ಕವಿಗಳ ಸ್ಥಿತಿಯನ್ನು ಹೋಲಿಸಿ ನೋಡಿದರೆ ಹಿಂದುಸ್ಥಾನದ ಹೀನಸ್ಥಿತಿಯು ವಾಚಕರಿಗೆ ತಿಳಿಯದೆ ಇರಲಾರದು. ಇಂಥಾ ಹೀನ ಅವಸ್ಥೆಯನ್ನು ಕಳಕೊಳ್ಳಲು ಸ್ವಾತಂತ್ರ್ಯವನ್ನು ಪಡೆಯುವದು ಒಂದೇ ದಾರಿ.

## ಕಲ್ಕತ್ತೆಯ ಸರ್ವ ಪಕ್ಷಗಳ ಸಭೆ.

### ಕರ್ನಾಟಕದ ಏಕೀಕರಣಕ್ಕಾಗಿ ಕರ್ನಾಟಕಸ್ಥರ ಅಪ್ಪೀಲು.

ನಮ್ಮ ಭಾರತ ಭೂಮಿಯ ಮುಂದಿನ ರಾಜ್ಯಾಡಳಿತದ ಕ್ರಮವನ್ನು ನಿರ್ಣಯಿಸಲು ದೇಶದ ಎಲ್ಲಾ ಪಕ್ಷಗಳ, ಸಂಘಗಳ ಮತ್ತು ಸಂಸ್ಥೆಗಳ ಮುಂದಾಳುಗಳು ತಮ್ಮ ಭೇದಾಭಿಪ್ರಾಯಗಳನ್ನು ದೂರಕ್ಕೊತ್ತಿ ಒಟ್ಟಾಗಿ ಸೇರಿದ ಈ ಸಮಯವು ಬಹಳ ವಿಶೇಷವಾದದ್ದಾಗಿದೆ. ಈ ಸಮಯದಲ್ಲಿ ದೇಶದ ಒಗ್ಗಟ್ಟಾದ ಅಭಿಪ್ರಾಯವು ನಮ್ಮ ಭವಿಷ್ಯತ್ತನ್ನು ...ಯಿಸಲಿಕ್ಕಿದೆ.

ಒಂದು ಕಡೆ ದೇಶಕ್ಕೆ ಬೇಡವಾದ ಆಮಂತ್ರ... ಬಂದ ಸೈಮನ್ ಕಮಿಷನು ಅದರ ಇಷ್ಟ ಒಂದಂಶ... ಯ ರಚನೆಯನ್ನು ಏರ್ಪಡಿಸುತ್ತಿದೆ. ಇನ್ನೊಂದು ... ಸರ್ವ ಪಕ್ಷಗಳ ಪರಿಷತ್ತು ದೇಶದ ಒಗ್ಗಟ್ಟನ್ನು ಸ... ಒಗ್ಗಟ್ಟಿನ ಅಭಿಪ್ರಾಯವನ್ನು ಕೋರುತ್ತಿದೆ.

ಈ ರೀತಿಯಲ್ಲಿ ಜಾಗ್ರತೆಯನ್ನು ಪಡೆದ ದೇ... ಪ್ರಾಯದಲ್ಲಿಯೂ, ಅದನ್ನು ಜಾರಿಗೆ ತರುವ ಉ... ಲ್ಲಿಯೂ ಕರ್ನಾಟಕವು ಸಂಪೂರ್ಣ ನಂಬಿಕೆಯನ್ನಿಟ್ಟಿ... ಪದೊಂದು ಜನಾಂಗವೇ ಆಗಲಿ ಇನ್ನೊಂದು ಪರ... ವನ್ನು ಆಳಲಿಕ್ಕಾಗಲಿ ಅಥವಾ ಅದರ ರಾಜಕೀಯ ... ನ್ನು ಏರ್ಪಡಿಸಲಿಕ್ಕಾಗಲಿ ಆಯಾಯಕ್ಕಾಗಿಲ್ಲ. ರಾಜಕೀ... ನೆಗಳು ದೇಶದಲ್ಲಿಯೇ ಹುಟ್ಟಿ ದೇಶಸ್ಥರಿಂದಲೇ ಅ... ಡಿಸಲ್ಪಡಬೇಕು. ನಮ್ಮ ಹಿಂದೂ ದೇಶವು ಈಗ ... ಬಲಹೀನವಾಗಿ ಕಂಡರೂ ಅದರಲ್ಲಿ ಸಾಕಷ್ಟು ... ನೆ ಇದ್ದು ತನ್ನ ಹಕ್ಕನ್ನು ಸ್ಥಾಪಿಸಿಕೊಳ್ಳಲು ಸರಿ... ಯತ್ನವನ್ನು ಮಾಡುತ್ತಿದೆ. ಈ ರೀತಿಯಲ್ಲಿ ಈ ಸ... ದ ಸಭೆಯಲ್ಲಿ ನಂಬಿಕೆ ಇದ್ದುದರಿಂದಲೇ ಕರ್ನಾಟಕ... ರ ಮುಂದೆ ಹೀಗೆ ವಿನಂತಿ ಮಾಡುತ್ತಿದೆ.

ಕರ್ನಾಟಕವು ಈಗ್ಗೆ ಒಡೆದು ನಾಲ್ಕಾರು ಪ್ರಾ... ಪ್ಪೈಸೂರು ಹೈದರಾಬಾದು, ಮೊದಲಾದ ಆಶ್ರಿತ ಸಂ... ಗಳಲ್ಲಿ ಸೇರಿಕೊಂಡಿರುವುದಲ್ಲದೆ ಮೂರು ಬ್ರಿಟಿಷ್ ಅ... ಎಲ್ಲಿ ಅಡಗಿಕೊಂಡಿದೆ. 1913ನೇ ಇಸವಿಯ ಅಂ... 15 ವರ್ಷಗಳಿಂದ ಕರ್ನಾಟಕವು ಒಗ್ಗಟ್ಟಾಗಲು ಪ್ರ... ತ್ತಿದೆ. ಮೋಂಟ್‌ಫರ್ಡ್ ರಿಪೋರ್ಟಿನಲ್ಲಿ ಭಾಷಾ... ಪ್ರಾಂತ್ಯ ರಚನೆಯನ್ನು ಒಪ್ಪಿದ್ದರೂ ಸರಕಾರದವರು ... ಜಾರಿಗೆ ತರಲೇ ಇಲ್ಲ.

ಈ ರೀತಿಯಲ್ಲಿ ಪ್ರತ್ಯೇಕವಾಗಿರಲು ಆಶಿಸುತ್ತಿರು... ಕರ್ನಾಟಕವು ಒಂದೇ ಅಲ್ಲ. ಇದರ ಜೊತೆಯಲ್ಲಿ ... ಒರಿಸ್ಸ, ಸಿಂಧೂ ಮೊದಲಾದ ಪ್ರಾಂತ್ಯಗಳು ಪ್ರಯತ್ನಿ... ವೆ. ಕಾಂಗ್ರೆಸು ಈ ವಿಷಯವನ್ನು ಗಮನಕ್ಕೆ ತಂದು ... ರಲ್ಲಿ ಅದನ್ನು ಜಾರಿಗೆ ತಂದಿದೆ ಅಂದಿನಿಂದ ಇದೇ ... ಲ್ಲಿ ತನ್ನ ಸಭೆ, ಉಪಸಭೆಗಳನ್ನು ನಡೆಸುತ್ತಿದೆ. ಕಳೆದ ... ನ್ ತಿಂಗಳಲ್ಲಿ ಕರ್ನಾಟಕದ ಏಕೀಕರಣದ ವಿಷಯವ... ಹರು ಕಮಿಟಿಯ ಮುಂದೆ ಇಡಲಾಯಿತು. ಇವಕ್ಕೆ ... ಟಿಯವರು ಸಂಪೂರ್ಣ ಒಪ್ಪಿಗೆಯನ್ನು ಕೊಟ್ಟಿರುವರು

ಭವಿಷ್ಯತ್ತಿನ ಬ್ರಿಟಿಷ್ ಕರ್ನಾಟಕದ ವಿಸ್ತೀ... 35,408 ಚದರ ಮೈಲಿಗಳಾಗಬಹುದು. ಅದರ ಜನ... 6357,762. ಅದರ ಒಂದು ವರ್ಷದ ಆದಾಯ ... ರೂ. 25,791,383 ಖರ್ಚು ರೂ. 20,970,367 ... ಒಂದು ವರ್ಷದಲ್ಲಿ ಆದಾಯ ರೂ. 4,821,116 ... ಯಾಗಬಹುದು. ಈ ಸಂಖ್ಯೆಗಳನ್ನು ನೆಹರು ಕಮಿ... ವರು ಚೆನ್ನಾಗಿ ಪರೀಕ್ಷಿಸಿ ನೋಡಿದ್ದಾರೆ. ಅ... ಕ್ನೋವಿನಲ್ಲಿ ನಡೆದ ಸರ್ವಪಕ್ಷಗಳ ಪರಿಷತ್ತಿನಲ್ಲಿ ... ವಾರು ಪ್ರಾಂತ ರಚನೆಯ ಠರಾವು ಪಾಸಾಗಿರುವುದು.

ಆದ್ದರಿಂದ ಈಗ ನಡೆಯುತ್ತಿರುವ ಈ ಮಹಾ ಸ... ನಮ್ಮ ವಿನಂತಿಯನ್ನು ಗಮನಕ್ಕೆ ತಂದು ನಮ್ಮ ರಾ... ಪ್ಪಿಗೆಯನ್ನಿತ್ತು, ಈ ಮೂಲಕ ಮಾತೃಭೂಮಿಯ ಸೇವೆ... ಮಾಡಬೇಕಾಗಿ ಪ್ರಾರ್ಥಿಸುತ್ತೇವೆ.

1 ಪಿ. ಜಿ. ಹಳಕಟ್ಟಿ, ಬಿ. ಎ. ಎಲ್‌ಎಲ್‌ಬಿ.
ಸಂಪಾದಕ "ನವಕರ್ನಾಟಕ"
ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷ.

2. ಶ್ರೀನಿವಾಸರಾವ್ ಕೌಜಲಗಿ, ಬಿ. ಎ. ಎಲ್‌ಎ...
ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ...

3. ಕೆ. ಎಸ್. ಕಮಲಾಪುರ್, ಎಂ. ಬಿ. ಬಿ ಎಸ್...
ಗೌರವ ಕಾರ್ಯದರ್ಶಿ, ಕರ್ನಾಟಕ ಏಕೀಕರಣ ಸ...

4. ಆರ್. ಆರ್. ದಿವಾಕರ್, ಎಂ. ಎ. ಎಲ್‌ಎ...
ಗೌರವ ಕಾರ್ಯದರ್ಶಿ, ಕರ್ನಾಟಕ ಪ್ರಾಂತೀಕ ಕಾ... ಕಮಿಟಿ.

## ಮಹಾತ್ಮಗಾಂಧಿಯವರ ಸ್ವಚರಿತ್ರೆ.

೪ನೇ ಭಾಗದಲ್ಲಿ ೧೪ನೇ ಪ್ರಕರಣ.

### ಗವರ್ನರು ಒಳ್ಳೆಯವರಾಗಿದ್ದಾಗ

...ನು ಹಿಂದಿನ ಅಧ್ಯಾಯಗಳಲ್ಲಿ ವಿವರಿಸಿರುವಂತಹ ಸ...ೇವೆಯ ಕೆಲಸವು ಒಂದು ಕಡೆ ನಡೆಯುತ್ತಿರಲು ಇ... ಕಡೆ ರೈತರ ದುಃಖವಿಷಯಕವಾದ ಹೇಳಿಕೆಗಳನ್ನು ...ಳ್ಳುವ ಕಾರ್ಯವು ಬಿಳಿತಾಗಿ ಸಾಗುತ್ತಿದ್ದಿತು. ಅಂ...ವಿರಾರು ಜನರ ಹೇಳಿಕೆಗಳನ್ನು ತೆಗದುಕೊಂಡುದಾ... ಅವುಗಳಿಂದ ಯಾವ ಫಲವೂ ಉಂಟಾಗದೆ ಇದ್ದೀ...ಳಿಕೆಗಳನ್ನು ಕೊಡಲು ಬರುವ ರೈತರ ಸಂಖ್ಯೆಯು ವಿ...ಹೆಚ್ಚುತ್ತಿದ್ದಿತು. ಇದರಿಂದ ಜಮೀನ್ದಾರರ ಕೋಪ...ವರು ನಾವು ನಡೆಸುತ್ತಿದ್ದ ವಿಚಾರಣೆಯನ್ನು ನಿರರ್ಥ...ಮು ವಿಶ್ವಪ್ರಯತ್ನವನ್ನೆಸಗಿದರು.

...ಂದು ದಿನ ಬಿಹಾರ ಪ್ರಾಂತದ ಸರ್ಕಾರದಿಂದ ಈ ಒಕ್ಕ...ಪತ್ರವು ನನ್ನ ಕೈಸೇರಿತು. "ನೀವು ವಿಚಾರಣೆಯನ್ನು ...ಕಾಲದಿಂದ ನಡೆಸುತ್ತಿದ್ದೀರಿ. ಈಗ ಅದನ್ನು ನಿಲ್ಲಿ... ವಿಹಾರವನ್ನು ಬಿಟ್ಟು ಹೋಗುವ ಸಮಯ ಒದಗಿ..." ಈ ಕಾಗದವೇನೋ ವಿನಯಪೂರ್ವಕವಾದ ಭಾಷೆ...ಬರೆಯಲಾಗಿದ್ದಿತು. ಆದರೆ ಅದರ ಅರ್ಥವು ಸ್ಪಷ್ಟ...ತು.

...ನಾನು ಇದಕ್ಕೆ ಉತ್ತರವಾಗಿ ವಿಚಾರಣೆಯು ದೀರ್ಘ...ನಡೆಯುವುದು ಸಹಜವೆಂದೂ, ಅದರಿಂದ ಜನರಿಗೆ ಕಷ್ಟ...ವು ಪರಿಸಿದ ಹೊರತು ವಿಹಾರದಿಂದ ತೆರಳುವ ಉ...ನನಗಿರಲಿಲ್ಲವೆಂದೂ ಬರೆದೆನು. ನಾನು ಮಾಡುತ್ತಿ...ಚಾರಣೆಯನ್ನು ನಿಲ್ಲಿಸುವುದು ಸರ್ಕಾರದವರ ಕೈಯಲ್ಲೇ...ಂದೂ ರೈತರ ದುಃಖದ ಕಥೆಯು ನಿಜವೆಂದು ಒಪ್ಪಿ ಅ... ಪರಿಹರಿಸುವುದು ಅಥವಾ ರೈತರು ಹೇಳುವ ವಾರ್ತೆ...ಸತ್ಯಾಂಶವಿರುವುದೆಂದು ಅರಿತು ಒಡನೆಯೇ ಸರ್ಕಾರ ... ವಿಚಾರಣೆಯನ್ನು ಮಾಡುವುದು, ಇವೇ ಇದಕ್ಕೆ ಮಾ...ಂದೂ ವ್ಯಕ್ತಪಡಿಸಿದೆನು.

...ಅಲ್ಲಿನ ಲೆಫ್ಟಿನೆಂಟ್ ಗವರ್ನರಾದ ಸರ್ ಎಡ್ವರ್ಡ್ ಗೆ...ರು ನನಗೆ ಹೇಳಿ ಕಳುಹಿಸಿ ವಿಚಾರಣೆಯನ್ನು ಮಾಡಲು ... ಒಪ್ಪಿಗೆಯನ್ನು ತೋರ್ಪಡಿಸಿದುದಲ್ಲದೆ ನನಗೂ ಆ ಸ...ಯ ಸದಸ್ಯರಾಗಲು ಆಹ್ವಾನವಿತ್ತರು. ನಾನು ಇತರ ...ರ ಹೆಸರುಗಳನ್ನು ವಿಚಾರಿಸಿಕೊಂಡು ನನ್ನ ಜೊತೆಗಾರ...ಅಭಿಪ್ರಾಯವನ್ನು ತೆಗೆದುಕೊಂಡ ಮೇಲೆ ಸಮಿತಿಯ ಸದಸ್ಯ...ರಲು ಒಪ್ಪಿಕೊಂಡೆನು. ಆದರೆ ಈ ಶರತ್ತುಗಳ ಮೇಲೆ ಸ...ಯ ವಿಚಾರಣೆಯು ನಡೆಯುತ್ತಿರುವಾಗ ನಾನು ನನ್ನ ಜೊ...ವರ ಸಲಹೆಯನ್ನು ತೆಗೆದುಕೊಳ್ಳಲು ಸ್ವತಂತ್ರನಾಗಿರಬೇಕು. ...ಸಮಿತಿಯ ಸದಸ್ಯನಾದುದರಿಂದ ರೈತರ ಪರವಾಗಿ ವಾದಿ...ಅಧಿಕಾರವನ್ನು ನಾನೇನೂ ಕಳೆದುಕೊಳ್ಳುವುದಿಲ್ಲವೆಂ... ಸರಕಾರದವರು ಮನ್ನಿಸಬೇಕು; ಸಮಿತಿಯ ವಿಚಾರಣೆ...ಫಲಿತಾಂಶವು ನನಗೆ ಸಮರ್ಪಕವಾಗಿರದಿದ್ದರೆ ರೈತರು ...ಂದೆ ಯಾವ ರೀತಿ ವರ್ತಿಸಬೇಕೆಂದು ಅವರಿಗೆ ಸಲಹೆಕೊ...ದಾರಿ ತೋರಿಸಲು ನನಗೆ ಸ್ವಾತಂತ್ರ್ಯವಿರಬೇಕು.

...ಸರ್ ಎಡ್ವರ್ಡ್ ಗೆಯ್ಟರು ಈ ಶರತ್ತುಗಳು ನ್ಯಾಯ...ದುವೆಂದೂ, ಉಚಿತವಾದುವೆಂದೂ ಅವುಗಳನ್ನು ಸ್ವೀಕರಿಸಿ ...ರಣಾ ಸಮಿತಿಯು ಏರ್ಪಟ್ಟಿರುವುದನ್ನು ಪ್ರಕಟಿಸಿದರು. ...ಂ. ಸರ್ ಫ್ರ್ಯಾಂಕ್ ಸ್ಲೈರವರು ಈ ಸಮಿತಿಯ ಅಧ್ಯ...ರಾಗಿ ಮಾಡಲ್ಪಟ್ಟರು.

ಸಮಿತಿಯು ರೈತರ ಪಕ್ಷವಾಗಿ ತೀರ್ಮಾನಿಸಿ ಜಮೀ...ರರು ಸುಲಿಯುತ್ತಿದ್ದ ತೆರಿಗೆಯಲ್ಲಿ ಒಂದು ಭಾಗವನ್ನು ...ಪಕ್ಕ ಕೊಟ್ಟುಬಿಡಬೇಕೆಂದೂ, (ಈ ಭಾಗವನ್ನು ತೆಗೆದು...ಕೊಳ್ಳುವುದು ಕಾನೂನಿಗೆ ವಿರುದ್ಧವೆಂದು ಸಮಿತಿಯವರ ಅ...ಭಿಪ್ರಾಯವಾಗಿದ್ದಿತು) ತೀನ್ ಕಥಿಯಾ ಪದ್ಧತಿಯನ್ನು ಕಾ...ನೂನಿನ ಮೂಲಕ ಬಹಿಷ್ಕರಿಸಬೇಕೆಂದೂ ಸೂಚಿಸಿತು.

ಸಮಿತಿಯವರು ಸರ್ವಸಮ್ಮತಿಯಿಂದ ವರದಿಯನ್ನು ಬರೆ...ಲೂ ಸಮಿತಿಯ ಸಲಹೆಗಳಿಗನುಸಾರವಾಗಿ ರಚಿತವಾದ ...ರ ಕಾನೂನು ಅಂಗೀಕೃತವಾಗಲೂ ಸರ್ ಎಡ್ವರ್ಡ್ ಗೆ...ರು ಬಹು ಮಟ್ಟಿಗೆ ಕಾರಣ ಕರ್ತರಾದರು. ಅವರ ...ವಾಗಿ ನಿಲ್ಲದೆ ಆ ವಿಷಯದಲ್ಲಿ ತಮ್ಮ ಕೌಶಲ್ಯವನ್ನೆ... ಉಪಯೋಗಿಸದೆ ಇದ್ದಿದ್ದರೆ ಏಕಮತದ ವರದಿಯಾಗಲಿ, ...ರ ಕಾನೂನಿನ ಸ್ವೀಕಾರವಾಗಲಿ ಸಾಧ್ಯವಿರುತ್ತಿರಲಿಲ್ಲ. ...ಮೀನ್ದಾರರಿಗೆ ವಿಶೇಷ ಪ್ರಾಬಲ್ಯವಿದ್ದಿತು. ವರದಿಯನ್ನು ...ನಡೆ ಅವರು ಕಾನೂನಿನ ಅಂಗೀಕಾರಕ್ಕೆ ಪ್ರಚಂಡ ವಿ...ರೋಧವನ್ನೊಡ್ಡಿದರು. ಆದರೆ ಸರ್ ಎಡ್ವರ್ಡ್ ಗೆಯ್ಟರು ...ಕಡೆಯ ವರೆಗೂ ದೃಢರಾಗಿ ನಿಂತು ಸಮಿತಿಯ ಸಲಹೆಗ...ಳನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತಂದರು.

ಸುಮಾರು ಒಂದು ಶತಮಾನ ಪರ್ಯಂತ ಬಳಕೆಯಲ್ಲಿದ್ದ ...ನ್ ಕಥಿಯಾ ಪದ್ಧತಿಯು ಈ ರೀತಿಯಾಗಿ ಬಹಿಷ್ಕೃತವಾ...ತು. ಅದರ ಜೊತೆಗೆ ಜಮೀನ್ದಾರರ ಆಳಿಕೆಯೂ ಕೊನೆ...ಯಿತು. ಅಂದಿನವರೆಗೂ ದುಃಖಕ್ಕೆ ಸಿಕ್ಕಿದ್ದ ರೈತರು ಸ್ವ...ಲ್ಪಮಟ್ಟಿಗೆ ತಲೆಯೆತ್ತಿಕೊಂಡರು. ನೀಲಿಯ ಕರೆಯನ್ನು ಎಂ...ದಿ ತೊಳೆದು ಹಾಕುವುದಕ್ಕಾಗುವುದಿಲ್ಲವೆಂಬ ಮೂಢ...ನಂಬಿಕೆಯು ಮಾಯವಾಯಿತು.

ವ್ಯವಸ್ಥಾಕಾರ್ಯವನ್ನು ಇನ್ನೂ ಕೆಲವು ವರ್ಷ ನಡೆಸಿ ಇ...ನ್ನು ಶಾಲೆಗಳನ್ನು ಏರ್ಪಡಿಸಿ ಗ್ರಾಮಜೀವನವನ್ನು ಇನ್ನೂ ...ಕರವಾಗಿ ಪ್ರವೇಶಿಸಬೇಕೆಂಬ ಆಸೆಯು ನನಗಿದ್ದಿತು. ಇ...ದಕ್ಕೆ ಎಲ್ಲವೂ ಸಿದ್ಧವಾಗಿದ್ದಿತು. ಆದರೆ ಇದಕ್ಕೆ ಮುಂಚೆ ಎಷ್ಟೋ ಬಾರಿ ನಡೆದಂತೆ ಈ ಸಲವೂ ನನ್ನ ಉದ್ದೇಶವನ್ನು ಪೂರೈಸುವುದು ದೇವರ ಚಿತ್ತಕ್ಕೆ ಒಪ್ಪಲಿಲ್ಲ. ದೈವ ನಿಯಮವು ಬೇರೆ ರೀತಿಯಿದ್ದಿತು. ಅದು ನಾನು ಇನ್ನೊಂದೆಡೆ ಕಾರ್ಯವನ್ನು ಕೈಗೊಳ್ಳುವಂತೆ ಮಾಡಿತು.

## ಮದದ್ರಾವಕವೂ ರೋಗಗಳೂ.

ಮದದ್ರಾವಕವೆಂಬುದಾವುದು? ಸಕ್ಕರೆಯನ್ನಾಗಲಿ, ಸಕ್ಕರೆಯ ಸಂಬಂಧವುಳ್ಳ ಇತರ ಪದಾರ್ಥಗಳನ್ನಾಗಲಿ, ಹುಳಿ ಬಂದು ನೊರೆಕಟ್ಟುವ ವರೆಗೆ ಬಿಟ್ಟಿದ್ದರೆ, ಆಗ ಅದರಲ್ಲಿ ಹುಟ್ಟುವ "ಯೀಸ್ಟ್" ಎಂಬ ಅತಿ ಸೂಕ್ಷ್ಮ ಕ್ರಿಮಿಗಳಿಂದ ಮದ್ಯಾರ್ಕವುಂಟಾಗುವುದು. ಇದರಲ್ಲಿ ಅನೇಕ ವಿಧಗಳುಂಟು. ಇದನ್ನು ಅನೇಕರು ಅನೇಕ ರೂಪದಿಂದ ಕುಡಿಯುವರು. ಬ್ರ್ಯಾಂಡಿ, ವಿಸ್ಕಿ, ಜಿನ್ ಎಂಬವುಗಳಲ್ಲಿ ಶೇಕಡಾ 50 ಪಾಲು ಮದ್ಯಾರ್ಕವಿರುವುದು. ಪೋರ್ಟ್, ಶೆರಿ ಅಥವಾ ಛಾಂಪೇನ್ ಎಂಬಿವೇ ಮೊದಲಾದ (ವೈನ್) ದ್ರಾಕ್ಷೀರಸಗಳಲ್ಲಿ ನೂರಕ್ಕೆ 15 ಪಾಲು ಮದ್ಯಾರ್ಕವುಂಟು. ಬೀರ್ ಎಂಬುದರಲ್ಲಿ ನೂರಕ್ಕೆ ೯ ಪಾಲು ಮಾತ್ರ ಆ ಮದ್ಯಗುಣವಿದೆ. ಈ ದೇಶದಲ್ಲಿ ಸಾಮಾನ್ಯವಾಗಿ ಹೀನಜಾತಿಯವರು ಕುಡಿಯತಕ್ಕ ಕಳ್ಳು ಅಥವಾ ಸಾರಾಯಿಯೆಂಬುದರಲ್ಲಿ ಬ್ರ್ಯಾಂಡಿಯ ಹಾಗೆಯೇ ತೀವ್ರವಾದ ಮದ್ಯಗುಣವುಂಟು. ಬೇರೆ ವಿಧವಾದ ಹೆಂಡಗಳಲ್ಲಿ ಕೂಡ ೧೯ರಿಂಗಿಂತ ಹೆಚ್ಚಾಗಿ ಮದ್ಯಗುಣವಿದ್ದು ತೆಂಗಿನ ಹೆಂಡದಲ್ಲಿ ಶೇಕಡಾ 8 ಪಾಲು ಮದ್ಯಾರ್ಕವಿದೆ.

ಮದ್ಯಾರ್ಕವೆಂಬುದರಲ್ಲಿ ಆಕ್ಸಿಜನ್ ಎಂಬ ಪ್ರಾಣವಾಯುವನ್ನು ಬಹು ತೀವ್ರವಾಗಿ ಎಳೆದುಕೊಳ್ಳತಕ್ಕ ಶಕ್ತಿಯಿರುವುದರಿಂದ ಆ ಮದ್ಯರಸವು ಮನುಷ್ಯದೇಹಕ್ಕೆ ಸೇರಿದೊಡನೆ ಜೀವಾಣುಗಳನ್ನು ಕೊಲ್ಲತಕ್ಕ ವಿಷರೂಪವಾಗಿ ಪರಿಣಮಿಸಿ, ದೇಹಾವಯವಗಳೊಳಗಿನ ಚೈತನ್ಯ ಶಕ್ತಿಯನ್ನೆಲ್ಲ ತಗ್ಗಿಸಿಬಿಡುವುದು.

ಆದರೆ ಕೆಲವರು ಮದದ್ರಾವಕಗಳಲ್ಲಿ ಆಹಾರ ಗುಣವುಂಟೆಂದು ವಾದಿಸುವರುಂಟು. ಅವರಲ್ಲಿ ಅಂತಹ ಆಹಾರಗುಣವಿಲ್ಲವೆಂಬುದನ್ನು ಬಹು ಸುಲಭವಾಗಿ ನಿರೂಪಿಸಬಹುದು. ಹೇಗೆಂದರೆ,—

ಆಹಾರವೆಂದ ಮೇಲೆ ಅದರಲ್ಲಿ ಈ ಕೆಳಗೆ ಕಂಡ ಮೂರು ಗುಣಗಳಿದ್ದೇ ಇರಬೇಕು.

ಮೊದಲನೆಯದು—ದೇಹದಲ್ಲಿ ಕೆಲಸಮಾಡಿ ಸೋತು ಹೋದ ಅಥವಾ ಸವೆದು ಜೀರ್ಣವಾದ ಭಾಗಗಳಿಗೆ ತಿರುಗಿ ಪುಷ್ಟಿಯನ್ನು ಕೊಡುವುದು.

ಎರಡನೆಯದು—ನಾವು ಗ್ರಹಿಸುವ ಆಹಾರದಲ್ಲಿ ಸಾರವಸ್ತುವು ನಮ್ಮ ದೇಹದ ಅವಯವರೂಪವಾಗಿಯೇ ಪರಿಣಾಮಹೊಂದುವುದಕ್ಕೆ ತಕ್ಕಂತೆ, ಗ್ಲೈಕೊಜಿನ್ ಅಥವಾ ಕೊಬ್ಬಿನ ರೂಪವನ್ನು ಮಾರ್ಪಟ್ಟು, ಕಾಳಜದಲ್ಲಿಯಾಗಲಿ ಅಥವಾ ಬೇರೆ ಶರೀರ ಭಾಗಗಳಲ್ಲಿಯಾಗಲಿ ಸಂಗ್ರಹಿಸಲ್ಪಟ್ಟಿದ್ದು ಅವಶ್ಯವಿದ್ದಾಗ ದೈಗೆ ಸಂಬರಾಜಾಗುವಂತಿರಬೇಕು.

ನಾನು ಚಂಪಾರಣ್ಯದ ಸಮಿತಿಯಲ್ಲಿ ನನ್ನ ಕೆಲಸವನ್ನು ಮುಗಿಸುತ್ತಿರುವಷ್ಟರಲ್ಲಿಯೇ ನನಗೆ ಶ್ರೀ. ಮೋಹನಲಾಲ ಪಂಡ್ಯರಿಂದಲೂ, ಶ್ರೀ. ಶಂಕರಲಾಲ ಪರೀಖರಿಂದಲೂ ಖೇಡಾ ಜಿಲ್ಲೆಯಲ್ಲಿ ಕ್ಷಾಮವೊದಗಿ ಪೈರು ಬೆಳೆಯದೆ ರೈತರು ಭೂಕಂದಾಯವನ್ನು ಕೊಡಲಶಕ್ತರಾಗಿರುವರೆಂದೂ, ಅವರಿಗೆ ನಾನು ದಾರಿ ತೋರಿಸಬೇಕೆಂದೂ ಪತ್ರಬಂದಿತು. ಆ ಸ್ಥಳಕ್ಕೆ ಹೋಗಿ ವಿಚಾರಿಸದೆ ಅವರಿಗೆ ಸಲಹೆ ಕೊಡಲು ನನಗೆ ಇಷ್ಟವಾಗಲಿ ಸ್ಥೈರ್ಯವಾಗಲಿ ಇರಲಿಲ್ಲ.

ಆ ಸಮಯದಲ್ಲಿಯೇ ಶ್ರೀಮತೀ ಅನಸೂಯಾಬಾಯಿಯವರಿಂದ ಅಹಮದಾಬಾದಿನಲ್ಲಿ ಕೂಲಿಗಾರರ ಪರಿಸ್ಥಿತಿಯನ್ನು ಕುರಿತ ಕಾಗದವೊಂದು ಬಂದಿತು. ಕೂಲಿಯು ಕಡಮೆಯಾಗಿದ್ದಿತು. ಅದನ್ನು ಏರಿಸಲು ಕೂಲಿಗಾರರು ಬಹುಕಾಲದಿಂದ ಚಳವಳಿ ನಡೆಸುತ್ತಿದ್ದರು. ನನಗೆ ಸಾಧ್ಯವಿದ್ದರೆ ಅವರ ಮಾರ್ಗದರ್ಶಿಯಾಗಲು ನನಗೆ ಇಷ್ಟವಿದ್ದಿತು. ಆದರೆ ಆ ಸಣ್ಣ ವಿಷಯವನ್ನು ಕೂಡ ಅಷ್ಟು ದೂರದಿಂದ ನಿರ್ವಹಿಸುವ ಧೈರ್ಯವು ನನಗಿರಲಿಲ್ಲ. ಆದುದರಿಂದ ಅಹಮದಾಬಾದಿಗೆ ತೆರಳಲು ಒದಗಿದ ಮೊಟ್ಟಮೊದಲನೆಯ ಅವಕಾಶವನ್ನು ನಾನು ಉಪಯೋಗಿಸಿಕೊಂಡೆನು. ಇವೆರಡು ಕಾರ್ಯಗಳನ್ನೂ ಶೀಘ್ರವಾಗಿಯೇ ಮುಗಿಸಿ ಚಂಪಾರಣ್ಯದಲ್ಲಿ ಆರಂಭವಾಗಿದ್ದ ರಚನಾತ್ಮಕ ಕಾರ್ಯದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಅಲ್ಲಿಗೆ ಹಿಂತಿರುಗಿ ಹೋಗುವುದೆಂದು ನಾನು ಆಶಿಸಿದ್ದೆನು.

ಆದರೆ ನಾನು ಬಯಸಿದಷ್ಟು ತೀವ್ರವಾಗಿ ಕಾರ್ಯೋದ್ಯಮವು ಸಾಗಲಿಲ್ಲ. ಚಂಪಾರಣ್ಯಕ್ಕೆ ಹಿಂತಿರುಗಲು ನನಗೆ ಸಾಧ್ಯವಾಗಲಿಲ್ಲ. ಇದರ ಫಲವಾಗಿ ಶಾಲೆಗಳು ಒಂದೊಂದಾಗಿ ನಿಂತುಹೋದುವು. ನನ್ನ ಜೊತೆಯವರೂ, ನಾನೂ ಎಷ್ಟೋ ಮುಗಿಲು ಮಹಡಿಗಳನ್ನು ಕಟ್ಟಿದ್ದೆವು. ಆದರೆ ಅವೆಲ್ಲಾ ತಾತ್ಕಾಲಿಕವಾಗಿ ಮಾಯವಾದುವು.

ಚಂಪಾರಣ್ಯದಲ್ಲಿ ಗ್ರಾಮನೈರ್ಮಲ್ಯ ಮತ್ತು ಶಿಕ್ಷಣದ ಜೊತೆಗೆ ಗೋರಕ್ಷಣೆಯೂ ಇವುಗಳಲ್ಲಿ ಒಂದಾಗಿದ್ದಿತು. ಗೋರಕ್ಷಣೆಯೂ, ಹಿಂದೀಪ್ರಚಾರವೂ ಕೇವಲ ಮಾರ್ವಾಡಿಗಳ ಕಾರ್ಯವಾಗಿ ಹೋಗಿಬಿಟ್ಟಿದ್ದಿತೆಂಬುದು ನನ್ನ [illegible] ನನ್ನ ಗೋಚರಕ್ಕೆ ಬಂದಿದ್ದಿತು. ಬೆತಿಯಾದಲ್ಲಿ ಮಾರ್ವಾಡೀ ಮಿತ್ರರೊಬ್ಬರು ನನಗೆ ತಮ್ಮ ಧರ್ಮಶಾಲೆಯಲ್ಲಿ ಆಶ್ರಯ ಕೊಟ್ಟಿದ್ದರು. ಅಲ್ಲಿನ ಇತರ ಮಾರ್ವಾಡಿಗಳು ತಮ್ಮ ಗೋಶಾಲೆಯ ವಿಷಯವಾಗಿ ನನ್ನಲ್ಲಿ ಆಸಕ್ತಿಯನ್ನು ಹುಟ್ಟಿಸಿದ್ದರು. ಗೋರಕ್ಷಣೆಯನ್ನು ಕುರಿತ ನನ್ನ ಅಭಿಪ್ರಾಯಗಳು ಆ ಹೊತ್ತಿಗೆ ಸ್ಫುಟವಾಗಿ ರೂಪವೆತ್ತಿದ್ದುವು. ಆ ವಿಷಯದಲ್ಲಿ ನನ್ನ ಅಂದಿನ ಕಲ್ಪನೆಯು ಇಂದಿರುವಂತೆಯೇ ಇದ್ದಿತು. ನನ್ನ ಅಭಿಪ್ರಾಯದಲ್ಲಿ ಗೋರಕ್ಷಣಕಾರ್ಯದಲ್ಲಿ ಗೋಸಂತತಿವೃದ್ಧಿ, ಗೋಜಾತಿ ಸುಧಾರಣೆ, ಎತ್ತುಗಳನ್ನು ಹಿತಮಿತದಿಂದ ಕಾಣುವುದು, ಆದರ್ಶ ದುಗ್ಧಾಲಯಗಳನ್ನು ನಿರ್ಮಿಸುವುದು ಮುಂತಾದವೆಲ್ಲಾ ಅಡಕವಾಗಿದ್ದುವು. ಈ ಕೆಲಸದಲ್ಲಿ ಮಾರ್ವಾಡಿ ಮಿತ್ರರು ಪೂರ್ಣವಾಗಿ ಸಹಕರಿಸುವುದಾಗಿ ಮಾತುಕೊಟ್ಟಿದ್ದರು. ಆದರೆ ನಾನು ಚಂಪಾರಣ್ಯದಲ್ಲಿ ನಿಲ್ಲಲಾಗದಿದ್ದುದರಿಂದ ಈ ಕಾರ್ಯಕ್ರಮವು ಫಲಿಸಲಿಲ್ಲ.

ಬೆತಿಯಾದಲ್ಲಿ ಗೋಶಾಲೆಯು ಇಂದಿಗೂ ನಡೆಯುತ್ತಿದೆ. ಆದರೆ ಅದು ಆದರ್ಶ ದುಗ್ಧಾಲಯವಾಗಿ ಪರಿಣಮಿಸಲಿಲ್ಲ. ಚಂಪಾರಣ್ಯದ ಎತ್ತುಗಳಿಂದ ಅವುಗಳ ಶಕ್ತಿಮೀರಿ ಇನ್ನೂ ಕೆಲಸವನ್ನು ತೆಗೆಯುತ್ತಿದ್ದಾರೆ. ಹಿಂದುಗಳೆನಿಸಿಕೊಳ್ಳುವವರು ಇಂದು ಕೂಡ ಆ ಬಡ ಪ್ರಾಣಿಯನ್ನು ನಿರ್ದಯದಿಂದ ಹೊಡೆದು ತಮ್ಮ ಧರ್ಮಕ್ಕೆ ಕಳಂಕ ತರುತ್ತಿದ್ದಾರೆ.

ಈ ಕಾರ್ಯವು ಫಲಿಸದಿರುವುದು ನನಗೆ ನಿರಂತರ ವಿಷಾದಕಾರಣವಾಗಿದೆ. ನಾನು ಚಂಪಾರಣ್ಯಕ್ಕೆ ಹೋದಾಗಲೆಲ್ಲ ಮಾರ್ವಾಡೀ ಮತ್ತು ಬಿಹಾರೀ ಮಿತ್ರರ ಮೃದು ನಿಂದೆಯನ್ನು ಕೇಳಿ ನಾನು ಅಷ್ಟು ಹಠಾತ್ತಾಗಿ ಬಿಟ್ಟುಬಿಡ[illegible] ಉದ್ದಿಷ್ಟ ಕಾರ್ಯಗಳನ್ನು ನೆನೆಸಿಕೊಂಡು ನಿಟ್ಟುಸಿರುಬಿಡುತ್ತೇನೆ.

[illegible] ಕಾರ್ಯವು ಒಂದಲ್ಲದಿದ್ದರೊಂದು ಮಾರ್ಗದಲ್ಲಿ [illegible]ಗಳಲ್ಲಿ ನಡೆಯುತ್ತಿದೆ. ಆದರೆ ಗೋರಕ್ಷಣ[illegible] ದೃಢವಾಗಿ ಬೇರೂರಲಿಲ್ಲವಾದುದರಿಂದ [illegible] ಉದ್ದೇಶಿಸಿದ ರೀತಿಯಲ್ಲಿ ಮುಂದುವರಿಯಲಿಲ್ಲ. [illegible] ರೈತರ ಪ್ರಶ್ನೆಯನ್ನು ಇನ್ನೂ ಚರ್ಚಿಸುತ್ತಿರುವಾಗಲೇ [illegible] ನಾನು ಅಹಮದಾಬಾದಿನಲ್ಲಿ ಗಿರಣಿಯ ಕೂಲಿ[illegible]ಯಲ್ಲಿ ಪ್ರವೇಶಿಸಿದ್ದೆನು.

[illegible] ಪರಿಸ್ಥಿತಿಯು ಅತ್ಯಂತ ಸೂಕ್ಷ್ಮವಾಗಿದ್ದಿತು. [illegible] ವ್ಯಾಜ್ಯವು ನ್ಯಾಯವಾದುದಾಗಿದ್ದಿತು. ಶ್ರೀಮತಿ [illegible] ತಮ್ಮ ಅಣ್ಣಂದಿರಾದ ಅಂಬಾಲಾಲ [illegible]ಯವರೊಡನೆಯೇ ಕದನವಾಡಬೇಕಾಗಿ [illegible] ಗಿರಣಿಗಳ ಮಾಲಿಕರ ಪಕ್ಷದಲ್ಲಿ ಅವರೇ [illegible] ನಿಂತಿದ್ದರು. ಅವರುಗಳೊಡನೆ ನನಗೆ ಮೈತ್ರಿ [illegible] ದಿಂದ ಅವರೊಡನೆ ಹೋರಾಡುವುದು ಇನ್ನೂ ಕ[illegible] ಕಾಣಿಸಿತು. ನಾನು ಅವರೊಡನೆ ಕಲೆತು ಮಾ[illegible] ವ್ಯಾಜ್ಯವನ್ನು ಪಂಚಾಯತರ ತೀರ್ಮಾನಕ್ಕೆ ಒಪ್ಪಿಸಬೇಕೆಂದು ಅವರನ್ನು ಬೇಡಿದೆನು. ಆದರೆ ಅವರು ಪಂಚಾಯತ ತತ್ವವನ್ನೇ ಒಪ್ಪಲಿಲ್ಲ.

ಆದುದರಿಂದ ನಾನು ಕೂಲಿಗಾರರಿಗೆ ಮುಷ್ಕರ ಹೂಡಿರೆಂದು ಸಲಹೆ ಕೊಡಬೇಕಾಯಿತು. ಹಾಗೆ ಮಾಡುವುದಕ್ಕೆ ಮುಂಚೆ ನಾನು ಅವರ ಮತ್ತು ಅವರ ನಾಯಕರ ಗಾಢಪರಿಚಯವನ್ನು ಪಡೆದು ಮುಷ್ಕರವು ಸಫಲವಾಗಬೇಕಾದರೆ ಆವಶ್ಯಕವಾದ ವಿಷಯಗಳನ್ನು ಅವರಿಗೆ ವಿವರಿಸಿದೆನು.

೧ ಅಹಿಂಸೆಯನ್ನು ಎಂದಿಗೂ ಭಂಗಪಡಿಸಕೂಡದು.

೨. ಮುಷ್ಕರಕ್ಕೆ ವಿರೋಧವಾಗಿ ಕೆಲಸಕ್ಕೆ ಹೋದವರನ್ನು ಎಂದಿಗೂ ಹಿಂಸಿಸಕೂಡದು.

೩. ಭಿಕ್ಷಾನ್ನವನ್ನು ಎಂದಿಗೂ ತಿನ್ನಕೂಡದು.

೪. ಮುಷ್ಕರವು ಎಷ್ಟುಕಾಲ ಹಿಡಿದರೂ ಕದಲದೆ ನಿಂತು ಇತರ ದೇಹಶ್ರಮದಿಂದ ಮುಷ್ಕರದ ಕಾಲದಲ್ಲಿ ನ್ಯಾಯವಾಗಿ ಹಿಟ್ಟನ್ನು ಸಂಪಾದಿಸುವುದು.

ಮುಷ್ಕರದ ಮುಖಂಡರು ಈ ಶರತ್ತುಗಳನ್ನೆಲ್ಲಾ ಅರ್ಥಮಾಡಿಕೊಂಡು ಅವುಗಳಿಗೆ ಒಪ್ಪಿದರು. ಕೂಲಿಗಾರರು ಸಭೆಗೂಡಿ ಗಿರಣಿಗಳ ಮಾಲಿಕರು ಕೂಲಿಗಾರರ ಶರತ್ತುಗಳಿಗೆ ಒಪ್ಪುವವರೆಗೂ ಅಥವಾ ಅವುಗಳನ್ನು ಪಂಚಾಯತ ತೀರ್ಪಿಗೆ ಬಿಡುವುದಕ್ಕೆ ಸಮ್ಮತಿಸುವವರೆಗೂ ತಾವು ಕೆಲಸಕ್ಕೆ ಹಿಂತಿರುಗುವುದಿಲ್ಲವೆಂದು ಪ್ರಮಾಣ ಮಾಡಿದರು.

ಈ ಮುಷ್ಕರದ ಕಾಲದಲ್ಲಿಯೇ ನನಗೆ ಶ್ರೀ ವಲ್ಲಭಭಾಯಿ ಪಟೇಲರ ಮತ್ತು ಶ್ರೀ ಶಂಕರಲಾಲ ಬ್ಯಾಂಕರರ ನಿಕಟಪರಿಚಯವುಂಟಾದುದು. ಶ್ರೀ ಅನಸೂಯಾ ಬಾಯಿಯವರು ಅದಕ್ಕೆ ಮುಂಚೆಯೇ ನನಗೆ ಚೆನ್ನಾಗಿ ಗೊತ್ತಿದ್ದವರು.

ಸಾಬರ್ಮತೀ ನದಿಯ ದಡದಲ್ಲಿ ಮರದ ನೆರಳಿನಲ್ಲಿ ನಾವು ದಿನವೂ ಮುಷ್ಕರಗಾರರ ಸಭೆಯನ್ನು ನಡೆಸುತ್ತಿದ್ದೆವು. ಅವರು ಈ ಸಭೆಯಲ್ಲಿ ಸಾವಿರಗಟ್ಟಲೆಯಾಗಿ ಕೂಡುತ್ತಿದ್ದರು. ಅವರು ಮಾಡಿದ ಪ್ರಮಾಣವನ್ನೂ, ಶಾಂತಿಯನ್ನೂ ಆತ್ಮಗೌರವವನ್ನೂ ಭಂಗಗೊಳಿಸದಿರುವ ಅವರ ಕರ್ತವ್ಯವನ್ನೂ ನಾನು ನನ್ನ ಭಾಷಣಗಳಲ್ಲಿ ಅವರ ನೆನಪಿಗೆ ತರುತ್ತಿದ್ದೆನು. ಅವರು ದಿನವೂ ಏಕ್ ಟೇಕ್ (ಒಂದೇ ಮಾತು—ಮಾತಿಗೆ ತಪ್ಪಬೇಡಿ) ಎಂದು ಬರೆದಿದ್ದ ಧ್ವಜವನ್ನು ಹಿಡಿದುಕೊಂಡು ಆ ನಗರದ ಬೀದಿಗಳಲ್ಲಿ ಶಾಂತಿಯುತವಾಗಿ ಮೆರವಣಿಗೆ ಹೊರಡುತ್ತಿದ್ದರು.

ಮುಷ್ಕರವು ಇಪ್ಪತ್ತೊಂದು ದಿನ ನಡೆಯಿತು. ಈ ಕಾಲದಲ್ಲಿ ನಾನು ಗಿರಣಿಗಳ ಮಾಲಿಕರನ್ನು ಆಗಾಗ ಕಂಡು ಕೂಲಿಗಾರರಿಗೆ ನ್ಯಾಯ ತೋರಿಸಬೇಕೆಂದು ಬೇಡಿಕೊಂಡೆನು. ಅದಕ್ಕೆ ಅವರು 'ನಾವೂ ಪ್ರಮಾಣಮಾಡಿಲ್ಲವೇನು? ನಮ್ಮೊಡನೆ ಕೂಲಿಗಾರರ ಸಂಬಂಧವು ತಂದೆ ಮಕ್ಕಳ ಸಂಬಂಧ ... ಮೂರನೆಯವರ ಅಡ್ಡಬರುವುದನ್ನು ನಾವು ಸಹಿಸುವುದೆಂತು? ಪಂಚಾಯತಿಗೆ ಅವಕಾಶವೆಲ್ಲಿ?' ಎಂದು ಉತ್ತರ ಕೊಡುತ್ತಿದ್ದರು.

---

## ಹೆಂಗಸರಿಗೆ ಮೈ ಸಣ್ಣನಾಗಿರುವುದು ಸ್ವಾಭಾವಿಕವೇ?

(ಥಾಮಸ್ ಡಟ್ಟನ್ ಎಂ. ಡಿ. ಎಂ. ಆರ್. ಸಿ. ಪಿ. ಇವರಿಂದ)

ಸ್ತ್ರೀಯರಿಗೆ ಅಬಲೆಯರೆಂದೂ ಕೃಶಾಂಗಿಯರೆಂದೂ ನಮ್ಮಲ್ಲಿ ನಿಸ್ಸಂಶಯವಾಗಿ ಪ್ರಸಿದ್ಧವಾದ ಹೆಸರುಗಳಿವೆ. ಹೀಗಿರುವುದು ಸ್ತ್ರೀಜಾತಿಗೆ ಸಹಜವಾದ ಸೌಂದರ್ಯಲಕ್ಷಣವೆಂಬ ಭಾವವೂ ಅನೇಕರಿಗಿದೆ. ವಾಸ್ತವಾಂಶವೇನೋ ಹಾಗಲ್ಲವು. ಸ್ತ್ರೀಯರಿಗೆ ಮೈ ಸಣ್ಣನಾಗಬೇಕಾದುದು ಸ್ವಾಭಾವಿಕವಾದುದಲ್ಲ. ಆದರೆ ಈಗಿನ ಕಾಲದ ಹೊಸದ ಮೋಜಾವಣೆ, ಮೇಲೆ ಹೇಳಿದಂತೆ ಸ್ವಾಭಾವಿಕವಾದ ಪ್ರಕೃತಿಸ್ಥಿತಿಗೆ ವಿರುದ್ಧವಾಗಿಯೇ ಹೋಗುತ್ತಿದೆ. ಅದೇನು? ಪ್ರಕೃತಿಯು ತನ್ನ ಕಟ್ಟಳೆಗಳಿಗೆ ತಪ್ಪಿಹೋಗಲು ಸಮ್ಮತಿಸಲಾರದು. ಅಂತಹ ಸಹಜ ಸ್ಥಿತಿಗೆ ವಿರುದ್ಧವಾಗಿ ಹೋಗುವುದರಿಂದ ರೋಗಗಳಿಗೆ ನಾವಾಗಿ ಆಸ್ಪದವನ್ನು ಕಲ್ಪಿಸಿದಂತಾಗುವುದು. ಕೆಲವು ಕಡೆಗಳಲ್ಲಿ ರೋಗಗಳು ಕಾಣಿಸದಿದ್ದರೂ, ದೇಹಾರೋಗ್ಯವನ್ನು ತಗ್ಗಿಸದಿರಲಾರದು. ಮುಖ್ಯವಾಗಿ ಹೆಣ್ಣು ಹುಡುಗಿಯರು ತಮ್ಮ ಬಾಲ್ಯ ಕೌಮಾರಾವಸ್ಥೆಗಳು ದಾಟುವವರೆಗೆ ಒಳ್ಳೇ ಶರೀರಪುಷ್ಟಿಯೂ, ದೇಹಬಲವೂ ಉಳ್ಳವರಾಗಿಯೇ ಇರಬೇಕೆಂಬುದರಲ್ಲಿ ಸಂದೇಹವೇ ಇಲ್ಲ. ಏಕೆಂದರೆ—ಸ್ತ್ರೀ ಜಾತಿ ಸಂತಾನಸೃಷ್ಟಿಗೆ ತಾವು ಮಕ್ಕಳ ತಾಯಿಯರಾಗಬೇಕೆಂಬುದೇ ಮುಖ್ಯವಾದ ಧ್ಯೇಯವಾಗಿದೆ. ಆದರಲ್ಲಿ ಗರ್ಭಧಾರಣ, ಪ್ರಸವ, ಶಿಶುಗಳ ಪೋಷಣೆ ಮುಂತಾದ ಕಷ್ಟಗಳು ಅನೇಕವಾಗಿರುವುದರಿಂದ ಮಾತೃತ್ವ ದೆಶೆಯಲ್ಲಿರುವ ಅಂತಹ ಕಷ್ಟಗಳನ್ನೆಲ್ಲ ತಡೆದುಕೊಳ್ಳುವುದಕ್ಕೆ ತಕ್ಕ ದೇಹದಾರ್ಢ್ಯವನ್ನು ಅವರು ಮೊದಲಿಂದಲೇ ಸಂಗ್ರಹಿಸಿಟ್ಟುಕೊಳ್ಳುವುದು ಅವಶ್ಯವಾಗಿದೆ. ಇದನ್ನೆಲ್ಲ ಯೋಚಿಸದೆ ಸ್ತ್ರೀಯರು ತಮ್ಮ ಮೈ ತೆಳ್ಳಗಿರಬೇಕೆಂಬ ಆಸೆಗಾಗಿ, ಶರೀರದ ಬೆಳವಣಿಗೆಗೆ ಬೇಕಾದ ಆಹಾರಗಳನ್ನು ತಗ್ಗಿಸಿಬಿಡುವುದುಂಟು. ಇದರಿಂದ ಮುಂದೆ ಅವರ ದೇಹಕ್ಕೆ ತಕ್ಕಷ್ಟು ಕಾರ್ಯ ಸಾಮರ್ಥ್ಯವಿಲ್ಲದಂತಾಗುತ್ತದೆ. ಅಲ್ಲದೆ ಸ್ತ್ರೀಯರಿಗೆ ನಡುವು ಸಣ್ಣನಾಗಿರುವುದೂ, ಎದೆಯು ಉಬ್ಬಿರುವುದೂ ಅವರ ರೂಪಾತಿಶಯಕ್ಕೆ ಕಾರಣವೆಂದು ಹೇಳುವುದುಂಟು. ಹೀಗೆ ಶರೀರದಲ್ಲಿ ಕೆಲವು ಭಾಗಗಳು ಪುಷ್ಟಿಯಾಗಿಯೂ, ಮತ್ತೆ ಕೆಲವು ಭಾಗಗಳು ತೆಳ್ಳಗೂ ಇರುವಂತೆ ಮಾಡುವುದು ಆಹಾರನಿರ್ಣಯದಿಂದ ಸಾಧ್ಯವಾದ ಕೆಲಸವಲ್ಲ.

ನಾವು ಭುಜಿಸುವ ಆಹಾರದ ಗುಣವಾಗಲಿ, ದೋಷವಾಗಲಿ, ಶರೀರದ ಎಲ್ಲಾ ಭಾಗಗಳಿಗೂ ಹಂಚಲ್ಪಡುವುದು. ಒಂದುವೇಳೆ ಕೆಲಕೆಲವು ಆಹಾರಗಳಲ್ಲಿ ಒಂದೊಂದು ಭಾಗಕ್ಕೆ ಪುಷ್ಟಿಕಾರಕವಾದ ಗುಣವಿರಬಹುದಾದರೂ, ಆ ಆಹಾರಗಳಿಂದ ಒಳಗಿನ ಸೂಕ್ಷ್ಮ ಅವಯವಗಳು ಕೆಟ್ಟುಹೋಗುವುವು ಇಲ್ಲವೇ ಕಾರ್ಯಸಾಮರ್ಥ್ಯವಾದರೂ ತಗ್ಗುವುದು. ಉದಾಹರಣೆಗಾಗಿ, ನಮ್ಮ ದೇಹದಲ್ಲಿ ಅತ್ಯಂತ ಮುಖ್ಯವಾದ ಅವಯವವಾದ ಹೃದಯವನ್ನು ತೆಗೆದುಕೊಳ್ಳೋಣ! ಈ ಹೃದಯವೆಂಬುದು ಕ್ಷಣಮಾತ್ರವೂ ವಿರಾಮವಿಲ್ಲದೆ, ನಮ್ಮ ಜೀವಾವಧಿ ಕೆಲಸಮಾಡುತ್ತಿರಬೇಕಾದ ಬಹು ಸೂಕ್ಷ್ಮವಾದ ಅವಯವವಾಗಿದೆ. ಈ ಅವಯವದ ಪೋಷಣೆಗೆ ಬೇಕಾದ ಆಹಾರ ಪ್ರಮಾಣವನ್ನು ತಗ್ಗಿಸಿದರೆ, ಕ್ರಮಕ್ರಮವಾಗಿ ದೇಹದ ಎಲ್ಲಾ ಭಾಗಗಳೊಳಗಿನ ಸ್ನಾಯುಗಳ ಬಲವೆಲ್ಲ ತಗ್ಗುತ್ತ ಬರುವುದು. ಇದರ ಫಲಿತಾಂಶವನ್ನು ಪ್ರತಿದಿನವೂ ಸಾಮಾನ್ಯವಾಗಿ ಹೆಣ್ಣು ಹುಡುಗಿಯರು ಸ್ವಲ್ಪ ಹೆಚ್ಚು ಕೆಲಸಮಾಡಿದರೆ ಮೈ ನೋತುಹೋಗುವುದರಿಂದ ಕಾಣಬಹುದು. ಮೈ ನೋತುಹೋಗುವುದೊಂದೇ ಅಲ್ಲ. ಹೃದಯ ದುರ್ಬಲತೆಯಿಂದ ರಕ್ತಸಂಚಾರದ ವೇಗವು ತಗ್ಗುವುದು. ರಕ್ತಸಂಚಾರವು ಮಂದವಾದರೆ ಚರ್ಮದ ಆರೋಗ್ಯವು ಕೆಟ್ಟು, ಅದರ ಮೇಲೆ ಮುಖ್ಯವಾಗಿ ಸ್ತ್ರೀಯರಿಗೆ ಈ ಕಾಲದಲ್ಲಿ ಮುಖ್ಯ ಭೂಷಣವೆನಿಸಿಕೊಂಡ ಸಹಜವಾದ ದೇಹಲಾವಣ್ಯವೂ ಕೆಡುವುದು. ಇದನ್ನು ಸಂಪಾದಿಸುವುದಕ್ಕಾಗಿ ಅವರು ಕೃತ್ರಿಮಗಳಾದ ಬೇರೆ ಬೇರೆ ಸಂಸ್ಕಾರಗಳನ್ನು ಮಾಡಿಕೊಂಡ ಮಾತ್ರ ಅವರು ರೂಪವತಿಯರೆಂಬ ಗಣನೆಗೆ ಬರುವುದಿಲ್ಲ.

ಇದಲ್ಲದೆ ದೇಹಕ್ಕೆ ತಕ್ಕಷ್ಟು ಪುಷ್ಟಿಕರವಾದ ಆಹಾರವಿಲ್ಲದುದರಿಂದ ಬೇರೊಂದು ದೊಡ್ಡ ಅಪಾಯವುಂಟು. ಅಂತವರಿಗೆ ಶ್ವಾಸಕೋಶಗಳು ದುರ್ಬಲವಾಗಿ ಅಲ್ಲಿ ಶ್ವಾಸಕೋಶಗಳಿಗೆ ಸಂಬಂಧಪಟ್ಟ ಕಾಸ, ಕ್ಷಯ ಮುಂತಾದ ವ್ಯಾಧಿಗಳಿಗೆ ಕಾರಣವಾದ ಕ್ರಿಮಿಗಳು ಹೆಚ್ಚುವುವು. ಅಥವಾ ರಕ್ತನಾಳಗಳಲ್ಲಿ ವಿಷಪದಾರ್ಥವು ಸಂಗ್ರಹವಾಗಿ ಪ್ರಾಣಹೋಗುವುದಕ್ಕೂ ಕಾರಣವಾಗುವುದು.

ಮತ್ತು ಬಾಲಿಕೆಯರು ಮೈ ದಪ್ಪನಾಗದಿರುವುದಕ್ಕೆ ಆಹಾರಗಳನ್ನು ತಗ್ಗಿಸುವುದರ ಮೂಲಕವಾಗಿ ಶರೀರಶೋಷಣೆ ಮಾಡಬೇಕಾದ ಆವಶ್ಯಕತೆಯೇ ಇಲ್ಲ. ಆಹಾರ ವಿಷಯದಲ್ಲಿ ಸಂಸರ್ಗದ ದಾಕ್ಷಿಣ್ಯಕ್ಕೆ [illegible] ಮೇಲೆ ಕೆಲವು ಬಗೆ [illegible]ಗಳನ್ನು ಮಾಡಿಕೊಳ್ಳುವುದು [illegible] ಅವರು [illegible]ವಾದ ಮತ್ತು ಗಂಭೀರವಾದ ಶರೀರಾಕೃತಿಯನ್ನು ಪಡೆಯಲು ಅವಕಾಶವುಂಟು. ಆಹಾರಗಳ ಗುಣದೋಷಗಳನ್ನು ನಿರ್ಣಯಿಸಬಲ್ಲ ಒಳ್ಳೇ ವೈದ್ಯರನ್ನು ಕೇಳಿದರೆ ಅವರು ದೇಹದಲ್ಲಿ ಮಾಂಸವೃದ್ಧಿಗೆ ಬೇಕಾದ ಪ್ರೊಟೀನ ಗುಣವುಳ್ಳ ಆಹಾರಗಳನ್ನೂ, ಮೈಯಲ್ಲಿ ಕೊಬ್ಬನ್ನು [illegible] ಮತ್ತು ಕಾರ್ಬೋಹೈಡ್ರೇಟುಗಳ ಪದಾರ್ಥಗಳನ್ನೂ ತಿಳಿಸುವರು. ಆಗ ಮೈಯಲ್ಲಿ ಬೊಜ್ಜು ಬೆಳೆಯುವುದಕ್ಕೆ ಅವಕಾಶಕೊಡದೆ ಸರಿಯಾದ ದೇಹಪುಷ್ಟಿಯನ್ನು ಸಂಪಾದಿಸಬಹುದು. ಮುಖ್ಯವಾಗಿ ದೇಹಪ್ರಕೃತಿಗೆ ತಕ್ಕ ಆಹಾರಸೇವನೆಯೊಂದು, ಕ್ರಮವಾದ ವ್ಯಾಯಾಮವೊಂದು. ಇವೆರಡೇ ಸ್ತ್ರೀಯರಿಗೆ ಶರೀರದಾರ್ಢ್ಯದೊಡನೆ ಚೆಲುವಾದ ದೇಹವನ್ನೂ, ರೂಪಸಂಪತ್ತನ್ನೂ, ಲಾವಣ್ಯವನ್ನೂ ಹೆಚ್ಚಿಸಲು ಅನುಕೂಲವಾದ ಮಾರ್ಗಗಳಾಗಿವೆ.

ಎಳೆದಿನಗಳವರೆಗೆ ಒಳ್ಳೇ ಯೌವನಬಲವೂ, ಉತ್ಸಾಹವೂ ತಗ್ಗದಂತೆ ಆರೋಗ್ಯದೃಢಕಾಯರಾಗಿ ಜೀವನ ಸೌಖ್ಯವನ್ನು ಪಡೆಯಬೇಕೆಂಬ ಉದ್ದೇಶವುಳ್ಳವರೆಲ್ಲರೂ ಸಸ್ಯಗಳ ಬೆಳವಣಿಗೆಯ ವಿಚಾರವನ್ನು ಸ್ವಲ್ಪಮಟ್ಟಿಗೆ ತಿಳಿದಿರಬೇಕಾದುದವಶ್ಯವು. ಒಂದು ಹೂಗಿಡವನ್ನು ಒಳ್ಳೇ ಗಾಳಿ ಬೆಳಕುಗಳಿಗೆ ಅವಕಾಶವಿರುವ ಸಾರವತ್ತಾದ ಮಣ್ಣಿನಲ್ಲಿ ನೆಟ್ಟು ಅದಕ್ಕೆ ತಕ್ಕ ಗೊಬ್ಬರವನ್ನು ಹಾಕಿ ಪೋಷಣೆ ಮಾಡಿ ನೋಡಿರಿ! ಆ ಗಿಡವು ದೃಢವಾಗಿ ಬೆಳೆಯುವುದರೊಡನೆ ಅದರ ಹೂಗಳೂ ಅಂದವಾಗಿ ಒಳ್ಳೇ ಬಣ್ಣವುಳ್ಳವುಗಳಾಗುವುವು. ಅದೇ ಜಾತಿಯ ಗಿಡವನ್ನು ಅಸಂಬದ್ಧವಾದ ಯಾವುದೋ ಒಂದು ಕಡೆಯಲ್ಲಿ, ನಿಸ್ಸಾರವಾದ ಮಣ್ಣಿನಲ್ಲಿ ನಾಟಿ, ತಕ್ಕ ಗೊಬ್ಬರವನ್ನು ಹಾಕದಿದ್ದರೆ ಅದರಲ್ಲಿ ಬಿಡುವ ಹೂಗಳು ಚಿಕ್ಕವಾಗಿ, ಒಳ್ಳೇ ಬಣ್ಣವೂ, ವಾಸನೆಯೂ ಇಲ್ಲದೆ ನೋಡುವುದಕ್ಕೂ ಅಂದವಿಲ್ಲದಿರುವುದು. ಸಾಮಾನ್ಯವಾಗಿ ಈ ಕಾಲದಲ್ಲಿ ವಿದ್ಯಾವತಿಯರಾದ ಹುಡುಗಿಯರೆಲ್ಲರಿಗೂ ಇದು ತಿಳಿದ ವಿಷಯವೇ! ಆದರೇನು? ಅನೇಕರು ಈ ಕಾಲದ ಒಂದು ನಾಜೂಕಿಗೆ ಮರುಳಾಗಿ ಕ್ರಮವಾಗಿ ತಾವು ಸೇವಿಸಬೇಕಾದ ಪುಷ್ಟಿಜನಕ ಪದಾರ್ಥಗಳನ್ನು ತೆಗೆದುಕೊಳ್ಳದೆ ಒಳ್ಳೇ ಗಾಳಿಯ ರುಚಿ ವ್ಯಾಯಾಮಗಳಿಗೂ ಬಾರದೆ ದೇಹಶೋಷಣೆಮಾಡುವರು.

ಈ ಬಗೆಯ ನಾಜೂಕಿಗೆ ಆಸೆಪಟ್ಟು, ತಮ್ಮ ಮೈ ತೆಳ್ಳಗಿರಬೇಕೆಂಬುದಕ್ಕಾಗಿ ಆಹಾರಾದಿಗಳಲ್ಲಿ ಲೋಪವನ್ನುಂಟುಮಾಡಿಕೊಳ್ಳತಕ್ಕ ಹೆಂಗಸರು, ತಮಗೆ ಸ್ವಲ್ಪ ವಯಸ್ಸು ಕಳೆದ ಮೇಲೆ ಅದಕ್ಕಾಗಿ ಪಶ್ಚಾತ್ತಾಪ ಪಡಬೇಕಾಗುವುದೆಂಬುದರಲ್ಲಿ ಸಂದೇಹವಿಲ್ಲ. ಏಕೆಂದರೆ—ನಾವು ಇದಕ್ಕೆ ಮೊದಲೇ ಹೇಳಿರುವಂತೆ ಅಂಥವರು ಪ್ರಕೃತಿ ಧರ್ಮಕ್ಕೆ ಕೇವಲ ವಿರುದ್ಧವಾಗಿ ಹೋಗುವಂತಾಗುವುದರಿಂದ ಮುಂದೆ ಮುಂದೆ ಅವರು ದುರ್ಬಲರಾಗಿ ಅವರ ಮುಂದಿನ ಸಂತಾನವೂ ದುರ್ಬಲವಾಗಲು ಕಾರಣವಾಗುವುದು.

ಕೊನೆಯ ಮಾತೇನೆಂದರೆ—ದೇಹದಾರ್ಢ್ಯದೊಡನೆ ರೂಪ ಲಾವಣ್ಯಾದಿಗಳನ್ನು ಬಯಸತಕ್ಕ ಹೆಂಗಸರೊಡೆಯ್ಬಬ್ಬರೂ, ಶುದ್ಧವಾದ ಮತ್ತು ಸಾರವತ್ತಾದ ಆಹಾರಗಳನ್ನು ಕ್ರಮವಾಗಿ ಸೇವಿಸುತ್ತ, ಧಾರಾಳವಾದ ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕು. ಇದರಿಂದ ಅವರು ಆರೋಗ್ಯವಂತರಾಗಿ, ಅವರಿಗೆ ಹುಟ್ಟುವ ಮಕ್ಕಳೂ ಆರೋಗ್ಯದೃಢಕಾಯರಾಗಿರುವರು.

ಅ. ಚ

---

## ಟಪ್ಪಾಲು ಮೂಲಕ ಹಣ ಸಾಲವಾಗಿ ಸಿಕ್ಕುತ್ತೆ.

ಬಡ್ಡಿಯ ದರ ಅಗ್ಗ. ಕಂತುಗಳು ಸುಲಭ. ಹೆಚ್ಚು ವಿಷಯಕ್ಕೆ ಒಂದಾಣೆ ಸ್ಟಾಂಪಿಟ್ಟು ಬರೆಯಿರಿ

ವಿಳಾಸ:—ಮಾರುತಿ ಬ್ಯಾಂಕರ್,

3—3 "ದತ್ತವಿಲಾಸ" ಬಸವನಗುಡಿ, ಬೆಂಗಳೂರು

---

## ಪಿಗ್ಮಿ ಗ್ರಾಮೋಫೋನ್

ಎಂಬ ಹಾಡುಗಾರಿಕೆಯ ಯಂತ್ರವು.

ಮೊದಲಿನ ಕ್ರಯ 35 ರೂ. ಈಗಿನ ಕ್ರಯ 8—8—0.

ಈ ಯಂತ್ರವು ವಿಲಾಯತಿಯಲ್ಲಿ ತಯಾರಾದದ್ದು. ಇಂಗ್ಲೀಷು, ಕನ್ನಡ, ಹಿಂದೂಸ್ಥಾನಿ, ಇಂಗ್ಲೀಷು ವಾದ್ಯ ಮುಂತಾದ ಪದಗಳನ್ನು ಹೇಳುವುದು. ಲಗ್ನದ ಮನೆ, ನಾಟಕಶಾಲೆ ಮುಂತಾದ ಒಸಕೂಡುವ ಸ್ಥಳದಲ್ಲಿ ಉಪಯೋಗಿಸಲು ಬಹು ಚೆನ್ನಾಗಿದೆ. ನೋಟಕ್ಕೆ ಲಕ್ಷಣವಾಗಿರುವಂತೆಯೂ, ಕ್ರಯದಲ್ಲಿ ಸುಲಭವಾಗಿಯೂ ಇರುವಂತೆ ಬಹು ಬಲಿಷ್ಠವಾದ ಸಾಮಾನುಗಳಿಂದ ಈ ಯಂತ್ರವನ್ನು ತಯಾರಿಸಿದೆ. ಸುಂದರವಾದ ಮೆಟಲ್ ಹಾರನ್ ಎಂಬ ಪದ ಹೇಳುವ ಕೊಳವೆ ಇದೆ. ನಿಧಾನವಾಗಿಯೂ, ಜಾಗ್ರತೆಯಾಗಿಯೂ ಪದ ಹೇಳಿಸಲು ಕೀಲು ಇದೆ. ಈ ಯಂತ್ರವನ್ನು ಎಲ್ಲಿ ಬೇಕಾದರೂ ಕೈಯಲ್ಲಿ ಹಿಡಿದುಕೊಂಡು ಹೋಗಲು ಅನುಕೂಲವಾದಂಥಾ ಸುಂದರವಾದ ಕೈಪೆಟ್ಟಿಯಲ್ಲಿಟ್ಟಿದೆ

ಡಬ್ಬಲ್ ಸೈಡ್ ಎರಡು ಕಡೆಯೂ ಪದ ಇರುವ

1 ರೆಕಾರ್ಡ್ ಸಹಿತ ಕ್ರಯ ರೂ. 8—8—0.

ಹೆಚ್ಚಿಗೆ ರೆಕಾರ್ಡ್ ಬೇಕಾದರೆ, ರೆಕಾರ್ಡ್ ,, ಪ್ರತ್ಯೇಕ 1ಕ್ಕೆ 2—0—0

ವಿಳಾಸ—ಲೀಗಲ್ ಟ್ರೇಡಿಂಗ್ ಕಂಪೆನಿ,

52—28 ಪೋ. ಬಾ 213 ಮದರಾಸು.

---

# 52 ವರುಷಗಳ ಅನುಭವಸಿದ್ಧ ಔಷಧಗಳು.

### ೧. ಮಹಾಮದನ ಕಾಮೇಶ್ವರೀ ಲೇಹ.

ಅಜೀರ್ಣ, ಎದೆನೋವು, ಸೊಂಟನೋವು, ಮಲಬದ್ಧತೆ, ನಿದ್ರೆಯಿಲ್ಲದೆ ಇರುವಿಕೆ ಮುಂತಾದವುಗಳನ್ನು ಗುಣಪಡಿಸಿ ರತಿ ಸುಖಕ್ಕೆ ಶಕ್ತಿಯನ್ನುಂಟುಮಾಡುವುದು.

ಡಬ್ಬಿ 1 ಕ್ಕೆ ರೂ. 2—0—0 3 ಡಬ್ಬಿಗಳಿಗೆ ರೂ. 5—12—0.

### ೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರು ಕ್ರಮತಪ್ಪಿ ಮುಟ್ಟಾಗುವುದು, ರಜೋಸ್ರಾವದಲ್ಲಿ ಅತ್ಯಲ್ಪವಾಗಲೀ, ಅತಿರೇಕವಾಗಲಿ ರಕ್ತ ಸುರಿಯೋಣ, ಹೊಟ್ಟೆನೋವು, ಸೊಂಟನೋವು, ಬಿಳಿಜ್ವರ ನಾನಾವರ್ಣಗಳ ಪ್ರದರಗಳನ್ನು ಅತಿ ಶೀಘ್ರದಲ್ಲಿ ಗುಣಮಾಡಿ ಗರ್ಭಾಶಯ ಸಂಬಂಧ ರೋಗಗಳನ್ನು ಗುಣಪಡಿಸಿ, ಸಂತತಿಗೆ ಅವಾಯಕರವಾದ ದೋಷಗಳನ್ನು ಹೋಗಲಾಡಿಸುವುದು. 1 ಬಾಟ್ಲಿ ಮತ್ತು 1 ಡಬ್ಬಿ ಮಾತ್ರೆಗೆ 2—4—0.

### ೩. ಮೇಹಕುಠಾರ.

ಇದು ಮೂತ್ರಸ್ಥಾನದಿಂದ ಕೆಂಪು, ಬಿಳುಪು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ, ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ 2—8—0. 3 ಕ್ಕೆ 7—0—0.

### ೪. ಮಲೇರಿಯಾ (ಛಳಿಜ್ವರ) ಪಿಲ್ಸ್.

1. 2 3. ಅಥವಾ 4 ದಿವಸಕ್ಕೊಮ್ಮೆ ಬರುವ ಜ್ವರ, ಮಲೆಜ್ವರ ಇವುಗಳ ಮೇಲೆ ಮಾತ್ರೆ. ಬಾಟ್ಲಿ 1 ರ 0—12—0.

### ೫. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ.

ಬಾಟ್ಲಿ 1 ಕ್ಕೆ 0—10—0 3 ಕ್ಕೆ 1—12—0

### ೬. ಇಛ್ಛಾಭೇದಿ.

ಅಪಾಯವಿಲ್ಲದ ಸುಖವಿರೇಚಕ.

ಬಾಟ್ಲಿ 1 ಕ್ಕೆ 0—12—0. 3 ಕ್ಕೆ 2—0—0

**೭. ದಂತಕಾಂತಿ ಚೂರ್ಣ.** ಡಬ್ಬಿ 1 ಕ್ಕೆ 3 ಆಣೆ

**೮. ಗಜಕರ್ಣ ಮುಲಾಮ್.** ಡಬ್ಬಿ 1ಕ್ಕೆ 6 ಆಣೆ

N. B. ಇವುಗಳಲ್ಲದೆ ಬೇರೆ ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತೆ.

**ಎನ್. ಗಣಪಯ್ಯ ಅಂಡ್ ಸನ್ಸ್,**

ಆಯುರ್ವೇದೀಕ್ ಫಿಜಿಸಿಯನ್ಸ್,

52—8 ಮಂಗಳೂರು, ದ. ಕನ್ನಡ.

## ಚಿಲಿಯನ್ ನೈಟ್ರೇಟ್ ಆಫ್ ಸೋಡಾ

ಎಂಬುದೇ

ಎಲ್ಲಾ ಬೆಳೆಗಳಿಗೂ ಯೋಗ್ಯವಾದ ಸಾರಜನಕ ಗೊಬ್ಬರವು, ಪ್ರಪಂಚದಲ್ಲೆಲ್ಲಾ ಇದೇ ಸಸ್ಯಾ... ಯದಾಗಿ ಬೆಳೆಸುವ ಮತ್ತು ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಫಸಲನ್ನು ಕೊಡುವ ಸಾಧನವೆಂದು ಖ್ಯಾತಿಯ...

ಚಿಲಿಯನ್ ನೈಟ್ರೇಟ್ ಒಫ್ ಸೋಡಾವು ಗಿಡಗಳ ಬೇರುಗಳನ್ನು ಹೆಚ್ಚು ಆಳದ ವರೆಗೂ ಪಸರಿಸು... ರಿಂದ ಮಳೆ ಕಡಿಮೆಯಾದಾಗ್ಯೂ ಗಿಡಗಳಿಗೆ ಹೆಚ್ಚಿನ ತೊಂದರೆಯಾಗಲಾರದು.

ಚಿಲಿಯನ್ ನೈಟ್ರೇಟ್ ಒಫ್ ಸೋಡಾ ಉಪಯೋಗದಿಂದ ಗಿಡಗಳು ಚೆನ್ನಾಗಿ ಬಲಿತು, ಹುಳ ವಗೈ... ಫಕ್ಕನೆ ಎಡೆಕೊಡಲಾರವು. ಇದು ಹೊರತು ಚಿಲಿಯನ್ ನೈಟ್ರೇಟ್ ಒಫ್ ಸೋಡಾದಲ್ಲಿ ಬೆಳೆಗಳನ್ನು ವೃ... ಗೊಳಿಸುವ ಇನ್ನೂ ಅನೇಕ ಗುಣಗಳಿರುತ್ತವೆ. ಚಿಲಿಯನ್ ನೈಟ್ರೇಟ್ ಒಫ್ ಸೋಡಾವು ಬೇರೆ ಸಾರಜನ... ಮಣ್ಣಿನಲ್ಲಿ ಏಸಿಡ್ (acid) ಉಂಟಾಗುವಂತೆ ಮಾಡುವದಾಗಲೀ ಮಣ್ಣಿನ ಶಕ್ತಿಯನ್ನು ಯಾವ ವಿಧದಿಂದ... ದಾಗಲೀ ಇಲ್ಲ.

ಚಿಲಿಯನ್ ನೈಟ್ರೇಟ್ ಒಫ್ ಸೋಡಾವನ್ನು ರಾಣಿಪೇಟೆಯಲ್ಲಿರುವ ಮೆಸರ್ಸ್ 'ಪೆರಿ' ಕಂಪೆನಿಯವ... ರುವ ಯಾವ ರೈಲ್ವೇ ಸ್ಟೇಶನಿಗಾದರೂ 80 ರಾತ್ತಿನ ಚೀಲ 1ರ ರೂಪಾಯಿ 6—4—0ರಂತೆ ಪದಗಿಸಿ ಕೊಡು... ಕೇರಿ ಮತ್ತು ವೀರರಾಜಪೇಟೆಯಲ್ಲಿರತಕ್ಕ ಅವರ ಡಿಪೋಗಳಲ್ಲಿ ದರ ರೂ. 6—15—0ರಂತೆ ದೊರೆಯುತ್ತದೆ

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ವಿಷಯ ದರ್ಮಾರ್ಥವಾಗಿ ಹಂಚುವ ಪತ್ರಿಕೆಗಳು ವಗೈರೆಗಳಿಗೆ ... ಸದಾಶರಿಗೆ ಬರೆಯಬಹುದು

(1) ಚಿಲಿಯನ್ ನೈಟ್ರೇಟ್ ಕಮಿಟಿ, ಇಂಡಿಯನ್ ಡೆಲಿಗೇಶನ್, ಪೋ. ಬಾ ನಂ 469, ಕಲ್ಕತ್ತಾ.

(2) ಮಿಸ್ಟರ್ ಯ.೦. ಯಾ ಬೆ... ಚಿಲಿಯನ್ ನೈಟ್ರೇಟ್ ...

4

# Xmas & New Year Presents!

### Toys for Children!

A set comprising of tiny, bright and beautiful tumblers, pots, spoons, etc m... brass and bell metal, are quite suitable for the amusement and play of children

Small set 3? articles Rs 2—8—0. Medium set 32 articles Rs 3—8—0

Big set of 32 articles Rs. 4—8—0.

Securely packed in neat card board boxes Postage extra.

Silk Sarees, Jackets, Handkerchieves, Embroidary Hand Bags & Money Purses i Sp...

*Send your orders to:-*

**BHARADWAJ & CO.,**

**BROCADE, EMBROIDARY & SILK MANUFACTURERS,**

52—18 **Benares Ci...**

## ಕೋವಿಗಳು, ಮತ್ತು ಅವುಗಳ ಸಾಹಿತ್ಯಗಳು.



ಇಂಗ್ಲೆಂಡ್ ಕಂಪೆನಿಯ "ನಾಕ್ ಎ..." ಎಂಬ 12 ನೇ ನಂಬರಿನ ಒಂಟಿ ಕೊಳದ ಕೋ...

ಅಮೇರಿಕದ ಸ್ಟೀವನ್ಸ್ ಕಂಪೆನಿಯ 12 ನೇ ... ಬರಿನ ಒಂಟಿ ಕೊಳದ ತೋಟದ ಕೋವಿಗೆ

12 ನೇ ನಂಬರಿನ ಒಂಟಿ ಕೊಳದ ಅತಿ ಸು... ಕ್ರಯದ ತೋಟದ ಕೋವಿಗೆ

12ನೇ ನಂಬರಿನ ಜೋಡು ಕೊಳದ 'ಇಂಗ್ಲಿ... ತೋಟದ ಕೋವಿಗೆ

,, ,,

'ಬೆಲ್ಜಿಯನ್' ತೋಟದ ಕೋವಿಗೆ

ಹೊಗೇ ರಹಿತವಾದ 12 ನಂಬರಿನ ಇಂಗ್ಲಿಷ್ "ಎಲೀ" ಚಿಲ್ಲು ತುಂಬಿದ ತೋಟಗಳು 100 ಕ್ಕೆ ರೂ

ಅಮೇರಿಕನ್ ವೇಸ್ಟರನ್ ,, ,, ,, 100 ಕ್ಕೆ ರೂ

ಬೆಲ್ಜಿಯನ್ 100 ಕ್ಕೆ ರೂ

ಎಲ್ಲಾ ತರದ ಕೋವಿಗಳು ರೈಫಲ್‌ಗಳು, ರಿವಾಲ್ವರ್‌ಗಳು, ಪಿಸ್ತೂಲ್‌ಗಳು ಮತ್ತು ಚಿಲ್ಲು ಮದ್ದು... ಬೇಟೆಗಾರರಿಗೆ ಬೇಕಾಗಿರುವ ಎಲ್ಲಾ ಸಾಹಿತ್ಯಗಳು ಸುಲಭ ದರದಲ್ಲಿ ದೊರಕುತ್ತೆ.

ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಂಪೆನಿಯ ಕೆಟಲಾಗೊಂದು ಮುಫತ್ತಾಗಿ ರವಾನಿಸಲ್ಪಡುವುದು

Abdoolally Noorbhoy
Arms & Ammunition Dealers
248—250 Abdul Rehman Stre...
Bombay 3 Telegrams "Guid..."

7

ದಯವಿಟ್ಟು ನಮಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿ...

## ಟಿ. ರಾಮರಾವ್,

**ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿ...**



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮೋಫೋನ್‌ಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಬೆಳ್ಳಿಯ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಒಟ್ಟಾಗಿಯೂ, ಚಿಲ್ಲರೆಯಾಗಿಯೂ ಮಾರಲ್ಪಡುತ್ತವೆ. ನಮ್ಮಲ್ಲಿ ೫ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ "ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿ... ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗ... ಮುಖೇನ ಬರೆದು ಈಗಲೇ ತಿಳಿಯಬಹುದು.



24—4

# [illegible]ರ್ತಮಾನ ಸಂಗ್ರಹ.

## ಒಳದೇಶ.

[illegible] ಸೆಂಟ್ರಲ್ ಹೈಸ್ಕೂಲ್ ಗೆ ತಾ 15ರಿಂದ ಕ್ರಿ[illegible]ಕ್ಕಾಗಿ ಮುಚ್ಚಲ್ಪಟ್ಟು ಜನವರಿ ತಾ 7 ರಲ್ಲಿ [illegible].

[illegible] ಹುಡುಗಿಯರ ಕಾನ್ವೆಂಟ್ ಸ್ಕೂಲ್ ಕ್ರಿಸ್[illegible] ಬೇಸಿಗೆಯ ರಜಕ್ಕಾಗಿ ಮುಚ್ಚಲ್ಪಟ್ಟು ಜನವರಿ [illegible] ತೆರೆಯಲ್ಪಡುವುದು

[illegible] ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂ[illegible]—1—1929ರಲ್ಲು ಬೆಳಿಗ್ಗೆ 9 ಗಂಟೆಗೆ ಒವಿಡ [illegible]ದ ಹಾಲಿನಲ್ಲಿ ನಡೆಯಲಿಕ್ಕಿದೆ

[illegible]ಯು ಪಿ ಎ ಪೈ ಬ್ರದರ್ಸ್ ರವರಿಂದ ರವಾನಿಸ[illegible] ಡೈರಿಯ ಪ್ರತಿಯೊಂದು ನಮ್ಮ ಕೈಸೇರಿದೆ [illegible] ಇನ್ನೊಂದು ಕಡೆ ತಪಶೀಲಾಗಿ ಪ್ರಕಟಿಸಲಾ[illegible]ಗಿದೆ.

[illegible] ಜಮೀನ್ದಾರರ ಸಂಘದ ಎಗ್ಸಿಕ್ಯೂಟಿವ್ ಕ[illegible] ಜನವರಿ ತಾ 19ನೇ ಶನಿವಾರ ದಿನ ಹಗ[illegible] ವೀರಾಜಪೇಟೆ ಪಿನ್ಡರ್ ಸ್ಕ್ವೇರ್ ಹಾಲಿನ[illegible]ಲ್ಲಿ ಸ[illegible]

[illegible]ಟು ಮತ್ತು ಪೊನ್ನಂಗೇರಿ ಗ್ರಾಮಸ್ಥರ ದನ[illegible]ಗಳಿಗೆ [illegible]ತಿಕೊಡುತ್ತಿದ್ದ ಒಂದು ದೊಡ್ಡ ಹುಲಿಯನ್ನು [illegible]ನ ದೊಡ್ಡಯ್ಯನವರು ತಾ. 20 ರಲ್ಲಿ ಗುಂಡು ಹೊಡೆ[illegible]ಂದು ಅದರ ಮೃದುವೆಯು ನಾಡುಮುಂದಿಲ್ಲಿ ಬಹು [illegible]ದ ಸಡೆಸಿ[illegible]ಗಿ ವರ್ತಮಾನ

[illegible]ರ ಆಕಾಶದಲ್ಲಿ ಕಂಡ ತಂದಿಕೆಯಿಂದ ಮಳೆ [illegible] ಸಂಭವವಿದೆ ತಾ 20 ರಲ್ಲು ಸ್ವಲ್ಪ ಸ್ವಲ್ಪ [illegible] ದೇಶದಲ್ಲಿ ಮುಕ್ತಾಲ ಮಳೆ ಬರದ ಕಾರಣ [illegible]ದಿರುವುದರಿಂದ ಈಗ ಮಳೆ ಬರುವ ದೃಶ್ಯದಿಂದ [illegible] ಕಷ್ಟವೇ ಈ ವರ್ಷವೂ ಉಂಟಾಗಬಹುದೆಂಬ [illegible]ಪಡುತ್ತೇವೆ

[illegible] ಫೆಬ್ರುವರಿ ಅಥವ ಮಾರ್ಚಿ ತಿಂಗಳಲ್ಲಿ ನಡಿಸಬೇ[illegible]ಕೊಡಗು ಪ್ರಾಂತೀಯ ಸಹಕಾರ ಸಮ್ಮೇಳ[illegible] (Co-operative Conference) ದ ಉದ್ದಿಷ್ಟ ಸ್ವಾಗತಸ ಂಘ [illegible]ಪಡಿಸುವ ಕಾರಣ ಜನವರಿ ತಾ 1ರಲ್ಲಿ ವೀ[illegible] ಎಜೇರಿ ಶಿಂಗಾರಗದ ಮೈದಾನದ ಬ[illegible]ಂದು ಮೀಟಿಂಗು ನಡಿಯುತ್ತೆ. ನಾಡಿನ ಎ[illegible] ಎಲ್ಲಾ ಸಹಕಾರಿ ಸಂಘಗಳೂ ಒಬ್ಬೊಬ್ಬ ಸ[illegible] ಕಳುಹಬೇಕಾಗಿ ತಿಳಿಸಲಾಗಿದೆ

[illegible] ಎಲ್ಲಾ ಲೋಕಲ್ ಫಂಡ್ ರಸ್ತೆಗಳನ್ನು ಡಿ ವಿ [illegible]ಟರು ಆಯಾಯ ತಾಲೂಕಿನ ಡಿ ಬಿ ಮೆಂಬ[illegible]ಕೊಂಡು ಇನ್ಸ್‌ಪೆಕ್ಷನ್ ಮಾಡುವುದರಿಂದ ರ[illegible] ಏನಾದರೂ ಕೆಲಸ ಮಾಡಿಸಲು ಅವಶ್ಯವಿದ್ದ[illegible] ವಿಷಯದಲ್ಲಿ ಚರ್ಚಿಸಿ ಅಂದಾಜು ಕೊರತೆಗಳನ್ನು [illegible] ಉದ್ದೇಶ್ಯ ದೇಶದವರೆಲ್ಲರೂ ಆವರು ಒರು[illegible] ಟಿ ಮಾಡಿ ಇನ್ನೊಂದು ಮೀಟಿಂಗಿನಲ್ಲಿ [illegible] ಇಡುವಂತೆ ಪ್ರಯತ್ನಿಸಬೇಕಾಗಿ ಒಂದು

[illegible]ಗು [illegible] ಇಲಾಖಾ ಉದ್ಯೋಗಸ್ಥರ ಸಹಕಾರ [illegible] ವರ್ಷದ ಸಭೆಯೊಂದು ಜನವರಿ ತಾ 11 ನೇ [illegible] 8½ ಗಂಟೆಗೆ ವೀರಾಜಪೇಟೆ ಪೋಂಡ [illegible] ಹಾಲಿನ[illegible] ಸಂಘದಲ್ಲಿ ಮರಣನಿಧಿಯನ್ನು ಏ[illegible] ಪ್ರಾಂತ್ಯದ ಕೋಆಪರೇಟಿವ್ ಕಾನ್‌ಫರೆನ್ಸ್[illegible]ನ್ನು ಈ ಸಭೆಯ ಸುವ ವಿಷಯಗಳನ್ನು ತೀರ್ಮಾ[illegible] ಸಡೆಯುವುದರಿಂದ ಮೆಂಬರುಗಳೆಲ್ಲರೂ ದ[illegible]ಗಿ ಸದರಿ ಸಂಘದ ಗೌರವ ಕಾರ್ಯದರ್ಶಿ[illegible]ದ್ದಾರೆ.

[illegible] ಪೋಟಾರು ಸರ್ವಿಸಿನ ಪ್ರೊಪ್ರೈಟರುಗಳಲ್ಲಿ [illegible]ಡಂಡ ಕರುಂಬಯ್ಯನವರು ತಮ್ಮ ಕೆಂ[illegible]ಂದು ಈ ಸರ್ವಿಸಿನಲ್ಲಿರಕ್ಕೆ ತಮ್ಮ [illegible]ಕೊಂಡದ್ದರಿಂದ ಮ. ಕರಂಬಯ್ಯ [illegible] ಕೆಲವರು ವೀರಾಜಪೇಟೆ—ಸಿದ್ದಾಪುರ[illegible] ಆಗಲಿ ಇಲ್ಲವೇ ವೀರಾಜಪೇಟೆ—[illegible] ಲೈಸಿಗಾಗಿಯಾಗಲಿ ಹೇಳಿಂದು ಬ[illegible] ಕಾರವರ ಅನುಮತಿಯನ್ನು ಪಡ[illegible]ರೆಂದು ವರ್ತಮಾನ

[illegible] ಮೈಸೂರ್ ಪ್ರೆಸಿಡೆಂಟರು ಮತ್ತು ಶಾ[illegible]ಗಳವರು ವಿದ್ಯಾ ಪ್ರಚಾರದ ಕಡ[illegible]ಎಲ್ಲಾ ಶಾಲೆಯ ಶಾಲೆಗಳಿಗೂ [illegible] ಡಿ ಬಿ ಮೆಂಬರುಗಳನ್ನು ಮ[illegible] ತಿದಾರರನ್ನು ಜೊತೆಸೇರಿಸಿ [illegible]ದ ಸಂಗತಿಗಳನ್ನು ಚರ್ಚಿಸಿ ಸಂ[illegible]ಲ್ಲಿಂದ ಉದ್ಯೋಗಸ್ಥರು ಕ್ರ[illegible]ಗಿ ತೊಂದರೆ ತೆಗೆದುಕೊಂಡ[illegible] ದ್ದಾರೆ.

[illegible]ಗಳತ್ತ್ ನಾಡು ಸಹಕಾರ ಸಂಘದವರು ತಾ. 15 ರಲ್ಲಿ ಮತ್ತು ಬೆಳ್ಳೂರು ಸಹಕಾರ ಸಂಘದವರು ತಾ 18 ರಲ್ಲಿ ಕಮಿಟಿ ಮೀಟಿಂಗು ನಡೆಸಿ, ಸಂಘಗಳ ಅಧ್ಯಕ್ಷರಾದ ಮಿ ಕೆ ಎಸ್ ಸಿ ಬಿ ಮುತ್ತಣ್ಣ ಧರ್ಮಪತ್ನಿಯವರು ಅಕಾಲ ಮರಣ ಹೊಂದಿದಕ್ಕೆ ಅವರಿಗೂ ಮತ್ತು ಅವರ ಕುಟುಂಬಕ್ಕೂ ಉಂಟಾಗಿರುವ ವಿಚಾರದಿಂದ ದುಃಖಕ್ಕೆ ತಾವು ಸಹಭಾಗಿಗಳಾಗಿದ್ದೇವೆಂತಲೂ, ಸ್ವರ್ಗಸ್ಥರಾದ ಅವರ ಪತ್ನಿಯವರ ಆತ್ಮಕ್ಕೆ ಮಿ. ಮುತ್ತಣ್ಣಯವರ ಮತ್ತು ಅವರ ಕುಟುಂಬದವರ ದುಃಖಕ್ಕೂ ಸಹ ಪರಮಾತ್ಮನು ಶಾಂತಿಯನ್ನು ಕೊಡಲೆಂದೂ ರಾವು ಬೇಡುತ್ತಿರುವುದಾಗಿ ಮೇಲ್ಕಂಡ ಸಂಘಗಳ ಸೆಕ್ರೆಟರಿಗಳು ತಿಳಿಸಿರುತ್ತಾರೆ

## ಹಿಂದೂದೇಶ.

ನೆಹರು ವರದಿಯಲ್ಲಿ ಡೊಮಿನಿಯನ್ ಸ್ಟೇಟಸ್ ತಮ್ಮ ಧ್ಯೇಯವಾಗಿರಬೇಕೆಂಬುದನ್ನು ರಾಷ್ಟ್ರೀಯ ಪರಿಷತ್ತು ಅಂಗೀಕರಿಸಿದೆ

ಬರುವ ವರ್ಷ ರಾಷ್ಟ್ರೀಯ ಮಹಾಸಭೆಯನ್ನು ಲಾಹೋರಿನಲ್ಲಿ ಜರಗಿಸುವಂತೆ ಕೇಳಿಕೊಳ್ಳಬೇಕೆಂತ ಅಲ್ಲಿಯ ರಾಷ್ಟ್ರೀಯ ಕಮಿಟಿಯವರು ನಿಶ್ಚಯಿಸಿರುತ್ತಾರೆ

ಒಂಗಾಳದ ಮುಸಲ್ಮಾನರ ಸರ್ವ ಪಕ್ಷಗಳ ಪರಿಷತ್ತಿನ ಅಧ್ಯಕ್ಷರಾದ ಸರ್ ಅಬ್ದುರ್ ರಹೀಮರವರು ತಮ್ಮ ಭಾಷಣದಲ್ಲಿ ನಹರು ವರದಿಯ ತತ್ವಗಳಿಗೆ ಸಂಪೂರ್ಣ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಂಡಿರುವರು

ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರಾದ ಪಂಡಿತ ಮೋತಿಲಾಲ್ ನೆಹರೂರವರು ತಾರೀಕು 21ರಲ್ಲಿ ಕಲ್ಕತ್ತೆಗೆ ಹೋದಾಗ ಅವರನ್ನು 34 ಬಿಳಿ ಕುದುರೆಗಳಿಂದ ಎಳೆಯಲ್ಪಟ್ಟ ಬೆಳ್ಳಿಯ ಗಾಡಿಯಲ್ಲಿ ಅಲ್ಲಿಯ ಜನರು ಅತಿ ವೈಭವದಿಂದ ಮೆರವಣಿಗೆ ನಡಿಸಿದರು ಅವರನ್ನು ಮಂದಿರ ಪ್ರದಕ್ಷಿಣೆ ಸೂಚಿಸಿ ಒಂದು ಗಂಟೆ ಗಳು ಮಾಡಿಸಲ್ಪಟ್ಟು ಮೆರವಣಿಗೆಯು ಪ್ರಿಯಂವದ ಮಿಸ್ ಸಿ ಬೋಸ್ ರವರಿಂದ ನಡೆಸಲ್ಪಟ್ಟಿತು ಇಂತಹ ವೈಭವವು ಚಕ್ರವರ್ತಿಗಳಿಗೂ ಸಹ ಸಿಕ್ಕಲಾರದು.

ಸರ್ವಪಕ್ಷದ ರಾಷ್ಟ್ರೀಯ ಸಮ್ಮೇಳನವು ತಾರೀಕು 22 ನೇ ಶನಿವಾರ ದಿನ ಕಲ್ಕತ್ತೆಯಲ್ಲಿ ಡಾಕ್ಟರ್ ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ಸೇರಿತು ಅಲ್ಲಿ ದೇಶದ ಎಲ್ಲ ಪಕ್ಷಗಳ ಮತ್ತು ಸಮಾಜಗಳ ಮುಂದಾಳುಗಳು ಹಾಜರಿದ್ದರು ಡಾ. ಅನ್ಸಾರಿಯವರು ಲಾಲಾ ಲಜಪತರಾಯರ ಮರಣದಿಂದ ದೇಶಕ್ಕುಂಟಾದ ನಷ್ಟವನ್ನೂ ಮತ್ತು ಸರ್ವಪಕ್ಷಗಳ ಸಮಿತಿ ಅವರ ಅಮೂಲ್ಯ ಸಹಾಯವನ್ನು ತಪ್ಪಿಹೋದದ್ದನ್ನೂ ಸೂಚಿಸಿ, ರಾಷ್ಟ್ರೀಯದ ಹಾಗೂ ಸ್ವದೇಶೀಯ ಶಾಸನದಲ್ಲಿ ತನ್ನ ಜೀವನ್ನ ಹಿಂದ ಆ ದೀರ ಮಹಾತ್ಮರು ಮಾಡಿದ ಕೆಲಸವು ಫಲಿಸುವಂತೆ ಮಾಡಬೇಕಾದರೆ ಅಂಥಾ ದಿನವು ಸಮೀಪವೆಂದು ಆನುಮಾನ ಇಲ್ಲದೇ ಅಲ್ಲಿ ಆ ಕಲಹವನ್ನು ಪ್ರೋತ್ಸಹಿಸಬೇಕೆಂದೂ ಅದಕ್ಕಾಗಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕೆಂದೂ ಉತ್ಸಾಹದಿಂದ ಹೇಳಿದರು.

## ವಿದೇಶ.

ಜಾರ್ಜ್ ಚಕ್ರವರ್ತಿಯವರ ಆರೋಗ್ಯ ಸ್ಥಿತಿಯು ನಿಧಾನವಾಗಿ ವೃದ್ಧಿಯಾಗುತ್ತಿದ ಸಕ್ಕದಲ್ಲೇ ಸಂಪೂರ್ಣವಾಗಿ ವಾಸಿ ಹೊಂದುವರೆಂದು ಡಾಕ್ಟರು ಅಭಿಪ್ರಾಯ ಪಡುತ್ತಾರೆ

ಅಫ್ಘಾನಿಸ್ತಾನದಲ್ಲಿ ವಿಪ್ಲವಕಾರಿಗಳ ಗಲಭೆಯು ಬಿರುಸಾಗಿ ನಡೆಯುತ್ತಿದೆ ಅವರ ಮುಖ್ಯಸ್ಥರನ್ನು ಕಾಬೂಲಿನ ಎದುರಿನ ಕೋಟೆಗಳನ್ನು ವಶಪಡಿಸಿಕೊಂಡಿರುವರು.

ತುರ್ಕಿಸ್ತಾನದ ಸರಕಾರಕ್ಕೆ ವಿರೋಧವಾಗಿ ಅಲ್ಲಿಯ ಕೆಲವು ಜನರು ಸೇರಿದ ಒಂದು ಕೂಟವು ಸಂಚು ನಡಿಸುತ್ತಿದೆ. ಅವರಲ್ಲಿ ಕೆಲರನ್ನು ಬಂಧಿಸಲ್ಪಟ್ಟಿರುವರು. ಅವರ ಪ್ರಕೃತಿ ನಾಯಕರು ಮುಸ್ತಫ ಪಾಷರವರು. ಇವರು ಮುಸ್ತಫ ಕೇಮಲ್ ರವರನ್ನು ಕೊಲ್ಲಲು ಯತ್ನಿಸುತ್ತಿರುತ್ತಿದ್ದರೆಂದು ನಂಬುತ್ತಾರೆ

ಜರ್ಮನಿಯಲ್ಲಿ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರನು ತನ್ನ ಮಗನು ಮನ ಸಗ್ಗದ ಶಕ್ತಿಯನ್ನ ಮೇಲೆ ಕೈಗಳಿಗೆ ಸಂಕೋಲೆ ಹಾಕಿ ಎಳೆದು ಹೋದನು ಆಗ ಮಗನು ತಂದೆಗೆ ಏನು ಹೇಳಿದನು, ಇನ್ಸ್‌ಪೆಕ್ಟರನು ಅವನು ಹೇತುಕನೆಂದು ಅವನನ್ನು ದಿವಾಳ್ತನಿಂದ ಗಂಡು ಹೊಡೆದನು. ಹುಡುಗನು ಗಾಯದಿಂದ ಸಾಯುತ್ತಿರುವನೆಂದು ಭಾವಿಸುತ್ತಾರೆ

ಪಾಶ್ಚಾತ್ಯ ಶಾಸ್ತ್ರಜ್ಞರು ದೇವರು ಅನುಗ್ರಹಿಸಿರುವ ಬುದ್ಧಿ ಕೌಶಲ್ಯವನ್ನೆಲ್ಲಾ ಸಮ್ಮಿಳಿಯೋಗವಡಿಸಿ ಈಗ ಹೊಸದಾಗಿ ನಿರ್ಮಿಸಿರುವ ಅದ್ಭುತವೆಂದಿರುವುದು. ಇದು ಕೃತಕ ಮನುಷ್ಯ ಪಾಠಶಾಲೆಗಳಲ್ಲಿ ಪಾಠ ಹೇಳುವುದಕ್ಕೂ, ದೇವಾಲಯಗಳಲ್ಲಿ ಧರ್ಮೋಪದೇಶ ಮಾಡುವುದಕ್ಕೂ ದೇಶದ ಕೆಲಸಗಳನ್ನು ಮಾಡುವುದಕ್ಕೂ ಈ ಕೃತಕ ಮನುಷ್ಯನನ್ನು ಉಪಯೋಗಿಸುವರು. ಇದು ಹೇಗೆ ಸಾಧ್ಯವೆಂಬುದನ್ನು ಸಾಮಾನ್ಯ ಜನರು ತಿಳಿದುಕೊಂಡು ಸಮಾಧಾನ ಪಡುವುದು ಸಂಭವವಲ್ಲ ಸುಮ್ಮನೆ ವರ್ಣನೆ ಮಾಡಿದರೆ ಅರ್ಥವಾಗ ಬಹುದಲ್ಲ. ಆದಾಗ್ಯೂ ಕೃತಕ ಮನುಷ್ಯನ ಕಾರ್ಯಕಲಾಪಗಳನ್ನು ನೆರೆ[illegible]

ನೋಡಿ ಪರಿಚಯಮಾಡಿಕೊಳ್ಳುವ ಕಾಲವು ಬರುವುದು ಈ ಮನುಷ್ಯನು ಕೇವಲ ವಿದ್ಯುಚ್ಛಕ್ತಿಯ ಚೈತನ್ಯದಿಂದ ಕೆಲಸ ಮಾಡುವನು " ಎದ್ದು ನಿಲ್ಲು ' ಎಂದೊಡನೆಯೇ ಮಾತಿನ ಶಬ್ದದ ಅಲೆಯು ಅವನಿಗೆ ಸೇರಿಕೆ ಅವನು ಎದ್ದು ನಿಲ್ಲುವನು " ಕುರ್ಚಿಯ ಮೇಲೆ ಕುಳಿತುಕೊ ' ಎಂದೊಡನೆಯೇ ಬೇರೆ ಮಾತಿಲ್ಲದೆ ಕುಳಿತುಕೊಳ್ಳುವನು ಇಷ್ಟು ಮಾತ್ರವೇ ಅಲ್ಲ. ಕಾದಂಬರಿಗಳನ್ನು ಓದುವುದಕ್ಕೆ ಅತಿ ರಮ್ಯವಾದ ವಿಷಯಗಳನ್ನೂ, ಅದಕ್ಕೆ ಬೇಕಾದ ಸಂದರ್ಭ ಸೂಚನೆಗಳನ್ನೂ ಅತಿ ಯುಕ್ತಿಯಿಂದ ಕಂಡುಹಿಡಿದು ಸೂಚಿಸುವುದು

## ಬೇಕಾಗಿದೆ.

ಜಮೀನ್ದಾರರ ಸಂಘದ ಪ್ರಚಾರ ಕೆಲಸವನ್ನು ನಡಿಸಲು ಪ್ರಚಾರಕರು ಬೇಕಾಗಿದ್ದಾರೆ ಅವರು ವಸೂಲಿ ಮಾಡುವ ಚಂದಾ ಮೊಬಲಗಿಗೆ ಶೇಕಡ 25 ರಂತೆ ಕಮಿಷನ ಕೊಡಲಾಗುವದು ಉಮೇದುವಾರರು ತಮ್ಮ ಅರ್ಜಿಗಳನ್ನು ಈ ಕೆಳಗಿನ ವಿಳಾಸಕ್ಕೆ ಜನವರಿ 18 ರೊಳಗೆ ತಲುಪುವಂತೆ ಕಳುಹಿಸತಕ್ಕದ್ದು ಹೆಚ್ಚಿನ ವಿವರವನ್ನು ಸಂಘದ ಆಫೀಸಿನಿಂದ ತಿಳಕೊಳ್ಳಬಹುದು

ಜಮೀನ್ದಾರರ ಸಂಘ, ಮಡಿಕೇರಿ, ತಾ 18 12 28

ಪಿ. ಬಿ. ಬೆಳ್ಯಪ್ಪ. ಜನರಲ್ ಸೆಕ್ರೆಟರಿ

4—2

## ಕೊಡಗು ಕಿತ್ತಳೆ ಸಸಿ ಬೇಕು.

ಕೊಡಗು ಕಿತ್ತಳೆ ಹಣ್ಣಿನ 1½—2 ಅಡಿ ಎತ್ತರವಿರುವ 500 1000 ಹಸನಾದ ಸಸಿಗಳು ನನಗೆ 1929ನೇ ಜೂನ್ ತಿಂಗಳು ಪ್ರಾರಂಭದಲ್ಲಿ ಬೇಕು ಆ ಕಾಲಕ್ಕೆ ಕ್ರಯಕ್ಕೆ ಸಸಿಗಳನ್ನು ಸಿದ್ಧವಾಗಿ ಕೊಡುವವರು ದರವನ್ನೂ, ತಮ್ಮ ವಿಳಾಸವನ್ನೂ ನನಗೆ ತಿಳಿಯ ಪಡಿಸಬಹುದು.

ಬಿ. ಕಲ್ಯಪಿಳ್ಳೆ ಎಂ. ಎ. (ಆನರ್ಸ್) ಎಲ್‌ಎಲ್‌ಬಿ ಅಡ್ವೊಕೇಟ್ & ಜಮೀನ್‌ದಾರ್, ಗೊರೂರು, ಹಾಸನ

4—3

## ಯೂನಿವರ್ಸಲ್ ಮ್ಯೂಚ್ಯುಯಲ್ ಏಡ್ ಅಂಡ್ ಪೂರ್ ಹೌಸಸ್ ಅಸೋಸಿಯೇಷನ್ ಲಿಮಿಟೆಡ್.

ಹೆಡ್ ಆಫೀಸ್:- 439 ತಂಬೂಚೆಟ್ಟಿ ಸ್ಟ್ರೀಟ್, ಮದ್ರಾಸ್.

ಬ್ರಾಂಚ್ ಆಫೀಸ್:— ಮಡಿಕೇರಿ, (ಕೊಡಗು).

## ನೋಟೀಸು.

ಮೈಸೂರಿನಲ್ಲಿ ಸ್ಥಾಪಿತವಾಗಿದ್ದ ಆಲ್ ಇಂಡಿಯಾ ಮ್ಯೂಚ್ಯುಯಲ್ ಏಡ್ ಅಂಡ್ ಪೂರ್ ಹೌಸಸ್ ಅಸೋಸಿಯೇಷನ್ ಎಂಬ ಸಂಘವು ಸದರಿ ಸಂಘದ 21—10—1928 ಮತ್ತು 12—11—1928ನೇ ಮೀಟಿಂಗ್‌ನಲ್ಲಿ ರೆಸಲ್ಯೂಷನ್ ಪ್ರಕಾರ ಸ್ವಂತ ಅವರ ಮಂಜೂರಾತಿ ಇಂಡಿಯನ ಕಂಪೆನೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿ ಮದ್ರಾಸಿನಲ್ಲಿ ಸ್ಥಾಪಿಸಲ್ಪಟ್ಟಿರುವ ಮೇಲ್ಕಂಡ ಯೂನಿವರ್ಸಲ್ ಅಸೋಸಿಯೇಷನ್‌ಗೆ ಕಳೆದ ತಿಂಗಳು ತಾ 12ನೇ ದಿವಸ ಸೇರಿಹೋಗಿರುವುದರಿಂದ ಆಲ್ ಇಂಡಿಯಾ ಅಸೋಸಿಯೇಷನ್ನಿನ ಶೇರ್ ಮತ್ತು ಬಾಂಡು ಹೋಲ್ಡರುಗಳು ಯೂನಿವರ್ಸಲ್ ಅಸೋಸಿಯೇಷನ್ನಿನ ಶೇರು ಮತ್ತು ಸರ್ಟಿಫಿಕೇಟು ಹೋಲ್ಡರುಗಳಾಗಿರುತ್ತಾರೆ. ಆದ್ದರಿಂದ ಎಲ್ಲಾ ಶೇರು ಮತ್ತು ಬಾಂಡು ಹೋಲ್ಡರುಗಳು ಇನ್ನು ಮುಂದೆ ಯೂನಿವರ್ಸಲ್ ಅಸೋಸಿಯೇಷನ್ನಿನ ಹೆಸರಿಗೆ ಕಂತಿನ ಹಣವನ್ನೂ ಮತ್ತು ಮೊಬಲಗನ್ನೂ ಕಳುಹಿಸತಕ್ಕದ್ದು

ಅಲ್ಲದೆ ಆಲ್ ಇಂಡಿಯಾ ಅಸೋಸಿಯೇಷನ್ನಿನ ಡೈರೆಕ್ಟರುಗಳು, ಸದರಿ ಅಸೋಸಿಯೇಷನ್ ಈ ಯೂನಿವರ್ಸಲ್ ಅಸೋಸಿಯೇಷನ್‌ಗೆ ಸೇರುವುದಕ್ಕೆ ಪೂರ್ವದ ಕಾಲಕ್ಕೆ ಸರಿಯಾಗಿ ಕಂತುಗಳು ವಾಪತಿ ಮಾಗದೆ ವಾಯಿದೆ ಗತಿಸಿಹೋಗಿದ್ದ ಶೇರು ಮತ್ತು ಬಾಂಡುಗಳನ್ನು ವಜಾ ಮಾಡಿದ್ದರು. ಆದರೆ ಅಂಥಾ ಶೇರು ಮತ್ತು ಬಾಂಡು ಹೋಲ್ಡರುಗಳು ತಮ್ಮ ಮೇಲೆ ಇರುವರೆಗೆ ಬಾಕಿಯಾಗುವ ಮೊಬಲಗನ್ನು ವಾಪತಿ ಮಾಡಿದ ಪಕ್ಷದಲ್ಲಿ ಈ ಅಸೋಸಿಯೇಷನಿಂದ ಹೊಸದಾಗಿ ಶೇರು ಮತ್ತು ಬೋನಸ್ ಸರ್ಟಿಫಿಕೇಟುಗಳನ್ನು ಕೊಡುವದಲ್ಲದೆ ಅವರುಗಳು ಆಲ್ ಇಂಡಿಯಾ ಅಸೋಸಿಯೇಷನ್ನಿಗೆ ಕೊಟ್ಟಿದ್ದ ಮೊಬಲಗನ್ನು ಸಹ ಜಮಾಕಟ್ಟಿಕೊಳ್ಳುವುದಾಗಿ ನೋಟೀಸುಗಳು ಸದರಿ ಶೇರ್ ಮತ್ತು ಬಾಂಡ್ ಹೋಲ್ಡರುಗಳಿಗೆ ಈ ಅಸೋಸಿಯೇಷನ್‌ನಿಂದ ಕೊಡಲ್ಪಟ್ಟಿತು. ಈ ಪ್ರಕಾರ ಅನೇಕರು ತಾವು ಕೊಡಬೇಕಾದ ಮೊಬಲಗುಗಳನ್ನು ಕಳುಹಿಸಿ ಈ ಅಸೋಸಿಯೇಷನ್ನಿನಲ್ಲಿ ಶೇರು ಮತ್ತು ಸರ್ಟಿಫಿಕೇಟುಗಳನ್ನು ಪಡೆದುಕೊಂಡಿರುತ್ತಾರೆ. ಆದರಂತೆ ಇತರರೂ ಕೂಡ ಬರುವ ತಿಂಗಳು ಅಖೈರಿನ ದಿನಗಳೊಳಗಾಗಿ ತಮ್ಮಗಳಿಗೆ ಕಳುಹಿಸಿರುವ ನೋಟೀಸಿನಲ್ಲಿ ಕಂಡಿರುವಂತೆ ಬಾಕಿಯಾಗುವ ಮೊಬಲಗನ್ನೂ ಮತ್ತು ತಮಗಳ ಅಪ್ಲಿಕೇಷನ್‌ಗಳನ್ನು ಮಡಿಕೇರಿಯಲ್ಲಿರುವ ಅಸೋಸಿಯೇಷನ್ ಬ್ರಾಂಚ್ ಸೆಕ್ರೆಟರಿಯವರ ವಶಕ್ಕೆ ವಾಪತಿ ಮಾಡಿದರೆ ಅವರುಗಳ ಬಾಂಡ್ಯ

ಮತ್ತು ಶೇರುಗಳು ಜಾರಿಗೆ ತರಲ್ಪಡುವುವು. ಇಲ್ಲವಾದರೆ ಅಲ್ಲಿಂದ ಮುಂದೆ ಅವುಗಳನ್ನು ಅಂಗೀಕರಿಸುವುದಿಲ್ಲ.

ಆಲ್ ಇಂಡಿಯಾ ಅಸೋಸಿಯೇಷನ್‌ನವರು ರದ್ದು ಮಾಡಿದ ಈ ಅಸೋಸಿಯೇಷನ್‌ಗೆ ವರ್ಗಾಯಿಸಲ್ಪಟ್ಟಂತಹ ಶೇರ್ ಮತ್ತು ಬಾಂಡು ಹೋಲ್ಡರುಗಳಿಗೂ ಪ್ರತ್ಯೇಕವಾಗಿ ನೋಟೀಸುಗಳು ಕೊಡಲ್ಪಡುತ್ತಲಿದೆ. ಸದರಿ ನೋಟೀಸುಗಳಲ್ಲಿ ಕಂಡಂತೆ ಫಾರಂಗಳನ್ನೂ ಮತ್ತು ಅಪ್ಲಿಕೇಷನ್‌ಗಳನ್ನೂ ೬ ತಿಂಗಳ ಒಳಗಾಗಿ ಮಡಿಕೇರಿ ಬ್ರಾಂಚ್ ಸೆಕ್ರೆಟರಿಯವರ ವಶಕ್ಕೆ ಪಾವತಿ ಮಾಡಿದರೆ ತಮ್ಮ ಶೇರು ಮತ್ತು ಬಾಂಡುಗಳು ರದ್ದಾಗದೆ ಇರುವವಲ್ಲದೆ ಬರುವ ಡ್ರಾಯಿಂಗ್‌ನಲ್ಲಿ ಅವರ ಹೆಸರುಗಳೂ ಸಹ ಸೇರಿಸಲ್ಪಡುವುವು. ಆದ್ದರಿಂದ ಕೊಡಗು ದೇಶದಲ್ಲಿರತಕ್ಕ ಎಲ್ಲಾ ಶೇರು ಮತ್ತು ಬಾಂಡು ಹೋಲ್ಡರುಗಳು ತಾವು ಇದುವರೆಗೆ ಕೊಡಬೇಕಾಗುವ ಬಾಕಿ ಹಣಗಳನ್ನು ೬ ತಿಂಗಳ ಅವಧಿಯ ಒಳಗಾಗಿ ಪಾವತಿ ಮಾಡತಕ್ಕದ್ದೆಂದು ಸೂಚಿಸಿದೆ.

ಇದಲ್ಲದೆ ನಮ್ಮ ಯೂನಿವರ್ಸಲ್ ಅಸೋಸಿಯೇಷನ್ನಿನ ಹೊಸ ಏರ್ಪಾಡಿನ ಪ್ರಕಾರ ಶೇರು ಮತ್ತು ಬಾಂಡು ಹೋಲ್ಡರುಗಳು ಡ್ರಾಯಿಂಗ್ ಪ್ರಕಾರ ತಮ್ಮ ಸ್ವಂತ ಬಾಧ್ಯತೆಯ ಮೇಲೆ ಒಡ್ಡಿಯಿಲ್ಲದೆ 1000 ರೂ. ಗಳ ಲಾಗಾಯ್ತು 10 000 ರೂ. ಗಳ ವರೆಗೆ ಸಾಲಗಳನ್ನು ಪಡೆಯಬಹುದಲ್ಲದೆ ತಮ್ಮ ಹೆಸರುಗಳು ಡ್ರಾಯಿಂಗಿನಲ್ಲಿ ಬರುವುದಕ್ಕೆ ಪೂರ್ವವೇ ತಮಗೆ ಸಾಲಗಳು ಒರೂರಾಗಿ ಬೇಕಾದ ಸಂದರ್ಭದಲ್ಲಿ 1000 ರೂ ಗಳ ಲಾಗಾಯ್ತು 12 000 ರೂ ಗಳ ವರೆಗೆ ತಮ್ಮ ಸ್ಥಿರ ಸೊತ್ತುಗಳ ಆಧಾರದ ಮೇಲೆ ಶೇ|| 8 ಆಣೆ ಬಡ್ಡಿ ಪ್ರಕಾರ ಮುಂಗಡ ಸಾಲಗಳನ್ನು ಪಡೆಯಬಹುದು. ಒಂದು ವೇಳೆ ಅವರು ತಮ್ಮ ಹೆಸರು ಡ್ರಾಯಿಂಗಿನಲ್ಲಿ ಬರುವುದಕ್ಕೆ ಮುಂಚಿತವಾಗಿ ಗತಿಸಿಹೋದರೆ ಅವರ ವಾರೀಸ್‌ದಾರರು 500 ರೂ ಗಳ ಲಾಗಾಯ್ತು 6000 ರೂ ಗಳ ವರೆಗೆ ಬೋನಸ್ಸು ಅಥವಾ ಡಿವಿಡಂಡನ್ನು ಪಡೆಯಲು ಅರ್ಹರಾಗುತ್ತಾರೆ. ಬರುವ ಜನವರಿ ತಿಂಗಳಿನಿಂದ ಸ್ಥಿರ ಸೊತ್ತುಗಳ ಆಧಾರದ ಮೇಲೆ ಸಾಲಗಳನ್ನು ಕೊಡುವುದಕ್ಕೆ ಪ್ರಾರಂಭಿಸುವುದರಿಂದ ಮುಂಗಡ ಸಾಲಗಳನ್ನು ಅಪೇಕ್ಷಿಸತಕ್ಕವರು ಸಂಘದ ನಮೂನೆಯಲ್ಲಿ ದರಖಾಸ್ತುಗಳನ್ನು ಪ್ರವೇಶದ ಫೀಯೊಡನೆ ಬ್ರಾಂಚ್ ಸೆಕ್ರೆಟರಿಯವರ ವಶಕ್ಕೆ ಕಳುಹಿಸತಕ್ಕದ್ದು.

**ಬೇ ಕಾ ಗಿ ದೆ .**

ಕೊಡಗು ದೇಶದ ಪ್ರತಿ ಒಂದು ತಾಲೋಕಿನಲ್ಲಿಯೂ ಸಂಬಳಕೆಯೂ ಮತ್ತು ಚಟುವಟಿಕೆಯೂ ಒಟ್ಟ ಏಜಂಟ್ ತಿಂಗಳು ಒಂದಕ್ಕೆ 50 ರೂಗಳ ಸಂಬಳ, ಕಮಿಷನ್ ಮತ್ತು ಅಲೋಯನ್ಸ್ ಮೇಲೆ ಬೇಕಾಗಿದೆ. ಹೆಚ್ಚು ವಿಷಯಗಳಿಗೂ ಮತ್ತು ರೂಲ್ಸ್ ಬುಕ್ಕುಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

K V AnandaThirtha, Branch Secretary, Or Mercara

P Devayya, Chairman, Provincial Board, Mercara

## ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ ]

### ಕಾಕೋಟುಪರಂಬು ಶಾಲಾ ಮೀಟಿಂಗು

ಸನ್ 1928ನೇ ಇಸವಿ ಡಿಸೆಂಬರ್ ತಾ 21ರಲ್ಲು ಕಾಕೋಟುಪರಂಬು ಶಾಲಾ ಬಾಲಕರ ಪೋಷಕರು ಮತ್ತು ಸುತ್ತುಮುತ್ತಲಿನ ಗ್ರಾಮಸ್ಥರು ಸಹ ಕಾಕೋಟುಪರಂಬು ಶಾಲಾ ಕೋಣೆಯಲ್ಲಿ ಸೇರಿ ಸಭೆಯವರ ಅನುಮತಿ ಮೇರೆಗೆ ಪಳೆಯಂಡ ಕುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಮಾಡಿದ ಮೀಟಿಂಗಿನ ಪ್ರೊಸೀಡಿಂಗ್ಸ್ —

ಈ ಶಾಲಾ ಕಟ್ಟಡಗಳು I, II ಮತ್ತು III ಫಾರಂ ಅಂದರೆ 8ನೇ ಸ್ಟಾಂಡರ್ಡು ವರೆಗೆ ತರಗತಿಗಳು ತೆರೆಯಲು ಸ್ಥಳ ಸಾಲದ್ದರಿಂದಲೂ, ಹಳೇ ಕಟ್ಟಡ ಒಂದು ಜೀರ್ಣ ಸ್ಥಿತಿಯಲ್ಲಿರುವುದರಿಂದ ಇದನ್ನು ಪಚಾ ಮಾಡಿ ಒಂದು ಹೊಸ ಕಟ್ಟಡವನ್ನು ಕಟ್ಟಬೇಕಾಗಿಯೂ, ಈ ಕೆಳಗೆ ರುಜು ಮಾಡಿದವರು ಒಪ್ಪಿ ಈ ಕೆಳಗೆ ಕಂಡ ಠರಾವನ್ನು ಪಾಸ್ ಮಾಡಿರುತ್ತಾರೆ.

ನಾಲ್ಕೇರಿ, ಮೈತಾಡಿ, ಕಡಂಗಮೂರೂರು, ಬೆಳ್ಳುಮಾಡು, ಅರಮೇರಿ, ಕುಂಜಿಲಗೇರಿ, ಅರಪಟ್ಟು, ಬಲಮುರಿ, ಬಾಡಗ ಕಿಗ್ಗಾಲು, ಹಾಲುಗುಂದ ಕೆದಮುಳ್ಳೂರು, ಕರಡ ಮುಂತಾದ ಗ್ರಾಮಸ್ಥರು ಈ ಕಟ್ಟಡ ಕಟ್ಟಲಿಕ್ಕಾಗಿ ಹದಿನೆಂಟು ವರ್ಷ ಪ್ರಾಯಕ್ಕೆ ಮೀರಿದ ಪ್ರತಿಯೊಬ್ಬ ಗ್ರಹಸ್ಥನು ಒಂದು ರೂಪಾಯಿ ಅದಕ್ಕೆ ಮೇಲ್ಪಟ್ಟ ಚಂದ ಕೊಡಬೇಕಾಗಿ ತೀರ್ಮಾನವಾಯಿತು.

ಈಗ ಶಾಲೆಯಲ್ಲಿ ಕಲಿಯುವ ಪ್ರತಿಯೊಬ್ಬ ಬಾಲಕ ಬಾಲೆಯರು ನಾಲ್ಕು ರೂ ಮೇರೆ ಚಂದಾ ಕೊಡುವಂತೆ ತೀರ್ಮಾನವಾಯಿತು.

ಈ ಚಂದದ ಕೆಲಸ ನಡಿಸಲಿಕ್ಕಾಗಿ ಕೆಳಗಿನ ಕಮಿಟಿ ನೇಮಕ ಮಾಡಲಾಯಿತು.

ಮ. ರಾ ಶ್ರೀ ಪಳೆಯಂಡ ಕುಟ್ಟಪ್ಪನವರು, ಮುಲ್ಲೇಂಗಡ ದೇವಯ್ಯನವರು, ಕಳ್ಳಿರ ಐಯ್ಯಪ್ಪನವರ, ಮಂಡೇಟ್ಟಿರ ಕುಶಾಲಪ್ಪನವರು, ಐಚೆಟ್ಟಿರ ಸುಬ್ಬಯ್ಯನವರು, ಬೇರೆರ ಚಿಣ್ಣಪ್ಪನವರ, ಕುಂಬೇರ ಸಂಜಪ್ಪನವರು, ಕಳ್ಳಿರ ಮಾದಪ್ಪನವರು, ವೆಂಕಪ್ಪಯ್ಯನವರು, ಪಂದ್ಯಂಡ ಚಂಗಪ್ಪನವರು, ಚೊಟ್ಟಿರ ಬೋಪ್ಪಯ್ಯನವರು, ಕೊತಂಡ ಸಂಜಪ್ಪನವರು, ಮುದೇಪಂಡ ತಿಮ್ಮಯ್ಯನವರು, ಬಾಚೆಟ್ಟಿರ ಕಾರ್ಯಪ್ಪನವರು, ಬಲ್ಲಚಂಡ ಐಯ್ಯಣ್ಣನವರು, ಬಲ್ಯಂಡ ಅಪ್ಪಯ್ಯನವರು, ಚಾಚಿರ ಪೂವಯ್ಯನವರು, ಕಂಡ್ರತಂಡ ಪೂವಯ್ಯನವರು, ಅರಪಟ್ಟು ಮುಕ್ಕಾಟಿ ದೇವಯ್ಯನವರು, ಚಂಗಂಡ ಕುಟ್ಟಪ್ಪನವರು, ಬಿದ್ದಂಡ ಸುಬ್ಬಯ್ಯನವರು, ಬಾಡಗ ಮುಕ್ಕಾಟಿರ ಮುತ್ತಣ್ಣನವರು, ಅಮ್ಮಟಂಡ ಮುತ್ತಣ್ಣನವರು ಮಚ್ಚೆಟ್ಟಿರ ಸೋಮಯ್ಯನವರು, ಮೇಕೇರಿರ ಸುಬ್ಬಯ್ಯನವರ ಮಗ ಮಾದಪ್ಪನವರು, ಪುಟ್ಟಿಚಂಡ ಮುದ್ದಪ್ಪನವರು, ಕೇತಿಯಂಡ ಕುಶಾಲಪ್ಪನವರು, ಕೋಡಿರ ತಮ್ಮಯ್ಯನವರು ಮತ್ತು ಕುಳಿಯಕಂಡ ಐಯ್ಯಣ್ಣನವರು. ಈ ಕಮಿಟಿಗೆ ಅಗತ್ಯವಿದ್ದಲ್ಲಿ ಹೆಚ್ಚಿನ ಮೆಂಬರುಗಳನ್ನು ಸೇರಿಸಿಕೊಳ್ಳುವ ಅಧಿಕಾರ ಕೊಡಲಾಗಿದೆ.

ಇದರ ಯದಾ ನಕಲನ್ನು ಅಧ್ಯಕ್ಷರು "ಕೊಡಗು" ಮತ್ತು "ಲೋಕಪಾವನ" ಪತ್ರಿಕೆಗಳಿಗೆ ಪ್ರಕಟಣೆ ಬಗ್ಗೆ ಕಳುಹಿಸಬೇಕಾಗಿ ತೀರ್ಮಾನವಾಯಿತು.

ಪಿ ಕುಟ್ಟಪ್ಪ,
ಅಧ್ಯಕ್ಷರು.

---

### ದೇವಣಗೇರಿ ಶಾಲೆ ಸ್ಕೂಲ್ ಡೆ

ಇದೇ ಡಿಸೆಂಬರ್ ತಾ 20ನೇ ಗುರುವಾರ ದಿನ ಮಧ್ಯಾಹ್ನ ಒಂದು ಗಂಟೆಯ ಸಮಯಕ್ಕೆ ದೇವಣಗೇರಿ ಗ್ರಾಮದ ಲೋಕಲ್‌ಫಂಡ್ ಶಾಲೆಯಲ್ಲಿ (School Day) ಸ್ಕೂಲ್ ದಿವಸವನ್ನು ಸದರಿ ಶಾಲಾ ಹೆಡ್ ಮಾಸ್ಟರ್ ಮಿ ಯಂ ಡಿ. ಮುತ್ತಣ್ಣನವರು ಬಹಳ ಮೇಲುತ್ತು ತೆಗೆದುಕೊಂಡು ಶಾಲಾ ಉಪಾಧ್ಯಾಯರುಗಳು ಪಂಚಾಯಿತದಾರರ ಮತ್ತು ಗ್ರಾಮಸ್ಥರ ಸಹಾಯದಿಂದ ಸ್ಪೋರ್ಟ್ಸ್‌ನ್ನು ಬಹು ವಿಜೃಂಭಣೆಯಿಂದ ನಡೆಸಿದರು. ಸ್ಪೋರ್ಟ್ಸ್ ತೀರಿದನಂತರ ಶಾಲೆಯಲ್ಲಿ ಮಿ ಬಿದ್ದಂಡ ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಸಭಿಕರ ಮುಂದೆ ಶಾಲೆಯ ವಾರ್ಷಿಕ ರಿಪೋರ್ಟನ್ನು ಓದಲಾಯಿತು. ಅನಂತರ ಸ್ಪೋರ್ಟ್ಸ್‌ನಲ್ಲಿ ಜಯಶೀಲರಾದವರಿಗೆ ಬಹುಮಾನವನ್ನು ಹಂಚಿ ಅಧ್ಯಕ್ಷರ ಭಾಷಣ ಮುಗಿದನಂತರ ಸಭೆಯನ್ನು ಬರಖಾಸ್ತು ಮಾಡಲಾಯಿತು.

'ಹಾಜರಿದ್ದವ'

---

### 'ಕೊಡಗು ಪ್ರತ್ಯೇಕವಾಗಿಯೇ ಇರತಕ್ಕದ್ದು' ಇದು ಸಾಧ್ಯವೇ?

ಸರಸ್ವತಿಯವರೇ,

ನೀವು ಕಳೆದ ವಾರದ ಪತ್ರಿಕೆಯಲ್ಲಿ ಕೊಡಗು ಪ್ರತ್ಯೇಕವೇ ಇರತಕ್ಕದ್ದೆಂದು ಬರೆದ ಬಾತ್ಮಿಯಲ್ಲಿ ನೀವು ಹೇಳಿದ ಅಭಿಪ್ರಾಯಕ್ಕೆ ನ್ಯಾಯವಾದ ಕಾರಣಗಳೇನೂ ಕಂಡು ಬರುವುದಿಲ್ಲ. ಆದರೂ ಅದು ದೇಶದಲ್ಲಿ ತಪ್ಪು ಅಭಿಪ್ರಾಯವನ್ನು ಬಿತ್ತಬಹುದೆಂಬ ಸಂಶಯದಿಂದ ಅದಕ್ಕೆ ಉತ್ತರವನ್ನು ಬರೆದಿದ್ದೇನೆ.

ಕೊಡಗು ಕರ್ನಾಟಕದೊಂದಿಗೆ ಸೇರಿಕೊಂಡರೆ ಅದು ಸಮುದ್ರದಲ್ಲಿ ಬಿದ್ದಂತಾಗಬಹುದೆಂಬ ಭಯವಿದೆ. ಹಾಗೆ ಭಯಪಡಲು ಏನೊಂದೂ ಕಾರಣವಿಲ್ಲ. ನಿಜವಾಗಿಯೂ ಕೊಡಗು ಈಗ ಸಮುದ್ರದಲ್ಲಿ ಬಿದ್ದುಕೊಂಡಿದೆ. ನ್ಯಾಯವಾದ ವೈದ್ಯ ಸಹಾಯವಿಲ್ಲ, ಪ್ರೌಢ ವಿದ್ಯಾಭ್ಯಾಸಂಗಕ್ಕೆ ಅನುಕೂಲತೆಯಿಲ್ಲ, ಮಲೇರಿಯಾ ಜ್ವರದ ಹಾವಳಿ ಇದೆ, ಸಾಲದ್ದಕ್ಕೆ ನಮ್ಮ ಸರಕಾರದಲ್ಲಿ ಹಣದ ಅಭಾವ. ಈ ಕಷ್ಟಗಳಿಗಿಂತ ದೊಡ್ಡ ಸಮುದ್ರ ಬೇರೊಂದಿಲ್ಲ. ಹೀಗೆ ಕಷ್ಟದಲ್ಲಿ ಮುಳುಗಿರುವ ನಮ್ಮ ದೇಶವನ್ನು ಎತ್ತುವದಕ್ಕೆ ಸೇರಿಸಬೇಕೆಂದು ನಾವು ಈಗ ಕರ್ನಾಟಕವನ್ನು ಕೇಳುತ್ತಿರುವೆವು. ಕರ್ನಾಟಕಕ್ಕೆ ಸೇರುವುದರಿಂದ ನಮಗೆ ಅನುಕೂಲವು ಹೆಚ್ಚಾಗುವುವೇ ವಿನಹ ಖರ್ಚಿಗಿಂತ ಎಷ್ಟೋ ಹೆಚ್ಚು ಉತ್ಪತ್ತಿ ಇರುವ ಕರ್ನಾಟಕಕ್ಕೇನೂ ಹೆಚ್ಚಿನ ಲಾಭವಾಗಲಾರದು. ಇದು ಶೀತ ದೇಶ ಇಲ್ಲಿ ಚಳಿ ಹೆಚ್ಚಾಗಿದೆ, ಮಲೇರಿಯಾದ ಹಾವಳಿ ಇದೆ. ಇವೆಲ್ಲವೂ ಉತ್ತರ ಕನ್ನಡದವರಿಗೆ ಚೆನ್ನಾಗಿ ಗೊತ್ತಿದೆ. ಆದರೆ ವರ್ಷದ ಎಲ್ಲಾ ತಿಂಗಳುಗಳಲ್ಲಿಯೂ ಚಳಿ ಇಲ್ಲ. ಜನವರಿಯಿಂದ ಜೂನ್ ತಿಂಗಳ ವರೆಗೆ ಆರು ತಿಂಗಳು ಇಲ್ಲಿ ಬಹಳ ಆರೋಗ್ಯವಾದ ಹವೆ ಇರುವುದು. ಆದ್ದರಿಂದ ಈಗ ಮೈಸೂರಿನವರು ಸಿಮ್ಲಾದಲ್ಲಿ ಆರು ತಿಂಗಳು ವಾಸಿಸುವಂತೆ ನಮ್ಮ ಮಡಿಕೇರಿಯನ್ನು ಬೇಸಿಗೆಕಾಲದ ಮುಖ್ಯ ಪಟ್ಟಣವಾಗಿ ಮಾಡಬಹುದು. ಇದಕ್ಕೆ ಉತ್ತರ ಕನ್ನಡದವರು ಬಹಳ ಸಂತೋಷದಿಂದ ಒಪ್ಪುತ್ತಾರೆ. ಮತ್ತೆ ಚಳಿ ದೇಶವಾದರೆ ಕಾಲೇಜು ಇಡಲು ಯಾಕೆ ಸಾಧ್ಯವಿಲ್ಲ? ಚಳಿ ದೇಶಗಳಲ್ಲೆಲ್ಲೂ ಕಾಲೇಜುಗಳಿಲ್ಲವೇ? ನೀವು ಕೊಡಗು ಸಂಸ್ಥಾನವನ್ನು ಉದಾಹರಣೆಯಾಗಿ ಕೊಟ್ಟಿರುವುದು ಸರಿಯಲ್ಲ. ಅವರಿಗೆ ಬೇಕಾದಷ್ಟು ಉತ್ಪತ್ತಿ ಇದೆ. ನೀವು ಹೇಳಿದಂತೆ "ಹಾರ್ಬರ್" ವ್ಯಾಪಾರ ಚೆನ್ನಾಗಿ ನಡಿಯುತ್ತಿದೆ. ನಮ್ಮ ದೇಶದಲ್ಲಿ ಕಾಫಿ, ಕಿತ್ತಳೆ ಮತ್ತು ಏಲಕ್ಕಿ ಚೆನ್ನಾಗಿ ಬೆಳೆಯುತ್ತದೆ. ಆದರೆ ಅದರಿಂದ ಸರ್ಕಾರಕ್ಕೆ ಏನೂ ಪ್ರಯೋಜನವಿಲ್ಲ. ಮಾತ್ರವಲ್ಲ, ಈ ಉತ್ಪತ್ತಿಗಳ ವ್ಯಾಪಾರವೇನೂ ಚೆನ್ನಾಗಿ ನಡೆಯುವುದಿಲ್ಲ. ನಮ್ಮ ದೇಶದಲ್ಲಿ ದೊಡ್ಡ ತಿಂಗಿಯನ್ನು ಉತ್ಪತ್ತಿ ಮಾಡುವ ಇಲಾಖೆಯೇನಿದೆ? ಗ[illegible] ತ್ಪತ್ತಿ ಶಾಶ್ವತವಲ್ಲ. ಹಾಗಾದರೆ ಹಣದ ಅ[illegible] ಹೋಗಲಾಡಿಸುವ ಬಗೆ ಹೇಗೆ? ನಮ್ಮ ಸರ್ಕಾರಕ್ಕೆ [illegible]ರಿಗೆಯನ್ನು ಕೊಡಲು ಸಹ ಸಾಧ್ಯವಿಲ್ಲ.

ಉತ್ತರ ಕನ್ನಡದವರಿಗೆ ಹಣದ ಅಭಾವವಿಲ್ಲ[illegible] ನೀವು ಬರೆದಿರುವುದು ಸುಳ್ಳು. ಕಳೆದ ವಾರದ ಪತ್ರಿ[illegible] ಸರ್ವ ಪಕ್ಷಗಳ ಪರಿಷತ್ತಿಗೆ ಕರ್ನಾಟಕಸ್ಥರು ಕೊಟ್ಟ [illegible]ಲನ್ನು ನೀವು ನೋಡಿದರೆ ಭವಿಷ್ಯತ್ತಿನ ಕರ್ನಾಟ[illegible] ವರ್ಷಕ್ಕೆ ಸರಾಸರಿ 4 ಮಿಲಿಯ ರೂಪಾಯಿಗಳು [illegible] ಯಾಗಬಹುದೆಂದು ಕಂಡು ಬರುವುದು. ಅವರಿಗೆ [illegible] ಯರ ಕೊಂಡರೆ ಇರುವುದೇನೋ ನಿಜ. ಬಾಷೆ [illegible] ದ್ದರಿಂದ ಕಷ್ಟವಿರಲೇ ಬೇಕು. ಅದಕ್ಕೇನೇ ಅವರು [illegible] ನರ್ಾಟಕಸ್ಥರು ಪ್ರತ್ಯೇಕವಾಗಿರಬೇಕೆಂದು ಪ್ರಯತ್ನಿಸು[illegible] ವುದು. ನಮ್ಮನ್ನು ಸೇರಿದರೆ ಸಾಕಾಗುವುದು ಹೇಗೆ? [illegible] ಗೂ, ಅವರಿಗೂ ಹೆಚ್ಚಿನ ವ್ಯತ್ಯಾಸಗಳೇನೂ ಕಂಡ ಬರ[illegible]

ನಮ್ಮ ಭಾಷೆಯು ಕನ್ನಡವಲ್ಲವೆಂದು ಹೇಳುವುದು [illegible]ಮ್ಮ ಅಜ್ಞಾನವೇ ಕಾರಣ. ಕೆಲವು ತಿಂಗಳ ಹಿಂದೆ [illegible] ಗು ನಿಜವಾಗಿಯೂ ಕನ್ನಡ ಭಾಷೆಯೆಂದೂ, ಕೊಡಗು [illegible] ಷೆಯಲ್ಲಿ ಸಾಧಾರಣ ಶೇಕಡ 70ರಷ್ಟು ಕನ್ನಡ ಶಬ್ದಗಳೆಂದೂ, ಶೇಕಡ 10ರಷ್ಟು ಮಾತ್ರ ತಮಿಳು ಶಬ್ದಗಳೆಂದೂ, ಈ ಪತ್ರಿಕೆಯಲ್ಲಿ ಬಂದ ಬಾತ್ಮಿಯು ನಿಮ್ಮ [illegible] ನಲ್ಲಿರಬಹುದು. ಅದರಲ್ಲಿ ಉದಾಹರಣೆಗಾಗಿ ಕೊ[illegible] ಭಾಷೆಯಲ್ಲಿ ಉಪಯೋಗಿಸುವ ಅನೇಕ ಕನ್ನಡ ಶ[illegible] ಕೊಡಲ್ಪಟ್ಟಿದ್ದವು. ಸುಮ್ಮನೆ ಕೊಡಗು ಭಾಷೆಯು [illegible]ಳೆಂದು ಜನರಲ್ಲಿ ತಪ್ಪು ಜ್ಞಾನವನ್ನು ಹುಟ್ಟಿಸುವುದು [illegible]ಲ್ಲ. ನ್ಯಾಯವಾಗಿ ಭಾಷೆಯನ್ನು ಪರೀಕ್ಷಿಸಿ ನೋ[illegible] ಕ. ಜಮಾನ್ದಾರರ ಸಂಘದ ವಾರ್ಷಿಕ ಸಭೆಗ[illegible] ಯುತ ಶ್ರೀನಿವಾಸ ಐಯ್ಯಂಗಾರರು ತಮಿಳಿನಲ್ಲಿಯು [illegible] ಜೇರಿ ರಾಮಯ್ಯರು ಮಲಯಾಳದಲ್ಲಿಯೂ ಭಾಷಣ[illegible] ದಾಗ ದೇಶಸ್ಥರಿಗೆ ತಿಳಿಯದೆ ಇದ್ದುದು ನಮಗೆ ಗೊ[illegible] ದೆ. ಆದ್ದರಿಂದ ಕೊಡಗು ಭಾಷೆಯು ತಮಿಳು ಅಥ[illegible] ಲಯಾಳವೆಂದು ಹೇಳುವುದು ತಪ್ಪು.

ನಮಗೆ ಕರ್ನಾಟಕ ಪ್ರಾಂತ್ಯವಾದರೆ ಅದರ[illegible] ದೇಶಕ್ಕೆ ಸಾಲ ತೆಗೆದುಕೊಳ್ಳುವುದು ಅಂದರೆ ಉ[illegible] ಕರ್ನಾಟಕ ಪ್ರಾಂತದ ಸರಕಾರವೇ ನಮ್ಮ ಸರಕಾ[illegible] ಸರಕಾರವು ನಮ್ಮ ದೇಶದ ಹಿತಕ್ಕಾಗಿ ಹಣ ವ್ಯಯ ಮ[illegible] ಬೇಕು.

ಏಕೀ ಕರ್ನಾಟಕಕ್ಕೆ [illegible] ವೆಂಬುದು ತಪ್ಪು. ಉತ್ತರ ಕನ್ನಡ, ದಕ್ಷಿಣ ಕನ್ನಡ, [illegible]ಗು, ಮೈಸೂರು, ನೀಲಗಿರಿ ಮತ್ತು ಕೊಯಮುತ್ತೂರಿ[illegible] ಗಳು ಎಲ್ಲಾ ಒಂದಕ್ಕೊಂದು ಮುಟ್ಟಿಕೊಂಡಿವೆ. ಕನಾ[illegible] ಮೈಸೂರು ಸೇರದಿದ್ದರೆ ನೀಲಗಿರಿ ಮತ್ತು ಕೊಯಮು[illegible]ನ ಸ್ವಲ್ಪ ಭಾಗಗಳು ಮಾತ್ರ ತಗುದೆ ದೂರದಲ್ಲಿರು[illegible] ವುದು. ಉಳಿದ ಎಲ್ಲಾ ಜಿಲ್ಲೆಗಳೂ ಒಂದಕ್ಕೊಂದು [illegible] ಕೊಂಡಿವೆ.

1 ಉತ್ತರದ ನೆಂಟರಿಗೆ ಆತುರವಿದೆ ನಿಜ. ಆ[illegible] ಮಗಿಂತಲೂ ಕರ್ನಾಟಕದ ಸಂಸ್ಕೃತಿಯನ್ನು ಉ[illegible] ಹೆಚ್ಚಾಗಿ ಆತುರ ಮತ್ತು ಅಭಿಲಾಷೆಗಳಿವೆ.

2 ಬಂಟರು, ಸಾರಸ್ವತರು, ಗೌಡ ಸಾರಸ್ವತರು, [illegible] ರು ಇವರನ್ನು ವಿನ್ಹ ದಕ್ಷಿಣಕನ್ನಡದಲ್ಲಿ ಇನ್ನು ಯಾ[illegible] ರ? ಇವರೇ ಮುಖ್ಯವಾಗಿ ತುಂಬಾ ಜನಸಂಖ್ಯೆಯು[illegible] ಗಳು. ಇನ್ನು ಸ್ವಲ್ಪ ಗೌಡರು ಮತ್ತೆ ಸ್ವಲ್ಪ ಬಿಲ್ಲ[illegible] ದ್ದಾರೆ. ದಕ್ಷಿಣ ಕನ್ನಡದಲ್ಲಿ ಕರ್ನಾಟಕದ ಏಕೀ[illegible] ಗಲ್ಲೇ ಇಲ್ಲವೆಂಬುದು ನಿಜವಲ್ಲ. ಅಲ್ಲಿಯ ಕಾಂಗ್ರೆ[illegible] ಮಿಟಿಯು ಅದನ್ನು ಪ್ರಚರಿಸುತ್ತಿದೆ. ಅಲ್ಲಿಯ ವ[illegible] ಪಾದ ಪತ್ರಿಕೆಗಳು ತರಂಗವ, ಸ್ವದೇಶಾಭಿಮಾನಿ ನವ[illegible] ಗ ಇವೆಲ್ಲವೂ ಏಕೀಕರಣವನ್ನು ಹೊಗಳಿ ಆಗಾಗ್ಗೆ ಬರೆಯು[illegible] ತ್ತಿರುವವು.

3 ನಾವು ಕನ್ನಡಿಗರಲ್ಲವೆಂಬುದು ಶುದ್ಧ ತಪ್ಪು. [illegible] ದು ಸ್ವಲ್ಪ ಇಂಗ್ಲಿಷ್ ವಿದ್ಯೆ ಕಲಿತ ಹುಡುಗನು ಹಳ್ಳಿ ಪದ್ಧ[illegible] ಯ ತನ್ನ ತಾಯಿಯೊಡನೆ "ನಾನು ನಿನ್ನ ಮಗನಲ್ಲ, ನನ್ನ [illegible] ದ್ಧತಿಯೆ ಅಲ್ಲಾ ಬೇರೆ, ನನ್ನ ತಂಟೆಗೆ ಬರಬೇಡ" ಎಂದಂತಾ[illegible] ವುದು. ಇದು ನಿಜವಾಗಿ ಮಾತೃದ್ರೋಹಕ್ಕೆ ಸಮಾ[illegible]

4 ನಾವಾಗಿಯೇ ಆತುರದಿಂದ ಅವರನ್ನು ಸೇರಕೊಳ್ಳ[illegible] ಬೇಕು. ಅವರಾಗಲ್ಲ ಅವರಾಗಿಯೇ ನಮ್ಮನ್ನು ಕರೆಯುವಾ[illegible] ಗ ನಾವು ಅವಷ್ಟು ಬೇಗನೆ ಅವರನ್ನು ಸೇರಿಕೊಳ್ಳಬೇಕ[illegible]

5–6 ನೂರನ್ನು ಕುರಿತು ನೀವು ಹೇಳುತ್ತಿದ್ದೀರೋ ನನಗೆ ತಿಳಿಯದು.

7 ಆಂಧ್ರದವರು ನಮ್ಮಲ್ಲಿಗೆ ಬರುವ ಅವಶ್ಯಕತೆ ಏನಿದೆ? ಕರ್ನಾಟಕ ಪ್ರಾಂತವಾದರೆ ಮುಖ್ಯ ಪಟ್ಟಣ ಬಾದರೆ ಸಾಕು, ಅವರ ದೇಶವನ್ನು ಬಿಟ್ಟು ಇಲ್ಲಿ ಬಂದು ನೆಲಸಬೇಕೇ!

ನಮ್ಮ ದೇಶವು ಬಹಳ ಸಣ್ಣದಾಗಿ ಸ್ವತಂತ್ರವಾಗಿರಲು ಸಾಧ್ಯವಿಲ್ಲದೆ ಇರುವುದರಿಂದಲೇ ನಾವು ಇತರ ಪ್ರಾಂತ್ಯದವರ ಆಶ್ರಯವನ್ನು ಕೇಳಬೇಕಾಗಿದೆ. ಇದರಿಂದ ಇಕ್ಕಡೆಗಳಿಗೂ ಹಿತವಿದೆ. ಆದ್ದರಿಂದ ಕಾರಣ ರಹಿತವಾದ ವಿಷಯಗಳನ್ನು ಮೂಲೆಗೊತ್ತಿ ಏಕೀಕರಣದ ಸಾಧನೆಗೆ ಪ್ರಯತ್ನಿಸುವದೇ ಲೇಸು.

"ಇ. ಶ."

ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಲು ಸುಸಮಯ.

## ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ (ಹೊಸ ಪುಸ್ತಕ)

### (ಎರಡನೆಯ ವರ್ಷಾರಂಭವಾಗಿದೆ.)

'ಹರಿದಾಸ ಸೇವಾ ಸಮಿತಿ' ಯವರಿಂದ ಒಹಳ ಶುದ್ಧ ರೀತಿಯಲ್ಲಿ ಸಂಶೋಧಿಸಲ್ಪಟ್ಟು ಮಾಸ ಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಿರುವ 'ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ' ಯನ್ನು ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿರಿ! ಇದರಲ್ಲಿ ಜಗತ್ಪ್ರಸಿದ್ಧರಾದ ಶ್ರೀ ಪುರಂದರದಾಸರು, ಶ್ರೀ ಕನಕದಾಸರೇ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ರಚಿಸಿದ ಭಗವನ್ನಾಮ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ಕ್ರೌನ್ ಪತ್ರದ ನಾಲ್ಕು ಫಾರಂ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಲಿವೆ. ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೆ ಹಾಸಲು ಉಚಿತ) ಸಾಮಾನ್ಯ ಪ್ರತಿ ರೂ ೧—೪—೦ ಉತ್ತಮ ಪ್ರತಿ ರೂ. ೨—೪—೦

### ಪ್ರಥಮ ಸಂಪುಟದ ಬೆಂಡಾದ ಪ್ರತಿಗಳು.

| | ಸಾಧ ಬೈಂಡು | ದಪ್ಪ ರಟ್ಟಿನ ಬೈಂಡು | ಕಿತ್ತಾನಿಸಾರು ಬೈಂಡು |
|---|---|---|---|
| ಸಾಮಾನ್ಯ ಪ್ರತಿ | ೧—೨—೦ | ೧—೧೨—೦ | ೨—೪—೦ |
| ಉತ್ತಮ ಪ್ರತಿ | ೨—೦ | ೨—೮—೦ | ೩—೦—೦ |

ಅಂಚೇಹಾಸಲು ಪ್ರತ್ಯೇಕ.

ವಿಳಾಸ:— ಸಂಬೋಧ ಪ್ರಕಟನಾಲಯ,
ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.

12-9



## ಏಕೆ ನರಳುತ್ತೀರಿ?

ಪ್ರಾಚೀನ ಋಷಿಗಳಿಂದ ಪ್ರಣೀತವಾದ ಆಯುರಾರೋಗ್ಯೈಶ್ವರ್ಯವರ್ಧಕವಾದ ಆರೋಗ್ಯವಿಧಿಗಳನ್ನು ತಿಳಿಯದೆ ಅಜ್ಞಾನಾಂಧಕಾರದಲ್ಲಿ ಮುಳುಗಿ ಅನೇಕ ತರಹಗಳ ವ್ಯಾಧಿಗಳಿಂದ ಏಕೆ ನರಳುವಿರಿ?

ಕ್ರಯವು! ಇಲ್ಲದೆ!!

ಉಚಿತವಾಗಿ ಕೊಡಲ್ಪಡುವ ನಮ್ಮ

ನಮ್ಮ ಔಷಧಿಗಳನ್ನು ಬಿಕ್ರಿ ಮಾಡುವದಕ್ಕೆ **ವೈದ್ಯ ವಿದ್ಯೆ** ಏಜಂಟರು ಬೇಕಾಗಿರುವದು.

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52—19

ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಬೈನ ಬಜಾರು ರೋಡು, ಮದ್ರಾಸು.

N. B.— ವೈದ್ಯಸಲಹೆಯು ಫೀಜಿಲ್ಲದೆ ಕೊಡಲಾಗುವುದು.



# Arms, Ammunition and Shooting Requisites !!!



1928 Illustrated Catalogue Just Issued Free on Application!

| | | |
|---|---|---|
| D. B. B. L. Rifles | Rs 120 to Rs | 2750 |
| S. B. B. L. „ | 35 to „ | 950. |
| D. B. B. L. Guns | 50 to „ | 1350 |
| S. B. B. L. „ | 35 to „ | 275 |
| D. B. M. L. „ | 45 to „ | 135 |
| S. B. M. L. „ | 30 to „ | 80 |
| B. L. Revolvers | 35 to „ | 350. |
| Automatic Pistols | 0 to „ | 150 |

Brilliant Search Light Lamp for Shooting Camping, Fishing and All such Night Sports and work Rs 35 delivery

Also swords, Daggers, Cartridges, Gunpowder and Shooting Requisites the most competitive rates

GOOLAMHUSAIN LIBHOY & SONS,
Largest Importers of Firearms and Ammunition
Cheapest price Firm in India,
414 210 Abdul Rehman Street BOMBAY.



Try!! Try

## KING & CO.,
SUNTICOPPA.

for
Foreign Liquor, Arms & Ammunitions, High Grade Cigarettes, Sports Materials, Court-Stamp papers, Printed Labour Bonds, Sewing Machines, etc, etc

### ಕಿಂಗ್ ಅಂಡ್ ಕೊ.,
ಸುಂಟಿಕೊಪ್ಪ.

ನಮ್ಮ ಕಾಪೆನಿಯಲ್ಲಿ ಎಲ್ಲಾ ಪರದೇಶೀಯ ಸಾರಾಯಿ ಎಂದರೆ ಬ್ರಾಂಡಿ, ವಿಸ್ಕಿ, ವೈನ್, ಬೀರು ಮೊದಲಾದುವು ಬಿಕ್ರಿ ಮಾಡಲ್ಪಡುತ್ತದೆ ಅಲ್ಲದೆ ಅತ್ಯುತ್ತಮವಾದ ಕೋವಿ, ಕೋವಿ ಮದ್ದು, ತೋಟಗಳು, ಚಿಲ್ಲರೆ ವಸ್ತುಗಳೂ ಸಹ ಸುಲಭ ದರದಲ್ಲಿ ಸಿಕ್ಕುತ್ತದೆ ಎಲ್ಲರೂ ಒಂದು ಸಲ ನಮ್ಮಲ್ಲಿ ಒಂದು ವ್ಯಾಪಾರ ಮಾಡಿದಲ್ಲಿ ಪೂರ್ತಿ ಮಾಹಿತಿಯು ಗೊತ್ತಾಗುವುದು.

12—6



# ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್.
# ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

## ೧೯೨೯ನೇ ಇಸವಿಯ ಸಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

೯ ಇಸವಿಯ ಸಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು.

| | |
|---|---|
| 1 ನೆ ಸೈಜು ಪಾಕೆಟ್ ಡೈರಿ ಪೆನ್ಸಿಲ್ ಇಟ್ಟಿರುವ ಕಿದ್ದು 6½ '×4" 1ಕ್ಕೆ | 0 12 0 |
| ಪೋಸ್ಟೇಜು | 0 3 0 |
| 2 ನೆ ಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್ 4" 1ಕ್ಕೆ | 0 10 0 |
| ಪೋಸ್ಟೇಜು | 0 3 0 |
| ಸೈಜು ಪಾಕೆಟ್ ಡೈರಿ ಪೆನ್ಸಿಲ್ ಇಟ್ಟಿರುವದ್ದು 5 '×2½" 1ಕ್ಕೆ | 0 7 0 |
| ಪೋಸ್ಟೇಜು | 0 2 0 |
| ಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್ 1ಕ್ಕೆ | 0 5 0 |
| ಪೋಸ್ಟೇಜು | 0 2 0 |

ಮೇಲಿನ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪೂರ್ತಿ ಹಣವನ್ನು ರವಾನಿಸಿದಲ್ಲಿ ಪೋಸ್ಟೇಜ್ ಪಾರ್ಸಲ್ ಮೂಲಕ ಕಳುಹಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ಕೊಳ್ಳುವವರಿಗೆ 1ಡೈರಿ ಪುಕ್ಕಟೆ ಕೊಡಲಾಗುತ್ತೆ. ವಿ. ಪಿ. ಮೂಲಕ ಡಜನ್ ಗಟ್ಲೆ ತರಿಸಿಕೊಳ್ಳುವವರು ಡಜನ್ 1ಕ್ಕೆ 0 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929ನೇ ಇಸವಿಯ ಸಚಿತ್ರ ಕ್ಯಾಲೆಂಡರುಗಳು.

| | |
|---|---|
| ಷೀಟ್ ಕ್ಯಾಲೆಂಡರ್ 50ಕ್ಕೆ | 1 2 0 |
| „ „ 100ಕ್ಕೆ | 2 0 0 |
| 3 '×4½" ಸೈಜು ಕ್ಯಾಲೆಂಡರ್ 12ಕ್ಕೆ | 0 9 0 |
| „ „ [illegible]ಕ್ಕೆ | 2 4 0 |
| „ „ [illegible]ಕ್ಕೆ | 4 6 0 |

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ 10 '×14" ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರ್ 3ಕ್ಕೆ

| | |
|---|---|
| ಕ್ಯಾಲೆಂಡರ್ 3ಕ್ಕೆ | 0 8 0 |
| „ „ 6ಕ್ಕೆ | 0 14 0 |
| „ „ 12ಕ್ಕೆ | 1 6 0 |

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರ್ತಿ ಮೊಬಲಗು ಮನಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಖಂಡಿತವಾಗಿ ರವಾನಿಸುವುದಿಲ್ಲ.

ಕ್ಯಾಲೆಂಡರುಗಳು ಮುಗಿದ ನಂತರ ಬರತಕ್ಕ ಮನಿಯಾರ್ಡರನ್ನು ನೋಡಿದ ವರ್ಷದಂತೆ ವಾಪಸು ಮಾಡುತ್ತೆ.

ಮಾದರಿ ಕ್ಯಾಲೆಂಡರು ಅಪೇಕ್ಷಿಸುವವರು 0—5—0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆಯ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ಕಳುಹಿಸಲಾಗುತ್ತೆ.

ಮನಿಯಾರ್ಡರ್ ರವಾನಿಸುವ ವಿಳಾಸ:— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

# ಪ್ರಕಟಣೆ.

**ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.**

| | | ರೂ. |
|---|---|---|
| ಶೇರ್ ಬಂಡವಾಳ | — | 50,000 |
| ವಸೂಲಾದ ಶೇರ್ ಮೊಬಲಗು | — | 17 19 |
| ಜಮಾಬಂದ ಠೇವಣಾತಿ | — | 1,02,320 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

| | |
|---|---|
| ಪ್ರೆಸಿಡೆಂಟರು, | ಟ್ರೆಜರರ್. |
| ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್ | ಕೊಂಗೆಟ್ಟಿರ ಅಪ್ಪಯ್ಯನವರು. |

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1—7—1928

## ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಮತ್ತು ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು

ಮತ್ತು—ಮೆ. ಚಂಗಂಡ ಕುಟ್ಟಪ್ಪನವರು,

ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚಿಣ್ಣಪ್ಪನವರು.

ಶ್ರೀಮಂಗಲನಾಡು—ಮೆ ಅಜ್ಜಮಾಡ ಮಾದಪ್ಪನವರು.

ಮುರನಾಡು—ಮೆ. ಕೇಕಿರ ಅಪ್ಪಯ್ಯನವರು

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕಾಣಚೀರ ಸಂಜಪ್ಪನವರು,

ಮೂರ್ನಾಡು—ಮಡೆಯಂಡ ಪೂವಯ್ಯನವರು

ನಾಪೋಕ್ಲು—ಮೆ. ಟಿ ಆರ್ ರಾಮಯ್ಯನವರು,

ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ ಪಿ. ಜಿ ಮುದ್ದಪ್ಪಯ್ಯನವರು,

ಹುದಿಕೇರಿ & ತಿತಿಮತ್ತಿ—ಮೆ ಜಿ. ಮಾದಪ್ಪಯ್ಯನವರು,

ನೂತನ ಏಜೆಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ,

## ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ಲಿಯೂ ಇರಬೇಕಾದ ಅನೇಕ ಬಗೆಯ ಫಾರ್ಮುಗಳು ಸಹಕಾರ ಸಂಘದ ಉಪನಿಬಂಧನೆಗಳು ... ... ... ... ಆಫೀಸಿಗೆ ಕಳುಹಿಸಿದರೆ ... ... ... ಬೇಕೆಂದು ... ... ... ... ... ಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ... ... ವಾಗಿ ತಯಾರಿಸಲ್ಪಟ್ಟ ... ... ... ... ಗಳೂ ನಮ್ಮಲ್ಲಿಯೂ ಮತ್ತು ... ... ... ... ನಲ್ಲಿಯೂ ಮಾರಾಟಕ್ಕಿವೆ ಮೇನೇಜರ್,

"ಕೊಡಗು" ಮಡಿಕೇರಿ




**12 bore Victor Cartridges Rs. 10/- Per 100**

**Mahomedally-Noorbhoy.**

**ARMS & AMMUNITION MART.**

**321 Abdul Rehman Street.**

**...AY. 3.**

**ಕಟುಕಷಾಯ ಮಲೇರಿಜ್ವರಕ್ಕೆ:—**ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೇರಿ ಜ್ವರ ದಿನಬಿಟ್ಟು ಬರುವ ಜ್ವರ, 3—1 ದಿವಸಕ್ಕೊಂದು ಸಾರಿ ಬರುವ ಜ್ವರ, ಸತತ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ 4—0—0, 6ಕ್ಕೆ ರೂ 7—8—0, 12ಕ್ಕೆ ರೂ 14

**ಚಂದನಾಸವ:—**ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯುವ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ ಬಾಹ್ಯೋರಿಕ/ಸ್ವಪ್ನಾವಸ್ಥೆ, ಮೂತ್ರನಾಳದ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲಿ 1, 3, 6ಕ್ಕೆ ರೂ 1—4, 3—8—0, 6—12—0

**ರೋಮನಾಶಿನಿ:—** ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗೆ ರೂ 1, 1 ಡಜನಿಗೆ 3—8—0.

**ಮನೋಉಲ್ಲಾಸಿನಿ ತೈಲ:—**ತಲೆನೋವು, ತಲೆತಿರುಗುವುದು, ತಲೆತುರಿ, ಕಣ್ಣು ಕೆಂಪಿಯಿಂದ ... ... ... ... ... ಕಣ್ಣು ನೋವು ಅಪಸ್ಮಾರ ಇದ್ದ ಬಾರದಿದ್ದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಪಡಿಸುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ಡಜನ್ ಸೀಸೆಗೆ ರೂ 2, 3 ಸೀಸೆಗೆ 5—

ನಮ್ಮ ಕೆಟಲಾಗು ತರಿಸಿ ನೋಡಿರಿ

ಏಜೆಂಟ್—ಮನೋಉಲ್ಲಾಸಿನಿ ಕಂಪೆನಿ

52—11

೧. ಮಂಗಳೂರು

---

# ಎಂಪಯರ್ ಆಫ್ ಇಂಡಿಯಾ

## ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

**ಸ್ಥಾಪಿಸಲ್ಪಟ್ಟದ್ದು (1897ರಲ್ಲಿ)**

ತಿಂಗಳಿಗೆ ರೂ. 12—8—0 ಕೊಡುತ್ತಾ ಬಂದರೆ ಲಾಭ ಸಹಿತ ಮತ್ತು ಆದರೊಡನೆ ಬೋನಸ್ಸುಗಳಿಂದ ಹೆಚ್ಚಾಗುವ ಒಂದು ಪಾಲಿಸಿಯು ಈ ಕೆಳಗೆ ನಮೂದಿಸಿದ ರೀತಿ ನಿಮಗೆ ದೊರೆಯುವುದು.

| ಪ್ರಾಯ | ಜೀವಾಂತ್ಯದಲ್ಲಿ ಕೊಡಲಾಗುವ ಹಣ | | | | ಜೀವಾಂತ್ಯ ಯಾ ವರ್ಷಗಳ ಅಂತ್ಯಕ್ಕೆ ಕೊಡುವ ಎಂಡೋಮೆಂಟ್ ಅಶ್ಯೂರೆನ್ಸ್. | | |
|---|---|---|---|---|---|---|---|
| | ಜೀವಾಂತ್ಯ | ಪ್ರೀಮಿಯಂಗಳ ಅವಧಿ | | | | | |
| | | 15 ವರ್ಷಗಳು | 20 ವರ್ಷಗಳು | 25 ವರ್ಷಗಳು | 20 ವರ್ಷಗಳು | 25 ವರ್ಷಗಳು | 30 ವರ್ಷಗಳು |
| | ರೂ | ರೂ | ರೂ | ರೂ | ರೂ | ರೂ | ರೂ |
| 25 | 5,820 | 3,550 | 4,250 | 4,500 | 3,010 | 3,800 | 4,520 |
| 30 | 5 140 | 3,290 | 3,930 | 4 131 | 2,930 | 3,620 | 4,220 |
| 35 | 4,190 | 3,030 | 3 600 | 3 170 | 2 810 | 3 400 | 3 870 |

ಮಡಿಕೇರಿ, ಸೋಮವಾರಪೇಟೆ ಮತ್ತು ಸಿದ್ದಾಪುರ ಮೊದಲಾದ ಸ್ಥಳಗಳಲ್ಲಿ ... ... ...

| | |
|---|---|
| ಹೆಡ್ ಆಫೀಸು. | ಬ್ರಾಂಚ್ ಆಫೀಸು. |
| ಎಂಪಯರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ. | 152 ಕಮರ್ಶಿಯಲ್ ಬೀದಿ ಬೆಂಗಳೂರು. |

24—7

---

ರಶಾವಿಕೆ ಮಾಲುಗಳಿಗೆ ಮೋಸ ಹೋಗಬೇಡಿರಿ!

ನಮ್ಮ ಒಡವೆಗಳಿಗೆ ಕೊಡುವ ಕ್ರಮಸ್ಥ ಸರಿಯಾದ ಪ ತಿಫಲವಿದೆ

ಆಜಮಾಯಿಸಿ ನೋಡಿರಿ.

ಇನಾಮಿ ಬಿಲ್ಲೆಗಳೆ ನಮ್ಮಲ್ಲಿ ದೊರೆಯುತ್ತ

ಎಲ್ಲಾ ಆರ್ಡರುಗಳನ್ನೂ ಚೊಕ್ಕ ರೀತಿಯಿಂದಲೂ, ತುರ್ತವಾಗಿಯೂ ಗ್ಯಾರಂಟಿಯೊಡನೆ ಜಾರಿ ಮಾಡಲಾಗು

ಕೇಶವಜಿ ದೇವಚಂದ್,

ಜ್ವಲ್ಲರ್, (ಕೆಟಲಾಗ್ ಮುಫತ್).

21 ಚೈನಾ ಬಜಾರ್ ರೋಡ್, ಮದರಾಸು.

12—4

ಸ್ಥಾಪನೆ 1871.

ಹೆಡ್ ಆಫೀಸು—ಬೊಂಬಾಯಿ

# ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ

## ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ವೈವಾಟದ ಫಲ.

## ಹಂಚಲು ನಿಶ್ಚಯಿಸಿದ ಲಾಭ. ರೂ. 77,94,71

ವಿಮೆದಾರರಿಗೆ ಹೆಚ್ಚಾಗಿ ಸಿಕ್ಕಿರುವ ಬೋನಸು { 1000 ರೂಪಾಯಿಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ—ರೂ
1000 „ ಎಂಡೋಮೆಂಟ್ „ „ —ರೂ

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಚಿಂತೆಯಿಲ್ಲ.

ಪುನಹ ಒಂದು ಹೊಸ ಪಾಲಿಸಿಯನ್ನು ಓರಿಯಂಟಲ್ ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭ

ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು.—

ಓರಿಯಂಟಲ್ ಬಿಲ್ಡಿಂಗ್ಸ್,
ನಂ. 1. ಸೌತ್ ಪರೇಡ್, ಬೆಂಗಳೂರು. { 52—36

**ಯಲ್. ಆರ್. ಕೃಷ್ಣಸ್ವಾಮಯ್ಯರ**
ಬ್ರಾಂಚ್ ಸೆಕ್ರೆಟರಿ.

Printed & published by P. I. Belliappa, at "Kodagu" Press, Me
for "Kodagu" Ltd.